ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೧೯

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಯತ್ಕಾರುಣ್ಯಬಲೇನ ಪಾಂಡುತನಯಾ ನಿಸ್ತೀರ್ಣ ನಾನಾಪದೋ
ಭಿಕ್ಷಾನ್ನಾಶಿನ ಆಗಮಾಭ್ಯಸನಿನೋ ಹತ್ವಾ ಬಕಂ ದ್ರೌಪದೀಂ ।
ಉದ್ವಾಹ್ಯಾಖಿಲ ಭೂಪತೀನಪಿ ರಣೇ ಜಿತ್ವಾಗತಾಃ ಸ್ವಾಂ ಪುರೀಂ
ಇಂದ್ರಪ್ರಸ್ಥ ಪುರೇಽವಸನ್ ಕೃತಧರಾರಕ್ಷಾಃ ಸ ನೋಽವ್ಯಾದ್ಧರಿಃ ॥ ೧೯ ॥

ಯಾರ ಕಾರುಣ್ಯ ಬಲದಿಂದ ಪಾಂಡವರು ನಾನಾ ಆಪತ್ತುಗಳನ್ನು ದಾಟಿ ಭಿಕ್ಷಾನ್ನ ಉಣ್ಣುತ್ತ ಶಾಸ್ತ್ರಾಭ್ಯಾಸ ಮಾಡುತ್ತ, ಬಕಾಸುರನನ್ನು ಕೊಂದು, ದ್ರೌಪದಿಯನ್ನು ಮದುವೆಯಾಗಿ ಎಲ್ಲ ರಾಜರನ್ನೂ ಯುದ್ಧದಲ್ಲಿ ಗೆದ್ದು ತಮ್ಮ ಪಟ್ಟಣಕ್ಕೆ ಬಂದು ಇಂದ್ರಪ್ರಸ್ಥದಲ್ಲಿ ರಾಜ್ಯಭಾರ ಮಾಡುತ್ತ ವಾಸ ಮಾಡಿದರೋ ಆ ಹರಿ ನಮ್ಮನ್ನು ರಕ್ಷಿಸಲಿ.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೧೯

ಪಾಂಡವ ರಾಜ್ಯಲಾಭ

॥ ಶ್ರೀಗುರುಭ್ಯೋ ನಮಃ ಹರಿಃ ಓಂ ॥

ಕಲಿಂಗ ನೀತಿ

ಓಂ ಏವಂ ಶುಭೋಚ್ಚಗುಣವತ್ಸು ಜನಾರ್ದನೇನ
ಯುಕ್ತೇಷು ಪಾಂಡುಷು ಚರತ್ಸ್ವಧಿಕಂ ಶುಭಾನಿ ।
ನಾಸ್ತಿಕ್ಯನೀತಿಮತುಲಾಂ ಗುರುದೇವತಾದಿ-
ಸತ್ಸ್ವಂಜಸೈವ ಜಗೃಹುರ್ಧೃತರಾಷ್ಟ್ರಪುತ್ರಾಃ ॥೧॥

ಮಂಗಳಮಯ ಮಹಾಗುಣಶಾಲಿಗಳಾದ ಪಾಂಡವರು ಕೃಷ್ಣನೊಂದಿಗೆ ಹೀಗೆ ಬಹಳ ಒಳ್ಳೆಯ ಕೆಲಸಗಳನ್ನು ನಡೆಸುತ್ತಿದ್ದಾಗ ಕೌರವರು ಗುರುದೇವತಾದಿ ಸಜ್ಜನರ ವಿಷಯದಲ್ಲಿ ಸಾಟಿಯಿಲ್ಲದ ನಾಸ್ತಿಕ್ಯ ನೀತಿಯನ್ನು ಅಧಿಕವಾಗಿ ಕೈಗೊಂಡರು.

ನಾಮ್ನಾ ಕಲಿಂಗ ಇತಿ ಚಾಸುರಕೋ ದ್ವಿಜೋಽಭೂತ್
ಶಿಷ್ಯಃ ಸುರೇತರಗುರೋಃ ಶಕುನೇರ್ಗುರುಃ ಸಃ ।
ನೀತಿಂ ಸ ಕುತ್ಸಿತತಮಾಂ ಧೃತರಾಷ್ಟ್ರಪುತ್ರೇ-
ಷ್ವಾಧಾದ್ ರಹೋವಚನತಃ ಶಕುನೇಃ ಸಮಸ್ತಾಂ ॥೨॥

ಕಲಿಂಗನೆಂಬ ಹೆಸರಿನ ಅಸುರ ಸ್ವಭಾವದ ಬ್ರಾಹ್ಮಣ ದೈತ್ಯಗುರು ಶುಕ್ರಾಚಾರ್ಯರ ಶಿಷ್ಯ. ಶಕುನಿಗೆ ಈತ ಗುರುವಾಗಿದ್ದ. ಶಕುನಿಯ ಮಾತಿನಿಂದ ಅವನು ರಹಸ್ಯದಲ್ಲಿ ಕೌರವರಿಗೆ ಬಹಳ ಕೆಟ್ಟದಾದ ಎಲ್ಲ ನೀತಿಯನ್ನೂ ಉಪದೇಶಿಸಿದ.

ಮಹಾಭಾರತ ಪ್ರಚಲಿತ ಪಾಠದಲ್ಲಿ ಕಲಿಂಗ ಎಂಬುದು ಒಂದು ದೇಶದ ಹೆಸರೆಂದು. ಆ ದೇಶದ ಹೆಸರಿನಿಂದ ಬ್ರಾಹ್ಮಣನನ್ನು ಕರೆದಿರ ಬಹುದು. ವಸ್ತುತಃ ಈ ಬ್ರಾಹ್ಮಣನ ಹೆಸರು 'ಕಣಿಕ'. ಭಾರದ್ವಾಜ ಗೋತ್ರೋ ತ್ಪನ್ನನಾದ ಈತ ಕೂಟ ರಾಜನೀತಿಗಳಲ್ಲಿ ಮತ್ತು ಅರ್ಥಶಾಸ್ತ್ರಗಳಲ್ಲಿ ಪಂಡಿತ. ಧೃತರಾಷ್ಟ್ರನ ಒಬ್ಬ ಮಂತ್ರಿ. ಸೌವೀರದೇಶದ ರಾಜಾ ಶತ್ರುಂಜಯನಿಗೂ ಈತ ರಾಜನೀತಿ ಸಲಹೆಗಾರನಾಗಿದ್ದ. 'ಕಣಿಂಕ' ಎಂದೂ ಪಾಠವಿದೆ.

ಛದ್ಮೈವ ಯತ್ರ ಪರಮಂ ನ ಸುರಾಶ್ಚ ಪೂಜ್ಯಾಃ
ಸ್ವಾರ್ಥೇನ ವಂಚನಕೃತೇ ಜಗತೋಽಖಿಲಂ ಚ ।
ಧರ್ಮಾದಿಕಾರ್ಯಮಪಿ ಯಸ್ಯ ಮಹೋಪಧಿಃ ಸ್ಯಾತ್
ಶ್ರೇಷ್ಠಃ ಸ ಏವ ನಿಖಿಲಾಸುರದೈತ್ಯಸಂಘಾತ್ ॥೩॥

ಆ ನೀತಿಯಲ್ಲಿ ವಂಚನೆಗೇ ಅಗ್ರಸ್ಥಾನ. ದೇವತೆಗಳನ್ನೂ ಪೂಜಿಸಕೂಡದು. ಎಲ್ಲ ಧರ್ಮಾದಿಕಾರ್ಯವನ್ನು ಸ್ವಾರ್ಥದಿಂದ ಲೋಕವನ್ನು ವಂಚಿಸುವುದಕ್ಕಾಗಿಯೆ ನಡೆಸಬೇಕು. ಹೀಗೆ ಮಹಾಕಪಟಿಯಾಗಿ ಎಲ್ಲ ಅಸುರ ದೈತ್ಯ ಸಮೂಹವನ್ನು ಮೀರಿಸುತ್ತಿರಬೇಕು. ಇಂಥವನೇ ಶ್ರೇಷ್ಠ.

ಪುತ್ರ ಮಿತ್ರ ಸೋದರ ಪಿತ ಗುರು ಯಾರೇ ಇರಲಿ ಶತ್ರುಸ್ಥಾನದಲ್ಲಿದ್ದರೆ ಏಳಿಗೆಯನ್ನು ಬಯಸುವವನು ಅವರನ್ನು ನಾಶಮಾಡಬೇಕು. ನಾಶಮಾಡುವುದಕ್ಕೆ ಮೊದಲೂ ಒಳ್ಳೆಯ ಮಾತನಾಡಬೇಕು, ನಾಶ ಮಾಡುತ್ತಿರುವಾಗಲೂ ಒಳ್ಳೆಯ ಮಾತನಾಡಬೇಕು. ನಾಶಮಾಡಿದ ಬಳಿಕವೂ ಒಳ್ಳೆಯ ಮಾತನಾಡಬೇಕು. ದುಃಖಿಸುವನಂತೆ ಅಳುವನಂತೆ ಕಾಣಿಸಿಕೊಳ್ಳಬೇಕು. ಯಾರನ್ನು ನಾಶಮಾಡಬೇಕಾಗಿದೆಯೊ ಅವನ ಮನೆಗೆ ಬೆಂಕಿ ಹಚ್ಚಬೇಕು. ದರಿದ್ರರೂ ನಾಸ್ತಿಕರೂ ಕಳ್ಳರೂ ಆದ ಮನುಷ್ಯರನ್ನು ಹಿಡಿದು ವಿಷಪ್ರಯೋಗಾದಿಗಳಿಗೆ ನೇಮಿಸಬೇಕು. ಇಂಥ ಘೋರ ಅಪರಾಧಗಳನ್ನು ಎಷ್ಟು ಮಾಡಿದರೂ ತೋರಿಕೆಗೆ ಧರ್ಮಾಚರಣೆ ಮಾಡುತ್ತಿದ್ದರೆ ಆ ಅಪರಾಧಗಳು ಮೋಡಗಳಿಂದ ಬೆಟ್ಟ ಹೇಗೋ ಹಾಗೇ ಮುಚ್ಚಿಹೋಗುತ್ತವೆ. ಆದರಿಂದ ಅಗ್ನಿಕಾರ್ಯ ಯಜ್ಞ ಸಂನ್ಯಾಸದೀಕ್ಷೆ ಜಟೆ ಕೃಷ್ಣಾಜಿನಗಳಿಂದ ಲೋಕಕ್ಕೆ ವಿಶ್ವಾಸ ಉಂಟುಮಾಡಿ ಬಳಿಕ ಲೋಕವನ್ನು ನಾಶಮಾಡಬೇಕು. ಶತ್ರುವನ್ನು ಹೆಗಲಲ್ಲಿ ಹೊರಬೇಕು. ಸರಿಯಾದ ಕಾಲ ಬಂದಾಗ ಗಡಿಗೆಯನ್ನು ಕಲ್ಲಿಂದ ಹೇಗೋ ಹಾಗೆ ಧ್ವಂಸಗೊಳಿಸಬೇಕು... ಇತ್ಯಾದಿ ಉಪದೇಶಗಳನ್ನು ಕಲಿಂಗ ಧೃತರಾಷ್ಟ್ರನಿಗೆ ನೀಡುತ್ತಾನೆ, ಮಹಾಭಾರತದಲ್ಲಿ.

ಇತ್ಯಾದಿಕುತ್ಸಿತತಮಾಂ ಜಗೃಹುಃ ಸ್ಮ ವಿದ್ಯಾ-
ಮಜ್ಞಾತ ಏವ ಧೃತರಾಷ್ಟ್ರಮುಖ್ಯೈಃ ಸಮಸ್ತೈಃ ।
ತೇಷಾಂ ಸ್ವಭಾವಬಲತೋ ರುಚಿತಾ ಚ ಸೈವ
ವಿಸ್ತಾರಿತಾ ಚ ನಿಜಬುದ್ಧಿಬಲಾದತೋಽಪಿ ॥೪॥

ಇದೇ ಮುಂತಾದ ಬಲು ಕೆಟ್ಟದಾದ ಆ ವಿದ್ಯೆಯನ್ನು ಕೌರವರು ಧೃತರಾಷ್ಟ್ರಾದಿಗಳಿಗೆ ಯಾರಿಗೂ ತಿಳಿಯದಂಥ ರಹಸ್ಯ ಸ್ಥಳದಲ್ಲಿ ಕಲಿಂಗನಿಂದ ಉಪದೇಶ ಪಡೆದರು. ಅದು ಅವರ

ಸ್ವಭಾವ ಬಲದಿಂದಾಗಿ ಅವರಿಗೆ ಬಹಳ ಹಿಡಿಸಿತು. ತಮ್ಮ ಬುದ್ಧಿ ಬಲದಿಂದ ಅವರು ಆ ವಿದ್ಯೆಯನ್ನು ಇನ್ನೂ ಹೆಚ್ಚು ಬೆಳೆಸಿಕೊಂಡರು.

'ಹಂದಿಗೆ ಅಶುದ್ಧಿ ಹ್ಯಾಂಗೆ ರುಚಿಕರವಾಗಿ ತೋರುತದೆ ಹಾಂಗೆ ದುರ್ಯೋಧನಾದಿಗಳಿಗೆ ಕಳಿಂಗ ವಿದ್ಯ ತೋರುತಿಹೋದು' - ಕನ್ನಡ ಮಹಾಭಾರತ ತಾತ್ಪರ್ಯನಿರ್ಣಯ.

ದುರ್ಯೋಧನನ ಆಗ್ರಹ

ಸಂಪೂರ್ಣದುರ್ಮತಿರಥೋ ಧೃತರಾಷ್ಟ್ರಸೂನು-
ಸ್ತಾತಪ್ಯಮಾನಹೃದಯೋ ನಿಖಿಲಾನ್ಯಹಾನಿ ।
ದೃಷ್ಟ್ವಾ ಶ್ರಿಯಂ ಪರಮಿಕಾಂ ವಿಜಯಂ ಚ ಪಾರ್ಥೇ-
ಷ್ವಾಹೇದಮೇತ್ಯ ಪಿತರಂ ಸಹ ಸೌಬಲೇನ ॥೫॥

ಹೀಗೆ ದುಃಶಾಸ್ತ್ರದಲ್ಲಿ ಸರ್ವಜ್ಞನೆನಿಸಿದ ದುರ್ಯೋಧನ ಪಾಂಡವರಲ್ಲಿ ಪರಮೈಶ್ವರ್ಯವನ್ನೂ ವಿಜಯವನ್ನೂ ಕಂಡು ದಿನವಿಡೀ ಎದೆಯೊಳಗೆ ಬೇಯುತ್ತ ಶಕುನಿಯೊಂದಿಗೆ ಧೃತರಾಷ್ಟ್ರನ ಬಳಿಗೆ ಬಂದು ನುಡಿದ.

ಧೃತರಾಷ್ಟ್ರ ಗಂಧರ್ವಾವತಾರ. ಅದರಿಂದ ಸ್ವಾಭಾವಿಕವಾಗಿ ಪಾಂಡವರನ್ನು ತನ್ನ ಮಕ್ಕಳಂತೆಯೆ ಪ್ರೀತಿಸಿದ್ದ. ದುರ್ಯೋಧನ ಬಂದು 'ನಮಗೆ ಪಾಂಡವರಿಂದ ಅಪಾಯವಿದೆ. ಅವರನ್ನು ಉಪಾಯವಾಗಿ ದೂರ ವಾರಣಾವತಕ್ಕೆ ಕಳಿಸು' ಎಂದಾಗ ಮೊದಲಿಗೆ ಒಪ್ಪಲಿಲ್ಲ. ಅವನ ಅಂತಃಕರಣವನ್ನು ಮಲಿನಗೊಳಿಸಿ ತಮ್ಮ ಕಡೆಗೆ ತಿರುಗಿಸಿಕೊಳ್ಳಲು ದುರ್ಯೋಧನ ನುಡಿದ.

ಜ್ಯೇಷ್ಠಸ್ಯ ತೇಽಪಿ ಹಿ ವಯಂ ಹೃದಯಪ್ರಜಾತಾ
ನಾರ್ಹತ್ವಮೇವ ಗಮಿತಾ ಭವತೈವ ರಾಜ್ಯೇ ।
ಭ್ರಾತುಃ ಕನೀಯಸ ಉತಾಪಿ ಹಿ ದಾರಜಾತಾ
ಅನ್ಯೈಶ್ಚ ರಾಜ್ಯಪದವೀಂ ಭವತೈವ ನೀತಾಃ ॥೬॥

ಹಿರಿಯನಾದ ನಿನಗೆ ಔರಸಪುತ್ರರು ನಾವು. ಆದರೆ ನೀನೆ ನಮ್ಮನ್ನು ರಾಜ್ಯಾರ್ಹರನ್ನಾಗಿ ಮಾಡದೆ ಹೋದೆ. ಕಿರಿಯ ಸೋದರನಿಗೆ ಅದರಲ್ಲಿಯೂ ಅವನ ಹೆಂಡತಿಯಲ್ಲಿ ಬೇರೆಯವರಿಗೆ ಹುಟ್ಟಿದವರು ಪಾಂಡವರು ಅವರಿಗೆ ರಾಜ್ಯಪದವಿಯನ್ನು ನೀನೆ ಕೊಟ್ಟೆ.

ರಾಜ್ಯಂ ಮಹಚ್ಚ ಸಮವಾಪ್ಸ್ಯತಿ ಧರ್ಮಸೂನು-
ಸ್ತ್ವತ್ತೋಽಥ ವಾನುಜಬಲಾತ್ ಪ್ರಸಭಂ ವಯಂ ತು ।

ದಾಸಾ ಭವೇಮ ನಿಜತಂತುಭಿರೇವ ಸಾಕಂ
ಕುಂತೀಸುತಸ್ಯ ಪರತೋಽಪಿ ತದನ್ವಯಸ್ಯ ॥೭॥

ಮುಂದೆ ಧರ್ಮರಾಜನೆ ನಿನ್ನಿಂದಾಗಲಿ ತಮ್ಮಂದಿರ ಬಲದಿಂದಾಗಲಿ ಈ ದೊಡ್ಡ ರಾಜ್ಯವನ್ನು ಬಲಾತ್ಕಾರವಾಗಿ ಹೊಂದುವನು. ಆಗ ನಾವು ಅವನಿಗೆ ದಾಸರಾಗಬೇಕಾಗುತ್ತದೆ. ನಮ್ಮ ಸಂತತಿಯವರೂ ಮುಂದೆ ಅವನ ಸಂತತಿಯವರಿಗೆ ದಾಸರೇ ಆಗಬೇಕಾಗುತ್ತದೆ.

ನಾತ್ಮಾರ್ಥಮಸ್ತಿ ಮಮ ದುಃಖಿಮಥಾತಿಶುದ್ಧ-
ಲೋಕಪ್ರಸಿದ್ಧಯಶಸಸ್ತವ ಕೀರ್ತಿನಾಶಃ।
ಅಸ್ಮನ್ನಿಮಿತ್ತಮಿತಿ ದುಃಖಮತೋ ಹಿ ಸರ್ವೇ ಽ-
ಪೀಚ್ಛಾಮ ಮರ್ತುಮಥ ನಃ ಕುರು ಚಾಪ್ಯನುಜ್ಞಾಂ ॥೮॥

ನನಗಾಗಿ ನಾನೇನೂ ದುಃಖಿಸುವುದಿಲ್ಲ. ಅತಿನಿರ್ಮಲವಾದ ಲೋಕಪ್ರಸಿದ್ಧವಾದ ಯಶಸ್ಸುಳ್ಳ ನಿನ್ನ ಈ ಕೀರ್ತಿ ನಮ್ಮ ನಿಮಿತ್ತವಾಗಿ ಹಾಳಾಗುವುದೆಂದು ದುಃಖ. ಅದರಿಂದ ನಾವೆಲ್ಲರೂ ಸಾಯಲು ಹೊರಟಿರುವೆವು. ಅದಕ್ಕೆ ನಮಗೆ ಅನುಜ್ಞೆ ನೀಡು.

ಏವಂ ಸ್ವ ಪುತ್ರವಚನಂ ಸ ನಿಶಮ್ಯ ರಾಜಾ
ಪ್ರೋವಾಚ ನಾನುಗುಣಮೇತದಹೋ ಮನಸ್ತೇ।
ಕೋ ನಾಮ ಪಾಂಡುತನಯೇಷು ಗುಣೋತ್ತಮೇಷು
ಪ್ರೀತಿಂ ನ ಯಾತಿ ನಿಜವೀರ್ಯಭವೋಚ್ಚಯೇಷು ॥೯॥

ತನ್ನ ಮಗನ ಈ ಮಾತನ್ನು ಕೇಳಿ ರಾಜಾ ಧೃತರಾಷ್ಟ್ರನುಡಿದ -'ಪಾಂಡವರ ಬಗ್ಗೆ ನೀನು ಈರೀತಿ ಮನಸ್ಸಿನಲ್ಲಿ ಆಲೋಚಿಸುವುದು ಸರಿಯಲ್ಲ. ಉತ್ತಮ ಗುಣದವರಾಗಿದ್ದು ಸ್ವಂತ ಪರಾಕ್ರಮದಿಂದ ಉನ್ನತಿ ಹೊಂದುತ್ತಿರುವ ಪಾಂಡವರಲ್ಲಿ ಯಾರು ತಾನೆ ಪ್ರೀತಿ ಹೊಂದದಿರಲಾರರು?

ತೇ ಹಿ ಸ್ವಬಾಹುಬಲತೋಽಖಿಲಭೂಪಭೂತಿಂ
ಮಯ್ಯಾಕೃಷಂತಿ ನ ಚ ವಃ ಪ್ರತಿಷೇಧಕಾಸ್ತೇ।
ತಸ್ಮಾಚ್ಛಮಂ ವ್ರಜ ಶುಭಾಯ ಕುಲಸ್ಯ ತಾತ
ಕ್ಷೇಮಾಯ ನೋ ಭವತಿ ವೋ ಬಲವದ್ವಿರೋಧಃ ॥೧೦॥

ಪಾಂಡವರು ತಮ್ಮ ಬಾಹುಬಲದಿಂದ ಎಲ್ಲ ರಾಜರುಗಳ ಸಂಪತ್ತನ್ನೂ ನನ್ನ ಬಳಿಗೆ ಸೆಳೆದು ತಂದುಕೊಡುವರು. ನಿಮಗೂ ಅವರು ವಿರೋಧಿಗಳಲ್ಲ. ಆದರಿಂದ ಮಗು, ನೀನು ಅವರ ಬಗ್ಗೆ ಶಾಂತಚಿತ್ತನಾಗಿರು. ಅದರಿಂದ ಒಳ್ಳೆಯದಾಗುತ್ತದೆ. ಮತ್ತು ಬಲಿಷ್ಠರಾದ ಅವರೊಡನೆ ನೀವು ವಿರೋಧ ಕಟ್ಟಿಕೊಂಡರೆ ಕುಲಕ್ಕೆ ಕ್ಷೇಮವಾಗದು.

ಏವಂ ಬ್ರುವತ್ಯಪಿ ನೃಪೇ ಪುನರಾಹ ಪಾಪ
ಆಶ್ರಿತ್ಯ ಸೌಬಲಮತಂ ಯದಿ ನೈವ ಪಾರ್ಥಾನ್ ।
ಅನ್ಯತ್ರ ಯಾಪಯಸಿ ನಾಗಪುರಾತ್ ಪರೇತಾನ್
ದೃಷ್ಟ್ವಾಖಿಲಾನಪಿ ಹಿ ನೋ ಮುದಮೇಹಿ ಪಾರ್ಥೈಃ ॥೧೧॥

ಧೃತರಾಷ್ಟ್ರ ಹೀಗೆ ಬುದ್ಧಿವಾದ ಹೇಳಿದರೂ ಪಾಪಿ ದುರ್ಯೋಧನ ಶಕುನಿಯ ಅಭಿಪ್ರಾಯವನ್ನು ಅನುಸರಿಸಿ ನುಡಿದ- 'ನೀನು ಪಾಂಡವರನ್ನು ಹಸ್ತಿನಾವತಿಯಿಂದ ಬೇರೆ ಕಡೆಗೆ ಕಳಿಸದಿದ್ದರೆ ನಾವೆಲ್ಲ ಸಾಯುವೆವು. ಪಾಂಡವರೊಂದಿಗೆ ನೀನೂ ಅದನ್ನು ನೋಡಿ ಸಂತೋಷಪಡು.'

ಕಲಿಂಗ ದುರ್ಯೋಧನನಿಗೆ ಕೂಟನೀತಿಯನ್ನು ಉಪದೇಶಿಸಿದ್ದು ಧೃತರಾಷ್ಟ್ರನಿಗೆ ಗೊತ್ತಿರಲಿಲ್ಲ. ತಾನೇ ಕಲಿಂಗನನ್ನು ಕರೆಸಿಕೊಂಡು ಅವನಿಂದ ಉಪದೇಶ ಪಡೆಯುತ್ತಾನೆ. ಆದರೆ ಅದಕ್ಕಿಂತ ಪ್ರಬಲವಾಗಿತ್ತು ದುರ್ಯೋಧನ ನೀಡಿದ ಈ ಆತ್ಮಹತ್ಯೆಯ ಬೆದರಿಕೆ.

ಧೃತರಾಷ್ಟ್ರನ ಪುತ್ರಮೋಹ

ಏವಂ ನಿಶಮ್ಯ ಗದಿತಂ ಸುತಹಾರ್ದಪಾಶೈ-
ರಾಕೃಷ್ಯತಾಶು ಸ ನೃಪೋಽರಿಧರೇಚ್ಛಯೈವ ।
ಪ್ರೋವಾಚ ಪುತ್ರಮಪಿ ತೇ ಬಲಿನೋ ಹಿ ಪಾರ್ಥಾಃ
ಶಕ್ಯಾಃ ಪುರಾತ್ತು ನ ಚ ಯಾಪಯಿತುಂ ಕಥಂಚಿತ್ ॥೧೨॥

ಈ ಮಾತನ್ನು ಕೇಳಿ ಧೃತರಾಷ್ಟ್ರ ಹರೀಚ್ಛೆಯಿಂದಲೆ ಪುತ್ರಮೋಹದ ಪಾಶಕ್ಕೆ ಸಿಲುಕಿದ. 'ಮಗು, ಪಾಂಡವರು ಬಲಿಷ್ಠರು. ಅವರನ್ನು ಹಸ್ತಿನಾವತಿಯಿಂದ ಹೊರಗೆ ಹಾಕುವುದು ಯಾವ ರೀತಿಯಿಂದಲೂ ಸಾಧ್ಯವಾಗಲಾರದು' ಎಂದ.

ಇತ್ಯುಕ್ತ ಆಹ ಪಿತರಂ ಶಕುನಿಂ ನಿರೀಕ್ಷ್ಯ
ಸೃಷ್ಟೋ ಮಯಾ ವಿಧಿರಿಹಾದ್ಯ ಶೃಣುಷ್ವ ತಂ ಚ ।
ಆಸಂಸ್ತ್ರಯೋದಶ ಸಮಾ ಹಿ ಪುರಂ ಪ್ರವಿಷ್ಟೇ-
ಷ್ವೇತೇಷು ತಾವದಯಮೇವ ವಿಧಿರ್ಮಯೇಷ್ಟಃ ॥೧೩॥

ಈ ಮಾತನ್ನು ಕೇಳಿ ದುರ್ಯೋಧನ ಶಕುನಿಯ ಕಡೆಗೆ ನೋಡಿ ತಂದೆಗೆ ಹೇಳಿದ- 'ಪಾಂಡವರನ್ನು ನಗರದಿಂದ ಹೊರಗೆ ಕಳಿಸಲು ನಾನೊಂದು ಉಪಾಯ ಮಾಡಿದ್ದೇನೆ. ಅವರು ನಗರವನ್ನು ಪ್ರವೇಶಿಸಿ ಹದಿಮೂರು ವರ್ಷಗಳಾದುವು. ಅಂದಿನಿಂದಲೂ ನಾನು ಈ ಉಪಾಯವನ್ನು ಯೋಚಿಸಿದ್ದೇನೆ.

ದ್ರೌಣೇರ್ಹಿ ನಾಸ್ತಿ ಸದೃಶೋ ಬಲವಾನ್ ಪ್ರತಾಪೀ
ಸೋಽಯಂ ಮಯಾ ಬಹುವಿಧೈಃ ಪರಮೈರುಪಾಯೈಃ।
ನೀತೋ ವಶಂ ವಶಗತೋಽಸ್ಯ ಚ ಮಾತುಲೇನ
ಸಾಕಂ ಪಿತಾ ತಮನು ಚೈಷ ನದೀಪ್ರಸೂತಃ ॥೧೪॥

ಅಶ್ವತ್ಥಾಮನಿಗೆ ಸಮಾನನಾದ ಬಲಿಷ್ಠ, ಪ್ರತಾಪಿ ಇನ್ನಾರೂ ಇಲ್ಲ. ಅಂಥವನನ್ನೂ ನಾನು ನಾನಾ ಬಗೆಯ ಶ್ರೇಷ್ಠ ಉಪಾಯಗಳಿಂದ ನನ್ನ ವಶಮಾಡಿಕೊಂಡಿದ್ದೇನೆ. ಇವನ ತಂದೆ ದ್ರೋಣನನ್ನೂ ಸೋದರಮಾವ ಕೃಪನನ್ನೂ ನನ್ನ ವಶಕ್ಕೆ ತಂದುಕೊಂಡಿದ್ದೇನೆ. ಇನ್ನು ಭೀಷ್ಮರಂತೂ ದ್ರೋಣರ ಕಡೆಗೇ ಇರುವವರು.

ಏವಂ ಹಿ ಸೈನಿಕಗಣಾ ಅಪಿ ದಾನಮಾನ್ಯೈಃ
ಪ್ರಾಯೋ ವಶಂ ಮಮ ಗತಾ ಅಪಿ ಚೈಷ ಕರ್ಣಃ।
ಅಸ್ತ್ರೇ ಬಲೇಽಪ್ಯಧಿಕ ಏವ ಸುರೇಂದ್ರಸೂನೋ-
ರ್ಜೇಷ್ಯೇ ಚ ಮಂತ್ರಬಲತಸ್ತ್ವಹಮೇವ ಭೀಮಂ ॥೧೫॥

ಹೀಗೆಯೇ ಸೈನಿಕರ ಸಮೂಹಗಳನ್ನೂ ದಾನಮಾನಗಳಿಂದ ಹೆಚ್ಚಿನ ಮಟ್ಟಿಗೆ ನನ್ನ ವಶಕ್ಕೇ ತೆಗೆದುಕೊಂಡಿದ್ದೇನೆ. ಮತ್ತು ಈ ಕರ್ಣ ಅಸ್ತ್ರದಲ್ಲಿಯೂ ಬಲದಲ್ಲಿಯೂ ಅರ್ಜುನನ್ನು ಮೀರಿಸುವವ, ನನ್ನ ವಶದಲ್ಲಿಯೇ ಇದ್ದಾನೆ. ಭೀಮನನ್ನು ಮಂತ್ರಬಲದಿಂದ ನಾನೇ ಗೆಲ್ಲಬಲ್ಲೆ.

ತ್ರಿಂಶಚ್ಛತಂ ಪರಮಕಾಃ ಸುರದುರ್ಲಭಾಶ್ಚ
ದುರ್ವಾಸಸೋ ಹಿ ಮನವೋಽದ್ಯ ಮಯಾ ಗೃಹೀತಾಃ।
ಅನ್ಯತ್ರ ತೇ ಪ್ರವಿಹಿತಾ ನ ಹಿ ವೀರ್ಯವಂತಃ
ಸ್ಯುರ್ಭೀಮ ಇತ್ಯಹಮಮೂನ್ನ ನಿಯೋಜಯಾಮಿ ॥೧೬॥

ಏಕೆಂದರೆ ದೇವತೆಗಳಿಗೂ ದುರ್ಲಭವಾದ ನೂರಮೂವತ್ತು ಮಹಾಮಂತ್ರಗಳನ್ನು ದೂರ್ವಾಸರಿಂದ ಇಂದು ನಾನು ಹೊಂದಿದ್ದೇನೆ. ಬೇರೆಯವರ ಮೇಲೆ ಪ್ರಯೋಗಿಸಿದರೆ ಮುಂದೆ ಅವು ಭೀಮನ ಮೇಲೆ ಪರಿಣಾಮಕಾರಿಯಾಗಲಾರವೆಂದು ಅವುಗಳನ್ನು ನಾನು ಇಂದು ಪ್ರಯೋಗಿಸುತ್ತಿಲ್ಲ.

'ತ್ರಿಂಶಚ್ಛತಂ' ಎಂದರೆ ಮೂರು ಸಾವಿರವಾಗಬಹುದು ಅಥವಾ ನೂರಮೂವತ್ತು ಆಗಬಹುದು ಎನ್ನುತ್ತವೆ, ವರದರಾಜೀಯ ಮತ್ತು ತಾಮ್ರಪರ್ಣೀಯಗಳು.[1]

---

1. ತ್ರಿಂಶಚ್ಛತಂ ತ್ರಿಸಹಸ್ರಮಿತಿ ಯಾವತ್। ತ್ರಿಂಶದಧಿಕಶತಮಿತ್ಯಪಿ ಸಂಭವತಿ। -ವರದರಾಜೀಯ
ತ್ರಿಂಶಚ್ಛತಂ ತ್ರಿಂಶದಧಿಕಶತಂ ತ್ರಿಸಹಸ್ರಂ ವಾ। -ತಾಮ್ರಪರ್ಣೀಯ.

ತೇ ವೀರ್ಯದಾ ವಿಜಯದಾ ಅಪಿ ವಹ್ನಿವಾರಿ-
ಸ್ತಂಭಾದಿದಾಃ ಸಕಲದೇವನಿಕಾಯರೋಧಾಃ ।
ವೃಷ್ಟ್ಯದ್ಯಭೀಪ್ಸಿತಸಮಸ್ತಕರಾ ಅಮೂಭಿ-
ರ್ಜೇಷ್ಯಾಮಿ ಭೀಮಮಮುಮೇಕಮಯಾತಯಾಮೈಃ ॥೧೭॥

ಆ ಮಂತ್ರಗಳು ವೀರ್ಯದಾಯಕ, ಹಾಗೂ ವಿಜಯದಾಯಕಗಳು. ವಹ್ನಿಸ್ತಂಭ ಜಲಸ್ತಂಭ ಮೃತಸಂಜೀವನಾದಿದಾಯಕಗಳು. ಎಲ್ಲ ದೇವ ಸಮೂಹಗಳನ್ನೂ ಇದಿರಿಸಬಲ್ಲುವು. ಮಳೆ ಮುಂತಾದ ಸಕಲಾಭಿಷ್ಟ ನೀಡಬಲ್ಲವು. ನಾನು ಪ್ರತಿದಿನ ಜಪಿಸುತ್ತಿರುವುದರಿಂದ ಅವುಗಳ ಸಾಮರ್ಥ್ಯ ಕುಂದಿರುವುದಿಲ್ಲ. ಅದರಿಂದ ಈ ಮಂತ್ರಗಳಿಂದ ಭೀಮನೊಬ್ಬನನ್ನು ನಾನೇ ಪರಾಭವಗೊಳಿಸುವೆನು.

ಮುಂದೆ ಕುರುಕ್ಷೇತ್ರದ ಗದಾಯುದ್ಧ ಪ್ರಸಂಗದಲ್ಲಿ ದುರ್ಯೋಧನ ಸರೋವರದಲ್ಲಿ ಮುಳುಗಿ ಜಲಸ್ತಂಭ ಮಾಡಿಕೊಂಡು ಮಂತ್ರೋಪಾಸನೆಗೆ ತೊಡಗಿದ್ದಾಗ ಭೀಮ ಅವನನ್ನು ಕೆಣಕಿ ನೀರಿಂದ ಹೊರಗೆ ಬರಿಸಿದ. ರಾಮಾಯಣದಲ್ಲಿ ಇಂದ್ರಜಿತ್ತಿನ ಉಪಾಸನೆಯಂತೆ ದುರ್ಯೋಧನನ ಮಂತ್ರಗಳು ದುರ್ಬಲವಾಗಿದ್ದುವು. ಭೀಮನ ಮುಂದೆ ಏನೂ ಫಲಕಾರಿಯಾಗಿರಲಿಲ್ಲ ಎಂಬುದನ್ನು ಶ್ರೀಮದಾಚಾರ್ಯರು 'ಅಮೀಭಿಃ' ಎಂದು ಪುಲ್ಲಿಂಗ ಶಬ್ದಪ್ರಯೋಗ ಮಾಡಬೇಕಾಗಿರುವಲ್ಲಿ 'ಅಮೂಭಿಃ' ಎಂದು ಸ್ತ್ರೀಲಿಂಗಪ್ರಯೋಗಮಾಡುತ್ತ ಸೂಚಿಸಿದ್ದಾರೆ.

ವಾರಣಾವತಕ್ಕೆ ಪಾಂಡವರು

ಸೌಹಾರ್ದಮೇಷು ಯದಿ ಚಾತಿತರಾಂ ಕರೋಷಿ
ತತ್ರಾಪಿ ನೈವ ಹಿ ಮಯಾ ಕ್ರಿಯತೇ ವಿರೋಧಃ ।
ವತ್ಸ್ಯಂತು ವಾರಣವತೇ ಭವತು ಸ್ಮ ರಾಷ್ಟ್ರಂ
ತೇಷಾಂ ತದೇವ ಮಮ ನಾಗಪುರಂ ತ್ವದರ್ಥೇ ॥೧೮॥

ಪಾಂಡವರಲ್ಲಿ ನೀನು ಬಹಳ ಸೌಹಾರ್ದ ವಿರಿಸಿಕೊಳ್ಳುವಿಯಾದರೆ ಅದಕ್ಕೂ ನಾನು ಸರ್ವಥಾ ವಿರೋಧ ಮಾಡುವುದಿಲ್ಲ. ನಿನ್ನ ಸಂತೋಷಕ್ಕಾಗಿ ಅವರು ವಾರಣವತದಲ್ಲಿ ವಾಸ ಮಾಡಲಿ. ಅದು ಅವರದೇ ರಾಜ್ಯವಾಗಲಿ. ಹಸ್ತಿನಾಪುರ ಮಾತ್ರವೆ ನನ್ನದಾಗಿರಲಿ.

ಏವಂ ಸ್ವಪುತ್ರಪರಿಪಾಲನತೋ ಯಶಸ್ತೇ
ಭೂಯಾದ್ವಿನಶ್ಯತಿ ಪರಪ್ರಸವಾತಿಪುಷ್ಟೌ ।
ಜಾತೇ ಬಲೇ ತವ ವಿರೋಧಕೃತಶ್ಚ ತೇ ಸ್ಯುಃ
ಸ್ವಾರ್ಥಂ ಹಿ ತಾವದನುಯಾಂತ್ಯಪಿ ಕೇವಲಂ ತ್ವಾಂ ॥೧೯॥

ಹೀಗೆ ಮಾಡಿದರೆ ನಿನ್ನ ಮಕ್ಕಳನ್ನು ಕಾಪಾಡಿದ ಯಶಸ್ಸು ನಿನ್ನದಾಗುತ್ತದೆ. ಇಲ್ಲದಿದ್ದರೆ ಬೇರೆಯವರ ಮಕ್ಕಳನ್ನು ಅತಿಯಾಗಿ ಬೆಳೆಸಿದ್ದರಿಂದ ನಿನ್ನ ಕೀರ್ತಿ ನಶಿಸುತ್ತದೆ. ಈಗ ಅವರು ಕೇವಲ ಸ್ವಪ್ರಯೋಜನಕ್ಕಾಗಿ ನಿನ್ನನ್ನು ಒಲೈಸುತ್ತಿದ್ದಾರೆ. ಮುಂದೆ ಬಲಶಾಲಿಗಳಾಗಿ ನಿನಗೇ ವಿರೋಧ ಮಾಡುತ್ತಾರೆ.

ತಮ್ಮ ಅಧಿಕಾರ ಭದ್ರವಾದ ಮೇಲೆ ಕುರುಡನೆಂದು ನಿನ್ನನ್ನೆ ಮೂಲೆಗೆ ಸರಿಸುತ್ತಾರೆ, ಈ ಪಾಂಡವರು, ಕಪಟಿಗಳು!

ಕ್ಷತ್ತೈಕ ಏವ ಸತತಂ ಪರಿಪೋಷಕೋಽಲಂ
ತೇಷಾಂ ಮಮ ದ್ವಿಡಥ ಮಂತ್ರಬಲಾದಮುಷ್ಯ ।
ಪೌರಾಶ್ಚ ಜಾನಪದಕಾಃ ಸತತಂ ದ್ವಿಷಂತಿ
ಮಾಂ ತೇಷ್ವತೀವ ದೃಢಸೌಹೃದಚೇತಸಶ್ಚ ॥೨೦॥

ವಿದುರನೊಬ್ಬ ಪಾಂಡವರಿಗೆ ಸದಾ ಪೋಷಣೆ ನೀಡುತ್ತ ನನಗೆ ವಿರೋಧಿಯಾಗಿದ್ದಾನೆ. ಅವನ ಪಿಸುಮಾತಿನ ಅಪಪ್ರಚಾರದ ಬಲದಿಂದಲೆ ನಾಗರಿಕರೂ ಹಳ್ಳಿಗರೂ ಸದಾ ನನ್ನನ್ನು ದ್ವೇಷಿಸುತ್ತಾರೆ; ಪಾಂಡವರಲ್ಲಿ ಸದಾ ಅತ್ಯಂತ ದೃಢ ಸೌಹಾರ್ದ ಯುಕ್ತ ಅಂತಃಕರಣದವರಾಗಿದ್ದಾರೆ.

ಏತೇಷು ದೂರಗಮಿತೇಷು ನಿರಾಶ್ರಯತ್ವಾತ್
ಮಾಮೇವ ದುರ್ಬಲತಯಾ ಪರಿತಃ ಶ್ರಯಂತೇ ।
ಭೀಷ್ಮಾದಯಶ್ಚ ನ ಹಿ ತನ್ನಿಕಟೇ ವಿರೋಧಂ
ಕುರ್ಯುರ್ವಿನಶ್ಯತಿ ಗತೇಷು ಹಿ ಸೌಹೃದಂ ತತ್ ॥೨೧॥

ಪಾಂಡವರನ್ನು ದೂರಕಳಿಸಿದರೆ ಜನರು ಅವರ ಆಸರೆ ಇಲ್ಲದೆ ದುರ್ಬಲರಾಗುವುದರಿಂದ ನನ್ನನ್ನೆ ಆಶ್ರಯಿಸುತ್ತಾರೆ. ಭೀಷ್ಮಾದಿಗಳೂ, ಪಾಂಡವರು ತಮ್ಮ ಬಳಿಯಲ್ಲಿದ್ದರೆ, ಅವರಲ್ಲಿ ವಿರೋಧ ಮಾಡಲಾರರು. ದೂರಹೋದರೆ ಅವರಲ್ಲಿ ಸೌಹಾರ್ದ ಕಡಿಮೆಯಾಗುವುದು.

ಭೇದಃ ಕುಲಸ್ಯ ಭವಿತಾ ಕುಲನಾಶಹೇತು-
ರಸ್ಮಾಭಿರೇಷು ಸಹಿತೇಷು ಪುರೇ ವಸತ್ಸು ।
ತಸ್ಮಾದುಪಾಯಬಲತಃ ಪ್ರತಿಯಾತನೀಯಾ-
ಸ್ತೇ ವಾರಣಾವತಮಿತೋ ವಿಹಿತೋಽಪ್ಯುಪಾಯಃ ॥೨೨॥

ಪಾಂಡವರು ನಮ್ಮೊಡನೆ ಹಸ್ತಿನಾವತಿಯಲ್ಲಿಯೆ ವಾಸವಾಗಿದ್ದರೆ ಮನೆತನದಲ್ಲಿ ಒಡಕು ಹುಟ್ಟುವುದು ನಿಶ್ಚಿತ. ಆ ಒಡಕು ಕುಲನಾಶಕ್ಕೆ ಕಾರಣವಾಗುವುದು. ಅದರಿಂದ ಉಪಾಯ ಬಲದಿಂದ ಅವರನ್ನು ಹಸ್ತಿನಾವತಿಯಿಂದ ದೂರ ವಾರಣಾವತಕ್ಕೆ ಕಳಿಸುವುದೇ ಯೋಗ್ಯ. ಅದಕ್ಕೆ ಒಂದು ಉಪಾಯ ಮಾಡಿದ್ದೇನೆ.

ವಿಷ್ಣುರ್ಜಯಂತ ಇತಿ ಶಂಭುಸಹಾಯ ಆಸ್ತೇ
ದೇವ್ಯೋತ್ಸವಶ್ಚ ಸುಮಹಾನ್ ಭವಿತಾತ್ರ ಸುಷ್ಠು ।
ಭಕ್ತಾಶ್ಚ ತೇ ಹಿ ನಿತರಾಮರಿಶಂಖಿಪಾಣೌ
ತ್ವಚ್ಚೋದಿತಾಃ ಸಮುಪಯಾಂತಿ ತಮುತ್ಸವಂ ದ್ರಾಕ್ ॥೨೩॥

ವಾರಣಾವತದಲ್ಲಿ ಶಿವನೊಂದಿಗೆ ವಿಷ್ಣು ಜಯಂತ ಎಂಬ ಲಿಂಗ ರೂಪದಿಂದ ನೆಲೆಸಿದ್ದಾನೆ. ಅಲ್ಲಿ ದೇವರಿಗೆ ಬಹಳ ದೊಡ್ಡ ಉತ್ಸವ ಚೆನ್ನಾಗಿ ನಡೆಯುತ್ತದೆ. ಪಾಂಡವರು ವಿಷ್ಣುವಿನಲ್ಲಿ ಬಹಳ ಭಕ್ತಿಉಳ್ಳವರು. ಅದರಿಂದ ನೀನು ಹೇಳಿದರೆ ಅವರು ಆ ಉತ್ಸವಕ್ಕೆ ಬೇಗನೆ ಹೊರಡುವರು.

ಅಜ್ಞಾಪ್ಯ ಮತ್ಪುರುಷತಾಂ ಪುರುಷೈರ್ಮದೀಯೈ-
ರ್ಮಧ್ಯಸ್ಥವದ್‌ಬಹುಗುಣಾ ಉದಿತಾಶ್ಚ ತತ್ರ ।
ತೇಷಾಂ ಪುರೋಽತ್ರ ಗಮನಾಭಿರುಚಿಶ್ಚ ಜಾತಾ
ದ್ರಷ್ಟುಂ ಪುರಂ ಬಹುಗುಣಂ ನನು ಪಾಂಡವಾನಾಂ ॥೨೪॥

ನನ್ನ ಕಡೆಯ ಜನರು ಅವರು ನನ್ನವರೆಂಬುದನ್ನೇ ತೋರಿಕೊಳ್ಳದೆ ಮಧ್ಯಸ್ಥರಂತಿದ್ದು ಪಾಂಡವರ ಮುಂದೆ ವಾರಣಾವತ ಕ್ಷೇತ್ರವನ್ನು ಬಹುವಾಗಿ ಹೊಗಳಿದ್ದಾರೆ. ಅದರಿಂದ ಪಾಂಡವರಿಗೆ ಬಹುಗುಣವುಳ್ಳ ಈ ಪಟ್ಟಣವನ್ನು ನೋಡಲು ಹೋಗುವ ಉತ್ಸುಕತೆಯೂ ಉಂಟಾಗಿದೆ.

ದುರ್ಯೋಧನ ಪಾಪಿ ಇದ್ದಾನೆ. ಇವನ ಸಂಗತೀಲಿ ಇರ ಬ್ಯಾಡರಿ. ವಾರಣಾವತಿ ರಾಜಧಾನಿ ಅದೆ. ಜಯಂತ ನಾಮಕ ನಾರಾಯಣ ಲಿಂಗಾಕಾರವಾಗಿದ್ದಾನೆ. ನಿರಂತರ ಜಾತ್ರಿ ನಡೀತದೆ, ದ್ರವ್ಯ ಯಥೇಚ್ಛ ಬರತದೆ. ನೀವು ಬಲಿಷ್ಠರಿದ್ದೀರಿ. ಸಮಸ್ತ ರಾಜರು ವಶರಾಗಿದ್ದಾರೆ. ಚಾತುರ್ಯದಿಂದ ರಾಜ್ಯವಾಳಬಹುದು. -ಕನ್ನಡ ಮಹಾಭಾ. ನಿರ್ಣಯ

ಇತ್ಯುಕ್ತವತ್ಯಥ ಸುತೇ ಸ ತಥೇತ್ಯುವಾಚ
ಪ್ರಾಪ್ತೇಷು ಪಾಂಡುತನಯೇಷು ತಥೈವ ಚೋಚೇ ।
ಜ್ಞಾತ್ವೈವ ತೇಽಪಿ ನೃಪತೇರ್ಹೃದಯಂ ಸಮಸ್ತಂ
ಜಗ್ಮುಃ ಪಿತೇತಿ ಪೃಥಯಾ ಸಹ ನೀತಿಹೇತೋಃ ॥೨೫॥

ದುರ್ಯೋಧನ ಹೀಗೆ ಹೇಳಿದಾಗ 'ಹಾಗೇ ಆಗಲಿ' ಎಂದ ಧೃತರಾಷ್ಟ್ರ. ಪಾಂಡವರು ಬಂದಾಗ ಅವರ ಮುಂದೆಯೂ ಹಾಗೇ ಹೇಳಿದ. ಅವರು ಅವನ ಅಭಿಪ್ರಾಯವನ್ನೆಲ್ಲ ತಿಳಿದು, ಅವನು ತಮಗೆ ತಂದೆ ಎಂಬ ಭಾವನೆಯಿಂದ ನೀತಿಯ ಪಾಲನೆಗಾಗಿ ಕುಂತಿಯೊಂದಿಗೆ ವಾರಣಾವತಕ್ಕೆ ನಡೆದರು.

ದೊಡ್ಡಪ್ಪನ ಅಭಿಪ್ರಾಯದಂತೆ ಮಕ್ಕಳು ನಡೆಯುವುದು ಸರಿಯಾದ ನೀತಿ. ಅದನ್ನು ಪಾಲಿಸುವುದಕ್ಕಾಗಿ ದೊಡ್ಡಪ್ಪನ ಮಾತೆಂದು ಗೌರವದಿಂದ ಪಾಂಡವರು ವಾರಣಾವತಕ್ಕೆ ಹೊರಟರು.

ಭೀಮಸೇನನ ಧರ್ಮಪ್ರಜ್ಞೆ

ಭೀಮಸ್ತದಾ ಹ ಭವಿತಾತ್ರ ಹಿ ಭೈಕ್ಷಚಾರ
ಇತ್ಯೇವ ಸಮ್ಯಗನುವಿದ್ಯ ನಿಜಂ ನ ಕರ್ಮ ।
ತ್ಯಾಜ್ಯಂ ತ್ವಿತಿ ಪ್ರತಿಜಗಾದ ನಿಜಾಗ್ರಜಾಯ
ಯಾಮೋ ವಯಂ ನ ಹಿ ಗೃಹಾತ್ ಸ ಹಿ ನಃ ಸ್ವಧರ್ಮಃ ॥೨೬॥

ಆಗ ಭೀಮ ಹೇಳಿದ- 'ನಾವು ಅಲ್ಲಿಗೆ ಹೋದರೆ ಭಿಕ್ಷೆ ಬೇಡಬೇಕಾದೀತು. ಅದರಿಂದ ನಾವು ನಮ್ಮ ಊರನ್ನು ಬಿಟ್ಟು, ಬೇರೆ ಕಡೆಗೆ ಹೋಗಕೂಡದು. ಅದು ನಮಗೆ ಸ್ವಧರ್ಮ' ಸ್ವಧರ್ಮವನ್ನು ಬಿಡಬಾರದು ಎಂದು ಚೆನ್ನಾಗಿ ತಿಳಿದೇ ಭೀಮ ತನ್ನ ಅಣ್ಣನ ಮುಂದೆ ಹೀಗೆ ಹೇಳಿದ.

ನಿಷ್ಕಾಸಯಂತಿ ಯದಿ ನೋ ನಿಜಧರ್ಮಸಂಸ್ಥಾನ್
ಯೋತ್ಸ್ಯಾಮಹೇಽತ್ರ ನ ಹಿ ದಸ್ಯುವಧೋಽಪ್ಯಧರ್ಮಃ ।
ಇತ್ಯೂಚಿವಾಂಸಮಮುಮಾಹ ಚ ಧರ್ಮಸೂನುಃ
ಕೀರ್ತಿರ್ವಿನಶ್ಯತಿ ಹಿ ನೋ ಗುರುಭಿರ್ವಿರೋಧೇ ॥೨೭॥

'ಸ್ವಧರ್ಮದಲ್ಲಿರುವ ನಮ್ಮನ್ನು ಅವರು ಹೊರಗೆ ಕಳಿಸುವುದಾದರೆ ನಾವು ಇಲ್ಲಿಯೆ ಯುದ್ಧ ಮಾಡೋಣ. ದುಷ್ಟರನ್ನು ವಧಿಸುವುದೂ ಅಧರ್ಮವಲ್ಲ ತಾನೆ?' -ಹೀಗೆ ಭೀಮ ನುಡಿದಾಗ ಧರ್ಮರಾಜನೆಂದ- 'ಗುರು ಹಿರಿಯರೊಡನೆ ವಿರೋಧ ಮಾಡಿದರೆ ನಮ್ಮ ಕೀರ್ತಿ ನಶಿಸುವುದು'.

ಇತ್ಯುಕ್ತವಾಕ್ಯಮಮುಮಗ್ರಜಮನ್ವಗಾತ್ಸ
ಭೀಮಃ ಪ್ರದರ್ಶ್ಯ ನಿಜಧರ್ಮಮಥಾನುವೃತ್ತ್ಯೈ ।
ದೋಷೋ ಭವೇದುಭಯತೋ ಯತ ಏವ ತೇನ
ವಾಚ್ಯಃ ಸ್ವಧರ್ಮ ಉತ ನ ಸ್ಥಿತಿರತ್ರ ಕಾರ್ಯಾ ॥೨೮॥

ಹೀಗೆ ಅಣ್ಣ ನುಡಿದಾಗ ಭೀಮಸೇನ ಅಣ್ಣನ ಆಜ್ಞೆ ಎಂದು ಒಪ್ಪಿ ಅವನನ್ನು ಹಿಂಬಾಲಿಸಿದ. ಅದಕ್ಕೆ ಮೊದಲು ಸ್ವಧರ್ಮವನ್ನು ಹೇಳಿದ. ಏಕೆಂದರೆ ಸ್ವಧರ್ಮವನ್ನು ತಿಳಿದೂ ಹೇಳದಿರುವುದು, ಅಧರ್ಮವಾಗುತ್ತದೆ. ಅಣ್ಣನ ಆಜ್ಞೆಯನ್ನು ಮೀರುವುದೂ, ಅಧರ್ಮವಾಗುತ್ತದೆ. ಅದರಿಂದ ತಾನು ತಿಳಿದ ಸ್ವಧರ್ಮವನ್ನು ಹೇಳಬೇಕು, ಅಣ್ಣನ ಆಜ್ಞೆಗೆ ವಿರೋಧವಾಗಿ ಹಸ್ತಿನಾವತಿಯಲ್ಲಿ ಇರಲೂಕೂಡದು.

ಕೀರ್ತ್ಯರ್ಥಮೇವ ನಿಜಧರ್ಮಪರಿಪ್ರಹಾಣೇ
ಪ್ರಾಪ್ತೇಽಗ್ರಜಸ್ಯ ವಚನಾತ್ ಪ್ರವಿಹಾತುಮೇವ ।
ಭೀಮಸ್ಯ ದೋಷಮುಭಯಂ ಪ್ರವಿಹಂತುಮೀಶೋ
ಜ್ಯೇಷ್ಠಂ ಚಕಾರ ಹರಿರತ್ರ ಸುತಂ ವೃಷಸ್ಯ ॥೨೯॥

ದೊಡ್ಡಪ್ಪನ ಆಜ್ಞೆಯನ್ನು ನಡೆಸಿದ ಕೀರ್ತಿಗಾಗಿ ಸ್ವಧರ್ಮವನ್ನು ಬಿಡಬೇಕಾಗಿ ಬಂದಾಗ ಅಣ್ಣನ ಮಾತಿನಿಂದಾಗಿ ಬಿಡಬೇಕು. ಹೀಗೆ ಎರಡೂ ಅಧರ್ಮವನ್ನು ಭೀಮ ಪರಿಹರಿಸಿಕೊಳ್ಳಬೇಕೆಂದೇ ಶ್ರೀಹರಿ ಧರ್ಮರಾಜನನ್ನು ಭೀಮನಿಗೆ ಅಣ್ಣನಾಗಿ ಹುಟ್ಟಿಸಿದ.

ಹಂತವ್ಯತಾಮುಪಗತೇಷು ಸುಯೋಧನಾದಿ-
ಷ್ವನ್ಯೋ ವಧಾನ್ನ ಹಿ ಭವೇನ್ನಿಜಧರ್ಮ ಏವ ।
ಪೂರ್ವಂ ವಧೇ ನ ಹಿ ಸಮಸ್ತ ಏವ ದೋಷಾ-
ಸ್ತೇಷಾಂ ಪ್ರಯಾಂತಿ ವಿವೃತಿಂ ಚ ತದರ್ಥತೋಽಪಿ ॥೩೦॥

ದುರ್ಯೋಧನಾದಿಗಳು ವಧಾರ್ಹರೆನಿಸಿರುವಾಗ ಅವರನ್ನು ವಧಿಸುವುದು ಬಿಟ್ಟು ಬೇರೇನೂ ಸ್ವಧರ್ಮವಾಗುವುದೇ ಇಲ್ಲ. ಆದರೆ ಮೊದಲಿಗೇ ಕೊಂದರೆ ಅವರ ಎಲ್ಲ ದುರ್ಗುಣಗಳು ಬೆಳಕಿಗೆ ಬರುವುದಿಲ್ಲ. ಅದಕ್ಕಾಗಿಯೂ ಶ್ರೀಹರಿ ಧರ್ಮರಾಜನನ್ನು ಅಣ್ಣನನ್ನಾಗಿ ಹುಟ್ಟಿಸಿದ.

ದುರ್ಯೋಧನಾದಿಗಳು ಈಗಾಗಲೆ ಭೀಮನಿಗೆ ವಿಷಪ್ರಯೋಗಾದಿ ಅಪರಾಧಗಳನ್ನು ಮಾಡಿ ವಧಾರ್ಹರೆನಿಸಿದ್ದಾರೆ. ಅವರನ್ನು ಈಗಲೇ ಕೊಲ್ಲಬಹುದು. ಕೊಲ್ಲುವುದೇ ಸ್ವಧರ್ಮ. ಆದರೆ ಹರೀಚ್ಛೆ ಹಾಗಿಲ್ಲ. ದುರ್ಯೋಧನಾದಿಗಳು ಇನ್ನೂ ಬದುಕಿ ಲಾಕ್ಷಾಗೃಹ ದ್ಯೂತ ಮುಂತಾದ ಮಹಾ ಅಪರಾಧ ಮಾಡಲು ಅವಕಾಶ ನೀಡಬೇಕು. ಅವರು ವಧಾರ್ಹರೆಂಬುದು ಲೋಕಕ್ಕೆ ತಿಳಿಯಬೇಕು. ಆದರೆ ಭೀಮ ಶಕ್ತನಾಗಿದ್ದೂ ವಧಾರ್ಹರಾಗಿರುವ ಅವರನ್ನು ಈಗಲೆ ಕೊಲ್ಲದಿದ್ದರೆ ಅಧರ್ಮವಾಗುತ್ತದೆ. ಧರ್ಮರಾಜ ಅಣ್ಣನಾಗಿ ಹುಟ್ಟಿದರೆ ಅವನು ಕೊಲ್ಲಬೇಡ ಎನ್ನುತ್ತಾನೆ. ಭೀಮ ಆ ಆಜ್ಞೆಯನ್ನು ಪಾಲಿಸಿ ದುರ್ಯೋಧನಾದಿಗಳನ್ನು ಸ್ವಲ್ಪಕಾಲ ಕೊಲ್ಲದೆ ಬಿಡಬೇಕಾಗುತ್ತದೆ. ಅದು ದೋಷವಾಗುವುದಿಲ್ಲ. ಬಳಿಕ ಅವರ ಪಾಪಸಾಧನೆ ಪೂರ್ಣವಾದಾಗ ಕೊಲ್ಲಬಹುದು. ಈ ಅಭಿಪ್ರಾಯದಿಂದಲೂ ಧರ್ಮರಾಜನನ್ನು ಅಣ್ಣನಾಗಿ ಹುಟ್ಟಿಸಿದ್ದಾನೆ ಶ್ರೀಹರಿ.[1]

---

1. ಸುಯೋಧನಾದಿಷು ಹಂತವ್ಯತಾಮುಪಗತೇಷು ಸತ್ಸು ತೇಷಾಂ ವಧಾದನ್ಯೋ ನಿಜಧರ್ಮೋ ನ ಭವೇದೇವ ಹಿ। ತಥಾಪಿ ಪೂರ್ವಮಿದಾನೀಮಸ್ಮದುಚ್ಚಾಟನಾಖ್ಯಾಪರಾಧ ಸಮಯೇ ತೇಷಾಂ

ವಿದುರನ ಮಾತಿನ ಜಾಣ್ಮೆ

ಕ್ಷತ್ತಾಥ ಚಾಹ ಸುವಚೋಽಂತ್ಯಜಭಾಷಯೈವ
ಧರ್ಮಾತ್ಮಜಂ ವಿಷಹತಾಶಭಯಾತ್ ಪ್ರತೀತಾಃ।
ಆಧ್ವಂ ತ್ವಿತಿ ಸ್ಮ ಸ ತಥೇತಿ ವಚೋಽಭ್ಯುದೀರ್ಯ
ಪ್ರಾಯಾಚ್ಚ ವಾರಣವತಂ ಪೃಥಯಾನುಜೈಶ್ಚ ॥೩೧॥

ವಿದುರ ಪಾಂಡವರಿಗೆ ಅಂತ್ಯಜ ಭಾಷೆಯಿಂದ 'ವಿಷ ಅಗ್ನಿಗಳ ಬಾಧೆಯ ಬಗ್ಗೆ ಎಚ್ಚರದಿಂದಿರಿ' ಎಂದು ಹಿತನುಡಿ ನುಡಿದ. ಧರ್ಮರಾಜ 'ಹಾಗೇ ಆಗಲಿ' ಎಂದು ಹೇಳಿ ಕುಂತಿಯ ಮತ್ತು ತಮ್ಮಂದಿರ ಜೊತೆಗೆ ವಾರಣಾವತಕ್ಕೆ ಹೊರಟುಹೋದ.

'ಅಂತ್ಯಜ ಭಾಷೆ' ಎಂದರೆ ಜನಾರ್ದನೀಯ ಪ್ರಕಾರ ಮ್ಲೇಚ್ಛಭಾಷೆ

॥೦೩ ಮಹಾಭಾರತದಲ್ಲಿ ಹಾಗೇ ಹೇಳಿದೆ-

ಹಿತೋಪದೇಶಶ್ಚ ಪಥಿ ಧರ್ಮರಾಜಸ್ಯ ಧೀಮತಃ।
ವಿದುರೇಣ ಕೃತೋ ಯತ್ರ ಹಿತಾರ್ಥಂ ಮ್ಲೇಚ್ಛಭಾಷಯಾ ॥(ಆದಿ 2.104)

ಆದರೆ ಜನಾರ್ದನೀಯವೇ ಈ ಅರ್ಥವನ್ನು ಬಿಡಬೇಕೆನ್ನುತ್ತದೆ.

ಏಕೆಂದರೆ ಮಹಾಭಾರತದಲ್ಲಿ,

ಕಕ್ಷಘ್ನಃ ಶಿಶಿರಘ್ನಶ್ಚ ಮಹಾಕುಕ್ಷೇರ್ಬಲೌಜಸಃ।
ನ ದಹೇದಿತಿ ಚಾತ್ಮಾನಂ ಯೋ ರಕ್ಷತಿ ಸ ಜೀವತಿ ॥(ಆದಿ 157.22)

ಎಂದು ಮುಂತಾಗಿ ವಿದುರ ಹೇಳುವ ಮಾತು ಮ್ಲೇಚ್ಛ ಭಾಷೆಯದಲ್ಲ. ಕಕ್ಷಘ್ನ=ಕಾಡನ್ನು ಸುಡುವುದು, ಶಿಶಿರಘ್ನ=ಚಳಿಯನ್ನು ಕಳೆಯುವುದು, ಮಹಾಕುಕ್ಷೇರ್ಬಲೌಜಸಃ=ಹೊಟ್ಟೆಯಲ್ಲಿ ಉಂಡ ಅನ್ನವನ್ನು ಪಚನ ಮಾಡಿ ಬಲ ಓಜಸ್ಸುಗಳನ್ನು ನೀಡುವುದು, ಅಗ್ನಿ. ಆದರೆ 'ಅಗ್ನಿ' ಎಂದು ಸ್ಪಷ್ಟಶಬ್ದದಿಂದ ಹೇಳದೆ ಬಳಸುಮಾತಿನಲ್ಲಿ ನಿಗೂಢವಾಗಿ ಹೇಳಿದೆ. ಅದರಿಂದ ಇದು ಗುಹ್ಯಭಾಷೆಯಾಗಿದೆ. ನಿರ್ಣಯ 'ಅಂತ್ಯಜಭಾಷೆ' ಎನ್ನುತ್ತಿದೆ. 'ಅಂತ್ಯ' ಎಂದರೆ ದರ್ಶನ ಭಾಷೆ, ಸಮಾಧಿ ಭಾಷೆ, ಗುಹ್ಯ ಭಾಷೆ ಎಂಬ ಮೂರು ಭಾಷೆಗಳಲ್ಲಿ ಅಂತ್ಯವಾದ ಗುಹ್ಯ ಭಾಷೆಯೆ. ಮಹಾಭಾರತದಲ್ಲಿ ಹೇಳಿದ 'ಮ್ಲೇಚ್ಛಭಾಷೆ' ಯೂ 'ಮ್ಲೇಚ್ಛ ಅವ್ಯಕ್ತೇ ಶಬ್ದೇ'

ದುರ್ಯೋಧನಾದೀನಾಂ ವಧೇ ಸತಿ ತೇಷಾಂ ಸಮಸ್ತಶಃ ದೋಷಾಃ ಉಪರಿ ಕರಿಷ್ಯಮಾಣಾಃ ಅಸ್ಮದ್ವಧಾರ್ಥಂ ಲಾಕ್ಷಾಗೃಹ ನಿರ್ಮಾಣ ದ್ರೌಪದೀಕಚಗ್ರಹಣ ಕೃಷ್ಣಬಂಧನೋದ್ಯೋಗಾದಿ ವಿಷ್ಣುವೈಷ್ಣವ ದ್ರೋಹಾಖ್ಯದೋಷಾ ವಿವೃತಂ ನ ಪ್ರಯಾಂತಿ। -ವಾದಿರಾಜೀಯ.

ಎಂಬ ಧಾತುವ್ಯಾಖ್ಯಾನದಂತೆ ಅವ್ಯಕ್ತ ಅಂದರೆ ಅಸ್ಪಷ್ಟವಾದ ಗುಹ್ಯಭಾಷೆಯೆ.

ವರದರಾಜೀಯವೂ ಹೀಗೇ ಅಭಿಪ್ರಾಯ ಪಡುತ್ತದೆ.

ಮಹಾಭಾರತ ಭಾವದೀಪಕಾರನಾದ ನೀಲಕಂಠನ ಪ್ರಕಾರ,

ಅಲೋಹಂ ನಿಶಿತಂ ಶಸ್ತ್ರಂ ಶರೀರ ಪರಿಕರ್ತನಂ ।(ಆದಿ 157.21)

ಎಂದರೆ ಲೋಹಮಯವಲ್ಲದ, ಮೈಯನ್ನು ಎಲ್ಲಕಡೆ ಹಿಂಸಿಸುವ ಶಸ್ತ್ರ ಆರಗಿನ ಮನೆ. 'ಶಸ್ತ್ರ'ವೆಂದರೆ ಮನೆ. 'ಸಸ್ತ್ರ' ಎನ್ನಬೇಕಾಗಿತ್ತು. ಆದರೆ 'ಶಸ್ತ್ರ' ಎಂದಿದೆ. ಇದು ಮ್ಲೇಚ್ಛಶಬ್ದ. ಅದರಿಂದ ಮ್ಲೇಚ್ಛಶಬ್ದಯುಕ್ತವಾದ ಸಂಸ್ಕೃತ ಭಾಷೆಯನ್ನೇ ಇಲ್ಲಿ 'ಮ್ಲೇಚ್ಛಭಾಷೆ' ಎಂದಿದೆ.

ವಾದಿರಾಜೀಯದಲ್ಲಿ 'ಅಂತ್ಯಜ ಭಾಷೆ' ಎಂದರೆ ಮ್ಲೇಚ್ಛಭಾಷೆ ಎಂದಿಷ್ಟೇ ಹೇಳಿದೆ. ಪ್ರಾಯಃ ಸುಮಧ್ವವಿಜಯದಲ್ಲಿ

'ಇತ್ಯಾದ್ಯಂ ತದ್ಭಾಷಯಾ ಚಿತ್ರವಾಕ್ಯಂ'

ಎಂದು ಹೇಳಿದಂತೆ, ವಿದುರ ಮ್ಲೇಚ್ಛ ಭಾಷೆಯಲ್ಲಿ ಹೇಳಿದ್ದನ್ನೇ ಮಹಾಭಾರತವು ಸಂಸ್ಕೃತ ಭಾಷೆಯಲ್ಲಿ ಅನುವಾದಿಸಿದೆ ಎಂದು ಅಭಿಪ್ರಾಯವಿರಬಹುದು.

ವಿದುರನ ಮಾತನ್ನು ಆರು ಶ್ಲೋಕಗಳಲ್ಲಿ ಮಹಾಭಾರತ ಹೀಗೆ ಸಂಗ್ರಹಿಸಿ ಕೊಟ್ಟಿದೆ-

ಬುದ್ಧಿವಂತನು ನಿಗೂಢವಾಗಿ ಮಾತನಾಡುವ ಬುದ್ಧಿವಂತನ ಮಾತನ್ನು ।ಅರಿತು ಆಪತ್ತಿನಿಂದ ಪಾರಾಗಲು ಯತ್ನಿಸಬೇಕು. ಲೋಹಮಯವಲ್ಲದ ಮತ್ತು ಶರೀರವನ್ನು ಎಲ್ಲಕಡೆ ಹಿಂಸಿಸುವ ಶಸ್ತ್ರವನ್ನು (ಉರಿಯುವ ಅರಗಿನ ಮನೆಯನ್ನು) ಯಾರು ತಿಳಿಯುವನೋ ಅವನನ್ನು ಶತ್ರುಗಳು ಕೊಲ್ಲಲಾರರು. ಕಾಡನ್ನು ನಾಶಮಾಡುವ, ಚಳಿಯನ್ನು ದೂರಮಾಡುವ, ಹೊಟ್ಟೆಯಲ್ಲಿ ಬಲ ಓಜಸ್ಸು ನೀಡುವ ವಸ್ತುವನ್ನು (ಬೆಂಕಿಯನ್ನು) ಶರೀರ ಸಹಿಸದೆಂದು ತಿಳಿದು ತನ್ನನ್ನು ಕಾಪಾಡಿಕೊಳ್ಳುವವನು ಬದುಕುತ್ತಾನೆ. ಕಣ್ಣಿಲ್ಲದವನು ಮಾರ್ಗವನ್ನು ತಿಳಿಯಲಾರ. (ರಾತ್ರಿಯಲ್ಲಿ ಹೋಗಲು ಸುರಂಗ ಮಾರ್ಗವನ್ನು ಮೊದಲೇ ಕಂಡುಕೊಳ್ಳಬೇಕು) ಕಣ್ಣಿಲ್ಲದವ ದಿಕ್ಕನ್ನು ತಿಳಿಯಲಾರ. (ಕಾಡಿನಲ್ಲಿ ತಾನು ಹೋಗಬೇಕಾದ ದಿಕ್ಕನ್ನೂ ಮೊದಲೇ ತಿಳಿದುಕೊಳ್ಳಬೇಕು) ಧೈರ್ಯವಿಲ್ಲದವ ಸಂಪತ್ತನ್ನು ಗಳಿಸಲಾರ. ಶತ್ರುಗಳು

ಕೊಡುವ ಲೋಹಮಯವಲ್ಲದ ಶಸ್ತ್ರ (ವಿಷ)ವನ್ನು ಜಾಣನಾದವ ಸ್ವೀಕರಿಸುವುದಿಲ್ಲ. ಮೃಗದಂತೆ (ತೋಳ್ಬಲದಿಂದ) ಬೆಂಕಿಯಿಂದ ತಪ್ಪಿಸಿಕೊಳ್ಳಬೇಕು. ನಡೆಯುತ್ತ (ರಾತ್ರಿಯಲ್ಲಿ ಸುರಂಗದ) ದಾರಿಯನ್ನು ಕಾಣಬೇಕು. ನಕ್ಷತ್ರಗಳಿಂದ ದಿಕ್ಕನ್ನು (ಕಾಡಿನಲ್ಲಿ ಹಸ್ತಿನಾಪುರಕ್ಕೆ ವಿರುದ್ಧವಾದ ದಿಕ್ಕನ್ನು) ತಿಳಿಯಬೇಕು. ಹೀಗೆ ಜಾಣತನದಿಂದ ಐವರನ್ನು (ಪುರೋಚನನ ತಂಗಿ ಮಕ್ಕಳನ್ನು) ಪೀಡಿಸುವವನು ತಾನು ಪೀಡೆಗೊಳಗಾಗುವುದಿಲ್ಲ. (ಆರಗಿನ ಮನೆಯಲ್ಲಿ ಸುಟ್ಟುಹೋಗುವುದಿಲ್ಲ.)

ಅರಗಿನ ಮನೆಯ ನಿರ್ಮಾಣ

ತಾನ್ ಹಂತುಮೇವ ಚ ತದಾ ಧೃತರಾಷ್ಟ್ರಸೂನು-
ರ್ಲಾಕ್ಷಾಗೃಹಂ ಸಪದಿ ಕಾಂಚನರತ್ನಗೂಢಂ ।
ಕೃತ್ವಾಭ್ಯಯಾತಯದಮುತ್ರ ಹಿ ವಿಷ್ಣುಪದ್ಯಾ
ಸ್ವಾಮಾತ್ಯಮೇವ ಚ ಪುರೋಚನನಾಮಧೇಯಂ ॥೩೨॥

ಪಾಂಡವರನ್ನು ಕೊಲ್ಲುವ ಉದ್ದೇಶದಿಂದಲೆ ದುರ್ಯೋಧನ ಪುರೋಚನನ ಮೂಲಕ ಚಿನ್ನ ರತ್ನಗಳಿಂದ ಆವೃತವಾದ ಅರಗಿನ ಮನೆಯನ್ನು ಬೇಗನೆ ಸಿದ್ಧಪಡಿಸಿ ಗಂಗಾನದೀ ಮಾರ್ಗದಿಂದ ಪಾಂಡವರನ್ನು ವಾರಣಾವತದ ಕಡೆಗೆ ಕಳಿಸಿದ. ಜೊತೆಗೆ ಪುರೋಚನನೆಂಬ ತನ್ನ ಮಂತ್ರಿಯನ್ನೂ ಕಳಿಸಿದ.

ಪೂರ್ವಂ ಪ್ರಹಸ್ತ ಇತಿ ಯಸ್ತ್ವಭವತ್ ಸುಪಾಪಃ
ಸೋಽಭ್ಯೇತ್ಯ ಪಾಂಡುತನಯಾನಭವಚ್ಚ ಮಂತ್ರೀ ।
ದುರ್ಯೋಧನಂ ಪ್ರತಿವಿಹಾಯ ಭವತ್ಸಕಾಶ-
ಮಾಯಾತ ಇತ್ಯವದದೇಷು ಸ ಕೂಟವಾಕ್ಯಂ ॥೩೩॥

ಆ ಪುರೋಚನ ಹಿಂದೆ ಪ್ರಹಸ್ತನೆಂಬ ಮಹಾಪಾಪಿ. ಅವನು ಪಾಂಡವರ ಬಳಿಗೆ ಬಂದು 'ದುರ್ಯೋಧನನನ್ನು ಬಿಟ್ಟು ನಿಮ್ಮಲ್ಲಿಗೆ ಬಂದಿದ್ದೇನೆ' ಎಂದು ಕಪಟದ ಮಾತನ್ನಾಡಿದ. ಅವರಿಗೆ ಮಂತ್ರಿಯಾದ.

ಹಿಂದೆ ರಾಮಾಯಣಕಾಲದಲ್ಲಿ ರಾವಣನ ಸೋದರಮಾವ, ಸೇನಾಧಿಪತಿ, ಮಂತ್ರಿಯಾಗಿದ್ದ ಪ್ರಹಸ್ತನೆಂಬ ಕ್ರೂರ ರಾಕ್ಷಸ ಲಂಕೆಯ ಯುದ್ಧದಲ್ಲಿ ನೀಲನೆಂಬ ಕಪಿವೀರನಿಂದ ಹತನಾದವನು ಈಗ ಪುರೋಚನನಾಗಿ ಜನಿಸಿಬ್ದ.

ದಿವ್ಯಂ ಗೃಹಂ ಚ ಭವತಾಂ ಹಿ ಮಯೋಪನೀತಂ
ಪ್ರೀತ್ಯೈವ ಪಾಪಮನುಯಾತುಮಹಂ ನ ಶಕ್ತಃ।
ಯುಷ್ಮಾಸು ಧರ್ಮಧೃತಿಮತ್ಸು ಸದಾ ನಿವತ್ಸ್ಯ
ಇತ್ಯೂಚಿವಾಂಸಮಮುಮಾಹುರಹೋ ಸುಭದ್ರಂ ॥೩೪॥

'ದಿವ್ಯವಾದ ಒಂದು ಮನೆಯನ್ನು ನಾನು ನಿಮಗಾಗಿ ಪ್ರೀತಿಯಿಂದ ಕಟ್ಟಿಸಿದ್ದೇನೆ. ಪಾಪಿ ದುರ್ಯೋಧನನ ಬೆನ್ನಹಿಂದೆ ತಿರುಗುವುದು ನನ್ನಿಂದಾಗದು. ಧರ್ಮದಲ್ಲಿ ಸ್ಥಿರತೆಯುಳ್ಳ ನಿಮ್ಮಲ್ಲಿಯೆ ನಾನು ಸದಾ ಇರುವೆನು.' ಎಂದು ಪುರೋಚನನುಡಿದಾಗ ಪಾಂಡವರು 'ನೀನು ನಮ್ಮಲ್ಲಿಗೆ ಬಂದುದು ಬಹಳ ಆಶ್ಚರ್ಯ! ಬಹಳ ಒಳ್ಳೆಯದಾಯಿತು' ಎಂದರು.

ವಾರಣಾವತದಲ್ಲಿ ಮೊದಲಿಗೆ ಹತ್ತುದಿನಗಳ ಕಾಲ ಪಾಂಡವರು ಅವರಿವರ ಮನೆಗಳಲ್ಲಿ ವಾಸವಾಗಿದ್ದರು. ಅಷ್ಟರಲ್ಲಿ ಪುರೋಚನ ಅರಗಿನ ಮನೆಯನ್ನು ನಿರ್ಮಾಣ ಮಾಡಿಸಿ ಬಂದನೆಂದು ಭಾರತ ಹೇಳಿದೆ.

ದೃಷ್ಟ್ವೈವ ಜಾತುಷಗೃಹಂ ವಸಯಾ ಸಮೇತಂ
ತದ್ಗಂಧತೋ ವೃಷಸುತಃ ಪವಮಾನಜಾತಂ।
ತಂ ಚಾತಿಪಾಪಮವದತ್ ಸುಮುಖೈಷ ಪಾಪೋ
ಹಂತುಂ ನ ಇಚ್ಛತಿ ಸದಾ ಭವ ಚ ಪ್ರತೀತಃ ॥೩೫॥

ಮೀನಿನ ಕೊಬ್ಬು ಮತ್ತು ಅರಗುಗಳಿಂದ ಮಾಡಿದ ಆ ಮನೆಯನ್ನು ಅದರ ವಾಸನೆಯಿಂದಲೆ ತಿಳಿದ ಧರ್ಮರಾಜ ಭೀಮನಿಗೆ ಹೇಳಿದ, 'ಪುರೋಚನ ಮಹಾಪಾಪಿ. ಮಂಗಲಮುಖನಾದ ಭೀಮಸೇನನೆ! ಈ ಪಾಪಿ ನಮ್ಮನ್ನು ಕೊಲ್ಲಲು ಬಯಸಿದ್ದಾನೆ. ಸದಾ ಜಾಗರೂಕನಾಗಿರು.'

ಸುರಂಗಮಾರ್ಗ ನಿರ್ಮಾಣ

ಕ್ಷತ್ತಾಥ ನೀತಿಬಲತೋಽಖಿಲಲೋಕವೃತ್ತಂ
ಜಾನನ್ ಸ್ವಚಾರಮುಖತಃ ಖನಕಾಯ ಚೋಚೇ।
ಉಕ್ತ್ವೈವ ಧರ್ಮತನಯಾಯ ಮದೀಯವಾಕ್ಯಂ
ಪೂರ್ವೋಕ್ತಮಾಶು ಕುರು ತತ್ರ ಬಿಲಂ ಸುದೂರಂ ॥೩೬॥

ವಿದುರ ತನ್ನ ನೀತಿಯ ಬಲದಿಂದಲೂ ಗೂಢಚಾರರ ಮುಖದಿಂದಲೂ ಎಲ್ಲರ ಸಂಚಾರಸ್ಥಾನವನ್ನು ಅರಿಯುವವನು. ನೆಲ ಅಗೆಯವ ಕೆಲಸದವನೊಬ್ಬನನ್ನು ಕರೆದು 'ಧರ್ಮರಾಜನಿಗೆ ನಾನು ಹಿಂದೆ ಹೇಳಿದ್ದ ಮಾತನ್ನು ಪುನರುಚ್ಚರಿಸಿಯೇ ಬೇಗನೆ ಬಲುದೂರದ ವರೆಗಿನ ಸುರಂಗಮಾರ್ಗವನ್ನು ವಾರಣಾವತದಲ್ಲಿ ಸಿದ್ಧಪಡಿಸು' ಎಂದ.

ವಿದುರ ಧರ್ಮರಾಜನಿಗೆ ಹಿಂದೆ ಹೇಳಿದ ಮಾತು ಎಂದರೆ ಮ್ಲೇಚ್ಛ

ಭಾಷೆಯಲ್ಲಿ ಆಡಿದ ಹಿತನುಡಿ. ಅದನ್ನು ನೀನು ಪುನರುಚ್ಚರಿಸಿದರೆ ನೀನು ನನ್ನಕಡೆಯವನೆಂದು ಧರ್ಮರಾಜನಿಗೆ ವಿಶ್ವಾಸ ಉಂಟಾಗುವುದು. ಬಳಿಕ ಸುರಂಗ ನಿರ್ಮಾಣಕಾರ್ಯ ಪ್ರಾರಂಭಿಸಬೇಕು ಎನ್ನುವುದು ವಿದುರನ ॥೪॥ ಅಭಿಪ್ರಾಯ.

ಚಕ್ರೇ ಸ ಚೈವಮಥ ವರ್ತ್ಮ ವೃತಿಚ್ಛಲೇನ
ದ್ವಾರಂ ಚ ತಸ್ಯ ಸ ಪಿಧಾಯ ಯಯೌ ಗೃಹಂ ಸ್ವಂ ।
ಭೀಮಃ ಪುರೋಚನ ಉಭಾವಪಿ ತೌ ವಧಾಯ
ಧಿದ್ರಾರ್ಧಿನೌ ಮಿಥ ಉತೋಷತುರಬ್ದಕಾರ್ಧಂ ॥೩೭॥

ಬಳಿಕ ನೆಲ ಅಗೆಯುವವನು ಸುತ್ತಲೂ ಪ್ರಾಕಾರ ನಿರ್ಮಾಣ ಮಾಡುವ ನೆಪದಿಂದ ವಿದುರ ಹೇಳಿದಂತೆಯೆ ಒಂದು ಸುರಂಗಮಾರ್ಗ ನಿರ್ಮಾಣಮಾಡಿದ. ಬಳಿಕ ಅದರ ದ್ವಾರವನ್ನು ಮುಚ್ಚಿ ತನ್ನ ಮನೆಗೆ ಹೊರಟುಹೋದ. ಭೀಮ ಪುರೋಚನರಿಬ್ಬರೂ ಅರಗಿನ ಮನೆಯಲ್ಲಿದ್ದು ಪರಸ್ಪರ ಕೊಲ್ಲುವ ಅವಕಾಶಕ್ಕೆ ಕಾಯುತ್ತ ಅರ್ಧವರ್ಷದಷ್ಟು ಕಾಲ ಕಳೆದರು.

ಅರಗಿನ ಮನೆಗೆ ಬೆಂಕಿ

ತಸ್ಯಾಗ್ರಜಾ ಚ ಸಹಿತಾ ಸುತಪಂಚಕೇನ
ತತ್ರಾಗಮತ್ ತದನು ಮಾರುತಿರೇಷ ಕಾಲಃ ।
ಇತ್ಥಂ ವಿಚಿಂತ್ಯ ಸ ನಿಶಾಮ್ಯ ಚ ತಾನ್ ಪ್ರಸುಪ್ತಾನ್
ಭ್ರಾತೃಂಶ್ಚ ಮಾತರಮಥಾಶು ಬಿಲೇ ನ್ಯಧಾತ್ ಪ್ರಾಕ್ ॥೩೮॥

ಬಳಿಕ ಒಮ್ಮೆ ಪುರೋಚನನ ಅಕ್ಕ ತನ್ನ ಐದು ಮಕ್ಕಳ ಸಹಿತವಾಗಿ ಅಲ್ಲಿಗೆ ಬಂದಳು. ಇದೇ ತಕ್ಕ ಸಮಯವೆಂದು ಭೀಮ ನಿಶ್ಚಯಿಸಿ ಅವರು ಮಲಗಿ ನಿದ್ದೆ ಹೋದುದನ್ನು ಕಂಡು ಮೊದಲಿಗೆ ಸೋದರರನ್ನೂ ತಾಯಿಯನ್ನೂ ಸುರಂಗಮಾರ್ಗದಲ್ಲಿ ಇರಿಸಿದ.

ತಂ ಭಾಗಿನೇಯಸಹಿತಂ ಭಗಿನೀಂ ಚ ತಸ್ಯ
ಪಾಪಾಂ ದದಾಹ ಸಗೃಹಾಂ ಪವಮಾನಸೂನುಃ ।
ಸಾಪ್ಯಾಗತಾ ಹಿ ಗರಲೇನ ನಿಹಂತುಮೇತಾನ್
ಭೀಮಸ್ಯ ಪೂರ್ವಭುಜಿತೋ ನ ಶಶಾಕ ಚೈತತ್ ॥೩೯॥

ಬಳಿಕ ಆ ಪುರೋಚನನನ್ನೂ ಪಾಪಾತ್ಮಳಾದ ಅವನ ಅಕ್ಕನನ್ನೂ ಅವಳ ಮಕ್ಕಳನ್ನೂ ಎಲ್ಲರನ್ನೂ ಮನೆ ಸಹಿತವಾಗಿ ಭೀಮ ಸುಟ್ಟುಬಿಟ್ಟ. ಅವಳು ಬಂದಿದ್ದುದು ಪಾಂಡವರನ್ನು ವಿಷವಿಕ್ಕಿ ಕೊಲ್ಲುವುದಕ್ಕಾಗಿ. ಭೀಮ ಮೊದಲು ಉಣ್ಣುತ್ತಿದ್ದುದರಿಂದ ಇದು ಶಕ್ಯವಾಗಲಿಲ್ಲ.

ಮಹಾಭಾರತದಲ್ಲಿ ಪುರೋಚನ ಮ್ಲೇಚ್ಛಾಧಮ. ಈಕೆ ನಿಷಾದಿ,

ಅಂದರೆ ಬೇಡಿತಿ. ಕುಂತಿಗೆ ಈ ಬೇಡಿತಿ ಹಿಂದಿನಿಂದಲೂ ಪರಿಚಿತಳು. ಕಾಡಿನಿಂದ ಜೇನು ಮತ್ತು ಗಡ್ಡೆಗೆಣಸುಗಳನ್ನು ಆಗಾಗ ತಂದುಕೊಡುತ್ತ ಸ್ನೇಹದಿಂದ ಸಖಿಯಂತಿದ್ದಳು. ವಸ್ತುತಃ ಪುರೋಚನನ ಆದೇಶದಂತೆ ಆವಳು ಸಖಿಯಂತಿದ್ದು ಸಮಯ ಕಾದು ವಿಷವಿಕ್ಕಲು ಹವಣಿಸಿದ್ದಳು.

ಪುರೋಚನಪ್ರಣಿಹಿತಾ ಪೃಥಾಂ ಯಾ ಸೇವತೇ ಸದಾ ।
ನಿಷಾದೀ ದುಷ್ಟಹೃದಯಾ ನಿತ್ಯಮಂತರಚಾರಿಣೀ ॥(ಆದಿ 160.9)

ಒಂದುದಿನ ಕುಂತಿ ಅನ್ನದಾನಕ್ಕೆ ತೊಡಗಿದಾಗ ಹಗಲೆಲ್ಲ ಬ್ರಾಹ್ಮಣರು, ರಾತ್ರಿ ಸ್ತ್ರೀಯರು ಉಂಡರು. ಆಗ ಈ ಬೇಡಿತಿಯೂ ಅನ್ನಾರ್ಥಿನಿಯಾಗಿ ಬಂದಳು. ಬಳಿಕ ಪಾಂಡವರಿಗೆ ಅಡಿಗೆಮಾಡಿ ವಿಷ ಬೆರೆಸಿಕೊಟ್ಟಳು. ಅವಳು ವಿಷವಿಕ್ಕಬಹುದೆಂದು ಭೀತಿಯಿಂದ ಅನ್ನವನ್ನು ಮೊದಲಿಗೆ ಭೀಮನೆ ಉಣ್ಣುತ್ತಿದ್ದ. ಅಂದು ವಿಷವಿಕ್ಕಿದ ದಿನದಲ್ಲಿ, ಎಂದಿನಂತೆ ಭೀಮ ಮೊದಲಿಗೆ ಉಂಡು ಅದರಲ್ಲಿ ವಿಷ ಬೆರೆತಿದ್ದುದನ್ನು ಕಂಡು ಎಲ್ಲವನ್ನೂ ತಾನೆ ಉಂಡು ಅರಗಿಸಿಕೊಂಡ. ಇತ್ತ ಪುರೋಚನ ಮುಂತಾದವರು ಪಾಂಡವರು ಮಲಗಿದ್ದುದನ್ನು ಕಂಡು ಇವರು ವಿಷ ಉಂಡು ಮಲಗಿದ್ದಾರೆ ಇನ್ನು ಏಳುವುದಿಲ್ಲವೆಂದುಕೊಂಡರು. ಸಂತೋಷದಿಂದ ಮಿತಿಮೀರಿ ಮದ್ಯಪಾನವಾಡಿ ಮತ್ತರಾಗಿ ಬಿದ್ದರು. ಭೀಮ ಬೇಗನೆ ತನ್ನವರನ್ನು ಸುರಂಗಮಾರ್ಗದಲ್ಲಿ ಇರಿಸಿ ಮನೆಗೆ ಬೆಂಕಿ ಇಟ್ಟ. ಅದರಿಂದ ಪಾಂಡವರು ತಮ್ಮ ಉಳಿವಿಗಾಗಿ ನಿರಪರಾಧಿನಿಯಾದ ಹೆಣ್ಣನ್ನು ಮಕ್ಕಳ ಸಹಿತ ಸಜೀವ ದಹನ ಮಾಡಿದರೆಂದು ತಿಳಿಯಲು ಅವಕಾಶವಿಲ್ಲ.

ತಪ್ತಂ ತಯಾ ಸಸುತಯಾ ಚ ತಪೋ ನಿತಾಂತಂ
ಸ್ಯಾಂ ಸೂನುಭಿಃ ಸಹ ಬಲಾದದಿತಿಸ್ತಥಾಬ್ದಾತ್ ।
ತಸ್ಯಾ ಅದಾಚ್ಚ ಗಿರಿಶೋ ಯದಿ ಪುತ್ರಕೈಸ್ತ್ವಂ
ಯುಕ್ತಾ ನ ಯಾಸಿ ಮೃತಿಮೇಷ ವರಸ್ತವೇತಿ ॥೪೦॥

ಆ ಬೇಡಿತಿ ತಾನು ತಪೋಬಲದಿಂದ ಅದಿತಿಯಾಗಬೇಕು ಮಕ್ಕಳು ದೇವತೆಗಳಾಗಬೇಕು ಎಂದು ಮಕ್ಕಳೊಂದಿಗೆ ಬಹಳ ತಪಸ್ಸು ಮಾಡಿದ್ದಳು. ಒಂದು ವರ್ಷ ಕಳೆದಾಗ ಶಿವನೊಲಿದು ಅವಳಿಗೆ ವರವಿತ್ತ. 'ನೀನು ನಿನ್ನ ಮಕ್ಕಳೊಂದಿಗೆ ಸಾಯದಿದ್ದರೆ ನಿನಗೆ ನಿನ್ನ ಅಭೀಷ್ಟ ಸಿದ್ಧಿಸುವುದು' ಎಂದು.

ಬೇಡಿತಿ ತನ್ನ ಯೋಗ್ಯತೆಗೆ ಮೀರಿದ ಪದವಿಯನ್ನು ಬಯಸಿ ತಪಸ್ಸು ಮಾಡಿದುದು ಮಹಾಅಪರಾಧ. ರಾಹು ತಾನು ಅಮೃತ ಕುಡಿಯಬೇಕು

ದೇವತೆಯಾಗಬೇಕು ಎಂದು ಬಯಸಿ ತಪಸ್ಸು ಮಾಡಿದ. ಅದರ ಫಲವಾಗಿ ಅಮೃತ ಕುಡಿಯಲಾಗಲಿಲ್ಲ, ಶಿರಶ್ಛೇದವೆ ಆಯಿತು. ಹಾಗೇ ಬೇಡಿತಿಯೂ ಅನರ್ಥತಂದುಕೊಂಡಳು. ಶಿವನ ಮನೋಗತವೆ ಹಾಗಿತ್ತು. ಭೀಮ ಅದನ್ನು ನಡೆಸಿಕೊಟ್ಟನಷ್ಟೆ

ಜಾನನ್ನಿದಂ ಸಕಲಮೇವ ಚ ಭೀಮಸೇನೋ
ಹತ್ವಾ ಸುತೈಃ ಸಹ ಕುಬುದ್ಧಿಮಿಮಾಂ ಹಿ ತಂ ಚ ।
ಭ್ರಾತೄಂಶ್ಚ ಮಾತರಮುದೂಹ್ಯ ಯಯೌ ಬಿಲಾತ್ಸ
ನಿರ್ಗತ್ಯ ಭೀತಿವಶತೋಽಬಲತಾಂ ಪ್ರಯಾತಾನ್ ॥೪೧॥

ಇದೆಲ್ಲವನ್ನೂ ತಿಳಿದಿದ್ದ ಭೀಮ ದುಷ್ಟಬುದ್ಧಿಯವಳಾದ ಬೇಡಿತಿಯನ್ನು ಮಕ್ಕಳೊಂದಿಗೆ ಪುರೋಚನ ಸಮೇತ ಕೊಂದು ಸೋದರರನ್ನೂ ತಾಯಿಯನ್ನೂ, ಅವರು ಬಲಗುಂದಿದುದರಿಂದ, ಹೊತ್ತುಕೊಂಡೇ ಸುರಂಗ ಮಾರ್ಗದಿಂದ ಹೊರಗೆ ನಡೆದ.

ಸೋದರರನ್ನು ಹೊತ್ತು ನಡೆದ ಭೀಮ

ಜ್ಞಾತ್ವಾ ಪುರೋಚನ ವಧಂ ಯದಿ ಭೀಷ್ಮ ಮುಖ್ಯೈ-
ರ್ವೈಚಿತ್ರವೀರ್ಯತನಯಾ ಅಭಿಯೋಧಯೇಯುಃ ।
ಕಿಂ ನೋ ಭವೇದಿತಿ ಭಯಂ ಸುಮಹದ್ವಿವೇಶ
ಭೀಮಂ ತ್ವೃತೇ ಚ ತನಯಾನ್ ಸಕಲಾನ್ ಪೃಥಾಯಾಃ ॥೪೨॥

ಪುರೋಚನ ವಧೆಯನ್ನು ತಿಳಿದು ಕೌರವರು ಭೀಷ್ಮಾದಿಗಳೊಂದಿಗೆ ಬಂದು ಯುದ್ಧಮಾಡಿದರೆ ನಮ್ಮ ಗತಿಯೇನಾದೀತು ಎನ್ನುವ ಮಹತ್ತಾದ ಭೀತಿ ಭೀಮನನ್ನು ಹೊರತು ಇನ್ನೆಲ್ಲ ಪಾಂಡವರನ್ನು ಹೊಕ್ಕಿತ್ತು.

ಭೀಮೋಽಭಯೋಽಪಿ ಗುರುಭಿಃ ಸ್ವಮುಖೇನ ಯುದ್ಧ-
ಮಪ್ರೀಯಮಾಣ ಉತ ಧರ್ಮಜವಾಕ್ಯಹೇತೋಃ ।
ಊಹ್ಯೈವ ತಾನಪಿ ಯಯೌ ದ್ಯುನದೀಂ ಚ ತೀರ್ತ್ವಾ
ಕ್ಷತ್ತ್ರಾತಿಸೃಷ್ಟಮಧಿರುಹ್ಯ ಜಲಪ್ರಯಾಣಂ ॥೪೩॥

ಭೀಮ ಭಯರಹಿತನೇ ಆಗಿದ್ದರೂ ಗುರುಹಿರಿಯರೊಡನೆ ನೇರವಾಗಿ ಯುದ್ಧ ಮಾಡುವುದನ್ನು ಅವನು ಇಷ್ಟಪಡುವುದಿಲ್ಲ. ಅದರಿಂದ ಧರ್ಮರಾಜನ ಮಾತಿನಂತೆ ಭೀಮ ಅವರನ್ನು ಹೊತ್ತುಕೊಂಡೇ ಹೊರಟ. ವಿದುರ ಕಳಿಸಿದ್ದ ನೌಕೆಯನ್ನೇರಿ ಪ್ರಯಾಣ ಮಾಡಿದ.

ವೀರಾಧಿವೀರರಾದ ಧರ್ಮರಾಜ ಅರ್ಜುನ ನಕುಲ ಸಹದೇವರಿಗೆ ಯುದ್ಧ ಭಯದಿಂದ ಶಕ್ತಿ ಉಡುಗಿತೆ? ಸುರಂಗಮಾರ್ಗದಲ್ಲಿ ನಡೆಯಲೂ

ತ್ರಾಣವಿರಲಿಲ್ಲವೆ? ಭೀಮನೇಕೆ ಅವರನ್ನು ಹೊತ್ತು ನಡೆಯಬೇಕಾಯಿತು? ಇದಕ್ಕೆ ಉತ್ತರ - ಪುರೋಚನ ಕೌರವನಿಗೆ ಬಲು ಆಪ್ತನಾದ ಮಂತ್ರಿ. ಅವನನ್ನು ವಿನಾಕಾರಣ ಪಾಂಡವರು ಸುಟ್ಟರೆಂದು ಹೇಳಿಕೊಳ್ಳುತ್ತ ಕೌರವರು ಭೀಷ್ಮಾದಿಗಳನ್ನು ಮುಂದೆ ಮಾಡಿಕೊಂಡು ಯುದ್ಧಕ್ಕೆ ಬಂದರೆ ಅತ್ಯಂತ ಪ್ರೀತಿಪಾತ್ರರಾದ ಆ ಗುರುಹಿರಿಯರ ಮೇಲೆ ಕೈಮಾಡುವುದೆಂತು ಎನ್ನುವ ಭಯದಿಂದ ಅವರ ಜಂಘಾಬಲ ಉಡುಗಿತ್ತು. ಮುಂದೆ ಕುರುಕ್ಷೇತ್ರ ಯುದ್ಧ ಪ್ರಾರಂಭವಾದಾಗಲೂ ಅರ್ಜುನನಿಗೆ 'ನಚ ಶಕ್ನೋಮ್ಯವಸ್ಥಾತುಂ' ಎನ್ನುವಷ್ಟು ನಿಃಶಕ್ತಿ ಉಂಟಾಯಿತು. ಈಗ ಭೀಮನಿಗೆ ಯದ್ಯಪಿ ಭಯವಿಲ್ಲ. ಆದರೂ ಗುರುಹಿರಿಯರ ಮುಂದೆ ನೇರವಾಗಿ ನಿಂತು ಯುದ್ಧ ಮಾಡುವುದನ್ನು ಅವನೂ ಒಲ್ಲ. ಹೀಗಾಗಿ ಅವನು ಮುಂದೆ ನಿಲ್ಲದಿದ್ದರೆ ನಾವೇ ನಿಂತು ಅವರನ್ನು ಕೊಲ್ಲಬೇಕಾಗುವುದು ಎಂದು ಭಯಪಟ್ಟರು. ಶಕ್ತಿಗುಂದಿದರು. ಭೀಮ ಭಯಪಡದೆ ಸಶಕ್ತನಾಗೇ ಇದ್ದ. ಆದರಿಂದ ಧರ್ಮರಾಜ ಅವನಿಗೆ ತಮ್ಮನ್ನೆಲ್ಲ ಹೊತ್ತುನಡೆ ಎಂದ. ಅದರಂತೆ ಭೀಮ ಎಲ್ಲರನ್ನೂ ಹೊತ್ತು ನಡೆದ.

ಅಥವಾ 'ಕೀರ್ತಿರ್ವಿನಶ್ಯತಿ ಹಿ ನೋ ಗುರುಭಿರ್ವಿರೋಧೇ' (ಶ್ಲೋಕ 27) ಎಂದು ಧರ್ಮರಾಜ ತನಗೆ ಹೇಳಿದ ಮಾತಿನಿಂದ, ಭಯರಹಿತನಾದ ಭೀಮನೂ ಕೌರವರೊಡನೆ ಯುದ್ಧಕ್ಕೆ ನಿಲ್ಲಲು ಇಷ್ಟಪಡಲಿಲ್ಲ. ಆದರಿಂದ ಸೋದರರನ್ನು ಹೊತ್ತು ರಹಸ್ಯವಾಗಿ ಸುರಂಗಮಾರ್ಗದಲ್ಲಿ ನಡೆದ. ಇಲ್ಲದಿದ್ದರೆ ಆಗಲೆ ಕೌರವರನ್ನು ಆಕ್ರಮಿಸಿ ಕೊಲ್ಲುತ್ತಿದ್ದ.

ಹೀಗೆ ಎರಡು ಬಗೆಯಿಂದ ಜನಾರ್ದನೀಯದಲ್ಲಿ ವ್ಯಾಖ್ಯಾನಿಸಿದೆ.[1]

ಭೀಮಸೇನ ತಾಯಿಯನ್ನೂ ಸೋದರರನ್ನೂ ಜೊತೆಗೇ ಹೇಗೆ ಹೊತ್ತನೆಂಬುದನ್ನು ಮಹಾಭಾರತ ಹೇಳಿದೆ-

---

1. ಅಭಯೋಽಪಿ ಭೀಮೋ ಗುರುಭಿ ರ್ಭೀಷ್ಮದ್ರೋಣಾದಿಭಿಃ ಸ್ವಮುಖೇನ ಸಾಕ್ಷಾತ್ ಸ್ವಯಂ ಯುದ್ಧಮಪ್ರೀಯಮಾಣೋ ನೇಚ್ಛತಿ ಯತೋಽತಃ ಕಿಂ ನೋ ಭವೇದಿತಿ ಭಯಂ ಪಾರ್ಥಾನ್ ವಿವೇಶೇತಿ ಪೂರ್ವೇಣಾನ್ವಯಃ। ಕೇಚಿತ್ತು ತರ್ಹಿ ಕಿಂ ನೋ ಭವೇದಿತಿ ಭಯಂ ಧರ್ಮಾದಿ ಚತುರೋ ವಿವೇಶ। ಅಭಯೋಽಪಿ ಭೀಮೋ ಗುರುಭಿಃ ಸ್ವಮುಖೇನ ಯುದ್ಧಮಪ್ರೀಯಮಾಣ ಉತ ಧರ್ಮಜ ವಾಕ್ಯಹೇತೋಃ ಕೀರ್ತಿರ್ವಿನಶ್ಯತಿ ಹಿ ನೋ ಗುರುಭಿರ್ವಿರೋಧೇ ಯತೋ ತೋ ಗುರುಭಿರ್ಯುದ್ಧಂ ನ ಕರ್ತವ್ಯಮಿತಿ ಧರ್ಮಜವಾಕ್ಯ ನಿಮಿತ್ತಾತ್ ಯುದ್ಧಮಪ್ರೀಯಮಾಣಸ್ತಾನುದೂಹ್ಯ ಯಯೌ। -ಜನಾರ್ದನೀಯ.

ಆರ್ಯಾಮಂಕೇನ ವಾಮೇನ ರಾಜಾನಂ ದಕ್ಷಿಣೇನ ಚ।
ಅಂಸಯೋಶ್ಚ ಯಮೌಕೃತ್ವಾ ಪೃಷ್ಠೇ ಬೀಭತ್ಸುಮೇವ ಚ ॥(ವನ 12.94)

ಸೊಂಟದಲ್ಲಿ ಎಡಕ್ಕೆ ಕುಂತಿ, ಬಲಕ್ಕೆ ಧರ್ಮರಾಜ, ಹೆಗಲುಗಳಲ್ಲಿ ನಕುಲ ಸಹದೇವರು, ಬೆನ್ನಿನಲ್ಲಿ ಅರ್ಜುನ.

ವಿಶ್ವಾಸಿತಾ ವಿದುರಪೂರ್ವವಚೋಭಿರೇವ
ದಾಶೋದಿತಾಭಿರಧಿರುಹ್ಯ ಚ ಭೀಮಪೃಷ್ಠಂ।
ಸರ್ವೇ ಯಯುರ್ವನಮಥಾಭ್ಯುದಿತೇ ಚ ಸೂರ್ಯೇ
ದೃಷ್ಟ್ವೈವ ಸಪ್ತ ಮೃತಕಾನ್ ರುರುದುಶ್ಚ ಪೌರಾಃ ॥೪೪॥

ಅಂಬಿಗರ ಮುಖದಿಂದ ವಿದುರ ಹಿಂದೆ ಹೇಳಿದ್ದ ಮಾತನ್ನು ಕೇಳಿ ತಿಳಿದು ವಿಶ್ವಾಸಗೊಂಡು ಎಲ್ಲರೂ ನೌಕೆಯನ್ನೇರಿ ನದಿ ದಾಟಿ ಬಳಿಕ ಭೀಮನ ಬೆನ್ನಮೇಲೇರಿ ಕಾಡಿಗೆ ಹೋದರು. ಸೂರ್ಯ ಉದಿಸಿದಾಗ ಏಳುಮಂದಿಯೂ ಸತ್ತಿದ್ದುದನ್ನು ಕಂಡು ಪಟ್ಟಣಿಗರು ಕಣ್ಣೀರಿಟ್ಟರು.

'ದಾಶೋದಿತಾಭಿಃ ವಿದುರಪೂರ್ವವಚೋಭಿಃ' ಎಂಬಲ್ಲಿ ಶ್ರೀಮದಾಚಾರ್ಯರು ವಿಶೇಷ್ಯ ವಿಶೇಷಣಗಳಿಗೆ ಸಮಾನಲಿಂಗತ್ವ ನಿಯಮ ಭಂಗ ಮಾಡಿದುದು ತಾನು ಪರಮವೈದಿಕನೆಂದು ತಿಳಿಸುವ ಉದ್ದೇಶದಿಂದ ಎಂದು ತಾಮ್ರಪರ್ಣೀಯ ಹೇಳಿದೆ.[1]

'ದಾಶೋದಿತಾಭಿರ್ವಾಗ್ಭಿರ್ಜ್ಞಾಪಿತೈರ್ವಿದುರಪೂರ್ವವಚೋಭಿಃ' ಎಂದು ಅನ್ವಯಿಸಿಕೊಂಡರೆ ವಿಶೇಷಣ ವಿಶೇಷ್ಯಭಾವವಿಲ್ಲ, ನಿಯಮ ಭಂಗವೂ ಇಲ್ಲವೆಂದು ವರದರಾಜೀಯ ನೀಡಿದ ಇನ್ನೊಂದು ಸಮಾಧಾನ. ಇದನ್ನು ಜನಾರ್ದನೀಯ ಉಲ್ಲೇಖಿಸಿದೆ.[2]

ಹಾ ಪಾಂಡವಾನದಹದೇಷ ಹಿ ಧಾರ್ತರಾಷ್ಟ್ರೋ
ಧರ್ಮಸ್ಥಿತಾನ್ ಕುಮತಿರೇವ ಪುರೋಚನೇನ।
ಸೋಽಪ್ಯೇಷ ದಗ್ಧ ಇಹ ದೈವವಶಾತ್ ಸುಪಾಪಃ
ಕೋ ನಾಮ ಸತ್ಸು ವಿಷಮಃ ಪ್ರಭವೇತ್ ಸುಖಾಯ ॥೪೫॥

---

1. ವಿದುರಪೂರ್ವವಚೋಭಿಃ ದಾಶೋದಿತಾಭಿರಿತಿ ಲಿಂಗವ್ಯತ್ಯಯಃ ಸ್ವಸ್ಯ ಪರಮ ವೈದಿಕತ್ವ ಜ್ಞಾಪನಾರ್ಥಂ।
-ತಾಮ್ರಪರ್ಣೀಯ

2. ಉದಿತಾಭಿರುದಿತೈರಿತಿ ಲಿಂಗ ವ್ಯತ್ಯಾಸಃ। ಕೇಚಿತ್ತು ದಾಶೋದಿತಾಭಿರ್ವಾಗ್ಭಿರ್ವಿ ಜ್ಞಾಪಿತೈರ್ವಿದುರಪೂರ್ವವಚೋಭಿಃ ಪಾರ್ಥಾರ್ಥೇ ಇದಂ ಜಲಪ್ರಯಾಣಂ ಸ್ಥಾಪ್ಯತ ಇತ್ಯೇವಂ ರೂಪೈಃ ಇತ್ಯಾಹುಃ।
-ಜನಾರ್ದನೀಯ.

ಅಯ್ಯೋ! ಈ ದುಷ್ಟಬುದ್ಧಿಯ ದುರ್ಯೋಧನ ಧರ್ಮನಿಷ್ಠರಾದ ಪಾಂಡವರನ್ನು ಪುರೋಚನನ ಮೂಲಕ ಸುಟ್ಟುಬಿಟ್ಟ! ಮಹಾಪಾಪಿಯಾದ ಪುರೋಚನನೂ ದೈವವಶದಿಂದ ಇಲ್ಲಿ ಸುಟ್ಟುಹೋಗಿದ್ದಾನೆ. ಸಜ್ಜನರಲ್ಲಿ ದ್ರೋಹ ಬಗೆವವನು ಯಾರು ತಾನೆ ಸುಖ ಹೊಂದಿಯಾನು? ಎಂದರು ಪಟ್ಟಣಿಗರು.

ಪೌರೇಭ್ಯ ಏವ ನಿಖಿಲಂ ತ್ವಥ ಭೀಷ್ಮಮುಖ್ಯಾ
ವೈಚಿತ್ರವೀರ್ಯಸಹಿತಾಸ್ತು ನಿಶಮ್ಯ ಹೇತಿ।
ಊಚುಃ ಸುದುಃಖಿತಧಿಯೋಽಥ ಸುಯೋಧನಾದ್ಯಾಃ
ಕ್ಷತ್ತಾ ಮೃಷೈವ ರುರುದುರ್ಯುಯುಜುಶ್ಚ ಕರ್ಮ। ॥೪೬॥

ಪಟ್ಟಣಿಗರಿಂದಲೆ ಎಲ್ಲ ವಾರ್ತೆಯನ್ನೂ ಕೇಳಿ ತಿಳಿದು ಭೀಷ್ಮಾದಿಗಳೂ ಧೃತರಾಷ್ಟ್ರನೂ 'ಅಯ್ಯೋ!' ಎಂದರು. ಬಹಳ ಖಿನ್ನಮನಸ್ಕರಾದರು. ದುರ್ಯೋಧನಾದಿಗಳೂ, ವಿದುರನೂ ಕೂಡ, ಅತ್ತಂತೆ ನಟಿಸಿದರು. ಉತ್ತರಕ್ರಿಯೆಗಳನ್ನು ಮಾಡಿದರು.

ದುರ್ಯೋಧನಾದಿಗಳು ಪಾಂಡವರು ಸತ್ತರೆಂದು ಸಂತುಷ್ಟರಾಗಿಯೇ ರಹಸ್ಯವನ್ನು ಮುಚ್ಚಿಡುವುದಕ್ಕಾಗಿ ಅತ್ತರು. ವಿದುರ ಪಾಂಡವರು ಆಪತ್ತಿನಿಂದ ಪಾರಾದರೆಂದು ಸಂತುಷ್ಟನಾಗಿ ರಹಸ್ಯವನ್ನು ಕಾಪಾಡುವುದಕ್ಕಾಗಿ ಅತ್ತ. ಭೀಷ್ಮ ಮೊದಲಿಗೆ ದುಃಖದಿಂದ ಅತ್ತರೂ ಬಳಿಕ ವಿದುರ ರಹಸ್ಯವಾಗಿ ನಿಜವನ್ನು ಹೇಳಿದಾಗ ಸಂತುಷ್ಟನಾಗಿ ತೋರಿಕೆಗೆ ಅತ್ತ. ದ್ರೋಣ ಮುಂತಾದ ಸಜ್ಜನರು ಧರ್ಮಿಷ್ಠರಾದ ಪಾಂಡವರು ಸರ್ವಥಾ ಸತ್ತಿರಲಿಕ್ಕಿಲ್ಲವೆಂದುಕೊಂಡು ಸುಮ್ಮನೆ ಅತ್ತರು. ಸಾಧಾರಣ ಜನರು ಸಂಶಯಗ್ರಸ್ತರಾಗಿ ಸುಮ್ಮನಿದ್ದರು. ದುರ್ಜನರು ಮಾತ್ರ ಸಂತುಷ್ಟರಾದರು.

ಭೀಮೋಽಪ್ಯದೂಹ್ಯ ವನಮಾಪ ಹಿಡಿಂಬಕಸ್ಯ
ಭ್ರಾತೄನ್ ಪೃಥಾಂ ಚ ತೃಷಿತೈರಭಿಯಾಚಿತಶ್ಚ।
ಪಾನೀಯಮುತ್ತರಪಟೇಽಂಬುಜಪತ್ರನದ್ಧಂ
ದೂರಾದುದೂಹ್ಯ ದದೃಶೇ ಸ್ವಪತೋಽಥ ತಾಂಶ್ಚ ॥೪೭॥

ಭೀಮಸೇನ ಸೋದರರನ್ನೂ ಕುಂತಿಯನ್ನೂ ಹೊತ್ತು ಹಿಡಿಂಬವನಕ್ಕೆ ಬಂದ. ಅವರು ಬಾಯಾರಿ ನೀರನ್ನು ಬೇಡಿದಾಗ ಭೀಮ ತಾವರೆ ಎಲೆಗಳಲ್ಲಿ ನೀರು ತುಂಬಿಸಿಕೊಂಡು ಉತ್ತರೀಯದಲ್ಲಿ ಹೊತ್ತು ತಂದ. ಮಲಗಿ ನಿದ್ರಿಸುತ್ತಿದ್ದ ತನ್ನ ಸೋದರರನ್ನು ಸ್ವಲ್ಪ ದೂರದಲ್ಲಿ ನಿಂತು ನೋಡಿದ.

ನೋಡಿದನೆಂದರೆ ನೋಡುತ್ತ ಸೋದರರ ಬಗ್ಗೆ ಕನಿಕರಗೊಂಡ.

ಕೌರವರ ಬಗ್ಗೆ ಕುಪಿತನಾದ. ಒಂದೇ ರಾತ್ರಿಯಲ್ಲಿ ನಕ್ಷತ್ರಗಳ ಮೂಲಕ ದಕ್ಷಿಣದಿಕ್ಕನ್ನು ತಿಳಿದು ಇಪ್ಪತ್ತನಾಲ್ಕು ಯೋಜನ ದಾರಿ ಪ್ರಯಾಣ ಮಾಡಿ ಹಿಡಿಂಬ ರಾಕ್ಷಸ ವಾಸವಾಗಿದ್ದ ಅರಣ್ಯಕ್ಕೆ ಬಂದಿದ್ದರು, ಪಾಂಡವರು. ಅದರಿಂದ ಬಳಲಿ ಬಾಯಾರಿದ್ದರು. ಭೀಮ ಒಂದು ಆಲದಮರದ ಬುಡದಲ್ಲಿ ಅವರನ್ನು ಇಳಿಸಿ, ಮಲಗಿಸಿ, ಒಂದು ಕೊಳವನ್ನು ಅರಸಿ ಕಂಡು ಸ್ನಾನ ಪಾನಗಳನ್ನು ತೀರಿಸಿ, ಐವರಿಗೂ ತಾವರೆ ಎಲೆಗಳಲ್ಲಿ ಬೇರೆಬೇರೆಯಾಗಿ ನೀರನ್ನು ಸಂಗ್ರಹಿಸಿ ಉತ್ತರೀಯದಲ್ಲಿ ಹೊತ್ತು ತಂದ. ದೂರದಲ್ಲಿ ನಿಂತು ನೋಡಿ ಅವರ ದುಃಸ್ಥಿತಿಗೆ ಮರುಗಿದನೆಂದು ಮಹಾಭಾರತ ಹೇಳಿದೆ.

ಹಿಡಿಂಬೆ ಭೀಮನನ್ನು ಕಂಡಳು

ರಕ್ಷಾರ್ಥಮೇವ ಪರಿಜಾಗ್ರತಿ ಭೀಮಸೇನೇ
ರಕ್ಷಃ ಸ್ವಸಾರಮಭಿಯಾಪಯತೇ ಹಿಡಿಂಬೀಂ ।
ಸಾ ರೂಪಮೇತ್ಯ ಶುಭಮೇವ ದದರ್ಶ ಭೀಮಂ
ಸಾಕ್ಷಾತ್ ಸಮಸ್ತಶುಭಲಕ್ಷಣಸಾರಭೂತಂ ॥೪೮॥

ಪಾಂಡವರ ರಕ್ಷಣೆಗಾಗಿ ಭೀಮನೆಚ್ಚೆತ್ತು ಕುಳಿತಿದ್ದಾಗ ಹಿಡಿಂಬ ರಾಕ್ಷಸ ತಂಗಿ ಹಿಡಿಂಬೆಯನ್ನು ಕಳಿಸಿದ. ಅವಳು ಸುಂದರ ರೂಪುತಳೆದು ಸಾಕ್ಷಾತ್ ಸಮಸ್ತ ಶುಭಲಕ್ಷಣಸಾರಭೂತನಾದ ಭೀಮನನ್ನು ಕಂಡಳು.

ದೂರದ ಒಂದು ಸಾಲ ವೃಕ್ಷದ ಮೇಲೆ ನರಭಕ್ಷಕ ರಾಕ್ಷಸನಾದ ಹಿಡಿಂಬ ವಾಸವಾಗಿದ್ದ. ವಾಸನೆಯಿಂದಲೆ ಈ ಕಾಡಿಗೆ ಮಾನವರು ಬಂದಿರುವರೆಂದು ತಿಳಿದು ಅವರನ್ನು ಕೊಂದು ತರಲು ತಂಗಿಯಾದ ಹಿಡಿಂಬಿಯನ್ನು ಕಳಿಸಿದ. ಆದರೆ ಹಿಡಿಂಬಿ ಜಾತಿಯಲ್ಲಿ ರಾಕ್ಷಸಿಯಾಗಿದ್ದರೂ ಸ್ವಭಾವತಃ ದೇವತೆ. ಅವಳು ಭೀಮನಲ್ಲಿ ಮೋಹಿತಳಾಗಿ ತನ್ನ ಘೋರ ರೂಪವನ್ನು ಮರೆ ಮಾಡಿ ಸುಂದರ ರೂಪು ತಳೆದಳು. ಮಹಾಭಾರತದಲ್ಲಿ 'ಹಿಡಿಂಬಾ' ಎಂದು ಇವಳಿಗೆ ಹೆಸರು. ನಿರ್ಣಯದಲ್ಲಿಯೂ 'ನತ ಆಶು ಹಿಡಿಂಬಯಾ ಚ' ಎಂದು ಈ ಹೆಸರನ್ನು ಅಂಗೀಕರಿಸಲಾಗಿದೆ.

ಸಾ ರಾಕ್ಷಸೀತನುಮವಾಪ ಸುರೇಂದ್ರಲೋಕ
ಶ್ರೀರೇವ ಶಕ್ರದಯಿತಾ ತ್ವಪರೈವ ಶಚ್ಯಾಃ ।
ಶಾಪಾತ್ ಸ್ಪೃಧಾ ಪತಿಮವಾಪ್ಯ ಚ ಮಾರುತಿಂ ಸಾ
ಪ್ರಾಪ್ತುಂ ನಿಜಾಂ ತನುಮಯಾಚತ ಭೀಮಸೇನಂ ॥೪೯॥

ಹಿಡಿಂಬಿ ಹಿಂದೆ ದೇವಲೋಕದ ಸಂಪತ್ತಿಗೆ ಅಭಿಮಾನಿನಿಯಾದ ಶ್ರೀ ಎಂಬ ಅಪ್ಸರೆ. ಅವಳು ಇಂದ್ರನ ಪತ್ನಿಯಾಗಿ ಶಚಿಯೊಡನೆ ಸ್ಪರ್ಧಿಸಿದುದರಿಂದ ಅವಳ ಶಾಪದಿಂದ ರಾಕ್ಷಸ ಜನ್ಮ ಪಡೆದಳು. ಈಗ ಭೀಮನನ್ನು ಪತಿಯನ್ನಾಗಿ ಪಡೆದು ತನ್ನ ನಿಜರೂಪ ಹೊಂದುವ ಉದ್ದೇಶದಿಂದ ಅವನಲ್ಲಿ ಪ್ರಣಯಭಿಕ್ಷೆ ಬೇಡಿದಳು.

ಹಿಡಿಂಬಿ ಹಿಂದೆ ಶ್ರೀ ಎಂಬ ಅಪ್ಸರಸ್ತ್ರೀ. ಸಾಕ್ಷಾತ್ ಲಕ್ಷ್ಮಿಯಲ್ಲ.[1]
'ಪುತ್ರೇಣ ತವ ಸಂಯುಕ್ತಾ ಯುವತಿರ್ದೇವ ವರ್ಣಿನೀ' (ಆದಿ 167.18)

ಅವಳು ಕುಂತಿಗೆಹೇಳುವ ಮಾತು- 'ನಾನು ದೇವಸ್ತ್ರೀ. ನಿನ್ನ ಮಗನನ್ನು ಸೇರಿ ನನ್ನ ಮೂಲ ರೂಪ ಸೇರುತ್ತೇನೆ'

ತಾಂ ಭೀಮ ಆಹ ಕಮನೀಯತನುಂ ನ ಪೂರ್ವಂ
ಜ್ಯೇಷ್ಠಾದುಪೈಮಿ ವನಿತಾಂ ನ ಹಿ ಧರ್ಮ ಏಷಃ ।
ಸಾ ಚಾಹ ಕಾಮವಶಗಾ ಪುನರೇತದೇವ
ಸ್ವಾವೇಶಯುಗ್ಭಿ ಮರುದಗ್ರ್ಯಪರಿಗ್ರಹಸ್ಯ ॥೫೦॥

ಸುಂದರ ಶರೀರದವಳಾದ ಹಿಡಿಂಬಿಯನ್ನು ಕುರಿತು ಭೀಮನೆಂದ, 'ಹಿರಿಯನಾದ ಅಣ್ಣನಿಗಿಂತ ಮೊದಲು ನಾನು ಯಾವ ಹೆಣ್ಣನ್ನೂ ಮದುವೆಯಾಗಲಾರೆ. ಅದು ಧರ್ಮವಲ್ಲ' ಎಂದು. ಆದರೂ ಹಿಡಿಂಬಿ ಕಾಮಪರವಶಳಾಗಿ ತಿರುಗಿ ಹೇಳಿದ್ದನ್ನೇ ಹೇಳತೊಡಗಿದಳು. ಏಕೆಂದರೆ ಅವಳು ಭಾರತೀದೇವಿಯ ಆವೇಶಯುಕ್ತಳಾಗಿದ್ದಳು.

ಸಾ ಭಾರತೀ ವರಮಿಮಂ ಪ್ರದದಾವಮುಷ್ಯೈ
ಸ್ವಾವೇಶಮಾತ್ಮ ದಯಿತಸ್ಯ ಚ ಸಂಗಮೇನ ।
ಶಾಪಾದ್ ವಿಮುಕ್ತಿಮತಿತೀವ್ರತಪಃಪ್ರಸನ್ನಾ
ತೇನಾಹ ಸಾ ನಿಜತನುಂ ಪವಮಾನಸೂನೋಃ ॥೫೧॥

ಹಿಂದೆ ಅವಳ ಅತ್ಯಂತ ತೀವ್ರ ತಪಸ್ಸಿಗೆ ಒಲಿದ ಭಾರತೀದೇವಿ 'ನಿನ್ನಲ್ಲಿ ನನ್ನ ಆವೇಶ ಬರುತ್ತದೆ. ಆಗ ನನ್ನ ಪತಿಯ ಅಂಗಸಂಗದಿಂದ ಶಾಪ ವಿಮುಕ್ತಿಯಾಗುತ್ತದೆ' ಎಂದು ವರವಿತ್ತಳು. ಅದರಿಂದ ತನ್ನ ನಿಜರೂಪ ಪಡೆಯುವುದಕ್ಕಾಗಿ ಅವಳು ಪುನಃ ಭೀಮನನ್ನು ಬೇಡಿದಳು.

ಹಿಂದೆ ಕಾಮಪರವಶತೆಯಿಂದಲೆ ಭೀಮನನ್ನು ಬೇಡಿದ್ದಳು. ಈಗ ಶಾಪವಿಮುಕ್ತಿಗಾಗಿ ಭಾರತ್ಯಾವೇಶ ಪ್ರಯುಕ್ತ ಬೇಡುತ್ತಿದ್ದಾಳೆ -ವಾದಿರಾಜೀಯ.[2]

1. ಸಾ ಹಿಡಿಂಬೀ ಸುರೇಂದ್ರ ಲೋಕಶ್ರೀಃ ಅಮರಾವತೀಸಂಪತ್। ಅಮರಾವತೀಸಂಪದಭಿಮಾನಿನೀ ಕಾಚನ ಶ್ರೀನಾಮಿಕಾಪ್ಸರಸ್ತ್ರೀ। ನತು ಸಾಕ್ಷಾಲ್ಲಕ್ಷ್ಮೀಃ। -ವಾದಿರಾಜೀಯ
2. ಪೂರ್ವಂ ಕಾಮವಶತ್ವಾದೇವಾಹ। ಇದಾನೀಂ ಶಾಪವಿಮೋಚನಾರ್ಥಮೇವಾಹೇತಿ ವಿವೇಕಃ। -ವಾದಿರಾಜೀಯ

ಜ್ಞಾನಂ ಚ ನೈಜಮಭಿದರ್ಶಯಿತುಂ ಪುನಶ್ಚ
ಪ್ರಾಹೇಶ್ವರೋಽಖಿಲಜಗದ್ಗುರುರಿಂದಿರೇಶಃ ।
ವ್ಯಾಸಸ್ವರೂಪ ಇಹ ಚೇತ್ಯ ಪರಶ್ವ ಏವ
ಮಾಂ ತೇ ಪ್ರದಾಸ್ಯತಿ ತದಾ ಪ್ರಕರೋಷಿ ಮೇಽರ್ಥ್ಯಂ ॥೫೨॥

ಹಿಡಿಂಬಿ ತನ್ನ ಸ್ವಾಭಾವಿಕ ದಿವ್ಯಜ್ಞಾನವನ್ನು ತೋರುವುದಕ್ಕಾಗಿ ಪುನಃ ಹೇಳಿದಳು. 'ಸಕಲಲೋಕ ಗುರು ಸರ್ವೇಶ್ವರನಾದ ವ್ಯಾಸರೂಪಿ ಶ್ರೀಹರಿ ಇಲ್ಲಿಗೆ ನಾಳದೇ ಬಂದು ನನ್ನನ್ನು ನಿನಗೆ ನೀಡುವನು. ಆಗ ನೀನೆ ನನ್ನ ಅಭೀಷ್ಟವನ್ನು ನಡೆಸಿಕೊಡುವಿ' ಎಂದು.

ಮಹಾಭಾರತದಲ್ಲಿ ಹಿಡಿಂಬಿ ತಾನು ಸ್ವರೂಪದಲ್ಲಿ ರಾಕ್ಷಸಿಯಲ್ಲ, ದೇವಸ್ತ್ರೀ, ದಿವ್ಯಜ್ಞಾನವುಳ್ಳವಳು ಎನ್ನುತ್ತ ಧೃತರಾಷ್ಟ್ರ ಪಾಂಡವರನ್ನು ವಾರಣಾವತಕ್ಕೆ ಕಳಿಸಿದ್ದು, ಅರಗಿನ ಮನೆ, ವಿದುರ ಜಾಣ್ಮೆಯಿಂದ ಅವರನ್ನು ಕಾಪಾಡಿದ್ದು, ಈ ಎಲ್ಲ ವಿವರವನ್ನೂ ಹೇಳಿ ಮುಂದೆ ನೀವು ಶಾಲಿಹೋತ್ರನೆಂಬ ಮುನಿಯ ತಪೋವನದಲ್ಲಿ ವಾಸ ಮಾಡಿರಿ. ಅವನು ನಿರ್ಮಿಸಿದ ಕೊಳದ ನೀರನ್ನು ಕುಡಿದ ಮಾತ್ರಕ್ಕೆ ಬಾಯಾರಿಕೆ ಹಸಿವು ಎರಡೂ ಹಿಂಗುತ್ತವೆ ಎಂದೂ ಹೇಳಿದಳು.

ಹಿಡಿಂಬ ವಧೆ

ಕಾಲೇ ತದೈವ ಕುಪಿತಃ ಪ್ರಯಯೌ ಹಿಡಿಂಬೋ
ಭೀಮಂ ನಿಹಂತುಮಪಿ ತಾಂ ಚ ನಿಜಸ್ವಸಾರಂ ।
ಭಕ್ಷಾರ್ಥಮೇವ ಹಿ ಪುರಾ ಸ ತು ತಾಂ ನ್ಯಯುಂಕ್ತ
ನೇತುಂ ಚ ತಾನಥ ಸಮಾಸದದಾಶು ಭೀಮಂ ॥೫೩॥

ಅದೇ ಸಮಯದಲ್ಲಿ ಕುಪಿತನಾದ ಹಿಡಿಂಬ ಭೀಮನನ್ನೂ, ಜೊತೆಗೆ ತಂಗಿಯಾದ ಹಿಡಿಂಬಿಯನ್ನೂ ಕೊಲ್ಲಲು ಹೊರಟ. ಏಕೆಂದರೆ ಅವನು ಪಾಂಡವರನ್ನು ತಿನ್ನಲು ತರಲೆಂದೇ ಅವಳನ್ನು ಕಳಿಸಿದ್ದ.

ಭೀಮ-ಹಿಡಿಂಬಿಯರ ಮಾತುಕತೆಗಳನ್ನು ಕೇಳಿದ ಹಿಡಿಂಬ ತಿನ್ನಲು ಮನುಷ್ಯರನ್ನು ಕೊಂದು ತಾ ಎಂದರೆ ಹಿಡಿಂಬಿ ಮನುಷ್ಯರಂತೆ ಶೃಂಗಾರರೂಪ ತಳೆದು ಅವರೊಡನೆ ಪ್ರಣಯಚೇಷ್ಟೆ ಮಾಡುತ್ತಿದ್ದಾಳೆ! ಇದರಿಂದ ತನ್ನ ಭೋಜನಕ್ಕೆ ಅಡ್ಡಿಯಾಗುತ್ತಿದ್ದಾಳೆ! ಎಂದು ಕುಪಿತನಾದ.

ಸಾ ಭೀಮಮೇವ ಶರಣಂ ಪ್ರಜಗಾಮ ತಾಂ ಚ
ಭ್ರಾತೃಂಶ್ಚ ಮಾತರಮಥಾವಿತುಮಭ್ಯಯಾತ್ತಂ ।

ಭೀಮಃ ಸುದೂರಮಪಕೃಷ್ಯ ಸಹೋದರಾಣಾಂ
ನಿದ್ರಾಪ್ರಭಂಗಭಯತೋ ಯುಯುಧೇಽಮುನಾ ಚ ॥೫೪॥

ಹಿಡಿಂಬಿ ಭೀಮನನ್ನೇ ಮೊರೆಹೊಕ್ಕಳು. ಭೀಮ ಅವಳನ್ನೂ ಸೋದರರನ್ನೂ ತಾಯಿಯನ್ನೂ ಕಾಪಾಡುವುದಕ್ಕಾಗಿ ಹಿಡಿಂಬನ ಮೇಲೇರಿಹೋದ. ಸೋದರರಿಗೆ ನಿದ್ರಾಭಂಗವಾದೀತೆಂದು ಭಯದಿಂದ ಅವನನ್ನು ಬಲುದೂರಕ್ಕೆ ಸೆಳೆದೊಯ್ದು ಅವನೊಡನೆ ಹೋರಾಟಕ್ಕೆ ಇಳಿದ.

ತೌ ಮುಷ್ಟಿಭಿಸ್ತರುಭಿರಶ್ಮಭಿರದ್ರಿಭಿಶ್ಚ
ಯುಧ್ವಾ ನಿತಾಂತರವತಃ ಪ್ರತಿಬೋಧಿತಾಂಸ್ತಾನ್ ।
ಸಂಚಕ್ರತುಸ್ತದನು ಸೋದರಸಂಭ್ರಮಂ ತಂ
ದೃಷ್ಟ್ವೈವ ಮಾರುತಿರಹನ್ನುರಸಿ ಸ್ಮ ರಕ್ಷಃ ॥೫೫॥

ಭೀಮ ಹಿಡಿಂಬರಿಬ್ಬರೂ ಮುಷ್ಟಿಗಳಿಂದ ಮರಗಳಿಂದ ಕಲ್ಲುಗಳಿಂದ ಬೆಟ್ಟಗಳಿಂದ ಯುದ್ಧಮಾಡಿ ಆ ದೊಡ್ಡ ಶಬ್ದದಿಂದ ಪಾಂಡವರು ಎಚ್ಚೆತ್ತುಕೊಳ್ಳುವಂತೆ ಮಾಡಿದರು. ಬಳಿಕ ಸೋದರರ ಭಯವನ್ನು ಕಂಡು ಒಡನೆ ಭೀಮ ರಾಕ್ಷಸನ ಎದೆಗೆ ಗುದ್ದಿದ.

ಐದು ಯೋಜನ ವಿಸ್ತಾರದ ಆ ಕಾಡಿನಲ್ಲಿ ಕ್ಷಣದಲ್ಲಿ ಎಲ್ಲ ಮರಗಿಡಗಳು ನಾಶವಾಗಿ ಆಮೆಯ ಬೆನ್ನುಚಿಪ್ಪಿನಂತೆ ಬೋಳಾಯಿತು. ದೇವೇಂದ್ರ ವೃತ್ರಾಸುರರ ಯುದ್ಧದಂತಿತ್ತು ಈ ಯುದ್ಧ. ಅರ್ಜುನ ಬಂದು 'ನಿನಗೆ ಶ್ರಮವಾಗಿದ್ದರೆ ನಾನು ಇವನನ್ನು ನೋಡಿಕೊಳ್ಳುತ್ತೇನೆ. ತಡಮಾಡಿದರೆ ರಾಕ್ಷಸ ಮಾಯಾ ಯುದ್ಧವನ್ನು ಪ್ರಾರಂಭಿಸಬಹುದು' ಎಂದಾಗ ಭೀಮ ಬೇಗನೆ ರಾಕ್ಷಸನ ಎದೆಗೆ ಗುದ್ದಿದ.

ತದ್ ಭೀಮಬಾಹುಬಲತಾಡಿತಮೀಶವಾಕ್ಯಾತ್
ಸರ್ವೈರಜೇಯಮಪಿ ಭೂಮಿತಲೇ ಪಪಾತ ।
ವಕ್ತ್ರಸ್ರವದ್ಬಹುಲಶೋಣಿತಮಾಪ ಮೃತ್ಯುಂ
ಪ್ರಾಯಾತ್ತಮೋಽಂಧಮಪಿ ನಿತ್ಯಮಥಕ್ರಮೇಣ ॥೫೬॥

ಹಿಡಿಂಬ ಶಿವನ ವರಬಲದಿಂದ ಸರ್ವರಿಗೂ ಅಜೇಯನಾಗಿದ್ದರೂ ಭೀಮನ ತೋಳಿನ ಬಲದಿಂದ ಹೊಡೆತ ತಿಂದು ನೆಲದಲ್ಲಿ ಒರಗಿದ. ಬಾಯಿಂದ ಬಹಳ ರಕ್ತ ಕಾರಿಸತ್ತ. ಕ್ರಮೇಣ ನರಕಾದ್ಯನರ್ಥಗಳನ್ನು ಅನುಭವಿಸಿ ಕೊನೆಯಲ್ಲಿ ನಿತ್ಯವಾದ ಅಂಧತಮವನ್ನು ಹೊಂದಿದ.

ಹಿಡಿಂಬಾ ಪರಿಣಯ

ಹತ್ವೈವ ಶರ್ವವರರಕ್ಷಿತರಾಕ್ಷಸಂ ತಂ
ಸರ್ವೈರವಧ್ಯಮಪಿ ಸೋದರಮಾತೃಯುಕ್ತಃ ।

ಭೀಮೋ ಯಯೌ ತದನು ಸಾ ಪ್ರಯಯೌ ಹಿಡಿಂಬೀ
ಕುಂತೀಂ ಯುಧಿಷ್ಠಿರಮಥಾಸ್ಯ ಕೃತೇ ಯಯಾಚೇ ॥೫೭॥

ಶಿವವರದಿಂದ ರಕ್ಷಿತನಾಗಿದ್ದು ಸರ್ವರಿಗೂ ಅವಧ್ಯನೆನಿಸಿದ್ದ ಆ ರಾಕ್ಷಸನನ್ನು ಕೊಂದು ಸೋದರರಿಂದಲೂ ತಾಯಿಯಿಂದಲೂ ಕೂಡಿ ಭೀಮ ಮುಂದೆ ನಡೆದ. ಹಿಡಿಂಬಿ ಅವನ ಹಿಂದೆಯೇ ನಡೆದಳು. ಭೀಮನಿಗಾಗಿ ಕುಂತಿಯನ್ನೂ ಧರ್ಮರಾಜನನ್ನೂ ಬೇಡಿದಳು.

ತಾಭ್ಯಾಮನೂಕ್ತಮಪಿ ಯನ್ನ ಕರೋತಿ ಭೀಮಃ
ಪ್ರಾದುರ್ಬಭೂವ ನಿಖಿಲೋರುಗುಣಾಭಿಪೂರ್ಣಃ ।
ವ್ಯಾಸಾತ್ಮಕೋ ಹರಿರನಂತಸುಖಾಂಬುರಾಶಿ-
ರ್ವಿದ್ಯಾಮರೀಚಿವಿತತಃ ಸಕಲೋತ್ತಮೋಽಲಂ ॥೫೮॥

ಕುಂತಿ ಯುಧಿಷ್ಠಿರರು ಮತ್ತೂ ಮತ್ತೂ ಹೇಳಿದರೂ ಭೀಮ ಕೇಳದಿದ್ದಾಗ ಸಕಲ ಮಹಾಗುಣಪೂರ್ಣ ಅನಂತಸುಖಸಾಗರ ಜ್ಞಾನಪ್ರಕಾಶವ್ಯಾಪ್ತ ಸರ್ವೋತ್ತಮನಾದ ವ್ಯಾಸರೂಪಿ ಶ್ರೀಹರಿ ಚೆನ್ನಾಗಿ ಮೈದೋರಿದ.

ದೃಷ್ಟ್ವೈವ ತಂ ಪರಮಮೋದಿನ ಆಶು ಪಾರ್ಥಾ
ಮಾತ್ರಾ ಸಹೈವ ಪರಿಪೂಜ್ಯ ಗುರುಂ ವಿರಿಂಚೇಃ ।
ಉಲ್ಲಾಲಿತಾಶ್ಚ ಹರಿಣಾ ಪರಮಾತಿಹಾರ್ದ-
ಪ್ರೋತ್ಫುಲ್ಲಪದ್ಮ ನಯನೇನ ತದೋಪವಿಷ್ಟಾಃ ॥೫೯॥

ಬ್ರಹ್ಮನಿಗೂ ಗುರುವಾದ ಆ ವ್ಯಾಸರನ್ನು ಕಂಡೊಡನೆಯೆ ಪರಮಾನಂದಗೊಂಡು ಪಾರ್ಥರೂ ಕುಂತಿಯೂ ಅವರನ್ನು ಬೇಗನೆ ಚೆನ್ನಾಗಿ ಸತ್ಕರಿಸಿದರು. ಅತ್ಯಂತ ಪರಮಪ್ರೀತಿಯಿಂದ ಅರಳಿದ ತಾವರೆ ಕಣ್ಣಿನ ಆ ಹರಿಯಿಂದ ಚೆನ್ನಾಗಿ ಲಾಲಿತರಾಗಿ ಕುಳಿತರು.

ನೀವು ನನ್ನ ಮೊಮ್ಮಕ್ಕಳು, ಬಾಲಕರು, ಶತ್ರುಗಳ ಪೀಡೆಯಿಂದ ದೈನ್ಯಾವಸ್ಥೆಯಲ್ಲಿರುವವರು, ಅದರಿಂದ ನಿಮ್ಮಲ್ಲಿ ನನಗೆ ಅಧಿಕ ಪ್ರೀತಿ ಎಂದರು ವ್ಯಾಸರು ಮತ್ತು ಪಾಂಡವರಿಗೆ ವಿದ್ಯಾಭ್ಯಾಸ ಮಾಡಿಸಿದರು ಎನ್ನುತ್ತದೆ ಮಹಾಭಾರತ. 'ದ್ವೈಪಾಯನೇನ ಕೃಷ್ಣೇನ ನಗರೇ ವಾರಣಾವತೇ (ಸಭಾ. ೧೦೦-೧೫) ಭೀಮ ಅಂದಿನವರೆಗೆ ತಾನು ಮಾಡಿದ ಕಾರ್ಯವನ್ನು ವ್ಯಾಸರಿಗೆ ಅರ್ಪಿಸಿ ಮುಂದೆ ಮಾಡುವುದನ್ನೂ ಆಗಲೇ ಸಂಕಲ್ಪಿಸಿದ ಎಂದು ಸುಮಧ್ವವಿಜಯ ಹೇಳಿದೆ. (೧-೩೩)

ತಾನ್ ಭಕ್ತಿನಮ್ರಶಿರಸಃ ಸಮುದೀಕ್ಷ್ಯ ಕೃಷ್ಣೋ
ಭೀಮಂ ಜಗಾದ ನತ ಆಶು ಹಿಡಿಂಬಯಾ ಚ ।

ಏತಾಂ ಗೃಹಾಣ ಯುವತೀಂ ಸುರಸದ್ಮಶೋಭಾಂ
ಜಾತೇ ಸುತೇ ಸಹಸುತಾ ಪ್ರತಿಯಾತು ಚೈಷಾ ॥೬೦॥

ಪಾಂಡವರು ಭಕ್ತಿಯಿಂದ ತಲೆಬಾಗಿದರು. ಹಿಡಿಂಬೆಯೂ ನಮಿಸಿದಳು. ವ್ಯಾಸರು ಅದನ್ನು ಕಂಡು ಭೀಮನಿಗೆ ದೇವಲೋಕ ಶ್ರೀರೂಪಳಾದ ಈಕೆಯನ್ನು ಭಾರ್ಯೆಯಾಗಿ ಸ್ವೀಕರಿಸು, ಒಬ್ಬಮಗ ಹುಟ್ಟಿದೊಡನೆ ಮಗನೊಂದಿಗೆ ಅವಳು ಹೊರಟುಹೋಗಲಿ, ಎಂದರು.

ಹಿಡಿಂಬಿ ಸದಾ ಭೀಮನ ರಾಣಿಯಾಗಿರಲು ಬಂದಿರಲಿಲ್ಲ. ಶಾಪಮುಕ್ತಿಗಾಗಿ ಅವನ ಅಂಗಸಂಗ ಬಯಸಿ ಮಾತ್ರ ಬಂದಿದ್ದಳು.

ಏವಂ ಬ್ರುವತ್ಯಗಣಿತೋರುಗುಣೇ ರಮೇಶ
ಓಮಿತ್ಯುದೀರ್ಯ ಕೃತವಾಂಶ್ಚ ತಥೈವ ಭೀಮಃ ।
ಸ್ಕಂಧೇನ ಚೋಹ್ಯ ವಿಬುಧಾಚರಿತಪ್ರದೇಶಾನ್
ಭೀಮಂ ಪ್ರಯಾತ್ಯುದಯ ಏವ ರವೇರ್ಹಿಡಿಂಬೀ ॥೬೧॥

ಅಗಣಿತ ಮಹಾಗುಣಶಾಲಿಯಾದ ಇಂದಿರೇಶ ಹೀಗೆ ನುಡಿದಾಗ ಭೀಮ 'ಆಗಲಿ' ಎನ್ನುತ್ತ ಹಾಗೇ ಮಾಡಿದ. ಅಂದಿನಿಂದ ಹಿಡಿಂಬೆ ಪ್ರತಿದಿನ ಸೂರ್ಯೋದಯವಾದೊಡನೆ ಭೀಮನನ್ನು ಹೆಗಲಮೇಲೆ ಹೊತ್ತು ದೇವತೆಗಳ ಸಂಚಾರಕ್ಕೆ ಯೋಗ್ಯವಾದ ಪ್ರದೇಶಗಳಿಗೆ ವಿಹಾರಕ್ಕಾಗಿ ಹೋಗುತ್ತಿದ್ದಳು.

ಅಣ್ಣನಿಗಿಂತ ಮೊದಲು ತಮ್ಮ ವಿವಾಹವಾಗುವುದು ಧರ್ಮಶಾಸ್ತ್ರಕ್ಕೆ ವಿರುದ್ಧ. ಆದರೂ ವ್ಯಾಸರ ವಿಶೇಷ ಆಜ್ಞೆ. ಧರ್ಮಶಾಸ್ತ್ರವೂ ಹರಿಯ ಆಜ್ಞೆ ತಾನೆ. ಅದು ಸಾಮಾನ್ಯ. ಇದು ವಿಶೇಷ. ಅದಕ್ಕಿಂತ ಇದು ಪ್ರಬಲ.

ಘಟೋತ್ಕಚ ಜನನ

ಸಾ ನಂದನಾದಿಷು ವನೇಷು ವಿಹೃತ್ಯ ತೇನ
ಸಾಯಂ ಪ್ರಯಾತಿ ಪೃಥಯಾ ಸಹಿತಾಂಶ್ಚ ಪಾರ್ಥಾನ್ ।
ಏವಂ ಯಯಾವಪಿ ತಯೋರಿಹ ವತ್ಸರಾರ್ಧೋರ್ಜಾತಶ್ಚ ಸೂನುರತಿವೀರ್ಯಬಲೋಪಪನ್ನಃ ॥೬೨॥

ಹಿಡಿಂಬೆ ನಂದನವನ ಮುಂತಾದ ಉದ್ಯಾನಗಳಲ್ಲಿ ಭೀಮನೊಂದಿಗೆ ವಿಹರಿಸಿ ಸಂಜೆಯ ಹೊತ್ತಿಗೆ ಕುಂತಿ ಪಾಂಡವರು ಇದ್ದೆಡೆಗೆ ಹಿಂತಿರುಗುತ್ತಿದ್ದಳು. ಹೀಗೆ ಆರು ತಿಂಗಳು ಕಳೆದುವು. ಅವರಿಗೆ ಅತಿ ವೀರ್ಯಬಲಯುಕ್ತನಾದ ಒಬ್ಬಮಗ ಹುಟ್ಟಿದ.

ಹಗಲು ಪಾಂಡವರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಬಲ್ಲರೆಂದು ರಾತ್ರಿ ನಿದ್ರಾಕಾಲದಲ್ಲಿ ಮಾತ್ರ, ಧರ್ಮರಾಜನ ಅಪೇಕ್ಷೆಯಂತೆ ಅವರ ರಕ್ಷಣೆಗೆ ಹಿಡಿಂಬಿ ಇರುತ್ತಿದ್ದಳು.

'ಊಷುಸ್ತತ್ರ ಚ ಷಣ್ಮಾಸಾನ್ ವಟವೃಕ್ಷೇ ಯಥಾಸುಖಂ'।
(ಆದಿ. 169. 1)

ಆರು ತಿಂಗಳ ಕಾಲ ಶಾಲಿಹೋತ್ರವನದಲ್ಲಿ ಪಾಂಡವರ ವಾಸ. ಕಮಲದಂತೆ ಕಣ್ಣುಗಳುಳ್ಳ ಹಿಡಿಂಬೆಗೆ 'ಕಮಲಪಾಲಿಕೆ' ಎಂದೂ ಇನ್ನೊಂದು ಹೆಸರು. ಆವಳು ಏಳನೇ ತಿಂಗಳಲ್ಲಿ ಗರ್ಭಧಾರಣೆ ಮಾಡಿ ತಕ್ಷಣವೇ ಪ್ರಸವಿಸಿದಳು ಎಂದಿದೆ ಮಹಾಭಾರತ.

ದೇವೋಽಪಿ ರಾಕ್ಷಸತನುರ್ನಿರ್ಋತಿಃ ಪುರಾ ಯ
ಆವೇಶಯುಕ್ತ ಗಿರಿಶಸ್ಯ ಘಟೋತ್ಕಚಾಖ್ಯಃ।
ಪೂರ್ವಂ ಘಟೋಪಮಮಮುಷ್ಯ ಶಿರೋ ಬಭೂವ
ಕೇಶಾ ನಿಮೇಷತ ಉದಾಸುರತೋ ಹಿ ನಾಮ ॥೬೩॥

ಹಿಂದೆ ದೇವತೆಯಾಗಿದ್ದೂ ರಾಕ್ಷಸ ಶರೀರಿಯಾಗಿದ್ದ ನಿರ್ಋತಿ ಈಗ ಶಿವನ ಆವೇಶಯುಕ್ತನಾಗಿ ಘಟೋತ್ಕಚ ಎಂಬ ಹೆಸರಿನಿಂದ ಮಾತೃಜಾತಿ ಪ್ರಯುಕ್ತ ರಾಕ್ಷಸನಾಗಿ ಜನಿಸಿದ. ಹುಟ್ಟಿದಾಗ ತಲೆ ಮಡಿಕೆಯಂತೆ ಇತ್ತು. ಕೂದಲು ಇರಲಿಲ್ಲ. ನಿಮಿಷದಲ್ಲಿ ಮೇಲ್ಮುಖವಾಗಿ ಕೂದಲು ಬೆಳೆದುವು. ಅದರಿಂದ ಅವನಿಗೆ ಆ ಹೆಸರು.

'ಉತ್ಕಚ' ಎಂದರೆ ಮೇಲ್ಮುಖವಾಗಿ ಬೆಳೆದ ಕೂದಲಿನಿಂದ ಕೂಡಿರುವುದು. ಮೊದಲಿಗೆ 'ಘಟ'ದಂತೆ ಮಡಿಕೆಯಂತೆ ತಲೆ ಇದ್ದಿತು. ಬಳಿಕ 'ಉತ್ಕಚ'. ಹೀಗೆ ಘಟೋತ್ಕಚ. ಭಾರತ ನೀಲಕಂಠೀವ್ಯಾಖ್ಯಾನ ಪ್ರಕಾರ 'ಉತ್ಕಚ' ಎಂದರೆ ಕೂದಲು ಇಲ್ಲದ್ದು. ಘಟದಂತೆ ಕಾಣುವ, ಕೂದಲಿಲ್ಲದ ತಲೆಯವನು ಘಟೋತ್ಕಚ. ಆದರೆ ಮಹಾಭಾರತದಲ್ಲಿ ಘಟೋತ್ಕಚ ಹುಟ್ಟಿದೊಡನೆ ಮೊದಲಿಗೆ ತಂದೆ ಭೀಮಸೇನನ ಪಾದಗಳಿಗೆ ವಂದನೆ ಮಾಡಿದ. ಆಗ 'ವಿಕಚ'ನಾಗಿದ್ದ, ತಲೆಯಲ್ಲಿ ಕೂದಲಿರಲಿಲ್ಲ. ಕೆಂಪು ಘಟದಂತೆ ಕಾಣುತ್ತಿತ್ತು. ಬಳಿಕ ತಾಯಿಗೆ ನಮಸ್ಕರಿಸಿದಾಗ ಕೂದಲು ಹುಟ್ಟಿದ್ದುವು. ಅಂದರೆ ಕ್ಷಣದಲ್ಲಿ ಯೌವನಭರಿತನಾಗಿದ್ದ. ಆಗ ಅವನು ತಾಯಿಗೆ ಹೇಳುವ ಮಾತು-

'ಘಟೋಽಹಮುತ್ಕಚೋಽಸ್ಮೀತಿ ಮಾತರಂ ಸೋಽಭ್ಯಭಾಷತ' (ಆದಿ. 169. 13) ಎಂದು ಲಕ್ಷ್ಮಾಲಂಕಾರಪಾಠ. ನಾನು ಘಟವಾಗಿದ್ದೇನೆ ಮತ್ತು ಉತ್ಕಚನಾಗಿದ್ದೇನೆ ಎನ್ನುತ್ತಾನೆ ಘಟೋತ್ಕಚ. ತನಗೆ ತಾನೇ ನಾಮಕರಣ ಮಾಡಿಕೊಳ್ಳುತ್ತಾನೆ.[1]

1. ದರ್ಪಣೇ ವಿಕಚಂ ರಕ್ತಘಟೋಪಮಂ ಸ್ವಶಿರಃ ಪ್ರಾಕ್ ಪಶ್ಯನ್ ತತ್‌ಕ್ಷಣ ಏವ ತತ್ರ ಊರ್ಧ್ವೀಭೂತ ಕೇಶೋತ್ಪತ್ತಿಂ ಚ ಪಶ್ಯನ್ ಸ ಬಾಲಃ ಬಾಲ್ಯಾದೇವ ಸ್ವಶಿರೋ ರಕ್ತಘಟಂ ಮನ್ವಾನಃ ತತ್ರೈವ ಕಚೋತ್ಪತ್ತಿಂ ಚ ಮನ್ವಾನಃ ಅಹಮುತ್ಕಚೋ ಘಟೋಽಸ್ಮೀತಿ ಮಾತರಮಭ್ಯಭಾಷತ। -ಲಕ್ಷ್ಮಾಲಂಕಾರ

ಜಾತೇ ಸುತೇ ಸಮಯತೋ ಭಗವತ್ಕೃತಾತ್ಸ
ಭೀಮೋ ಜಗಾದ ಸಸುತಾಂ ಗಮನಾಯ ತಾಂ ಚ ।
ಸ್ಮೃತ್ಯಾಭಿಯಾನ ಉಭಯೋರಪಿ ಸಾ ಪ್ರತಿಜ್ಞಾಂ
ತೇಷಾಂ ವಿಧಾಯ ಚ ಯಯೌ ಸುರಲೋಕಮೇವ ॥೬೪॥

ಮಗ ಹುಟ್ಟಿದಾಗ ಭೀಮಸೇನ ವೇದವ್ಯಾಸರ ಮಾತಿನಂತೆ ಹಿಡಿಂಬೆಗೆ ಮಗನೊಂದಿಗೆ ಹೊರಟು ಹೋಗಲು ಆಜ್ಞೆ ಮಾಡಿದ. ನೆನೆದಾಗ ತಾಯಿ ಮಕ್ಕಳಿಬ್ಬರೂ ಬರುವೆವೆಂದು ಪಾಂಡವರಿಗೆ ಮಾತುಕೊಟ್ಟು ಅವಳು ದೇವಲೋಕಕ್ಕೆ ಹೊರಟುಹೋದಳು.

ಏಕಚಕ್ರ ನಗರಕ್ಕೆ ಪ್ರಯಾಣ

ವ್ಯಾಸೋಽಪಿ ಪಾಂಡುತನಯೈಃ ಸಹಿತೋ ಬಕಸ್ಯ
ರೌದ್ರಾದ್ವರಾಜ್ಜಯವಧಾಪಗತಸ್ಯ ನಿತ್ಯಂ ।
ಯಾತೋ ವಧಾಯ ಪರಮಾಗಣಿತೋರುಧಾಮಾ
ಪೂರ್ಣಾಕ್ಷಯೋರುಸುಖಿ ಆಶು ತದೈಕಚಕ್ರಾಂ ॥೬೫॥

ಉತ್ತಮ ಅಸಂಖ್ಯ ಮಹಾಪ್ರಕಾಶಶಾಲಿ ಪೂರ್ಣ ಅಕ್ಷಯ ಮಹಾಸುಖಶಾಲಿಯಾದ ವ್ಯಾಸರು ಶಿವವರದಿಂದ ಎಂದೂ ಪರಾಭವ ಮರಣರಹಿತನಾದ ಬಕಾಸುರನ ಸಂಹಾರಕ್ಕಾಗಿ ಪಾಂಡವರೊಂದಿಗೆ ಬೇಗನೆ ಏಕಚಕ್ರಾನಗರಿಗೆ ಹೋದರು.

ಶಾಲಿಹೋತ್ರ ಮುನಿ ಪಾಂಡವರನ್ನು ತನ್ನಾಶ್ರಮದಲ್ಲಿರಿಸಿಕೊಂಡು ವೇದ ವೇದಾಂಗ ನೀತಿಶಾಸ್ತ್ರಗಳನ್ನು ಕಲಿಸಿದ. ಬಳಿಕ ಪಾಂಡವರು ಅಲ್ಲಿಂದ ಹೊರಟು ಮತ್ಸ್ಯ ತ್ರಿಗರ್ತ ಪಾಂಚಾಲ ಕೀಚಕ ದೇಶಗಳನ್ನು ದಾಟಿ ಹೋಗುತ್ತಿದ್ದಾಗ ಅಲ್ಲಿ ವೇದವ್ಯಾಸರು ಬಂದು ಅವರನ್ನು ಏಕಚಕ್ರನಗರಕ್ಕೆ ಕರೆದೊಯ್ಯುತ್ತಾರೆ. ಶಾಲಿ ಹೋತ್ರವನಕ್ಕೇ ಅವರು ತಿರುಗಿ ಬರುವುದಿಲ್ಲ.

ತಾನ್ ಬ್ರಾಹ್ಮಣಸ್ಯ ಚ ಗೃಹೇ ಪ್ರಣಿಧಾಯ ಕೃಷ್ಣಃ
ಶಿಷ್ಯಾ ಮಮೈತ ಇತಿ ವಿಪ್ರಕುಮಾರರೂಪಾನ್ ।
ಆಯಾಮಿ ಕಾಲ ಇತಿ ತಾನನುಶಾಸ್ಯ ಚಾಯಾತ್
ತೇ ತತ್ರ ವಾಸಮಥ ಚಕ್ರುರನೂಚ್ಯ ವೇದಾನ್ ॥೬೬॥

ಬ್ರಾಹ್ಮಣಕುಮಾರರ ವೇಷ ಧರಿಸಿದ್ದ ಪಾಂಡವರನ್ನು ವೇದವ್ಯಾಸರು 'ಇವರು ನನ್ನ ಶಿಷ್ಯರು' ಎನ್ನುತ್ತ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಇರಿಸಿ 'ಯೋಗ್ಯಕಾಲದಲ್ಲಿ ತಿರುಗಿ ಬರುತ್ತೇನೆ' ಎಂದು ಹೇಳಿಹೋದರು. ಪಾಂಡವರು ಅಲ್ಲಿ ವೇದಪಾರಾಯಣ ಮಾಡುತ್ತ ವಾಸಮಾಡಿದರು.

ಪಾಂಡವರು ಏಕಚಕ್ರನಗರದ ಹೊರಗೆ ಒಬ್ಬ ಬ್ರಾಹ್ಮಣನ ಮನೆಯಲ್ಲಿ

ವಾಸಮಾಡುತ್ತಿದ್ದರು. ಅವರಿಗೆ ವ್ಯಾಸರೆ ಸ್ವಲ್ಪ ಕಾಲ ವೇದಾಭ್ಯಾಸ ಮಾಡಿಸಿ ಹೋದರೆಂದೂ ಕೆಲವರ ವ್ಯಾಖ್ಯಾನವಿದೆ ಎನ್ನುತ್ತದೆ, ತಾಮ್ರಪರ್ಣೀಯ.[1]

ಭೀಮನ ಭಿಕ್ಷಾಟನ ವೈಖರಿ

ಭಿಕ್ಷಾಮಟತ್ಸು ಸತತಂ ಪ್ರತಿಹುಂಕೃತೇನ
ಭೀಮೋ ವಿಶಾಂ ಸದನ ಏವ ಗೃಹಪ್ರಮಾಣಂ ।
ಭಾಂಡಂ ಕುಲಾಲವಿಹಿತಂ ಪ್ರತಿಗೃಹ್ಯ ಗಚ್ಛ-
ತ್ಯಾಶಂಕಯಾವಗಮನಸ್ಯ ತಮಾಹ ಧರ್ಮಃ ॥೬೭॥

ಪಾಂಡವರು ಭಿಕ್ಷಾಟನೆ ಮಾಡುತ್ತಿದ್ದಾಗ ಭೀಮ ಯಾವಾಗಲೂ ಒಬ್ಬ ಕುಂಬಾರ ಮಾಡಿಕೊಟ್ಟಿದ್ದ ಒಂದು ಮನೆಯಷ್ಟು ದೊಡ್ಡದಾದ ಮಡಿಕೆಯನ್ನು ಹಿಡಿದು ವೈಶ್ಯರ ಮನೆಗೇ ಭಿಕ್ಷೆಗೆ ಹೋಗುತ್ತಿದ್ದ. ಆಗ ಅವನು ಮಾಡುತ್ತಿದ್ದ ಪ್ರತಿ ಹುಂಕಾರದಿಂದಲೂ ಇವರು ಪಾಂಡವರೆಂದು ಜನ ತಿಳಿದಾರೆಂಬ ಭಯದಿಂದ ಧರ್ಮರಾಜ ಭೀಮನಿಗೆ ಹೇಳಿದ.

ಜಾತಿಯಿಂದ ಉತ್ತಮರಾದ ಬ್ರಾಹ್ಮಣರಿಂದ ಭಿಕ್ಷೆ ಪಡೆಯಬಾರದು. ಸಮಾನರಾದ ಕ್ಷತ್ರಿಯರಲ್ಲಿಯೂ ಕೇಳಬಾರದು. ಅದರಿಂದ ಕೆಳಗಿನವರಾದ ವೈಶ್ಯರ ಕೈಯಿಂದಲೆ ಭಿಕ್ಷೆ ಸ್ವೀಕರಿಸುತ್ತಿದ್ದ, ಭೀಮಸೇನ.

'ಭಿಕ್ಷಿತ್ವಾ ದ್ವಿಜಗೇಹೇಷು' ಎಂಬ ಭಾರತವಚನದಲ್ಲಿ 'ದ್ವಿಜ'ರು ವೈಶ್ಯರು.

ಸ್ಥೂಲಂ ಹಿ ಸದ್ಮ ಪೃಥಿವೀಸಹಿತಂ ತ್ವರಕ್ಷ
ಉದ್ಧೃತ್ಯ ವಹ್ನಿಮುಖಿತಸ್ತು ತದೇಕದೋಷ್ಣಾ ।
ಭಾಂಡಂ ತದರ್ಧಮುರು ಕುಂಭಕರೇಣ ದತ್ತಂ
ಭಿಕ್ಷಾಂ ಚ ತೇನ ಚರಸಿ ಪ್ರತಿಹುಂಕೃತೇನ ॥೬೮॥

ಒಂದು ದೊಡ್ಡ ಮನೆಯನ್ನು ಅದು ಇದ್ದ ಸ್ಥಳ ಸಹಿತವಾಗಿ ಒಂದು ಕೈಯಿಂದೆತ್ತಿ ಅಗ್ನಿಮುಖದಿಂದ ರಕ್ಷಿಸಿದಿ. ಅದಕ್ಕೆ ಮನೆಯೊಡೆಯನಾದ ಕುಂಬಾರ ಮನೆಯಷ್ಟು ದೊಡ್ಡ ಮಡಿಕೆ ಮಾಡಿಕೊಟ್ಟ. ನೀನು ಪ್ರತಿಯೊಂದು ಹುಂಕಾರದಿಂದಲೂ ಆ ಮಡಿಕೆಯಿಂದ ಭಿಕ್ಷಾಟನೆ ಮಾಡುತ್ತಿರುವಿ.

'ಕುಂಭಕಾರೇಣ ಸಂಬಂಧಾತ್ ಲೇಭೇ ಪಾತ್ರಂ ಮಹತ್ತರಂ' (ಆದಿ 171-18)

'ಕುಂಬಾರನೊಂದಿಗೆ ಪ್ರೀತಿಯ ಸಂಬಂಧದಿಂದ ದೊಡ್ಡ ಭಿಕ್ಷಾ ಪಾತ್ರೆಯನ್ನು ಭೀಮಸೇನ ಸಂಪಾದಿಸಿದ' ಎಂದು ಮಹಾಭಾರತ ಹೇಳುತ್ತದೆ. ಅದು ಯಾವ ಸಂಬಂಧ ಎಂದರೆ,

---

1. ತೇ ಪಾರ್ಥಾ ವೇದಾನನೂಚ್ಯಾಭ್ಯಸ್ಯ ತತ್ರ ವಾಸಂ ಚಕ್ರುಃ। ಪ್ರಾಗಧೀತ ವೇದಾನಾವರ್ತಯಂತೋಽವಸನ್ನಿತಿ ಭಾವಃ। ಅನ್ಯೇತು ವೇದಾನನೂಚ್ಯಾಧ್ಯಾಪಯಿತ್ವಾ ಕಾಲೇಽಪೇಕ್ಷಿತಕಾಲೇ ಆಯಾಮೀತಿ ಸಂಬಂಧಮಾಹುಃ। -ತಾಮ್ರಪರ್ಣೀ.

ಮೃದ್ಭಾರೈಃ ಶತಸಾಹಸ್ರೈಃ ಕುಂಭಕಾರಮತೋಷಯತ್ ।(ಆದಿ.171.20)

ಕುಂಬಾರನಿಗೆ ಮಡಿಕೆ ಮಾಡಲು ರಾಶಿ ಮಣ್ಣು ತಂದುಕೊಟ್ಟು ಸಂತೋಷಪಡಿಸುತ್ತಿದ್ದ, ಭೀಮ ಎಂದು ಮೇಲುನೋಟಕ್ಕೆ ಕಾಣುತ್ತದೆ. ವಸ್ತುತಃ ಲಕ್ಷಾಲಂಕಾರ ಹೇಳುವಂತೆ ನಿರ್ಗಯೋಕ್ತವಾದ ಮಹೋಪಕಾರ ಒಂದನ್ನು ಭೀಮ ಕುಂಬಾರನಿಗೆ ಮಾಡಿ ಸಂತೋಷಪಡಿಸುತ್ತಾನೆ. ಕುಂಬಾರನ ಮನೆಯನ್ನು ಸುತ್ತಲೂ ಬೆಂಕಿ ಆವರಿಸಿತ್ತು. ಆಗ ಭೀಮ ಸ್ಥಳ ಸಹಿತವಾಗಿ ಆ ಮನೆಯನ್ನು ಕಿತ್ತು ಎತ್ತಿ ತಂದು ಬೆಂಕಿಯಿಂದ ಪಾರುಮಾಡಿದ. 'ಶತಸಹಸ್ರ ಭಾರದ ಮಣ್ಣಿನ ರಾಶಿಯನ್ನು ನಿತ್ಯ ಬಳಸಿಕೊಳ್ಳುತ್ತಿದ್ದ ಕುಂಬಾರ'ನನ್ನು ಭೀಮ ಹೀಗೆ ಸಂತೋಷಗೊಳಿಸಿದ. ಸಂತುಷ್ಟನಾದ ಕುಂಬಾರ ಮನೆಯಷ್ಟೇ ದೊಡ್ಡದಾದ ಭಿಕ್ಷಾಪಾತ್ರೆ ಮಾಡಿಕೊಟ್ಟ. ಆ ಪಾತ್ರೆಯನ್ನು ತಂದು ಮನೆಯಂಗಳದಲ್ಲಿಟ್ಟು ಭೀಮ ಹುಂಕರಿಸಿದರೆ ಜನರು ಭಯಪಡುತ್ತಿರಲಿಲ್ಲ. ಅದೊಂದು ಮನರಂಜನೆಯಾಗುತ್ತಿತ್ತು. ಅವರು ನಗುನಗುತ್ತ ದಿವ್ಯವಾದ ಭಕ್ಷ್ಯಭೋಜ್ಯಗಳನ್ನು ಪಾತ್ರೆಗೆ ಸುರಿಯುತ್ತಿದ್ದರು-

ತದಾದಾಯಾಗತಂ ದೃಷ್ಟ್ವಾ ಹಸಂತಿ ಪ್ರಹಸಂತಿ ಚ ।
ಭಕ್ಷ್ಯ ಭೋಜ್ಯಾನಿ ದಿವ್ಯಾನ್ಯಾದಾಯ ಪ್ರಕ್ಷಿಪಂತಿ ಚ ॥
ಧರ್ಮಸ್ಯ ತೇ ಸುನಿಯತೇರ್ಬಲತಶ್ಚ ಬೋಧೋ
ಭೂಯಾತ್ ಸುಯೋಧನಜನಸ್ಯ ತತೋ ಭಯಂ ಮೇ ।
ಮಾತ್ರಾ ಸಹೈವ ವಸ ಫಲ್ಗುನಪೂರ್ವಕೈಸ್ತ್ವ-
ಮಾನೀತಮೇವ ಪರಿಭುಂಕ್ಷ್ವ ನ ತು ವ್ರಜೇಥಾಃ ॥೬೯॥

ನಿನ್ನ ಧರ್ಮ ನಿಷ್ಠೆಯಿಂದಲೂ ಬಲದಿಂದಲೂ ದುರ್ಯೋಧನನ ಗೂಢಚಾರರಿಗೆ ನಮ್ಮ ಬಗ್ಗೆ ಸುಳಿವು ಸಿಗಬಹುದು. ಅದರಿಂದ ನನಗೆ ಭಯ ಉಂಟಾಗಿದೆ. ನೀನು ತಾಯಿಯೊಂದಿಗೇ ಇರು. ಅರ್ಜುನಾದಿಗಳು ತರುವ ಅನ್ನವನ್ನೆ ಉಣ್ಣು. ಹೋಗಬೇಡ.

ಇತ್ಯುಕ್ತ ಆಶು ಸ ಚಕಾರ ತಥೈವ ಭೀಮ-
ಸ್ತೇಽಪಿ ಸ್ವಧರ್ಮಪರಿರಕ್ಷಣಹೇತುಮೌನಾಃ ।
ಭಿಕ್ಷಾಂ ಚರಂತ್ಯಥ ಚತುರ್ಷ್ವಪಿ ತೇಷು ಯಾತೇ-
ಷ್ವೇಕತ್ರ ಮಾತೃಸಹಿತಃ ಸ ಕದಾಚಿದಾಸ್ತೇ ॥೭೦॥

ಧರ್ಮರಾಜ ಹೀಗೆ ಹೇಳಿದಾಗ ಭೀಮ ಒಡನೆಯೆ ಹಾಗೇ ಮಾಡಿದ. ಉಳಿದವರು ಸ್ವಧರ್ಮ ರಕ್ಷಣೆಗಾಗಿ ಮೌನದಿಂದಿದ್ದು ಭಿಕ್ಷಾಟನ ಮಾಡುತ್ತಿದ್ದರು. ಬಳಿಕ ಒಂದು ದಿನ ನಾಲ್ವರೂ ಭಿಕ್ಷಾಟನೆ ಹೋಗಿದ್ದಾಗ ಭೀಮನೊಬ್ಬನೇ ತಾಯಿಯೊಂದಿಗೆ ಕುಳಿತಿದ್ದ.

ಭಿಕ್ಷೆ ಬೇಡದಿರುವುದು ಕ್ಷತ್ರಿಯರಿಗೆ ಸ್ವಧರ್ಮ. ಅದರ ರಕ್ಷಣೆಗಾಗಿ

ಧರ್ಮರಾಜಾದಿಗಳು ಮನೆಯಂಗಳದಲ್ಲಿ ಸುಮ್ಮನೇ ನಿಂತು ಬಿಡುತ್ತಿದ್ದರು. ಭಿಕ್ಷೆ ನೀಡಿರೆನ್ನುತ್ತಿರಲಿಲ್ಲ. ಮೌನದಿಂದಿದ್ದರು. ತಾವಾಗಿ ತಂದು ಭಿಕ್ಷೆ ಹಾಕಿದರೆ ಸ್ವೀಕರಿಸುತ್ತಿದ್ದರು. 'ಇವರು ಭೀಕ್ಷೆ ಬೇಡಲು ತಕ್ಕವರಲ್ಲ, ರಾಜ ಭೋಗಕ್ಕೇ ಅರ್ಹರು. ಎಳೆವಯಸ್ಸಿನವರು, ತಪಸ್ವಿಗಳು. ಏನೋ ಕಾರ್ಯಾರ್ಥವಾಗಿ ಹೀಗೆ ತಿರುಗುತ್ತಿದ್ದಾರೆ' ಎಂದು ಪ್ರೀತಿಯಿಂದಲೆ ಜನರು ಭಿಕ್ಷೆ ನೀಡುತ್ತಿದ್ದರು.

ಬ್ರಾಹ್ಮಣ ಕುಟುಂಬದ ಗೋಳಾಟ

ತತ್ಕಾಲ ಏವ ರುದಿತಂ ನಿಜವಾಸಹೇತೋ-
ರ್ವಿಪ್ರಸ್ಯ ದಾರಸಹಿತಸ್ಯ ನಿಶಮ್ಯ ಭೀಮಃ ।
ಸ್ತ್ರೀಬಾಲಸಂಯುತಗೃಹೇ ಶಿಶುಲಾಲನಾದೌ
ಲಜ್ಜೇದಿತಿ ಸ್ಮ ಜನನೀಮವದನ್ನ ಚಾಗಾತ್ ॥೭೧॥

ಅದೇ ಸಮಯದಲ್ಲಿ ತಾವು ವಾಸವಾಗಿದ್ದ ಮನೆಯೊಡೆಯ ಬ್ರಾಹ್ಮಣ ಪತ್ನಿಯೊಂದಿಗೆ ಅಳುತ್ತಿದ್ದುದನ್ನು ಕೇಳಿ ಭೀಮ ಮಕ್ಕಳಿರುವ ಮನೆಯಲ್ಲಿ ಹೆಂಗಸು ಮಗುವಿನ ಲಾಲನಾದಿಗಳಲ್ಲಿ ಲಜ್ಜೆಪಡಬಹುದೆಂದು ತಾಯಿಯನ್ನೇ ಕಳಿಸಿದ. ತಾನು ಹೋಗಲಿಲ್ಲ.

ಜಾನೀಹಿ ವಿಪ್ರರುದಿತಂ ಕುತ ಇತ್ಯತಶ್ಚ
ಯೋಗ್ಯಂ ವಿಧಾಸ್ಯ ಇತಿ ಸಾ ಪ್ರಯಯೌ ಚ ಶೀಘ್ರಂ ।
ಸಾ ಸಂವೃತೈವ ಸಕಲಂ ವಚನಂ ಗೃಹೇಕಸ್ಯ
ಶುಶ್ರಾವ ವಿಪ್ರವರ ಆಹ ತದಾ ಪ್ರಿಯಾಂ ಸಃ ॥೭೨॥

'ಬ್ರಾಹ್ಮಣ ಯಾವ ಕಾರಣದಿಂದ ಅಳುತ್ತಿದ್ದಾನೆ ಎಂಬುದನ್ನು ತಿಳಿದುಕೊ, ಅದಕ್ಕೆ ತಕ್ಕ ಪರಿಹಾರವನ್ನು ನಾನು ಮಾಡುವೆನೆಂ' ದು ಹೇಳಿ ಭೀಮ ಕುಂತಿಯನ್ನು ಕಳಿಸಿದ. ಕುಂತಿ ಬೇಗನೆ ಹೋದಳು ಮರೆಯಲ್ಲಿ ನಿಂತು ಮನೆಯೊಳಗೆ ಬ್ರಾಹ್ಮಣನಾಡಿದ ಎಲ್ಲ ಮಾತುಗಳನ್ನೂ ಕೇಳಿದಳು. ಬ್ರಾಹ್ಮಣ ತನ್ನ ಪತ್ನಿಗೆ ಹೀಗೆ ಹೇಳುತ್ತಿದ್ದ.

ದಾತವ್ಯ ಏವ ಹಿ ಕರೋಽದ್ಯ ಚ ರಾಕ್ಷಸಸ್ಯ
ಸಾಕ್ಷಾದ್ಬಕಸ್ಯ ಗಿರಿಸನ್ನಿಭಭಕ್ಷ್ಯಭೋಜ್ಯಃ ।
ಪುಂಸಾನಸಾ ಚ ಸಹಿತೋಽನಡುಹಾ ಪುಮಾಂಸ್ತು
ನೈವಾಸ್ತಿ ನೋಽಪ್ರದದತಾಂ ಚ ಸಮಸ್ತನಾಶಃ ॥೭೩॥

ಬೆಟ್ಟದಷ್ಟು ಗಾತ್ರದ ಭಕ್ಷ್ಯಭೋಜ್ಯಗಳ ರಾಶಿಯನ್ನು ಬಂಡಿಯಲ್ಲಿ ತುಂಬಿ ಎತ್ತುಗಳು ಮತ್ತು ಮನುಷ್ಯನೊಂದಿಗೆ ನಾವು ಇಂದೇ ಬಕ ರಾಕ್ಷಸನಿಗೆ ಕಪ್ಪವಾಗಿ ಕೊಡಬೇಕಾಗಿದೆ. ನಮ್ಮಲ್ಲಿ ಮನುಷ್ಯನಿಲ್ಲ. ಆದರೆ ಕೊಡದಿದ್ದರೆ ಸರ್ವನಾಶ ನಿಶ್ಚಿತ.

'ವೇತನಂ ತಸ್ಯ ವಿಹಿತಂ ಶಾಲಿವಾಹಸ್ಯ ಭೋಜನಂ' (ಆದಿ. 159.6)

ಎಂದು ಮಹಾಭಾರತ ಔತ್ತರೇಯಪಾಠ ಹೇಳುವಂತೆ ಇಪ್ಪತ್ತು ಖಾರಿ ಪ್ರಮಾಣದ ಅನ್ನದ ರಾಶಿಯನ್ನು 'ಬೆಟ್ಟದಷ್ಟು ಗಾತ್ರ' ಎನ್ನಲಾಗಿದೆ. 'ವಾಹೋ ವಿಂಶತಿಖಾರಿಕೇ' ಎಂದು ಕೋಶವನ್ನು ಭಾರತ ನೀಲಕಂಠೀ ವ್ಯಾಖ್ಯಾನದಲ್ಲಿ ಉದಾಹರಿಸಿದೆ. ಮೂವತ್ತೆರಡು ಸೇರು ಒಂದು ಕೊಳಗ. ಹದಿನಾರು ಕೊಳಗ ಒಂದು ಖಾರಿ. ಇಂಥ ಇಪ್ಪತ್ತು ಖಾರಿ ಅಕ್ಕಿಯ ಅನ್ನ ಇಲ್ಲಿ ಬಂಡಿ ಅನ್ನ ಎನಿಸಿದೆ.

'ನಮ್ಮಲ್ಲಿ ಮನುಷ್ಯನಿಲ್ಲ' ಎಂದರೆ 'ನಾವು ದರಿದ್ರರು, ಹಣ ಕೊಟ್ಟು ಒಬ್ಬ ಮನುಷ್ಯನನ್ನು ಕೊಳ್ಳಲು ಶಕ್ತಿ ಇಲ್ಲ' ಎಂದು ಮಹಾಭಾರತ ಹೇಳುತ್ತಿದೆ- ' ನಚ ಮೇ ವಿದ್ಯತೇ ವಿತ್ತಂ ಸಂಕ್ರೇತುಂ ಪುರುಷಂ ಕ್ವಚಿತ್' (ಆದಿ. 174.28)

ಅನ್ಯತ್ರ ಯಾಮ ಇತಿ ಪೂರ್ವಮುದಾಹೃತಂ ಮೇ
ನೈತತ್ ಪ್ರಿಯೇ ತವ ಮನೋಗತಮಾಸ ತೇನ ।
ಯಾಸ್ಯಾಮಿ ರಾಕ್ಷಸಮುಖಂ ಸ್ವಯಮೇವ ಮರ್ತ್ಯಂ
ಭಾರ್ಯೇನಮಾಹ ನ ಭವಾನಹಮತ್ರ ಯಾಮಿ ॥೭೪॥

'ನಾವು ಬೇರೆ ಕಡೆಗೆ ಹೋಗೋಣ ಎಂದು ನಾನು ಹಿಂದೆ ಹೇಳಿದೆ. ಪ್ರಿಯೆ, ಅದು ನಿನ್ನ ಮನಸಿಗೆ ಬರಲಿಲ್ಲ. ಅದರಿಂದ ಈಗ ನಾನೇ ಸಾಯಲು ರಾಕ್ಷಸನ ಬಾಯಿಗೆ ಬೀಳುವೆ' ಎಂದ ಬ್ರಾಹ್ಮಣ. 'ನೀನಲ್ಲ, ನಾನು ಹೋಗುವೆನು' ಎಂದಳು ಪತ್ನಿ.

ಮಾತೆಯಂತೆಯೂ ಸಖಿಯಂತೆಯೂ ಸಹಧರ್ಮಚಾರಿಣಿಯಾಗಿಯೂ ಇರುವ ಪತ್ನಿ, ನ್ಯಾಸದಂತಿದ್ದು ದೌಹಿತ್ರನ ಮೂಲಕ ಪಿತೃಗಳಿಗೆ ತೃಪ್ತಿತರುವ ಪ್ರೀತಿಯ ಮಗಳು, ಕುಲದೀಪಕನಾದ ಏಕಮಾತ್ರ ಪುತ್ರ - ಇವರಾರನ್ನೂ ರಾಕ್ಷಸನಿಗೆ ನಾನು ಕೊಡಲಾರೆ. ನಾನೇ ಹೋಗುವೆ. ಆದರೆ ಆಗ ಅನಾಥರಾಗಿ ನೀವಾರೂ ಉಳಿಯುವುದಿಲ್ಲ. ಹೋಗದಿದ್ದರೂ ರಾಕ್ಷಸ ಎಲ್ಲರನ್ನೂ ತಿನ್ನುತ್ತಾನೆ - ಇದು ಬ್ರಾಹ್ಮಣನ ಸಮಸ್ಯೆ. ಇದಕ್ಕೆ ಆತ ಹಿಂದೆಯೆ ಊರನ್ನು ಬಿಡುವ ಆಲೋಚನೆ ಮಾಡಿದ್ದ. ಆದರೆ ಪತ್ನಿಗೆ ಅದು ತೌರು. ತಂದೆತಾಯಿಗಳಿಬ್ಬರೂ ಇಲ್ಲ. ಆದರೂ ತೌರನ್ನು ಬಿಡಲು ಅವಳು ಸಿದ್ಧಳಿರಲಿಲ್ಲ!

ಅಥೇ ತವಾದ್ಯ ತನುಸಂತ್ಯಜನಾದಹಂ ಸ್ಯಾಂ
ಲೋಕೇ ಸತೀಪ್ರಚರಿತೇ ತದೃತೇ ತ್ವಧಶ್ಚ ।

ಕನ್ಯಾಹ ಚೈನಮಹಮೇಮಿ ನ ಕನ್ಯಯಾರ್ಥ
ಇತ್ಯುಕ್ತ ಆಹ ಧಿಗಿತಿ ಸ್ಮ ಸ ವಿಪ್ರವರ್ಯಃ ॥೭೫॥

'ನಿನಗಾಗಿ ನಾನೀಗ ಶರೀರತ್ಯಾಗ ಮಾಡಿದರೆ ನಾನು ಪತಿವ್ರತೆ ಎಂಬ ಕೀರ್ತಿ ಹೊಂದಬಲ್ಲೆ. ಪತಿವ್ರತೆಯರ ಲೋಕವನ್ನೂ ಹೊಂದಬಲ್ಲೆ. ಇಲ್ಲದಿದ್ದರೆ ಅಧೋಲೋಕವನ್ನು ಪಡೆಯಬೇಕಾದೀತು,' ಎಂದಳು ಪತ್ನಿ. ಆಗ ಮಗಳು ತಂದೆಗೆ ಹೇಳಿದಳು, 'ನಾನು ಹೋಗುವೆನು. ಕನ್ಯೆಯಿಂದ ಏನು ಪ್ರಯೋಜನವಿಲ್ಲ ತಾನೆ?' ಬ್ರಾಹ್ಮಣನೆಂದ 'ಛಿ, ಹಾಗೆನ್ನಬೇಡ'.

ಸ್ವಾಮಿ, ನೀನು ನನ್ನಿಂದ ಪಡೆಯಬೇಕಾಗಿದ್ದ ಸಂತತಿಯನ್ನು ಪಡೆದಾಯಿತು. ನಾನು ಹೋದರೆ ನೀನೆ ಅವರನ್ನು ಪೋಷಿಸುವಿ. ನೀನು ಹೋದರೆ ನಾನು ನನ್ನ ಶೀಲಕಾಪಾಡಿಕೊಳ್ಳುವುದೇ ಕಷ್ಟ, ಸಂತತಿಯನ್ನು ಕಾಪಾಡುವುದು ದೂರದ ಮಾತು. ಹೀಗಾಗಿ ಅಧೋಲೋಕ ಪ್ರಾಪ್ತಿಯಾದೀತು. ಅದರಿಂದ ನಾನೇ ಹೋಗುವೆ. ಅದರಿಂದ ಕೀರ್ತಿಯೂ ಉತ್ತಮ ಲೋಕವೂ ಪ್ರಾಪ್ತವಾಗುತ್ತದೆ. ಅರಿಶಿಣ ಕಾಡಿಗೆ ಹೂ ಮುಂತಾದ ಸುಮಂಗಲೀ ಲಕ್ಷಣಗಳಿಂದ ಯುಕ್ತಳಾಗಿ ಮರಣ ಹೊಂದುವವಳು ಪತಿಯಿಂದ ಜಲತರ್ಪಣ ಪಡೆಯುವವಳು ಪಾರ್ವತಿಯ ಲೋಕವನ್ನು ಹೊಂದಿ ಪಾರ್ವತಿಯ ಸಖಿಯಾಗಿ ಸುಖಪಡುವಳು' ಎನ್ನುತ್ತದೆ ಮಹಾಭಾರತ.

ಕನ್ಯೆ ಎಂದಿಗೂ ಪರರ ಪಾಲಾಗುವ ಸೊತ್ತು. ಕೊನೆಗೂ ಒಬ್ಬವರನಿಗೆ ಕೊಡಬೇಕಾಗುತ್ತದೆ. ಅಂದಿನವರೆಗೆ ನ್ಯಾಸದಂತೆ ಅವಳನ್ನು ಕಾಪಾಡಬೇಕು. ಮದುವೆ ಮಾಡಿಕೊಡುವಾಗ ಹೆತ್ತವರಿಗೆ ಆಗುವ ದುಃಖ ಅಪಾರ. ಕನ್ಯೆಯಲ್ಲಿ ಮುಂದೆ ಮೊಮ್ಮಗ ಹುಟ್ಟಿದರೆ ಆಗ ಪಿತೃಗಳಿಗೆ ಉತ್ತಮ ಲೋಕ ಪ್ರಾಪ್ತಿ. ಆದರೆ ಈಗ ತಂದೆ ಸತ್ತರೆ ತಾಯಿ ಸಾಯುವಳು. ತಮ್ಮನೂ ಎಳೆವಯಸ್ಸಿನವನು. ಆದರಿಂದ ತಂದೆತಾಯಿ ಸೋದರರ ಆಸರೆ ಇಲ್ಲದೆ ಕನ್ಯೆ ಅನಾಥೆಯಾಗಿ ಕೆಡಬಹುದು ಅಥವಾ ಸಾಯಬಹುದು. ನಾನೀಗಲೇ ಸತ್ತರೆ ನೀವೆಲ್ಲರೂ ಉಳಿಯುತ್ತೀರಿ. 'ಧರ್ಮತೋಽಹಂ ಪರಿತ್ಯಾಜ್ಯಾ' ವಿವಾಹ ಮಾಡಿಕೊಟ್ಟು ಪರಿತ್ಯಜಿಸಲೇ ಬೇಕಾದವಳು ನಾನು, 'ತ್ಯಕ್ತವ್ಯಾಂ ಮಾಂ ಚ ಸಂತ್ಯಜ' ಎಂದಾದರೂ ಪರಿತ್ಯಜಿಸಬೇಕಾದವಳನ್ನು ಈಗಲೇ ಪರಿತ್ಯಜಿಸು ಎನ್ನುತ್ತಾಳೆ ಕನ್ಯೆ. ಇದರ ಸಾರಾಂಶ 'ಕನ್ಯೆಯಿಂದ ಪ್ರಯೋಜನವಿಲ್ಲ'.

ಕನ್ಯೋದಿತಾ ಬತ ಕುಲದ್ವಯತಾರಿಣೇತಿ
ಜಾಯಾ ಸಖೇತಿ ವಚನಂ ಶ್ರುತಿಗಂ ಸುತಶ್ಚ ।

ಆತ್ಮೈವ ತೇನ ನ ತು ಜೀವನಹೇತುತೋಽಹಂ
ಧೀಪೂರ್ವಕಂ ನ್ರಶನಕೇ ಪ್ರತಿಪಾದಯಾಮಿ ॥೭೬॥

ಕನ್ಯೆ 'ಎರಡೂ ಕುಲಗಳನ್ನು ಉದ್ಧರಿಸುವವಳು' ಎಂದು ವರ್ಣಿತಳಾಗಿದ್ದಾಳೆ. ಪತ್ನಿಯು ಸಖಿ ಎನ್ನುವ ವಚನ ಶ್ರುತಿಯಲ್ಲಿದೆ. ಮಗನೆಂದರೆ ತನ್ನದೆ ಆದ ಇನ್ನೊಂದು ರೂಪ. ಅದರಿಂದ ನನ್ನ ಪ್ರಾಣರಕ್ಷಣೆಗಾಗಿ ತಿಳಿದೂತಿಳಿದೂ ನಿಮ್ಮನ್ನು ನರಭಕ್ಷಕನ ಬಾಯಿಗೆ ಕೊಡಲಾರೆ.

'ಸಖಾ ಹ ಜಾಯಾ। ಕೃಪಣಂ ಹಿ ದುಹಿತಾ। ಜ್ಯೋತಿರ್ಹಿಪುತ್ರಃ।' 'ಹೆಂಡತಿ ಗೆಳತಿಯಾಗಿರುತ್ತಾಳೆ. ಮಗಳು ಕೃಪಾಪಾತ್ರಳು. ಮಗ ಮನೆಯ ಬೆಳಕು' ಎನ್ನುವ ಶ್ರುತಿಯನ್ನು ವಾದಿರಾಜೀಯದಲ್ಲಿ ಉದಾಹರಿಸಿದೆ. ಹೆಂಡತಿಗಿಂತ ಹೆಚ್ಚಿನ ಗೆಳತಿ ಇನ್ನಿಲ್ಲ ಏಕೆಂದರೆ ಸಹಧರ್ಮಿಣಿಯಾಗಿ ಧರ್ಮ ಅರ್ಥಕಾಮಗಳಲ್ಲಿ ಎಲ್ಲಕಡೆ ಜೊತೆಗೇ ಇರುವವಳು. ಮಗಳು ಹೆತ್ತಕುಲ ಕೊಟ್ಟಕುಲಗಳೆರಡಕ್ಕೂ ಇಪ್ಪತ್ತೊಂದು ತಲೆವರೆಗೆ ತಾರಕಳು. ಮತ್ತು ಕನ್ಯಾದಾನದಿಂದ ಪಿತನಿಗೆ ಬ್ರಹ್ಮಲೋಕ ಪ್ರಾಪ್ತಿ. ಅದರಿಂದ ಎರಡುಕುಲದವರೂ ಅವಳನ್ನು ಕೃಪೆಯಿಂದ ಕಾಪಾಡಬೇಕು. 'ಆತ್ಮಾ ವೈ ಪುತ್ರಾನಾಮಾಸಿ' ಎಂಬಂತೆ ತಂದೆಯ ಇನ್ನೊಂದು ರೂಪನೆ ಆದ ಮಗ ಕುಲದೀಪಕನೆನಿಸಿದ್ದಾನೆ. ಆದರಿಂದ ಯಾರನ್ನೂ ರಾಕ್ಷಸನ ಬಾಯಿಗೆ ಕೊಡಲಾರೆ ಎನ್ನುತ್ತಾನೆ ಬ್ರಾಹ್ಮಣ.

'ಆತ್ಮಾ ಪುತ್ರಃ ಸಖೀ ಭಾರ್ಯಾ ಕೃಚ್ಛ್ರಂ ತು ದುಹಿತಾ ಕಿಲ'
(ಆದಿ. 173. 11)

ಎನ್ನುತ್ತದೆ ಭಾರತ. ಜನಾರ್ದನೀಯದ ಪ್ರಕಾರ ಕನ್ಯೆ ತಂದೆಯ ಕುಲ ತಾಯಿಯ ಕುಲ ಎರಡನ್ನೂ ಉದ್ಧರಿಸುತ್ತಾಳೆ.

ಏವಂ ರುದತ್ಸು ಸಹಿತೇಷು ಕುಮಾರಕೋಽಸ್ಯ
ಪ್ರಾಹ ಸ್ವಹಸ್ತಗತೃಣಂ ಪ್ರತಿದರ್ಶ್ಯ ಚೈಷಾಂ ।
ಏತೇನ ರಾಕ್ಷಸಮಹಂ ನಿಹನಿಷ್ಯ ಏವೇ-
ತ್ಯುಕ್ತೇ ಸುವಾಕ್ಯಮನು ಸಾ ಪ್ರವಿವೇಶ ಕುಂತೀ ॥೭೭॥

ಹೀಗೆ ಎಲ್ಲರೂ ಕೂಡಿ ಅಳುತ್ತಿದ್ದಾಗ ಎಳೆಯ ವಯಸ್ಸಿನ ಮಗ ತನ್ನ ಕೈಯಲ್ಲಿ ಒಂದು ಹುಲ್ಲುಕಡ್ಡಿಯನ್ನು ಎತ್ತಿ ತೋರಿಸಿ 'ಈ ಹುಲ್ಲುಕಡ್ಡಿಯಿಂದ ನಾನು ರಾಕ್ಷಸನನ್ನು ಕೊಲ್ಲುವೆ' ಎಂದ. ಈ ಮಾತು ಶುಭಶಕುನವೆಂದು ಕುಂತಿ ಕೂಡಲೆ ಒಳಗೆ ಪ್ರವೇಶಿಸಿದಳು.

ಕುಂತಿ ಭೀಮನ ಕೈಯಿಂದ ರಾಕ್ಷಸನನ್ನು ಅನಾಯಾಸವಾಗಿ ಕೊಲ್ಲಿಸಬೇಕೆಂದು ಮನಸ್ಸಿನಲ್ಲಿ ಸಂಕಲ್ಪಿಸಿದಾಗ ಏನೂ ಅರಿಯದ ಮಗುವಿನ

ಬಾಯಿಂದ ಬಂದ ಈ ಮಾತು ಶುಭಶಕುನವಾಯಿತು. ಅವಳ ಸಂಕಲ್ಪ ಈಡೇರುವುದೆಂಬುದನ್ನು ಸೂಚಿಸಿತು.

ಬಕಾಸುರನ ದಬ್ಬಾಳಿಕೆ

ಪೃಷ್ಟಸ್ತಯಾಹ ಸ ತು ವಿಪ್ರವರೋ ಬಕಸ್ಯ
ವೀರ್ಯಂ ಬಲಂ ಚ ದಿತಿಜಾರಿಭಿರಪ್ಯಸಹ್ಯಂ।
ಸಂವತ್ಸರತ್ರಯಯುತೇ ದಶಕೇ ಕರಂ ಚ
ಪ್ರಾತಿಸ್ವಿಕಂ ದಶಮುಖಸ್ಯ ಚ ಮಾತುಲಸ್ಯ ॥೭೮॥

ಕುಂತಿ ಕೇಳಿದಾಗ ಆ ಬ್ರಾಹ್ಮಣೋತ್ತಮ ದೇವತೆಗಳಿಗೂ ಇದಿರಿಸಲಾಗದಂಥ ಬಕನ ವೀರ್ಯಪರಾಕ್ರಮಗಳನ್ನೂ ಅವನು ರಾವಣನ ಸೋದರ ಮಾವನಾಗಿದ್ದುದನ್ನೂ ಹದಿಮೂರು ವರ್ಷಗಳಿಂದಲೂ ಪ್ರತಿದಿನ ಸರದಿಯಂತೆ ಒಂದೊಂದು ಮನೆಯವರು ಅವನಿಗೆ ಕೊಡಬೇಕಾಗಿದ್ದ ಕಪ್ಪವನ್ನೂ ವಿವರಿಸಿದ.

ಏಕಚಕ್ರನಗರದ ರಾಜ ನಿರ್ವೀರ್ಯನಾಗಿದ್ದ. ಪರರಾಜರಿಂದಲೂ ಕಾಡಿನ ಮೃಗಗಳಿಂದಲೂ ಕಳ್ಳಕಾಕರಿಂದಲೂ ಭೂತಪ್ರೇತಪಿಶಾಚಿಗಳಿಂದಲೂ ನಗರವನ್ನು ಬಕನೆ ರಕ್ಷಿಸುತ್ತಿದ್ದ. ಅದರಿಂದ ಜನರು ಅವನಿಗೆ ಕಪ್ಪಕೊಡಬೇಕಾಗಿತ್ತು. ಬ್ರಾಹ್ಮಣರೆಲ್ಲರೂ ಅವನೊಂದಿಗೆ ಒಪ್ಪಂದ ಮಾಡಿಕೊಂಡು 'ನೀನು ಮನಸ್ಸಿಗೆತೋಚಿದಂತೆ ನಮ್ಮನ್ನು ಹಿಡಿದು ತಿನ್ನಬೇಡ. ನಾವೇ ನಿನಗೆ ಪ್ರತಿದಿನ ಬಗೆಬಗೆಯ ಭಕ್ಷಭೋಜ್ಯಗಳು ಮದ್ಯ ಪಕ್ವ ಅಪಕ್ವ ಮಾಂಸಗಳು ಹಾಲು ಅನ್ನವನ್ನು ಇಪ್ಪತ್ತು ಖಾರಿ ಪ್ರಮಾಣದಲ್ಲಿ ಕೊಡುತ್ತೇವೆ ಅವನ್ನೂ, ಮೊಸರು ಮುಂತಾದುವನ್ನೂ ತುಂಬಿದ ಬಂಡಿ, ಅದನ್ನೊಯ್ಯುವ ಎತ್ತುಗಳು, ಬಂಡಿ ಹೊಡೆಯುವ ಆಳು ಹೀಗೆ ಎಲ್ಲವನ್ನೂ ನೀನು ತಿನ್ನು' ಎಂದರು. ಈ ಕಪ್ಪವನ್ನು ಕೊಡುವುದು ಮಾತ್ರವಲ್ಲದೆ ಮಂತ್ರ, ಜಪ, ಯಾಗಹೋಮ, ಪೂಜೆ, ಅನ್ನಾರಾಧನೆ ಎಲ್ಲವನ್ನೂ ಪ್ರಜೆಗಳು ಅವನ ಕ್ಷೇಮಪ್ರಾರ್ಥನೆಯೊಂದಿಗೆ ನಡೆಸಬೇಕಾಗಿತ್ತು. ಬಕ ರಾವಣನ ಸೋದರಮಾವ, ಮಾರೀಚನಮುಖದಿಂದ ರಾಮಬಾಣಗಳಮಹಿಮೆಯನ್ನು ಕೇಳಿ ಹೆದರಿ ಅಂದಿನಿಂದ ಇಂದಿನವರೆಗೂ ಗುಹೆಯಲ್ಲಿ ಅಡಗಿದ್ದನೀತ. ನಗರದ ಹೊರಗೆ ಯಮುನಾ ತೀರದ ಒಂದು ದಟ್ಟವಾದ ಕಾಡಿನಲ್ಲಿ ಅವನ ವಾಸ. ಈಗ ಹದಿಮೂರು ವರ್ಷಗಳಿಂದ ಏಕಚಕ್ರನಗರದ ಬಳಿಯಲ್ಲಿ ವಾಸವಾಗಿದ್ದು ನಾಗರಿಕರ ಜೀವನಕ್ಕೆ ಕಂಟಕನೆನಿಸಿದ್ದ.

ಶ್ರುತ್ವಾ ತಮುಗ್ರಬಲಮತ್ಯುರುವೀರ್ಯಮೇವ
ರಾಮಾಯಣೇ ರಘುವರೋರುಶರಾತಿಭೀತಂ ।
ವಿಷ್ಟಂ ಬಿಲೇಷ್ವಥ ನೃಪಾನ್ ವಶಮಾಶು ಕೃತ್ವಾ
ಭೀತ್ಯೈವ ತೈಸ್ತದನು ದತ್ತಕರಂ ನನಂದ ॥೭೯॥

'ಬಕ ಭಯಂಕರ ಬಲ ಉಳ್ಳವ. ಅತ್ಯಂತ ಮಹಾಪರಾಕ್ರಮಶಾಲಿ. ರಾಮಾಯಣ ಕಾಲದಲ್ಲಿ ಶ್ರೀರಾಮನ ಮಹಾಬಾಣಕ್ಕೆ ಬಲುಭೀತನಾಗಿ ಗುಹೆಯೊಳಗೆ ಅಡಗಿದವ. ಬಳಿಕ ಈಗ ರಾಜರುಗಳನ್ನು ತನ್ನ ವಶಮಾಡಿಕೊಂಡು ಅವರಿಂದ ತನಗಿಷ್ಟವಾದ ಕಪ್ಪವನ್ನು ತೆಗೆದುಕೊಳ್ಳುತ್ತಿದ್ದಾನೆ. ಅವರು ಭೀತಿಯಿಂದ ಕೊಡುತ್ತಿದ್ದಾರೆ' ಎಂದು ಬ್ರಾಹ್ಮಣ ಹೇಳಿದ್ದನ್ನು ಕೇಳಿ ಕುಂತಿ ಆನಂದಪಟ್ಟಳು.

ಕುಂತಿಗೆ ಆನಂದ

ಏವಂ ಬಲಾಢ್ಯಮಮುಮಾಶು ನಿಹತ್ಯ ಭೀಮಃ
ಕೀರ್ತಿಂ ಚ ಧರ್ಮಮಧಿಕಂ ಪ್ರತಿಯಾಸ್ಯತೀಹ ।
ಸರ್ವೇ ವಯಂ ಚ ತಮನು ಪ್ರಗೃಹೀತಧರ್ಮಾ
ಯಾಸ್ಯಾಮ ಇತ್ಯವದದಾಶು ಧರಾಸುರಂ ತಂ ॥೮೦॥

ಇಂತಹ ಬಲಾಢ್ಯನಾದ ಬಕನನ್ನು ಕೊಂದು ಭೀಮ ಬೇಗನೆ ಅಧಿಕ ಕೀರ್ತಿಯನ್ನೂ ಪುಣ್ಯವನ್ನೂ ಗಳಿಸುತ್ತಾನೆ. ನಾವೂ ಅವನಿಗೆ ಸಹಕರಿಸಿ ಪುಣ್ಯಭಾಗಿಗಳಾಗಿ ಕೀರ್ತಿಯನ್ನೂ ಪುಣ್ಯವನ್ನೂ ಗಳಿಸೋಣ ಎಂದು ಕುಂತಿ ಆಲೋಚಿಸಿ ಒಡನೆ ಬ್ರಾಹ್ಮಣನಿಗೆ ಹೇಳಿದಳು.

'ಆಲೋಚಿಸಿ' ಎಂದು ಪದಾಧ್ಯಾಹಾರ ಮಾಡಿ ಅನ್ವಯವನ್ನು ಹೇಳಬೇಕೆಂದು ವಾದಿರಾಜೀಯ ಹೇಳಿದೆ.

ಸಂತಿ ಸ್ಮ ವಿಪ್ರವರ ಪಂಚ ಸುತಾ ಮಮಾದ್ಯ
ತೇಷ್ವೇಕ ಏವ ನರವೈರಿಮುಖಾಯ ಯಾತು ।
ಇತ್ಯುಕ್ತ ಆಹ ಸ ನ ತೇ ಸುತವಧ್ಯಯಾಹಂ
ಪಾಪೋ ಭವಾಮಿ ತವ ಹಂತ ಮನೋಽತಿಧೀರಂ ॥೮೧॥

'ಬ್ರಾಹ್ಮಣೋತ್ತಮ, ನನಗೆ ಈಗ ಐದು ಮಂದಿ ಮಕ್ಕಳಿದ್ದಾರೆ. ಅವರಲ್ಲಿ ಒಬ್ಬ ರಾಕ್ಷಸನ ಬಾಯಿಗೆ ಹೋಗಲಿ', ಎಂದು ಕುಂತಿ ಹೇಳಿದಾಗ ಬ್ರಾಹ್ಮಣನೆಂದ, 'ನಿನ್ನ ಮಗನನ್ನು ಕೊಲ್ಲಿಸಿ ನಾನು ಪಾಪಕ್ಕೆ ಗುರಿಯಾಗಲಾರೆ, ಏನಿದ್ದರೂ ನಿನ್ನದು ಕಲ್ಲೆದೆಯೆ ಸರಿ!'

ಉಕ್ತ್ವೇನ ಮಾಹ ಚ ಪೃಥಾ ತನಯೇ ಮದೀಯೇ
ವಿದ್ಯಾಸ್ತಿ ದಿಕ್ಪತಿಭಿರಪ್ಯವಿಷಹ್ಯರೂಪಾ ।

ಉಕ್ತೋಽಪಿ ನೋ ಗುರುಭಿರೇಷ ನಿಯುಂಕ್ತ ಏತಾಂ
ವಧ್ಯಸ್ತಥಾಪಿ ನ ಸುರಾಸುರಪಾಲಕೈಶ್ಚ ॥೮೨॥

ಬ್ರಾಹ್ಮಣ ಹೀಗೆ ಹೇಳಿದಾಗ ಕುಂತಿ ಹೇಳಿದಳು, 'ನನ್ನ ಮಗನಲ್ಲಿ ದಿಕ್ಪಾಲಕರಾದ ಇಂದ್ರಾದಿ ದೇವತೆಗಳಿಗೂ ಇದಿರಿಸಲಾಗದಂಥ ಮಂತ್ರಬಲವಿದೆ. ಗುರುಗಳು ಹೇಳಿದರೂ ಇವನು ಮಂತ್ರವನ್ನು ಎಂದೂ ಆತ್ಮರಕ್ಷಣೆಗೆ ಬಳಸಿಕೊಳ್ಳುವುದಿಲ್ಲ. ಆದರೂ ದೇವಾಧಿಪತಿಗಳಿಂದಾಗಲಿ ದಾನವೇಂದ್ರರಿಂದಾಗಲಿ ಎಂದೂ ವಧ್ಯನೂ ಆಗುವುದಿಲ್ಲ.

ವಾದಿರಾಜೀಯ ವರದರಾಜೀಯ ಜನಾರ್ದನೀಯಗಳ ಪ್ರಕಾರ 'ಗುರುಗಳು ನಿನ್ನ ಆತ್ಮರಕ್ಷಣೆಗಾಗಿ ಮಂತ್ರವನ್ನು ಬಳಸಿಕೊಳ್ಳೆಂದು ಭೀಮನಿಗೆ ಹೇಳಿಲ್ಲ. 'ಗುರುಭಿರುಕ್ತೋಽಪಿ' ಒಂದುವೇಳೆ ಗುರುಗಳು ಹೇಳಿದರೂ ಅವನು ಬಳಸಿಕೊಳ್ಳುವವನಲ್ಲ. ಏಕೆಂದರೆ ವಿದ್ಯೋಪಜೀವನ ಕ್ಷತ್ರಿಯನಿಗೆ ನಿಷಿದ್ಧ. ಶುದ್ಧ ಕ್ಷಾತ್ರಧರ್ಮನಿಷ್ಠನಾದ ಭೀಮ ತನ್ನ ಬಾಹುಬಲದಿಂದಲೇ ಆತ್ಮರಕ್ಷಣೆ ಮಾಡಿಕೊಳ್ಳುತ್ತಾನೆ. ವಜ್ರಕಾಯನಾದ ಅವನ ಸ್ವಾಭಾವಿಕ ಬಾಹುಬಲವೆಷ್ಟೆಂದರೆ ದೇವಾಧಿಪತಿಗಳಿರಲಿ ದಾನವಾಧಿಪತಿಗಳಿರಲಿ ಯಾರೂ ಅವನನ್ನು ಯುದ್ಧದಲ್ಲಿ ಕೊಲ್ಲಲು ಶಕ್ತರಾಗಲಾರರು. ಅದರಿಂದ ಬಕರಾಕ್ಷಸನ ಬಳಿಗೆ ಇವನನ್ನು ಕಳಿಸಲು ನನಗೇನೂ ಭಯವಿಲ್ಲ' ಎನ್ನುತ್ತಿದ್ದಾಳೆ ಕುಂತಿ.[1]

ತಾಮ್ರಪರ್ಣೀಯ ಪ್ರಕಾರ- ನನ್ನ ಮಗನಲ್ಲಿ ಮಂತ್ರವಿದೆ. ಆದರೂ ಗುರುಗಳು ಹೇಳಿದ್ದಾರೆ. ವಿದ್ಯೋಪಜೀವನ ಧರ್ಮವಲ್ಲ ಎಂದು. ಆದ್ದರಿಂದ ಮಂತ್ರವನ್ನು ಅವನು ಆತ್ಮರಕ್ಷಣೆಗೆ ಬಳಸಿಕೊಳ್ಳುವುದಿಲ್ಲ. ಹಾಗಾದರೆ ಶತ್ರುಗಳಿಗೆ ವಧ್ಯನಾಗಬಹುದೆಂಬ ಭಯಕ್ಕೂ ಅವಕಾಶವಿಲ್ಲ. ಮಂತ್ರವಿದ್ದರೆ ಸಾಕು, ಅದನ್ನು ಪ್ರಯೋಗ ಮಾಡಬೇಕಾಗಿಲ್ಲ, ಮಂತ್ರ ಅವನನ್ನು ಕಾಪಾಡುತ್ತದೆ. ಅದರಿಂದ ಅವನು ದೇವದಾನವರಾರಿಗೂ

---

1. ಗುರುಭಿರುಕ್ತೋಽಪಿ ಏಷ ಭೀಮಃ ಏತಾಂ ವಿದ್ಯಾಂ ನ ನಿಯುಂಕ್ತೇ। ಮಹಾಸಂಕಟೇ ಪ್ರಾಪ್ತೇಽಪಿ ನ ನಿಯುಂಕ್ತೇ। ವಿದ್ಯೋಪಜೀವೀ ನ ಭವತೀತಿ ಭಾವಃ। ತಥಾಪಿ ವಿದ್ಯೋಪ ಜೀವನಾಭಾವೇಽಪಿ ವಧ್ಯೋ ನ। ವಜ್ರಕಾಯತ್ವಾತ್ ಸ್ವಭಾವತ ಏವ ವಧಯೋಗ್ಯೋ ನ। -ವಾದಿರಾಜೀಯ

ಗುರುಭಿರುಕ್ತೋಽಪಿ ಪ್ರೇರಿತೋಽಪಿ ಏತಾಂ ವಿದ್ಯಾಂ ನೋ ನಿಯುಂಕ್ತೇ ನ ಪ್ರಯೋಜಯತಿ। ತಥಾಪ್ಯಪ್ರಯೋಗೇಽಪಿ ಸ್ವಬಾಹುಬಲೇನಾಪಿ...। -ಜನಾರ್ದನೀಯ

ಗುರುಭಿರಸ್ಮದಾದಿಭಿರುಕ್ತೋಽಪಿ ಪ್ರೇರಿತೋಽಪ್ಯೇತಾಂ ಸ್ವಸ್ಮಿನ್ ವಿದ್ಯಮಾನಾಮೇತಾಂ ನೋ ನಿಯುಂಕ್ತೇ। ನ ಪ್ರಯೋಜಯತಿ। ವಿದ್ಯೋಪಜೀವನಸ್ಯ ಶುಭಕ್ಷತ್ರಿಯ ಧರ್ಮತ್ವಾಭಾವತ್ ।
-ವರದರಾಜೀಯ.

ವಧ್ಯನಾಗುವುದಿಲ್ಲ ಎನ್ನುತ್ತಿದ್ದಾಳೆ ಕುಂತಿ.[1] ಈ ವ್ಯಾಖ್ಯಾನದಲ್ಲಿ 'ಮಂತ್ರ ಕಾಪಾಡುತ್ತದೆ' ಎಂದರೆ ಮಂತ್ರದೇವತೆಗಳು ಇಂದ್ರಾದಿಗಳು ಭೀಮನನ್ನು ಕಾಪಾಡುತ್ತಾರೆ ಎಂದರ್ಥವಲ್ಲ. ಎಲ್ಲ ಮಂತ್ರಗಳಿಗೂ ಮುಖ್ಯದೇವತೆಯಾದ ವಿಷ್ಣು ಕಾಪಾಡುತ್ತಾನೆ. ಸ್ವಾಭಾವಿಕ ಬಲವಿದ್ದೇ ಇದೆ. ಜೊತೆಗೆ ಹರಿಯ ಅನುಗ್ರಹ. ಅದರಿಂದ ಭೀಮನಿಗೆ ಎಲ್ಲಿಯೂ ಪರಾಭವವಿಲ್ಲ ಎಂದು ಅಭಿಪ್ರಾಯ.

ಉಕ್ತ್ವೈವಮೇತ್ಯ ನಿಖಿಲಂ ಚ ಜಗಾದ ಭೀಮ-
ಮುದ್ದರ್ಷ ಆಸ ಸ ನಿಶಮ್ಯ ಮಹಾಸ್ವಧರ್ಮಂ।
ಪ್ರಾಪ್ತಂ ವಿಲೋಕ್ಯ ತಮತೀವ ವಿಘೂರ್ಣನೇತ್ರಂ
ದೃಷ್ಟ್ವೈವ ಜಗಾದ ಯಮಸೂನುರುಪೇತ್ಯ ಚಾನ್ಯೈಃ ॥೮೩॥

ಕುಂತಿ ಬ್ರಾಹ್ಮಣನಿಗೆ ಹೀಗೆ ಹೇಳಿ, ಭೀಮನ ಬಳಿಗೆ ಬಂದು ಎಲ್ಲವನ್ನೂ ಹೇಳಿದಳು. ಭೀಮ ತಾಯಿಯ ಮಾತನ್ನು ಕೇಳಿ ತನಗೆ ಮಹತ್ತಾದ ಸ್ವಧರ್ಮಸಾಧನೆಯ ಅವಕಾಶ ಲಭಿಸಿತೆಂದು ತಿಳಿದು ಹಿರಿಹಿರಿ ಹಿಗ್ಗಿದ. ಧರ್ಮರಾಜ ಅರ್ಜುನಾದಿಗಳೊಂದಿಗೆ ಬಂದು ಭೀಮನ ಕಣ್ಣುಗಳು ಹಿಗ್ಗಿನಿಂದ ಸುತ್ತುತ್ತಿರುವುದನ್ನು ಕಂಡು ತಾಯಿಯ ಮುಂದೆ ಪ್ರಶ್ನೆ ಮಾಡಿದ.

ಭೀಮ ಹಿಗ್ಗಿದ್ದು ಬಂಡಿ ಅನ್ನ ಉಣ್ಣುವ ಅವಕಾಶ ಸಿಕ್ಕಿತೆಂದಲ್ಲ. ಅವನಿಗೆ ಉಣ್ಣುವ ಶಕ್ತಿ ಎಷ್ಟೋ ಅಷ್ಟೇ ಉಪವಾಸದ ಶಕ್ತಿಯೂ ಇದೆ. ಅವನು ಹಿಗ್ಗಿದುದು 'ಜಘ್ನೇ ನಿಘ್ನೇನ ವಿಘ್ನೋ' ಎಂದು ಪಂಡಿತಾಚಾರ್ಯರು ಹೇಳುವಂತೆ ಏಕಚಕ್ರನಗರದ ಜನಗಳ ಉಸಿರಿನ ರಕ್ಷಣೆಗಾಗಿ ಪಾಪಿ ಬಕನನ್ನು ಕೊಂದು ಉತ್ತಮ ಕ್ಷಾತ್ರಧರ್ಮವನ್ನು ಮೆರೆಸುವ ಅವಕಾಶ ಸಿಕ್ಕಿತೆಂದು. 'ಕ್ಷತ' ದಿಂದ, ಅಪಾಯದಿಂದ ಪ್ರಜೆಗಳನ್ನು 'ತ್ರ' ಕಾಪಾಡುವವನೇ ನಿಜವಾಗಿ 'ಕ್ಷತ್ರ', ಕ್ಷತ್ರಿಯನೆನಿಸುತ್ತಾನೆ.

ಮಾತಃ ಕಿಮೇಷ ಮುದಿತೋ ನಿತರಾಮಿತಿ ಸ್ಮ
ತಸ್ಮೈ ಚ ಸಾ ನಿಖಿಲಮಾಹ ಸ ಚಾಬ್ರವೀತ್ತಾಂ।
ಕಷ್ಟಂ ತ್ವಯಾ ಕೃತಮಹೋ ಬಲಮೇವ ಯಸ್ಯ
ಸರ್ವೇ ಶ್ರಿತಾ ವಯಮಮುಂ ಚ ನಿಹಂಸಿ ಭೀಮಂ ॥೮೪॥

---

1. ತವ ತನಯೋ ಯದಿ ವಿದ್ಯಾವಾನ್ ತರ್ಹಿ ಕಥಂ ಭಿಕ್ಷುಸ್ತಿಷ್ಠತೀತ್ಯತ ಆಹ ಉಕ್ತ ಇತಿ। ಅಪಿ ತಥಾಪಿ। ವಿದ್ಯೋಪಜೀವನಂ ನ ಧರ್ಮಇತಿ ಗುರುಭಿರ್ಯತ ಉಕ್ತೋಽತ ಏತಾಂ ವಿದ್ಯಾಂ ನೋ ನಿಯುಂಕ್ತ ಇತ್ಯರ್ಥಃ। ವಿದ್ಯಾಯಾ ಅಪ್ರಯೋಗೇ ವಧ್ಯಃ ಸ್ಯಾದಿತ್ಯತ ಆಹ ತಥಾಪೀತಿ। ಸ್ವರೂಪ ಸತೀ ವಿದ್ಯಾ ಪ್ರಯೋಜಿಕಾ। ನ ಪ್ರಯೋಗೋಽಪೇಕ್ಷಿತ ಇತಿ ಭಾವಃ। -ತಾಮ್ರಪರ್ಣೀ.

'ಅಮ್ಮ, ಭೀಮ ಏಕೆ ಬಹಳ ಹಿಗ್ಗಿದ್ದಾನೆ?' ಎಂದು ಧರ್ಮರಾಜ ಕೇಳಿದ. ಆಗ ಕುಂತಿ ಅವನಿಗೆ ಎಲ್ಲವನ್ನೂ ವಿವರಿಸಿದಳು. ಅವನು ಹೇಳಿದ, 'ಆಶ್ಚರ್ಯ! ನೀನೀಗ ಎಂಥ ಅಪಾಯದ ಕಾರ್ಯಕ್ಕೆ ತೊಡಗಿರುವೆ! ಯಾರ ಬಲವನ್ನೇ ನಾವೆಲ್ಲರೂ ಅವಲಂಬಿಸಿರುವೆವೋ ಆ ಭೀಮನನ್ನೇ ಕೊಲ್ಲಿಸುತ್ತಿರುವೆಯಲ್ಲ!

ಯದ್ಬಾಹುವೀರ್ಯಪರಮಾಶ್ರಯತೋ ಹಿ ರಾಜ್ಯ-
ಮಿಚ್ಛಾಮ ಏವ ನಿಖಿಲಾರಿವಧಂ ಸ್ವಧರ್ಮಂ।
ಸೋಽಯಂ ತ್ವಯಾದ್ಯ ನಿಶಿಚಾರಮುಖಾಯ ಮಾತಃ
ಪ್ರಸ್ಥಾಪ್ಯತೇ ವದ ಮಮಾಶು ಕಯೈವ ಬುದ್ಧ್ಯಾ ॥೮೫॥

ಯಾರ ಬಾಹುಬಲದ ಮಹಾ ಅವಲಂಬನೆಯಿಂದಲೆ ನಾವು ರಾಜ್ಯವನ್ನೂ ಸಕಲ ಶತ್ರುಗಳ ನಾಶವನ್ನೂ ಸ್ವಧರ್ಮರಕ್ಷಣೆಯನ್ನೂ ಹೊಂದಲು ಬಯಸಿರುವೆವೋ ಆ ಭೀಮನನ್ನು ಈಗ ರಾಕ್ಷಸನ ಬಾಯಿಗೆ ಕಳಿಸುತ್ತಿರುವೆಯಲ್ಲ! ಬೇಗನೆ ನನಗೆ ಹೇಳು. ಯಾವ ಅಭಿಪ್ರಾಯದಿಂದ ನೀನು ಹೀಗೆ ಮಾಡುತ್ತಿರುವೆ?

ಇತ್ಯುಕ್ತವಂತಮಮುಮಾಹ ಸುಧೀರಬುದ್ಧಿಃ
ಕುಂತೀ ನ ಪುತ್ರಕ ನಿಹಂತುಮಯಂ ಹಿ ಶಕ್ಯಃ।
ಸರ್ವೈಃ ಸುರೈರಸುರಯೋನಿಭಿರಪ್ಯನೇನ
ಚೂರ್ಣೀಕೃತೋ ಹಿ ಶತಶೃಂಗಗಿರಿಃ ಪ್ರಸೂತ್ಯಾಂ ॥೮೬॥

ಧರ್ಮರಾಜ ಹೀಗೆ ಹೇಳಿದಾಗ ಒಳ್ಳೆಯ ಧೈರ್ಯ ತುಂಬಿದ ಹೃದಯದವಳಾದ್ದರಿಂದ ಕುಂತಿ ಹೇಳಿದಳು. ಮಗು, ಭೀಮನನ್ನು ಕೊಲ್ಲಲು ಯಾವ ದೇವತೆಗಳಿಗೂ ಅಸುರ ಜಾತಿಯವರಿಗೂ ಶಕ್ಯವಿಲ್ಲ. ಏಕೆಂದರೆ ಅವನು ಹುಟ್ಟಿದಾಗಲೇ ಶತಶೃಂಗ ಪರ್ವತವನ್ನು ಪುಡಿ ಮಾಡಿದನು.

ಏಷ ಸ್ವಯಂ ಹಿ ಮರುದೇವ ನರಾತ್ಮಕೋಽಭೂತ್
ಕೋ ನಾಮ ಹಂತುಮಿಮಮಾಪ್ತಬಲೋ ಜಗತ್ಸು।
ಇತ್ಯೇವಮಸ್ತ್ವಿತಿ ಸ ತಾಮವದತ್ ಪರೇದ್ಯು-
ರ್ಭೀಮೋ ಜಗಾಮ ಶಕಟೇನ ಕೃತೋರುಭೋಗಃ ॥೮೭॥

'ಭೀಮ ಸಾಕ್ಷಾದ್ ವಾಯುದೇವನೆ ಮಾನವ ಶರೀರಿಯಾಗಿ ಜನಿಸಿದ್ದಾನೆ. ಇವನನ್ನು ಕೊಲ್ಲಲು ಪ್ರಪಂಚದಲ್ಲಿ ಯಾರು ತಾನೆ ಶಕ್ತಿಉಳ್ಳವನಿದ್ದಾನೆ?' ಎಂದಳು ಕುಂತಿ. 'ಹಾಗಾದರೆ ಹಾಗೇ ಆಗಲಿ' ಎಂದ ಧರ್ಮರಾಜ. ಮರುದಿನ ಭೀಮ ಅಭ್ಯಂಗಸ್ನಾನ ಗಂಧಮಾಲ್ಯಧಾರಣಾದಿ ಉತ್ತಮ ಸುಖಭೋಗಗಳನ್ನು ಮಾಡಿ ಮುಗಿಸಿ ಬಂಡಿಯನ್ನು ಹೊಡೆದುಕೊಂಡು ಕಾಡಿಗೆ ಹೊರಟ.

ಬಂಡಿ ಅನ್ನ ಉಂಡ ಭೀಮಸೇನ

ಗತ್ವಾ ತ್ವರನ್ ಬಕವನಸ್ಯ ಸಕಾಶಮಾಶು
ಭೀಮಃ ಸುಪಾಯಸಸುಭಕ್ಷ್ಯಪಯೋಘಟಾದ್ಯೈಃ।
ಯುಕ್ತಂ ಚ ಶೈಲನಿಭಮುತ್ತಮಮನ್ನರಾಶಿಂ
ಸ್ಪರ್ಶಾತ್ ಪುರೈವ ನರಭಕ್ಷಿತುರತ್ತುಮೈಚ್ಛತ್ ॥೮೮॥

ಭೀಮ ಬೇಗನೆ ಬಕಾಸುರನಿದ್ದ ಕಾಡಿನ ಸಮೀಪಕ್ಕೆ ಹೋಗಿ ಒಳ್ಳೆಯ ಪಾಯಸ ಒಳ್ಳೆಯ ಭಕ್ಷ್ಯ, ಕೊಡಗಳಲ್ಲಿ ತುಂಬಿದ ಹಾಲು ಮುಂತಾದವುಗಳಿಂದ ಕೂಡಿದ ಬೆಟ್ಟದಷ್ಟು ಗಾತ್ರದ ಉತ್ತಮ ಅನ್ನದ ರಾಶಿಯನ್ನು ಆ ರಾಕ್ಷಸನ ಸ್ಪರ್ಶವಾಗುವ ಮುನ್ನ ಬೇಗನೆ ಉಣ್ಣಲು ಬಯಸಿದ.

ರಾಕ್ಷಸ ಸ್ಪರ್ಶ ಅನ್ನಕ್ಕೆ ಆಗಕೂಡದು. ತನಗೂ ಆಗಕೂಡದು. ಏಕೆಂದರೆ ತಾನು ಅವನನ್ನು ಆಗಕೊಲ್ಲಬೇಕಾಗುತ್ತದೆ. ಕೊಂದರೆ ಶವಸ್ಪರ್ಶ!

ತೇನೈವ ಚಾನ್ನಸಮಿತೌ ಪರಿಭುಜ್ಯಮಾನ
ಉತ್ಪಾಟ್ಯ ವೃಕ್ಷಮಮುಮಾದ್ರವದಾಶು ರಕ್ಷಃ।
ವಾಮೇನ ಮಾರುತಿರಪೋಹ್ಯ ತದಾ ಪ್ರಹಾರಾನ್
ಹಸ್ತೇನ ಭೋಜ್ಯಮಖಿಲಂ ಸಹಭಕ್ಷ್ಯಮಾದತ್ ॥೮೯॥

ಭೀಮನೇ ಅನ್ನದ ರಾಶಿಯನ್ನು ಉಣಲು ತೊಡಗಿದಾಗ ಬಕರಾಕ್ಷಸ ಮರವನ್ನು ಕಿತ್ತುಹಿಡಿದು ಭೀಮನ ಬಳಿಗೆ ಓಡಿಬಂದ. ಭೀಮ ಎಡಗೈಯಿಂದ ಮರದ ಏಟನ್ನು ತಡೆದ. ಎಲ್ಲ ಅನ್ನವನ್ನೂ ಭಕ್ಷ್ಯ ಸಮೇತವಾಗಿ ಉಂಡ.

ಊರವರು ಉತ್ಸುಕತೆಯಿಂದ ದೂರದಲ್ಲಿ ಎತ್ತರದ ಮರವೇರಿ ನಿಂತು, ಭೀಮ ಉಣ್ಣುವುದನ್ನು ಕಂಡರು. ಆದರೂ ನಂಬಲಿಲ್ಲ. ರಾಕ್ಷಸನೆ ಮಾಯೆಯಿಂದ ಬ್ರಾಹ್ಮಣ ರೂಪು ತಳೆದು ಉಣ್ಣುತ್ತಿದ್ದಾನೆ ಎಂದು ಕೊಂಡರು!

ಬಕಾಸುರ ಸಂಹಾರ

ಪೀತ್ವಾ ಪಯೋಽತ್ವರಿತ ಏನಮವೀಕ್ಷಮಾಣ
ಆಚಮ್ಯ ತೇನ ಯುಯುಧೇ ಗುರುವೃಕ್ಷಶೈಲೈಃ।
ತೇನಾಹತೋಽಥ ಬಹುಭಿರ್ಗಿರಿಭಿರ್ಬಲೇನ
ಜಗ್ರಾಹ ಚೈನಮಥ ಭೂಮಿತಲೇ ಪಿಪೇಷ ॥೯೦॥

ಭೀಮ ರಾಕ್ಷಸನನ್ನು ನೋಡದೆ ಸಾವಧಾನವಾಗಿಯೆ ಹಾಲನ್ನು ಕುಡಿದು ಹಸ್ತ ಪ್ರಕ್ಷಾಲನಾದಿಗಳನ್ನೂ ಮಾಡಿ ಆಚಮನ ಮಾಡಿ ರಾಕ್ಷಸನೊಂದಿಗೆ ಯುದ್ಧ ಮಾಡಿದ.

ರಾಕ್ಷಸ ದೊಡ್ಡ ಮರಗಳಿಂದ ಬಂಡೆಗಲ್ಲುಗಳಿಂದ ಮತ್ತು ಬಹು ಬೆಟ್ಟಗಳಿಂದ ಹೊಡೆದಾಗ ಭೀಮ ಬಾಹುಬಲದಿಂದಲೇ ಅವನನ್ನು ಹಿಡಿದ, ನೆಲದ ಮೇಲೆ ಕೆಡವಿ ಮರ್ದಿಸಿದ.

ಮಹಾಭಾರತದಲ್ಲಿ ಭೀಮ ರಾಕ್ಷಸನನ್ನು ತೃಣೀಕರಿಸಿ, ನೋಡುತ್ತಲೆ ಉಂಡ. ರಾಕ್ಷಸ ಎರಡು ಕೈಗಳಿಂದ ಬೆನ್ನಿಗೆ ಗುದ್ದಿದ. ಆಗಲೂ ಹಿಂತಿರುಗಿ ನೋಡದೇ ಭೀಮ ಉಂಡ.[1] ನೀಲಕಂಠೀ ವ್ಯಾಖ್ಯಾನದಲ್ಲಿ ರಾಕ್ಷಸರು ಉಪದೇವತೆಗಳಾದ್ದರಿಂದ ಅವರ ದರ್ಶನ ಸ್ಪರ್ಶನಗಳು ಭೋಜನಕಾಲದಲ್ಲಿ ನಿಷಿದ್ಧವಲ್ಲ ಎಂದಿದೆ. ಆದರೆ ಉಪದೇವತೆಗಳಲ್ಲಿ ಸೇರುವ ದೇವಾನುಚರರಾದ ರಾಕ್ಷಸರೆ ಬೇರೆ. ಬಕನೊಬ್ಬ ದುಷ್ಟ ರಾಕ್ಷಸ. ಅದರಿಂದ ನಿರ್ಣಯ ಹೇಳುವಂತೆ 'ರಾಕ್ಷಸ ಸ್ಪರ್ಶವಾಗುವ ಮುನ್ನ' ಭೀಮ ಉಂಡ. ರಾಕ್ಷಸ ಎರಡೂ ಕೈಗಳಿಂದ ಮರವನ್ನೆತ್ತಿ ಭೀಮನ ಬೆನ್ನಿಗೆ ಹೊಡೆದಿದ್ದ. ಕರಸ್ಪರ್ಶವಾಗಲಿಲ್ಲ. ಬೆನ್ನಿಗೆ ರಾಕ್ಷಸ ಹೊಡೆಯುತ್ತಿದ್ದರೂ ಭೀಮ ಹಿಂತಿರುಗಿ ನೋಡದೆ ಎಡಗೈಯಿಂದ ತಡೆಯುತ್ತ ಊಟ ಮಾಡಿದ. 'ನೋಡುತ್ತಲೆ' ಉಣಲಿಲ್ಲ ಎಂದಿದೆ ಜನಾರ್ದನೀಯ. 'ಇಕೊ, ರಾಕ್ಷಸ! ನಿನ್ನಪಾಲಿನ ಅನ್ನವನ್ನು ನಾನು ಉಣ್ಣುತ್ತೇನೆ' ಎನ್ನುತ್ತ ಅವನನ್ನು ನೋಡುತ್ತಲೆ ಬೆನ್ನು ಹಾಕಿದ. ಬಳಿಕ ಉಂಡ. ಹಸ್ತಪ್ರಕ್ಷಾಲನಾದಿ ಆದ ಬಳಿಕವೆ ನೋಡಿದ.

ಶ್ರಾದ್ಧಭೋಜನ ಮಾಡುತ್ತಿರುವ ಬ್ರಾಹ್ಮಣ ಪಂಕ್ತಿಯಲ್ಲಿ ಇನ್ನೊಬ್ಬ ಬ್ರಾಹ್ಮಣನ ಸ್ಪರ್ಶ ಮಾಡಿದರೆ ಆ ಅನ್ನವನ್ನು ಬಿಟ್ಟೇಳಬೇಕು. ಹಾಗೇ ಉಂಡರೆ ಎಂಟುನೂರು ಗಾಯತ್ರಿ ಜಪಿಸಬೇಕು. ಇದು ಪ್ರಾಯಶ್ಚಿತ್ತ.[2]

ಆಕ್ರಮ್ಯ ಪಾದಮಪಿ ಪಾದತಲೇನ ತಸ್ಯ
ದೋರ್ಭ್ಯಾಂ ಪ್ರಗೃಹ್ಯ ಚ ಪರಂ ವಿದದಾರ ಭೀಮಃ ।
ಮೃತ್ವಾ ಸ ಚೋರು ತಮ ಏವ ಜಗಾಮ ಪಾಪೋ
ವಿಷ್ಣುರ್ವಿಡೇವ ಹಿ ಶನೈರನಿವೃತ್ತಿ ಚೋಗ್ರಂ ॥೯೧॥

---

1. ತಥಾಪಿ ಪರಿಭೂಯೈನಂ ಪ್ರೇಕ್ಷಮಾಣೋ ವೃಕೋದರಃ ।
ರಾಕ್ಷಸಂ ಭುಂಕ್ತ ಏವಾನ್ನಂ ಪಾಂಡವಃ ಪರವೀರಹಾ ॥
ಅಮರ್ಷೇಣ ತು ಸಂಪೂರ್ಣಃ ಕುಂತೀಪುತ್ರಂ ವೃಕೋದರಂ ।
ಜಘಾನ ಪೃಷ್ಠೇ ಪಾಣಿಭ್ಯಾಂ ಉಭಾಭ್ಯಾಂ ಪೃಷ್ಠತಃ ಸ್ಥಿತಃ ।
ತಥಾ ಬಲವತಾ ಭೀಮಃ ಪಾಣಿಭ್ಯಾಂ ಭೃಶಮಾಹತಃ ।
ನೈವಾವಲೋಕಯಾಮಾಸ ರಾಕ್ಷಸಂ ಭುಂಕ್ತ ಏವ ಸಃ ॥ (ಮಹಾ. ಭಾ. ಆದಿ. 177.36)

2. ಶ್ರಾದ್ಧ ಪಂಕ್ತ್ಯುಪವಿಷ್ಟಸ್ತು ಬ್ರಾಹ್ಮಣೋ ಬ್ರಾಹ್ಮಣಂ ಸ್ಪೃಶೇತ್ ।
ತದನ್ನಮತ್ಯಜನ್ ಭುಕ್ತ್ವಾ ಗಾಯತ್ರ್ಯಷ್ಟಶತಂ ಜಪೇತ್ ॥ -ಕೃಷ್ಣಾಚಾರ್ಯ ಸ್ಮೃತಿಮುಕ್ತಾವಲೀ

ಭೀಮ ಬಕರಾಕ್ಷಸನ ಒಂದು ಕಾಲನ್ನು ತನ್ನ ಕಾಲಿಂದ ಒತ್ತಿ ಹಿಡಿದು ಮತ್ತೊಂದು ಕಾಲನ್ನು ಎರಡು ಕೈಗಳಿಂದ ಹಿಡಿದು ಕುತ್ತಿಗೆವರೆಗೆ ಸೀಳಿದ. ಕೇವಲ ವಿಷ್ಣುದ್ವೇಷಿಯೆ ಆದ ಆ ಪಾಪಿ ಸತ್ತು ಕ್ರಮವಾಗಿ ಪುನರಾವೃತ್ತಿ ರಹಿತವಾದ ಘೋರವಾದ ಮಹಾತಮಸ್ಸನ್ನು ಹೊಂದಿದ.

'ಕೇವಲ ವಿಷ್ಣುದ್ವೇಷಿ' ಎಂದರೆ ಕಂಸಾದಿಗಳಂತೆ ವಿಷ್ಣು ಭಕ್ತಜೀವನಿಂದ ಕೂಡಿರಲಿಲ್ಲ. ಜೀವದ್ವಯಾವೇಶವಿರಲಿಲ್ಲ ಎಂದರ್ಥ. ಅದರಿಂದ ತಮಸ್ಸನ್ನೇ ಹೊಂದಿದ ಎನ್ನಲಾಗಿದೆ -ವಾದಿರಾಜೀಯ.[1]

ಬಕನ ತಮ್ಮ ಮತ್ತು ಇತರ ಪರಿವಾರದವರು ಬಂದು ಭೀಮನಿಗೆ ಶರಣಾದರು. ಭೀಮ ಅವರನ್ನು ಸಂತೈಸಿ ನರಭಕ್ಷಣ ಮಾಡಬೇಡಿರೆಂದು ಎಚ್ಚರಿಸಿದ. ಮುಂದೆ ನಗರದಲ್ಲಿ ಈ ರಾಕ್ಷಸರು ಸೌವ್ಯರಾಗಿ ಓಡಾಡುತ್ತಿದ್ದರು. ಜನರಿಗೆ ಯಾರಿಗೂ ಭಯವೆ ಇರಲಿಲ್ಲ.

ಹತ್ವಾ ತಮಕ್ಷತಬಲೋ ಜಗದಂತಕಂ ಸ
ಯೋ ರಾಕ್ಷಸೋ ನ ವಶ ಆಸ ಜರಾಸುತಸ್ಯ ।
ಭೌಮಸ್ಯ ಪೂರ್ವಮಪಿ ನೋ ಭರತಸ್ಯ ರಾಜ್ಞೋ
ಭೀಮೋ ನ್ಯಧಾಪಯದಮುಷ್ಯ ಶರೀರಮಗ್ರೇ ॥೯೨॥

ಬಕರಾಕ್ಷಸ ಜರಾಸಂಧನಿಗೂ ಮಣಿಯಲಿಲ್ಲ, ನರಕಾಸುರನಿಗೂ ವಶನಾಗಲಿಲ್ಲ, ಭರತರಾಜನಿಗೂ ವಶನಾಗಲಿಲ್ಲ, ಅಂಥ ಲೋಕಕಂಟಕನಾದ ಬಕನನ್ನು ಅಕ್ಷಯ ಬಲಶಾಲಿ ಭೀಮ ಕೊಂದು ಅವನ ಶರೀರವನ್ನು ಏಕಚಕ್ರನಗರದ ಮುಂಭಾಗದಲ್ಲಿ ಇರಿಸಿದ.

ಇಲ್ಲಿ ಭರತನೆಂದರೆ ಶ್ರೀರಾಮನ ತಮ್ಮನಾದ ಭರತನೆಂದು ವರದರಾಜೀಯ ಜನಾರ್ದನೀಯಗಳು ಹೇಳಿವೆ. ತಾಮ್ರಪರ್ಣೀಯದಲ್ಲಿ ಪಾಂಡವರ ವಂಶದ ಒಬ್ಬ ಮೂಲಪುರುಷ ದುಷ್ಯಂತ ಶಕುಂತಲೆಯರ ಮಗನಾಗಿ ಜನಿಸಿದ ಭರತ ಎಂದಿದೆ.

ಭೀಮ ರಾಕ್ಷಸನ ಶವವನ್ನು ಬಂಡಿಯ ಮುಂಭಾಗದಲ್ಲಿ ಇರಿಸಿ ನಗರದ ಮಹಾದ್ವಾರಕ್ಕೆ ಬಂದು ಆ ಬಂಡಿಯನ್ನು ಅಲ್ಲಿ ಬಿಟ್ಟು ಹೋದ ನೆಂದು ಕೆಲವರ ಅಭಿಪ್ರಾಯ. ವಸ್ತುತಃ ಶವವನ್ನು ಬಂಡಿಯ ಮುಂಭಾಗದಲ್ಲಿರಿಸಿ ನಗರದ್ವಾರಕ್ಕೆ ಬಂದ ಬಳಿಕ ಆ ಶವವನ್ನು ದ್ವಾರದಲ್ಲಿ

---

1. ವಿಷ್ಣುದ್ವಿಡೇವೇತ್ಯತ್ರ ಏವ ಶಬ್ದೇನ ಕಂಸಾದಿವಜ್ಜೀವದ್ವಯವಾನ್ನೇತಿ ಸೂಚಿತಂ। -ವಾದಿರಾಜೀಯ

ಇರಿಸಿ ಎತ್ತುಗಳ ಸಮೇತ ಬಂಡಿಯನ್ನು ಬ್ರಾಹ್ಮಣನಿಗೆ ಹಿಂತಿರುಗಿಸಿದನೆಂದು ಮಹಾಭಾರತ ಹೇಳಿದೆ. -ತಾಮ್ರಪರ್ಣೀಯ[1]

ದ್ವಾರ್ಯೇವ ತತ್ ಪ್ರತಿನಿಧಾಯ ಪುರಃ ಸ ಭೀಮಃ
ಸ್ನಾತ್ವಾ ಜಗಾಮ ನಿಜಸೋದರಪಾರ್ಶ್ವಮೇವ।
ಶ್ರುತ್ವಾಸ್ಯ ಕರ್ಮ ಪರಮಂ ತುತುಷುಃ ಸಮೇತಾ
ಮಾತ್ರಾ ಚ ತೇ ತದನು ಭೀತಿಯುತಾಃ ಪುರಸ್ಥಾಃ ॥೯೩॥

ದೃಷ್ಟ್ವೈವ ರಾಕ್ಷಸಶರೀರಮುರು ಪ್ರಭೀತಾ
ಜ್ಞಾತ್ವೈವ ಹೇತುಭಿರಥ ಕ್ರಮಶೋ ಮೃತಂ ಚ।
ವಿಪ್ರಸ್ಯ ತಸ್ಯ ವಚನಾದಪಿ ಭೀಮಸೇನ-
ಭಗ್ನಂ ನಿಶಮ್ಯ ಪರಮಂ ತುತುಷುಶ್ಚ ತಸ್ಮೈ ॥೯೪॥

ಭೀಮಸೇನ ಬಕನ ಶವವನ್ನು ನಗರದ್ವಾರದಲ್ಲಿ ನಿಲ್ಲಿಸಿ ಸ್ನಾನಮಾಡಿ ಸೋದರರ ಬಳಿಗೆ ನಡೆದ. ಅವನು ಮಾಡಿದ ಮಹಾಕಾರ್ಯವನ್ನು ಕೇಳಿ ಅವರೂ ತಾಯಿಯೂ ಬಹಳ ಸಂತೋಷಗೊಂಡರು. ಬಕನ ಬಗ್ಗೆ ಮೊದಲೇ ಭಯಯುಕ್ತರಾಗಿದ್ದ ಪಟ್ಟಣಿಗರು ಅವನ ಶವವನ್ನು ಕಂಡು ಇನ್ನೂ ಭಯಗ್ರಸ್ತರಾದರು. ಕಲ್ಲಿಂದ ಹೊಡೆಯುವುದು ಮುಂತಾದವುಗಳ ಮೂಲಕ ಶವಲಕ್ಷಣಗಳಿಂದ ಕ್ರಮವಾಗಿ ಶವವೆಂದು ನಿರ್ಧರಿಸಿ ಕೊನೆಗೆ ಬ್ರಾಹ್ಮಣನ ಮಾತಿನಿಂದ ಬಕ ಭೀಮನಿಂದ ಹತನಾಗಿರುವನೆಂದೂ ತಿಳಿದು ನಿರ್ಭೀತರಾಗಿ ಭೀಮನ ಬಗ್ಗೆ ಬಹಳ ಸಂತುಷ್ಟರಾದರು.

ಮೊದಲಿಗೆ ಭೀಮನಿಗೆ ಏನು ಅಪಾಯವಾಗುವುದೋ ಎಂದು ಧರ್ಮರಾಜಾದಿಗಳು ಭಯಪಟ್ಟಿದ್ದರು. ಭೀಮ ಬಂದಾಗ ಅವನು ಮಾಡಿದ ಮಹಾಕಾರ್ಯವನ್ನು ಕೇಳಿ ಸಂತೋಷಪಟ್ಟರು. ಅಥವಾ ಬಕಾಸುರನಿಗೆ ಮೊದಲೇ ಭಯಪಟ್ಟಿದ್ದ ಪಟ್ಟಣಿಗರು ಅವನ ದೇಹವನ್ನು ಕಂಡು ಅತ್ಯಂತ ಭೀತರಾದರು. ಅಥವಾ 'ಬಕವಧೆಮಾಡಿದಮೇಲೆ ಪಟ್ಟಣಿಗರು ಭೀಮನಲ್ಲಿ ಭಯಯುಕ್ತರಾದರು' ಕೆಲವರು 'ಬಕವಧೆ ಮಾಡಿದ ಮೇಲೆ

---

1. ಪೂರ್ವಂ ರಾಮಾವತಾರೇ ಭರತಸ್ಯ ಶ್ರೀರಾಮಾನುಜಸ್ಯ ಚಾಪಿ ವಶೇ ನಾಸ। -ವರದರಾಜೀಯ
ಪೂರ್ವಂ ರಾಮಾವತಾರೇ ಭರತಸ್ಯ ಶ್ರೀರಾಮಾನುಜಸ್ಯ ರಾಜ್ಞೋಪಿ ವಶೇ ನಾಸ।
-ಜನಾರ್ದನೀಯ

ಭರತಸ್ಯ ದೌಷ್ಯಂತಿ ಭರತಸ್ಯ। -ತಾಮ್ರಪರ್ಣೀಯ

ಅಗ್ರೇ ಶಕಟಾಗ್ರೇ ತಚ್ಛಕಟಂ ದ್ವಾರಿ ಪ್ರವಿಧಾಯೇತಿ ಕೇಚಿತ್। ವಸ್ತುತಸ್ತು ಶರೀರಂ ಶಕಟಾಗ್ರೇ ವ್ಯಧಾಪಯತ್ ತಚ್ಛಕಟಸ್ಥಂ ಶರೀರಂ ದ್ವಾರಿ ಪ್ರವಿಧಾಯೇತ್ಯರ್ಥಃ। -ತಾಮ್ರಪರ್ಣೀಯ

ಧರ್ಮರಾಜಾದಿಗಳೂ ಭೀಮನಲ್ಲಿ ಭಯಯುಕ್ತರಾದರು' ಎನ್ನುತ್ತಾರೆ.[1]

ಅನ್ನಾತ್ಮಕಂ ಕರಮಮುಷ್ಯ ಚ ಸಂಪ್ರಚಕ್ರುಃ
ಸೋಽಪ್ಯೇನಮಾಶು ನರಸಿಂಹವಪುರ್ಧರಸ್ಯ ।
ಚಕ್ರೇ ಹರೇಸ್ತದನು ಸತ್ಯವತೀಸುತಸ್ಯ
ವಿಷ್ಣೋರ್ಹಿ ವಾಕ್‌ಪ್ರಚುದಿತಾಃ ಪ್ರಯಯುಸ್ತತಶ್ಚ ॥೯೫॥

ಪಟ್ಟಣಿಗರು ಅನ್ನದ ರೂಪದಲ್ಲಿ ಕಪ್ಪವನ್ನು ಭೀಮನಿಗೇ ನೀಡಿದರು. ಭೀಮ ಅದನ್ನು ನರಸಿಂಹರೂಪಧರನಾದ ಹರಿಗೆ ಅರ್ಪಿಸಿದ. ಬಳಿಕ ವೇದವ್ಯಾಸರೂಪನಾದ ಹರಿಯ ಆಜ್ಞೆಯಿಂದ ಪ್ರೇರಿತರಾಗಿ ಪಾಂಡವರು ನಗರದಿಂದ ಮುಂದೆ ನಡೆದರು.

[2]ನಾಗರಿಕರು ಬಕನಿಗೆ ಕೊಡುತ್ತಿದ್ದ ಕಪ್ಪವನ್ನು ಭೀಮನಿಗೆ ಕೊಟ್ಟಾಗ ಭೀಮ ಅದನ್ನು ಆ ಊರಿನ ನರಸಿಂಹದೇವಾಲಯಕ್ಕೆ ಕೊಡಿರಿ. ಅಲ್ಲಿ ತಪ್ಪದೆ ಪೂಜೆ ನಡೆಯಲಿ ಎನ್ನುತ್ತಾನೆ ಎಂದಿದೆ ವಾದಿರಾಜೀಯ. ಜನಾರ್ದನೀಯದಲ್ಲಿಯೂ ಇದೇ ಅಭಿಪ್ರಾಯ ಕಾಣುತ್ತದೆ. ವರದರಾಜೀಯದಲ್ಲಿ ಭೀಮ ಆ ಕಪ್ಪವನ್ನು ತನ್ನೊಳಗಿರುವ ನರಸಿಂಹನಿಗೋ ಅಥವಾ ನಗರದ ದೇವಾಲಯದಲ್ಲಿದ್ದ ನರಸಿಂಹನಿಗೋ ಅರ್ಪಿಸಿದನೆಂದು ಹೇಳಿದೆ.[3]

ವೇದವ್ಯಾಸರ ಮಾತಿನಿಂದ ಪ್ರೇರಿತರಾಗಿ ಪಾಂಡವರು ನಗರದಿಂದ ಮುಂದೆ ನಡೆದರು ಎನ್ನುವ ವಾದಿರಾಜೀಯ ಪ್ರಕಾರ 'ವಾಕ್‌ಪ್ರಚುದಿತಾಃ' ಎಂದು ಪಾಠ. ವೇದವ್ಯಾಸರ ಮಾತಿನಿಂದ ಆನಂದಗೊಂಡು ಪಾಂಡವರು ನಗರದಿಂದ ಮುಂದೆ ನಡೆದರು ಎನ್ನುವ ವರದರಾಜೀಯ ಜನಾರ್ದನೀಯಗಳ ಪ್ರಕಾರ 'ವಾಕ್ ಪ್ರಮುದಿತಾಃ' ಎಂದು ಪಾಠ.

ದ್ರೌಪದೀ ಸ್ವಯಂವರ ಘೋಷಣೆ

ಉತ್ಪತ್ತಿ ಪೂರ್ವಕಕಥಾಂ ದ್ರುಪದಾತ್ಮ ಜಾಯಾ
ವ್ಯಾಸೋ ಹ್ಯನೂಚ್ಯ ಜಗತಾಂ ಗುರುರೀಶ್ವರಶ್ಚ ।

---

1. ಪೂರ್ವಂ ಭೀತಿಯುಕ್ತಾ ಮಾತ್ರಾ ಸಹಿತಾಸ್ತೇ ತದನು ತದಾಗಮನಾನಂತರಂ ಅಸ್ಯ ಪರಮಂ ಕರ್ಮ ಶ್ರುತ್ವಾ ತುತುಷುರಿತ್ಯನ್ವಯಃ। ಬಕಾಸುರ ಭೀತಿಯುಕ್ತಾಃ ಪುರಸ್ಥಾಸ್ತಸ್ಯ ದೇಹಂ ದೃಷ್ಟ್ವಾ ಅತ್ಯಂತ ಭೀತಾ ಇತಿ ವಾ। ತದನು ಬಕವಧಾನಂತರಂ ಪುರಸ್ಥಾ ಭೀಮೇ ಭೀತಿಯುಕ್ತಾ ಇತಿ ಕೇಚಿತ್। ತದನು ತೇ ಪಾರ್ಥಾಃ ಭೀಮೇ ಭೀತಿಯುಕ್ತಾ ಬಭೂವು ರಿತ್ಯನ್ಯೇ। -ತಾಮ್ರಪರ್ಣೀಯ
2. ತದ್ ಗ್ರಾಮಸ್ಥಸ್ಯ ಹರೇರ್ನರಸಿಂಹಸ್ಯ ಪೂಜಾರ್ಥಂ ಕಟ್ಟಲಿಕಾಂ ಚಕ್ರೇ। -ವಾದಿರಾಜೀಯ
3. ನರಸಿಂಹಾವತಾರಸ್ಯ ಹರೇಃ ಸ್ವಸ್ಮಿನ್ ಸ್ಥಿತಸ್ಯ ನಗರೇ ಸ್ಥಿತಸ್ಯೇತಿ ವಾ ಪೂಜಾರ್ಥಂ ಚಕ್ರೇ। -ವರದರಾಜೀಯ

ಯಾತೇತ್ಯಚೋದಯದಥಾಪ್ಯಪರೇ ದ್ವಿಜಾಗ್ರ್ಯಾ ಃ-
ಸ್ತಾನ್ ಬ್ರಾಹ್ಮಣಾ ಇತಿ ಭುಜಿರ್ಭವಿತೇತಿ ಚೋಚುಃ ॥೯೬॥

ಜಗದ್ಗುರುವೂ ಸರ್ವೇಶ್ವರರೂ ಆದ ಶ್ರೀ ವೇದವ್ಯಾಸರು ಪಾಂಡವರಿಗೆ ದ್ರೌಪದಿಯ ಬಗ್ಗೆ ಅವಳ ಉತ್ಪತ್ತಿಯನ್ನು ಮೊದಲುಮಾಡಿ ಎಲ್ಲ ಕಥೆಯನ್ನು ಹೇಳಿ ನೀವು ಸ್ವಯಂವರಕ್ಕೆ ಹೋಗಿರೆಂದು ಹೇಳಿದರು. ಬೇರೆ ಬ್ರಾಹ್ಮಣೋತ್ತಮರೂ ಪಾಂಡವರನ್ನು ಬ್ರಾಹ್ಮಣರೆಂದೇ ತಿಳಿದಿದ್ದರಿಂದ 'ಬನ್ನಿ, ನಾವೆಲ್ಲ ಹೋಗೋಣ, ಭೋಜನ ಲಭಿಸುತ್ತದೆ' ಎಂದರು.

ಪೂರ್ವಂ ಹಿ ಪಾರ್ಷತ ಇಮಾನ್ ಜತುಗೇಹದಗ್ಧಾನ್
ಶ್ರುತ್ವಾತಿದುಃಖಿತಮನಾಃ ಪುನರೇವ ಮಂತ್ರಃ ।
ಯಾಜೋಪಯಾಜಮುಖನಿಃಸೃತ ಏವಮೇಷ
ನಾಸತ್ಯತಾರ್ಹ ಇತಿ ಜೀವನಮೇಷು ಮೇನೇ ॥೯೭॥

ಪಾಂಡವರು ಅರಗಿನ ಮನೆಯಲ್ಲಿ ಸುಟ್ಟವಾರ್ತೆ ಕೇಳಿದಾಗ ದ್ರುಪದ ಮೊದಲಿಗೆ ಮನಸಿನಲ್ಲಿ ಬಹಳ ದುಃಖಿತನಾದ. ಆದರೆ ಬಳಿಕ ಯಾಜೋಪಯಾಜರ ಮುಖದಿಂದ ಬಂದ ಮಂತ್ರ ಹೀಗೆ ಸುಳ್ಳಾಗಲಾರದು ಎಂದುಕೊಂಡು ಪಾಂಡವರು ಬದುಕಿಯೆ ಇರುತ್ತಾರೆ ಎಂದು ನಂಬಿದ.

ಬಹಳ ದುಃಖಿತನಾದ ಎಂದರೆ ತನ್ನ ಔರಸಪುತ್ರರೇ ಮಡಿದಷ್ಟು ದುಃಖಿಪಟ್ಟನೆಂದು ಮಹಾಭಾರತ ಹೇಳಿದೆ.

ದ್ರುಪದರಾಜ ಯಾಜ ಮತ್ತು ಉಪಯಾಜರೆಂಬ ಇಬ್ಬರು ಮುನಿಗಳ ಪೌರೋಹಿತ್ಯದಲ್ಲಿ ಪುತ್ರಕಾಮೇಷ್ಟಿಮಾಡಿದ್ದ. ಆಗ ದ್ರುಪದನ ಅಪೇಕ್ಷೆಯಂತೆ ಯಾಜೋಪಯಾಜರು ದ್ರೋಣನನ್ನು ಕೊಲ್ಲುವ ಒಬ್ಬ ಮಗ ಮತ್ತು ಪಾರ್ಥನಿಗೆ ಕೊಡಲು ಒಬ್ಬಳು ಕನ್ಯೆ ಉದಿಸಲಿ ಎಂದು ಮಂತ್ರಪೂರ್ವಕ ಹೋಮಿಸಿದಾಗ ಯಾಗದ ಕುಂಡದಿಂದಲೆ ಧೃಷ್ಟದ್ಯುಮ್ನನೆಂಬ ಮಗನೂ ದ್ರೌಪದಿ ಎಂಬ ಕನ್ಯೆಯೂ ಜನಿಸಿದ್ದರು. ಹೀಗೆ ಮಂತ್ರ ಮಗನನ್ನೂ ಮಗಳನ್ನೂ ಕೊಟ್ಟಿದೆ ಎಂದಮೇಲೆ ಅದೇ ಮಂತ್ರ ಮಗಳನ್ನು ಪಾರ್ಥನಿಗೆ ಕೊಡಿಸದಿರುತ್ತದೆಯೆ? ಎಂದುಕೊಂಡು ಮನಸಿನಲ್ಲಿ ಪಾರ್ಥ ಬದುಕಿಯೆ ಇರುತ್ತಾನೆ ಎಂದು ನಂಬಿದ್ದ.[1] -ವಾದಿರಾಜೀಯ

ಯತ್ರ ಕ್ವಚಿತ್ ಪ್ರತಿವಸಂತಿ ನಿಲೀನರೂಪಾಃ
ಪಾರ್ಥಾ ಇತಿ ಸ್ಮ ಸ ತು ಫಲ್ಗುನಕಾರಣೇನ ।

---

1. ಪೂರ್ವಂ ದುಃಖಿತಮನಾಃ ಸನ್ ಪುನಃ ಯಾಜೋಪಯಾಜ ಮುಖನಿಃಸೃತ ಏಷ ಮಂತ್ರಃ ಪಾರ್ಥಾಯ ದಾತುಂ ಕನ್ಯಾ ಭೂಯಾದಿತಿ ಮಂತ್ರ ಏವಂ ಜತುಗೃಹಮರಣೇನ ಅಸತ್ಯತಾರ್ಹೋ ನೈವೇತಿ ಹೇತೋಃ ಏಷು ಜೀವನಂ ಮೇನೇ ಇತ್ಯನ್ವಯಃ । -ವಾದಿರಾಜೀಯ

ಚಕ್ರೇ ಸ್ವಯಂವರವಿಘೋಷಣಮಾಶು ರಾಜಾ
ತ್ವನ್ಯೈರಧಾರ್ಯಧನುರೀಶವರಾಚ್ಚ ಚಕ್ರೇ ॥೯೮॥

ಪಾಂಡವರು ಎಲ್ಲಿಯಾದರೂ ಮಾರುವೇಷದಿಂದ ಇರಲೇಬೇಕೆಂದು ಬಗೆದು ದ್ರುಪದರಾಜ ಅರ್ಜುನನ ಸಲುವಾಗಿ ಸ್ವಯಂವರ ಘೋಷಣೆಯನ್ನು ಮಾಡಿದ. ಮತ್ತು ರುದ್ರವರದಿಂದ ಅರ್ಜುನನಿಗೆ ಹೊರತು ಬೇರೆಯವರಿಗೆ ಎತ್ತಲಾಗದ ಧನುಸ್ಸನ್ನು ಸಂಪಾದಿಸಿದ.

ದ್ರುಪದನ ಪುರೋಹಿತನೂ ಶಕುನವಾಕ್ಯದ ಬಲದಿಂದ ಪಾಂಡವರು ಬದುಕಿದ್ದಾರೆ ಎಂದು ಹೇಳಿದ. ಅದರಿಂದ ದ್ರುಪದ ಅರ್ಜುನನನ್ನು ಕರೆಸಿಕೊಳ್ಳುವ ಸಲುವಾಗಿ ರುದ್ರನಿಂದ 'ಕಿಂಧುರ' ಎಂಬ ಬಿಲ್ಲನ್ನು ಪಡೆದ. ಅದಕ್ಕೆ ಕಬ್ಬಿಣದ ತಂತಿಯೆ ಹೆದೆ. ಅರ್ಜುನ ಹೊರತು ಇನ್ನಾರೂ ಹೆದೆಯೇರಿಸಲಾರರೆಂದು ವರಸಹಿತವಾಗಿಯೆ ಶಿವ ಆ ಬಿಲ್ಲನ್ನಿತ್ತಿದ್ದ.

ತತ್ಕಾಲ ಏವ ವಸುದೇವಸುತೋಽಪಿ ಕೃಷ್ಣಃ
ಸಂಪೂರ್ಣನೈಜಪರಿಬೋಧತ ಏವ ಸರ್ವಂ।
ಜಾನನ್ನಪಿ ಸ್ಮ ಹಲಿನಾ ಸಹಿತೋ ಜಗಾಮ
ಪಾರ್ಥಾನ್ನಿಶಮ್ಯ ಚ ಮೃತಾನಥ ಕುಲ್ಯಹೇತೋಃ ॥೯೯॥

ಅದೇ ಸಮಯದಲ್ಲಿ ವಸುದೇವಸುತ ಶ್ರೀಕೃಷ್ಣ ಪರಿಪೂರ್ಣವಾದ ಸ್ವಾಭಾವಿಕವಾದ ಜ್ಞಾನದಿಂದಲೆ ಎಲ್ಲವನ್ನೂ ತಿಳಿದವನಾದರೂ ಪಾಂಡವರು ಸತ್ತರೆಂದು ವಾರ್ತೆಯನ್ನು ಕೇಳಿದೊಡನೆ ಕುಲಧರ್ಮಾಚರಣೆಗಾಗಿ ಬಲರಾಮನೊಂದಿಗೆ ಹಸ್ತಿನಾವತಿಗೆ ನಡೆದ.

ಬಂಧುಗಳು ಸತ್ತಾಗ ಹೋಗಿ ಮಾತನಾಡಿಸಿ ಸಂತೈಸಿ ಬರುವ ಪದ್ಧತಿ ಕುಲೋಚಿತವಾದ ಧರ್ಮ.[1] -ವಾದಿರಾಜೀಯ

ಸಂಪ್ರಾಪ್ಯ ಹಸ್ತಿನಪುರಂ ಧೃತರಾಷ್ಟ್ರಪುತ್ರಾನ್
ಸಂವಂಚಯಂಸ್ತದನುಸಾರಿಕಥಾಶ್ಚ ಕೃತ್ವಾ।
ಭೀಷ್ಮಾದಿಭಿಃ ಪರಿಗತೋಽಪ್ರಿಯವಜ್ಜಗಾಮ
ದ್ವಾರಾವತೀಮುದಿತಪೂರ್ಣಸುನಿತ್ಯಸೌಖ್ಯಃ ॥೧೦೦॥

ಶ್ರೀಕೃಷ್ಣ ಹಸ್ತಿನಾವತಿಗೆ ಬಂದು ಭೀಷ್ಮಾದಿಗಳಿಂದ ಪರಿವೃತನಾಗಿ ಕೌರವರನ್ನು ವಂಚಿಸುವುದಕ್ಕಾಗಿ ತಾನು ಪಾಂಡವರಿಗೆ ಅಪ್ರಿಯನಂತಿದ್ದು ಅದಕ್ಕೆ ಅನುಸಾರಿಯಾದ

---

1. ಕುಲ್ಯ ಹೇತೋಃ ಬಂಧುಷು ಮೃತೇಷು ಸತ್ಸು ಗತ್ವಾ ವಿಚಾರಣಂ ಕಾರ್ಯಮಿತಿ ಕುಲೋಚಿತ ಕರ್ಮಕರಣಾರ್ಥಮಿತ್ಯರ್ಥಃ। -ವಾದಿರಾಜೀಯ

ಮಾತುಗಳನ್ನಾಡಿ ಉದಿತ ಪೂರ್ಣನಿತ್ಯಸುಖಿಉಳ್ಳವನೆ ಆದರೂ ಅಪ್ರಿಯ ಘಟನೆ ಎಂದು ನೊಂದುಕೊಂಡವನಂತೆ ದ್ವಾರಾವತಿಗೆ ಹೊರಟ.

ಭೀಷ್ಮಾದಿಗಳು ಶ್ರೀಕೃಷ್ಣನನ್ನು ಕೂಡಿದರೂ ಅವರು ಪಾಂಡವರನ್ನು ಉಪೇಕ್ಷಿಸಿದರೆಂದು ಅಸಮಾಧಾನಗೊಂಡವನಂತೆ ದ್ವಾರಕೆಗೆ ಹಿಂತಿರುಗಿದ ಎಂದು ತಾಮ್ರಪರ್ಣೀಯ ಹೇಳಿದೆ.

ಸತ್ರಾಜಿತನ ಕೊಲೆ

ತಸ್ಯಾಂತರೇ ಹೃದಿಕಸೂನುರನಂತರಂ ಸ್ವಂ
ಶ್ವಾಫಲ್ಕಬುದ್ಧಿಬಲಮಾಶ್ರಿತ ಇತ್ಯುವಾಚ ।
ಸತ್ರಾಜಿದೇಷ ಹಿ ಪುರಾ ಪ್ರತಿಜಜ್ಞ ಏನಾ-
ಮಸ್ಮತ್ಕೃತೇ ಸ್ವತನಯಾಂ ಮಣಿನಾ ಸಹೈವ ॥೧೦೧॥

ಶ್ರೀಕೃಷ್ಣ ಹಸ್ತಿನಾವತಿಗೆ ಹಿಂತಿರುಗಿ ಬರುವುದರೊಳಗೆ ದ್ವಾರಕೆಯಲ್ಲಿ ಕೃತವರ್ಮ ಅಕ್ರೂರನ ಬುದ್ಧಿಬಲವನ್ನು ಅವಲಂಬಿಸಿ ತನ್ನ ತಮ್ಮನಾದ ಶತಧನ್ವನಿಗೆ ಹೇಳಿದ 'ಈ ಸತ್ರಾಜಿತ ಹಿಂದೆ ತನ್ನ ಮಗಳಾದ ಸತ್ಯಭಾಮೆಯನ್ನು ಸ್ಯಮಂತಕ ಮಣಿಯೊಂದಿಗೆ ನಮಗೇ ಕೊಡುವುದಾಗಿ ಮಾತುಕೊಟ್ಟಿದ್ದ.'

ಸರ್ವಾಂಶ್ಚ ನಃ ಪುನರಸಾವವಮತ್ಯ ಕೃಷ್ಣಾ-
ಯಾದಾತ್ಸುತಾಂ ಜಹಿ ಚ ತಂ ನಿಶಿ ಪಾಪಬುದ್ಧಿಂ ।
ಆದಾಯ ರತ್ನಮುಪಯಾಹಿ ಚ ನೌ ವಿರೋಧೇ
ಕೃಷ್ಣಸ್ಯ ದಾನಪತಿನಾ ಸಹ ಸಾಹ್ಯಮೇಮಿ ॥೧೦೨॥

'ಆದರೆ ಆತ ನಮ್ಮೆಲ್ಲರನ್ನೂ ಕಡೆಗಣಿಸಿ ಮಗಳನ್ನು ಕೃಷ್ಣನಿಗೆ ಕೊಟ್ಟಿದ್ದಾನೆ. ಪಾಪ ಬುದ್ಧಿಯವನಾದ ಅವನನ್ನು ನೀನು ರಾತ್ರಿಕಾಲದಲ್ಲಿ ಕೊಲ್ಲು. ಮಣಿಯನ್ನು ತೆಗೆದುಕೊಂಡು ಬಾ. ಇದರಿಂದ ಕೃಷ್ಣ ನಮ್ಮೊಡನೆ ಯುದ್ಧಕ್ಕೆ ಬಂದರೆ ಅಕ್ರೂರನೊಂದಿಗೆ ನಾನು ನಿನ್ನ ಸಹಾಯಕ್ಕೆ ಇರುತ್ತೇನೆ.'

ಇತ್ಯುಕ್ತ ಆಶು ಕುಮತಿಃ ಸ ಹಿ ಪೂರ್ವದೇಹೇ
ದೈತ್ಯೋ ಯತಸ್ತದಕರೋದಥ ಸತ್ಯಭಾಮಾ ।
ಆನಂದಸಂವಿದಪಿ ಲೋಕವಿಡಂಬನಾಯ
ತದ್ದೇಹಮಸ್ಯ ತಿಲಜೇ ಪತಿಮಭ್ಯುಪಾಗಾತ್ ॥೧೦೩॥

ಕೃತವರ್ಮ ಹೀಗೆಹೇಳಿದಾಗ ದುರ್ಬುದ್ಧಿಯವನಾದ ಶತಧನ್ವ ಬೇಗನೆ ಹಾಗೇ ಮಾಡಿದ. ಏಕೆಂದರೆ ಅವನು ಹಿಂದಿನ ಜನ್ಮದಲ್ಲಿ ದೈತ್ಯ. ಸತ್ಯಭಾಮೆ ಆನಂದಜ್ಞಾನರೂಪಳೆ ಆದರೂ ಲೋಕವಿಡಂಬನೆಗಾಗಿ ಸತ್ರಾಜಿತನ ಮೃತದೇಹವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿರಿಸಿ

ಹಸ್ತಿನಾವತಿಗೆ ಶ್ರೀಕೃಷ್ಣನ ಬಳಿಗೆ ಧಾವಿಸಿ ಬಂದಳು.

ಶ್ರುತ್ವಾ ತದೀಯವಚನಂ ಭಗವಾನ್ ಪುರೀಂ ಸ್ವಾ-
ಮಾಯಾತ ಏವ ತು ನಿಶಮ್ಯ ಮಹೋತ್ಸವಂ ತಂ ।
ಪಾಂಚಾಲರಾಜಪುರುಷೋದಿತಮಾಶು ವೃಷ್ಣಿ-
ವರ್ಯೈರಗಾನ್ಮುಸಲಿನಾ ಸಹ ತತ್ಪುರೀಂ ಚ ॥೧೦೪॥

ಸತ್ಯಭಾಮೆ ಹೇಳಿದ ಮಾತನ್ನು ಕೇಳಿ ಭಗವಾನ್ ಶ್ರೀಕೃಷ್ಣ ತನ್ನ ನಗರಕ್ಕೆ ಹಿಂತಿರುಗಿ ಬಂದ. ಅಷ್ಟರಲ್ಲಿಯೆ ಪಾಂಚಾಲರಾಜನ ದೂತ ಹೇಳಿದ ದ್ರೌಪದೀಸ್ವಯಂವರದ ವಾರ್ತೆಯನ್ನು ಕೇಳಿ ಯಾದವ ಶ್ರೇಷ್ಠರೊಂದಿಗೆ ಬಲರಾಮ ಸಮೇತನಾಗಿ ದ್ರುಪದನ ನಗರಕ್ಕೆ ಹೋದ.

ಪಾಂಚಾಲನಗರದ ಕಡೆಗೆ ಪಾಂಡವರು

ಭೀಮೋಽಪಿ ರುದ್ರವರರಕ್ಷಿತರಾಕ್ಷಸಂ ತಂ
ಹತ್ವಾ ತೃಣೋಪಮತಯಾ ಹರಿಭಕ್ತವಂದ್ಯಃ ।
ಉಷ್ಯಾಥ ತತ್ರ ಕತಿಚಿದ್ದಿನಮಚ್ಯುತಸ್ಯ
ವ್ಯಾಸಾತ್ಮನೋ ವಚನತಃ ಪ್ರಯಯೌ ನಿಜೈಶ್ಚ ॥೧೦೫॥

ಹರಿಭಕ್ತರಿಗೆ ವಂದ್ಯನಾದ ಭೀಮಸೇನ ರುದ್ರದೇವರ ವರದಿಂದ ಸುರಕ್ಷಿತನಾಗಿದ್ದ ಬಕರಾಕ್ಷಸನನ್ನು ತೃಣೇಕರಿಸಿ ಕೊಂದು ಏಕಚಕ್ರನಗರದಲ್ಲಿ ಕೆಲವು ದಿನವಿದ್ದು ವ್ಯಾಸರೂಪಿ ಹರಿಯ ಮಾತಿನಂತೆ ತನ್ನವರೊಂದಿಗೆ ಪ್ರಯಾಣ ಮಾಡಿದ.

[1]ಹಿಂದೆಯೇ ಶ್ಲೋಕದಲ್ಲಿ 'ವೇದವ್ಯಾಸರ ಆಜ್ಞೆಯಂತೆ ಪಾಂಡವರು ದ್ರೌಪದೀ ಸ್ವಯಂವರ ಮಹೋತ್ಸವಕ್ಕೆ ಹೊರಟರೆಂ' ದು ಹೇಳಿಯಾಗಿದೆ. ಪುನಃ ಈ ಶ್ಲೋಕದಲ್ಲಿ ಅದನ್ನೇ ಹೇಳುತ್ತಿದ್ದಾರೆ. ಆದರೂ ಪುನರುಕ್ತಿಯಾಗಿಲ್ಲ. ಏಕೆಂದರೆ ರುದ್ರ ವರಬಲದಿಂದ ರಕ್ಷಿತನಾಗಿದ್ದ ಬಕನನ್ನು ಕೊಂದ ಭೀಮನ ಮಹಾಪ್ರತಾಪ ಬಕವಧಾನಂತರ ಕೆಲವು ದಿನ ಏಕಚಕ್ರದಲ್ಲಿ ಪಾಂಡವರು ವಾಸವಾಗಿದ್ದುದು, ವ್ಯಾಸರಿಗೆ ಭೀಮನ ಮೇಲಿನ ಅತಿಶಯವಾದ ಕೃಪೆ, ಅರ್ಜುನಾದಿಗಳು ಭೀಮನನ್ನೇ ಅನುಸರಿಸುತ್ತಿದ್ದುದು ಇವೆಲ್ಲವನ್ನೂ ವಿಶದವಾಗಿ ತಿಳಿಸುವ ಉದ್ದೇಶದಿಂದ ಈ ಶ್ಲೋಕ ಹೊರಟಿದೆ ಎನ್ನುತ್ತದೆ ವಾದಿರಾಜೀಯ.

---

1. ಪ್ರಯಯುಸ್ತತಶ್ಚೇತಿ ಸಾಮಾನ್ಯೇನ ಪಾಂಡವಯಾತ್ರಾಯಾ ಉಕ್ತತ್ವೇಽಪಿ ರುದ್ರವರ ರಕ್ಷಿತ ಬಕಸ್ಯ ಶಿಕ್ಷಣೇನ ಭೀಮಸ್ಯಾತಿಶಯಿತ ಪ್ರತಾಪಂ ಬಕವಧಾನಂತರಮಪಿ ಕತಿಪಯದಿನೇಷು ತತ್ರೈವ ನಿವಾಸಂ, ವ್ಯಾಸಸ್ಯ ಭೀಮೇಽತಿಶಯಿತಕೃಪಾಂ, ಅರ್ಜುನಾದೀನಾಮಪಿ ಭೀಮಾನುಯಾಯಿತ್ವಂ ಚ ದರ್ಶಯಿತುಂ ಪುನಸ್ತತ್ ಪ್ರಯಾಣಮಾಹ। -ವಾದಿರಾಜೀಯ

ಹೀಗೆ ಕೃಷ್ಣಕಥೆಯನ್ನು ಹೇಳಿ ಮುಂದಿನ ಪಾಂಡವಕಥೆಯನ್ನು ಹೇಳುವುದಕ್ಕೆ ಮೊದಲು ಹಿಂದೆ ನಡೆದ ಕಥೆಯನ್ನು ಪುನಃ ಹೇಳುತ್ತಿದ್ದಾರೆ ಎನ್ನುತ್ತದೆ ವರದರಾಜೀಯ.

ಮಾಂಗಲ್ಯಮೇತದತುಲಂ ಪ್ರತಿಯಾತ ಶೀಘ್ರಂ
ಪಾಂಚಾಲಕಾನ್ ಪರಮಭೋಜನಮತ್ರ ಸಿಧ್ಯೇತ್ ।
ವಿಪ್ರೈರಿತಸ್ತತ ಇತೀರಿತವಾಕ್ಯಮೇತೇ
ಶೃಣ್ವಂತ ಏವ ಪರಿಚಕ್ರಮುರುತ್ತರಾಶಾಂ ॥೧೦೬॥

ಅನುಪಮವಾದ ವಿವಾಹ ಮಂಗಲ ಮಹೋತ್ಸವ ನಡೆಯಲಿದೆ. ಅದರಿಂದ ಬೇಗನೆ ಪಾಂಚಾಲದೇಶಕ್ಕೆ ಬನ್ನಿರಿ. ಅಲ್ಲಿ ಉತ್ತಮವಾದ ಭೋಜನ ಲಭಿಸುವುದು ಎಂದು ಅಲ್ಲಲ್ಲಿ ಬ್ರಾಹ್ಮಣರು ಹೇಳಿದ ಮಾತನ್ನು ಕೇಳುತ್ತ ಪಾಂಡವರು ಉತ್ತರದಿಕ್ಕಿಗೆ ನಡೆದರು.

ಹಿಂದೆಯೇ ಶ್ಲೋಕದಲ್ಲಿ ಏಕಚಕ್ರದ ಬ್ರಾಹ್ಮಣರು 'ಬನ್ನಿ ಭೋಜನ ಲಭಿಸುವುದೆಂ'ದು ಹೇಳಿದ್ದಾರೆ. ಈ ಶ್ಲೋಕದಲ್ಲಿ ದಾರಿಯಲ್ಲಿ ಜೊತೆ ಸೇರುವ ಬ್ರಾಹ್ಮಣರು ಅದನ್ನು ಹೇಳುತ್ತಿದ್ದಾರೆ ಅದರಿಂದ ಅಲ್ಲಲ್ಲಿ ಬ್ರಾಹ್ಮಣರು ಹೇಳಿದರು ಎಂದಿದೆ ಎನ್ನುತ್ತದೆ ವಾದಿರಾಜೀಯ.[1]

ಮಹಾಭಾರತದಲ್ಲಿ ಏಕಚಕ್ರನಗರದ ಹೊರವಲಯದಿಂದ ನಗರದೊಳಗೆ ಬಂದು ಅಲ್ಲಿಯೂ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಪಾಂಡವರು ವಾಸವಿದ್ದರು. ಅಲ್ಲಿಗೆ ಒಬ್ಬ ಬ್ರಾಹ್ಮಣ ಬಂದು ದ್ರೌಪದೀ ಸ್ವಯಂವರದ ಬಗ್ಗೆ ಎಲ್ಲ ವಿವರವನ್ನೂ ಹೇಳುತ್ತಾನೆ. ಆಗ ಪಾಂಡವರು ದ್ರೌಪದಿಯನ್ನೇ ಚಿಂತಿಸುತ್ತ ಅಸ್ವಸ್ಥಮನಸ್ಕರಾದರು. ಇದನ್ನು ನೋಡಿ ಕುಂತಿ 'ನಾವು ಇಲ್ಲಿ ಪ್ರೇಕ್ಷಣೀಯ ಸ್ಥಳವನ್ನೆಲ್ಲ ನೋಡಿದ್ದಾಯಿತು. ಭಿಕ್ಷಾಟನೆಯನ್ನೂ ಬಹುವಾಗಿಮಾಡಿದ್ದೇವೆ. ಇನ್ನು ಹೆಚ್ಚು ಭಿಕ್ಷೆ ಸಿಗಲಾರದು. ಪಾಂಚಾಲ ದೇಶಕ್ಕೆ ಹೋಗೋಣ' ಎನ್ನುತ್ತಾಳೆ. ಅಷ್ಟರಲ್ಲಿ ವೇದವ್ಯಾಸರೂ ಬಂದು ಸ್ವಯಂವರಕ್ಕೆ ಹೋಗಲು ಆದೇಶ ನೀಡುತ್ತಾರೆ. ಒಡನೆ ಸ್ವಯಂವರಕ್ಕಾಗಿ ಪ್ರಯಾಣ ಮಾಡುತ್ತಿರುವ ಬ್ರಾಹ್ಮಣರನ್ನು ಕಂಡು ಅವರ ಜೊತೆ ಸೇರುತ್ತಾರೆ.

ಷಣ್ಣಾಂ ಚ ಮಧ್ಯಗಮುದೀರ್ಣಭುಜಂ ವಿಶಾಲ-
ವಕ್ಷಸ್ಥಲಂ ಬಹುಲಪೌರುಷಲಕ್ಷಣಂ ಚ ।

---

1. ತದ್ಗ್ರಾಮೀಣಜನಾನಾಂ ವಚನಸ್ಯ ಭುಜಿರ್ಭವಿತೇತಿ ಪ್ರಾಗೇವೋಕ್ತತ್ವಾತ್ ಇತಸ್ತತೋ ವಿಪ್ರೈರುದೀರಿತಮಿತ್ಯುಕ್ತಂ । -ವಾದಿರಾಜೀಯ

ದೃಷ್ಟೈವ ಮಾರುತಿಮಸಾವುಪಲಪ್ಸ್ಯತೀಹ
ಕೃಷ್ಣಾಮಿತಿ ಸ್ಮ ಚ ವಚಃ ಪ್ರವದಂತಿ ವಿಪ್ರಾಃ ॥೧೦೭॥

ಆರು ಜನರ ಮಧ್ಯದಲ್ಲಿ ಮಹಾಬಾಹು ವಿಶಾಲವಕ್ಷಃಸ್ಥಳ ಮತ್ತು ಮಹಾಪೌರುಷಲಕ್ಷಣಗಳಿಂದ ಒಪ್ಪುವ ಭೀಮನನ್ನು ಕಂಡು ಇವನೇ ದ್ರೌಪದಿಯನ್ನು ಪಡೆಯುತ್ತಾನೆ ಎಂದು ಬ್ರಾಹ್ಮಣರು ಹೇಳಿದರು.

'ಬ್ರಾಹ್ಮಣರೇ, ನಾವೂ ದ್ರೌಪದೀ ಸ್ವಯಂವರಕ್ಕೆ ಹೊರಟಿದ್ದೇವೆ. ನಿಮ್ಮ ಜೊತೆಗೆ ನಾವೂ ಬರುತ್ತೇವೆ' ಎಂದು ಧರ್ಮರಾಜ ಹೇಳಿದಾಗ ಬ್ರಾಹ್ಮಣರು ಹೇಳಿದರು, 'ನೀವು ಐವರೂ ಒಂದೇ ಆಕಾರದಲ್ಲಿ ಸುಂದರರಾಗಿರುವಿರಿ. ನಿಮ್ಮಲ್ಲಿ ಒಬ್ಬರನ್ನು ಅವಳು ವರಿಸಬಹುದು.'

'ನಿಮ್ಮಲ್ಲಿಯೂ ಈತನೊಬ್ಬ ಮಹಾಬಲಶಾಲಿ ಸುಂದರವಾಗಿ ಕಾಣುತ್ತಾನೆ. ಇವನೆ ದ್ರೌಪದಿಯನ್ನು ಪಡೆಯಬಹುದು' ಎಂದು ಭೀಮನನ್ನು ತೋರಿಸಿ ಹೇಳುತ್ತಾರೆ.

ಚಿತ್ರರಥ 'ಅಂಗಾರವರ್ಣ'ನಾದಃ

ರಾತ್ರೌ ದಿವಾ ಚ ಸತತಂ ಪಥಿ ಗಚ್ಛಮಾನಾಃ
ಪ್ರಾಪುಃ ಕದಾಚಿದಥ ವಿಷ್ಣುಪದೀಂ ನಿಶಾಯಾಂ ।
ಸರ್ವಾಂಶ್ಚ ರಕ್ಷಿತುಮಗಾದಿಹ ಪೃಷ್ಠತಶ್ಚ
ಭೀಮೋಽಗ್ರ ಏವ ಶತಮನ್ಯುಸುತೋಽಂತರೇಽನ್ಯೇ ॥೧೦೮॥

ರಾತ್ರಿ ಹಗಲು ಎಡೆಬಿಡದೆ ದಾರಿ ನಡೆಯುತ್ತ ಪಾಂಡವರು ಒಂದು ರಾತ್ರಿ ಗಂಗಾನದಿಯ ಬಳಿಗೆ ಬಂದರು. ಆಗ ಎಲ್ಲರ ರಕ್ಷಣೆಗಾಗಿ ಹಿಂದಿನಿಂದ ಭೀಮ ನಡೆಯುತ್ತಿದ್ದ, ಮುಂದೆ ಅರ್ಜುನ. ನಡುವೆ ಇತರರು ನಡೆಯುತ್ತಿದ್ದರು.

ಇನ್ನು ಎಪ್ಪತ್ತೈದೇ ದಿನಗಳಿವೆ. ಬಳಿಕ ಪುಷ್ಯಮಾಸ ಶುಕ್ಲಪಕ್ಷದಲ್ಲಿ ರೋಹಿಣೀ ನಕ್ಷತ್ರದಲ್ಲಿ ಸ್ವಯಂವರವೆಂದು ಘೋಷಿಸಲಾಗಿದೆ. ಅದಕ್ಕೆ ಪಾಂಡವರು ರಾತ್ರಿಹಗಲು ಎಡೆಬಿಡದೆ ದಾರಿ ನಡೆದರು.

ಪ್ರಾಪ್ತೇ ತದೋಲ್ಮುಕಧರೇಽರ್ಜುನ ಏವ ಗಂಗಾಂ
ಗಂಧರ್ವರಾಜ ಇಹ ಚಿತ್ರರಥೋಽರ್ಧರಾತ್ರೇ ।
ದೃಷ್ಟ್ವೈವ ವಿಪ್ರರಹಿತಾನುದಕಾಂತರಸ್ಥಃ
ಕ್ಷತ್ತ್ರಾತ್ಮಜಾ ಇತಿ ಹಿ ಧರ್ಷಯಿತುಂ ಸ ಚಾಗಾತ್ ॥೧೦೯॥

ಉರಿವ ಕೊಳ್ಳಿಯನ್ನು ಹಿಡಿದಿದ್ದ ಅರ್ಜುನ ಗಂಗೆಯ ಬಳಿಗೆ ಬಂದಾಗ ಅಲ್ಲಿ ನೀರಲ್ಲಿದ್ದ

ಚಿತ್ರರಥನೆಂಬ ಗಂಧರ್ವ ಅರ್ಧರಾತ್ರಿಯಲ್ಲಿ, ಜೊತೆಗೆ ಬ್ರಾಹ್ಮಣರೂ ಇಲ್ಲದೆ ಬರುತ್ತಿದ್ದ ಪಾಂಡವರನ್ನು ಕಂಡು ಕ್ಷತ್ರಿಯರೆಂದು ಅವರನ್ನು ಆಕ್ರಮಿಸಲು ತೊಡಗಿದ.

ಪತ್ನೀಸಮೇತರಾಗಿ ಇಲ್ಲದ ಕಾರಣ ಮತ್ತು ಸಮಾವರ್ತನವಾಗಿರುವ ಕಾರಣ ಆಶ್ರಮಹೀನರು, ಅಗ್ನಿಹೋತ್ರವಿಲ್ಲದವರು, ನೀವು, ನಿಮ್ಮ ಜೊತೆಗೆ ಬ್ರಾಹ್ಮಣರೂ ಇಲ್ಲ. ಇಂಥವರನ್ನು ಗಂಧರ್ವ ಯಕ್ಷಾದಿಗಳು ಸುಲಭವಾಗಿ ಆಕ್ರಮಿಸಬಹುದು ಎಂದು ತೋರಿಸಲು ನಾನು ನಿಮ್ಮನ್ನು ಆಕ್ರಮಿಸಲು ಬಂದೆ ಎನ್ನುತ್ತಾನೆ ಚಿತ್ರರಥ. ಗಂಗಾನದಿಯ ಆ ಪ್ರದೇಶದಲ್ಲಿ ಉಭಯಪಾರ್ಶ್ವದ ಕಾಡು ಅವನದು. ಅಲ್ಲಿ ಅವನು ಸ್ತ್ರೀಯರೊಂದಿಗೆ ಅರ್ಧರಾತ್ರಿ, ಅಷ್ಟಮೀ ಚಂದ್ರ ಅಸ್ತಂಗತನಾಗಿದ್ದಾಗ ಜಲಕ್ರೀಡೆ ಮಾಡುತ್ತಿದ್ದ. ಪಾಂಡವರು ಅದಕ್ಕೆ ವಿಘ್ನಕಾರಿಗಳೆಂದು ಕುಪಿತನಾದ. ಸ್ವತಃ ಬ್ರಹ್ಮಚರ್ಯ ಉಳ್ಳವರಾಗಿರಬೇಕು, ಇಲ್ಲವೆ ಬ್ರಾಹ್ಮಣರ ಜೊತೆಗೆ ಪ್ರಯಾಣ ಮಾಡಬೇಕು. ಎರಡೂ ಇಲ್ಲದಿದ್ದರೆ ಆ ಕಾಲದಲ್ಲಿ ಪ್ರಯಾಣ ಮಾಡುವವರನ್ನು ಪರಾಭವಗೊಳಿಸಬಹುದೆಂದು ಗಂಧರ್ವನ ಎಣಿಕೆಯಾಗಿತ್ತು.

[1]ಜೊತೆಗೆ ಬಂದ ಬ್ರಾಹ್ಮಣರಲ್ಲಿ ಹೆಚ್ಚಿನವರು ನದೀತೀರದಲ್ಲಿ ಮಲಗಿದ್ದರು. ಕೆಲವರು ಕತ್ತಲಲ್ಲಿ ಸ್ವಲ್ಪ ದೂರದಲ್ಲಿದ್ದುದರಿಂದ ಜೊತೆಗೆ ಬ್ರಾಹ್ಮಣರಿರಲಿಲ್ಲ ಎಂದಿದೆ. -ವಾದಿರಾಜೀಯ

ಹಂತಾಸ್ಮಿ ವೋ ಹ್ಯುಪಗತಾನುದಕಾಂತಮಸ್ಯಾ
ನದ್ಯಾಶ್ಚ ಮರ್ತ್ಯಚರಣಾಯ ನಿಷಿದ್ಧಕಾಲೇ ।
ಇತ್ಥಂ ವದಂತಮಮುಮಾಹ ಸುರೇಂದ್ರಸೂನು-
ರ್ಗಂಧರ್ವ ನಾಸ್ತ್ರವಿದುಷಾಂ ಭಯಮಸ್ತಿ ತೇಽದ್ಯ ॥೧೧೦॥

ಮಾನವರು ಸಂಚರಿಸಲು ನಿಷಿದ್ಧವಾದ ಈ ರಾತ್ರಿಕಾಲದಲ್ಲಿ ನದೀ ನೀರಿನ ಬಳಿಗೆ ಬಂದಿರುವ ನಿಮ್ಮನ್ನು ನಾನು ಕೊಲ್ಲುವೆನೆಂದು ಗಂಧರ್ವ ನುಡಿದಾಗ ಅರ್ಜುನನೆಂದ 'ಗಂಧರ್ವ! ಅಸ್ತ್ರಗಳನ್ನು ಬಲ್ಲ ನಮಗೆ ನಿನ್ನ ಭಯವಿಲ್ಲ'.

'ನನ್ನ ನೀರಾಟಕ್ಕೆ ಅಡ್ಡಿಯಾಗುವಿರೆಂ'ದು ಹೇಳದೆ ಅದನ್ನು ಮುಚ್ಚಿಟ್ಟು 'ನೀವು ನಿಮಗೆ ನಿಷಿದ್ಧವಾದ ಅರ್ಧರಾತ್ರಿಯಲ್ಲಿ ಬಂದು ನದೀಸ್ಪರ್ಶ ಮಾಡುತ್ತಿರುವಿರಿ' ಎಂದು ಗಂಧರ್ವ ಆಕ್ಷೇಪಿಸುತ್ತಿದ್ದಾನೆ!

---

1. ಸಹಾಗತಾನಾಂ ವಿಪ್ರಾಣಾಮಂಧಕಾರವಶಾತ್ ಕಿಂಚಿದ್ದೂರಸ್ಥತ್ವಾತ್ ತಥಾ ನಿದ್ರಾವಶಾತ್ ಕ್ವಚಿನ್ನಿದ್ರಿತತ್ವಾದ್ವಾ ವಿಪ್ರರಹಿತಾನಿತ್ಯುಕ್ತಂ। -ವಾದಿರಾಜೀಯ

ವಸ್ತುತಃ ಗಂಗಾನದೀ ಜಲಸ್ಪರ್ಶಕ್ಕೆ ನಿಷಿದ್ಧ ಕಾಲವೆ ಇಲ್ಲ-

ಭುಕ್ತೋ ವಾಪ್ಯಥವಾऽ ಭುಕ್ತೋ ರಾತ್ರಾವಹನಿ ಖೇಚರ।
ನ ಕಾಲ ನಿಯಮೋ ಹ್ಯಸ್ತಿ ಗಂಗಾಂ ಪ್ರಾಪ್ಯ ಸರಿದ್ವರಾಂ ॥
(ಆದಿ 186-17)

ಭೋಜನವಾಗಿರಲಿ, ಇಲ್ಲದಿರಲಿ, ರಾತ್ರಿ ಇರಲಿ, ಹಗಲು ಇರಲಿ, ನದಿಗಳಲ್ಲಿ ಶ್ರೇಷ್ಠವಾದ ಗಂಗೆ ಸಿಕ್ಕಿದಾಗ ಸ್ನಾನಕ್ಕೆ ಕಾಲ ನಿಯಮವಿಲ್ಲ ಎನ್ನುತ್ತಾನೆ ಅರ್ಜುನ. ಇದು ಗಂಧರ್ವನಿಗೆ ತಿಳಿದಿಲ್ಲವೆಂದಲ್ಲ. ಅವನು ಒಡ್ಡುವ ಕುಂಟು ನೆಪ ಇದು.

ಪಾಂಡವರು ಗಂಗಾತೀರಕ್ಕೆ ಬಂದ ಕಾಲ ಮಾನವರಿಗೆ ಸಂಚಾರಕ್ಕೆ ನಿಷಿದ್ಧವಾಗಿತ್ತೆನ್ನಲು ಮಹಾಭಾರತ ಕೊಡುವ ಕಾರಣ ಪ್ರಚಲಿತಪಾಠದಲ್ಲಿ ಹೀಗಿದೆ -

ಸಂಧ್ಯಾ ಸಂರಜ್ಯತೇ ಘೋರಾ ಪೂರ್ವರಾತ್ರಾಗಮೇಷು ಯಾ।
ಅಶೀತಿಭಿರ್ಮವೈರ್ಹೀನಂ ತನ್ಮುಹೂರ್ತಂ ಪ್ರಚಕ್ಷತೇ ॥
(ಆದಿ186.8)

'ಸಾಯಂಕಾಲದಲ್ಲಿ ಸೂರ್ಯಮಂಡಲ ಅರ್ಧಮುಳುಗಿರುವಾಗ ನಲವತ್ತು ನಿಮಿಷಗಳ ಬಳಿಕ ಯಕ್ಷಾದಿಗಳ ಸಂಚಾರಕಾಲ. ಮನುಷ್ಯರಿಗೆ ನಿಷಿದ್ಧ'ವೆಂದು ನೀಲಕಂಠೀ ವ್ಯಾಖ್ಯಾನ. ಆದರೆ ಅಲ್ಲಿಯೆ ಮೊದಲಿಗೆ ಅರ್ಧರಾತ್ರಿಯಲ್ಲಿ ಚಂದ್ರಾಸ್ತಮಯ ಕಾಲದಲ್ಲಿ ಪಾಂಡವರು ಗಂಗಾತೀರಕ್ಕೆ ಬಂದರು ಎಂದಿದೆ. ಉರಿವ ಕೊಳ್ಳಿಯನ್ನು ಹಿಡಿದು ಬರುತ್ತಿದ್ದಾರೆ ಎಂದೂ ಹೇಳಿದೆ. ಅದರಿಂದ ಪ್ರಚಲಿತ ಪಾಠ ಸರಿಯಲ್ಲ. ಲಕ್ಷಾಲಂಕಾರದಲ್ಲಿ ಹಿಡಿದ ಪಾಠ ಹೀಗಿದೆ-

ಸಂಧ್ಯಾ ಸಂರಜ್ಯತೇ ಘೋರಾ ಪೂರ್ವರಾತ್ರಾಗಮೇಷು ಯಾ।
ಅಶೀತಿತ್ರುಟಿಭಿರ್ಹೀನಾನ್ ತ್ರೀನ್ ಮುಹೂರ್ತಾನ್ ಪ್ರಚಕ್ಷತೇ॥

ಅಮಾವಾಸ್ಯಾ ಅಷ್ಟಮೀ ಮುಂತಾದ ಪರ್ವದಿನಗಳಲ್ಲಿ ಮಧ್ಯರಾತ್ರಿ ಎಂಬ ಸಂಧ್ಯಾಕಾಲ ಆರು ಘಳಿಗೆ ಗಂಧರ್ವಯಕ್ಷರಾಕ್ಷಸರುಗಳ ಸಂಚಾರಕಾಲ, ಮಾನವರಿಗೆ ನಿಷಿದ್ಧ. ಆ ಆರುಘಳಿಗೆಯಲ್ಲಿಯೂ ನಡುವಿನ ಎರಡುಗಳಿಗೆಗಳ ಒಟ್ಟು ನೂರಿಪ್ಪತ್ತು ತ್ರುಟಿಗಳು, ಅವುಗಳಲ್ಲಿಯೂ ನಡುವಿನ ಅರವತ್ತು ತ್ರುಟಿರೂಪದ ಘಳಿಗೆಯ ಜೊತೆಗೆ ಅದರ ಹಿಂದಿನ ಹತ್ತು ತ್ರುಟಿ ಮುಂದಿನ ಹತ್ತು ತ್ರುಟಿ ಹೀಗೆ ಒಟ್ಟು ಎಂಬತ್ತು ತ್ರುಟಿ ಮಹಾ ನಿಷಿದ್ಧ. ಅದಕ್ಕಿಂತ ಹಿಂದಿನ ಎರಡುಗಳಿಗೆ ಇಪ್ಪತ್ತು ತ್ರುಟಿಯೂ ಮುಂದಿನ ಎರಡುಗಳಿಗೆ ಇಪ್ಪತ್ತು ತ್ರುಟಿಯೂ ನಿಷಿದ್ಧ. ಮಧ್ಯರಾತ್ರಿ ಹನ್ನೊಂದುಗಂಟೆ

ನಲವತ್ತೈದು ನಿಮಿಷಗಳಿಂದ ಹನ್ನೆರಡು ಗಂಟೆ ಹದಿನೈದು ನಿಮಿಷಗಳವರೆಗಿನ ಸಂಧ್ಯಾಕಾಲ ಘೋರವೆಂದಾಯಿತು. ಈ ವೇಳೆಯಲ್ಲಿಯೂ ಗಂಗಾನದೀ ಸ್ನಾನ ಮಾಡಬಹುದು ಎನ್ನುತ್ತಾನೆ ಅರ್ಜುನ. ನಂದಗೋಪ ಈ ವೇಳೆಯಲ್ಲಿ ಯಮುನಾ ಸ್ನಾನ ಮಾಡಿದಾಗ ವರುಣದೂತರು ಅವನನ್ನು ಒಯ್ದರೆಂದು ಭಾಗವತ ಹೇಳಿದೆ.

ಸರ್ವಂ ಹಿ ಫೇನವದಿದಂ ಬಹುಲಂ ಬಲಂ ತೇ
ನಾರ್ಥಪ್ರದಂ ಭವತಿ ಚಾಸ್ತ್ರವಿದಿ ಪ್ರಯುಕ್ತಂ ।
ಇತ್ಯುಕ್ತವಂತಮಮುಮುತ್ತಮಯಾನಸಂಸ್ಥೋ
ಬಾಣಾನ್ ಕ್ಷಿಪನ್ನಭಿಸಸಾರ ಸುರೇಂದ್ರಭೃತ್ಯಃ ॥೧೧೧॥

'ನಿನ್ನ ಸಮಸ್ತ ಮಹಾಬಲವೂ ಕೂಡ ಅಸ್ತ್ರಜ್ಞರಾದ ನಮ್ಮ ಮೇಲೆ ಪ್ರಯೋಗಿಸಿದಾಗ, ಬಂಡೆಗಲ್ಲಿನ ಮೇಲೆ ನೀರಿನ ನೊರೆಯಂತೆ ಏನೂ ಪ್ರಯೋಜನವಾಗದು.' ಹೀಗೆ ಅರ್ಜುನ ಹೇಳಿದಾಗ ಆ ಗಂಧರ್ವ ಉತ್ತಮವಾದ ರಥದಲ್ಲಿ ನಿಂತು ಬಾಣ ಎಸೆಯುತ್ತ ಪಾಂಡವರ ಮೇಲೇರಿ ಬಂದ.

ಆಗ್ನೇಯಮಸ್ತ್ರಮಭಿಮಂತ್ರ್ಯ ತದೋಲ್ಮುಕೇ ಸ
ಚಿಕ್ಷೇಪ ಶಕ್ರತನಯೋಽಸ್ಯ ರಥಶ್ಚ ದಗ್ಧಃ ।
ತಂ ಚಾಗ್ನಿನಾ ಪರಿಗೃಹೀತಮಭಿಪ್ರಗೃಹ್ಯ
ಕೇಶೇಷು ಸಂಚಕರ್ಷಾಶು ಸುರೇಂದ್ರಸೂನುಃ ॥೧೧೨॥

ಆಗ ಅರ್ಜುನ ಕೊಳ್ಳಿಯಲ್ಲಿ ಆಗ್ನೇಯಾಸ್ತ್ರವನ್ನು ಅಭಿಮಂತ್ರಿಸಿ ಎಸೆದ. ಗಂಧರ್ವನ ರಥ ಸುಟ್ಟುಹೋಯಿತು. ಅಗ್ನಿಯಿಂದ ಆವೃತನಾದ ಗಂಧರ್ವನನ್ನು ಕೂದಲುಗಳಲ್ಲಿ ಹಿಡಿದು ಸೆಳೆದ, ಅರ್ಜುನ.

ಪಾರ್ಥೇನ ಸಂಧರ್ಷಿತಃ ಶರಣಂ ಜಗಾಮ
ಧರ್ಮಾತ್ಮಜಂ ತಮಪಿ ಸೋಽಥ ನಿಜಾಸ್ತ್ರಮುಗ್ರಂ ।
ಸಂಜಹ್ರ ಏವ ತತ ಆಸ ಚ ನಾಮತೋಽಸಾ-
ವಂಗಾರವರ್ಣ ಇತಿ ವರ್ಣವಿಪರ್ಯಯೇಣ ॥೧೧೩॥

ಅರ್ಜುನನಿಂದ ಆಕ್ರಮಿಸಲ್ಪಟ್ಟ ಚಿತ್ರರಥ ಧರ್ಮರಾಜನನ್ನೂ ಅರ್ಜುನನ್ನೂ ಶರಣಾದ. ಆಗ ಅರ್ಜುನ ತನ್ನ ಭಯಂಕರ ಅಸ್ತ್ರವನ್ನು ಉಪಸಂಹರಿಸಿದ. ಚಿತ್ರರಥನ ಮೈಬಣ್ಣ ವ್ಯತ್ಯಾಸವಾದ್ದರಿಂದ ಅವನು ಅಂಗಾರವರ್ಣ ಎಂಬ ಹೆಸರು ಪಡೆದ.

ಅರ್ಜುನನಿಗೆ ಅವನು ದೇವೇಂದ್ರನ ಅವತಾರವಾದ್ದರಿಂದ ಗಂಧರ್ವರ ಮೇಲೆ ಪ್ರೀತಿ. ಅದರಿಂದ ಆತ ಚಿತ್ರರಥನನ್ನು ಆಕ್ರಮಿಸಿದ್ದೂ

ಸೆಳೆದುದೂ ಬಹಳ ಮೆತ್ತಗೆ ಹೊರತು ಜೋರಾಗಿ ಅಲ್ಲ ಅದರಿಂದ ಸುಟ್ಟು ಬೂದಿಯಾಗದೆ ಉಳಿದ ಎಂದು ಸೂಚಿಸಲು ಹಿಂದಿನ ಶ್ಲೋಕದಲ್ಲಿ ಸಂಚಕರ್ಷ ಎಂಬುದು ಸಂಚಕರ್ಷ ಎಂದೂ ಈ ಶ್ಲೋಕದಲ್ಲಿ 'ಸಂಧರ್ಷಿತ' ಎಂಬುದು ಸಂಧರ್ಷಿತ ಎಂದೂ ಶಿಥಿಲವಾದುದು ಬಹಳ ಅರ್ಥಪೂರ್ಣವಾಗಿದೆ ಎಂದು ವಾದಿರಾಜೀಯದಲ್ಲಿ ಹೇಳಿದೆ. ಚಿತ್ರರಥ ಆ ಆಕ್ರಮಣ ಮಾಡಿದ್ದೂ ಕೂಡ ಬ್ರಾಹ್ಮಣ ಪುರೋಹಿತರಿಲ್ಲದ ಕ್ಷತ್ರಿಯರನ್ನು ಹೀಗೇ ಯಕ್ಷರಾಕ್ಷಸ ಗಂಧರ್ವಾಧಿಗಳು ಪೀಡಿಸುತ್ತಾರೆ. ಅದರಿಂದ ಒಬ್ಬ ಪುರೋಹಿತನನ್ನು ವರಿಸಿರಿ ಎಂದು ಹೇಳುವುದಕ್ಕಾಗಿ ಹೊರತು ಪಾಂಡವರನ್ನು ಪೀಡಿಸುವುದು ಆವನ ಉದ್ದೇಶವಾಗಿರಲಿಲ್ಲ.(ಆದಿ. 186.62)

ಮಹಾಭಾರತದಲ್ಲಿ ಚಿತ್ರರಥನ ಹೆಂಡತಿ ಕುಂಭೀನಸಿ ಧರ್ಮರಾಜನನ್ನು ಶರಣಾಗುತ್ತಾಳೆ. ಆಗ ಧರ್ಮರಾಜನ ಮಾತಿನಂತೆ ಅರ್ಜುನ ಗಂಧರ್ವನನ್ನು ಬಿಟ್ಟು ಬಿಡುತ್ತಾನೆ. ಆದರೆ,

ಜಿತೋಽಹಂ ಪೂರ್ವಕಂ ನಾಮ ಮುಂಚಾಮ್ಯಂಗಾರಪರ್ಣತಾಂ।

(ಆದಿ 186.38)

'ನಾನು ಸೋತಿದ್ದೇನೆ. ನನ್ನ ಹಿಂದಿನ 'ಅಂಗಾರಪರ್ಣ' ಎಂಬ ಹೆಸರನ್ನು ಬಿಟ್ಟುಕೊಡುತ್ತೇನೆ' ಎನ್ನುತ್ತಾನೆ. 'ಪರ್ಣ' ಎಂದರೆ ರಥ. ರಥ ಸುಟ್ಟು ಬೂದಿಯಾಗಿ ಹೋದ್ದರಿಂದ ಬೆಂಕಿಯಂತೆ ಹೊಳೆವ ರಥ ಉಳ್ಳವ ಎಂಬ ಅರ್ಥದ 'ಅಂಗಾರಪರ್ಣ' ನಾಮ ಹೊರಟುಹೋಯಿತು ಎಂದರ್ಥ. ನಿರ್ಣಯದಲ್ಲಿ 'ಅಂಗಾರವರ್ಣ' ನಾಮ ಬಂದಿತೆನ್ನಲಾಗಿದೆ.

ವಸ್ತುತಃ ಲಕ್ಷ್ಮಾಲಂಕಾರ ಪ್ರಕಾರ 'ಅಂಗಾರವರ್ಣತಾಂ' ಎಂದೇ ಮಹಾಭಾರತ ಪಾಠ. ಗಂಧರ್ವನಿಗೆ ಹಿಂದೆಯೆ ಚಿತ್ರರಥ, ಅಂಗಾರವರ್ಣ ಎಂದು ಎರಡೂ ಹೆಸರುಗಳಿದ್ದವು. ಅವುಗಳಲ್ಲಿ ಮೊದಲನೆ ನಾಮವಾದ ಚಿತ್ರರಥ ಎಂಬುದನ್ನು ಬಿಡುತ್ತೇನೆ. ಏಕೆಂದರೆ ರಥ ಸುಟ್ಟುಹೋಯಿತು. ಅಂಗಾರವರ್ಣ ಎಂಬ ನಾಮವನ್ನು ಮಾತ್ರ ಉಳಿಸಿಕೊಳ್ಳುತ್ತೇನೆ ಎಂದರ್ಥ ಲಕ್ಷ್ಮಾಲಂಕಾರದಲ್ಲಿ ಇದೆ.[1]

---

1. ತ್ವಯಾ ಜಿತೋಽಹಂ ಜನಸಂಸದಿ ನ ಶ್ಲಾಘ್ಯಂ ಯಶೋಹೀನಂ ಚ ಚಿತ್ರರಥ ಇತಿ ಪೂರ್ವಕಂ ನಾಮ ಮುಂಚಾಮಿ। ತ್ವದಸ್ತ್ರೇಣ ದಗ್ಧರಥಸ್ಯ ಮಮ ಚಿತ್ರರಥತ್ವಂ ಹಾಸ್ಯಮಿತಿ ಭಾವಃ। ಸ್ವನಾಮ್ನಾ ಅಂಗಾರವರ್ಣತಾಂ ಅಂಗಾರವರ್ಣಾಖ್ಯತಾಂ ನ ಮುಂಚಾಮೀತ್ಯರ್ಥಾನುಸಾರಾನ್ನಞಧ್ಯಾಹಾರೇಣ ಕ್ರಿಯಾವೃತ್ತಿಃ। -ಲಕ್ಷ್ಮಾಲಂಕಾರ.

ಗಂಧರ್ವನಿಗೆ ಆಗ್ನೇಯಾಸ್ತ್ರೋಪದೇಶ

ಗಂಧರ್ವ ಉಲ್ಬಣಸುರಕ್ತತನುಃ ಸ ಭೂತ್ವಾ
ಸ್ವರ್ಣಾವದಾತ ಉತ ಪೂರ್ವಮುಪೇತ್ಯ ಸಖ್ಯಂ ।
ಪಾರ್ಥೇನ ದುರ್ಲಭಮಹಾಸ್ತ್ರಮಿದಂ ಯಯಾಚೇ
ಜಾನನ್ನಪಿ ಸ್ಮ ನ ಹಿ ತಾದೃಶಮೇಷ ವೇದ ॥೧೦೪॥

ಗಂಧರ್ವ ಹಿಂದೆ ಬಂಗಾರದಂಥ ಸ್ವಚ್ಛವರ್ಣದವನಿದ್ದು ಈಗ ಕಡು ಕೆಂಪಾದ ಮೈಯವನಾಗಿ ಅರ್ಜುನನೊಡನೆ ಸಖ್ಯಮಾಡಿಕೊಂಡು ದುರ್ಲಭವಾದ ಮಹಾ ಆಗ್ನೇಯಾಸ್ತ್ರವನ್ನು ಬೇಡಿದ. ಅದನ್ನು ಅವನು ಮೊದಲೆ ತಿಳಿದಿದ್ದರೂ ಅರ್ಜುನನು ತಿಳಿದಂತೆ ತಿಳಿದಿರಲಿಲ್ಲ.

ಬಂಗಾರದಂತೆ ಹೊಳೆಯುತ್ತಿದ್ದರೂ ಅಂಗಾರವರ್ಣ ಎಂದೇ ಹಿಂದೆ ಹೆಸರಿದ್ದಿತು. ಇದೀಗ ಮೈ ಅಂಗಾರದಂತೆ ಕಡುಕೆಂಪಾದ್ದರಿಂದ ಈ ಅಂಗಾರವರ್ಣನಾಮ ಸಾರ್ಥಕವಾಯಿತು. ಇನ್ನೊಂದು ಹೆಸರು ಚಿತ್ರರಥ ಎಂಬುದು ಈಗ ರಥ ಸುಟ್ಟಮೇಲೆ ನಿರರ್ಥಕವಾದ್ದರಿಂದ ಅದನ್ನು ಬಿಡುತ್ತಿದ್ದೇನೆ ಎಂಬ ಅಭಿಪ್ರಾಯ ಮಹಾಭಾರತಕ್ಕೆ ಎನ್ನಬೇಕು. ಆದರಿಂದ ನಿರ್ಣಯದಲ್ಲಿ 'ಅಂಗಾರವರ್ಣ' ಎಂಬ ಹೆಸರು ಪಡೆದ ಎಂಬ ಮಾತಿಗೆ 'ಅಂಗಾರವರ್ಣ ಎಂಬ ಹೆಸರಿಗೆ ಸಾರ್ಥಕತೆಯನ್ನು ಪಡೆದ' ಎಂದು ಅಭಿಪ್ರಾಯ ಹೇಳಬೇಕು.

ಗಂಧರ್ವ ಅರ್ಜುನನ ಅಸ್ತ್ರವಿದ್ಯೆಗೆ ಮಾರುಹೋಗಿ ಅದನ್ನು ಉಪದೇಶಿಸಲು ಬೇಡಿಕೊಂಡ. ಆಗ್ನೇಯಾಸ್ತ್ರ ಅವನಿಗೂ ಗೊತ್ತು. ಆದರೆ ಮಂತ್ರಶಕ್ತಿ ಗುರುವಿನ ತಪಸ್ಸಿಗೆ, ಮಂತ್ರಸಾಧನೆಗೆ ಅನುಗುಣವಾಗಿರುತ್ತದೆ. ಅರ್ಜುನ ಅದನ್ನು ಚೆನ್ನಾಗಿ ಸಾಧಿಸಿಕೊಂಡಿದ್ದ. ಗಂಧರ್ವ ಅವನಿಂದ ಪುನಃ ಉಪದೇಶ ಪಡೆದು ಸಾಧಿಸಿಕೊಳ್ಳಲು ಬಯಸಿದ. ಇದು ಮುಂದಿನ ಶ್ಲೋಕದಲ್ಲಿ ಸ್ಪಷ್ಟವಾಗುತ್ತದೆ.

ವಿದ್ಯಾ ಸುಶಿಕ್ಷಿತತಮಾ ಹಿ ಸುರೇಂದ್ರ ಸೂನೌ
ತಾಮಸ್ಯ ಚಾವದದಸಾವಪಿ ಕಾಲತೋಽಸ್ಮೈ ।
ಗಂಧರ್ವಗಾಮವದದನ್ವಗದೃಶ್ಯವಿದ್ಯಾಂ
ಪಶ್ಚಾದಿತಿ ಸ್ಮ ಪುರುಹೂತಸುತಸ್ಯ ವಾಕ್ಯಾತ್ ॥೧೦೫॥

ಅರ್ಜುನನಲ್ಲಿ ಆಗ್ನೇಯಾಸ್ತ್ರವಿದ್ಯೆ ಬಲು ಚೆನ್ನಾಗಿ ಸಾಧಿತವಾಗಿತ್ತು. ಅದನ್ನು ಅವನು ಗಂಧರ್ವನಿಗೆ ಉಪದೇಶಿಸಿದ. ಗಂಧರ್ವನೂ ಗಂಧರ್ವರಲ್ಲಿರುವ ಅದೃಶ್ಯ ವಿದ್ಯೆಯನ್ನು

ಅರ್ಜುನನಿಗೆ ಕಾಲಾಂತರದಲ್ಲಿ ಉಪದೇಶಿಸಿದ. ಏಕೆಂದರೆ ಕಾಲಾಂತರದಲ್ಲಿಯೇ ನಾನು ಅದನ್ನು ಸ್ವೀಕರಿಸುವೆನೆಂದು ಅರ್ಜುನ ನುಡಿದ.

ಅದೃಶ್ಯವಿದ್ಯೆ ಎಂದರೆ ಮೂಲೋಕದಲ್ಲಿರುವ ಯಾವುದೇ ಅದೃಶ್ಯ ವಸ್ತುವನ್ನು ಒಂದೆಡೆ ಕುಳಿತಲ್ಲಿಯೆ ಪ್ರತ್ಯಕ್ಷ ಕಾಣಲು ಬಯಸಿದರೆ ಅದು ಪ್ರತ್ಯಕ್ಷ ಕಾಣುತ್ತದೆ. ಇದಕ್ಕೆ ಚಾಕ್ಷುಷೀವಿದ್ಯೆ ಎಂದು ಹೆಸರು ಮಹಾಭಾರತದಲ್ಲಿ ಇದೆ. (ಆದಿ 186.45)

ಆಧಿಕ್ಯತಃ ಸ್ವಗತಸಂವಿದ ಏವ ಸಾಮ್ಯೇ
ನೈವೇಚ್ಛತಿ ಸ್ಮ ನಿಮಯಂ ಸ ಧನಂಜಯೋಽತ್ರ ।
ಧರ್ಮಾರ್ಥಮೇವ ಸ ತು ತಾಂ ಪರಿದಾಯ ತಸ್ಮೈ
ಕಾಲೇನ ಸಂವಿದಮಮುಷ್ಯ ಚ ಧರ್ಮತೋಽಯಾತ್ ॥೧೧೬॥

ಅರ್ಜುನ ತನ್ನಲ್ಲಿರುವ ವಿದ್ಯೆ ಹೆಚ್ಚು ಶ್ರೇಷ್ಠವಾದ್ದರಿಂದ ಇಬ್ಬರ ವಿದ್ಯೆಗಳಲ್ಲಿ ಸಾಮ್ಯವಿದ್ದರೆ ಮಾತ್ರ ಶಕ್ಯವಾಗುವಂಥ ವಿನಿಮಯವನ್ನು ಒಪ್ಪಲಿಲ್ಲ. ಅದರಿಂದ ಧರ್ಮಾರ್ಥವಾಗಿಯೆ ಅದನ್ನು ಗಂಧರ್ವನಿಗೆ ನೀಡಿ ಸ್ವಲ್ಪ ಕಾಲ ಕಳೆದ ಬಳಿಕ ಅವನ ವಿದ್ಯೆಯನ್ನು ಧರ್ಮಾರ್ಥವಾಗಿಯೆ ಪಡೆದ.

ಗಂಧರ್ವ ಅರ್ಜುನನಿಗೆ ತಾನು ಅದೃಶ್ಯವಿದ್ಯೆ ನೀಡುತ್ತೇನೆ. ನೀನು ನನಗೆ ಅದಕ್ಕೆ ಪ್ರತಿಯಾಗಿ ಆಗ್ನೇಯಾಸ್ತ್ರ ನೀಡು. ಪರಸ್ಪರ ವಿನಿಮಯ ಮಾಡಿಕೊಳ್ಳೋಣ ಎಂದ. ಅರ್ಜುನ ಒಪ್ಪಲಿಲ್ಲ. ವಿದ್ಯೆಗಳು ಎರಡೂ ಸಮಾನವಾಗಿದ್ದರೆ ಮಾತ್ರ ವಿನಿಮಯ ಸಾಧ್ಯ. ನಳಚಕ್ರವರ್ತಿ ಋತುಪರ್ಣರಾಜನಿಗೆ ಅಶ್ವವಿದ್ಯೆಯನ್ನು ನೀಡಿದ, ಅವನಿಂದ ದ್ಯೂತವಿದ್ಯೆ ಪಡೆದ. ಇದು ವಿನಿಮಯ. ಪ್ರಕೃತದಲ್ಲಿ ಅರ್ಜುನನ ಆಗ್ನೇಯಾಸ್ತ್ರಕ್ಕೆ ಗಂಧರ್ವನ ಅದೃಶ್ಯವಿದ್ಯೆ ಸಮಾನವಲ್ಲ. ಬಹಳ ಅಲ್ಪ. ಅದರಿಂದ ಅರ್ಜುನ ಅಸ್ತ್ರವನ್ನು ಧರ್ಮಾರ್ಥವಾಗಿ ನೀಡಿದ. ಅಂದರೆ ಪರೋಪಕಾರಜನ್ಯ ಪುಣ್ಯ ಲಾಭಕ್ಕಾಗಿ ನೀಡಿದ. ಅದಕ್ಕೆ ಗುರುದಕ್ಷಿಣೆಯಾಗಿ ಗಂಧರ್ವ ಐವರು ಪಾಂಡವರಿಗೆ ಪ್ರತಿಯೊಬ್ಬರಿಗೂ ನೂರು ನೂರು ದೇವಗಂಧರ್ವ ಜಾತಿಯ ಅಶ್ವಗಳನ್ನು ನೀಡಿದ. ಬಳಿಕ ಕಾಲಾಂತರದಲ್ಲಿ ಅರ್ಜುನ ಗಂಧರ್ವನ ಅದೃಶ್ಯ ವಿದ್ಯೆಯನ್ನು ಧರ್ಮಾರ್ಥವಾಗಿಯೆ ಸ್ವೀಕರಿಸಿದ. ಅಂದರೆ ಗೃಹಸ್ಥ ಯತಿಗೆ ಭಿಕ್ಷೆ ನೀಡಿದರೆ ಗೃಹಸ್ಥನಿಗೇ ಹೇಗೆ ಪುಣ್ಯವೋ ಹಾಗೇ ಗಂಧರ್ವನಿಗೆ ವಿದ್ಯಾದಾನಜನ್ಯವಾದ ಪುಣ್ಯ ಲಭಿಸಿತು. ವಿದ್ಯಾದಾನವಾಗಲಿ ಸ್ವೀಕಾರವಾಗಲಿ ಪುಣ್ಯಕ್ಕಾಗಿಯೇ ಮಾಡಬೇಕು ಹೊರತು ವ್ಯಾಪಾರಿ ಬುದ್ಧಿಯಿಂದ ವಿನಿಮಯ ಮಾಡುವುದು ಪ್ರಶಸ್ತವಲ್ಲ. ಅದರಿಂದಲೂ

ಅರ್ಜುನ ವಿನಿಮಯಕ್ಕೆ ಒಪ್ಪಲಿಲ್ಲ ಎಂದು ವಾದಿರಾಜೀಯ ಹೇಳಿದೆ.[1]

ಧೌಮ್ಯರು ಪುರೋಹಿತರಾದರು

ಪಾರ್ಥೇನ ಸೋಽಪಿ ಬಹುಲಾಶ್ಚ ಕಥಾಃ ಕಥಿತ್ವಾ
ಧೌಮ್ಯಸ್ಯ ಸಂಗ್ರಹಣಮಾಹ ಪುರೋಹಿತತ್ವೇ ।
ದಾಸ್ಯಾಮಿ ದಿವ್ಯತುರಗಾನಿತಿ ಸೋಽರ್ಜುನಾಯ
ವಾಚಂ ನಿಗದ್ಯ ದಿವಮಾರುಹದಪ್ಯಗುಸ್ತೇ ॥೧೧೭॥

ಗಂಧರ್ವ ಅರ್ಜುನನೊಡನೆ ಬಹಳ ಸಂಭಾಷಣೆ ನಡೆಸಿ ಧೌಮ್ಯರನ್ನು ಪೌರೋಹಿತ್ಯಕ್ಕೆ ಸ್ವೀಕರಿಸಿರೆಂದು ಸಲಹೆ ನೀಡಿದ. ಅರ್ಜುನನಿಗೆ ದಿವ್ಯವಾದ ದೇವಲೋಕದ ಕುದುರೆಗಳನ್ನು ಕೊಡುವೆನೆಂದು ಮಾತುಕೊಟ್ಟು ಅಂತರಿಕ್ಷಕ್ಕೆ ಏರಿದ. ಬಳಿಕ ಪಾಂಡವರು ಮುಂದೆ ನಡೆದರು.

ಚಿತ್ರರಥ ಅರ್ಜುನನೊಡನೆ ಬಹುಸಂಭಾಷಣೆ ಮಾಡುತ್ತ ತಾಪತ್ಯಾಖ್ಯಾನ ವಸಿಷ್ಠಾಖ್ಯಾನ ಮುಂತಾದ ಅನೇಕ ಕಥೆಗಳನ್ನು ಹೇಳುತ್ತಾನೆ. ಸೂರ್ಯನ ಮಗಳಾದ ತಪತಿಯನ್ನು ಚಂದ್ರವಂಶದ ಸಂವರಣರಾಜ ಬಯಸಿ ವಸಿಷ್ಠರ ಪೌರೋಹಿತ್ಯ ಪ್ರಭಾವದಿಂದ ಅವಳನ್ನು ಮದುವೆಯಾಗಿ ಕುರುವಂಶದ ಮೂಲಪುರುಷನಾದ ಕುರುರಾಜನನ್ನು ಮಗನನ್ನಾಗಿ ಪಡೆಯುತ್ತಾನೆ. ನೀವೂ ದ್ರೌಪದೀ ಸ್ವಯಂವರಕ್ಕೆ ಹೊರಟಿದ್ದೀರಿ. ಸಂವರಣನಂತೆ ಒಬ್ಬ ತಪಸ್ವಿ ಬ್ರಾಹ್ಮಣ ಪುರೋಹಿತನನ್ನು ಮುಂದೆ ಮಾಡಿಕೊಂಡು ಹೋಗಿರಿ. ಇಲ್ಲಿಯೆ ಮುಂದೆ ಉತ್ಕೋಚಕವೆಂಬ ತೀರ್ಥದ ಬಳಿ ಧೌಮ್ಯನೆಂಬ ಮುನಿ ಇದ್ದಾನೆ. ದೇವಲನ ತಮ್ಮನಾದ ಈತ ಬೃಹಸ್ಪತಿಯಂತೆ ಮಹಾಜ್ಞಾನಿ, ತಪಸ್ವಿ, ಅವನನ್ನು ಪುರೋಹಿತನನ್ನಾಗಿ ವರಿಸಿರಿ ಎಂದು ಹೇಳಿ ಗಂಧರ್ವ ಹೊರಟು ಹೋಗುತ್ತಾನೆ.

ತೇ ಧೌಮ್ಯಮಾಪ್ಯ ಚ ಪುರೋಧಸಮುತ್ತಮಜ್ಞಂ
ವಿಪ್ರಾತ್ಮಜೋಪಮತಯಾ ವಿವಿಶುಃ ಪುರಂ ಚ ।
ಪಾಂಚಾಲಕಸ್ಯ ನಿಖಿಲಾಂ ದದೃಶುಶ್ಚ ತತ್ರ
ಮೂರ್ಧಾಭಿಷಿಕ್ತಸಮಿತಿಂ ಸಮಲಂಕೃತಾಂ ಚ ॥೧೧೮॥

---

1. ಅತ್ರಾಸ್ಮಿನ್ ಸಮಯೇ ಧರ್ಮಾರ್ಥಮೇವ ಪ್ರತ್ಯುಪಕಾರಂ ವಿನಾ ದಾನೇನ ಸ್ವಸ್ಯ ಪುಣ್ಯಸಿದ್ಧ್ಯರ್ಥಮೇವ ತಾವದ್ಗ್ನಿವಿದ್ಯಾಂ ತಸ್ಮೈ ಪರಿದಾಯ ಅಮುಷ್ಯ ಗಂಧರ್ವಸ್ಯ ಧರ್ಮತಃ ಪುಣ್ಯಾಯ। ಯತೇರ್ಭಿಕ್ಷಾದಾತುರ್ಗೃಹಸ್ಥಸ್ಯೇವ ಸ್ವಸ್ಯಾಸ್ತ್ರದಾನೇನ ತಸ್ಯೈವ ಪುಣ್ಯದಾನಾಯೇತಿ ಯಾವತ್। ಏಕಂ ತಸ್ಮೈ ದತ್ತ್ವಾ ತಸ್ಮಾದೇಕಸ್ಯ ಗ್ರಹಣೇ ವಣಿಜ ಇವ ಪುಣ್ಯಂ ಚ ನಾಸ್ತಿ ಅತೋ ಹೇತುದ್ವಯೇನಾಪಿ ವಿನಿಮಯಂ ನೈಚ್ಛತ್ । -ವಾದಿರಾಜೀಯ

ಪಾಂಡವರು ಉತ್ತಮ ಜ್ಞಾನಿಯಾದ ಧೌಮ್ಯನನ್ನು ಪುರೋಹಿತನನ್ನಾಗಿ ಪಡೆದು ಬ್ರಾಹ್ಮಣಕುಮಾರರಂಥ ವೇಷದಿಂದ ದ್ರುಪದನ ನಗರವನ್ನು ಪ್ರವೇಶಿಸಿದರು. ಅಲ್ಲಿ ಅಲಂಕೃತವಾದ ಸರ್ವರಾಜರ ಸಮೂಹವನ್ನು ಕಂಡರು.

ದ್ರೌಪದೀ ಸ್ವಯಂವರ ಮಂಟಪ

ರಾಜನ್ಯಮಂಡಲಮುದೀಕ್ಷ್ಯ ಸುಪೂರ್ಣಮತ್ರ
ಕೃಷ್ಣಾಂ ಪ್ರಗೃಹ್ಯ ಸಹಜಃ ಪ್ರಗೃಹೀತಮಾಲಾಂ ।
ತೇಷಾಂ ಚ ಮಧ್ಯಮಗಮತ್ ಕುಲವೀರ್ಯಸಂಪ-
ದ್ಯುಕ್ತಾಂ ವಿಭೂತಿಮಥ ಚಾಹ ಸಮಸ್ತರಾಜ್ಞಾಂ ॥೧೧೯॥

ತುಂಬಿದ ರಾಜರ ಸಭೆಯನ್ನು ಕಂಡು ಸ್ವಯಂವರ ಮಾಲೆಯನ್ನು ಹಿಡಿದ ದ್ರೌಪದಿಯನ್ನು ಒಡಹುಟ್ಟಿದ ಧೃಷ್ಟದ್ಯುಮ್ನ ಕರೆತಂದು ರಾಜರ ಮಧ್ಯಕ್ಕೆ ನಡೆದ. ಎಲ್ಲ ರಾಜರ ಕುಲವೀರ್ಯ ಸಂಪತ್ತನ್ನೂ ಧನ ಸಂಪತ್ತನ್ನೂ ಅವಳಿಗೆ ವರ್ಣಿಸಿದ.

ಹೆಣ್ಣಾನೆ ಮೇಲೆ ದ್ರೌಪದಿಯೂ, ಕುದುರೆ ಏರಿ ಧೃಷ್ಟದ್ಯುಮ್ನನೂ ಸ್ವಯಂವರ ಸಭೆಗೆ ಬಂದರು. ಹೋಮ ಸ್ವಸ್ತಿವಾಚನಗಳಾದ ಬಳಿಕ ಧೃಷ್ಟದ್ಯುಮ್ನ ದ್ರೌಪದಿಗೆ ಕನ್ಯಾರ್ಥಿಗಳಾಗಿ ಬಂದಿದ್ದ ಜರಾಸಂಧ ಶಿಶುಪಾಲ ಕರ್ಣ ದುರ್ಯೋಧನಾದಿ ಸಕಲ ರಾಜರ ಕುಲವೀರ್ಯಸಂಪತ್ತು ಮುಂತಾದುವನ್ನು ವರ್ಣಿಸಿ ಹೇಳಿದ.

ದ್ರೌಪದಿ ಆಗ ಹಿಡಿದಿದ್ದ ಸ್ವಯಂವರ ಮಾಲೆ ಅಂದು ರುದ್ರದೇವರು ಅಂಬೆಗೆ ಕೊಟ್ಟಿದ್ದ ಬಾಡದ ಕಮಲಗಳ ಮಾಲೆಯಾಗಿತ್ತು ಎಂದು ವಾದಿರಾಜೀಯದಲ್ಲಿ ಹೇಳಿದೆ.[1]

ಈ ಮಾಲೆಯನ್ನು ಧರಿಸುವವನು ಭೀಷ್ಮನನ್ನು ಕೊಲ್ಲುತ್ತಾನೆ ಎಂದು ಶಿವನ ವರ. ಮುಂದೆ ಸ್ವಯಂವರದ ಪಣವನ್ನು ಗೆದ್ದು ಮಾಲೆ ಹಾಕಿಸಿಕೊಳ್ಳುವ ಅರ್ಜುನನೆ ಭೀಷ್ಮರನ್ನು ಕುರುಕ್ಷೇತ್ರದಲ್ಲಿ ಕೊಲ್ಲುತ್ತಾನೆ.

ತಾಂಶ್ಚ ಪ್ರದರ್ಶ್ಯ ಸಕಲಾನ್ ಸ ಹುತಾಶನಾಂಶ-
ಶ್ಚಾಪಂ ಚ ತತ್ ಪ್ರತಿನಿಧಾಯ ಸಪಂಚಬಾಣಂ ।
ಆಹಾಭಿಭಾಷ್ಯ ಸಕಲಾನ್ ನೃಪತೀನಥೋಚ್ಚೈ-
ರ್ದೀಪ್ಯದ್ಧುತಾಶನವಪುರ್ಘ್ನತುಲ್ಯಘೋಷಃ ॥೧೨೦॥

ಉರಿವ ಬೆಂಕಿಯಂಥ ಶರೀರದ ಅಗ್ನಿಯ ಅವತಾರನಾದ ಧೃಷ್ಟದ್ಯುಮ್ನ ಎಲ್ಲ ರಾಜರನ್ನೂ

1. ಪ್ರಗೃಹೀತಮಾಲಾಮಿತ್ಯತ್ರ ಪ್ರಗೃಹೀತ ರುದ್ರದತ್ತಾತ್ಮಾನ ನವ ಕಂಜ ಮಾಲಾಮಿತ್ಯರ್ಥಃ ।
-ವಾದಿರಾಜೀಯ

ದ್ರೌಪದಿಗೆ ಪರಿಚಯ ಮಾಡಿಕೊಟ್ಟು ಒಂದು ಬಿಲ್ಲನ್ನು ಐದು ಬಾಣಗಳೊಂದಿಗೆ ಅವರ ಮುಂದೆ ಇಟ್ಟು ಎಲ್ಲ ರಾಜರನ್ನೂ ಸಂಬೋಧಿಸಿ ಗಟ್ಟಿಯಾಗಿ ಗುಡುಗಿನ ಧ್ವನಿಯಿಂದ ನುಡಿದ.

ಏತೇನ ಕಾರ್ಮುಕವರೇಣ ತರೂಪರಿಸ್ಥ-
ಮತ್ಸ್ಯಾವಭಾಸಮುದಕೇ ಪ್ರತಿವೀಕ್ಷ್ಯ ಯೇನ।
ಏತೈಃ ಶರೈಃ ಪ್ರತಿಹತೋ ಭವತೀಹ ಮತ್ಸ್ಯಃ
ಕೃಷ್ಣಾನುಯಾಸ್ಯತಿ ತಮದ್ಯ ನರೇಂದ್ರವೀರಾಃ ॥೧೨೧॥

'ವೀರರಾದ ರಾಜರೆ, ಮರದ ಮೇಲಿರುವ ಮತ್ಸ್ಯಕೃತಿಯ ಪ್ರತಿಬಿಂಬವನ್ನು ನೀರಲ್ಲಿ ಕಂಡು ಈ ಬಿಲ್ಲಿನಿಂದ ಈ ಐದು ಬಾಣಗಳಿಂದ ಯಾರು ಅದನ್ನು ಭೇದಿಸುವನೋ ಅವನನ್ನು ಇಂದು ದ್ರೌಪದಿ ವರಿಸುತ್ತಾಳೆ'

ಮಹಾಭಾರತದಲ್ಲಿ ಔತ್ತರೇಯ ಪಾಠದಲ್ಲಿ ಲಕ್ಷ್ಯವೆಂದು ಮಾತ್ರ ಹೇಳಿದೆ. ದಾಕ್ಷಿಣಾತ್ಯಪಾಠದಲ್ಲಿ 'ಕಾಂಚನಂ ಲಕ್ಷ್ಯಂ' ಎಂದಿದೆ. (ಆದಿ 200.17) ಲಕ್ಷಾಲಂಕಾರದಲ್ಲಿ ಕಾಂಚನ ಎಂದರೆ ಮತ್ಸ್ಯ ಎಂದು ವ್ಯಾಖ್ಯಾನಿಸಲಾಗಿದೆ.

ರಾಜರುಗಳ ಪರಾಭವ

ಇತ್ಯಸ್ಯ ವಾಕ್ಯಮನು ಸರ್ವನರೇಂದ್ರಪುತ್ರಾ
ಉತ್ತಸ್ಥುರುದ್ಧತಮದಾಶ್ಚಲಕುಂಡಲಾಸ್ಯಾಃ।
ಅಸ್ತ್ರಂ ಬಲಂ ಚ ಬಹು ನೈಜಮಭೀಕ್ಷಮಾಣಾಃ
ಸ್ಪರ್ಧಂತ ಏವ ಚ ಮಿಥಃ ಸಮಲಂಕೃತಾಂಗಾಃ ॥೧೨೨॥

ಧೃಷ್ಟದ್ಯುಮ್ನ ಹೀಗೆ ಹೇಳಿದೊಡನೆ ಮೈಯನ್ನು ಚೆನ್ನಾಗಿ ಸಿಂಗರಿಸಿಕೊಂಡಿದ್ದ ಎಲ್ಲ ರಾಜಕುಮಾರರೂ ಚಲಿಸುವ ಕರ್ಣಕುಂಡಲಗಳಿಂದ ಶೋಭಿಸುವ ಮುಖವುಳ್ಳವರಾಗಿ ಬೀಗಿದ ದರ್ಪದಿಂದ ತಮ್ಮ ಅಸ್ತ್ರಬಲವನ್ನು ಬಾಹುಬಲವನ್ನೂ ಹೆಚ್ಚೆಂದು ತಿಳಿಯುತ್ತ ಪರಸ್ಪರ ಸ್ಪರ್ಧಿಸುತ್ತ ಎದ್ದು ನಿಂತರು

ಕೃಷ್ಣಬಲರಾಮರಾಗಲಿ ಯಾವ ಯಾದವನೇ ಆಗಲಿ ಸ್ಪರ್ಧಿಸಲಿಲ್ಲ. ಕೃಷ್ಣನ ಆಜ್ಞೆಯಂತೆ ಎಲ್ಲರೂ ಸ್ವಯಂವರ ನೋಡಲೆಂದೇ ಬಂದಿದ್ದರು ಎಂದು ಮುಂದೆ ಸ್ಪಷ್ಟವಾಗುತ್ತದೆ. ಬ್ರಾಹ್ಮಣವೇಷದಿಂದ ಬಂದಿದ್ದ ಪಾಂಡವರನ್ನು ಗುರುತಿಸಿ ಶ್ರೀಕೃಷ್ಣ ಬಲರಾಮನಿಗೆ ತೋರಿಸುತ್ತಾನೆ.

ಕೇಚಿನ್ನಿರೀಕ್ಷ್ಯ ಧನುರೇತ್ಯ ನ ಮೇ ಸುಶಕ್ಯ-
ಮಿತ್ಯೇವ ಚಾಪಯಯುರನ್ಯ ಉತ ಪ್ರಚಾಲ್ಯ।
ತತ್ರಾಸಸಾದ ಶಿಶುಪಾಲ ಉರುಪ್ರತಾಪಃ
ಸಂಗೃಹ್ಯ ತತ್ ಸಮಧಿರೋಪಣಯತ್ನ ಆಸೀತ್ ॥೧೨೩॥

ಕೆಲವರು ಬಂದು ಆ ಬಿಲ್ಲನ್ನು ದೂರದಿಂದ ನೋಡಿಯೆ ಇದು ನಮಗೆ ಶಕ್ಯವಲ್ಲ ಎಂದು ಹಿಂದಿರುಗಿದರು. ಆಗ ಮಹಾಪ್ರತಾಪಿಯಾದ ಶಿಶುಪಾಲ ಬಂದ. ಬಿಲ್ಲನ್ನೆತ್ತಿ ಹೆದೆಏರಿಸಲು ಯತ್ನಿಸಿದ.

ಮಾಷಾಂತರಾಯ ಸ ಚಕರ್ಷ ಯದೈವ ಕೋಟ್ಯಾ
ಉನ್ನಮ್ಯ ತತ್ ಪ್ರತಿಜಘಾನ ತಮೇವ ಚಾಶು ।
ಅನ್ಯತ್ರ ಫಲ್ಗುನತ ಏತದಶಕ್ಯಮೇವೇ-
ತ್ಯಂಜೋ ಗಿರೀಶವರತಃ ಸ ಯಯೌ ಚ ಭಗ್ನಃ ॥೧೨೪॥

ಶಿಶುಪಾಲ ಬಿಲ್ಲಿನ ತುದಿಯನ್ನೆಳೆದ. ಹೆದೆಗೂ ಬಿಲ್ಲಿನ ತುದಿಗೂ ಉದ್ದಿನ ಕಾಳಿನಷ್ಟೇ ಅಂತರವಿದ್ದಾಗ ತಕ್ಷಣ ಬಿಲ್ಲು ಸೆಟೆದು ಅವನಿಗೇ ಬಡಿಯಿತು. ಅರ್ಜುನನಿಗೆ ಹೊರತು ಬೇರೆಯವರಿಗೆ ಈ ಬಿಲ್ಲು ಹೆದೆಯೇರಿಸಲು ಅಶಕ್ಯವೆಂದು ಶಿವನ ವರವಿದ್ದುದರಿಂದ ಶಿಶುಪಾಲ ಹೀಗೆ ಸೋತು ಹಿಂದಿರುಗಿದ.

ಶಿವ ದ್ರುಪದನಿಗೆ ಮಾತ್ರವಲ್ಲದೆ ಇಂದ್ರನಿಗೂ 'ನೀನು ಮನುಷ್ಯನಾಗಿ ಹುಟ್ಟುತ್ತಿ. ಆಗ ದ್ರೌಪದಿಗೆ ನೀನೆ ಪತಿಯಾಗುವೆ. ಅವಳು ನಿನ್ನನ್ನೆ ವರಿಸುವಳು ಎಂದು ಶಾಪದ ನೆಪದಿಂದ ವರವನ್ನಿತ್ತಿದ್ದ (ತಾ. ನಿರ್ಣಯ 18- 140). ಅದರಿಂದ ಅರ್ಜುನ ಹೊರತು ಇನ್ನಾರೂ ಸ್ವಯಂವರ ಪಣವನ್ನು ಗೆಲ್ಲುವಂತಿರಲಿಲ್ಲ.

ಮದ್ರೇಶ ಏತ್ಯ ಚಕೃಷೇ ಸ್ಥವಿರೋಽಪಿ ವೀರ್ಯಾತ್
ಚೇದೀಶತೋಽಪ್ಯಧಿಕಮೇವ ಸ ಮುದ್ಗಮಾತ್ರೇ ।
ಶಿಷ್ಟೇಽಮುನಾ ಪ್ರತಿಹತಃ ಸ ಯಯಾವಶಕ್ಯಂ
ಮತ್ವಾತ್ಮನಸ್ತದನು ಭೂಪತಯೋ ವಿಷಣ್ಣಾಃ ॥೧೨೫॥

ಮದ್ರರಾಜ ಶಲ್ಯ ವೃದ್ಧನಾದರೂ ಸ್ವಶಕ್ತಿಯಿಂದ ಶಿಶುಪಾಲನಿಗಿಂತ ಹೆಚ್ಚೇ ಬಿಲ್ಲು ಬಗ್ಗಿಸಿದ. ಹೆಸರು ಕಾಳಿನಷ್ಟು ಮಾತ್ರ ಅಂತರ ಉಳಿದಿದ್ದಾಗ ಬಿಲ್ಲು ಅವನಿಗೂ ಬಡಿಯಿತು. ಇದು ತನಗೆ ಅಶಕ್ಯವೆಂದು ಮನಗಂಡು ಅವನು ಹಿಂತಿರುಗಿದ. ಒಡನೆ ರಾಜರುಗಳು ವಿಷಣ್ಣರಾದರು.

ಸನ್ನೇಷು ಭೂಪತಿಷು ಮಾಗಧ ಆಸಸಾದ
ಸೋಽವಜ್ಞಯೈವ ಬಲವೀರ್ಯಮದೇನ ದೃಪ್ತಃ ।
ಚಾಪಂ ಚಕರ್ಷ ಚಲಪಾದತಲೋ ಬಲೇನ
ಶಿಷ್ಟೇ ಸ ಸರ್ಷಪಮಿತೇಽಭಿಹತೋಽ ಮುನೈವ ॥೧೨೬॥
ಜಾನುನ್ಯಮುಷ್ಯ ಧರಣೇಂ ಯಯತುಸ್ತದೈವ
ದರ್ಪೇಣ ಚಾಸ್ಥಿರಪದಸ್ಥಿತಿಮಾತ್ರಹೇತೋಃ ।

ರೌದ್ರಾದ್ ವರಾತ್ಸ ಜಡತಾಂ ಗಮಿತೋಽಥ ರಾಜಾ
ರಾಜ್ಞಾಂ ಮುಖಾನ್ಯನಭಿವೀಕ್ಷ್ಯ ಯಯೌ ಸ್ವರಾಷ್ಟ್ರಂ ॥೧೨೭॥

ರಾಜರು ಸುಮ್ಮನೆ ಕುಳಿತಿದ್ದಾಗ ಜರಾಸಂಧ ಬಂದ. ಬಲವೀರ್ಯ ಮದದಿಂದ ದೃಪ್ತನಾಗಿದ್ದ ಆತ ಅಲಕ್ಷ್ಯತೆಯಿಂದ ಬಿಲ್ಲು ಬಗ್ಗಿಸಿದ. ಆದರೆ ಸಾಸಿವೆಕಾಳಿನಷ್ಟು ಅಂತರವಿರುವಾಗ ಬಿಲ್ಲು ಅವನನ್ನು ಬಲವಾಗಿ ಬಡಿಯಿತು. ಅವನ ಅಂಗಾಲುಗಳು ಚಲಿಸಿದವು. ನೆಲದ ಮೇಲೆ ಕಾಲೂರಿ ನಿಲ್ಲಲಾಗದಿದ್ದಾಗ ದರ್ಪದಿಂದ ಅದನ್ನು ತೋರಗೊಡದೆ ಮೊಳಕಾಲೂರಿ ಹೇಗೋ ನೆಲವನ್ನಾಶ್ರಯಿಸಿ ನಿಂತ. ಶಿವನ ವರವಿದ್ದುದರಿಂದಲೆ ಅವನೂ ನಿಶ್ಚೇಷ್ಟನಾಗಬೇಕಾಯಿತು. ಲಜ್ಜೆಯಿಂದ ರಾಜರ ಮುಖ ನೋಡದೆ ತನ್ನೂರಿಗೆ ಹೊರಟು ಹೋದ.

ಕರ್ಣನ ಪರಾಭವ

ಪ್ರಾಯೋ ಗತಾಸ್ತದನು ಭೂಪತಯೋಽಥ ಕರ್ಣೋ
ದುರ್ಯೋಧನಾರ್ಥಮನುಗೃಹ್ಯ ಧನುಶ್ಚಕರ್ಷ ।
ರಾಮಾದುಪಾತ್ತ ಶುಭಶಿಕ್ಷಿತಮಾತ್ರತೋಽಸೌ
ರೋಮಾವಶಿಷ್ಟಮಕರೋದ್ ಧನುಷೋಽಂತಮಾಶು ॥೧೨೮॥

ಜರಾಸಂಧ ಪರಾಭವಗೊಂಡುಹೋದ ಅನಂತರ ಪ್ರಾಯಶಃ ಎಲ್ಲ ರಾಜರೂ ಹೊರಟು ಹೋದರು. ಆಗ ಕರ್ಣ ದುರ್ಯೋಧನನಿಗಾಗಿ ಬಿಲ್ಲನ್ನೆತ್ತಿ ಸೆಳೆದ. ಪರಶುರಾಮನಿಂದ ಪಡೆದ ಉತ್ತಮ ಶಿಕ್ಷಣದ ಬಲದಿಂದ ಬಿಲ್ಲಿನ ತುದಿಗೆ ಒಂದು ರೋಮದಷ್ಟು ಮಾತ್ರ ಅಂತರವಿರುವಂತೆ ಮಾಡಿದ.

ತಸ್ಮಿಂಶ್ಚ ತೇನ ವಿಹತೇ ಪ್ರತಿಸನ್ನಿವೃತ್ತೇ
ಭೀಮಾರ್ಜುನೌ ದ್ವಿಜಸದಸ್ಯುಪಸನ್ನಿವಿಷ್ಟೌ ।
ಉತ್ತಸ್ಥತೂ ರವಿಶಶಿಪ್ರತಿಮಾನರೂಪೌ
ವಿಪ್ರೇಷು ತತ್ರ ಚ ಭಿಯಾ ವಿನಿವಾರಯತ್ಸು ॥೧೨೯॥

ಕರ್ಣನೂ ಬಿಲ್ಲಿನ ಏಟು ತಿಂದು ಹಿಂತಿರುಗಿದಾಗ ಬ್ರಾಹ್ಮಣರ ಸಭೆಯಲ್ಲಿ ಸೂರ್ಯ ಚಂದ್ರರಂತೆ ಹೊಳೆಯುತ್ತ ಕುಳಿತಿದ್ದ ಭೀಮಾರ್ಜುನರು, ಬ್ರಾಹ್ಮಣರು ಭಯದಿಂದ ತಡೆಯುತ್ತಿದ್ದಂತೆಯೇ ಎದ್ದುನಿಂತರು.

''ತಂ ಚಾಪ್ಯಾರೋಪ್ಯಮಾಣಂ ತದ್ ರೋಮಮಾತ್ರೇಽಭ್ಯತಾಡಯತ್''

ರೋಮ ಮಾತ್ರ ಅಂತರವಿದ್ದಾಗ ಬಿಲ್ಲು ಕರ್ಣನನ್ನೂ ಹೊಡೆಯಿತು. ತ್ರಿಲೋಕ ವಿಜಯಿಯಾದ ಕರ್ಣ ಹೀಗೆ ಸೋತಾಗ ಎಲ್ಲ ರಾಜರೂ ಭಯಾಕುಲರಾದರು. ನಿರಾಶರಾಗಿ ತಲೆತಗ್ಗಿಸಿ ಕುಳಿತರು. ಬಿಲ್ಲನ್ನು

ಕಣ್ಣೆತ್ತಿಯೂ ನೋಡಲಿಲ್ಲ. ಹೀಗೆ ಮಹಾಭಾರತ ದಾಕ್ಷಿಣಾತ್ಯಪಾಠ (ಆದಿ 202.35) ಹೇಳುತ್ತಿದ್ದರೂ ಔತ್ತರೇಯ ಪಾಠ ಹೇಳುತ್ತದೆ-

'ಎಲ್ಲ ರಾಜರೂ ಸೋತಾಗ ಕರ್ಣ ಎದ್ದು ಬಿಲ್ಲನ್ನೆತ್ತಿ ಬಗ್ಗಿಸಿ ಹೆದೆಯೇರಿಸಿದ. ಬಾಣಗಳನ್ನೂ ಹೂಡಿದ. ಇನ್ನೇನು ಲಕ್ಷ್ಯವನ್ನು ಹೊಡೆಯುತ್ತಾನೆ ಎನ್ನುವಷ್ಟರಲ್ಲಿ ದ್ರೌಪದಿ ಗಟ್ಟಿಯಾಗಿ ಹೇಳಿದಳು - 'ನಾಹಂ ವರಯಾಮಿ ಸೂತಂ' (ಆದಿ.186.23) 'ಸೂತನನ್ನು ನಾನು ವರಿಸಲಾರೆ!' ಕರ್ಣ ಕೋಪದಿಂದ ಸೂರ್ಯನ ಕಡೆಗೆ ನೋಡುತ್ತ ಬಿಲ್ಲನ್ನು ಕೆಳಗೆ ಚೆಲ್ಲಿ ಹೊರಟುಹೋದ.'

ನಿರ್ಣಯ ದಾಕ್ಷಿಣಾತ್ಯಪಾಠವನ್ನೇ ಸ್ವೀಕರಿಸಿದೆ. ಔತ್ತರೇಯ ಪಾಠ ಪೂರ್ವೋತ್ತರವಿರುದ್ಧವಾಗಿದೆ. ಅಲ್ಲಿಯೆ ಮುಂದೆ

ಯತ್ ಪಾರ್ಥಿವೈ ರುಕ್ಮಿಸುನೀಥವಕ್ರೈ
ರಾಧೇಯ ದುರ್ಯೋಧನ ಶಲ್ಯ ಶಾಲ್ವೈಃ
ತಥಾ ಧನುರ್ವೇದ ಪರೈರ್ನ ಸಿಂಹೈಃ
ಕೃತಂ ನ ಸಜ್ಯಂ ಮಹತೋಽಪಿ ಯತ್ನಾತ್ ।(ಆದಿ.187.19)

''ಮಹಾ ಪ್ರಯತ್ನ ಮಾಡಿಯೂ ರುಕ್ಮಿ ಶಿಶುಪಾಲ ದಂತವಕ್ರ ಕರ್ಣ ದುರ್ಯೋಧನ ಶಲ್ಯ ಸಾಲ್ವ ಮೊದಲಾದ ರಾಜರು ಬಿಲ್ಲಿಗೆ ಹೆದೆ ಏರಿಸಲು ಶಕ್ತರಾಗಲಿಲ್ಲ' ಎಂದಿದೆ.

ದಾಕ್ಷಿಣಾತ್ಯ ಪಾಠದಲ್ಲಿ ಅರ್ಜುನನೆದ್ದು ಧೃಷ್ಟದ್ಯುಮ್ನನನ್ನು ಕೇಳುತ್ತಾನೆ. 'ಬ್ರಾಹ್ಮಣರು ಬಿಲ್ಲಿಗೆ ಹೆದೆ ಏರಿಸಬಹುದೆ?' ಎಂದು. ಆಗ ಧೃಷ್ಟದ್ಯುಮ್ನ ಹೇಳುತ್ತಾನೆ-

'ಬ್ರಾಹ್ಮಣೋ ವಾಥ ರಾಜನ್ಯೋ ವೈಶ್ಯೋ ವಾ ಶೂದ್ರ ಏವವಾ'
(ಆದಿ. 203. 19)

'ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರು ಯಾರೇ ಇರಲಿ ಬಿಲ್ಲನ್ನು ಹೆದೆಯೇರಿಸುವವನಿಗೆ ನನ್ನ ಸೋದರಿಯನ್ನು ಕೊಡುತ್ತೇನೆ, ಇದು ಸತ್ಯ' ಯಾಜೋಪಯಾಜರ ಮಂತ್ರಬಲದಲ್ಲಿಯೂ ರುದ್ರದೇವರ ವರಬಲದಲ್ಲಿಯೂ ವಿಶ್ವಾಸ ತಳೆದಿದ್ದ ದ್ರುಪದ ಧೃಷ್ಟದ್ಯುಮ್ನ ದ್ರೌಪದಿಯರು ಯಾರೂ ಕರ್ಣ ಸ್ವಯಂವರ ಪಣವನ್ನು ಗೆಲ್ಲಬಹುದೆಂದು ಭಯಪಡುವುದು ಸಂಭವನೀಯವಲ್ಲ. ಅದರಿಂದ ದ್ರೌಪದಿ 'ನಾಹಂ ವರಯಾಮಿ ಸೂತಂ' ಎನ್ನುವುದು ಸಂಭವನೀಯವಲ್ಲ. ಒಂದು ವೇಳೆ ದ್ರೌಪದಿ ಹಾಗೆ ಹೇಳಿದ್ದರೂ ಕರ್ಣ ದುರ್ಯೋಧನನಿಗಾಗಿ

ಯಾದರೂ ಲಕ್ಷ್ಯಭೇದ ಯತ್ನ ಮಾಡಬಹುದಿತ್ತು. ನಿರ್ಣಯ ಪ್ರಕಾರ ದುರ್ಯೋಧನನಿಗಾಗಿಯೆ ಆತ ಪ್ರಯತ್ನ ಮಾಡುತ್ತಾನೆ. ಅದು ತಾನು ಸೂತಪುತ್ರನಾದ್ದರಿಂದ ದ್ರೌಪದಿ ವರಿಸಲಾರಳೆಂದಿರಬಹುದು. ಅಥವಾ ದುರ್ಯೋಧನ ತನ್ನ ಪ್ರಾಣಮಿತ್ರನೆಂದಿರಬಹುದು. ಅದರಿಂದ ದ್ರೌಪದಿಯ ಈ ಮಾತಿನ ಮೂಲಕ ಭಾರತಕಾರರು ಕರ್ಣನ ಪರಾಕ್ರಮಕ್ಕೆ ಘೋರ ಅನ್ಯಾಯ ಎಸಗಿದರೆನ್ನಲು ಅವಕಾಶವಿಲ್ಲ.

ಪಾಂಡವ ವಿಜಯ

ವಿಪ್ರಾಶ್ಚ ಕೇಚಿದತಿಯುಕ್ತ ಮಿಮೌ ಚ ವೀರೌ
ದೇವೋಪಮಾವಿತಿ ವಚೋ ಜಗದುಸ್ತತಸ್ತೌ ।
ದೃಷ್ಟ್ವೈವ ಕೃಷ್ಣಮುಖಿಪಂಕಜಮಾಶು ಚಾಪ-
ಸಾನ್ನಿಧ್ಯಮಾಯಯತುರುತ್ತಮವೀರ್ಯಸಾರೌ ॥೧೩೦॥

ಕೆಲವು ಬ್ರಾಹ್ಮಣರು 'ಇದು ಅತ್ಯಂತ ಯುಕ್ತ. ಏಕೆಂದರೆ ಇವರಿಬ್ಬರೂ ವೀರರು. ದೇವಸಮಾನರು' ಎಂಬ ಮಾತನ್ನಾಡಿದರು. ಆಗ ಉತ್ತಮ ವೀರ್ಯಬಲ ಉಳ್ಳ ಭೀಮಾರ್ಜುನರು ಮೊದಲಿಗೆ ಶ್ರೀಕೃಷ್ಣನ ಮುಖಕಮಲವನ್ನು ನೋಡಿ ಕೂಡಲೆ ಬಿಲ್ಲಿನ ಬಳಿಗೆ ಬಂದರು.

ಶ್ರೀಕೃಷ್ಣನ ಮುಖಕಮಲವನ್ನು ನೋಡಿದರೆಂದರೆ ಅವನ ಅನುಜ್ಞೆಪಡೆದರೆಂದರ್ಥ.

ತತ್ರಾರ್ಜುನಃ ಪವನಜಾತ್ ಪ್ರಿಯತೋಽಪ್ಯನುಜ್ಞಾ-
ಮಾದಾಯ ಕೇಶವಮಜಂ ಮನಸಾ ಪ್ರಣಮ್ಯ ।
ಕೃತ್ವಾ ಗುಣಾನ್ವಿತಮದೋ ಧನುರಶ್ರಮೇಣ
ಯಂತ್ರಾಂತರೇಣ ಸ ಶರೈರಧುನೋಚ್ಚ ಲಕ್ಷ್ಯಂ ॥೧೩೧॥

ಅರ್ಜುನ ಲಕ್ಷ್ಯವೇಧಕ್ಕಾಗಿ ಪ್ರಿಯನಾದ ಭೀಮನಿಂದ ಅನುಜ್ಞೆಪಡೆದು ಶ್ರೀಕೃಷ್ಣನನ್ನೂ ಅನುಜ್ಞೆಗಾಗಿ ಮನಸಿನಿಂದ ನಮಿಸಿ ಅನಾಯಾಸವಾಗಿ ಬಿಲ್ಲಿಗೆ ಹೆದೆಯೇರಿಸಿ ಯಂತ್ರದ ಮಧ್ಯೆದಲ್ಲಿರುವ ತೂತಿನ ಮೂಲಕ ಲಕ್ಷ್ಯವನ್ನು ಐದೂ ಬಾಣಗಳಿಂದ ಹೊಡೆದ.

ಕೃಷ್ಣಾ ತದಾಸ್ಯ ವಿದಧೇ ನವಕಂಜಮಾಲಾಂ
ಮಧ್ಯೇ ಚ ತಾಂ ಪ್ರತಿನಿಧಾಯ ನರೇಂದ್ರಪುತ್ರ್ಯೌ ।
ಭೀಮಾರ್ಜುನೌ ಯಯತುರಚ್ಯುತಮಾಭಿನಮ್ಯ
ಕ್ಷುಬ್ಧಸ್ತದಾ ನೃಪವರಾಬ್ಧಿರಿಮಾವಧಾವತ್ ॥೧೩೨॥

ದ್ರೌಪದಿ ಆಗ ಹೊಸ ಕಮಲದ ಮಾಲೆಯನ್ನು ಅರ್ಜುನನ ಕೊರಳಲ್ಲಿ ಹಾಕಿದಳು.

ಅವಳನ್ನು ಮಧ್ಯದಲ್ಲಿ ಮಾಡಿಕೊಂಡು ರಾಜಕುಮಾರರಾದ ಭೀಮಾರ್ಜುನರು ಕೃಷ್ಣನನ್ನು ನಮಿಸಿ ಹೊರಟರು. ಆಗ ಪ್ರಕ್ಷುಬ್ಧವಾದ ಸಮುದ್ರದಂತಿದ್ದ ರಾಜಶ್ರೇಷ್ಠರ ಸಮೂಹ ಭೀಮಾರ್ಜುನರ ಬಳಿಗೆ ಧಾವಿಸಿ ಬಂದಿತು.

ದ್ರಷ್ಟುಂ ಹಿ ಕೇವಲಗತಿರ್ನ ತು ಕನ್ಯಕಾಯಾ
ಆರ್ಧೇ ನ ಚಾಪಮಿಹ ವೃಷ್ಣಿವರಾಃ ಸ್ಪೃಶಂತು ।
ಇತ್ಯಾಜ್ಞಯೈವ ವರಚಕ್ರಧರಸ್ಯ ಲಿಪ್ಸಾ-
ಮಪ್ಯತ್ರ ಚಕ್ರುರಿಹ ನೈವ ಯದುಪ್ರವೀರಾಃ ॥೧೩೩॥

ಸ್ವಯಂವರವನ್ನು ನೋಡುವುದಕ್ಕಾಗಿ ಕೇವಲ ಹೋಗಬೇಕು ಹೊರತು ಕನ್ಯೆಗಾಗಿ ಅಲ್ಲ. ಅದರಿಂದ ಯಾದವ ವೀರರು ಸ್ವಯಂವರದಲ್ಲಿ ಬಿಲ್ಲನ್ನು ಸ್ಪರ್ಶಿಸಕೂಡದೆಂದು ಶ್ರೀಕೃಷ್ಣನ ಆಜ್ಞೆ ಇದ್ದುದರಿಂದ ಯಾದವ ವೀರರು ಸ್ವಯಂವರ ಪಣವನ್ನು ಗೆಲ್ಲುವ ಆಸೆಯನ್ನೂ ಮಾಡಿರಲಿಲ್ಲ.

ಭೀಮಸ್ತು ರಾಜಸಮಿತಿಂ ಪ್ರತಿಸಂಪ್ರಯಾತಾಂ
ದೃಷ್ಟ್ವೈವ ಯೋಜನದಶೋಚ್ಛ್ರಯಮಾಶು ವೃಕ್ಷಂ ।
ಆರುಜ್ಯ ಸರ್ವನೃಪತೀನಭಿತೋ ಹ್ಯತಿಷ್ಠದ್
ದೃಷ್ಟ್ವೈವ ಪಲಾಯನಪರಾಶ್ಚ ಬಭೂವುರೇತೇ ॥೧೩೪॥

ರಾಜಸಮೂಹ ತಮ್ಮ ಮೇಲೆ ಏರಿಬರುವುದನ್ನು ಕಂಡು ಭೀಮ ಹತ್ತು ಯೋಜನ ಎತ್ತರದ ಒಂದು ಮರವನ್ನು ಬೇಗನೆ ಕಿತ್ತು ಅವರಿಗೆ ಎದುರಾಗಿ ನಿಂತ. ರಾಜರು ನೋಡಿ ಪಲಾಯನ ಮಾಡಲು ತೊಡಗಿದರು.

ಭೀಮೋಽಯಮೇಷ ಪುರುಹೂತಸುತೋಽನ್ಯ ಏತೇ
ಪಾರ್ಥಾ ಇತಿ ಸ್ಮ ಹಲಿನೇ ಹರಿರಭ್ಯವೋಚತ್ ।
ದೃಷ್ಟ್ವೈವ ಸೋಽಪಿ ಮುದಮಾಪ ಶಿನೇಶ್ಚ ಪೌತ್ರಃ
ಖಿಡ್ಗಂ ಪ್ರಗೃಹ್ಯ ಹರ್ಷಾತ್ ಪರಿಪುಪ್ಲುವೇಽತ್ರ ॥೧೩೫॥

ಶ್ರೀಕೃಷ್ಣ ಬಲರಾಮನಿಗೆ 'ಇವನು ಭೀಮ, ಇವನು ಅರ್ಜುನ, ಇವರು ಮಿಕ್ಕ ಪಾಂಡವರು' ಎಂದು ಹೇಳಿದ. ಬಲರಾಮ ಪಾಂಡವರನ್ನು ನೋಡಿದ ಮಾತ್ರಕ್ಕೆ ಆನಂದಪಟ್ಟ. ಸಾತ್ಯಕಿ ಸಂತೋಷದಿಂದ ಕತ್ತಿ ಹಿರಿದು ಕೃಷ್ಣನ ಬಳಿ ಸುತ್ತಲೂ ಕುಣಿದಾಡಿದ.

ಪ್ರೀತೇಷು ಸರ್ವಯದುಷು ಪ್ರಪಲಾಯಿತೇಷು
ದುರ್ಯೋಧನಾದಿನೃಪತಿಷ್ವಖಿಲೇಷು ಭೀಮಾತ್ ।
ಕರ್ಣೋಽಭ್ಯಯಾದ್ಧರಿಹಯಾತ್ಮಜಮಾಶು ಮದ್ರ-
ರಾಜೋ ಜಗಾಮ ಪವನಾತ್ಮಜಮೇವ ವೀರಃ ॥೧೩೬॥

ಎಲ್ಲ ಯಾದವರೂ ಸಂತುಷ್ಟರಾದಾಗ, ದುರ್ಯೋಧನಾದಿ ಸಕಲ ರಾಜರೂ ಭೀಮನಿಂದಾಗಿ ಪಲಾಯನಗೈದಾಗ ವೀರಕರ್ಣ ಅರ್ಜುನನ ಮೇಲೂ ವೀರಶಲ್ಯ ಭೀಮನ ಮೇಲೂ ಆಕ್ರಮಣಗೈದರು.

ವಿಪ್ರೇಷು ದಂಡಪಟದರ್ಭಮಹಾಜಿನಾನಿ
ಕೋಪಾತ್ ಕ್ಷಿಪತ್ಸು ನ ವಿನಾಶನಮತ್ರ ಭೂಯಾತ್ ।
ಕ್ಷತ್ರಸ್ಯ ವೈರತ ಇತಿ ದ್ರುಪದೇ ಚ ಕೃಷ್ಣಂ
ವಿಪ್ರಾಂಶ್ಚ ಯಾಚತಿ ಸ ಮಾರುತಿರಾರ ಶಲ್ಯಂ ॥೧೩೭॥

ಬ್ರಾಹ್ಮಣರು ಕೋಪದಿಂದ ದಂಡ ಧೋತ್ರ ದರ್ಭೆ ಕೃಷ್ಣಾಜಿನಗಳನ್ನು ಎಸೆದಾಗ, ಬ್ರಾಹ್ಮಣರ ಕ್ರೋಧದಿಂದ ಕ್ಷತ್ರಿಯರ ವಿನಾಶವಾಗಬಾರದೆಂದು ಕೃಷ್ಣನನ್ನೂ ಬ್ರಾಹ್ಮಣರನ್ನೂ ದ್ರುಪದ ಬೇಡಿಕೊಳ್ಳುತ್ತಿದ್ದಾಗ ಅತ್ತ ಭೀಮ ಶಲ್ಯನನ್ನು ಇದಿರಿಸಿದ.

ಲಕ್ಷ್ಯಭೇದ ಮಾಡಲು ಬ್ರಾಹ್ಮಣರಿಗೂ ಧೃಷ್ಟದ್ಯುಮ್ನ ಅನುಮತಿ ನೀಡಿದ್ದ. ಅದರಿಂದ ಒಬ್ಬ ಬ್ರಾಹ್ಮಣ ಲಕ್ಷ್ಯಭೇದ ಮಾಡಿ ಕನ್ಯೆಯನ್ನು ಗೆದ್ದಿರುವಾಗ ಅದನ್ನು ವಿರೋಧಿಸಿದರೆ ಅದು ಬ್ರಾಹ್ಮಣ ಜಾತಿಗೆ ಆದ ಅವಮಾನ ಎಂದು ಬ್ರಾಹ್ಮಣರು ಕುಪಿತರಾದರು. ಅವರ ಕೋಪದಿಂದ ಈ ವಿವಾಹ ಮಹೋತ್ಸವದಲ್ಲಿ ಕ್ಷತ್ರಿಯ ಜಾತಿ ನಾಶವಾಗಬಹುದೆಂಬ ಭೀತಿಯಿಂದ ದ್ರುಪದ ಬ್ರಾಹ್ಮಣರನ್ನೂ ಬ್ರಾಹ್ಮಣ ಪ್ರಿಯನಾದ ಕೃಷ್ಣನನ್ನೂ ಬೇಡಿದ. ಅದನ್ನು ನೋಡಿ ಬ್ರಾಹ್ಮಣರು ಶಾಂತರಾದರು. ಇತ್ತ ಭೀಮ ಶಲ್ಯನನ್ನು ಇದಿರಿಸಿದ.

ವೃಕ್ಷಂ ತ್ವಸೌ ಪ್ರತಿನಿಧಾಯ ಚ ಮದ್ರರಾಜಂ
ದೋರ್ಭ್ಯಾಂ ಪ್ರಗೃಹ್ಯ ಜವತೋ ಗಗನೇ ನಿಧಾಯ ।
ಬಂಧುತ್ವತೋ ಭುವಿ ಶನೈರದಧಾತ್ಸ ತಸ್ಯ
ವಿಜ್ಞಾಯ ವೀರ್ಯಮಗಮನ್ನಿಜರಾಜಧಾನೀಂ ॥೧೩೮॥

ಭೀಮ ಮರವನ್ನು ಕೆಳಗಿಟ್ಟು ಬೇಗನೆ ಶಲ್ಯನನ್ನು ಎರಡು ಕೈಗಳಿಂದ ಆಕಾಶದಲ್ಲಿ ಎತ್ತಿಹಿಡಿದು ಬಂಧುತ್ವ ಪ್ರಯುಕ್ತ ಮೆಲ್ಲಗೆ ನೆಲಕ್ಕೆ ಇಳಿಸಿದ. ಆಗ ಶಲ್ಯ ಭೀಮನ ಬಾಹುಬಲವನ್ನು ತಿಳಿದು ತನ್ನ ರಾಜಧಾನಿಗೇ ಹಿಂತಿರುಗಿದ.

ವೃಕ್ಷದಲ್ಲಿ ಶಲ್ಯಗೆ ಹೊಡೀಬೇಕೆಂದರೆ ಸೋದರಮಾವ, ಸತ್ತಾನೆಂದು ಭೀಮಸೇನ ವೃಕ್ಷ ಕೆಳಗಿಟ್ಟು, ಕೈಲಿ ಹಿಡಿದು ಮೇಲಕ್ಕೆ ಹಾರಿಸುವ. ಕೆಳಗೆ ಬಿದ್ದರೆ ಪುಡಿಪುಡಿಯಾದಾನೆಂದು ಅಂತರಿಕ್ಷದಲ್ಲಿ ಹಿಡಕೊಂಬ. ಕೆಳಗೆ ಬೀಳಗೊಡ. ಮೆಲ್ಲಗೆ ಭೂಮಿಮ್ಯಾಲೆ ಇಳಿಸತಿಹ. ಶಲ್ಯ ಹರಿಭಕ್ತ. ವಾಯುದೇವರ

ಆವೇಶ, ಸಹ್ಲಾದನ ಅವತಾರ. ವಧಿಗೆ ಯೋಗ್ಯನಲ್ಲ ಎಂದು ಭೂತಳದಲ್ಲಿ ಇಳಹಲಿಕ್ಕೆ ಶಲ್ಯ ತನ್ನ ಜೀವ ಉಳುಹಿದವ ಭೀಮಸೇನನೆಂದು ತಿಳಿದು ತನ್ನ ರಾಜಧಾನಿಗೆ ಹೋದನು. -ಕನ್ನಡ ಮ. ಭಾ. ತಾ. ನಿರ್ಣಯ

ಪಾರ್ಥೋಽಪಿ ತೇನ ಧನುಷಾ ಯುಯುಧೇ ಸ್ಮ ಕರ್ಣಂ
ಸೋಽಪ್ಯಸ್ತ್ರ ಬಾಹುಬಲಮಾವಿರಮುತ್ರ ಚಕ್ರೇ।
ತೌ ಧನ್ವಿನಾವನುಪಮೌ ಚಿರಮಸ್ಯತಾಂ ಚ
ಸೂರ್ಯಾತ್ಮ ಜೋಽತ್ರ ವಚನಂ ವ್ಯಥಿತೋ ಬಭಾಷೇ ॥೧೩೯॥

ಅರ್ಜುನ ಅದೇ ಬಿಲ್ಲಿನಿಂದ ಕರ್ಣನೊಡನೆ ಯುದ್ಧ ಮಾಡಿದ. ಕರ್ಣನೂ ಅಸ್ತ್ರಬಲ ಬಾಹುಬಲಗಳನ್ನು ಅವನ ಮುಂದೆ ಪ್ರದರ್ಶಿಸಿದ. ಇಬ್ಬರೂ ಅನುಪಮ ಬಿಲ್ಲುಗಾರರು. ಬಹುಹೊತ್ತು ಬಾಣಗಳನ್ನು ಎಸೆದರು. ಬಳಿಕ ಕರ್ಣ ವ್ಯಥಿತನಾಗಿ ನುಡಿದ.

ಅದೇ ಬಿಲ್ಲು ಎಂದರೆ ಸ್ವಯಂವರದಲ್ಲಿ ಪಣಕ್ಕಾಗಿ ದ್ರುಪದ ಇಟ್ಟಿದ್ದ ಶೈವ ಧನುಸ್ಸು.

ತ್ವಂ ಫಲ್ಗುನೋ ಹರಿಹಯೋ ದ್ವಿಜಸತ್ತಪೋ ವಾ
ಮೂರ್ತಂ ನ ಮೇ ಪ್ರಮುಖತಃ ಸ್ಥಿತಿಮನ್ಯ ಈಷ್ಟೇ।
ಯೋ ವಾಸ್ಮಿ ಕೋಽಪಿ ಯದಿ ತೇ ಕ್ಷಮಮದ್ಯ ಬಾಣಾನ್
ಮುಂಚಾನ್ಯಥೇಹಿ ರಣತಸ್ತ್ವಿತಿ ಪಾರ್ಥ ಆಹ ॥೧೪೦॥

'ನೀನು ಅರ್ಜುನನೊ? ಇಂದ್ರನೋ? ಅಥವಾ ಮೂರ್ತಿಮತ್ತಾಗಿ ಬಂದು ನಿಂತ ಬ್ರಾಹ್ಮಣರ ತಪಸ್ಸೊ? ಬೇರೆ ಯಾರೂ ನನ್ನ ಮುಂದೆ ನಿಲ್ಲಲು ಶಕ್ತನಾಗಲಾರ' ಎಂದ ಕರ್ಣ. ಅರ್ಜುನನೆಂದ, 'ನಾನು ಯಾರಾದರೇನು? ನಿನಗೆ ಶಕ್ತಿ ಇದ್ದರೆ ಬಾಣಗಳನ್ನು ಎಸೆ. ಇಲ್ಲದಿದ್ದರೆ ಯುದ್ಧದಿಂದ ಹಿಂತಿರುಗಿ ಹೋಗು.

ಕಾರ್ಯಂ ನ ಮೇ ದ್ವಿಜವರೈಃ ಪ್ರತಿಯೋಧನೇನೇ-
ತ್ಯುಕ್ತ್ವಾ ಯಯೌ ರವಿಸುತಃ ಸ ಸುಯೋಧನಾದ್ಯೈಃ।
ನಾಗಾಹ್ವಯಂ ಪುರಮಥ ದ್ರುಪದಾತ್ಮಜಾಂ ತಾ-
ಮಾದಾಯ ಚಾರ್ಜುನಯುತಃ ಪ್ರಯಯೌ ಸ ಭೀಮಃ ॥೧೪೧॥

'ಬ್ರಾಹ್ಮಣೋತ್ತಮರೊಂದಿಗೆ ಯುದ್ಧದಿಂದ ನನಗೆ ಏನು ಫಲವಿಲ್ಲ' ಎಂದು ಹೇಳಿ ಕರ್ಣ ದುರ್ಯೋಧನಾದಿಗಳೊಡನೆ ಹಸ್ತಿನಾವತಿಗೆ ಹೊರಟು ಹೋದ. ಬಳಿಕ ಭೀಮ ಅರ್ಜುನನೊಂದಿಗೆ ದ್ರೌಪದಿಯನ್ನು ಕರೆದುಕೊಂಡು ನಡೆದ.

ಮಹಾಭಾರತದಲ್ಲಿ ತಿರುಗಿ ರಾಜರು ಯುದ್ಧಕ್ಕೆ ಬರುತ್ತಾರೆ. ಶ್ರೀಕೃಷ್ಣ ಅವರನ್ನು ತಡೆಯುತ್ತಾನೆ. ಎಲ್ಲರೂ ಹಿಂತಿರುಗುತ್ತಾರೆ.

ಅಗ್ರೇಽಶ್ವಿಪುತ್ರಸಹಿತಃ ಸ ತು ಧರ್ಮಸೂನುಃ
ಪ್ರಾಯಾತ್ಕುಲಾಲಗೃಹಮನ್ವಪಿ ಭೀಮಪಾರ್ಥೌ ।
ಭಿಕ್ಷೇತಿ ತೈರಭಿಹಿತೇ ಪ್ರಜಗಾದ ಕುಂತೀ
ಭುಜ್ಯಧ್ವಂ ಸಮಸ್ತಶ ಇತಿ ಪ್ರದದರ್ಶ ಕನ್ಯಾಂ ॥೧೪೨॥

ಮುಂದಿನಿಂದ ನಕುಲ ಸಹದೇವರೊಂದಿಗೆ ಧರ್ಮರಾಜ ನಡೆದು ಕುಂಬಾರನ ಮನೆಗೆ ಬಂದ. ಹಿಂದಿನಿಂದ ಭೀಮಾರ್ಜುನರೂ ಬಂದರು. 'ಭಿಕ್ಷೆ ಸಿಕ್ಕಿತು' ಎಂದು ಅವರು ಹೇಳಿದಾಗ ಕುಂತಿ 'ಎಲ್ಲರೂ ಸ್ವೀಕರಿಸಿರಿ' ಎಂದಳು. ಬಳಿಕ ಕನ್ಯೆಯನ್ನು ಕಂಡಳು.

ಪ್ರಾಮಾದಿಕಂ ಚ ವಚನಂ ನ ಮೃಷಾ ತಯೋಕ್ತಂ
ಪ್ರಾಯೋ ಹಿ ತೇನ ಕಥಮೇತದಿತಿ ಸ್ಮ ಚಿಂತಾ ।
ತೇಷಾಂ ಬಭೂವ ವಸುದೇವಸುತೋ ಹರಿಶ್ಚ
ತತ್ರಾಜಗಾಮ ಪರಮೇಣ ಹಿ ಸೌಹೃದೇನ ॥೧೪೩॥

ಕುಂತಿ ಪ್ರಮಾದದಿಂದ ಹೇಳಿದ ಮಾತೂ ಕೂಡ ಎಂದೂ ಸುಳ್ಳಾದುದಿಲ್ಲ. ಅದರಿಂದ ಇದು ಹೇಗೆ ಎಂದು ಪಾಂಡವರಿಗೆ ಚಿಂತೆಯಾಯಿತು. ಅಷ್ಟರಲ್ಲಿ ವಾಸುದೇವ ಶ್ರೀಕೃಷ್ಣ ಪರಮಸ್ನೇಹದಿಂದ ಅಲ್ಲಿಗೆ ಬಂದ.

ಕುಂತಿ ನೀವು ತಂದ ಭಿಕ್ಷೆಯನ್ನು ಎಲ್ಲರೂ ಹಂಚಿಕೊಳ್ಳಿರೆಂದು ಹೇಳಿಬಿಟ್ಟಳು. 'ಭಿಕ್ಷೆ' ಏನೆಂಬುದನ್ನು ನೋಡಿರಲಿಲ್ಲ. ಅದರಿಂದ ಅವಳ ಮಾತು ಪ್ರಮಾದದಿಂದ ಆಡಿದ್ದು. ಆದರೂ ಕುಂತಿ ಪ್ರಮಾದದಿಂದಲಾದರೂ ಹೇಳಿದ ಮಾತು ಎಂದೂ ಸುಳ್ಳಾಗುತ್ತಿರಲಿಲ್ಲ. 'ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋಽನುಧಾವತಿ' ಎಂಬಂತೆ ಋಷಿತುಲ್ಯಳಾದ ಕುಂತಿ ಹೇಳಿದ ಮಾತೂ ನಿಜವಾಗಬೇಕು, ಆದರೆ ಹೇಗೆ? ಒಬ್ಬಳು ಕನ್ಯೆಯನ್ನು ಐವರು ಮದುವೆಯಾಗಬಹುದೆ?

ದ್ರುಪದನ ಜಿಜ್ಞಾಸೆ

ಸಂಭಾಷ್ಯ ತೈಃ ಸ ಭಗವಾನಮಿತಾತ್ಮಶಕ್ತಿಃ
ಪ್ರಾಯಾನ್ನಿಜಾಂ ಪುರಮಮಾ ಯದುಭಿಃ ಸಮಸ್ತೈಃ ।
ಜ್ಞಾತುಂ ಚ ತಾನ್ನಿಶಿ ಸ ತು ದ್ರುಪದಃ ಸ್ವಪುತ್ರಂ
ಪ್ರಾಸ್ಥಾಪಯತ್ಸ ಚ ನಿಲೀನ ಇಮಾನಪಶ್ಯತ್ ॥೧೪೪॥

ಅಮಿತ ಆತ್ಮಶಕ್ತಿಯುಳ್ಳ ಭಗವಾನ್ ಶ್ರೀಕೃಷ್ಣ ಪಾಂಡವರೊಡನೆ ಮಾತನಾಡಿ ಸಮಸ್ತ ಯಾದವರೊಂದಿಗೆ ತನ್ನ ದ್ವಾರಕಾಪುರಿಗೆ ಹೊರಟು ಹೋದ. ಬಳಿಕ ದ್ರುಪದ ಪಾಂಡವರನ್ನು ಯಾರೆಂದು ತಿಳಿಯಲು ರಾತ್ರಿಯಲ್ಲಿ ತನ್ನ ಮಗನಾದ ಧೃಷ್ಟದ್ಯುಮ್ನನನ್ನು ಕಳಿಸಿದ. ಅವನು

ಮರೆಯಲ್ಲಿ ನಿಂತು ಪಾಂಡವರನ್ನು ವೀಕ್ಷಿಸಿದ.

'ಶ್ರೀಕೃಷ್ಣ, ನಮ್ಮನ್ನು ಹೇಗೆ ಕಂಡುಹಿಡಿದೆ?' ಎಂದು ನಕ್ಕು ಕೇಳುತ್ತಾನೆ, ಧರ್ಮರಾಜ. 'ಬೆಂಕಿಯನ್ನು ಎಷ್ಟು ಮುಚ್ಚಿಟ್ಟರೂ ಹೊಗೆಯಾಡದಿರುತ್ತದೆಯೆ? ಆಂತೂ ನೀವು ಬದುಕಿ ಬಂದಿರಿ, ಸಂತೋಷ. ಜ್ವಲಿಸುವ ಅಗ್ನಿಯಂತೆ ಬೆಳಗಿರಿ, ನಿಮಗೆ ಶುಭವಾಗಲಿ' ಎಂದು ಅಭಿನಂದಿಸಿ ಶ್ರೀಕೃಷ್ಣ ಅವಸರದಿಂದ ದ್ವಾರಕೆಗೆ ಹೊರಟ, ಏಕೆಂದರೆ ಅಲ್ಲಿ ಶತಧನ್ವ ಸತ್ರಾಜಿತನನ್ನು ಕೊಂದಿದ್ದ.

ಭಿಕ್ಷಾನ್ನಭೋಜಿನ ಉತೋ ಭಗಿನೀಂ ನಿಜಾಂ ಚ
ತತ್ರಾತಿತೃಪ್ತಹೃದಯಾಮಥ ಯುದ್ಧವಾರ್ತಾಂ।
ತೇಷಾಂ ನಿಶಮ್ಯ ನದತಾಂ ಘನವದ್ ಗಭೀರಂ
ಕ್ಷತ್ರೋತ್ತಮಾ ಇತಿ ಮತಿಂ ಸ ಚಕಾರ ವೀರಃ ॥೧೪೫॥

ಪಾಂಡವರು ಭಿಕ್ಷಾನ್ನ ಉಣ್ಣುವುದನ್ನೂ ತನ್ನ ತಂಗಿ ಅವರ ಬಳಿ ಬಲು ಸಂತೃಪ್ತ ಹೃದಯದವಳಾಗಿ ಇರುವುದನ್ನೂ ವೀರ ಧೃಷ್ಟದ್ಯುಮ್ನ ಕಂಡ. ಅವರು ಗುಡುಗಿನಂಥ ಗಂಭೀರ ಧ್ವನಿಯಿಂದ ಮಾತನಾಡುತ್ತ ಯುದ್ಧವಾರ್ತೆಯನ್ನು ಹೇಳಿಕೊಳ್ಳುವುದನ್ನು ಕೇಳಿ ಇವರು ಉತ್ತಮ ಕ್ಷತ್ರಿಯರೆಂದು ನಿಶ್ಚಯಿಸಿದ.

ಕುಂತಿ ಪಾಂಡವರು ತಂದ ಭಿಕ್ಷಾನ್ನವನ್ನು ದ್ರೌಪದಿಯ ಕೈಗೆ ಕೊಟ್ಟು 'ಇದರಲ್ಲಿ ದೇವ ಬ್ರಾಹ್ಮಣ ಅತಿಥಿಗಳಿಗೆ ಒಂದಿಷ್ಟು ತೆಗೆದಿಟ್ಟು ಉಳಿದುದನ್ನು ಎರಡು ಭಾಗ ಮಾಡಿ ಒಂದನ್ನು ನನ್ನ ಈ ಎರಡನೆಯ ಮಗನಿಗೆ ನೀಡು. ಇನ್ನೊಂದನ್ನು ಆರು ಭಾಗ ಮಾಡು. ನಾವು ಆರು ಮಂದಿ ಸ್ವೀಕರಿಸೋಣ' ಎಂದಾಗ ದ್ರೌಪದಿ ಹಾಗೇ ಮಾಡಿದಳು. ಬಳಿಕ ಎಲ್ಲರೂ ನೆಲದ ಮೇಲೆ ದರ್ಭಶಯ್ಯೆಯಲ್ಲಿ ಮಲಗಿದರು. ಆದರೂ ದ್ರೌಪದಿ ಬಹಳ ಸಂತುಷ್ಟಳಾಗೇ ಇದ್ದಳು. ಮಲಗಿರುವಾಗ ನಿದ್ದೆ ಬರುವವರೆಗೂ ಎಲ್ಲರೂ ಯುದ್ಧದ ಬಗ್ಗೆಯೆ ಮಾತನಾಡುತ್ತಿದ್ದರು. ಅದರಿಂದ ಮರೆಯಲ್ಲಿ ನಿಂತು ಎಲ್ಲವನ್ನು ಗಮನಿಸುತ್ತಿದ್ದ ಧೃಷ್ಟದ್ಯುಮ್ನನಿಗೆ ಮನವರಿಕೆಯಾಯಿತು. ತನ್ನ ತಂಗಿ ಕ್ಷತ್ರಿಯನನ್ನೇ ವರಿಸಿದ್ದಾಳೆ ಎಂದು.

ಪ್ರಾತಸ್ತು ತಸ್ಯ ಜನಿತುರ್ವಚಸಾ ಪುರೋಧಾ-
ಸ್ತಾನ್ ಪ್ರಾಪ್ಯ ಮಂತ್ರವಿಧಿನಾ ಮರುದಾತ್ಮಜೇನ।
ಸಂಪೂಜಿತೋಽತಿವಿದುಷಾ ಪ್ರತಿಗೃಹ್ಯ ತಾಂಶ್ಚ
ಪ್ರಾವೇಶಯನ್ನೃಪತಿಗೇಹಮಮೈವ ಮಾತ್ರಾ ॥೧೪೬॥

ಬೆಳಿಗ್ಗೆ ದ್ರುಪದನ ಮಾತಿನಂತೆ ರಾಜಪುರೋಹಿತ ಪಾಂಡವರ ಬಳಿಗೆ ಬಂದು ವೇದೋಕ್ತವಿಧಿಗನುಸಾರ ಮಹಾಜ್ಞಾನಿಯಾದ ಭೀಮನಿಂದ ಸತ್ಕೃತನಾಗಿ ಅವರನ್ನು ಕುಂತೀಸಮೇತವಾಗಿ ಅರಮನೆಯೊಳಗೆ ಪ್ರವೇಶ ಮಾಡಿಸಿದ.

ದ್ರೌಪದಿಯ ವಿವಾಹಾಂಗವಾದ ಭೋಜನ ಕೂಟಕ್ಕೂ ಮುಂದೆ ಪಾಣಿಗ್ರಹಣಕ್ಕೂ ನೀವೆಲ್ಲರೂ ಅರಮನೆಗೆ ದಯಮಾಡಿಸಬೇಕೆಂದು ದ್ರುಪದ ಪಾಂಡವರನ್ನು ಆಮಂತ್ರಿಸಿದ. ರಾಜಪುರೋಹಿತ ಅವರನ್ನು ಅರಮನೆಗೆ ಪ್ರವೇಶ ಮಾಡಿಸಿದ.

ತಾನಾಗತಾನ್ ಸಮಭಿಪೂಜ್ಯ ನಿಜಾತ್ಮಜಾಂ ಚ
ವಿಪ್ರಾದಿಯೋಗ್ಯಪೃಥಗುಕ್ತ ಪದಾರ್ಥಜಾತೈಃ ।
ಪೂರ್ಣಾನ್ ಗೃಹಾಂಶ್ಚತುರ ಏವ ದಿದೇಶ ರಾಜಾ
ತತ್ತ್ಯಾಯುಧಾದಿಪರಿಪೂರ್ಣಗೃಹಂ ಚ ತೇಽಗುಃ ॥೧೪೭॥

ಚತುರನಾದ ದ್ರುಪದ ತನ್ನ ಅರಮನೆಗೆ ಬಂದ ಪಾಂಡವರನ್ನೂ ತನ್ನ ಮಗಳನ್ನೂ ಚೆನ್ನಾಗಿ ಸತ್ಕರಿಸಿ ಅವರಿಗೆ ಬ್ರಾಹ್ಮಣಾದಿ ನಾಲ್ಕು ವರ್ಣದವರಿಗೆ ಉಚಿತವಾಗಿ ಪ್ರತ್ಯೇಕ ವಿಹಿತವಾದ ವಸ್ತುಗಳಿಂದ ನಾಲ್ಕು ಮನೆಗಳನ್ನು ಸಜ್ಜುಗೊಳಿಸಿ ತೋರಿಸಿದ. ಅವುಗಳಲ್ಲಿ ಕ್ಷತ್ರಿಯರಿಗೆ ವಿಹಿತವಾದ ಆಯುಧಾದಿ ವಸ್ತುಗಳಿಂದ ತುಂಬಿದ ಮನೆಯನ್ನೇ ಪಾಂಡವರು ಪ್ರವೇಶಿಸಿದರು.

ಭಕ್ಷ್ಯಭೋಜ್ಯಾದಿಗಳಿಂದ ತುಂಬಿದ ಮನೆ ಬ್ರಾಹ್ಮಣರಿಗೂ ಆಯುಧಾದಿಗಳಿಂದ ಸಜ್ಜಾದ ಮನೆ ಕ್ಷತ್ರಿಯರಿಗೂ ಧನಕನಕಾದಿ ಧಾನ್ಯಾದಿಗಳಿಂದ ತುಂಬಿದ ಮನೆ ವೈಶ್ಯರಿಗೂ ಕೋಲು ನೇಗಿಲು ಮುಂತಾದವುಗಳಿಂದ ತುಂಬಿದ ಮನೆ ಶೂದ್ರರಿಗೂ ಆಕರ್ಷಕವೆನಿಸುವುದು ಸ್ವಾಭಾವಿಕ. ಆದರಿಂದ ಪಾಂಡವರು ಕ್ಷತ್ರಿಯೋಚಿತವಾದ ಯುದ್ಧೋಪಯೋಗಿಸಾಮಗ್ರಿಗಳಿಂದ ಯುಕ್ತವಾದ ಮನೆಯನ್ನೇ ಆರಿಸಿಕೊಂಡರು. ಚತುರನಾದ ದ್ರುಪದನಿಗೆ ಇವರು ಕ್ಷತ್ರಿಯರೆಂಬುದು ಮನವರಿಕೆಯಾಯಿತು.

ಚೇಷ್ಟಾಸ್ವರಾಕೃತಿವಿವಕ್ಷಿತವೀರ್ಯಶೌರ್ಯ-
ಪ್ರಾಗಲ್ಭ್ಯಪೂರ್ವಕಗುಣೈಃ ಕ್ಷಿತಿಭರ್ತೃಪುತ್ರಾನ್ ।
ವಿಜ್ಞಾಯ ತಾನ್ ದ್ರುಪದ ಏತ್ಯ ಚ ಧರ್ಮಸೂನುಂ
ಪಪ್ರಚ್ಛ ಕೋಽಸಿ ನರವರ್ಯ ವದಸ್ವ ಸತ್ಯಂ ॥೧೪೮॥

ಶಾರೀರಕ್ರಿಯೆಗಳು, ಕಂಠಧ್ವನಿ, ಮೈಯ ಆಕಾರ, ಮಾತು, ವೀರ್ಯ, ಶೌರ್ಯ, ಧೈರ್ಯ ಮುಂತಾದ ಕ್ಷತ್ರಿಯಲ್ಲಿರಬೇಕಾದ ಎಲ್ಲ ಗುಣಗಳಿದ್ದುದರಿಂದ ಪಾಂಡವರನ್ನು

ರಾಜಕುಮಾರರೆಂದೇ ತಿಳಿದು ದ್ರುಪದ ಬಂದು ಧರ್ಮರಾಜನನ್ನು ಕೇಳಿದ. 'ನರವರ್ಯನೆ, ನೀನಾರು, ನಿಜ ಹೇಳು.'

ಸ ಪ್ರಾಹ ಮಂದಹಸಿತಃ ಕಿಮಿಹಾದ್ಯ ರಾಜನ್
ಪೂರ್ವಂ ಹಿ ವರ್ಣವಿಷಯೇ ನ ವಿಶೇಷ ಉಕ್ತಃ ।
ಪುತ್ರೀಕೃತೇ ತವ ಸುತೇನ ತು ಲಕ್ಷ್ಯವೇಧ
ಉಕ್ತೋ ನರೇಂದ್ರಸಮಿತೌ ಸ ಕೃತೋಽಪ್ಯನೇನ ॥೧೪೯॥

ಧರ್ಮರಾಜ ನಸುನಕ್ಕು ನುಡಿದ, 'ರಾಜ, ಅದರಿಂದೇನು ಪ್ರಯೋಜನ? ಹಿಂದೆ ವರ್ಣದ ವಿಷಯದಲ್ಲಿ ವಿಶೇಷವೇನೂ ಉಕ್ತವಾಗಿರಲಿಲ್ಲ. ಮಗಳಿಗಾಗಿ, ರಾಜರ ಮುಂದೆ ನಿನ್ನ ಮಗ, ಲಕ್ಷ್ಯವೇಧ ಮಾಡಬೇಕೆಂದು ಮಾತ್ರ ಹೇಳಿದ್ದ. ಅದನ್ನು ನನ್ನ ತಮ್ಮ ಮಾಡಿದ್ದಾನೆ!'

'ರಾಜನೆ, ನಿನ್ನೆ, ನಿನ್ನ ಮಗಳ ಸ್ವಯಂವರಕ್ಕೆ ಪಣವನ್ನು ಘೋಷಿಸುವಾಗ ನಿನ್ನ ಮಗ ಇಂಥ ವರ್ಣದವರೇ ಪಣವನ್ನು ಗೆಲ್ಲಬೇಕೆಂದು ವಿಶೇಷವನ್ನು ಏನೂ ಹೇಳಲಿಲ್ಲ. ಕೇವಲ ಲಕ್ಷ್ಯವೇಧ ಮಾಡಬೇಕೆಂದು ಮಾತ್ರ ಹೇಳಿದ್ದಾನೆ. ಈಗ ಸ್ವಯಂವರವಾದ ಬಳಿಕ ಪಣವನ್ನು ಗೆದ್ದವನು ಯಾವ ವರ್ಣದವನೆಂದು ವಿಚಾರಿಸಿ ತಿಳಿದು ಏನು ಪ್ರಯೋಜನ?' ಎಂದು ಧರ್ಮರಾಜ ನಸುನಕ್ಕು ವಿನೋದಕ್ಕಾಗಿ ದ್ರುಪದನನ್ನು ಆಕ್ಷೇಪಿಸುತ್ತಾನೆ. ಮಹಾಭಾರತದಲ್ಲಿ ರಾಜನ ಪರವಾಗಿ ಪುರೋಹಿತ ಕೇಳಿದಾಗ ಧರ್ಮರಾಜ ಹೀಗೆ ಉತ್ತರಿಸುತ್ತಾನೆ.

ಏವಂ ಬ್ರುವಾಣಮಥ ತಂ ಪೃಥಯಾ ಸಹೈವ
ರಾಜಾ ವದೇತಿ ಪುನರೇವ ಯಯಾಚ ವಿಷಃ ।
ಸರ್ವಂ ಪೃಥಾಪ್ಯವದತಾಂ ಸ ಚ ತೇನ ತುಷ್ಟೋ
ವಾಚಂ ಜಗಾದ ಕೃತಕೃತ್ಯ ಇವಾಸಮದ್ಯ ॥೧೫೦॥

ಧರ್ಮರಾಜ ಹೀಗೆ ಹೇಳಿದಾಗ ದ್ರುಪದ ಅವನನ್ನೂ ಕುಂತಿಯನ್ನೂ ಮತ್ತೆ ಮತ್ತೆ 'ನಿಜ ಹೇಳಿರೆಂ'ದು ಬೇಡಿದ. ಆಗ ಧರ್ಮರಾಜ ಕುಂತಿ ಇಬ್ಬರೂ ಎಲ್ಲ ಸಂಗತಿಗಳನ್ನೂ ವಿವರವಾಗಿ ಹೇಳಿದರು. ಅದರಿಂದ ದ್ರುಪದ ಸಂತುಷ್ಟನಾಗಿ 'ನಾನೀಗ ಕನ್ಯಾದಾನ ಕಾರ್ಯದಲ್ಲಿ ಕೃತಕೃತ್ಯನಾದೆನೆಂ'ದು ನುಡಿದ.

ಒಬ್ಬಳು ಕನ್ಯೆ ಐವರಿಗೆ ಮನದನ್ನೆ

ಪಾರ್ಥಾರ್ಥಮೇವ ಹಿ ಮಯೈಷ ಕೃತಃ ಪ್ರಯತ್ನಃ
ತ್ವಂ ಫಲ್ಗುನೋಽನ್ಯ ಉತ ವಾದ್ಯ ಕರಂ ಸುತಾಯಾಃ ।

ಗೃಹ್ಣಾತ್ವಿತೀರಿತ ಇಮಂ ಸ ತು ಧರ್ಮಸೂನು-
ರಾಹ ಸ್ಮ ಸರ್ವ ಇತಿ ಮೇ ಮನಸಿ ಪ್ರರೂಢಂ ॥೧೫೧॥

ಪಾರ್ಥನಿಗೋಸ್ಕರವೆಂದೇ ನಾನು ಈ ಪ್ರಯತ್ನ ಮಾಡಿದ್ದೇನೆ. ಈಗ ನೀನಾಗಲಿ ಅರ್ಜುನನಾಗಲಿ ಅಥವಾ ಇನ್ನೊಬ್ಬ ಪಾಂಡವನಾಗಲಿ ನನ್ನ ಮಗಳ ಪಾಣಿಗ್ರಹಣ ಮಾಡಲಿ' ಎಂದು ದ್ರುಪದ ಹೇಳಿದಾಗ ಧರ್ಮರಾಜ ನುಡಿದ, 'ಎಲ್ಲರೂ ಪಾಣಿಗ್ರಹಣ ಮಾಡಲಿ ಎಂದು ನನ್ನ ಮನಸಿನಲ್ಲಿ ಸಂಕಲ್ಪ ಮೂಡಿದೆ.'

ಅರ್ಜುನನಿಗೋಸ್ಕರವೇ ಪುತ್ರ ಕಾಮೇಷ್ಟಿಯಿಂದ ದ್ರೌಪದಿಯನ್ನು ಮಗಳನ್ನಾಗಿ ಪಡೆದಿದ್ದಾನೆ ದ್ರುಪದ. ಸ್ವಯಂವರ ಪಣವನ್ನು ಗೆದ್ದವನೂ ಅರ್ಜುನನೆ. ಆದರೆ ಹಿರಿಯರಾದ ಧರ್ಮರಾಜ ಭೀಮಸೇನರು ಇನ್ನೂ ಅವಿವಾಹಿತರಾಗಿರುವಾಗ ಅರ್ಜುನ ಪಾಣಿಗ್ರಹಣಕ್ಕೆ ಒಪ್ಪುವುದಿಲ್ಲವಾದರೆ ಧರ್ಮರಾಜನಾಗಲಿ ಅವನಾಜ್ಞೆಯಂತೆ ಇನ್ನೊಬ್ಬ ಪಾಂಡವನಾಗಲಿ ದ್ರೌಪದಿಯನ್ನು ಮದುವೆಯಾಗಲಿ ಎನ್ನುತ್ತಾನೆ. ದ್ರುಪದ. ಧರ್ಮರಾಜನ ಮನೋಗತ ಎಲ್ಲರೂ ಮದುವೆಯಾಗಲಿ ಎಂದು. ಅದಕ್ಕೆ ಕುಂತಿ ಹಾಗೆ ನುಡಿದುದೂ ಒಂದು ಕಾರಣ.

ನಾತ್ರ ಪ್ರಮಾ ಮಮ ಹೃದಿ ಪ್ರತಿಭಾತ್ಯಥಾಪಿ
ಧರ್ಮಾಚಲಾ ಮಮ ಮತಿರ್ಹಿ ತದೇವ ಮಾನಂ ।
ಇತ್ಯುಕ್ತ ವತ್ಯಪಿ ಸಹೈವ ಸುತೇನ ರಾಜಾ
ನೈವೈಚ್ಛದತ್ರ ಭಗವಾನಗಮಚ್ಚ ಕೃಷ್ಣಃ ॥೧೫೨॥

'ಇದಕ್ಕೆ ಶಾಸ್ತ್ರಪ್ರಮಾಣವೇನೂ ನನ್ನ ಬುದ್ಧಿಯಲ್ಲಿ ಹೊಳೆಯುತ್ತಿಲ್ಲ. ಆದರೂ ನನ್ನ ಬುದ್ಧಿ ಧರ್ಮದಲ್ಲಿ ನಿಶ್ಚಲವಾಗಿದೆ. ಅದರಿಂದ ಅದೇ ಪ್ರಮಾಣ.' ಹೀಗೆ ಧರ್ಮರಾಜ ಹೇಳಿದರೂ ದ್ರುಪದ ಧೃಷ್ಟದ್ಯುಮ್ನರು ಸರ್ವಥಾ ಒಪ್ಪಲಿಲ್ಲ. ಅಷ್ಟರಲ್ಲಿ ಅಲ್ಲಿಗೆ ಭಗವಾನ್ ಬಾದರಾಯಣರು ಬಂದರು.

ಮಹಾಭಾರತದಲ್ಲಿ ಪಾಂಡವರಿಗೆ ಐವರಿಗೂ ದ್ರೌಪದಿಯಲ್ಲಿ ಮನಸ್ಸಾಗಿದೆ. ದ್ರೌಪದಿಗೂ ಐವರಲ್ಲಿ ಮನಸ್ಸಾಗಿದೆ. ಈಗ ಯಾರಾದರೊಬ್ಬ ಮದುವೆಯಾದರೆ ಐವರಲ್ಲಿ ಒಡಕು ಉಂಟಾಗಬಹುದು ಎಂದು ಧರ್ಮರಾಜನಿಗೆ ಭಯ -'ಮಿಥೋ ಭೇದ ಭಯಾತ್' ಪಣವನ್ನು ಗೆದ್ದವನೆಂದು ಅರ್ಜುನನೆ ಮದುವೆಯಾದರೆ ಹಿರಿಯರು ಅವಿವಾಹಿತರಾಗಿರುವಾಗ ಹಾಗೆ ಮಾಡುವುದು ಮಹಾ ಧರ್ಮಲೋಪ. ಆದರೂ ಒಬ್ಬಸ್ತ್ರೀ ಅನೇಕ ಪುರುಷರನ್ನು ಮದುವೆಯಾಗಲು ಶಾಸ್ತ್ರ ಸಂಮತಿಯುಂಟೆ? ಎಂದರೆ ಕಾಣುತ್ತಿಲ್ಲ. 'ಆತ್ಮನಸ್ತುಷ್ಟಿರೇವಚ'

ಎಂಬಂತೆ ಶಿಷ್ಟರಿಗೆ ತಮ್ಮ ಮನಸ್ಸಿಗೆ ಯಾವುದು ಒಪ್ಪುತ್ತದೋ ಅದೂ ಧರ್ಮ. ನನ್ನ ಮನಸ್ಸಿಗೆ ಇದು ಒಪ್ಪಿಗೆಯಾಗಿದೆ ಎನ್ನುತ್ತಾನೆ ಧರ್ಮರಾಜ. ಈ ಸಮಸ್ಯೆಯ ಪರಿಹಾರಕ್ಕೆ ಎಲ್ಲ ಶಾಸ್ತ್ರವೂ ಯಾವ ಹರಿಯ ಆಜ್ಞೆಯೆ ಆಗಿರುವುದೋ ಆ ಹರಿಯೂ ಬಾದರಾಯಣ ರೂಪದಿಂದ ಬಂದಿದ್ದಾನೆ.

ವ್ಯಾಸಂ ತಮೀಕ್ಷ್ಯ ಭಗವಂತಮಗಣ್ಯಪೂರ್ಣ-
ನಿತ್ಯಾವ್ಯಯಾತ್ಮ ಗುಣಮಾಶು ಸಮಸ್ತ ಏವ ।
ನತ್ವಾಭಿಪೂಜ್ಯ ವರಪೀಠಗತಸ್ಯ ಚಾಜ್ಞಾ-
ಮಾದಾಯ ಚೋಪವಿವಿಶುಃ ಸಹಿತಾಸ್ತದಂತೇ ॥೧೫೩॥

ಅಗಣಿತ ಗುಣಪೂರ್ಣರಾದ ನಿತ್ಯ ಅವ್ಯಯ ಸ್ವರೂಪಭೂತ ಗುಣಶಾಲಿಗಳಾದ ಭಗವಾನ್ ವೇದವ್ಯಾಸರನ್ನು ಕಂಡು ಎಲ್ಲರೂ ನಮಿಸಿ ಸತ್ಕರಿಸಿ, ಶ್ರೇಷ್ಠವಾದ ಆಸನದಲ್ಲಿ ಅವರು ಕುಳಿತ ಬಳಿಕ ಅವರಿಂದ ಆಜ್ಞೆ ಪಡೆದು ಅವರ ಬಳಿ ಎಲ್ಲರೂ ಜೊತೆಗೆ ಕುಳಿತರು.

ಕೃಷ್ಣಸ್ತದಾಹ ನೃಪತಿಂ ಪ್ರತಿ ದೇಹಿ ಕನ್ಯಾಂ
ಸರ್ವೇಭ್ಯ ಏವ ವೃಷವಾಯುಪುರಂದರಾ ಹಿ ।
ನಾಸತ್ಯದಸ್ರಸಹಿತಾ ಇಮ ಏವ ಇಂದ್ರಾಃ
ಪೂರ್ವೇ ಚ ಸಂಪ್ರತಿತನಶ್ಚ ಪರೇಹ್ಯಿ ಪಶ್ಚಾತ್ ॥೧೫೪॥
ಏಷಾಂ ಸ್ತ್ರಿಯಶ್ಚ ನಿಖಿಲಾ ಅಪಿ ಚೈಕದೇಹಾಃ
ಪುತ್ರೀ ತವೈವ ನ ತತೋಽತ್ರ ವಿರುದ್ಧತಾ ಹಿ ।
ಇತ್ಯುಕ್ತವತ್ಯಪಿ ಯದಾ ದ್ರುಪದಶ್ಚಕಾರ
ಸಂವಾದಿನೀಂ ನ ಧಿಯಮೇನಮಥಾಹ ಕೃಷ್ಣಃ ॥೧೫೫॥

ವೇದವ್ಯಾಸರು ಆಗ ದ್ರುಪದನನ್ನು ಕುರಿತು 'ಎಲ್ಲರಿಗೂ ಕನ್ಯಾದಾನ ಮಾಡು' ಇವರು ಯಮ ವಾಯು ಪುರಂದರ ನಾಸತ್ಯ ದಸ್ರರು. ಯಜ್ಞನಾಮಕ ಹರಿಯ ಅನಂತರದಲ್ಲಿ ಇಂದ್ರಪದವಿಯನ್ನಾಳಿದ ಹಿಂದಿನ ಮತ್ತು ಈಗಿನ ಇಂದ್ರರು. ಇವರ ಪತ್ನಿಯರು ಒಂದೇ ಶರೀರವುಳ್ಳವರಾಗಿ ನಿನ್ನ ಮಗಳಾಗಿ ಜನಿಸಿದ್ದಾರೆ. ಅದರಿಂದ ಇಲ್ಲಿ ವಿರೋಧವಿಲ್ಲ' ಎಂದು ಹೇಳಿದರೂ ದ್ರುಪದ ಮಗಳನ್ನು ಐವರಿಗೆ ಕೊಡಲು ಮನಸ್ಸು ಮಾಡಲಿಲ್ಲ. ಆಗ ವೇದವ್ಯಾಸರು ಅವನಿಗೆ ಹೇಳಿದರು.

ದಿವ್ಯಂ ಹಿ ದರ್ಶನಮಿದಂ ತವ ದತ್ತಮದ್ಯ
ಪಶ್ಯಾಶು ಪಾಂಡುತನಯಾನ್ ದಿವಿ ಸಂಸ್ಥಿತಾಂಸ್ತ್ವಂ ।
ಏತಾಂ ಚ ತೇ ದುಹಿತರಂ ಸಹ ತೈಃ ಪೃಥಕ್ಸ್ಥಾಂ
ತಲ್ಲಕ್ಷ್ಮಭಿಃ ಸಹ ತತಃ ಕುರು ತೇ ಯಥೇಷ್ಟಂ ॥೧೫೬॥

'ನಿನಗೆ ಈಗ ದಿವ್ಯದೃಷ್ಟಿ ನೀಡಿದ್ದೇನೆ. ದೇವಲೋಕದಲ್ಲಿರುವ ಪಾಂಡವರನ್ನೂ ಜೊತೆಗೆ,

ಅವರೊಡನೆ ಬೇರೆ ಬೇರೆಯಾಗಿ ಆಯಾ ಲಕ್ಷಣಗಳಿಂದ ಒಪ್ಪುತ್ತ ನಿಂತಿರುವ ನಿನ್ನ ಮಗಳನ್ನೂ ಬೇಗನೆ ನೋಡು. ಬಳಿಕ ನಿನ್ನ ಇಷ್ಟದಂತೆ ಮಾಡು.'

ವ್ಯಾಸರು ಮೊದಲಿಗೆ ಎಲ್ಲರಿಗೂ ನಿಮ್ಮ ನಿಮ್ಮ ಅಭಿಪ್ರಾಯ ಹೇಳಿರಿ ಎಂದರು. ದ್ರುಪದ ಧೃಷ್ಟದ್ಯುಮ್ನರಿಬ್ಬರೂ ಪಂಚಪತಿತ್ವ ಧರ್ಮವಲ್ಲ ಎಂದರು. ಧರ್ಮರಾಜನೆಂದ, 'ನನ್ನ ಅಂತಃಕರಣ ಪಂಚಪತಿತ್ವವನ್ನು ಒಪ್ಪಿದೆ. ತಾಯಿಯಾದ ಕುಂತಿಯ ಆಜ್ಞೆಯೂ ಹಾಗೇ ಇದೆ. ಗೌತಮವಂಶದ ಜಟಿಲೆ ಏಳು ಮಂದಿ ಮುನಿಗಳನ್ನು ವಿವಾಹವಾದ, ವಾರ್ಷ್ಣೆ ಹತ್ತುಮಂದಿ ಪ್ರಚೇತಸರನ್ನು ಮದುವೆಯಾದ ಉದಾಹರಣೆಗಳಿವೆ' ಎಂದು. ಕುಂತಿ, 'ನಾನೇನೋ ಹೇಳಿಬಿಟ್ಟೆ, ಈಗ ಅದು ಅಸತ್ಯವಾಗುವುದೋ ಎಂದು ನನಗೆ ಭಯ' ಎಂದಳು. ವ್ಯಾಸರು 'ಅಸತ್ಯವಾಗದು' ಎಂದು ಅಭಯನೀಡಿ ದ್ರುಪದನನ್ನು ಏಕಾಂತಕ್ಕೆ ಒಯ್ದು ದ್ರೌಪದಿಯ ಜನ್ಮರಹಸ್ಯವನ್ನು ಹೇಳಿದರು. ದಿವ್ಯದೃಷ್ಟಿಯನ್ನೂ ನೀಡಿದರು.

ಇತ್ಯುಕ್ತವಾಕ್ಯಮನು ತಾನ್ ಸ ದದರ್ಶ ರಾಜಾ
ಕೃಷ್ಣಪ್ರಸಾದಬಲತೋ ದಿವಿ ತಾದೃಶಾಂಶ್ಚ।
ಏತಾನ್ ನಿಶಾಮ್ಯ ಚರಣೌ ಜಗದೀಶಿತುಶ್ಚ
ಭೀತೋ ಜಗಾಮ ಶರಣಂ ತದನಾದರೇಣ ॥೧೫೭॥

ವೇದವ್ಯಾಸರು ಹೀಗೆ ಹೇಳಿದೊಡನೆ ಅವರ ಅನುಗ್ರಹ ಬಲದಿಂದ ರಾಜಾ ದ್ರುಪದ ದೇವಲೋಕದಲ್ಲಿ ಪಾಂಡವರು ಯಮ ವಾಯು ಪುರಂದರಾದಿ ಲಕ್ಷಣಯುಕ್ತರಾಗಿ ನಿಂತಿದ್ದುದನ್ನು ಮತ್ತು ದ್ರೌಪದಿ ಅವರ ಬಳಿಯಲ್ಲಿ ಶ್ಯಾಮಲಾ ಭಾರತ್ಯಾದಿ ಲಕ್ಷಣಯುಕ್ತಳಾಗಿ ಐದು ರೂಪಗಳಿಂದ ನಿಂತಿದ್ದುದನ್ನೂ ನೋಡಿ 'ಜಗದೊಡೆಯನ ಪಾದಗಳನ್ನು ನಾನು ಅನಾದರಿಸಿದೆನಲ್ಲ!' ಎಂದು ಭೀತನಾಗಿ ಶರಣು ಹೊಂದಿದ.

ದತ್ವಾಭಯಂ ಸ ಭಗವಾನ್ ದ್ರುಪದಸ್ಯ ಕಾರ್ಯೇ
ತೇನೋಮಿತಿ ಸ್ಮ ಕಥಿತೇ ಸ್ವಯಮೇವ ಸರ್ವಾಂ।
ವೈವಾಹಿಕೀಂ ಕೃತಿಮಥ ವ್ಯದಧಾಚ್ಚ ಧೌಮ್ಯ-
ಯುಕ್ತಃ ಕ್ರಮೇಣ ಜಗೃಹುರ್ನಿಖಿಲಾಶ್ಚ ಪಾಣಿಂ ॥೧೫೮॥

ಭಗವಾನ್ ವೇದವ್ಯಾಸರು ದ್ರುಪದನಿಗೆ ಅಭಯನೀಡಿ, ಅವನು ಕನ್ಯಾದಾನ ಕಾರ್ಯಕ್ಕೆ ಸಂಮತಿಸಿದಾಗ ಧೌಮ್ಯರ ಜೊತೆಗೆ ತಾನೇನಿಂತು ಎಲ್ಲ ವಿವಾಹ ಕಾರ್ಯಗಳನ್ನು ನಡೆಸಿಕೊಟ್ಟರು. ಪಾಂಡವರೆಲ್ಲರೂ ಕ್ರಮವಾಗಿ ಪಾಣಿಗ್ರಹಣ ಮಾಡಿದರು.

ವ್ಯಾಸರು ಧರ್ಮರಾಜನಿಗೆ ಇಂದೇ ಪುಷ್ಯನಕ್ಷತ್ರ ಒಳ್ಳೆಯದಿನ

ಪಾಣಿಗ್ರಹಣ ಮಾಡು ಎನ್ನುತ್ತ ಧೌಮ್ಯರ ಪೌರೋಹಿತ್ಯದಲ್ಲಿ ವಿವಾಹ ಮಾಡಿಸಿದರು. ಕ್ರಮೇಣ ದಿನಕ್ಕೊಬ್ಬರಂತೆ ಐವರೂ ವಿವಾಹವಾದರು. ಪುಷ್ಪವೃಷ್ಟಿಯಾಯಿತು.

ಪಾಂಚಾಲಕೇಷು ಚ ಮಹೋತ್ಸವ ಆಸ ರಾಜಾ
ತುಷ್ಟೋಽಭವತ್ಸಹ ಸುತೈಶ್ಚ ನಿಜೈಶ್ಚ ಸರ್ವೈಃ।
ಪೌರೈಶ್ಚ ಜಾನಪದಿಕೈಶ್ಚ ಯಥೈವ ರಾಮೇ
ದತ್ತ್ವಾ ಸುತಾಂ ಜನಕ ಆಪ ಮುದಂ ತತೋಽನು ॥೧೫೯॥

ಪಾಂಚಾಲದೇಶದಲ್ಲಿ ಮಂಗಳ ಮಹೋತ್ಸವ ನಡೆಯಿತು. ರಾಜ ತನ್ನ ಮಕ್ಕಳು ಮತ್ತು ಬಂಧುಗಳೆಲ್ಲರ ಜೊತೆಗೆ, ಪೌರರ ಮತ್ತು ದೇಶವಾಸಿಗಳ ಜೊತೆಗೆ ಮಹೋತ್ಸವದ ಆನಂದವನ್ನು ಅನುಭವಿಸಿದ. ಹಿಂದೆ ಶ್ರೀರಾಮನಿಗೆ ತನ್ನ ಮಗಳನ್ನಿತ್ತು ಜನಕರಾಜ ಮುದಗೊಂಡಂತೆ, ದ್ರುಪದನೂ ಮುದಗೊಂಡ.

ಪಾಂಡವರ ಸಂಬಂಧವಾಯಿತೆಂದು ದ್ರುಪದ ತನಗೆ ಇನ್ನು ದೇವತೆಗಳಿಂದಲೂ ಭಯವಿಲ್ಲ ಎಂದನಂತೆ! ದ್ರುಪದನ ಸ್ತ್ರೀಯರು ಕುಂತಿಯ ನಾಮಸಂಕೀರ್ತನೆ ಮಾಡುತ್ತ ಅವಳ ಕಾಲಿಗೆ ತಲೆಬಾಗಿದರಂತೆ! ೧

ಉದ್ವಾಹ್ಯ ತತ್ರ ನಿವಸನ್ತ್ಸ್ವಥ ಪಾಂಡವೇಷು
ಶ್ರುತ್ವೈವ ರಾಮಸಹಿತಃ ಸಹ ಯಾದವೈಶ್ಚ।
ಆದಾಯ ಪಾರಿಬರ್ಹಂ ಬಹುಲಂ ಸ ಕೃಷ್ಣ
ಆಯಾನ್ಮಾದೈವ ಪೃಥಯಾ ಸಹಿತಾಂಶ್ಚ ಪಾರ್ಥಾನ್ ॥೧೬೦॥

ಪಾಂಡವರು ಮದುವೆಯಾಗಿ ಪಾಂಚಾಲದೇಶದಲ್ಲಿದ್ದಾಗ ಆ ವೃತ್ತಾಂತವನ್ನು ಕೇಳಿ ಶ್ರೀಕೃಷ್ಣ ಬಲರಾಮ ಮತ್ತು ಯಾದವರ ಸಹಿತನಾಗಿ ಬಹಳ ಉಡುಗೊರೆಗಳನ್ನು ತೆಗೆದುಕೊಂಡು ಕುಂತೀಸಮೇತರಾದ ಪಾಂಡವರ ಬಳಿಗೆ ಆನಂದದಿಂದ ಬಂದ.

ದೃಷ್ಟ್ವೈವ ತಂ ಮುಮುದುರಾಶು ಕುರುಪ್ರವೀರಾ
ಆಶ್ಲಿಷ್ಯ ಕೃಷ್ಣಮಥ ನೇಮುರಸೌ ಚ ಕೃಷ್ಣಾಂ।
ದೃಷ್ಟ್ವೈವ ಪ್ರದಾಯ ಗೃಹಯೋಗ್ಯಸಮಸ್ತಭಾಂಡಂ
ಸೌವರ್ಣಮೇಭ್ಯ ಉರುಭೂಷಣಮಚ್ಯುತೋಽದಾತ್ ॥೧೬೧॥

ಶ್ರೀಕೃಷ್ಣನನ್ನು ಕಂಡೊಡನೆ ಪಾಂಡವರು ಆನಂದಿಸಿದರು. ಬೇಗನೆ ಅವನನ್ನು ಆಲಿಂಗಿಸಿ ನಮಿಸಿದರು. ಕೃಷ್ಣ ದ್ರೌಪದಿಯನ್ನು ನೋಡಿ ಮನೆಗೆ ಬೇಕಾಗುವ ಎಲ್ಲ ಪಾತ್ರೆಗಳನ್ನೂ ನೀಡಿ ಪಾಂಡವರಿಗೆ ಬಹಳ ಚಿನ್ನದ ಆಭರಣಗಳನ್ನು ನೀಡಿದ.

ದೇವಾಂಗಯೋಗ್ಯಶುಭಕುಂಡಲಹಾರಮೌಲಿ-
ಕೇಯೂರವಸ್ತ್ರಸಹಿತಾನ್ಯುರುಭೂಷಣಾನಿ।

ಷಣ್ಣಾಂ ಪೃಥಕ್ ಪೃಥಗದಾತ್ ಪೃಥಗೇವ ಯೋಗ್ಯಾ-
ನ್ಯನ್ಯದ್ ದದಾವಥ ಪಿತೃಷ್ವಸುರಾತ್ಮ ಯೋಗ್ಯಂ ॥೧೬೨॥

ದೇವತೆಗಳ ಮೈಗೆ ಯೋಗ್ಯವಾದ ಶುಭಕರವಾದ ಕುಂಡಲ, ಹಾರ, ಕಿರೀಟ, ತೋಳ್ಬಂದಿ ವಸ್ತ್ರ ಮತ್ತು ಅನೇಕ ಆಭರಣಗಳನ್ನೂ ಆರುಮಂದಿಗೂ ಬೇರೆ ಬೇರೆಯಾಗಿ ಅವರವರಿಗೆ ತಕ್ಕುದಾದಂತೆ ಶ್ರೀಕೃಷ್ಣ ನೀಡಿದ. ಬಳಿಕೆ ಸೋದರತ್ತೆಯಾದ ಕುಂತಿಗೂ ಅವಳಿಗೆ ಯೋಗ್ಯವಾದ ಉಡುಗೊರೆ ಇತ್ತ.

ಕುಂತಿ ವಿಧವೆಯಾದ್ದರಿಂದ ಅವಳಿಗೆ ಯೋಗ್ಯವಾದ ಬೇರೆ ಉಡುಗೊರೆ. ಮಹಾಭಾರತದಲ್ಲಿ ಶ್ರೀಕೃಷ್ಣ ಆಭರಣ ವಸ್ತ್ರಾದಿಗಳನ್ನೂ ದಾಸದಾಸಿಯರನ್ನೂ ಕಳಿಸಿ ಕೊಡುತ್ತಾನೆ, ಸ್ವತಃ ಪಾಂಚಾಲದೇಶಕ್ಕೆ ಬಂದಂತೆ ಕಾಣುವುದಿಲ್ಲ. ಈ ಅಂಶ ಲುಪ್ತವಾಗಿರಬೇಕು.

ರತ್ನಾನಿ ಗೋಗಜತುರಂಗರಥಾನ್ ಸುವರ್ಣ-
ಭಾರಾನ್ ಬಹೂನಪಿ ದದಾವಥ ಚಾಶಿಷೋಽಗ್ರ್ಯಾಃ ।
ವ್ಯಾಸೋಽಪ್ಯದಾದಿಹ ಪರತ್ರ ಚ ಪಾರ್ಷತೋಽಪಿ
ಭೂಷಾರಥಾಶ್ವಗಜರತ್ನಸುಕಾಂಚನಾನಿ ॥೧೬೩॥

ಶ್ರೀಕೃಷ್ಣ ಪಾಂಡವರಿಗೆ ರತ್ನಗಳನ್ನೂ ಗೋವು ಗಜ ತುರಗ ರಥಗಳನ್ನೂ ಬಹಳ ಸುವರ್ಣ ಭಾರಗಳನ್ನೂ ಕೊಟ್ಟ. ಇಹ ಪರಗಳಲ್ಲಿ ಉತ್ತಮ ಸುಖದ ಆಶೀರ್ವಾದಗಳನ್ನು ವೇದವ್ಯಾಸರು ಇತ್ತರು. ದ್ರುಪದ ಭೂಷಣ ರಥ ಅಶ್ವಗಜ ರತ್ನ ಸುವರ್ಣಗಳನ್ನಿತ್ತ.

ಒಂದು ಸುವರ್ಣ ಭಾರ ಎಂದರೆ ಇಪ್ಪತ್ತು ತೊಲೆ ಚಿನ್ನ. ಅಂಥ ಚಿನ್ನದ ಗಟ್ಟಿಗಳನ್ನು ಲೆಕ್ಕವಿಲ್ಲದಷ್ಟು ಶ್ರೀಕೃಷ್ಣ ಕೊಟ್ಟ - ಜನಾರ್ದನೀಯ.

ದಾಸೀಶ್ಚ ದಾಸಸಹಿತಾಃ ಶುಭರೂಪವೇಷಾಃ
ಸಾಹಸ್ರಶೋ ದದತುರತ್ರ ಹರಿರ್ನೃಪಶ್ಚ ।
ತಾಸಾಂ ವಿಚಿತ್ರವಸನಾನ್ಯುರುರತ್ನಮಾಲಾಃ
ಪ್ರತ್ಯೇಕಶೋ ದದತುರಪ್ಯುರುಭೂಷಣಾನಾಂ ॥೧೬೪॥

ಮಂಗಲ ರೂಪವೇಷಗಳಿಂದ ಯುಕ್ತರಾದ ಸಾವಿರಾರು ದಾಸದಾಸಿಯರನ್ನೂ ಶ್ರೀಕೃಷ್ಣ ದ್ರುಪದರು ನೀಡಿದರು. ಬಹು ಆಭರಣಗಳಿಂದ ಅಲಂಕೃತರಾದ ದಾಸಿಯರಿಗೂ ಸುಂದರವಸ್ತ್ರಗಳನ್ನು, ಬಹಳ ರತ್ನಹಾರಗಳನ್ನು ಬೇರೆಬೇರೆಯಾಗಿ ನೀಡಿದರು.

ಮಾಸಾನ್ ಬಹೂನಪಿ ವಿಹೃತ್ಯ ಸಹೈವ ಪಾರ್ಥೈಃ
ಕೃಷ್ಣೋ ಯಯೌ ಯದುಪುರೀಂ ಸಹಿತೋಽಗ್ರಜೇನ ।

ಅಂತರ್ಹಿತೇ ಭಗವತಿ ಪ್ರತತೋರುಶಕ್ತೌ
ವ್ಯಾಸೇ ಚ ವತ್ಸರಮಿಹೋಷುರಿಮೇ ಚ ಪಾರ್ಥಾಃ ॥೧೬೫॥

ಅನೇಕ ತಿಂಗಳುಗಳ ಕಾಲ ಪಾಂಡವರೊಂದಿಗೆ ಶ್ರೀಕೃಷ್ಣ ವಿಹರಿಸಿ ಬಲರಾಮನೊಂದಿಗೆ ದ್ವಾರಕೆಗೆ ತೆರಳಿದ. ಪೂರ್ಣಮಹಾಶಕ್ತಿಯುಳ್ಳ ಭಗವಾನ್ ವ್ಯಾಸರೂ ಅಂತರ್ಧಾನಗೊಂಡ ಬಳಿಕ ಪಾಂಡವರು ಒಂದು ವರ್ಷ ಪಾಂಚಾಲ ನಗರದಲ್ಲಿ ವಾಸವಾಗಿದ್ದರು.

ಹತಾಶರಾದ ಕೌರವರ ಹಾರಾಟ

ವೈಚಿತ್ರವೀರ್ಯತನಯಾಃ ಸಹ ಸೌಬಲೇನ
ಕರ್ಣೇನ ಸಿಂಧುಪತಿನಾ ರಥಹಸ್ತಿಯೋದ್ಧೈಃ।
ಭೂರಿಶ್ರವಃಪ್ರಭೃತಿಭಿಶ್ಚ ಸಹೈವ ಹಂತುಂ
ಪಾಂಚಾಲರಾಜಮಗುರೇತ್ಯ ಪುರೀಂ ಪುನಸ್ತೇ ॥೧೬೬॥

ಕೌರವರು ಶಕುನಿ ಕರ್ಣ ಜಯದ್ರಥ ಭೂರಿಶ್ರವ ಮುಂತಾದವರೊಂದಿಗೆ ರಥಗಜ ಪದಾತಿ ಸೈನ್ಯಸಮೇತರಾಗಿ ತಮ್ಮ ನಗರಕ್ಕೆ ಹೋಗಿ ಪುನಃ ದ್ರುಪದನನ್ನು ಕೊಲ್ಲುವ ಉದ್ದೇಶದಿಂದ ಅವನ ನಗರವನ್ನು ಮುತ್ತಿ ಆಕ್ರಮಿಸಿದರು.

ಕರ್ಣನ ಸಲಹೆ ಇದು. ಸ್ವಯಂವರ ಕಾಲದಲ್ಲಿ ಆದ ಪರಾಭವಕ್ಕೆ ಪ್ರತೀಕಾರವಾಗಿ ಎರಡನೇ ಬಾರಿ ದ್ರುಪದನ ಮೇಲೆ ಆಕ್ರಮಣ. ಸ್ವಯಂವರ ಕಾಲದಲ್ಲಿಯೆ ಎರಡನೆ ಬಾರಿ ರಾಜರು ಆಕ್ರಮಣಕ್ಕೆ ಬಂದಾಗ ಕೃಷ್ಣ ತಡೆದಿದ್ದ. ಆಗ ಯಾದವವೀರರು ತಮ್ಮ ಮೇಲೆ ತಿರುಗಿಬಿದ್ದರೆ ಕಷ್ಟವೆಂದು ಭಯದಿಂದ ಹಿಂತಿರುಗಿದ್ದರು. ಈಗ ದ್ರುಪದನ ರಕ್ಷಣೆಗೆ ಯಾದವರು ಇಲ್ಲ ಎಂದು ಧೈರ್ಯದಿಂದ ಎರಡನೇ ಬಾರಿ ಆಕ್ರಮಣ ನಡೆಸಿದ್ದರು.

ತೈರರ್ದಿತೇ ಸ್ವಪುರ ಆಶು ಸ ಸೋಮಕಾನಾಂ
ರಾಜಾ ಸುತೈಃ ಸಹ ಸಸೈನಿಕ ಉದ್ಗತೋಽಭೂತ್।
ತೇಷಾಂ ಚ ತಸ್ಯ ಚ ಬಭೂವ ಮಹಾನ್ ವಿಮರ್ದಃ
ಪುತ್ರೌ ಚ ತಸ್ಯ ನಿಹತೌ ವಿಧುತಾಶ್ಚ ಸೇನಾಃ ॥೧೬೭॥

ಕೌರವರು ತನ್ನ ನಗರವನ್ನು ಆಕ್ರಮಿಸಲು ಬಂದಾಗ ದ್ರುಪದ ಬೇಗನೆ ತನ್ನ ಮಕ್ಕಳೊಂದಿಗೆ ಸೈನಿಕರ ಸಮೇತನಾಗಿ ನಗರದಿಂದ ಹೊರಗೆ ಬಂದ. ಅವರಿಗೂ ಅವನಿಗೂ ದೊಡ್ಡ ಯುದ್ಧ ನಡೆಯಿತು. ಅವನ ಇಬ್ಬರು ಮಕ್ಕಳು ಹತರಾದರು. ಸೇನೆಗಳೂ ನಾಶವಾದುವು.

ನಗರದಿಂದ ಹೊರಗೆ ಒಂದು ಯೋಜನ ಪರ್ಯಂತ ಮಾತ್ರ
ದ್ರುಪದನನ್ನು ಶತ್ರುಗಳು ಯಾರೂ ಸೋಲಿಸದಂತೆ ಸೂರ್ಯನ ವರವಿದ್ದಿತು.

ದ್ರುಪದ ಪಾಂಡವರ ಬಲವಿದೆ ಎಂದು ಇನ್ನೂ ದೂರಕ್ಕೆ ಹೋಗಿ ಕೌರವರನ್ನು ಇದಿರಿಸಿದ್ದರಿಂದ ಸೋತ ಎಂದು ತಾಮ್ರಪರ್ಣೀಯದಲ್ಲಿ ಹೇಳಿದೆ.

ಚಿತ್ರೇ ಹತೇ ಸಮರ ಆಶು ಸಚಿತ್ರಕೇತೌ
ಧಾವತ್ಸು ಸೈನಿಕವರೇಷು ಚ ಪಾರ್ಷತಸ್ಯ ।
ಪಾರ್ಥಾ ರಥೈರಭಿಯಯುರ್ಧೃತಚಾಪಬಾಣಾ
ವೈಚಿತ್ರವೀರ್ಯತನಯಾನ್ ರವಿಸೂನುಯುಕ್ತಾನ್ ॥೧೬೮॥

ದ್ರುಪದನ ಮಕ್ಕಳು ಚಿತ್ರ ಮತ್ತು ಚಿತ್ರಕೇತುಗಳಿಬ್ಬರೂ ಯುದ್ಧದಲ್ಲಿ ಮಡಿದಾಗ ಅವನ ಉತ್ತಮ ಸೈನಿಕರೂ ಪಲಾಯನಗೈದಾಗ, ಪಾರ್ಥರು ರಥವೇರಿ ಬಿಲ್ಲುಬಾಣಗಳನ್ನು ಧರಿಸಿ ಕೌರವರನ್ನೂ ಕರ್ಣನನ್ನೂ ಇದಿರಿಸಿದರು.

ಭೀಮನಿಂದ ಕೌರವರಿಗೆ ಪಾಠ

ತೈಸ್ತೇಷು ಪಂಚಸು ಸಮಂ ಪ್ರತಿಯೋಧಯತ್ಸು
ಭೂರಿಶ್ರವಾಃ ಸರವಿಜೋ ವಿರಥಂ ಚಕಾರ।
ಶಕ್ರಾತ್ಮಜಂ ತದನು ಪರ್ವತಸನ್ನಿಕಾಶಂ
ದೋರ್ಭ್ಯಾಂ ತು ಮಾರುತಿರುರುಂ ತರುಮುದ್ಬಬರ್ಹ ॥೧೬೯॥

ಕೌರವರು ಪಂಚಪಾಂಡವರೊಡನೆ ಯುದ್ಧ ಮಾಡುತ್ತಿದ್ದಾಗ ಭೂರಿಶ್ರವ ಮತ್ತು ಕರ್ಣರು ಅರ್ಜುನನನ್ನು ವಿರಥನನ್ನಾಗಿ ಮಾಡಿದರು. ಒಡನೆ ಭೀಮ ಬೆಟ್ಟದಂಥ ಮರವನ್ನು ಕೈಗಳಿಂದ ಕಿತ್ತಿದ.

ಆಯಾಂತಮೀಕ್ಷ್ಯ ತರುಹಸ್ತ ಮಿಮಂ ಸಮೀರ-
ಸೂನುಂ ಸುಯೋಧನಮುಖಾ ನಿಖಿಲಾಃ ಸಕರ್ಣಾಃ ।
ಭೂರಿಶ್ರವಾಃ ಶಕುನಿಭೂರಿಜಯದ್ರಥಾಶ್ಚ
ಸರ್ವೇಽಪಿ ದುದ್ರುವುರಥೋ ವಿವಿಶುಃ ಪುರಂ ಸ್ವಂ ॥೧೭೦॥

ಭೀಮಸೇನ ಮರವನ್ನು ಹಿಡಿದುಕೊಂಡು ಬರುತ್ತಿದ್ದುದನ್ನು ನೋಡಿ ಎಲ್ಲ ದುರ್ಯೋಧನಾದಿಗಳೂ ಕರ್ಣ ಭೂರಿಶ್ರವ ಶಕುನಿ ಭೂರಿ ಜಯದ್ರಥರೂ ಎಲ್ಲರೂ ಪಲಾಯನ ಮಾಡಿದರು. ತಮ್ಮ ಪಟ್ಟಣಗಳನ್ನು ಹೊಕ್ಕರು.

ಬೇಸ್ತು ಬಿದ್ದ ಧೃತರಾಷ್ಟ್ರ

ಜ್ಞಾತ್ವಾ ಸಮಸ್ತಮಪಿ ತದ್ ವಿದುರೋಽಗ್ರಜಂ ಸ್ವಂ
ವರ್ಧಂತ ಏವ ತನಯಾ ಭವತೋ ನರೇಂದ್ರ ।
ಇತ್ಯಾಹ ಸೋಽಪಿ ಮುದಿತಃ ಸ್ವಸುತೇನ ಕೃಷ್ಣಾ
ಪ್ರಾಪ್ತೇತಿ ಭೂಷಣವರಾಣ್ಯದಿಶಚ್ಚ ವಾಸಃ ॥೧೭೧॥

ದ್ರೌಪದೀಸ್ವಯಂವರ ವೃತ್ತಾಂತವನ್ನೆಲ್ಲ ತಿಳಿದ ವಿದುರ ಧೃತರಾಷ್ಟ್ರನ ಬಳಿ 'ರಾಜನೆ, ನಿನ್ನ ಮಕ್ಕಳು ಜಯಶಾಲಿಗಳಾಗಿ ಮೆರೆಯುತ್ತಿದ್ದಾರೆ' ಎಂದ. ಧೃತರಾಷ್ಟ್ರ ತನ್ನ ಮಗ ದುರ್ಯೋಧನನೆ ಸ್ವಯಂವರದಲ್ಲಿ ದ್ರೌಪದಿಯನ್ನು ಗೆದ್ದನೆಂದು ಬಗೆದು ಸಂತೋಷದಿಂದ ವಿದುರನಿಗೆ ಶ್ರೇಷ್ಠ ಆಭರಣಗಳನ್ನೂ ವಸ್ತ್ರಗಳನ್ನೂ ನೀಡಿದ.

ಪಾರ್ಥಾ ಇತಿ ಸ್ಮ ವಿದುರೋಽವದದಾಶು ಸೋಽಪಿ
ಸ್ವಾಕಾರಗೂಹನಪರೋ ಯದಿ ತರ್ಹ್ಯತೀವ ।
ಭದ್ರಂ ಮೃತಾ ನ ಹಿ ಪೃಥಾಸಹಿತಾಃ ಸ್ಮ ಪಾರ್ಥಾ
ಸ್ತೇಷಾಂ ಪ್ರವೃತ್ತಿ ಮಪಿ ಮೇ ವದ ಸರ್ವಶಸ್ತ್ವಂ ॥೧೭೨॥

ಒಡನೆ 'ಪಾಂಡವರು!' ಎಂದ. ಈಗ ಧೃತರಾಷ್ಟ್ರ ತನ್ನ ಮನಸಿನೊಳಗಿನ ದುಷ್ಟಭಾವವನ್ನು ಮರೆಮಾಡುತ್ತ 'ಓಹೋ! ಹಾಗಾದರೆ ಇನ್ನೂ ಒಳ್ಳೆಯದಾಯಿತು. ಇದು ಮಹಾ ಶುಭವಾರ್ತೆಯಾಯಿತು. ಪಾಂಡವರೂ ಕುಂತಿಯೂ ಸತ್ತಿಲ್ಲವಲ್ಲ! ಅವರ ಎಲ್ಲ ವೃತ್ತಾಂತವನ್ನೂ ನನಗೆ ಹೇಳು' ಎಂದ.

ಮಹಾಭಾರತದಲ್ಲಿ ದ್ರೌಪದಿ ಪಾಂಡವರನ್ನು ವರಿಸಿದ್ದನ್ನೂ ಕೌರವರು ಅವರಮೇಲೆ ಆಕ್ರಮಣ ಮಾಡಿ ಸೋತು ಹಿಂತಿರುಗಿದುದನ್ನೂ ಕೇಳಿ ವಿದುರ ಬಹಳ ಸಂತೋಷಗೊಂಡು ಧೃತರಾಷ್ಟ್ರನ ಮುಂದೆ 'ಕೌರವರು ಜಯಶಾಲಿಗಳಾಗಿ ಮೆರೆಯುತ್ತಿದ್ದಾರೆ. 'ದಿಷ್ಟ್ಯಾ ಕುರವೋ ವರ್ಧಂತೇ' ಎಂದುಬಿಟ್ಟ, ಪಾಂಡವರೂ ಕೌರವರೇ. ಕುರುವಂಶದವರೇ ಎಂದು. ಆದರೆ ಅವರು ಅರಗಿನ ಮನೆಯಲ್ಲಿ ಸುಟ್ಟು ಹೋಗಿದ್ದಾರೆ, ಅವರಿಗೆ ಉತ್ತರಕ್ರಿಯೆಗಳೂ ನಡೆದಿವೆ. ಆದರಿಂದ ಈಗ ಕೌರವರೆಂದರೆ ನನ್ನ ಮಕ್ಕಳು ದುರ್ಯೋಧನಾದಿಗಳೇ ಎಂದುಕೊಂಡು ಧೃತರಾಷ್ಟ್ರ ಸಂತೋಷದಿಂದ ವಿದುರನಿಗೆ ಆಭರಣ ವಸ್ತ್ರಗಳನ್ನು ಬಹುಮಾನವಾಗಿ ಕೊಟ್ಟ ದ್ರೌಪದಿಯನ್ನು ಆಭರಣಗಳಿಂದ ಅಲಂಕರಿಸಿ ಕರೆತರುವುದಕ್ಕೆ ದುರ್ಯೋಧನನಿಗೆ ಆಜ್ಞೆ ಮಾಡಿದ-

ಅಥ ತ್ವಾಜ್ಞಾಪಯಾಮಾಸ ದ್ರೌಪದ್ಯಾ ಭೂಷಣಂ ಬಹು ।
ಆನೀಯತಾಂ ವೈ ಕೃಷ್ಣೇತಿ ಪುತ್ರಂ ದುರ್ಯೋಧನಂ ತದಾ ॥
(ಆದಿ 219.18)

ಧೃತರಾಷ್ಟ್ರ ತಪ್ಪು ತಿಳಿದನೆಂಬುದರ ಅರಿವಾಗಿ ವಿದುರ ಕೌರವರೆಂದರೆ ನನ್ನ ಅಭಿಪ್ರಾಯದಲ್ಲಿ ಪಾಂಡವರು ಹೊರತು ನಿನ್ನ ಮಕ್ಕಳಲ್ಲ, ಪಾಂಡವರು ದ್ರೌಪದಿಯನ್ನು ಗೆದ್ದರು. ಅವರು ತಮ್ಮನ್ನು ಆಕ್ರಮಿಸಲು ಬಂದ ರಾಜರನ್ನೂ

ಪರಾಭವಗೊಳಿಸಿ ದ್ರುಪದನಿಂದಲೂ ಸತ್ಕೃತರಾಗಿ ಮೆರೆಯುತ್ತಿದ್ದಾರೆ ಎಂದು ತನ್ನ ಮಾತಿಗೆ ವಿದುರ ತಾನೆ, ಬೇಗನೆ, ವಿವರಣೆ ನೀಡುತ್ತಾನೆ.

ನಿರ್ಣಯದಲ್ಲಿ 'ನಿನ್ನ ಮಕ್ಕಳು ಮೆರೆಯುತ್ತಿದ್ದಾರೆ' ಎನ್ನುತ್ತಾನೆ, ವಿದುರ. ಪಾಂಡುವಿನ ಮಕ್ಕಳೂ ಕೂಡ ಅವನ ಅಣ್ಣನಾದ ಧೃತರಾಷ್ಟ್ರನಿಗೆ ಮಕ್ಕಳೇ. ಆ ಭಾವನೆ ಅವನಿಗೆ ಇರಲಿ ಇಲ್ಲದಿರಲಿ, ವಿದುರ ಹಾಗೇ ಹೇಳುತ್ತಾನೆ. ಆದರೆ ಧೃತರಾಷ್ಟ್ರ ಭ್ರಮಿಸಿದ. ವಿದುರನಿಗೆ ಬಹುಮಾನವನ್ನೂ ನೀಡಿದ ಎನ್ನುತ್ತದೆ ವಾದಿರಾಜೀಯ ಮತ್ತು ವರದರಾಜೀಯ. ಧೃತರಾಷ್ಟ್ರ ಭ್ರಮೆಯಿಂದ ತನಗೆ ಬಹುಮಾನ ನೀಡಿದನೆಂಬುದು ವಿದುರನಿಗೆ ತಿಳಿದುಹೋಯಿತು. ಏಕೆಂದರೆ ದುರ್ಯೋಧನನಿಗೆ ದ್ರೌಪದಿಯನ್ನು ಕರೆತರಲು ಆಜ್ಞಾಪಿಸುತ್ತಾನೆ, ಧೃತರಾಷ್ಟ್ರನ ಈ ಭ್ರಮ ನಿರಸನಕ್ಕಾಗಿ ವಿದುರ 'ಪಾಂಡವರು ಗೆದ್ದರು' ಎನ್ನುತ್ತಾನೆ. ಆದರೆ ವಿದುರ ಧೃತರಾಷ್ಟ್ರನಿಂದ ಬಹುಮಾನವನ್ನು ಸ್ವೀಕರಿಸಿದುದು ಸರಿಯೆ? ಎಂಬ ಪ್ರಶ್ನೆ ಸಹಜ. ಅದಕ್ಕೂ ವಾದಿರಾಜೀಯ ಹೇಳುತ್ತದೆ– ಪಾಂಡವರ ಜಯದ ಈ ಕಾಲ ಮಹಾಮಂಗಳ ಮಹೋತ್ಸವದ ಕಾಲ. ಆಗ ರಾಜನಿಂದ ಬಹುಮಾನವನ್ನು ಸ್ವೀಕರಿಸುವುದು ಮಂಗಳಕರ. ತಿಳಿಯದೆ ಭ್ರಮದಿಂದ ಕೊಟ್ಟ ಧೃತರಾಷ್ಟ್ರನಿಗೂ ಕಿಂಚಿತ್ ಶ್ರೇಯಸ್ಸೇ ಆಗುವುದು ಎಂಬುದು ವಿದುರನ ಅಭಿಪ್ರಾಯವಾಗಿತ್ತು.[1]

ಭಾರತದಲ್ಲಿ ವಿದುರನಿಗೆ ಬಹುಮಾನ ನೀಡುವ ಅಂಶ ಲುಪ್ತವಾಗಿದೆ.

ಜನಾರ್ದನೀಯ ತಾಮ್ರಪರ್ಣೀಯಗಳಲ್ಲಿ – ಧೃತರಾಷ್ಟ್ರ ದ್ರೌಪದಿಗೆ ಆಭರಣ ವಸ್ತ್ರಗಳನ್ನು ನೀಡಿದನೆಂದು ಮಹಾಭಾರತ ಹೇಳಿರುವುದರಿಂದ ನಿರ್ಣಯಕ್ಕೂ ಅದೇ ಅಭಿಪ್ರಾಯ ಹೇಳಬೇಕು. ಹೀಗಾಗಿ 'ದ್ರೌಪದಿಗೆ' ಎಂದು ಅಧ್ಯಾಹಾರ ಮಾಡಿ ಅನ್ವಯ ಹೇಳಬೇಕು ಹೊರತು ವಿದುರನಿಗೆ ಬಹುಮಾನ ನೀಡಿದನೆಂದು ಗ್ರಹಿಸಕೂಡದು ಎಂದಿದೆ.[2] ಆದರೆ

---

1. ಭ್ರಾತೃತನಯಾನಾಮಪಿ ತನಯತ್ವಾಭಿಪ್ರಾಯೇಣ ತವ ತನಯಾ ವರ್ಧಂತ ಇತಿ ವಿದುರೇಣೋಕ್ತಂ। ಸ್ವತನಯಾ ಏವೇತಿ ಭ್ರಾಂತ್ಯಾ ಸೋಽಪಿ ಮುದಿತ ಇತ್ಯಾದ್ಯುಕ್ತಂ। ಪುನಃ ಪಾರ್ಥಾ ಇತಿ ವಿದುರೇಣೋಕ್ತೇ ಸ್ವಾಕಾರ ಗೂಹನ ಪರಃ ಸ್ವಸ್ಯಾಂತರ್ಹೃದಿ ಅಸಂತುಷ್ಟಾಕಾರ ಗೂಹನ ಪರಃ ಧೃತರಾಷ್ಟ್ರಃ ಯದಿತರ್ಹ್ಯತೀವ ಭದ್ರಮಿತ್ಯಾಹೇತಿ ಯೋಜನಾ। ಮಧ್ಯೇ ವಿದುರಸ್ಯ ದ್ರವ್ಯಪ್ರಾಪ್ತಿಃ ಪಾಂಡವ ಪಕ್ಷಪಾತಿತ್ವಾದಿತಿ ಜ್ಞೇಯಂ॥ –ವಾದಿರಾಜೀಯ

2. ಪಾರ್ಥಾ ಇತಿ ವಿದುರಾಭಿಪ್ರಾಯ ಮಜಾನನ್ ಸ್ವಸುತೇನ ದುರ್ಯೋಧನೇನ ಕೃಷ್ಣಾ ಪ್ರಾಪ್ತೇತಿ ಜ್ಞಾತ್ವಾ ಮುದಿತಃ ಸನ್ ಭೂಷಣವರಾಣಿ ವಾಸಶ್ಚಾದಿಶತ್। ವಿದುರಾಯೇತಿ ಶೇಷಃ। ಕೃಷ್ಣಾಯಾ ಇತಿ ಶೇಷಃ। ಅಥ ಚಾಜ್ಞಾಪಯಾಮಾಸ ದ್ರೌಪದ್ಯಾ ಭೂಷಣಂ ತುಹೀತಿ ಆದಿಪರ್ವಣಿ। –ಜನಾರ್ದನೀಯ

ಮಹಾಭಾರತದಲ್ಲಿ ಧೃತರಾಷ್ಟ್ರ ದ್ರೌಪದಿಗೆ ಆಭರಣಾದಿಗಳನ್ನು ನೀಡಿದನೆಂದು ಹೇಳಿಲ್ಲ, ಕಳಿಸಲೂ ಇಲ್ಲ. ದ್ರೌಪದಿಗಾಗಿ ಆಭರಣಗಳನ್ನು ತಾ ಎಂದು ದುರ್ಯೋಧನನಿಗೆ ಆಜ್ಞಾ ಮಾಡುತ್ತಾನಷ್ಟೆ[1]

ಇತ್ಯುಕ್ತ ಆಹ ವಿದುರಃ ಸ ಹಿಡಿಂಬವಧ್ಯಾ-
ಪೂರ್ವಾಂ ಪ್ರವೃತ್ತಿ ಮಖಿಲಾಮಪಿ ಲಕ್ಷ್ಯವೇಧಂ।
ಉದ್ವಾಹಮಪ್ಯಥ ನದೀಜಮುಖಾಶ್ಚ ಸರ್ವೇ
ತುಷ್ಟಾ ಬಭೂವುರಪಿ ವತ್ಸರಮೂಷುರೇವಂ ॥೧೭೩॥

ಧೃತರಾಷ್ಟ್ರ ಹೀಗೆ ಹೇಳಿದಾಗ ವಿದುರ ಹಿಡಿಂಬ ವಧೆಯಿಂದ ತೊಡಗಿ ಎಲ್ಲ ವೃತ್ತಾಂತವನ್ನೂ ಲಕ್ಷ್ಯವೇಧವನ್ನೂ ವಿವಾಹವನ್ನೂ ವರ್ಣಿಸಿದ. ಭೀಷ್ಮಾದಿಗಳೆಲ್ಲರೂ ಸಂತುಷ್ಟರಾದರು. ಆದರೆ ಪಾಂಡವರ ವೃತ್ತಾಂತವನ್ನು ತಿಳಿದೂ ಕೂಡ ಒಂದು ವರ್ಷ ಭೀಷ್ಮಾದಿಗಳು ಸುಮ್ಮನಿದ್ದರು. ಪಾಂಡವರು ಆ ಒಂದು ವರ್ಷಕಾಲ ದ್ರುಪದನ ರಾಜ್ಯದಲ್ಲಿ ವಾಸವಾಗಿದ್ದರು.

ವಿದುರನ ಹಿತಬೋಧೆ

ಶ್ರುತ್ವಾಥ ಕೃಷ್ಣಮುಪಯಾತಮುರು ಪ್ರದಾಯ
ರತ್ನಂ ಚ ಪಾಂಡುತನಯೇಷು ಗತಂ ಪುನಶ್ಚ।
ತಾತಪ್ಯಮಾನಹೃದಯಾಸ್ತು ಸುಯೋಧನಾದ್ಯಾ
ಮಂತ್ರಂ ಪ್ರಚಕ್ರುರಥ ಕರ್ಣಮುಖಾ ಯಯುಶ್ಚ ॥೧೭೪॥

ಶ್ರೀಕೃಷ್ಣ ಪುನಃ ಬಂದು ಪಾಂಡವರಿಗೆ ಬಹಳ ರತ್ನಗಳನ್ನಿತ್ತು ಹೋದನೆಂದು ಕೇಳಿ ದುರ್ಯೋಧನಾದಿಗಳು ಮನಸಿನಲ್ಲಿ ಸಂತಾಪಪಟ್ಟು ಮಂತ್ರಾಲೋಚನೆ ಗೈದರು. ಕರ್ಣನನ್ನು ಮುಂದೆ ಮಾಡಿಕೊಂಡು ಯುದ್ಧಕ್ಕೆ ಹೊರಟರು.

ಪಾಂಡವರನ್ನು ಉಪಾಯದಿಂದ ಕೊಲ್ಲಲು ಸಾಧ್ಯವಿಲ್ಲ. ಕೃಷ್ಣ ಯಾದವಸೇನೆಯನ್ನು ಪಾಂಡವರಿಗಾಗಿ ತಂದು ನಮ್ಮನ್ನು ಆಕ್ರಮಿಸುವ ಮೊದಲೇ ನಾವು ಪಾಂಡವರನ್ನು ಯುದ್ಧದಲ್ಲಿ ನಾಶಮಾಡಬೇಕು ಎಂಬ

3.. ಆದಿಶದಿತಿ। ದ್ರೌಪದ್ಯೈ ಪ್ರೇಷಯಾಮಾಸೇತ್ಯರ್ಥಃ। ತದುಕ್ತಂ ಭಾರತೇ-

ಮನ್ಯತೇ ಹಿ ವೃತಂ ಪುತ್ರಂ ಜ್ಯೇಷ್ಠಂ ದ್ರುಪದಕನ್ಯಯಾ।
ದುರ್ಯೋಧನಮವಿಜ್ಞಾನಾತ್ ಪ್ರಜ್ಞಾಚಕ್ಷುರ್ನರೇಶ್ವರಃ।
ತದಾ ತ್ವಾಜ್ಞಾಪಯಾಮಾಸ ದ್ರೌಪದ್ಯಾ ಭೂಷಣಂ ಬಹು।
ಆನೀಯತಾಂ ವೈ ಕೃಷ್ಣೇತೀತಿ।

ಕೇಚಿತ್ ವಿದುರಾಯಾದಿಶದಿತ್ಯರ್ಥಮಾಹುಃ। -ತಾಮ್ರಪರ್ಣೀಯ

ಕರ್ಣನ ಸಲಹೆಯಂತೆ ಕೌರವರು ಪಾಂಚಾಲನಗರಕ್ಕೆ ದಾಳಿಯಿಟ್ಟರು.

ಯುದ್ಧಾಯ ತೇಷು ಪುನರೇವ ರಥೈಃ ಪ್ರಯಾತೇ-
ಷ್ವಾಹಾಗ್ರಜಂ ಸ ವಿದುರೋಽಪಿ ನದೀಜಮುಖ್ಯಾನ್ ।
ಏತೇ ಹಿ ಪಾಪತಮಚೇತಸ ಏತ್ಯ ಪಾರ್ಥಾನ್
ಯುದ್ಧಾಯ ಮೃತ್ಯುಮುಪಯಾಂತಿ ನ ಸಂಶಯೋಽತ್ರ ॥೧೭೫॥

ಕೌರವರು ಪುನಃ ಯುದ್ಧಕ್ಕಾಗಿ ರಥವೇರಿ ಹೊರಟುಹೋದಾಗ ವಿದುರ ಧೃತರಾಷ್ಟ್ರನಿಗೂ ಭೀಷ್ಮಾದಿಗಳಿಗೂ ಹೇಳಿದ. 'ದುರ್ಯೋಧನಾದಿಗಳು ಅತ್ಯಂತ ಪಾಪಮಯ ಬುದ್ಧಿಯವರು. ಪಾಂಡವರ ಬಳಿಗೆ ಯುದ್ಧಕ್ಕೆ ಹೋಗಿ ಸಾಯುತ್ತಾರೆ. ಇದರಲ್ಲಿ ಸಂಶಯವಿಲ್ಲ.

'ಪುನಃ ಯುದ್ಧಕ್ಕಾಗಿ' ಎಂದರೆ ಒಮ್ಮೆ ಸ್ವಯಂವರ ಕಾಲದಲ್ಲಿ ಯುದ್ಧಮಾಡಿ ಸೋತು ಪಲಾಯನ ಮಾಡಿದ್ದರು. ಈಗ ಪುನಃ ಯುದ್ಧಕ್ಕೆ ಹೋದರು ಎನ್ನುತ್ತದೆ ತಾಮ್ರಪರ್ಣೀಯ.[1]

ಭೀಮಾರ್ಜುನೌ ವಿಷಹಿತುಂ ನ ಹಿ ಕಶ್ಚನಾಸ್ತಿ
ಸಾಮರ್ಥ್ಯಯುಕ್ ಸುರವರೇಷ್ವಪಿ ವರ್ಧಿತಾಸ್ತೇ ।
ಜ್ಞಾತ್ವೈವ ವತ್ಸರತ ಏವ ಮಹಾನಧರ್ಮ-
ಸ್ತೇಷಾಮುಪೇಕ್ಷಣಕೃತಸ್ತದಲಂ ನಿಯುಂಕ್ಷ್ವ ॥೧೭೬॥

ಭೀಮಾರ್ಜುನರನ್ನು ಇದಿರಿಸಲು ಸಾಮರ್ಥ್ಯ ಉಳ್ಳವರು ದೇವೋತ್ತಮರಲ್ಲಿಯೂ ಯಾರೂ ಇಲ್ಲ. ಅವರು ಈಗ ಪೂರ್ಣ ಬಲಿಷ್ಠರಾಗಿ ಬೆಳೆದುಬಿಟ್ಟಿದ್ದಾರೆ. ಅವರ ವೃತ್ತಾಂತವನ್ನು ತಿಳಿದೂ ನೀನು ಒಂದು ವರ್ಷಕಾಲ ಉಪೇಕ್ಷೆ ಮಾಡಿರುವುದು ಮಹಾಪಾಪಕರವಾಗಿದೆ. ಸಾಕು ಇನ್ನು ಈ ಉಪೇಕ್ಷೆ. ಯಾರಾದರೊಬ್ಬ ರಾಯಭಾರಿಯನ್ನು ಅವರ ಕಡೆಗೆ ಕಳಿಸು.

ಆನೀತಯೇ ಚ ವಿನಿಯುಜ್ಯ ಸುಸಾಂತ್ವಪೂರ್ವ-
ಮಾನೀಯ ಯೋಜಯ ನೃಪೈಷು ತಥಾರ್ಧರಾಜ್ಯಂ ।
ಏವಂ ಕೃತೇ ತವ ಭವೇತ್ ಕುಲವೃದ್ಧಯೇ ಹಿ
ಧರ್ಮಾಯ ಚೋಭಯವಿನಾಶಕರೋಽನ್ಯಥಾ ಸ್ಯಾಃ ॥೧೭೭॥

ರಾಜನೆ, ಪಾಂಡವರನ್ನು ಕರೆತರಲು ಒಬ್ಬ ರಾಯಭಾರಿಯನ್ನು ನೇಮಿಸಿ ಒಳ್ಳೆಯ ಸಾಂತ್ವನ ಪೂರ್ವಕವಾಗಿ ಕರೆಸಿಕೊಂಡು ಪ್ರೀತಿಯಿಂದ ಅವರಿಗೆ ಅರ್ಧರಾಜ್ಯ ಕೊಟ್ಟುಬಿಡು. ಹೀಗೆ ಮಾಡಿದಾಗ ನಿನ್ನ ಕುಲ ಮೆರೆಯುತ್ತದೆ. ನಿನಗೆ ಪುಣ್ಯ ಬರುತ್ತದೆ. ಹೀಗೆ ಮಾಡದಿದ್ದರೆ ಅವೆರಡನ್ನೂ ಕೆಡಿಸಿಕೊಳ್ಳುತ್ತಿ.

1. ಪುನರೇವೇತಿ। ಸ್ವಯಂವರಾರ್ಥೇ ಪೂರ್ವಂ ಗಮನಾತ್ ಪುನರೇವೇತ್ಯುಕ್ತಂ । -ತಾಮ್ರಪರ್ಣೀಯ

ಪಾಂಡವರು ತಿರುಗಿ ಹಸ್ತಿನಾವತಿಗೆ

ಇತ್ಯುಕ್ತವತ್ಯನು ತಥೇತ್ಯವದನ್ನದೀಜ್ಞೋ
ದ್ರೋಣಃ ಕೃಪಶ್ಚ ವಿದುರಂ ಸ ನೃಪೋಽಪ್ಯುವಾಚ।
ಯಾಹ್ಯಾನಯೇತಿ ಸ ಚ ವೇಗವತಾ ರಥೇನ
ತತ್ರಾಗಮತ್ತದನು ತೈರಭಿಪೂಜಿತಶ್ಚ ॥೧೭೮॥

ವಿದುರ ಹೀಗೆ ಹೇಳಿದಾಗ ಭೀಷ್ಮದ್ರೋಣಕೃಪರು ಹಾಗೆ ಮಾಡುವುದೇ ಯುಕ್ತ ಎಂದರು. ಧೃತರಾಷ್ಟ್ರ ವಿದುರನಿಗೆ ಹೇಳಿದ. 'ನೀನೇ ಹೋಗು ಅವರನ್ನು ಕರೆದು ತಾ.' ಒಡನೆ ವಿದುರ ವೇಗದ ರಥವೇರಿ ಪಾಂಚಾಲನಗರಕ್ಕೆ ಹೋದ. ಅಲ್ಲಿ ಪಾಂಡವರಿಂದ ಸತ್ಕೃತನಾದ.

ತತ್ಕಾಲ ಏವ ವಸುದೇವಸುತಶ್ಚ ಕೃಷ್ಣೋ
ವ್ಯಾಸಶ್ಚ ತಾನುಪಸಮೇತ್ಯ ದುರಂತಶಕ್ತೀ।
ಆದಾಯ ಕುಂತಿಸಹಿತಾನ್ ವಿದುರೇಣ ಯುಕ್ತೌ
ನಾಗಾಹ್ವಯಂ ಪುರಮಿತಾಂ ಸಹ ಭಾರ್ಯಯೈವ ॥೧೭೯॥

ಅದೇ ಕಾಲದಲ್ಲಿ ಅನಂತಶಕ್ತಿಯುಳ್ಳ ಶ್ರೀಕೃಷ್ಣ ಮತ್ತು ವೇದವ್ಯಾಸರು ಪಾಂಡವರಲ್ಲಿಗೆ ಬಂದು ವಿದುರನೊಂದಿಗೆ ಸೇರಿದರು. ಪಾಂಡವರನ್ನು ಕುಂತಿ ಮತ್ತು ದ್ರೌಪದಿಯರೊಂದಿಗೆ ಹಸ್ತಿನಾವತಿಗೆ ಕರೆತಂದರು.

ತೇಷ್ವಾಗತೇಷು ಸುಮಹಾನಭವತ್ಪ್ರಹರ್ಷಃ
ಪೌರಸ್ಯ ಜಾನಪದಿಕಸ್ಯ ಜನಸ್ಯ ಚೋಚ್ಚೈಃ।
ಭೀಷ್ಮಾದಿಕಾಶ್ಚ ಮುದಿತಾಃ ಪ್ರತಿಪೂಜ್ಯ ಗೇಹ-
ಮಾವೇಶಯನ್ ಸಹ ನೃಪೇಣ ಮಹೋತ್ಸವೇನ ॥೧೮೦॥

ಪಾಂಡವರು ಬಂದುದನ್ನು ಕಂಡು ನಾಗರಿಕರಿಗೂ, ಹಳ್ಳಿಯ ಜನರಿಗೂ ಬಹಳ ಸಂತೋಷವಾಯಿತು. ಭೀಷ್ಮ ಮುಂತಾದವರಿಗೆ ಮಹಾ ಆನಂದ. ಅವರು ಧೃತರಾಷ್ಟ್ರ ಸಮೇತರಾಗಿ ಪಾಂಡವರನ್ನು ಉಪಚರಿಸಿ ಮಹಾಸಂಭ್ರಮದಿಂದ ಧೃತರಾಷ್ಟ್ರನ ಅರಮನೆಯೊಳಗೆ ಪ್ರವೇಶ ಮಾಡಿಸಿದರು.

ಕೃಷ್ಣಾಮಪೂಜಯದತೀವ ಚ ಸೌಬಲೀ ಸಾ
ದುರ್ಯೋಧನಸ್ಯ ದಯಿತಾಸಹಿತಾತ್ರ ತೇಽಪಿ।
ಊಷುಸ್ತತಶ್ಚ ನಿಜಪುತ್ರಕದುರ್ವಿನೀತ್ಯಾ
ಕೃಷ್ಣಾನಿಮಿತ್ತಮುರುಭೀತಿತ ಆಹ ಭೀಮಾತ್ ॥೧೮೧॥

ಗಾಂಧಾರಿಯೂ ದುರ್ಯೋಧನನ ಮಡದಿಯಾದ ಭಾನುಮತಿಯೂ ದ್ರೌಪದಿಯನ್ನು ಬಹಳ ಉಪಚರಿಸಿದರು. ಅಂದಿನಿಂದ ಪಾಂಡವರು ಧೃತರಾಷ್ಟ್ರನ

ಮನೆಯಲ್ಲಿಯೆ ವಾಸ ಮಾಡಿದರು. ಬಳಿಕ ಗಾಂಧಾರಿ ತನ್ನ ದುಷ್ಟಪುತ್ರನ ದುರ್ನಡನೆಯಿಂದ ದ್ರೌಪದಿಯ ನಿಮಿತ್ತವಾಗಿ ಅವನಿಗೆ ಭೀಮನಿಂದ ಅಪಾಯ ಬಂದೀತೆಂಬ ಮಹಾಭಯದಿಂದ ಕುಂತಿಗೆ ಹೇಳಿದಳು.

ಕುಂತಿ ಪ್ರಯಾಹಿ ಸಹಿತಾ ಸ್ನುಷಯಾ ಗೃಹಂ ಸ್ವಂ
ಭೀಮಾದ್ ಬಿಭೇಮಿ ನಿಜಪುತ್ರಕದುರ್ವಿನೀತ್ಯಾ ।
ಕೃಷ್ಣಾ ತ್ರಿಲೋಕವನಿತಾಧಿಕರೂಪಸಾರಾ
ಯಸ್ಮಾದಿತಿ ಸ್ಮ ಸಸುತಾ ಪ್ರಯಯೌ ಗೃಹಂ ಸಾ ॥೧೮೨॥

ಕುಂತಿ ! ನೀನು ನಿನ್ನ ಸೊಸೆಯೊಂದಿಗೆ ನಿನ್ನ ಮನೆಗೇ ಹೋಗು. ನನ್ನ ಕೆಟ್ಟ ಮಗನ ದುರ್ನಡತೆಯಿಂದಾಗಿ ನಾನು ಭೀಮನಿಗೆ ಅಂಜುತ್ತೇನೆ. ಏಕೆಂದರೆ ದ್ರೌಪದಿ ಮೂಲೋಕದ ಎಲ್ಲ ಸ್ತ್ರೀಯರಿಗಿಂತ ಹೆಚ್ಚಿನ ರೂಪಸೌಂದರ್ಯದಿಂದ ಉತ್ತಮಳೆನಿಸಿದವಳು.' ಗಾಂಧಾರಿ ಹೀಗೆ ಹೇಳಿದಾಗ ಕುಂತಿ ಮಕ್ಕಳೊಂದಿಗೆ ತನ್ನ ಮನೆಗೇ ಹೋದಳು.

ಮಹಾಭಾರತದಲ್ಲಿ ಗಾಂಧಾರಿ ತನ್ನ ಭಯವನ್ನು ವ್ಯಕ್ತವಾಗಿ ಹೇಳಿಕೊಳ್ಳದೆ ಉಪಾಯವಾಗಿ ವಿದುರನನ್ನು ಕರೆದು 'ಕುಂತಿಯನ್ನು ಮಕ್ಕಳ ಸಮೇತ ಪಾಂಡುವಿನ ಮನೆಗೇ ಕಳಿಸು. ಅಲ್ಲಿ ಅವರು ಸುಖವಾಗಿ ಇರಲಿ' ಎನ್ನುತ್ತಾಳೆ. ವಿದುರ ಹಾಗೇ ಮಾಡುತ್ತಾನೆ.[1] ಕುಂತಿಗೆ ಗಾಂಧಾರಿಯ ಅಭಿಪ್ರಾಯ ಹೇಳದಿದ್ದರೂ ತಿಳಿದಿರುತ್ತದೆ ಎನ್ನುವ ವಿವಕ್ಷೆ ನಿರ್ಣಯಕ್ಕೆ ಇರಬಹುದು. ವರದರಾಜೀಯದಲ್ಲಿ ಈ ಮಾತನ್ನು ಧೃತರಾಷ್ಟ್ರನೆ ಭಯದಿಂದ ಹೇಳಿದ್ದೆಂದೂ ಗ್ರಹಿಸಬಹುದು ಎಂದಿದೆ.[2]

ದ್ರೌಪದಿ ಪಂಚಪತಿತ್ವ ರಹಸ್ಯ

ಊಷುಸ್ತಥೈವ ಪರಿವತ್ಸರಪಂಚಕಂ ತೇ
ಪಾಂಡೋರ್ಗೃಹೇ ಸುಸುಖಿನೋಽಖಿಲಭೋಗಯುಕ್ತಾಃ ।

---

1. ಪರಿಷ್ವಜ್ಯೈವ ಗಾಂಧಾರೀ ಕೃಷ್ಣಾಂ ಕಮಲಲೋಚನಾಂ ।
ಪುತ್ರಾಣಾಂ ಮಮ ಪಾಂಚಾಲೀ ಮೃತ್ಯುರೇವೇತ್ಯಮನ್ಯತ ।
ಸಂಚಿಂತ್ಯ ವಿದುರಂ ಪ್ರಾಹ ಯುಕ್ತಿತಃ ಸುಬಲಾತ್ಮಜಾ ।
ಕುಂತೀಂ ರಾಜಸುತಾಂ ಕ್ಷತ್ತಃ ಸವಧೂಂ ಸಪರಿಚ್ಛದಾಂ ।
ಪಾಂಡೋರ್ನಿವೇಶನಂ ಶೀಘ್ರಂ ನೀಯತಾಂ ಯದಿ ರೋಚತೇ ।
ಕರಣೇನ ಮುಹೂರ್ತೇನ ನಕ್ಷತ್ರೇಣ ಶುಭೇ ತಿಥೌ ।
ಯಥಾಸುಖಿಂ ತಥಾ ಕುಂತೀ ರಂಸ್ಯತೇ ಸ್ವಗೃಹೇ ಸುತೈಃ (ಆದಿ 227-4,5,6)
2. ಭೀಮಸ್ಯ ಭೀತಿತಃ ಕುಂತೀಮಾಹ ಗಾಂಧಾರೀತಿ ವಾ ಧೃತರಾಷ್ಟ್ರ ಇತಿ ವಾ ಶೇಷಃ । - ವರದರಾಜೀಯ

ಕೃಷ್ಣಾ ಚ ತೇಷು ಪೃಥಗೇವ ಚತುಃಸ್ವರೂಪಾ
ರೇಮೇ ತಥೈಕತನುರಪ್ಯಭಿಮಾನಿಭೇದಾತ್ ॥೧೮೪॥

ಪಾಂಡವರು ಪಾಂಡುವಿನ ಮನೆಯಲ್ಲಿ ಹಾಗೇ ಐದು ಪರಿವತ್ಸರಗಳಷ್ಟು ಕಾಲ ಸಕಲ ಭೋಗಯುಕ್ತರಾಗಿ ಸುಖಿಗಳಾಗಿ ವಾಸಮಾಡಿದರು. ದ್ರೌಪದಿ ಒಂದೇ ಶರೀರದವಳಾದರೂ ಅಭಿಮಾನಿ ಭೇದ ಪ್ರಯುಕ್ತ ಪ್ರತ್ಯೇಕ ನಾಲ್ಕು ಸ್ವರೂಪ ಉಳ್ಳವಳಾಗಿ ಪಾಂಡವರಲ್ಲಿ ರಮಿಸಿದಳು.

ಪರಿವತ್ಸರವೆಂದರೆ ಬಾರ್ಹಸ್ಪತ್ಯ ಮಾನದ ಒಂದು ವರ್ಷ. ಬೃಹಸ್ಪತಿ ಒಂದೊಂದು ರಾಶಿಯಲ್ಲಿ ಇರುವ ಕಾಲ. ಏಕೆಂದರೆ-

'ಪಂಚಸಂವತ್ಸರಮಯಂ ಯುಗಾಧ್ಯಕ್ಷಂ ಪ್ರಜಾಪತಿಂ' (ಜ್ಯೋತಿಷ -ಲಗಧ) ಎಂಬಂತೆ,

ಪರಿವತ್ಸರ- ಬಾರ್ಹಸ್ಪತ್ಯ ಮಾನದ ವರ್ಷ, ಗುರು ಒಂದು ರಾಶಿಯಲ್ಲಿ ಇರುವ ಕಾಲ.

ಇಡಾವತ್ಸರ- ನಾಕ್ಷತ್ರಮಾನದ ವರ್ಷ, ಇಪ್ಪತ್ತೇಳು ದಿನಗಳ ಹನ್ನೆರಡು ತಿಂಗಳುಗಳು.

ವತ್ಸರ- ಯಾವುದಾದರೂ ಮುನ್ನೂರ ಅರವತ್ತು ದಿನಗಳು.

ಅನು ವತ್ಸರ - ಚಾಂದ್ರಮಾನದ ವರ್ಷ- ಶುಕ್ಲಪ್ರತಿಪದೆಯಿಂದಾರಂಭಿಸಿ ಅಮಾವಾಸ್ಯಾಪರ್ಯಂತದ ಹನ್ನೆರಡು ತಿಂಗಳುಗಳು.

ಸಂ ವತ್ಸರ - ಸೌರಮಾನದ ವರ್ಷ, ಮೂನ್ನೂರ ಅರವತ್ತೈದು ದಿನಗಳು, ಸಂಕ್ರಮಣದಿಂದ ಸಂಕ್ರಮಣದವರೆಗಿನ ಹನ್ನೆರಡು ತಿಂಗಳು.

ದ್ರೌಪದಿಯ ಶರೀರ ಒಂದೇ ಆದರೂ ಆ ಶರೀರಕ್ಕೆ ಅಭಿಮಾನಿಗಳು ಶ್ಯಾಮಲಾ ಭಾರತಿ ಶಚಿ ಉಷಾ ಎಂಬ ನಾಲ್ಕುಮಂದಿ ದೇವಿಯರು ಬೇರೆಬೇರೆ ಇರುವುದರಿಂದ ಅಭಿಮಾನಿ ಭೇದಪ್ರಯುಕ್ತ ದ್ರೌಪದಿ ಪ್ರತ್ಯೇಕ ನಾಲ್ಕು ಸ್ವರೂಪ ಉಳ್ಳವಳು. ಶ್ಯಾಮಲಾ ಸ್ವರೂಪದಿಂದ ಧರ್ಮರಾಜನೊಂದಿಗೆ, ಭಾರತೀಸ್ವರೂಪದಿಂದ ಭೀಮನೊಂದಿಗೆ, ಶಚೀಸ್ವರೂಪದಿಂದ ಅರ್ಜುನನೊಂದಿಗೆ ಉಷಾ ಸ್ವರೂಪದಿಂದ ನಕುಲ ಸಹದೇವರೊಂದಿಗೆ - ಹೀಗೆ ನಾಲ್ಕು ಸ್ವರೂಪದಿಂದ ಐದು ಮಂದಿ ಪಾಂಡವರೊಂದಿಗೆ ಬೇರೆಬೇರೆಯಾಗಿ ರಮಿಸಿದಳು. ಪಾರ್ವತಿ ಇದ್ದರೂ ಕೇವಲ ಬಾಹ್ಯ ವ್ಯವಹಾರಗಳಲ್ಲಿ ಹೊರತು ವೈವಾಹಿಕ ಜೀವನದಲ್ಲಿ ಇಲ್ಲ.

ಕನ್ಯೈವ ಸಾಭವದತಃ ಪ್ರತಿವಾಸರಂ ಚ
ಜನ್ಮಾಭವದ್ಧ್ಯಭಿಮತೇಃ ಪೃಥಗೇವ ನಾಶಾತ್ ।

ಪ್ರಾಯೋ ಹಿ ನಾಭಿಮತಿನಾಶಮವಾಪ ವಾಣೇ
ತಸ್ಮಾನ್ನರುಚ್ಚ ಸಕಲೇಷ್ವಭಿವಿಷ್ಟ ಆಸೀತ್ ॥೧೮೪॥

ಪ್ರತಿದಿನವೂ ದ್ರೌಪದಿ ಕನ್ಯೆಯಾಗುತ್ತಿದ್ದಳು. ಏಕೆಂದರೆ ಪ್ರತಿದಿನವೂ ಶರೀರಾಭಿಮಾನಗಳು ಪ್ರತ್ಯೇಕವಾಗಿ ನಾಶಹೊಂದಿ ಪುನರುತ್ಪತ್ತಿಯಾಗುತ್ತಿದ್ದುರಿಂದ ಪ್ರತಿದಿನ ಮರಣವೂ ಜನನವೂ ಉಂಟಾಗುತ್ತಿತ್ತು. ಭಾರತಿ ಮಾತ್ರ ಎಂದೂ ಪೂರ್ತಿ ಶರೀರಾಭಿಮಾನನಾಶ ಹೊಂದುತ್ತಿರಲಿಲ್ಲ. ಆದರಿಂದ ವಾಯು ಎಲ್ಲ ನಾಲ್ಕೂ ಜನ ಪಾಂಡವರಲ್ಲಿ ಪ್ರವಿಷ್ಟನಾಗಿದ್ದ.

ಧರ್ಮರಾಜ ದ್ರೌಪದಿಯೊಡನೆ ರಮಿಸುವ ದಿನದಲ್ಲಿ ಶಚಿ ಉಷೆಯರಿಗೆ ದ್ರೌಪದೀ ಶರೀರದಲ್ಲಿ ಅಭಿಮಾನನಾಶವಾಗಿರುತ್ತಿತ್ತು. ಶ್ಯಾಮಲೆಗೆ ಅಭಿಮಾನ ಉತ್ಪತ್ತಿಯಾಗುತ್ತಿತ್ತು. ಭಾರತಿಗೆ ಸ್ವಲ್ಪ ಅಭಿಮಾನ ಹಾಗೇ ಇರುತ್ತಿತ್ತು. ಇದರಿಂದ ಧರ್ಮರಾಜ ಶ್ಯಾಮಲೆಯೊಂದಿಗೂ ಧರ್ಮರಾಜನೊಳಗೆ ಆವಿಷ್ಟನಾದ ವಾಯು ಭಾರತಿಯೊಂದಿಗೂ ರಮಿಸುತ್ತಿದ್ದರು. ಭೀಮನ ದಿನದಲ್ಲಿ ದ್ರೌಪದೀಶರೀರದಲ್ಲಿ ಭಾರತಿಗೇ ಪೂರ್ಣ ಅಭಿಮಾನ. ಭಾರತಿಯೊಂದಿಗೇ ಭೀಮ ರಮಿಸುತ್ತಿದ್ದ. ಹೀಗೇ ಶಚಿ ಉಷೆಯರಿಗೂ ತಮ್ಮ ಪತಿಯೊಡನೆ ರಮಿಸುವ ದಿನದಲ್ಲಿ ಹೊಸದಾಗಿ ದೇಹಾಭಿಮಾನ ಉಂಟಾಗುತ್ತಿತ್ತು. ಜೀವರಿಗೆ ಶರೀರಾಭಿಮಾನ ಉತ್ಪತ್ತಿಯೇ ಜನನ. ಶರೀರಾಭಿಮಾನ ನಾಶವೇ ಮರಣ. ಆದರಿಂದ ಈ ದೇವಿಯರಿಗೆ ಪ್ರತಿದಿನ ಜನನ ಮರಣಗಳಿದ್ದುದರಿಂದ ಪ್ರತಿದಿನ ಜನನ ಕಾಲದಲ್ಲಿ ಅವರು ಕನ್ಯೆಯರೇ ಆಗಿರುತ್ತಿದ್ದರು. ಮಾನಸ ವಿವಾಹಯೋಗ್ಯ ಕನ್ಯೆಯರಾಗಿಯೆ ಅವರು ಹುಟ್ಟಿ ತಮ್ಮ ನಿಯತ ಪತಿಗಳೊಂದಿಗೆ ರಮಿಸುತ್ತಿದ್ದುದರಿಂದ ಪರಪುರುಷ ಸಂಗ ದೋಷ ಬರುತ್ತಿರಲಿಲ್ಲ. ಪ್ರತಿದಿನ ಮಾನಸವಿವಾಹ ವಿಧಿಯಿಂದ ವಿವಾಹಿತಳಾದ ಕನ್ಯೆಯೊಡನೆಯೇ ರಮಿಸಿದ್ದರಿಂದ ಪುರುಷರಿಗೂ ಕನ್ಯಾಗಮನ ದೋಷವಿರಲಿಲ್ಲ. ಕನ್ಯೆಗೂ ವಿವಾಹ ಸಂಸ್ಕಾರವಾಗದ ಪತಿಯೊಡನೆ ಸೇರಿದ ದೋಷ ಇರಲಿಲ್ಲ.

ಭಾರತೀದೇವಿ ಭೀಮನೊಡನೆ ರಮಿಸುವ ದಿನದಲ್ಲಿ ಅವಳಿಗೆ ಮಾತ್ರ ಶರೀರಾಭಿಮಾನ. ಉಳಿದ ದೇವಿಯರಿಗೆ ಸ್ವಲ್ಪವೂ ಅಭಿಮಾನವಿರಲಿಲ್ಲ. ಏಕೆಂದರೆ 'ತತ್ರಾನ್ಯಗಾಶ್ಚ ಭವತ' 'ಮಾನವ ಜನ್ಮದಲ್ಲಿ ನಿಮಗೆ ಪರಪುರುಷ ಸಂಗವಾಗಲಿ' ಎಂದು ಬ್ರಹ್ಮ ನೀಡಿದ್ದ ಶಾಪವನ್ನು ಪತಿಪ್ರಾಪ್ತಿವರ ನೀಡಿದ ಶಿವನೇ ಪರಿಹರಿಸಿದ್ದಾನೆ. ಆದರಿಂದಲೇ ಮುಂದಿನ ಶ್ಲೋಕದಲ್ಲಿ ನಿರ್ಣಯ 'ರಮತೇ ಸತತಂ ತಯಾ ಯತ್' 'ವಾಯು ಕೇವಲ ಭಾರತಿಯೊಂದಿಗೇ

ರಮಿಸುತ್ತಾನೆ' ಎಂದಿದೆ. ಬೇರೆ ದೇವಿಯರಿಗೆ ಸ್ವಲ್ಪವಾದರೂ ಅಭಿಮಾನವಿರುತ್ತಿದ್ದರೆ 'ರಮತೇ ಸತತಂ ತಾಭಿರ್ಯತ್' 'ವಾಯು ಆ ದೇವಿಯರೊಡನೆ ರಮಿಸುತ್ತಾನೆ' ಎನ್ನಬೇಕಾಗಿದ್ದಿತು.

ಬೇರೆ ದೇವಿಯರ ದಿನಗಳಲ್ಲಿ ಭಾರತೀದೇವಿಗೂ ಸ್ವಲ್ಪ ಶರೀರಾಭಿಮಾನವಿತ್ತೆಂದು ಏಕೆ ಸ್ವೀಕರಿಸಬೇಕು ಎಂದರೆ

ಕೃಷ್ಣಾ ತ್ರಿಲೋಕವನಿತಾಧಿಕರೂಪಸಾರಾ

'ದ್ರೌಪದಿ ತ್ರಿಲೋಕಸುಂದರಿ' ಎಂದು ವರ್ಣಿತವಾದ, ಭಾರತಿಯಲ್ಲಿ ಮಾತ್ರ ಕಾಣಬಹುದಾದ ದಿವ್ಯ ಸೌಂದರ್ಯ ಸ್ವತಂತ್ರವಾಗಿ ಬೇರೆ ದೇವಿಯರಲ್ಲಿ ಬರಲಾರದು. ಭಾರತಿಯ ಅಂಶವೂ ಜೊತೆಗೆ ಬೇಕು. ವಿವಾಹಾದಿ ಉತ್ಸವಕ್ಕೆ ಆನೆಯನ್ನು ಕೊಡುವವರು ಜೊತೆಗೆ ಮಾವುತನನ್ನೂ ಕೊಡುತ್ತಾರೆ ಹಾಗೇ ಭಾರತೀದೇವಿ ಆಯಾ ದಿನದಲ್ಲಿ ಆಯಾದೇವಿಗೆ ದೇಹವನ್ನು ಒಪ್ಪಿಸುವಾಗ ತಾನು ಒಂದು ಅಂಶದಿಂದ ಆ ದೇಹವನ್ನು ಧಾರಣ ಮಾಡಿಕೊಂಡೇ ಒಪ್ಪಿಸುತ್ತಾಳೆ. ದ್ರೌಪದೀ ಶರೀರದ ಒಡತಿ ಭಾರತೀದೇವಿಯೆ. ಇತರ ದೇವಿಯರು ಅವಳಿಂದಲೆ ಶರೀರವನ್ನು ಪಡೆಯಬೇಕು. ಹೀಗೆ ಪ್ರತಿದಿನದಲ್ಲಿಯೂ ಶರೀರದಲ್ಲಿ ಭಾರತಿಯ ಅಂಶವಿದ್ದು ಅವಳೊಡನೆ ರಮಿಸಲು ವಾಯು ಧರ್ಮರಾಜಾದಿಗಳಲ್ಲಿ ಒಂದೊಂದು ಅಂಶದಿಂದ ಆವಿಷ್ಟನಾಗಿರುತ್ತಿದ್ದ. ಅದರಿಂದ ಭೀಮನಿಗೆ ಪರಸ್ತ್ರೀ ಸಂಪರ್ಕ ದೋಷವಿಲ್ಲ. ಭಾರತಿಗೂ ಪರಪುರುಷಸಂಗದೋಷವಿಲ್ಲ. ಮಹಾಭಾರತ ಲಕ್ಷಾಲಂಕಾರ ಪಾಠದಲ್ಲಿ-

ಇದಂ ಚ ತತ್ರಾದ್ಭುತ ಮುತ್ತಮಂ ತದಾ
ದಧಾತಿ ಕೃಷ್ಣಾ ವಪುಷಾತಿ ಮಾನುಷಂ।
ಮಹಾನುಭಾವಾ ಕಿಲ ಸಾಧು ಮಧ್ಯಮಾ
ಬಭೂವ ಕನ್ಯೈವ ಗತೇ ಗತೇಽಹನಿ ॥(ಆದಿ.215.24)

'ಮಹಾನುಭಾವಳಾದ ದ್ರೌಪದಿ ಉತ್ತಮ ಅದ್ಭುತವಾದ ಅತಿಮಾನುಷ ಕರ್ಮವನ್ನು ಒಂದು ಶರೀರದಲ್ಲಿ ಮಾಡಿದಳು. ಅದೇನೆಂದರೆ ಎಲ್ಲ ದೇವಿಯರ ಪಾತಿವ್ರತ್ಯ ರಕ್ಷಣೆಗಾಗಿ ಆಯಾ ದಿನದಲ್ಲಿ ಆಯಾ ದೇವಿಗೆ ಮಾತ್ರ ದೇಹಾಭಿಮಾನವಿತ್ತು ಪ್ರತಿದಿನವೂ ಕನ್ಯೆಯೇ ಆಗಿರುತ್ತಿದ್ದಳು' ಎಂದು ಹೇಳಿದೆ. ಇಲ್ಲಿ 'ಅತಿಮಾನುಷ'-ಮನುಷ್ಯರಿಗೆ ಅಸಾಧ್ಯ 'ಉತ್ತಮ'-ಒಬ್ಬಳಿಗೆ ಐವರ ಸಂಗದಿಂದ ಬರಬಹುದಾಗಿದ್ದ ದೋಷಕ್ಕೆ ಪರಿಹಾರ

ರೂಪವಾದ್ದರಿಂದ ಉತ್ತಮ. ಅದ್ಭುತ-ಒಂದೇ ದೇಹ ಪಂಚಸ್ತ್ರೀ ರೂಪವೆನಿಸುವುದು, ಅದರಲ್ಲಿಯೂ ತಮ್ಮ ಪತಿಗಳೊಡನೆ ಸಂಗಮಾಡುವ ದಿನದಲ್ಲಿ ಹೊಸದಾಗಿ ಜನ್ಮ ಬರುವುದು, ಪ್ರತಿದಿನ ಹೊಸದಾಗಿ ಕನ್ಯಾತ್ವ ಲಭಿಸುವುದು, ಕನ್ಯಾತ್ವವಿರುವುದರಿಂದ ಗಾಂಧರ್ವ ವಿವಾಹ, ತಮ್ಮ ಪತಿಗಳೊಂದಿಗೇ ರಮಣ, ಪರಪುರುಷರ ದಿನಗಳಲ್ಲಿ ದೇಹಾಭಿಮಾನ ನಾಶವಾಗಿರುವುದರಿಂದ ಅವರು ರಮಿಸುವುದರ ಅನುಭವವಾಗದಿರುವುದು ಎಂದು ಮುಂತಾಗಿ ಎಲ್ಲವೂ ಅದ್ಭುತ ಎಂದರ್ಥ. ಇಂಥ ಅತಿಮಾನುಷ ಉತ್ತಮ ಅದ್ಭುತಕಾರ್ಯವನ್ನು ಒಂದೇ ದೇಹದಿಂದ ದ್ರೌಪದಿ ಮಾಡುತ್ತಾಳೆ ಎಂದು ಸ್ಪಷ್ಟವಾಗಿ ಸಕಲ ಸಂದೇಹಗಳನ್ನೂ ಭಾರತವಚನವೇ ಪರಿಹರಿಸಿರುವುದರಿಂದ ಶ್ರೀಮದಾಚಾರ್ಯರು ನಿರೂಪಿಸಿದ ಪಂಚದ್ರೌಪದ್ಯಾಖ್ಯಾನದಲ್ಲಿ ಯಾವುದೇ ಅಸಮಂಜಸತೆ ಕಾಣುವುದಿಲ್ಲ. ಮಹಾಭಾರತದಲ್ಲಿ ಹೇಳಿದ,

'ಬಭೂವ ಕನ್ಯೈವ ಗತೇಗತೇऽಹನಿ'
ಎಂಬ ಮಾತನ್ನು ಸ್ವಲ್ಪವೂ ವ್ಯತ್ಯಾಸವಿಲ್ಲದೆ,
'ಕನ್ಯೈವ ಸಾಭವದತಃ ಪ್ರತಿವಾಸರಂ ಚ'
ಎಂದು ಹೇಳಿರುವುದರಿಂದ ಅತ್ಯಂತ ಪ್ರಾಮಾಣಿಕರು ಶ್ರೀಮದಾಚಾರ್ಯರು ಎನ್ನುವುದು ಸಿದ್ಧವಾಗುತ್ತದೆ.[1]

---

1. ಸಾ ದ್ರೌಪದೀ ಪ್ರತಿವಾಸರಂ ಕನ್ಯೈವ ಸ್ವಸ್ವದಿನೇ ರಮಮಾಣಪತಿನಾ ಸಹ ಮಾನಸ ವಿವಾಹಯೋಗ್ಯಾ ಕನ್ಯೈವಾಸೀತ್। ಏವಂ ಚ ಸರ್ವೇಷಾಂ ಪಾರ್ಥಾನಾಂ ಸ್ವಸ್ವರಮಣ ದಿನೇ ಸ್ವಸ್ವವಧೂಭಿರೇವ ಸಂಗಮಃ। ತಾಸಾಂ ಚ ಸ್ವಸ್ವಪತಿ ವ್ಯತಿರಿಕ್ತಾನಾಂ ರಮಣದಿನೇ ದೇಹಾಭಿಮಾನ ನಾಶಾನ್ನಾಪರ ಸಂಗದೋಷಃ। ಸ್ವಪತಿನಾ ಸಹ ರಮಣೇ ಚ ಅಭಿನವ ಜನ್ಮನಾ ಕನ್ಯಾತ್ವಂ ಪ್ರಾಪ್ಯ ಮಾನಸ ವಿವಾಹ ವಿಧಿನಾ ಪುನರುದ್ವಾಹ್ಯ ಸ್ವಪತ್ಯಾ ಸಹ ರಮಣಾತ್ ನ ತಸ್ಯ ಕನ್ಯಾಗಮನ ದೋಷಃ। ಕನ್ಯಾಯಾಶ್ಚ ಮಾನಸ ವಿವಾಹವಿಧಿನಾ ಸ್ವಪತಿನಾ ಸಹ ರಮಣೇನ ನಿಮಿತ್ತೇನ ನಾಸಂಸ್ಕೃತ ಪುರುಷ ಗಮನದೋಷ ಇತಿಜ್ಞೇಯಂ। ವಾಣೇ ತು ಭೀಮಸೇನ ರಮಣದಿವಸೇ ಸಂಪೂರ್ಣದೇಹಾಭಿಮಾನಂ ಕರೋತಿ। 'ತತ್ರಾನ್ಯಗಾಶ್ಚ ಭವತೇ'ತಿ ಬ್ರಹ್ಮದತ್ತ ಶಾಪಸ್ಯ ಸ್ವಪತಿಯೋಗವರಂ ದದತಾ ಶಿವೇನೈವ ಪರಿಹೃತತ್ವಾತ್, 'ರಮತೇ ಸತತಂ ತಯಾ ಯದಿ'ತಿ ಗ್ರಂಥಕೃತೈವೋತ್ತರಶ್ಲೋಕೇ ವಕ್ಷ್ಯಮಾಣತ್ವಾಚ್ಚ ಭಾರತ್ಯೈವ ರಮಣಂ। ಇತರಾಸಾಂ ತದಾ ಅಭಿಮಾನ ಏವ ನಾಸ್ತಿ। ಅನ್ಯಥಾ ತಾಭಿರಿತ್ಯವಕ್ಷ್ಯತ್। ಅನ್ಯಾಸಾಂ ದಿನೇಷ್ವಪಿ ವಾಣೇ 'ಕೃಷ್ಣಾ ತ್ರಿಲೋಕವನಿತಾಧಿಕ ರೂಪಸಾರೇ'ತಿ ವಚನಾತ್ ಭಾರತೀಯೋಗ್ಯ ದಿವ್ಯ ಸೌಂದರ್ಯಾದಿ ಲಕ್ಷಣ ಭರಿತ ಯೋಗ್ಯತಾಯಾಃ ಸ್ವಾತಂತ್ರ್ಯೇಣೇತರಾಸ್ವಸಂಭವಾತ್ ವಿವಾಹ ಸಂಭ್ರಮಾರ್ಥಂ ಗಜೇ ದತ್ತೇऽಪಿ ತನ್ನಿಯಮನಾರ್ಥಂ ಯಂತುಃ ಸಹೈವ ಗಮನವತ್ ಪ್ರಾಯಃ ಅಭಿಮಾನ ನಾಶಂ ನಾವಾಪ। ಈಷದಭಿಮಾನಂ ಸರ್ವದಾ ಕರೋತ್ಯೇವ। ಅತಸ್ತಸ್ಯಾ ಏವ ರಮಣಾರ್ಥಂ ಭೀಮೋऽಪಿ ಧರ್ಮಾದಿಷು ಚತುರ್ಷ್ವಪಿ ಅಭಿವಿಷ್ಟಃ। ತೇನ ಕಾರಣೇನ ಭೀಮಸ್ಯಾಪಿ ನ ಪರಸ್ತ್ರೀಗಮನ ಶಂಕಾ। ನಾಪಿ ಭಾರತ್ಯಾಃ ಪರಪುರುಷ ಗಮನ ಶಂಕೇತಿ ಸರ್ವಮವದಾತಂ। ತದುಕ್ತಂ ಭಾರತೇ

ಧರ್ಮಾತ್ಮಜಾದಿಷು ಮರುತ್‌ಪ್ರತಿವಿಷ್ಟ ಏಷಾಂ
ಬುದ್ಧಿಂ ವಿಮೋಹ್ಯ ರಮತೇ ಸತತಂ ತಯಾ ಯತ್ ।
ಶುದ್ಧೈವ ಸಾ ಹಿ ತತ ಏವ ದಿನೇದಿನೇ ಚ
ಸಮ್ಮೋಹತೋ ಮರಣವದ್ ಭವತೀಹ ಕನ್ಯಾ ॥೧೮೫॥

ಧರ್ಮರಾಜ ಮುಂತಾದವರಲ್ಲಿ ಪ್ರವಿಷ್ಟನಾದ ವಾಯು ಸದಾ ಅವರ ಬುದ್ಧಿಯನ್ನು ಭಾರತೀದೇವಿಯ ವಿಷಯದಲ್ಲಿ ನಿಷ್ಕ್ರಿಯಗೊಳಿಸಿಯೆ ಅವಳೊಡನೆ ರಮಿಸುತ್ತಿದ್ದ. ಅದರಿಂದ ದೇವಿ ಶುದ್ಧಳೇ ಆಗಿರುತ್ತಿದ್ದಳು. ಪ್ರತಿದಿನದಲ್ಲಿಯೂ ಮರಣದಲ್ಲಿ ಹೇಗೋ ಹಾಗೆ ಬುದ್ಧಿಗೆ ನಿಷ್ಕ್ರಿಯತೆ ಬರುತ್ತಿದ್ದುದರಿಂದ ಕನ್ಯೆಯೆ ಆಗುತ್ತಿದ್ದಳು.

ವಾಯು ಭಾರತಿಯ ಬುದ್ಧಿಯನ್ನೂ ಧರ್ಮರಾಜ ಮುಂತಾದವರ ವಿಷಯದಲ್ಲಿ ನಿಷ್ಕ್ರಿಯಗೊಳಿಸುತ್ತಿದ್ದನೆಂದು ತಾಮ್ರಪರ್ಣೀಯ ಹೇಳಿದೆ.[2]

ನೋ ಸುಪ್ತಿವತ್ ತ್ವಿದಮತೋಽನ್ಯವಶತ್ವತೋ ಹಿ
ದೇಹಸ್ಯ ಸಂಸ್ಮೃತಿತ ಏವ ಹರೇರ್ನ ಮೋಹಃ ।

ಇದಂ ಚ ತತ್ರಾದ್ಭುತಮುತ್ತಮಂ ತದಾ।
ದಧಾತಿ ಕೃಷ್ಣಾ ವಪುಷಾತಿ ಮಾನುಷಂ।
ಮಹಾನುಭಾವಾ ಕಿಲ ಸಾಧುಮಧ್ಯಮಾ।
ಬಭೂವ ಕನ್ಯೈವ ಗತೇಗತೇಽಹನಿ॥

ಏವಂ ಚಾಸ್ಮಿನ್ ಶ್ಲೋಕೇ ಮಹಾನುಭಾವಾ ಕೃಷ್ಣಾ ಅತಿ ಮಾನುಷಂ ಮಾನುಷಾಯೋಗ್ಯಂ ಉತ್ತಮಮದ್ಭುತಂ ಕರ್ಮ ವಪುಷಾ ಏಕೇನ ದೇಹೇನ ದಧಾತಿ। ಕಿಂ ತತ್? ಅಹನಿ ಏಕೈಕ ರಂತುರಹನಿ ಗತೇಗತೇ ಸತಿ ಮಧ್ಯೇ ಸರ್ವಾಸಾಂ ಪಾತಿವ್ರತ್ಯರಕ್ಷಣಾಯ ತತ್ತತ್ಪತ್ನೀನಾಂ ದೇಹಾಭಿಮಾನಾಖ್ಯ ಜನ್ಮ ದತ್ವಾ ಕನ್ಯೈವ ಬಭೂವೇತಿವದತಾ ವ್ಯಾಸೇನೈವ ಮಹಾಸಾಮರ್ಥ್ಯವತ್ತ್ವಾತ್ ಅತಿಮಾನುಷಂ ಮಾನುಷಾಯೋಗ್ಯಮುತ್ತಮಂ ಏಕಸ್ಯಾಃ ಪಂಚಪುರುಷ ಸಂಗ ನಿಮಿತ್ತ ದೋಷ ಪರಿಹಾರರೂಪತ್ವಾತ್ ಉತ್ತಮ ಮದ್ಭುತಂ ಏಕಸ್ಯೈವ ದೇಹಸ್ಯ ಪಂಚಸ್ತ್ರೀರೂಪತ್ವಂ ತತ್ರಾಪಿ ಸ್ವಪತಿನಾ ಸಹ ಸಂಬಂಧೇ ಅಭಿನವೋ ತ್ಪತ್ತ್ಯಾ ಅಹನ್ಯಹನ್ಯಭಿನವ ಕನ್ಯಾತ್ವಂ ಕನ್ಯಾತ್ವಾದೇವ ಗಾಂಧರ್ವೋ ವಿವಾಹಃ, ಸ್ವಪತಿನೈವ ಸಹ ರಮಣಂ, ಅನ್ಯರಮಣದಿನೇ ದೇಹಾಭಿಮಾನನಾಶಾತ್ ತದೀಯರಮಣಾನನುಭವ ಶ್ಚೇತ್ಯಾದ್ಯದ್ಭುತಂ ಕರ್ಮ ವಪುಷೈಕೇನೈವ ದೇಹೇನ ದಧಾತೀತಿ ಸ್ಫುಟಂ ಸಮಸ್ತ ಶಂಕಾನಾಂ ಪರಿಹೃತತ್ವಾತ್ ಆಚಾರ್ಯನಿರೂಪಿತಪಂಚದೌಪದ್ಯಾಖ್ಯಾನೇ ನ ಕಶ್ಚಿತ್ ಕ್ಷುದ್ರೋಪದ್ರವಃ। ಕಿಂ ಬಹುನಾ? 'ಬಭೂವ ಕನ್ಯೈವ ಗತೇ ಗತೇಽಹನೀ'ತಿ 'ಕನ್ಯೈವ ಸಾಭವದತಃ ಪ್ರತಿವಾಸರಂ ಚೇ'ತಿ ಪದವಿನ್ಯಾಸಯೋರಪ್ಯೈಕ ವಿಧ್ಯಾತ್ ಪ್ರಾಮಾಣಿಕ ಶಿರೋಮಣಿ ರ್ಗ್ರಂಥಕಾರ ಇತಿ ಜ್ಞೇಯಂ ।

-ವಾದಿರಾಜೀಯ

2. ಭಾರತೀ ವಿಷಯೇ ಏಷಾಂ ಬುದ್ಧಿಂ ವಿಮೋಹ್ಯ ಪರಿಹೃತ್ಯೈವ, ಏಷಾಂ ಚ ವಿಷಯೇ ಭಾರತ್ಯಾ ಬುದ್ಧಿಂ ಪರಿಹೃತ್ಯೈವ ಯದ್ಯಸ್ಮಾತ್ ತಯಾ ಭಾರತ್ಯಾ ರಮತೇ ಅತಃ ಸಾ ಭಾರತೀ ಶುದ್ಧೈವೇತ್ಯರ್ಥಃ ।

-ತಾಮ್ರಪರ್ಣೀಯ

ನಾವೇಶವಚ್ಚ ತತ ಏವ ಮೃತೇಃ ಸ್ವರೂಪ-
ಮೇತತ್ತ್ವತಃ ಪ್ರತಿದಿನಂ ಜನನಾದ್ಧಿ ಕನ್ಯಾ ॥೧೮೬॥

ದೇಹವನ್ನು ಅನ್ಯವಶವಾಡಿ ಅಭಿಮಾನತ್ಯಾಗ ವಾಡುತ್ತಿದ್ದುದರಿಂದ, ಹರಿಸ್ಮರಣೆಯನ್ನೂ ಮಾಡುತ್ತಿದ್ದುದರಿಂದ ದೇವಿಯರಿಗೆ ಇದು ಸುಪ್ತಿಯಂತೆಯೂ ಅಲ್ಲ, ಮೂರ್ಛೆಯಂತೆಯೂ ಅಲ್ಲ, ಆವೇಶದಂತೆಯೂ ಅಲ್ಲ, ಮರಣ ಸ್ವರೂಪವೇ ಆಗಿತ್ತು. ಅದರಿಂದ ಪ್ರತಿದಿನವೂ ಜನನವಿದ್ದುದರಿಂದ ಕನ್ಯೆಯಾಗುತ್ತಿದ್ದಳು.

ಇನ್ನೊಬ್ಬಳು ರಮಿಸುತ್ತಿದ್ದಾಗ ಇವಳಿಗೆ ಮರಣ ಸ್ವರೂಪದ ಅವಸ್ಥೆ ಬರುತ್ತಿತ್ತು. ಇದು ಮರಣ ಸ್ವರೂಪದ್ದೆನ್ನುವುದು ಹೇಗೆಂದರೆ, ಇವಳು ಆಗ ದೇಹದಲ್ಲಿ ಇದ್ದರೂ ದೇಹಾಭಿಮಾನವಿರಲಿಲ್ಲ. ದೇಹ ಇನ್ನೊಬ್ಬಳ ವಶದಲ್ಲಿ ಇರುತ್ತಿತ್ತು. ಆಗ ಇವಳು ಆ ದೇಹದಲ್ಲಿ ಇರುತ್ತಲೆ ಹರಿಸ್ಮರಣೆ ಮಾಡುತ್ತಿದ್ದಳು. ಅದರಿಂದ ಇದು ಸುಪ್ತಿಯೂ ಅಲ್ಲ, ಮೂರ್ಛೆಯೂ ಅಲ್ಲ, ಭೂತಾವೇಶದಂತೆಯೂ ಅಲ್ಲ. ಮರಣವೇ. ಏಕೆಂದರೆ ಈ ಮೂರು ಅವಸ್ಥೆಗಳಲ್ಲಿಯೂ ಯಾರಿಗೂ ಹರಿಸ್ಮರಣೆ ಇರುವುದಿಲ್ಲ. ಮರಣಾವಸ್ಥೆಯಲ್ಲಿ ಜ್ಞಾನಿಗಳಿಗೆ ಹರಿಸ್ಮರಣೆ ಇರುತ್ತದೆ, ದೇಹಾಭಿಮಾನ ನಾಶವಾಗಿರುತ್ತದೆ. ಹೀಗೆ ದೇವಿಯರಿಗೆ ತಮ್ಮ ದಿನಗಳಲ್ಲಿ ಮೊದಲಲ್ಲಿ ಜನನ, ಕೊನೆಯಲ್ಲಿ ಮರಣ, ಹೊಸಜನ್ಮ ಬರುತ್ತಿದ್ದುದರಿಂದ ಹೊಸದಾಗಿ ಕನ್ಯಾತ್ವವೂ ಬರುತ್ತಿತ್ತು ಎಂದು ವಾದಿರಾಜೀಯ[1] ಹೇಳಿದೆ.

ಏವಂ ಸ ವಾಯುರನುವಿಷ್ಟಯುಧಿಷ್ಠಿರಾದಿ-
ಭೀಮಾತ್ಮನೈವ ರಮತೇ ಸತತಂ ತಯೈಕಃ ।
ಅನ್ಯಾದೃಶೀ ಹಿ ಸುರಭುಕ್ತಿರತೋಽನ್ಯರೂಪಾ
ಮಾನುಷ್ಯಭುಕ್ತಿ ರಿತಿ ನಾತ್ರ ವಿಚಾರ್ಯಮಸ್ತಿ ॥೧೮೭॥

ಹೀಗೆ ಒಬ್ಬನೇ ವಾಯು ಧರ್ಮರಾಜಾದಿಗಳಲ್ಲಿ ಆವೇಶಗೊಂಡು ನಾಲ್ಕು ಅಂಶ ರೂಪಗಳಿಂದಲೂ ಭೀಮರೂಪದಿಂದಲೂ ಭಾರತೀದೇವಿಯೊಡನೆಯೇ ಸದಾ ರಮಿಸುತ್ತಿದ್ದ. ದೇವತೆಗಳು ರಮಿಸುವ ರೀತಿಯೇ ಬೇರೆ. ಮನುಷ್ಯರು ರಮಿಸುವ ರೀತಿಯೇ ಬೇರೆ. ಅದರಿಂದ ಈ ವಿಷಯದಲ್ಲಿ ವಿಚಾರಣೀಯವಾದ ಅಂಶ ಏನೂ ಉಳಿಯುವುದಿಲ್ಲ.

---

1. ಸುಪ್ತ್ಯಾದ್ಯವಸ್ಥಾತ್ರಯೇ ಸ್ಮರಣಸ್ಯೈವಾಭಾವಾತ್, ಆಸಾಂ ಚ ಅನ್ಯರಮಣ ಕಾಲೇ ದೇಹ ವಿಸ್ಮರಣೇಽಪಿ ಹರಿಸ್ಮರಣಸದ್ಭಾವಾತ್ ಸುಪ್ತ್ಯಾದ್ಯವಸ್ಥಾತ್ರಯವದಿದಂ ನೇತ್ಯರ್ಥಃ। ಕಾ ತರ್ಹಿ ಅಯಮವಸ್ಥೇತ್ಯತ ಉಕ್ತಂ ಏತತ್ತು ತತೋ ದೇಹವಿಸ್ಮರಣಾತ್ ಹರಿಸ್ಮರಣ ಸದ್ಭಾವಾಚ್ಚ ಮೃತೇರೇವ ಸ್ವರೂಪಂ। ಮೃತಿ ಸಮಯೇ ಸಾಧೂನಾಂ ದೇಹಾಭಿಮಾನಾಭಾವೇಽಪಿ ಹರಿಸ್ಮರಣ ದರ್ಶನಾತ್। ತೇನ ಮೃತಿರೇವೇಯಮಿತಿ ಭಾವಃ। ಅತಃ ಪೂರ್ವದಿನೇ ಮರಣಾತ್ ಅಪರದಿನೇ ಜನನಾಚ್ಚ ಪ್ರತಿದಿನಂ ಕನ್ಯೈವಾಭವದ್ಧೀತಿ ಯೋಜನಾ।
–ವಾದಿರಾಜೀಯ

'ವಪುಷಾತಿಮಾನುಷಂ' ಎಂದು ಮಹಾಭಾರತದಲ್ಲಿ ಹೇಳಿದ ಅತಿಮಾನುಷತ್ವಕ್ಕೇ ಇದು ವಿವರಣೆ.[1] -ವಾದಿರಾಜೀಯ

ಧರ್ಮರಾಜನ ಶರೀರದಲ್ಲಿ ಧರ್ಮರಾಜನೂ ಅವನಲ್ಲಿ ಆವಿಷ್ಟನಾದ ವಾಯುವಿನ ಒಂದು ಅಂಶರೂಪವೂ ಇದೆ. ಹಾಗೇ ಅರ್ಜುನಾದಿ ದೇಹಗಳಲ್ಲಿಯೂ ಇಬ್ಬಿಬ್ಬರು ಇರುತ್ತಾರೆ. ದ್ರೌಪದೀ ದೇಹದಲ್ಲಿಯೂ ಭಾರತೀಯ ಜೊತೆಗೆ ಶ್ಯಾಮಲಾದಿಗಳಲ್ಲಿ ಯಾರಾದರೊಬ್ಬರು ಅವರವರ ದಿನಗಳಲ್ಲಿ ಇರುತ್ತಾರೆ. ಹೀಗಿರುವಾಗ ಧರ್ಮರಾಜ ಭಾರತಿಯನ್ನು ಬಿಟ್ಟು ಶ್ಯಾಮಲೆಯೊಡನೆ ರಮಿಸಲು ಕಾರಣ ಹಿಂದೆ ಹೇಳಿದೆ. ಭಾರತಿಯ ವಿಷಯದಲ್ಲಿ ಧರ್ಮರಾಜನ ಬುದ್ಧಿ ನಿಷ್ಕ್ರಿಯವಾಗಿರುತ್ತದೆ ಎಂದು. ಆದರೆ ವಾಯು ಶ್ಯಾಮಲೆಯನ್ನು ಬಿಟ್ಟು ಭಾರತಿಯೊಡನೆ ರಮಿಸುವುದು ಹೇಗೆ? ಅವನ ಬುದ್ಧಿ ಶ್ಯಾಮಲಾದಿಗಳ ವಿಷಯದಲ್ಲಿ ನಿಷ್ಕ್ರಿಯವಾಗುವುದೆ? ಈ ಪ್ರಶ್ನೆಗೆ ಮಹಾಭಾರತ 'ವಪುಷಾತಿಮಾನುಷಂ' ಎಂಬುದರಿಂದಲೆ ಪರಿಹಾರ ಸೂಚಿಸಿದೆ. ದೇವತೆಗಳ ವ್ಯಾಪಾರ ಅತಿ ಮಾನುಷ ಎಂದು. ವಾಯು ಭಾರತಿಯರು ಎಲ್ಲ ಜೀವರಿಗೂ ಅಂತರ್ಯಾಮಿಗಳು ಮಾತ್ರವಲ್ಲ ತಂದೆತಾಯಿಗಳು. ಮಕ್ಕಳಲ್ಲಿ ಅವರಿಗೆ ಎಂದೂ ಮೋಹವಿಲ್ಲ. ಆದರಿಂದ ವಾಯು ಶ್ಯಾಮಲೆಯಲ್ಲಿ, ಭಾರತಿ ಧರ್ಮರಾಜನಲ್ಲಿ ರಮಿಸುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು.

'ಧರ್ಮರಾಜಾದಿಗಳಲ್ಲಿ ಇರುವ ವಾಯು, ಶ್ಯಾಮಲಾದಿಗಳಲ್ಲಿಯೂ ರಮಿಸುತ್ತಾನೆ' ಎನ್ನುವುದು ವರದರಾಜೀಯದ ಪಕ್ಷ. 'ಮಾರುತಾದನ್ಯಂ ನ ಸ್ಪೃಶೇಮ' 'ಪರಪುರುಷಸ್ಪರ್ಶ ಅನಿವಾರ್ಯವಾದರೆ ವಾಯುವಿನ ಹೊರತು ಅನ್ಯಪುರುಷನ ಸ್ಪರ್ಶ ನಮಗಾಗದಿರಲಿ' ಎಂದು ದೇವಿಯರು ವರ ಪಡೆದಿರುವುದರಿಂದ ದ್ರೌಪದೀಶರೀರದಲ್ಲಿ ಅಭಿಮಾನನಾಶ ಹೊಂದದಿರುವ ಪಾರ್ವತಿಗೆ ಧರ್ಮರಾಜಾದಿಗಳ ಸ್ಪರ್ಶವಾಗಬಹುದಾದ ದಿನಗಳಲ್ಲಿ ಅವರೊಳಗಿರುವ ವಾಯುವಿನ ಸ್ಪರ್ಶವೇ ಅವಳಿಗೆ ಆಗುವುದು. ಆದರಿಂದ ವಾಯು ಧರ್ಮರಾಜಾದಿಗಳಲ್ಲಿ ಆವಿಷ್ಟನಾದ. ಹೀಗಾಗಿ ಭಾರತ್ಯಾದಿಗಳಿಗೆ ಧರ್ಮರಾಜಾದಿಗಳ ವಿಷಯದಲ್ಲಿ ಮಾತ್ರವೆ ಬುದ್ಧಿ ನಿಷ್ಕ್ರಿಯವಾಗುವುದು, ಅಭಿಮಾನ ನಾಶವಾಗುವುದು. ಹೊರತು ಅವರಲ್ಲಿ ಆವಿಷ್ಟನಾದ ವಾಯುವಿನ ವಿಷಯದಲ್ಲಿ ಅಲ್ಲ ಎಂಬ ಅಭಿಪ್ರಾಯದಿಂದ

---

1. ವಪುಷಾತಿ ಮಾನುಷಮಿತಿ ಭಾರತೋಕ್ತಾತಿಮಾನುಷಪದ ತಾತ್ಪರ್ಯಮಾಹ - ಅನ್ಯಾದೃಶೇತಿ।
-ವಾದಿರಾಜೀಯ

'ಪ್ರಾಯೋ ಹಿ ನಾಭಿಮತಿ ನಾಶಮವಾಪ ವಾಣೇ' ಎಂದು ಪ್ರಾಯಃ ಶಬ್ದವಿದೆ. ಪಾರ್ವತಿಯ ವಿಷಯದಲ್ಲಿಯೂ ಹೀಗೇ ತಿಳಿಯಬೇಕು. ಅದರಿಂದ ಪ್ರತಿದಿನವೂ ಪಾರ್ವತಿಗೆ ವಾಯುವಿನೊಡನೆಯೆ ರಮಣ ಹೊರತು ಅನ್ಯರೊಡನೆ ಅಲ್ಲ ಎಂದು ವರದರಾಜೀಯ ಅಭಿಪ್ರಾಯಪಡುತ್ತದೆ.[1]

[2]ತಾಮ್ರಪರ್ಣೀಯದಲ್ಲಿ ದೇವಿಯರ ದೇಹಾಭಿಮಾನ ನಾಶ ಸ್ವರೂಪವನ್ನು ವಿವೇಚಿಸುತ್ತ ಅತಿಮಾನುಷತ್ವವನ್ನು ಹೀಗೆ ಸಮರ್ಥಿಸಿದೆ-

ಹರಿಸ್ಮರಣೆ ಇರುವುದರಿಂದ ಮೂರ್ಛೆಯೂ ಅಲ್ಲ ಗ್ರಹಾವೇಶವೂ ಅಲ್ಲ ಎನ್ನುವುದಾದರೆ, ಮರಣವೂ ಅಲ್ಲ, ಶರೀರ ಅನ್ಯವಶವಾಗುವುದರಿಂದ ಎನ್ನುತ್ತೇನೆ. ಮರಣವೆ ಅಲ್ಲ, ಮರಣ ಸದೃಶ ಎಂದು ಅಭಿಪ್ರಾಯ ಹೇಳುವಿಯಾದರೆ ನಾನೂ ಹೇಳುತ್ತೇನೆ, ಸುಪ್ತಿಯೆ ಅಲ್ಲ ಸುಪ್ತಿ ಸದೃಶ ಎಂದು. ಶರೀರ ಅನ್ಯವಶವಾಗುವುದು ಸುಪ್ತ್ಯವಸ್ಥೆಗೆ ವಿರೋಧಿಯಾದರೂ ಸುಪ್ತಿಸಾದೃಶ್ಯ ಬರಲು ಅಡ್ಡಿಯಾಗುವುದಿಲ್ಲ. ಏಕೆಂದರೆ ಸುಪ್ತಿಯಲ್ಲಿರುವಂತೆ ಪ್ರಕೃತದಲ್ಲಿಯೂ ಅಭಿಮಾನದ ಅನಭಿವ್ಯಕ್ತಿ ಇರುತ್ತದೆ. ಸುಪ್ತಿಯಲ್ಲಿ

---

1. ನನು ತತ್ರಾಪಿ ಮಾರುತಾದನ್ಯಂ ನ ಸ್ಪೃಶೇಮೇತಿ ಭಾರತ್ಯಾಃ ಪ್ರಾರ್ಥಿತತ್ವಾತ್ ಯುಧಿಷ್ಠಿರ ಭೋಗದಿವಸೇ ಪಾರ್ವತ್ಯಾಃ ಯುಧಿಷ್ಠಿರೇಣ ಭೋಗಃ ಪ್ರಾಪ್ತ ಇತ್ಯಾಶಂಕ್ಯ ಯುಧಿಷ್ಠಿರಾದಿಷು ಮರುತ ಆವಿಷ್ಟತ್ವಾತ್ ತೇನೈವ ಸಾಕಂ ಭೋಗೋ, ನ ಯುಧಿಷ್ಠಿರಾದಿನೇತಿ ವಕ್ತುಂ ಮರುತಸ್ತತ್ರ ಪ್ರವೇಶಕಾರಣ ಮಾಹ ಪ್ರಾಯೋಹೀ 'ತ್ಯಾದಿನಾ। ಭಾರತ್ಯಾದೀನಾಂ ಯುಧಿಷ್ಠಿರಾದಿ ವಿಷಯೇ ಅಭಿಮತಿ ನಾಶಃ, ಆವಿಷ್ಟಮರುದ್ವಿಷಯೇ ಅಭಿಮತಿ ನಾಶೋ ನಾಸ್ತೀತಿ ಅಭಿಪ್ರಾಯೇಣ ಪ್ರಾಯ ಇತ್ಯುಕ್ತಂ। ಏವಂ ಪಾರ್ವತ್ಯಾ ಅಪಿ। ತಥಾಚ ಪಾರ್ವತ್ಯಾಃ ಪ್ರತಿವಾಸರಂ ಮರುತೈವ ಭೋಗೋ, ನಾನ್ಯೈರಿತ್ಯುಕ್ತಂ ಭವತಿ।
-ವರದರಾಜೀಯ.

2. ನನ್ವಿದಮಭಿಮಾನ ವರ್ಜನಂ ಯಥಾ ನ ಸುಪ್ತ್ಯಾದಿವತ್ ತಥಾ ನ ಮರಣವತ್। ದೇಹಸ್ಯಾನ್ಯವಶತ್ವಾತ್, ಹರಿಸ್ಮೃತೇಶ್ಚೇತಿ ಚೇತ್, ನ ವಯಮಿದಂ ಮರಣಮೇವೇತಿ ಬ್ರೂಮಃ, ಕಿಂತು ತತ್ಸದೃಶಮಿತಿ। ತಸ್ಯ ಅನ್ಯವಶತ್ವಾದಿಕಂ ತು ಸಾಕ್ಷಾನ್ಮರಣಾತ್ಮಕತ್ವಮೇವಾಕ್ಷಿಪೇತ್ ನತು ತತ್ಸಾದೃಶ್ಯಮಪಿ। ತದಾತ್ಯಂತಿಕ ಸಾದೃಶ್ಯಸ್ಯಾಭಿಮಾನವಿನಾಶಸ್ಯ ವಿದ್ಯಮಾನತ್ವಾತ್। ನಚೈವಂ ಬ್ರೂಮೋ ನ ಸುಪ್ತಿರೇವೇದಂ, ಕಿಂತು ತತ್ಸದೃಶಂ। ದೇಹಸ್ಯಾನ್ಯ ವಶತ್ವಾದಿಕಂ ಸಾಕ್ಷಾತ್ ಸುಪ್ತ್ಯಾದ್ಯಾತ್ಮಕ ತ್ವಮೇವ ವ್ಯಾವರ್ತಯೇತ್, ನ ತು ಸಾದೃಶ್ಯಮಪಿ। ತತ್ಸಾದೃಶ್ಯಸ್ಯಾಭಿಮಾನ ವಿನಾಶಸ್ಯ ಸತ್ವಾದಿತಿ ವಾಚ್ಯಂ। ಸುಪ್ತ್ಯಾದಾವಭಿಮಾನಸ್ಯ ಪ್ರಮಿತತ್ವೇನ ತದವ್ಯಕ್ತಿ ಸದ್ಭಾವೇಽಪಿ ನಾಶಾಭಾವಾತ್। ಅತ್ರಾಪಿ ಸುಪ್ತ್ಯಾದಿವತ್ ಅಭಿಮಾನಾವ್ಯಕ್ತಿರೇವ ಕಿಂ ನಸ್ಯಾದಿತಿ ಚೇತ್ ಪೂರ್ವಜೀವಾಪೇಕ್ಷಯಾ ದೇಹಸ್ಯಾನ್ಯವಶತ್ವಾತ್। ನ ಹಿ ಸುಪ್ತ್ಯಾದಾವಿವ ಅಭಿಮಾನಸ್ಯ ನಾಶಾಭಾವಾತ್ ತದುಪಪದ್ಯತೇ। ಚರಮಮರಣೇ ಹರಿಸ್ಮೃತಿ ಸದ್ಭಾವಾತ್ ಹರಿಸ್ಮರಣಂ ನ ಮರಣ ಸಾರೂಪ್ಯ ವ್ಯಾವರ್ತಕಮಿತಿ ನ ಕಶ್ಚಿದ್ದೋಷಃ।

ಯಾರಿಗೂ ಅಭಿಮಾನ ನಾಶ ಹೊಂದುವುದಿಲ್ಲ, ಅವ್ಯಕ್ತಾವಸ್ಥೆಯಲ್ಲಿ ಇರುತ್ತದೆ ಎಂದು ಅನುವ್ಯಾಖ್ಯಾನದಲ್ಲಿ ಉಕ್ತವಾಗಿದೆ.

ಮೇಲೆ ಹೇಳಿದ ವಾದವು ಸರಿಯಲ್ಲ. ದೇಹವು ಅನ್ಯವಶವಾಗುವುದರಿಂದ ಅಭಿಮಾನ ನಾಶವನ್ನೇ ಹೇಳಬೇಕಾಗುತ್ತದೆ. ಅನಭಿವ್ಯಕ್ತಿಯನ್ನಲ್ಲ. ಅದರಿಂದ ಸುಪ್ತಿ ಸಾದೃಶ್ಯವಲ್ಲ, ಮರಣ ಸಾದೃಶ್ಯವೆನ್ನುವುದೇ ಸರಿ.

ಈಗ ಪ್ರಶ್ನೆ ಬರುತ್ತದೆ. ದೇಹಕ್ಕೆ ಒಮ್ಮೆ ವಿವಾಹ ಸಂಸ್ಕಾರವೇನೋ ಆಗಿರುತ್ತದೆ. ಆದರೆ ಪ್ರತಿದಿನ ಹೊಸ ಜನ್ಮ ಬರುವುದರಿಂದ ಪುನಃ ವಿವಾಹ ಸಂಸ್ಕಾರವಾಗಬೇಡವೆ? ದೇಹ ಒಂದೇ ಆದ್ದರಿಂದ ಬೇಡವೆನ್ನುವುದಾದರೆ ದೇಹ ಒಂದೇ ಆದ್ದರಿಂದಲೇ ವ್ಯಭಿಚಾರ ದೋಷ ಬರುವುದಿಲ್ಲವೆ? ಈ ಪ್ರಶ್ನೆಗೆ ಉತ್ತರ 'ದೇಹ ಒಂದೇ ಆದ್ದರಿಂದ ವಿವಾಹ ಸಂಸ್ಕಾರ ಹಾಗೇ ಉಳಿಯುತ್ತದೆ. ಆದರೆ ವ್ಯಭಿಚಾರ ದೋಷ ಮಾತ್ರ ಬರುವುದಿಲ್ಲ'. ಇದು ಅತಿಮಾನುಷ

ಕರ್ಮೈಕ್ಯವಿರುವಾಗ ಒಬ್ಬಳು ದೇವಿಗೆ ಭೋಗವಿದೆ. ಇತರರಿಗೆ ಇಲ್ಲ ಎನ್ನುವುದು ಹೇಗೆ ಎಂದರೂ ಅತಿಮಾನುಷ ಎಂದು ಉತ್ತರ.

ಶಚೀ ಶ್ಯಾಮಲಾ ಉಷಾದೇವಿಯರಿಗೆ ಅವರವರ ದಿನಗಳಲ್ಲಿ ಹೊರತು ಬೇರೆ ದಿನಗಳಲ್ಲಿ ಅಭಿಮಾನ ನಾಶ ಸರಿಯೆ. ಆದರೆ ಪಾರ್ವತಿಗೆ ಅಭಿಮಾನನಾಶವಿಲ್ಲ. ಅವಳಿಗೆ ವಾಯ್ವಾದಿ ಪರಪುರುಷ ಸಂಯೋಗ ವಾಗುವುದಿಲ್ಲವೆ? ಎಂಬ ಪ್ರಶ್ನೆಗೂ ಹಿಂದಿನಂತೆಯೆ ಧರ್ಮರಾಜಾದಿಗಳ ವಿಷಯದಲ್ಲಿ ಪಾರ್ವತಿಗೂ ಪಾರ್ವತಿಯ ವಿಷಯದಲ್ಲಿ

ನನು ಯತ್ತಾವದುಕ್ತಂ ಪ್ರತಿದಿನಂ ಜನ್ಮಾಭವದಿತಿ ತದಯುಕ್ತ ಮಾಭಾತಿ। ಪ್ರತ್ಯಹಂ ವಿವಾಹ ಪ್ರಸಂಗಾತ್। ನ ಚ ದೇಹೈಕ್ಯೇನ ನ ಕನ್ಯಾತ್ವಂ ವಿವಾಹ ಪ್ರತಿ ಬಂಧಕಮಿತಿ ವಾಚ್ಯಂ। ತರ್ಹಿ ದೇಹೈಕ್ಯಮಾದಾಯಾನ್ಯಗಾತ್ವಸ್ಯಾಪಿ ಪ್ರಾಪ್ತೇಃ ಇತಿ ಚೇತ್। ಮಧ್ಯೇ ಮಧ್ಯೇ ಕನ್ಯಾತ್ವ ಪ್ರಾಪ್ತಾವಪಿ ಪ್ರಾಥಮಿಕ ಪಾಣಿಗ್ರಹಣಾವಿರೋಧೇನ ಭೋಗಸ್ಯ ದೇವತಾಸೂಪಪತ್ತೇರಿತಿ। ತದೇತದಾಹ ಅನ್ಯಾದೃಶಾ ಹೀತಿ। ನನ್ವನ್ಯ ವಶತ್ವಂ ದೇಹಸ್ಯೇತ್ಯಯುಕ್ತಮಿವ ಪ್ರತೀಯತೇ। ಅನೇಕೈಕಕರ್ಮ ನಿರ್ಮಿತ ಶರೀರೇ ಕದಾಚಿದೇಕಸ್ಯಾ ಅಭಿಮಾನಾಭಾವೇನಾಭೋಗಃ, ಅನ್ಯಸ್ಯಾಸ್ತದ್ಭಾವೇನ ಭೋಗ ಇತ್ಯನುಪಪತ್ತೇರಿತಿ ಚೇತ್ ನ, ದೇವಭೋಗಸ್ಯಾನ್ಯಾದೃಶತ್ವಾತ್। ಇದಮಪ್ಯಾಹಾನ್ಯಾದೃಶಾ ಹೀತಿ। ನನು ಭಾರತ್ಯೈವ ಚ ಪಾರ್ವತೀ ಸಂಯುಕ್ತಾ ವ್ಯವಹಾರೇಷ್ವಿತ್ಯುಕ್ತ್ವಾ ಭಾರತೀದಿನೇ ಪಾರ್ವತ್ಯಾ ಅಭಿಮಾನಸ್ಯ ವಕ್ತವ್ಯತ್ವೇನ ವಾಯು ಸಂಬಂಧೋ ದುರ್ವಾರ ಇತಿ ಚೇತ್, ದೇವತಾಭುಕ್ತೇರ್ಮಾನುಷ ಭುಕ್ತ್ಯತಿವಿಲಕ್ಷಣತ್ವಾತ್ ಪಾರ್ವತ್ಯಾಃ ಸತ್ಯಪ್ಯಭಿಮಾನೇ ತದಭೋಗೋಪ ಪತ್ತೇಃ। ತದಿದಮಪ್ಯಾಹ ಅನ್ಯಾದೃಶಾ ಹೀತಿ।

-ತಾಮ್ರಪರ್ಣೀಯ

ಧರ್ಮರಾಜಾದಿಗಳಿಗೂ ಮನಸ್ಸನ್ನು ವಾಯು ನಿಷ್ಕ್ರಿಯಗೊಳಿಸುತ್ತಾನೆ, ಇದು ಅತಿಮಾನುಷವೆಂದೇ ಉತ್ತರ ಎಂದು ತಾಮ್ರಪರ್ಣೀಯದಲ್ಲಿ ಚರ್ಚೆ ನಡೆದಿದೆ.

ವಾದಿರಾಜೀಯದಲ್ಲಿ ಪಾರ್ವತಿಯ ಬಗ್ಗೆ ವಿಚಾರ ಎತ್ತಿಕೊಂಡಿಲ್ಲ. ಆದಕ್ಕೆ ಹಿಂದೆ ಹೇಳಿದಂತೆ ಪಾರ್ವತಿಗೆ ಬಾಹ್ಯ ವ್ಯವಹಾರಗಳಲ್ಲಿ ಮಾತ್ರ ದೇಹಾಭಿಮಾನ ಎನ್ನಬೇಕು ಮತ್ತು ಸರ್ವಾಂತರ್ಯಾಮಿಗಳಾದ, ಎಲ್ಲರಿಗೂ ತಂದೆತಾಯಿಗಳಾದ ವಾಯುಭಾರತಿಯರು ಪಾರ್ವತಿ ಮುಂತಾದ ದೇವಿಯರನ್ನೂ ಧರ್ಮರಾಜಾದಿಗಳನ್ನೂ ಕೇವಲ ಮಕ್ಕಳೆಂಬ ನಿರ್ಮಲಭಾವನೆಯಿಂದ ಸ್ಪರ್ಶಿಸುತ್ತಾರೆ. ಅದರಿಂದ 'ಪರಪುರುಷಸ್ಪರ್ಶ ಅನಿವಾರ್ಯವೆನಿಸಿದರೆ ವಾಯುವಿನ ಸ್ಪರ್ಶಮಾತ್ರವಾಗಲಿ' ಎಂದು ವರಪಡೆದಿದ್ದಾರೆ. ಅದರಿಂದ ವಾಯು ಭಾರತಿಗೆ ಧರ್ಮರಾಜಾದಿಗಳ ವಿಷಯದಲ್ಲಿ ಬುದ್ಧಿಮೋಹ ಉಂಟುಮಾಡುವ ಪ್ರಸಕ್ತಿಯೇ ಬರುವುದಿಲ್ಲ.

ವಾಸಿಷ್ಠಯಾದವವೃಷಾವಪಿ ಕೇಶವೌ ತೌ
ತತ್ರೋಷತುಃ ಪರಮಸೌಹೃದತೋ ಹಿ ತೇಷು ।
ತಾಭ್ಯಾಮನಂತಗುಣಪೂರ್ಣಸುಖಾತ್ಮಕಾಭ್ಯಾಂ
ಪಾರ್ಥಾಶ್ಚ ತೇ ಮುಮುದಿರೇ ಯುತಸತ್ಕಥಾಭಿಃ ॥೧೮೮॥

ವೇದವ್ಯಾಸರೂ ಶ್ರೀಕೃಷ್ಣನೂ ಪಾಂಡವರಲ್ಲಿ ಪರಮಪ್ರೀತಿಯಿಂದ ಅವರ ಮನೆಗಳಲ್ಲಿಯೇ ವಾಸಮಾಡಿದರು. ಅನಂತಗುಣಪೂರ್ಣರೂ ಪೂರ್ಣ ಸುಖ ಸ್ವರೂಪರೂ ಆದ ಅವರಿಬ್ಬರೊಡನೆ ಪಾಂಡವರು ಅನ್ಯೋನ್ಯವಾಗಿ ಮಧುರ ಸಂಭಾಷಣೆಗಳಿಂದ ಆನಂದಿಸಿದರು.

ಭಾನುಮತೀ ಸ್ವಯಂವರ

ಪೂರ್ವಂ ಹಿ ತೇಷು ವನಗೇಷು ಬಭೂವ ಕಾಶಿ-
ರಾಜ್ಞಃ ಸುತಾಕೃತ ಉರುಕ್ಷಿತಿಪಾಲಯೋಗಃ ।
ತತ್ರ ಸ್ವಯಂವರಗತಾಂ ಧೃತರಾಷ್ಟ್ರಪುತ್ರಃ
ಕನ್ಯಾಂ ಬಲಾಜ್ಜಗೃಹ ಆತ್ಮಬಲಾತಿದೃಪ್ತಃ ॥೧೮೯॥

ದ್ರೌಪದೀ ಸ್ವಯಂವರವಾಗುವುದಕ್ಕೆ ಮೊದಲು, ಪಾಂಡವರು ಹಿಡಿಂಬವನದಲ್ಲಿದ್ದಾಗ, ಕಾಶಿರಾಜನ ಮಗಳ ಸ್ವಯಂವರಕ್ಕಾಗಿ ರಾಜರುಗಳ ಮಹಾ ಸಂಮೇಲನ ನಡೆದಿತ್ತು. ಅದರಲ್ಲಿ ದುರ್ಯೋಧನ ತಾನೇ ಬಲಿಷ್ಠನೆಂಬ ಮಹಾ ಅಹಂಕಾರದಿಂದ ಸ್ವಯಂವರ ಮಂಟಪದಲ್ಲಿ ನಿಂತಿದ್ದ ಕನ್ಯೆಯನ್ನು ಬಲಾತ್ಕಾರವಾಗಿ ಅಪಹರಿಸಿದ. .

ಪೂರ್ವಂ ಹಿ ರಾಜಗಣನೇ ಮಗಧಾಧಿರಾಜಃ
ಸಂಖ್ಯಾತ ಇತ್ಯತಿರುಷಾ ಪ್ರಗೃಹೀತಕನ್ಯೇ ।
ದುರ್ಯೋಧನೇ ನೃಪತಯೋ ಯುಯುಧುಃ ಸ್ಮ ತೇನ
ಭಗ್ನಾಶ್ಚ ಕರ್ಣಸಹಿತೇನ ಸಹಾನುಜೇನ ॥೧೯೦॥

ಸ್ವಯಂವರ ಮಂಟಪದಲ್ಲಿ ರಾಜರುಗಳಲ್ಲಿ ಮೊದಲಿಗೆ ಜರಾಸಂಧ ಪರಿಗಣಿತನಾದನೆಂದು ಅಸಹನೆಯಿಂದ ದುರ್ಯೋಧನ ಕನ್ಯೆಯನ್ನು ಅಪಹರಿಸಿದ್ದ. ಆಗ ರಾಜರು ಅವನೊಡನೆ ಯುದ್ಧ ಮಾಡಿದರು. ದುರ್ಯೋಧನ ಅವರನ್ನು ಕರ್ಣನ ಮತ್ತು ತಮ್ಮಂದಿರ ಸಹಾಯದಿಂದ ಪರಾಭವಗೊಳಿಸಿದ.

ಕರ್ಣ ಗಿಟ್ಟಿಸಿದ ಭಾರೀ ಯಶಸ್ಸು

ಭಗ್ನೇಷು ತೇಷು ಪುನರಾತ್ತಶರಾಸನೇಷು
ಕರ್ಣೋ ಜಗಾದ ಧೃತರಾಷ್ಟ್ರಸುತಂ ಪ್ರಯಾಹಿ ।
ಯುಕ್ತಃ ಸಹೋದರಜನೈರ್ಗುರುಭೀಷ್ಮಮುಖ್ಯೈ-
ರ್ಯುಕ್ತಸ್ಯ ತೇ ನ ಪುರಮೇತ್ಯ ಹಿ ಧರ್ಷಣೇಶಾಃ ॥೧೯೧॥

ಪರಾಜಿತರಾದ ರಾಜರು ಪುನಃ ಬಿಲ್ಲನೆತ್ತಿದಾಗ ಕರ್ಣ ದುರ್ಯೋಧನನಿಗೆ ಹೇಳಿದ. 'ನೀನು ತಮ್ಮಂದಿರೊಡನೆ ಹಸ್ತಿನಾಪತಿಗೆ ಹೋಗು. ಅಲ್ಲಿ ಭೀಷ್ಮ ಮುಂತಾದವರ ರಕ್ಷಣೆಯಲ್ಲಿರುವಾಗ ನಿನ್ನನ್ನು ಈ ರಾಜರು ಬಂದು ಆಕ್ರಮಿಸಲು ಶಕ್ತರಾಗಲಾರರು.

ಏಕಾಂತತೋ ಜಯಮವೀಕ್ಷ್ಯ ಚ ನಾನುಯಾತಿ
ಬಾರ್ಹದ್ರಥಃ ಪುರಗತಸ್ಯ ಜಯೇ ನ ನಿಷ್ಠಾ ।
ದ್ರೌಣಿಂ ಹಿ ರುದ್ರತನುಮೇಷ ಸದಾ ವಿಜಾನನ್
ನೋ ತೇನ ಯುದ್ಧಮಭಿವಾಂಛತಿ ರುದ್ರಭಕ್ತಃ ॥೧೯೨॥

ಜರಾಸಂಧನೂ ತಾನು ನಿಶ್ಚಿತವಾಗಿ ಜಯಗಳಿಸುವೆನೆಂಬ ವಿಶ್ವಾಸವಿಲ್ಲದೆ ಯುದ್ಧಕ್ಕೆ ಹೊರಡುವುದಿಲ್ಲ. ನೀನು ನಿನ್ನ ಪಟ್ಟಣದಲ್ಲಿದ್ದರೆ ಅವನಿಗೆ ಜಯಗಳಿಸುವ ಬಗ್ಗೆ ಭರವಸೆ ಉಂಟಾಗಲಾರದು. ಇದಲ್ಲದೆ ಅಶ್ವತ್ಥಾಮನನ್ನು ಅವನು ರುದ್ರನ ಅವತಾರವೆಂದು ಸದಾ ತಿಳಿದಿರುವುದರಿಂದ ಅವನೊಡನೆ ಯುದ್ಧವನ್ನು ರುದ್ರಭಕ್ತನಾದ ಆತ ಎಂದಿಗೂ ಇಷ್ಟಪಡುವುದಿಲ್ಲ.

ಏಕೋಽಹಮೇವ ನೃಪತೀನ್ ಪ್ರತಿಯೋಧಯಿಷ್ಯ
ಏತೈರ್ಮಯಿ ಪ್ರವಿಜಿತೇಽಪಿ ನ ತೇಽಸ್ತ್ಯಕೀರ್ತಿಃ ।
ಏಕಂ ಚ ತೇಽನುಜಮಿಮೇ ಯದಿ ಪೌರುಷೇಣ
ಗೃಹ್ಣೀಯುರತ್ರ ತವ ಕೀರ್ತಿರುಪೈತಿ ನಾಶಂ ॥೧೯೩॥

ಇಲ್ಲಿ ನಾನೊಬ್ಬನೇ ರಾಜರನ್ನು ಇದಿರಿಸಿ ಯುದ್ಧ ಮಾಡಬಲ್ಲೆ. ಒಂದು ವೇಳೆ ನಾನು ಇವರಿಗೆ ಸೋತರೂ ನಿನಗೆ ಅಪಕೀರ್ತಿ ಇಲ್ಲ. ನೀನು ಇಲ್ಲಿಯೆ ಇದ್ದು ನಿನ್ನ ಒಬ್ಬ ತಮ್ಮನನ್ನಾದರೂ ಇವರು ಪೌರುಷದಿಂದ ಸೆರೆ ಹಿಡಿದರೂ ನಿನ್ನ ಕೀರ್ತಿ ಹಾಳಾಗುವುದು.

ಭೀಷ್ಮಾದಯೋಽಪಿ ನ ಹಿ ಯೋಧಯಿತುಂ ಸಮರ್ಥಾ
ರಾಜ್ಞಾ ಹ್ಯನೇನ ತತ ಏವ ಚ ಬಾಹ್ಲಿಕೋಽಸ್ಯ ।
ಭೃತ್ಯೋ ಬಭೂವ ನ ಹಿ ಭೀಷ್ಮಮಯಂ ಯುಧೇಽಗಾದ್
ರಾಜಾ ನ ಹೀತಿ ನ ಚ ತೇನ ವಿರೋಧ ಆಸೀತ್ ॥೧೯೪॥

ಭೀಷ್ಮಾದಿಗಳೂ ಕೂಡ ಈ ಜರಾಸಂಧನೊಡನೆ ಯುದ್ಧ ಮಾಡಲು ಶಕ್ತರಲ್ಲ. ಅದರಿಂದಲೆ ಬಾಹ್ಲಿಕ ಅವನಿಗೆ ಅಡಿಯಾಳಾಗಿದ್ದಾನೆ. ಆದರೂ ಭೀಷ್ಮನನ್ನು ಯುದ್ಧದಲ್ಲಿ ಅವನು ಆಕ್ರಮಿಸಲಿಲ್ಲ. ಏಕೆಂದರೆ ಭೀಷ್ಮ ರಾಜನಲ್ಲ ಎಂದು. ಅದರಿಂದಲೆ ಭೀಷ್ಮನೊಡನೆ ಜರಾಸಂಧ ಎಂದೂ ಯುದ್ಧ ಮಾಡಲಿಲ್ಲ.

ಬಾಹ್ಲೀಕ ಶಂತನುವಿನ ಅಣ್ಣ. ಭೀಷ್ಮನ ದೊಡ್ಡಪ್ಪ. ಭೀಷ್ಮ ಜರಾಸಂಧನನ್ನು ಅಣಗಿಸಬಲ್ಲವನಾಗಿರುತ್ತಿದ್ದರೆ ಬಾಹ್ಲಿಕ ಜರಾಸಂಧನ ಅಡಿಯಾಳಾಗಿರುತ್ತಿರಲಿಲ್ಲ. ಹೀಗೆ ಭೀಷ್ಮ ಬಾಹ್ಲಿಕರಿಗಿಂತಲೂ ಜರಾಸಂಧ ಬಲಿಷ್ಠ. ಆದರಿಂದ ಅವರ ರಕ್ಷಣೆಯಲ್ಲಿದ್ದರೂ ನಿನ್ನ ತಮ್ಮಂದಿರನ್ನು ಜರಾಸಂಧ ಸೆರೆಹಿಡಿಯುವುದರಲ್ಲಿ ಸಂಶಯವಿಲ್ಲ. ಅದರಿಂದ ಬೇಗನೆ ಹಿಂತಿರುಗಿ ನಿನ್ನ ಪಟ್ಟಣಕ್ಕೆ ಹೋಗು ಎನ್ನುತ್ತಿದ್ದಾನೆ ಕರ್ಣ.

ಇತ್ಯುಕ್ತ ಆಶು ಸ ವಿಮೃಶ್ಯ ಯಯೌ ಪುರಂ ಸ್ವಂ
ಕರ್ಣೋಽಪಿ ತೈಃ ಪ್ರತಿಯುಯೋಧ ಜಿಗಾಯ ಚೈತಾನ್ ।
ಕರ್ಣಸ್ಯ ವೀರ್ಯಮಗಣಯ್ಯ ಜರಾಸುತೋಽಪಿ
ಹ್ಯೇಕೈಕಮೇವ ನೃಪತಿಂ ಸ ದಿದೇಶ ಯೋದ್ಧುಂ ॥೧೯೫॥

ಕರ್ಣ ಹೀಗೆ ಹೇಳಿದಾಗ ದುರ್ಯೋಧನ ಆಲೋಚಿಸಿ ತನ್ನ ಪಟ್ಟಣಕ್ಕೆ ಹಿಂತಿರುಗಿದ. ಕರ್ಣ ರಾಜರೊಡನೆ ಯುದ್ಧಮಾಡಿ ಅವರನ್ನು ಗೆದ್ದ. ಏಕೆಂದರೆ ಕರ್ಣನ ಸಾಮರ್ಥ್ಯವನ್ನು ಲೆಕ್ಕಿಸದೆ ಜರಾಸಂಧ ಒಬ್ಬೊಬ್ಬ ರಾಜನನ್ನೇ ಅವನ ಬಳಿ ಯುದ್ಧ ಮಾಡಲು ಕಳಿಸಿದ್ದ.

ಸರ್ವೇಷು ತೇಷು ವಿಜಿತೇಷ್ವಭಿಜಗ್ಮಿವಾನ್ ಸ
ಯೋದ್ಧುಂ ಬೃಹದ್ರಥಸುತೋಽಪ್ಯಮುನಾ ರಥೇನ ।
ತಂ ಚೈವ ರಾಮವರತೋ ವಿರಥಂ ವಿಶಸ್ತ್ರಂ
ಚಕ್ರೇ ಸ ಚೈನಮಥ ಮುಷ್ಟಿಭಿರಭ್ಯುಪೇತ್ಯ ॥೧೯೬॥

ಒಬ್ಬೊಬ್ಬರಾಗಿ ಎಲ್ಲ ರಾಜರೂ ಪರಾಜಿತರಾದಾಗ ಜರಾಸಂಧ ತಾನೆ ಕರ್ಣನೊಡನೆ

ಯುದ್ಧಮಾಡಲು ರಥವೇರಿ ಹೊರಟ. ಪರಶುರಾಮರ ವರಬಲದಿಂದ ಕರ್ಣ ಜರಾಸಂಧನನ್ನು, ವಿರಥನನ್ನಾಗಿಯೂ ನಿರಾಯುಧನನ್ನಾಗಿಯೂ ಮಾಡಿದ. ಜರಾಸಂಧನೂ ಕರ್ಣನನ್ನು ಹಾಗೇ ವಿರಥನನ್ನಾಗಿಯೂ ನಿರಾಯುಧನನ್ನಾಗಿಯೂ ಮಾಡಿದ. ಬಳಿಕ ಇಬ್ಬರೂ ಮುಷ್ಟಿಗಳಿಂದ ಹೋರಾಡಿದರು.

ಸಂಧೌ ಯದೈವ ಜರಯಾ ಪ್ರತಿಸಂಧಿತಸ್ಯ
ಕರ್ಣೋ ಜಘಾನ ನ ಪರತ್ರ ತುತೋಷ ರಾಜಾ ।
ನ ಜ್ಞಾತಮೇತದಪಿ ಹೋ ಹಲಿನಾ ತದೇತದ್
ಜ್ಞಾತಂ ತ್ವಯಾ ಭವ ತತೋ ಮಮ ಭೃತ್ಯ ಏವ ॥೧೯೭॥

ಜರಾಸಂಧನಿಗೆ ಕರ್ಣ ಬೇರೆ ಕಡೆ ಬಿಟ್ಟು ಸಂಧಿಯಲ್ಲಿಯೇ ಯಾವಾಗ ಹೊಡೆಯಲು ತೊಡಗಿದನೋ ಆಗ ಜರಾಸಂಧ ಮೆಚ್ಚಿದ. ನನ್ನ ಮರ್ಮಸ್ಥಳವನ್ನು ಬಲರಾಮನೂ ತಿಳಿಯಲಿಲ್ಲ: ನೀನು ತಿಳಿದುಬಿಟ್ಟೆ, ಅದರಿಂದ ನೀನು ನನ್ನ ಭಟನಾಗಿರು.

ಏವಂವಿಧಂ ಸುಕುಶಲಂ ಬಹುಯುದ್ಧಶೌಂಡಂ
ನ ತ್ವಾಂ ಹನಿಷ್ಯ ಉತ ತೇ ಪಿತುರೇವ ಪೂರ್ವಂ ।
ಬಾಹ್ವೋರ್ಬಲಾದಭಿಹೃತಂ ಹಿ ಮಯಾಂಗರಾಜ್ಯಂ
ತತ್ತ್ವಂ ಗೃಹಾಣ ಯುಧಿ ಕರ್ಮಕರಶ್ಚ ಮೇ ಸ್ಯಾಃ ॥೧೯೮॥

ಇಂಥ ಒಳ್ಳೆಯ ಕುಶಲನಾದ, ಬಹುಯುದ್ಧ ಸಮರ್ಥನಾದ ನಿನ್ನನ್ನು ನಾನು ಕೊಲ್ಲುವುದಿಲ್ಲ, ಮಾತ್ರವಲ್ಲ, ಹಿಂದೆ ನಿನ್ನ ತಂದೆಯಿಂದ ನಾನು ನನ್ನ ಬಾಹು ಬಲದಿಂದ ಅಂಗರಾಜ್ಯವನ್ನು ಗೆದ್ದುಕೊಂಡಿದ್ದೆ. ಅದನ್ನು ನೀನು ತೆಗೆದುಕೊ. ಯುದ್ಧಗಳಲ್ಲಿ ನೀನು ನನ್ನ ಭಟನಾಗಿರು.

ಇತ್ಯುಕ್ತ ಆಶು ಸ ತಥೈವ ಚಕಾರ ಕರ್ಣಃ
ಪೂರ್ವಂ ಹಿ ತಸ್ಯ ನಿಜರಾಜ್ಯಪದೈಕದೇಶಃ ।
ದುರ್ಯೋಧನೇನ ವಿಹಿತೋ ಮಗಧಾಧಿರಾಜಂ
ಜಿತ್ವಾ ವೃಕೋದರಹೃತಃ ಪಿತುರೇವ ದತ್ತಃ ॥೧೯೯॥

ಜರಾಸಂಧ ಹೀಗೆ ಹೇಳಿದಾಗ ಕರ್ಣ ಬೇಗನೆ ಅಂಗರಾಜ್ಯವನ್ನು ಸ್ವೀಕರಿಸಿದ. ಹಿಂದೆ ಶಸ್ತ್ರಾಭ್ಯಾಸ ಪ್ರದರ್ಶನ ಕಾಲದಲ್ಲಿ ದುರ್ಯೋಧನ ಕರ್ಣನಿಗೆ ಕೊಟ್ಟಿದ್ದುದು ಅವನ ಅಂಗರಾಜ್ಯದ ಒಂದು ಭಾಗಮಾತ್ರ. ಅದು ದಿಗ್ವಿಜಯಕಾಲದಲ್ಲಿ ಭೀಮ ಜರಾಸಂಧನನ್ನು ಗೆದ್ದು ಅವನಿಂದ ಅಪಹರಿಸಿ ಧೃತರಾಷ್ಟ್ರನಿಗೆ ಕೊಟ್ಟಿದ್ದು.

ಅಂಗಾಧಿರಾಜ್ಯಮುಪಲಭ್ಯ ಜರಾಸುತಸ್ಯ
ಸ್ನೇಹಂ ಚ ಸೂರ್ಯಸುತ ಆಶು ಕುರೂನ್ ಜಗಾಮ ।

ದೃಷ್ಟ್ವೈವ ತಂ ಮುಮುದಿರೇ ಧೃತರಾಷ್ಟ್ರಪುತ್ರಾ
ನಾನೇನ ತುಲ್ಯಮಭಿಜಗ್ಮುರತೋ ಹರಿಂ ಚ ॥೨೦೦॥

ಹೀಗೆ ಅಂಗರಾಜ್ಯವನ್ನೂ ಜರಾಸಂಧನ ಸ್ನೇಹವನ್ನೂ ಸಂಪಾದಿಸಿ ಕರ್ಣ ಬೇಗನೆ ಕೌರವರ ಬಳಿಗೆ ಬಂದ. ಅವನನ್ನು ಕಂಡೊಡನೆ ಕೌರವರು ಆನಂದಪಟ್ಟರು. ಅವನಿಗೆ ಶ್ರೀಕೃಷ್ಣನೂ ಸಮನಲ್ಲ ಎಂದುಕೊಂಡರು.

ಶ್ರೀಕೃಷ್ಣ ಹದಿನೆಂಟು ಬಾರಿ ಜರಾಸಂಧನಿಗೆ ಸೋತು ಪಲಾಯನ ಮಾಡಿದಂತೆ ತೋರಿಕೊಂಡಿದ್ದ. ಅದರಿಂದ ಅವನಿಗಿಂತ ಕರ್ಣನೆ ಮೇಲು ಎಂದು ಕೌರವರು ತಿಳಿದರು.

ಕೌರವನ ಸಂತತಿ

ಉದ್ವಾಹ್ಯ ಕಾಶಿತನಯಾಂ ಗಿರಿಜಾಭಿವಿಷ್ಟಾಂ
ಸಾಕ್ಷಾನ್ನರೇಷು ಜನಿತಾಂ ಪ್ರಥಮಾಮಲಕ್ಷ್ಮೀಂ।
ತಸ್ಯಾಂ ಸುತಂ ತ್ವಜನಯತ್ ಪುರ ಆಸ ಯೋಕ್ಷಃ
ಕನ್ಯಾಂ ಪುರಾ ಪ್ರಿಯತಮಾಂ ಚ ಷಡಾನನಸ್ಯ ॥೨೦೧॥

ಪಾರ್ವತಿಯ ಆವೇಶದೊಂದಿಗೆ ಮನುಷ್ಯರಲ್ಲಿ ಹುಟ್ಟಿದ ಸಾಕ್ಷಾತ್ ಜ್ಯೇಷ್ಠ ಅಲಕ್ಷ್ಮಿಯೇ ಆಗಿದ್ದ ಕಾಶಿರಾಜಕುಮಾರಿಯನ್ನು ದುರ್ಯೋಧನ ಮದುವೆಯಾಗಿ ಅವಳಲ್ಲಿ ಹಿಂದೆ ಅಕ್ಷಕುಮಾರನಾಗಿದ್ದವನನ್ನು ಮಗನನ್ನಾಗಿ ಹುಟ್ಟಿಸಿದ. ಹಿಂದೆ ಷಣ್ಮುಖನ ಭಾರ್ಯೆಯಾಗಿದ್ದವಳನ್ನು ಮಗಳನ್ನಾಗಿಯೂ ಹುಟ್ಟಿಸಿದ.

ಅಲಕ್ಷ್ಮಿ ಜ್ಯೇಷ್ಠೆ ಏಕೆಂದರೆ ಕ್ಷೀರಸಮುದ್ರ ಮಥನ ಕಾಲದಲ್ಲಿ ಲಕ್ಷ್ಮಿಗಿಂತ ಮೊದಲಿಗೆ ಹುಟ್ಟಿಬಂದವಳು ಅವಳು. ತಮೋಯೋಗ್ಯ ಸ್ತ್ರೀಯರಲ್ಲೆಲ್ಲ ಮೊದಲಿಗಳು. ದುರ್ಯೋಧನ ಮದುವೆಯಾದ ಹೆಣ್ಣುಗಳಲ್ಲಿ ಮೊದಲಿಗಳು ಎಂದು ತಾಮ್ರಪರ್ಣೀಯದಲ್ಲಿ ಹೇಳಿದೆ.[1]

ವೇಣೀಸಂಹಾರ ಮುಂತಾದ ಸಂಸ್ಕೃತ ನಾಟಕಗಳಲ್ಲಿಯೂ ಕನ್ನಡ ಮಹಾ. ಭಾ. ನಿರ್ಣಯದಲ್ಲಿಯೂ ಇವಳನ್ನು ಭಾನುಮತಿ ಎಂದು ಕರೆಯಲಾಗಿದೆ. ಪುರಂದರದಾಸರ 'ದ್ರೌಪದೀ ಮಾನರಕ್ಷಣ' ಎಂಬ ವಾರ್ಧಿಕಷಟ್ಪದಿ ಕೃತಿಯಲ್ಲಿ,

---

1. ಪ್ರಥಮಾಂ ತಮೋಯೋಗ್ಯಸ್ತ್ರೀಷು ಪ್ರಧಾನಾಂ। ಯದ್ವಾ ಮಹಾಲಕ್ಷ್ಮ್ಯಪೇಕ್ಷಯಾ ಪ್ರಥಮಾಂ ಜ್ಯೇಷ್ಠಾಂ ಕ್ಷೀರಸಮುದ್ರಮಥನಕಾಲೇ ಪೂರ್ವಮುತ್ಪನ್ನಾಮಿತಿ ಯಾವತ್। ಯದ್ವಾ ಪ್ರಥಮಾಮುದ್ವಾಹ್ಯೇತ್ಯನ್ವಯಃ। ಪ್ರಥಮಭಾರ್ಯಾತ್ವೇನೋದ್ವಾಹ್ಯೇತ್ಯರ್ಥಃ।

-ತಾಮಪರ್ಣೀಯ.

ಅತ್ತೆಯಲ್ಲವೆ ಎನಗೆ ಗಾಂಧಾರಿದೇವಿಯರೆ!
ಮೃತ್ಯುವಂತೆಳೆವವನ ಬಿಡಿಸಬಾರದೆ ತಾಯೆ!
ಉತ್ತಮಳೆ ನೀನು ಭಾನುಮತಿ ನೆಗೆಹೆಣ್ಣೆ
ಇತ್ತದಯಮಾಡಿ ನೋಡೆ!

ಎಂದು 'ಭಾನುಮತಿ' ಎಂಬ ಹೆಸರೇ ಕಾಣುತ್ತದೆ.

ಭಾನುಮತಿಯಲ್ಲಿ ಕೆಲವೊಮ್ಮೆ ಮಹಾಸಾತ್ವಿಕತೆ ಕಂಡುಬರುತ್ತಿತ್ತು. ಉದಾ: ದ್ರೌಪದೀವಸ್ತ್ರಾಪಹಾರ ಕಾಲದಲ್ಲಿ ಇವಳೂ ಅತ್ತಳಂತೆ!

'ಧಾರ್ತರಾಷ್ಟ್ರಸ್ತ್ರಿಯಸ್ತಾಶ್ಚ ನಿಖಿಲೇನೋಪಲಭ್ಯ ವೈ।
ಗಮನಂ ಪರಿಕರ್ಷಂಚ ಕೃಷ್ಣಾಯಾ ದ್ಯೂತಮಂಡಲೇ।
ರುರುದುಃ ಸುಸ್ವರಂ ಸರ್ವಾ ವಿನಿಂದಂತ್ಯಃ ಕುರೂನ್ ಭೃಶಂ'॥

ಈ ಬಗೆಯ ಸಾತ್ವಿಕತೆಗೂ ಶರೀರ ಸೌಂದರ್ಯಕ್ಕೂ ಕಾರಣ ಅವಳಲ್ಲಿದ್ದ ಪಾರ್ವತಿಯ ಆವೇಶ. ಅವಳಲ್ಲಿ ಹಿಂದೆ ರಾವಣನ ಮಗನಾಗಿದ್ದ ಅಕ್ಷಕುಮಾರ ಲಕ್ಷಣನಾಗಿಯೂ ಷಣ್ಮುಖನ ಭಾರ್ಯೆ ಮನ್ಮಥನ ರಾಣಿ ರತಿ ಲಕ್ಷಣೆಯಾಗಿಯೂ ಹುಟ್ಟಿದರು. ಲಕ್ಷಣೆಯನ್ನು ಮನ್ಮಥನ ಅವತಾರ ಭೂತನಾದ ಜಾಂಬವತೀಪುತ್ರ ಸಾಂಬ ಮದುವೆಯಾಗುತ್ತಾನೆ.

ಪುತ್ರೋ ಬಭೂವ ಸ ತು ಲಕ್ಷಣನಾಮಧೇಯಃ
ಸಾ ಲಕ್ಷಣೇತ್ಯಧಿಕರೂಪಗುಣಾ ಸುಕನ್ಯಾ।
ತಸ್ಯಾನುಜಾಶ್ಚ ನಿಜಯೋಗ್ಯಗುಣಾ ಅವಾಪು-
ರ್ಭಾರ್ಯಾಃ ಪುನಶ್ಚ ಸ ಸುಯೋಧನ ಆಪ ಭಾರ್ಯಾಃ ॥೨೦೨॥

ದುರ್ಯೋಧನನ ಮಗನಿಗೆ ಲಕ್ಷಣ ಎಂದು ಹೆಸರು, ಮಗಳಿಗೆ ಲಕ್ಷಣಾ ಎಂದು. ಅವಳು ಅಧಿಕ ಸೌಂದರ್ಯಾದಿಗುಣಗಳಿಂದ ಯುಕ್ತಳು. ದುರ್ಯೋಧನನ ತಮ್ಮಂದಿರೂ ತಮಗೆ ತಕ್ಕುದಾದ ಗುಣಉಳ್ಳ ಹೆಂಡಂದಿರನ್ನು ಪಡೆದರು. ಪುನಃ ದುರ್ಯೋಧನ ಬೇರೆ ಹೆಂಡಂದಿರನ್ನೂ ಪರಿಗ್ರಹಿಸಿದ.

ಲಕ್ಷಣನಿಗೆ ಲಕ್ಷ್ಮಣ ಎಂದೂ ಹೆಸರು. ಮುಂದೆ ಕುರುಕ್ಷೇತ್ರದಲ್ಲಿ ಈತ ಅಭಿಮನ್ಯುವಿನಿಂದ ಹತನಾದ.

ಪೂರ್ವಂ ಸುರಾಂತಕ ಇತಿ ಪ್ರಥಿತಃ ಸುತೋಽಭೂತ್
ದುಶ್ಶಾಸನಸ್ಯ ತದನು ಪ್ರತಿತಪ್ಯಮಾನಾಃ।
ದೃಷ್ಟ್ವೈವ ಪಾರ್ಥಬಲವೀರ್ಯಗುಣಾನ್ ಸಮೃದ್ಧಿಂ
ತಾಂ ಚೈವ ತೇ ಪ್ರತಿಯಯುಃ ಸ್ಮ ಕಲಿಂಗದೇಶಂ ॥೨೦೩॥

ಹಿಂದೆ ರಾಮಾಯಣ ಕಾಲದಲ್ಲಿ ಸುರಾಂತಕನೆಂದು ಪ್ರಸಿದ್ಧನಾದ ರಾಕ್ಷಸ ದುಃಶಾಸನನಿಗೆ ಮಗನಾಗಿ ಹುಟ್ಟಿದ. ಬಳಿಕ ಪಾಂಡವರ ಬಲ ವೀರ್ಯಗುಣಗಳನ್ನೂ ಆ ಮಹಾಸಂಪತ್ತನ್ನೂ ಕಂಡೇ ಪರಿತಾಪಗೊಂಡ ಕೌರವರು ಕಲಿಂಗ ದೇಶಕ್ಕೆ ಹೋದರು.

ಕೌರವನಿಗೆ ಭಾರೀ ಸೋಲು

ಆಸೀತ್ ಸ್ವಯಂವರ ಉತಾತ್ರ ಕಲಿಂಗರಾಜ-
ಪುತ್ರ್ಯಾ ಃ ಸುವಜ್ರ ಇತಿ ಯಂ ಪ್ರವದಂತಿ ಭೂಪಾಃ ।
ರೌದ್ರಾದ್ವರಾದವಿಜಿತಸ್ಯ ಚ ತಸ್ಯ ಕನ್ಯಾಂ
ದೃಪ್ತೋ ಬಲಾತ್ಸ ಜಗೃಹೇ ಧೃತರಾಷ್ಟ್ರಸೂನುಃ ॥೨೦೪॥

ಕಲಿಂಗ ರಾಜಕುಮಾರಿಗೆ ಸ್ವಯಂವರ ನಡೆದಿತ್ತು. ಆ ರಾಜನನ್ನು ಎಲ್ಲ ರಾಜರೂ ಸುವಜ್ರ ಎಂದು ಕರೆಯುತ್ತಿದ್ದರು. ರುದ್ರವರದಿಂದ ಅಜೇಯನೆನಿಸಿದ ಸುವಜ್ರನ ಕನ್ಯೆಯನ್ನು ದೃಪ್ತನಾದ ದುರ್ಯೋಧನ ಬಲಾತ್ಕಾರದಿಂದ ಅಪಹರಿಸಿದ.

ತತ್ರಾಥ ರುದ್ರವರತಃ ಸ ಜರಾಸುತೇನ
ಯುಕ್ತೋ ಬಬಂಧ ಚ ಸುಯೋಧನಮಾಶು ಜಿತ್ವಾ ।
ಕರ್ಣಃ ಪರಾದ್ರವದಿಹ ಸ್ಮ ಸುತೇಷು ಪಾಂಡೋ-
ರ್ಯತ್ಸ್ಮಾತ್ ಸ್ಪೃಧಾಗಮುದತಃ ಸ ಪರಾಜಿತೋಽಭೂತ್ ॥೨೦೫॥

ಆಗ ಜರಾಸಂಧನ ಸಹಾಯ ಪಡೆದು ರುದ್ರವರದಿಂದ ಸುವಜ್ರ ದುರ್ಯೋಧನನನ್ನು ಬೇಗನೆ ಗೆದ್ದು ಕಟ್ಟಿಹಾಕಿದ. ಕರ್ಣನೂ ಪಲಾಯನ ಮಾಡಿದ. ಅವನು ಆಗ ಪಾಂಡವರ ಮೇಲೆ ಸ್ಪರ್ಧೆಯಿಂದ ಬಂದಿದ್ದ. ಅದರಿಂದ ಪರಾಜಿತನಾಗಿದ್ದ.

ದುರ್ಯೋಧನೇಽನುಜಜನ್ಯೈಃ ಸಹಿತೇ ಗೃಹೀತೇ
ಭೀಷ್ಮಾಂಬಿಕೇಯವಿದುರಾಗ್ರಜವಾಕ್ಯನುನ್ನಃ ।
ಭೀಮೋ ವಿಜಿತ್ಯ ನೃಪತೀನ್ ಸಜರಾಸುತಾಂಸ್ತಾನ್
ಹತ್ವಾ ಸುವಜ್ರಮಮುಚದ್ ಧೃತರಾಷ್ಟ್ರಪುತ್ರಾನ್ ॥೨೦೬॥

ದುರ್ಯೋಧನ ತಮ್ಮಂದಿರೊಂದಿಗೆ ಸೆರೆಸಿಕ್ಕಾಗ ಭೀಷ್ಮ ಧೃತರಾಷ್ಟ್ರ ವಿದುರ ಮತ್ತು ಧರ್ಮರಾಜರ ಮಾತುಗಳಿಂದ ಪ್ರೇರಿತನಾಗಿ ಭೀಮ ಜರಾಸಂಧನನ್ನೂ ಬೇರೆ ರಾಜರನ್ನೂ ಗೆದ್ದು ಸುವಜ್ರನನ್ನು ಕೊಂದು ಕೌರವರನ್ನು ಬಂಧಮುಕ್ತರನ್ನಾಗಿ ಮಾಡಿದ.

ಧರ್ಮರಾಜನಿಗೆ ಇಂದ್ರಪ್ರಸ್ಥ

ತೇಽಪಿ ಸ್ಮ ಕರ್ಣಸಹಿತಾ ಮೃತಕಪ್ರತೀಕಾ
ನಾಗಾಹ್ವಯಂ ಪುರಮಥಾಯಯುರಪ್ಯಮೀಷಾಂ ।

ದೃಷ್ಟ್ವಾವಿರೋಧಮವದನ್ನೃಪತಿಶ್ಚ ಧರ್ಮ-
ಪುತ್ರಂ ಪುರಂದರಕೃತಸ್ಥಲಮಾಶು ಯಾಹಿ ॥೨೦೭॥

ಕೌರವರು ಕರ್ಣ ಸಮೇತರಾಗಿ ಸತ್ತವರಂತೆ ಹಸ್ತಿನಾವತಿಗೆ ಹಿಂತಿರುಗಿದರು. ಧೃತರಾಷ್ಟ್ರ ಕೌರವ ಪಾಂಡವರೊಳಗಿನ ವಿರೋಧವನ್ನು ಕಂಡು ಧರ್ಮರಾಜನಿಗೆ ಹೇಳಿದ. 'ನೀನು ಇಂದ್ರಪ್ರಸ್ಥಕ್ಕೆ ಬೇಗನೆ ಹೋಗು.'

'ಪುರಂದರ ಕೃತಸ್ಥಲ' ಎಂದರೆ ಇಂದ್ರ ಮಾಡಿಕೊಟ್ಟ ಸ್ಥಳ. ಇದು 'ಖಾಂಡವಪ್ರಸ್ಥ' ಎಂದು ಪ್ರಸಿದ್ಧವಾಗಿತ್ತು. ಶ್ರೀಕೃಷ್ಣ ಇಂದ್ರನಿಗೆ ಹೇಳಿ ವಿಶ್ವಕರ್ಮನ ಮೂಲಕ ಮಾಡಿಸಿದ ಸ್ಥಳ. ಆದರಿಂದ 'ಇಂದ್ರಪ್ರಸ್ಥ' ಎಂದು ಹೆಸರು. ಹಿಂದೆ ಆಯು ಪುರೂರವ ಯಯಾತಿ ಮುಂತಾದವರು ಆಳಿದ್ದ ಪಟ್ಟಣ ಇದು.

ತತ್ರಾರ್ಧರಾಜ್ಯಮನುಭುಂಕ್ಷ್ವ ಸಹಾನುಜೈಸ್ತ್ವಂ
ಕೋಶಾರ್ಧಮೇವ ಹಿ ಗೃಹಾಣ ಪುರಾ ಹಿ ಶಕ್ರಃ ।
ತತ್ರಾಭಿಷಿಕ್ತ ಉತ ಕಂಜಭವಾದಿದೇವೈ-
ಸ್ತತ್ರಸ್ಥ ಏವ ಸ ಚಕಾರ ಚಿರಂ ಚ ರಾಜ್ಯಂ ॥೨೦೮॥

'ಯುಧಿಷ್ಠಿರ, ನೀನು ಆ ಇಂದ್ರಪ್ರಸ್ಥದಲ್ಲಿ ಸೋದರರೊಂದಿಗೆ ಅರ್ಧರಾಜ್ಯವನ್ನು ಭೋಗಿಸು. ಅರ್ಧಭಾಗ ಕೋಶವನ್ನು ಸ್ವೀಕರಿಸು. ಹಿಂದೆ ಇಂದ್ರ ಬ್ರಹ್ಮಾದಿ ದೇವತೆಗಳಿಂದ ಅಭಿಷಿಕ್ತನಾಗಿ ಅಲ್ಲಿ ಬಹುಕಾಲ ರಾಜ್ಯವಾಳಿದ.'

ತ್ವಂ ವೀರ ಶಕ್ರಸಮ. ಏವ ತತಸ್ತವೈವ
ಯೋಗ್ಯಂ ಪುರಂ ತದತ ಆಶ್ವಭಿಷೇಚಯಾಮಿ ।
ಇತ್ಯುಕ್ತ ಆಹ ಸ ಯುಧಿಷ್ಠಿರ ಓಮಿತಿ ಸ್ಮ
ಚಕ್ರೇಽಭಿಷೇಕಮಪಿ ತಸ್ಯ ಸ ಆಂಬಿಕೇಯಃ ॥೨೦೯॥

'ಯುಧಿಷ್ಠಿರ, ನೀನೂ ವೀರ, ಇಂದ್ರಸಮನೇ ಆಗಿರುತ್ತಿ. ನಿನಗೇ ಆ ಇಂದ್ರಪ್ರಸ್ಥ ಯೋಗ್ಯ. ಅದರಿಂದ ಬೇಗನೆ ನಿನಗೆ ಪಟ್ಟಾಭಿಷೇಕ ಮಾಡುವೆನು.' ಧೃತರಾಷ್ಟ್ರ ಹೀಗೆ ಹೇಳಿದಾಗ ಧರ್ಮರಾಜ ಆಗಲಿ ಎಂದ. ಧೃತರಾಷ್ಟ್ರ ಅವನಿಗೆ ಪಟ್ಟಾಭಿಷೇಕ ಮಾಡಿದ.

ತಸ್ಯಾಭಿಷೇಕಮಕರೋತ್ಪ್ರಥಮಂ ಸ ಕೃಷ್ಣೋ
ವಾಸಿಷ್ಠನಂದನ ಉರುರ್ಭವ ಚಕ್ರವರ್ತೀ ।
ಯಷ್ಟಾಶ್ವಮೇಧನಿಖಿಲಾತ್ಮಕ ರಾಜಸೂಯ-
ಪೂರ್ವೈರ್ಮಖೈಃ ಸತತಮೇವ ಚ ಧರ್ಮಶೀಲಃ ॥೨೧೦॥

ಧರ್ಮರಾಜನಿಗೆ ಮೊದಲು ವೇದವ್ಯಾಸರು ಅಭಿಷೇಕ ಮಾಡಿ ಆಶೀರ್ವದಿಸಿದರು-

'ದೊಡ್ಡ ಚಕ್ರವರ್ತಿಯಾಗು. ಅಶ್ವಮೇಧ ಸರ್ವಸ್ವರೂಪದ ರಾಜಸೂಯ ಮುಂತಾದ ಯಾಗಗಳನ್ನು ಮಾಡು. ಸದಾ ಧರ್ಮಿಷ್ಠನಾಗು' ಎಂದು.

ರಾಜಸೂಯದಲ್ಲಿಯೂ ಅಶ್ವ ಬಲಿಪಶುವಾಗಿದೆ. ರಾಜರುಗಳನ್ನು ನಿಗ್ರಹಮಾಡಿ ಅವರ ಧನದಿಂದ ಯಾಗಮಾಡುವುದರಿಂದ 'ರಾಜಸೂಯ' ಎಂದು ಹೆಸರು. ಆದರಿಂದಲೆ ರಾಜಸೂಯ ಅಶ್ವಮೇಧದ ಎಲ್ಲ ಸ್ವರೂಪಗಳಿಂದ ಯುಕ್ತವಾಗಿದ್ದು ರಾಜಸೂಯಾಶ್ವಮೇಧವೆನಿಸಿದೆ. 'ರಾಜಸೂಯಾಶ್ವಮೇಧೇ' ಎಂದು ಹರಿವಾಯುಸ್ತುತಿಯಲ್ಲಿ ತ್ರಿವಿಕ್ರಮ ಪಂಡಿತಾಚಾರ್ಯರ ಉಕ್ತಿ ಇದೆ ಎಂದು ವಾದಿರಾಜೀಯದಲ್ಲಿ ಹೇಳಿದೆ.[1]

ಅಶ್ವಮೇಧವನ್ನೂ ಸಕಲಯಾಗ ಸ್ವರೂಪಾತ್ಮಕವಾದ ರಾಜಸೂಯವನ್ನೂ ಮಾಡೆಂದು ವ್ಯಾಸರು ಆಶೀರ್ವದಿಸುತ್ತಾರೆ ಎಂದು ಜನಾರ್ದನೀಯ ವರದರಾಜೀಯಗಳು ಹೇಳಿವೆ.[2]

[3]ಈ ಎರಡು ಬಗೆಯ ವಿವರಣೆಗಳನ್ನೂ ತಾಮ್ರಪರ್ಣೀಯ ಒಪ್ಪುತ್ತದೆ.

ಇತ್ಯೇವ ಪಾರ್ಷತಸುತಾಸಹಿತೇಽಭಿಷಿಕ್ತೇ
ಕೃಷ್ಣೋಽಪಿ ವೃಷ್ಣಿವೃಷಭಃ ಸ ತಥಾಭ್ಯಷಿಂಚತ್ ।
ಏವಂ ಚ ಮಾರುತಿಶಿರಸ್ಯಭಿಷೇಕಮೇತೌ
ಸಂಚಕ್ರತುಃ ಸ್ಮ ಯುವರಾಜಪದೇ ಸಭಾರ್ಯಂ ॥೨೧೧॥

ದ್ರೌಪದೀ ಸಮೇತನಾದ ಧರ್ಮರಾಜನಿಗೆ ವ್ಯಾಸರು ಅಭಿಷೇಕ ಮಾಡಿದ ಬಳಿಕ ಶ್ರೀಕೃಷ್ಣ ಅಭಿಷೇಕ ಮಾಡಿದ. ಇದೇರೀತಿ ಯುವರಾಜ ಪದವಿಯಲ್ಲಿ ದ್ರೌಪದೀ ಸಮೇತನಾದ ಭೀಮಸೇನನ ತಲೆಯ ಮೇಲೆ ವ್ಯಾಸಕೃಷ್ಣರು ಅಭಿಷೇಕ ಮಾಡಿದರು.

---

1. ಅಶ್ವಮೇಧಸ್ಯ ನಿಖಿಲಃ ಆತ್ಮಾ ಸ್ವರೂಪಂ ಸ್ವಭಾವೋ ವಾ। ರಾಜಸೂಯೋಽಪ್ಯಶ್ವಹೋಮ ರೂಪತ್ವಾದಶ್ವಮೇಧ ಏವ। ರಾಜ್ಞಾಂ ವಿಜಯರೂಪ ನಿಷೂದನಾನಂತರಂ ಕ್ರಿಯಮಾಣತ್ವಾದ್ ರಾಜ್ಞಾಂ ವಿಜಯೇನಾರ್ಜಿತಧನೈಃ ಪ್ರಸೂಯಮಾನತ್ವಾದ್ವಾ ರಾಜಸೂಯ ಇತ್ಯುಚ್ಯತೇ। ಅತ ಏವ ರಾಜಸೂಯಾಶ್ವಮೇಧ ಇತಿ ಪ್ರಾಚಾಂ ಪ್ರಯೋಗಃ। -ವಾದಿರಾಜೀಯ

2. ಅಶ್ವಮೇಧಶ್ಚ ನಿಖಿಲಾತ್ಮಕ ರಾಜಸೂಯಶ್ಚ ಸರ್ವಯಜ್ಞಾತ್ಮಕೋ ರಾಜಸೂಯಸ್ತತ್ಪೂರ್ವೈರ್ಮಖೈಃ ಯಷ್ಟಾ। -ಜನಾರ್ದನೀಯ

ಅಶ್ವಮೇಧೋ ನಿಖಿಲಾತ್ಮಕಃ ಸರ್ವಯಜ್ಞಾತ್ಮಕೋ ರಾಜಸೂಯಶ್ಚ ಪೂರ್ವೋ ಯೇಷಾಂ ತೈರ್ಮಖೈಃ। -ವರದರಾಜೀಯ

3. ಅಶ್ವಮೇಧಾನಾಂ ಯನ್ನಿಖಿಲಂ ಸಾಕಲ್ಯಂ ತದಾತ್ಮಕ ರಾಜಸೂಯ ಪೂರ್ವೈರಿತ್ಯರ್ಥಃ। ಅಶ್ವಮೇಧಶ್ಚ ನಿಖಿಲ ಯಜ್ಞಾತ್ಮಕೋ ರಾಜಸೂಯಶ್ಚ ತತ್ಪೂರ್ವಕೈರ್ಮಖೈರಿತಿ ವಾ। -ತಾಮ್ರಪರ್ಣೀಯ

ಭೀಮೇ ಚ ಪಾರ್ಷತಸುತಾಸಹಿತೇಽಭಿಷಿಕ್ತೇ
ತಾಭ್ಯಾಮನಂತಸುಖಶಕ್ತಿ ಚಿದಾತ್ಮಕಾಭ್ಯಾಂ।
ಅನ್ಯೈಶ್ಚ ವಿಪ್ರವೃಷಭೈಃ ಸುಕೃತೇಽಭಿಷೇಕೇ
ಧರ್ಮಾತ್ಮಜಾನು ಮುಮುದುರ್ನಿಖಿಲಾಶ್ಚ ಸಂತಃ ॥೨೧೨॥

ಧರ್ಮರಾಜನ ಅನಂತರ ದ್ರೌಪದೀ ಸಮೇತನಾದ ಭೀಮನನ್ನು ಅನಂತಸುಖ ಶಕ್ತಿ ಜ್ಞಾನ ಸ್ವರೂಪರಾದ ವ್ಯಾಸಕೃಷ್ಣರು ಅಭಿಷೇಕ ಮಾಡಿದಾಗ, ಬಳಿಕ ಬೇರೆ ವಿಪ್ರೋತ್ತಮರೂ ಚೆನ್ನಾಗಿ ಅಭಿಷೇಕ ಮಾಡಿದಾಗ ಎಲ್ಲ ಸಜ್ಜನರೂ ಆನಂದಪಟ್ಟರು.

ಮಹಾಭಾರತದಲ್ಲಿ ಕೃಪದ್ರೋಣ ಭೀಷ್ಮ ಧೌಮ್ಯ ವ್ಯಾಸಕೃಷ್ಣರೂ ಬಾಹ್ಲಿಕ ಸೋಮದತ್ತರೂ ಅಭಿಷೇಕ ಮಾಡಿದರು. ಈ ಎಲ್ಲ ಕಾರ್ಯಕ್ರಮವನ್ನು ನಡೆಸಿಕೊಟ್ಟವರು ವೇದವ್ಯಾಸರು.

ತಸ್ಮಿನ್ ಮಹೋತ್ಸವವರೇ ದಿನಸಪ್ತಕಾನು-
ವೃತ್ತೇ ವಸಿಷ್ಠವೃಷಭೇಣ ಚ ವೃಷ್ಣಿಪೇನ।
ಕೃಷ್ಣೇನ ತೇ ಯಯುರಮಾ ಪೃಥಯಾ ತಯಾ ಚ
ಪಾಂಚಾಲರಾಜಸುತಯಾ ಸ್ಥಲಮಿಂದ್ರವಾಸಂ ॥೨೧೩॥

ಆ ಮಹಾಮಹೋತ್ಸವ ಏಳು ದಿನಗಳವರೆಗೆ ನಡೆದ ಬಳಿಕ ವ್ಯಾಸಕೃಷ್ಣರೊಂದಿಗೆ ಮತ್ತು ಕುಂತಿ ದ್ರೌಪದಿಯರೊಂದಿಗೆ ಪಾಂಡವರು ಇಂದ್ರಪ್ರಸ್ಥಕ್ಕೆ ಹೋದರು.

ಕೋಶಸ್ಯ ಚಾರ್ಧಸಹಿತಾಸ್ತು ಯದೈವ ಪಾರ್ಥಾ
ಗಚ್ಛಂತಿ ತಾನನುಯಯುರ್ನಿಖಿಲಾಶ್ಚ ಪೌರಾಃ।
ಊಚುಶ್ಚ ಹಾ ಬತ ಸುಯೋಧನ ಏಷ ಪಾಪೋ
ದೂರೇ ಚಕಾರ ನನು ಪಾಂಡುಸುತಾನ್ ಗುಣಾಢ್ಯಾನ್ ॥೨೧೪॥

ಕೋಶದ ಅರ್ಧಭಾಗವನ್ನು ತೆಗೆದುಕೊಂಡು ಪಾಂಡವರು ಇಂದ್ರಪ್ರಸ್ಥಕ್ಕೆ ಹೊರಟರು. ಎಲ್ಲ ನಾಗರಿಕರೂ ಅವರನ್ನು ಹಿಂಬಾಲಿಸಿದರು. 'ಅಯ್ಯೋ ಈ ಪಾಪಿ ದುರ್ಯೋಧನ ಗುಣಾಢ್ಯರಾದ ಪಾಂಡವರನ್ನು ನಮ್ಮಿಂದ ದೂರಮಾಡಿದ' ಎಂದರು.

ಭೀಮಪ್ರತಾಪಮವಲಂಬ್ಯ ಕಲಿಂಗಬಂಧಾತ್
ಮುಕ್ತಃ ಸುತಾಮಪಿ ಹಿ ತಸ್ಯ ಪುರಂ ನಿನಾಯ।
ದ್ವೇಷ್ಟ್ಯೇವಮಪ್ಯತಿಬಲಾನ್ ಹಿ ಸದೈವ ಪಾರ್ಥಾನ್
ಯಾಮೋ ವಯಂ ಗುಣಭಿರದ್ಯ ಸಹೈವ ಪಾರ್ಥೈಃ ॥೨೧೫॥

'ಈ ದುರ್ಯೋಧನ ಭೀಮನ ಬಲವನ್ನು ಆಶ್ರಯಿಸಿ ಕಲಿಂಗರಾಜನ ಬಂಧನದಿಂದ ಪಾರಾಗಿ ಅವನ ಕನ್ಯೆಯನ್ನು ಪಟ್ಟಣಕ್ಕೆ ತಂದ. ಹೀಗಿದ್ದರೂ ಅತ್ಯಂತ ಬಲಿಷ್ಠರಾದ ಪಾಂಡವರನ್ನು

ಸದಾ ದ್ವೇಷಿಸುತ್ತಾನೆ. ಅದರಿಂದ ನಾವು ಈಗ ಗುಣವಂತರಾದ ಪಾಂಡವರೊಂದಿಗೆ ಹೊರಟು ಹೋಗುವೆವು' ಎಂದರು.

ಆಜ್ಞಾಪಯತ್ಯಪಿ ಸ ಭೇರಿರವೇಣ ಪಾರ್ಥಾನ್
ನೈವಾನುಗಚ್ಛತ ಯದಿ ವ್ರಜಥಾನು ವೋಽದ್ಯ ।
ವಿತ್ತಂ ಹರಿಷ್ಯ ಇಹ ಸರ್ವಮಪೀತಿ ತಚ್ಚ
ಪಾಪಃ ಕರೋತು ನ ವಯಂ ವಿಜಹಾಮ ಪಾರ್ಥಾನ್ ॥೨೧೬॥

'ಪಾಂಡವರನ್ನು ಹಿಂಬಾಲಿಸಬೇಡಿರಿ. ಹಿಂಬಾಲಿಸಿ ಹೋದಿರಾದರೆ ನಿಮ್ಮ ಎಲ್ಲ ಸಂಪತ್ತನ್ನೂ ಈಗಲೆ ರಾಜ್ಯದ ಬೊಕ್ಕಸಕ್ಕೆ ಸೇರಿಸುವೆವು' ಎಂದು ಭೇರಿಶಬ್ದದೊಂದಿಗೆ ಆಜ್ಞೆ ಮಾಡುತ್ತಿದ್ದಾನೆ. ಪಾಪಿ, ಅದನ್ನೂ ಮಾಡಲಿ. ನಾವು ಪಾಂಡವರನ್ನು ಬಿಟ್ಟಿರಲಾರೆವು, ಎಂದರು.

ಸದ್ಭಿರ್ಹಿ ಸಂಗತಿರಿಹೈವ ಸುಖೈಕ ಹೇತು-
ರ್ಮೋಕ್ಷೈಕಹೇತುರುತ ತದ್ವಿಪರೀತಮನ್ಯತ್ ।
ತಸ್ಮಾದ್ವ್ರಜೇಮ ಸಹ ಪಾಂಡುಸುತೈರ್ಹಿ ಶಕ್ರ-
ಪ್ರಸ್ಥಂ ತ್ವಿತಿ ಸ್ಮ ಧೃತಚೇತಸ ಆಹ ಧರ್ಮಃ ॥೨೧೭॥

'ಸಜ್ಜನರ ಸಹವಾಸ ಇಹದಲ್ಲಿ ಸುಖಕಾರಣ. ಮೋಕ್ಷಕ್ಕೂ ಮುಖ್ಯ ಕಾರಣ. ದುರ್ಜನರೊಡನಾಟ ಅದಕ್ಕೆ ವಿಪರೀತವಾಗಿ ಇಹಪರಗಳೆರಡರಲ್ಲಿಯೂ ದುಃಖಕ್ಕೆ ಕಾರಣ. ಅದರಿಂದ ನಾವು ಪಾಂಡವರೊಂದಿಗೇ ಇಂದ್ರಪ್ರಸ್ಥಕ್ಕೆ ಹೋಗೋಣ' ಎಂದು ಸಜ್ಜನರು ಮನಸ್ಸಿನಲ್ಲಿ ನಿರ್ಧಾರ ಮಾಡಿದ್ದನ್ನು ತಿಳಿದು ಧರ್ಮರಾಜ ನುಡಿದ.

ಪ್ರೀತಿರ್ಯದಿ ಸ್ಮ ಭವತಾಂ ಮಯಿ ಸಾನುಜೇಽಸ್ತಿ
ತಿಷ್ಠಧ್ವಮತ್ರ ಪಿತುರೇವ ಹಿ ಶಾಸನೇ ಮೇ ।
ಕೀರ್ತಿರ್ಹಿ ವೋಽನುಗಮನಾತ್ ಪಿತುರತ್ಯಯೇನ
ನಶ್ಯೇನ್ನ ಇತ್ಯನುಸರಧ್ವಮಿಹಾಂಬಿಕೇಯಂ ॥೨೧೮॥

'ನಿಮಗೆ ನನ್ನಲ್ಲಿ ನನ್ನ ತಮ್ಮಂದಿರಲ್ಲಿ ಪ್ರೀತಿ ಇರುವುದಾದರೆ ಇಲ್ಲಿಯೇ ಇರಿ. ಏಕೆಂದರೆ ನನಗೆ ಪಿತನಾದ ಧೃತರಾಷ್ಟ್ರನ ಶಾಸನದಂತೆ ನಡೆದುಕೊಂಡರೆ ಕೀರ್ತಿ. ನೀವು ನನ್ನನ್ನು ಹಿಂಬಾಲಿಸಿ ಬಂದರೆ ಪಿತೃಶಾಸನದ ಉಲ್ಲಂಘನೆಯಿಂದ ಕೀರ್ತಿ ನಶಿಸುವುದು. ಅದರಿಂದ ನೀವು ಪಿತನಿಗೆ ಅನುಕೂಲವಾಗಿ ಇಲ್ಲಿಯೆ ಇರಿ' ಎಂದ ಧರ್ಮರಾಜ.

ಇತ್ಯೇವ ತೈಃ ಪುರಜನಾ ನಿಖಿಲೈರ್ನಿಷಿದ್ಧಾಃ
ಕೃಚ್ಛ್ರೇಣ ತಸ್ಥುರಪಿ ತಾನ್ ಮನಸಾನ್ವಗಚ್ಛನ್ ।
ಪ್ರಾಪ್ಯಾಥ ಶಕ್ರಪುರಮಸ್ಮರತಾಂ ಚ ಕೃಷ್ಣಾ
ದೇವೇಶವರ್ಧಕಿಮಥಾಗಮದತ್ರ ಸೋಽಪಿ ॥೨೧೯॥

ಹೀಗೆ ಪಾಂಡವರು ಎಲ್ಲರೂ ನಾಗರಿಕರನ್ನು ತಡೆದುದರಿಂದ ಅವರು ಕಷ್ಟದಿಂದ, ದೇಹದಿಂದ ಹಸ್ತಿನಾವತಿಯಲ್ಲಿದ್ದರೂ ಮನಸ್ಸಿನಿಂದ ಪಾಂಡವರನ್ನೆ ಹಿಂಬಾಲಿಸಿ ಹೋದರು. ವ್ಯಾಸಕೃಷ್ಣರು ಇಂದ್ರಪ್ರಸ್ಥಕ್ಕೆ ಬಂದು ವಿಶ್ವಕರ್ಮನನ್ನು ನೆನೆದರು. ಒಡನೆ ಅವನು ಅಲ್ಲಿಗೆ ಬಂದ.

ವಾಸಿಷ್ಠಪೇನ ಯದುಪೇನ ಚ ಪಾಂಡವಾನಾಂ
ರತ್ನೋತ್ಕರಂ ಕುರು ಪುರಂ ಪುರುಹೂತಪುರ್ಯಾಃ।
ಸಾದೃಶ್ಯತಸ್ತ್ವಿತಿ ನಿಯುಕ್ತ ಉಭೌ ಪ್ರಣಮ್ಯ
ಸರ್ವೇಶ್ವರೌ ಸ ಕೃತವಾಂಶ್ಚ ಪುರಂ ತಥೈವ ॥೨೨೦॥

ಇಂದ್ರನ ನಗರಕ್ಕೆ ಸಮವಾಗಿ ರತ್ನಮಯವಾದ ಒಂದು ಪಟ್ಟಣವನ್ನು ಪಾಂಡವರಿಗೆ ನಿರ್ಮಿಸಿಕೊಡು ಎಂದು ವ್ಯಾಸಕೃಷ್ಣರು ಆಜ್ಞೆ ಮಾಡಿದಾಗ ವಿಶ್ವಕರ್ಮ ಸರ್ವೇಶರಾದ ಅವರಿಬ್ಬರನ್ನೂ ನಮಿಸಿ ಹಾಗೇ ಪಟ್ಟಣವನ್ನು ನಿರ್ಮಿಸಿಕೊಟ್ಟ.

ದೇಶಂ ಚ ನಾತಿಜನಸಂವೃತಮನ್ಯದೇಶ-
ಸಂಸ್ಪೃರ್ಜನೈರಭಿಪುಪೂರಿರ ಆಶು ಪಾರ್ಥಾಃ।
ತೇಷಾಂ ಗುಣೈರ್ಹರಿಪದಾನತಿಹೇತುತಶ್ಚ
ರಾಷ್ಟ್ರಾಂತರಾ ಇಹ ಶುಭಾ ವಸತೀಃ ಸ್ಮ ಚಕ್ರುಃ ॥೨೨೧॥

ಜನರಿಂದ ಅತಿನಿಬಿಡವಾಗದಂತೆ ಇಂದ್ರಪ್ರಸ್ಥ ಪ್ರದೇಶವನ್ನು ಪಾಂಡವರು ಬೇಗನೆ ಬೇರೆ ದೇಶದಲ್ಲಿದ್ದ ಜನರಿಂದ ತುಂಬಿಸಿದರು. ಅವರ ಸದ್ಗುಣಗಳಿಂದಲೂ ಹರಿಪಾದ ನಮನದ ನಿಮಿತ್ತದಿಂದಲೂ ಬೇರೆ ರಾಜ್ಯಗಳ ಜನರು ಬಂದು ಇಲ್ಲಿ ಮನೆ ಮಾಡಿದರು.

ಬೇರೆ ರಾಜ್ಯದ ಜನರಿಗಿದ್ದ ಎರಡು ಮುಖ್ಯ ಆಕರ್ಷಣೆಗಳು ಪಾಂಡವರ ಸದ್ಗುಣಗಳು ಮತ್ತು ಅನಾಯಾಸವಾಗಿ ಅಲ್ಲಿ ವ್ಯಾಸಕೃಷ್ಣರ ಪಾದವಂದನೆ ಮಾಡಲು ಜನರಿಗೆ ಇದ್ದ ಅವಕಾಶ.

ಪ್ರಸ್ಥಾಪ್ಯ ದೂರಮನುಜಸ್ಯ ಸುತಾನ್ ಸ ರಾಜಾ
ಚಕ್ರೇಕಭಿಷೇಕಮಪಿ ತತ್ರ ಸುಯೋಧನಸ್ಯ।
ದುಶ್ಶಾಸನಂ ಚ ಯುವರಾಜಮಸೌ ವಿಧಾಯ
ಮೇನೇ ಕೃತಾರ್ಥಮಿವ ಚ ಸ್ವಮಶಾಂತಕಾಮಃ ॥೨೨೨॥

ತಮ್ಮನ ಮಕ್ಕಳನ್ನು ದೂರಕಳಿಸಿ ರಾಜಾ ಧೃತರಾಷ್ಟ್ರ ಹಸ್ತಿನಾವತಿಯಲ್ಲಿ ದುರ್ಯೋಧನನಿಗೆ ಅಭಿಷೇಕವನ್ನು ನಡೆಸಿದ. ದುಃಶಾಸನನನ್ನು ಯುವರಾಜನನ್ನಾಗಿ ಮಾಡಿ ತನ್ನನ್ನು ತಾನು ಸ್ವಲ್ಪಮಟ್ಟಿಗೆ ಧನ್ಯನೆಂದು ತಿಳಿದ. ಏಕೆಂದರೆ ಅವನ ಭೋಗಲಾಲಸೆ ಇನ್ನೂ ಶಾಂತವಾಗಿರಲಿಲ್ಲ.

ಭೋಗಲಾಲಸೆ ಶಾಂತವಾಗಿದ್ದರೆ ಮಗನಿಗೆ ಸಿಂಹಾಸನವಿತ್ತ ಬಳಿಕ ಪೂರ್ತಿ ಕೃತಕೃತ್ಯತಾ ಬುದ್ಧಿಯಿಂದ ವಾನಪ್ರಸ್ಥಾಶ್ರಮ ಕೈಕೊಂಡು ಕಾಡಿಗೇ ಹೋಗಬೇಕಾಗಿತ್ತು. ಆದರೆ ಆತನಲ್ಲಿ ಇನ್ನೂ ಭೋಗೇಚ್ಛೆ ಇದ್ದಿತು. ಅದರಿಂದ ಅರಮನೆಯಲ್ಲಿಯೇ ಉಳಿದ ಎಂದು ಜನಾರ್ದನೀಯ ಹೇಳಿದೆ.[1]

ದುರ್ಯೋಧನ ನಿಶ್ಚಿತವಾಗಿ ಕಾಲುಕೆರೆದು ಜಗಳಾಡಿ ಭೀಮನಿಂದ ಹತನಾಗುತ್ತಾನೆ ಎಂದು ಊಹಿಸಿದ್ದರಿಂದ ಧೃತರಾಷ್ಟ್ರ ಅಶಾಂತಕಾಮನಾಗಿ ಸ್ವಲ್ಪಮಟ್ಟಿಗೆ ಮಾತ್ರ ಧನ್ಯತೆ ಪಡೆದನೆಂದು ತಾಮ್ರಪರ್ಣೀಯ ಹೇಳಿದೆ.[2]

ಪಾರ್ಥಾಶ್ಚ ತೇ ಮುಮುದುರತ್ರ ವಸಿಷ್ಠವೃಷ್ಣಿ-
ವರ್ಯೋದಿತಾನಖಿಲತತ್ತ್ವವಿನಿರ್ಣಯಾಂಸ್ತು ।
ಶೃಣ್ವಂತ ಏವ ಹಿ ಸದಾ ಪೃಥಿವೀಂ ಚ ಧರ್ಮಾದ್
ಭುಂಜಂತ ಆಶ್ರಿತರಮಾಪತಿಪಾದಯುಗ್ಮಾಃ ॥೨೨೩॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಪಾಂಡವರಾಜ್ಯಲಾಭೋ ನಾಮ ಏಕೋನವಿಂಶೋಽಧ್ಯಾಯಃ ॥

ಪಾಂಡವರು ರಮಾಪತಿಯ ಪಾದದ್ವಂದ್ವವನ್ನು ಆಶ್ರಯಿಸಿದವರು. ವ್ಯಾಸಕೃಷ್ಣರು ಉಪದೇಶಿಸಿದ ಸಕಲ ತತ್ವನಿರ್ಣಯಗಳನ್ನು ಸದಾ ಕೇಳುತ್ತಲೇ ಧರ್ಮದಿಂದ ಭೂಮಿಯನ್ನು ಭೋಗಿಸುತ್ತ ಆನಂದಿಸಿದರು.

ಇಲ್ಲಿಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ರಚಿಸಿದ
ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಪಾಂಡವ ರಾಜ್ಯಲಾಭವೆಂಬ
ಹತ್ತೊಂಬತ್ತನೆ ಅಧ್ಯಾಯ ಮುಗಿಯಿತು.

---

1. ಅನ್ಯಥಾ ವನಂ ಗಚ್ಛೇದಿತಿ ಭಾವಃ। -ಜನಾರ್ದನೀಯ
2. ಅಶಾಂತಕಾಮಃ ಭೀಮಾತ್ ಸ್ವಪುತ್ರ ನಿಧನಂ ಶಂಕಮಾನ ಏವ ತಿಷ್ಠತೀತಿ ಭಾವಃ। -ತಾಮ್ರಪರ್ಣೀಯ

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೦

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಯಃ ಪಾರ್ಥಾನ್ ಪರಿಪಾಲಯನ್ ಹರಿಪುರೇ ಸ್ತ್ರೀ ಪುತ್ರ ಸಂಪದ್ಯುತಾನ್
ಸಂಹರ್ತಾ ಶತಧನ್ವನೋಽಷ್ಟ ಮಹಿಷೀ ಭರ್ತಾ ಸುರರ್ಷಿಸ್ತುತಃ ।
ಹತ್ವಾ ಭೌಮಮಪಾಹರತ್ ಸುರತರುಂ ಬಹ್ವೀರುವಾಹಾಂಗನಾಃ
ಪ್ರಾಯಚ್ಛದ್ಧರಿಸೂನವೇ ಸ್ವಸಹಜಾಂ ಪಾಯಾತ್ ಸ ನಃ ಕೇಶವಃ ॥೨೦॥

ಹಸ್ತಿನಾಪುರದಲ್ಲಿ ಪತ್ನೀ ಪುತ್ರ ಸಂಪದ್ಯುಕ್ತರಾದ ಪಾಂಡವರನ್ನು ಪರಿಪಾಲಿಸಿದ. ಶತಧನ್ವನನ್ನು ಕೊಂದ. ಅಷ್ಟ ಮಹಿಷಿಯರನ್ನು ಆಳಿದ. ನಾರದರಿಂದ ಸ್ತುತನಾದ. ನರಕಾಸುರನನ್ನು ಕೊಂದು ಪಾರಿಜಾತವನ್ನು ಅಪಹರಿಸಿದ. ಬಹುಸ್ತ್ರೀಯರನ್ನು ಮದುವೆಯಾದ. ಅರ್ಜುನನಿಗೆ ಸುಭದ್ರೆಯನ್ನು ನೀಡಿದ. ಇಂಥ ಶ್ರೀಕೃಷ್ಣ ನಮ್ಮನ್ನು ಕಾಪಾಡಲಿ.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೦

ಖಾಂಡವದಹನ

॥ ಶ್ರೀಗುರುಭ್ಯೋ ನಮಃ ಹರಿಃ ಓಂ ॥

ಇಂದ್ರಪ್ರಸ್ಥದಲ್ಲಿ ಪಾಂಡವರು

ಓಂ ಯಜ್ಞೋರುದಾನನರದೇವವಂದ್ಯತಾ-
ಪ್ರಶ್ನರ್ಷಿಪೂಜಾಸು ಯುಧಿಷ್ಠಿರೋಽಭೂತ್ ।
ಧರ್ಮಾನುಶಾಸ್ತಿಹರಿತತ್ತ್ವಶಂಸನ-
ಸ್ವರಾಷ್ಟ್ರರಕ್ಷಾದಿಷು ಭೀಮ ಆಸೀತ್ ॥೧॥

ಯಜ್ಞಗಳನ್ನೂ ಮಹಾದಾನಗಳನ್ನೂ ನಡೆಸುವುದು, ರಾಜರುಗಳಿಂದ ಮನ್ನಣೆ ಸ್ವೀಕರಿಸುವುದು, ವಿದ್ವತ್ಸಭೆಗಳಲ್ಲಿ ಋಷಿಗಳ ಮುಂದೆ ತತ್ವವಿಷಯಗಳಲ್ಲಿ ವಿಚಾರ ನಡೆಸುವುದು, ಋಷಿ ಮುನಿಗಳ ಸತ್ಕಾರ ಇವುಗಳನ್ನು ಯುಧಿಷ್ಠಿರ ವಹಿಸಿಕೊಂಡ. ವರ್ಣಾಶ್ರಮಧರ್ಮ ಶಿಕ್ಷಣ, ಹರಿತತ್ತ್ವೋಪದೇಶ, ಸ್ವರಾಷ್ಟ್ರ ರಕ್ಷಣೆ ಮುಂತಾದವುಗಳನ್ನು ಭೀಮ ವಹಿಸಿಕೊಂಡ.

'ಮುಂತಾದವುಗಳನ್ನು' ಎಂಬುದರಿಂದ ವಿಷ್ಣುನಿಂದಕರನ್ನು ದಂಡಿಸುವುದು ಮುಖ್ಯವಾಗಿ ವಿವಕ್ಷಿತವಾಗಿದೆ. -ವರದರಾಜೀಯ

ಸ್ತ್ರೀಧರ್ಮಸಂಶಾಸನಭೃತ್ಯಕೋಶ-
ರಕ್ಷಾವ್ಯಯಾದೌ ಗುಣದೋಷಚಿಂತನೇ ।
ಅಂತಃಪುರಸ್ಥಸ್ಯ ಜನಸ್ಯ ಕೃಷ್ಣಾ
ಹ್ಯಾಸೀದ್ಧರೇರ್ಧರ್ಮನಿದರ್ಶಿನೀ ಚ ॥೨॥

ಸ್ತ್ರೀಧರ್ಮ ಶಿಕ್ಷಣ, ಭೃತ್ಯರನ್ನು ನೋಡಿಕೊಳ್ಳುವುದು, ಕೋಶದ ರಕ್ಷಣೆ, ವ್ಯಯ ಮುಂತಾದವುಗಳನ್ನೂ ಅಂತಃಪುರದ ಸಿಬ್ಬಂದಿಗಳ ಗುಣದೋಷವಿಮರ್ಶೆಯನ್ನೂ ದ್ರೌಪದಿ ವಹಿಸಿಕೊಂಡಳು. ವಿಷ್ಣುಧರ್ಮಗಳನ್ನು ಅಂತಃಪುರದ ಜನರಿಗೆ ಉಪದೇಶಿಸಿದಳು.

ಬೀಭತ್ಸುರಾಸೀತ್ಪರರಾಷ್ಟ್ರಮರ್ದನೇ
ತೇನಾನಿಯಮ್ಯಾಂಸ್ತು ಜರಾಸುತಾದೀನ್ ।
ಸಕೀಚಕಾದೀಂಶ್ಚ ಮಮರ್ದ ಭೀಮ-
ಸ್ತಸ್ಯೈವ ತೇ ಬಲತೋ ನಿತ್ಯಭೀತಾಃ ॥೩॥

ಪರರಾಷ್ಟ್ರಗಳನ್ನು ಅಂಕೆಯಲ್ಲಿಟ್ಟುಕೊಳ್ಳುವುದು ಅರ್ಜುನನ ಪಾಲಿನ ಕರ್ತವ್ಯವಾಗಿತ್ತು. ಅವನ ನಿಯಂತ್ರಣಕ್ಕೆ ಬಾರದ ಜರಾಸಂಧಾದಿಗಳನ್ನೂ ಕೀಚಕ ಮುಂತಾದವರನ್ನೂ ಭೀಮಸೇನನೆ ನೋಡಿಕೊಳ್ಳುತ್ತಿದ್ದ. ಅವನ ಬಲಕ್ಕೆ ಮಾತ್ರ ಅವರು ಸದಾ ಅಂಜುತ್ತಿದ್ದರು.

ರಾಷ್ಟ್ರೇಷು ಭೀಮೇನ ವಿಮರ್ದಿತೇಷು
ಜಿತಾಶ್ಚ ಯುದ್ಧೇಷು ನಿರುದ್ಯಮಾಸ್ತೇ।
ಬಭೂವುರಾಸೀದ್ಧರಿಧರ್ಮನಿಷ್ಠಃ
ಪ್ರಾಯೇಣ ಲೋಕಶ್ಚ ತದೀಯಶಾಸನಾತ್ ॥೪॥

ಪರರಾಷ್ಟ್ರಗಳನ್ನು ಭೀಮ ಅಂಕೆಯಲ್ಲಿಟ್ಟುಕೊಳ್ಳಲು ಭೀಮ ತೊಡಗಿದಂದಿನಿಂದ ಯುದ್ಧಗಳಲ್ಲಿ ಸೋತ ಜರಾಸಂಧಾದಿ ರಾಜರಿಗೆ ಉದ್ಯೋಗವಿಲ್ಲದಾಯಿತು. ಏಕೆಂದರೆ ಭೀಮನ ಶಾಸನದಿಂದ ಲೋಕ ಹೆಚ್ಚಾಗಿ ವೈಷ್ಣವ ಧರ್ಮದಲ್ಲಿಯೆ ನಿಷ್ಠವಾಯಿತು.

ಭೀಮ ಪರರಾಷ್ಟ್ರಗಳನ್ನು ಅಂಕೆಯಲ್ಲಿಟ್ಟುಕೊಳ್ಳುವುದಕ್ಕೆ ಮೊದಲು ಜರಾಸಂಧಾದಿಗಳೆ ಅಲ್ಲಿ ಪ್ರಭಾವಶಾಲಿಗಳಾಗಿದ್ದು ಶೈವಪಂಥ ಪ್ರಸಾರ ಮಾಡುತ್ತಿದ್ದರು. ಭೀಮನ ವಶಕ್ಕೆ ಬಂದ ಬಳಿಕ ಭೀಮನೆ ಎಲ್ಲೆಡೆ ವೈಷ್ಣವಧರ್ಮವನ್ನು ಹಬ್ಬಿಸಿದ. ರಾಜರಿಗೆ ಈಗ ಉದ್ಯೋಗವಿಲ್ಲದಾಯಿತು.

ಆಜೀವಿನಾಂ ವೇತನದಸ್ತದಾಸೀತ್
ಮಾದ್ರೀಸುತಃ ಪ್ರಥಮೋಽಥ ದ್ವಿತೀಯಃ।
ಸಂಧಾನಭೇದಾದಿಷು ಧರ್ಮರಾಜ-
ಪಶ್ಚಾಚ್ಚ ಖಡ್ಗೀ ಸ ಬಭೂವ ರಕ್ಷನ್ ॥೫॥

ಸೈನಿಕರಿಗೆ ಮತ್ತು ಇತರ ನೌಕರರಿಗೆ ವೇತನ ನೀಡುವವನು ನಕುಲ. ಸಂಧಿ ಭೇದ ದಂಡ ಮೊದಲಾದ ಉಪಾಯವನ್ನು ನೋಡಿಕೊಳ್ಳುತ್ತ ಧರ್ಮರಾಜನ ಹಿಂದೆ ಖಡ್ಗಧಾರಿಯಾಗಿ ನಿಂತು ರಕ್ಷಿಸುತ್ತಿದ್ದವನು ಸಹದೇವ.

ಧೃಷ್ಟದ್ಯುಮ್ನಸ್ತತ್ರ ಸೇನಾಪ್ರಣೇತಾ
ಶಕ್ರಪ್ರಸ್ಥೇ ನಿತ್ಯಮಾಸ್ತೇಽತಿಹಾರ್ದಾತ್।
ವಿಶೇಷತೋ ಭೀಮಸಖಾ ಸ ಆಸೀದ್
ರಾಷ್ಟ್ರಂ ಚೈಷಾಂ ಸರ್ವಕಾಮ್ಯೈಃ ಸುಪೂರ್ಣಂ ॥೬॥

ಧೃಷ್ಟದ್ಯುಮ್ನ ಸದಾ ಅತ್ಯಂತ ಸ್ನೇಹದಿಂದ ಇಂದ್ರಪ್ರಸ್ಥದಲ್ಲಿಯೆ ಇದ್ದು ಸೇನಾಧಿಪತಿಯಾಗಿದ್ದ. ವಿಶೇಷವಾಗಿ ಭೀಮನಿಗೆ ಸ್ನೇಹಿತನಾಗಿದ್ದ. ಇವರ ಆಡಳಿತದಲ್ಲಿ ರಾಷ್ಟ್ರ ಎಲ್ಲ ಅಗತ್ಯವಸ್ತುಗಳಿಂದ ಚೆನ್ನಾಗಿ ತುಂಬಿಕೊಂಡಿತ್ತು.

ಅತ್ಯಂತ ಸ್ನೇಹವೆಂದರೆ ತಂಗಿಯಾದ ದ್ರೌಪದಿಯ ಮೇಲಿನ ವಾತ್ಸಲ್ಯ

ನಾವೈಷ್ಣವೋ ನ ದರಿದ್ರೋ ಬಭೂವ
ನ ಧರ್ಮಹಾನಿಶ್ಚ ಬಭೂವ ಕಸ್ಯಚಿತ್ ।
ತೇಷಾಂ ರಾಷ್ಟ್ರೇ ಶಾಸತಿ ಭೀಮಸೇನೇ
ನ ವ್ಯಾಧಿತೋ ನಾಪಿ ವಿಪರ್ಯಯಾನ್ಮೃತಿಃ ॥೭॥

ಪಾಂಡವರಾಜ್ಯದಲ್ಲಿ ಭೀಮನ ಆಳ್ವಿಕೆಯಲ್ಲಿ ವಿಷ್ಣುವಿರೋಧಿಗಳಿರಲಿಲ್ಲ. ದರಿದ್ರರಿರಲಿಲ್ಲ. ಯಾರಿಗೂ ಧರ್ಮಕ್ಕೆ ಹಾನಿಯುಂಟಾಗುತ್ತಿದ್ದಿಲ್ಲ. ಯಾರೂ ರೋಗ ಪೀಡಿತರಾಗುತ್ತಿರಲಿಲ್ಲ. ವ್ಯತ್ಯಾಸದಿಂದ ಮರಣ ಯಾರಿಗೂ ಉಂಟಾಗುತ್ತಿರಲಿಲ್ಲ.

ವೈರಾಗ್ಯ ನಿಮಿತ್ತವಾಗಿ ಕೆಲವರು ಕುಚೇಲನಂತೆ ದಾರಿದ್ರ್ಯವನ್ನು ಅಪ್ಪಿಕೊಂಡಿದ್ದಿರಬಹುದು, ಹೊರತು ದಾರಿದ್ರ್ಯದಿಂದ ಯಾರೂ ಪೀಡಿತರಾಗುತ್ತಿರಲಿಲ್ಲ. ಯಾರಿಗೂ ತಮ್ಮ ತಮ್ಮ ವರ್ಣಾಶ್ರಮ ಧರ್ಮಾಚರಣೆಗೆ ಹಾನಿ ಬರುತ್ತಿರಲಿಲ್ಲ.

ತಂದೆ ಬದುಕಿದ್ದಾಗ ಮಗ ಸಾಯುವುದು, ಪತಿ ಜೀವಿಸುವಾಗ ಸತಿ ಸಾಯುವುದು, ನೂರು ವರ್ಷದ ಪೂರ್ಣಾಯುಷ್ಯ ತೀರುವ ಒಳಗೇ ಸಾಯುವುದು ಮುಂತಾದ ವ್ಯತ್ಯಾಸ ಮರಣಗಳಿರಲಿಲ್ಲ ಎಂದು ವಾದಿರಾಜೀಯ ಹೇಳಿದೆ.[1]

ಸ್ವೇಚ್ಛೆಯಿಂದಾಗಲಿ ಯುದ್ಧದಲ್ಲಾಗಲಿ ಮರಣಬರುತ್ತಿತ್ತು ಹೊರತು ವ್ಯಾಧಿಯಿಂದ ಬರುತ್ತಿರಲಿಲ್ಲ ಅಥವಾ ವ್ಯಾಧಿಪೀಡೆ ಯಾರಿಗೂ ಇರಲಿಲ್ಲ ಎಂದು ತಾಮ್ರಪರ್ಣೀಯ.[2]

ಯುಧಿಷ್ಠಿರಂ ಯಾಂತ್ಯಥ ದರ್ಶನೋತ್ಸುಕಾಃ
ಪ್ರತಿಗ್ರಹಾಯಾಪ್ಯಥ ಯಾಜನಾಯ।
ಕಾರ್ಯಾರ್ಥಿನೋ ನೈವ ವೃಕೋದರೇಣ
ಕಾರ್ಯಾಣಿ ಸಿಧ್ಯಂತಿ ಯತೋಽಖಿಲಾನಿ ॥೮॥

ಪ್ರಜೆಗಳು ಕೇವಲ ರಾಜದರ್ಶನೋತ್ಸುಕರಾಗಿ ಅಥವಾ ದಾನ ಸ್ವೀಕರಿಸುವುದಕ್ಕಾಗಿಯೋ ಯಾಜ್ಞಿಕ ಮಾಡುವುದಕ್ಕಾಗಿಯೋ ಯುಧಿಷ್ಠಿರನ ಬಳಿಗೆ ಹೋಗುತ್ತಿದ್ದರು ಹೊರತು ಕಾರ್ಯಾರ್ಥಿಗಳಾಗಿ ಅವನ ಬಳಿಗೆ ಯಾರೂ ಹೋಗುತ್ತಿದ್ದಿಲ್ಲ. ಏಕೆಂದರೆ ಎಲ್ಲ ಕೆಲಸಗಳೂ ಭೀಮನಿಂದಲೆ ಸಿದ್ಧವಾಗುತ್ತಿದ್ದುವು.

---

1. ಪಿತರಿ ಸತಿ ಪುತ್ರಸ್ಯ ಮರಣಂ, ಪತ್ಯೌ ಸತಿ ಭಾರ್ಯಾಯಾ ಮರಣಂ, ಶತವರ್ಷಾಭ್ಯಂತರೇ ಮರಣಂ ಚೇತ್ಯಾದಿಕಂ ವಿಪರ್ಯಯಾನ್ಮೃತಿರಿತ್ಯುಚ್ಯತೇ ಇತಿ ಜ್ಞೇಯಂ। –ವಾದಿರಾಜೀಯ
2. ಸ್ವೇಚ್ಛಯಾ ವಾ ಯುದ್ಧೇ ವಾ ಮೃತಿ ಭಾವೇಽಪಿ ವ್ಯಾಧಿತೋ ಮೃತಿರ್ನೇತ್ಯರ್ಥಃ।
ಕೋಽಪಿ ಪುರುಷೋ ವ್ಯಾಧಿಪೀಡಿತೋ ನೇತ್ಯಪ್ಯರ್ಥಮಾಹುಃ। –ತಾಮ್ರಪರ್ಣೀಯ

ಪ್ರಜೆಗಳು ಕೇವಲ ರಾಜದರ್ಶನೋತ್ಸುಕರಾಗಿ ಯುಧಿಷ್ಠಿರನ ಬಳಿಗೆ ಹೋಗುತ್ತಿದ್ದರು ಹೊರತು ದಾನಸ್ವೀಕಾರ ಯಾಜ್ಞಿಕಗಳಿಗಾಗಿ ಹೋಗುತ್ತಿರಲಿಲ್ಲ, ಆ ಕೆಲಸಗಳೆಲ್ಲ ಭೀಮನಿಂದಲೆ ನಡೆಯುತ್ತಿದ್ದುವು ಎಂದು ವರದರಾಜೀಯ ಹೇಳಿದೆ.[1] ಆದರೆ ದಾನ ಯಜ್ಞಾದಿಗಳು ಯುಧಿಷ್ಠಿರನೇ ವಹಿಸಿಕೊಂಡ ಕಾರ್ಯಗಳಿಂದು ಹಿಂದೆ ಹೇಳಿದೆ.

ಗಂಧರ್ವವಿದ್ಯಾಧರಚಾರಣಾಶ್ಚ
ಸೇವಂತ ಏತಾನ್ ಸತತಂ ಸಮಸ್ತಾಃ।
ಯಥಾ ಸುರೇಂದ್ರಂ ಮುನಯಶ್ಚ ಸರ್ವೇ
ಆಯಾಂತಿ ದೇವಾ ಅಪಿ ಕೃಷ್ಣಮರ್ಚಿತುಂ ॥೯॥

ಗಂಧರ್ವರೂ ವಿದ್ಯಾಧರರೂ ಚಾರಣರೂ ದೇವೇಂದ್ರನನ್ನು ಹೇಗೋ ಹಾಗೇ ಪಾಂಡವರನ್ನೂ ಸತತವಾಗಿ ಸೇವಿಸುತ್ತಿದ್ದರು. ದೇವತೆಗಳೂ ಋಷಿಗಳೂ ಎಲ್ಲರೂ ಕೃಷ್ಣನನ್ನು ಆರಾಧಿಸುವುದಕ್ಕಾಗಿ ಅಲ್ಲಿಗೆ ಬರುತ್ತಿದ್ದರು.

ಗಂಧರ್ವ ವಿದ್ಯಾಧರ ಚಾರಣರು ಗೀತ ವಾದ್ಯ ನೃತ್ಯಾದಿಗಳಿಂದ ದೇವಲೋಕದಲ್ಲಿ ದೇವೇಂದ್ರನನ್ನು ಹೇಗೆ ಸೇವಿಸುವರೋ ಹಾಗೇ ಭೂಲೋಕದಲ್ಲಿಯೂ ಮನುಷ್ಯಾಕಾರದಲ್ಲಿ ಬಂದು ಪಾಂಡವರನ್ನು ಸೇವಿಸುತ್ತಿದ್ದರು. ಏಕೆಂದರೆ ಪಾಂಡವರೂ ಹಿಂದಿನ ಮತ್ತು ಇಂದಿನ ಇಂದ್ರರ ಅವತಾರಭೂತರು. ದೇವತೆಗಳೂ ಋಷಿಗಳೂ ಕೃಷ್ಣನ ಆರಾಧನೆಗಾಗಿ ಬರುತ್ತಿದ್ದರು. ಸಾಕ್ಷಾತ್ ಪರದೇವತೆಯಾದ ಹರಿ ಎರಡು ಕೃಷ್ಣರೂಪಗಳಿಂದ, ಅಂದರೆ ವೇದವ್ಯಾಸ ಕೃಷ್ಣರೂಪಗಳಿಂದ ಪಾಂಡವರ ಬಳಿಯೆ ಹೆಚ್ಚಾಗಿ ಇದ್ದುದರಿಂದ ಸುಲಭವಾಗಿ ಆರಾಧನೆಗೆ ಸಿಗುತ್ತಿದ್ದರು.

ತೇಷಾಂ ರಾಷ್ಟ್ರೇ ಕಾರ್ತಯುಗಾ ಹಿ ಧರ್ಮಾಃ
ಪ್ರವರ್ತಿತಾ ಏವ ತತೋಽಧಿಕಾಶ್ಚ।
ವೃದ್ಧಿಶ್ಚ ತಸ್ಮಾದಧಿಕಾ ಸುವರ್ಣ-
ರತ್ನಾಂಬರಾದೇರಪಿ ಸಸ್ಯಸಂಪದಾಂ ॥೧೦॥

ಪಾಂಡವರ ರಾಜ್ಯದಲ್ಲಿ ಕೃತಯುಗದ ಧರ್ಮಾಚರಣೆಯೇ ಇದ್ದಿತು. ಏಕೆ, ಅದಕ್ಕಿಂತಲೂ ಹೆಚ್ಚು. ಅದರಿಂದ ಸುವರ್ಣರತ್ನವಸ್ತ್ರಾದಿಗಳ ಮತ್ತು ಸಸ್ಯಸಂಪತ್ತುಗಳ ಅಧಿಕ ಸಮೃದ್ಧಿಯೂ ಇದ್ದಿತು.

---

1. ದರ್ಶನಾರ್ಥಿನ ಏವ ಯುಧಿಷ್ಠಿರಂ ಯಾಂತಿ। ಪ್ರತಿಗ್ರಹಾಯ ಅಥವಾ ಯಾಜನಾಯ ಕಾರ್ಯಾರ್ಥಿನೋ ನೈವ ಯಾಂತಿ। ದರ್ಶನ ಪ್ರಯೋಜನಕಮೇವ ಸರ್ವೇಷಾಮಾಗಮನಂ।
-ವರದರಾಜೀಯ

ಕೃತಯುಗದಲ್ಲಿ ಧರ್ಮದ ನಾಲ್ಕೂ ಪಾದಗಳು ಸ್ಥಿರವಾಗಿರುತ್ತವೆ. ತ್ರೇತಾದಿಗಳಲ್ಲಿ ಒಂದೊಂದು ಪಾದ ಕಡಿಮೆ. ಪಾಂಡವರ ಕಾಲ ದ್ವಾಪರದ ಕೊನೆ. ಎರಡು ಪಾದಗಳೂ ಆಗ ದೃಢವಾಗಿರಲಿಲ್ಲ. ಆದರೆ ಪಾಂಡವರ ಆಡಳಿತದ ಪ್ರಭಾವದಿಂದ ರಾಜಾ ಕಾಲಸ್ಯ ಕಾರಣಂ ಎಂಬಂತೆ ಕೃತಯುಗವೆ ಬಂದಿತು. ಧರ್ಮಾಚರಣೆ ಪೂರ್ತಿಯಾಗಿ ನಡೆಯಿತು, ಐಶ್ವರ್ಯ ಅಧಿಕ ಸಮೃದ್ಧಿ ಹೊಂದಿತು.

ದೇವಕೀ ಧರ್ಮರಾಜ ವಿವಾಹ

ಅಥೋಪಯೇಮೇ ಶಿಶುಪಾಲಪುತ್ರೀಂ
ಯುಧಿಷ್ಠಿರೋ ದೇವಕೀಂ ನಾಮ ಪೂರ್ವಂ।
ಸ್ವೀಯಾಂ ಭಾರ್ಯಾಂ ಯತ್ಸಹಜೋ ಧೃಷ್ಟಕೇತು-
ರನುಹ್ಲಾದಃ ಸವಿತುಶ್ಚಾಂಶಯುಕ್ತಃ ॥೧೧॥

ಯುಧಿಷ್ಠಿರ ಶಿಶುಪಾಲನ ಮಗಳಾದ ದೇವಕಿಯನ್ನು ವಿವಾಹ ಮಾಡಿಕೊಂಡ. ಅವಳು ಪೂರ್ವದಲ್ಲಿಯೂ ಯಮನ ಹೆಂಡತಿಯೆ. ಅವಳ ಸೋದರ ಧೃಷ್ಟಕೇತು. ಇವನು ಅನುಹ್ಲಾದನ ಅವತಾರ, ಸವಿತನ ಅಂಶಯುಕ್ತ.

ಪಂಚದೇವಿಯರಿಗೆ ದ್ರೌಪದೀಜನ್ಮ ಮೂರನೆಯದು. ಇದು ಏಕಶರೀರದಲ್ಲಿ. ಇದೀಗ ಪ್ರತ್ಯೇಕ ಶರೀರಗಳಲ್ಲಿ ನಾಲ್ಕನೆ ಜನ್ಮವನ್ನು ಹೇಳಲು ತೊಡಗಿದ್ದಾರೆ. -ಜನಾರ್ದನೀಯ.[1]

ಯಮನ ಪತ್ನಿ ಶ್ಯಾಮಲೆ ದೇವಕಿಯಾಗಿ ಅವತರಿಸಿದಳು. ಸೋದರನಿಲ್ಲದ ಕನ್ಯೆ ವಿವಾಹಕ್ಕೆ ಪ್ರಶಸ್ತಳಲ್ಲ. ಅದರಿಂದ ಅವಳಿಗೆ ಸೋದರನಾಗಿ ಪ್ರಹ್ಲಾದನ ತಮ್ಮನಾದ ಅನುಹ್ಲಾದ ಧೃಷ್ಟಕೇತುವಾಗಿ ಅವತರಿಸಿದ. -ತಾಮ್ರಪರ್ಣೀಯ.[2]

ಕಾಲೀ ಸ್ವಯಂವರ

ತಸ್ಯಾಂ ಸುಹೋತ್ರೋ ನಾಮತಃ ಪುತ್ರ ಆಸೀದ್
ಯಶ್ಚಿತ್ರಗುಪ್ತೋ ನಾಮ ಪೂರ್ವಂ ಸುಲೇಖಃ।
ಕೃಷ್ಣಾ ಸೈವಾಪ್ಯನ್ಯರೂಪೇಣ ಜಾತಾ
ಕಾಶೀಶಪುತ್ರೀ ಯಾಂ ಪ್ರವದಂತಿ ಕಾಲೀಂ ॥೧೨॥

---

1. ಶ್ಯಾಮಲಾದೀನಾರಭ್ಯ ಸ್ಪಷ್ಟತಯಾ ಪೃಥಕ್ ಪೃಥಕ್ ಚತುರ್ಥಂ ಜನ್ಮ ದರ್ಶಯನ್ ಯುಧಿಷ್ಠಿರಾದೀನಾಂ ವಿವಾಹಾಂತರಮಾಹ। -ಜನಾರ್ದನೀಯಂ
2. ಅಭ್ರಾತೃಮತ್ಯಾಃ ಕನ್ಯಾಯಾಃ ವಿವಾಹೋ ನ ಪ್ರಶಸ್ತ ಇತಿ ಶಂಕಾ ಪರಾಸ್ತಾ। -ತಾಮ್ರಪರ್ಣೀಯ

ಧರ್ಮರಾಜನಿಗೆ ದೇವಕಿಯಲ್ಲಿ ಸುಹೋತ್ರನೆಂಬ ಮಗ ಹುಟ್ಟಿದ. ಅವನು ಹಿಂದೆ ಚಿತ್ರಗುಪ್ತ, ಒಳ್ಳೆಯ ಲೇಖಕ. ಕೃಷ್ಣೆ ಇನ್ನೊಂದು ರೂಪದಿಂದಲೂ ಅವತರಿಸಿದಳು. ಅವಳು ಕಾಶಿರಾಜನ ಮಗಳು. ಅವಳನ್ನೇ ಕಾಲೀ ಎಂದು ಕರೆಯುತ್ತಾರೆ.

ಮಹಾಭಾರತದಲ್ಲಿ ಶೈಬ್ಯದೇಶದ ರಾಜಕುಮಾರಿ ದೇವಕಿ. ಅವಳಲ್ಲಿ ಧರ್ಮರಾಜನಿಂದ ಹುಟ್ಟಿದವನು ಯೌಧೇಯ. ದೇವಕೀ ಎಂಬುದು ದಾಕ್ಷಿಣಾತ್ಯಪಾಠ. ಔತ್ತರೇಯ ಪಾಠದಲ್ಲಿ ಅವಳು ದೇವಿಕಾ. ಶೈಬ್ಯದೇಶದ ರಾಜನ ಹೆಸರು 'ಗೋವಾಸನ' ಮಾನವರ ಪುಣ್ಯಪಾಪಕರ್ಮಗಳ ವಿವರಗಳನ್ನೆಲ್ಲ ತಪ್ಪಿಲ್ಲದಂತೆ ಬರೆಯುವ ಒಳ್ಳೆಯ ಲೇಖಕ ಚಿತ್ರಗುಪ್ತ.

[1]'ಭಾರತಿ ಇನ್ನೊಂದು ರೂಪದಿಂದ ಅವತರಿಸಿದಳು' ಎಂದು ಹೇಳಬೇಕಾಗಿರುವಲ್ಲಿ 'ಕೃಷ್ಣೆ' ಇನ್ನೊಂದು ರೂಪದಿಂದ ಅವತರಿಸಿದಳು ಎಂದುದು ಕೃಷ್ಣೆ ಎಂಬ ಹೆಸರು ಉತ್ಕೃಷ್ಟತ್ವಾದ್ಧಿ ಯೋಷಿತಾಂ ಎಂಬಂತೆ ಭಾರತಿಗೆ ಮುಖ್ಯ ಎಂದು ಸೂಚಿಸುವುದಕ್ಕಾಗಿ. -ತಾಮ್ರಪರ್ಣೀಯ.

ಸಾ ಕೇವಲಾ ಭಾರತೀ ನಾನ್ಯದೇವ್ಯ-
ಸ್ತತ್ರಾವಿಷ್ಟಾಸ್ತತ್ಕೃತೇ ಕಾಶಿರಾಜಃ।
ಸ್ವಯಂವರಾರ್ಥೇ ನೃಪತೀನಾಜುಹಾವ
ಸರ್ವಾಂಸ್ತೇಽಪಿ ಹ್ಯತ್ರ ಹರ್ಷಾತ್ಸಮೇತಾಃ ॥೧೩॥

ಕಾಲೀದೇವಿ ಕೇವಲ ಭಾರತಿ. ಅನ್ಯದೇವಿಯರು ಶರೀರದಲ್ಲಿ ಆವಿಷ್ಟರಾಗಿರಲಿಲ್ಲ. ಅವಳಿಗಾಗಿ ಕಾಶಿರಾಜ ಸ್ವಯಂವರಕ್ಕೆ ಎಲ್ಲ ರಾಜರನ್ನೂ ಕರೆಸಿಕೊಂಡ. ಅವರು ಸಂತೋಷದಿಂದ ಬಂದು ಸೇರಿದರು.

[2]ಏಕದೇಹರಾಗಿ ಬ್ರಹ್ಮನನ್ನು ವಂಚಿಸಿದ್ದರ ಫಲವಾಗಿ ವಿಪ್ರಕನ್ಯಾ ನಾಲಾಯನೀ ದ್ರೌಪದೀ ಎಂದು ಮೂರು ಜನ್ಮಗಳಾದುವು. ಅವುಗಳಲ್ಲಿ ನಾಲಾಯನೀ ಜನ್ಮದಲ್ಲಿ ಪರಪುರುಷ ಸಂಗವೂ ಆಯಿತು. ನಾಲ್ಕನೇ

---

1. ಭಾರತೀತಿ ವಾಚ್ಯೇ ಕೃಷ್ಣಾಪದಪ್ರಯೋಗಸ್ತು ಕೃಷ್ಣಾಶಬ್ದೋ ಭಾರತ್ಯಾಮೇವ ಮುಖ್ಯಃ ಉತ್ಕೃಷ್ಟತ್ವಾದ್ಧಿಯೋಷಿತಾಮಿತ್ಯಾದಿ ವ್ಯುತ್ಪತ್ತೇರಿತರತ್ರಾಮುಖ್ಯತ್ವಾದಿತಿ ಸೂಚಯಿತುಮಿತಿ ಜ್ಞೇಯಂ। -ತಾಮ್ರಪರ್ಣೀಯ

2 ಸಾ ಕಾಲೀ ಕೇವಲಾ ಭಾರತೀ। ಅನ್ಯದೇವ್ಯಃ ಶಚ್ಯಾದ್ಯಾಸ್ತತ್ರ ಕಾಲೀದೇವ್ಯಾಂ ನಾವಿಷ್ಟಾಃ। ಏಕದೇಹಕೃತ ವಂಚನ ಫಲತ್ವೇನ ತ್ರಿವಾರಂ ಭಾರತೀ ದೇಹಸಂಸೃಷ್ಟತಯಾ ಜನ್ಮನಃ ಪ್ರಾಪ್ತತ್ವೇನ ಶಾಪಸ್ಯ ಪರಿಸಮಾಪ್ತತ್ವಾದಿತಿ ಭಾವಃ। -ವರದರಾಜೀಯ
ಏಕದೇಹತ್ವೇನ ವಂಚನಕೃತಫಲಂ ಭಾರತೀಸಂಸೃಷ್ಟತಯಾ ಜನ್ಮತ್ರಯಂ। ತತ್ಕೈಕಸ್ಮಿನ್ ಜನ್ಮನಿ ಅನ್ಯಗಾತ್ವಮನುಭೂತಮಿತಿ ಭಾವಃ। -ಜನಾರ್ದನೀಯ

ಜನ್ಮದಲ್ಲಿ ದೇವಿಯರಿಗೆ ಪ್ರತ್ಯೇಕ ಶರೀರಗಳು. ಆದರಿಂದ ಕಾಲೀಶರೀರದಲ್ಲಿ ಭಾರತಿಯೊಂದಿಗೆ ಅನ್ಯದೇವಿಯರ ಆವೇಶವಿಲ್ಲ ಎಂದು ವರದರಾಜೀಯ ಮತ್ತು ಜನಾರ್ದನೀಯಗಳು ಹೇಳಿವೆ.

ದಾಕ್ಷಿಣಾತ್ಯ ಪಾಠದ ಮಹಾಭಾರತದಲ್ಲಿ ಕಾಶೀರಾಜಕುಮಾರಿಗೆ ಜಲಂಧರಾ ಎಂದು ಹೆಸರು. ಆವಳಲ್ಲಿ ಶರ್ವತ್ರಾತ ಜನಿಸುತ್ತಾನೆ. ಔತ್ತರೇಯಪಾಠದಲ್ಲಿ ಬಲಂಧರಾ ಎಂದು ಹೆಸರು. ಆವಳಲ್ಲಿ ಹುಟ್ಟುವವ 'ಸರ್ವಗ'.

ತೇಷಾಂ ಮಧ್ಯೇ ಭೀಮಸೇನಾಂಸ ಏಷಾ
ಮಾಲಾಮಾಧಾತ್ತತ್ರ ಜರಾಸುತಾದ್ಯಾಃ।
ಕ್ರುದ್ಧಾ ವಿಷ್ಣೋರಾಶ್ರಿತಾನಾಕ್ಷಿಪಂತ
ಆಸೇದುರುಚ್ಚೈಃ ಶಿವಮಾಸ್ತುವಂತಃ ॥೧೪॥

ಕಾಲೀದೇವಿ ಎಲ್ಲ ರಾಜರ ನಡುವೆ ಭೀಮಸೇನನ ಹೆಗಲಿನ ಮೇಲೇ ಮಾಲೆಯನ್ನಿಟ್ಟಳು. ಆಗ ಜರಾಸಂಧಾದಿಗಳು ಕುಪಿತರಾಗಿ ವಿಷ್ಣು ವಿಷ್ಣುಭಕ್ತರನ್ನು ದೊಡ್ಡ ಧ್ವನಿಯಿಂದ ನಿಂದಿಸುತ್ತ ಶಿವ ಶಿವಭಕ್ತರನ್ನು ಪ್ರಶಂಸಿಸುತ್ತ ಮೇಲೇರಿ ಬಂದರು.

[1]ವಿಷ್ಣುಭಕ್ತನಾದ ಒಬ್ಬ ವ್ಯಕ್ತಿ ರಾಜಕನ್ಯೆಯನ್ನು ಅಪಹರಿಸಿದನೆಂದು ಶಿವಭಕ್ತರಿಗೆ ಕೋಪ. -- ಜನಾರ್ದನೀಯ

ಭೀಮಸೇನನ ತತ್ವವಾದ

ಪೂರ್ವಂ ವಾಕ್ಯೈರ್ವೇದಿಕೈಸ್ತಾನ್ಸ ಭೀಮೋ
ಜಿಗ್ಯೇ ತರ್ಕೈಃ ಸಾಧುಭಿಃ ಸಂಪ್ರಯುಕ್ತೈಃ।
ವೇದಾ ಹ್ಯದೋಷಾ ಇತಿ ಪೂರ್ವಮೇವ
ಸಂಸಾಧಯಿತ್ವೈವ ಸದಾಗಮೈಶ್ಚ ॥೧೫॥

ಭೀಮ ಶಸ್ತ್ರವನ್ನು ಕೈಗೆತ್ತಿಕೊಳ್ಳುವುದಕ್ಕೆ ಮೊದಲು ಅಪೌರುಷೇಯತ್ವಾದಿ ನಿರ್ದುಷ್ಟ ಯುಕ್ತಿಗಳಿಂದಲೂ ಸದಾಗಮಗಳಿಂದಲೂ ವೇದಗಳನ್ನು ನಿರ್ದುಷ್ಟ ಪ್ರಮಾಣಗಳೆಂದು ಸಾಧಿಸಿ, ವೇದವಾಕ್ಯಗಳಿಂದ, ಚೆನ್ನಾಗಿ ಪ್ರಯೋಗಿಸಿದ ನಿರ್ದುಷ್ಟ ಬ್ರಹ್ಮತರ್ಕಾಧಾರಿತವಾದ ಯುಕ್ತಿಗಳಿಂದ ಮತ್ತು ಪಂಚರಾತ್ರಾದಿ ಸದಾಗಮಗಳಿಂದ ರಾಜರನ್ನು ವಾದ ಯುದ್ಧದಲ್ಲಿ ಗೆದ್ದ.

---

1. ವೈಷ್ಣವೇನ ರಾಜ್ಞಃ ಕನ್ಯಾ ಹ್ರಿಯತೇ ಇತಿ ಕ್ರುದ್ಧಾಃ ಸಂತಃ ವಿಷ್ಣೋರಾಶ್ರಿತಾನ್ ವಿಷ್ಣುಮಪಿ ಉಚ್ಚೈರಾಕ್ಷಿಪಂತಃ ಶಿವಂ ಶೈವಾಂಶ್ಚಾಸ್ತುವಂತಃ। -ಜನಾರ್ದನೀಯ

'ಪೃಷ್ಟೇನಾಗಮ ಏವಾದೌ ವಕ್ತವ್ಯಃ ಸಾಧ್ಯಸಿದ್ಧಯೇ' ಎಂಬ ನಿಯಮದಂತೆ ವಾದದಲ್ಲಿ ಮೊದಲಿಗೆ ವೇದವಾಕ್ಯವನ್ನೇ ಆಧಾರವಾಗಿ ಹೇಳಬೇಕು. ಆದರೆ ವೇದವನ್ನು ನಿರ್ದುಷ್ಟಪ್ರಮಾಣವೆಂದು ಒಪ್ಪದ ಬೌದ್ಧಾದಿಗಳಿಗೆ ಮೊದಲು ಅಪೌರುಷೇಯತ್ವಾದಿ ಯುಕ್ತಿಗಳನ್ನೂ 'ವಾಚಾ ವಿರೂಪ ನಿತ್ಯಯಾ' ಇತ್ಯಾದಿ ವಾಕ್ಯಗಳನ್ನೂ ತೋರಿಸಿ ವೇದವನ್ನು ನಿರ್ದುಷ್ಟಪ್ರಮಾಣವೆಂದು ಒಪ್ಪಿಸಬೇಕು. ವಾಕ್ಯದಲ್ಲಿ ದೋಷ ಸ್ವತಃ ಬರುವುದಿಲ್ಲ. ವಕ್ತೃಪುರುಷನ ಅಜ್ಞಾನಾದಿ ದೋಷಪ್ರಯುಕ್ತ ಬರುತ್ತದೆ. ಅಪೌರುಷೇಯ ವಾಕ್ಯದಲ್ಲಿ ಈ ದೋಷಕ್ಕೆ ಪ್ರಸಕ್ತಿ ಇಲ್ಲ ಎಂದು. ಚೆನ್ನಾಗಿ ಪ್ರಯೋಗಿಸಿದ · ಯುಕ್ತಿಗಳಿಂದರೆ ನ್ಯೂನಾದಿ ಶಬ್ದದೋಷರಹಿತ ಯುಕ್ತಿಗಳು. ನಿರ್ದುಷ್ಟಯುಕ್ತಿಗಳಿಂದರೆ ವಿರೋಧಾದಿ ಅರ್ಥದೋಷ ರಹಿತವಾದ ಯುಕ್ತಿಗಳು.

ವೇದಾಧಿಕ್ಯಂ ಶೈವಶಾಸ್ತ್ರಾಣೆ ಚಾಹುಃ
ವೇದೋಜ್ಜಿತಾನಾಂ ಬಹುಲಾಂ ಚ ನಿಂದಾಂ।
ತಥಾ ಶಾಕ್ತೇಯಸ್ಕಾಂದಸೌರಾದಿಕಾನಾಂ
ತತ್ರೈವೋಕ್ತಂ ಛಂದಸಾಂ ವೈಷ್ಣವತ್ವಂ ॥೧೬॥

ಶೈವಶಾಸ್ತ್ರಗಳೂ ಕೂಡ ವೇದಗಳ ಹಿರಿಮೆಯನ್ನು ಹೇಳಿವೆ. ಮತ್ತು ವೇದ ವಿರುದ್ಧವಾದ ಶಾಕ್ತಸ್ಕಾಂದ ಸೌರ ಮುಂತಾದವುಗಳ ನಿಂದೆಯನ್ನು ಮಾಡಿವೆ. ವೇದದಲ್ಲಿಯೆ ವೇದಗಳಿಗೆ ವಿಷ್ಣುಪರತ್ವ ಉಕ್ತವಾಗಿದೆ.

[1]ಶೈವ ಶಾಸ್ತ್ರಗಳೆಂದರೆ ಇಲ್ಲಿ ಶೈವಪುರಾಣ ಮುಂತಾದವು. ಶೈವ ಶಾಕ್ತ ಸ್ಕಾಂದ ಸೌರ ಮುಂತಾದುವು ವೈದಿಕ ಪಾಷಂಡಿಗಳಾದ್ದರಿಂದ ಕೆಲವೆಡೆ ವೇದವನ್ನು ಪ್ರಮಾಣವೆನ್ನುವುದುಂಟು. -ವಾದಿರಾಜೀಯ

[2]ನಾಮಾನಿ ಸರ್ವಾಣಿ ಯಮಾವಿಶಂತಿ ತಂ ವೈ ವಿಷ್ಣುಂ ಪರಮ ಮುದಾಹರಂತಿ' ಇತ್ಯಾದಿ ವೇದವಾಕ್ಯಗಳು ಸಕಲವೇದಗಳೂ ವಿಷ್ಣುಪರ

---

1. ಶೈವ ಶಾಸ್ತ್ರಾಣಿ ಶೈವ ಪುರಾಣಾದೀನಿ। ಶೈವ ಶಾಕ್ತೇಯ ಸ್ಕಾಂದ ಸೌರಾದೀನಾಂ ವೈದಿಕ ಪಾಷಂಡಿತ್ವಾತ್ ಕ್ವಚಿದ್ ವೇದಮಪಿ ಮಾನಯಂತೀತಿ ಭಾವಃ। -ವಾದಿರಾಜೀಯ
2. ಇದಂ ವೇದ ಪ್ರಾಮಾಣ್ಯ ಸಾಧನಂ ಬಾಹ್ಯಾನ್ ಪ್ರತ್ಯೇವ। ಶೈವಾನ್ ಪ್ರತಿ ತು ನ ಸಾಧ್ಯಂ। ತೈರಭ್ಯುಪಗತತ್ವಾತ್। ಅಸ್ತು ಪ್ರಾಮಾಣ್ಯಂ। ನ ತಸ್ಯೇತರ ಶಾಸ್ತ್ರಾತಿಶಯ ಇತಿ ಚೇತ್ ತಸ್ಯಾಪ್ಯಭ್ಯುಪಗಮಾತ್ ಅನ್ಯಥಾಽಪಸಿದ್ಧಾಂತಾಪತ್ತೇರಿತ್ಯಾಹ ವೇದೇತಿ। ವೇದೋಜ್ಜಿತಾನಾಂ ಬೌದ್ಧಾನಾಂ ತಥಾ ಯೇ ವೇದ ಪ್ರಾಮಾಣ್ಯ ಮಂಗೀಕೃತ್ಯಾಪಿ ವೇದಂ ತ್ವಬಹುಮನ್ಯಂತೇ ತೇಷಾಂ ಸ್ಕಾಂದಾದೀನಾಂ ಚ ನಿಂದಾಮಾಹುರಿತ್ಯರ್ಥಃ। -ತಾಮ್ರಪರ್ಣೀಯ

ವೆನ್ನುತ್ತಿವೆ. 'ವೇದಗಳನ್ನು ನಿಂದಿಸಿದರೆ ನಿಮಗೆ ವಾದದಲ್ಲಿ ಅಪಸಿದ್ಧಾಂತ ದೋಷ ಬರುತ್ತದೆ. ಏಕೆಂದರೆ ವೇದವನ್ನು ಒಪ್ಪದ ಬೌದ್ಧರನ್ನೂ ವೇದವನ್ನು ಒಪ್ಪಿಯೂ ಅದಕ್ಕೆ ಉತ್ತಮ ಪ್ರಮಾಣತ್ವವನ್ನು ಒಪ್ಪದಿರುವ ಸ್ಕಾಂದಾದಿಗಳನ್ನೂ ಶೈವ ಪುರಾಣಗಳು ನಿಂದಿಸಿವೆ. ವೇದವನ್ನು ಒಪ್ಪಿ, ಅದಕ್ಕೆ ಶ್ರೇಷ್ಠತ್ವವನ್ನೂ ಒಪ್ಪಿ, ಹರಿಪರತ್ವವನ್ನು ಒಪ್ಪದಿದ್ದರೂ ಅಪಸಿದ್ಧಾಂತವೆ. ಏಕೆಂದರೆ ಶೈವಶಾಸ್ತ್ರಗಳಲ್ಲಿಯೆ ವೇದವನ್ನು ಹರಿಪರವೆಂದು ಹೇಳಲಾಗಿದೆ.
-ತಾಮ್ರಪರ್ಣೀಯ

ವಿಷ್ಣೋರಾಧಿಕ್ಯಂ ತಾನಿ ಶಾಸ್ತ್ರಾಣಿ ಚಾಹುಃ
ಶಿವಾದಿಭ್ಯಃ ಕುತ್ರಚಿನ್ನೈವ ವೇದೇ।
ವಿಷ್ಣೂತ್ಕೃಷ್ಟಃ ಕಥಿತೋ ಬೌದ್ಧಪೂರ್ವಾ
ಶ್ಚಾಹುರ್ವಿಷ್ಣುಂ ಪರಮಂ ಸರ್ವತೋಽಪಿ ॥೧೭॥

ಶಿವಾದಿಗಳಿಗಿಂತ ವಿಷ್ಣು ಉತ್ತಮ ಎಂಬುದನ್ನು ಆ ಶೈವಶಾಸ್ತ್ರಗಳೂ ಕೆಲವೆಡೆ ಹೇಳುತ್ತವೆ. ವೇದದಲ್ಲಿ ವಿಷ್ಣುವಿಗಿಂತ ಉತ್ತಮನೆಂದು ಒಬ್ಬನನ್ನು ಎಲ್ಲಿಯೂ ಹೇಳಿಲ್ಲ. ಬೌದ್ಧಾದಿಗಳೂ ಕೂಡ ಬುದ್ಧರೂಪಿಯಾದ ವಿಷ್ಣುವಿನ ಸರ್ವೋತ್ತಮತ್ವವನ್ನು ಹೇಳುತ್ತಾರೆ.

[1]ಶಿವಾದಿಗಳಿಗಿಂತ ವಿಷ್ಣುವಿಗೆ ಉತ್ತಮತ್ವ ವೇದದಲ್ಲಿ ಮಾತ್ರವಲ್ಲದೆ ಶೈವಶಾಸ್ತ್ರಗಳಲ್ಲಿಯೂ ಕೆಲವು ಪ್ರಸಂಗಗಳಲ್ಲಿ ಉಕ್ತವಾಗಿದೆ. ವೇದದಲ್ಲಿ ಮಾತ್ರ ವಿಷ್ಣುವಿಗಿಂತ ಶಿವಾದಿಗಳಿಗೆ ಉತ್ತಮತ್ವ ಯಾವ ಪ್ರಸಂಗದಲ್ಲಿಯೂ ಹೇಳಿಲ್ಲ. ಹೇಳಿದಂತೆ ಮೇಲ್ನೋಟಕ್ಕೆ ಕಂಡುಬಂದರೆ ಅಲ್ಲಿ ಶಿವ ಇಂದ್ರಾದಿ ನಾಮಗಳು ಹರಿಪರವಾಗಿವೆ. ಏಕೆಂದರೆ ಎಲ್ಲ ನಾಮಗಳೂ ಹರಿನಾಮಗಳೇ.

ವೈದಿಕರು ಮಾತ್ರವಲ್ಲದೆ ಅವೈದಿಕರಾದ ಬೌದ್ಧರೂ ಬುದ್ಧನನ್ನು ಸರ್ವೋತ್ತಮನೆಂದು ಒಪ್ಪುತ್ತಾರೆ. ಬುದ್ಧ ಬೇರೆ ಯಾರೂ ಅಲ್ಲ, ವಿಷ್ಣುವೆ. ಆದರಿಂದ ಬೌದ್ಧರಿಗೂ ವಿಷ್ಣು ಸರ್ವೋತ್ತಮತ್ವದ ವಿಷಯದಲ್ಲಿ ಮತಭೇದವಿಲ್ಲ. -ಜನಾರ್ದನೀಯ

---

1. ನ ಕೇವಲಂ ವಿಷ್ಣೋತ್ಕರ್ಷೋ ವೇದೈರುಚ್ಯತೇ ಕಿಂತು ಶೈವ ಶಾಸ್ತ್ರಾಣ್ಯಪ್ಯಾಹುಃ ತಾನಿ ಶಾಸ್ತ್ರಾಣಿ ಕುತ್ರಚಿತ್ ಪ್ರಸಂಗೇ ಶಿವಾದಿಭ್ಯಃ ವಿಷ್ಣೋರಾಧಿಕ್ಯಮಾಹುಃ। ವೇದೇ ಕುತ್ರಚಿತ್ ವಿಷ್ಣೋಃ ಸಕಾಶಾದುತ್ತಮಃ ಅನ್ಯೋ ನ ಕಥಿತಃ। ಇಂದ್ರಾದಿ ಶಬ್ದಾನಾಂ ವಿಷ್ಣು ಪರತ್ವಾದಿತಿ ಭಾವಃ।

ನ ಕೇವಲಂ ವೈದಿಕಾ ವಿಷ್ಣುಂ ಪರಮಮಾಹುಃ। ಕಿಂತ್ವವೈದಿಕಾಶ್ಚ ತಥಾಹುರಿತ್ಯಾಹ। ವಿಷ್ಣುಂ ಬುದ್ಧರೂಪಿಣಂ ಸರ್ವತೋಽಪಿ ಸರ್ವೇಭ್ಯ ಏವ ಪರಮಮಾಹುಃ। -ಜನಾರ್ದನೀಯ

[1]ಅವೈದಿಕರಾದ ಬೌದ್ಧರೆ.. ವಿಷ್ಣು ಸರ್ವೋತ್ತಮತ್ವವನ್ನು ಅಂಗೀಕರಿಸಿರುವಾಗ ವೈದಿಕರು ಅಂಗೀಕರಿಸದಿರುವುದು ಹೇಗೆ ಶಕ್ಯ? -ತಾಮ್ರಪರ್ಣೀಯ.

ಲೋಕಾಯತಾಶ್ಚ ಕ್ವಚಿದಾಹುರಗ್ರ್ಯಂ
ವಿಷ್ಣುಂ ಗುರುಂ ಸರ್ವವರಂ ಬೃಹಸ್ಪತೇಃ ।
ಸರ್ವಾಗಮೇಷು ಪ್ರಥಿತೋಽತ ಏವ
ವಿಷ್ಣುಃ ಸಮಸ್ತಾಧಿಕ ಏವ ಮುಕ್ತಿದಃ ॥೧೮॥

ಚಾರ್ವಾಕರೂ ಕೂಡ ಕೆಲವೆಡೆ ವಿಷ್ಣುವನ್ನು ಶ್ರೇಷ್ಠನೆಂದೂ ಬೃಹಸ್ಪತಿಗೂ ಗುರುವೆಂದೂ ಹೇಳುತ್ತಾರೆ. ಹೀಗೆ ಶೈವಾದಿಗಳೂ ವಿಷ್ಣು ಸರ್ವೋತ್ತಮತ್ವವನ್ನು ಅಂಗೀಕರಿಸಿರುವುದರಿಂದ ಸರ್ವೋತ್ತಮನೆಂದು ಸರ್ವಾಗಮಗಳಲ್ಲಿ ಪ್ರಸಿದ್ಧನು ಮುಕ್ತಿದಾಯಕನಾದ ವಿಷ್ಣುವೇ.

[2]ಚಾರ್ವಾಕರಿಗೆ ತಮ್ಮ ಮತದ ಮೂಲಪುರುಷನಾದ ಬೃಹಸ್ಪತಿ ಸರ್ವಜ್ಞ ಆಪ್ತ ಹೇಗೆ ಎಂದು ಪ್ರಶ್ನೆ ಬಂದರೆ ಬೃಹಸ್ಪತಿಗೆ ಗುರು ಸರ್ವೋತ್ತಮನಾದ ವಿಷ್ಣು ಎಂದು ಹೇಳುತ್ತಾರೆ. ಅದಿರಲಿ, ಮತ್ಸ್ಯಕೂರ್ಮ ವರಾಹ ನರಸಿಂಹ ರಾಮಕೃಷ್ಣಾದ್ಯವತಾರಗಳಲ್ಲಿ ಮಾಡಿದ, ಇತರರಿಗೆ ಅಸಾಧ್ಯವಾದ ವೇದೋದ್ಧಾರ ಸಮುದ್ರಮಥನ ಮಂದರೋದ್ಧರಣ ಮುಂತಾದ ಕಾರ್ಯಗಳನ್ನೂ ಹಿರಣ್ಯಾಕ್ಷ ಹಿರಣ್ಯಕಶಿಪು ರಾವಣ ಕಂಸ ಜರಾಸಂಧಾದಿ ಪ್ರಬಲ ದೈತ್ಯ ನಾಶವನ್ನೂ ಬಲಿಯನ್ನು ಕಟ್ಟಿದ್ದು ಮೂಲೋಕವನ್ನು ಅಳೆದದ್ದು ಬ್ರಹ್ಮಾಂಡ ಕಟಾಹವನ್ನು ಒಡೆದದ್ದು ಮುಂತಾದ ಅನುಪಮ ಕಾರ್ಯಗಳನ್ನೂ ಲೋಕದಲ್ಲಿ ಎಲ್ಲರಿಗೂ ಕಾಣುವಂತೆ ಮಾಡಿದವುಗಳಾಗಿರುವಾಗ ಇಲ್ಲವೆನ್ನಲಾಗದು. ಅದರಿಂದ ವಿಷ್ಣು ಸರ್ವೋತ್ತಮತ್ವವನ್ನು ಸಕಲ ವಾದಿಗಳಲ್ಲಿಯೂ ವಿವೇಕಿಯಾದವನು

---

1. ಕೈಮುತ್ಯ ನ್ಯಾಯೇನಾಪಿ ತತ್ ಸಾಧಯತಿ ಬೌದ್ಧೇತಿ । -ತಾಮ್ರಪರ್ಣೀಯ

2. ಚಾರ್ವಾಕಾ ಬೃಹಸ್ಪತ್ಯುಕ್ತ ಸ್ವಮತಸ್ಯಾಪ್ತಿ ಮೂಲತ್ವ ಚಿಂತಾಯಾಂ ಬೃಹಸ್ಪತೇರಪಿ ಗುರುಂ ಅತ ಏವ ಸರ್ವವರಂ ವಿಷ್ಣುಂ ವದಂತೀತಿ ಭಾವಃ। ಕಿಂ ಬಹುನಾ? ಮತ್ಸ್ಯ ಕೂರ್ಮ ವರಾಹ ನರಸಿಂಹ ರಾಮಕೃಷ್ಣಾದ್ಯವತಾರೇಷು ಇತರಾಸಾಧ್ಯಾನಾಂ ವೇದಾಹರಣ ಸಮುದ್ರ ಮಥನ ಮಂದರೋದ್ಧರಣಾದಿ ಕರ್ಮಣಾಂ ಹಿರಣ್ಯಾಕ್ಷ ಹಿರಣ್ಯಕಶಿಪು ರಾವಣ ಕಂಸ ಜರಾಸಂಧಾದಿ ಪ್ರಬಲ ದೈತ್ಯ ವಧಾನಾಂ ಬಲಿಬಂಧನ ತ್ರಿಲೋಕತ್ರಿಪದೀಕರಣ ಬ್ರಹ್ಮಾಂಡ ಖಂಡನಾದ್ಯಪ್ರತಿಮ ಚರಿತ್ರಾಣಾಂ ಚಾಸ್ಮಿನ್ನೇವ ಲೋಕೇ ಸಾರ್ವಜನೀನತಯಾ ಕೃತಾನಾಮಪಲಾಪಾಯೋಗಾತ್ ವಿಷ್ಣೋಃ ಸರ್ವಾಧಿಕತ್ವಂ ಸಕಲವಾದಿಷು ಕೋನಾಮ ಪ್ರೇಕ್ಷಾವಾನುಪೇಕ್ಷೇತ?

-ವಾದಿರಾಜೀಯ

ಯಾರು ತಾನೆ ಉಪೇಕ್ಷಿಸಿಯಾನು? ಆದರಿಂದ ವಿಷ್ಣುವೆ ಎಲ್ಲ ಆಗಮಗಳಲ್ಲಿ ಪ್ರಸಿದ್ಧ. -ವಾದಿರಾಜೀಯ

[1]ವಿಷ್ಣು ಮುಕ್ತಿದಾಯಕನಾದ್ದರಿಂದಲೆ ಸರ್ವೋತ್ತಮನೆಂದು ಸರ್ವಾಗಮಗಳಲ್ಲಿ ಪ್ರಸಿದ್ಧನಾಗಿದ್ದಾನೆ. -ತಾಮ್ರಪರ್ಣೀಯ.

ತೇಷ್ವಾಗಮೇಷ್ವೇವ ಪರಸ್ಪರಂ ಚ
ವಿರುದ್ಧತಾ ಹ್ಯನ್ಯಪಕ್ಷೇಷು ಭೂಪಾಃ।
ಪ್ರತ್ಯಕ್ಷತಶ್ಚಾತ್ರ ಪಶ್ಯಧ್ವಮಾಶು
ಬಲಂ ಬಾಹ್ವೋರ್ಮೇ ವಿಷ್ಣುಪದಾಶ್ರಯಸ್ಯ ॥೧೯॥

ರಾಜರೆ, ಶಿವಾದಿಗಳಿಗೆ ಉತ್ತಮತ್ವವನ್ನು ಹೇಳುವ ಪಕ್ಷಗಳಲ್ಲಿ ಆ ಆಗಮಗಳಲ್ಲಿಯೆ ಪರಸ್ಪರ ವಿರೋಧವಿದೆ. ಮತ್ತು ಪ್ರತಿ ಆಗಮಗಳೊಳಗೂ ಪೂರ್ವೋತ್ತರ ವಿರೋಧವಿದೆ. ಕೈಮುತ್ಯ ನ್ಯಾಯದಿಂದ ವಿಷ್ಣು ಸರ್ವೋತ್ತಮತ್ವ ವಿಷಯದಲ್ಲಿ ವಿಷ್ಣುಪಾದವನ್ನು ಅವಲಂಬಿಸಿದ ನನ್ನ ಬಾಹುಗಳ ಬಲವನ್ನೇ ಪ್ರತ್ಯಕ್ಷ ನೋಡಿರಿ.

ಆಗಮಗಳಲ್ಲಿ ಪರಸ್ಪರ ವಿರೋಧವೆಂದರೆ ಶಿವನಿಗೆ ಸರ್ವೋತ್ತಮತ್ವವನ್ನು ಹೇಳುವುದು, ಭಸ್ಮಾಸುರನ ಭಯದಿಂದ ಶಿವ ಪಲಾಯನ ಮಾಡಿದನೆನ್ನುವುದು. ವಿಷಪಾನ ಮಾಡಿದನೆನ್ನುವುದು ವಿಷಪ್ರಭಾವದಿಂದ ಗಂಟಲು ಕಪ್ಪಾಗಿ ನೀಲಕಂಠನೆನಿಸಿದನೆನ್ನುವುದು. ವಿಷ್ಣು ಪಾದೋದಕವನ್ನು ತಲೆಯಲ್ಲಿ ಸದಾ ಧರಿಸಿದ್ದಾನೆ ಎನ್ನುವುದು. ವೇದವು ಅಪ್ರಮಾಣವೆನ್ನುವುದು, ತನಗೆ ಅನುಕೂಲವಾಗಿರುವ 'ಬ್ರಾಹ್ಮಣೋ ನ ಹಂತವ್ಯಃ' 'ಅಹಿಂಸಾ ಪರಮೋ ಧರ್ಮಃ' ಮುಂತಾದ ವಾಕ್ಯಗಳಿಗೆ ಪ್ರಾಮಾಣ್ಯ ಒಪ್ಪುವುದು ಎಂದು ಮುಂತಾಗಿ ಪರಸ್ಪರ ವಿರೋಧವೆಂದಿಟ್ಟುಕೊಳ್ಳಬೇಕು ಎನ್ನುತ್ತದೆ ವಾದಿರಾಜೀಯ.[2]

ವಿರೋಧವೆಂದರೆ ಯಾವ ನ್ಯಾಯದಿಂದ ಶಿವನಿಗೆ ಸರ್ವೋತ್ತಮತ್ವವನ್ನು ಶೈವರು ಹೇಳುವರೋ ಅದೇ ನ್ಯಾಯದಿಂದ ಶಾಕ್ತರು ಶಕ್ತಿಗೆ ಸರ್ವೋತ್ತಮತ್ವವನ್ನು ಹೇಳುವರು. ಹೀಗೆ ಬೇರೆ ಎಲ್ಲ ಪಕ್ಷ

---

1. ಯತೋ ವಿಷ್ಣುರ್ಮುಕ್ತಿದೋಽತ ಏವ ಸರ್ವಾಗಮೇಷು ಸರ್ವಾಧಿಕಃ ಪ್ರಥಿತ ಇತ್ಯರ್ಥಃ।
-ತಾಮ್ರಪರ್ಣೀಯ.

2. ಶಿವಸ್ಯ ಸರ್ವೋತ್ತಮತ್ವ ಕಥನಂ, ಭಸ್ಮಾಸುರ ಭಯಾತ್ ಪಲಾಯನ ಕಥನಂ। ವಿಷಪಾನಂ, ಗಲೇ ವಿಷಶಕ್ತ್ಯೈಲ್ಯೇನ ನೀಲಕಂಠತ್ವಂ, ಶಿರಸಿ ಸದಾ ವಿಷ್ಣು ಪಾದೋದಕಧಾರಣಂ। ವೇದಸ್ಯಾಪ್ರಾಮಾಣ್ಯ ಕಥನಂ, ಸ್ವಾನುಕೂಲಸ್ಯ 'ಬ್ರಾಹ್ಮಣೋನ ಹಂತವ್ಯಃ' ಅಹಿಂಸಾ ಪರವೋ ಧರ್ಮಃ' ಇತ್ಯಾದೇಃ ಪ್ರಾಮಾಣ್ಯಾಂಗೀಕರಣಂ ಚೇತ್ಯಾದಿನಾ ಪರಸ್ಪರ ವಿರುದ್ಧತೇತ್ಯರ್ಥಃ। -ವಾದಿರಾಜೀಯ

ಗಳಲ್ಲಿಯೂ ನ್ಯಾಯ ಒಂದೇ ಆದರೂ ಕೊನೆಯ ನಿರ್ಣಯ ಪರಸ್ಪರ ವಿರುದ್ಧವಾಗಿರುವುದರಿಂದ ಸರಿಯಾದ ಒಂದು ನಿರ್ಣಯಕ್ಕೆ ಬರುವುದು ಅಶಕ್ಯವಾಗುವುದು. ಅದರಿಂದ ಆ ಎಲ್ಲ ಪಕ್ಷಗಳೂ ಅಪ್ರಮಾಣವೆಂದಾಗುವುದು.

ಅಥವಾ ಆ ಆಗಮಗಳಲ್ಲಿ ಶಿವ ಸರ್ವೋತ್ತಮತ್ವ ಮುಂತಾದ ಬೇರೆ ಪಕ್ಷಗಳಲ್ಲಿ ಪೂರ್ವೋತ್ತರ ವಿರೋಧಗಳಿವೆ. ಆದರೆ ಅವೇ ಆಗಮಗಳಲ್ಲಿ ವಿಷ್ಣು ಸರ್ವೋತ್ತಮತ್ವ ವಿಷಯದಲ್ಲಿ 'ಶಿವಶಾಸ್ತ್ರದಲ್ಲಿಯೂ ವಿಷ್ಣುಶಾಸ್ತ್ರಕ್ಕೆ ಅನುಕೂಲವಾದ ಭಾಗಗಳಿವೆ' ಎನ್ನುವಂತೆ ವೈಷ್ಣವ ಭಾಗಗಳಿವೆ. ಅವುಗಳಲ್ಲಿ ಪರಸ್ಪರ ವಿರೋಧವಿಲ್ಲ.[1]

ಇಲ್ಲಿ ಒಂದು ಪ್ರಶ್ನೆಗೆ ಅವಕಾಶವಿದೆ- ಇದು ವಾದ ಜಲ್ಪ ವಿತಂಡಾ ಎಂಬ ಮೂರು ರೀತಿಯ ಚರ್ಚೆಗಳಲ್ಲಿ ಒಂದಾದ ವಿತಂಡಾವಾಗಿದೆ. ಏಕೆಂದರೆ ಸಜ್ಜನರು ದುರ್ಜನರೊಂದಿಗೆ ಮಾಡುವ ಚರ್ಚೆ ಇದು. ಸಜ್ಜನರೊಳಗೇ ಸೌಹಾರ್ದದಿಂದ ನಡೆಯುವ ಚರ್ಚೆಯಲ್ಲ. ಈ ವಿತಂಡಾದಲ್ಲಿ ಸಜ್ಜನರು ದುರ್ಜನರ ಮುಂದೆ ತಮ್ಮ ಪಕ್ಷವನ್ನು ಸಾಧಿಸಿಕೊಳ್ಳಲು ಯತ್ನಿಸಕೂಡದು. 'ತನ್ನ ಸಿದ್ಧಾಂತವನ್ನು ಸಮರ್ಥಿಸಿಕೊಳ್ಳದೆ ಪ್ರತಿವಾದಿಯ ಪಕ್ಷವನ್ನು ನಿರಾಕರಿಸಬೇಕು.' ಹೀಗಿರುವಾಗ ಭೀಮ ಇಲ್ಲಿ ಸ್ವಸಿದ್ಧಾಂತವಾದ ವೇದ ಪ್ರಾಮಾಣ್ಯವನ್ನೂ ವಿಷ್ಣು ಸರ್ವೋತ್ತಮತ್ವವನ್ನೂ ಏಕೆ ಸಾಧಿಸುತ್ತಾನೆ?

ಈ ಪ್ರಶ್ನೆಗೆ ಸಮಾಧಾನವನ್ನು ತಾಮ್ರಪರ್ಣೀಯದಲ್ಲಿ ಹೀಗೆ ಹೇಳಿದೆ. ವಿತಂಡಾವಾದದಲ್ಲಿಯೂ ಪ್ರತಿವಾದಿಯ ಪಕ್ಷವನ್ನು ನಿರಾಕರಿಸಬೇಕಾದರೆ ಸ್ವಪಕ್ಷ ಸಾಧನೆ ಎಷ್ಟು ಆವಶ್ಯಕವೋ ಅಷ್ಟು ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ, 'ವೇದವಿರೋಧ ಬರುವುದರಿಂದ ಶೈವಾದಿ ಆಗಮ ಅಪ್ರಮಾಣ' ಎಂದು ಹೇಳಿದೊಡನೆ, ಪ್ರತಿವಾದಿ, 'ವೇದ ಅಪ್ರಮಾಣ. ಅದರ ವಿರೋಧದಿಂದೇನಾದೀತು?' ಎಂದು ಕೇಳಿದರೆ

---

1. ಯನ್ನ್ಯಾಯೇನ ಶಿವಸ್ಯ ಸರ್ವೋತ್ತಮತ್ವಂ ಶೈವೈರುಚ್ಯತೇ ತನ್ನ್ಯಾಯೇನ ಶಾಕ್ತೈಃ ಶಕ್ತೇಃ ಸರ್ವೋತ್ತಮತ್ವಂ ಸಾಧ್ಯತೇ। ತಥಾಚ ನ್ಯಾಯ ಸಾಮ್ಯೇಪಿ ಪರಸ್ಪರ ವಿರುದ್ಧತ್ವಾತ್ ನಿರ್ಣಾಯಕಾಭಾವತ್ ಸರ್ವಾಪ್ರಾಮಾಣ್ಯಮಿತಿ ಭಾವಃ। ಯದ್ವಾ ವಿಷ್ಣ್ವಧಿಕ್ಯ ಪಕ್ಷಾಪೇಕ್ಷಯಾನ್ಯ ಪಕ್ಷೇಷು ಪೂರ್ವೋತ್ತರಂ ಪರಸ್ಪರ ವಿರುದ್ಧತಾ ವರ್ತತೇ। ತೇನ ತಸ್ಯಾಪ್ರಾಮಾಣ್ಯಮಂಗೀಕಾರ್ಯಂ। 'ಶಿವಶಾಸ್ತ್ರೇಽಪಿ ತದ್ ಗ್ರಾಹ್ಯಂ ಭಗವಚ್ಛಾಸ್ತ್ರಯೋಗಿ ಯತ್' ಇತ್ಯುಕ್ತ ನ್ಯಾಯೇನ ತಚ್ಛಾಸ್ತ್ರಗತ ವೈಷ್ಣವ ಭಾಗಸ್ಯ ನ ವಿರೋಧೋ, ನಾಪ್ರಾಮಾಣ್ಯಮಂಗೀಕಾರ್ಯಂ। -ತಾಮ್ರಪರ್ಣೀಯ

ಮೌನ ತಳೆಯಬೇಕಾದೀತು. ಅದಕ್ಕೆ ವೇದ-ಪ್ರಾಮಾಣ್ಯ ಸಮರ್ಥನೆಯನ್ನು ಮೊದಲಿಗೆ ಮಾಡಬೇಕಾಗುತ್ತದೆ. ಅದರಿಂದ ನ್ಯಾಯಸುಧೆಯಲ್ಲಿ ಹೇಳಿದೆ -'ಅವೈದಿಕನೊಡನೆ ವಿತಂಡಾ ಮಾಡುವಾಗ ಹೇಗೆ? ಎಂದರೆ, ಆಗಮವನ್ನು ಹೇಳಿ ಅದಕ್ಕೆ ಪ್ರಾಮಾಣ್ಯವನ್ನು ಸಮರ್ಥಿಸಬೇಕಾಗುತ್ತದೆ' ಎಂದು. 'ತನ್ನ ಸಿದ್ಧಾಂತವನ್ನು ಸಮರ್ಥಿಸಿಕೊಳ್ಳದೆ' ಎಂಬ ಮಾತಿಗೆ 'ವಾದಜಲ್ಪಗಳಲ್ಲಿ ಹೇಗೋ ಹಾಗೆ ಶಾಸ್ತ್ರೋಕ್ತ ಕ್ರಮದಿಂದ ತನ್ನ ಸಿದ್ಧಾಂತವನ್ನು ಸಮರ್ಥಿಸಬಾರದು' ಎಂದರ್ಥ. ಆದ್ದರಿಂದಲೆ ಐತರೇಯ ಭಾಷ್ಯದಲ್ಲಿ 'ಅಯೋಗ್ಯ ಪುರುಷನಿಗೆ ಉಪದೇಶ ಮಾಡುವುದು ನಾಲ್ಕನೆ ಬಗೆಯ ವಿಷ್ಣುತ್ಯಾಗ' ಎನ್ನುವಲ್ಲಿಯೂ ಶಾಸ್ತ್ರೋಕ್ತ ವಿಧಾನದಿಂದ ಅಯೋಗ್ಯರಿಗೆ ಉಪದೇಶ ಮಾಡುವುದನ್ನೇ ನಿಷೇಧಿಸಿದೆ. ಪರಪಕ್ಷ ದೂಷಣೆಗಾಗಿ ಚೂರುಪಾರು ಸ್ವಸಿದ್ಧಾಂತವನ್ನು ತಿಳಿಸಿದರೆ ದೋಷವಿಲ್ಲ ಎಂದು ತಿಳಿಯಬೇಕು.[1]

ಪೂರ್ವಂ ಹಿ ಗಂಗಾ ಮಮ ವಿಷ್ಣುಪೂಜಾ-
ವಿಘ್ನಾರ್ಥಮಾಯಾದ್ ವಾಮಕರೇಣ ಸಾ ಮೇ।
ನುನ್ನಾ ಪರಸ್ತಾದ್ ಬಹುಯೋಜನಂ ಗತಾ
ಪುರೇ ಕುರೂಣಾಂ ಶಿವ ಆಗತಸ್ತದಾ ॥೨೦॥

ಹಿಂದೆ ಹಸ್ತಿನಾವತಿಯಲ್ಲಿ ನನ್ನ ವಿಷ್ಣುಪೂಜೆಗೆ ವಿಘ್ನ ಮಾಡಲೆಂದು ಗಂಗೆ ಬಂದಳು. ನಾನು ಎಡಗೈಯಿಂದ ದೂರ ತಳ್ಳಿದಾಗ ಅವಳು ಅಲ್ಲಿಂದಾಚೆ ಬಹುಯೋಜನ ಪರ್ಯಂತ ದೂರಕ್ಕೆ ಸರಿದಳು. ಆಗ ಶಿವ ಬಂದ.

ವಿಷ್ಣುಭಕ್ತನೊಬ್ಬನ ಸಾಮರ್ಥ್ಯವೆ ಇಷ್ಟೆಂದರೆ ವಿಷ್ಣುವಿನ ಸಾಮರ್ಥ್ಯ

---

1. ನನ್ವಿಯಂ ಕಥಾ ವಿತಂಡಾ। ವಿತಂಡಾ ತ್ವಸತಾಂ ಸತಾಮಿತಿ ತಲ್ಲಕ್ಷಣ ಲಕ್ಷಿತತ್ವಾತ್। ತತ್ರ ಚ ನ ಸ್ವಪಕ್ಷ ಸಾಧನಂ ಕಾರ್ಯಂ। ಅಪ್ರಕಾಶ್ಯ ಸ್ವಸಿದ್ಧಾಂತಮಸತಾಂ ಪಕ್ಷದೂಷಣಂ ಇತ್ಯುಕ್ತೇಃ। ತಥಾ ಚ ಕಥಮತ್ರ, ವೇದ ಪ್ರಾಮಾಣ್ಯ ಸಾಧನಂ? ವಿಷ್ಣು ಸರ್ವೋತ್ತಮತ್ವ ಸಾಧನಂ? ಇತಿ ಚೇದುಚ್ಯತೇ। ವಿತಂಡಾಯಾಮಪಿ ಯಾವತಾ ಸ್ವಪಕ್ಷ ಸಾಧನೇನ ವಿನಾ ಪರಪಕ್ಷ ದೂಷಣಂ ನ ಘಟತೇ, ತಾವತಃ ಸಾಧನೀಯತ್ವಾತ್। ಅನ್ಯಥಾ ವೇದವಿರೋಧೇನ ಶೈವಾದ್ಯಾಗಮಾಪ್ರಾಮಾಣ್ಯೇಽಭಿಹಿತೇ ತದಪ್ರಾಮಾಣ್ಯ ಶಂಕಾಯಾಮುತ್ತರಾಭಾವ ಪ್ರಸಂಗಾತ್। ಅತ ಏವ ಸುಧಾಯಾಂ 'ನನ್ವವೈದಿಕಂ ಪ್ರತಿ ಕಥಂ? ಆಗಮಂ ಪ್ರಯೋಜ್ಯ ತತ್ ಪ್ರಾಮಾಣ್ಯಂ ಸಾಧನೀಯಂ' ಇತ್ಯುಕ್ತಂ। ವಾದಜಲ್ಪಯೋರಿವ ಶಾಸ್ತ್ರೋದಿತಕ್ರಮಾಪರಿಹಾರೇಣ ಸ್ವಪಕ್ಷಾಪ್ರಕಾಶನಾಭಿಪ್ರಾಯಮಪ್ರಕಾಶ್ಯೇತಿ ವಚನಂ। ಅತ ಏವೈತರೇಯ ಭಾಷ್ಯೇ 'ಚತುರ್ಥೋಽಯೋಗ್ಯ ಪುರುಷೇ। ಉಪದೇಶಃ ಕೇಶವಸ್ಯೇ'ತಿ ಶಾಸ್ತ್ರೋದಿತಕ್ರಮಾನುಸಾರೇಣ ಅಯೋಗ್ಯಾಯೋಪದೇಶಸ್ಯ ಚತುರ್ಥಾಪರಾಧತ್ವಮುಕ್ತಂ। ನತು ಪರಪಕ್ಷ ದೂಷಣಾರ್ಥಂ ವಿಶಕಲಿತತಯಾ ಸ್ವಸಿದ್ಧಾಂತ ಪ್ರಕಾಶನಸ್ಯೇತಿ ಜ್ಞೇಯಂ।

-ತಾಮ್ರಪರ್ಣೀಯ

ಎಷ್ಟಿರಬಹುದು ಎಂಬುದು ಕೈಮುತ್ಯನಾಯದಿಂದ ಊಹಿಸಲು ಬರುತ್ತದೆ ಎನ್ನಲು ಭೀಮಸೇನ ಕೆಲವು ಪ್ರತ್ಯಕ್ಷ ನಿದರ್ಶನಗಳನ್ನು ಹೇಳುತ್ತಾನೆ. ಗಂಗೆಯಲ್ಲಿ ಮಿಂದು ತೀರದಲ್ಲಿ ವಿಷ್ಣು ಪೂಜೆಗೆ ಭೀಮಸೇನ ಕುಳಿತಿದ್ದಾಗ ನದಿಯ ಪ್ರವಾಹ ಉಕ್ಕಿ ಹರಿದು ಪೂಜೆಗೆ ವಿಘ್ನಮಾಡಲು ತೊಡಗಿತು. ಭೀಮ ಎಡಗೈಯಿಂದ ಪ್ರವಾಹವನ್ನು ದೂರಕ್ಕೆ ತಳ್ಳಿದ. ಆಗ ನದಿ ತನ್ನ ಪಾತ್ರವನ್ನೆ ಬದಲಿಸಿ ದೂರಕ್ಕೆ ಸರಿಯಿತು. ಇದು ಪ್ರತ್ಯಕ್ಷ ನಿದರ್ಶನವೆನ್ನುತ್ತಿದ್ದಾನೆ ಭೀಮ.

ಸ ವ್ಯಾಘ್ರರೂಪೀ ಕಪಿಲಾತ್ಮಿಕಾಮುಮಾಂ
ಘರೀಕ್ಷಯನ್ ಹಂತುಮಿವಾದ್ರವದ್ ದ್ರುತಂ ।
ಸ ಮೇ ಯುದ್ಧೇ ವಿಜಿತೋ ಮೂರ್ಛಿತಶ್ಚ
ಗದಾಪ್ರಹಾರಾದಾಸ ಲಿಂಗಾಂತರಸ್ಥಃ ॥೨೧॥

ಶಿವ ನನ್ನನ್ನು ಪರೀಕ್ಷಿಸುವುದಕ್ಕಾಗಿ ಹುಲಿಯ ರೂಪದವನಾಗಿ ಕಪಿಲೆಗೋವಿನ ರೂಪದಲ್ಲಿದ್ದ ಪಾರ್ವತಿಯನ್ನು ಕೊಲ್ಲುವಂತೆ ನಟಿಸುತ್ತ ವೇಗವಾಗಿ ಧಾವಿಸಿದ. ಯುದ್ಧದಲ್ಲಿ ನನ್ನ ಗದಾಪ್ರಹಾರದಿಂದ ಸೋತು ಮೂರ್ಛಿತನಾದ. ಭಯದಿಂದ ಲಿಂಗದೊಳಗೆ ಸೇರಿಕೊಂಡ.

ವ್ಯಾಘ್ರೇಶ್ವರಂ ನಾಮ ಲಿಂಗಂ ಪೃಥಿವ್ಯಾಂ
ಖ್ಯಾತಂ ತದಾ ತದ್ವದನ್ಯತ್ರ ಯುದ್ಧಂ ।
ತೀರೇ ಗೋಮತ್ಯಾ ಹೈಮವತೇ ಗಿರೌ ಹಿ
ಜಿತಸ್ತತ್ರಾಪ್ಯಾಸ ಶಾದೂರ್ಮಲಲಿಂಗಂ ॥೨೨॥

ಆ ಶಿವಲಿಂಗ ಭೂಮಿಯಲ್ಲಿ ವ್ಯಾಘ್ರೇಶ್ವರಲಿಂಗವೆಂದು ಖ್ಯಾತವಾಗಿದೆ. ಅದೇ ರೀತಿ ಇನ್ನೊಂದೆಡೆ ಹಿಮಾಲಯ ಪರ್ವತ ಕಣಿವೆಯಲ್ಲಿ ಗೋಮತೀ ನದೀತೀರದಲ್ಲಿ ಯುದ್ಧ ನಡೆಯಿತು. ಆಗಲೂ ಶಿವ ನನ್ನಿಂದ ಪರಾಜಿತನಾಗಿ ಶಾರ್ದೂಲ ಲಿಂಗನೆನಿಸಿದ.

ಹಿಮಾಲಯದಿಂದ ನೈಮಿಷಾರಣ್ಯದ ಕಡೆಗೆ ಹರಿಯುವ ನದಿ ಗೋಮತಿ ಎಂದು ವಾದಿರಾಜೀಯದಲ್ಲಿ ಉಕ್ತವಾಗಿದೆ.[1] ಗೋಮತೀ ನದೀ ತೀರದಲ್ಲಿಯೂ ಕಪಿಲೆ ಗೋವಿನ ರೂಪದಲ್ಲಿದ್ದ ಪಾರ್ವತಿಯನ್ನು ಹುಲಿಯ ರೂಪದಲ್ಲಿದ್ದ ಶಿವ ಭಯಪಡಿಸಿದ. ಆಗಲೂ ಭೀಮಸೇನ ಶಿವನೊಂದಿಗೆ ಹೋರಾಡಿ ಪರಾಭವಗೊಳಿಸಿದಾಗ ಶಿವಲಿಂಗದೊಳಗೆ ಪ್ರವೇಶಿಸಿ ಶಾರ್ದೂಲ ಲಿಂಗನೆನಿಸಿದನೆಂದು ತಾಮ್ರಪರ್ಣೀಯ

1. ಗೋಮಾತ್ಯಾಃ। ಹಿಮವತ್ಪರ್ವತಾದಾಗತಾಯಾಃ ನೈಮಿಷಾರಣ್ಯಗಾಮಿನ್ಯಾಃ ಗೋಮತ್ಯಾ ಇತ್ಯರ್ಥಃ।
–ವಾದಿರಾಜೀಯ

ಹೇಳಿದೆ.[1] ವ್ಯಾಘ್ರ ಎಂದರೂ ಶಾರ್ದೂಲವೆಂದರೂ ಹುಲಿಯೆ. ಹುಲಿಯ ರೂಪದಿಂದ ಬಂದು ಭೀಮನ ಕಣ್ಣಮುಂದೆ ಎರಡುಬಾರಿ ಗೋರೂಪದ ಪಾರ್ವತಿಯನ್ನು ಆಕ್ರಮಿಸುವಂತೆ ನಟಿಸಿದ್ದ. ಶಿವ. ಭೀಮ ಹುಲಿಯ ಬಾಯಿಂದ ಹಸುವನ್ನು ರಕ್ಷಿಸಲು ಯತ್ನಿಸಿ ಯಶಸ್ವಿಯಾಗುವನೆ ಇಲ್ಲವೆ, ಅವನ ಶಕ್ತಿ ಎಷ್ಟು ಎಂದು ಪರೀಕ್ಷಿಸುವುದಕ್ಕಾಗಿ ಶಿವ ಹೀಗೆ ನಟನೆ ಮಾಡಿ ಸೋತ.

ಏವಂ ಪ್ರತ್ಯಕ್ಷೇ ವಿಷ್ಣುಪದಾಶ್ರಯಸ್ಯ
ಬಲಾಧಿಕ್ಯೇ ಕಿಮು ವಕ್ತವ್ಯಮತ್ರ ।
ವಿಷ್ಣೋರಾಧಿಕ್ಯೇ ಕ್ಷತ್ರಿಯಾಣಾಂ ಪ್ರಮಾಣಂ
ಬಲಂ ವಿಪ್ರೇ ಜ್ಞಾನಮೇವೇತಿ ಚಾಹುಃ ॥೨೩॥

ಹೀಗೆ ವಿಷ್ಣುಪಾದವನ್ನು ಆಶ್ರಯಿಸಿರುವ ನನ್ನ ಬಲವೆ ಹೆಚ್ಚೆಂದು ಪ್ರತ್ಯಕ್ಷ ಕಾಣುತ್ತಿರುವಾಗ ಆ ವಿಷ್ಣುವಿನ ಸರ್ವೋತ್ತಮತ್ವ ವಿಷಯದಲ್ಲಿ ಇನ್ನೇನು ಹೇಳಬೇಕು? ಏಕೆಂದರೆ ಕ್ಷತ್ರಿಯರಲ್ಲಿ ಉತ್ತಮತ್ವಕ್ಕೆ ಬಲವೂ ವಿಪ್ರರಲ್ಲಿ ಉತ್ತಮತ್ವಕ್ಕೆ ಜ್ಞಾನವೂ ಮಾನದಂಡವೆಂದು ಬಲ್ಲವರು ಹೇಳುತ್ತಾರೆ.

ಮಯಾ ಕೇದಾರೇ ವಿಪ್ರರೂಪೀ ಜಿತಶ್ಚ
ರುದ್ರೋಽವಿಶಲ್ಲಿಂಗಮೇವಾಶು ಭೀತಃ ।
ತತಃ ಪರಂ ವೇದವಿದಾಮಗಮ್ಯತಾಂ
ಶಾಪಂ ಪ್ರಾದಾಚ್ಛಂಕರೋ ವ್ರೀಡಿತೋಽತ್ರ ॥೨೪॥

ಕೇದಾರದಲ್ಲಿ ವಿಪ್ರರೂಪಿ ಶಿವ ನನ್ನೊಡನೆ ವಾದ ಯುದ್ಧದಲ್ಲಿ ಸೋತು ಭಯಪಟ್ಟು ಬೇಗನೆ ಲಿಂಗವನ್ನು ಪ್ರವೇಶಿಸಿದ. ಲಜ್ಜಿತನಾಗಿ ಅಂದಿನಿಂದ ಆ ಸ್ಥಳ ವೇದಜ್ಞರಿಗೆ ಅಗಮ್ಯವೆನಿಸಲೆಂದು ಶಾಪವಿತ್ತ.

ವಿಷ್ಣು ಭಕ್ತರಿಗೆ ಮಾತ್ರ ವೇದದಲ್ಲಿ ಅಧಿಕಾರವಿರುವುದರಿಂದ ವೇದಜ್ಞರಾದ ವೈಷ್ಣವರಿಗೆ ಕೇದಾರಯಾತ್ರೆ ನಿಷಿದ್ಧವೆನಿಸಿದೆ. ಇದಕ್ಕೆಕಾರಣ ಶಿವನೇ ಕೊಟ್ಟಿರುವ ಶಾಪ. ಅವನು ವಾಗ್‌ಯುದ್ಧದಲ್ಲಿ ಭೀಮನಿಂದ ಸೋತನೆಂದ ಮೇಲೆ ಬಲದಲ್ಲಿ ಮಾತ್ರವಲ್ಲ ಜ್ಞಾನದಲ್ಲಿಯೂ ಶಿವನಿಗಿಂತ ಭೀಮಸೇನ ಹೆಚ್ಚೆನ್ನುವುದು ಸಿದ್ಧವಾಯಿತು.

---

1. ಹೈಮವತೇ ಗಿರೌ ಗೋಮತ್ಯಾಸ್ತೀರೇ ಕಪಿಲಾತ್ಮಿಕಾಮುಮಾಂ ವಿಭೀಷಯನ್ ವ್ಯಾಘ್ರರೂಪೀ ಶಿವೋ ಜಿತಃ, ಲಿಂಗಂ ವಿವೇಶ। ತತ್ರಾಪಿ ಶಾರ್ದೂಲಲಿಂಗಮಿತಿ ಖ್ಯಾತಿಮಾಪೇತ್ಯರ್ಥಃ।
–ತಾಮ್ರಪರ್ಣೀಯ

'ಈ ಕೇದಾರ ಕ್ಷೇತ್ರಕ್ಕೆ ಬಂದವರು ಜ್ಞಾನಭ್ರಷ್ಟರಾಗಲಿ' ಎಂದು ಮಹಾರುದ್ರನೇ ಶಾಪಕೊಟ್ಟಿದ್ದಾನೆ ಎನ್ನುತ್ತದೆ. ಕನ್ನಡ ಮ.ಭಾ.ತಾ. ನಿರ್ಣಯ.

ಭೀಮಸೇನನಿಗೆ ಗೆಲುವು

ಏವಂ ಪ್ರತ್ಯಕ್ಷೇ ವಿಷ್ಣುಬಲೇ ಪ್ರತೀಪಂ
ಮನೋ ಯಸ್ಯ ಹ್ಯುತ್ತರಂ ಸ ಬ್ರವೀತು ।
ಕ್ರೋಧೋಽಧಿಕಶ್ಚೇತ್ ಕ್ಷಿಪ್ರಮಾಯಾತು ಯೋದ್ಧು-
ಮಿತ್ಯುಕ್ತಾಸ್ತೇಽಭ್ಯಾಯಯುರಾತ್ತಶಸ್ತ್ರಾಃ ॥೨೫॥

ಹೀಗೆ ವಿಷ್ಣುವಿನ ಬಲ ಪ್ರತ್ಯಕ್ಷವಿರುವಾಗ ಯಾರ ಮನಸ್ಸು ಇದನ್ನು ಒಪ್ಪುವುದಿಲ್ಲವೋ ಅವರು ಉತ್ತರ ಹೇಳಲಿ. ಉತ್ತರಿಸಲಾಗದೆ ಕ್ರೋಧವೇ ಹೆಚ್ಚಾಗುವುದಾದರೆ ನನ್ನೊಡನೆ ಹೋರಾಟಕ್ಕೆ ಬೇಗನೆ ಬರಲಿ. ಹೀಗೆ ಭೀಮ ಹೇಳಿದಾಗ ರಾಜರು ಶಸ್ತ್ರಹಿಡಿದು ಯುದ್ಧಕ್ಕೆ ಬಂದರು.

ಭೀಮ ತನ್ನ ಬಲಕ್ಕೇ ಪ್ರತ್ಯಕ್ಷ ನಿದರ್ಶನಗಳನ್ನು ಕೊಟ್ಟಿದ್ದಾನೆ. ವಿಷ್ಣುವಿನ ಬಲ ಪ್ರತ್ಯಕ್ಷ ಎಂಬುದು ಹೇಗೆ? ಎಂದರೆ, ತನ್ನ ಬಲ ವಿಷ್ಣುಬಲದ ಪ್ರತಿರೂಪ. ಆದರಿಂದ ತನ್ನ ಬಲಕ್ಕೆ ನೀಡಿದ ನಿದರ್ಶನಗಳು ವಿಷ್ಣು ಬಲಕ್ಕೇ ನೀಡಿದ ನಿದರ್ಶನಗಳಾಗುತ್ತವೆ ಎಂದು ಅಭಿಪ್ರಾಯ.[1]

ವಿದ್ರಾವ್ಯ ತಾನ್ ಬಾಣಸಂಘೈಃ ಸಮಸ್ತಾನ್
ಜರಾಸುತಂ ಗದಯಾ ಪೋಥಯಿತ್ವಾ।
ಬಾಹುಭ್ಯಾಂ ಚೈನಂ ಪರಿಗೃಹ್ಯಾಶು ವಿಷ್ಣೋಃ
ಪಾದೋತ್ಥಾಯಾಂ ಪ್ರಾಕ್ಷಿಪದ್ ದೇವನದ್ಯಾಂ ॥೨೬॥

ಭೀಮ ಅವರೆಲ್ಲರನ್ನೂ ಬಾಣ ಸಮೂಹಗಳಿಂದ ಹೊಡೆದೋಡಿಸಿ ಜರಾಸಂಧನನ್ನೂ ಗದೆಯಿಂದ ಹೊಡೆದು ಕೆಡಹಿ ಬಾಹುಗಳಿಂದ ಹಿಡಿದು ವಿಷ್ಣುಪಾದೋದ್ಭವೆಯಾದ ದೇವನದಿಯಲ್ಲಿ ಹಾಕಿದ.

ಭೀಮಸೇನ ಜರಾಸಂಧನ ಕೈಕಾಲು ಕಟ್ಟಿ ಭಾಗೀರಥಿಯೊಳಗೆ ಬಿಸ್ಟುಕೊಟ್ಟನು. ಭಾಗೀರಥಿ ಹಿಮವತ್ಪರ್ವತದಿಂದ ಕೆಳಗೆ ಬೀಳುವಾಗ ಮಹಾಶಬ್ದವಾಗತಿಹೋದು. ಭಾಗೀರಥೀ ಶಬ್ದ ಕಿವಿಗೆ ಬೀಳಬಾರದೆಂದು

---

1. ಆಧಿಕ್ಯೇ ವಿಪ್ರತಿಪನ್ನಂ ಪ್ರತಿ ಸ್ವಬಲಮುಕ್ತ್ವಾ 'ವಿಷ್ಣುಬಲೇ' ಇತಿ ಕಥಮುಚ್ಯತೇ ಇತಿ ಚೇತ್ ಸತ್ಯಂ। ಸ್ವಬಲಸ್ಯಾಪಿ ವಿಷ್ಣುಬಲ ಪ್ರತಿಬಿಂಬತ್ವಾತ್ ತಥೇತಿ ಯುಜ್ಯತೇ। -ಜನಾರ್ದನೀಯ

ಭೇರಿ ಬಾರಸ್ತಿಹ. ಹನ್ನೆರಡು ತಿಂಗಳು ಇರುಳು ಹಗಲು ಭೇರಿ ಶಬ್ದದಿಂದ ಇಹೋ ಜರಾಸಂಧನ್ನ ಭಾಗೀರಥೀ ಒಳಗೇ ಭೀಮಸೇನ ಬಿಸ್ಟಲಿಕ್ಕೆ 'ವಿಷ್ಣು ಪಾದೋದಕದಲ್ಲಿ ಬಿದ್ದೆನಲ್ಲ!' ಎಂದು ಜರಾಸಂಧನ ದೇಹಕ್ಕೆ ಬೆಂಕಿ ಹಚ್ಚಿಧಾಂಗಾಯಿತು. ಜರಾಸಂಧ ಭಾಗೀರಥಿಯೊಳಗೆ ಬಿದ್ದರೂ ಸರಿಯೆ ತಮಸ್ಸಿನ ಸರಿ। ದುಃಖವಾಯಿತು. ಅವೈಷ್ಣವರು ಭಾಗೀರಥೀ ತೀರದಲ್ಲಿದ್ದರೂ ನಾರಾಯಣನಲ್ಲಿ ಭಕ್ತಿ ಇಲ್ಲದೇ ಇದ್ದವರು, ಅಶನ ವ್ಯಸನ ಮಾಡಿಕೊಂಡವರಾಗಿ ಭಾಗೀರಥಿ ಏನು ಫಲ ಕೊಟ್ಟಾಳು? ಅವರಿಗೆ ಕಾಶೀಕ್ಷೇತ್ರ ಕಂಟಕ ಸದೃಶ. ಸರ್ವಥಾ ಫಲಕೊಡದು! -ಕನ್ನಡ ಮ.ಭಾ.ತಾ.ನಿರ್ಣಯ

ಸ ವ್ರೀಡಿತಃ ಪ್ರಯಯೌ ಮಾಗಧಾಂಶ್ಚ
ಭೂಪೈಃ ಸಮೇತೋ ಭೀಮಸೇನೋ ರಥಂ ಸ್ವಂ ।
ಆರುಹ್ಯ ಕಾಶೀಶ್ವರಪೂಜಿತಶ್ಚ
ಯಯೌ ಕಾಲ್ಯಾ ಶಕ್ರಸನಾಮಕಂ ಪುರಂ ॥೨೭॥

ಜರಾಸಂಧ ನಾಚಿ ರಾಜರೊಂದಿಗೆ ಮಗಧ ದೇಶಕ್ಕೆ ಹೊರಟು ಹೋದ. ಭೀಮ

ಕಾಶೀರಾಜನಿಂದ ಸತ್ಕೃತನಾಗಿ ಕಾಳೀದೇವಿಯೊಂದಿಗೆ ತನ್ನ ರಥವನ್ನೇರಿ ಇಂದ್ರಪ್ರಸ್ಥವನ್ನು ಸೇರಿದ.

ತಸ್ಯಾಂ ತ್ರಿಲೋಕಾಧಿಕರೂಪಸದ್ಗುಣೈ-
ರಾಸಮ್ಮಿ ತಾಯಾಂ ರಮಮಾಣಃ ಸುತಂ ಚ ।
ಶರ್ವತ್ರಾತಂ ನಾಮಾಜನಯತ್ ಪುರಾ ಯಃ
ಸಮಾನವಾಯುರ್ಬಲವೀರ್ಯಯುಕ್ತಃ ॥೨೮॥

ಮೂಲೋಕದಲ್ಲಿ ಅಧಿಕವಾದ ರೂಪ ಸದ್ಗುಣಗಳಿಂದ ತನಗೆ ಅನುರೂಪಳಾಗಿದ್ದ ಕಾಲೀದೇವಿಯಲ್ಲಿ ರಮಿಸುತ್ತ ಭೀಮಸೇನ ಶರ್ವತ್ರಾತನೆಂಬ ಹೆಸರಿನ ಮಗನನ್ನು ಹುಟ್ಟಿಸಿದ. ಶರ್ವತ್ರಾತ ಹಿಂದೆ ಬಲವೀರ್ಯಯುಕ್ತನಾದ ಸಮಾನ ವಾಯು.

ಪ್ರಾಣ ,ಅಪಾನ ವ್ಯಾನ ಉದಾನ ಸಮಾನ ಎಂದು ಐದು ಮಂದಿ ವಾಯುಪುತ್ರರಿದ್ದಾರೆ. ಅವರಲ್ಲಿ ಸಮಾನ ವಾಯು ಶರ್ವತ್ರಾತನೆಂಬ ಹೆಸರಿನಿಂದ ಜನಿಸಿದ್ದಾನೆ.

ಶತಧನ್ವ ಸಂಹಾರ

ಕೃಷ್ಣೋಽಪಿ ಗತ್ವಾ ದ್ವಾರವತೀಂ ಸರಾಮಃ
ಸತ್ಯಾಪಿತುರ್ವಧಕರ್ತಾರಮೇವ ।

ಶತಧನ್ವಾನಂ ಹಂತುಮೈಚ್ಛತ್ಸ ಚೈವ
ಯಯಾಚೇಕ್ರೂರಂ ಕೃತವರ್ಮಾನುಯುಕ್ತಂ ॥೨೯॥

ಶ್ರೀಕೃಷ್ಣ ಬಲರಾಮನೊಂದಿಗೆ ಇಂದ್ರಪ್ರಸ್ಥದಿಂದ ದ್ವಾರಕೆಗೆ ಹೋಗಿ ಸತ್ಯಭಾಮೆಯ ತಂದೆಯ ಹಂತಕನಾದ ಶತಧನ್ವನನ್ನು ಕೊಲ್ಲಲು ಸಂಕಲ್ಪಿಸಿದ. ಇದನ್ನು ತಿಳಿದ ಶತಧನ್ವ ಸಹಾಯಕ್ಕಾಗಿ ಅಕ್ರೂರನನ್ನೂ ಕೃತವರ್ಮನನ್ನೂ ಬೇಡಿದ.

ತಾವಬ್ರೂತಾಂ ಸರ್ವಲೋಕೈಕಕರ್ತು
ರ್ನಾವಾಂ ವಿರೋಧಂ ಮನಸಾಪಿ ಕುರ್ವಃ।
ಕೃಷ್ಣಸ್ಯ ಸರ್ವೇಶಿತುರಿತ್ಯನೂಕ್ತ
ಆರುಹ್ಯ ಚಾಶ್ವೀಂ ಭಯತಃ ಪರಾದ್ರವತ್ ॥೩೦॥

ಅಕ್ರೂರ ಕೃತವರ್ಮರು ಹೇಳಿದರು -'ಸಕಲ ಲೋಕಗಳಿಗೆ ಮುಖ್ಯ ಜನಕನೂ ಸರ್ವೇಶ್ವರನೂ ಆದ ಶ್ರೀಕೃಷ್ಣನಿಗೆ ನಾವು ಮನಸಿನಲ್ಲಿಯೂ ವಿರೋಧ ಮಾಡಲಾರೆವು.' ಅವರು ಹೀಗೆ ಹೇಳಿದಾಗ ಶತಧನ್ವ ಭಯದಿಂದ ಸ್ಯಮಂತಕಮಣಿಯನ್ನು ಅಕ್ರೂರನ ಕೈಯಲ್ಲಿಟ್ಟು ಹೆಣ್ಣು ಕುದುರೆ ಏರಿ ಪಲಾಯನ ಮಾಡಿದ.

ಅನ್ವೇವ ತಂ ಕೃಷ್ಣರಾಮೌ ರಥೇನ
ಯಾತೌ ಶತಂ ಯೋಜನಾನಾಂ ದಿನೇನ।
ಗತ್ವಾ ಮಿಥಿಲಾಯಾಂ ಬಡವಾಯಾಂ ಪದೈವ
ಸಂಪ್ರಾದ್ರವತ್ಕೃಷ್ಣ ಏನಂ ಪದಾಗಾತ್ ॥೩೧॥

ಶತಧನ್ವನನ್ನು ಬೆನ್ನಟ್ಟಿ ಕೃಷ್ಣರಾಮರು ರಥದಿಂದ ಹೊರಟರು. ಶತಧನ್ವ ಒಂದೇ ದಿನದಲ್ಲಿ ನಿರಂತರ ನೂರು ಯೋಜನ ದೂರ ಹೋಗಿ ಮಿಥಿಲಾನಗರದ ಬಳಿ ಕುದುರೆ ಸತ್ತಾಗ ಕಾಲುನಡಿಗೆಯಿಂದ ಓಡಿದ. ಕೃಷ್ಣ ಬಲರಾಮನನ್ನು ಬಿಟ್ಟು ಒಬ್ಬನೇ ಕಾಲ್ನಡಿಗೆಯಿಂದ ಅವನನ್ನು ಬೆನ್ನಟ್ಟಿದ.

ಛಿತ್ವಾ ಶಿರಸ್ತಸ್ಯ ಚಕ್ರೇಣ ಕೃಷ್ಣೋ
ಜಾನನ್ನಕ್ರೂರೇ ಮಣಿಮೇತೇನ ದತ್ತಂ।
ಅಪ್ಯಜ್ಞವಲ್ಲೋಕವಿಡಂಬನಾಯ
ಪರೀಕ್ಷ್ಯ ವಾಸೋಽತ್ರ ನೇತ್ಯಾಹ ರಾಮಂ ॥೩೨॥

ಶ್ರೀಕೃಷ್ಣ ಚಕ್ರದಿಂದ ಶತಧನ್ವನ ಶಿರವನ್ನು ತರಿದು, ಅವನು ಸ್ಯಮಂತಕಮಣಿಯನ್ನು ಅಕ್ರೂರನ ಕೈಯಲ್ಲಿ ಕೊಟ್ಟಿರುವನೆಂದು ಸ್ವತಃ ತಿಳಿದಿದ್ದರೂ ಅಜ್ಞನಂತೆ ಲೋಕವಿಡಂಬನೆಗಾಗಿ ಅವನು ಉಟ್ಟ ವಸ್ತ್ರವನ್ನು ಪರೀಕ್ಷಿಸಿ, ಅಷ್ಟರೊಳಗೆ ಅಲ್ಲಿಗೆ ಬಂದ ಬಲರಾಮನಿಗೆ 'ಅಣ್ಣ, ಇವನಲ್ಲಿ ಮಣಿ ಇಲ್ಲ. ವ್ಯರ್ಥವಾಗಿ ಕೊಂದು ಬಿಟ್ಟೆ' ಎಂದು ಹೇಳಿದ.

ಅವಿಶ್ವಾಸಾತ್ ಸ ತು ಸಕ್ರೋಧ ಏವ
ಯಯೌ ವಿದೇಹಾನವಸತ್ ಪಂಚ ಚಾಬ್ದಾನ್ ।
ಜಾನನ್ ಪಾರ್ಥೇಭ್ಯೋಽಹಾರ್ಯತಾಂ ಕೇಶವಸ್ಯ
ವಶೀಕರ್ತುಂ ಧಾರ್ತರಾಷ್ಟ್ರೋ ಬಲಂ ಗಾತ್ ॥೩೩॥

ಬಲರಾಮ ಕೃಷ್ಣನ ಮಾತಿನಲ್ಲಿ ಅವಿಶ್ವಾಸದಿಂದ ಕುಪಿತನಾಗಿ 'ಮಣಿ ಯಾರಲ್ಲಿ ಇದೆ, ಶೋಧ ಮಾಡು ಹೋಗು. ನಾನು ವಿದೇಹದಲ್ಲಿಯೆ ಇರುವೆ' ಎಂದು ವಿದೇಹ ನಗರಕ್ಕೇ ಹೊರಟುಹೋದ. ಐದು ವರ್ಷಕಾಲ ಅಲ್ಲಿಯೇ ವಾಸಮಾಡಿದ. ಶ್ರೀಕೃಷ್ಣನನ್ನು ಪಾಂಡವರಿಂದ ತನ್ನಡೆಗೆ ಸೆಳೆದುಕೊಳ್ಳಲು ಎಂದೂ ಸಾಧ್ಯವಿಲ್ಲವೆಂದು ಮನಗಂಡಿದ್ದ ದುರ್ಯೋಧನ ಈ ಸಮಯದಲ್ಲಿ ಬಲರಾಮನನ್ನು ವಶಪಡಿಸಿಕೊಳ್ಳಬೇಕೆಂದು ವಿದೇಹನಗರಕ್ಕೆ ಹೋದ.

ಕೃಷ್ಣರಾಮರೊಳಗೆ ಈಗ ಒಡಕು ಉಂಟಾಗಿದೆ. ಇದರ ಲಾಭವನ್ನು
ತಾನು ಪಡೆಯಬೇಕು ಎಂದು ದುರ್ಯೋಧನ ಬಲರಾಮನ ಬಳಿಗೆ ಬಂದ.

ಕೌರವನಿಗೆ ಸುಭದ್ರೆಯಲ್ಲಿ ಮೋಹ

ಬಭೂವ ಶಿಷ್ಯೋಽಸ್ಯ ತಥಾ ಗದಾಯಾ-
ಮಸನ್ನಿಧಾನಂ ಕೇಶವಸ್ಯ ಪ್ರತೀಕ್ಷನ್ ।
ತದಾ ಯಯಾಚೇ ಭಗಿನೀಂ ಚ ತಸ್ಯ
ಸ ಚ ಪ್ರತಿಜ್ಞಾಮಕರೋತ್ ಪ್ರದಾನೇ ॥೩೪॥

ದುರ್ಯೋಧನ ಕೃಷ್ಣನ ಅನುಪಸ್ಥಿತಿಯನ್ನು ಕಂಡು ಬಲರಾಮನಿಗೆ ಗದಾಯುದ್ಧದಲ್ಲಿ ಶಿಷ್ಯನಾದ ಮತ್ತು ಅವನ ತಂಗಿಯಾದ ಸುಭದ್ರೆಯನ್ನು ಬೇಡಿದ. ಬಲರಾಮ ಕೊಡುವುದಾಗಿ ಮಾತನ್ನೂ ಕೊಟ್ಟ.

ಜ್ಯೇಷ್ಠಂ ಹ್ಯೇನಂ ಕೇಶವೋ ನಾತಿವರ್ತೇತ್
ಇತ್ಯೇವ ಮೇನೇ ಧಾರ್ತರಾಷ್ಟ್ರಃ ಸ ತಸ್ಮಾತ್ ।
ಜಗ್ರಾಹ ಹಸ್ತಂ ದಕ್ಷಿಣಂ ಸತ್ಯಹೇತೋ-
ರ್ದದೌ ಚ ರಾಮಃ ಕರಮಸ್ಮೈ ಹಲಾಂಕಂ ॥೩೫॥

ಶ್ರೀಕೃಷ್ಣ ಅಣ್ಣನಾದ ಬಲರಾಮನ ಮಾತನ್ನು ಮೀರಲಾರ ಎಂದೇ ದುರ್ಯೋಧನ ತಿಳಿದಿದ್ದ. ಅದರಿಂದ ಬಲರಾಮನಿಂದ ಶಪಥ ಮಾಡಿಸಿಕೊಳ್ಳುವುದಕ್ಕಾಗಿ ಅವನ ಬಲಗೈಯನ್ನು 'ಕೊಡು' ಎನ್ನುತ್ತ ಹಿಡಿದ. ಬಲರಾಮ ಹಲಚಿಹ್ನೆಯುಳ್ಳ ಆ ಹಸ್ತವನ್ನು ದುರ್ಯೋಧನನಿಗೆ ಕೊಟ್ಟ.

ದುರ್ಯೋಧನ ಬಲರಾಮನಿಂದ ಮಾತು ತೆಗೆದುಕೊಳ್ಳುವಾಗ

ಅವನ ಬಲಗೈಯನ್ನು ಹಿಡಿದ. ಏಕೆಂದರೆ ಕ್ಷತ್ರಿಯರು ಆಯುಧ ಹಿಡಿದ ಕೈಯಿಂದ ಶಪಥ ಮಾಡುವುದು ರೂಢಿ. ಅದರಿಂದ ಬಲರಾಮ ಹಲಾಯುಧವನ್ನು ಹಿಡಿದ ಬಲಗೈಯನ್ನು ದುರ್ಯೋಧನನ ಕೈಯ ಮೇಲಿಟ್ಟು ಸುಭದ್ರೆಯನ್ನು ಕೊಡುವುದಾಗಿ ಪ್ರತಿಜ್ಞೆ ಮಾಡಿದ ಎಂದು ಜನಾರ್ದನೀಯ ವರದರಾಜೀಯಗಳಲ್ಲಿ ಹೇಳಿದೆ.[1]

ಹಲಚಿಹ್ನೆ ಎಂದರೆ ಅಂಗೈಯಲ್ಲಿ ಹುಟ್ಟಿದಂದಿನಿಂದ ಇದ್ದ ಹಲಾಯುಧದ ರೇಖೆ. 'ಮೂಲರೂಪದಲ್ಲಿರುವ ದೇಹಲಕ್ಷಣಗಳು ಅವತಾರದಲ್ಲಿಯೂ ಬರುತ್ತವೆ' ಎಂಬಂತೆ ಸ್ವರೂಪಲಕ್ಷಣಯುಕ್ತವಾದ ಅದ್ಭುತವಾದ ಹಸ್ತವನ್ನು ಬಲರಾಮ ಅಯೋಗ್ಯನಾದ ದುರ್ಯೋಧನನಿಗೆ ನೀಡಿದ! ಎಂಥ ಅನೌಚಿತ್ಯ!' ಎಂದು ತಿಳಿಸುವುದಕ್ಕಾಗಿ ಹೀಗೆ ಹೇಳಿದೆ ಎನ್ನುತ್ತದೆ ತಾಮ್ರಪರ್ಣೀಯ.[2]

ರೂಪೇಣ ತಸ್ಯಾ ಮೋಹಿತೋ ಧಾರ್ತರಾಷ್ಟ್ರೋ
ವಿಶೇಷತಃ ಕೃಷ್ಣರಾಮೌ ಭಗಿನ್ಯಾಃ।
ಸ್ನೇಹಾದ್ವಶಂ ಯಾಸ್ಯತ ಇತ್ಯಗೃಹ್ಣಾತ್
ಹಸ್ತಂ ಹಲಾಂಕಂ ಹಲಿನೋ ರಿಪುಘ್ನಂ ॥೩೬॥

ದುರ್ಯೋಧನ ಸುಭದ್ರೆಯ ರೂಪ ಸೌಂದರ್ಯಕ್ಕೆ ಮೋಹಿತನಾಗಿದ್ದ. ವಿಶೇಷವಾಗಿ ಕೃಷ್ಣರಾಮರು ತಂಗಿಯ ಮೇಲಿನ ಮಮತೆಯಿಂದ ತನ್ನ ವಶಕ್ಕೇ ಬರುತ್ತಾರೆ ಎಂದು ಶತ್ರುಸಂಹಾರಕವಾದ ಹಲಚಿಹ್ನಯುಕ್ತವಾದ ಬಲರಾಮನ ಹಸ್ತವನ್ನು ಅವನು ಹಿಡಿದಿದ್ದ.

'ವಿಶೇಷವಾಗಿ' ಎಂಬುದನ್ನು ವಿಶೇಷವಾಗಿ ಸುಭದ್ರೆಯ ರೂಪಕ್ಕೆ ಮೋಹಿತನಾಗಿದ್ದ ಎಂದೂ ಅನ್ವಯಿಸಬಹುದು. ಕುಂತಿಗಿಂತಲೂ ವಿಶೇಷವಾಗಿ ತಂಗಿಯ ಮೇಲೆ ಕೃಷ್ಣರಾಮರಿಗೆ ಪ್ರೀತಿ ಎಂದೂ ಅನ್ವಯಿಸಬಹುದು. 'ಶತ್ರು ಸಂಹಾರಕ' ಎಂಬ ವಿಶೇಷಣ 'ಶತ್ರು ಸಂಹಾರಕ ಹಸ್ತವನ್ನು ಶತ್ರು ಹಿಡಿದುಕೊಂಡ! ಈಶ್ವರೇಚ್ಛೆ ಹಾಗಿತ್ತು' ಎಂದು

---

1. ಕ್ಷತ್ರಿಯಾಃ ಆಯುಧಹಸ್ತೇನ ಶಪಥಂ ಕುರ್ವಂತೀತಿ ಸೂಚಯಿತುಂ ಹಲಾಂಕಮಿತ್ಯುಕ್ತಂ।
-ಜನಾರ್ದನೀಯ

ಭಟಾಃ ಸಾಯುಧೇನ ಹಸ್ತೇನ ಶಪಥಂ ಕುರ್ವಂತೀತಿ ನೀತ್ಯಾಹಲಾಂಕಮಿತ್ಯುಕ್ತಂ।-ವರದರಾಜೀಯ

2. ಹಲಾಂಕಮಿತಿ ಹಲರೇಖಾವದಿತ್ಯರ್ಥಃ। 'ದೇಹಸ್ಯ ಲಕ್ಷಣಂ ನೈವ ಭೂಮಾವಪ್ಯನ್ಯಥಾ ಭವೇತ್' ಇತ್ಯುಕ್ತರೀತ್ಯಾ ಸ್ವರೂಪಲಕ್ಷಣಯುಕ್ತಮದ್ಭುತಂ ಹಸ್ತಮಯೋಗ್ಯಾಯ ದದಾವಿತ್ಯನೌಚಿತ್ಯ ದ್ಯೋತನಾಯೈವಮುಕ್ತಂ। -ತಾಮ್ರಪರ್ಣೀಯ

ತಿಳಿಸುತ್ತದೆ. ಟೀಕೆಯಲ್ಲಿ 'ನನ್ನ ಮಾತು ಸುಳ್ಳಾದರೆ ಶತ್ರುಸಂಹಾರಕ್ಕೆ ನನ್ನ ಈ ಹಲಾಯುಧ ಅಶಕ್ತವೆಂದೆನಿಸೀತು' ಎನ್ನುತ್ತ ಬಲರಾಮ ಶಪಥಗೈದನೆಂದು ತಿಳಿಸಲು 'ಶತ್ರುಸಂಹಾರಕ' ವಿಶೇಷಣ ಎನ್ನಲಾಗಿದೆ ಎನ್ನುತ್ತದೆ ತಾಮ್ರಪರ್ಣೀಯ.

ವಿಶೇಷವಾಗಿ ಕೃಷ್ಣರಾಮರು ತನಗೇ ವಶರಾಗುವರೆಂದು ದುರ್ಯೋಧನ ಬಲರಾಮನ ಕೈಹಿಡಿದನೆಂದು ಜನಾರ್ದನೀಯ ವರದರಾಜೀಯಗಳಲ್ಲಿ ಹೇಳಿದೆ.

ಜಾತಾ ದೇವಕ್ಯಾಂ ಸಾ ಸುಭದ್ರೇತಿ ನಾಮ್ನಾ
ಭದ್ರಾ ರೂಪೇಣಾನಕದುಂದುಭೇಸ್ತಾಂ।
ಕೃತ್ವಾ ಪುತ್ರೀಂ ರೋಹಿಣೀ ಸ್ವಾಮರಕ್ಷತ್
ಪೂರ್ವಂ ತು ಯಾಕಸೀತ್ ತ್ರಿಜಟೈವ ನಾಮ್ನಾ ॥೩೭॥

ಹಿಂದೆ ತ್ರಿಜಟಾ ಎಂಬ ಹೆಸರಿನ ರಾಕ್ಷಸಿಯಾಗಿದ್ದವಳು ವಸುದೇವನಿಂದ ದೇವಕಿಯಲ್ಲಿ ಸುಭದ್ರಾ ಎಂಬ ಹೆಸರಿನಿಂದ ಮಂಗಳಕರ ರೂಪದಿಂದ ಜನಿಸಿದಳು. ಅವಳನ್ನು ರೋಹಿಣಿ ತನ್ನ ಮಗಳನ್ನಾಗಿ ಮಾಡಿಕೊಂಡು ಸಲಹಿದಳು.

ಸೀತಾಯಾಃ ಪ್ರಾಙ್ ನಿತ್ಯಶುಶ್ರೂಷಣಾತ್ ಸಾ
ಬಭೂವ ವಿಷ್ಣೋರ್ಭಗಿನೀ ಪ್ರಿಯಾ ಚ।
ಉಮಾವೇಶಾದ್ ರೂಪಗುಣೋಪಪನ್ನಾ
ಪದ್ಮೇಕ್ಷಣಾ ಚಂಪಕದಾಮಗೌರೀ ॥೩೮॥

ಸೀತಾದೇವಿಗೆ ನಿತ್ಯವೂ ಸೇವೆ ಮಾಡಿದ್ದರಿಂದ ತ್ರಿಜಟೆ ಕೃಷ್ಣನಿಗೆ ಪ್ರೀತಿಯ ತಂಗಿಯಾಗಿ ಹುಟ್ಟಿದಳು. ಪಾರ್ವತಿಯ ಆವೇಶದಿಂದ ರೂಪಗುಣಸಂಪನ್ನೆಯಾಗಿ ಕಮಲದಂಥ ಕಣ್ಣುಳ್ಳವಳೂ ಸಂಪಿಗೆ ಮಾಲೆಯಂತೆ ಹೊಂಬಣ್ಣದವಳೂ ಆಗಿದ್ದಳು.

ತ್ರಿಜಟೆ ಸೀತಾದೇವಿಗೆ ಅಶೋಕವನದಲ್ಲಿ ಮಾತ್ರವಲ್ಲದೆ ಅಯೋಧ್ಯೆಯಲ್ಲಿಯೂ ಸದಾ ಸೇವೆ ಮಾಡಿದ್ದಳು. ಲಂಕೆಯಿಂದ ಸೀತೆಯ ಜೊತೆಗೇ ಅಯೋಧ್ಯೆಗೆ ಅವಳು ಬಂದಿದ್ದಳು. –ತಾಮ್ರಪರ್ಣೀಯ[1].

ಸ್ಯಮಂತಕಮಣಿ ಅಕ್ರೂರನಿಗೇ ಇರಲಿ

ಏತತ್ ಕೃತ್ವಾ ಧೃತರಾಷ್ಟ್ರಾತ್ಮಜಃ ಸ
ಯಯೌ ಕುರೂನ್ ನಿವಸತ್ಯತ್ರ ರಾಮೇ।

1. ನಿತ್ಯ ಶುಶ್ರೂಷಣಾದಿತಿ। ಲಂಕಾತಃ ಸೀತಯಾ ಸಹಾಯೋಧ್ಯಾಂ ಪ್ರತಿ ತ್ರಿಜಟಾಯಾ ಆಗತತ್ವಾದಿತಿ ಭಾವಃ। –ತಾಮ್ರಪರ್ಣೀಯ.

ಕೃಷ್ಣೋಽಕ್ರೂರಂ ವಿವಸಂತಂ ಭಯೇನ
ಸಹಾರ್ದಿಕ್ಯಂ ಚಾನಯಿತ್ವಾ ಜಗಾದ ॥೩೯॥

ದುರ್ಯೋಧನ ಬಲರಾಮನಿಂದ ಹೀಗೆ ವಾಗ್ದಾನ ಪಡೆದು ಹಸ್ತಿನಾವತಿಗೆ ಹೊರಟುಹೋದ. ಬಲರಾಮ ವಿದೇಹನಗರದಲ್ಲಿದ್ದಾಗ ಇತ್ತ ಶ್ರೀಕೃಷ್ಣ ತನ್ನ ಭಯದಿಂದ ದೇಶಾಂತರದಲ್ಲಿ ವಾಸಮಾಡುತ್ತಿದ್ದ ಅಕ್ರೂರಕೃತವರ್ಮರನ್ನು ದ್ವಾರಕೆಗೆ ಕರೆಯಿಸಿ ಹೇಳಿದ.

ಅಕ್ರೂರ ಊರುಬಿಟ್ಟ ಕಾರಣ ದ್ವಾರಕೆಯಲ್ಲಿ ದುರ್ಭಿಕ್ಷ ರೋಗಾದಿಗಳಾದುವಂತೆ! ಕೃಷ್ಣನಿಗೆ ಅಪವಾದ ಬಂದುದೇ ಅದಕ್ಕೆ ನಿಜವಾದ ಕಾರಣವಾಗಿತ್ತು.

ಆನೀಯ ರಾಮಂ ಚ ಸಮಸ್ತಸಾತ್ವತಾಂ
ಯದಾವಾದೀತ್ ಕೇಶವಃ ಸನ್ನಿಧಾನೇ ।
ಮಣಿಸ್ತ್ವಯ್ಯಾಸ್ತೇ ದರ್ಶಯೇತ್ಯೇವ ಭೀತ-
ಸ್ತದಾಕ್ರೂರೋಽದರ್ಶಯದ್ ರತ್ನಮಸ್ಮೈ ॥೪೦॥

ಶ್ರೀಕೃಷ್ಣ ಬಲರಾಮನನ್ನೂ ದ್ವಾರಕೆಗೆ ಕರೆಸಿ ಸಮಸ್ತ ಯಾದವರ ಸಮಕ್ಷಮದಲ್ಲಿ ಅಕ್ರೂರನಿಗೆ ನಯವಾಗಿ ಹೇಳಿದ 'ಸ್ಯಮಂತಕ ಮಣಿ ನಿನ್ನಲ್ಲಿ ಇದೆ. ತೋರಿಸು' ಎಂದು. ಆಗ ಭೀತನಾದ ಅಕ್ರೂರ ಮಣಿಯನ್ನು ತೆಗೆದು ತೋರಿಸಿದ.

ಅವ್ಯಾಜತಾಮಾತ್ಮನೋ ದರ್ಶಯಿತ್ವಾ
ಹಲಾಯುಧೇ ಕೇಶವಸ್ತಸ್ಯ ಜಾನನ್ ।
ರತ್ನಾಕಾಂಕ್ಷಾಮುಗ್ರಸೇನಸ್ಯ ಚೈವ
ಮಾತುಶ್ಚ ಸಾಂಬಸ್ಯ ಪುನರ್ಬಭಾಷೇ ॥೪೧॥

ಶ್ರೀಕೃಷ್ಣ ಹೀಗೆ ತನ್ನ ನಿಷ್ಕಪಟತನವನ್ನು ಬಲರಾಮನಿಗೆ ತೋರಿಸಿ ಕೊಟ್ಟು ಬಲರಾಮನಿಗೂ ಉಗ್ರಸೇನನಿಗೂ ಜಾಂಬವತಿಗೂ ಮಣಿಯ ಮೇಲೆ ಆಸೆ ಇದೆ ಎಂದು ತಿಳಿದು ಪುನಃ ನುಡಿದ.

ದ್ವಾರಕೆಯ ಒಳಿತಿಗಾಗಿ ಶ್ರೀ ಕೃಷ್ಣ ಹೀಗೆ ಅಪವಾದ ಕಳೆದುಕೊಂಡ.

ಆಸ್ತಾಮಕ್ರೂರೇ ಮಣಿರನ್ಯೈರಧಾರ್ಯಃ
ಸದಾ ಯಜ್ವಾದ್ ದಾನಪತೇಃ ಸ ಧಾರ್ಯಃ ।
ನ ಸತ್ಯಾ ಕೃಷ್ಣಾವಾಂಛಿತಂ ಕಿಂಚಿದಿಚ್ಛೇತ್
ತಥಾಪಿ ತಸ್ಯಾ ಯೋಗ್ಯ ಇತ್ಯಾಹ ಕೃಷ್ಣಃ ॥೪೨॥

'ಸ್ಯಮಂತಕ ಮಣಿ ಅಕ್ರೂರನಲ್ಲಿಯೇ ಇರಲಿ. ಏಕೆಂದರೆ ಅವನು ಸದಾಯಜ್ಞ ಮಾಡುವುದರಿಂದ ಅದು ಅವನಿಗೇ ಧಾರಣೆಗೆ ಯೋಗ್ಯ. ಇನ್ನೊಬ್ಬರಿಗೆ ಧಾರಣೆಗೆ

ಯೋಗ್ಯವಲ್ಲ' ಎಂದ ಕೃಷ್ಣ. ಸತ್ಯಭಾಮೆ ಕೃಷ್ಣನಿಗೆ ಬೇಡವಾದುದನ್ನು ತಾನು ಏನನ್ನೂ ಬಯಸಲಾರಳು. ಆದರೂ ಕೃಷ್ಣ 'ಮಣಿ ವಸ್ತುತಃ ಸತ್ಯಭಾಮೆಗೇ ಯೋಗ್ಯ' ಎಂದೂ ನುಡಿದ.

ಬಲರಾಮನಿಗೆ ಮಣಿಯ ಮೇಲೆ ಬಹಳ ಆಸೆ ಇದ್ದಿತು. ಅದರ ಸಲುವಾಗಿಯೇ ಆತ ಕೃಷ್ಣನಲ್ಲಿ ಕೋಪಮಾಡಿದ್ದ. ಉಗ್ರಸೇನ ತಾನು ರಾಜನಾದ್ದರಿಂದ 'ರತ್ನಹಾರೀ ಚ ಪಾರ್ಥಿವಃ' ಎಂಬಂತೆ ರಾಜ್ಯದಲ್ಲಿ ಯಾವುದೇ ಅಮೂಲ್ಯ ವಸ್ತು ಇದ್ದರೆ ಅದು ರಾಜನಿಗೇ ಸೇರಬೇಕು ಎಂದು ಅವನೂ ಮಣಿಯನ್ನು ಬಯಸಿದ್ದ. ಜಾಂಬವತಿಯೂ ತನ್ನ ತಂದೆ ಜಾಂಬವಂತ ತನ್ನನ್ನು ಕೃಷ್ಣನಿಗೆ ಕೊಡುವಾಗ ಜೊತೆಯಲ್ಲಿ ಕೊಟ್ಟಿದ್ದ ಮಣಿ ಎಂದು ಅದನ್ನು ತನಗೆ ಬಯಸಿದ್ದಳು.

ಸತ್ಯಭಾಮೆಗೂ ಮಣಿ ತನ್ನ ತಂದೆ ಸಂಪಾದಿಸಿಕೊಂಡ ಆಸ್ತಿ ಎಂದು ಅದರಲ್ಲಿ ಮೋಹವಿತ್ತೆಂದು ಭಾಗವತದಲ್ಲಿ ಹೇಳಿದಂತೆ ಕಾಣುತ್ತದೆ-

ಸತ್ಯಭಾಮಾ ಪಿತೃಧನಂ ಮನ್ವಾನಾ ಸ್ವಾತ್ಮನೋಚಿತಂ
ಗೃಹೀತುಮೈಚ್ಛದ್ ವಿಸ್ರಬ್ಧಂ ಹರೇಶ್ಚಿತ್ತಮಜಾನತೀ
ಜಾಂಬವತ್ಯಪಿ ಶುಲ್ಕಾರ್ಥಂ ಪಿತ್ರಾದತ್ತಂ ಮಮೇತಿ ಹ
ಸ್ಪೃಹಾಂ ಚಕ್ರೇ ಮಣೌ ತತ್ರ ಸರ್ವಂ ವಿಜ್ಞಾಯ ಮಾಧವಃ।
ಅಕ್ರೂರಸ್ಯ ಕರೇ ಭೂಯೋ ಮಣಿಂ ಪ್ರತ್ಯರ್ಪಯದ್ ವಿಭುಃ।

'ಸತ್ಯಭಾಮೆ ಕೃಷ್ಣನ ಚಿತ್ತವನ್ನು ಅರಿಯದೆ ತನ್ನ ತಂದೆಯ ಸೊತ್ತಾದ ಪ್ರಯುಕ್ತ ತನಗೇ ಯೋಗ್ಯವೆಂದು ಬಗೆದು ಮಣಿಯನ್ನು ಪಡೆಯಲು ಬಯಸಿದಳು. ಜಾಂಬವತೀದೇವಿಯೂ ಕೂಡ ತನ್ನ ತಂದೆ ಮದುವೆ ಮಾಡಿಕೊಡುವಾಗ ಕೊಟ್ಟ ಮಣಿ ಎಂದು ಅದರಲ್ಲಿ ಆಸೆ ಇರಿಸಿಕೊಂಡಿದ್ದಳು; ಇದೆಲ್ಲವನ್ನೂ ತಿಳಿದ ಕೃಷ್ಣ ಮಣಿಯನ್ನು ಅಕ್ರೂರನ ಕೈಗೆ ತಿರುಗಿ ಕೊಟ್ಟ,' ಈ ಶ್ಲೋಕಗಳು ಭಾಗವತ ಶ್ರೀಧರೀಪಾಠದಲ್ಲಿ ಇಲ್ಲ. ವಿಜಯಧ್ವಜೀಯ ಪಾಠದಲ್ಲಿ ಇವೆ.

ಇವುಗಳ ತಾತ್ಪರ್ಯವನ್ನು ನಿರ್ಣಯದಲ್ಲಿ ಶ್ರೀಮದಾಚಾರ್ಯರು ಹೇಳುತ್ತ 'ಕೃಷ್ಣನಿಗೆ ಅನಪೇಕ್ಷಿತವಾದುದನ್ನು ಸತ್ಯಭಾಮೆ ಬಯಸಲಾರಳು' ಎಂದಿದ್ದಾರೆ. ಆದರೆ ನಿರ್ಣಯಾನುಸಾರ ಈ ಭಾಗವತ ಶ್ಲೋಕಗಳನ್ನು ಕೂಡಿಸುವುದು ಕಷ್ಟವಾಗುತ್ತದೆ. ಸತ್ಯಧರ್ಮರು ಸುಲಭವಾಗಿ ಕೂಡಿಸಿದ್ದಾರೆ. ಅವರು ಹೇಳುವ ಪ್ರಕಾರ 'ಸತ್ಯಭಾಮಾಪಿತೃಧನಂ' ಎಂಬುದು ಒಂದು ಪದ. 'ಸತ್ಯಭಾಮೆಯ ಪಿತೃಧನವನ್ನು ಜಾಂಬವತಿ

ಪಡೆಯಲು ಬಯಸಿದಳು. ಅವಳು ಕೃಷ್ಣನ ಚಿತ್ತವನ್ನು ಅರಿತಿರಲಿಲ್ಲ. ಅದರಿಂದ ತನ್ನ ತಂದೆ ಮದುವೆ ಕಾಲದಲ್ಲಿ ಕೊಟ್ಟಿದ್ದೆಂದು ಅದರಲ್ಲಿ ಆಸೆಪಟ್ಟಳು' ಎಂದು ಭಾಗವತ ಹೇಳುತ್ತಿದೆ. ಜಾಂಬವತಿ ಪರಶುಕ್ಲತ್ರಯದಲ್ಲಿ ಸೇರದಿದ್ದುದರಿಂದ ಕೃಷ್ಣನ ಚಿತ್ತವನ್ನು ಅರಿಯದಿರುವುದು ಅಸಂಭಾವಿತವಲ್ಲ. ಸತ್ಯಭಾಮೆ ಸಾಕ್ಷಾತ್ ಲಕ್ಷ್ಮಿ. ಪರಶುಕ್ಲತ್ರಯದಲ್ಲಿ ಸೇರಿದವಳು. ಅದರಿಂದ ನಿರ್ಣಯಾನುಸಾರ ಹೀಗೇ ವ್ಯಾಖ್ಯಾನಿಸಬೇಕಾಗುತ್ತದೆ.

ಮಣಿ ಸತ್ಯಭಾಮೆಗೆ ಯೋಗ್ಯವೆಂದು ಹೇಳಿದುದು 'ತಂದೆಯ ಸೊತ್ತು ಮಗನಿಗೆ ಸೇರಬೇಕು. ಇಲ್ಲವೆ ಮಗಳ ಮಗನಿಗಾದರೂ ಸೇರಬೇಕು. ಅದರಿಂದ ಮಗಳಾದ ಸತ್ಯಭಾಮೆ ಸ್ವೀಕರಿಸಿದರೆ ತಪ್ಪಿಲ್ಲ' ಎನ್ನುವ ಅಭಿಪ್ರಾಯದಿಂದ ಎಂದು ತಾಮ್ರಪರ್ಣೀಯ ವರದರಾಜೀಯಗಳಲ್ಲಿ ಹೇಳಿದೆ.[1]

ಹೀಗೆ ಮಣಿ ಸತ್ಯಭಾಮೆಗೇ ಯೋಗ್ಯವಾಗಿದ್ದರೂ ಕೃಷ್ಣ 'ಅಕ್ರೂರ ಸದಾ ಯಜ್ಞ ಮಾಡುವುದರಿಂದ ಮಣಿ ಅವನಿಗೇ ಯೋಗ್ಯ' ಎಂದುದು ಸದಾ ಯಜ್ಞ ಮಾಡುವವ ಆತ, ಶುಚಿಯಾಗಿರುತ್ತಾನೆ. ಶುಚಿಯಾದವನೆ ಮಣಿಯನ್ನು ಧರಿಸಬೇಕು. ಇಲ್ಲದಿದ್ದರೆ ಪ್ರಸೇನ ಧರಿಸಿ ಸಿಂಹದ ಬಾಯಿಗೆ ಸಿಕ್ಕಿದಂತೆ ಅನರ್ಥ ಉಂಟಾದೀತು ಎಂಬ ಅಭಿಪ್ರಾಯದಿಂದ. ವಸ್ತುತಃ ತಮ್ಮವರಿಗೆ ಯಾರೊಬ್ಬರಿಗೂ ಮಣಿಯನ್ನು ಕೊಟ್ಟರೆ ಪರಸ್ಪರ ಒಡಕು ಉಂಟಾದೀತೆಂದು ಬಗೆದು ಕೃಷ್ಣ ಅಕ್ರೂರನಿಗೇ ಕೊಟ್ಟಿದ್ದನೆನ್ನಬಹುದು.

ಲಬ್ಧ್ವಾ ರತ್ನಂ ದಾನಪತಿಃ ಸದೈವ
ಸಂದೀಕ್ಷಿತೋಽಭೂದ್ ಯಜ್ಞಕರ್ಮಣ್ಯತಂದ್ರಃ।
ಪ್ರದರ್ಶ್ಯ ಕೃಷ್ಣೋ ಹಲಿನೇ ರತ್ನಮೇತತ್
ಶಕ್ರಪ್ರಸ್ಥಂ ಪಾಂಡವಸ್ನೇಹತೋಽಗಾತ್ ॥೪೩॥

ಅಕ್ರೂರ ಸ್ಯಮಂತಕ ಮಣಿಯನ್ನು ಪಡೆದು ಸದಾ ಆಲಸ್ಯವಿಲ್ಲದೆ ಯಜ್ಞಕಾರ್ಯದಲ್ಲಿ ದೀಕ್ಷಿತನಾದ. ಹೀಗೆ ಮಣಿಯನ್ನು ಬಲರಾಮನಿಗೆ ತೋರಿಸಿ ಪಾಂಡವರ ಮೇಲಿನ ಪ್ರೀತಿಯಿಂದ ಇಂದ್ರಪ್ರಸ್ಥಕ್ಕೆ ನಡೆದ, ಶ್ರೀಕೃಷ್ಣ.

---

1. ಪಿತುರ್ಧನಂ ಪುತ್ರಸ್ಯೈವ ಪುತ್ರ್ಯಾ ಅಪಿ ಯೋಗ್ಯಮಿತ್ಯನೇನಾಭಿಪ್ರಾಯೇಣ ಕೃಷ್ಣೇನ ತಸ್ಯಾ ಯೋಗ್ಯಮಿತ್ಯುಕ್ತಮಿತಿ ಭಾವಃ। -ವರದರಾಜೀಯ
ಪಿತುರ್ಧನಂ ಪುತ್ರೋ ಗೃಹ್ಣೀಯಾತ್, ನೋ ಚೇದ್ದೌಹಿತ್ರಾಧಿಕಾರಿಕತ್ವಾತ್ ಪುತ್ರ್ಯಾ ಯೋಗ್ಯಂ ಇತಿ ಧರ್ಮಾವಲಂಬೇನ ಮಣಿಃ ಸತ್ಯಭಾಮಾಯಾ ಯೋಗ್ಯ ಇತ್ಯಾಹ ಕೃಷ್ಣ ಇತ್ಯರ್ಥಃ।
-ತಾಮ್ರಪರ್ಣೀಯ

ಯಜ್ಞಕಾರ್ಯದಲ್ಲಿ ದೀಕ್ಷಿತನಾಗಿರುವವನು ಶುಚಿಯಾಗಿರುತ್ತಾನೆ. ಶುಚಿಯಾಗಿರುವವನು ಮಣಿಯನ್ನು ಧರಿಸುವುದರಿಂದ ಅದರ ಸದುಪಯೋಗಪಡೆಯಬಹುದು.

ಶ್ರೀಕೃಷ್ಣ ಮಣಿ ಅಕ್ರೂರನಲ್ಲಿದ್ದುದನ್ನು ಬಲರಾಮನಿಗೆ ಪ್ರತ್ಯಕ್ಷ ತೋರಿಸಿ ಅವನಿಗೆ ತನ್ನಲ್ಲಿದ್ದ ಅನುಮಾನವನ್ನು ಕಳೆದ. ಅವನಲ್ಲಿ ಕೋಪ ಮಾಡದೆ ಪಾಂಡವರ ಮೇಲಿನ ಪ್ರೀತಿಯಿಂದಲೇ ಇಂದ್ರಪ್ರಸ್ಥಕ್ಕೆ ನಡೆದ.

ಕಾಳಿಂದೀ ವಿವಾಹ

ವಸನ್ನಜಸ್ತತ್ರ ಬಹೂಂಶ್ಚ ಮಾಸಾನ್
ಸಫಲ್ಗುನೋಽಯಾನ್ಮೃಗಯಾಂ ಕದಾಚಿತ್ ।
ಹತ್ವಾ ಮೃಗಾನ್ ಯಮುನಾತೀರಸಂಸ್ಥಃ
ಸೋಽನ್ಯಾಂ ಕಾಲಿಂದೀಂ ದದೃಶೇ ತತ್ ಸ್ವಸಾರಂ ॥೪೪॥

`ಶ್ರೀಕೃಷ್ಣ ಇಂದ್ರಪ್ರಸ್ಥದಲ್ಲಿ ವಾಸಮಾಡುತ್ತ ಅನೇಕ ತಿಂಗಳವರೆಗೆ ಇದ್ದ. ಒಂದುದಿನ ಅರ್ಜುನನೊಂದಿಗೆ ಬೇಟೆಗೆ ಹೋದ. ಮೃಗಗಳನ್ನು ಕೊಂದು ಯಮುನಾತೀರಕ್ಕೆ ಬಂದ. ಅಲ್ಲಿ ಯಮುನೆಯ ತಂಗಿಯಾದ ಇನ್ನೊಬ್ಬಳು ಕಾಳಿಂದಿಯನ್ನು ಕಂಡ.

ಯಮುನಾ ನದಿಗೂ ಕಾಳಿಂದಿ ಎಂದು ಹೆಸರಿದೆ. ಯಮುನಾ ತೀರದಲ್ಲಿದ್ದ ಈ ಕಾಳಿಂದಿ ಬೇರೆ, ಯಮುನೆಯ ತಂಗಿ ಎಂದು ತಿಳಿಸಲು 'ಇನ್ನೊಬ್ಬಳು ಕಾಳಿಂದಿ' ಎಂದಿದೆ.[1]

ಸಾ ಸೂರ್ಯಪುತ್ರೀ ಯಮುನಾನುಜಾತಾ
ತಪಶ್ಚರಂತೀ ವಿಷ್ಣುಪತ್ನೀತ್ವಕಾಮಾ ।
ಪೃಷ್ಟಾರ್ಜುನೇನಾಹ ಸಮಸ್ತಮೇತತ್
ಪತ್ನೀಂ ಚ ತಾಂ ಜಗೃಹೇ ವಾಸುದೇವಃ ॥೪೫॥

ಅವಳು ಸೂರ್ಯನ ಮಗಳು. ಯುಮುನೆಯ ತಂಗಿ. ವಿಷ್ಣುವನ್ನು ಪತಿಯನ್ನಾಗಿ ಪಡೆವ ಬಯಕೆಯಿಂದ ತಪಸ್ಸು ಮಾಡುತ್ತಿದ್ದಳು. ಅರ್ಜುನ ಕೇಳಿದಾಗ ಅದೆಲ್ಲವನ್ನೂ ಅವಳು ಹೇಳಿದಳು. ಶ್ರೀಕೃಷ್ಣ ಅವಳನ್ನು ಪತ್ನಿಯನ್ನಾಗಿ ಸ್ವೀಕರಿಸಿದ.

ನೀಲಾ ಸ್ವಯಂವರ

ತತೋ ಗತ್ವಾ ನಗ್ನಜಿತೋ ಗೃಹಂ ಚ
ಸ್ವಯಂವರೇ ಸಪ್ತ ವೃಷಾನಗೃಹ್ಣಾತ್ ।

1. ನದೀರೂಪ ಕಾಲಿಂದೀ ವ್ಯಾವೃತ್ತಯೇ ಅನ್ಯಾಮಿತಿ ಪದಪ್ರಯೋಗಃ। –ಜನಾರ್ದನೀಯ

ಸರ್ವೈರಗ್ರಾಹ್ಯಾನಸುರಾನ್ವರೇಣ
ಶಿವಸ್ಯ ಯೈರ್ನಿರ್ಜಿತಾ ಭೂಮಿಪಾಲಾಃ ॥೪೬॥

ಬಳಿಕ ಶ್ರೀಕೃಷ್ಣ ನಗ್ನಜಿದ್ ರಾಜನ ಅರಮನೆಗೆ ಹೋಗಿ ಸ್ವಯಂವರದಲ್ಲಿ ಏಳುಗೂಳಿಗಳನ್ನು ಹಿಡಿದು ಕಟ್ಟಿದ. ಶಿವನ ವರದಿಂದ ರಾಜರುಗಳನ್ನು ಪರಾಭವಗೊಳಿಸಿದ ದೈತ್ಯ ಸ್ವರೂಪದ ಗೂಳಿಗಳು. ಅವು ಯಾರಿಗೂ ಹಿಡಿಯಲು ಶಕ್ಯವಿರಲಿಲ್ಲ.

ಯಾರು ಒಬ್ಬನೇ ಏಳು ಗೂಳಿಗಳನ್ನು ಒಮ್ಮೆಗೇ ಕಟ್ಟಿಹಾಕುವನೋ ಅವನಿಗೆ ರಾಜಕುಮಾರಿಯನ್ನು ಮದುವೆ ಮಾಡಿ ಕೊಡುವೆನು ಎಂದು ರಾಜ ಪಣವಿಟ್ಟಿದ್ದ. ಶ್ರೀಕೃಷ್ಣ ಒಬ್ಬನೇ ಏಳು ರೂಪಗಳನ್ನು ಧರಿಸಿ ಒಮ್ಮೆಲೆ ಏಳು ಗೂಳಿಗಳನ್ನೂ ಹಿಡಿದು ಕಟ್ಟಿದ. ಇದು ಲೋಕದೃಷ್ಟಿಯಿಂದ ಯೋಗಬಲ. ಅದರಿಂದ ರಾಜ ಶ್ರೀಕೃಷ್ಣನಿಗೆ ಕನ್ಯಾದಾನ ಮಾಡಿದ.

ತತೋ ನೀಲಾಂ ತಸ್ಯ ಸುತಾಂ ಚ ಲೇಭೇ
ಪೂರ್ವಂ ನೀಲಾ ಗೋಪಕನ್ಯಾಪಿ ಯಾಸೀತ್ ।
ಸಾ ದೇಹೇಕಸ್ಯಾಃ ಪ್ರಾವಿಶತ್ ಪೂರ್ವಮೇಷಾ
ಯಸ್ಮಾದೇಕಾ ದ್ವಿವಿಧಾ ಸಂಪ್ರಜಾತಾ ॥೪೭॥

ಶ್ರೀಕೃಷ್ಣ ಹೀಗೆ ನಗ್ನಜಿತನ ಮಗಳಾದ ನೀಲೆಯನ್ನು ಗೆದ್ದುಕೊಂಡ. ಹಿಂದೆ ಇದ್ದ ನೀಲೆ ಎಂಬ ಗೋಪಕನ್ಯೆ ಹಿಂದೆಯೆ ಇವಳ ದೇಹದಲ್ಲಿ ಸೇರಿ ಒಂದಾಗಿದ್ದಳು. ಏಕೆಂದರೆ ಅವಳು ಒಬ್ಬಳೇ ಎರಡು ರೂಪಗಳಿಂದ ಹುಟ್ಟಿದ್ದಳು.

ಶ್ರೀಕೃಷ್ಣ ನಂದಗೋಕುಲದಲ್ಲಿ ಯಶೋದೆಯ ಮಗನಾಗಿ ಬೆಳೆಯುತ್ತಿದ್ದಾಗ ಯಶೋದೆಯ ಅಣ್ಣನಾದ ಕುಂಭಕನೆಂಬ ಗೋಪಾಲಕನ ಮಗಳಾಗಿ ಒಬ್ಬಳು ನೀಲೆ ಹುಟ್ಟಿದಳು. ಆಗಲೂ ಸ್ವಯಂವರದಲ್ಲಿ ಏಳು ಗೂಳಿಗಳನ್ನು ಕಟ್ಟಿ ಅವಳನ್ನು ಗೆದ್ದಿದ್ದ, ಶ್ರೀಕೃಷ್ಣ. ಅವಳು ಶ್ರೀಕೃಷ್ಣನನ್ನು ಸೇರಿ ರಮಿಸಿದ್ದಳು. ಬಳಿಕ ಅವಳೆ ಕೋಸಲದೇಶದ ರಾಜಾ ನಗ್ನಜಿತನ ಮಗಳಾಗಿ ಸತ್ಯಾ ಎಂಬ ಹೆಸರಿನ ಇನ್ನೊಂದು ರೂಪದಿಂದ ಹುಟ್ಟಿದಳು. ಅವಳಿಗೆ ನೀಲೆ ಎಂದು ಇನ್ನೊಂದು ಹೆಸರು. ಆ ನೀಲೆ ಈ ನೀಲೆಯೊಡನೆ ಬೆರೆತು ಒಂದಾದಳು. ಇಲ್ಲಿ ಎರಡು ಚೈತನ್ಯಾಂಶಗಳು ಮಾತ್ರವಲ್ಲ, ಎರಡು ಶರೀರಗಳೂ ಸೇರಿ ಒಂದಾದುದು ವಿಶೇಷ. ಇದು ಗೀತಾಭಾಷ್ಯಟೀಕಾ ಭಾವಬೋಧದಲ್ಲಿ ಸ್ಪಷ್ಟವಿದೆ.[1]

---

1. ದ್ವಿತೀಯೇ ಶರೀರೇ ಜಾತೇ ತತ್ ಪೂರ್ವಶರೀರೇಣೈಕ್ಯಮಾಪದ್ಯತ ಇತಿಸಂಪ್ರದಾಯವಿದಃ।
   –ಗೀತಾಭಾಷ್ಯಟೀಕಾ (10–6)
   ಸಂಪ್ರದಾಯವಿದ ಇತ್ಯನೇನ ನೀಲಾದಿಶರೀರೇ ತಥಾಭಾವಸ್ಯ ಪ್ರಮಿತತ್ವಂ ಸೂಚಯತಿ– ಭಾವಬೋಧಃ

ಅದರಿಂದ ಶ್ರೀಕೃಷ್ಣನಿಗೆ ನೀಲಿ ಎಂಬ ಹೆಸರಿನಿಂದ ಇಬ್ಬರು ಮಹಿಷೀಯರಿರಲಿಲ್ಲ. ಅಷ್ಟಮಹಿಷಿಯರು ಎಂಬುದು ಯುಕ್ತವೆ.

ಮಿತ್ರವಿಂದಾ ಭದ್ರಾ ವಿವಾಹ

ಪಿತೃಷ್ವಸುರ್ಮಿತ್ರವಿಂದಾ ಸುತಾ ಚ
ಕೃಷ್ಣೇ ಮಾಲಾಮಾಸಜದ್ ರಾಜಮಧ್ಯೇ ।
ವಿಂದಾನುವಿಂದೌ ಭ್ರಾತರಾವೇವ ತಸ್ಯಾ
ನ್ಯಷೇಧತಾಂ ಧಾರ್ತರಾಷ್ಟ್ರಾರ್ಥಮುಗ್ರೌ ॥೪೮॥

ಸೋದರತ್ತೆಯ ಮಗಳು ಮಿತ್ರವಿಂದೆಯೂ ರಾಜರ ಮಧ್ಯದಲ್ಲಿ ಕೃಷ್ಣನ ಕೊರಳಿಗೆ ಮಾಲೆ ಹಾಕಿದಳು. ಅವಳ ಸೋದರರು ವಿಂದ ಅನುವಿಂದರು ಕ್ರೂರರು. ಅವಳನ್ನು ದುರ್ಯೋಧನನಿಗೆ ಕೊಡುವ ಉದ್ದೇಶದಿಂದ ಕೃಷ್ಣನನ್ನು ತಡೆದರು.

ಕೃಷ್ಣನ ಸೋದರತ್ತೆ ರಾಜಾಧಿದೇವಿ ಅವಂತೀ ದೇಶದ ಜಯತ್ಸೇನ ರಾಜನ ರಾಣಿ. ಅವಳ ಮಗಳು ಮಿತ್ರವಿಂದೆ ಕೃಷ್ಣನನ್ನು ವರಿಸಿದಳು.

ಜಿತ್ವಾವಂತ್ಯೌ ನೃಪತೀಂಶ್ಚೈವ ಸರ್ವಾನ್
ಆದಾಯ ತಾಂ ಪ್ರಯಯೌ ವಾಸುದೇವಃ ।
ಪಿತೃಷ್ವಸುಸ್ತನಯಾಂ ಚ ದ್ವಿತೀಯಾಂ
ಭದ್ರಾಂ ದತ್ತಾಮಗ್ರಹೀತ್ ಭ್ರಾತೃಭಿಃ ಸಃ ॥೪೯॥

ಶ್ರೀಕೃಷ್ಣ ಅವಂತೀರಾಜಕುಮಾರರಾದ ಆ ವಿಂದ ಅನುವಿಂದರನ್ನೂ ಬೇರೆ ಎಲ್ಲ ರಾಜರನ್ನೂ ಗೆದ್ದು ಮಿತ್ರವಿಂದೆಯನ್ನು ಕರೆದುಕೊಂಡು ಹೋದ. ಇನ್ನೊಬ್ಬ ಸೋದರತ್ತೆಯ ಮಗಳು ಭದ್ರೆಯನ್ನು ಅವಳ ಸೋದರರೆ ಕೊಟ್ಟರು. ಶ್ರೀಕೃಷ್ಣ ಸ್ವೀಕರಿಸಿದ.

ಶ್ರೀಕೃಷ್ಣನ ಇನ್ನೊಬ್ಬಳು ಸೋದರತ್ತೆ ಶ್ರುತಕೀರ್ತಿ. ಕೇಕಯ ದೇಶದ ರಾಜಾ ಧೃಷ್ಟಕೇತುವಿನ ರಾಣಿ. ಇವಳ ಮಗಳಾದ ಭದ್ರೆಯನ್ನು ಸೋದರರೆ ಕೃಷ್ಣನಿಗೆ ಕೊಟ್ಟರು.

ವಿಶ್ವೇಷಾಂ ದೇವಾನಾಮವತಾರಾ ಹಿ ಪಂಚ
ತೇ ಕೈಕಯಾ ಭ್ರಾತರೋಽಸ್ಯಾ ಹರೇಶ್ಚ ।
ಭಕ್ತಾ ನಿತ್ಯಂ ಪಾಂಡವಾನಾಂ ಚ ತಾತೋ
ಹ್ಯೇಷಾಂ ವಶೇ ಶೈಬ್ಯನಾಮಭ್ಯರಗ್ರೇ ॥೫೦॥

ವಿಶ್ವೇದೇವತೆಗಳ ಅವತಾರಭೂತರಾದ ಐವರು ಕೇಕಯ ರಾಜಕುಮಾರರು ಭದ್ರೆಯ ಸೋದರರು. ಸದಾ ವಿಷ್ಣುವಿನ ಭಕ್ತರು. ಪಾಂಡವರಿಗೂ ಭಕ್ತರು. ಇವರ ತಂದೆ ಶೈಬ್ಯ, ಹಿಂದೆ ಋಭು ಎಂಬ ದೇವ, ಇವರ ವಶದಲ್ಲಿದ್ದ.

ಧೃಷ್ಟಕೇತುವಿಗೇ ಇನ್ನೊಂದು ಹೆಸರು ಶೈಬ್ಯ. ವೃದ್ಧನಾಗಿದ್ದು ಸಂತರ್ದನ ಮುಂತಾದ ಐವರು ಒಳ್ಳೆಯ ಮಕ್ಕಳ ವಶದಲ್ಲಿದ್ದ.

ಲಕ್ಷಣಾ ಸ್ವಯಂವರ

ಸ್ವಯಂವರೋ ಲಕ್ಷಣಾಯಾಸ್ತಥಾಸೀದ್
ಯಥಾ ದ್ರೌಪದ್ಯಾ ಲಕ್ಷ್ಯವೇಧಾತ್ಮಕಃ ಸಃ।
ಮದ್ರೇಷು ತಸ್ಯಾಶ್ಚ ಪಿತಾ ಪಿನಾಕಂ
ಸ್ವಯಂವರಾರ್ಥಂ ಜಗೃಹೇ ಗಿರೀಶಾತ್ ॥೫೧॥

ಮದ್ರದೇಶದಲ್ಲಿ ಲಕ್ಷಣಾದೇವಿಯ ಸ್ವಯಂವರ ನಡೆಯಿತು. ದ್ರೌಪದೀ ಸ್ವಯಂವರದಂತೆಯೆ ಇದೂ ಲಕ್ಷ್ಯವೇಧ ಸ್ವರೂಪವಾಗಿತ್ತು. ಅವಳ ತಂದೆ ಸ್ವಯಂವರಕ್ಕಾಗಿ ಶಿವನಿಂದ ಪಿನಾಕವೆಂಬ ಧನುಸ್ಸನ್ನು ಪಡೆದಿದ್ದ.

ಲಕ್ಷಣೆಯ ತಂದೆ ಬೃಹತ್ಸೇನ ರಾಜನೆಂದು ವರದರಾಜೀಯ ಹೇಳಿದೆ. ಲಕ್ಷಣೆಗೆ ಲಕ್ಷ್ಮಣೆ ಎಂದೂ ಹೆಸರು ಕಾಣುತ್ತದೆ.

ಲಕ್ಷ್ಯಂ ಚ ತತ್ಸರ್ವತಶ್ಚನ್ನಮೇವ
ದ್ವಾರಂ ಚ ತಸ್ಯಾಪ್ಯುಪರಿ ಸ್ಮ ಲಕ್ಷ್ಯತ್।
ಛಿನ್ನೇಷುಣಾ ಪಾತನೀಯಂ ಚ ತದ್ಧಿ
ದ್ರೌಪದ್ಯರ್ಥಾತ್ತದಶಕ್ಯಂ ತತೋಽಲಂ ॥೫೨॥

ಲಕ್ಷ್ಯ ಎಲ್ಲೆಡೆ ಮುಚ್ಚಿತ್ತು. ದ್ವಾರವೂ ಲಕ್ಷ್ಯಕ್ಕೆ ಮೇಲ್ಗಡೆ ಇದ್ದಿತು. ಮುರಿದ ಒಂದು ಬಾಣದಿಂದ ಲಕ್ಷ್ಯವನ್ನು ಹೊಡೆದು ಬೀಳಿಸಬೇಕಾಗಿತ್ತು. ಅದರಿಂದ ದ್ರೌಪದಿಯ ಸಲುವಾಗಿ ಇದ್ದ ಲಕ್ಷ್ಯಕ್ಕಿಂತ ಇದು ಇನ್ನೂ ಹೆಚ್ಚು ಅಸಾಧ್ಯವೇ ಇದ್ದಿತು.

ಒಂದು ಮತ್ಸ್ಯಯಂತ್ರ ಲಕ್ಷ್ಯ ಆದನ್ನು ಒಂದು ಗೂಡಿನೊಳಗೆ ಇಟ್ಟು ಮೇಲೆ ತೂಗಿ ಹಾಕಿತ್ತು. ಅದರ ದ್ವಾರ ಮೇಲ್ಭಾಗದಲ್ಲಿ. ಕೆಳಗೆ ನಿಂತು ಲಕ್ಷ್ಯವನ್ನು ನೋಡುವಂತಿರಲಿಲ್ಲ. ಅದರ ಪ್ರತಿಬಿಂಬ ಕೆಳಗೆ ನೀರಲ್ಲಿ ಕಾಣುತ್ತಿತ್ತು. ಅದನ್ನು ನೋಡಿ ಒಂದು ಮುರಿದ ಬಾಣವನ್ನು ಎಸೆಯಬೇಕು. ಬಾಣ ಗೂಡಿಗಿಂತ ಮೇಲೆ ಹೋಗಿ ಕೆಳಗೆ ಬೀಳುತ್ತ ಲಕ್ಷ್ಯವನ್ನು ಕೆಡಹಿ ಕೆಳಗೆ ಬೀಳಬೇಕು. ದ್ರೌಪದೀ ಸ್ವಯಂವರದಲ್ಲಿ ಲಕ್ಷ್ಯಕ್ಕೆ ದ್ವಾರ ಕೆಳಭಾಗದಲ್ಲಿಯೆ ಇದ್ದಿತು. ಒಳ್ಳೆಯ ಐದು ಬಾಣಗಳಿದ್ದುವು.

ತತ್ರಾಜಗ್ಮುರ್ಮಾಗಧಾದ್ಯಾಶ್ಚ ಸರ್ವೇ
ಪಾರ್ಥಾ ಅಪಿ ದ್ರಷ್ಟುಮಿಹಾಭ್ಯುಪಾಯಯುಃ।
ದುರ್ಯೋಧನಾದ್ಯಾಶ್ಚ ಸಸೂತಪುತ್ರಾಃ
ಸಜ್ಯೀಕರ್ತುಂ ಧನುರಪ್ಯುತ್ಸಹಂತೇ ॥೫೩॥

ಆ ಸ್ವಯಂವರಕ್ಕೆ ಜರಾಸಂಧ ಮುಂತಾದ ಎಲ್ಲ ರಾಜರೂ ಬಂದರು. ಪಾಂಡವರೂ ಬಂದಿದ್ದರು, ನೋಡುವುದಕ್ಕಾಗಿ. ಕರ್ಣ ದುರ್ಯೋಧನಾದಿಗಳು ಬಿಲ್ಲಿಗೆ ಹೆದೆಯೇರಿಸಲು ಯತ್ನಿಸಿದರು.

ಲಕ್ಷಣಾದೇವಿ ಕೃಷ್ಣನ ಪತ್ನಿಯಾಗುವವಳೆಂದು ತಿಳಿದು ಪಾಂಡವರು ಸ್ವಯಂವರವನ್ನು ಕೇವಲ ನೋಡುವುದಕ್ಕಾಗಿಯೆ ಬಂದಿದ್ದರು. ಅದೇ ರೀತಿ ಹಿಂದೆ ದ್ರೌಪದಿ ಪಾಂಡವರ ಪತ್ನಿಯಾಗುವವಳೆಂದು ಕೃಷ್ಣನೂ ಯಾದವರೂ ಕೇವಲ ನೋಡುವುದಕ್ಕಾಗಿ ಸ್ವಯಂವರಕ್ಕೆ ಬಂದಿದ್ದರು.

ಕೇಚಿನ್ನಿಪೇತುರ್ಧನುಷೈವ ತಾಡಿತಾ
ನ ವೈ ಕೇಚಿಚ್ಚಾಲಯಿತುಂ ಚ ಶೇಕುಃ।
ದುರ್ಯೋಧನೋ ಮಾಗಧಃ ಸೂತಪುತ್ರಃ
ಸಜ್ಯಂ ಕೃತ್ವಾ ಲಕ್ಷ್ಯವೀಕ್ಷಾಂ ನ ಶೇಕುಃ ॥೫೪॥

ಕೆಲವು ರಾಜರು ಧನುಸ್ಸಿನಿಂದ ಹೊಡೆಸಿಕೊಂಡು ಬಿದ್ದರು. ಕೆಲವರು ಅದನ್ನು ಅಲುಗಾಡಿಸಲೂ ಶಕ್ತರಾಗಲಿಲ್ಲ. ದುರ್ಯೋಧನ ಜರಾಸಂಧ ಕರ್ಣರು ಬಿಲ್ಲಿಗೆ ಹೆದೆಯೇರಿಸಿಯೂ ಲಕ್ಷ್ಯವನ್ನು ನೋಡಲು ಶಕ್ತರಾಗಲಿಲ್ಲ.

ಧನಂಜಯಃ ಸ್ವಾತ್ಮ ಬಲಂ ಪ್ರಕಾಶಯನ್
ಸಜ್ಯಂ ಕೃತ್ವಾ ಧನುರೈಕ್ಷಚ್ಚ ಲಕ್ಷ್ಯಂ।
ನೈವಾದದೇ ಬಾಣಮನಿಚ್ಛಯೈವ
ಪ್ರಾಪ್ಯಾಂ ಜಾನನ್ ಕೇಶವೇನೈವ ತಾಂ ಚ ॥೫೫॥

ಅರ್ಜುನ ತನ್ನ ಬಲವನ್ನು ಚೆನ್ನಾಗಿ ಪ್ರದರ್ಶಿಸುತ್ತ ಬಿಲ್ಲಿಗೆ ಹೆದೆ ಏರಿಸಿ ಲಕ್ಷ್ಯವನ್ನೂ ನೋಡಿದ. ಆದರೆ ಲಕ್ಷ್ಯವನ್ನು ಭೇದಿಸುವಂತೆ ಬಾಣವನ್ನು ಎಸೆಯಲಿಲ್ಲ. ಏಕೆಂದರೆ ಕನ್ಯೆಯನ್ನು ಪಡೆಯುವ ಇಚ್ಛೆ ಅವನಿಗೆ ಇರಲಿಲ್ಲ. ಅವಳು ಕೃಷ್ಣನಿಗೇ ಲಭ್ಯಳೆಂದು ಅವನು ತಿಳಿದಿದ್ದ.

ನಿರ್ಣಯದಲ್ಲಿ 'ನೈವಾದದೇ ಬಾಣಂ' ಅರ್ಜುನ ಬಾಣವನ್ನೆ ಎತ್ತಿಕೊಳ್ಳಲಿಲ್ಲ ಎಂದಂತೆ ಕಾಣುತ್ತದೆ. ಆದರೆ ಭಾಗವತ ವಿರೋಧ ಬರುತ್ತದೆ–

'ಅರ್ಜುನ ಮತ್ಸ್ಯದ ಪ್ರತಿಬಿಂಬವನ್ನು ನೀರಲ್ಲಿ ಕಂಡು ಮತ್ಸ್ಯವಿರುವ ಜಾಗವನ್ನು ತಿಳಿದ. ಒಳ್ಳೆಯ ಪ್ರಯತ್ನ ಮಾಡಿ ಬಾಣ ಎಸೆದ. ಆದರೆ ಬಾಣ ಲಕ್ಷ್ಯವನ್ನು ಭೇದಿಸಲಿಲ್ಲ. ಕೇವಲ ಸ್ಪರ್ಶಮಾಡಿತು.'

ಎಂದಿದೆ ಭಾಗವತ. ಅದರಿಂದ ನಿರ್ಣಯದಲ್ಲಿ 'ನ ಆದದೇ' ಎಂದರೆ

ಬಾಣವನ್ನು 'ಎತ್ತಿಕೊಳ್ಳಲಿಲ್ಲ' ಎಂದಲ್ಲ. ಆ=ಚೆನ್ನಾಗಿ, ನ ದದೇ= ಕೊಡಲಿಲ್ಲ, ಅಂದರೆ ಎಸೆಯಲಿಲ್ಲ, ಲಕ್ಷ್ಯಭೇದವಾಗುವಂತೆ ಚೆನ್ನಾಗಿ ಎಸೆಯಲಿಲ್ಲ, ಅವನಿಗೆ ಆ ಉದ್ದೇಶವಿರಲಿಲ್ಲ ಎಂದರ್ಥ. ಲಕ್ಷ್ಯವನ್ನು ಸ್ಪರ್ಶ ಮಾಡುವುದೂ ಬಹಳ ಪ್ರಯತ್ನದಿಂದಲೆ ಸಾಧ್ಯವಿದ್ದುದರಿಂದ ಭಾಗವತದಲ್ಲಿ 'ಒಳ್ಳೆಯ ಪ್ರಯತ್ನಮಾಡಿ' ಎಂದಿದೆ. ಲಕ್ಷ್ಯಭೇದವಾಗ ಕೂಡದು, ಸ್ಪರ್ಶವಾಗಬೇಕು ಹಾಗೆ ಬಹಳ ಪ್ರಯತ್ನ ಮಾಡಿ ಅರ್ಜುನ ಬಾಣವನ್ನೆಸೆದನೆಂದು ಭಾಗವತ ಹೇಳುತ್ತಿದೆ.[1] -ವಾದಿರಾಜೀಯ

ಅರ್ಜುನ ಸುಭದ್ರೆಯನ್ನು ಅಪಹರಿಸುವಾಗ ಯಾದವರ ಮೇಲೆ ಹೀಗೇ ಬಾಣಗಳ ಸುರಿಮಳೆ ಸುರಿಸಿದ್ದ. ಮೈಗೆ ಗಾಯವಾಗಕೂಡದು, ಸ್ಪರ್ಶವಾಗಬೇಕು. ಇದು ಅರ್ಜುನನ ಶರಸಂಧಾನ ಕೌಶಲ.

ಭೀಮಶ್ಚಾಪಂ ಲಕ್ಷ್ಯಮಪ್ಯೇತದತ್ರ
ದ್ರಷ್ಟುಂ ಚ ನೈವೈಚ್ಛದರೀಂದ್ರಧಾರಿಣಃ।
ಯೋಗ್ಯೇ ಕರ್ಮಣ್ಯಾಯತಂಶ್ಚಾಪರಾಧೀ
ಸ್ಯಾಮಿತ್ಯಂಜಃ ಪಶ್ಯಮಾನೋ ಮಹಾತ್ಮಾ ॥೫೬॥

ಶ್ರೀಕೃಷ್ಣನೇ ಮಾಡಬೇಕ್ಕಾಗಿರುವ ಕಾರ್ಯದಲ್ಲಿ ತಾನು ಯತ್ನ ಮಾಡಿದರೂ ಅಪರಾಧಿಯಾದೇನೆಂದು ಚೆನ್ನಾಗಿ ತಿಳಿದಿರುವ ಮಹಾತ್ಮಾ ಭೀಮಸೇನ ಬಿಲ್ಲನ್ನಾಗಲಿ ಲಕ್ಷ್ಯವನ್ನಾಗಲಿ ಸ್ವಯಂವರದಲ್ಲಿ ನೋಡಲೂ ಬಯಸಲಿಲ್ಲ.

'ನರಕಾಸುರ ಜರಾಸಂಧ ಭೀಮ ದುರ್ಯೋಧನ ಕರ್ಣರು ಬಿಲ್ಲಿಗೆ ಹೆದೆಯೇರಿಸಿ 'ಅದನ್ನು' ಅಂದರೆ ಲಕ್ಷ್ಯವನ್ನು ಕಾಣಲಿಲ್ಲ' ಎಂದು ಭಾಗವತ ಮೇಲುನೋಟಕ್ಕೆ ಎಲ್ಲರಂತೆ ಭೀಮನೂ 'ಬಿಲ್ಲಿಗೆ ಹೆದೆಯೇರಿಸಿದ, ಲಕ್ಷ್ಯವನ್ನು ಕಾಣಲಿಲ್ಲ' ಎಂದಂತೆ ಕಾಣುತ್ತದೆ. ಅದರಿಂದ ನಿರ್ಣಯಕ್ಕೂ ಭಾಗವತಕ್ಕೂ ವಿರೋಧ ಕಾಣುತ್ತದೆ. ವಸ್ತುತಃ ಭೀಮ ಲಕ್ಷ್ಯವೇಧ ಮಾಡುವ ಅಭಿಪ್ರಾಯದಿಂದ ಬಿಲ್ಲಿನ ಕಡೆಗೇ ದೃಷ್ಟಿ

---

1. ನೈವಾದದೇ ಬಾಣಮನಿಚ್ಛಯೈವೇತ್ಯತ್ರ 'ಮತ್ಸ್ಯಾಭಾಸಂ ಜಲೆ ದೃಷ್ಟ್ವಾ ಜ್ಞಾತ್ವಾ ಚ ತದವಸ್ಥಿತಂ। ಪಾರ್ಥೋ ಯತ್ತೋಽಸೃಜದ್ ಬಾಣಂ ನಾಚ್ಛಿನತ್ ಪಸ್ಪೃಶೇ ಪರಂ।' ಇತಿ ಭಾಗವತೋ-ಕ್ತೇರ್ವಿರೋಧ ಪರಿಹಾರಾಯ ಧನಂಜಯಃ ಅನಿಚ್ಛಯೈವ ಕೃಷ್ಣಪ್ರಾಪ್ಯಲಕ್ಷಣಾಯಾಂ ಇಚ್ಛಾಭಾವೇನೈವ ಕಾರಣೇನ ಬಾಣಂ ನೈವಾ ದದೇ ನೈವ ಸಮ್ಯಕ್ ದತ್ತವಾನ್, ಲಕ್ಷ್ಯಚ್ಛೇದೋ ಯಥಾ ಭವತಿ ತಥಾ ನ ದತ್ತವಾನಿತ್ಯರ್ಥಃ। ಲಕ್ಷ್ಯಸ್ಪರ್ಶಸ್ಯಾಪ್ಯತಿಕುಶಲ ಸಾಧ್ಯತ್ವಾದ್ ಭಾಗವತೇ ಯತ್ತ ಇತ್ಯುಕ್ತಂ। ಲಕ್ಷ್ಯಚ್ಛೇದೋ ಯಥಾ ನಭವತಿ ತಥಾ ಸ್ಪರ್ಶಮಾತ್ರಂ ಚ ಯಥಾ ಭವತಿ ತಥಾ ಸನ್ನಾಹವಾನಿತ್ಯರ್ಥಃ॥
-ವಾದಿರಾಜೀಯ

ಹಾಕಲಿಲ್ಲ. ಭಾಗವತದಲ್ಲಿ 'ಅದನ್ನು' ನೋಡಲಿಲ್ಲ ಎಂದು ಸಾಮಾನ್ಯವಾಗಿ ಹೇಳಿದೆ. ದುರ್ಯೋಧನಾದಿಗಳು ಬಿಲ್ಲಿಗೆ ಹೆದೆ ಏರಿಸಿ 'ಅದನ್ನು' ಅಂದರೆ ಲಕ್ಷ್ಯವನ್ನು ಕಾಣದೆ ಹೋದರು. ಅಚ್ಛಿನ್ನ ಭಾಗವತಧರ್ಮನಿಷ್ಠನಾದ ಭೀಮ 'ಅದನ್ನು' ಅಂದರೆ ಬಿಲ್ಲನ್ನೂ ಕಣ್ಣೆತ್ತಿಯು ನೋಡಲಿಲ್ಲ. ಶ್ರೀಹರಿಗೆ ಯೋಗ್ಯವಾದ ಕಾರ್ಯದಲ್ಲಿ ಆಸೆ ಪಡುವುದೂ ದೋಷವೆಂದು ತಿಳಿದ ಭೀಮ ಬಿಲ್ಲಿನ ದರ್ಶನವನ್ನೂ ಮಾಡಲಿಲ್ಲ ಎಂದು ಭಾಗವತದಲ್ಲಿ ಅನ್ವಯ ಹೇಳಬೇಕು.[1]

ಕೃಷ್ಣಶ್ಚ ತಚ್ಚಾಪಮಧಿಜ್ಯಮಾಶು
ಕೃತ್ವಾಚಿಂತ್ಯಶ್ಛಿನ್ನಬಾಣೇನ ಲಕ್ಷ್ಯಂ।
ಅಪಾತಯದ್ದುಂದುಭಯಶ್ಚ ದಿವ್ಯಾ
ನೇದುಃ ಪ್ರಸೂನಂ ವವೃಷುಃ ಸುರಾಶ್ಚ ॥೫೭॥

ಬಳಿಕ ಅಚಿಂತ್ಯ ಮಹಿಮನಾದ ಶ್ರೀಕೃಷ್ಣ ಬೇಗನೆ ಬಿಲ್ಲಿಗೆ ಹೆದೆಯೇರಿಸಿ ಮುರುಕು ಬಾಣದಿಂದ ಲಕ್ಷ್ಯವನ್ನು ಕೆಡವಿದ. ದೇವಲೋಕದ ದುಂದುಭಿ ಮೊಳಗಿದುವು. ದೇವತೆಗಳು ಹೂಮಳೆಗರೆದರು.

---

[2]ಶ್ರೀಕೃಷ್ಣ ಅಚಿಂತ್ಯ ಮಹಿಮ. ಅದರಿಂದ ಅವನು ಲಕ್ಷ್ಯವೇಧ ಮಾಡಿದ್ದು ಅಚ್ಚರಿಯೇನಲ್ಲ. ಅಥವಾ ಅರ್ಜುನಾದಿಗಳಿಗೂ ಈ ಲಕ್ಷ್ಯವೇಧ ಶಕ್ಯವಾಗಿತ್ತು. ಕೃಷ್ಣನ ವಿಶೇಷ ಸಾಮರ್ಥ್ಯ ಇಲ್ಲಿ ಏನಿದೆ ಎಂದರೆ ಅಚಿಂತ್ಯ ಮಹಿಮನೆಂದು ಉತ್ತರ. ರಾಮಾವತಾರದಲ್ಲಿ ಹರಿ ಮಾಡಿದ ಕಾರ್ಯ ಪ್ರತಿಯೊಂದು ಕೂಡ ಬೇರೆಯವರಿಗೆ ಅಶಕ್ಯ. ತಾವು ಮಾಡ

---

1. 'ಭೀಮಶ್ಚಾಪಂ ಲಕ್ಷ್ಯಮಪ್ಯೇತದತ್ರ ದ್ರಷ್ಟುಂ ಚ ನೈವೈಚ್ಛದರೀಂದ್ರಧಾರಿಣಃ' ಇತ್ಯುಕ್ತೇಃ. 'ಸಜ್ಯಂ ಕೃತ್ವಾ ಪರೇ ವೀರಾಃ ಪ್ರಾಗ್‌ಜ್ಯೋತಿಷಮಗಧೇಶ್ವರೌ। ಭೀಷ್ಮೋ ದುರ್ಯೋಧನಃ ಕರ್ಣೋ ನಾವಿಂದಂಸ್ತದವಸ್ಥಿತಿಂ॥' ಇತಿ ಭಾಗವತೋಕ್ತೇಶ್ಚ ವಿರೋಧ ಪರಿಹಾರಾಯ ದುರ್ಯೋಧನಾದ್ಯಾಃ ಸಜ್ಯಂ ಕೃತ್ವಾ ತದವಸ್ಥಿತಿಂ ತಸ್ಯ ಲಕ್ಷ್ಯಸ್ಯಾವಸ್ಥಿತಿಂ ನಾವಿಂದನ್, ಭೀಮಸ್ತ್ವಚ್ಛಿನ್ನ ಧರ್ಮತ್ವಾತ್ ತಸ್ಯ ಧನುಷಃ ಅವಸ್ಥಿತಿಮೇವ ನಾವಿಂದತ್ ನಾಪಶ್ಯತ್ ವಿಷ್ಣುಯೋಗ್ಯ ವಸ್ತುನಿ ಇಚ್ಛಾಪಿ ದೋಷ ಇತಿ ಮನ್ವಾನೋ ಧನುಷೋ ದರ್ಶನಮಪಿ ನ ಚಕಾರೇತಿ ಯೋಜನಾ ದ್ರಷ್ಟವ್ಯಾ। ಅತ ಏವ ತದವಸ್ಥಿತಿಂ ನಾವಿಂದನ್ನಿತಿ ಸಾಮಾನ್ಯೇನ ಪ್ರಯೋಗಃ। -ವಾದಿರಾಜೀಯ.

2. ಅಚಿಂತ್ಯ ಮಹಿಮ್ನೋಽಸ್ಯ ನೈತದಾಶ್ಚರ್ಯಮಿತಿ ಭಾವಃ। ಯದ್ವಾ ಅರ್ಜುನಾದಿ ಸಾಧ್ಯೋಽಯಂ ಲಕ್ಷ್ಯವೇಧಃ ಕಥಂ ಕೃಷ್ಣಸ್ಯ ಮಹಿಮೋಚ್ಯತೇ ಇತ್ಯತ ಆಹ ಅಚಿಂತ್ಯ ಇತಿ। 'ರಾಮಾವತಾರಚರಿತಾನಿ ತದನ್ಯ ಪುಂಭಿಃ ಶಕ್ಯಾನಿ ನೈವ ಮನಸಾಪಿ ಹಿ ತಾನಿ ಕರ್ತುಮಿ'ತ್ಯುಕ್ತ ರೀತ್ಯಾ (9-43) 'ಏವಂವಿಧಾನ್ಯಗಣಿತಾನಿ ಯದೂತ್ತಮಸ್ಯೇ'ತಿ (22-274) ವಕ್ಷ್ಯಮಾಣರೀತ್ಯಾ ಚ ಭಗವದೀಯಂ ತದೇವ ಲಕ್ಷ್ಯ ವೇಧಾದಿರೂಪಂ ಕರ್ಮಾಚಿಂತ್ಯ ಮನನ್ಯ ಸಾಧಾರಣಮಿತಿ ಭಾವಃ।
-ತಾಮ್ರಪರ್ಣೀಯ.

ಬಲ್ಲೆವೆಂದು ಮನಸಿನಲ್ಲಿ ಆಲೋಚಿಸಿಲೂ ಆಗದುದು ಎಂದು ನಿರ್ಣಯ ಹಿಂದೆ ಹೇಳಿದೆ. ಮುಂದೆಯೂ 'ಶ್ರೀಕೃಷ್ಣ ಮಾಡಿದ ಇಂಥ ಅಸಂಖ್ಯ ಕಾರ್ಯಗಳು' ಎಂದು ಹೇಳುತ್ತಾರೆ. ಆದರಿಂದ ಶ್ರೀಕೃಷ್ಣನ ಲಕ್ಷ್ಯವೇಧಾದಿ ಕಾರ್ಯ ಪ್ರತಿಯೊಂದೂ ಅಚಿಂತ್ಯ ಬೇರೆಯವರಿಗೆ ಮನಸಿನಲ್ಲಿ ಆಲೋಚಿಸಲೂ ಶಕ್ಯವಿಲ್ಲ ಎಂದರ್ಥ.

ಕೃಷ್ಣೇ ಬ್ರಹ್ಮಾದ್ಯೈಃ ಸ್ತೂಯಮಾನೇ ನರೇಂದ್ರ
ಕನ್ಯಾ ಮಾಲಾಂ ಕೇಶವಾಂಸೇ ನಿಧಾಯ ।
ತಸ್ಥಾವುಪಾಸ್ಯಾಥ ಸರ್ವೇ ನರೇಂದ್ರಾ
ಯುದ್ಧಾಯಾಗುಃ ಕೇಶವಂ ಹ್ಯತ್ತ ಶಸ್ತ್ರಾಃ ॥೫೮॥

ಬ್ರಹ್ಮಾದಿಗಳು ಶ್ರೀಕೃಷ್ಣನನ್ನು ಸ್ತೋತ್ರ ಮಾಡುತ್ತಿರಲು ರಾಜಕುಮಾರಿ ಲಕ್ಷ್ಮಣೆ ಕೃಷ್ಣನ ಹೆಗಲಲ್ಲಿ ಮಾಲೆ ಹಾಕಿ ಬಳಿಯಲ್ಲಿ ನಿಂತಳು. ಆಗ ಎಲ್ಲ ರಾಜರೂ ಚೆನ್ನಾಗಿ ಶಸ್ತ್ರ ಹಿಡಿದು ಕೃಷ್ಣನೊಡನೆ ಯುದ್ಧಕ್ಕೆ ಬಂದರು.

ವಿದ್ರಾವ್ಯ ತಾನ್ ಮಾಗಧಾದೀನ್ ಸ ಕೃಷ್ಣೋ
ಭೀಮಾರ್ಜುನಾಭ್ಯಾಂ ಸಹಿತಃ ಪುರೀಂ ಸ್ವಾಂ ।
ಯಯಾವೇತಾ ಅಷ್ಟ ಮಹಾಮಹಿಷ್ಯಃ
ಕೃಷ್ಣಸ್ಯ ದಿವ್ಯಾ ಲೋಕಸುಂದರ್ಯ ಇಷ್ಟಾಃ ॥೫೯॥

ಶ್ರೀಕೃಷ್ಣ ಆ ಜರಾಸಂಧಾದಿ ರಾಜರನ್ನು ಓಡಿಸಿ ಭೀಮಾರ್ಜುನರೊಂದಿಗೆ ತನ್ನ ಪಟ್ಟಣಕ್ಕೆ ತೆರಳಿದ. ಈ ಅಷ್ಟಮಹಾಮಹಿಷಿಯರು ಶ್ರೀಕೃಷ್ಣನಿಗೆ ಪ್ರೀತಿಪಾತ್ರರಾದ ದಿವ್ಯ ಲೋಕಸುಂದರಿಯರು.

ರುಕ್ಮಿಣೀ, ಸತ್ಯಭಾಮಾ, ಜಾಂಬವತೀ, ಕಾಳಿಂದೀ, ನೀಲಾ, ಮಿತ್ರವಿಂದಾ, ಭದ್ರಾ, ಲಕ್ಷ್ಮಣಾ - ಇವರು ಅಷ್ಟಮಹಾಮಹಿಷಿಯರು.

ಅಷ್ಟ ಮಹಿಷಿಯರು

ಭೈಷ್ಮೀ ಸತ್ಯಾ ಚೈಕತನುರ್ದ್ವಿಧೈವ
ಜಾತಾ ಭೂಮೌ ಪ್ರಕೃತಿರ್ಮೂಲಭೂತಾ ।
ತಯೈವಾನ್ಯಾಃ ಸರ್ವದಾನುಪ್ರವಿಷ್ಟಾ
ಸ್ತಾಸಾಂ ಮಧ್ಯೇ ಜಾಂಬವತೀ ಪ್ರಧಾನಾ ॥೬೦॥

ಅವರಲ್ಲಿ ರುಕ್ಮಿಣೀ ಸತ್ಯಭಾಮೆಯರು ಸರ್ವಜಗಜ್ಜನನಿ ಮಹಾಲಕ್ಷ್ಮಿಯೆ. ಒಬ್ಬಳೇ ಎರಡು ರೂಪಗಳಿಂದ ಭೂಮಿಯಲ್ಲಿ ಅವತರಿಸಿದ್ದಳು. ಬೇರೆ ಮಹಿಷಿಯರು ಅವಳಿಂದಲೆ ಸದಾ ಆವಿಷ್ಟರು. ಅವರ ನಡುವೆ ಜಾಂಬವತಿ ಪ್ರಧಾನಳು.

ಲಕ್ಷ್ಮೀದೇವಿಯ ಆವೇಶವಿಲ್ಲದೆ ಯಾವ ಸ್ತ್ರೀಯೂ ಭಗವಂತನ ಆಂಗಸಂಗಕ್ಕೆ ಯೋಗ್ಯಳೆನಿಸುವುದಿಲ್ಲ. ಅದಕ್ಕಾಗಿ ಜಾಂಬವತಿ ಮುಂತಾದ ಕೃಷ್ಣನ ಬೇರೆ ಮಹಿಷಿಯರಲೆಲ್ಲ ಲಕ್ಷ್ಮಿಯ ಆವೇಶ. ರುಕ್ಮಿಣೀ ಸತ್ಯಭಾಮೆಯರು ಶ್ರೀ ಭೂ ರೂಪಿಣಿಯಾದ ಲಕ್ಷ್ಮಿಯ ಸಾಕ್ಷಾತ್ ಅವತಾರಗಳು.

ರಾಮೇಣ ತುಲ್ಯಾ ಜಾಂಬವತೀ ಪ್ರಿಯತ್ವೇ
ಕೃಷ್ಣಸ್ಯಾನ್ಯಾಃ ಕಿಂಚಿದೂನಾಶ್ಚ ತಸ್ಯಾಃ ।
ಯದಾವೇಶೋ ಬಹುಲಃ ಸ್ಯಾದ್ ರಮಾಯಾ-
ಸ್ತದಾ ತಾಸು ಪ್ರೀಯತೇ ಕೇಶವೋಽಲಂ ॥೬೧॥

ಕೃಷ್ಣನಿಗೆ ಪ್ರೀತಿ ಪಾತ್ರಳೆನಿಸುವ ವಿಷಯದಲ್ಲಿ ಜಾಂಬವತಿ ಬಲರಾಮನಿಗೆ ಸಮಾನಳು. ಉಳಿದವರು ಅವಳಿಗಿಂತ ಸ್ವಲ್ಪ ಕಡಿಮೆಯವರು. ಯಾವಾಗ ರಮಾವೇಶ ಅಧಿಕವಾಗುವುದೋ ಆಗ ಅವರಲ್ಲಿ ಕೃಷ್ಣ ಅಧಿಕ ಪ್ರೀತಿ ಮಾಡುತ್ತಾನೆ.

ಜಾಂಬವತಿ ಪ್ರಧಾನಳು ಎಂದುದು ಸ್ವಾಭಾವಿಕವಾಗಿ ಪ್ರಧಾನಳು ಎಂಬ ಅಭಿಪ್ರಾಯದಿಂದಲ್ಲ. ಅಧಿಕ ರಮಾವೇಶ ಪ್ರಯುಕ್ತ ಜಾಂಬವತಿ ಬಲರಾಮನಷ್ಟೇ ಪ್ರೀತಿಪಾತ್ರಳು. ಉಳಿದವರು ಸ್ವಲ್ಪ ಕಡಿಮೆ. ನಿಜಸ್ವರೂಪ ವಿಚಾರ ಮಾಡಿದಾಗ ಆರು ಮಂದಿ ಮಹಿಷಿಯರೂ ಪ್ರದ್ಯುಮ್ನನಿಗಿಂತ ಇಪ್ಪತ್ತು ಗುಣ ಅಧಿಕರಾದ್ದರಿಂದ ಸಮಾನರೇ. ಅದರಿಂದಲೆ ತಾರತಮ್ಯ ಸ್ತೋತ್ರದಲ್ಲಿ 'ಸ್ತ್ರಿಯಃ ಷಟ್ ಚ' ಎಂದು ಸಾಮ್ಯವೆ ಉಕ್ತವಾಗಿದೆ.[1]
-ವಾದಿರಾಜೀಯ.

ಯದಾವೇಶೋ ಹ್ರಾಸಮುಪೈತಿ ತತ್ರ
ಪ್ರದ್ಯುಮ್ನತೋ ವಿಂಶಗುಣಾಧಿಕಾಃ ಸ್ಯುಃ ।
ಅನಾದಿತಸ್ತಾಃ ಕೇಶವಾನ್ನಾನ್ಯಸಂಸ್ಥಾ
ರೇಮೇ ತಾಭಿಃ ಕೇಶವೋ ದ್ವಾರವತ್ಯಾಂ ॥೬೨॥

ರಮಾವೇಶ ಕಡಿಮೆ ಇರುವಾಗ ಅವರು ಪ್ರದ್ಯುಮ್ನನಿಗಿಂತ ಇಪ್ಪತ್ತು ಗುಣ ಅಧಿಕರು. ಅನಾದಿಕಾಲದಿಂದಲೂ ಅವರು ಕೃಷ್ಣನನ್ನು ಹೊರತು ಅನ್ಯರನ್ನು ಸೇರಿದ್ದಿಲ್ಲ. ಶ್ರೀಕೃಷ್ಣ ದ್ವಾರಕೆಯಲ್ಲಿ ಅವರೊಂದಿಗೆ ರಮಿಸಿದ.

---

1. ರಮಾವೇಶಾಜ್ಜಾಂಬವತ್ಯಾ ರಾಮಸಾಮ್ಯಂ। ಅನ್ಯಾಸಾಂ ತು ಈಷದ್ರಮಾವೇಶೇಽಪಿ ತತಃ ಕಿಂಚಿದೂನತ್ವಂ। ನಿಜಸ್ವರೂಪ ವಿಚಾರೇ ತು ಷಣ್ಣಾಮಪಿ ಪ್ರದ್ಯುಮ್ನತೋ ವಿಂಶತಿ ಗುಣಾಧಿಕತ್ವೇನ ಸಾಮ್ಯಮೇವ। ಅತಸ್ತಾರತಮ್ಯಸ್ತೋತ್ರೇ ಸ್ತ್ರಿಯಃ ಷಟ್ ಚೇತಿ ಷಣ್ಣಾಮಪಿ ಸಮತಯೋಕ್ತಿರಿತಿ ಜ್ಞೇಯಂ।
-ವಾದಿರಾಜೀಯ

ರಮಾವೇಶ ಆಧಿಕವಿದ್ದಾಗ ಜಾಂಬವತಿ ಬಲರಾಮನಿಗೆ ಸಮಾನಳು. ಉಳಿದವರು ಬಲರಾಮನಿಗಿಂತ ಸ್ವಲ್ಪ ಕಡಿಮೆ. ರಮಾವೇಶವಿಲ್ಲದಿದ್ದಾಗ ಎಲ್ಲರೂ ಬಲರಾಮನಿಗಿಂತ ಐದು ಗುಣ ಕಡಿಮೆ. ಪ್ರದ್ಯುಮ್ನನಿಗಿಂತ ಇಪ್ಪತ್ತು ಗುಣ ಹೆಚ್ಚು, ಆಗಲೂ ಜಾಂಬವತಿ ಸ್ವಲ್ಪ ಶ್ರೇಷ್ಠಳು. ಕೆಲವರ ಅಭಿಪ್ರಾಯದಲ್ಲಿ ಇತರರು ಸ್ವಲ್ಪ ಕಡಿಮೆ ಎನಿಸುವುದು ಯಾವಾಗಲೂ ಅಲ್ಲ. ಯಾವಾಗ ರಮಾವೇಶ ಹೆಚ್ಚು ಇರುತ್ತದೋ ಆಗ ಜಾಂಬವತಿಯಷ್ಟೇ ಪ್ರೀತಿ ಪಾತ್ರರು. ಆವೇಶ ಕಡಿಮೆಯಾದಾಗ ಪ್ರದ್ಯುಮ್ನನಿಗಿಂತ ಇಪ್ಪತ್ತು ಗುಣ ಶ್ರೇಷ್ಠರಾಗುವರು. ಆಗ ಜಾಂಬವತಿಗಿಂತ ಸ್ವಲ್ಪ ಕಡಿಮೆ ಎನಿಸುವರು.[1]

ಧ್ವನ್ಯಾಶ್ಚಯೋರ್ಪಾಖ್ಯಾನ

ಏವಂ ಕೃಷ್ಣೇ ದ್ವಾರಕಾಮಧ್ಯಸಂಸ್ಥೇ
ಗಿರಿಂ ಭೂಪಾ ರೈವತಕಂ ಸಮಾಯಯುಃ।
ದುರ್ಯೋಧನಾದ್ಯಾಃ ಪಾಂಡವಾಶ್ಚೈವ ಸರ್ವೇ
ನಾನಾದೇಶ್ಯಾ ಯೇ ಚ ಭೂಪಾಲಸಂಘಾಃ ॥೬೩॥

ಹೀಗೆ ಶ್ರೀಕೃಷ್ಣ ದ್ವಾರಕೆಯಲ್ಲಿದ್ದಾಗ ರೈವತಗಿರಿಗೆ ದುರ್ಯೋಧನಾದಿ ರಾಜರುಗಳೂ ಪಾಂಡವರೂ ಎಲ್ಲರೂ ಬಂದರು. ನಾನಾ ದೇಶಗಳ ರಾಜ ಸಮೂಹಗಳೂ ಆಗಮಿಸಿದುವು.

ದುರ್ಯೋಧನ ಒಂದು ಯಜ್ಞವನ್ನು ಮಾಡಿದ. ಅದಕ್ಕೆ ಎಲ್ಲ ರಾಜರುಗಳೂ ಬಂದಿದ್ದರು. ಅವರಿಗೆ ಶ್ರೀಕೃಷ್ಣನ ದ್ವಾರಕೆಯ ನವ ನಿರ್ಮಾಣದ ಹಾಗೂ ಸಿರಿಸಂಪತ್ತಿನ ಬಗ್ಗೆ ಕಣ್ಣಾರೆ ನೋಡಿ ತಿಳಿವ ಕುತೂಹಲವಿದ್ದುದರಿಂದ ದ್ವಾರಕೆಯ ಸಮೀಪದಲ್ಲಿ ಉತ್ತಮ ವಿಹಾರ ಸ್ಥಳವಾದ ರೈವತವೆಂಬ ಕ್ರೀಡಾಶೈಲದಲ್ಲಿ ಬಂದು ಬೀಡುಬಿಟ್ಟರು. ದ್ವಾರಕೆಯ ಪೂರ್ವದಕ್ಷಿಣ ಪಶ್ಚಿಮ ಉತ್ತರಗಳಲ್ಲಿ ಕ್ರಮವಾಗಿ ರೈವತ ಲತಾವೇಷ್ಟ ಸುರಕ್ಷ ವೇಣುಮಂತ ಎಂದು ನಾಲ್ಕು ಕ್ರೀಡಾಶೈಲಗಳು.

---

1. ರಮಾವೇಶೋದ್ರೇಕದಶಾಯಾಂ ಜಾಂಬವತೀ ರಾಮಸಮಾ। ಅನ್ಯಾಸ್ತು ರಾಮಾತ್ ಕಿಂಚಿದೂನಾಃ। ತದಭಾವಕಾಲೇ ಸರ್ವಾ ಅಪಿ ರಾಮಾತ್ ಪಂಚಗುಣನ್ಯೂನಾಃ। ಪ್ರದ್ಯುಮ್ನತೋ ವಿಂಶತಿ ಗುಣಾಧಿಕಾಃ। ತದಾಪಿ ಜಾಂಬವತೀ ಕಿಂಚಿದಧಿಕೇತಿ। ಟೀಕಾಯಾಂ ತು ತಾಸಾಂ ಮಧ್ಯೇ ಜಾಂಬವತೀ ಪ್ರಧಾನಾ ಪ್ರಕೃತ್ಯಾವೇಶಾಧಿಕ್ಯಾದಿತ್ಯುಕ್ತಂ। ಕೇಚಿತ್ತು ಇತರಾಸಾಂ ಕಿಂಚಿದೂನತ್ವಂ ನ ಸಾರ್ವಕಾಲಿಕ ಮಿತ್ಯಾಹ ಯದೇತಿ। ತಾಸು ಕಾಲಿಂದ್ಯಾದ್ಯಾಸು ಅಲಂ ಪ್ರೀಯತೇ। ಜಾಂಬವತೀಸಾಮ್ಯೇನ ಪ್ರೀಯತೇ। ಯದಾ ತು ತಾಸ್ವಾವೇಶೋಽಲ್ಪತ್ವಮುಪೈತಿ ತದಾ ಪ್ರದ್ಯುಮ್ನತೋ ವಿಂಶತಿಗುಣಾಧಿಕಾಃ ಸ್ಯುಃ। ತದಾ ಕಿಂಚಿದೂನತ್ವಮಿತಿ ಭಾವಃ। -ತಾಮ್ರಪರ್ಣೀಯ

ಅವುಗಳಲ್ಲಿ ರೈವತಗಿರಿಯ ಮೇಲೆ ಕೃಷ್ಣ ರಾಜರುಗಳಿಗೆ ದರ್ಶನ ನೀಡಿದ.

ಆತ್ಮಾನಂ ತಾನ್ ದ್ರಷ್ಟುಮಭ್ಯಾಗತಾನ್ ಸ
ಕೃಷ್ಣೋ ಗಿರೌ ರೈವತಕೇ ದದರ್ಶ ।
ನಮಸ್ಕೃತೇ ಸರ್ವನರೇಂದ್ರಮುಖ್ಯೈಃ
ಕೃಷ್ಣೇ ವೈದರ್ಭ್ಯಾ ಸಹ ದಿವ್ಯಾಸನಸ್ಥೇ ॥೬೪॥

ಏತ್ಯಾಕಾಶಾನ್ನಾರದಃ ಕೃಷ್ಣಮಾಹ
ಸರ್ವೋತ್ತಮಸ್ತ್ವಂ ತ್ವಾದೃಶೋ ನಾಸ್ತಿ ಕಶ್ಚಿತ್ ।
ಇತ್ಯಾಶ್ಚರ್ಯೋ ಧನ್ಯ ಇತ್ಯೇವ ಶಬ್ದ
ದ್ವಯೇ ತೂಕ್ತೇ ವಾಸುದೇವಸ್ತಮಾಹ ॥೬೫॥

ದಕ್ಷಿಣಾಭಿಃ ಸಾಕಮಿತ್ಯೇವ ಕೃಷ್ಣಂ
ಪಪ್ರಚ್ಛುರೇತತ್ ಕಿಮಿತಿ ಸ್ಮ ಭೂಪಾಃ ।
ನಾರಾಯಣೋ ಮುನಿಮೂಚೇ ವದೇತಿ
ಶೃಣುಧ್ವಮಿತ್ಯಾಹ ಸ ನಾರದೋಽಪಿ ॥೬೬॥

ತನ್ನನ್ನು ನೋಡಲು ಬಂದಿದ್ದ ರಾಜರುಗಳನ್ನು ಶ್ರೀಕೃಷ್ಣ ರೈವತಕ ಪರ್ವತದಲ್ಲಿ ಕಂಡ. ಆಗ ಎಲ್ಲ ರಾಜರುಗಳಿಂದ ನಮಸ್ಕೃತನಾಗಿ ರುಕ್ಮಿಣಿಯೊಂದಿಗೆ ದಿವ್ಯಾಸನದಲ್ಲಿ ಕೃಷ್ಣ ಕುಳಿತಿದ್ದಾಗ ನಾರದ ಆಕಾಶದಿಂದ ಇಳಿದು ಬಂದು, ಕೃಷ್ಣನಿಗೆ 'ನೀನೆ ಸರ್ವೋತ್ತಮನು, ನಿನಗೆ ಸಮಾನರು ಯಾರೂ ಇಲ್ಲ' ಎನ್ನುವ ಅಭಿಪ್ರಾಯದಿಂದ ನೀನೆ ವಿಶೇಷವಾಗಿ 'ಆಶ್ಚರ್ಯ' ನೀನೇ 'ಧನ್ಯ' ಎಂದು ಎರಡು ಶಬ್ದಗಳನ್ನು ನುಡಿದ. ಆಗ ಶ್ರೀಕೃಷ್ಣ 'ದಕ್ಷಿಣಾದೇವಿಯರೊಂದಿಗೆ' ಎಂದ. ರಾಜರು ಇದೇನೆಂದು ಕೃಷ್ಣನನ್ನು ಕೇಳಿದರು. ಶ್ರೀಕೃಷ್ಣ ನಾರದನಿಗೆ 'ನೀನೆ ಹೇಳು' ಎಂದ. 'ಕೇಳಿರಿ' ಎಂದ ನಾರದ.

[1]'ಆ' ಎಲ್ಲೆಡೆ, 'ಶ್ಚರ್ಯ' ಸುಖಾನುಭವಯೋಗ್ಯರಾದ ಎಲ್ಲ ಜೀವರೂ ಯಾರಿಂದ ಪ್ರವೃತ್ತಿ ಮಾಡುವರೋ ಅವನು, 'ಆಶ್ಚರ್ಯ'

1. ಆ ಸಮಂತಾತ್ ಶ್ಚರ್ಯಾಃ ಸುಖಿಚರಣಯೋಗ್ಯಾಃ ಜೀವಾಃ ಯಸ್ಮಾತ್ ಪ್ರವರ್ತಂತೇ ಸ ಆಶ್ಚರ್ಯಃ। ಧಂ ಸ್ವವಶಜಗದ್ಧಾರಕತ್ವೇನ ಕುತ್ಸಿತ ವಾದಿಭಿಃ ಕಥ್ಯಮಾನಂ ನಿ ನಿತರಾಮಯತಿ ದೂರೇ ಯಾಪಯತಿ ಅಷ್ಟಮರಸೀಕರೋತೀತಿ ಧನ್ಯಃ। ಇತಿ ವ್ಯುತ್ಪತ್ತಿಮಭಿಪ್ರೇತ್ಯೋಕ್ತಂ ಸರ್ವೋತ್ತಮಸ್ತ್ವಂ ತ್ವಾದೃಶೋ ನಾಸ್ತಿ ಕಶ್ಚಿದಿತಿ। ಏವಕಾರೇಣ ಪಾರ್ಶ್ವಸ್ಥಾಂ ರುಕ್ಮಿಣ್ಯಾಖ್ಯಶ್ರಿಯಂ ವ್ಯವಚ್ಛಿನತ್ತಿ। ವಾಸುದೇವಸ್ತಂ ನಾರದಂ ಪ್ರತಿ ದಕ್ಷಿಣಾಭಿಃ ಸಾಕಮೇವಾಹಂ ಆಶ್ಚರ್ಯೋಽಸ್ಮಿ ಧನ್ಯೋಽಸ್ಮೀತ್ಯಾಹ।

ದಕ್ಷಿಣಾಭಿಃ ಸಾಕಮಿತಿ ವದನ್ ಕೃಷ್ಣಃ ನ ಕೇವಲೋಽಹಮೇವ ಆಶ್ಚರ್ಯಾದಿ ಶಬ್ದಾರ್ಥಭೂತ

ಅಂದರೆ ಸರ್ವೋತ್ತಮ ಚೇತನ ನೀನೆ. 'ಧ' ಜಗತ್ತನ್ನು ತಮ್ಮ ಅಧೀನವಿಟ್ಟುಕೊಂಡು ಧರಿಸುವವರೆಂದು ದುರ್ವಾದಿಗಳು ಒಪ್ಪಿರುವ ಇತರ ದೇವತೆಗಳನ್ನು 'ನಿ' ಚೆನ್ನಾಗಿ 'ಯ' ದೂರಕ್ಕೆ ಹೋಗಲಾಡಿಸುವವನು, ಅಷ್ಟಮರಸದಂತೆ ಇಲ್ಲವಾಗಿಸುವವನು 'ಧನ್ಯ' ಅಂದರೆ ನಿನ್ನಂಥವನು ಇನ್ನೊಬ್ಬನಿಲ್ಲ, ನೀನೇ ಸರ್ವೋತ್ತಮ, ನಿನಗೆ ಸಮಾನರು ಯಾರೂ ಇಲ್ಲ ಎಂದಾಯಿತು. ಈ ಅಭಿಪ್ರಾಯದಿಂದ ನಾರದರು 'ನೀನೆ ಆಶ್ಚರ್ಯ, ನೀನೆ ಧನ್ಯ, ಹೊರತು ನಿನ್ನ ಬಳಿ ಇರುವ ಈ ರಮಾದೇವಿಯಲ್ಲ' ಎಂದರು.

ಸರ್ವೋತ್ತಮತ್ವಾದಿಗುಣವಾನ್, ಕಿಂತು ಯಾ ದಕ್ಷಿಣಾಭಿಮಾನಿತ್ವಾತ್, ಅರ್ಧನಾರೀಶ್ವರತಯಾ ಸ್ಥಿತಸ್ಯ ಭಗವದ್ದೇಹಸ್ಯ ವಾಮಭಾಗೇ ಸ್ಥಿತಾಯಾ ದಕ್ಷಿಣಭಾಗೇ ಇನಃ ಸ್ವಪತಿರ್ನಾರಾಯಣಃ ಸದಾ ವರ್ತತೇ ಇತಿ ಹೇತೋರ್ವಾ ದಕ್ಷಿಣಾಪದವಾಚ್ಯಾ ರುಕ್ಮಿಣೀರೂಪೇಯಂ ಶ್ರೀಶ್ಚ ಸರ್ವೋತ್ತಮತ್ವಾದಸದೃಶತ್ವಾಚ್ಚ ಆಶ್ಚರ್ಯಾ ಧನ್ಯಾ ಚೇತ್ಯಭಿಪ್ರೈತಿ।

ಬಹುವಚನಂ ತು ನಾನಾವಿಧಯಜ್ಞೇಷು ದೀಯಮಾನ ದಕ್ಷಿಣಾನಾಂ ಅನೇಕ ಪ್ರಕಾರತ್ವೇನ ಬಹುತ್ವಾತ್ ತದಭಿಮಾನಿತಯಾ ತತ್ರ ಸ್ಥಿತಾನಾಮತ ಏವ ದಕ್ಷಿಣಾಪದವಾಚ್ಯಾನಾಂ ದಕ್ಷಿಣಾಖ್ಯ ಮೂಲರೂಪ ರಮಾಂಶಾನಾಂ ಬಹುತ್ವಾಭಿಪ್ರಾಯೇಣೇತಿ ಜ್ಞೇಯಂ।

ಅತ್ರ ಸರ್ವಪದೇನ ಚ ಪ್ರಸ್ತುತಾಃ ಕೂರ್ಮಮಾರಭ್ಯ ಬ್ರಹ್ಮಪರ್ಯಂತಾಃ ಪ್ರಧಾನ ಜೀವಾ ವೇದಾಭಿಮಾನಿನೀ ಯಜ್ಞಾಭಿಮಾನಿನೀ ಚೇತಿ ದ್ವಿರೂಪಾ ಶ್ರೀಶ್ಚ ಗೃಹ್ಯತೇ। ತತ್ರ ಬ್ರಹ್ಮ ಪರ್ಯಂತ ಜೀವೇಭ್ಯ ಉತ್ತಮತ್ವಂ ಕೃಷ್ಣಸ್ಯ ರುಕ್ಮಿಣ್ಯಾಶ್ಚ ಸಮಂ। ಇಯಾಂಸ್ತು ವಿಶೇಷಃ - ಸ್ವಸ್ಯ ನಿರವಧಿಕೋತ್ತಮತ್ವಂ, ಲಕ್ಷ್ಮ್ಯಾಸ್ತು ಸಾವಧಿಕೋತ್ತಮತ್ವಮಿತಿ।

ವೇದಯಜ್ಞಾಖ್ಯ ಲಕ್ಷ್ಮೀರೂಪದ್ವಯಾತ್ ಸ್ವಸ್ಯ ನಿರವಧಿಕಮುತ್ತಮತ್ವಂ, ಲಕ್ಷ್ಮ್ಯಾಸ್ತು ಸ್ವರೂಪೇಷೂತ್ತಮಾಧಮ ವಿಭಾಗಾಯೋಗೇಽಪಿ ರಮಾರೂಪತ್ರಯಾಭಿಮನ್ಯಮಾನ ವೇದ ಯಜ್ಞದಕ್ಷಿಣಾನಾಂ ಕ್ರಮೇಣೋತ್ತಮತ್ವಾತ್ ತದಭಿಮಾನಿನಾಂ ಲಕ್ಷ್ಮೀರೂಪಾಣಾಮಪಿ ಕ್ರಮೇಣೋತ್ತಮತ್ವೋಕ್ತಿರಿತಿ ಜ್ಞೇಯಂ। ಶುಷ್ಕವೇದಾತ್ ತದರ್ಥ ಭೂತ ವಿಷ್ಣುಪೂಜಾರೂಪ ಯಜ್ಞಸ್ಯ ಜ್ಯೈಷ್ಠ್ಯಂ। ಋತ್ವಿಕ್‌ಕೃತ ಪುಣ್ಯ ಶ್ರೇಯಃ ಸಂಪತ್ತ್ಯಾ ಯಜಮಾನ ಕೃತ ಯಜ್ಞಪೂರಕತ್ವಾತ್ ಯಜ್ಞಕಾಲೀನರ್ತ್ವಿಕ್ ಶ್ರಮನಿವರ್ತಕತ್ವಾಚ್ಚ ದಕ್ಷಿಣಾಯಾಃ ಕೇವಲಯಜ್ಞಾದಪಿ ಜ್ಯೈಷ್ಠ್ಯಂ॥

ಯಥಾ ಏಕಸ್ಯೈವ ರಾಜಕುಮಾರಸ್ಯ ಮೇಷ ತುರಗ ಗಜಾಖ್ಯೇಷು ಕ್ರಮೇಣಾಧಿಕ ಸ್ಥಾನೇಷು ಸ್ಥಿತೌ ತಸ್ಯೈವ ಸ್ಥಾನಕೃತ ನೀಚೋಚ್ಚ ಭಾವೋಪಾಧಿಕಾ ನೀಚೋಚ್ಚತಾ ದ್ರಷ್ಟೃಣಾಂ ದೃಶಿ ದೃಶ್ಯತೇ ಅತ ಏವ ಗಜರಾಜಸ್ಥಿತಂ ತಂ ಮಹಾರಾಜ ಇತಿ ಪರಿತೋ ನಮಂತಿ ತಥೇಹಾಪೀತ್ಯೇಕೋ ಭಾವಃ।

ಬಹಿರ್ನಿಷ್ಠವೇದಾಭಿಮಾನಿತಯಾ ಬಹಿಃಸ್ಥಿತರಮಾರೂಪಾತ್ ಭಗವದಂಕಗತಾ ಯಜ್ಞಾಭಿಮಾನಿನೀ ಲಕ್ಷ್ಮೀಃ ಸ್ಥಾನಾಧಿಕ್ಯೇನಾಧಿಕೇತ್ಯುಚ್ಯತೇ। ತತೋಽಪಿ ಭಗವತೋ ದೇಹಾರ್ಧಗತಾ ರಮಾ ಸ್ಥಾನವೈಶೇಷ್ಯಾತ್ ವಿಶಿಷ್ಟೇತ್ಯುಚ್ಯತೇ ಇತ್ಯಪರೋ ಭಾವಃ॥ - ವಾದಿರಾಜೀಯ

ಆಗ ಶ್ರೀಕೃಷ್ಣ ದಕ್ಷಿಣಾದೇವಿಯರೊಂದಿಗೇ ನಾನು ಆಶ್ಚರ್ಯ ಧನ್ಯನಾಗಿರುವೆನೆಂದ. ಕೇವಲ ನಾನೇ ಆಶ್ಚರ್ಯ ಶಬ್ದಾರ್ಥವೆನಿಸಿದ ಸರ್ವೋತ್ತಮತ್ವಾದಿ ಗುಣಶಾಲಿಯಲ್ಲ. ದಕ್ಷಿಣೆಗಳಿಗೆ ಅಭಿಮಾನಿನಿ ಎಂಬ ಕಾರಣದಿಂದಲೂ, ನಾನು ಅರ್ಧನಾರೀಶ್ವರನಾಗಿರುವಾಗ ನನ್ನ ದೇಹಭಾಗಕ್ಕೆ ಎಡಭಾಗದಲ್ಲಿರುವ ರಮೆಗೆ 'ದಕ್ಷ' ಬಲದಲ್ಲಿ 'ಇನ' ಪತಿಯಾದ ನಾನು ಸದಾ ಇರುವೆನೆಂಬ ಕಾರಣದಿಂದಲೂ 'ದಕ್ಷಿಣಾ' ಎಂಬ ಹೆಸರುಳ್ಳ ರುಕ್ಮಿಣೀ ರೂಪಳಾದ ಈ ರಮಾದೇವಿಯೂ ಸರ್ವೋತ್ತಮಳು ಮತ್ತು ಅಸದೃಶಳಾಗಿರುವುದರಿಂದ ಆಶ್ಚರ್ಯಳು ಮತ್ತು ಧನ್ಯಳು.

ದಕ್ಷಿಣಾದೇವಿಯರೆಂದು ಬಹುವಚನ ಏಕೆಂದರೆ ನಾನಾ ಬಗೆಯ ಯಜ್ಞಗಳಲ್ಲಿ ಕೊಡುವ ನಾನಾ ಬಗೆಯ ದಕ್ಷಿಣೆಗಳಿಗೆ ಅಭಿಮಾನಿಯಾಗಿ ದಕ್ಷಿಣಾಪದವಾಚ್ಯವಾದ ದಕ್ಷಿಣಾನಾಮಕ ಮೂಲರೂಪಾಂಶಗಳು ಬಹಳ ಇವೆ.

ರಮಾ ನಾರಾಯಣರಿಬ್ಬರಿಗೂ ಸರ್ವೋತ್ತಮತ್ವ ಹೇಗೆಂದರೆ 'ಸರ್ವ' ಪದದಿಂದ ಇಲ್ಲಿ ಪ್ರಸ್ತುತರಾದ ಕೂರ್ಮಾದಿ ಬ್ರಹ್ಮಪರ್ಯಂತ ಪ್ರಧಾನ ಜೀವರೂ ವೇದಾಭಿಮಾನಿನಿ ಯಜ್ಞಾಭಿಮಾನಿನಿ ಎಂಬ ಎರಡು ರಮಾರೂಪಗಳೂ ವಿವಕ್ಷಿತರಾಗಿದ್ದಾರೆ. ಅವರಲ್ಲಿ ಬ್ರಹ್ಮಪರ್ಯಂತ ಜೀವರಿಗಿಂತ ಉತ್ತಮತ್ವ ಕೃಷ್ಣನಿಗೂ ರುಕ್ಮಿಣಿಗೂ ಸಮಾನ. ಇಷ್ಟು ವ್ಯತ್ಯಾಸ - ಕೃಷ್ಣನಿಗೆ ಪೂರ್ಣ ಉತ್ತಮತ್ವ, ರುಕ್ಮಿಣಿಗೆ ಸ್ವಲ್ಪ ಕಡಿಮೆ.

ವೇದಯಜ್ಞಾಭಿಮಾನಿ ರಮಾ ರೂಪಗಳಿಗಿಂತ ಉತ್ತಮತ್ವ ಕೃಷ್ಣನಿಗೆ ಪೂರ್ಣವೆ. ರಮಾದೇವಿಯ ರೂಪಗಳಲ್ಲಿ ಉತ್ತಮ ಅಧಮ ಎಂದು ವಿಭಾಗ ಸ್ವರೂಪಭೂತವಾಗಿ ಇಲ್ಲ. ಆದರೂ ರೂಪತ್ರಯದಿಂದ ಅಭಿಮಾನ್ಯಮಾನವಾದ ವೇದ ಯಜ್ಞ ದಕ್ಷಿಣೆಗಳಲ್ಲಿ ಕ್ರಮವಾಗಿ ಉತ್ತಮತ್ವವಿರುವುದರಿಂದ ಅಭಿಮಾನಿ ರಮಾರೂಪಗಳಿಗೂ ಕ್ರಮವಾಗಿ ಉತ್ತಮತ್ವವನ್ನು ಹೇಳಿದೆಯಷ್ಟೆ, ಏಕೆಂದರೆ ಬರಿ ವೇದಾಧ್ಯಯನಕ್ಕಿಂತ ಅದರಲ್ಲಿ ಹೇಳಿದಂತೆ ವಿಷ್ಣುಪೂಜಾರೂಪವಾದ ಯಜ್ಞಗಳನ್ನು ಮಾಡುವುದು ಉತ್ತಮ. ಕೇವಲ ಯಜ್ಞಕ್ಕಿಂತ ಋತ್ವಿಜರ ಪುಣ್ಯಶ್ರೇಯಸ್ಸುಗಳನ್ನು ಯಜಮಾನನಿಗೆ ತಂದುಕೊಟ್ಟು ಅವನ ಯಜ್ಞಕ್ಕೆ ಪೂರಕವಾಗಬಲ್ಲ ಮತ್ತು ಯಜ್ಞಕಾಲದಲ್ಲಿ ಋತ್ವಿಜರಿಗೆ ಶ್ರಮನಿವೃತ್ತಿ ಮಾಡಬಲ್ಲ, ದಕ್ಷಿಣೆ ಶ್ರೇಷ್ಠ.

ಒಬ್ಬನೆ ರಾಜಕುಮಾರ ಕುರಿಯ ಮೇಲೆ, ಕುದುರೆಯ ಮೇಲೆ ಮತ್ತು

ಆನೆಯ ಮೇಲೆ ಕುಳಿತಾಗ ಕ್ರಮವಾಗಿ ಹೆಚ್ಚು ಹೆಚ್ಚಿನ ಉನ್ನತ ಸ್ಥಾನದಲ್ಲಿ ಕುಳಿತಂತಾಗಿ ಸ್ಥಾನ ತಾರತಮ್ಯ ಪ್ರಯುಕ್ತ ತಾರತಮ್ಯ ನೋಡುವವರ ಕಣ್ಣಿಗೆ ಕಾಣುತ್ತದೆ. ಆದರಿಂದ ಗಜರಾಜನ ಮೇಲೆ ಕುಳಿತಾಗ ಮಹಾರಾಜನೆಂದು ಎಲ್ಲರೂ ನಮಿಸುತ್ತಾರೆ. ಹಾಗೇ ಇದು ಎಂದು ಒಂದು ವಿವರಣೆ.

ವೇದಾಭಿಮಾನಿ ರಮಾರೂಪ ಹೊರಗೆ ಇರುತ್ತದೆ. ಅದಕ್ಕಿಂತಲೂ ಭಗವಂತನ ತೊಡೆಯಲ್ಲಿರುವ ಯಜ್ಞಾಭಿಮಾನಿರೂಪ ಲೋಕದ ಕಣ್ಣಿಗೆ ಸ್ಥಾನದ ದೃಷ್ಟಿಯಿಂದ ಉತ್ತಮ. ಆ ರೂಪಕ್ಕಿಂತಲೂ ಭಗವಂತನ ಶರೀರದ ಅರ್ಧಭಾಗದಲ್ಲಿ ಪೂರ್ತಿ ಇರುವ ದಕ್ಷಿಣಾಭಿಮಾನಿರೂಪ ಹೆಚ್ಚು ಹತ್ತಿರವಾಗಿದ್ದು ಉತ್ತಮ ಎನ್ನುವುದು ಇನ್ನೊಂದು ಅಭಿಪ್ರಾಯ.
-ವಾದಿರಾಜೀಯ

ಕೂರ್ಮೋ ದೃಷ್ಟೋ ವಿಷ್ಣುಪದ್ಯಾಂ ಮಯೋಕ್ತ-
ಸ್ತ್ವಮುತ್ತಮೋ ನಾಸ್ತ್ಯಧಿಕಸ್ತವೇತಿ ।
ಊಚೇ ಗಂಗಾಮುತ್ತಮಾಂ ಸಾ ಜಲೇಶ-
ಮುಮಾಮೂಚೇ ಪೃಥಿವೀನಾಮಿಕಾಂ ಸಃ ॥೬೭॥

ನಾರದಮುನಿ ನುಡಿದರು - 'ನಾನು ಗಂಗಾನದಿಯಲ್ಲಿ ಕೂರ್ಮರೂಪದಲ್ಲಿದ್ದ ಒಬ್ಬ ದೇವನನ್ನು ಕಂಡೆ. ನೀನೆ ಉತ್ತಮ, ನಿನಗಿಂತ ಉತ್ತಮನಿಲ್ಲ ಎಂದೆ. ಆಗ ಅವನು ಗಂಗೆ ಉತ್ತಮಳು ಎಂದ. ಗಂಗೆ ವರುಣ ಉತ್ತಮ ಎಂದಳು. ವರುಣ ಪೃಥಿವೀ ನಾಮಕಳಾದ ಉಮೆ ಉತ್ತಮಳು ಎಂದ.'

[1]'ಗಂಗೆಯಲ್ಲಿ ಒಬ್ಬ ಮಹಾ ಕೂರ್ಮನನ್ನು ಕಂಡೆ, ನೀನೆ ಉತ್ತಮ,

---

1. ಗಂಗಾಯಾಂ ಮಯಾ ದೃಷ್ಟಃ ಕೂರ್ಮಸ್ತ್ವಮುತ್ತಮೋಽಸಿ ತವ ಸಮೋ ನಾಸ್ತೀ ತಿ ಚ ಭಾವೇನೋಕ್ತಃ ಆಶ್ವರ್ಯೋಽಸಿ ಧನ್ಯೋಽಸೀತಿ। ಏವಂ ವದತೋ ನಾರದಸ್ಯ ಕೂರ್ಮಃ ಸ್ಥಾವರಸರ್ವೋತ್ತಮ ಇತ್ಯೇವಾಭಿಸಂಧಿಃ। ಗಂಗಾತೋಽಪ್ಯವರಸ್ಯ ನಿರವಧಿಕ ಸರ್ವೋತ್ತಮತ್ವಾಯೋಗಾತ್ ಸಾಕ್ಷಾತ್ಕೃತ ಪರತತ್ವಸ್ಯ ನಾರದಸ್ಯ ಭ್ರಮಾಯೋಗಾಚ್ಚ। ಅತಃ ಕೂರ್ಮೋಽಸೌ ಗಂಗಾತೋಽಪ್ಯವರಸ್ತಾರತಮ್ಯ ಪೂರ್ವಾವಧಿ ಭೂತಃ ಪುಷ್ಕರ ಏವೇತಿ ಜ್ಞೇಯಮ್ ।
ಏವಮುಕ್ತೇ ಸತಿ ಕೂರ್ಮಃ ಸ್ವಾಧಾರತ್ವಾದ್ ಗಂಗೈವ ಮತ್ತೋಽಪ್ಯಾಶ್ಚರ್ಯಾ ಧನ್ಯಾ ಚೇತಿ ಭಾವೇನ ಗಂಗಾಮೇವೋತ್ತಮಾಮೂಚೇ। ತದಾ ಗಂಗಾ ಮಾಗತ್ಯ ತ್ವಮಾಶ್ಚರ್ಯಾಸಿ ಧನ್ಯಾಸೀತ್ಯಬ್ರುವಂ। ತದಾ ಸಾ ಗಂಗಾ ಸ್ವಪತಿತ್ವಾತ್ ವರುಣೋ ಮತ್ತ ಆಶ್ಚರ್ಯೋ ಧನ್ಯಶ್ಚೇತಿ ಭಾವೇನ ಜಲೇಶ ಮುತ್ತಮಮೂಚೇ। ತತೋಽಹಂ ವರುಣಮುಪೇತ್ಯ ತ್ವಮಾಶ್ಚರ್ಯೋಽಸಿ ಧನ್ಯೋಽಸೀತ್ಯಬ್ರುವಂ। ತದಾ ಸ ವರುಣೋ ಮಮಾಪಿ ಮಾತೃಸ್ಥಾನೀಯತ್ವಾತ್ ಪೃಥಿವೀ ಉತ್ತಮೈವ, ಮತ್ತೋಽಪ್ಯಾಶ್ಚರ್ಯಾ ಧನ್ಯಾ ಚೇತಿ ಭಾವೇನ ಪೃಥಿವೀನಾಮಿಕಾಮುಮಾಮೂಚೇ। ಕ್ವಚಿದ್ ಗ್ರಂಥೇ ಪೃಥಿವೀಮಾಹೇತ್ಯಪ್ಯಸ್ತಿ। ತಸ್ಯ ತಾತ್ಪರ್ಯ-ಕಥನಾಯ ಪೃಥಿವೀನಾಮಿಕಾಮಿತ್ಯುಕ್ತಮ್ ॥ -ವಾದಿರಾಜೀಯ

ನಿನಗೆ ಸಮಾನನಿಲ್ಲ ಎಂಬ ಅಭಿಪ್ರಾಯದಿಂದ ನೀನೆ ಆಶ್ಚರ್ಯ, ನೀನೆ ಧನ್ಯ ಎಂದೆ' ಎನ್ನುತ್ತಾರೆ ನಾರದರು. ಆವರ ಅಭಿಪ್ರಾಯದಲ್ಲಿ ಈ ಕೂರ್ಮದೇವ ತನಗಿಂತ ಕೆಳಗಿನವರಾದ ಎಲ್ಲ ಜೀವರಿಗಿಂತ ಉತ್ತಮ ಹೊರತು ಸರ್ವೋತ್ತಮನಲ್ಲ. ಏಕೆಂದರೆ ಗಂಗೆಗಿಂತಲೂ ಕಡಿಮೆಯವನು ಈತನೆನ್ನುವುದು ಅವರಿಗೆ ಗೊತ್ತು. ಪರತತ್ವ ಸಾಕ್ಷಾತ್ಕಾರ ಹೊಂದಿರುವ ಅವರಿಗೆ ಭ್ರಮೆ ಉಂಟಾಗಲು ಶಕ್ಯವಿಲ್ಲ. ಅದರಿಂದ ಈ ಕೂರ್ಮದೇವ ಗಂಗೆಗಿಂತ ಕಡಿಮೆಯವನೆಂದರೆ ತತ್ವದೇವತೆಗಳ ತಾರತಮ್ಯದಲ್ಲಿ ಅತಿ ಕೆಳಗಿನವನಾದ ಪುಷ್ಕರ ಎಂದೇ ತಿಳಿಯಬೇಕು.

ಕೂರ್ಮ ತನಗೆ ಆಧಾರಳಾದ ಗಂಗೆಯನ್ನು ಉತ್ತಮಳೆನ್ನುವ ಅಭಿಪ್ರಾಯದಿಂದ ಆಶ್ಚರ್ಯಳು, ಧನ್ಯಳು ಎಂದ. ಆಗ ನಾರದರು ಗಂಗೆಯನ್ನು ನೀನು ಆಶ್ಚರ್ಯಳು ಧನ್ಯಳು ಎಂದರು. ಆಗ ಅವಳು ತನ್ನ ಪತಿಯಾದ ವರುಣನೆ ತನಗಿಂತ ಹೆಚ್ಚು ಆಶ್ಚರ್ಯ ಧನ್ಯ ಎಂದಳು. ನಾರದರು ವರುಣನ ಬಳಿಗೆ ಬಂದು ಹಾಗೇ ಹೇಳಿದರು. ಅವನು ತನಗೆ ಮಾತೃಸ್ಥಾನದಲ್ಲಿರುವ ಪೃಥಿವಿ ಉತ್ತಮಳು, ಆಶ್ಚರ್ಯಳು, ಧನ್ಯಳು ಎಂದ. ಅದರ ಅಭಿಪ್ರಾಯವನ್ನು ಹೇಳುವುದಕ್ಕಾಗಿ 'ಪೃಥಿವೀನಾಮಕಳಾದ ಉಮೆ' ಎಂದಿದ್ದಾರೆ.

ಯಾ ಮಾದೃಶಾ ದೇವತಾಃ ಸರ್ವಶಸ್ತಾ
ಧೃತಾಸ್ತಯಾ ಪ್ರಥಿತತ್ವಾತ್ ಪೃಥಿವ್ಯಾ।
ಶಿವಂ ಶೇಷಂ ಗರುಡಂ ಚಾಹ ಸಾಪಿ
ಪರಾವನಾತ್ ಪರ್ವತನಾಮಧೇಯಾನ್ ॥೬೮॥

ಪ್ರಸಿದ್ಧಳಾದ ಪ್ರಯುಕ್ತ ಪೃಥಿವೀ ನಾಮಕಳಾದ ಉಮೆ ನನ್ನಂಥ ದೇವತೆಗಳೆಲ್ಲರನ್ನೂ ಧರಿಸಿದ್ದಾಳೆ ಎಂದ ವರುಣ. ಉಮೆಯೂ ಕೂಡ ಪರರನ್ನು ರಕ್ಷಿಸುವ ಪ್ರಯುಕ್ತ ಪರ್ವತನಾಮಕರಾದ ಶಿವಶೇಷ ಗರುಡನನ್ನು ಉತ್ತಮರೆಂದು ಹೇಳಿದಳು.

[1]ನಾರದರು ಉಮೆಯ ಬಳಿಗೆ ಬಂದು ನೀನೆ ಆಶ್ಚರ್ಯಳು, ಧನ್ಯಳು

1. ತತೋಽಹಮುಮಾಮಭ್ಯೇತ್ಯ ತ್ವಮಾಶ್ಚರ್ಯಾಸಿ ಧನ್ಯಾಸೀತ್ಯಬ್ರುವಂ। ತದಾ ಸಾ ಉಮಾಪಿ ಮಮ ಪತಿತ್ವಾತ್ ಪತಿ ಸಮತ್ವಾಚ್ಚ ಶಿವಶೇಷಗರುಡಾ ಏವ ಮತ್ತೋಪ್ಯಾಶ್ಚರ್ಯಾ ಧನ್ಯಾಶ್ಚೇತಿ ಭಾವೇನ ಪರಾವನಾತ್ ಪರ್ವತನಾಮಧೇಯಾನ್ ಶಿವ ಶೇಷ ಗರುಡಾಖ್ಯ ದೇವಾನುತ್ತಮಾನಾಹ। ಪರೇಷಾಂ ಸ್ವಾವರಾಣಾಮಿಂದ್ರಾದೀನಾಂ ಅವನಾದ್ ರಕ್ಷಣಾತ್ ಪರ್ವತನಾಮಧೇಯಾನಿತಿ ವದತಾ ಪರಪದೋಪಪದಾತ್ ಅವ ರಕ್ಷಣ ಇತಿ ಧಾತೋಃ ಕ್ತ ಪ್ರತ್ಯಯೆ ಕೃತೇ ನಿರುಕ್ತತ್ವಾದ್ ಉಪಪದಾಂತಿಮಸ್ಯ ಧಾತೋರಾದಿಮಸ್ಯ ಚಾಕಾರಸ್ಯ ನಾಶೇ ಶ್ಲಿಷ್ಟೋಚ್ಚಾರಣೇ ಕೃತೇ ಸತಿ ಪರ್ವತಶಬ್ದೋ ನಿಷ್ಪನ್ನ ಇತಿ ಸೂಚಿತಂ। -ವಾದಿರಾಜೀಯ

ಎಂದರು. ಆಗ ಅವಳು ನನ್ನ ಪತಿ ಶಿವ ಮತ್ತು ಪತಿಸಮಾನರಾದ ಶೇಷ ಗರುಡರು ನನಗಿಂತ ಆಶ್ಚರ್ಯರು ಧನ್ಯರು ಎಂಬ ಅಭಿಪ್ರಾಯದಿಂದ, 'ಪರ'ರನ್ನು ಅಂದರೆ ತಮಗಿಂತ ಕೆಳಗಿನವರಾದ ಇಂದ್ರಾದಿಗಳನ್ನು 'ಅವನ' ಮಾಡುವುದರಿಂದ ಅಂದರೆ ರಕ್ಷಣೆ ಮಾಡುವುದರಿಂದ ಪರ್ವತನಾಮಕ ರಾದ ಆ ಶಿವಶೇಷಗರುಡರನ್ನೇ ಉತ್ತಮರೆಂದು ಹೇಳಿದಳು.

'ಪರಾವನಾತ್' ಎಂದು ವಾದಿರಾಜೀಯದಲ್ಲಿ ಪಾಠ. ಅದರ ಪ್ರಕಾರ 'ಪರ' ಶಬ್ದ 'ಅವ' ಧಾತು ಮತ್ತು ಕ್ತ ಪ್ರತ್ಯಯಗಳಿಂದ 'ಪರ್ವತ' ಆಗಿದೆ. ವರದರಾಜೀಯದಲ್ಲಿ 'ಪರಜ್ಞಾನಾತ್' ಎಂದು ಪಾಠಾಂತರವೂ ಉಂಟು ಎಂದಿದೆ. ಉತ್ಕೃಷ್ಟಜ್ಞಾನ ಉಳ್ಳವರು ಶಿವಾದಿಗಳು. ಅದರಿಂದ 'ಪರ್ವತ'ರು ಎಂದು ಅಭಿಪ್ರಾಯ. ಇಲ್ಲಿ ವಾಧಾತು ವಿವಕ್ಷಿತವಾಗಿದೆ. ಜನಾರ್ದನೀಯದಲ್ಲಿ ಮತ್ತು ತಾಮ್ರಪರ್ಣೀಯದಲ್ಲಿ 'ಪರಾವಾನಾತ್' ಎಂದೂ ಪಾಠ. 'ಪರ' ಪರಮಾತ್ಮನ ಬಗ್ಗೆ 'ಆ' ಚೆನ್ನಾದ 'ವಾನ' ಜ್ಞಾನವಿರುವ ಪ್ರಯುಕ್ತ 'ಪರ್ವತ'ರು 'ವಾ' ಧಾತು ವಿವಕ್ಷಿತ. 'ಪರಾವನಾತ್' ಎಂದೂ ಪಾಠಾಂತರ. 'ಪರ' ಪರಮಾತ್ಮನಿಂದ 'ಆ' ಚೆನ್ನಾದ 'ಅವನ' ರಕ್ಷಣೆ ಹೊಂದಿರುವ ಪ್ರಯುಕ್ತ 'ಪರ್ವತ'ರು. ಹೃಷೀಕೇಶತೀರ್ಥೀಯ ಪಾಠ 'ಪರವಾನಾತ್' ಎಂದು. ಇಲ್ಲಿಯೂ ವಾಧಾತು ವಿವಕ್ಷಿತ. ಗತ್ಯರ್ಥಕಧಾತು ಜ್ಞಾನಾರ್ಥಕವೂ ಆಗುವುದರಿಂದ 'ವಾನ' ಎಂದರೆ ಜ್ಞಾನ.

ತೈರೇವಾಹಂ ಮತ್ಸಮಾಶ್ಚೈವ ದೇವ್ಯೋ
ಧ್ರಿಯಂತ ಇತ್ಯೇವ ತಲೂಚಿರೇಽಥ ।
ಬ್ರಹ್ಮಾಣಮೇವೋತ್ತಮಮಾಹ ಸೋಽಪಿ
ವೇದಾತ್ಮಿಕಾಂ ಪ್ರಕೃತಿಂ ವಿಷ್ಣುಪತ್ನೀಂ ॥೬೯॥

ನನ್ನನ್ನೂ ನನಗೆ ಸಮಾನರಾದ ಸೌಪರ್ಣೀವಾರುಣೀ ದೇವಿಯರನ್ನೂ ಶಿವ ಶೇಷ ಗರುಡರೇ ಕಾಪಾಡುತ್ತಾರೆ ಎಂದಳು ಉಮೆ. ಶಿವಶೇಷಗರುಡರು ಬ್ರಹ್ಮನನ್ನು ಉತ್ತಮನೆಂದರು. ಬ್ರಹ್ಮನೂ ವೇದಾಭಿಮಾನಿನಿಯಾದ ವಿಷ್ಣು ಪತ್ನಿ ರಮೆಯನ್ನು ಉತ್ತಮಳೆಂದು ಹೇಳಿದ.

[1]ನಾರದರು ಶಿವ ಶೇಷ ಗರುಡರ ಬಳಿಗೆ ಹೋಗಿ 'ನೀವೆ ಉತ್ತಮರು'

---

1. ತತೋಽಹಂ ತಾನಪಿ ಗತ್ವಾ ಯೂಯಮಾಶ್ಚರ್ಯಾ ಧನ್ಯಾಶ್ಚೇತ್ಯಬ್ರುವಂ। ಅಥ ತೇ ಸ್ವಪಿತೃತ್ವಾದ್ ಅಸ್ಮತ್ತೋಽಪಿ ಬ್ರಹ್ಮಾ ಆಶ್ಚರ್ಯೋ ಧನ್ಯಶ್ಚೇತಿ ಭಾವೇನ ಬ್ರಾಹ್ಮಣಜಾತೇಃ ಪ್ರವರ್ತಕತ್ವಾತ್ ಬ್ರಹ್ಮ ಶಬ್ದವಾಚ್ಯಂ ಬ್ರಹ್ಮಾಣಮೇವೋತ್ತಮಮೂಚಿರೇ। ತತೋಽಹಂ ಬ್ರಹ್ಮಾಣಂ ದೃಷ್ಟ್ವಾ ತ್ವಮಾಶ್ಚರ್ಯೋಽಸಿ ಧನ್ಯೋಽಸೀತ್ಯಬ್ರುವಂ। ಸೋಽಪಿ ಮಮ ಚ ಮಾತೃತ್ವಾತ್ ವೇದಾಭಿಮಾನಿನೀ

ಎಂದರು. ಆಗ ಅವರು ತಮಗೂ ಜನಕನಾದ ಪ್ರಯುಕ್ತ ತಮಗಿಂತ ಉತ್ತಮನು ಬ್ರಹ್ಮ, ಅವನು ಬ್ರಾಹ್ಮಣ ಜಾತಿಗೆ ಅಭಿಮಾನಿಯಾದ್ದರಿಂದಲೂ ಬ್ರಹ್ಮನಾಮಕ. ಇಂಥ ಬ್ರಹ್ಮನೆ ಆಶ್ಚರ್ಯ ಧನ್ಯ ಎಂದರು. ಬ್ರಹ್ಮನೂ ತನಗೆ ಮಾತೆಯಾದ ವೇದಾಭಿಮಾನಿನಿ ವಿಷ್ಣುಪತ್ನಿ ರಮೆ ಶ್ರೇಷ್ಠಳು, ಆಶ್ಚರ್ಯಳು ಧನ್ಯಳು ಎಂದ.

[1]ಉಮೆಗೆ ಸಮಾನರಾದ ದೇವಿಯರೆಂದರೆ ಸೌಪರ್ಣಿ ವಾರುಣಿ ಇಬ್ಬರೆ. 'ದೇವ್ಯಃ' ಎಂದು ಬಹುವಚನ ಪ್ರಯೋಗ ಹೇಗೆ? ಎಂಬ ಪ್ರಶ್ನೆಗೆ ಜನಾರ್ದನೀಯ ವರದರಾಜೀಯಗಳ ಪ್ರಕಾರ ಬಹುರೂಪರಾದ ಪ್ರಯುಕ್ತ ಬಹುವಚನ ಎಂದು ಸಮಾಧಾನ. ತಾಮ್ರಪರ್ಣಿ ಪ್ರಕಾರ ಸೌಪರ್ಣಿ ವಾರುಣಿಯರ ಜೊತೆಗೆ ಅವರ ಪದವಿಗೆ ಮುಂದೆ ಬರಲಿರುವ ದೇವಿಯರನ್ನು ಇಟ್ಟುಕೊಂಡು ಬಹುವಚನ ಅಥವಾ ಸೌಪರ್ಣಿವಾರುಣಿಯರಿಗಿಂತ ಷಣ್ಮಹಿಷಿಯರು ಕಡಿಮೆಯವರಾದರೂ ವೈಷಮ್ಯ ಅಲ್ಪವೆಂದು ಅವಿವಕ್ಷೆಯಿಂದ ಜೊತೆಗೆ ಇಟ್ಟುಕೊಂಡು ಬಹುವಚನ. ಅಥವಾ ಶಚೀ ಶ್ಯಾಮಲಾದಿಗಳೂ ತಮ್ಮಂತೆ ದೇವತಾ ಸ್ತ್ರೀಯರೇ ಆದ್ದರಿಂದ ಅವರನ್ನೂ ಜೊತೆಗಿಟ್ಟುಕೊಂಡು ಬಹುವಚನ ಎಂದು ಮೂರು ಬಗೆಯಿಂದ ಸಮಾಧಾನವಿದೆ.

ಸೈಕಾ ದೇವೀ ಬಹುರೂಪಾ ಬಭೂವೇ
ಯುಕ್ತಾ ಯದಾಹಂ ಜ್ಞೀನ ನಾರಾಯಣೇನ।
ಯಜ್ಞಕ್ರಿಯಾಮಾನಿನೀ ಯಜ್ಞನಾಮ್ನೀ
ತದೋತ್ತಮಾ ತತ್ತ್ವವೇಶಾತ್ತದಾಖ್ಯಾ ॥೭೦॥

ಒಬ್ಬಳೇ ಆದರೂ ಬಹುರೂಪಳಾಗಿರುವ ವೇದಾಭಿಮಾನಿನಿ ರಮೆ ಹೇಳಿದಳು- 'ನಾನು 'ಜ್ಞ' ನಾಮಕನಾದ ನಾರಾಯಣನೊಂದಿಗೆ ಇದ್ದು ಯಜ್ಞಕ್ರಿಯಾಭಿಮಾನಿನಿಯಾಗಿ ಯಜ್ಞನಾಮಕಳಾಗಿರುವಾಗ ಉತ್ತಮಳು. ಯಜ್ಞಕ್ರಿಯೆಯಲ್ಲಿ ಅಂತರ್ಗತಳಾದ್ದರಿಂದಲೂ ನಾನು ಯಜ್ಞನಾಮಕಳೆನಿಸಿದ್ದೇನೆ' ಎಂದು.

ಶ್ರೀರೇವ ಮತ್ತೋಪ್ಯಾಶ್ಚರ್ಯಾ ಧನ್ಯಾ ಚೇತಿ ಭಾವೇನ ವೇದಾತ್ಮಿಕಾಂ ಪ್ರಕೃತಿಂ ಪ್ರಕೃತಿನಾಮ್ನೀಂ ವಿಷ್ಣು ಪತ್ನೀಂ ಉತ್ತಮಾಮಾಹ। -ವಾದಿರಾಜೀಯ

1. ಯದ್ಯಪಿ ಸೌಪರ್ಣೀ ವಾರುಣ್ಯಾವೇವೋಮಾಸಮೇ। ತಥಾಪಿ ತತ್ಪದ ಯೋಗ್ಯ ವಿವಕ್ಷಯಾ ವಾ ಅಲ್ಪತ್ವಾದವಿವಕ್ಷಯಾ ಷಣ್ಮಹಿಷೀಣಾಮಪಿ ಸಾಮ್ಯ ವಿವಕ್ಷಯಾ ವಾ ದೇವತಾತ್ವೇನೇತರ ದೇವೀನಾಮಪಿ ಸಾಮ್ಯವಿವಕ್ಷಯಾ ವಾ ಬಹುವಚನಂ।

-ತಾಮ್ರಪರ್ಣೀಯ

[1]ಹರಿವಂಶದಲ್ಲಿ 'ವೇದಾ ಊಚುಃ' ವೇದಗಳು ಹೇಳಿದುವು ಎಂದು ಬಹುವಚನವಿದೆ. ವೇದಗಳು ಬಹುವಾದರೂ ಅಭಿಮಾನಿನಿ ರಮೆ ಒಬ್ಬಳೆ. ಅಭಿಮಾನಿ ವಿವಕ್ಷೆಯಲ್ಲಿ ಬಹುವಚನ ಹೇಗೆ ಎಂದರೆ ಬಹುರೂಪಳಾದ್ದರಿಂದ ಎಂದು ಸಮಾಧಾನ.

[2]ನಾರದರು ವೇದಾಭಿಮಾನಿ ರಮಾರೂಪದ ಬಳಿಗೆ ಹೋಗಿ 'ನೀನೆ ಆಶ್ಚರ್ಯಳು ಧನ್ಯಳು' ಎಂದರು. ಆಗ ದೇವಿ 'ನನ್ನಿಂದ ಅಭಿಮನ್ಯಮಾನವಾದ ವೇದಕ್ಕಿಂತಲೂ ವೇದದ ಫಲವಾದ ಯಜ್ಞಕ್ಕೆ ಹೆಚ್ಚು ಶ್ರೇಷ್ಠತೆ ಇರುವುದರಿಂದ ಅದಕ್ಕೆ ಅಭಿಮಾನಿಯಾದ ನನ್ನ ರೂಪ ಹೆಚ್ಚು ಆಶ್ಚರ್ಯ, ಹೆಚ್ಚು ಧನ್ಯ' ಎಂದಳು. 'ಜ್ಞ' ಸರ್ವಜ್ಞನಾದ ನಾರಾಯಣನೊಡನೆ 'ಯ' ಯುತಳಾದ್ದರಿಂದ 'ಯಜ್ಞ' ಎಂದು ದೇವಿಗೆ ಹೆಸರು. ಯಜ್ಞಾಭಿಮಾನಿನಿಯಾದ್ದರಿಂದಲೂ ಯಜ್ಞನಾಮಕಳು. ಯಜ್ಞದಲ್ಲಿ ಅಂತರ್ಗತಳಾದ್ದರಿಂದಲೂ ಯಜ್ಞನಾಮಕಳು ಎಂದು ಮೂರು ಬಗೆಯಿಂದ ಯಜ್ಞನಾಮ ಯುಕ್ತವಾಗುತ್ತದೆ. 'ಜ್ಞಂ ಯಾತಿ' ಎಂಬ ಅರ್ಥದಲ್ಲಿ 'ಜ್ಞಯ'ವೇ ಅಗ್ನ್ಯಾಹಿತಾದಿ ಶಬ್ದಗಳಂತೆ 'ಯ' ಶಬ್ದಕ್ಕೆ ಪೂರ್ವದಲ್ಲಿ ಪ್ರಯೋಗವಾಗುವುದರಿಂದ 'ಯಜ್ಞ' ಎಂದಾಗುವುದು.

ವಿಷ್ಣ್ವಾವಿಷ್ಟಾ ಯಜ್ಞನಾಮ್ನೀ ತದಂಕ-
ಸ್ಥಿತಾ ಸೋಚೇ ಕೇಶವೋ ಹ್ಯುತ್ತಮೋಕಲಂ ।
ನ ತತ್ಸಮಶ್ಚಾಭ್ಯಧಿಕಃ ಕುತಃ ಸ್ಯಾದ್
ಋಷೇ ಸತ್ಯಂ ನಾನ್ಯಥೇತಿ ಸ್ಮ ಭೂಯಃ ॥೭೦॥

ರಾಜರೆ, ವಿಷ್ಣುವಿನಿಂದ ಆವಿಷ್ಟಳೂ ಅವನ ತೊಡೆಯಲ್ಲಿರುವವಳೂ ಆದ ಯಜ್ಞನಾಮಕಳಾದ ರಮೆ ಹೇಳಿದಳು. 'ಕೃಷ್ಣನೇ ಅತ್ಯಂತ ಶ್ರೇಷ್ಠನಾಗಿದ್ದಾನೆ. ಅವನಿಗೆ ಸಮಾನನಿಲ್ಲ, ಉತ್ತಮನಿನ್ನೆಲ್ಲಿ ಇದ್ದಾನು? ಮುನಿಯೆ, ಇದು ಸತ್ಯ. ಸುಳ್ಳಲ್ಲ' ಎಂದು.

---

1. ಸೈಕಾ ದೇವೀ ಬಹುರೂಪೇತಿ । ಏತೇನ ವೇದಾ ಊಚುರಿತಿ ಹರಿವಂಶಗತ ಬಹುವಚನ ತಾತ್ಪರ್ಯ ಮುಕ್ತಂ ಭವತಿ। -ತಾಮ್ರಪರ್ಣೀಯ
2. ತತೋಽಹಂ ತಾಮೇವ ಶ್ರಿಯ ಮಭ್ಯುಪೇತ್ಯ ತ್ವಮಾಶ್ಚರ್ಯಾಸಿ ಧನ್ಯಾಸೀತ್ಯ ಬ್ರುವಂ। ತದಾ ಬಹುರೂಪಾ ಸಾ ಏಕಾ ದೇವೀ ಮದಭಿಮನ್ಯಮಾನ ವೇದಾದಪ್ಯುತ್ತಮ ವೇದಫಲೀಭೂತ ಯಜ್ಞಾಭಿಮಾನಿನೀ ಅಭಿಮನ್ಯಮಾನ ತಾರತಮ್ಯಾತ್ ಆಶ್ಚರ್ಯಾ ಧನ್ಯಾಚೇತಿ ಭಾವೇನ ತಾಮೇವೋತ್ತಮಾಂ ಬಭಾಷೇ। ಜ್ಞೇನ ಯುತಾ, ಯಜ್ಞಕ್ರಿಯಾಮಾನಿನೀ, ತತ್ಪ್ರವಿಷ್ಟೇತಿ ಚ ಯಜ್ಞ ಪದ ವಾಚ್ಯತ್ವೇ ನಿಮಿತ್ತ ತ್ರಯಮುದಿತಮಿತಿ ಜ್ಞೇಯಂ। ಜ್ಞೇನ ನಾರಾಯಣೇನ ಯುತಾ ಯಜ್ಞನಾಮ್ನೀತಿ ವದಂತ್ಯಾ ಜ್ಞಂ ಯಾತೀತಿ ಸಮಾಸಃ ಅಗ್ನ್ಯಾಹಿತಾದಿವತ್ ಯಶಬ್ದಸ್ಯ ಪೂರ್ವನಿಪಾತ ಇತಿ ಸೂಚಿತಮ್ । -ವಾದಿರಾಜೀಯ

[1]ನಾರದರು ವೇದಾಭಿಮಾನಿ ರಮಾರೂಪದಿಂದ ಯಜ್ಞಾಭಿಮಾನಿ ರಮಾರೂಪದ ಕಡೆಗೆ ತಿರುಗಿ 'ನೀನೆ ಆಶ್ಚರ್ಯಳು, ಧನ್ಯಳು' ಎಂದರು. ಆಗ ಅವಳೂ ಹೇಳಿದಳು, 'ಮುನಿಯೆ, ನನ್ನಿಂದ ಅಭಿಮನ್ಯಮಾನವಾದ ಯಜ್ಞಕ್ರಿಯೆಯಿಂದ ಪೂಜಿಸಲ್ಪಡುವವನು, ನಿರವಧಿಕ ಗುಣಪೂರ್ಣನಾದವನು ನನ್ನ ಪತಿ, ಶ್ರೀಕೃಷ್ಣ. ಅವನು ನನಗಿಂತ ಹೆಚ್ಚಾಗಿ ಆಶ್ಚರ್ಯನೂ ಧನ್ಯನೂ ಆಗಿದ್ದಾನೆ.'

[2]ಹೀಗೆ ಕೂರ್ಮ ಶರೀರಕ್ಕಿಂತ ಗಂಗಾಜಲ ಅದಕ್ಕಿಂತ ಅದಕ್ಕೆ ಆಶ್ರಯವಾದ ಸಮುದ್ರ ಜಲ, ಅದಕ್ಕಿಂತ ಅದಕ್ಕೆ ಆಧಾರವಾದ ನೆಲ, ಅದಕ್ಕಿಂತ ಅದಕ್ಕೆ ಆಧಾರವಾದ ಬೆಟ್ಟಗಳು, ಅವುಗಳಿಗಿಂತಲೂ ಕ್ರಮವಾಗಿ ಮಹತ್ತತ್ವ, ವೇದ, ಯಜ್ಞ, ದಕ್ಷಿಣೆಗಳು ಶ್ರೇಷ್ಠವೆಂದು ಜಡತಾರತಮ್ಯವೂ ಉಕ್ತವಾಯಿತು.

ಪುಷ್ಕರಾದಿಗಳಿಗಿಂತ ಕ್ರಮವಾಗಿ ಗಂಗಾದೇವಿ, ವರುಣ, ಉಮೆ, ರುದ್ರಶೇಷಗರುಡರು, ಬ್ರಹ್ಮ, ಬಹುರೂಪಿಣಿಯಾದ ರಮಾದೇವಿಯರು ಉತ್ತಮರು. ರಮಾದೇವಿಗಿಂತಲೂ ಉತ್ತಮ ನಾರಾಯಣ ಎಂದು ದೇವತಾತಾರತಮ್ಯವೂ ಉಕ್ತವಾಯಿತು.

ತಯೋಕ್ತೋಕಹಂ ನಾವತಾರೇಷು ಕಶ್ಚಿತ್
ವಿಶೇಷ ಇತ್ಯೇವ ಯದುಪ್ರವೀರಂ ।
ಸರ್ವೋತ್ತಮೋಕಸೀತ್ಯವದಂ ಸ ಚಾಹ
ನ ಕೇವಲಂ ಮೇಕಂಕಗಾಯಾಃ ಶ್ರಿಯೋಕಹಂ ॥೭೨॥

---

1. ತತೋಕಹಂ ತಾಮಪಿ ಸಮೇತ್ಯ ತ್ವಮಾಶ್ಚರ್ಯಾಸಿ ಧನ್ಯಾಸೀತ್ಯಬ್ರುವಂ। ತದಾ ವಿಷ್ಣ್ವಾವಿಷ್ಟಾ ವಿಷ್ಣ್ವಂಕಸ್ಥಿತಾ ಯಜ್ಞನಾಮ್ನೀ ಲಕ್ಷ್ಮೀಃ ಮಮಾಪಿ ಪತಿತ್ವಾತ್ ಮದೀಯ ಯಜನ ಕ್ರಿಯಾಯಾಂ ಪೂಜ್ಯತ್ವಾತ್ ನಿರವಧಿಕಗುಣಪೂರ್ಣತ್ವಾಚ್ಚ ಕೇಶವ ಏವ ಮತ್ತೋಕಪ್ಯಲಮಾಶ್ಚರ್ಯೋ ಧನ್ಯಶ್ಚೇತಿ ಭಾವೇನ ಕೇಶವಮುತ್ತಮಮೂಚೇ। – ವಾದಿರಾಜೀಯ

2. ಏವಂ ಚ ಕೂರ್ಮದೇಹಾದ್ ಗಂಗಾಜಲಸ್ಯ, ಗಂಗಾಜಲಾತ್ ತದಾಧಾರಭೂತ ಸಮುದ್ರಜಲಸ್ಯ, ಸಮುದ್ರ ಜಲಾದಪಿ ತದಾಧಾರಭೂತ ಪೃಥಿವ್ಯಾಃ ಪೃಥಿವೀತೋಪಿ ಪೃಥಿವ್ಯಾಧಾರಭೂತ ಭೂಧರಾಣಾಂ, ಭೂಧರೇಭ್ಯೋಕಪಿ ಬ್ರಹ್ಮಾಭಿಮನ್ಯಮಾನ ಮಹತ್ತತ್ವಸ್ಯ ತತೋಕಪಿ ಬ್ರಾಹ್ಮಣ್ಯ ಹೇತುಭೂತವೇದಸ್ಯ, ವೇದಾದಪಿ ಯಜ್ಞಸ್ಯ, ಯಜ್ಞಾದಪಿ ದಕ್ಷಿಣಾಯಾಶ್ಚೇತಿ ಕ್ರಮೇಣ ಜ್ಯೈಷ್ಠ್ಯಮಿತಿ ಜಡತಾರತಮ್ಯಂ ಚ ದರ್ಶಿತಮಿತಿ।

ಪುಷ್ಕರಾದಿಭ್ಯೋ ಗಂಗಾ ಗಂಗಾತೋ ವರುಣಃ ವರುಣದೇವಾದುಮಾ ಉಮಾತೋ ರುದ್ರ ಶೇಷ ಗರುಡಾಃ ತತೋ ಬ್ರಹ್ಮಾ ತತೋ ಬಹುರೂಪಿಣೀ ಲಕ್ಷ್ಮೀಃ ತತಃ ಶ್ರೀನಾರಾಯಣ ಇತಿ ದೇವತಾ ತಾರತಮ್ಯಂ ಚ ದರ್ಶಿತಮಿತಿ ಜ್ಞೇಯಂ। –ವಾದಿರಾಜೀಯ

ಸದೋತ್ತಮಃ ಕಿಂ ತು ಯದಾ ತು ಸಾ ಮೇ
ವಾಮಾರ್ಧರೂಪಾ ದಕ್ಷಿಣಾನಾಮಧೇಯಾ ।
ಯಸ್ಮಾತ್ತಸ್ಯಾ ದಕ್ಷಿಣತಃ ಸ್ಥಿತೋಽಹಂ
ತಸ್ಮಾನ್ನಾಮ್ನಾ ದಕ್ಷಿಣೇತ್ಯೇವ ಸಾ ಸ್ಯಾತ್ ॥೭೩॥

ಸಾ ದಕ್ಷಿಣಾಮಾನಿನೀ ದೇವತಾ ಚ
ಸಾ ಚ ಸ್ಥಿತಾ ಬಹುರೂಪಾ ಮದರ್ಧಾ ।
ವಾಮಾರ್ಧೋ ಮೇ ತತ್ಪ್ರವಿಷ್ಟೋ ಯತೋ ಹಿ
ತತೋಽಹಂ ಸ್ಯಾಮರ್ಧನಾರಾಯಣಾಖ್ಯಃ ॥೭೪॥

ತದಾಪ್ಯಸ್ಯಾ ಉತ್ತಮೋಽಹಂ ಸುಪೂರ್ಣೋ
ನ ಮಾದೃಶಃ ಕಶ್ಚಿದಸ್ತ್ಯುತ್ತಮೋ ವಾ ।
ಇತ್ಯೇವಾವಾದೀದ್ ದಕ್ಷಿಣಾಭಿಃ ಸಹೇತಿ
ಸರ್ವೋತ್ತಮತ್ವಂ ದಕ್ಷಿಣಾನಾಂ ಸ್ಮರನ್ ಸಃ ॥೭೫॥

'ಯಜ್ಞನಾಮಕಳಾದ ರಮಾದೇವಿ ನನಗೆ ಹೀಗೆ ಹೇಳಿದಾಗ ಶ್ರೀಹರಿಯ ಮೂಲರೂಪಕ್ಕಿಂತ ಅವನ ಅವತಾರಗಳಲ್ಲಿ ಯಾವುದೇ ವಿಶೇಷವಿಲ್ಲ ಎಂದು ಶ್ರೀಕೃಷ್ಣನನ್ನೇ ನೀನು ಸರ್ವೋತ್ತಮ ಎಂದೆ, ನಾನು. ಆಗ ಅವನು ಹೇಳಿದ, 'ನಾನು ನನ್ನ ತೊಡೆಯಲ್ಲಿ ರಮೆ ಇರುವಾಗ ಮಾತ್ರವೇ ಅವಳಿಗಿಂತ ಸದಾ ಉತ್ತಮ ಅಲ್ಲ, ಮತ್ತೆ, ಯಾವಾಗ ಅವಳು ನನ್ನ ಎಡಭಾಗದ ಅರ್ಧವಾಗಿ ದಕ್ಷಿಣಾನಾಮಕಳಾಗಿರುವಳೋ ಆಗಲೂ ಅವಳಿಗಿಂತ ನಾನು ಉತ್ತಮನೇ. ಪರಿಪೂರ್ಣನೆ. ನನಗೆ ಸಮನಾಗಲಿ ಉತ್ತಮನಾಗಲಿ ಯಾರೂ ಇಲ್ಲ. ನಾನು ಅವಳಿಗೆ ಬಲಭಾಗದಲ್ಲಿ ಇರುವುದರಿಂದ ಅವಳು ದಕ್ಷಿಣಾನಾಮದಿಂದ ಪ್ರಸಿದ್ಧಳಾಗಿದ್ದಾಳೆ. ಯಜ್ಞದಲ್ಲಿ ಋತ್ವಿಜರಿಗೆ ನೀಡುವ ಗೋ ಅಶ್ವ ಅಜ ಮುಂತಾದ ನಾನಾ ಬಗೆಯ ದಕ್ಷಿಣೆಗಳಿಗೆ ಅಭಿಮಾನಿನಿಯೂ ಆಗಿದ್ದಾಳೆ. ಅದರಿಂದಲೂ ದಕ್ಷಿಣಾ ಎಂದು ಹೆಸರು. ಬಹುರೂಪಳಾದ್ದರಿಂದ ದಕ್ಷಿಣಾ ದೇವಿಯರೆಂದು ಬಹುವಚನ. ಅವಳಿಗೆ ಬಲ ಪಾರ್ಶ್ವದ ಅರ್ಧದಲ್ಲಿ ಸೇರಿಹೋಗಿರುವು ದರಿಂದ ನಾನು ಅರ್ಧನಾರಾಯಣ ಎನಿಸಿದ್ದೇನೆ.' ಹೀಗೆ ಶ್ರೀಕೃಷ್ಣ ಹೇಳಿದ. 'ದಕ್ಷಿಣಾದೇವಿಯರೊಂದಿಗೆ' ಎನ್ನುವಾಗ ದಕ್ಷಿಣಾದೇವಿಯರ ಸರ್ವೋತ್ತಮತ್ವವನ್ನೂ ಮನಸ್ಸಿನಲ್ಲಿಟ್ಟುಕೊಂಡಿದ್ದ', ಎನ್ನುತ್ತಾರೆ ನಾರದರು.

'ಆಗಲೂ ಅವಳಿಗಿಂತ ನಾನು ಉತ್ತಮನೆ' ಎನ್ನುವ ಮೂಲಕ ಶ್ರೀಕೃಷ್ಣ 'ದಕ್ಷಿಣಾದೇವಿಯರೊಂದಿಗೆ' ಎಂಬುದಕ್ಕೆ ಇನ್ನೊಂದು ಅಭಿಪ್ರಾಯವನ್ನೂ ಸೂಚ್ಯವಾಗಿ ಹೇಳುತ್ತಿದ್ದಾನೆ– 'ದಕ್ಷಿಣಾದೇವಿಯರೊಂದಿಗೆ ಕೂರ್ಮಾದಿ ಯಜ್ಞಾಂತ ಸಕಲದೇವತಾ ಸಮೂಹಕ್ಕಿಂತಲೂ ನಾನು ಉತ್ತಮ' ಎಂದು. 'ದಕ್ಷಿಣಾದೇವಿಯರ ಸರ್ವೋತ್ತಮತ್ವವನ್ನೂ ಮನಸಿ

ನಲ್ಲಿಟ್ಟುಕೊಂಡಿದ್ದ,' ಎಂದು ನಾರದರು ಹೇಳುವಾಗ, ದಕ್ಷಿಣಾದೇವಿಯ ರೊಂದಿಗೆ ಶ್ರೀಕೃಷ್ಣನಿಗೆ ಸರ್ವೋತ್ತಮತ್ವವನ್ನು ಹೇಳುವ ಮೊದಲನೆ ಅಭಿಪ್ರಾಯವನ್ನು ಕಂಠತಃ ಹೇಳುತ್ತಿದ್ದಾರೆ. ಈ ಎರಡು ಅರ್ಥಗಳೂ ಯುಕ್ತವೆ ಎನ್ನುತ್ತದೆ ವಾದಿರಾಜೀಯ.[1]

'ದಕ್ಷಿಣಾಭಿಃ ಸಾಕಂ' ಎನ್ನುವುದನ್ನು ಕೃಷ್ಣನಿಗೆ ಅನ್ವಯಿಸಿದರೆ ರಮಾಸಮೇತನಾದ ಕೃಷ್ಣ ಬ್ರಹ್ಮಾದಿ ಸಕಲ ಪ್ರಪಂಚಕ್ಕಿಂತ ಉತ್ತಮ ಎಂದಾಗುವುದು. ಆಗ ಕೃಷ್ಣನಲ್ಲಿ ಪೂರ್ಣ ಉತ್ತಮತ್ವ, ರಮೆಯಲ್ಲಿ ಶ್ರೀಹರಿಯನ್ನು ಹೊರತುಪಡಿಸಿ ಉಳಿದ ಪ್ರಪಂಚಕ್ಕಿಂತ ಮಾತ್ರ ಉತ್ತಮತ್ವವೆಂದು ಸಂಕೋಚ ಮಾಡಬೇಕು. 'ದಕ್ಷಿಣಾಭಿಃ ಸಾಕಂ' ಎಂಬುದನ್ನು 'ನಿನಗೆ ಸಮಾನರು ಯಾರೂ ಇಲ್ಲ' ಎನ್ನುವಲ್ಲಿ ಅನ್ವಯಿಸಿ ರಮಾದೇವಿಯೂ ಸೇರಿದಂತೆ ಯಾವ ವ್ಯಕ್ತಿಯೂ ಹರಿಗೆ ಸಮನಲ್ಲ ಎಂದು ಹೇಳಿದರೆ ಸರ್ವೋತ್ತಮತ್ವ ಬಂದಂತಾಗುವುದು. ಇಲ್ಲಿ ಹರಿಯೊಬ್ಬನಿಗೇ ಉತ್ತಮತ್ವವನ್ನು ಹೇಳುವುದರಿಂದ ಈ ಉತ್ತಮತ್ವವನ್ನು ಸಂಕೋಚಗೊಳಿಸುವ ಪ್ರಸಂಗವಿಲ್ಲ.

ಲಕ್ಷ್ಮೀನಾರಾಯಣರು ಅರ್ಧನಾರೀನರರೂಪದಿಂದ ಹಾಲು ನೀರು ಬೆರೆತಂತೆ ಪರಸ್ಪರ ತಡೆಯಿಲ್ಲದೆ ಚಿತ್ಸಂವಲನ ರೂಪರಾಗಿರುವು ದರಿಂದ ದಕ್ಷಿಣಾದೇವಿಯ ಬಲಭಾಗವಾಗಿ ಶ್ರೀಕೃಷ್ಣನಿದ್ದಾನೆ ಎನ್ನುವುದು ಸರಿಯೆ. ಕೃಷ್ಣನ ಎಡಪಾರ್ಶ್ವದ ಅರ್ಧ ದಕ್ಷಿಣೆಯ ಬಲ ಪಾರ್ಶ್ವದ ಅರ್ಧದಲ್ಲಿ ಅಂಗಾರವಹ್ನಿನ್ಯಾಯದಿಂದ ಬೆರೆತಿರುವುದರಿಂದ ಕೃಷ್ಣ ಅರ್ಧನಾರಾಯಣನೆನಿಸಿದ.[2]

ವೇದಾಭಿಮಾನಿ ಯಜ್ಞಾಭಿಮಾನಿ ದಕ್ಷಿಣಾಭಿಮಾನಿ ರಮಾರೂಪ ಗಳಲ್ಲಿ ಯದ್ಯಪಿ ಭೇದವಿಲ್ಲ. ಆದರೂ ಲೋಕದ ಕಣ್ಣಿಗೆ ವೇದಾಭಿಮಾನಿ ರೂಪ ಹರಿಗೆ ದೂರದಲ್ಲಿದೆ. ದೂರದಲ್ಲಿ ನಿಂತು ಶ್ರುತಿ ಗೀತೆಯನ್ನು ಹಾಡುತ್ತದೆ. ಯಜ್ಞಾಭಿಮಾನಿ ತೊಡೆಯಲ್ಲಿ ಇದ್ದಾಳೆ. ದಕ್ಷಿಣಾಭಿಮಾನಿ

---

1. ತದಾಪ್ಯಸ್ಯಾ ಉತ್ತಮೋಽಹಮಿತಿ ವದನ್ ಕೃಷ್ಣಃ ದಕ್ಷಿಣಾಭಿಃ ಸಾಕಮಿತ್ಯಸ್ಯ ದಕ್ಷಿಣಾಭಿಃ ಸಹಸ್ಥಿತಾತ್ ಕೂರ್ಮಾದಿಯಜ್ಞಾಂತ ದೇವತಾವರ್ಗಾತ್ ಉತ್ತಮೋಽಸ್ಮೀತ್ಯರ್ಥಾಂತರಂ ಸೂಚಯತಿ। ಸರ್ವೋತ್ತಮತ್ವಂ ದಕ್ಷಿಣಾನಾಂ ಸ್ಮರನ್ನಿತಿ ವದನ್ ನಾರದಃ ಪ್ರಾಗುಕ್ತಮರ್ಥಂ ಮುಖ್ಯತ್ವಾನ್ಮುಖತೋ ವಕ್ತಿ। ತಸ್ಮಾತ್ ದಕ್ಷಿಣಾಭಿಃ ಸಾಕಮಿತ್ಯಸ್ಯ ದ್ವೇಧಾಪ್ಯರ್ಥೋ ಜ್ಞೇಯಃ। -ವಾದಿರಾಜೀಯ

2. ಅಹಮೇವ ದಕ್ಷಿಣಾರ್ಧೋ ಯಸ್ಯಾಃ ಸಾ ಮದರ್ಧಾ। ಮಯಿ ಕ್ಷೀರ ನೀರವತ್ ಅಪ್ರತಿಘಾತತ್ವೇನ ಚಿತ್ಸಂವಲನತ್ವೇನ ದಕ್ಷಿಣಾರ್ಧೋ ಯಸ್ಯಾಃ ಸೇತಿ ವಾ। ವಾಮಾರ್ಧ ಇತಿ। ಯತೋ ಮೇ ವಾಮಾರ್ಧ ಭಾಗಃ ತದ್ದಕ್ಷಿಣಭಾಗೇ ಪ್ರವಿಷ್ಟಃ ಅಂಗಾರವಹ್ನಿವತ್ ಸಂವಲಿತಃ ತತ ಏವಾಹಮರ್ಧನಾರಾಯಣಾಖ್ಯಃ ಸ್ಯಾಮನ್ಯಥಾ ತನ್ನ ಸ್ಯಾದಿತಿ ಭಾವಃ। -ತಾಮ್ರಪರ್ಣೀಯ

ಹರಿಯ ಎಡಪಾರ್ಶ್ವದ ಅರ್ಧದಲ್ಲಿ ಸೇರಿ ಎದೆಯನ್ನು ಆಲಿಂಗಿಸಿದ್ದಾಳೆ. ಅದರಿಂದ ಉತ್ತರೋತ್ತರ ಹೆಚ್ಚು ಸುಖಾಭಿವ್ಯಕ್ತಿಯಾಗುವುದರಿಂದ ದಕ್ಷಿಣಾದೇವಿ ಉತ್ತಮಳು ಎಂದು ಭಾಗವತ ಏಕಾದಶಸ್ಕಂಧ ತಾತ್ಪರ್ಯದಲ್ಲಿ ಹೇಳಿದೆ.[1]

ತಾಭಿಶ್ಚತಾಭಿರ್ದಕ್ಷಿಣಾಭಿಃ ಸಮೇತಾತ್
ವರಿಷ್ಠೋಽಹಂ ಜಗತಃ ಸರ್ವದೈವ ।
ಮತ್ತಾಮಥ್ರ್ಯಾನ್ನೈವ ಚಾನಂತಭಾಗೋ
ದಕ್ಷಿಣಾನಾಂ ವಿದ್ಯತೇ ನಾರದೇತಿ ॥೭೬॥

ಉಕ್ತಂ ಕೃಷ್ಣೇನಾಪ್ರತಿಮೇನ ಭೂಪಾ
ಅನ್ಯೋತ್ತಮತ್ವಂ ದಕ್ಷಿಣಾನಾಂ ಚ ಶಶ್ವತ್ ।
ಸೇಯಂ ಭೈಷ್ಮೀ ದಕ್ಷಿಣಾ ಕೇಶವೋಽಯಂ
ತಸ್ಯಾಃ ಶ್ರೇಷ್ಠಃ ಪಶ್ಯತ ರಾಜಸಂಘಾಃ ॥೭೭॥

ನಾರದ, ವೇದಯಜ್ಞದಕ್ಷಿಣಾದೇವಿಯರೂ ಸೇರಿದಂತೆ ಎಲ್ಲ ಜಗತ್ತಿಗಿಂತಲೂ ನಾನು ಸರ್ವದಾ ಉತ್ತಮ. ನನ್ನ ಸಾಮರ್ಥ್ಯದ ಅನಂತಾಂಶಗಳಲ್ಲಿ ಒಂದಂಶದಷ್ಟೂ ದಕ್ಷಿಣಾದೇವಿಯರಿಗೆ ಇಲ್ಲ ಎಂದು ಶ್ರೀಕೃಷ್ಣ ಹೇಳಿದ. ಇತರರೆಲ್ಲರಿಗಿಂತ ದಕ್ಷಿಣಾದೇವಿಯರಿಗೆ ಸದಾ ಉತ್ತಮತ್ವವನ್ನೂ ಹೇಳಿದ. ಆ ದಕ್ಷಿಣಾದೇವಿಯೆ ಈ ರುಕ್ಮಿಣಿ. ಆ ವಿಷ್ಣುವೇ ಈ ಕೃಷ್ಣ. ರಾಜರೆ, ನೋಡಿರಿ, ಆ ದಕ್ಷಿಣಾದೇವಿಗಿಂತ ಈ ಕೃಷ್ಣ ಶ್ರೇಷ್ಠ.

ಹಿಂದೆ ಹೇಳಿದ ಎರಡೂ ಅರ್ಥಗಳನ್ನು ಈ ಶ್ಲೋಕದಲ್ಲಿ ಸ್ಪಷ್ಟಪಡಿಸಲಾಗಿದೆ ಎನ್ನುತ್ತದೆ ವಾದಿರಾಜೀಯ.

ಶ್ರೀಕೃಷ್ಣನ ಶಕ್ತಿ ಪ್ರತ್ಯಕ್ಷ ಸಿದ್ಧ!

ಪ್ರತ್ಯಕ್ಷಂ ವೋ ವೀರ್ಯಮಸ್ಯಾಪಿ ಕುಂತ್ಯಾ
ಯುದ್ಧೇಽರ್ಜಿತಃ ಕೇಶವೋ ವೀರ್ಯಮಸ್ಯೈ ।

---

1. ನನು ಯಜ್ಞಾಂತ ಸರ್ವೋತ್ತಮತ್ವೇ ನಾರದೇನೋಕ್ತೇ ಕೃಷ್ಣೇನ ದಕ್ಷಿಣಾಂತ ಸರ್ವೋತ್ತಮತ್ವಮುಚ್ಯತೇ। ತದಿದಂ ವಿಶೇಷ ಶೂನ್ಯಂ। ಯಜ್ಞದಕ್ಷಿಣಯೋರೇಕತ್ವೇನ ವಿಶೇಷಾಭಾವಾದಿತ್ಯತಃ ಕೃಷ್ಣಸ್ಯಾಭಿಪ್ರಾಯಮಾಹ ಸರ್ವೋತ್ತಮತ್ವಮಿತಿ । ಸ್ಮರನ್ ಅಭಿಪ್ರಯನ್। ತದುಕ್ತಮ್ ಏಕಾದಶಸ್ಕಂಧ-ತಾತ್ಪರ್ಯೇ - ಸರ್ವವೇದಾಭಿಮಾನಿನ್ಯೋ ದೇವ್ಯೋ ಲಕ್ಷ್ಮೀಸ್ತತೋಽಧಿಕಾ। ವೇದಾಭಿಮಾನಿನೀ ಸಾಕ್ಷಾತ್ ಸಾ ವಿಷ್ಣೋರ್ದೂರವತ್ ಸ್ಥಿತಾ। ಯಜ್ಞಾಖ್ಯಾ ಸೈವ ವಿಷ್ಣೋಸ್ತು ಯಾ ತೂರಃಸ್ಥಲಮಾಶ್ರಿತಾ ಹರಿಣಾ ರತಿಯೋಗಸ್ಥಾ ದಕ್ಷಿಣಾಖ್ಯಾಪಿ ಸೈವ ತು। ಉತ್ತರೋತ್ತರತಃ ಸಾಪಿ ವಿಶಿಷ್ಟಾ ದಕ್ಷಿಣಾ ಸುಖಿ ಇತಿ ॥ -ತಾಮ್ರಪರ್ಣೀಯ

ಅದರ್ಶಯತ್ಪಾಂಡವಾನ್ ಧಾರ್ತರಾಷ್ಟ್ರಾನ್
ಭೀಷ್ಮದ್ರೋಣದ್ರೌಣಿಕೃಪಾನ್ ಸಕರ್ಣಾನ್ ।
ನಿರಾಯುಧಾಂಶ್ಚಕ್ರ ಏಕಕ್ಷಣೇನ
ಲೋಕಶ್ರೇಷ್ಠಾನ್ ದೈವತೈರಪ್ಯಜೇಯಾನ್ ॥೭೮॥

ಶ್ರೀಕೃಷ್ಣನ ಶಕ್ತಿಯನ್ನು ಬೇಕಾದರೆ ನೀವೇ ಪ್ರತ್ಯಕ್ಷ ನೋಡಿರಿ ಎಂದು ನಾರದರು ಹೇಳಿದಾಗ ಕುಂತೀದೇವಿಯ ಪ್ರಾರ್ಥನೆಯಂತೆ ಅವಳಿಗಾಗಿ ಶ್ರೀಕೃಷ್ಣ ಯುದ್ಧದಲ್ಲಿ ಪರಾಕ್ರಮವನ್ನು ತೋರಿದ. ದೇವತೆಗಳಿಂದಲೂ ಪರಾಭವ ಹೊಂದದಿರುವ, ಲೋಕದಲ್ಲೇ ಶ್ರೇಷ್ಠ ಪರಾಕ್ರಮಿಗಳೆನಿಸಿದ ಪಾಂಡವರು ಕೌರವರು ಭೀಷ್ಮ ದ್ರೋಣ ಅಶ್ವತ್ಥಾಮ ಕೃಪ ಕರ್ಣರು ಈ ಎಲ್ಲರನ್ನೂ ಶ್ರೀಕೃಷ್ಣ ಒಂದು ಕ್ಷಣದಲ್ಲಿ ನಿರಾಯುಧರನ್ನಾಗಿ ಮಾಡಿದ.

ವ್ರತಂ ಭೀಮಸ್ಯಾಸ್ತಿ ನೈವಾಭಿಕೃಷ್ಣ-
ಮಿಯಾಮಿತಿ ಸ್ಮಾಜ್ಞಯಾ ತಸ್ಯ ವಿಷ್ಣೋಃ ।
ಚಕ್ರಂ ರಥಾಸ್ಯಾಗ್ರಹೀತ್ಸ ಪ್ರಣಮ್ಯ
ಕೃಷ್ಣಂ ಸ ತಂ ಕೇಶವೋಽಪಾಹರಚ್ಚ ॥೭೯॥

ಭೀಮನಿಗೆ ವ್ರತವಿದೆ 'ಶ್ರೀಕೃಷ್ಣನನ್ನು ನಾನು ಎಂದೂ ಇದಿರಿಸಿ ಹೋರಾಡೆನು' ಎಂದು. ಆದರೂ ಕೃಷ್ಣ ಆಜ್ಞೆ ಮಾಡಿದ್ದರಿಂದ ನಮಸ್ಕರಿಸಿ ರಥಚಕ್ರವನ್ನು ಮಾತ್ರ ಗಟ್ಟಿಯಾಗಿ ಹಿಡಿದುಕೊಂಡ. ಯುದ್ಧ ಮಾಡಲಿಲ್ಲ. ಆದರೂ ಶ್ರೀಕೃಷ್ಣ ತನ್ನ ಬಲವನ್ನು ತೋರುವುದಕ್ಕಾಗಿ ಭೀಮನನ್ನು ರಥದಿಂದ ಬಿಡಿಸಿ ದೂರಕ್ಕೆ ಎಸೆದುಬಿಟ್ಟ.

ಏವಂ ಕ್ರೀಡಂತೋಽಪ್ಯಾತ್ಮಶಕ್ತ್ಯಾ ಪ್ರಯತ್ನಂ
ಕುರ್ವಂತಸ್ತೇ ವಿಜಿತಾಃ ಕೇಶವೇನ ।
ತತಃ ಸರ್ವೇ ನೇಮುರಸ್ಮೈ ಪೃಥಾ ಚ
ಸವಿಸ್ಮಯಾ ವಾಸುದೇವಂ ನನಾಮ ॥೮೦॥

ಹೀಗೆ ಎಲ್ಲ ರಾಜರೂ ಕ್ರೀಡೆ ಮಾಡುತ್ತ ತಮ್ಮ ಶಕ್ತಿ ಇದ್ದಷ್ಟೂ ಪ್ರಯತ್ನ ಮಾಡಿದರೂ ಕೃಷ್ಣನಿಂದ ಪರಾಜಿತರಾಗಿ ಅವನಿಗೆ ನಮಿಸಿದರು. ಕುಂತಿಯೂ ಆಶ್ಚರ್ಯ ಭರಿತಳಾಗಿ ನಮಿಸಿದಳು.

ಏವಂವಿಧಾನ್ಯದ್ಭುತಾನೀಹ ಕೃಷ್ಣೇ
ದೃಷ್ಟಾನಿ ವಃ ಶತಸಾಹಸ್ರಶಶ್ಚ ।
ತಸ್ಮಾದೇಷ ಹ್ಯದ್ಭುತೋಽತ್ಯುತ್ತಮಶ್ಚೇ-
ತ್ಯುಕ್ತಾ ನೇಮುಸ್ತೇಽಖಿಲಾ ವಾಸುದೇವಂ ॥೮೧॥

'ಇಂಥ ಅದ್ಭುತಗಳು ಕೃಷ್ಣನಲ್ಲಿ ನಿಮಗೆ ನೂರಾರು ಸಾವಿರಾರು ಕಂಡುಬಂದಿವೆ.

ಅದರಿಂದಲೆ ಈತ ಅದ್ಭುತ ಮತ್ತು ಸರ್ವೋತ್ತಮ' ಎಂದು ನಾರದರು ಹೇಳಿದಾಗ ಎಲ್ಲರೂ ಕೃಷ್ಣನನ್ನು ನಮಿಸಿದರು.

ವಾಯ್ವಾಜ್ಞ್ಲಯಾ ವಾಯುಶಿಷ್ಯಃ ಸ ಸತ್ಯ-
ಮಿತ್ಯಾದ್ಯುಕ್ತ್ವಾ ನಾರದೋ ರುಕ್ಮಿಣೀಂ ಚ ।
ಸ್ತುತ್ವಾ ಪುಷ್ಪಂ ಪಾರಿಜಾತಸ್ಯ ದತ್ವಾ
ಯಯೌ ಲೋಕಂ ಕ್ಷಿಪ್ರಮಬ್ಜೋದ್ಭವಸ್ಯ ॥೮೨॥

ವಾಯುವಿನಾಜ್ಞೆಯಿಂದ ವಾಯು ಶಿಷ್ಯರಾದ ನಾರದರು ಕೃಷ್ಣನ ಮಹಿಮೆ ಎಲ್ಲವೂ ಸತ್ಯ ಎಂದು ಮುಂತಾಗಿ ಹೇಳಿ ರುಕ್ಮಿಣಿಯನ್ನೂ ದಕ್ಷಿಣಾದೇವಿಯೆಂದು ಸ್ತುತಿಸಿ ಅವಳಿಗೆ ಪಾರಿಜಾತಪುಷ್ಪವನ್ನು ನೀಡಿ ಬೇಗನೆ ಬ್ರಹ್ಮಲೋಕಕ್ಕೆ ತೆರಳಿದರು.

ರೈವತ ಪರ್ವತದಲ್ಲಿ ರಾಜರೆಲ್ಲರೂ ಸೇರುತ್ತಾರೆ. ಅಲ್ಲಿ ರುಕ್ಮಿಣೀ ಕೃಷ್ಣರ ಸರ್ವೋತ್ತಮತ್ವವನ್ನು ಎಲ್ಲರಿಗೂ ತಿಳಿಸಬೇಕೆಂದು ಶ್ರೀಹರಿಯ ಪ್ರೇರಣೆಯಿಂದ ಮುಖ್ಯಪ್ರಾಣ ತನ್ನ ಶಿಷ್ಯರಾದ ನಾರದರಿಗೆ ಮೊದಲೇ ಆಜ್ಞೆಮಾಡಿದ್ದ. ಅದರಂತೆ ನಾರದರು ಬಂದು ಶ್ರೀಕೃಷ್ಣನ ರುಕ್ಮಿಣಿದೇವಿಯ ಮಹಿಮೆಗಳನ್ನು ಹೇಳಿ ಅವೆಲ್ಲವೂ ಸತ್ಯ ಎಂದು ಹೇಳಿ ಹೊರಟು ಹೋದರು.

ಸತ್ಯಭಾಮೆಯ ಕೋಪ

ಸಾಕ್ಷಾತ್ ಸತ್ಯಾ ರುಕ್ಮಿಣೀತ್ಯೇಕಸಂವಿತ್
ದ್ವಿಧಾಭೂತಾ ನಾತ್ರ ಭೇದೋಽಸ್ತಿ ಕಶ್ಚಿತ್ ।
ತಥಾಪಿ ಸಾ ಪ್ರಮದಾನಾಂ ಸ್ವಭಾವ-
ಪ್ರಕಾಶನಾರ್ಥಂ ಕುಪಿತೇವಾಸ ಸತ್ಯಾ ॥೮೩॥

ಸತ್ಯಭಾಮೆ ಮತ್ತು ರುಕ್ಮಿಣಿಯರು ಸಾಕ್ಷಾತ್ ಲಕ್ಷ್ಮಿಯೆ. ಒಂದೇ ಬುದ್ಧಿಯವಳಾದರೂ ಎರಡು ರೂಪಗಳಿಂದ ಅವತರಿಸಿದಳು. ಅದರಿಂದ ಸವತಿಯರ ಸ್ವಭಾವ ಪ್ರದರ್ಶನಕ್ಕಾಗಿ ಸತ್ಯಭಾಮೆ ಕೋಪಿಸಿಕೊಂಡಂತೆ ತೋರಿಕೊಂಡಳು.

ಸಾಕಂ ರುಕ್ಮಿಣ್ಯಾ ರಾಜಮಧ್ಯೇ ಪ್ರವೇಶಾತ್
ಸ್ತವಾದೃಷೇಃ ಪುಷ್ಪದಾನಾಚ್ಚ ದೇವೀಂ ।
ಕೋಪಾನನಂ ದರ್ಶಯಂತೀಮುವಾಚ
ವಿಡಂಬನಾರ್ಥಂ ಕಾಮಿಜನಸ್ಯ ಕೃಷ್ಣಃ ॥೮೪॥

ಶ್ರೀಕೃಷ್ಣ ರುಕ್ಮಿಣಿಯ ಜೊತೆಗೆ ರಾಜರುಗಳ ನಡುವೆ ಕುಳಿತಿದ್ದರಿಂದ, ನಾರದಮುನಿ ರುಕ್ಮಿಣಿಯನ್ನು ಹೊಗಳಿದ್ದರಿಂದ ಮತ್ತು ಅವಳಿಗೇ ಅವರು ಪಾರಿಜಾತ ಹೂವನ್ನು

ಕೊಟ್ಟಿದ್ದರಿಂದ ಸತ್ಯಭಾಮಾದೇವಿ ಕೋಪದ ಮುಖವನ್ನು ತೋರಿದಳು. ಆಗ ಶ್ರೀಕೃಷ್ಣನೂ ಕಾಮಿ ಜನರನ್ನು ಅನುಸರಿಸುವುದಕ್ಕಾಗಿ ನುಡಿದ.

ದಾತಾಸ್ಮ್ಯಹಂ ಪಾರಿಜಾತಂ ತರುಂ ತ
ಇತ್ಯೇವ ತತ್ರಾಥಾಗಮದ್ ವಾಸವೋಽಪಿ ।
ಸರ್ವೈರ್ದೇವೈರ್ಭೌಮಜಿತೋಽಪ್ಯದಿತ್ಯಾ-
ಸ್ತೇನೈವಾಥೋ ಕುಂಡಲಾಭ್ಯಾಂ ಹೃತಾಭ್ಯಾಂ ॥೮೫॥

ನಿನಗೆ ನಾನು ಪಾರಿಜಾತ ವೃಕ್ಷವನ್ನೇ ಕೊಡುತ್ತೇನೆ ಎಂದ ಕೃಷ್ಣ. ಅಲ್ಲಿಗೆ ಅದೇ ಸಮಯದಲ್ಲಿ ಇಂದ್ರನೂ ಬಂದ. ಏಕೆಂದರೆ ಎಲ್ಲ ದೇವತೆಗಳೊಂದಿಗೆ ಅವನೂ ನರಕಾಸುರನಿಂದ ಪರಾಜಿತನಾಗಿದ್ದ. ಮತ್ತು ನರಕಾಸುರ ಅದಿತಿಯ ಕುಂಡಲಗಳನ್ನೂ ಅಪಹರಿಸಿದ್ದ.

[1]'ಕೊಡುತ್ತೇನೆ' ಎಂದರೂ ಸಾಕಾಗಿತ್ತು. 'ನಾನು ಕೊಡುತ್ತೇನೆ' ಎನ್ನುತ್ತಾನೆ ಕೃಷ್ಣ. ಅದರಿಂದ 'ರುಕ್ಮಿಣಿಗೆ ನಾರದಮುನಿ ಹೂ ಕೊಟ್ಟರೇನು? ನಿನಗೆ ನಾನೇ ಹೂವಿನ ಗಿಡವನ್ನೇ ಕೊಡುತ್ತೇನೆ. ಅದರಿಂದ ರುಕ್ಮಿಣಿಗಿಂತ ನೀನೆ ನನಗೆ ಪ್ರಿಯಳಾದವಳು' ಎನ್ನುವ ಭಾವ ಕಾಣುತ್ತದೆ.

ಪ್ರಾಗ್ಜ್ಯೋತಿಷಕ್ಕೆ ಪ್ರಯಾಣ

ತದೈವಾಗುರ್ಮುನಯಸ್ತೇನ ನುನ್ನಾ
ಬದರ್ಯಾಸ್ತೇ ಸರ್ವ ಏತ್ಯಾಶು ಕೃಷ್ಣಂ ।
ಯಯಾಚಿರೇ ಭೌಮವಧಾಯ ನತ್ವಾ
ಸ್ತುತ್ವಾ ಸ್ತೋತ್ರೈರ್ವೈದಿಕೈಸ್ತಾಂತ್ರಿಕೈಶ್ಚ ॥೮೬॥

ನರಕಾಸುರನಿಂದ ಪೀಡಿತರಾದ ಮುನಿಗಳೂ ಇಂದ್ರನ ಪ್ರೇರಣೆಯಂತೆ ಬದರಿಯಿಂದ ಆಗಲೇ ಬಂದಿದ್ದರು. ಅವರೆಲ್ಲರೂ ಕೃಷ್ಣನ ಬಳಿಗೆ ಬಂದು ನಮಿಸಿ ವೈದಿಕ ತಾಂತ್ರಿಕ ಸ್ತೋತ್ರಗಳಿಂದ ಹೊಗಳಿ ನರಕಾಸುರನ ವಧೆ ಮಾಡೆಂದು ಬೇಡಿಕೊಂಡರು.

ಇಂದ್ರೇಣ ದೇವೈಃ ಸಹಿತೇನ ಯಾಚಿತೋ
ವಿಪ್ರೈಶ್ಚ ಸಸ್ಮಾರ ವಿಹಂಗರಾಜಂ ।
ಆಗಮ್ಯ ನತ್ವಾ ಪುರತಃ ಸ್ಥಿತಂ ತ-
ಮಾರುಹ್ಯ ಸತ್ಯಾಸಹಿತೋ ಯಯೌ ಹರಿಃ ॥೮೭॥

ಹೀಗೆ ದೇವತೆಗಳೊಂದಿಗೆ ಮುನಿಗಳೊಂದಿಗೆ ಇಂದ್ರ ಯಾಚಿಸಿದಾಗ ಶ್ರೀಕೃಷ್ಣ

1. ದಾತಾಸ್ಮೀತ್ಯುತ್ತಮ ಪುರುಷ ಪ್ರಯೋಗಾದಹಮಿತಿ ಸಿದ್ಧಾವಪಿ ರುಕ್ಮಿಣ್ಯಾ ಋಷಿರದಾತ್, ತುಭ್ಯಂ ತ್ವಹಮಿತಿ ವಿಶೇಷಂ ಸ್ಫೋರಯನ್ ಪುನರಹಮಿತ್ಯಾಹ। -ತಾಮ್ರಪರ್ಣೀಯ

ಗರುಡನನ್ನು ನೆನೆದ. ಒಡನೆ ಆತ ಬಂದು ನಮಿಸಿ ಎದುರಿಗೆ ನಿಂತ. ಕೃಷ್ಣ ಸತ್ಯಭಾಮೆಯೊಡನೆ ಗರುಡನನ್ನೇರಿ ಹೊರಟ.

ನಿತ್ಯೈವ ಯಾ ಪ್ರಕೃತಿಃ ಸ್ವೇಚ್ಛಯೈವ
ಜಗಚ್ಛಿಕ್ಷಾರ್ಥಂ ದ್ವಾದಶೀಂ ಭೀಮಸಂಜ್ಞಾಂ।
ಉಪೋಷ್ಯ ಬಭ್ರೇ ಕೋಟಿಧಾರಾ ಜಲಸ್ಯ
ವಿಷ್ಣೋಃ ಪ್ರೀತ್ಯರ್ಥಂ ಸೈವ ಹಿ ಸತ್ಯಭಾಮಾ ॥೮೮॥

ಸತ್ಯಭಾಮೆ ನಾಶರಹಿತಶರೀರಳಾದ ಮಹಾಲಕ್ಷ್ಮಿಯೆ. ಆದರೂ ಸ್ವೇಚ್ಛೆಯಿಂದಲೆ ವಿಷ್ಣುಪ್ರೀತಿಗಾಗಿ ಮತ್ತು ಲೋಕಶಿಕ್ಷಣಕ್ಕಾಗಿ ಭೀಮನಾಮಕ ದ್ವಾದಶೀ ವ್ರತವನ್ನು ಸಂಕಲ್ಪಿಸಿ ಏಕಾದಶಿ ಉಪವಾಸವಿದ್ದು ರಾತ್ರಿಯಲ್ಲಿ ಕೋಟಿ ಜಲಧಾರೆಗಳನ್ನು ಧರಿಸಿದಳು.

[1]ಮತ್ಸ್ಯಪುರಾಣ (ಅ.68) ಪ್ರಕಾರ ಮಾಘಶುದ್ಧ ಏಕಾದಶಿಯಂದು ಉಪವಾಸ ಮಾಡಿ ಅಂದು ರಾತ್ರಿಯಲ್ಲಿ ಕೃಷ್ಣಾಜಿನದ ಮೇಲೆ ಕುಳಿತು ಉದ್ದಿನ ಕಾಳಿನಷ್ಟು ಗಾತ್ರದ ತೂತಿನ ಕಲಶದಿಂದ ರಾತ್ರೀ ಇಡೀ ಅಖಂಡ ಜಲಧಾರೆಯನ್ನು ತಲೆಗೆ ಹಾಕಿಕೊಳ್ಳಬೇಕು. ಶಕ್ತಿ ಇದ್ದಷ್ಟು ಅಧಿಕ ಸಂಖ್ಯೆಯಲ್ಲಿ ಜಲಧಾರೆ ಸುರಿಸಿಕೊಳ್ಳಬೇಕು. ಅದರಿಂದ ಅಧಿಕ ಫಲ. ಇದೇ ರೀತಿ ಕ್ಷೀರಧಾರೆಯನ್ನು ಶ್ರೀಹರಿಗೂ ಅರ್ಪಿಸಬೇಕು. ಬೆಳಿಗ್ಗೆ ಕೇವಲ ಹಾಲಿನಿಂದ ಪಾರಣ ಮಾಡಬೇಕು.

ಶ್ರೀಕೃಷ್ಣನ ಆಜ್ಞೆಯಂತೆ ಭೀಮಸೇನ ಮಾಡಿದ ವ್ರತವಾದ್ದರಿಂದ ಇದು ಭೀಮದ್ವಾದಶೀವ್ರತ ಎಂದು ಬೃಹನ್ನಾರದೀಯ ಪುರಾಣವೂ ಹೇಳಿದೆ.[2]

---

1. ರಾತ್ರೌ ಜಲಸ್ಯ ಸಚ್ಛಿದ್ರಕಲಶಸ್ಥ ಜಲಸ್ಯ ಕೋಟಿಧಾರಾಃ ಬಭ್ರೇ ಕೋಟಿ ಸಂಖ್ಯಾಕ ಧಾರಾಭಿಃ ಸಸ್ನಾವಿತ್ಯರ್ಥಃ। ಭೀಮದ್ವಾದಶೀ ತು ಮತ್ಸ್ಯಪುರಾಣೇಽಭಿಹಿತಾ-
ಸಹೈವ ಪುಂಡರೀಕಾಕ್ಷ ದ್ವಾದಶ್ಯಾಂ ಕ್ಷೀರಭೋಜನಂ।
ಕರಿಷ್ಯಾಮಿ ಯತಾತ್ಮಾಹಂ ನಿರ್ವಿಘ್ನೇನಾಸ್ತು ಮೇ ವ್ರತಂ।
ಇತಿ। ತಥಾ ತತ್ರೈವ-
ಪ್ರಣಮ್ಯ ಕಲಶಂ ತತ್ರ ಮಾಷಮಾತ್ರೇಣ ಸಂಯುತಂ।
ಛಿದ್ರೇಣ ಜಲಸಂಪೂರ್ಣಂ ಅಥ ಕೃಷ್ಣಾಜಿನಸ್ಥಿತಃ।
ತಸ್ಯ ಧಾರಾಂ ಚ ಶಿರಸಿ ಧಾರಯೇತ್ ಸಕಲಾಂ ನಿಶಿ॥
ಧಾರಾಭಿರ್ಭೂರಿಭಿಶ್ಚೈವ ಫಲಂ ವೇದವಿದೋ ವಿದುಃ।
ಯಸ್ಮಾತ್ ತಸ್ಮಾತ್ ಕುರುಶ್ರೇಷ್ಠ ಧಾರಾ ಧಾರ್ಯಾನುಶಕ್ತಿತಃ ॥ ಇತಿ। -ಜನಾರ್ದನೀಯ

2. 'ಭೀಮನಾಮಾ ಮಹಾಬಾಹುಃ ಕೌರವಾಣಾಂ ಯಶಸ್ಕರಃ। ಔದರೇಣಾಗ್ನಿನಾ ಕರ್ತುಂ ಉಪವಾಸಂ ತಥಾಕ್ಷಮಃ ॥ ಸೋಽಪಿ ಚೈತಾಂ ಮಹಾಪುಣ್ಯಾಂ ಉಪೋಷ್ಯತಿ ಮಹಾಫಲಾಂ। ತತಃ ಪ್ರಭೃತಿ ಭೀಮಸ್ಯ ನಾಮ್ನಾ ಖ್ಯಾತಾ ಭವಿಷ್ಯತಿ॥'

ತಯಾ ಯುಕ್ತೋ ಗರುಡಸ್ಕಂಧಸಂಸ್ಥೋ
ದೂರಾನುಯಾತೋ ವಜ್ರಭೃತಾಪ್ಯನುಜ್ಞಾಂ।
ದತ್ತ್ವಾಮುಷ್ಮೈ ಪ್ರಯಯೌ ವಾಯುಜುಷ್ಟಾ-
ಮಾಶಾಂ ಕೃಷ್ಣೋ ಭೌಮವಧೇ ಧೃತಾತ್ಮಾ ॥೮೯॥

ನರಕಾಸುರನ ವಧೆಯನ್ನು ಮನಸ್ಸಿನಲ್ಲಿ ಸಂಕಲ್ಪಿಸಿಕೊಂಡಿದ್ದ ಶ್ರೀಕೃಷ್ಣ ಸತ್ಯಭಾಮಾ ಸಮೇತನಾಗಿ ಗರುಡನ ಹೆಗಲನ್ನೇರಿ, ಬಹುದೂರದವರೆಗೂ ಹಿಂಬಾಲಿಸಿ ಬಂದಿದ್ದ ಇಂದ್ರನಿಗೆ ಹೋಗಲು ಅನುಜ್ಞೆನೀಡಿ, ವಾಯುವ್ಯ ದಿಕ್ಕಿಗೆ ಪ್ರಯಾಣ ಮಾಡಿದ.

ನರಕಾಸುರನ ಬಲ

ಭೌಮೋ ಹ್ಯಾಸೀದ್ ಬ್ರಹ್ಮವರಾದವಧ್ಯೋ
ನ ಶಸ್ತ್ರಭೃಜ್ಜೀಯಸ ಇತ್ಯಮುಷ್ಮೈ।
ದತ್ತೋ ವರೋ ಬ್ರಹ್ಮಣಾ ತದ್ವದೇವ
ತಸ್ಯಾಮಾತ್ಯಾನಾಂ ತದ್ವದವಧ್ಯತಾ ಚ ॥೯೦॥

ನರಕಾಸುರ ಬ್ರಹ್ಮನ ವರದಿಂದ ಅವಧ್ಯನಾಗಿದ್ದ. ಶಸ್ತ್ರಧಾರಿಯಾಗಿ ನಿಂತರೆ ನೀನು ಯಾರಿಂದಲೂ ಪರಾಜಿತನಾಗಲಾರೆ ಎಂದೂ ಬ್ರಹ್ಮ ಅವನಿಗೆ ವರ ನೀಡಿದ್ದ. ಅವನ ಮಂತ್ರಿಗಳಿಗೂ ಹಾಗೇ ಅಜೇಯತ್ವದ ವರ ನೀಡಿದ್ದ. ಅವಧ್ಯತ್ವವನ್ನೂ ನೀಡಿದ್ದ.

ಭೌಮೇನ ಜೇಯತ್ವಮಪಿ ಹ್ಯಮೀಷಾಂ
ದತ್ತಂ ಭೌಮಾಯ ಬ್ರಹ್ಮಣಾ ಕ್ರೋಡರೂಪಾತ್।
ವಿಷ್ಣೋರ್ಜಾತಾಯಾಸ್ಯ ದುರ್ಗಂ ಚ ದತ್ತಂ
ಪ್ರಾಗ್ಜ್ಯೋತಿಷಂ ನಾಮ ಪುರಂ ಸಮಸ್ತೈಃ ॥೯೧॥

ಈ ಮಂತ್ರಿಗಳಿಗೆ ನರಕಾಸುರನಿಂದ ಮಾತ್ರ ಪರಾಜಯ ಎಂದೂ ಬ್ರಹ್ಮ ನರಕಾಸುರನಿಗೆ ವರವಿತ್ತಿದ್ದ. ವರಾಹರೂಪಿ ವಿಷ್ಣುವಿನಿಂದ ಧರಾದೇವಿಯಲ್ಲಿ ಜನಿಸಿದ್ದ ಈ ನರಕಾಸುರನಿಗೆ, ಎಲ್ಲರಿಗೂ ದುರ್ಗಮವಾದ ಸಕಲ ಸಂಪತ್‌ಸಮೃದ್ಧವಾದ ಪ್ರಾಗ್ಜ್ಯೋತಿಷವೆಂಬ ಪಟ್ಟಣವನ್ನೂ ಬ್ರಹ್ಮ ಕೊಟ್ಟಿದ್ದ.

ಆಸೀದ್ ಬಾಹ್ಯೇ ಗಿರಿದುರ್ಗಂ ತದಂತಃ
ಪಾನೀಯದುರ್ಗಂ ಮೌರವಂ ಪಾಶದುರ್ಗಂ।
ತಸ್ಯಾಪ್ಯಂತಃ ಕ್ಷುರಧಾರೋಪಮಂ ತತ್
ಪಾಶಾಶ್ಚ ತೇ ಷಟ್‌ಸಹಸ್ರಾಃಸುಘೋರಾಃ ॥೯೨॥

ಹೊರಗೆ ಗಿರಿದುರ್ಗವಿದ್ದಿತು. ಅದರೊಳಗೆ ಜಲದುರ್ಗ. ಅದಕ್ಕೂ ಒಳಗೆ ಕ್ಷೌರಿಕನ ಕತ್ತಿಯ ಅಲುಗಿನಂತೆ ಹರಿತವಾದ ಮುರಾಸುರ ನಿರ್ಮಿತ ಪಾಶದುರ್ಗ. ಆರು ಸಾವಿರ ಪಾಶಗಳು ಅತ್ಯಂತ ಭಯಂಕರವಾಗಿದ್ದುವು.

'ಮೌರವ' ಎಂದರೆ ಮುರು ಎಂಬ ಅಸುರನಿಂದ ನಿರ್ಮಿತವಾದ ಪಾಶ. ಮುರನಿಗೇ ಮುರು ಎಂದೂ ಹೆಸರು ಎನ್ನುತ್ತಾರೆ ಸತ್ಯಧರ್ಮರು, ಭಾಗವತಟೀಕೆಯಲ್ಲಿ. ಇವನು ಶಂಖಾಸುರನ ಮಗ. ಐದು ತಲೆಯವ. ಜಲಸ್ತಂಭದಿಂದ ನೀರಿನಲ್ಲಿ ವಾಸ ಮಾಡುವವ. ಇವನಿಗೆ ಏಳು ಸಾವಿರಮಂದಿ ಮಕ್ಕಳು. ಅವರಲ್ಲಿ ಏಳು ಮಂದಿ ಪ್ರಧಾನರು ಕೃಷ್ಣನಿಂದ ಹತರಾಗುತ್ತಾರೆ. ಉಳಿದವರು ಗರುಡನಿಂದ ಹತರಾಗುತ್ತಾರೆ. ಮುರನನ್ನು ಕೊಂದು ಶ್ರೀಕೃಷ್ಣ 'ಮುರಾರಿ' ಎನಿಸಿದ.

ಅಭೇದ್ಯತ್ವಮರಿಭಿರತಾರ್ಯತಾ ಚ
ದತ್ತಾ ದುರ್ಗಾಣಾಂ ಬ್ರಹ್ಮಣಾರಾಧಿತೇನ ॥೯೩॥

ಆ ದುರ್ಗಗಳು ಶತ್ರುಗಳಿಗೆ ಅಭೇದ್ಯವೂ ದಾಟಲು ಅಸಾಧ್ಯವೂ ಆಗಿರಲೆಂದು ನರಕಾಸುರನಿಂದ ಆರಾಧಿತನಾದ ಬ್ರಹ್ಮನೇ ವರ ನೀಡಿದ್ದ.

ತಸ್ಯಾಮಾತ್ಯಾಃ ಪೀಠಮುರೌ ನಿಶುಂಭ-
ಹಯಗ್ರೀವೌ ಪಂಚಜನಶ್ಚ ಶೂರಾಃ ।
ಸಂಕಲ್ಪ್ಯ ತಾನ್ ಲೋಕಪಾಲಾನಹಂ ಚ
ಬ್ರಹ್ಮೇತ್ಯದ್ಧಾ ಭಾಷಮಾಣಃ ಸ ಆಸ್ತೇ ॥೯೪॥

ಶೂರರಾದ ಪೀಠ ಮುರ ನಿಕುಂಭ ಹಯಗ್ರೀವ ಮತ್ತು ಪಂಚಜನ ಇವರು ನರಕಾಸುರನ ಮಂತ್ರಿಗಳು. ಅವನು ಅವರನ್ನು ಲೋಕಪಾಲಕರೆಂದು ಸಂಕಲ್ಪಿಸಿ ತಾನು ಚತುರ್ಮುಖ ಬ್ರಹ್ಮನೇ ಎಂದು ಹೇಳಿಕೊಳ್ಳುತ್ತಿದ್ದ.

ನಿಶುಂಭನಿಗೆ ನಿಸುಂದ ಎಂದೂ ಪಂಚಜನನಿಗೆ ಪಂಚನದ ಎಂದೂ ಹರಿವಂಶದ ಪ್ರಚಲಿತ ಪಾಠದಲ್ಲಿ ಹೆಸರುಗಳು ಕಾಣುತ್ತವೆ.

ಐದು ಮಂದಿ ವೀರರಾದ ಮಂತ್ರಿಗಳ ಸಹಾಯದಿಂದ ನರಕಾಸುರ ದೇವಯಾನ ಮಾರ್ಗವನ್ನು ಅಡ್ಡಗಟ್ಟುತ್ತಿದ್ದ. ವರುಣನ ಶ್ವೇತಚ್ಛತ್ರವನ್ನೂ, ಇಂದ್ರನ ವಿಹಾರಸ್ಥಳವಾದ ಮೇರುವಿನ ಮಣಿಶಿಖರವನ್ನೂ ಅಪಹರಿಸಿದ್ದ. ಇಂದ್ರನ ಐರಾವತವನ್ನೂ ಅಪಹರಿಸಬೇಕೆಂದು ಸಂಕಲ್ಪಿಸಿದ್ದ. ಅಮೃತವನ್ನು ಸುರಿಸುವ ದೇವಮಾತೆ ಅದಿತಿಯ ಕುಂಡಲಗಳನ್ನು ಅಪಹರಿಸಿ ಎಲ್ಲ ದೇವತೆಗಳಿಗೂ ಅಪಮಾನ ಮಾಡಿದ್ದ. ಶ್ರೀವರಾಹ ಭೂಮಿಯನ್ನು ಉದ್ಧರಿಸಿದಾಗ ಅವನ ಸ್ಪರ್ಶದಿಂದ ಭೂಮಿದೇವಿ ಪಡೆದ ಮಗ ಈತ. ಅದರಿಂದ ಭೌಮಾಸುರ ಎಂದೂ ಇವನಿಗೆ ಹೆಸರು. ಭೂಮಿದೇವಿ ವಿಷ್ಣುವನ್ನು ಬೇಡಿ ಮಗನಿಗೆ ವೈಷ್ಣವಾಸ್ತ್ರ ಕೊಡಿಸಿದ್ದಳು. ಈ ಅಸ್ತ್ರದ ಬಲದಿಂದ ಕೊಬ್ಬಿದ್ದ ನರಕನನ್ನು ವಿಷ್ಣುವೇ ಕೃಷ್ಣರೂಪದಿಂದ ಸಂಹರಿಸಿದ.

ಬಳಿಕ ವೈಷ್ಣವಾಸ್ತ್ರ ನರಕಾಸುರನ ಮಗನಾದ ಭಗದತ್ತನನ್ನು ಸೇರಿತು. ಮುಂದೆ ಭಗದತ್ತ ಕುರುಕ್ಷೇತ್ರದಲ್ಲಿ ಅರ್ಜುನನ ಮೇಲೆ ಈ ಅಸ್ತ್ರವನ್ನು ಪ್ರಯೋಗಿಸಿದಾಗ ಕೃಷ್ಣ ನಡುವೆ ಬಂದು ನಿಂತು ಎದೆಯಲ್ಲಿ ದರಿಸಿದ. ಆಗ ಅದು ವೈಜಯಂತೀಮಾಲೆಯಾಗಿ ಶೋಭಿಸುತ್ತದೆ.

ನರಕಾಸುರನೊಡನೆ ಯುದ್ಧ

ಹಂತುಂ ಕೃಷ್ಣೋ ನರಕಂ ತತ್ರ ಗತ್ವಾ
ಗಿರಿಂ ದುರ್ಗಂ ಗದಯಾ ನಿರ್ಬಿಭೇದ।
ವಾಯವ್ಯಾಸ್ತ್ರೇಣೋದಕಂ ಶೋಷಯಿತ್ವಾ
ಚಕರ್ತ ಖಡ್ಗೇನ ಮುರಸ್ಯ ಪಾಶಾನ್ ॥೯೫॥

ನರಕಾಸುರನನ್ನು ಕೊಲ್ಲುವುದಕ್ಕಾಗಿ ಶ್ರೀಕೃಷ್ಣ ಪ್ರಾಗ್ಜ್ಯೋತಿಷನಗರಕ್ಕೆ ಹೋಗಿ ಗಿರಿದುರ್ಗವನ್ನು ಗದೆಯಿಂದ ಭೇದಿಸಿದ. ಜಲದುರ್ಗವನ್ನು ವಾಯವ್ಯಾಸ್ತ್ರದಿಂದ ಒಣಗಿಸಿ ಮುರನ ಪಾಶಗಳನ್ನು ಖಡ್ಗದಿಂದ ಕತ್ತರಿಸಿದ.

ಅಥಾಭಿಪೇತುರ್ಮುರಪೀಠೌ ನಿಶುಂಭ-
ಹಯಗ್ರೀವೌ ಪಂಚಜನಶ್ಚ ಶೂರಾಃ।
ತಾನ್ ಶೈಲಶಸ್ತ್ರಾಸ್ತ್ರಶಿಲಾಭಿವರ್ಷಿಣ-
ಶ್ಚಕ್ರೇ ವ್ಯಸೂಂಶ್ಚಕ್ರನಿಕೃತ್ತಕಂಧರಾನ್ ॥೯೬॥

ಆಗ ಶೂರರಾದ ಮುರ ಪೀಠ ನಿಶುಂಭ ಹಯಗ್ರೀವ ಪಂಚಜನರು ಯುದ್ಧಕ್ಕೆ ಬಂದರು. ಬೆಟ್ಟಗಳನ್ನೂ ಶಸ್ತ್ರ ಅಸ್ತ್ರ ಕಲ್ಲು ಬಂಡೆಗಳನ್ನೂ ಸುರಿಸುತ್ತಿದ್ದ ಅವರನ್ನು ಶ್ರೀಕೃಷ್ಣ ಚಕ್ರದಿಂದ ಶಿರಶ್ಛೇದ ಮಾಡಿ ಕೊಂದ.

ತೇಷಾಂ ಸುತಾಃ ಸಪ್ತಸಪ್ತೋರುವೀರ್ಯಾ
ವರಾದವಧ್ಯಾ ಗಿರಿಶಸ್ಯಾಭಿಪೇತುಃ।
ತಾನಸ್ತ್ರಶಸ್ತ್ರಾಭಿಮುಚಃ ಶರೋತ್ತಮೈಃ
ಸಮರ್ಪಯಾಮಾಸ ಚ ಮೃತ್ಯವೇಽಚ್ಯುತಃ ॥೯೭॥

ಅವರ ಮಕ್ಕಳು ಏಳೇಳು ಮಂದಿ ಎಲ್ಲರೂ ಮಹಾಪರಾಕ್ರಮಿಗಳು. ಶಿವನ ವರದಿಂದ ಅವಧ್ಯರು, ಯುದ್ಧಕ್ಕೆ ಬಂದರು. ಅಸ್ತ್ರಶಸ್ತ್ರಗಳನ್ನು ಎಸೆಯುತ್ತಿದ್ದ ಅವರನ್ನು ಶ್ರೀಕೃಷ್ಣ ಉತ್ತಮ ಬಾಣಗಳಿಂದ ಮೃತ್ಯುವಿಗೆ ಕೊಟ್ಟ.

ಹತ್ವಾ ಪಂಚತ್ರಿಂಶತೋ ಮಂತ್ರಿಪುತ್ರಾನ್
ಜಗಾಮ ಭೌಮಸ್ಯ ಸಕಾಶಮಾಶು।
ಶ್ರುತ್ವಾ ಭೌಮಃ ಕೃಷ್ಣಮಾಯಾಂತಮಾರಾ-
ದಕ್ಷೌಹಿಣೀತ್ರಿಂಶಕೇನಾಭ್ಯಯಾತ್ತಂ ॥೯೮॥

ಮೂವತ್ತೈದು ಮಂದಿ ಮಂತ್ರಿಪುತ್ರರನ್ನು ಕೊಂದ ಬಳಿಕ ಶ್ರೀಕೃಷ್ಣ ನರಕಾಸುರನ ಬಳಿಗೆ ಹೋದ. ಕೃಷ್ಣ ತನ್ನ ಬಳಿಗೆ ಬರುತ್ತಿರುವುದನ್ನು ಕೇಳಿ ನರಕಾಸುರ ಮೂವತ್ತು ಅಕ್ಷೌಹಿಣೀ ಸೈನ್ಯ ಸಮೇತನಾಗಿ ಬಂದು ಇದಿರಿಸಿದ.

ಜಘ್ನೇ ಸೇನಾಂ ಗರುಡಃ ಪಕ್ಷಪಾತೈಃ
ಪಾದಂ ಶೇಷಂ ಕೇಶವಃ ಸಾಯಕೌಘೈಃ ।
ಅಥಾಸಸಾದಾಶು ಭೌಮೋಽಚ್ಯುತಂ ತಂ
ಮುಂಚನ್ ಬಾಣಾನಸ್ತ್ರಸಮ್ಮಂತ್ರಿತಾನ್ ದ್ರಾಕ್ ॥೯೯॥

ಸೈನ್ಯದ ಕಾಲಂಶವನ್ನು ಗರುಡನೆ ರೆಕ್ಕೆಗಳ ಹೊಡೆತದಿಂದ ನಾಶಮಾಡಿದ. ಉಳಿದ ಸೈನ್ಯವನ್ನು ಕೃಷ್ಣ ಬಾಣಸಮೂಹಗಳಿಂದ ನಾಶಗೊಳಿಸಿದ. ಬಳಿಕ ನರಕಾಸುರ ಅಸ್ತ್ರಮಂತ್ರಗಳಿಂದ ಅಭಿಮಂತ್ರಿತವಾದ ಬಾಣಗಳನ್ನು ಎಸೆಯುತ್ತ ಬೇಗನೆ ಕೃಷ್ಣನ ಬಳಿಗೆ ಬಂದ.

ಮಂತ್ರಿಗಳನ್ನೂ ಮಂತ್ರಿಪುತ್ರರನ್ನೂ ಶ್ರೀಕೃಷ್ಣ ನಗರದ ಹೊರಗೇ ಯುದ್ಧದಲ್ಲಿ ಕೊಂದ. ಬಳಿಕ ನಗರದ್ವಾರಕ್ಕೆ ಬರುವಾಗ ನರಕಾಸುರ ಸೈನ್ಯ ಸಮೇತನಾಗಿ ಹೊರಗೆ ಬರುತ್ತಾನೆ. ಅವನ ರಥ ಹರಿವಂಶ ಪ್ರಕಾರ ಮೂರು ನಲ್ವಗಳಷ್ಟು ಉದ್ದವಾಗಿತ್ತು. 'ನಲ್ವ' ಎಂದರೆ ನಾನ್ನೂರು ಮೊಳಗಳ ಅಳತೆ. ಎಂಟು ಚಕ್ರಗಳು. ಒಂದು ಸಾವಿರ ಕುದುರೆಗಳನ್ನು ಅದಕ್ಕೆ ಕಟ್ಟಲಾಗಿತ್ತು.

ವಿವ್ಯಾಧ ತಂ ಕೇಶವಃ ಸಾಯಕೌಘೈಃ
ಭೌಮಃ ಶತಘ್ನೀಂ ಬ್ರಹ್ಮದತ್ತಾಮಮುಂಚತ್ ॥೧೦೦॥

ಶ್ರೀಕೃಷ್ಣ ನರಕನನ್ನು ಬಾಣಸಮೂಹಗಳಿಂದ ಹೊಡೆದ. ನರಕ ಬ್ರಹ್ಮನಿತ್ತ ಶತಘ್ನಿಯನ್ನು ಪ್ರಯೋಗಿಸಿದ.

ಶತಘ್ನೀ ಎಂಬುದು ಒಂದು ಗದೆಯ ಹೆಸರು ಎಂದು ವರದರಾಜೀಯ ಹೇಳಿದೆ. ಶಕ್ತ್ಯಾಯುಧದ ಹೆಸರೆಂದು ಭಾಗವತ ಸತ್ಯಧರ್ಮೀಯ ಹೇಳಿದೆ.[1]

ಶ್ರಮ ಪ್ರದರ್ಶನ

ಅಚ್ಛೇದ್ಯೋಽಭೇದ್ಯೋ ನಿತ್ಯಸಂವಿತ್ಸುಖಾತ್ಮಾ
ನಿತ್ಯಾವ್ಯಯಃ ಪೂರ್ಣಶಕ್ತಿಃ ಸ ಕೃಷ್ಣಃ ।

---

1. ಬ್ರಹ್ಮಣಾ ದತ್ತಾಂ ಶತಘ್ನೀಂ ನಾಮ ಗದಾಂ ಕೃಷ್ಣಸ್ಯೋಪರ್ಯಮುಂಚತ್ -ವರದರಾಜೀಯ
ಲೋಹಮಯೀಂ ಕಿಂಚಿತ್ಸ್ಥಲೇಽಯೋಮಯೀಂ ಶತಘ್ನೀಂ ತನ್ನಾಮ್ನೀಂ ಶಕ್ತಿಂ। -ಸತ್ಯಧರ್ಮೀಯ

ನಿಗೀರ್ಯ ತಾಂ ದೇವವರಃ ಶತಘ್ನೀಂ
ನಿತ್ಯಾಶ್ಚಾಂತೋಽದರ್ಶಯಚ್ಚಾಂತವಚ್ಚ ॥೧೦೧॥

ಶ್ರೀಕೃಷ್ಣ ನಿತ್ಯಜ್ಞಾನಾನಂದ ಸ್ವರೂಪ ನಿತ್ಯ ಅವ್ಯಯ ಪೂರ್ಣಶಕ್ತಿಉಳ್ಳವ ಅಚ್ಛೇದ್ಯ ಅಭೇದ್ಯನಾದ ದೇವೋತ್ತಮ. ಅವನು ಶತಘ್ನಿಯನ್ನು ನುಂಗಿ ಸ್ವತಃ ಎಂದೂ ಶ್ರಮರಹಿತನಾದರೂ ಅಸುರಮೋಹಕ್ಕಾಗಿ ಶ್ರಮಗೊಂಡವನಂತೆ ತೋರಿಕೊಂಡ.

ಬಹೂನ್ವರಾನ್ ಬ್ರಹ್ಮಣೋಽನ್ಯೇಷ್ವಮೋಘಾನ್
ಮೋಘೀಕೃತಾನ್ವೀಕ್ಷ್ಯ ಪರಾತ್ಪರೇಶಃ।
ಭವೇತ್ಕಥಂಚಿದ್ಬಹುಮಾನೇನ ಯುಕ್ತ
ಇತ್ಯೇವ ಕೃಷ್ಣೋಽದರ್ಶಯಚ್ಚಾಂತವತ್ ಸ್ವಂ ॥೧೦೨॥

ಪರಾತ್ಪರನಾದ ಸರ್ವೇಶ್ವರ ಶ್ರೀಕೃಷ್ಣ ಬ್ರಹ್ಮನ ಅಮೋಘವಾದ ಅನೇಕ ವರಗಳನ್ನು ಮಂತ್ರಿಗಳು ಮುಂತಾದವರಲ್ಲಿ ವ್ಯರ್ಥಗೊಳಿಸಿರುವುದನ್ನು ಕಂಡಿರುವ ನರಕಾಸುರ ಬ್ರಹ್ಮನಲ್ಲಿ ಹೇಗಾದರೂ ಮಹತ್ವಬುದ್ಧಿ ಉಳ್ಳವನಾಗಲಿ ಎಂದು ತಾನು ಆಯಾಸಗೊಂಡವನಂತೆ ತೋರಿಕೊಂಡ.

[1]ಬ್ರಹ್ಮನ ವರ ಎಂದೂ ಅಮೋಘವೇ ಎಂದು ನರಕನಿಗೆ ಬ್ರಹ್ಮನಲ್ಲಿ 'ಬಹುಮಾನ' ಅಂದರೆ ಮಹತ್ವ ಬುದ್ಧಿ ಇರಲಿ ಅದರಿಂದ ಅವನ ವರಬಲದಲ್ಲಿ ವಿಶ್ವಾಸವಿಟ್ಟು ಯುದ್ಧ ಮಾಡಲಿ ಎಂದು ಶ್ರೀಕೃಷ್ಣ ಶ್ರಮವನ್ನು ನಟಿಸಿದ.

[2]ಅಥವಾ ಕೇವಲ ಲೋಕ ನಟನೆಗಾಗಿ ತಾನು ತೋರಿದ ಶ್ರಮವನ್ನು ಕಂಡು ಬ್ರಹ್ಮ 'ಅಸುರನಿಗೆ ವರಕೊಟ್ಟು ತಾನು ಅಪರಾಧಿಯಾದೆನೆ?' ಎಂದು ಭಯಗೊಂಡು 'ಆಲೋಚನೇ ಸರ್ವವಿಷಯಕ'ವಾದ ಬುದ್ಧಿ

---

1. ಬ್ರಹ್ಮಣಿ ಕಥಂಚಿತ್ ಬಹುಮಾನೇನ ಯುಕ್ತೋ ಭೌಮಃ ಸ್ಯಾತ್। ಅನ್ಯಥಾ ಬ್ರಹ್ಮಾಣಂ ವಿಶ್ವಸ್ಯ ಯುದ್ಧಾಯ ನಾಗಚ್ಛೇದಿತ್ಯಭಿಪ್ರಾಯೇಣ ಶ್ರಾಂತವದದರ್ಶಯತ್ ಇತ್ಯರ್ಥಃ। ಬ್ರಹ್ಮಾ ಬಹುಮಾನಯುಕ್ತಃ ಸ್ಯಾದಿತಿ ವಾ। -ತಾಮ್ರಪರ್ಣೀಯ

2. ಕಥಂಚಿತ್ ಸ್ವ ಭಜಕಚಿತ್ತೇಽಂಕುರಿತ ಬಹುಮಾನ ಯುಕ್ತ ಇತ್ಯರ್ಥಃ। ಯದ್ವಾ ಕಥಂಚಿತ್ ಕೇವಲ ಲೋಕನಟನಾರ್ಥಂ ಮಯಾ ಪ್ರದರ್ಶಿತ ಕ್ರಮೇಣ ಸ್ವಸ್ಯಾ ಪರಾಧಶಂಕಯಾ 'ನಿರನಿಷ್ಟೋ ನಿರವದ್ಯಃ' 'ಅಚ್ಛೇದ್ಯೋಽಯಮದಾಹ್ಯೋಽಯಂ 'ನಿತ್ಯೋ ನಿತ್ಯಾನಾಂ' 'ನಿತ್ಯಾನಂದೋ ನಿತ್ಯಜ್ಞಾನೋ ನಿತ್ಯಬಲಃ ಪರಮಾತ್ಮಾ' 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' ಇತ್ಯಾದಿ ಬಹುಪ್ರಮಾಣೇನ ಯುಕ್ತಃ ಸಂಯುಕ್ತಃ ಆಲೋಚನೇ ಸರ್ವವಿಷಯಕತ್ವಾತ್ ಈದೃಶಾನಿ ಪ್ರಮಾಣಾನ್ಯಾಲೋಚ್ಯ ಕೇವಲಮಸುರಜನಮೋಹನಾರ್ಥಮೇವ ಶ್ರಾಂತಿಃ ಪ್ರದರ್ಶಿತಾ, ಅತೋ ವರದಾನಾನ್ನ ಮೇಽಪರಾಧ ಇತಿ ಅನುಸಂಧಾತಾ ಭವೇದಿತ್ಯರ್ಥಃ। -ವಾದಿರಾಜೀಯ

ಉಳ್ಳವನಾದ್ದರಿಂದ 'ನಿರನಿಷ್ಟೋ ನಿರವದ್ಯಃ' 'ಅಚ್ಚೇದ್ಯೋಽಯಮದಾಹ್ಯೋಽಯಂ' ಎಂದು ಮುಂತಾದ 'ಬಹು ಮಾನ'ಗಳಿಂದ ಅಂದರೆ ಬಹು ಪ್ರಮಾಣಗಳಿಂದ ಯುಕ್ತನಾಗಿ ವಿಚಾರಿಸಿ ನೋಡಿ 'ಇದು ಕೇವಲ ಅಸುರಜನ ಮೋಹನಾರ್ಥವಾಗಿದೆ, ಅದರಿಂದ ನಾನೇನೂ ಅಪರಾಧಿಯಲ್ಲ' ಎಂದು ತನ್ನಲ್ಲಿ 'ಬಹುಮಾನ' ಮಹತ್ವಬುದ್ಧಿ ಯುಕ್ತನಾಗಲಿ ಎಂದು ಶ್ರೀಕೃಷ್ಣ ಆಯಾಸಗೊಂಡವನಂತೆ ತೋರಿಕೊಂಡ ಎಂದು ವಾದಿರಾಜೀಯ ಹೇಳಿದೆ.

ಭಾಮೆ ಬಿಲ್ಲು ಹಿಡಿದಳು

ತದಾ ದೃಪ್ತಂ ನರಕಂ ವೀಕ್ಷ್ಯ ದೇವೀ
ಸತ್ಯಾಽಽದದೇ ಕಾರ್ಮುಕಂ ಶಾರ್ಙ್ಗಸಂಜ್ಞಂ ।
ಚಕಾರ ತಂ ಯತಮಾನಂ ಚ ಭೌಮಂ
ನಿರಾಯುಧಂ ವಿರಥಂ ಚ ಕ್ಷಣೇನ ॥೧೦೩॥

ಆಗ ನರಕಾಸುರ ದರ್ಪಗೊಂಡಿದನ್ನು ನೋಡಿ ಸತ್ಯಭಾಮೆ ಶಾರ್ಙ್ಗನಾಮಕವಾದ ಕೃಷ್ಣನ ಬಿಲ್ಲನ್ನೆತ್ತಿಕೊಂಡಳು. ನರಕಾಸುರ ಅವಳನ್ನು ಪರಾಭವಗೊಳಿಸಲು ಎಷ್ಟು ಯತ್ನಮಾಡಿದರೂ ಅವಳೇ ಅವನನ್ನು ಕ್ಷಣದಲ್ಲಿ ನಿರಾಯುಧನನ್ನಾಗಿಯೂ ವಿರಥನನ್ನಾಗಿಯೂ ಮಾಡಿದಳು.

ಶತಘ್ನಿಯನ್ನು ನುಂಗಿ ಶ್ರೀಕೃಷ್ಣ ಕ್ಷಣಕಾಲ ಮೂರ್ಛೆಯನ್ನು ನಟಿಸಿ ಎಚ್ಚೆತ್ತವನಂತೆ ಎದ್ದು 'ದೇವಿ, ನಾನು ಆಯಾಸಗೊಂಡಿದ್ದೇನೆ. ನೀನು ಯುದ್ಧಮಾಡು' ಎನ್ನುತ್ತ ಬಿಲ್ಲನ್ನು ಸತ್ಯಭಾಮೆಯ ಕೈಗೆ ಕೊಡುತ್ತಾನೆ.

ನರಕಾಸುರ ವಧ

ಆಲಿಂಗ್ಯ ಕೃಷ್ಣಃ ಸತ್ಯಭಾಮಾಂ ಪುನಶ್ಚ
ರಥಾಂತರೇ ಸಂಸ್ಥಿತಂ ಭೌಮಮುಗ್ರಂ ।
ಸೃಜಂತಮಸ್ತ್ರಾಣ್ಯರಿಣಾ ನಿಕೃತ್ತ-
ಸ್ಕಂಧಂ ಮೃತ್ಯೋರರ್ಪಯಾಮಾಸ ಶೀಘ್ರಂ ॥೧೦೪॥

ಶ್ರೀಕೃಷ್ಣ ಸತ್ಯಭಾಮೆಯನ್ನು ಆಲಿಂಗಿಸಿದ. ಪುನಃ ಇನ್ನೊಂದು ರಥವೇರಿ ಅಸ್ತ್ರಗಳನ್ನು ಎಸೆಯತೊಡಗಿದ ನರಕನನ್ನು ಬೇಗನೆ ಚಕ್ರದಿಂದ ಶಿರಶ್ಛೇದಗೈದು ಮೃತ್ಯುವಿಗೆ ಒಪ್ಪಿಸಿಕೊಟ್ಟ.

ಸತ್ಯಭಾಮೆಯೂ ಯುದ್ಧ ಮಾಡಿ ಗೆದ್ದು ಆಯಾಸಗೊಂಡಂತೆ ತೋರಿಕೊಳ್ಳುತ್ತಾಳೆ. ಶ್ರೀಕೃಷ್ಣ ಅವಳನ್ನಾಲಿಂಗಿಸಿ ಮೈಯ ಬೆವರನ್ನು ಒರೆಸಿ

'ನಾನು ಪ್ರೀತನಾಗಿದ್ದೇನೆ' ಎನ್ನುತ್ತ ತನ್ನ ಕುತ್ತಿಗೆಯ ಆಭರಣವನ್ನು ತೆಗೆದು ದೇವಿಯ ಕೊರಳಿಗೆ ಹಾಕುತ್ತಾನೆ. ರುಕ್ಮಿಣಿಗೆ ಕೊಡದಿದ್ದ ಹಾರವನ್ನು ಸತ್ಯಭಾಮೆಗೆ ನೀಡಿದನಂತೆ! ಆ ಹಾರ ಲೋಕವಿಖ್ಯಾತ. ಬಲಿಚಕ್ರವರ್ತಿಯ ಯಜ್ಞದಲ್ಲಿ ಬಲಿಯಿಂದ ಕಸಿದುಕೊಂಡಿದ್ದ ಅತ್ಯಮೂಲ್ಯವಾದ ಹಾರ ಎಂದು ಹರಿವಂಶದಲ್ಲಿ ಹೇಳಿದೆ ಎನ್ನುತ್ತಾರೆ ಸತ್ಯಧರ್ಮರು. ಈ ಅಂಶ ಪ್ರಚಲಿತ ಹರಿವಂಶ ಪಾಠದಲ್ಲಿ ಸಿಗುತ್ತಿಲ್ಲ.

ಸ ಮಂತ್ರಿಭಿರ್ಮಂತ್ರಿಪುತ್ರೈಃ ಸಮೇತೋ
ಜಗಾಮ ಕೃಷ್ಣಾವಜ್ಞಯಾಂಧಂ ತಮಶ್ಚ ।
ತದಾವಿಷ್ಟೋ ವಾಯುರಗಾಚ್ಚ ಕೃಷ್ಣ-
ಮಂತಃಪುರಂ ಪ್ರಾವಿಶತ್ ಸತ್ಯಯೇಶಃ ॥೧೦೫॥

ನರಕಾಸುರ ಶ್ರೀಕೃಷ್ಣನನ್ನು ತಿರಸ್ಕರಿಸಿದ್ದರಿಂದ ಮಂತ್ರಿ ಮಂತ್ರಿಪುತ್ರರ ಸಮೇತನಾಗಿ ಅಂಧಂತಮಸನ್ನು ಹೊಂದಿದ. ಅವನಲ್ಲಿ ಆವಿಷ್ಟನಾಗಿದ್ದ ವಾಯು ಶ್ರೀಕೃಷ್ಣನನ್ನು ಸೇರಿದ. ಶ್ರೀಕೃಷ್ಣ ಸತ್ಯಭಾಮೆಯೊಂದಿಗೆ ನರಕನ ಅಂತಃಪುರವನ್ನು ಪ್ರವೇಶಿಸಿದ.

ಮಹಾಭಾರತದಲ್ಲಿ ಶ್ರೀಕೃಷ್ಣ ಭೂದೇವಿಯನ್ನು ಸಂತೈಸುತ್ತ,

'ತ್ವತ್ಪ್ರಭಾವಾಚ್ಚ ತೇ ಪುತ್ರೋ ಲಬ್ಧವಾನ್ ಗತಿಮುತ್ತಮಾಂ।'

'ನಿನ್ನ ಪ್ರಭಾವದಿಂದ ನಿನ್ನ ಮಗನಿಗೆ ಉತ್ತಮಲೋಕ ಲಭಿಸಿತು' ಎನ್ನುತ್ತಾನೆ. ತಮೋಯೋಗ್ಯನಾದ ನರಕಾಸುರನಿಗೆ ಉತ್ತಮ ಲೋಕ ಸಲ್ಲದು. ಅದರಿಂದ ನಿನ್ನ ಮಗನಲ್ಲಿದ್ದ ಇನ್ನೊಬ್ಬ ನಿನ್ನ ಮಗ ವಾಯುದೇವ ಉತ್ತಮವಾದ ಸತ್ಯಲೋಕವನ್ನು ನಿನ್ನ ಪ್ರಭಾವದಿಂದ ಪಡೆದ, ಅಥವಾ ಪಡೆಯುತ್ತಾನೆ, 'ಯಂ ಕಾಮಯೇ ತಂ ತಮುಗ್ರಂ ಕೃಣೋಮಿ ತಂ ಬ್ರಹ್ಮಾಣಂ' ಎನ್ನುವ ಅಭಿಪ್ರಾಯದಿಂದ 'ಆವಿಷ್ಟನಾಗಿದ್ದ ವಾಯು ಶ್ರೀಕೃಷ್ಣನನ್ನು ಸೇರಿದ' ಎನ್ನಲಾಗಿದೆ.

ತದಾ ಭೂಮಿಃ ಪಂಚಭೂತಾವರಾ ಯಾ
ಯಸ್ಯಾಂ ಜಜ್ಞೇ ನರಕಃ ಶ್ರೀವರಾಹಾತ್ ।
ಮೂಲಪ್ರಕೃತ್ಯೈವ ಭೂಮ್ಯಾ ನಿತಾಂತ-
ಮಾವಿಷ್ಟಾಯಾಂ ಸಾಗಮತ್ ಕೃಷ್ಣಪಾದೌ ॥೧೦೬॥

ಪಂಚಭೂತಗಳಲ್ಲಿ ಕೊನೆಯವಳಾದ ಭೂಮಿದೇವಿಯಲ್ಲಿ ಶ್ರೀವರಾಹನಿಂದ ನರಕಾಸುರ ಹುಟ್ಟಿದ್ದ. ಅವಳಲ್ಲಿ ಮೂಲಪ್ರಕೃತಿಯಾದ ಮಹಾಲಕ್ಷ್ಮಿಯು ಭೂರೂಪ ವಿಶೇಷವಾಗಿ ಆವೇಶಗೊಂಡಿತ್ತು. ಇಂಥ ಭೂದೇವಿ ಕೃಷ್ಣನ ಪಾದಗಳಿಗೆ ನಮಿಸಿದಳು.

ನರಕಾಸುರನಿಗೆ ಜನ್ಮವಿತ್ತ ಭೂದೇವಿ ಎಂದರೆ ಸಾಕ್ಷಾತ್ ಲಕ್ಷ್ಮೀದೇವಿಯ ಭೂರೂಪವಲ್ಲ. ಆಕಾಶ ವಾಯು ತೇಜ ಜಲ ಪೃಥ್ವಿ ಎಂದು ಪಂಚಮಹಾಭೂತಗಳಲ್ಲಿ ಕೊನೆಯದಾದ ಪೃಥ್ವೀತತ್ವಕ್ಕೆ ಅಭಿಮಾನಿನಿಯಾದ ಒಬ್ಬಳು ದೇವತೆ ಇಲ್ಲಿ ಭೂದೇವಿ ಎಂದು ಗ್ರಹಿಸಬೇಕು ಎಂಬ ಅಭಿಪ್ರಾಯದಿಂದ ಪಂಚಭೂತಗಳಲ್ಲಿ ಕೊನೆಯವಳು ಎನ್ನಲಾಗಿದೆ. 'ಆಕಾಶಾದ್ ವಾಯುಃ ವಾಯೋರಗ್ನಿಃ' ಎಂದು ಮುಂತಾಗಿ ಶ್ರುತ್ಯುಕ್ತವಾದ ಕ್ರಮದಲ್ಲಿ ಅವಳು ಕೊನೆಯವಳು ಹೊರತು ಪಂಚಭೂತಾಭಿಮಾನಿಗಳಲ್ಲಿ ಎಲ್ಲರಿಗಿಂತ ಕಡಿಮೆಯವಳು ಎನ್ನುವ ವಿವಕ್ಷೆಯಲ್ಲಿ ಆಕಾಶಾಭಿಮಾನಿ ಗಣಪತಿಗೆ ಭೂದೇವಿ ಸಮಾನಳಾಗಿರುವುದರಿಂದ ಕಡಿಮೆ ಎಂದರೆ ಸರಿಯಾಗದು. ತಾಮ್ರಪರ್ಣೀಯದಲ್ಲಿ ಈ ನಿರ್ಣಯ ವಾಕ್ಯದ ಆಧಾರದಿಂದಲೆ ಗಣಪತಿಗಿಂತ ಭೂದೇವಿ ಸ್ವಲ್ಪ ಕಡಿಮೆಯವಳೆಂದು ತಿಳಿಯಬೇಕು ಎಂದಿದೆ.[1]

ಪರಮಾತ್ಮನ ಅಂಗಸಂಗ ಮಹಾಲಕ್ಷ್ಮಿಗೆ ಹೊರತು ಇನ್ನಾರಿಗೂ ಇಲ್ಲ. ಬೇರೆ ಸ್ತ್ರೀಯರಿಗೆ ದೊರೆಯಬೇಕಾದರೆ ಅವರಲ್ಲಿ ಮಹಾಲಕ್ಷ್ಮಿಯ ಆವೇಶ ಬೇಕಾಗುತ್ತದೆ. ಅದರಿಂದ ಪೃಥಿವ್ಯಭಿಮಾನಿನಿ ಭೂದೇವಿಯಲ್ಲಿ ಮೂಲಪ್ರಕೃತಿಯ ಅಭಿಮಾನಿಯಾದ ಮಹಾಲಕ್ಷ್ಮಿಯ 'ಭೂ' ಎಂಬ ರೂಪದ ಆವೇಶ ಉಕ್ತವಾಗಿದೆ.

ಭಗದತ್ತನಿಗೆ ಪಟ್ಟಾಭಿಷೇಕ

ಸಾದಿತ್ಯಾಸ್ತೇ ಕುಂಡಲೇ ಪಾದಯೋಶ್ಚ
ನಿಧಾಯ ಪೌತ್ರಂ ಭಗದತ್ತಸಂಜ್ಞಂ ।
ಸಮರ್ಪಯಾಮಾಸ ತಸ್ಯಾಭಿಷೇಕಂ
ಪ್ರಾಗ್ಜ್ಯೋತಿಷೇ ಕಾರಯಾಮಾಸ ಕೃಷ್ಣಃ ॥೧೦೭॥

ಭೂದೇವಿ ಅದಿತಿಯ ಕುಂಡಲಗಳನ್ನು ಕೃಷ್ಣನ ಪಾದಗಳಲ್ಲಿಟ್ಟು ಭಗದತ್ತನೆಂಬ ಹೆಸರಿನ ಮೊಮ್ಮಗನನ್ನು ಅವನಿಗೆ ಸಮರ್ಪಿಸಿದಳು. ಕೃಷ್ಣ ಅವನಿಗೆ ಪ್ರಾಗ್‌ಜ್ಯೋತಿಷದಲ್ಲಿ ಅಭಿಷೇಕ ಮಾಡಿಸಿದ.

---

1. ಯದ್ಯಪಿ ಪೃಥಿವೀ ಆಕಾಶಾಭಿಮಾನಿ ವಿಘ್ನೇಶ ಸಮೋಕ್ತಾ। ತಥಾಪ್ಯೇತದ್ವಾಕ್ಯಬಲಾತ್ ಕಿಂಚಿದೂನತ್ವಂ ದ್ರಷ್ಟವ್ಯಂ। -ತಾಮ್ರಪರ್ಣೀಯ

ಸಂಸ್ಥಾಪ್ಯ ತಂ ಸರ್ವಕಿರಾತರಾಜ್ಯೇ
ಭೌಮಾಹೃತಂ ವೈಶ್ರವಣಾದ್ ಬಲೇನ।
ಶಿವೇನ ದತ್ತಂ ಧನದಾಯಾತಿಸತ್ತ್ವಂ
ಭಗದತ್ತೇಽಧಾತ್ ಸುಪ್ರತೀಕಂ ರಮೇಶಃ ॥೧೦೮॥

ಶ್ರೀಕೃಷ್ಣ ಭಗದತ್ತನನ್ನು ಸರ್ವಕಿರಾತರಾಜ್ಯದಲ್ಲಿ ಅಧಿಪತಿಯಾಗಿ ಇರಿಸಿ, ಹಿಂದೆ ಶಿವ ಕುಬೇರನಿಗೆ ನೀಡಿದ್ದು, ಬಳಿಕ ಕುಬೇರನಿಂದ ಬಲಾತ್ಕಾರವಾಗಿ ನರಕಾಸುರ ಅಪಹರಿಸಿದ್ದ ಅತ್ಯಂತ ಬಲಿಷ್ಠವಾದ ಸುಪ್ರತೀಕವೆಂಬ ಆನೆಯನ್ನು ಭಗದತ್ತನಲ್ಲಿ ಇರಿಸಿದ.

ಈ ಸುಪ್ರತೀಕ ಆನೆಯ ಮೇಲಿನ ಆಸೆಯಿಂದಲೇ ಕುಬೇರ ಭಗದತ್ತನಾಗಿ ನರಕಾಸುರನ ಮಗನಾಗಿ ಜನಿಸಿದ್ದ.

ಕರೀಂದ್ರಮೇಕಂ ತಂ ನಿಧಾಯೈವ ತಸ್ಮಿನ್
ಕೃತ್ವಾ ಪ್ರಸಾದಂ ಚ ವಸುಂಧರಾಯಾಃ।
ಚತುರ್ದಂತಾನ್ ಷಟ್ಸಹಸ್ರಾನ್ ಕರೀಂದ್ರಾನ್
ಪಯೋಬ್ಧಿಜಾನ್ ಪ್ರಾಹಿಣೋದ್ ದ್ವಾರವತ್ಯೈ ॥೧೦೯॥

ಆ ಒಂದು ಆನೆಯನ್ನು ಮಾತ್ರ ಭಗದತ್ತನಲ್ಲಿ ಇರಿಸಿ, ಭೂದೇವಿಗೆ ಸಾಂತ್ವನ ಮಾಡಿ, ಸಮುದ್ರದಿಂದ ಉದಿಸಿದ್ದ ನಾಲ್ಕುದಾಡೆಗಳ ಆರುಸಾವಿರ ಉತ್ತಮ ಆನೆಗಳನ್ನು ದ್ವಾರಕೆಗೆ ಕಳಿಸಿದ ಶ್ರೀಕೃಷ್ಣ.

ಹರಿವಂಶದಲ್ಲಿ ಆನೆಗಳ ಸಂಖ್ಯೆ ಇಪ್ಪತ್ತುಸಾವಿರ. ಆದರೆ ವಿಷ್ಣುಪುರಾಣದಲ್ಲಿ ಆರು ಸಾವಿರವೇ ಇದೆ. ನಾಲ್ಕುದಾಡೆಗಳ ಆನೆಗಳು ಆರು ಸಾವಿರವೆ ಇರಬೇಕು.

ನರಾಧಿಪಾನ್ ದೇವಗಂಧರ್ವನಾಗಾನ್
ಜಿತ್ವಾನೀತಂ ಹೇಮರತ್ನೋಚ್ಚರಾಶಿಂ।
ಶತದ್ವಯಂ ಯೋಜನಾನಾಂ ಸಮೃದ್ಧಂ
ಸಮಂತತಃ ಪ್ರಾಹಿಣೋತ್ ಸ್ವಾಂ ಪುರೀಂ ಸಃ ॥೧೧೦॥

ರಾಜರುಗಳನ್ನೂ ದೇವಗಂಧರ್ವನಾಗರನ್ನೂ ಗೆದ್ದು ನರಕಾಸುರ ತಂದಿದ್ದ, ಇನ್ನೂರು ಯೋಜನಗಳಷ್ಟು ಎತ್ತರಕ್ಕೆ ಬೆಳೆದಿದ್ದ ಬಂಗಾರ ರತ್ನಗಳ ದೊಡ್ಡರಾಶಿಯನ್ನೂ ತನ್ನ ಪಟ್ಟಣಕ್ಕೆ ಕಳಿಸಿದ, ಶ್ರೀಕೃಷ್ಣ.

ಮಹಾವೀರ್ಯೈರ್ನೈರ್ಋತೈ ರಾಕ್ಷಸೇಂದ್ರೈಃ
ಭೌಮಾನೀತೈರ್ನಿರ್ಋತಿಂ ಯೋಧಯಿತ್ವಾ।

ಸ ಪ್ರಾಹಿಣೋತ್ಸರ್ವರತ್ನೋಚ್ಚರಾಶಿಂ
ಗಜಾಂಶ್ಚ ನಾರಾಯಣ ಆದಿದೇವಃ ॥೧೧೧॥

ನರಕಾಸುರ ನಿರ್ಋತಿಯೊಡನೆ ಹೋರಾಡಿ ವಶಕ್ಕೆ ತಂದುಕೊಂಡಿದ್ದ ಮಹಾಬಲಿಷ್ಠರಾದ ಉತ್ತಮರಾಕ್ಷಸರ ಮೂಲಕ ಶ್ರೀಕೃಷ್ಣ ಎಲ್ಲ ರತ್ನಗಳ ದೊಡ್ಡ ರಾಶಿಗಳನ್ನೂ ಆನೆಗಳನ್ನೂ ದ್ವಾರಕೆಗೆ ಕಳಿಸಿದ.

ಹದಿನಾರು ಸಾವಿರದ ನೂರು ಕನ್ಯೆಯರು

ತತ್ರಾಪಶ್ಯತ್ ಕನ್ಯಕಾ ಭೂಮಿಪಾನಾಂ
ಭೌಮಾನೀತಾಃ ಸಮರೇ ತಾನ್ ವಿಜಿತ್ಯ ।
ದ್ವ್ಯಷ್ಟೌ ಸಹಸ್ರಾಣಿ ಶತಂ ಚ ರೂಪ-
ಶೀಲೋದಾರಾ ಅಕ್ಷತಾಃ ಸದ್ವ್ರತಸ್ಥಾಃ ॥೧೧೨॥

ನರಕಾಸುರ ಯುದ್ಧದಲ್ಲಿ ರಾಜರನ್ನು ಗೆದ್ದು ತಂದಿದ್ದ, ರೂಪಶೀಲಗಳಲ್ಲಿ ಶ್ರೇಷ್ಠರಾದ, ಇನ್ನೂ ಋತುಮತಿಯರಾಗದಿದ್ದ, ಒಳ್ಳೆಯ ವ್ರತನಿಷ್ಠರೂ ಆಗಿದ್ದ ಹದಿನಾರು ಸಾವಿರದ ನೂರುಮಂದಿ ರಾಜಕುಮಾರಿಯರನ್ನು ಶ್ರೀಕೃಷ್ಣ ಅಲ್ಲಿ ಕಂಡ.

ಹದಿನಾರು ಸಾವಿರದ ನೂರು ಮಂದಿ ಎಲ್ಲರೂ ರಾಜಕುಮಾರಿಯರಲ್ಲ. ಕೆಲವರು ದೇವಕನ್ಯೆಯರೂ ಗಂಧರ್ವಕನ್ಯೆಯರೂ ಇದ್ದರು ಎಂದು ಮುಂದಿನ ಶ್ಲೋಕದಲ್ಲಿ ಹೇಳಿದೆ.

ಕಾಶ್ಚಿತ್ತತ್ರಾಸನ್ ದೇವಗಂಧರ್ವಕನ್ಯಾಃ
ಸ್ತಾಸಾಂ ಪ್ರಧಾನಾ ತ್ವಷ್ಟೃಪುತ್ರೀ ಕಶೇರುಃ ।
ಪುತ್ರಾ ಅಗ್ನೇಃ ಪೂರ್ವಮಾಸಂಶ್ಚ ತೇಽಥ
ಸ್ತ್ರೀತ್ವಪ್ರಾಪ್ತ್ಯೈ ಚಕ್ರುರಗ್ರ್ಯಂ ತಪಶ್ಚ ॥೧೧೩॥

ಅವರಲ್ಲಿ ಕೆಲವರು ದೇವಕನ್ಯೆಯರೂ ಗಂದರ್ವಕನ್ಯೆಯರೂ ಇದ್ದರು. ಅವರಲ್ಲಿ ತ್ವಷ್ಟೃಪ್ರಜಾಪತಿಯ ಮಗಳಾದ ಕಶೇರು ಪ್ರಧಾನಳು. ಅವರೆಲ್ಲರೂ ಮೊದಲಿಗೆ ಅಗ್ನಿಪುತ್ರರು. ಬಳಿಕ ಸ್ತ್ರೀತ್ವಪ್ರಾಪ್ತಿಗಾಗಿ ಉತ್ತಮವಾದ ತಪಸ್ಸನ್ನಾಚರಿಸಿದರು.

ಅಗ್ನಿಪುತ್ರರು ಸ್ತ್ರೀತ್ವಪ್ರಾಪ್ತಿಗಾಗಿ ಮತ್ತು ಕೃಷ್ಣನ ಮಡದಿಯರಾಗುವುದಕ್ಕಾಗಿ ತಪಸ್ಸು ಮಾಡಿದ ಅಂಶ ಕೂರ್ಮಪುರಾಣದಲ್ಲಿ ಉಕ್ತವಾಗಿದೆ ಎಂದು ಭಾಗ.ತಾತ್ಪರ್ಯ (1.10.31) ದಲ್ಲಿ ಹೇಳಿದೆ.

ಭಾರ್ಯಾತ್ವಾರ್ಥೇ ವಾಸುದೇವಸ್ಯ ಯೋಷಿ-
ತ್ತನುಂ ತಾಸಾಮಿಚ್ಛತೀನಾಂ ಸಮೀರಃ ।

ಅದಾದ್ ವರಂ ತಪಸಾರಾಧಿತಃ ಸನ್
ಸ್ತ್ರೀಭೂತಾಸ್ತೇ ಬದರೀಂ ಸಂಪ್ರಜಗ್ಮುಃ ॥೧೧೪॥

ಶ್ರೀಕೃಷ್ಣನ ಮಡದಿಯರಾಗಬೇಕೆಂದು ಸ್ತ್ರೀಜನ್ಮವನ್ನು ಬಯಸಿದ ಅವರಿಗೆ ತಪಸ್ಸಿನಿಂದ ಆರಾಧಿತನಾದ ವಾಯು ಹಾಗೇ ವರನೀಡಿದ. ಸ್ತ್ರೀಯರಾಗಿ ಹುಟ್ಟಿದ ಬಳಿಕ ಅವರು ಬದರಿಗೆ ಹೋದರು.

ಸ್ತ್ರೀಯರು ಯಾವ ವರದಿಂದಲೂ ಶಾಪದಿಂದಲೂ ಪುರುಷರಾಗಲಾರರು. ಆದರೆ ಪುರುಷರು ಸ್ತ್ರೀಯರಾಗಬಹುದು. ಸ್ತ್ರೀಜನ್ಮ ಶಾಪವೇ ಆಗಿರಬೇಕಾಗಿಲ್ಲ. ವರವೂ ಆಗಬಹುದು. ಏಕೆಂದರೆ ರತಿಸುಖ ಪುರುಷನಿಗಿಂತ ಸ್ತ್ರೀಗೇ ಅಧಿಕ ಎನ್ನಲು ಮಹಾಭಾರತ ಅನುಶಾಸನಪರ್ವದಲ್ಲಿ ಭಂಗಾಸ್ವನ ಎಂಬ ರಾಜನ ಕಥೆ ಇದೆ.

ನಾರಾಯಣಂ ತತ್ರ ಶುಶ್ರೂಷಮಾಣಾಃ
ಪ್ರಾಪ್ಯಾಪ್ಸರಸ್ತ್ವಂ ರಾಜಕುಲೇಷು ಜಾತಾಃ।
ಕಾಶ್ಚಿತ್ ಸ್ವರ್ಗೇ ತಾ ನಿಶಾಮ್ಯೈವ ಕೃಷ್ಣಂ
ವವ್ರುಃ ಪತಿಂ ಸರ್ವಗುಣಾಭಿರಾಮಂ ॥೧೧೫॥

ಬದರಿಕಾಶ್ರಮದಲ್ಲಿ ಆ ಸ್ತ್ರೀಯರು ಶ್ರೀವೇದವ್ಯಾಸರನ್ನು ಸೇವಿಸುತ್ತ ಅಪ್ಸರ ಜನ್ಮಹೊಂದಿ, ಬಳಿಕ ಕೆಲವರು ರಾಜವಂಶಗಳಲ್ಲಿಯೂ ಕೆಲವರು ಸ್ವರ್ಗದಲ್ಲಿಯೂ ಹುಟ್ಟಿದರು. ಅವರು ಕೃಷ್ಣನನ್ನು ಕಂಡ ಮಾತ್ರಕ್ಕೇ ಸರ್ವಗುಣಗಳಿಂದಲೂ ಮನೋಹರನಾಗಿದ್ದ ಅವನನ್ನೇ ಪತಿಯನ್ನಾಗಿ ವರಿಸಿದರು.

ನರಕಾಸುರನಿಂದ ಬಂಧನಕ್ಕೊಳಗಾಗಿದ್ದ ಈ ಕನ್ಯೆಯರ ಬಳಿಗೆ ಮೊದಲೇ ನಾರದರು ಬಂದು 'ಶ್ರೀಕೃಷ್ಣ ಬರುತ್ತಾನೆ, ನರಕನನ್ನು ಕೊಂದು ನಿಮ್ಮನ್ನು ಬಂಧನದಿಂದ ಬಿಡಿಸಿ ವಿವಾಹವಾಗುತ್ತಾನೆ' ಎಂದು ಭವಿಷ್ಯ ನುಡಿದಿದ್ದರು. ಅಂದಿನಿಂದಲೆ ಅವರು ಏಕವೇಣಿಧರೆಯರಾಗಿ ಕಾಷಾಯವಸ್ತ್ರ ಉಟ್ಟು ಇಂದ್ರಿಯನಿಗ್ರಹಪೂರ್ವಕ ವ್ರತನಿಷ್ಠರಾದರು. ಕೃಷ್ಣನನ್ನು ಪತಿಯನ್ನಾಗಿ ಪಡೆಯಲು ಘೋರತಪಸ್ಸು ಮಾಡಿದರು. ನರಕಾಸುರ ಒಡ್ಡಿದ ಎಲ್ಲ ಆಮಿಷಗಳನ್ನೂ ತಿರಸ್ಕರಿಸಿದರು. ಬಳಿಕ ವಾಯುದೇವನೂ ನಾರದರ ಭವಿಷ್ಯವಾಣಿ ಸತ್ಯವಾಗುವುದೆಂದು ನುಡಿದ.

'ಬದರಿಕಾಶ್ರಮದಲ್ಲಿ ನಾರಾಯಣನನ್ನು ಸೇವಿಸುತ್ತ' ಎಂದು ಮೂಲ ಶ್ಲೋಕದಲ್ಲಿ ಇದೆ. ಆದರೆ ಜನಾರ್ದನೀಯದಲ್ಲಿ 'ನಾರಾಯಣಂ ಶ್ರೀವೇದವ್ಯಾಸಂ' ಎಂದು ವ್ಯಾಖ್ಯಾನಿಸಿದೆ. ಅದರಿಂದ ವೇದವ್ಯಾಸರನ್ನು

ಎಂದು ಅನುವಾದಿಸಲಾಗಿದೆ. ಕನ್ನಡ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ 'ನರನಾರಾಯಣನನ್ನು' ಎಂದಿದೆ.

ಆಜಾನದೇವೈಃ ಸರ್ವಗುಣೈಃ ಸಮಾಸ್ತಾಃ
ಸ್ವಭಾವತೋಽಥೇಂದಿರಾವೇಶತೋಽತಃ ।
ಗುಣಾಧಿಕಾಸ್ತಾಃ ಶಿಬಿಕಾಸು ಕೃಷ್ಣ
ಆರೋಪಯಿತ್ವಾ ಪ್ರಾಹಿಣೋದ್ ದ್ವಾರವತ್ಯೈ ॥೧೧೬॥

ಅವರು ಸ್ವಭಾವತಃ ಎಲ್ಲ ಗುಣಗಳಲ್ಲಿಯೂ ಆಜಾನದೇವತೆಗಳಿಗೆ ಸಮಾನರು. ರಮಾವೇಶ ಪ್ರಯುಕ್ತ ಗುಣಗಳಲ್ಲಿ ಇನ್ನೂ ಶ್ರೇಷ್ಠರೆನಿಸಿದರು. ಅವರನ್ನು ಶ್ರೀಕೃಷ್ಣ ಡೋಲಿಗಳಲ್ಲಿ ಕೂಡಿಸಿ ದ್ವಾರಕಗೆ ಕಳಿಸಿದ.

ಆಜಾನ ದೇವತೆಗಳೆಂದರೆ ದೇವಜಾತಿಯಲ್ಲಿ ಹುಟ್ಟಿದ ಜಯಂತ ಮುಂತಾದ ದೇವತೆಗಳ ಒಂದು ಗಣವೆಂದು ವಾದಿರಾಜೀಯದಲ್ಲಿ ಹೇಳಿದೆ. ಸ್ವಭಾವತಃ ಆಜಾನದೇವತೆಗಳಿಗೆ ಸಮಾನರಾದ ಈ ಅಗ್ನಿಪುತ್ರರು ಲಕ್ಷ್ಮೀದೇವಿಯ ಆರಾಧನೆಯಿಂದ ಲಕ್ಷ್ಮ್ಯಾವೇಶವನ್ನು ಹೊಂದಿ ಶ್ರೀಕೃಷ್ಣನ ಅಂಗಸಂಗಕ್ಕೆ ಪಾತ್ರರಾದರು. ಲಕ್ಷ್ಮೀವೇಶ ಪ್ರಯುಕ್ತ ಆಜಾನ ದೇವತೆಗಳಿಗಿಂತಲೂ ಶ್ರೇಷ್ಠರೆನಿಸಿದರು.

ಸ್ವರ್ಗಕ್ಕೆ ಪ್ರಯಾಣ

ಸಮಂತತೋ ಯೋಜನಾನಾಂ ಶತೇ ದ್ವೇ
ಪ್ರವೃದ್ಧಮಿಂದ್ರಸ್ಯ ಸ ರತ್ನಪರ್ವತಂ ।
ನಿತ್ಯಾಮೃತಸ್ರಾವಿ ಜಲೇಶ್ವರಸ್ಯ
ಛತ್ರಂ ಚ ದೋರ್ಭ್ಯಾಂ ಗರುಡೇ ನ್ಯಧಾದ್ಧರಿಃ ॥೧೧೭॥

ಇನ್ನೂರು ಯೋಜನ ಉದ್ದ ಅಗಲ ಎತ್ತರವಾಗಿದ್ದ ಇಂದ್ರನ ಮಣಿ ಪರ್ವತವನ್ನೂ, ಸದಾ ಅಮೃತ ಸುರಿಸುತ್ತಿದ್ದ ವರುಣನ ಛತ್ರವನ್ನೂ ಶ್ರೀಕೃಷ್ಣ ತೋಳುಗಳಿಂದ ಎತ್ತಿ ಗರುಡನ ಮೇಲಿರಿಸಿದ.

ಸ್ವಯಂ ಚ ಸತ್ಯಾಸಹಿತಃ ಸಮಾರುಹತ್
ಸ ಚಾಶ್ರಮೇಣೈವ ಯಯೌ ತ್ರಿವಿಷ್ಟಪಂ ।
ಅಭಿಪ್ರಯಾತೋಽಖಿಲಲೋಕಪಾಲೈ
ರ್ಜನಾರ್ದನಃ ಶಕ್ರಗೃಹಂ ವಿವೇಶ ॥೧೧೮॥

ಬಳಿಕ ತಾನು ಸತ್ಯಭಾಮಾ ಸಮೇತನಾಗಿ ಗರುಡನನ್ನು ಏರಿದ. ಗರುಡ ಅನಾಯಾಸದಿಂದ ಸ್ವರ್ಗವನ್ನು ಸೇರಿದ. ಎಲ್ಲ ಲೋಕಪಾಲಕರೂ ಇದಿರುಗೊಳ್ಳುತ್ತಿದ್ದಂತೆ ಶ್ರೀಕೃಷ್ಣ ಇಂದ್ರನ ಅರಮನೆಯನ್ನು ಪ್ರವೇಶಿಸಿದ.

ಸಂಪೂಜಿತಃ ಸತ್ಯಭಾಮಾಸಹಾಯಃ
ಶಕ್ರೇಣ ಶಚ್ಯಾ ಸಹಿತೇನ ಸಾದರಂ ।
ದದಾವದಿತ್ಯಾ ಅಪಿ ಕುಂಡಲೇ ಶುಭೇ
ಸಮಸ್ತದೇವೈರ್ಮುನಿಭಿಶ್ಚ ವಂದಿತಃ ॥೧೧೯॥

ಸತ್ಯಭಾಮಾ ಸಮೇತನಾದ ಶ್ರೀಕೃಷ್ಣ ಶಚಿ ಇಂದ್ರರಿಂದ ಆದರಪೂರ್ವಕ ಸತ್ಕೃತನಾಗಿ ಅದಿತಿಗೆ ಮಂಗಳಕರವಾದ ಕುಂಡಲಗಳನ್ನಿತ್ತ. ಎಲ್ಲ ದೇವತೆಗಳಿಂದಲೂ ಮುನಿಗಳಿಂದಲೂ ವಂದಿತನಾದ.

ತಮಾಸುರಾವೇಶವಶಾದಜಾನತೀ
ಸತ್ಯಾಂ ಚ ಸರ್ವಪ್ರಭವೌ ಜಗತ್ಪ್ರಭೂ ।
ನಿರ್ದೋಷಸೌಖ್ಯೈಕತನೂ ಶುಭಾಶಿಷ-
ಸ್ತಾಭ್ಯಾಂ ದದೌ ಸಾದಿತಿರಾತ್ಮ ಪುತ್ರವತ್ ॥೧೨೦॥

ಅದಿತಿ ಅಸುರಾವೇಶ ವಶದಿಂದ ಶ್ರೀಕೃಷ್ಣನನ್ನೂ ಸತ್ಯಭಾಮೆಯನ್ನೂ ಸರ್ವಕರ್ತರಾದ ಜಗತ್ಪ್ರಭುಗಳು, ನಿರ್ದುಷ್ಟ ಆನಂದ ಮಾತ್ರ ಸ್ವರೂಪರು ಎಂದು ತಿಳಿಯದೆ ತನ್ನ ಮಕ್ಕಳಂತೆ ತಿಳಿದು ಅವರಿಗೆ ಶುಭಾಶೀರ್ವಾದಗಳನ್ನು ನೀಡಿದಳು.

ಮರ್ತ್ಯಲೋಕದಲ್ಲಿ ಸಕಲ ಸುರಾಸುರರುಗಳಿಂದ ಅಜೇಯನಾಗಿರೆಂದು ಕೃಷ್ಣನಿಗೂ ಚಿರಯೌವನವತಿಯಾಗಿ ಪತಿಪ್ರೇಮಪಾತ್ರಳಾಗಿರೆಂದು ಸತ್ಯಭಾಮೆಗೂ ಅದಿತಿ ಆಶೀರ್ವದಿಸಿದಳು. (ವಿಷ್ಣುಪುರಾಣ 5.30.25)

ಪಾರಿಜಾತಾಪಹರಣ

ಅಥೋ ಸದಾನಂದಚಿದಾತ್ಮ ದೇಹಃ
ಸ ನಂದನೋದ್ಯಾನಮಜೋಽನುರೂಪಯಾ ।
ಅನಂತಶಕ್ತಿಃ ಸಹ ಸತ್ಯಭಾಮಯಾ
ವಿವೇಶ ರಂತುಂ ಪ್ರಿಯಯಾಖಿಲೇಶ್ವರಃ ॥೧೨೧॥

ಬಳಿಕ ಸದಾನಂದ ಜ್ಞಾನ ಸ್ವರೂಪದೇಹವುಳ್ಳ ಜನನರಹಿತನಾದ ಅನಂತಶಕ್ತಿಉಳ್ಳ ಸರ್ವೇಶ್ವರನಾದ ಶ್ರೀಕೃಷ್ಣ ತನಗೆ ಅನುರೂಪಳಾದ ಪ್ರಿಯೆ ಸತ್ಯಭಾಮೆಯೊಂದಿಗೆ ವಿಹಾರ ಮಾಡಲು ನಂದನವನವನ್ನು ಪ್ರವೇಶಿಸಿದ.

ತಯಾಚ್ಯುತೋಽಸೌ ಕನಕಾವದಾತಯಾ
ಸುಕುಂಕುಮಾದಿಗ್ಧಪಿಶಂಗವಾಸಸಾ ।
ಪೂರ್ಣೇಂದುಕೋಟ್ಯೌಘಜಯನ್ಮುಖಾಬ್ಜಯಾ
ರೇಮೇಽಮಿತಾತ್ಮಾ ಜಗದೇಕಸುಂದರಃ ॥೧೨೨॥

ಬಂಗಾರದಂತೆ ಸ್ವಚ್ಛವರ್ಣದವಳು, ಒಳ್ಳೆಯ ಕುಂಕುಮ ಕೇಸರಿಯಿಂದ ಲಿಪ್ತವಾದ ಪೀತಾಂಬರವುಟ್ಟವಳು, ಕೋಟಿ ಪೂರ್ಣಚಂದ್ರರನ್ನು ಧಿಕ್ಕರಿಸುವ ಮುಖಕಮಲ ಉಳ್ಳವಳು ಇಂಥ ಸತ್ಯಭಾಮೆಯೊಂದಿಗೆ ಲೋಕೈಕಸುಂದರ ಅಮಿತಶಕ್ತಿಶಾಲಿ ಶ್ರೀಕೃಷ್ಣ ವಿಹರಿಸಿದ.

ಸರ್ವರ್ತುನಿತ್ಯೋದಿತಸರ್ವವೈಭವೇ
ಸುರತ್ನಚಾಮೀಕರವೃಕ್ಷಸದ್ವನೇ ।
ಸದೈವ ಪೂರ್ಣೇಂದುವಿರಾಜಿತೇ ಹರಿ-
ಶ್ಚಚಾರ ದೇವ್ಯಾ ಪವನಾನುಸೇವಿತೇ ॥೧೨೩॥

ಎಲ್ಲ ಋತುಗಳಲ್ಲಿಯೂ ಎಲ್ಲ ವೈಭವಗಳೂ ನಿತ್ಯ ಆವಿರ್ಭವಿಸುವ ಆ ಉದ್ಯಾನ ಸದಾ ಪೂರ್ಣಚಂದ್ರನಿಂದ ವಿರಾಜಿಸುತ್ತ ಮಂದಮಾರುತದಿಂದ ಸೇವಿತವಾಗುತ್ತಿದೆ. ಒಳ್ಳೆಯ ರತ್ನ ಬಂಗಾರಗಳ ವೃಕ್ಷಗಳುಳ್ಳ ಉತ್ತಮವಾದ ಆ ಉದ್ಯಾನದಲ್ಲಿ ದೇವಿಯೊಂದಿಗೆ ಶ್ರೀಕೃಷ್ಣ ಸಂಚರಿಸಿದ.

[1]ಸದಾ ಪೂರ್ಣಚಂದ್ರನಿರುವ ಹುಣ್ಣಿಮೆರಾತ್ರಿಯೆ ನಂದನವನದಲ್ಲಿದ್ದರೆ ಹಗಲಿನಲ್ಲಿ ಮಾಡುವ ವಿಹಾರಕ್ಕೆ ಅಲ್ಲಿ ಆಸ್ಪದವಿಲ್ಲವೆ? ಎಂದರೆ ಇದಕ್ಕೆ ಸಮಾಧಾನ ಯಮಕಭಾರತದಲ್ಲಿ ಇದೆ. ಚಂದ್ರಮಾತ್ರವಲ್ಲ ಸೂರ್ಯನೂ ಸದಾ ಪ್ರಕಾಶಿಸುತ್ತಾನೆ ಎಂದು-

'ಸರ್ವರ್ತುವನೇ ಶಶಿನಾ ನಿಶಿ ಸತ್ಯಾಂ ವಾಸರೇ ವನೇಽಶಶಿನಾ।'

ನಿರ್ದೋಷ ಸಂವಿತ್ತನುರತ್ರ ಸತ್ತರುಂ
ದದರ್ಶ ಸತ್ಯಾಮೃತಮಂಥನೋದ್ಭವಂ ।
ಸಾ ಪಾರಿಜಾತಂ ಮಣಿಕಾಂಚನಾತ್ಮಕಂ
ಸಮಸ್ತಕಾಮಪ್ರದಮಾರ್ತಿಹಾರಿಣಂ ॥೧೨೪॥

ನಿರ್ದೋಷಜ್ಞಾನಸ್ವರೂಪಳಾದ ಸತ್ಯಭಾಮೆ ಅಮೃತಮಥನದಿಂದ ಉದ್ಭವಿಸಿದ ಸಕಲಾಭೀಷ್ಟದಾಯಕ ಮತ್ತು ದುಃಖಪರಿಹಾರಕವಾದ ರತ್ನ ಸುವರ್ಣಾತ್ಮಕವಾದ ಪಾರಿಜಾತವೆಂಬ ಉತ್ತಮ ವೃಕ್ಷವನ್ನು ನಂದನವನದಲ್ಲಿ ಕಂಡಳು.

ದೃಷ್ಟ್ವೈವ ತಂ ಸುಸ್ಮಿತಚಂದ್ರಿಕಾ ಸ್ಫುರ-
ನ್ಮುಖಾರವಿಂದಾಸಿತಲೋಲಲೋಚನಾ ।
ಕಪೋಲನಿರ್ಭಾತಚಲತ್ಸುಕುಂಡಲಾ
ಜಗಾದ ದೇವಾಧಿಪತಿಂ ಪತಿಂ ಸತೀ ॥೧೨೫॥

1. ನನು ಸರ್ವದಾ ಪೂರ್ಣೇಂದು ವಿರಾಜಿತತ್ವೇ ಅಹಃಪ್ರಯುಕ್ತ ಗುಣಾತಿಶಯೋ ವನಸ್ಯ ನ ಸ್ಯಾದಿತಿ ಚೇನ್ನ। ಸರ್ವದಾ ತತ್ರ ಸೂರ್ಯಸ್ಯಾಪ್ಯುದಿತತ್ವೇನ ತಸ್ಯಾಪಿ ಭಾವಾತ್। ತದುಕ್ತಂ ಯಮಕಭಾರತೇ-ಸರ್ವರ್ತುವನೇ ಶಶಿನಾ ನಿಶಿ ಸತ್ಯಾಂ ವಾಸರೇ ವನೇಽಶಶಿನೇತಿ।-ತಾಮ್ರಪರ್ಣೀಯ

ಆ ವೃಕ್ಷವನ್ನು ಕಂಡೊಡನೆ ಹೊಳೆವ ಮುಖಕಮಲ ಕಪ್ಪಾದ ಚಂಚಲ ಕಣ್ಣುಗಳು ಕೆನ್ನೆಗಳಲ್ಲಿ ಶೋಭಿಸುವ ಚಲಿಸುವ ಕುಂಡಲಗಳುಳ್ಳ ಸತ್ಯಭಾಮೆ ಒಳ್ಳೆಯ ಮಂದಹಾಸವೆಂಬ ಬೆಳದಿಂಗಳನ್ನು ಬೀರುತ್ತ ಪತಿಗೆ ನುಡಿದಳು.

ತರುರ್ಜಗಜ್ಜೀವದ ಮೇ ಗೃಹಾಂಗಣೇ
ಸಂಸ್ಥಾಪನೀಯೋಽಯಮಚಿಂತ್ಯಪೌರುಷ।
ಇತೀರಿತಸ್ತಾಂ ಕಲಶೋಪಮಸ್ತನೀ-
ಮಾಲಿಂಗ್ಯ ದೇವಸ್ತರುಮುದ್ಬಬರ್ಹ ॥೧೨೬॥

'ಜಗತ್ತಿಗೆ ಜೀವನ ಪ್ರದನಾದ ಅಚಿಂತ್ಯ ಪೌರುಷಶಾಲಿಯಾದ ಕೃಷ್ಣ, ಈ ಮರ ನನ್ನ ಮನೆಯಂಗಳದಲ್ಲಿ ಇರಿಸಲು ಯೋಗ್ಯವಾಗಿದೆ'. ಹೀಗೆ ಹೇಳಿದಾಗ ಕಲಶದಂಥ ಸ್ತನಉಳ್ಳ ಆ ದೇವಿಯನ್ನು ಆಲಿಂಗಿಸಿ ದೇವ ಶ್ರೀಕೃಷ್ಣ ಪಾರಿಜಾತವೃಕ್ಷವನ್ನು ಕಿತ್ತ.

ದೇವಿ ಸತ್ಯಭಾಮೆ ಸಾಮಾನ್ಯ ಸ್ತ್ರೀಯರ ಸ್ವಭಾವವನ್ನು ತೋರುತ್ತ 'ನಾಥ'! ಈ ಮರ ಯಾವುದು? ಹವಳದ ಬೇರು ಚಿನ್ನದಕಾಂಡ ಇಂದ್ರನೀಲಮಣಿಯ ಎಲೆಗಳು, ಮಾಣಿಕ್ಯದ ಪುಷ್ಪ ಮುತ್ತಿನ ಹಣ್ಣು ವಜ್ರದ ಕೇಸರ ಮರಕತದ ಕೊಂಬೆಗಳಿಂದ ಶೋಭಿಸುವ ಈ ಮರವನ್ನು ನನ್ನ ಮನೆಯಂಗಳಕ್ಕೆ ನೀನು ತಂದಿಟ್ಟರೆ ನಿನ್ನ ಪತ್ನಿಯರಲ್ಲೆಲ್ಲ ನನಗೇ ಉತ್ತಮ ಸ್ಥಾನ ಲಭಿಸುವುದು.' ಎನ್ನುತ್ತಾಳೆ. ಶ್ರೀಕೃಷ್ಣ 'ಇದು ಸಮುದ್ರ ಮಥನದಿಂದ ಉದ್ಭವಿಸಿದ ಪಾರಿಜಾತ ವೃಕ್ಷ. ಆಗ ನಾನೇ ಅದನ್ನು ದೇವೇಂದ್ರನಿಗೆ ಕೊಟ್ಟಿದ್ದೆ. ನಾನು ಕೊಟ್ಟದ್ದನ್ನು ನಾನೇ ಅಪಹರಿಸುವುದು ನ್ಯಾಯವಾಗದು. ಮತ್ತು ಈ ವೃಕ್ಷದ ಸಲುವಾಗಿ ನಾನು ಎಲ್ಲ ದೇವತೆಗಳೊಡನೆ ಘೋರವಾದ ಯುದ್ಧ ಮಾಡಬೇಕಾದೀತು' ಎಂದ. ಸತ್ಯಭಾಮೆ ಕೇಳಲಿಲ್ಲ. 'ಇಂದ್ರನ ಅರಮನೆಯಲ್ಲಿ ಶಚಿ ನನಗೆ ಒಂದೇ ಒಂದು ಪಾರಿಜಾತದ ಹೂ ಕೊಡಲಿಲ್ಲ. ತಾನು ಮಾತ್ರ ಯಥೇಚ್ಛ ಮುಡಿದುಕೊಂಡಿದ್ದಾಳೆ. ಅವಳ ಅಹಂಕಾರಕ್ಕೆ ಶಾಸ್ತಿಯಾಗಬೇಕಾದರೆ ನೀನು ಇಂದ್ರನನ್ನು ಪರಾಭವಗೊಳಿಸಬೇಕು. ನಿನಗೆ ನನ್ನಲ್ಲಿ ನಿಜವಾಗಿ ಪ್ರೀತಿ ಇರುವುದಾದರೆ ಗಿಡವನ್ನು ನಮ್ಮ ಊರಿಗೆ ಒಯ್ಯಬೇಕು' ಎಂದಳು ಸತ್ಯಭಾಮೆ. ಒಡನೆ ಶ್ರೀಕೃಷ್ಣ ಗಿಡವನ್ನು ಕಿತ್ತು ಗರುಡನ ಮೇಲೆ ಇರಿಸಿದ.

ದೇವತೆಗಳ ಪರಾಭವ

ಸ ತೇನ ವೃಕ್ಷೇಣ ಸಹೈವ ಕೇಶವ
ಸ್ತ್ರಿಯಾ ಚ ದೇವ್ಯಾರುಹದಗ್ರ್ಯಪೌರುಷಂ।

ಖಗೇಶ್ವರಂ ತಚ್ಚ ನಿಶಮ್ಯ ಶಚ್ಯಾ
ಪ್ರಚೋದಿತೋ ವಾಸವ ಆಗಮತ್ ಸುರೈಃ ॥೧೨೭॥

ಶ್ರೀಕೃಷ್ಣ ಆ ಪಾರಿಜಾತವೃಕ್ಷ ಹಾಗೂ ಸತ್ಯಭಾಮಾ ದೇವಿಯರಿಂದೊಡಗೂಡಿ ಗರುಡನನ್ನು ಏರಿದ. ಅದನ್ನು ಕೇಳಿ ಶಚಿಯಿಂದ ಪ್ರೇರಿತನಾದ ಇಂದ್ರ ದೇವತೆಗಳೊಡನೆ ಅಲ್ಲಿಗೆ ಬಂದ.

ಸತ್ಯಭಾಮೆ ಅಹಂಕಾರದಿಂದ ಪಾರಿಜಾತವನ್ನು ಅಪಹರಿಸಿದಳೆಂದು ಕಾವಲುಗಾರರು ಶಚಿಯ ಮುಂದೆ ದೇವೇಂದ್ರನಿಗೆ ಹೇಳಿಕೊಂಡರು. ಇದು ಶಚೀದೇವಿಗೆ ಆದ ಅಪಮಾನ. ಅವಳ ಪ್ರೇರಣೆಯಿಂದ ದೇವೇಂದ್ರ ಅಸುರಾವೇಶದಿಂದ ಸಿಟ್ಟಾಗಿ ವಜ್ರಾಯುಧ ಹಿಡಿದು ಐರಾವತದ ಮೇಲೇರಿ ಬಂದ. ಜೊತೆಗೆ ಎಲ್ಲ ದಿಕ್ಪಾಲಕರೂ ತಮ್ಮ ವಾಹನಗಳನ್ನೇರಿ ಬಂದರು.

ತಾನಾಸುರಾವೇಶಯುತಾನ್ ಹರೇಶ್ಚ
ಬಲಪ್ರಕಾಶಾಯ ಸಮುದ್ಯತಾನ್ ಸುರಾನ್ ।
ನ್ಯವಾರಯಚ್ಛಾರ್ಙ್ಗಶರಾಸನಚ್ಯುತೈ-
ರ್ಹರಿಪ್ರಿಯಾ ಬಾಣವರೈಃ ಸಮಸ್ತಶಃ ॥೧೨೮॥

ಅಸುರಾವೇಶಯುಕ್ತರಾಗಿ ಕೃಷ್ಣನೊಡನೆ ಹೋರಾಡಲು ಬಂದ ಆ ಎಲ್ಲ ದೇವತೆಗಳನ್ನು ಹರಿಪ್ರಿಯೆಯಾದ ಸತ್ಯಭಾಮೆ ಹರಿಯ ಬಲಪ್ರಕಟನಕ್ಕಾಗಿ ತಾನೇ ಶಾರ್ಙ್ಗಧನುಸ್ಸಿನಿಂದ ಹೊರಡುವ ಉತ್ತಮಬಾಣಗಳಿಂದ ಇದಿರಿಸಿದಳು.

ಕೃಷ್ಣನ ಮಡದಿ ನಾನು ನಿಮ್ಮನ್ನು ಇದಿರಿಸಬಲ್ಲೆನೆಂದರೆ ಇನ್ನು ಕೃಷ್ಣನ ಪೌರುಷ ಎಷ್ಟಿದ್ದೀತು? ಎಂದು ಹರಿಯ ಬಲಪ್ರಕಟನಕ್ಕಾಗಿ ಸತ್ಯಭಾಮೆ ಬಿಲ್ಲನ್ನೆತ್ತಿಕೊಂಡಳು.

[1]'ಕೆಲವು ಟಿಪ್ಪಣಿಕಾರರು ಕೆಲವು ದೇವತೆಗಳು ಅಸುರಾವೇಶದಿಂದ ಕೃಷ್ಣನೊಡನೆ ಹೋರಾಡಲು ಬಂದಿದ್ದರು. ಇನ್ನು ಕೆಲವರು ಕೃಷ್ಣನ ಪೌರುಷವೆಷ್ಟೆಂದು ಲೋಕ ಕಾಣಲೆಂದು ಹೋರಾಟಕ್ಕೆ ಬಂದರು ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಈ ಪ್ರಸಂಗದಲ್ಲಿ ದೇವತೆಗಳಲ್ಲಿ ಯಾರಿಗಾದರೂ ಅಸುರಾವೇಶವಿಲ್ಲದುದನ್ನು ಶ್ರೀಮದಾಚಾರ್ಯರು ಹೇಳಿಲ್ಲ' ಎಂದು ಜನಾರ್ದನೀಯ ಹೇಳುತ್ತದೆ. ಅವರು ಹೇಳುವ 'ಕೆಲವು ಟಿಪ್ಪಣಿಕಾರ' ರೆಂದರೆ ವರದರಾಜ ತಾಮ್ರಪರ್ಣಿ ಮುಂತಾದವರು.

---

1. ಕಾಂಶ್ಚಿದಸುರಾವೇಶಯುತಾನ್ ಕಾಂಶ್ಚಿದ್ಧರೇರ್ಬಲ ಪ್ರಕಾಶನಾಯ ಸಮುದ್ಯತಾನಿತಿ ಕೇಚಿಟ್ಟಿಪ್ಪಣೇಕಾರಾಃ। ಅಸ್ಮಿನ್ ಪ್ರಸಂಗೇ ಕಸ್ಯಾಪಿ ಅಸುರಾವೇಶರಾಹಿತ್ಯಮಾಚಾರ್ಯೈರ್ನ ದರ್ಶಿತಂ।
-ಜನಾರ್ದನೀಯ

ನಿರಾಯುಧಂ ವೈಶ್ರವಣಂ ಚಕಾರ
ಚಿಕ್ಷೇಪ ಚಾಬ್ಧೌ ಗರುಡೋ ಜಲೇಶಂ ।
ಪ್ರಧಾನವಾಯೋಸ್ತನಯಂ ತು ವಾಯುಂ
ಕೋಣಾಧಿಪಂ ವಹ್ನಿಯಮಾದಿಕಾನಪಿ ॥೧೨೯॥
ನಿಬೋಧ್ಯ ಶಾಂರ್ಗೋತ್ಥರವೈಃ ಸ್ವಕಾಂ ತನು-
ಮಾವೇಶಿತಾನಾಮಸುರೈರಗಾದ್ಧರಿಃ ।
ತೇ ಬೋಧಿತಾಸ್ತೇನ ರಣಂ ವಿಸೃಜ್ಯ
ಯಯುರ್ವಿದಿತ್ವಾ ತಮನಾದಿಪೂರುಷಂ ॥೧೩೦॥

ಸತ್ಯಭಾಮೆ ಕುಬೇರನನ್ನು ನಿರಾಯುಧಗೊಳಿಸಿದಳು. ಗರುಡ ವರುಣನನ್ನು ಅವನ ವಾಹನವಾದ ಮೊಸಳೆ ಸಹಿತವಾಗಿಯೆ ಸಮುದ್ರದಲ್ಲಿ ಎಸೆದ. ಮುಖ್ಯವಾಯುವಿನ ಮಗನಾದ ವಾಯವ್ಯ ಕೋಣಾಧಿಪತಿಯಾದ ವಾಯುವಿಗೂ ವಹ್ನಿಯಮ ಮುಂತಾದವರಿಗೂ ಅಸುರಾವಿಷ್ಟರಾದ ಬೇರೆ ಎಲ್ಲ ದೇವತೆಗಳಿಗೂ ಶ್ರೀಕೃಷ್ಣ ಶಾರ್ಂಗದಿಂದ ಎದ್ದ ಧ್ವನಿಯಿಂದಲೆ ತನ್ನ ಸ್ವರೂಪ ತಿಳಿಯುವಂತೆ ಮಾಡಿ ಅವರ ಮೇಲೆ ಏರಿಹೋದ. ಆಗ ಅವರು ಜ್ಞಾನೋದಯ ಹೊಂದಿ ಕೃಷ್ಣನನ್ನು ಅನಾದಿ ಪುರುಷನೆಂದು ತಿಳಿದು ಯುದ್ಧವನ್ನು ತ್ಯಜಿಸಿ ಹೊರಟುಹೋದರು.

[1]ಇಲ್ಲಿ ಕೋಣವಾಯು ವಹ್ನಿಯಮ ಮುಂತಾದ ದೇವತೆಗಳಿಗೆ ಶ್ರೀಕೃಷ್ಣ ಬಾಣಪ್ರಯೋಗಮಾಡಲಿ ಇಲ್ಲ. ಕೇವಲ ಬಿಲ್ಲಿನ ಠೇಂಕಾರವನ್ನು ಕೇಳಿಯೆ ಅವರು ಪಲಾಯನ ಮಾಡಿದರೆಂದು ಹೇಳಿದಂತೆ ಕಾಣುತ್ತದೆ. ಭಾಗವತದಲ್ಲಿ 'ಅಗ್ನಿಯುದ್ಧದಲ್ಲಿ ಮೈಯೆಲ್ಲ ಶ್ರೀಕೃಷ್ಣನ ಬಾಣಗಳಿಂದ ಚುಚ್ಚಿಸಿಕೊಂಡು ಸೋತು ಓಡಿ ಬರುತ್ತಿದ್ದನ್ನು ಕೋಣವಾಯು ನೋಡಿ ಭಯದಿಂದ ಆತ್ಮರಕ್ಷಣೆಗಾಗಿ ತಾನೂ ಹಿಂತಿರುಗಿದ' ಎಂದಿದೆ. ಅದರಿಂದ ಕೋಣವಾಯುವನ್ನು ಕೇವಲ ಬಿಲ್ಲಿನ ಧ್ವನಿಯಿಂದ ಅಂಜಿಸಿದನೆಂದರೆ

---

1. ಯದ್ಯಪಿ ಶರಾ ಅಪಿ ದೇವೇಷು ಪ್ರಯುಕ್ತಾ:। ತಥಾಪಿ ಸ್ವಭಕ್ತತ್ವಾತ್ ಯಥಾ ನ ಮ್ರಿಯೇರನ್ ತಥಾ ಕರುಣಯಾ ಮಂದಂ ಲಘು ಚ ಪ್ರಯುಕ್ತಾ:। ಭೀಷಣಾಯ ಶಾರ್ಙ್ಗರವಂ ತು ಘನ ಗರ್ಜಿತವತ್ ಕರೋತಿ। ಅತಃ ಶರತಾಡನಾತ್ ಕೃಷ್ಣೋಽಯಮಿತಿ ಬೋಧೋ ನಾಭೂತ್। ಕಿಂತು ಗಂಭೀರ ಶಾರ್ಙ್ಗರವೈರೇವ ವಿಬೋಧೋ ಜಾತ ಇತಿ ಸೂಚಿತಂ । ಅನ್ಯಥಾ-

ದೃಷ್ಟ್ವಾ ಸಮೀರಣೋ ಯುದ್ಧಾದಪಯಾತಂ ಹುತಾಶನಂ ।
ಸಾಯಕಾಚಿತಸರ್ವಾಂಗಮಾತ್ಮಾನಂ ಚಾತಿ ವಿಹ್ವಲಃ ।
ವಿದಿತ್ವಾ ಪುಂಡರೀಕಾಕ್ಷಂ ಸಂಗ್ರಾಮೇ ಪ್ರತ್ಯುಪಸ್ಥಿತಂ।
ನ್ಯವರ್ತತ ಕುರುಶ್ರೇಷ್ಠ ಪ್ರಾಣತ್ರಾಣ ಪರಾಯಣಃ ॥

ಇತಿ ಭಾಗವತವಿರೋಧಃ ಸ್ಯಾತ್। ಅತ ಇತ್ಥಮೇವ ಯೋಜನಾ । -ವಾದಿರಾಜೀಯ

ಸರಿಯೆ. ವಹ್ನಿಯಮಾದಿಗಳನ್ನೂ ಹಾಗೆ ಮಾಡಿದನೆಂದರೆ ಭಾಗವತ ವಿರೋಧ. ಅದರಿಂದ ಶ್ಲೋಕಾನ್ವಯ ಹೇಗೆ ಎನ್ನುವ ಪ್ರಶ್ನೆ ಬರುತ್ತದೆ. ಆದರೆ ಕೇವಲ ಬಿಲ್ಲಿನ ಧ್ವನಿಯಿಂದಲೆ ಎಲ್ಲ ದೇವತೆಗಳಿಗೂ ಕೃಷ್ಣ ತಾನು ಅನಾದಿ ಪುರುಷನೆಂದು ತಿಳಿಸಿದನೆಂಬುದಕ್ಕೆ ಹೀಗೆ ಅಭಿಪ್ರಾಯ ಹೇಳಬೇಕು. ವಹ್ನಿಯಮಾದಿಗಳಿಗೆ ಮೈಗೆ ಬಾಣಪ್ರಯೋಗಮಾಡಿದರೂ ಅವರು ವಿಷ್ಣುಭಕ್ತರಾದ ಪ್ರಯುಕ್ತ ಮರಣಬಾರದಂತೆ ಕೃಪೆಯಿಂದ ಮೆಲ್ಲಗೆ ಬಾಣ ಪ್ರಯೋಗ ಮಾಡಿದ. ಅಂಜಿಸುವುದಕ್ಕಾಗಿ ಬಿಲ್ಲಿನ ಧ್ವನಿಯನ್ನು ಮಾತ್ರ ಬರಸಿಡಿಲಿನ ಧ್ವನಿಯಂತೆ ಜೋರಾಗಿ ಮಾಡಿದ. ಅದರಿಂದ ಬಾಣದ ಏಟಿನಿಂದ ಜ್ಞಾನೋದಯವಲ್ಲ. ಗಂಭೀರವಾದ ಬಿಲ್ಲಿನ ಧ್ವನಿಯಿಂದಲೆ ಎಂದು ಸೂಚಿತವಾಗುತ್ತದೆ. ಅದರಿಂದ ಹೀಗೆ ಶ್ಲೋಕಾನ್ವಯ ಮಾಡುವುದರಲ್ಲಿ ಅನುಪಪತ್ತಿ ಇಲ್ಲ.

ಶಿವಂ ಚ ಶಕ್ರಾರ್ಥಮುಪಾಗತಂ ಹರಿ-
ರ್ವ್ಯದ್ರಾವಯಚ್ಛಾರ್ಙ್ಗವಿನಿಃಸೃತೈಃ ಶರೈಃ।
ಸವಾಹನೋ ದೂರತರೇ ನಿಪಾತಿತೋ
ಗರುತ್ಮತಾ ಶಂಭುರಗಾಚ್ಛರಾಹತಃ ॥೧೩೧॥

ಇಂದ್ರನ ಸಹಾಯಕ್ಕೆ ಬಂದ ಶಿವನನ್ನು ಶ್ರೀಕೃಷ್ಣ ಶಾರ್ಙ್ಗದಿಂದ ಹೊರಟ ಬಾಣಗಳಿಂದ ಓಡಿಸಿದ. ಗರುಡ ಅವನನ್ನು ನಂದಿ ಸಮೇತವಾಗಿ ಬಲುದೂರಕ್ಕೆ ಎಸೆದ. ಬಾಣಗಳ ಏಟಿಗೆ ಗುರಿಯಾಗಿ ಅವನು ಹೊರಟು ಹೋದ.

ವಿದ್ರಾವಿತೇ ಬಾಣಗಣೈಶ್ಚ ಶೌರಿಣಾ
ಹರೇ ಹರೌ ವಜ್ರಮವಾಸೃಜದ್ದ್ರುತಂ।
ಶಕ್ರೋಽಗ್ರಹೀತ್ತಂ ಪ್ರಹಸನ್ ಜನಾರ್ದನಃ
ಕರೇಣ ವಾಮೇನ ಸ ಚಾಪಜಗ್ಮಿವಾನ್ ॥೧೩೨॥

ಶ್ರೀಕೃಷ್ಣ ಶಿವನನ್ನು ಹೀಗೆ ಬಾಣ ಸಮೂಹಗಳಿಂದ ಓಡಿಸಿದಾಗ ಇಂದ್ರ ಬೇಗನೆ ಕೃಷ್ಣನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿದ. ಕೃಷ್ಣ ನಗುತ್ತ ಅದನ್ನು ಎಡಗೈಯಿಂದ ಹಿಡಿದ. ಆಗ ಇಂದ್ರ ದೂರ ಓಡಲು ತೊಡಗಿದ.

ಅಪಾಹಸತ್ತಂ ಜಗದೇಕಸುಂದರೀ
ಹರಿಪ್ರಿಯಾಥೋ ಜಗದೇಕಮಾತರಂ।
ಉವಾಚ ಶಕ್ರೋ ಜಗತಾಂ ಜನಿತ್ರೀ
ಪ್ರದರ್ಶಯಾಮೋ ವಯಮಾತ್ಮ ಶೈಶವಂ ॥೧೩೩॥

ಜಗದೇಕ ಸುಂದರಿಯಾದ ಸತ್ಯಭಾಮೆ ಇಂದ್ರನಿಗೆ ಅಪಹಾಸಗೈದಳು. ಇಂದ್ರ

ಜಗದೇಕಮಾತೆಗೆ 'ನಾವು ಜಗಜ್ಜನಕನ ಮುಂದೆ ನಮ್ಮ ಬಾಲಚಾಪಲ್ಯವನ್ನು ತೋರಿಸುತ್ತಿದ್ದೇವಷ್ಟೆ' ಎಂದ.'

'ಇಂದ್ರ, ನಿಲ್ಲು ಓಡಬೇಡ. ಆ ಶಚಿ ತನ್ನ ಗಂಡನಷ್ಟು ಪೌರುಷ ಉಳ್ಳವನು ಯಾರು ಇಲ್ಲ ಎಂದು ಬೀಗಿರುವವಳು, ಈ ಅವಸ್ಥೆಯಲ್ಲಿ ನಿನ್ನನ್ನು ಕಂಡರೆ ಬಳಿಗೆ ಸೇರಿಸಿಕೊಳ್ಳಲಾರಳು!' ಎಂದಳು ಸತ್ಯಭಾಮೆ. ಆಗ ಅಸುರಾವೇಶ ಹೋಯಿತು. 'ಕರು ತಾಯ ಕೆಚ್ಚಲಿನಿಂದ ಹಾಲು ಬಾರದಿದ್ದರೆ ಗುದ್ದುವಂತೆ ನಮ್ಮ ಪಾರಿಜಾತವನ್ನು ನೀವು ಒಯ್ಯುವಾಗ ನಾವು ವಿರೋಧಿಸುತ್ತ ನಮ್ಮ ಬಾಲಚಾಪಲ್ಯವನ್ನು ತೋರುವೆವಷ್ಟೆ!' ಎಂದ ದೇವೇಂದ್ರ.

ಜಗಾಮ ಚಾಥೋ ಶರಣಂ ಜನಾರ್ದನಂ
ಸುರೈರ್ವೃತೋ ದೇವಪತಿಃ ಕ್ಷಮಾಪಯನ್ ।
ಶೃಂಗಂ ಚ ದತ್ತ್ವಾ ಮಣಿಪರ್ವತಸ್ಯ
ಪ್ರಣಮ್ಯ ದೇವ್ಯಾ ಸಹಿತಂ ಜಗದ್ಗುರುಂ ॥೧೩೪॥

ಯಯಾಚ ಏನಂ ಪರಿರಕ್ಷಣಾಯ
ಶಚೀಪತಿಃ ಕೇಶವಮರ್ಜುನಸ್ಯ ।
ಜಗಾದ ಕೃಷ್ಣೋಽಪಿ ಧರಾತಲೇ ಸ್ಥಿತೇ
ನ ಮಯ್ಯಮುಂ ಕಶ್ಚನ ಜೇಷ್ಯತೀತಿ ॥೧೩೫॥

ಒಳಿಕ ದೇವತೆಗಳೊಂದಿಗೆ ಇಂದ್ರ ಕ್ಷಮೆ ಬೇಡುತ್ತ ಕೃಷ್ಣನಿಗೆ ಶರಣಾದ. ತಾನು ಮಾಡಿದ ತಪ್ಪಿಗೆ ಮಣಿಪರ್ವತ ಶಿಖರವನ್ನೂ ಕೊಟ್ಟು ದೇವಿ ಸಮೇತನಾದ ಜಗದ್ಗುರು ಶ್ರೀಕೃಷ್ಣನನ್ನು ನಮಿಸಿ ಅರ್ಜುನನಿಗೆ ಸರ್ವಪ್ರಕಾರದ ರಕ್ಷಣೆ ನೀಡಲು ಬೇಡಿದ. ಕೃಷ್ಣನೆಂದ, 'ಭೂತಲದಲ್ಲಿ ನಾನಿರುವಷ್ಟು ಕಾಲ ಅರ್ಜುನನನ್ನು ಯಾರೂ ಪರಾಭವಗೊಳಿಸುವುದಿಲ್ಲ.'

ತಮರ್ಜುನಾರ್ಥಂ ವರಮಾಪ್ಯ ವಾಸವಃ
ಪುನಃಪುನಶ್ಚಕ್ರಧರಂ ಪ್ರಣಮ್ಯ ।
ಪ್ರಸನ್ನದೃಷ್ಟ್ಯಾ ಹರಿಣಾಭಿವೀಕ್ಷಿತೋ
ಯಯೌ ಮಹಾಭಾಗವತಃ ಸ್ವಮಾಲಯಂ ॥೧೩೬॥

ಅರ್ಜುನನಿಗಾಗಿ ಆ ವರಪಡೆದು ಮಹಾ ಭಗವದ್ಭಕ್ತನಾದ ಇಂದ್ರ ಪುನಃ ಪುನಃ ಕೃಷ್ಣನನ್ನು ನಮಿಸಿ, ಪ್ರಸನ್ನ ದೃಷ್ಟಿಯಿಂದ ಕೃಷ್ಣ ನೋಡುತ್ತಿದ್ದಂತೆಯೆ, ತನ್ನ ಮನೆಗೆ ಹೊರಟುಹೋದ.

ಅಮರಾವತಿಯಿಂದ ದ್ವಾರಾವತಿಗೆ

ಕೃಷ್ಣೋಽಪ್ಯನುಜ್ಞಾಪ್ಯ ಪುರಂದರಂ ಪುರೀಂ
ನಿಜಾಂ ವ್ರಜನ್ನಭ್ಯಧಿಕಂ ವ್ಯರೋಚತ।
ಕಿರೀಟಧಾರೀ ಚಲಕುಂಡಲೋಲ್ಲಸ-
ನ್ಮುಖಾಂಬುಜಃ ಪೀತಪಟಃ ಸಕೌಸ್ತುಭಃ ॥೧೩೭॥

ಇಂದ್ರನಿಗೆ ಹೋಗಲು ಅನುಜ್ಞೆ ನೀಡಿ, ಚಲಿಸುವ ಕುಂಡಲಗಳಿಂದ ಶೋಭಿಸುವ ಮುಖ ಕಮಲ ಉಳ್ಳ, ಪೀತಾಂಬರ ಉಟ್ಟು ಕೌಸ್ತುಭತೊಟ್ಟ ಕಿರೀಟಧಾರಿ ಶ್ರೀಕೃಷ್ಣ ತನ್ನ ಪಟ್ಟಣಕ್ಕೆ ಹಿಂತಿರುಗುತ್ತ ಬಲು ಚೆನ್ನಾಗಿ ಮೆರೆದ.

ವಿರೋಚಮಾನಸ್ಯ ಸದಾ ಜಗತ್ಪ್ರಭೋ-
ರ್ನ ವೈ ವಿಶೇಷಃ ಕ್ವಚಿದಚ್ಯುತಸ್ಯ।
ತಥಾಪಿ ತತ್ ಸ್ಮಾರಯಿತುಂ ವಚೋ ಭವೇ-
ದಪೇಕ್ಷ್ಯ ಚಾಲ್ಪಜ್ಞಮತಿಂ ಪುರಾಣಗಂ ॥೧೩೮॥

ಸದಾಕಾಲ ಮೆರೆಯುವ ಜಗನ್ನಾಥನಾದ ಕೃಷ್ಣನಿಗೆ ಯಾವುದೇ ಕಾಲದಲ್ಲಿ ವಿಶೇಷವಿಲ್ಲ. ಆದರೂ ಅದನ್ನು ಸ್ಮರಣೆಗೆ ತರುವುದಕ್ಕಾಗಿ ಮಂದಮತಿಗಳಿಗಾಗಿ ಪುರಾಣಗಳಲ್ಲಿ ಅಂಥ ಮಾತು ಬರುತ್ತವೆ.

ಶ್ರೀಹರಿ ಯಾವಾಗಲೂ ಮೆರೆಯುತ್ತಿದ್ದಾನೆ ಎನ್ನುವುದನ್ನು ಮಂದಮತಿಗಳಿಗೆ ನೆನಪಿಸುವುದಕ್ಕಾಗಿ ಪುರಾಣಗಳು ಕೆಲವು ಸಂದರ್ಭಗಳಲ್ಲಿ ಅವನು ಮೆರೆದಂತೆ ವರ್ಣಿಸುತ್ತವೆ. ಜನಾರ್ದನೀಯ ಪ್ರಕಾರ ಇದು ಈ ನಿರ್ಣಯವಚನದ ಅಭಿಪ್ರಾಯ. ವಾದಿರಾಜೀಯದಲ್ಲಿ ಇನ್ನೊಂದು ಬಗೆಯಿಂದ ವಿವರಣೆ ನೀಡಲಾಗಿದೆ. ಪುರಾಣಗಳಲ್ಲಿ ಶ್ರೀಹರಿ ಸದಾ ಮೆರೆಯುತ್ತಾನೆ ಎಂದೇ ಹೇಳಿದೆ. ಅದನ್ನು ಮಂದಮತಿಗಳ ಸ್ಮರಣೆಗೆ ತರುವುದಕ್ಕಾಗಿ ಶ್ರೀಹರಿ ಕೆಲವು ಸಂದರ್ಭಗಳಲ್ಲಿ ತಾನು ಮೆರೆಯುವಂತೆ ತೋರಿಕೊಳ್ಳುತ್ತಾನೆ ಎಂದು.

ಪ್ರವಿಶ್ಯ ಚೇಶಃ ಸ್ವಪುರೀಂ ಸ ಯಾದವೈಃ
ಸುಪೂಜಿತೋಽಂತಃಪುರಮೇತ್ಯ ಚಾಂಗಣೇ।
ತರುಂ ಪ್ರಿಯಾಯಾ ನ್ಯದಧಾದ್ ಗೃಹಸ್ಯ
ಸಹೈವ ಶೃಂಗೇಣ ಚ ರತ್ನಸದ್ಮನೀಃ ॥೧೩೯॥

ಶ್ರೀಕೃಷ್ಣ ದ್ವಾರಕೆಯನ್ನು ಪ್ರವೇಶಿಸಿ ಯಾದವರಿಂದ ಸನ್ಮಾನಿತನಾಗಿ ಅಂತಃಪುರಕ್ಕೆ ಬಂದು ಸತ್ಯಭಾಮೆಯ ಮನೆಯಂಗಳದಲ್ಲಿ ಮಣಿಪರ್ವತದ ಶಿಖರದೊಂದಿಗೆ ಪಾರಿಜಾತವೃಕ್ಷವನ್ನು ಇರಿಸಿದ.

ಪ್ರದಾಯ ರತ್ನಾನಿ ಚ ಸರ್ವಸಾತ್ವತಾಂ
ಯಥೇಷ್ಟತಸ್ತಾ ಅಪಿ ಕನ್ಯಕಾಃ ಪ್ರಭುಃ ।
ಉದ್ವಾಹ್ಯ ರೇಮೇ ಪೃಥಗೇವ ರತ್ನ-
ಪ್ರಾಸಾದಸಂಸ್ಥಾಭಿರನಂತರೂಪಃ ॥೧೪೦॥

ಎಲ್ಲ ಯಾದವರಿಗೂ ಶ್ರೀಕೃಷ್ಣ ಯಥೇಚ್ಛವಾಗಿ ರತ್ನಗಳನ್ನು ಕೊಟ್ಟು ಆ ಕನ್ಯೆಯರನ್ನು ಮದುವೆಯಾಗಿ ಬೇರೆಬೇರೆ ರತ್ನದುಪ್ಪರಿಗೆಗಳಲ್ಲಿ ಅವರನ್ನಿರಿಸಿ ಅನಂತರೂಪಗಳಿಂದ ಅವರೊಂದಿಗೆ ಬೇರೆ ಬೇರೆಯಾಗಿಯೆ ರಮಿಸಿದ.

ಕೃಷ್ಣಪುತ್ರರು

ಪೃಥಕ್‌ಪೃಥಕ್ ತಾಸು ದಶೈವ ಪುತ್ರಕಾನ್
ನ್ಯಧತ್ತ ಕನ್ಯಾಮಪಿ ಸರ್ವಶಃ ಪ್ರಭುಃ ।
ಪ್ರದ್ಯುಮ್ನಸಾಂಬಾವಪಿ ಭಾನುಚಾರು-
ದೇಷ್ಣೌ ಚ ತೇಷಾಂ ನಿತರಾಂ ಗುಣಾಧಿಕಾಃ ॥೧೪೧॥

ಸರ್ವಶಕ್ತನಾದ ಕೃಷ್ಣ ಆ ಕನ್ಯೆಯರಲ್ಲಿ ಒಬ್ಬೊಬ್ಬರಲ್ಲಿಯೂ ಪ್ರತ್ಯೇಕ ಪ್ರತ್ಯೇಕವಾಗಿ ಹತ್ತು ಜನ ಗಂಡುಮಕ್ಕಳನ್ನೂ ಒಬ್ಬಳು ಕನ್ಯೆಯನ್ನೂ ಹುಟ್ಟಿಸಿದ. ಅವರಲ್ಲಿ ಪ್ರದ್ಯುಮ್ನಸಾಂಬರೂ ಭಾನು ಚಾರುದೇಷ್ಣರೂ ಗುಣಗಳಲ್ಲಿ ಹೆಚ್ಚು ಶ್ರೇಷ್ಠರು.

ವಿವಸ್ವತೋ ಯೋಽವರಜೋಽದಿತೇಃ ಸುತಃ
ಖ್ಯಾತಶ್ಚ ನಾಮ್ನಾ ಸವಿತೇತಿ ಕೃಷ್ಣಾತ್ ।
ಜಾತಃ ಸ ಸತ್ಯಾಜಠರೇಽತ್ರ ನಾಮ್ನಾ
ಭಾನುಸ್ತು ಭೈಷ್ಮ್ಯ ಅಪಿ ಚಾರುದೇಷ್ಣಃ ॥೧೪೨॥

ವಿವಸ್ವಾನ್ ಎಂಬ ಸೂರ್ಯನ ತಮ್ಮನು ಸವಿತೃ ಎಂಬ ಹೆಸರಿನಿಂದ ಖ್ಯಾತನಾದ ಸೂರ್ಯ. ಅವನು ಶ್ರೀಕೃಷ್ಣನಿಂದ ಸತ್ಯಭಾಮೆಯ ಉದರದಲ್ಲಿ ಹುಟ್ಟಿದ. ಅವನ ಹೆಸರು ಭಾನು. ರುಕ್ಮಿಣಿಯಲ್ಲಿ ಚಾರುದೇಷ್ಣ ಹುಟ್ಟಿದ.

ಕಶ್ಯಪರಿಗೆ ಅದಿತಿದೇವಿಯಲ್ಲಿ ಜನಿಸಿದ ದ್ವಾದಶಾದಿತ್ಯರು -
ವಿವಸ್ವಾನ್ ಅರ್ಯಮ ಪೂಷ ತ್ವಷ್ಟ ಸವಿತ ಭಗ ಧಾತ
ವಿಧಾತ ವರುಣ ಮಿತ್ರ, ಶಕ್ರ ಉರುಕ್ರಮ - ಎಂದು.

ಅವರಲ್ಲಿ ವಿವಸ್ವಾನ್ ಎಂಬ ಆದಿತ್ಯನನ್ನೆ ಸೂರ್ಯನೆಂದು ಕರೆಯುವುದು ರೂಢಿ. ಅವನೆ ಸೂರ್ಯವಂಶದ ಮೂಲಪುರುಷ. ಇವನ ತಮ್ಮ ಸವಿತನೂ ಒಬ್ಬ ಸೂರ್ಯ, ದ್ವಾದಶ ಸೂರ್ಯರಲ್ಲಿ ಒಬ್ಬ. ಇವನ ಪತ್ನಿ ಪೃಶ್ನಿ. ಇವಳಲ್ಲಿ ಗಾಯತ್ರಿಗೆ ಅಭಿಮಾನಿನಿಯಾದ ಸಾವಿತ್ರೀದೇವಿಯೂ

ವ್ಯಾಹೃತಿ ತ್ರಯಿ ಅಗ್ನಿಹೋತ್ರ.ಪಶು ಸೋಮ ಚಾತುರ್ಮಾಸ್ಯಗಳ ಅಭಿಮಾನಿ ದೇವತೆಗಳೂ ಜನಿಸಿದರು. ಈ ಸವಿತನೆ ಸತ್ಯಭಾಮೆಯ ಉದರದಲ್ಲಿ ಭಾನು ಎಂಬ ಮಗನಾಗಿ ಜನಿಸಿದ.

ಸ ಚಾರುದೇಷ್ಣೋಽಪಿ ಹಿ ವಿಷ್ಣುರಾಜ್ಞೋ
ಯೇಽನ್ಯೇ ಚ ಕೃಷ್ಣಸ್ಯ ಸುತಾಃ ಸಮಸ್ತಾಃ ।
ತೇ ಚೈವ ಗೀರ್ವಾಣಗಣಾಸ್ತಥಾನ್ಯೇ
ಯೇ ದ್ವಾರಕಾಯಾಂ ನಿವಸಂತಿ ಸರ್ವೇ ॥೧೪೩॥

ಆ ಚಾರುದೇಷ್ಣ ಗಣಪತಿಯ ಅವತಾರ. ಕೃಷ್ಣನ ಬೇರೆ ಮಕ್ಕಳೂ ಕೂಡ ಎಲ್ಲರೂ ದೇವ ಸಮೂಹಕ್ಕೇ ಸೇರಿದವರು. ಹಾಗೇ ದ್ವಾರಕೆಯಲ್ಲಿ ವಾಸವಾಗಿದ್ದ ಬೇರೆ ಜನರೂ ದೇವಾಂಶಸಂಭೂತರೇ.

ಪ್ರದ್ಯುಮ್ನ ವಿಜಯ

ತಸ್ಯಾಂ ಸಮಸ್ತೈರಭಿಪೂಜ್ಯಮಾನೇ
ದೇವೈಃ ಸ್ವಪುರ್ಯಾಂ ನಿವಸತ್ಯನಂತೇ ।
ಯಯೌ ಕದಾಚಿತ್ಸ ತು ರೌಕ್ಮಿಣೇಯಃ
ಸಾಂಬೇನ ಸಾಕಂ ಭುಜಗೇಂದ್ರಲೋಕಂ ॥೧೪೪॥

ಶ್ರೀಕೃಷ್ಣ ತನ್ನ ದ್ವಾರಾವತೀನಗರಿಯಲ್ಲಿ ಎಲ್ಲ ದೇವತೆಗಳಿಂದಲೂ ಪೂಜೆಕೈಗೊಳ್ಳುತ್ತ ವಾಸಮಾಡುತ್ತಿದ್ದಾಗ ಒಮ್ಮೆ ರುಕ್ಮಿಣಿಯ ಮಗ ಪ್ರದ್ಯುಮ್ನ ಸಾಂಬನೊಂದಿಗೆ ಪಾತಾಳ ದಿಗ್ವಿಜಯಕ್ಕೆ ಹೋದ.

ಅಜ್ಞಾನತಸ್ತೈರಭಿಯೋಧಿತಃ ಸ
ಜಿಗಾಯ ಸರ್ವಾನಪಿ ವಾಸುಕಿಂ ಚ ।
ವಿದ್ರಾವ್ಯ ಬಾಣೈರಥ ರತ್ನಸಂಚಯಾನ್
ಸಮಾದದೇ ನೇಮುರಮುಂ ತತಸ್ತೇ ॥೧೪೫॥

ಸರ್ಪಗಳು ಅಜ್ಞಾನದಿಂದ ಯುದ್ಧಮಾಡಿದಾಗ ಪ್ರದ್ಯುಮ್ನ ಸಾಂಬರು ಅವರೆಲ್ಲರನ್ನೂ ವಾಸುಕಿಯನ್ನೂ ಗೆದ್ದರು. ಬಾಣ ಸಮೂಹಗಳಿಂದ ಅವರನ್ನು ಓಡಿಸಿ ರತ್ನ ಸಮೂಹಗಳನ್ನು ವಶಪಡಿಸಿಕೊಂಡರು. ಸರ್ಪರುಗಳು ಆಗ ಅವರನ್ನು ನಮಿಸಿದರು.

ತೈಃ ಪೂಜಿತಃ ಸಾಂಬಸಹಾಯ ಆಶು
ಮಯಂ ಚ ಮಾಯಾವಿನಮಸ್ತ್ರವರ್ಷೈಃ ।
ವಿಜಿತ್ಯ ರುಂಧಾನಮನೇನ ಪೂಜಿತೋ
ಯಯೌ ರಥೇನಾಂಬರಗೇನ ನಾಕಂ ॥೧೪೬॥

ಹೀಗೆ ಸರ್ಪಗಳಿಂದ ಸತ್ಕೃತರಾದ ಪ್ರದ್ಯುಮ್ನ ಸಾಂಬರು ತಮ್ಮನ್ನು ತಡೆಯಲು ಬಂದ ಮಾಯಾವಿಯಾದ ಮಯನನ್ನು ಬೇಗನೆ ಅಸ್ತ್ರಗಳ ಮಳೆಗಳಿಂದ ಗೆದ್ದು ಅವನಿಂದ ಸತ್ಕೃತರಾಗಿ ಆಕಾಶಗಾಮಿಯಾದ ರಥದಿಂದ ಸ್ವರ್ಗಕ್ಕೂ ಹೋದರು.

ತತ್ರೈವ ಕೃಷ್ಣೇನ ತು ಪಾರಿಜಾತೇ
ಹೃತೇ ಜಯಂತಂ ಪ್ರಜಿಗಾಯ ಚಾಜೌ ।
ಸಂಸ್ಪರ್ಧಯಾಯಾತಮಮುಷ್ಯ ಚಾನುಜಂ
ಸಾಂಬೋಽಜಯದ್ವೃಷಭಂ ನಾಮ ಶಸ್ತ್ರೈಃ ॥೧೪೭॥

ಸ್ವರ್ಗಲೋಕದಲ್ಲಿ ಹಿಂದೆ ಶ್ರೀಕೃಷ್ಣ ಪಾರಿಜಾತವನ್ನು ಅಪಹರಿಸಿದ್ದ ನಿಮಿತ್ತವಾಗಿ ಸ್ಪರ್ಧೆಯಿಂದ ಈಗ ಬಂದ ಜಯಂತನನ್ನು ಪ್ರದ್ಯುಮ್ನ ಯುದ್ಧದಲ್ಲಿ ಗೆದ್ದ. ಜಯಂತನ ತಮ್ಮನಾದ ವೃಷಭನನ್ನೂ ಶಸ್ತ್ರಗಳಿಂದ ಸಾಂಬ ಪರಾಭವಗೊಳಿಸಿದ.

ವೃಷಭನಿಗೆ ಋಷಭ ಎಂದೂ ಹೆಸರಿದೆ. ಜಯಂತ, ಋಷಭ, ಮೊಢ್ವ ಎಂದು ಶಚಿಯಲ್ಲಿ ಇಂದ್ರನಿಗೆ ಮೂವರು ಮಕ್ಕಳು. ಇವರು ಶ್ರೀಕೃಷ್ಣ ಪಾರಿಜಾತವನ್ನು ಅಪಹರಿಸಿದ್ದಕ್ಕೆ ಪ್ರತೀಕಾರ ಭಾವನೆಯಿಂದ ಪ್ರದ್ಯುಮ್ನ ಸಾಂಬರನ್ನು ಗೆದ್ದು ಬಂಧಿಸಲು ಯತ್ನಿಸಿದ್ದರು.

ಅಸ್ತ್ರಾಣಿ ತಾವಸ್ತ್ರವರೈರ್ನಿಹತ್ಯ
ತಯೋಶ್ಚ ತಾಭ್ಯಾಂ ಪ್ರತಿದಗ್ಧಯಾನೌ ।
ವಿದ್ರಾವ್ಯ ತೌ ಬಾಣವರೈಃ ಸುರೇಂದ್ರ-
ಸಂಪೂಜಿತೌ ಯಯತುರ್ವಿದ್ಯಯಾ ಖೇ ॥೧೪೮॥

ಪ್ರದ್ಯುಮ್ನ ಸಾಂಬರು ಜಯಂತ ವೃಷಭರ ಅಸ್ತ್ರಗಳನ್ನು ಉತ್ತಮ ಅಸ್ತ್ರಗಳಿಂದ ನಾಶಪಡಿಸಿ, ಅವರು ತಮ್ಮ ರಥವನ್ನು ಸುಟ್ಟರೂ ಅವರನ್ನು ಉತ್ತಮ ಬಾಣಗಳಿಂದ ಓಡಿಸಿ, ದೇವೇಂದ್ರನಿಂದ ಸತ್ಕೃತರಾಗಿ ಮಂತ್ರಶಕ್ತಿಯಿಂದ ಆಕಾಶದಲ್ಲಿ ಪ್ರಯಾಣ ಮಾಡಿದರು.

ಸ ವಿದ್ಯಯಾ ಸಾಂಬಮುದೂಹ್ಯ ರತ್ಯಾ
ಪ್ರದತ್ತಯಾ ರುಕ್ಮಿಣೇನಂದನಃ ಪುರೀಂ ।
ಯಯೌ ತತೋ ನಾರದ ಆಗಮದ್ದ್ರುತಂ
ಜ್ಞಾತುಂ ಹರೇರ್ಬಹುಭಾರ್ಯಾಸು ವೃತ್ತಿಂ ॥೧೪೯॥

ರತಿದೇವಿ ಹೇಳಿಕೊಟ್ಟಿದ್ದ ಮಂತ್ರದ ಬಲದಿಂದ ಪ್ರದ್ಯುಮ್ನ ಸಾಂಬನನ್ನು ಹೊತ್ತು ದ್ವಾರಕೆಗೆ ಹೊರಟುಹೋದ. ಬಳಿಕ ಶ್ರೀಕೃಷ್ಣ ಬಹು ಪತ್ನಿಯರಲ್ಲಿ ಹೇಗೆ ನಡೆದುಕೊಳ್ಳುತ್ತಾನೆ ಎಂಬುದನ್ನು ತಿಳಿಯಲು ನಾರದರು ಬಂದರು.

ಪಾಂಡವರ ಸಂಸಾರ

ತಂ ದ್ವ್ಯಷ್ಟಸಾಹಸ್ರಗೃಹೇಷು ದೃಷ್ಟ್ವಾ
ತಾವತ್ಸ್ವರೂಪೈರ್ವಿಹರಂತಮೇಕಂ ।
ಸುವಿಸ್ಮಿತಃ ಪ್ರಯಯೌ ತಂ ಪ್ರಣಮ್ಯ
ಶಕ್ರಪ್ರಸ್ಥಂ ಪೂಜಿತಶ್ಚಾತ್ರ ಪಾರ್ಥೈಃ ॥೧೫೦॥

ಶ್ರೀಕೃಷ್ಣ ಒಬ್ಬನೆ ಹದಿನಾರು ಸಾವಿರ ಮನೆಗಳಲ್ಲಿ ಅಷ್ಟು ರೂಪಗಳಿಂದ ವಿಹರಿಸುತ್ತಿದ್ದುದನ್ನು ಕಂಡು ಬಹಳ ವಿಸ್ಮಿತರಾದ ನಾರದರು ಅವನನ್ನು ನಮಿಸಿ ಇಂದ್ರಪ್ರಸ್ಥಕ್ಕೆ ಹೋದರು. ಅಲ್ಲಿ ಪಾಂಡವರು ಅವರನ್ನು ಸತ್ಕರಿಸಿದರು.

ಸ ಆಜ್ಞಯಾ ಬ್ರಹ್ಮಣ ಆಹ ಕೃಷ್ಣಾಂ
ಕ್ರಮಾತ್ಕರ್ತುಂ ಭೀಮ ಏವೈಕಸಂಸ್ಥಾಂ ।
ಅನ್ಯಾ ದೇವೀಃ ಸ್ವಾಪಯಿತ್ವಾ ಶರೀರೇ
ತಸ್ಯಾ ಭಾರತ್ಯಾಃ ಪೂರ್ಣಭೋಗಾರ್ಥಮೇವ ॥೧೫೧॥

ದ್ರೌಪದೀ ಶರೀರದಲ್ಲಿ ಅನ್ಯದೇವಿಯರನ್ನು ಸುಪ್ತಿಗೊಳಿಸಿ ಭಾರತೀದೇವಿಗೇ ಪೂರ್ಣರತಿ ಸುಖವನ್ನು ದೊರಕಿಸುವ ಸಲುವಾಗಿ ದ್ರೌಪದಿಯನ್ನು ಕ್ರಮವಾಗಿ ಭೀಮನ ಒಳಿಯಲ್ಲಿಯೆ ಹೆಚ್ಚುಕಾಲ ಇರಿಸಬೇಕೆಂದು ನಾರದರು ಬ್ರಹ್ಮನ ಆಜ್ಞೆಯಿಂದ ಹೀಗೆ ಹೇಳಿದರು.

ದೈನಂದಿನ ಪರ್ಯಾಯ ವ್ಯವಸ್ಥೆಯಂತೆ ದಿನಕ್ಕೊಬ್ಬರು ಪಾಂಡವರು ರಮಿಸುವಾಗಲೂ ಭೀಮನ ದಿನದಲ್ಲಿ ಅನ್ಯದೇವಿಯರಿಗೆ ಸುಪ್ತಿ ಇರುವುದರಿಂದ ಭಾರತಿಗೆ ಅಂದು ಪೂರ್ಣರತಿ ಸುಖವಿದ್ದೇ ಇದೆ. ಆದರೂ ವರ್ಷಕಾಲ ನಿರಂತರ ಪೂರ್ಣಸುಖ ಸಿಗಲು ವಾರ್ಷಿಕ ಪರ್ಯಾಯ ವ್ಯವಸ್ಥೆಯೆ ಒಳ್ಳೆಯದೆನ್ನುವುದು ನಾರದರ ಅಭಿಪ್ರಾಯವಾಗಿತ್ತು.

ಸುಂದೋಪಸುಂದರು

ಸುಂದೋಪಸುಂದೌ ಭ್ರಾತರೌ ಬ್ರಹ್ಮವಾಕ್ಯಾತ್
ಪರಸ್ಪರಾದನ್ಯತೋ ನೈವ ವಧ್ಯೌ ।
ತಿಲೋತ್ತಮಾರ್ಥೇ ನಿಹತೌ ಪರಸ್ಪರಂ
ತಯೋರ್ವಧಾರ್ಥೇ ಸೃಷ್ಟಯಾ ತೇನ ದೈತ್ಯೌ ॥೧೫೨॥

ಸುಂದ ಉಪಸುಂದ ಎಂಬ ಇಬ್ಬರು ಅಣ್ಣತಮ್ಮಂದಿರು ಬ್ರಹ್ಮನ ವರದಿಂದ ಪರಸ್ಪರರಿಂದ ಹೊರತು ಅನ್ಯರಿಂದ ಸಾವಿಲ್ಲದವರಾಗಿದ್ದರು. ಅವರ ವಧೆಗಾಗಿ ತಿಲೋತ್ತಮೆ

ಸೃಷ್ಟಳಾದಳು. ಅವಳಿಂದ ಮೋಹಿತರಾಗಿ ಆ ದೈತ್ಯರು ಅವಳ ಸಲುವಾಗಿ ಪರಸ್ಪರ ಹೋರಾಡಿ ಹತರಾದರು.

ಹಿರಣ್ಯಕಶಿಪುವಿನ ವಂಶದಲ್ಲಿ ನಿಕುಂಭನೆಂಬ ರಾಕ್ಷಸನ ಇಬ್ಬರು ಮಕ್ಕಳು ಸುಂದ ಉಪಸುಂದರು. ಅವರು ತಪಸ್ಸು ಮಾಡಿ ಬ್ರಹ್ಮನಲ್ಲಿ ಅಮರತ್ವವರ ಕೇಳಿದಾಗ ಹುಟ್ಟಿದವನಿಗೆ ಸಾವು ತಪ್ಪಿದ್ದಲ್ಲ, ಯಾವುದಾದರೊಂದು ಬಗೆಯಿಂದ ಮರಣವಿರುವಂತೆ ವರಕೇಳಿ ಎಂದ ಬ್ರಹ್ಮ. ಏಕದೇಹನ್ಯಾಯದಿಂದಿರುವ ತಮ್ಮಿಬ್ಬರಲ್ಲಿ ಎಂದೂ ವಿರೋಧ ಶಕ್ಯವಿಲ್ಲದಿರುವುದರಿಂದ ನಮ್ಮಿಂದಲೆ ನಮಗೆ ಮರಣ, ಅನ್ಯರಿಂದ ಸಲ್ಲದು ಎಂದು ವರಪಡೆದರು. ದರ್ಪದಿಂದ ಮುನಿಗಳನ್ನು ಪೀಡಿಸಿದರು. ಏಕೆಂದರೆ ಮುನಿಗಳೇ ದೇವತೆಗಳಿಗೆ ಯಜ್ಞಾದಿಗಳಿಂದ ಪೋಷಣೆ ನೀಡುವವರು. ಆದರಿಂದ ಹುಲಿಸಿಂಹ ಆನೆ ಮುಂತಾದ ರೂಪಗಳಿಂದ ಮುನಿಗಳನ್ನು ಬೇಟೆಯಾಡಿದರು. ಮುನಿಗಳು ಶಾಪ ಕೊಟ್ಟರೆ ಅವರ ನಾಲಿಗೆ ಸೀಳುತ್ತಿದ್ದರು. ಮುನಿಗಳ ಕಷ್ಟನೋಡಿ ಬ್ರಹ್ಮ ವಿಶ್ವಕರ್ಮನಿಂದ ಒಂದು ಸ್ತ್ರೀಶರೀರವನ್ನು ನಿರ್ಮಾಣ ಮಾಡಿಸಿದ. ಲೋಕದ ಎಲ್ಲ ಸುಂದರ ರತ್ನಪ್ರಾಯವಾದ ಉತ್ತಮ ವಸ್ತುಗಳಿಂದ ತಿಲಾಂಶಗಳನ್ನು ಕೂಡಿಸಿ ಅವಳ ಶರೀರವನ್ನು ನಿರ್ಮಿಸಿದ ವಿಶ್ವಕರ್ಮ. ಆದರಿಂದ ತಿಲೋತ್ತಮೆ ಎನಿಸಿದಳು. ಅವಳು ದೇವತೆಗಳ ಸಭೆಯಲ್ಲಿ ಕಾಣಿಸಿಕೊಂಡಾಗ ಶಿವನಿಗೆ ಅವಳನ್ನು ನೋಡುವ ಆಸೆಯಿಂದ ಮೊದಲಿದ್ದ ಒಂದು ಮುಖಕ್ಕೆ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮುಖಗಳಾದುವು. ಹೀಗೆ ಅವನು ಪಂಚಮುಖನೆನಿಸಿದ. ಇದೇ ರೀತಿ ಇಂದ್ರನೂ ಸಹಸ್ರಾಕ್ಷ, ಸಾವಿರ ಕಣ್ಣುಗಳುಳ್ಳವನಾದ. ಇಂಥ ಸುಂದರಿ ತಿಲೋತ್ತಮೆ. ಅವಳಲ್ಲಿ ಸುಂದೋಪಸುಂದರು ಮೋಹಗೊಂಡು ಪರಸ್ಪರ ಹೊಡೆದಾಡಿ ಸತ್ತರು.

ವಾರ್ಷಿಕ ಪರ್ಯಾಯ ವ್ಯವಸ್ಥೆ

ಅತಃ ಪೃಥಗ್ವತ್ಸರತೋ ಭವತ್ಸು
ಕ್ರಮಾತ್ ಕೃಷ್ಣಾ ತಿಷ್ಠತಾಂ ಯೋಽನ್ಯಯುಕ್ತಾಂ।
ಪಶ್ಯೇದ್ವೋಽಸೌ ವತ್ಸರಂ ತೀರ್ಥಯಾತ್ರಾಂ
ಕುರ್ಯಾದಿತಿ ಸ್ಮಾಥ ಚಕ್ರುಸ್ತಥಾ ತೇ ॥೧೫೩॥

ಆದರಿಂದ ದ್ರೌಪದಿ ನಿಮ್ಮಲ್ಲಿ ಜ್ಯೇಷ್ಠತ್ವ ಕ್ರಮದಿಂದ ಒಬ್ಬೊಬ್ಬರಿಗೆ ಒಂದೊಂದು ವರ್ಷ ಮೀಸಲಾಗಿರಲಿ. ಅವಳು ಒಬ್ಬರೊಂದಿಗೆ ಕೂಡಿರುವಾಗ ಯಾರು ಇನ್ನೊಬ್ಬರು

ನೋಡುವರೋ ಅವರು ಒಂದು ವರ್ಷ ತೀರ್ಥಯಾತ್ರೆ ಮಾಡಲಿ ಎಂದು ನಾರದರು ಹೇಳಿದರು. ಪಾಂಡವರು ಹಾಗೇ ನಿಯಮ ಮಾಡಿಕೊಂಡರು.

ಔತ್ತರೇಯಪಾಠದಲ್ಲಿ (ಆದಿ.211.29) ಹನ್ನೆರಡು ವರ್ಷ ಬ್ರಹ್ಮಚರ್ಯನಿಯಮವನ್ನು ಮಹಾಭಾರತ ಹೇಳಿದೆ. ಆದರೆ ದಾಕ್ಷಿಣಾತ್ಯ ಪಾಠದಲ್ಲಿ (ಆದಿ.232.29) ಹನ್ನೆರಡು ತಿಂಗಳ ನಿಯಮವನ್ನೇ ಹೇಳಿದೆ. ಸ್ಕಾಂದ ಪುರಾಣ ವೆಂಕಟಾಚಲ ಮಾಹಾತ್ಮ್ಯದಲ್ಲಿಯ ಅರ್ಜುನ ತೀರ್ಥಯಾತ್ರಾಪ್ರಸಂಗದಲ್ಲಿ, (29-15)

'ತೇನೈ ಕಹಾಯನಮಿತಂ ವಿಧೇಯಂ ತೀರ್ಥಸೇವನಂ'

ಎಂದು ಒಂದು ವರ್ಷದ ನಿಯಮವನ್ನೇ ಹೇಳಿದೆ.

ಅರ್ಜುನನ ತೀರ್ಥಯಾತ್ರೆ

ತತಃ ಕದಾಚಿದ್ ಧರ್ಮರಾಜೇನ ಯುಕ್ತಾಂ
ಶಸ್ತ್ರಾಗಾರೇ ವಿಪ್ರಗೋರಕ್ಷಣಾರ್ಥಂ।
ಶಸ್ತ್ರಾದಿತ್ಸುಃ ಫಲ್ಗುನೋಽದ್ರಾಕ್ಸ ಶಸ್ತ್ರೈ
ರ್ದಸ್ಯೂನ್ ಹತ್ವಾ ತೀರ್ಥಯಾತ್ರೋನ್ಮುಖೋಽಭೂತ್ ॥೧೫೪॥

ಬಳಿಕ ಒಮ್ಮೆ ಅರ್ಜುನ ಒಬ್ಬ ಬ್ರಾಹ್ಮಣನ ಗೋರಕ್ಷಣೆಗಾಗಿ ಶಸ್ತ್ರವನ್ನು ತೆಗೆಯಲು ಬಂದವನು ಅಲ್ಲಿ ದ್ರೌಪದಿ ಧರ್ಮರಾಜನ ಜೊತೆಗಿದ್ದುದನ್ನು ಕಂಡ. ಶಸ್ತ್ರದಿಂದ ಕಳ್ಳರನ್ನು ಕೊಂದ ಬಳಿಕ, ತೀರ್ಥಯಾತ್ರೆಗೆ ಹೊರಟ.

ಒಮ್ಮೆ ಒಬ್ಬ ಬ್ರಾಹ್ಮಣನ ಹಸುಗಳನ್ನು ಕಳ್ಳರು ಅಪಹರಿಸಿದರು. ಬ್ರಾಹ್ಮಣ ಪಾಂಡವರ ಬಳಿ ಬಂದು ದೂರಿತ್ತ. ಒಡನೆ ಅರ್ಜುನ ಶಸ್ತ್ರವನ್ನು ತೆಗೆಯಲು ಬಯಸಿದ. ಆದರೆ ಧರ್ಮರಾಜನ ಮನೆಯಲ್ಲಿ ಶಸ್ತ್ರಗಳಿದ್ದುವು. ಅಲ್ಲಿ ದ್ರೌಪದಿಯೊಂದಿಗೆ ಏಕಾಂತದಲ್ಲಿ ಧರ್ಮರಾಜನಿದ್ದಾನೆ ಎಂಬುದು ಅರ್ಜುನನಿಗೆ ಮೊದಲೇ ತಿಳಿದಿತ್ತು. ಆದರೂ ನಾನು ವನವಾಸ ಮಾಡಿದರೂ ಚಿಂತೆ ಇಲ್ಲ, ಬ್ರಾಹ್ಮಣನ ಗೋರಕ್ಷಣ ಮಾಡಲೇಬೇಕು ಎಂದುಕೊಂಡು ಮನೆಯನ್ನು ಪ್ರವೇಶಿಸಿ ಶಸ್ತ್ರವನ್ನು ಎತ್ತಿಕೊಂಡ. ಕಳ್ಳರನ್ನು ಶಿಕ್ಷಿಸಿ ಬ್ರಾಹ್ಮಣನಿಗೆ ಗೋವುಗಳನ್ನು ಹಿಂತಿರುಗಿಸಿದ. ನಿಯಮ ಪ್ರತಿಜ್ಞಾಭಂಗವಾದ್ದರಿಂದ ತೀರ್ಥಯಾತ್ರೆಗೆ ಹೊರಟ.

ಯುಧಿಷ್ಠಿರಾದ್ಯೈಃ ಸೌಹೃದಾದ್ ವಾರಿತೋಽಪಿ
ಯಯೌ ಸತ್ಯಾರ್ಥಂ ಸ ಕದಾಚಿದ್ ದ್ಯುನದ್ಯಾಂ।
ಕುರ್ವನ್ ಸ್ನಾನಂ ಮಾಯಯಾ ನಾಗವಧ್ವಾ
ಹೃತೋ ಲೋಕಂ ಭುಜಗಾನಾಂ ಕ್ಷಣೇನ ॥೧೫೫॥

ಯುಧಿಷ್ಠಿರ ಮುಂತಾದವರು ಪ್ರೀತಿಯಿಂದ ಅರ್ಜುನನನ್ನು ತಡೆದರು. ಆದರೂ ಅವನು ಪ್ರತಿಜ್ಞಾಪಾಲನೆಗಾಗಿ ತೀರ್ಥಯಾತ್ರೆ ಕೈಗೊಂಡ. ಒಮ್ಮೆ ಗಂಗೆಯಲ್ಲಿ ಸ್ನಾನ ಮಾಡುತ್ತಿದ್ದಾಗ ನಾಗಕನ್ಯೆ ಮಾಯೆಯಿಂದ ಕ್ಷಣದಲ್ಲಿ ಅವನನ್ನು ನಾಗಲೋಕಕ್ಕೆ ಒಯ್ದಳು.

ಮಹಾಭಾರತದಲ್ಲಿ ಧರ್ಮರಾಜ ಅರ್ಜುನನಿಗೆ ಹೇಳುತ್ತಾನೆ - 'ಹಿರಿಯರು ಸ್ತ್ರೀಸಮೇತರಾಗಿದ್ದಾಗ ಕಿರಿಯರು ಒಳಗೆ ಪ್ರವೇಶಿಸಿದರೆ ದೋಷವಿಲ್ಲ. ಕಿರಿಯರು ಜೊತೆಗಿದ್ದಾಗ ಹಿರಿಯರು ಪ್ರವೇಶಿಸಿದರೆ ತಪ್ಪಾಗುತ್ತದೆ. ಅಣ್ಣನಾದ ನಾನು ನಿನಗೆ ತಂದೆಗೆ ಸಮಾನ. ದ್ರೌಪದಿಯೂ ನನ್ನ ಜೊತೆಗಿರುವಾಗ ನಿನಗೆ ತಾಯಿ ಸಮಾನಳು. ತಂದೆ ತಾಯಿ ಜೊತೆಗಿರುವಾಗ ಮಗು ನೋಡಿದರೆ ತಪ್ಪಿಲ್ಲ'' ಎಂದು ಧರ್ಮರಾಜ ಸಮಾಧಾನ ಹೇಳುತ್ತಾನೆ.

ಸ್ಕಾಂದಪುರಾಣದ ವೇಂಕಟಾಚಲಮಹಾತ್ಮೆಯಲ್ಲಿ ಅರ್ಜುನ ಬ್ರಾಹ್ಮಣನ ಗೋವುಗಳನ್ನು ರಕ್ಷಣೆ ಮಾಡುವುದಕ್ಕಾಗಿ ಪ್ರತಿಜ್ಞೆಯನ್ನು ಮುರಿದುದರಿಂದ ಗೋಬ್ರಾಹ್ಮಣರ ಹಿತದ ಸಲುವಾಗಿ ಸತ್ಯವಾಕ್ಯದ ಉಲ್ಲಂಘನೆ ಮಾಡುವುದು ಪಾಪಕರವಲ್ಲ ಎಂದು ಧರ್ಮರಾಜ ಹೇಳುತ್ತಾನೆ. ಆದರೂ ಅರ್ಜುನ ಅದಾವುದನ್ನೂ ಕೇಳದೆ ತೀರ್ಥಯಾತ್ರೆ ಕೈಗೊಂಡ. ಅಶಕ್ತರು ತಮಗೆ ತಾವು ಸಮಾಧಾನ ಹೇಳಿಕೊಳ್ಳುವ ಬಗೆ ಇದು ಎಂದ. ನನಗೆ ತೀರ್ಥಯಾತ್ರೆ ಇಷ್ಟವೂ ಆಗಿದೆ ಎಂದ.

ನಾಗಕನ್ಯೆ ಇಲ್ಲಿ ಧೃತರಾಷ್ಟ್ರನೆಂಬ ನಾಗನ ಮಗಳು ಉಲೂಪಿ. ಗಂಗಾದ್ವಾರದಲ್ಲಿ ಅರ್ಜುನ ಸ್ನಾನಮಾಡಿ ಪಿತೃತರ್ಪಣ ಮಾಡಿ ಔಪಾಸನ ಹೋಮಕ್ಕಾಗಿ ಮೇಲೆದ್ದು ಬರುವಾಗ ಅವನನ್ನು ಉಲೂಪಿ ನೋಡಿ ಮೋಹಗೊಂಡು ಮಾಯಾಶಕ್ತಿಯಿಂದ ಪಾತಾಳದ ನಾಗಲೋಕಕ್ಕೆ ಒಯ್ದಳು. ಅಲ್ಲಿ ಅಗ್ನಿ ಜ್ವಲಿಸುತ್ತಿತ್ತು. ಅರ್ಜುನ ಅಗ್ನಿಕಾರ್ಯ ಮಾಡಿದ.

ಉಲೂಪಿ ಸಮಾಗಮ

ತಸ್ಯಾಃ ಪಿತಾ ಗರುಡೇನಾತ್ತಪತ್ಯುಃ
ಪುತ್ರಾಕಾಂಕ್ಷೀ ಚೋದಯಾಮಾಸ ಪಾರ್ಥಂ।
ಸಂವತ್ಸರ ಬ್ರಹ್ಮಚರ್ಯೇ ತು ಪಾರ್ಥೈಃ
ಕೃಷ್ಣಾಹೇತೋಃ ಸಮಯೇ ಸಾಧು ಬದ್ಧಂ ॥೧೫೬॥

ನಾಗಕನ್ಯೆಯ ಪತಿಯನ್ನು ಗರುಡ ತಿಂದಿದ್ದ. ಅದರಿಂದ ಅವಳ ತಂದೆ ಅವಳಲ್ಲಿ ಒಬ್ಬ ಮಗನನ್ನು ಬಯಸಿ ಅರ್ಜುನನನ್ನು ಬೇಡಿದ. ಆದರೆ ದ್ರೌಪದಿಯ ನಿಮಿತ್ತವಾಗಿ

ಪಾಂಡವರು ಅರ್ಜುನನನ್ನು ವಾರ್ಷಿಕ ಬ್ರಹ್ಮಚರ್ಯ ನಿಯಮದಲ್ಲಿ ಚೆನ್ನಾಗಿ ಬದ್ಧನನ್ನಾಗಿ ಮಾಡಿದ್ದರು.

ಮಹಾಭಾರತ ಪ್ರಚಲಿತ ಪಾಠದಲ್ಲಿ ಅರ್ಜುನ ಉಲೂಪಿಯನ್ನು 'ನನ್ನನ್ನು ಇಲ್ಲಿಗೆ ಏಕೆ ತಂದೆ?' ಎಂದು ಕೇಳಿದಾಗ ಉಲೂಪಿ ಪ್ರಣಯ ಭಿಕ್ಷೆ ಕೇಳಿದಳು. ನಾನೀಗ ವಾರ್ಷಿಕ ಬ್ರಹ್ಮಚರ್ಯ ನಿಯಮದಲ್ಲಿದ್ದೇನೆ ಎಂದ ಅರ್ಜುನ. 'ಅದು ನನಗೆ ಗೊತ್ತು. ನಿನ್ನ ವ್ರತಲೋಪವಾದರೂ ಸರಿಯೆ, ನನಗೆ ನೀನು ಪ್ರಣಯ ಭಿಕ್ಷೆ ನೀಡಲೇಬೇಕು. ಇಲ್ಲದಿದ್ದರೆ ನಾನು ಬದುಕಿರಲಾರೆ' ಎಂದಳು ಉಲೂಪಿ. ಅವಳ ತಂದೆಯೂ ಅರ್ಜುನನನ್ನು ಬೇಡುತ್ತಾನೆ. ಈ ಅಂಶ ಪ್ರಚಲಿತ ಭಾರತದಲ್ಲಿ ಲುಪ್ತವಾಗಿರಬೇಕು.

ಉಲೂಪಿಯ ತಂದೆ ಒಬ್ಬ ನಾಗ ಎಂದಿಷ್ಟೇ ಜನಾರ್ದನೀಯ ಹೇಳಿದೆ. ಮಹಾಭಾರತದಲ್ಲಿ 'ಐರಾವತ ಕುಲೇ ಜಾತಃ ಕೌರವ್ಯೋ ನಾಮ ಪನ್ನಗಃ' ಐರಾವತವೆಂಬ ನಾಗಕುಲದಲ್ಲಿ ಜನಿಸಿದ 'ಕೌರವ್ಯ' ನೆಂಬ ನಾಗ ನನ್ನ ತಂದೆ' ಎನ್ನುತ್ತಾಳೆ ಉಲೂಪಿ. ಲಕ್ಷಾಲಂಕಾರದಲ್ಲಿ 'ಕೌರವ್ಯ' ಎಂದರೆ ಕುರುವಂಶದವನಾದ ಧೃತರಾಷ್ಟ್ರನ ಸಮಾನನಾಮದವನು 'ಧೃತರಾಷ್ಟ್ರ' ನೆಂಬ ನಾಗ ಎಂದು ವ್ಯಾಖ್ಯಾನಿಸಿದೆ.[1]

ಪುನಃಪುನರ್ಯಾಚ್ಯಮಾನಃ ಸ ಪಾರ್ಥಃ
ಪುತ್ರಾರ್ಥಮಸ್ಯಾ ಭುಜಗೇನ ತಸ್ಯಾಂ ।
ಉತ್ಪಾದಯಾಮಸ ಸುತಂ ಕುಜಾಂಶಂ
ನಾಮ್ನೇರಾವಂತಂ ವರುಣಾವೇಶಯುಕ್ತಂ ॥೧೫೭೭॥

ಕನ್ಯೆಯಲ್ಲಿ ಪುತ್ರೋತ್ಪಾದನೆಗಾಗಿ ನಾಗ ಪುನಃ ಪುನಃ ಅರ್ಜುನನನ್ನು ಪ್ರಾರ್ಥಿಸಿದ್ದರಿಂದ ಅವನು ಅವಳಲ್ಲಿ ವರುಣಾವೇಶಯುಕ್ತ ಕುಜಾಂಶನಾದ ಇರಾವಾನ್ ಎಂಬ ಹೆಸರಿನ ಮಗನನ್ನು ಹುಟ್ಟಿಸಿದ.

ಗುಣಾಃ ಪಿತುರ್ಮಾತೃಜಾತಿಃ ಸುತಾನಾಂ
ಯಸ್ಮಾತ್ಸತಾಂ ಪ್ರಾಯಶಸ್ತೇನ ನಾಗಃ ।
ಬಲೀ ಚ ಪಾರ್ಥಪ್ರಥಮೋದ್ಭವತ್ವಾ-
ನ್ಮಾಯಾವಿದಸ್ತ್ರೀ ಚ ಸುಧಾರ್ಮಿಕಶ್ಚ ॥೧೫೭೮॥

ಮಕ್ಕಳಿಗೆ ಸಾಮಾನ್ಯವಾಗಿ ತಂದೆಯ ಗುಣಗಳೂ ತಾಯಿಯ ಜಾತಿಯೂ ಬರುತ್ತದೆ.

1. ಕೌರವ್ಯಸ್ಯ ಧೃತರಾಷ್ಟ್ರಸ್ಯ ಸಮಾನನಾಮಧೇಯತ್ವಾತ್ ಕೌರವ್ಯಸ್ಯ ಧೃತರಾಷ್ಟ್ರಾಖ್ಯ ನಾಗಸ್ಯೇತ್ಯರ್ಥಃ ।
-ಲಕ್ಷಾಲಂಕಾರ

ಆದರಿಂದ ಇರಾವಾನ್ ನಾಗನಾಗಿಯೆ ಹುಟ್ಟಿದ. ಅರ್ಜುನನಿಂದ ಮೊದಲ ಬಾರಿಗೆ ಹುಟ್ಟಿದ ಮಗನಾದ್ದರಿಂದ ಬಲಿಷ್ಠನಾಗಿದ್ದ. ಮಾಯಾವಿಯೂ ಅಸ್ತ್ರಕೋವಿದನೂ ಒಳ್ಳೆಯ ಧಾರ್ಮಿಕನೂ ಆಗಿದ್ದ.

ಒಳ್ಳೆಯ ಮಕ್ಕಳಿಗೆ ಮಾತ್ರ ತಂದೆಯ ಗುಣಗಳು ಎನ್ನಬೇಕು. ಏಕೆಂದರೆ ವಸುದೇವನ ಪುತ್ರರಾದ ಸೃಗಾಲ ಪೌಂಡ್ರಕರಲ್ಲಿ ತಂದೆಯ ಗುಣಗಳಿರಲಿಲ್ಲ. ಮಕ್ಕಳಿಗೆ ತಾಯಿಯ ಜಾತಿ ಎನ್ನುವುದೂ ಸಾಮಾನ್ಯ ನಿಯಮ, ಕಟ್ಟುನಿಟ್ಟಾದುದಲ್ಲ. ಏಕೆಂದರೆ ಸತ್ಯವತಿ ಕ್ಷತ್ರಿಯ ಕನ್ಯೆ. ಅವಳಲ್ಲಿ ಪರಾಶರರಿಂದ ಜನಿಸಿದ ವ್ಯಾಸರು ಬ್ರಾಹ್ಮಣರು. ಹೀಗೆ ಅನೇಕ ಅಪವಾದಗಳಿದ್ದರೂ ನಿಯಮವಂತೂ ಇದೆ. ಏಕೆಂದರೆ ಕೃಷ್ಣಪುತ್ರರಾದ ಪ್ರದ್ಯುಮ್ನಾದಿಗಳಲ್ಲಿ ತಂದೆಯ ಗುಣಗಳೂ ಹನುಮದಾದಿಗಳಲ್ಲಿ ತಾಯಿಯ ಜಾತಿಯೂ ಕಂಡುಬಂದಿದೆ ಎಂದು ಜನಾರ್ದನೀಯ ಹೇಳಿದೆ. ದೇವತೆಯಾದ ತಾಯಿ ಗಂಗೆಗೆ ಭೀಷ್ಮ ಮಾನವ ಶಿಶು. ತಾಯಿಯಾದ ಹೆಣ್ಣು ಮೀನಿಗೆ ಸತ್ಯವತಿ ಮಾನವ ಶಿಶು. ವಿರಾಟರಾಜನೂ ಅವಳಲ್ಲಿ ಜನಿಸಿದ ಮಾನವ ಶಿಶು. ಪ್ರಹ್ಲಾದ ಪುತ್ರ ವಿರೋಚನನಲ್ಲಿ, ಅಂಗರಾಜನ ಮಗನಾದ ವೇನನಲ್ಲಿ, ವೇನಪುತ್ರ ಪೃಥುವಿನಲ್ಲಿ, ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದನಲ್ಲಿ - ಹೀಗೆ ಅನೇಕ ಕಡೆಗಳಲ್ಲಿ ಮಕ್ಕಳಿಗೆ ತಂದೆಯ ಗುಣಸ್ವಭಾವಗಳು ಕಾಣುವುದಿಲ್ಲ ಎಂದು ವರದರಾಜೀಯದಲ್ಲಿ ಹೇಳಿದೆ.

ತತೋ ಯಯಾವರ್ಜುನಸ್ತೀರ್ಥಯಾತ್ರಾ-
ಕ್ರಮೇಣ ಪಾಂಡ್ಯಾಂಸ್ತನಯೋಽಸ್ಯ ಮಾತ್ರಾ ।
ಸಹ ತ್ಯಕ್ತೋ ಭುಜಗೈರ್ದೇವಲೋಕೇ
ಸಂಪೂಜಿತೋ ನ್ಯವಸದ್ ದೈವತೈಶ್ಚ ॥೧೫೯॥

ಅಲ್ಲಿಂದ ಅರ್ಜುನ ತೀರ್ಥಯಾತ್ರಾ ಕ್ರಮದಿಂದ ಪಾಂಡ್ಯದೇಶಕ್ಕೆ ಹೊರಟು ಹೋದ. ನಾಗರು ಅರ್ಜುನನ ಮಗನನ್ನು ತಾಯಿಸಮೇತ ಬಹಿಷ್ಕರಿಸಿಬಿಟ್ಟರು. ಅವನು ದೇವಲೋಕದಲ್ಲಿ ಸತ್ಕೃತನಾಗಿ ಅಲ್ಲಿ ದೇವತೆಗಳೊಂದಿಗೇ ವಾಸ ಮಾಡಿದ.

ವಿಧವೆಯಾದ ನಾಗಿಣಿಯಲ್ಲಿ ವಿಜಾತೀಯ ಮನುಷ್ಯನಿಂದ ಹುಟ್ಟಿದವನು ಇರಾವಾನ್ ಎಂಬ ಕಾರಣದಿಂದ ನಾಗರು ತಾಯಿ ಮಕ್ಕಳನ್ನು ಬಹಿಷ್ಕರಿಸಿದರು. ಆದರೆ ದೇವತೆಗಳು ಇರಾವಾನನನ್ನು ದೇವರಾಜ ಇಂದ್ರನ ಅವತಾರನಾದ ಅರ್ಜುನನ ಮಗನೆಂದು ಆದರದಿಂದ ಮನ್ನಿಸಿ ತಾಯಿಮಕ್ಕಳನ್ನು ತಮ್ಮಲ್ಲಿ ಇರಿಸಿಕೊಂಡರು. ಮುಂದೆ ಇರಾವಾನ್ ಕುರುಕ್ಷೇತ್ರ ಯುದ್ಧದಲ್ಲಿ ಶಕುನಿಯ ಆರು ಮಂದಿ ಸೋದರರನ್ನು ಕೊಂದು

ಅಲಂಬುಸನೆಂಬ ರಾಕ್ಷಸನಿಂದ ಹತನಾಗುತ್ತಾನೆ.

ಸತ್ಯಾತ್ಯಯಾನ್ನೈವ ದೋಷೋಽರ್ಜುನಸ್ಯ
ತೇಜೀಯಸಶ್ಚಿಂತನೀಯಃ ಕಥಂಚಿತ್ ।
ಶ್ರೇಷ್ಠಾಪರಾಧಾನ್ನಾನ್ಯದೋಷಸ್ಯ ಲೇಪ-
ಸ್ತೇಜೀಯಸಾಂ ನಿರ್ಣಯೋಽಯಂ ಹಿ ಶಾಸ್ತ್ರೇ ॥೧೬೦॥

ಪ್ರತಿಜ್ಞಾಭಂಗ ಮಾಡಿದ ಪ್ರಯುಕ್ತ ಮಹಾಜ್ಞಾನಿಯಾದ ಅರ್ಜುನನಿಗೆ ಪಾಪ ಬಂದಿತೆಂದು ಯಾವ ರೀತಿಯಿಂದಲೂ ತಿಳಿಯಬಾರದು. ಏಕೆಂದರೆ ಮಹಾಜ್ಞಾನಿಗಳಿಗೆ ಸ್ವೋತ್ತಮಾಪರಾಧಕ್ಕಿಂತ ಬೇರೆ ಪಾಪ ಲೇಪವಾಗುವುದಿಲ್ಲ. ಇದು ಶಾಸ್ತ್ರಗಳಲ್ಲಿರುವ ನಿರ್ಣಯ.

ಲೇಪವೆಂದರೆ ಅಶುಚಿತ್ವ ಮತ್ತು ಮೋಕ್ಷದಲ್ಲಿ ಹೊಂದಬೇಕಾಗಿರುವ ಆನಂದದಲ್ಲಿ ಹ್ರಾಸ ಎಂದು ತಾಮ್ರಪರ್ಣಿ ಹೇಳಿದೆ. ಅಶ್ವತ್ಥಾಮ ದುರ್ಯೋಧನನ ಹೆಂಡತಿಯಲ್ಲಿ ಪುತ್ರೋತ್ಪಾದನ ಸಂಕಲ್ಪ ಮಾಡಿದ ಮಾತ್ರಕ್ಕೆ ಅವನ ಬ್ರಹ್ಮಚರ್ಯ ಹಾಳಾಯಿತು. ಬ್ರಹ್ಮಾಸ್ತ್ರೋಪ ಸಂಹಾರದಲ್ಲಿ ಅಸಾಮರ್ಥ್ಯ ಉಂಟಾಯಿತು. ಆದರಿಂದ ಬೇರೆ ಪಾಪ ಲೇಪವಿಲ್ಲವೆನ್ನುವುದು ಹೇಗೆ? ಚಂದ್ರಸುಗ್ರೀವರಿಗೆ ಸ್ವೋತ್ತಮ ಸ್ತ್ರೀಸಂಗ ದಿಂದ ಮೋಕ್ಷದಲ್ಲಿ ಹೊಂದಬೇಕಾಗಿರುವ ಆನಂದದಲ್ಲಿ ಹ್ರಾಸವಿಲ್ಲ. ಹೇಗೆ? ಎಂದರೆ ಹೀಗೆ ಸಮಾಧಾನ. ಪ್ರಾರಬ್ಧ ಕರ್ಮಕ್ಕೆ ಸೂಚಕಗಳು ಈ ಕರ್ಮಗಳು, ಪ್ರಾರಬ್ಧ ತೀರಲು ಕಾರಣವಾಗುತ್ತವೆ ಹೊರತು ಲೇಪ ಹೊಂದುವುದಿಲ್ಲ. ಅಶ್ವತ್ಥಾಮನ ದುಃಖಪ್ರಾರಬ್ಧವೂ ಚಂದ್ರ ಸುಗ್ರೀವರ ಸುಖಪ್ರಾರಬ್ಧವೂ ಯೋಗ್ಯತೆಗೆ ಮೀರಿ ಮಾಡಿದ ಪುಣ್ಯವೂ ತೀರಿತಷ್ಟೆ, ಅರ್ಜುನ ಮಾಡಿದ ವಿಧವಾ ಸಂಗವೂ ಹಾಗೇ.

ಚಿತ್ರಾಂಗದಾ ಪರಿಣಯ

ಅತಿಸ್ನೇಹಾಚ್ಚಾಗ್ರಜಾಭ್ಯಾಂ ತದಸ್ಯ
ಕ್ಷಾಂತಂ ಸುತಾ ಪಾಂಡ್ಯರಾಜೇನ ದತ್ತಾ ।
ಸಂವತ್ಸರಾಂತೇ ಫಲ್ಗುನಸ್ಯಾನುರೂಪಾ
ಚಿತ್ರಾಂಗದಾ ವೀರಸೇನೇನ ತೋಷಾತ್ ॥೧೬೧॥

ಅಣ್ಣಂದಿರು ಅತಿಸ್ನೇಹದಿಂದಾಗಿ ಅರ್ಜುನನ ಈ ಅಪರಾಧವನ್ನು ಕ್ಷಮಿಸಿದರು. ಒಂದು ವರ್ಷ ಕಳೆದ ಬಳಿಕ ಪಾಂಡ್ಯರಾಜ ವೀರಸೇನ ಅರ್ಜುನನಿಗೆ ಅನುರೂಪಳಾದ ತನ್ನ ಮಗಳಾದ ಚಿತ್ರಾಂಗದೆಯನ್ನು ಸಂತೋಷದಿಂದ ಮದುವೆ ಮಾಡಿಕೊಟ್ಟ.

ಭೀಮ ಧರ್ಮರಾಜರು ಅರ್ಜುನನಿಗೆ ಸ್ವೋತ್ತಮರು. ಅವರ ಮುಂದೆ ತಾನು ಮಾಡಿದ ಪ್ರತಿಜ್ಞೆಯನ್ನು ಮುರಿದುದು ಸ್ವೋತ್ತಮಾಪರಾಧವೇ ಆದರೂ ಭೀಮಧರ್ಮರಾಜರು ಸ್ನೇಹದಿಂದ ಆ ಅಪರಾಧವನ್ನು ಕ್ಷಮಿಸಿದ್ದರಿಂದ ಲೇಪವಾಗಲಿಲ್ಲ.

ಚಿತ್ರಾಂಗದೆಯನ್ನು ಅರ್ಜುನ ಸ್ವೀಕರಿಸಿದುದರಿಂದ ಪ್ರತಿಜ್ಞಾಭಂಗವಾಗಲಿಲ್ಲ. ಏಕೆಂದರೆ ಅರ್ಜುನ ತೀರ್ಥಯಾತ್ರೆ ಆರಂಭಿಸಿ ಆಗಲೆ ಒಂದು ವರ್ಷವಾಗಿತ್ತು. ವಾರ್ಷಿಕ ಬ್ರಹ್ಮಚರ್ಯವ್ರತದ ಕಾಲ ಮುಗಿದಿತ್ತು.

ಮಹಾಭಾರತ ಔತ್ತರೇಯ ಪಾಠದಲ್ಲಿ ಚಿತ್ರಾಂಗದೆ ಮಣಿಪೂರದ ರಾಜಾ ಚಿತ್ರವಾಹನನ ಮಗಳು. ಭಾಗವತ ವಿಷ್ಣುಪುರಾಣಗಳಲ್ಲಿಯೂ ಮಣಿಪೂರದ ರಾಜನೇ ಈತ. ಆದರೆ ದಾಕ್ಷಿಣಾತ್ಯಪಾಠದ ಮಹಾಭಾರತದಲ್ಲಿ ಮಣಲೂರದ ರಾಜ. ಹೆಸರು ಚಿತ್ರವಾಹನ ಎಂದೇ ಇದೆ. ಮತ್ತು ಚಿತ್ರಾಂಗದೆಯೂ ಚೈತ್ರವಾಹನಿ ಎನಿಸಿದ್ದಾಳೆ.

ವೀರಸೇನ ಅರ್ಜುನನಿಗೆ ಹೇಳುತ್ತಾನೆ, 'ನಮ್ಮ ವಂಶದ ಪೂರ್ವ ಪುರುಷ ಪ್ರಭಂಜನ ಮಹಾರಾಜ ಶಿವನನ್ನು ತಪಸ್ಸಿನಿಂದ, ಒಲಿಸಿಕೊಂಡು ಪುತ್ರವರ ಪಡೆದ. ಮತ್ತು ತನ್ನ ವಂಶದಲ್ಲಿ ಪ್ರತಿಯೊಬ್ಬನಿಗೂ ಒಂದು ಸಂತತಿಯಾಗುವಂತೆಯೂ ವರಪಡೆದ. ನನಗೆ ಈ ಚಿತ್ರಾಂಗದೆ ಮಗಳಾಗಿ ಹುಟ್ಟಿದ್ದಾಳೆ. ಇನ್ನು ಪುತ್ರಸಂತತಿಯಾಗಲಾರದು' ಎಂದು. ಒಂದುವೇಳೆ ಪುತ್ರ ಸಂತತಿಯಾದರೂ, ಭಾಗವತ ಸತ್ಯಧರ್ಮೀಯ ಟೀಕೆ ಹೇಳುವಂತೆ, ಸ್ವಾಯಂಭುವ ಮನು ತನಗೆ ಪ್ರಿಯವ್ರತ ಉತ್ತಾನಪಾದರಂಥ ಸತ್ಪುತ್ರರಿದ್ದರೂ ರುಚಿಪ್ರಜಾಪತಿಗೆ ತನ್ನ ಮಗಳಾದ ಆಕೂತಿಯನ್ನು ಕೊಡುವಾಗ ಇವಳಲ್ಲಿ ಯಜ್ಞನಾಮಕ ಭಗವಂತನ ಅವತಾರವಾಗಲಿದೆ. ಆ ಯಜ್ಞನನ್ನು ನನಗೆ ಕೊಡಬೇಕೆಂದು ಒಪ್ಪಂದವನ್ನು ಉತ್ತಮ ಪುತ್ರನ ಅಭಿಲಾಷೆಯಿಂದ ಹೇಗೆ ಮಾಡಿದನೋ ಹಾಗೇ ವೀರಸೇನನೂ ಅರ್ಜುನನ ಪುತ್ರ ತನಗೆ ಬೇಕೆಂದು ಆಸೆಪಟ್ಟ, ಅದರಿಂದ 'ಇವಳಲ್ಲಿ ಹುಟ್ಟುವ ಮಗನನ್ನು ಪುತ್ರಿಕಾಪುತ್ರ ಧರ್ಮದಿಂದ ನನಗೆ ನೀಡುವಿಯಾದರೆ ಮಗಳನ್ನು ನಿನಗೆ ಮದುವೆ ಮಾಡಿಕೊಡುತ್ತೇನೆ' ಎಂದ. ಅದಕ್ಕೆ ಅರ್ಜುನ ಒಪ್ಪಿದ. ಅದರಿಂದ ವೀರಸೇನ ಸಂತೋಷದಿಂದ ಮಗಳನ್ನು ನೀಡಿದ. ಹೀಗೆ ಪುತ್ರಿಕಾ ಪುತ್ರ ಧರ್ಮದಿಂದ ಹುಟ್ಟಿದ ಬಭ್ರುವಾಹನ ಪಾಂಡ್ಯರ ಮಣಲೂರ ನಗರದ ರಾಜನೆನಿಸಿದ. ಪಾಂಡವರ ಸಂತತಿಯೆನಿಸದಿದ್ದುದರಿಂದ ಅಶ್ವತ್ಥಾಮರ ಬ್ರಹ್ಮಾಸ್ತ್ರ ಇವನನ್ನು ಸುಡಲಿಲ್ಲ.

ಸ ವೀರಸೇನಸ್ತ್ವಷ್ಟುರಂಶೋ ಯಮಸ್ಯಾ-
ಪ್ಯಾವೇಶಯುಕ್ ಸಾ ಚ ಕನ್ಯಾ ಶಚೀ ಹಿ ।
ತಾರಾದೇಹೇ ಸೂರ್ಯಜಸ್ಯಾಂಗಸಂಗಾತ್
ಸ್ವರ್ಗಂ ನಾಗಾದಂತರಿಕ್ಷಾದಿಹಾಸೀತ್ ॥೧೬೨॥

ಆ ವೀರಸೇನ ತ್ವಷ್ಟೃ ಎಂಬ ಸೂರ್ಯನ ಅಂಶ. ಯಮನ ಆವೇಶದಿಂದಲೂ ಯುಕ್ತ. ಕನ್ಯೆ ಚಿತ್ರಾಂಗದೆಯೂ ಶಚೀದೇವಿ. ತಾರೆಯ ಜನ್ಮದಲ್ಲಿ ಅವಳು ಸುಗ್ರೀವನ ಅಂಗಸಂಗ ಮಾಡಿದ್ದರಿಂದ ಸ್ವರ್ಗಕ್ಕೆ ಹೋಗಲಿಲ್ಲ. ಅಂತರಿಕ್ಷದಿಂದಲೆ ಹಿಂದೆ ಬಂದು ಇಲ್ಲಿ ಹುಟ್ಟಿದ್ದಳು.

ದೇವಾಂಶ ಸಂಭೂತರು ತಮ್ಮ ಅವತಾರ ಕಾರ್ಯ ಮುಗಿದಾಗ ತಮ್ಮ ಮೂಲರೂಪಕ್ಕೆ ಹೋಗಿ ಸೇರುವುದು ನಿಯಮ. ಆದರೆ ಅವತಾರ ಕಾಲದಲ್ಲಿ ಮಹಾಪಾಪ ಮಾಡಿದರೆ ಅವರಿಗೆ ಮೂಲರೂಪದಲ್ಲಿ ಪ್ರವೇಶ ಸಿಗುವುದಿಲ್ಲ. ಶಚೀದೇವಿ ತಾರೆಯಾಗಿ ಅವತರಿಸಿ ವಾಲಿಯ ಮರಣಾನಂತರ ಸೂರ್ಯಾವತಾರನಾದ ಸುಗ್ರೀವನ ರಾಣಿಯಾದಳು. ದೇವಸ್ತ್ರೀಯರಿಗೆ ತಮ್ಮ ಪತಿಗಳಿಗಿಂತ ಕಡಿಮೆಯವರನ್ನು ಸೇರಿದರೆ ಮಹಾಪಾಪ ಬರುತ್ತದೆ. ದೇವೇಂದ್ರನ ಮಡದಿ ಸೂರ್ಯನನ್ನು ಸೇರಿದ್ದರಿಂದ ಆ ತಾರೆ ಸತ್ತು ಮೂಲರೂಪವಾದ ಶಚಿಯನ್ನು ಸೇರದೆ ಅಂತರಿಕ್ಷದ ವರೆಗೆ ಹೋಗಿ ಹಿಂತಿರುಗಿ ಬಂದು ಚಿತ್ರಾಂಗದೆಯಾಗಿ ಹುಟ್ಟಿದಳು. ಇಂದ್ರನ ರಾಣಿಗೇ ಸ್ವರ್ಗದ ಬಾಗಿಲು ತೆರೆಯಲಿಲ್ಲ.

ತೇನೈವ ಹೇತೋರ್ನಾತಿಸಾಮೀಪ್ಯಮಾಸೀತ್
ತಸ್ಯಾಃ ಪಾರ್ಥೇ ಪುತ್ರಿಕಾಪುತ್ರಧರ್ಮಾತ್ ।
ತಸ್ಯಾಂ ಜಾತೋ ಬಭ್ರುವಾಹೋಽರ್ಜುನೇನ
ಪೂರ್ವಂ ಜಯಂತಃ ಕಾಮದೇವಾಂಶಯುಕ್ತಃ ॥೧೬೩॥

ಅದೇ ದೋಷದಿಂದಾಗಿ ಚಿತ್ರಾಂಗದೆಗೆ ಅರ್ಜುನನ ಒಡನಾಟವೂ ಬಹಳ ದಿನ ಸಿಗಲಿಲ್ಲ. ಅರ್ಜುನನಿಂದ ಅವಳಲ್ಲಿ ಪುತ್ರಿಕಾ ಪುತ್ರ ಧರ್ಮದಿಂದ ಬಭ್ರುವಾಹನ ಜನಿಸಿದ. ಅವನು ಹಿಂದೆ ಜಯಂತ. ಮನ್ಮಥನ ಅಂಶದಿಂದ ಯುಕ್ತನಾಗಿ ಹುಟ್ಟಿದ.

ತಾರೆಯಾಗಿದ್ದಾಗ ಸುಗ್ರೀವನ ಒಡನಾಟ ಮಾಡಿದ್ದರಿಂದ ಚಿತ್ರಾಂಗದೆಯಾಗಿ ಹುಟ್ಟಿದಾಗ ಅರ್ಜುನನ ಒಡನಾಟ ತಪ್ಪಿತ್ತು. ಕೇವಲ ಮೂರು ತಿಂಗಳ ಕಾಲ ಅರ್ಜುನ ಅವಳೊಡನಿದ್ದ. ಬಳಿಕ ದ್ವಾರಕೆಗೆ ಹೋಗಿ ಸುಭದ್ರೆಯನ್ನು ಮದುವೆಯಾದ.

ಐವರು ಅಪ್ಸರೆಯರು

ಪುತ್ರಂ ವೀರಂ ಜನಯಿತ್ವಾರ್ಜುನೋಽತೋ
ಗಚ್ಛನ್ ಪ್ರಭಾಸಂ ಶಾಪತೋ ಗ್ರಾಹದೇಹಾಃ।
ಅಮೂಮುಚಚ್ಚಾಪ್ಸರಸಃ ಸ ಪಂಚ
ತಾಭಿರ್ಗೃಹೀತಃ ಪ್ರವಿಕೃಷ್ಯ ತೀರಂ ॥೧೬೪॥

ವೀರನಾದ ಬಭ್ರುವಾಹನನನ್ನು ಹುಟ್ಟಿಸಿ ಅರ್ಜುನ ಅಲ್ಲಿಂದ ಪ್ರಭಾಸಕ್ಕೆ ಹೋಗುತ್ತ ದಾರಿಯಲ್ಲಿ ಶಾಪದಿಂದ ಮೊಸಳೆಯ ಜನ್ಮ ಹೊಂದಿದ್ದ ಐವರು ಅಪ್ಸರೆಯರನ್ನು, ಅವರು ಈತನನ್ನು ಹಿಡಿದಾಗ, ತೀರಕ್ಕೆ ಎಳೆದು ತಂದು ಶಾಪದಿಂದ ವಿಮುಕ್ತಗೊಳಿಸಿದ.

ಏವಂ ಹಿ ತಾಸಾಂ ಶಾಪಮೋಕ್ಷಃ ಪ್ರದತ್ತೋ
ಯದಾಖಿಲಾ ವೋ ಯುಗಪತ್ ಸಂಪ್ರಕರ್ಷೇತ್।
ಏಕಸ್ತದಾ ನಿಜರೂಪಾಪ್ತಿರೇವೇ-
ತ್ಯಲಂ ತುಷ್ಟೇನ ಬ್ರಾಹ್ಮಣೇನಾನತಾನಾಂ ॥೧೬೫॥

ಒಬ್ಬ ಬ್ರಾಹ್ಮಣನಿಂದ ಶಪ್ತರಾದ ಈ ಅಪ್ಸರೆಯರು ಅವನಿಗೆ ಶರಣಾದಾಗ, ಸಂತುಷ್ಟನಾದ ಆ ಬ್ರಾಹ್ಮಣ 'ಬಲಿಷ್ಠನಾದ ಒಬ್ಬನೇ ವ್ಯಕ್ತಿ ಯಾವಾಗ ನಿಮ್ಮೆಲ್ಲರನ್ನೂ ಜೊತೆಗೇ ತೀರಕ್ಕೆ ಎಳೆದು ತರುವನೋ ಆಗಲೆ ಅವನಿಂದ ನಿಮಗೆ ನಿಮ್ಮ ನಿಜ ರೂಪ ಲಭಿಸುತ್ತದೆ' ಎಂದು ಅವರಿಗೆ ಶಾಪಮೋಕ್ಷ ನೀಡಿದ.

ವಿಪ್ರಾಪಹಾಸಾತ್ ಕುತ್ಸಿತಯೋನಿತಸ್ತಾಃ
ಕನ್ಯಾತೀರ್ಥೇ ಪಾಂಡವಃ ಸಂಪ್ರಮೋಚ್ಯ।
ಪ್ರಾಪ್ತಃ ಪ್ರಭಾಸಂ ವಾಸುದೇವಾನುಜಾಂ ತಾಂ
ಶುಶ್ರಾವ ರಾಮೇಣ ಸುಯೋಧನೋದ್ಯತಾಂ ॥೧೬೬॥

ಬ್ರಾಹ್ಮಣನ ಅಪಹಾಸದಿಂದ ಅಪ್ಸರೆಯರಿಗೆ ಬಂದಿದ್ದ ಹೀನಜನ್ಮವನ್ನು ಕನ್ಯಾತೀರ್ಥದಲ್ಲಿ ಅರ್ಜುನ ಮೇಲೆ ಹೇಳಿದಂತೆ ಹೋಗಲಾಡಿಸಿ ಪ್ರಭಾಸಕ್ಕೆ ನಡೆದ. ಕೃಷ್ಣನ ತಂಗಿಯಾದ ಸುಭದ್ರೆಯನ್ನು ಬಲರಾಮ ದುರ್ಯೋಧನನಿಗೆ ಕೊಡಲು ಉದ್ಯುಕ್ತನಾದುದನ್ನು ಕೇಳಿದ.

ಮಹಾಭಾರತ ಪ್ರಚಲಿತಪಾಠದಲ್ಲಿ ಅರ್ಜುನ ಐದು ಮೊಸಳೆಗಳನ್ನು ಕ್ರಮವಾಗಿ ಐದು ಬೇರೆ ಬೇರೆ ಸರೋವರಗಳಿಂದ ಎತ್ತಿಹಾಕುತ್ತಾನೆ. ಆದರೂ ಬೇರೆ ಬೇರೆ ಎಲೆಗಳಲ್ಲಿ ಸಹಭೋಜನದಂತೆ ಬೇರೆ ಬೇರೆ ಕೊಳಗಳಿಂದ ಸಹ ಮುಕ್ತಿ ಎನ್ನಬಹುದು.

ಐದು ಸರೋವರಗಳು ಕ್ರಮವಾಗಿ ಅಗಸ್ತ್ಯ ಸೌಭದ್ರ ಪೌಲೋಮ ಕಾರಂಧಮ ಮತ್ತು ಭಾರದ್ವಾಜ ಎಂದು. ಐವರು ಅಪ್ಸರೆಯರಿಗೆ ವರ್ಗಾ

ಸೌರಭೇಯೀ ಸಮೀಚೀ ಬುದ್ಬುದಾ ಮತ್ತು ಲತಾ ಎಂದು ಹೆಸರು.

ಅರ್ಜುನ ಆ ಐದು ಸರೋವರಗಳನ್ನು ಮುನಿಗಳು ಯಾರೂ ಉಪಯೋಗಿಸದಿದ್ದುದನ್ನು ವಿಚಾರಿಸಿದಾಗ ತಿಳಿಯಿತು. ಅವುಗಳಲ್ಲಿ ಮೊಸಳೆಗಳಿವೆ ಎಂದು. ಮುನಿಗಳು ತಡೆಯುತ್ತಿದ್ದಂತೆಯೆ ಅರ್ಜುನ ಸೌಭದ್ರತೀರ್ಥದಲ್ಲಿ ಮುಳುಗಿ ಮೊಸಳೆಯನ್ನು ಮೇಲೆ ಎತ್ತಿ ಹಾಕಿದ. ಮೊಸಳೆ ಅಪ್ಸರೆ ರೂಪು ತಳೆಯಿತು. ಅವಳು ವರ್ಗಾ ಎಂಬ ಅಪ್ಸರೆ. ಸಖಿಯರೊಂದಿಗೆ ಅವಳು ಗೀತನೃತ್ಯಗಳಿಂದ ಮಹಾತಪಸ್ವಿಯಾದ ಒಬ್ಬ ಬ್ರಾಹ್ಮಣನ ತಪಸ್ಸನ್ನು ಕೆಡಿಸಲು ಯತ್ನಿಸಿದಾಗ ಅವನು ನೂರು ವರ್ಷ ಮೊಸಳೆಗಳಾಗಿರಿ ಎಂದು ಶಪಿಸಿದ. ಬಳಿಕ ಅವನನ್ನು ಮೊರೆಹೊಕ್ಕಾಗ ಮೊಸಳೆಯ ರೂಪದಲ್ಲಿರುವ ನಿಮ್ಮನ್ನು ಯಾರಾದರೂ ಒಬ್ಬ ಮಹಾತ್ಮ ಕೊಳದಿಂದ ಎತ್ತಿ ಹಾಕಿದರೆ ಆಗ ಶಾಪಮೋಕ್ಷ ಎಂದ. ಯಾರು ಆ ಮಹಾತ್ಮ? ಅರ್ಜುನನೆ ಎಂದು ನಾರದರಿಂದ ತಿಳಿದುಬಂದಿತು. ಅದರಂತೆ ಈಗ ನೀನು ನಮ್ಮ ಶಾಪವಿಮೋಚನೆ ಮಾಡಿರುವಿ ಎಂದು ಅವಳು ಹೇಳುತ್ತಾಳೆ. ಬಳಿಕ ಐದು ಸರೋವರಗಳಿಗೂ ನಾರೀತೀರ್ಥವೆಂದು ಹೆಸರಾಯಿತು.

ಅರ್ಜುನ ಅಲ್ಲಿಂದ ಪುನಃ ಹಿಂತಿರುಗಿ ಮಣಲೂರಕ್ಕೆ ಹೋಗಿ ಚಿತ್ರಾಂಗದೆಯನ್ನು ಕಾಣುತ್ತಾನೆ. ಆಗತಾನೆ ಅವಳು ಗಂಡುಮಗು ವನ್ನು ಪ್ರಸವಿಸಿರುತ್ತಾಳೆ. ಅರ್ಜುನ ಅವನಿಗೆ ಬಭ್ರುವಾಹನ ಎಂದು ಹೆಸರಿಟ್ಟು 'ಮಗುವನ್ನು ಪೋಷಿಸುತ್ತಿರು, ಮುಂದೆ ನಮ್ಮ ರಾಜಸೂಯ ಯಾಗಕ್ಕೆ ನಿನ್ನ ತಂದೆಯ ಜೊತೆಗೆ ನೀನೂ ಇಂದ್ರಪ್ರಸ್ಥಕ್ಕೆ ಬಂದು ಎಲ್ಲ ಬಂಧುಬಾಂಧವರನ್ನು ನೋಡು' ಎಂದು ಹೇಳಿ ಅಲ್ಲಿಂದ ಕೇರಳ ಗೋಕರ್ಣ ಮುಂತಾದ ಕ್ಷೇತ್ರಗಳಲ್ಲಿ ಸಂಚರಿಸಿ ಪ್ರಭಾಸಕ್ಕೆ ಬರುತ್ತಾನೆ.

ಅರ್ಜುನ ಸಂನ್ಯಾಸಿ

ವಿಚಿಂತ್ಯ ಕಾರ್ಯಂ ಯತಿರೂಪಂ ಗೃಹೀತ್ವಾ
ಕುಶಸ್ಥಲೀಂ ಪ್ರಯಯೌ ತಂ ಸಮೀಪೇ ।
ಪ್ರಾಪ್ತಂ ಕೃಷ್ಣಃ ಪ್ರಾಹಸತ್ ಸಂವಿಜಾನನ್
ಸತ್ಯಾಸಹಾಯಃ ಶಯನೀಯಾಧಿರೂಢಃ ॥೧೬೭॥

ಅರ್ಜುನ ತಾನೀಗ ಮಾಡಬೇಕಾದುದನ್ನು ಚೆನ್ನಾಗಿ ಆಲೋಚಿಸಿ ಸಂನ್ಯಾಸಿ ವೇಷಧರಿಸಿ ದ್ವಾರಕೆಗೆ ಹೊರಟ. ರಾತ್ರಿಯಲ್ಲಿ ಸತ್ಯಭಾಮೆಯೊಂದಿಗೆ ಪರ್ಯಂಕದಲ್ಲಿ ಕುಳಿತಿದ್ದ ಕೃಷ್ಣ ಅರ್ಜುನ ತಮ್ಮ ಸಮೀಪಕ್ಕೆ ಬಂದುದನ್ನು ತಿಳಿದು ನಕ್ಕ.

ಅರ್ಜುನ ಜುಟ್ಟು ಜನಿವಾರ ಮೂರು ದಂಡಗಳುಳ್ಳ ತ್ರಿದಂಡಿ ಸಂನ್ಯಾಸಿ ವೇಷ ಧರಿಸಿ ದ್ವಾರಕೆಗೆ ಹೋಗುವ ಮಾರ್ಗದಲ್ಲಿ ರಾತ್ರಿ ಒಂದು ಆಲದಮರದ ಬುಡದಲ್ಲಿ ಕುಳಿತ. ಜೋರಾಗಿ ಮಳೆ ಬರುತ್ತಿತ್ತು. ಕೃಷ್ಣನನ್ನು ನೆನೆದ. ಅವನ ಇಚ್ಛೆ ಹೇಗಿದೆಯೊ ಎಂದು ಉತ್ಕಂಠಿತನಾದ. ಅದನ್ನು ದ್ವಾರಕೆಯಲ್ಲಿ ಸತ್ಯಭಾಮೆಯ ಅಂತಃಪುರದಲ್ಲಿ ಕುಳಿತೇ ಕೃಷ್ಣ ಕಂಡು ನಕ್ಕ.

ಸರ್ವಜ್ಞಾಸಾ ಲೀಲಯಾ ಹಾಸಹೇತು-
ಮಪೃಚ್ಛತ್ತಂ ಸೋಽಪಿ ತಸ್ಯೈ ಬಭಾಷೇ ।
ಲೀಲಾಭಾಜೌ ದರ್ಶನಾರ್ಥಂ ಪುನಸ್ತಾ-
ವಗಚ್ಛತಾಂ ರೈವತಂ ಶೈಲರಾಜಂ ॥೧೬೮॥

ಸರ್ವಜ್ಞಳಾದರೂ ಲೀಲೆಯಿಂದ ಸತ್ಯಭಾಮೆ ಆ ನಗುವಿಗೆ ಕಾರಣವನ್ನು ಕೇಳಿದಳು. ಕೃಷ್ಣ ಹೇಳಿದ. ಲೀಲೆ ಮಾಡುತ್ತಲೆ ಇಬ್ಬರೂ ಸಂನ್ಯಾಸಿಯ ದರ್ಶನಕ್ಕೆ ರೈವತ ಪರ್ವತಕ್ಕೆ ನಡೆದರು.

ಮಹಾಭಾರತ ಪ್ರಕಾರ ಕೃಷ್ಣಸತ್ಯಭಾಮೆಯರು ಪ್ರಭಾಸ ಯಾತ್ರೆ ಕೈಗೊಂಡು ಅರ್ಜುನನನ್ನು ರೈವತಕ್ಕೆ ಹೋಗುವ ಮಾರ್ಗದಲ್ಲಿಯೆ ಕಂಡರು. ಅವನನ್ನು ಬೆಟ್ಟದ ಮೇಲೆ ಕರೆದೊಯ್ದು ಅಲ್ಲಿಯ ದಿವ್ಯವಾಸ ಗೃಹದಲ್ಲಿ ಇರಿಸಿ ಭಕ್ಷ್ಯ ಭೋಜ್ಯಾದಿಗಳನ್ನು ಉಣಿಸಿ ಹಾಸಿಗೆಯಲ್ಲಿ ಮಲಗಿಸಿ ಹೊರಟುಹೋದರು.

ಆಕ್ರೀಡೋಽಸೌ ಭೋಜವೃಷ್ಣ್ಯಂಧಕಾನಾಂ
ತತ್ರಾಪಶ್ಯತ್ ಕೇಶವಃ ಫಲ್ಗುನಂ ತಂ ।
ಸ್ವಸುರ್ದಾನೇ ಸ ಪ್ರತಿಜ್ಞಾಂ ರಹೋಽಸ್ಮೈ
ಚಕ್ರೇ ಕೃಷ್ಣೋಽಥಾಸದತ್ ಸರ್ವವೃಷ್ಣೀನ್ ॥೧೬೯॥

ಆ ಬೆಟ್ಟ ಭೋಜ ವೃಷ್ಣಿ ಅಂಧಕರಿಗೆ ವಿಹಾರಸ್ಥಾನವಾಗಿತ್ತು. ಅಲ್ಲಿ ಕೃಷ್ಣ ಅರ್ಜುನನನ್ನು ಕಂಡು ತಂಗಿಯನ್ನು ಅವನಿಗೆ ಕೊಡುವುದಾಗಿ ರಹಸ್ಯವಾಗಿ ಮಾತುಕೊಟ್ಟ. ಬಳಿಕ ಹೋಗಿ ಎಲ್ಲ ಯಾದವರನ್ನು ಕೂಡಿಕೊಂಡ.

ಭೋಜ ವೃಷ್ಣಿ ಅಂಧಕರು ಯಾದವರ ಒಳಪಂಗಡಗಳು.

ಶ್ರೀಕೃಷ್ಣ ಪ್ರಭಾಸಕ್ಷೇತ್ರಯಾತ್ರೆ ಮಾಡಿ ತಿರುಗಿ ಬಂದನೆಂದು ಸಂಭ್ರಮದಿಂದ ಯಾದವರು ಅವನನ್ನು ಇದಿರುಗೊಂಡು ಸತ್ಕರಿಸಿದರಂತೆ! ಏಕೆಂದರೆ,

ಕ್ಷಣಾರ್ಧಮಪಿ ವಾರ್ಷ್ಣೇಯಾ ಗೋವಿಂದವಿರಹಾಕ್ಷಮಾಃ ।

ಅರಗಳಿಗೆ ಶ್ರೀಕೃಷ್ಣನನ್ನು ಬಿಟ್ಟಿರಲಾರರು ಯಾದವರು!

ದೃಷ್ಟ್ವಾ ಗಿರೌ ರೌಹಿಣೇಯೋ ಯತೀಂದ್ರ-
ವೇಷಂ ಪಾರ್ಥಂ ಜ್ಞಾತಿಯುಕ್ತಃ ಪ್ರಣಮ್ಯ ।
ಚಕ್ರೇ ಪೂಜಾಂ ಫಲ್ಗುನೋಽಪಿ ಪ್ರಣಾಮಂ
ಗುಣಜ್ಯೇಷ್ಠೋಽಸೀತಿ ಚಕ್ರೇ ಬಲಾಯ ॥೧೭೦॥

ಬೆಟ್ಟದಲ್ಲಿ ಯತೀಶ್ವರನ ವೇಷದಲ್ಲಿದ್ದ ಅರ್ಜುನನನ್ನು ಬಲರಾಮ ಬಂಧು ಸಮೇತನಾಗಿ ದರ್ಶನ ಮಾಡಿ ನಮಿಸಿ ಸತ್ಕರಿಸಿದ. ಅರ್ಜುನನೂ ಬಲರಾಮನನ್ನು 'ನೀನು ಗುಣದಲ್ಲಿ ನನಗಿಂತ ಉತ್ತಮನಿರುವಿ' ಎನ್ನುತ್ತ ನಮಿಸಿದ.

ಗುಣದಲ್ಲಿಯೂ ವಯಸ್ಸಿನಲ್ಲಿಯೂ ಯೋಗ್ಯತೆಯಲ್ಲಿಯೂ ಬಲರಾಮ ಅರ್ಜುನಗಿಂತ ಹಿರಿಯನೆ. ಆದರೆ ಅರ್ಜುನ ಈಗ ತಾನು ಯತಿಯಾದ್ದರಿಂದ ಬಲರಾಮನ ದೃಷ್ಟಿಯಲ್ಲಿ ಅವನಿಗೆ ಪೂಜ್ಯ 'ಮರ್ಯಾದಾರ್ಥಂ ತು ತೇ ಪೂಜ್ಯಾಃ' ವಸ್ತುತಃ ಯತಿಯಲ್ಲದುದರಿಂದ ಅರ್ಜುನ ಬಲರಾಮನನ್ನು ಗುಣದಿಂದ ಜ್ಯೇಷ್ಠನೆಂಬ ನೆಪ ಹೇಳಿ ನಮಿಸುತ್ತಾನೆ. ಹಾಗೆಮಾಡದಿದ್ದರೆ ಅಪರಾಧವಾದೀತು ಎಂದು.

ಬೆಟ್ಟದ ಮೇಲೆ ಒಂದು ದೊಡ್ಡ ಉತ್ಸವ ನಡೆದಿತ್ತು. ಅದಕ್ಕೆ ಬಂಧು ಸಮೇತನಾಗಿ ಬಂದಿದ್ದ ಬಲರಾಮ ಅರ್ಜುನಸನ್ಯಾಸಿಯನ್ನು ಕಂಡು ನಮಿಸಿದ್ದ. ಸುಭದ್ರೆಯೂ ಆಗಲೆ ಸಂನ್ಯಾಸಿಯ ದೃಷ್ಟಿಗೆ ಗೋಚರಳಾದಳು. ಬಳಿಕ ಏಕಾಂತದಲ್ಲಿ ಕೃಷ್ಣ 'ಕನ್ಯೆಯನ್ನು ನೋಡಿದೆಯಲ್ಲವೆ? ಅವಳು ನಿನಗೆ ಬೇಕೇ?' ಎಂದು ಕೇಳಿದ. ಅವಶ್ಯ! ಎಂದ ಅರ್ಜುನ. ಒಡನೆ ಕೃಷ್ಣ ಇಂದ್ರಪ್ರಸ್ಥಕ್ಕೆ ದೂತರನ್ನು ಕಳಿಸಿ ರಹಸ್ಯವಾಗಿ ಎಲ್ಲರ ಒಪ್ಪಿಗೆ ಪಡೆದುಕೊಂಡ. ಬಳಿಕ ಸುಭದ್ರೆಯನ್ನು ಕೊಡುವುದಾಗಿ ರಹಸ್ಯದಲ್ಲಿ ಮಾತುಕೊಟ್ಟ.

ಸರ್ವಜ್ಞಂ ತಂ ವಾಗ್ಮಿನಂ ವೀಕ್ಷ್ಯ ರಾಮಃ
ಕನ್ಯಾಗಾರೇ ವರ್ಷಕಾಲೇ ನಿವಾಸಂ ।
ಸತ್ಕಾರಪೂರ್ವಂ ಕಾರಯೇತ್ಯಾಹ ಕೃಷ್ಣಂ
ನೈವೇತ್ಯೂಚೇ ಕೇಶವೋ ದೋಷವಾದೀ ॥೧೭೧॥

ಈ ಯತಿ ಸರ್ವಜ್ಞ ಮತ್ತು ಒಳ್ಳೆಯ ಮಾತುಗಾರ ಎಂದು ತಿಳಿದು ಬಲರಾಮ ಮಳೆಗಾಲದ ಚಾತುರ್ಮಾಸ್ಯ ಕಾಲ ಪೂರ್ತಿ ಅವನನ್ನು ಕನ್ಯಾಗಾರದ ಬಳಿಯಲ್ಲಿ ಸತ್ಕಾರ ಪೂರ್ವಕವಾಗಿ ಇರಿಸು ಎಂದು ಕೃಷ್ಣನಿಗೆ ಹೇಳಿದ. ಕೃಷ್ಣ ಬೇಡವೆಂದ. ಹಾಗೆ ಮಾಡಿದರೆ ದೋಷವಿದೆ ಎಂದ.

ಕುಂತಿ ಚಾತುರ್ಮಾಸ್ಯ ಕಾಲದಲ್ಲಿ ದೂರ್ವಾಸರ ಸೇವೆ ಮಾಡಿ ಅನುಗ್ರಹ ಪಡೆದಳು. ಹಾಗೇ ಸುಭದ್ರೆಯೂ ಸಂನ್ಯಾಸಿಯ ಸೇವೆ ಮಾಡಲಿ ಎಂಬ ಅಭಿಪ್ರಾಯದಿಂದ ಕನ್ಯೆಯಾದ ಸುಭದ್ರೆಯ ವಾಸಗೃಹದ ಬಳಿ ಒಂದು ಲತಾಗೃಹದಲ್ಲಿ ಅರ್ಜುನನನ್ನು ಇರಿಸಲು ಸಂಕಲ್ಪಿಸಿದ ಬಲರಾಮ. ಆದರೆ ಕೃಷ್ಣ ಈ ಕಳ್ಳ ಸಂನ್ಯಾಸಿಯ ಬಗ್ಗೆ ಏನೂ ಅರಿಯದವನಂತೆ ವ್ಯಾವಹಾರಿಕವಾಗಿ ನೀತಿಯನ್ನು ಹೇಳುತ್ತಾನೆ. 'ಸುಂದರ ಬಲಿಷ್ಠನಾದ ಯುವಕ ಸಂನ್ಯಾಸಿಯ ಬಳಿ ಕನ್ಯೆ ಇದ್ದರೆ ಅಪಾಯ' ಎಂದು. ಹೀಗೆ 'ಕೇಶವೋ ದೋಷವಾದೀ' ಎಂದು ಪ್ರಸಿದ್ಧವಾಯಿತು.

ಯುವಾ ಬಲೀ ದರ್ಶನೀಯೋಽತಿವಾಗ್ಮೀ
ನಾಯಂ ಯೋಗ್ಯಃ ಕನ್ಯಕಾಗಾರವಾಸಂ ।
ಇತ್ಯುಕ್ತವಂತಂ ರಾಮ ಆಹಾಪ್ತವಿದ್ಯೇ
ನಾಸ್ಮಿನ್ ಶಂಕೇತ್ಯೇವ ಲೋಕಾಧಿನಾಥಂ ॥೧೭೨॥

'ಈ ಯತಿ ಯುವಕ ಬಲಿಷ್ಠ. ಸುಂದರ, ಬಲು ಮಾತುಗಾರ. ಅದರಿಂದ ಕನ್ಯಾಗಾರದ ಬಳಿಯಲ್ಲಿ ಇರಿಸಲು ತಕ್ಕವನಲ್ಲ' ಹೀಗೆ ಜಗದೀಶ್ವರನಾದ ಶ್ರೀಕೃಷ್ಣ ಹೇಳಿದಾಗ ಬಲರಾಮನೆಂದ 'ಜ್ಞಾನಿಯಾದ ಈತನಲ್ಲಿ ಸಂದೇಹ ಸಲ್ಲದು' ಎಂದು.

ಜ್ಞಾನಿಯಾದ್ದರಿಂದ ಪುಣ್ಯಪಾಪ ವಿವೇಕ ಬಲ್ಲವ. ಆದರಿಂದ ಪಾಪಕಾರ್ಯ ಮಾಡಿಯಾನೆಂದು ಸಂದೇಹ ಮಾಡಕೂಡದು. ವಸ್ತುತಃ ಸಂನ್ಯಾಸಿ ತನಗೆ ಗೌರವ ಕೊಟ್ಟು ನಮಸ್ಕರಿಸಿದನೆಂದು ಉಬ್ಬಿಹೋಗಿದ್ದ ಬಲರಾಮ! ಆದರಿಂದ ಅವನಲ್ಲಿ ಸಂದೇಹಪಡಲು ನಿರಾಕರಿಸುತ್ತಾನೆ!

ನಾಸ್ಮನ್ಮತೇ ರೋಚತೇ ತ್ವನ್ಮತಂ ತು
ಸರ್ವೇಷಾಂ ನಃ ಪೂಜ್ಯಮೇವಾಸ್ತು ತೇನ ।
ಇತ್ಯುಕ್ತ್ವಾ ತಂ ಕೇಶವಃ ಸೋದರಾಯ್ಯೈ
ಶುಶ್ರೂಷಸ್ವೇತ್ಯಾಹ ಸಂತಂ ಯತೀಂದ್ರಂ ॥೧೭೩॥

ಶ್ರೀಕೃಷ್ಣನೆಂದ, 'ನನ್ನ ಅಭಿಪ್ರಾಯದಲ್ಲಿ ನಿನ್ನ ಈ ನಿರ್ಣಯ ಸರಿ ಕಾಣುವುದಿಲ್ಲ. ಆದರೂ ನಮಗೆಲ್ಲರಿಗೂ ನಿನ್ನ ನಿರ್ಣಯ ಶಿರಸಾಧಾರ್ಯವಾದುದರಿಂದ ಹಾಗೇ ಆಗಲಿ.' ಹೀಗೆ ಹೇಳಿ ಶ್ರೀಕೃಷ್ಣ ಸುಭದ್ರೆಗೆ ಹೇಳಿದ, 'ಈ ಯತೀಶ್ವರ ಒಳ್ಳೆಯವ, ಇಲ್ಲಿ ಇರುತ್ತಾನೆ. ಅವನನ್ನು ಸೇವಿಸು' ಎಂದು.

ಅಣ್ಣ, ನೀನು ನಮಗೆಲ್ಲ ಹಿರಿಯ. ನಾನು ಸಣ್ಣವ. ನಿನಗೆ ಯಾವುದು ಸರಿಕಾಣುವುದೋ ಅದನ್ನು ನಾವು ನಡೆಸುವೆವು ಎನ್ನುತ್ತ ಕೃಷ್ಣ ಮುಂದೆ

ನಡೆಯಲಿರುವ ವಿದ್ಯಮಾನಗಳಿಗೆ ಬಲರಾಮನನ್ನೆ ಹೊಣೆಗಾರನನ್ನಾಗಿ ಮಾಡಿ ಶ್ರೀಕೃಷ್ಣ ತನ್ನ ಕಾರ್ಯಸಾಧಿಸಲು ಹೊರಟು ಸುಭದ್ರೆಗೆ ಹೇಳಿದ 'ಈ ಯತಿಯನ್ನು ಚೆನ್ನಾಗಿ ಸೇವೆಮಾಡಿ ಒಲಿಸಿಕೊಳ್ಳು, ಈತ ಒಳ್ಳೆಯವ' ಎಂದು 'ಸಂತಂ' ಎಂದರೆ ಎರಡೂ ಅರ್ಥ. ಈತ ಒಳ್ಳೆಯವ ಮತ್ತು ಈತ ಚಾತುರ್ಮಾಸ್ಯ ಕಾಲದಲ್ಲಿ ಇಲ್ಲಿ ಇರುತ್ತಾನೆ ಎಂದು.

ನಿತ್ಯಾಪ್ರಮತ್ತಾ ಸಾಧು ಸಂತೋಷಯೇತಿ
ಪ್ರೋಕ್ತಾ ತಥಾ ಸಾಕರೋತ್ ಸೋಽಪಿ ತತ್ರ ।
ಚಕ್ರೇ ಮಾಸಾನ್ ವಾರ್ಷಿಕಾನ್ ಸತ್ಕಥಾಭಿ-
ರ್ವಾಸಂ ವಾಕ್ಯಂ ಶ್ರದ್ದಧಾನೋ ಹರೇಸ್ತತ್ ॥೧೭೪॥

'ನಿತ್ಯವೂ ತಪ್ಪದೆ ಚೆನ್ನಾಗಿ ಇವನನ್ನು ಸಂತೋಷಪಡಿಸು' ಎಂದು ಕೃಷ್ಣ ಹೇಳಿದಾಗ ಸುಭದ್ರೆ ಹಾಗೇ ಮಾಡಿದಳು. ಅರ್ಜುನನೂ ಕೃಷ್ಣನಿತ್ತ ಆಶ್ವಾಸನೆಯನ್ನು ನಂಬಿ ಮಳೆಗಾಲದ ನಾಲ್ಕು ತಿಂಗಳ ಕಾಲ ಒಳ್ಳೆಯ ಮಾತುಕತೆಗಳಿಂದ ಸುಭದ್ರೆಯನ್ನು ರಮಿಸುತ್ತ ಅಲ್ಲಿ ವಾಸಮಾಡಿದ.

ಸಂಯಾಚಿತಃ ಫಲ್ಗುನೇನಾಹ ವಾಕ್ಯಂ
ಯದ್ ವಾಸುದೇವಸ್ತನ್ನ ಜಾನಾತಿ ಕಶ್ಚಿತ್ ।
ಋತೇ ಪಿತ್ರೋರ್ವಿಪೃಥೋಃ ಸಾತ್ಯಕೇರ್ವಾ
ಸುಭದ್ರಾಂ ತೇ ಪ್ರದದಾನೀತಿ ಸತ್ಯಂ ॥೧೭೫॥

ಅರ್ಜುನ ಯಾಚಿಸಿದಾಗ ಶ್ರೀಕೃಷ್ಣ ಸುಭದ್ರೆಯನ್ನು ಸತ್ಯವಾಗಿ ನಿನಗೇ ಕೊಡುವೆನೆಂದು ಮಾತುಕೊಟ್ಟಿದ್ದನ್ನು ತಂದೆತಾಯಿಗಳು ವಿಪೃಥು ಸಾತ್ಯಕಿ ಇವರನ್ನು ಹೊರತು ಇನ್ನಾರೂ ಅರಿತಿರಲಿಲ್ಲ.

ಮಹಾಭಾರತದಲ್ಲಿ ಅಕ್ರೂರ, ಉಗ್ರಸೇನ, ಸಾತ್ಯಕಿ, ಗದ, ಕೃಷ್ಣ, ರುಕ್ಮಿಣೀ, ಸತ್ಯಭಾಮೆ, ದೇವಕಿ, ರೋಹಿಣಿ, ವಸುದೇವ, ಪುರೋಹಿತ ಎಲ್ಲರೂ ಸೇರಿ ಅರ್ಜುನನ ವಿವಾಹದ ಬಗ್ಗೆ ಮಂತ್ರಾಲೋಚನೆ ಮಾಡುತ್ತಾರೆ. ಅದರಿಂದ 'ಇನ್ನಾರೂ ಅರಿತಿರಲಿಲ್ಲ' ಎಂದರೆ ಬಲರಾಮಾದಿಗಳು ಯಾರೂ ಅರಿತಿರಲಿಲ್ಲ ಎಂದು ಅಭಿಪ್ರೇತವಾಗಿದೆ.

ಅಸ್ತ್ರೇ ಶಸ್ತ್ರೇ ತತ್ತ್ವವಿದ್ಯಾಸು ಚೈವ
ಶಿಷ್ಯಃ ಶೈನೇಯೋ ವಾಸುದೇವೇಂದ್ರಸೂನ್ವೋಃ ।
ತಸ್ಮಾದಸ್ಮೈ ಕಥಯಾಮಾಸ ಕೃಷ್ಣಃ
ಸ್ವಶಿಷ್ಯತ್ವಾದ್ ವಿಪೃಥೋಶ್ಚಾಪಿ ಸರ್ವಂ ॥೧೭೬॥

ಅಸ್ತ್ರ ಶಸ್ತ್ರ ತತ್ವಜ್ಞಾನಗಳಲ್ಲಿ ಸಾತ್ಯಕಿ ಕೃಷ್ಣಾರ್ಜುನರಿಬ್ಬರಿಗೂ ಶಿಷ್ಯ. ಅದರಿಂದ ಅವನಿಗೆ ಕೃಷ್ಣ ಹೇಳಿದ್ದ. ವಿಪೃಥು ಕೃಷ್ಣನ ಶಿಷ್ಯನಾದ್ದರಿಂದ ಅವನಿಗೂ ಕೃಷ್ಣ ಹೇಳಿದ್ದ.

ನಗರ ರಕ್ಷಣೆಗಾಗಿ ಬಲರಾಮನಿಂದ ನೇಮಿಸಲ್ಪಟ್ಟಿದ್ದ ವಿಪೃಥು ಕೃಷ್ಣನ ಶಸ್ತ್ರ ವಿದ್ಯಾ ಶಿಷ್ಯ. ಅವನ ಸಹಕಾರವಿದ್ದರೆ ಮಾತ್ರ ಅರ್ಜುನ ಸುಭದ್ರೆಯನ್ನು ಅನಾಯಾಸವಾಗಿ ನಗರದಿಂದ ಹೊರಗೆ ಕರೆದುಕೊಂಡು ಹೋಗಬಲ್ಲ. ಅದರಿಂದ ಅವನಿಗೆ ಕೃಷ್ಣ ಮೊದಲೇ ತಾನು ಮಾಡಿದ್ದ ಸಂಕಲ್ಪವನ್ನು ತಿಳಿಸಿದ್ದ. ಈ ವಿಪೃಥು ಶ್ವಫಲ್ಕನ ತಮ್ಮನಾದ ಚಿತ್ರಕನೆಂಬ ಯಾದವನ ಮಗ. ಸೌಮ್ಯನೆಂಬ ಮರುತನ ಅಂಶಾವತಾರ.

ಅನ್ಯೇ ಸರ್ವೇ ವಾಸುದೇವಸ್ಯ ಪಾರ್ಥಾನ್
ಪ್ರಿಯಾನ್ನಿತ್ಯಂ ಜಾನಮಾನಾ ಅಪಿ ಸ್ಮ।
ರಾಮೇಣಾದಿಷ್ಟಾ ಉದ್ಧವೋಽಥಾಹುಕಾದ್ಯಾ
ಹಾರ್ದಿಕ್ಯಾದ್ಯಾ ನೈವ ದಿತ್ಸಂತಿ ಜಿಷ್ಣೋಃ ॥೧೭೭॥

ಉದ್ಧವ ಆಹುಕ ಕೃತವರ್ಮ ಮುಂತಾದ ಉಳಿದವರೆಲ್ಲರೂ ಪಾಂಡವರನ್ನು ಕೃಷ್ಣನಿಗೆ ಸದಾ ಪ್ರಿಯರೆಂದು ತಿಳಿದವರಾಗಿದ್ದರೂ ಕೂಡ ಬಲರಾಮನ ಆದೇಶಕ್ಕೆ ಬದ್ಧರಾಗಿದ್ದು ಸುಭದ್ರೆಯನ್ನು ಅರ್ಜುನನಿಗೆ ಕೊಡಲು ಒಪ್ಪುತ್ತಿರಲಿಲ್ಲ.

ದುರ್ಯೋಧನೇ ದಾತುಮಿಚ್ಛಂತಿ ಸರ್ವೇ
ರಾಮಪ್ರಿಯಾರ್ಥಂ ಜಾನಮಾನಾ ಹರೇಸ್ತತ್।
ಅಪ್ಯಪ್ರಿಯಂ ರಾಕ್ಷಸಾವೇಶಯುಕ್ತಾ
ಸ್ತಸ್ಮಾತ್ ಸರ್ವಾನ್ ವಂಚಯಾಮಾಸ ಕೃಷ್ಣಃ ॥೧೭೮॥

ಬಲರಾಮನ ಸಂತೋಷಕ್ಕಾಗಿ ಎಲ್ಲರೂ ಸುಭದ್ರೆಯನ್ನು ದುರ್ಯೋಧನನಿಗೇ ಕೊಡಲು ಬಯಸಿದ್ದರು. ಅದು ಕೃಷ್ಣನಿಗೆ ಇಷ್ಟವಲ್ಲ ಎಂದು ತಿಳಿದಿದ್ದರೂ ಅವರೆಲ್ಲರೂ ಆಗ ಅಸುರಾವೇಶಯುಕ್ತರಾಗಿದ್ದರು. ಅದರಿಂದ ಎಲ್ಲರನ್ನೂ ಕೃಷ್ಣ ವಂಚಿಸಿದ.

ಸುಭದ್ರಾ ಪ್ರಣಯ

ಪ್ರದ್ಯುಮ್ನಸಾಂಬಪ್ರಮುಖಾಶ್ಚ ವಂಚಿತಾ
ಯಯುಸ್ತೀರ್ಥಾರ್ಥಂ ರಾಮಯುಕ್ತಾಃ ಸಮಗ್ರಾಃ।
ಪಿಂಡೋದ್ಧಾರಂ ತತ್ರ ಮಹೋತ್ಸವೇಷು
ಸ್ಥಾವರ್ತಯತ್ಸು ಕ್ವಚಿದೂಚೇ ಸುಭದ್ರಾ ॥೧೭೯॥

ಪ್ರದ್ಯುಮ್ನ ಸಾಂಬ ಮುಂತಾದವರನ್ನೂ ಕೃಷ್ಣ ವಂಚಿಸಿದ. ಒಂದುದಿನ ಎಲ್ಲರೂ ಬಲರಾಮನೊಂದಿಗೆ ಪಿಂಡೋದ್ಧಾರ ಕ್ಷೇತ್ರಕ್ಕೆ ತೀರ್ಥಯಾತ್ರೆಗಾಗಿ ಹೋಗಿದ್ದರು. ಅಲ್ಲಿ

ದೊಡ್ಡ ಉತ್ಸವದಲ್ಲಿ ಎಲ್ಲರೂ ಪಾಲುಗೊಂಡಿದ್ದಾಗ ಇತ್ತ ದ್ವಾರಕೆಯಲ್ಲಿ ಸುಭದ್ರೆ ಅರ್ಜುನನ ಮುಂದೆ ಕೇಳಿದಳು.

ಚಾತುರ್ಮಾಸ್ಯ ಕಾಲ, ಸೀಮೋಲ್ಲಂಘನೆ ಸಲ್ಲದೆಂದು ಅರ್ಜುನ ಸನ್ಯಾಸಿ ಪಿಂಡೋದ್ಧಾರ ಕ್ಷೇತ್ರಕ್ಕೆ ಹೋಗದೆ ದ್ವಾರಕೆಯಲ್ಲಿಯೆ ಉಳಿದ. ಅವನ ಸೇವೆಗಾಗಿ ಸುಭದ್ರೆಯೂ ದ್ವಾರಕೆಯಲ್ಲಿಯೇ ಉಳಿದಳು. ಅದರಿಂದ ಇಬ್ಬರ ಮಾತುಕತೆಗೆ ಏನೂ ಅಡಚಣೆ ಇರಲಿಲ್ಲ. ಕೃಷ್ಣನ ಮುಖದಿಂದಲೇ ಪದೇಪದೇ ಅರ್ಜುನನ ಪ್ರಶಂಸೆ ಕೇಳಿ ಅರ್ಜುನನಲ್ಲಿ ಅನುರಕ್ತಳಾಗಿದ್ದ ಸುಭದ್ರೆ ಯತಿಯಿಂದ ಅರ್ಜುನನ ಬಗ್ಗೆ ತಿಳಿಯಬಯಸಿದಳು. ಹೀಗೇ ಹಸ್ತಿನಾವತಿ ಕಡೆಯಿಂದ ದ್ವಾರಕೆಗೆ ಬಂದವರನ್ನೆಲ್ಲ ವಿಚಾರಿಸಿ ಅರ್ಜುನನ ಬಗ್ಗೆ ಕೇಳಿ ಆನಂದಿಸುತ್ತಿದ್ದಳು ಸುಭದ್ರೆ.

ಯತೇ ತೀರ್ಥಾನ್ಯಾಚರನ್ ಬಾಂಧವಾಂಸ್ತ್ವ-
ಮದ್ರಾಕ್ಷೀರ್ನಃ ಕ್ವಚಿದಿಷ್ಟಾನ್ ಸ್ಮ ಪಾರ್ಥಾನ್ ।
ಕುಂತೀಂ ಕೃಷ್ಣಾಂ ಚೇತ್ಯಾಹ ಪೃಷ್ಟಃ ಸ ಪಾರ್ಥ
ಓಮಿತ್ಯೇಷಾಮಾಹ ಚಾನಾಮಯಂ ಸಃ ॥೧೮೦॥

'ಯತಿಯೆ, ನೀನು ತೀರ್ಥಾಟನೆ ಮಾಡುತ್ತ ನಮಗೆ ಬಂಧುಗಳೂ ಇಷ್ಟರೂ ಆದ ಪಾಂಡವರನ್ನು ಕುಂತಿಯನ್ನು ದ್ರೌಪದಿಯನ್ನು ಎಲ್ಲಿಯಾದರೂ ಕಂಡೆಯ?' ಹೀಗೆ ಸುಭದ್ರೆ ಕೇಳಿದಾಗ ಅರ್ಜುನ, 'ಹೌದು, ಕಂಡೆ' ನೆಂದ. 'ಅವರು ಕ್ಷೇಮದಿಂದ ಇದ್ದಾರೆ' ಎಂದ.

ಮೂಲದಲ್ಲಿ 'ಅನಾಮಯ' ಎಂದರೆ ಕ್ಷೇಮ. ಆದರೆ 'ಕ್ಷೇಮ' ವಿಚಾರಿಸುವುದು ವೈಶ್ಯರಲ್ಲಿ. ಬ್ರಾಹ್ಮಣರಲ್ಲಿ 'ಉಭಯ ಕುಶಲೋಪರಿ' ಕುಶಲವನ್ನು ಕೇಳಬೇಕು. ಕ್ಷತ್ರಿಯರಲ್ಲಿ 'ಅನಾಮಯ' ವಿಚಾರಿಸಬೇಕೆಂದು ವಿಧಿ -

ಬ್ರಾಹ್ಮಣಂ ಕುಶಲಂ ಪೃಚ್ಛೇತ್ ಕ್ಷತ್ರಬಂಧುಮನಾಮಯಂ ।
ವೈಶ್ಯಂ ಕ್ಷೇಮಂ ಸಮಾಗಮ್ಯ ಶೂದ್ರಮಾರೋಗ್ಯಮೇವ ಚ ॥

ಎಂದು ಕೂರ್ಮಪುರಾಣ ಮನುಸ್ಮೃತಿಗಳಲ್ಲಿ (2. 127) ಹೇಳಿದೆ. ಅದರಿಂದ ಪಾಂಡವರ 'ಅನಾಮಯ'ವನ್ನು ಅರ್ಜುನ ಸನ್ಯಾಸಿ ಹೇಳಿದ ಎನ್ನುತ್ತಾರೆ ಪ್ರಮಾಣ ಸಂಗ್ರಹಕಾರರು.

ಭೂಯಃ ಸಾವಾದೀದ್ ಭಗವನ್ನಿಂದ್ರಸೂನು-
ರ್ಗತಸ್ತೀರ್ಥಾರ್ಥಂ ಬ್ರಾಹ್ಮಣೇಭ್ಯಃ ಶ್ರುತೋ ಮೇ ।

ಕ್ವಚಿದ್ದೃಷ್ಟೋ ಭವತೇತ್ಯೋಮಿತಿ ಸ್ಮ
ಪಾರ್ಥೋಽಪ್ಯೂಚೇ ಕ್ವೇತಿ ಸಾಪೃಚ್ಛದೇನಂ ॥೧೮೧೧॥

ಸುಭದ್ರೆ ಪುನಃ ಕೇಳಿದಳು. ' ಪೂಜ್ಯನೆ ಅರ್ಜುನ ತೀರ್ಥಯಾತ್ರೆಗೆ ಹೋದನೆಂದು ನಾನು ಬ್ರಾಹ್ಮಣರಿಂದ ಕೇಳಿದ್ದೇನೆ. ಅವನನ್ನು ಎಲ್ಲಿಯಾದರೂ ನೋಡಿರುವೆಯ?' ಅರ್ಜುನನೆಂದ, 'ಹೌದು ನೋಡಿದ್ದೇನೆ' 'ಎಲ್ಲಿ?' ಎಂದಳು ಅವಳು.

'ಯತಿಯೆ, ನೀನು ಸುಳ್ಳು ಹೇಳುತ್ತಿ. ಏಕೆಂದರೆ ಅರ್ಜುನ ತೀರ್ಥಯಾತ್ರೆಗೆ ಹೋಗಿದ್ದಾನೆ ಎಂದು ಕೇಳಿದ್ದೇನೆ. ಎಲ್ಲ ಪಾಂಡವರನ್ನು ಎಲ್ಲಿ ನೋಡಿರುವಿ? ಅರ್ಜುನನನ್ನು ನೋಡಿರುವಿಯ? ಎಲ್ಲಿ?' ಎಂದಳು ಸುಭದ್ರೆ.

ಅತ್ರೈವೇತಿ ಸ್ಮಯಮಾನಂ ಚ ಪಾರ್ಥಂ
ಪುನಃಪುನಃ ಪರ್ಯಪೃಚ್ಛದ್ಭುಭಾಂಗೀ ।
ಸೋಽಪ್ಯಾಹೋನ್ಮತ್ತೇ ಸೋಽಸ್ಮಿ ಹೀತಿ ಸ್ಮಯಂಸ್ತಾಂ
ಫುಲ್ಲಾಕ್ಷೀ ತಂ ಸಾ ದದರ್ಶಾತಿಹೃಷ್ಟಾ ॥೧೮೨೧॥

'ಇಲ್ಲಿಯೆ' ಎಂದ ಅರ್ಜುನ ನಗುತ್ತ. ಆ ಮಂಗಳಾಂಗಿ 'ಎಲ್ಲಿ ಎಲ್ಲಿ' ಎಂದು ಪುನಃ ಪುನಃ ಕೇಳಿದಳು. 'ಹುಚ್ಚಿ! ಅವನೆ ನಾನು' ಎಂದ ಅರ್ಜುನ, ನಗುತ್ತ. ಆಗ ಸುಭದ್ರೆ ಆನಂದ ತುಂದಿಲಳಾಗಿ ಕಣ್ಣರಳಿಸಿ ಅವನನ್ನು ನೋಡಿದಳು.

ಇದಾದ ಬಳಿಕ ಮಹಾಭಾರತದಲ್ಲಿ ಸುಭದ್ರೆ ಕಾಮಜ್ವರದಿಂದ ಹಾಸಿಗೆ ಹಿಡಿಯುತ್ತಾಳೆ. ಕೃಷ್ಣ ವಸುದೇವ ದೇವಕಿ ಮುಂತಾದವರು ರಹಸ್ಯವಾಗಿ ಮದುವೆಯ ಬಗ್ಗೆ ಸಮಾಲೋಚನೆ ಮಾಡಿ ಅಂತರ್ವೇದಿಪದಲ್ಲಿ ಯಾದವರೆಲ್ಲರೂ ಸುಭದ್ರೆಯ ಆರೋಗ್ಯಕ್ಕಾಗಿ ಮೂವತ್ತನಾಲ್ಕು ದಿನಗಳ ಕಾಲ ಶಿವಪೂಜೆ ನಡೆಸಲು ಏರ್ಪಾಡು ಮಾಡಿದರು. ಬಳಿಕ ಎಲ್ಲ ಯಾದವರೂ ಅಂತರ್ವೇದಿಪಕ್ಕೆ ಹೋಗಿದ್ದಾಗ ಏಕಾಂತದಲ್ಲಿ ಅರ್ಜುನ ಸುಭದ್ರೆಯ ಮುಂದೆ ಮದುವೆಯ ಪ್ರಸ್ತಾಪ ಮಾಡುತ್ತಾನೆ.

ತತೋ ಹರ್ಷಾಲ್ಲಜ್ಜಯಾ ಚೋತ್ಫುಲಾಕ್ಷೀ
ಕಿಂಚಿನ್ನೋಚೇ ಪಾರ್ಥ ಏನಾಮುವಾಚ ।
ಕಾಮಾವಿಷ್ಟೇ ಮುಖ್ಯಕಾಲೋ ಹ್ಯಯಂ ನಾ-
ವುದ್ವಾಹಾರ್ಥೇಽಸ್ತ್ವಿತಿ ಸಾ ಚೈನಮಾಹ ॥೧೮೩೧॥

ನಾತಿಕ್ರಮೋ ವಾಸುದೇವಸ್ಯ ಯುಕ್ತ
ಸ್ತಸ್ಮಾತ್ತೇನ ಸ್ವಪಿತೃಭ್ಯಾಂ ಚ ದತ್ತಾಂ ।

ಯುಕ್ತೋ ನಿಜೈರ್ಬಂಧುಭಿಶ್ಚೋತ್ಸವೇ ಮಾಂ
ಸಮುದ್ವಹೇತ್ಯಥ ಕೃಷ್ಣಂ ಸ ದಧ್ಯೌ ॥೧೮೪೪॥

ಸುಭದ್ರೆ ಆನಂದದಿಂದಲೂ ಲಜ್ಜೆಯಿಂದಲೂ ಏನೂ ಹೇಳದೆ ಸುಮ್ಮನಿದ್ದಳು. ಅನುರಾಗತುಂಬಿದ ಅರ್ಜುನನೆ ಅವಳಿಗೆ ಹೇಳಿದ, 'ನಮ್ಮಿಬ್ಬರಲ್ಲಿ ಅನುರಾಗತುಂಬಿರುವ ಈ ಸಮಯವೇ ನಮ್ಮ ಗಾಂಧರ್ವ ವಿವಾಹಕ್ಕೆ ಮುಖ್ಯವಾದ ಶುಭ ಸಮಯವಾಗಲಿ' ಎಂದು. ಸುಭದ್ರೆ ಹೇಳಿದಳು, 'ಕೃಷ್ಣನನ್ನು ಬಿಟ್ಟು ನಾವೇನನ್ನೂ ಮಾಡಬಾರದು. ಕೃಷ್ಣನೂ ನನ್ನ ತಂದೆತಾಯಿಗಳೂ ನನ್ನನ್ನು ನಿನಗೆ ಕೊಟ್ಟ ಮೇಲೆ ನೀನು ನಿನ್ನ ಬಂಧುಗಳೊಂದಿಗೆ ವಿವಾಹೋತ್ಸವದಲ್ಲಿ ನನ್ನನ್ನು ಮದುವೆಯಾಗು' ಎಂದು. ಆಗ ಅರ್ಜುನ ಕೃಷ್ಣನನ್ನು ಸ್ಮರಿಸಿದ.

ಮಹಾಭಾರತದಲ್ಲಿ ಅರ್ಜುನ ಹೇಳುತ್ತಾನೆ, 'ಇಂದೇ ಸೂರ್ಯಾಸ್ತಮಯವಾದ ಬಳಿಕ ರಾತ್ರಿಯಲ್ಲಿ ವಿವಾಹಕ್ಕೆ ಒಳ್ಳೆಯ ಮುಹೂರ್ತವಿದೆ. ಉತ್ತರಾಯಣ, ವೈಶಾಖ ಶುದ್ಧ ತೃತೀಯಾ ಹಸ್ತಾನಕ್ಷತ್ರ ಮಕರ ಲಗ್ನ ಬವಕರಣ ಮೈತ್ರ ಮುಹೂರ್ತ ಒದಗಿ ಬರುತ್ತಿದೆ. ಅದರಿಂದ ನಾವಿಬ್ಬರೇ ಗುಟ್ಟಾಗಿ ಗಾಂಧರ್ವ ವಿವಾಹ ಮಾಡಿಕೊಳ್ಳೋಣ' ಎಂದು. ಸುಭದ್ರೆ ಕೃಷ್ಣನನ್ನು ನೆನೆಯುತ್ತ ಸುಮ್ಮನಿದ್ದಳು. ಅರ್ಜುನ ಅವಳ ಮನೋಗತವನ್ನು ಅರ್ಥಮಾಡಿಕೊಂಡ. ತಂದೆತಾಯಿಗಳೇ ವಿಧ್ಯುಕ್ತವಾಗಿ ತನ್ನನ್ನು ಕನ್ಯಾದಾನ ಪೂರ್ವಕ ವಿವಾಹ ಮಾಡಿಸಬೇಕು' ಎಂದು. ಅದಕ್ಕೆ ಅರ್ಜುನ ಕೃಷ್ಣನನ್ನು ಸ್ಮರಿಸಿದ.

ಸುಭದ್ರಾ ಪರಿಣಯ

ಮಾತಾಪಿತೃಭ್ಯಾಂ ಸಹಿತೋಽಥ ಕೃಷ್ಣ-
ಸ್ತತ್ಕ್ಷಣಾದ್ವಾಸವಶ್ಚಾಥ ಶಚ್ಯಾ ।
ಸಮಂ ಮುನೀಂದ್ರೈಃ ಫಲ್ಗುನೇನ ಸ್ಮೃತಃ ಸ
ತತ್ಕ್ಷಣಾಗಾತ್ ಪ್ರೀತಿಯುಕ್ತೋ ನಿಶಾಯಾಂ ॥೧೮೪೫॥

ಆಗಲೆ ತಂದೆತಾಯಿಗಳೊಂದಿಗೆ ಕೃಷ್ಣ ಅಲ್ಲಿಗೆ ಬಂದ. ಅರ್ಜುನ ದೇವೇಂದ್ರನನ್ನೂ ನೆನೆದ. ದೇವೇಂದ್ರ ಅದೇ ರಾತ್ರಿಯಲ್ಲಿ ಪ್ರೀತಿಯಿಂದ ಶಚೀ ಸಮೇತನಾಗಿ ವಸಿಷ್ಠ ನಾರದಾದಿ ಮುನೀಂದ್ರರಿಂದೊಡಗೂಡಿ ಬಂದ.

ಕೃಷ್ಣಸ್ತತಃ ಪುರುಹೂತೇನ ಸಾಕಂ
ತಯೋರ್ವಿವಾಹಂ ಕಾರಯಾಮಾಸ ಸಮ್ಯಕ್ ।
ಮಾತಾಪಿತೃಭ್ಯಾಂ ಸಾತ್ಯಕಿನಾಪಿ ಯುಕ್ತೋ
ಮಹೋತ್ಸವೇಽನ್ಯಾವಿದಿತೇ ಮುನೀಂದ್ರೈಃ ॥೧೮೪೬॥

ಶ್ರೀಕೃಷ್ಣ ಇಂದ್ರನೊಡನೆ, ತಂದೆತಾಯಿಗಳೊಡನೆ, ಸಾತ್ಯಕಿಯೊಡನೆ ಮತ್ತು ಮುನೀಂದ್ರರೊಡನೆ ಕೂಡಿ ಬೇರೆ ಯಾರಿಗೂ ತಿಳಿಯದಂಥ ಮುಹೋತ್ಸವದಲ್ಲಿ ಸುಭದ್ರಾರ್ಜುನರಿಗೆ ಚೆನ್ನಾಗಿ ವಿವಾಹ ನಡೆಸಿದ.

ಆ ವಿವಾಹೇಷ್ಟಿಯಲ್ಲಿ ಕಶ್ಯಪ ಮಹರ್ಷಿ ಹೋತೃ ಎನಿಸಿದ. ನಾರದಾದಿಗಳು ಸದಸ್ಯರು. ಗಂಧರ್ವಾಪ್ಸರ ಚಾರಣ ಗುಹ್ಯಕಾದಿಗಳೆಲ್ಲ ಅಲ್ಲಿ ನೆರೆದಿದ್ದರು. ಬಲರಾಮನಿಗೆ ಆ ರಾತ್ರಿ ಗಾಢನಿದ್ದೆ. ಮದುಮಗನಾದ ಅರ್ಜುನನನ್ನು ದೇವೇಂದ್ರ ಅಲಂಕರಿಸಿದ. ಸುಭದ್ರೆಯನ್ನು ಶಚೀದೇವಿ ಅಲಂಕರಿಸಿದಳು. ವಿವಾಹ ವೈಭವದಿಂದ ನಡೆಯಿತು.

ತತಃ ಕೃಷ್ಣಃ ಸ್ಯಂದನಂ ಫಲ್ಗುನಾರ್ಥೇ
ನಿಧಾಯ ಸ್ವಂ ಪ್ರಯಯೌ ತದ್ರಜನ್ಯಾಂ।
ಗತೇಽಥ ಶಕ್ರೇ ರಥಮಾರುರೋಹ
ಪ್ರಾತಃ ಪಾರ್ಥಃ ಸಹಿತೋ ಭಾರ್ಯಯೈವ ॥೧೮೭॥

ಬಳಿಕ ಶ್ರೀಕೃಷ್ಣ ತನ್ನ ರಥವನ್ನು ಅರ್ಜುನನಿಗಾಗಿ ಅಲ್ಲಿಯೆ ಇರಿಸಿ ಆ ರಾತ್ರಿಯೆ ಪಿಂಡೋದ್ಧಾರಕ್ಷೇತ್ರಕ್ಕೆ ಹೊರಟು ಹೋದ. ಇಂದ್ರನೂ ತನ್ನ ಲೋಕಕ್ಕೆ ಹೊರಟುಹೋದ. ಬೆಳಿಗ್ಗೆ ಅರ್ಜುನ ಸುಭದ್ರೆಯೊಂದಿಗೆ ರಥವನ್ನೇರಿದ.

ಮಹಾವ್ರತ ಒಂದರ ಉದ್ಯಾಪನೆಗಾಗಿ ರಥವನ್ನು ಸಜ್ಜುಮಾಡಿಕೊಡಿರೆಂದು ಸುಭದ್ರೆ ಸಖಿಯರಿಗೆ ಹೇಳಿದಾಗ ಅವರು ಸಂತೋಷದಿಂದ ಶೈಬ್ಯ ಸುಗ್ರೀವಗಳೆಂಬ ಕುದುರೆಗಳಿಂದ ಯುಕ್ತವಾದ ಕೃಷ್ಣನ ರಥವನ್ನು ಆಯುಧ ಧ್ವಜಪತಾಕೆಗಳಿಂದ ಸಜ್ಜುಗೊಳಿಸಿ ತಂದರು. ಸುಭದ್ರೆ ಬ್ರಾಹ್ಮಣರಿಗೆ ಅನ್ನ ದಕ್ಷಿಣಾದಿಗಳನ್ನಿತ್ತು ಆಶೀರ್ವಾದ ಪಡೆದು ರಥವೇರಿದಳು. ಅವಳು ಹಿಂದೆಯೆ ಅರ್ಜುನನಿಗೆ ಹೇಳಿದ್ದಳು. ಸಾರಥಿಯಾಗಿ ರಥ ನಡೆಸುವುದರಲ್ಲಿ ತಾನು ಅದ್ವಿತೀಯಳು ಎಂದು. ಅದರಿಂದ ಅವಳು ರಥವೇರಿ ಕುದುರೆ ಲಗಾಮು ಹಿಡಿದಾಗ ಅರ್ಜುನ ತನ್ನ ಯತಿವೇಷವನ್ನು ಕಳಚಿ ಕವಚ ಕಿರೀಟಗಳನ್ನು ಧರಿಸಿ ಧನುರ್ಧಾರಿಯಾಗಿ ರಥವೇರಿದ. ಇದು ಎಲ್ಲರಿಗೂ ಅನಿರೀಕ್ಷಿತವಾಗಿತ್ತು.

ಅರ್ಜುನನ ನಿರ್ಗಮನ

ಸರ್ವಾಯುಧೈರ್ಯುಕ್ತರಥೇ ಸಮಾಸ್ಥಿತೇ
ಗೃಹೀತಚಾಪೇ ಫಲ್ಗುನೇ ದ್ವಾರವತ್ಯಾಂ।
ಆಸೀದ್ರಾವಃ ಕಿಂ ಕಿಮೇತತ್ತ್ರಿದಂಡೀ
ಕನ್ಯಾಂ ಹರತ್ಯೇಷ ಕೋದಂಡಪಾಣಿಃ ॥೧೮೮॥

ಸಕಲ ಆಯುಧಗಳಿಂದ ಯುಕ್ತವಾದ ಆ ರಥದಲ್ಲಿ ಧನುರ್ಧಾರಿಯಾಗಿ ಅರ್ಜುನ ನಿಂತಾಗ ದ್ವಾರಕೆಯಲ್ಲಿ ಕೋಲಾಹಲವೆದ್ದಿತು- 'ಏನು ಏನಿದು? ತ್ರಿದಂಡಿ ಸಂನ್ಯಾಸಿ ದಂಡ ಬಿಟ್ಟು ಕೋದಂಡಪಾಣಿಯಾಗಿ ಕನ್ಯೆಯನ್ನು ಅಪಹರಿಸುತ್ತಿದ್ದಾನೆ!' ಎಂದು.

ತತಸ್ತು ತಂ ಸತನುತ್ರಂ ಮಹೇಂದ್ರ-
ದತ್ತೇ ದಿವ್ಯೇ ಕುಂಡಲೇ ವಾಸಸೀ ಚ ।
ದಿವ್ಯಾನಿ ರತ್ನಾನಿ ವಿಭೂಷಣಾನಿ
ದೃಷ್ಟ್ವಾ ಬಿಭ್ರಾಣಂ ರಕ್ಷಿಣೋಽವಾರಯನ್ ಸ್ಮ ॥೧೮೯॥

ಮಹೇಂದ್ರ ನೀಡಿದ್ದ ದಿವ್ಯ ಕುಂಡಲಗಳನ್ನೂ ವಸ್ತ್ರಗಳನ್ನೂ ದಿವ್ಯ ರತ್ನಾಭರಣಗಳನ್ನೂ ಧರಿಸಿ ಕವಚವನ್ನು ತೊಟ್ಟಿದ್ದ ಅರ್ಜುನನನ್ನು ನೋಡಿ ನಗರ ರಕ್ಷಕರು ತಡೆದರು.

ತತಃ ಸ ಆಬದ್ಧತಲಾಂಗುಲಿತ್ರಃ
ಸತೂಣೀರಶ್ಚಾಪಮಾಯಮ್ಯ ಬಾಣೈಃ ।
ಚಕ್ರೇಽಂತರಿಕ್ಷಂ ಪ್ರದಿಶೋ ದಿಶಶ್ಚ
ನಿರಂತರಂ ಶಿಕ್ಷಯಾ ವಿದ್ಯಯಾ ಚ ॥೧೯೦॥

ಅಂಗೈ ಬೆರಳುಗಳ ಕವಚವನ್ನು ತೊಟ್ಟು ಬತ್ತಳಿಕೆಯನ್ನು ಧರಿಸಿದ ಅರ್ಜುನ ಬಿಲ್ಲನ್ನೆಳೆದು ಬಾಣಗಳಿಂದ ಅಂತರಿಕ್ಷವನ್ನೂ ದಿಕ್ಕು ವಿದಿಕ್ಕುಗಳನ್ನೂ ಅಭ್ಯಾಸ ಬಲ ವಿದ್ಯಾಬಲಗಳಿಂದ ಪೂರ್ತಿಯಾಗಿ ತುಂಬಿಸಿ ಬಿಟ್ಟ.

ಚಕ್ರೇ ಸಾರಥ್ಯಂ ಕೇಶವೇನೈತದರ್ಥಂ
ಸುಶಿಕ್ಷಿತಾ ತಸ್ಯ ಸಮ್ಯಕ್ ಸುಭದ್ರಾ ।
ತಯಾ ಪಾರ್ಥೋಽವಾರಿತೋ ನೈವ ಕಂಚಿತ್
ಭಿನ್ನತ್ವಚಂ ಕೃತವಾನ್ ಕ್ರೀಡಮಾನಃ ॥೧೯೧॥

ಸುಭದ್ರೆಯೆ ಅರ್ಜುನನಿಗೆ ಚೆನ್ನಾಗಿ ಸಾರಥ್ಯ ಮಾಡಿದಳು. ಇದಕ್ಕಾಗಿಯೆ ಕೃಷ್ಣ ಅವಳಿಗೆ ಒಳ್ಳೆಯ ಶಿಕ್ಷಣ ನೀಡಿದ್ದ. ಅವಳು ತಡೆದುದರಿಂದ ಅರ್ಜುನ ಯಾರಿಗೂ ಮೈಯಲ್ಲಿ ಗಾಯ ಮಾಡಲಿಲ್ಲ. ಆಟವಾಡಿದ.

ಸುಭದ್ರೆ ತಾನು ಸಮಸ್ತ ಯಾದವರ ವಿನಾಶಕ್ಕೆ ಕಾರಣಳಾದಳೆಂದಾಗ ಬಾರದು. ಅದರಿಂದ ಯಾರನ್ನೂ ಕೊಲ್ಲಬೇಡ ಎಂದು ಅರ್ಜುನನನ್ನು ಬೇಡಿಕೊಂಡಳು. ಅರ್ಜುನನ ಧನುರ್ವಿದ್ಯೆ ವಿಚಿತ್ರ. ಯಾರಿಗೂ ಮೈಗಾಯ ಮಾಡದೆ ಎಲ್ಲರನ್ನೂ ಆಟವಾಡುತ್ತಲೆ ಗೆದ್ದ.

ಸುಶಿಕ್ಷಯಾತ್ಯದ್ಭುತಯಾ ಶರೌಘೈ
ರ್ವಿದ್ರಾವ್ಯ ತಾನ್ ಭೀಷಯಿತ್ವೈವ ಸರ್ವಾನ್ ।

ನಿರ್ಗತ್ಯ ಪುರ್ಯಾ ವಿಪೃಥುಂ ದದರ್ಶ
ರಾಮೇಣ ಪುರ್ಯಾ ರಕ್ಷಣೇ ಸನ್ನಿಯುಕ್ತಂ ॥೧೯೨॥

ಅತ್ಯದ್ಭುತವಾದ ಅಭ್ಯಾಸಬಲದಿಂದ ಬಾಣಸಮೂಹಗಳ ಮೂಲಕ ಯಾದವ ಸೈನಿಕರೆಲ್ಲರನ್ನೂ ಅಂಜಿಸಿಯೆ ಓಡಿಸಿದ, ಅರ್ಜುನ. ನಗರದಿಂದ ಹೊರಗೆ ಬರುತ್ತ ಅಲ್ಲಿ ನಗರ ರಕ್ಷಣೆಗಾಗಿ ಬಲರಾಮನಿಂದ ನೇಮಿಸಲ್ಪಟ್ಟಿದ್ದ ವಿಪೃಥುವನ್ನು ಕಂಡ.

ಪ್ರಿಯಂ ಕುರ್ವನ್ನಿವ ರಾಮಸ್ಯ ಸೋಽಪಿ
ವ್ಯಾಜೇನ ಪಾರ್ಥಂ ಸೇನಯೈವಾವೃಣೋತ್ತಂ।
ಕೃಷ್ಣಾದೇಶಾನ್ನೈವ ಪಾರ್ಥಸ್ಯ ಚಕ್ರೇ
ಸಮ್ಯಗ್‌ರೋಧಂ ಯುಯುಧೇ ಚ ಚ್ಛಲೇನ ॥೧೯೩॥

ವಿಪೃಥು ಬಲರಾಮನಿಗೆ ಪ್ರಿಯವಾದುದನ್ನೆ ಮಾಡುವಂತೆ ತೋರಿಕೊಂಡು ನೆಪಮಾತ್ರಕ್ಕೆ ಅರ್ಜುನನನ್ನು ಸೈನ್ಯದಿಂದ ಸುತ್ತುವರಿದ. ಕೃಷ್ಣನ ಆಜ್ಞೆ ಇದ್ದುದರಿಂದ ಅರ್ಜುನನಿಗೆ ಬಲವಾಗಿ ವಿರೋಧ ಮಾಡಲಿಲ್ಲ. ನೆಪಮಾತ್ರಕ್ಕೆ ಯುದ್ಧ ಮಾಡಿದ.

ಏಕೋ ಹ್ಯಸೌ ಮರುತಾಂ ಸೌಮ್ಯನಾಮಾ
ಶುಶ್ರೂಷಾರ್ಥಂ ವಾಸುದೇವಸ್ಯ ಜಾತಃ।
ತಂ ಯಾದವಂ ಶರವರ್ಷೈರ್ವವರ್ಷ
ಯಥಾ ಕ್ಷತಂ ನ ಭವೇತ್ ಸವ್ಯಸಾಚೀ ॥೧೯೪॥

ವಿಪೃಥು ಮರುತ್ತುಗಳಲ್ಲಿ ಒಬ್ಬ, ಸೌಮ್ಯ ಎಂಬ ಹೆಸರಿನವನು. ಕೃಷ್ಣನ ಸೇವೆಗಾಗಿ ಅವತರಿಸಿದವನು. ಅರ್ಜುನ ಅವನಿಗೆ ಒಂದಿಷ್ಟೂ ಗಾಯವಾಗದಂತೆ ಅವನಮೇಲೆ ಬಾಣಗಳ ಮಳೆಗರೆದ.

ನಿರಾಯುಧಂ ವಿರಥಂ ಚೈವ ಚಕ್ರೇ
ಪಾರ್ಥಃ ಸೇನಾಂ ತಸ್ಯ ನೈವಾಹನಚ್ಚ।
ದೃಷ್ಟ್ವಾ ಶರಾಂಸ್ತಸ್ಯ ತೀಕ್ಷ್ಣಾಂಸ್ತ್ವಚೋಽಪಿ
ನಚ್ಛೇದಕಾನ್ ವಿಪೃಥುಃ ಸಂತುತೋಷ ॥೧೯೫॥

ಅರ್ಜುನ ವಿಪೃಥುವನ್ನು ನಿರಾಯುಧನನ್ನಾಗಿಯೂ ವಿರಥನನ್ನಾಗಿಯೂ ಮಾಡಿದ. ಆದರೆ ಅವನ ಸೈನ್ಯವನ್ನು ನಾಶಮಾಡಲಿಲ್ಲ. ಅರ್ಜುನನ ತೀಕ್ಷ್ಣ ಬಾಣಗಳು ಚರ್ಮವನ್ನು ಕೂಡ ಗಾಯಗೊಳಿಸದಿರುವುದನ್ನು ಕಂಡು ವಿಪೃಥು ಸಂತುಷ್ಟನಾದ.

ಶಿಕ್ಷಾಂ ಪಾರ್ಥಸ್ಯಾಧಿಕಾಂ ಮಾನಯಾನ
ಉಪೇತ್ಯ ಪಾರ್ಥಂ ಚ ಶಶಂಸ ಸರ್ವಾಂ।
ಆಜ್ಞಾಂ ವಿಷ್ಣೋಃ ಸನ್ನಿಯುದ್ಧ್ಯನ್ನಿವಾಸ್ಮೈ
ಕೃತ್ತಾಯುಧಃ ಫಲ್ಗುನೇನೈವ ಪೂರ್ವಂ ॥೧೯೬॥

ವಿಪೃಥು ತನ್ನ ಆಯುಧಗಳೆಲ್ಲವೂ ತುಂಡಾದಾಗ ಅರ್ಜುನನೊಡನೆ ಮುಷ್ಟಿಯುದ್ಧಕ್ಕೆ ಹೊರಟವನಂತೆ ಅವನ ಬಳಿಗೆ ಬಂದ. ವಸ್ತುತಃ ಅರ್ಜುನನ ಉತ್ತಮವಾದ ಶಸ್ತ್ರಾಭ್ಯಾಸ ಕೌಶಲವನ್ನು ಅಭಿನಂದಿಸುವುದಕ್ಕಾಗಿ ಬಂದಿದ್ದ. ಹಾಗೆ ಬಂದು ಕೃಷ್ಣನ ಎಲ್ಲ ಆಜ್ಞೆಯನ್ನೂ ತಿಳಿಸಿದ.

ನನ್ನ ರಥದಿಂದಲೆ ಅರ್ಜುನ ಪ್ರಯಾಣ ಮಾಡಲಿ ಬಿಡು, ತಡೆಯಬೇಡ ಎಂದು ಕೃಷ್ಣ ವಿಪೃಥುವಿಗೆ ಆಜ್ಞೆ ನೀಡಿದ್ದ.

ತತಃ ಪರಾಜಿತವಚ್ಛೀಘ್ರಮೇತ್ಯ
ಶಶಂಸ ಸರ್ವಂ ಹಲಿನೇಽಥ ಸೋಽಪಿ ।
ಪ್ರದ್ಯುಮ್ನಸಾಂಬಾದಿಯುತೋಽಥ ಕೋಪಾ-
ದಾಯಾತ್ ಪುರೀಂ ಹಂತುಕಾಮೋಽರ್ಜುನಂ ಚ ॥೧೯೭॥

ಬಳಿಕ ವಿಪೃಥು ಪರಾಜಿತನಂತೆ ಬೇಗನೆ ಪಿಂಡೋದ್ಧಾರಕ್ಕೆ ಬಂದು ಬಲರಾಮನಿಗೆ ಎಲ್ಲವನ್ನೂ ಹೇಳಿದ. ಬಲರಾಮ ಕೋಪದಿಂದ ಅರ್ಜುನನನ್ನು ಕೊಲ್ಲಲು ಬಯಸಿ ಪ್ರದ್ಯುಮ್ನ ಸಾಂಬ ಮುಂತಾದವರೊಂದಿಗೆ ದ್ವಾರಕೆಗೆ ಬಂದ.

ಯಾದವರಿಗೆ ಸಾಂತ್ವನ

ಕೃಷ್ಣೋಽಪಿ ಸರ್ವಂ ವಿಪೃಥೋರ್ನಿಶಮ್ಯ
ಪ್ರಾಪ್ತಃ ಸುಧರ್ಮಾಂ ವಿಮನಾ ಇವಾಸೀತ್ ।
ಅವಾಙ್ಮುಖಸ್ತತ್ರ ಯದುಪ್ರವೀರಾಃ
ಪ್ರದ್ಯುಮ್ನಾದ್ಯಾ ಆಹುರುಚ್ಚೈರ್ನದಂತಃ ॥೧೯೮॥

ಶ್ರೀಕೃಷ್ಣನೂ ವಿಪೃಥುವಿನಿಂದ ಎಲ್ಲವನ್ನೂ ಕೇಳಿ ಸುಧರ್ಮ ಸಭೆಗೆ ಬಂದ. ಬಲು ಬೇಸರಗೊಂಡವನಂತೆ ಮುಖತಗ್ಗಿಸಿ ಕುಳಿತ. ಪ್ರದ್ಯುಮ್ನ ಮುಂತಾದ ಯಾದವ ವೀರರು ದೊಡ್ಡ ಧ್ವನಿಯಿಂದ ಗರ್ಜಿಸುತ್ತ ನುಡಿದರು.

ಇದು ಮುಖ ತಗ್ಗಿಸಿ ಚಿಂತಿಸುತ್ತ ಕುಳಿತುಕೊಳ್ಳುವ ಸಮಯವಲ್ಲ. ನಾವು ಶೂರರು, ಬೇಗನೆ ಕಾರ್ಯತತ್ಪರರಾಗಬೇಕು ಎಂದು ಗರ್ಜಿಸಿದರು.

ಮಾಯಾವ್ರತಂ ತಂ ವಿನಿಹತ್ಯ ಶೀಘ್ರಂ
ವಯಂ ಸುಭದ್ರಾಮಾನಯಾಮ ಕ್ಷಣೇನ ।
ಇತ್ಯುಕ್ತವಾಕ್ಯಾನವದದ್ ಬಲಸ್ಥಾನ್
ಕೃಷ್ಣಾಜ್ಞಯಾ ಯಾಂತು ನ ಸ್ವೇಚ್ಛಯೈವ ॥೧೯೯॥

'ಕಪಟವನ್ನೆ ವ್ರತವಾಗಿಟ್ಟುಕೊಂಡಿರುವ ಆ ಅರ್ಜುನನನ್ನು ನಾವು ಕೊಂದು ಬೇಗನೆ

ಕ್ಷಣದಲ್ಲಿ ಸುಭದ್ರೆಯನ್ನು ತರೋಣ' ಎಂದರು. ಅವರು ಹೀಗೆ ಹೇಳಿದಾಗ ಬಲರಾಮ ಅವರಿಗೆ 'ಕೃಷ್ಣನ ಆಜ್ಞೆಪಡೆದೇ ಹೊರಡಿರಿ. ಸ್ವೇಚ್ಛೆಯಿಂದಲ್ಲ' ಎಂದ.

'ನೀವು ಬುದ್ಧಿಶೂನ್ಯರು. ಕೃಷ್ಣ ಸುಮ್ಮನಿರುವಾಗ ನೀವೇಕೆ ವ್ಯರ್ಥ ಕೂಗಾಡುವಿರಿ? ಅವನು ತನ್ನ ಅಭಿಪ್ರಾಯ ತಿಳಿಸಲಿ. ಬಳಿಕ ಯಾವುದು ಯುಕ್ತವಾಗುವುದೋ ಅದನ್ನು ಮಾಡಿ' ಎನ್ನುತ್ತಾನೆ ಬಲರಾಮ.

ಜ್ಞಾತವ್ಯಮೇತಸ್ಯ ಮತಂ ಪುರಸ್ತಾತ್
ಹರೇರ್ವಿರೋಧೇ ನ ಜಯೋ ಭವೇದ್ವಃ।
ಇತ್ಯುಕ್ತವಾಕ್ಯೇ ಹಲಿನಿ ಸ್ಮ ಸರ್ವೇ
ಪಪ್ರಚ್ಛುರಾನಮ್ಯ ಜನಾರ್ದನಂ ತಂ ॥೨೦೦॥

'ಮೊದಲು ಕೃಷ್ಣನ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕು. ಅವನ ಸಮ್ಮತಿ ಇಲ್ಲದಿದ್ದಲ್ಲಿ ನಿಮಗೆ ಕಾರ್ಯಜಯವಾಗುವುದಿಲ್ಲ'. ಹೀಗೆ ಬಲರಾಮ ಹೇಳಿದಾಗ ಎಲ್ಲರೂ ಕೃಷ್ಣನಿಗೆ ನಮಿಸಿ ಕೇಳಿದರು.

ನಾನು ಕೃಷ್ಣನ ಮಾತನ್ನು ಕೇಳದಿದ್ದಕ್ಕೆ ಈ ದುರವಸ್ಥೆ ಬಂದಿತು. ಈಗ ನನ್ನ ಬುದ್ಧಿಗೆ ಏನೂ ತೋಚುತ್ತಿಲ್ಲ. ಕೃಷ್ಣನೇ ಹೇಳಬೇಕು ಎನ್ನುತ್ತಾನೆ ಬಲರಾಮ.

ಅಥಾಬ್ರವೀದ್ವಾಸುದೇವೋಽಮಿತೌಜಾಃ
ಶೃಣ್ವಂತು ಸರ್ವೇ ವಚನಂ ಮದೀಯಂ।
ಪುರೈವೋಕ್ತಂ ತನ್ಮಯಾ ಕನ್ಯಕಾಯಾ
ಮಾಯಾವ್ರತೋಽಸೌ ನಾರ್ಹತಿ ಸನ್ನಿಧಿಸ್ಥಿತಿಂ ॥೨೦೧॥

ಬಳಿಕ ಅಮಿತಶಕ್ತಿ ಉಳ್ಳ ಕೃಷ್ಣನುಡಿದ, 'ಎಲ್ಲರೂ ನನ್ನ ಮಾತನ್ನು ಕೇಳಿ, ಮೊದಲೆ ನಾನು ಹೇಳಿದ್ದೆ, ಕಪಟ ವ್ರತವನ್ನು ತೊಟ್ಟ ಈ ಯತಿ ಕನ್ಯೆಯ ಬಳಿ ಇರಲು ತಕ್ಕವನಲ್ಲ ಎಂದು.

ತಾಂ ಮೇ ವಾಚಂ ನಾಗ್ರಹೀದಗ್ರಜೋಽಯಂ
ಬಹೂನ್ ದೋಷಾನ್ ವ್ಯಾಹರತೋಽಪ್ಯತೋ ಮಯಾ।
ಅನುಲ್ಲಂಘ್ಯತ್ವಾದಗ್ರಜೋಽನುಪ್ರವೃತ್ತಃ
ಕನ್ಯಾಗೃಹೇ ವಾಸನೇ ಕೂಟಬುದ್ಧೇಃ ॥೨೦೨॥

'ನಾನು ಅದರಲ್ಲಿ ಬಹಳ ತೊಂದರೆಗಳಿವೆ ಎಂದು ಹೇಳುತ್ತಿದ್ದರೂ ನನ್ನ ಆ ಮಾತನ್ನು ಅಣ್ಣ ಒಪ್ಪಲಿಲ್ಲ. ಅದರಿಂದ ಅಣ್ಣನ ಅಭಿಪ್ರಾಯವನ್ನು ಮೀರಲಾಗದೆಂದು ನಾನು ಕಪಟ ಬುದ್ಧಿಯವನಾದ ಅರ್ಜುನನನ್ನು ಕನ್ಯಾಗೃಹದ ಬಳಿ ಇರಿಸಲು ಮುಂದಾದೆ.

ಅತೀತಶ್ಚಾಯಂ ಕಾರ್ಯಯೋಗೋಽಸಮಕ್ಷಂ
ಹೃತಾ ಕನ್ಯಾ ನೋಽತ್ರ ಕಾ ಮಾನಹಾನಿಃ।

ಭೂಯಸ್ತರಾಂ ಮಾನಿನಸ್ತಸ್ಯ ಸಾ ಸ್ಯಾತ್
ಜ್ಞಾತಾ ಚ ವೋ ವಿಪೃಥೋಃ ಪಾರ್ಥತಾಸ್ಯ ॥೨೦೩॥

'ಈಗ ಕಾರ್ಯ ಮಿಂಚಿಹೋಯಿತು. ನಮ್ಮ ಅನುಪಸ್ಥಿತಿಯಲ್ಲಿ ಆತ ಕನ್ಯೆಯನ್ನು ಅಪಹರಿಸಿದ್ದಾನೆ. ಆದರೂ ಅದರಿಂದ ನಮಗೆ ಏನು ಮಾನಹಾನಿಯಾದಂತಾಯಿತು? ಬಹಳ ಅಭಿಮಾನಿಯಾದ ಅವನಿಗೇ ಮಾನಹಾನಿಯಾದೀತು. ಅವನು ಅರ್ಜುನನೆಂಬುದು ವಿಪೃಥುವಿನಿಂದ ನಿಮಗೇ ಗೊತ್ತಾಗಿದೆ.

ನಮ್ಮ ಅನುಪಸ್ಥಿತಿಯಲ್ಲಿ ಹೇಡಿಯಂತೆ ಅರ್ಜುನ ಕನ್ಯೆಯನ್ನು ಕದ್ದೊಯ್ದುದರಿಂದ ಮಹಾಪೌರುಷ ಉಳ್ಳವನೆಂದು ಹೇಳಿಕೊಳ್ಳುವ ಅವನಿಗೇ ಮಾನಹಾನಿ. ಧೀರತನದಿಂದ ನಮ್ಮ ಕಣ್ಣ ಮುಂದೆ ಅಪಹರಿಸಿದ್ದರೆ ನಾವೇ ಷಂಢರೆಂದೆನಿಸಿ ಮಾನಹಾನಿಗೊಳಗಾಗುತ್ತಿದ್ದೆವು.

ದೇಯಾ ಚ ಕನ್ಯಾ ನಾಸ್ತಿ ಪಾರ್ಥೇನ ತುಲ್ಯೋ
ವರೋಽಸ್ಮಾಕಂ ಕೌರವೇಯಶ್ಚ ಪಾರ್ಥಃ।
ಪೌತ್ರಶ್ಚ ಕೃಷ್ಣಸ್ಯ ಸುಪೂರ್ಣಶಕ್ತೇಃ
ಪೈತೃಷ್ವಸೇಯೋ ವೀರತಮೋ ಗುಣಾಢ್ಯಃ ॥೨೦೪॥

'ಕನ್ಯೆಯನ್ನು ಒಬ್ಬವರನಿಗೆ ಕೊಡಲೇಬೇಕು. ನಮಗೆ ಅರ್ಜುನನಂಥ ವರ ಇನ್ನೊಬ್ಬನಿಲ್ಲ. ಆತ ಕುರುಕುಲದವನು. ಪರಿಪೂರ್ಣಶಕ್ತರಾದ ವೇದವ್ಯಾಸರ ಮೊಮ್ಮಗ. ಅಲ್ಲದೇ ನಮ್ಮ ಸೋದರತ್ತೆಯ ಮಗನೂ ಆಗಿದ್ದಾನೆ. ಮಹಾವೀರ, ಒಳ್ಳೆಯ ಗುಣಶಾಲಿಯೂ ಕೂಡ.

ಅಥ್ಯೋಽಸ್ಮಾಭಿಃ ಸ್ವಯಮೇವಾಹರತ್ಸ
ಶಕ್ರಾತ್ಮಜೋ ನಾತ್ರ ನಃ ಕಾರ್ಯಹಾನಿಃ।
ಅನುದ್ಯುತ್ಯೈನಂ ಯದಿ ವಃ ಸ್ಯಾತ್ ಪರಾಜಯೋ
ಹಾನಿರ್ದೃಢಂ ಯಶಸೋ ವೋ ಭವೇತ ॥೨೦೫॥

'ಇಂಥ ಅರ್ಜುನನನ್ನು ನಾವೇ ಕೇಳಬೇಕಾಗಿತ್ತು. ಈಗ ಅವನು ತಾನಾಗಿ ಬಂದು ಕನ್ಯೆಯನ್ನು ಅಪಹರಿಸಿದ್ದಾನೆ. ಇದರಲ್ಲಿ ನಮಗೆ ಕಾರ್ಯಹಾನಿ ಏನಾಗಲಿಲ್ಲ. ಇನ್ನು ಅವನನ್ನು ಬೆನ್ನಟ್ಟಿ ಹೋಗಿ ಒಂದುವೇಳೆ ನೀವೆ ಪರಾಜಿತರಾದಿರೆಂದರೆ ನಿಮ್ಮ ಯಶಸ್ಸಿಗೆ ನಿಶ್ಚಯವಾಗಿ ಕುಂದು ಬಂದೀತು.

ಜಿತ್ವಾ ಚೈನಂ ಕನ್ಯಕಾ ಚಾಹೃತಾ ಚೇತ್
ಪರಾಮೃಷ್ಟಾಂ ನೈವ ಕಶ್ಚಿದ್ ವಿಲಿಪ್ಸೇತ್।
ಅತೋ ನ ಮೇ ರೋಚತೇ ವೋಽನುಯಾನ-
ಮಿತ್ಯೂಚಿವಾನಾಸ ತೂಷ್ಣೀಂ ಪರೇಶಃ ॥೨೦೬॥

'ಅರ್ಜುನನ್ನು ಗೆದ್ದು ಕನ್ಯೆಯನ್ನು ನೀವು ತಿರುಗಿ ತಂದರೂ ಇನ್ನೊಬ್ಬರು ಸ್ಪರ್ಶಿಸಿದ ಆ ಕನ್ಯೆಯನ್ನು ಯಾರೊಬ್ಬನೂ ಮದುವೆಯಾಗಲು ಬಯಸಲಾರ. ಅದರಿಂದ ಅವನನ್ನು ನೀವು ಬೆನ್ನಟ್ಟಿ ಹೋಗುವುದು ನನಗೆ ಸರಿಕಾಣುವುದಿಲ್ಲ'. ಹೀಗೆ ಹೇಳಿ ಕೃಷ್ಣ ಸುಮ್ಮನಾದ.

ಶ್ರುತ್ವಾ ಹಲೀ ಕೃಷ್ಣವಾಕ್ಯಂ ಬಭಾಷೇ
ಮಾ ಯಾತ ಚಿತ್ತಂ ವಿದಿತಂ ಮಯಾಸ್ಯ।
ಅಸ್ಯಾನುವೃತ್ತಿರ್ವಿಜಯಾಯ ನಃ ಸ್ಯಾತ್
ಶುಭಾಯ ಶಾಂತ್ಯೈ ಪರತಶ್ಚ ಮುಕ್ತ್ಯೈ ॥೨೦೭॥

ಬಲರಾಮ ಕೃಷ್ಣನ ಮಾತನ್ನು ಕೇಳಿ ಯಾದವ ವೀರರಿಗೆ ನುಡಿದ 'ನೀವು ಹೋಗಬೇಡಿರಿ. ಕೃಷ್ಣನ ಅಭಿಪ್ರಾಯ ನನಗೆ ತಿಳಿಯಿತು. ಅವನು ಹೇಳಿದಂತೆ ನಡೆಯುವುದರಲ್ಲಿಯೆ ನಮಗೆ ವಿಜಯವಿದೆ. ಮಂಗಳ, ಸಕಲಾರಿಷ್ಟ ಶಾಂತಿ ಪರಲೋಕದಲ್ಲಿ ಮುಕ್ತಿ ಎಲ್ಲವೂ ಇದೆ'.

ಅರ್ಜುನ ಇಂದ್ರಪ್ರಸ್ಥಕ್ಕೆ

ತತೋಽರ್ಜುನೋ ಯತ್ರ ತಿಷ್ಠೇನ್ನ ಕಶ್ಚಿತ್
ಪರಾಭವಂ ಯಾತಿ ಕೃಷ್ಣಾಜ್ಞಯೈವ।
ರಥೇನ ತೇನೈವ ಯಯೌ ಸಭಾರ್ಯಃ
ಶಕ್ರಪ್ರಸ್ಥಂ ಚಾವಿಶದ್ ಭ್ರಾತೃಗುಪ್ತಂ ॥೨೦೮॥

ಅರ್ಜುನನೆಲ್ಲಿರುವನೋ ಅಲ್ಲಿ ಯಾರೊಬ್ಬನಿಗೂ ಪರಾಭವವೆ ಇಲ್ಲವೆಂದು ವೇದವ್ಯಾಸರ ಶಾಸನವೆ ಇದೆ. ಅಂಥ ಅರ್ಜುನ ಕೃಷ್ಣ ರಥದಿಂದಲೆ ಪ್ರಯಾಣ ಮಾಡಿದ. ಸೋದರರಿಂದ ಪಾಲಿತವಾಗುತ್ತಿದ್ದ ಇಂದ್ರಪ್ರಸ್ಥವನ್ನು ಪತ್ನೀಸಮೇತನಾಗಿ ಪ್ರವೇಶಿಸಿದ.

ಯೋಗೇಶ್ವರ ಕೃಷ್ಣ ಮತ್ತು ಧನುರ್ಧರನಾದ ಅರ್ಜುನರು ಎಲ್ಲಿ ಇರುವರೋ ಅಲ್ಲಿಯೆ ಸಕಲ ಸಂಪತ್ತು ವಿಜಯಗಳೆಂದು ಗೀತೆಯಲ್ಲಿ ವೇದವ್ಯಾಸರ ಶಾಸನವಿದೆ. ಇಂಥ ಅರ್ಜುನ ವಿಜಯಿಯಾಗಿ ಇಂದ್ರಪ್ರಸ್ಥಕ್ಕೆ ಹಿಂತಿರುಗಿ ಬಂದುದು ಆಶ್ಚರ್ಯವೇನಲ್ಲ.

[1]ಇದು ವಾದಿರಾಜೀಯಾನುಸಾರಿಯಾದ ಅನುವಾದ.

---

1. ಅರ್ಜುನೋ ಯತ್ರ ತಿಷ್ಠೇತ್ ತತಸ್ತತ್ರ। ಕೃಷ್ಣಾಜ್ಞಯೈವೇತಿ ವದತಾ
ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ।
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥
ಇತಿ ವ್ಯಾಸಾತ್ಮಕ ಕೃಷ್ಣೋಕ್ತ ಗೀತಾವಾಕ್ಯಂ ಸ್ಮಾರಯತಿ। ಕೃಷ್ಣೋ ವ್ಯಾಸಃ। ತಸ್ಯಾಜ್ಞಯೇತ್ಯರ್ಥಃ।
-ವಾದಿರಾಜೀಯ

[1]ವರದರಾಜೀಯ ಜನಾರ್ದನೀಯಗಳ ಪ್ರಕಾರ–

'ಯಾವ ರಥವೇರಿದ ಯಾವ ವೀರನಿಗೂ ಕೃಷ್ಣಾನುಗ್ರಹದಿಂದ ಪರಾಭವವೆ ಇಲ್ಲವೋ ಆ ರಥದಿಂದ ಅರ್ಜುನ ಪ್ರಯಾಣ ಮಾಡಿದ'. ಇವರಿಗೆ 'ತಿಷ್ಠನ್ನ ಕಶ್ಚಿತ್' ಎಂಬ ಪಾಠ ಅನುಕೂಲವಾಗಿದೆ.

ಪತ್ನೀ ಸಮೇತನಾಗಿ ಅರ್ಜುನ ಇಂದ್ರಪ್ರಸ್ಥವನ್ನು ಪ್ರವೇಶಿಸಿದ ಬಗೆಯನ್ನು ಮಹಾಭಾರತ ಹೀಗೆ ಹೇಳಿದೆ. ಅರ್ಜುನ ಇಂದ್ರಪ್ರಸ್ಥಕ್ಕೆ ಅರ್ಧ ಮೈಲಿನಷ್ಟು ದೂರವಿದ್ದಾಗಲೆ ಒಂದು ಗೊಲ್ಲರಹಳ್ಳಿಗೆ ಬಂದು ಅಲ್ಲಿ ಸುಭದ್ರೆಗೆ ಹೇಳಿದ. ನೀನು ರಾಣಿಯಂತೆ ವೇಷಧರಿಸಿ ನನ್ನೊಂದಿಗೆ ಬಂದರೆ ದ್ರೌಪದಿ ಮುನಿದಾಳು. ಅದಕ್ಕೆ ಸಾಮಾನ್ಯ ಗೋಪಿಯರೊಂದಿಗೆ ಗೋಪಿಯ ವೇಷದಲ್ಲಿಯೆ ಬಂದು ದ್ರೌಪದಿಗೆ ನಮಸ್ಕರಿಸು. ಆಗ ಅವಳು ನಿನ್ನ ವಿನೀತ ವೇಷ ಕಂಡು ಪ್ರಸನ್ನಳಾಗಿ ಪ್ರೀತಿಯಿಂದ ಆಲಿಂಗಿಸಿ ಆಶೀರ್ವದಿಸುವಳು. ಒಮ್ಮೆ ಹೀಗೆ ಆಶೀರ್ವದಿಸಿದಳೆಂದರೆ ಮುಂದೆ ಎಂದೂ ನಿನ್ನಲ್ಲಿ ಸಿಟ್ಟಾಗಲಾರಳು. ಅದು ಅವಳ ಸ್ವಭಾವವೆನ್ನುತ್ತ ಗೋಪಿ ವೇಷದಲ್ಲಿಯೆ ಸುಭದ್ರೆಯನ್ನು ಅರಮನೆಗೆ ಕರೆತಂದ ಅರ್ಜುನ.

ಸಂಭಾವಿತೋ ಭ್ರಾತೃಭಿಶ್ಚಾತಿತುಷ್ಟೈ-
ರೂಚೇಽಥ ಸರ್ವಂ ತೇಷು ಯಚ್ಚಾತ್ಮವೃತ್ತಂ।
ಶಾಂತೇಷು ವಾಕ್ಯಾದಾತ್ಮನೋ ಯಾದವೇಷು
ಕೃಷ್ಣೋ ಯುಕ್ತೋ ಹಲಿನಾಗಾಚ್ಚ ಪಾರ್ಥಾನ್ ॥೨೦೯॥

ಸೋದರರೆಲ್ಲರೂ ಬಲು ಸಂತುಷ್ಟರಾಗಿ ಅರ್ಜುನನನ್ನು ಆದರಿಸಿದರು. ಬಳಿಕ ಅರ್ಜುನ ತನ್ನ ಎಲ್ಲ ವೃತ್ತಾಂತವನ್ನೂ ಬಣ್ಣಿಸಿದ. ಕೃಷ್ಣ ತನ್ನ ಮಾತಿನಿಂದ ಯಾದವರೆಲ್ಲರೂ ಶಾಂತರಾದಾಗ ಬಲರಾಮನೊಂದಿಗೆ ಪಾಂಡವರ ಬಳಿಗೆ ಬಂದ.

ಕೃಷ್ಣನ ಮಾತಿನಿಂದ ಯಾದವರು, ಶಾಂತರಾಗಿ ಅರ್ಜುನ ಸುಭದ್ರೆಯರನ್ನು ತಿರುಗಿ ಕರೆಸಿಕೊಂಡು ಸಂಭ್ರಮದಿಂದ ವಿವಾಹ ಮಾಡಿಸಬೇಕೆಂದು ಬಯಸಿ ಭೇರಿಯನ್ನು ಮೊಳಗಿಸಿ ಅರ್ಜುನನನ್ನು ಹಿಂಬಾಲಿಸಿದರು. ಆದರೆ ಅರ್ಜುನ ಅವರನ್ನು ಯುದ್ಧಸನ್ನದ್ಧರಾಗಿ

1. ತತಸ್ತದನಂತರಂ ತೇನೈವ ರಥೇನ ಸಭಾರ್ಯೋಽರ್ಜುನೋ ಯಯಾವಿತಿ ಸಂಬಂಧಃ। ತೇನ ಕೇನ? ಯತ್ರ ರಥೇ ತಿಷ್ಠನ್ ಕಶ್ಚಿದಪಿ ವೀರಃ ಕೃಷ್ಣಾಜ್ಞಯಾ ಪರಾಜಯಂ ನಾಯಾತಿ ತೇನೈವ ರಥೇನೇತ್ಯರ್ಥಃ।
-ವರದರಾಜೀಯ

ತತೋಽರ್ಜುನೋ ಯತ್ರ ಯಸ್ಮಿನ್ ಕೃಷ್ಣರಥೇ ಕಶ್ಚಿತ್ ಪುರುಷಸ್ತಿಷ್ಠನ್ ಕೃಷ್ಣಾಜ್ಞಯಾ ಪರಾಜಯಂ ನೈವ ಯಾತಿ ತೇನೈವ ರಥೇನ ಯಯೌ।
-ಜನಾರ್ದನೀಯ

ಬಂದವರೆಂದು ಭಾವಿಸಿ ವೇಗವಾಗಿ ರಥ ಓಡಿಸಿದ. ಯಾದವವೀರರು ರೈವತಕ್ಕೆ ಬರುವಾಗ ಆಗಲೆ ಅರ್ಜುನ ಬಲುದೂರಕ್ಕೆ ಹೋಗಿದ್ದಾನೆ ಎಂದು ತಿಳಿದು ದ್ವಾರಕೆಗೆ ಹಿಂತಿರುಗಿದರು.

ಭಾಗವತದಲ್ಲಿಯೂ ಮಹಾಭಾರತದ ಕೆಲವು ಪಾಠಗಳಲ್ಲಿಯೂ ರೈವತಕ್ಕೆ ಬಂದಿದ್ದ ಅರ್ಜುನ ಅಲ್ಲಿಯೆ ದೇವಾಲಯದರ್ಶನಕ್ಕೆ ಬಂದು ಹಿಂತಿರುಗುತ್ತಿದ್ದ ಸುಭದ್ರೆಯನ್ನು ಬಲಾತ್ಕಾರವಾಗಿ ರಥದಲ್ಲಿ ಕೂಡಿಸಿಕೊಂಡು ಇಂದ್ರಪ್ರಸ್ಥಕ್ಕೆ ವೇಗವಾಗಿ ಹೊರಟುಹೋಗುತ್ತಾನೆ. ಮದುವೆಯ ಪ್ರಸ್ತಾಪವಿಲ್ಲ.

ಸಾರ್ಧಂ ಯಯೌ ಶಕಟೈ ರತ್ನಪೂರ್ಣೈಃ
ಶಕ್ರಪ್ರಸ್ಥಂ ಪೂಜಿತಸ್ತತ್ರ ಪಾರ್ಥೈಃ।
ದದೌ ತೇಷಾಂ ತಾನಿ ರಾಮೇಣ ಯುಕ್ತ-
ಸ್ತಥಾ ಕೃಷ್ಣಾಯೈ ಭೂಷಣಾನಿ ಸ್ವಸುಶ್ಚ ॥೨೧೦॥

ರತ್ನಗಳಿಂದ ತುಂಬಿದ ಬಂಡಿಗಳೊಂದಿಗೇ ಬಲರಾಮ ಸಮೇತನಾದ ಕೃಷ್ಣ ಇಂದ್ರಪ್ರಸ್ಥಕ್ಕೆ ಬಂದಿದ್ದ. ಅಲ್ಲಿ ಅವನು ಪಾಂಡವರಿಂದ ಸತ್ಕೃತನಾದ. ರತ್ನಗಳನ್ನು ಪಾಂಡವರಿಗೂ ದ್ರೌಪದಿಗೂ ಸುಭದ್ರೆಗೂ ಕೊಟ್ಟ.

ಮಾಸಾನುಷಿತ್ವಾ ಕತಿಚಿದ್ರೌಹಿಣೇಯೋ
ಯಯೌ ಪುರೀಂ ಸ್ವಾಂ ಕೇಶವೋಽತ್ರಾವಸಚ್ಚ।
ಬಹೂನ್ವರ್ಷಾನ್ ಪಾಂಡವೈಃ ಪೂಜ್ಯಮಾನಃ
ಪ್ರೀತಿಂ ತೇಷಾಮಾದಧಾನೋಽಧಿಕಾಂ ಸ್ವಾಂ ॥೨೧೧॥

ಕೆಲವು ತಿಂಗಳು ಬಲರಾಮ ಅಲ್ಲಿ ಇದ್ದು ತನ್ನ ಪಟ್ಟಣಕ್ಕೆ ಹಿಂತಿರುಗಿದ. ಕೃಷ್ಣ ಅಲ್ಲಿಯೆ ಪಾಂಡವರಿಂದ ಸತ್ಕೃತನಾಗಿ ಅವರಲ್ಲಿ ತನ್ನವರೆಂಬ ಪ್ರೀತಿಯನ್ನು ದಿನೇದಿನೇ ಹೆಚ್ಚಿಸುತ್ತ ಬಹುವರ್ಷಗಳ ಕಾಲ ವಾಸಮಾಡಿದ.

ಪಾಂಡವರ ಮಕ್ಕಳು

ಆಸನ್ ಕೃಷ್ಣಾಯಾಃ ಪಂಚ ಸುತಾ ಗುಣಾಢ್ಯಾ
ವಿಶ್ವೇದೇವಾಃ ಪಂಚಗಂಧರ್ವಮುಖ್ಯೈಃ।
ಅವಿಷ್ಟಾಸ್ತೇ ಚಿತ್ರರಥಾಭಿತಾಮ್ರ-
ಕಿಶೋರಗೋಪಾಲಬಲೈಃ ಕ್ರಮೇಣ ॥೨೧೨॥

ದ್ರೌಪದಿಯಲ್ಲಿ ಪಾಂಡವರಿಂದ ಐದು ಮಂದಿ ಗುಣಾಢ್ಯರಾದ ಮಕ್ಕಳು ಜನಿಸಿದರು. ಅವರು ಹಿಂದೆ ವಿಶ್ವೇದೇವತೆಗಳು ಕ್ರಮವಾಗಿ ಚಿತ್ರರಥ ಅಭಿತಾಮ್ರ ಕಿಶೋರ ಗೋಪಾಲ

ಬಲ ಎಂಬ ಐವರು ಶ್ರೇಷ್ಠ ಗಂಧರ್ವರಿಂದ ಆವಿಷ್ಟರು.

ದಕ್ಷಪುತ್ರಿ ವಿಶ್ವೆಯಲ್ಲಿ ಧರ್ಮಪ್ರಜಾಪತಿಯಿಂದ ಹುಟ್ಟಿದವರು ವಿಶ್ವೇದೇವತೆಗಳು. ಇವರು ಕ್ರತು ವಸು ದಕ್ಷ ಸತ್ಯ ಕಾಲ ಕಾಮ ಧುರಿ ಲೋಚನ ಪುರೂರವ ಮಾದ್ರವ ಎಂದು ಹತ್ತು ಮಂದಿ. ಹರಿಶ್ಚಂದ್ರನ ಮಡದಿ ಚಂದ್ರಮತಿಯನ್ನು ವಿಶ್ವಾಮಿತ್ರಮುನಿ ಪೀಡಿಸುತ್ತಿದ್ದಾಗ ವಿಶ್ವೇದೇವತೆಗಳು ಅದನ್ನು ನಿಂದಿಸಿದರು. ಸಿಟ್ಟಾದ ಮುನಿ ಅವರನ್ನು ಭೂಲೋಕದಲ್ಲಿ ಹುಟ್ಟುವಂತೆ ಶಪಿಸಿದ. ಅವರು ಮುನಿಯನ್ನು ಕೇಳಿಕೊಂಡಾಗ ಮದುವೆಗೆ ಮುಂಚಿತವಾಗಿ ಸತ್ತು ಶಾಪಮುಕ್ತಿ ಹೊಂದುವಂತೆ ಆತ ಅನುಗ್ರಹಿಸಿದನೆಂದು ಮಾರ್ಕಂಡೇಯ ಪುರಾಣ ಹೇಳಿದೆ. ಅದರಂತೆ ಉಪಪಾಂಡವರಾಗಿ ಜನಿಸಿ ಮಹಾಭಾರತ ಯುದ್ಧ ಮುಗಿದ ರಾತ್ರಿ ಶಿಬಿರದಲ್ಲಿ ಮಲಗಿದ್ದಾಗ ಅಶ್ವತ್ಥಾಮನಿಂದ ಹತರಾದರು. ಅವರಿಗಿನ್ನೂ ಮದುವೆಯಾಗಿರಲಿಲ್ಲ. ವಯಸ್ಸಿನಲ್ಲಿ ಅವರು ಕ್ರಮವಾಗಿ ಒಬ್ಬರಿಗಿಂತ ಒಬ್ಬರು ಒಂದು ವರ್ಷ ಕಡಿಮೆಯಿರುವರೆಂದು ಮಹಾಭಾರತ ಹೇಳಿದೆ.

ಪ್ರತಿವಿಂಧ್ಯಃ ಶ್ರುತಸೋಮಃ ಶ್ರುತಾಖ್ಯಕೀರ್ತಿಃ
ಶ್ರುತಾನೀಕ ಉತ ಶ್ರುತಕ್ರಿಯಃ।
ಯುಧಿಷ್ಠಿರಾದ್ಯೈಃ ಕ್ರಮಶಃ ಪ್ರಜಾತಾ-
ಸ್ತೇಷಾಂ ದ್ವಯೋಶ್ಚಾವರಜೋಽಭಿಮನ್ಯುಃ ॥೨೧೩॥

ಪ್ರತಿವಿಂಧ್ಯ ಶ್ರುತಸೋಮ ಶ್ರುತಕೀರ್ತಿ ಶ್ರುತಾನೀಕ ಶ್ರುತಕ್ರಿಯ - ಇವರೆ ಆ ಐವರು ಮಕ್ಕಳು. ಕ್ರಮವಾಗಿ ಯುಧಿಷ್ಠಿರ ಮುಂತಾದ ಐವರಿಂದ ಹುಟ್ಟಿದರು. ಅವರಲ್ಲಿ ಪ್ರತಿವಿಂಧ್ಯ ಶ್ರುತಸೋಮರ ಬಳಿಕ ಹುಟ್ಟಿದವನು ಅಭಿಮನ್ಯು.

ಮಹಾಭಾರತದಲ್ಲಿ ಈ ಉಪಪಾಂಡವರ ಹೆಸರುಗಳು - ಪ್ರತಿವಿಂಧ್ಯ, ಸುತಸೋಮ ಅಥವಾ ಶ್ರುತಸೋಮ, ಶ್ರುತಕರ್ಮ, ಶತಾನೀಕ, ಶ್ರುತಸೇನ ಎಂದು. ಅವುಗಳಿಗೆ ನಿರ್ವಚನವೂ ಅಲ್ಲಿ ಇದೆ. ಈ ಭಾಗ ಪ್ರಕ್ಷಿಪ್ತವೆನ್ನಲೂ ಶಕ್ಯವಿಲ್ಲ. ಲಕ್ಷಾಲಂಕಾರದಲ್ಲಿ ಇವುಗಳಿಗೆ ಟೀಕೆ ಇದೆ. ಶತ್ರುಗಳ ಆಕ್ರಮಣದಿದಿರು ಅಚಲನಾಗಿ ವಿಂಧ್ಯಪರ್ವತದ ಪ್ರತಿರೂಪನಾಗಿ ನಿಲ್ಲುವುದರಿಂದ ಪ್ರತಿವಿಂಧ್ಯ. ಪ್ರತಿಭಟರನ್ನು ಆಯುಧಗಳಿಂದ ವಿದ್ಧರನ್ನಾಗಿ ಮಾಡುವುದರಿಂದಲೂ ಪ್ರತಿವಿಂಧ್ಯ. ಸೋಮಯಾಗ ಮಾಡುವವರಲ್ಲಿ ಸೋಮನಂತೆ ಈತನೆಂದು ಶ್ರುತನಾದ್ದರಿಂದ ಶ್ರುತಸೋಮ. ಲಕ್ಷಾಲಂಕಾರದ ಈ ಮಾತಿನಿಂದ ಶ್ರುತಸೋಮ ಎಂಬ ಪಾಠವೆ ಸರಿ, 'ಸುತಸೋಮ'ವಲ್ಲ ಎನ್ನಬಹುದು. ಭಾಗವತ

(9.19.29)ದಲ್ಲಿ ಶ್ರುತಸೋಮನಿಗೆ ಶ್ರುತಸೇನ ಎಂದು ಹೆಸರಿದೆ. ಅರ್ಜುನ ತೀರ್ಥಯಾತ್ರೆಯಲ್ಲಿ ಅದ್ಭುತಕಾರ್ಯಗಳನ್ನು ಮಾಡಿ ಬಂದ ಬಳಿಕ ಆ ಪುಣ್ಯಕರ್ಮಫಲವಾಗಿ ಪುತ್ರೋತ್ಪತ್ತಿ ಶ್ರವಣ ಮಾಡಿದ್ದರಿಂದ ಶ್ರುತಕರ್ಮ. ಕುರುವಂಶದ ಒಬ್ಬ ಮೂಲಪುರುಷನಾದ ಶತಾನೀಕನಂತೆ ಈತನೂ ಪ್ರಸಿದ್ಧನಾಗುವವನೆಂದು ಶತಾನೀಕ. ಅಗ್ನಿನಕ್ಷತ್ರವಾದ ಕೃತ್ತಿಕೆಯಲ್ಲಿ ಹುಟ್ಟಿ ಸೇನಾನಿಯಾದ ಕಾರ್ತಿಕೇಯನಂತೆ ಎಲ್ಲೆಡೆ ಶ್ರುತನಾಗುವುದರಿಂದ ಶ್ರುತಸೇನ. ಹೀಗೆ ಮಹಾಭಾರತದ ದಾಕ್ಷಿಣಾತ್ಯ ಔತ್ತರೇಯ ಎರಡು ಪಾಠಗಳಲ್ಲಿಯೂ ನಾಮನಿರ್ವಚನವಿದೆ.

ವಿಷ್ಣುಪುರಾಣದಲ್ಲಿಯೂ ಶ್ರುತಸೋಮನಿಗೆ ಶ್ರುತಸೇನ ನಾಮವಿದೆ. ಅರ್ಜುನ ಪುತ್ರನಿಗೆ ನಿರ್ಣಯದಲ್ಲಿ ಹೇಳಿದ ಶ್ರುತಕೀರ್ತಿ ನಾಮವೂ ಭಾಗವತ ಮಹಾಭಾರತಗಳಿಗೆ ಸಂಮತವೆ. ಅರ್ಜುನಾತ್ ಶ್ರುತ ಕೀರ್ತಿಸ್ತು (ಭಾಗ.9.19.29) (ಆದಿ.63-123) ಆರ್ಜುನಿಂ ಶ್ರುತಕೀರ್ತಿಂ ತು (ದ್ರೋ 25-32) ಎಂದು ಪ್ರಯೋಗ ಕಂಡಿದೆ. ಒಂದು ಪಾಠದಲ್ಲಿ ಭಾಗವತದಲ್ಲಿ ಶ್ರುತಕೀರ್ತಿ ಎಂಬುದು ಸಹದೇವ ಪುತ್ರನ ನಾಮವೂ ಹೌದು .ನಿರ್ಣಯದಲ್ಲಿ ಹೇಳಿದ ಸಹದೇವಪುತ್ರನ ನಾಮ ಶ್ರುತಕ್ರಿಯ ಶ್ರುತಕರ್ಮ ಎಂದಾಗಿ ಮಹಾಭಾರತದಲ್ಲಿ 'ಶ್ರುತಕರ್ಮಾಣಂ ಸಹದೇವಃ' (ಆದಿ 95-75 ಔತ್ತರೇಯಪಾಠ) ಶ್ರುತಕರ್ಮಾ ಪರಾಕ್ರಾಂತಂ (ಭೀ 45-65) ಎಂದು ಮುಂತಾದ ಕಡೆ ಬಂದಿದೆ. ಮಹಾಭಾರತೋಕ್ತ ನಕುಲಪುತ್ರನಾಮ 'ಶತಾನೀಕ' ನಿರ್ಣಯಕ್ಕೂ ಹೃಷೀಕೇಶತೀರ್ಥ ಪಾಠದಲ್ಲಿ ಸಂಮತವೆ. 'ಶ್ರುತಾನೀಕ' ಎಂಬ ಹೆಸರು ವಿರಾಟರಾಜನ ಸೋದರನಿಗೆ ಇದ್ದ ಮಾತ್ರಕ್ಕೆ ನಕುಲಪುತ್ರನಿಗೂ ಅದೇ ಹೆಸರಿರುವುದು ಅಶಕ್ಯವೇನಲ್ಲ. ಮಾದ್ರೀಪುತ್ರನಿಗೂ ಜರಾಸಂಧ ಪುತ್ರನಿಗೂ ಸಹದೇವ ನಾಮವಿರುವಂತೆ, ಎನ್ನಬಹುದು.

ಚಂದ್ರಾಂಶಯುಕ್ತೋತಿತರಾಂ ಬುಧೋಽಸೌ
ಜಾತಃ ಸುಭದ್ರಾಜಠರೇಽರ್ಜುನೇನ।
ಧರ್ಮೇರಶಕ್ರಾಂಶಯುತೋಽಶ್ವಿನೋಶ್ಚ
ತಥೈವ ಕೃಷ್ಣಸ್ಯ ಚ ಸನ್ನಿಧಾನಯುಕ್ ॥೨೧೪॥

ಚಂದ್ರನ ಬಹು ಆವೇಶಯುಕ್ತನಾದ ಬುಧನೆ ಅಭಿಮನ್ಯು. ಅರ್ಜುನನಿಂದ ಸುಭದ್ರೆಯ ಗರ್ಭದಲ್ಲಿ ಅವತರಿಸಿದ್ದ. ಅವನು ಯಮ ವಾಯು ಇಂದ್ರರ ಅಂಶಗಳಿಂದಲೂ ಶ್ರೀಕೃಷ್ಣನ ಸನ್ನಿಧಾನದಿಂದಲೂ ಯುಕ್ತನಾಗಿದ್ದ.

'ಅಭೀ' ಭಯವೆ ಇಲ್ಲದವ ಮತ್ತು 'ಮನ್ಯು' ಶತ್ರುಗಳಲ್ಲಿ ಕ್ರೋಧವನ್ನು ಮೆರೆಸುವವ ಎಂಬ ಅರ್ಥದಲ್ಲಿ 'ಅಭಿಮನ್ಯು'.

ಸರ್ವೇಽಪಿ ತೇ ವೀರ್ಯವಂತಃ ಸುರೂಪಾ
ಭಕ್ತಾ ವಿಷ್ಣೋಃ ಸರ್ವಶಾಸ್ತ್ರೇಷ್ವಭಿಜ್ಞಾಃ।
ಮೋದಂ ಯಯುಃ ಪಾಂಡವಾಸ್ತೈಃ ಸುತೈಶ್ಚ
ವಿಶೇಷತಃ ಸಾತ್ವತೀನಂದನೇನ ॥೨೧೫॥

ಪಾಂಡವರ ಮಕ್ಕಳು ಎಲ್ಲರೂ ಬಲಶಾಲಿಗಳು, ಸ್ಫುರದ್ರೂಪಿಗಳು, ವಿಷ್ಣುಭಕ್ತರು, ಸರ್ವಶಾಸ್ತ್ರಾಭಿಜ್ಞರು. ಈ ಮಕ್ಕಳನ್ನು ಅವರಲ್ಲಿಯೂ ವಿಶೇಷವಾಗಿ ಅಭಿಮನ್ಯುವನ್ನು ನೋಡಿ ಪಾಂಡವರು ಆನಂದಿಸಿದರು.

ಖಾಂಡವ ವನಕ್ಕೆ ಪ್ರಯಾಣ

ತತಃ ಕದಾಚಿತ್ ಖಾಂಡವಂ ಕೃಷ್ಣಪಾರ್ಥೌ
ಚಿಕ್ರೀಡಿಷೂ ಸತ್ಯಭಾಮಾಸುಭದ್ರೇ।
ಆದಾಯ ಯಾತೌ ಪರಿಚಾರಕೈಶ್ಚ
ರಥೇನ ಗಂಧರ್ವವರಾನುಗೀತೌ ॥೨೧೬॥

ಒಂದು ದಿನ ಕೃಷ್ಣಾರ್ಜುನರು ಸತ್ಯಭಾಮಾ ಸುಭದ್ರೆಯರನ್ನು ಕರೆದುಕೊಂಡು ಸೇವಕರಿಂದ ಸಮೇತರಾಗಿ, ಗಂಧರ್ವಶ್ರೇಷ್ಠರು ಯಶೋಗಾನವನ್ನು ಮಾಡುತ್ತಿದ್ದಂತೆ ವಿಹಾರಕ್ಕಾಗಿ ರಥದಿಂದ ಖಾಂಡವವನಕ್ಕೆ ತೆರಳಿದರು.

ಸ್ಫೀರಂ ತಯೋಸ್ತತ್ರ ಚಿಕ್ರೀಡತೋಶ್ಚ
ಸ್ತ್ರೀರತ್ನಾಭ್ಯಾಂ ಮಂದವಾತಾನುಜುಷ್ಟೇ।
ವನೇ ಪ್ರಸೂನಸ್ತಬಕೋರುರಾಜಿತೇ
ಜಲೇ ಚ ತಿಗ್ಮದ್ಯುತಿಕನ್ಯಕಾಯಾಃ ॥೨೧೭॥

ಭೂತ್ವಾವಿಪ್ರಸ್ತೌ ಯಯಾಚೇಽನ್ನಮೇತ್ಯ
ಕೃಶಾನುರೂಚೇಽನುಮತೇ ರಮೇಶಿತುಃ।
ಪಾರ್ಥಃ ಕೀದೃಕ್ ತೇಽನ್ನಮಿಷ್ಟಂ ವದೇತಿ
ಸ ಚಾವಾದೀದ್ವಹ್ನಿರಹಂ ವನಾರ್ಥೀ ॥೨೧೮॥

ಹೂಗೊಂಚಲುಗಳಿಂದ ಶೋಭಿಸುತ್ತ ಮಂದಮಾರುತದಿಂದ ಯುಕ್ತವಾಗಿದ್ದ ಆ ಕಾಡಿನಲ್ಲಿಯೂ ಯಮುನಾ ಜಲದಲ್ಲಿಯೂ ಕೃಷ್ಣಾರ್ಜುನರು ಸ್ತ್ರೀರತ್ನ ಸಮೇತರಾಗಿ ಯಥೇಚ್ಛವಿಹರಿಸುತ್ತಿದ್ದಾಗ ಅಗ್ನಿ ಬ್ರಾಹ್ಮಣನಾಗಿ ಕೃಷ್ಣಾರ್ಜುನರ ಬಳಿಗೆ ಬಂದು ಅನ್ನವನ್ನು

ಬೇಡಿದ. ಅರ್ಜುನ ಶ್ರೀಕೃಷ್ಣನ ಅನುಮತಿ ಪಡೆದು 'ನಿನಗೆ ಎಂಥ ಅನ್ನಬೇಕು ಹೇಳು' ಎಂದ. 'ನಾನು ಅಗ್ನಿ ಈ ಕಾಡನ್ನು ಬಯಸುತ್ತೇನೆ' ಎಂದ ಅಗ್ನಿ.

ಅಗ್ನಿಗೆ ಅಜೀರ್ಣ ರೋಗ

ಪ್ರಯಾಜಾನ್ ದೇವಾನನುಯಾಜಾಂಶ್ಚ ಶುಲ್ಕಂ
ಹವಿರ್ದಾನೇ ದೇವತಾನಾಮಯಾಚಿಷಂ।
ಬಲಹ್ರಾಸಸ್ತವ ಭೂಯಾದಿತಿ ಸ್ಮ
ಶಪ್ತ್ವೈವ ತೇ ತಾಂಶ್ಚ ದದುಃ ಪುರಾ ಮಮ ॥೨೧೯॥

'ನಾನು ಬಹು ಹಿಂದೆ ದೇವತೆಗಳಿಗೆ ಹವಿಸ್ಸನ್ನು ಒಯ್ದು ಕೊಡುವುದಕ್ಕೆ ವೇತನವಾಗಿ ಪ್ರಯಾಜ ಅನುಯಾಜವೆಂಬ ಆಹುತಿಗಳನ್ನು ಕೊಡಬೇಕೆಂದು ಕೇಳಿಕೊಂಡೆ. ಅದಕ್ಕೆ ಅವರು ನಿನಗೆ ಪಚನಶಕ್ತಿ ಹ್ರಾಸವಾಗಲೆಂದು ಶಪಿಸಿ ಆ ಆಹುತಿಗಳನ್ನು ಕೊಟ್ಟರು.

ಯಾಗಗಳಲ್ಲಿ ಪೂರ್ವಾಂಗವಾಗಿ ಸಮಿತ್, ತನೂನಪಾತ್, ಇಟ್, ಬರ್ಹಿ, ಸ್ವಾಹಾಕಾರ ಎಂದು ಐದು ಪ್ರಯಾಜನಾಮಕ ಆಜ್ಯಾಹುತಿಗಳನ್ನು ನೀಡಿ ಪ್ರಯಾಜಶೇಷವಾದ ಆಜ್ಯದಿಂದ ಪ್ರಧಾನ ಹೋಮದ ಹವಿಸ್ಸನ್ನು ಅಭಿಘಾರ ಮಾಡಿ ಆ ಹವಿಸ್ಸಿನಿಂದ ಹೋಮವಾದ ಬಳಿಕ ಋತ್ವಿಕ್ ಗಳಿಗೆ ದಕ್ಷಿಣೆ ನೀಡಿ ಹೋಮಶೇಷ ಆಜ್ಯದಿಂದ ಬರ್ಹಿ ನರಾಶಂಸ ಸ್ವಿಷ್ಟಕೃದಗ್ನಿ ಎಂಬ ಮೂರು ಅನೂಯಾಜನಾಮಕ ಆಜ್ಯಾಹುತಿ ನೀಡಬೇಕು ಎಂದು ವಿಧಿ ಇದೆ. ಈ ಪ್ರಯಾಜ ಅನೂಯಾಜಾಹುತಿಗಳಿಗೆ ಅಗ್ನಿಯೆ ದೇವತೆ. ಇದು ಅಗ್ನಿಯ ಅಪೇಕ್ಷೆಯಂತೆ ದೇವತೆಗಳು ನೀಡಿದವರ.

ಶ್ವೇತಕ ಎಂಬ ರಾಜ ನಿರಂತರ ಯಾಗ ಮಾಡುತ್ತಿದ್ದುದರಿಂದ ಋತ್ವಿಜರು ಸೋತು ನಾವು ಇನ್ನು ನಿನ್ನ ಯಾಗದಲ್ಲಿ ಪೌರೋಹಿತ್ಯ ಮಾಡೆವು ಎಂದರು. ರಾಜ ಶಿವನನ್ನು ತಪಸ್ಸಿನಿಂದ ಒಲಿಸಿಕೊಂಡು ಶಿವನ ಆದೇಶದಂತೆ ಹನ್ನೆರಡುವರ್ಷ ಕಾಲ ಅಗ್ನಿಚಯನ ಮಾಡಿ ವಸೋರ್ಧಾರಾ ಎಂಬ ಅವಿಚ್ಛಿನ್ನ ಆಜ್ಯಧಾರಾ ಹೋಮ ಮಾಡಿದ ಬಳಿಕ ಶಿವನಾಜ್ಞೆಯಂತೆ ದೂರ್ವಾಸರು ಬಂದು ರಾಜನಿಂದ ಸತ್ರಯಾಗ ಮಾಡಿಸಿದರು. ಹನ್ನೆರಡು ವರ್ಷಗಳ ನಿರಂತರ ಆಜ್ಯಧಾರೆಯನ್ನೂ ಸತ್ರಯಾಗದ ಹವಿಸ್ಸನ್ನೂ ಉಂಡು ಅಗ್ನಿ ದೇವತೆಗಳ ಶಾಪದಿಂದ ಅಜೀರ್ತಿರೋಗ ಹೊಂದಿದ

ಪುನಃ ಪೂರ್ತಿಃ ಕೇನ ಮೇ ಸ್ಯಾದ್ ಬಲಸ್ಯೇ-
ತ್ಯಬ್ಜೋದ್ಭವಂ ಪೃಷ್ಟವಾನಸ್ಮಿ ನತ್ವಾ।
ಯದಾ ವನಂ ಖಾಂಡವಂ ಹಿ ತ್ವಮತ್ಸಿ
ತದಾ ಬಲಂ ತೇ ಭವತೀತಿ ಸೋಽಬ್ರವೀತ್ ॥೨೨೦॥

'ನನಗೆ ಪಚನಶಕ್ತಿ ಪುನಃ ಯಾವುದರಿಂದ ತುಂಬಿ ಬಂದೀತೆಂದು ಬ್ರಹ್ಮನನ್ನು ನಮಿಸಿ ಕೇಳಿದೆ. ಖಾಂಡವವನವನ್ನು ಭಕ್ಷಿಸಿದಾಗ ಅದು ನಿನಗೆ ಲಭ್ಯವಾಗುವುದು ಎಂದ ಬ್ರಹ್ಮ.

ಈ ರೋಗಕ್ಕೆ ಚಿಕಿತ್ಸೆ ಏನೆಂದು ಬ್ರಹ್ಮನನ್ನು ಕೇಳಿದಾಗ ಬ್ರಹ್ಮನೆಂದ.
'ನೀನು ಹಿಂದೆ ದೈತ್ಯರ ನಗರ ಒಂದನ್ನು ದೇವತೆಗಳ ಅಪೇಕ್ಷೆಯಂತೆ ಸುಟ್ಟಿದ್ದಿ. ಆ ಸ್ಥಳದಲ್ಲಿ ಈಗ ಖಾಂಡವ ಎಂಬ ಕಾಡು ಇದೆ. ಅಲ್ಲಿ ವಾಸಮಾಡುವ ಮೃಗ ಪಕ್ಷಿ ಮುಂತಾದವುಗಳ ಮೇದಸ್ಸನ್ನು ಭಕ್ಷಿಸಿದರೆ ನಿನ್ನ ಅಜೀರ್ತಿರೋಗ ಗುಣವಾಗುವುದು' ಎಂದು.

ಶಕ್ರಸ್ಯೇದಂ ಖಾಂಡವಂ ತೇನ ವಿಘ್ನಂ
ಕರೋತ್ಯಸೌ ತೇನ ವಾಂ ಪ್ರಾರ್ಥಯಾಮಿ ।
ಇತ್ಯುಕ್ತೇ ತಂ ಪಾರ್ಥ ಊಚೇ ಯದಿ ಸ್ಯಾತ್
ರಥೋ ಧನುಶ್ಚಾಥ ಶಕ್ರಂ ನಿರೋತ್ಸ್ಯೇ ॥೨೨೧॥

'ಈ ಖಾಂಡವ ವನ ಇಂದ್ರನದು. ಅದರಿಂದ ಅವನು ನನಗೆ ವಿಘ್ನ ಮಾಡುತ್ತಿದ್ದಾನೆ. ಅದರಿಂದ ನಾನು ನಿನ್ನನ್ನು ಬೇಡುತ್ತೇನೆ', ಎಂದು ಅಗ್ನಿ ಹೇಳಿದಾಗ ಅರ್ಜುನನೆಂದ, 'ನನಗೆ ಒಂದು ರಥವೂ ಧನುಸ್ಸೂ ಸಿಕ್ಕಿದರೆ ಇಂದ್ರನನ್ನು ಇದಿರಿಸಬಲ್ಲೆ' ಎಂದು.

ಅಗ್ನಿ ಕಾಡನ್ನು ಸುಡಲು ಪ್ರಯತ್ನಿಸಿದ. ಆದರೆ ಸಾಧ್ಯವಾಗಲಿಲ್ಲ. ಏಳುಬಾರಿ ಪ್ರಯತ್ನಿಸಿ ಸೋತ. ಏಕೆಂದರೆ ಅಲ್ಲಿ ತಕ್ಷಕನೆಂಬ ನಾಗ ಪರಿವಾರದೊಂದಿಗೆ ವಾಸವಾಗಿದ್ದ. ಅವನು ಇಂದ್ರನ ಆಶ್ರಯದಲ್ಲಿದ್ದು ಅವನ ಸಹಾಯದಿಂದ ಕಾಡನ್ನು ರಕ್ಷಿಸಿಕೊಂಡ. ಅದರಿಂದ ತಿರುಗಿ ಬ್ರಹ್ಮನ ಆದೇಶದಂತೆ ಅಗ್ನಿ ಕೃಷ್ಣಾರ್ಜುನರ ಬಳಿಗೆ ಬಂದಿದ್ದಾನೆ.

ಅಗ್ನಿಗೆ ಅನ್ನದಾನ

ನರಾವೇಶಾದನ್ನದಾನಪ್ರತಿಶ್ರವಾತ್
ಸ್ವಸ್ಯಾಪಿ ಶಕ್ರಸ್ಯ ವಿರೋಧಮೈಚ್ಛತ್ ।
ಪಾರ್ಥಃ ಕೃಷ್ಣಪ್ರೇರಣಾಚ್ಚೈವ ವಹ್ನಿಃ
ಪಾರ್ಥಂ ಯಯಾಚೇ ಶಕ್ರವಿರೋಧಶಾಂತ್ಯೈ ॥೨೨೨॥

ಅರ್ಜುನ ನರಾವೇಶದಿಂದಲೂ, ಅನ್ನದಾನ ಪ್ರತಿಜ್ಞೆ ಮಾಡಿದ್ದರಿಂದಲೂ, ಕೃಷ್ಣನ ಪ್ರೇರಣೆಯಿಂದಲೂ ತನ್ನಿಂದ ಅಭಿನ್ನನೆ ಆದ ಇಂದ್ರನಲ್ಲಿ ಯುದ್ಧ ಮಾಡಲು ಬಯಸಿದ. ಅಗ್ನಿ ಇಂದ್ರನ ವಿರೋಧ ಪರಿಹಾರಕ್ಕೆ ಅರ್ಜುನನನ್ನೇ ಬೇಡಿದ್ದ.

ಇಂದ್ರನ ಒಂದಂಶನಾದ ಅರ್ಜುನ ಇಂದ್ರನೊಡನೆ ಹೋರಾಡಲು

ಶಕ್ತನಲ್ಲ. ಆದರೆ ನರಾವೇಶ ಅವನಲ್ಲಿದ್ದುದರಿಂದ ಶಕ್ತಿ ಇತ್ತು. ಆತ ಇಂದ್ರನ ಸ್ವರೂಪಾವತಾರ. ಬದರಿಕಾಶ್ರಮದಲ್ಲಿರುವ ನರಮಹರ್ಷಿಯ ಆವೇಶ ಅವನಲ್ಲಿದ್ದಿತು. ಮಹಾಭಾರತದಲ್ಲಿ ಅರ್ಜುನನನ್ನು ನರಾವತಾರವೆಂದಿದೆ. ಆದು ಆವೇಶಾವತಾರ ಎಂಬ ಅಭಿಪ್ರಾಯದಿಂದ.

ಬ್ರಾಹ್ಮಣನಿಗೆ ಅನ್ನದಾನ ಮಾಡುವುದು ಮಹಾಪುಣ್ಯಕರ. ಅಗ್ನಿ ದೇವತೆಗಳಲ್ಲಿ ಬ್ರಾಹ್ಮಣ. ಬ್ರಾಹ್ಮಣ ವೇಷದಿಂದಲೂ ಬಂದಿದ್ದಾನೆ. ಆದರಿಂದ ಇಂದ್ರನೊಡನೆ ಯುದ್ಧ ಮಾಡಿಯಾದರೂ ಬ್ರಾಹ್ಮಣನಿಗೆ ಅನ್ನದಾನ ಮಾಡಬೇಕು.

ಹಾಗಿದ್ದರೂ ಒಬ್ಬ ವ್ಯಕ್ತಿ ತನ್ನನ್ನು ತಾನೇ ವಿರೋಧಿಸಿ ಭಯಂಕರ ಯುದ್ಧ ಮಾಡವುದು ಬಹಳ ಆಶ್ಚರ್ಯಕರ. ಇದು ಕೇವಲ ಶ್ರೀಕೃಷ್ಣನ ಪ್ರೇರಣೆಯಿಂದಲೆ ನಡೆಯಿತು ಎನ್ನಬೇಕು.

ಈಶ್ವರಃ ಸರ್ವ ಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ।
ಭ್ರಾಮಯನ್ ಸರ್ವ ಭೂತಾನಿ ಯಂತ್ರಾರೂಢಾನಿ ಮಾಯಯಾ।

'ತನ್ನಿಚ್ಛೆಯಂತೆ ಶ್ರೀಕೃಷ್ಣ ಎಲ್ಲರನ್ನೂ ನಾನಾ ಕರ್ಮಗಳಲ್ಲಿ ತೊಡಗಿಸುತ್ತ ಅವರ ಹೃದಯದೊಳಗೆ ನೆಲೆಸಿದ್ದಾನೆ' ಎಂದು ಶ್ರೀಕೃಷ್ಣನೆ ಮುಂದೆ ಅರ್ಜುನನಿಗೆ ಗೀತೆಯಲ್ಲಿ ಉಪದೇಶಿಸುತ್ತಾನೆ.

ನ ಹಿ ಸ್ವದತ್ತಸ್ಯ ಪುನಃ ಸ ವೈರಂ
ಶಕ್ರಃ ಕುರ್ಯಾತ್ ಸ್ವಯಮಿಂದ್ರೋ ಹಿ ಪಾರ್ಥಃ।
ನಾಪ್ರೇರಿತೋ ವಿಷ್ಣುನಾ ತಸ್ಯ ರೋಧಂ
ಪಾರ್ಥಃ ಕುರ್ಯಾದಿತಿ ಕೃಷ್ಣಂ ಯಯಾಚೇ ॥೨೨॥

ಇಂದ್ರ ತಾನು ಕೊಟ್ಟಿದ್ದಕ್ಕೆ ತಾನೇ ಪುನಃ ವಿರೋಧ ಮಾಡಲಾರ. ಏಕೆಂದರೆ ಅರ್ಜುನ ಸ್ವಯಂ ಇಂದ್ರನೆ. ಅರ್ಜುನ ಕೃಷ್ಣನ ಪ್ರೇರಣೆಯಿಲ್ಲದೆ ಇಂದ್ರನನ್ನು ವಿರೋಧಿಸಲಾರನೆಂದು ಅಗ್ನಿ ಕೃಷ್ಣನನ್ನೂ ಬೇಡಿದ್ದ.

ಅಗ್ನಿ ಇಂದ್ರನ ವಿರೋಧ ಪರಿಹಾರಕ್ಕೆ ಅರ್ಜುನನನ್ನೇ ಬೇಡಿದ್ದ ಏಕೆಂದರೆ, ಅರ್ಜುನ ವನವನ್ನು ಅಗ್ನಿಗೆ ಕೊಟ್ಟನೆಂದರೆ ಇಂದ್ರನೆ ಕೊಟ್ಟಂತಾಯಿತು. ಏಕೆಂದರೆ ಅರ್ಜುನ ಸ್ವಯಂ ಇಂದ್ರನೆ. ಹೀಗೆ ಇಂದ್ರ ತಾನು ಕೊಟ್ಟುದನ್ನು ತಾನೇ ವಿರೋಧಿಸುವನೆ? ತಾತ್ಕಾಲಿಕವಾಗಿ ವಿರೋಧ ಮಾಡಿದರೂ ಅರ್ಜುನ ಕೊಟ್ಟಿದ್ದೆಂದರೆ ನಾನೇ ಕೊಟ್ಟಿದ್ದಾಗುವುದೆಂದು ವಿಚಾರಮಾಡಿ ಅನಂತರ ವಿರೋಧವನ್ನು ಹಿಂದೆ ತೆಗೆದುಕೊಳ್ಳಬಹುದು.

ಪುನಃ ವಿರೋಧ ಮಾಡಲಾರ ಎಂದು ಅಗ್ನಿ ಆಲೋಚಿಸಿ, ಕೃಷ್ಣಾರ್ಜುನರಿಬ್ಬರ ಬಳಿಗೆ ಬಂದಿದ್ದರೂ, ಮೊದಲಿಗೆ ಅರ್ಜುನನನ್ನೇ ಬೇಡಿದ.[1]

'ತಾತ್ಕಾಲಿಕವಾಗಿ ವಿರೋಧಮಾಡಿದರೂ' ಎನ್ನುವುದು ಅಗ್ನಿಯ ವಿಚಾರ ಸರಣಿಯಷ್ಟೆ, ವಸ್ತುತಃ ಇಂದ್ರ ತಾತ್ಕಾಲಿಕವಾಗಿಯೂ ವಿರೋಧ ಮಾಡಲಿಲ್ಲ. ವಿರೋಧ ನಟಿಸಿದ. ಅರ್ಜುನನಿಗೆ ಕೀರ್ತಿ ಬರಲಿ ಎನ್ನುವುದು ಅವನ ಉದ್ದೇಶವಾಗಿತ್ತೆಂದು ಮುಂದೆ ಸ್ಪಷ್ಟವಾಗುತ್ತದೆ.

ಇಂದ್ರ ತಾತ್ಕಾಲಿಕವಾಗಿಯಾದರೂ ತನ್ನನ್ನು ತಾನೇ ವಿರೋಧಿಸುವನೆಂದು ಅಗ್ನಿ ಏಕೆ ಆಲೋಚಿಸಿದನೆಂದರೆ ಕೃಷ್ಣನ ಪ್ರೇರಣೆಯಿಂದ ಏನೂ ಆಗಬಹುದು ಎಂದು. ಅದರಿಂದ ಹಾಗೆ ವಿರೋಧ ಮಾಡದಂತೆ ಕೃಷ್ಣನನ್ನೂ ಬೇಡಿದ ಅಗ್ನಿ. ಕೃಷ್ಣ ಪ್ರೇರಿಸದಿದ್ದರೆ ಇಂದ್ರ ಅರ್ಜುನನ್ನು ವಿರೋಧಿಸುವುದಿಲ್ಲ. ಆಗ ತನಗೆ ಕಾರ್ಯಸಿದ್ಧಿಯಾಗುವುದು ಎಂದು.

ಅಥವಾ ಕೃಷ್ಣ ಪ್ರೇರಿಸದಿದ್ದರೆ, ಅವನ ಒಪ್ಪಿಗೆಯಿಲ್ಲದಿದ್ದರೆ ಅರ್ಜುನ ಇಂದ್ರನನ್ನು ವಿರೋಧಿಸುವುದಿಲ್ಲ. ಆದರಿಂದ ಕೃಷ್ಣ ಒಪ್ಪಿಗೆ ನೀಡಲಿ, ಅರ್ಜುನ ಇಂದ್ರನನ್ನು ವಿರೋಧಿಸಲಿ, ಆಗ ನನಗೆ ಕಾರ್ಯಸಿದ್ಧಿಯಾಗುವುದು ಎಂದು.

ನ ಚಾಯುಕ್ತಃ ಕೇಶವೇನೈಷ ಶಕ್ತ
ಇತಿ ಸ್ಮ ಕೃಷ್ಣಾದಾಪ ಭೂಯೋಽಪ್ಯನುಜ್ಞಾಂ।
ಯಯೌ ಸಮೀಪಂ ಚ ಹರೇರ್ಬದರ್ಯಾ-
ಮಾದಾಯ ಚಕ್ರಂ ಚಾಮುತಃ ಕೇಶವೇಽದಾತ್ ॥೨೨೪॥

ಶ್ರೀಕೃಷ್ಣ ಜೊತೆಗೆ ಇಲ್ಲದಿದ್ದರೆ ಅರ್ಜುನ ಶಕ್ತನಾಗಲಾರ ಎಂದು ಅಗ್ನಿ ಪುನಃ ಕೃಷ್ಣನಿಂದಲೂ ಅನುಜ್ಞೆ ಪಡೆದ. ಬಳಿಕ ಬದರಿಯ ನಾರಾಯಣನ ಬಳಿಗೆ ಹೋದ. ಅವನಿಂದ ಚಕ್ರವನ್ನು ತೆಗೆದುಕೊಂಡು ಬಂದು ಕೃಷ್ಣನಿಗೆ ನೀಡಿದ.

ಅರ್ಜುನ ತಾನು ಇಂದ್ರನನ್ನು ವಿರೋಧಿಸಿ ಅಗ್ನಿಗೆ ವನವನ್ನು ನೀಡುತ್ತೇನೆ ಎಂದು ಪ್ರತಿಜ್ಞೆ ಮಾಡಿದ ಬಳಿಕವೂ ಅಗ್ನಿ ಪುನಃ ಕೃಷ್ಣನನ್ನು ಬೇಡುತ್ತಾನೆ. ಅದಕ್ಕೆ ಕಾರಣ ಅರ್ಜುನನಿಗೆ ಕೃಷ್ಣ ಜೊತೆಯಲ್ಲಿರಬೇಕು.

---

1. ತಾತ್ಕಾಲಿಕ ವೈರಕರಣೇಽಪಿ ಅರ್ಜುನದತ್ತಂ ಸ್ವದತ್ತಮೇವೇತಿ ವಿಚಾರ್ಯ ಪಶ್ಚಾದ್ ವೈರಂ ನ ಕರಿಷ್ಯತೀತಿ ಭಾವೇನ ಪುನರಿತ್ಯುಕ್ತಂ। –ವಾದಿರಾಜೀಯ

ಇಲ್ಲದಿದ್ದರೆ ಅರ್ಜುನ ಶಕ್ತನಾಗಲಾರ ಎಂದು.[1]

ಪುನಃ ಕೃಷ್ಣನನ್ನು ಬೇಡಿದ್ದು ಒಮ್ಮೆ ಅರ್ಜುನನಿಗೆ ಒಪ್ಪಿಗೆ ನೀಡುವುದಕ್ಕಾಗಿ, ಇನ್ನೊಮ್ಮೆ ಅರ್ಜುನನಿಗೆ ಸಹಾಯ ಮಾಡುವುದಕ್ಕಾಗಿ ಎಂದು.[2]

ಕೃಷ್ಣಾರ್ಜುನರಿಗೆ ಆಯುಧ ಪ್ರಾಪ್ತಿ

ಚಕ್ರಂ ಗೋಮಂತೇ ಕೃಷ್ಣಮಾಯಾದ್ಧಿ ಪೂರ್ವಂ
ಭಕ್ತ್ಯಾವಹ್ನಿಃ ಕೇಶವೇऽದಾತ್ ಪುನಸ್ತತ್।
ಚಕ್ರಂ ಚ ವಿಷ್ಣೋರ್ಬಹುಧಾ ವ್ಯವಸ್ಥಿತಂ
ತದಗ್ನಿದತ್ತಂ ಪ್ರಾಕ್ತನಂ ಚೈಕಧಾಸೀತ್ ॥೨೨೫॥

ಈ ಹಿಂದೆಯೆ ಗೋಮಂತ ಪರ್ವತದಲ್ಲಿ ಕೃಷ್ಣನ ಕೈಗೆ ಸುದರ್ಶನ ಚಕ್ರ ಬಂದಿತ್ತು. ಅಗ್ನಿ ಈಗ ಭಕ್ತಿಯಿಂದ ಪುನಃ ಅದನ್ನೆ ಕೃಷ್ಣನಿಗೆ ನೀಡಿದ. ವಿಷ್ಣುವಿನ ಚಕ್ರ ಬಹುರೂಪವಾಗಿದೆ. ಅದರಿಂದ ಹಿಂದೆ ಬಂದಿದ್ದ ಚಕ್ರವೂ ಈಗ ಅಗ್ನಿದತ್ತವಾದ ಚಕ್ರವೂ ಸೇರಿ ಒಂದೇ ಆಯಿತು.

ಧನುಶ್ಚ ಗಾಂಡೀವಮಥಾಬ್ಜಜಸ್ಯ
ಕರೋತಿ ಯೇನಾಖಿಲಸಂಯತಿಂ ಸಃ।
ಅಂಶೇನ ದತ್ತಂ ತದುಮಾಪತೇಶ್ಚ
ಶಕ್ರಸ್ಯ ಸೋಮಸ್ಯ ಜಲೇಶಿತುಶ್ಚ ॥೨೨೬॥

ಅಗ್ನಿ ಗಾಂಡೀವ ಧನುಸ್ಸನ್ನು ವರುಣನಿಂದ ತಂದು ಅರ್ಜುನನಿಗೆ ನೀಡಿದ. ಅದು ಬ್ರಹ್ಮನ ಧನುಸ್ಸು. ಆ ಧನುಸ್ಸಿನಿಂದ ಅವನು ಸರ್ವಲಯ ಮಾಡುತ್ತಾನೆ. ಅವನು ಅದನ್ನು ಒಂದು ಅಂಶದಿಂದ ಶಿವನಿಗೂ ಇಂದ್ರನಿಗೂ ಚಂದ್ರನಿಗೂ ವರುಣನಿಗೂ ಕೊಟ್ಟಿದ್ದ.

ತೇನೈವ ತೇ ಜಿಗ್ಯುರಥೋ ಜಗತ್ತ್ರಯಂ
ಪ್ರಸಾದತಸ್ತೇ ಕ್ರಮಶೋऽಬ್ಜಯೋನೇಃ।
ಅನನ್ಯಧಾರ್ಯಂ ವಿಜಯಾವಹಂ ಚ
ಭಾರೇಣ ಲಕ್ಷಸ್ಯ ಸಮಂ ಶುಭಾವಹಂ ॥೨೨೭॥

ಆ ಗಾಂಡೀವ ಧನುಸ್ಸಿನಿಂದಲೆ ರುದ್ರಾದಿ ದೇವತೆಗಳು ಕ್ರಮವಾಗಿ ಬ್ರಹ್ಮನ ಅನುಗ್ರಹದಿಂದ ಮೂಲೋಕವನ್ನು ಗೆದ್ದರು. ಅದು ಬೇರೆಯವರಿಗೆ ಧರಿಸಲಾಗದುದು. ಲಕ್ಷ

---

1. ತರ್ಹಿ ಪಾರ್ಥಪ್ರತಿಜ್ಞಾನಂತರಂ ಪುನಃ ಕೃಷ್ಣಪ್ರಾರ್ಥನಂ ಭಾರತಾದೌ ಕಥಮಿತ್ಯತಸ್ತಸ್ಯ ತಾತ್ಪರ್ಯಮಾಹ ನಚಾಯುಕ್ತ ಇತಿ। -ವರದರಾಜೀಯ
2. ಕೃಷ್ಣಸ್ಯಾರ್ಜುನ ಪ್ರೇರಣಾರ್ಥಂ ಪೂರ್ವಂ ಯಾಚಿತತ್ವಾತ್, ಪುನಃ ಸಹಾಯಕರಣಾರ್ಥಂ ಯಾಚನಾತ್ ಭೂಯ ಇತ್ಯುಕ್ತಂ। -ಜನಾರ್ದನೀಯ

ಭಾರದಷ್ಟು ಭಾರ, ವಿಜಯಪ್ರದ ಮತ್ತು ಶುಭದಾಯಕ.

[1]ಒಂದು ಭಾರವೆಂದರೆ ಇಪ್ಪತ್ತು ತೊಲೆ ತೂಕವೆನ್ನುತ್ತದೆ. ಜನಾರ್ದನೀಯ. ಮೂವತ್ತೆರಡು ಸಾವಿರ ನಿಷ್ಕತೂಕವೆಂದು ವರದರಾಜೀಯ.

ರಥಂ ಚ ಶುಭ್ರಾಶ್ವಯುತಂ ಶುಭಾವಹಂ
ತೂಣೌ ತಥಾ ಚಾಕ್ಷಯಸಾಯಕೌ ಶುಭೌ ।
ಧ್ವಜಂ ಚ ರಾಮಸ್ಯ ಹನೂಮದಂಕ-
ಮಾದಾಯ ಸರ್ವಂ ವರುಣಾದರ್ಜುನೇಽದಾತ್ ॥೨೨೪॥

ಬಿಳಿ ಕುದುರೆಗಳಿಂದ ಯುಕ್ತವಾಗಿದ್ದು ಶುಭದಾಯಕವಾದ ರಥವನ್ನೂ ಅಕ್ಷಯ ಬಾಣಗಳುಳ್ಳ ಶುಭದಾಯಕವಾದ ಎರಡು ಬತ್ತಳಿಕೆಗಳನ್ನೂ ಹನುಮಂತನ ಚಿಹ್ನೆಯುಳ್ಳ ಶ್ರೀರಾಮನ ಧ್ವಜವನ್ನೂ ಎಲ್ಲವನ್ನೂ ಅಗ್ನಿ ವರುಣನಿಂದ ತೆಗೆದುಕೊಂಡು ಬಂದು ಅರ್ಜುನನಿಗೆ ನೀಡಿದ.

ಈ ರಥ ವಿಶ್ವಕರ್ಮ ನಿರ್ಮಿತ. ಚಂದ್ರ ಈ ರಥವನ್ನೇರಿ ದಾನವರನ್ನು ಸಂಹರಿಸಿದ್ದನೆಂದು ಮಹಾಭಾರತ ಹೇಳಿದೆ.

[2]ಶ್ರೀರಾಮಚಂದ್ರ ಯುದ್ಧ ಮಾಡುತ್ತಿದ್ದಾಗ ಅವನ ಧ್ವಜ ಹನುಮಂತನ ಚಿಹ್ನೆಯಿಂದ ಕೂಡಿತ್ತು ಎಂದರ್ಥ. ಇಂದ್ರ ಕಳಿಸಿದ ಈ ರಥವೇರಿ ಶ್ರೀರಾಮ ರಾವಣನೊಡನೆ ಯುದ್ಧ ಮಾಡುತ್ತಿದ್ದಾಗ ಹನುಮಂತ ಧ್ವಜಾಗ್ರದಲ್ಲಿ ಚಿಹ್ನರೂಪದಿಂದ ಕುಳಿತಿದ್ದ. ಅದೇ ರಥವನ್ನು ಅರ್ಜುನನಿಗಾಗಿ ಇಂದ್ರ ವರುಣನ ಬಳಿಯಲ್ಲಿ ಇರಿಸಿದ್ದ.-ವಾದಿರಾಜೀಯ.

ವಿಶೇಷತೋ ಧ್ವಜಸಂಸ್ಥೇ ಹನೂಮ-
ತ್ಯಜೇಯತಾ ಸ್ಯಾಜ್ಜಯರೂಪೋ ಯತೋಽಸೌ ।
ಸರ್ವಂ ಚ ತದ್ ದಿವ್ಯಮಭೇದ್ಯಮೇವ
ವಿದ್ಯುತ್ಪ್ರಭಾ ಜ್ಯಾ ಚ ಗಾಂಡೀವಸಂಸ್ಥಾ ॥೨೨೯॥

ಧ್ವಜದಲ್ಲಿ ಹನುಮಂತನಿದ್ದರೆ ರಥಿಕನಿಗೆ ವಿಶೇಷವಾಗಿ ಅಜೇಯತ್ವ ಬರುತ್ತದೆ.

---

1. ಭಾರಃ ಸ್ಯಾದ್ ವಿಂಶತಿ ಸ್ತುಲಾ ಇತ್ಯಮರಃ । -ಜನಾರ್ದನೀಯ
   ದ್ವಾತ್ರಿಂಶತ್ ಸಹಸ್ರ ನಿಷ್ಕಾತ್ಮಕಭಾರಲಕ್ಷೇಣ ಸಮಭಾರಮಿತ್ಯರ್ಥಃ। -ವರದರಾಜೀಯ
2. ರಾಮಸ್ಯ ಯುದ್ಧಕಾಲೇ ಹನುಮದಂಕಂ। ಯದಾ ರಾಮ ಇಂದ್ರದತ್ತಮಿಮಮೇವ ರಥ ಮಾರುಹ್ಯ ರಾವಣಂ ಪ್ರತಿ ಯುದ್ಧಂ ಚಕ್ರೇ ತದಾ ಹನುಮಾನ್ ಧ್ವಜಾಗ್ರೇ ಅಂಕತಯಾ ಸ್ಥಿತಃ। -ವಾದಿರಾಜೀಯ

ಏಕೆಂದರೆ ಹನುಮಂತ ಜಯಸ್ವರೂಪ. ಗಾಂಡೀವ ಮುಂತಾದುವೆಲ್ಲವೂ ಲೋಕವಿಲಕ್ಷಣ ಮತ್ತು ಅಭೇದ್ಯ. ಗಾಂಡಿವದಲ್ಲಿರುವ ಹೆದೆಯೂ ಮಿಂಚಿನಂತೆ ಹೊಳೆಯುವಂತಹುದು.

[1]ಎಲ್ಲವೂ ಲೋಕವಿಲಕ್ಷಣ ಮತ್ತು ಅಭೇದ್ಯವೆನ್ನುವಾಗ ಹೆದೆಯನ್ನು ಹೊರತು ಇನ್ನೆಲ್ಲವೂ ಅಭೇದ್ಯವೆಂದು ಗ್ರಹಿಸಬೇಕು. ಏಕೆಂದರೆ ಅಶ್ವತ್ಥಾಮ ಹೆದೆಯನ್ನು ಕಡಿಯುತ್ತಾನೆ ಎಂದು ಮುಂದೆ ಹೇಳುತ್ತಾರೆ. ಈ ಅಭಿಪ್ರಾಯದಿಂದಲೆ ಹೆದೆಯನ್ನು ಕುರಿತು ಪ್ರತ್ಯೇಕ ಹೇಳಿದ್ದಾರೆ.

ಗಾಂಡೀವಮಪ್ಯಾಸ ಕೃಷ್ಣಪ್ರಸಾದಾತ್
ಶಕ್ಯಂ ಧರ್ತುಂ ಪಾಂಡವಸ್ಯಾಪ್ಯಧಾರ್ಯಂ।
ದೇವೈಶ್ಚ ತೈರ್ಬ್ರಹ್ಮವರಾದ್ಧೃತಂ ತತ್
ಬ್ರಹ್ಮೈವ ಸಾಕ್ಷಾತ್ ಪ್ರಭುರಸ್ಯ ಧಾರಣೇ ॥೨೩೦॥

ಗಾಂಡೀವ ಬ್ರಹ್ಮನಿಗೆ ಹೊರತು ಅನ್ಯರಿಗೆ ಧರಿಸಲಾಗದಿದ್ದರೂ ಶ್ರೀಕೃಷ್ಣನ ಅನುಗ್ರಹದಿಂದ ಅರ್ಜುನನಿಗೆ ಧರಿಸಲು ಶಕ್ಯವಾಯಿತು. ರುದ್ರಾದಿ ದೇವತೆಗಳೂ ಬ್ರಹ್ಮನ ವರದಿಂದ ಅದನ್ನು ಧರಿಸಿದ್ದರು. ಸ್ವಶಕ್ತಿಯಿಂದ ಬ್ರಹ್ಮನೊಬ್ಬನೆ ಅದನ್ನು ಧರಿಸಲು ಸಮರ್ಥ.

ಶ್ರೀಕೃಷ್ಣ ಪರಂಧಾಮಕ್ಕೆ ಹೋದಾಗ ಅವನ ಹದಿನಾರು ಸಾವಿರ ಸ್ತ್ರೀಯರನ್ನು ಮ್ಲೇಚ್ಛರು ಅಪಹರಿಸಿ ಒಯ್ಯುತ್ತಿದ್ದರೂ ಅರ್ಜುನ ಗಾಂಡೀವವನ್ನು ಎತ್ತಲಾರದೆ ಅಸಹಾಯಕತೆಯಿಂದ ನೋಡಿದನಂತೆ.

ಇಂದ್ರಸ್ಯ ದತ್ತಶ್ಚ ವರಃ ಸ್ವಯಂಭುವಾ
ತೇನಾಪಿ ಪಾರ್ಥಸ್ಯ ಬಭೂವ ಧಾರ್ಯಂ।
ಇಂದ್ರೋ ಹ್ಯಸೌ ಫಲ್ಗುನತ್ವೇನ ಜಾತ-
ಸ್ತತಃ ಸೋಽಸ್ತ್ರೈಃ ಶರಶಾಲಾಂ ಚಕಾರ ॥೨೩೧॥

ಇಂದ್ರನಿಗೆ ಬ್ರಹ್ಮ ವರನೀಡಿದ್ದ. ಅದರಿಂದಲೂ ಅರ್ಜುನನಿಗೆ ಗಾಂಡೀವವನ್ನು ಧರಿಸಲು ಶಕ್ಯವಾಯಿತು. ಏಕೆಂದರೆ ಇಂದ್ರನೇ ಅರ್ಜುನನಾಗಿ ಹುಟ್ಟಿದ್ದ. ಅದರಿಂದ ಅರ್ಜುನ ಅಸ್ತ್ರಗಳಿಂದ ಒಂದು ಭವನವನ್ನೆ ನಿರ್ಮಿಸಿದ.

ಖಾಂಡವ ವನವನ್ನು ಹೊರಗಿಂದ ಯಾರೂ ಒಳಗೆ ಪ್ರವೇಶಿಸುವಂತಿಲ್ಲ. ಒಳಗಿನವರು ಹೊರಗೂ ಬರುವಂತಿಲ್ಲ. ಹಾಗೆ ಸುತ್ತಲೂ ಮೇಲೂ ಎಲ್ಲೆಡೆ ಬಾಣಗಳ ಬಲೆಯನ್ನು ನಿರ್ಮಿಸಿ ಇಡೀ

---

1. ಅಭೇದ್ಯತ್ವಂ ಚ ಜ್ಯಾಂ ವರ್ಜಯಿತ್ವೇತಿ ಜ್ಞಾತವ್ಯಂ। ಗುರೋಃ ಸುತಃ ಚಿಚ್ಛೇದ ಚ ಜ್ಯಾಂ ಯುಧಿ ಗಾಂಡಿವಸ್ಯೇತಿ ವಕ್ಷ್ಯಮಾಣತ್ವಾತ್। -ಜನಾರ್ದನೀಯ

ವನವನ್ನು ಆವರಿಸುವಂತೆ ಒಂದು ಬಾಣಗಳ ಭವನವನ್ನೇ ನಿರ್ಮಿಸಿದ ಅರ್ಜುನ. ಭೀಷ್ಮ ಗಂಗಾ ಪ್ರವಾಹದ ನಡುವೆ ಬಾಣಗಳ ಗೋಡೆ ನಿರ್ಮಿಸಿ ನೀರು ಹರಿಯದಂತೆ ತಡೆದ ಪ್ರಸಂಗ ಹಿಂದೆ ವರ್ಣಿತವಾಗಿದೆ. ಹಾಗೇ ಒಂದು ಸಣ್ಣ ಕೃಮಿಯೂ ಕಾಡಿನಿಂದ ಹೊರಗೆ ತಪ್ಪಿಸಿಕೊಂಡು ಬಾರದಂತೆ ಅರ್ಜುನ ಬಾಣಗಳ ಗೋಡೆಯನ್ನೂ ಸೂರನ್ನೂ ನಿರ್ಮಿಸಿದ. ಪ್ರಾಣಿಗಳ ಮೈಯ ಕೊಬ್ಬು ಅಗ್ನಿಗೆ ಉದರಾಗ್ನಿದೀಪಕ ಔಷಧವಾಗಿತ್ತು. ಅದಕ್ಕೇ ಸುರಕ್ಷತಾಕ್ರಮ ಕೈಗೊಂಡ ಅರ್ಜುನ.

ಖಾಂಡವ ದಹನ

ಆಯೋಜನದ್ವಾದಶಕಾಭಿವಿಸ್ತೃತಂ
ಪುರಂ ಚಕಾರಾಶು ಪುರಂದರಾತ್ಮಜಃ ।
ಹುತಾಶನೋಽಪ್ಯಾಶು ವನಂ ಪ್ರಗೃಹ್ಯ
ಪ್ರಭಕ್ಷಯಾಮಾಸ ಸಮುದ್ಧತಾರ್ಚಿಃ ॥೨೩.೨॥

ಅರ್ಜುನ ಬೇಗನೆ ಬಾಣಗಳಿಂದ ಹನ್ನೆರಡು ಯೋಜನಗಳವರೆಗೆ ವಿಸ್ತೃತವಾದ ಶರಪಂಜರವನ್ನು ನಿರ್ಮಿಸಿದ. ಅಗ್ನಿ ಬೇಗನೆ ಜ್ವಾಲೆಯನ್ನು ಎತ್ತರಕ್ಕೆ ಚಾಚಿ ಕಾಡನ್ನು ಹಿಡಿದು ಭಕ್ಷಿಸತೊಡಗಿದ.

ಪ್ರಭಕ್ಷ್ಯಮಾಣಂ ನಿಜಕಕ್ಷಮೀಕ್ಷ್ಯ
ಸಂಧುಕ್ಷಯಾಮಾಸ ತದಾಶುಶುಕ್ಷಣಿಂ ।
ಅಕ್ಷ್ವೀಪಮಾಭಿರ್ಬಹುಲೇಕ್ಷಣೋಽಂಭಸಾಂ
ಧಾರಾಭಿರಾಕ್ಷುಬ್ಧಮನಾಃ ಕ್ಷಯಾಯ ॥೨೩.೩॥

ಇಂದ್ರ ತನ್ನ ಕಾಡು ಬೆಂಕಿಯಿಂದ ಭಕ್ಷಿತವಾಗುವುದನ್ನು ಕಂಡು ಮನಸ್ಸಿನಲ್ಲಿ ಕ್ಷೋಭೆಗೊಂಡವನಂತೆ ರಥದ ಅಚ್ಚು ಮರದಷ್ಟು ಗಾತ್ರದ ಜಲಧಾರೆಗಳಿಂದ ಬೆಂಕಿಯ ಜ್ವಾಲೆಯನ್ನು ಆರಿಸಲು ಯತ್ನಿಸಿದ.

ಇಂದ್ರನಿಗೆ ಮನಃಕ್ಷೋಭೆ ಇರಲಿಲ್ಲ. ಅಗ್ನಿಯನ್ನು ನಾಶ ಮಾಡುವ ಅಭಿಪ್ರಾಯವೂ ಇರಲಿಲ್ಲ. ಕೇವಲ ಜ್ವಾಲೆಯನ್ನು ಆರಿಸಲು ಯತ್ನಿಸಿದ್ದ. ಇದು ಕೇವಲ ಕ್ರೀಡಾ ಮನೋಭಾವದ ಯುದ್ಧ.

ಅಸ್ತ್ರೈಸ್ತು ವೃಷ್ಟಿಂ ವಿನಿವಾರ್ಯ ಕೃಷ್ಣಃ
ಪಾರ್ಥಶ್ಚ ಶಕ್ರಂ ಸುರಪೂಗಯುಕ್ತಂ ।
ಅಯುಧ್ಯತಾಂ ಸೋಽಪಿ ಪರಾಜಿತೋಽಭೂತ್
ಪ್ರೀತಶ್ಚ ದೃಷ್ಟ್ವಾ ಬಲಮಾತ್ಮಜಸ್ಯ ॥೨೩.೪॥

ಕೃಷ್ಣಾರ್ಜುನರು ವಾಯವ್ಯಾದಿ ಅಸ್ತ್ರಗಳಿಂದ ಮಳೆಯನ್ನು ತಡೆದು, ದೇವ ಸಮೂಹ ಸಮೇತನಾಗಿ ಬಂದ ಇಂದ್ರನೊಡನೆ ಹೋರಾಡಿದರು. ಅವನು ಪರಾಜಿತನಾದ. ತನ್ನ ಮಗನ ಪರಾಕ್ರಮವನ್ನು ಕಂಡು ಸಂತುಷ್ಟನೂ ಆದ.

ಮಹಾಭಾರತದಲ್ಲಿ ಕೃಷ್ಣಚಕ್ರ ಅಸಂಖ್ಯ ದಾನವ ರಾಕ್ಷಸ ಪಿಶಾಚ ಮೃಗ ಪಕ್ಷಿಗಳನ್ನು ತರಿದು ತರಿದು ಬೆಂಕಿಗೆ ಆಹುತಿ ನೀಡಿತು. ದೇವತೆಗಳು ಹೋರಾಡಿ ಸೋತು ಹಿಮ್ಮೆಟ್ಟಿದರು. ಅದನ್ನು ಕಂಡು ಇಂದ್ರ ಕೃಷ್ಣಾರ್ಜುನರ ಪರಾಕ್ರಮಕ್ಕೆ ಮೆಚ್ಚಿದ. ಬಳಿಕ ಅಶರೀರವಾಣಿಯಾಯಿತು ಎಂದಿದೆ.

'ನಿನ್ನ ಮಿತ್ರನಾದ ತಕ್ಷಕನೀಗ ಖಾಂಡವವನದಲ್ಲಿಲ್ಲ. ಕುರುಕ್ಷೇತ್ರಕ್ಕೆ ಹೋಗಿದ್ದಾನೆ. ಅದರಿಂದ ಅವನ ರಕ್ಷಣೆಯ ಉದ್ದೇಶದಿಂದ ನೀನೀಗ ಹೋರಾಡುವ ಆವಶ್ಯಕತೆ ಇಲ್ಲ. ಮತ್ತು ಈ ಕೃಷ್ಣಾರ್ಜುನರು ನಿನಗೆ ಸೋಲುವವರೂ ಅಲ್ಲ. ಹೋರಾಟ ನಿಲ್ಲಿಸು, ಹಿಂತೆರಳು' ಎಂದು ಅಶರೀರವಾಣಿನುಡಿಯಿತು.

ಸ್ನೇಹಂ ಚ ಕೃಷ್ಣಸ್ಯ ತಮರ್ಜುನೇ ಧೃತಂ
ವಿಲೋಕ್ಯ ಪಾರ್ಥಸ್ಯ ಬಲಂ ಚ ತಾದೃಶಂ ।
ನಿವರ್ತ್ಯ ಮೇಘಾನತಿತುಷ್ಟಚಿತ್ತಃ
ಪ್ರಣಮ್ಯ ಕೃಷ್ಣಂ ತನಯಂ ಸಮಾಶ್ಲಿಷತ್ ॥೨೩೫॥

ಅರ್ಜುನನಲ್ಲಿ ಶ್ರೀಕೃಷ್ಣನಿರಿಸಿದ್ದ ಪ್ರೀತಿಯನ್ನೂ ಅರ್ಜುನನ ಆ ಅಸಾಧಾರಣ ಪರಾಕ್ರಮವನ್ನೂ ಕಂಡು ದೇವೇಂದ್ರ ಬಹಳ ಸಂತುಷ್ಟಚಿತ್ತನಾಗಿ ಮೋಡಗಳನ್ನು ಹಿಂದೆ ಕಳಿಸಿ ಕೃಷ್ಣನನ್ನು ನಮಿಸಿ ಮಗನನ್ನು ಆಲಿಂಗಿಸಿದ.

ವಿಷ್ಣುಶ್ಚ ಶಕ್ರೇಣ ಸಹೈತ್ಯ ಕೇಶವಂ
ಸಮಾಶ್ಲಿಷನ್ನಿರ್ವಿಶೇಷೋಽಪ್ಯನಂತಃ ।
ಸ ಕೇವಲಂ ಕ್ರೀಡಮಾನಃ ಸಶಕ್ರಃ
ಸ್ಥಿತೋ ಹಿ ಪೂರ್ವಂ ಯುಯುಧೇ ನ ಕಿಂಚಿತ್ ॥೨೩೬॥

ಶ್ರೀವಿಷ್ಣು ಅನಂತನಾಗಿದ್ದು ಅವತಾರಗಳಲ್ಲಿ ಭೇದರಹಿತನಾದರೂ ಇಂದ್ರನೊಂದಿಗೆ ಬಂದು ಶ್ರೀಕೃಷ್ಣನನ್ನು ಆಲಿಂಗಿಸಿದ. ಅವನು ಅಷ್ಟರವರೆಗೆ ಇಂದ್ರನ ಜೊತೆ ನಿಂತು ಕೇವಲ ಕ್ರೀಡೆ ಮಾಡುತ್ತಿದ್ದನೇ ಹೊರತು ಒಂದಿಷ್ಟೂ ಯುದ್ಧ ಮಾಡಲಿಲ್ಲ.

ಸ್ವರ್ಗದಲ್ಲಿ ಇಂದ್ರನ ರಕ್ಷಣೆಗಾಗಿ ನಿಂತ ಇಂದ್ರನ ತಮ್ಮ ವಾಮನನನ್ನು ಇಲ್ಲಿ 'ವಿಷ್ಣು' ಶಬ್ದದಿಂದ ಗ್ರಹಿಸಬೇಕು ಎನ್ನುತ್ತಿದೆ ವಾದಿರಾಜೀಯ.

ವಿಷ್ಣು ಅನಂತನಾದ್ದರಿಂದ 'ಅನಂತಮಂತವದಿವ' ಎಂಬಂತೆ ತನ್ನ ಬಾಹುಬಂಧನಕ್ಕೆ ತಾನೆ ಸಿಲುಕುತ್ತಾನೆ.

ಬ್ರಹ್ಮಾ ಚ ಶರ್ವಶ್ಚ ಸಮೇತ್ಯ ಕೃಷ್ಣಂ
ಪ್ರಣಮ್ಯ ಪಾರ್ಥಸ್ಯ ಚ ಕೃಷ್ಣನಾಮ।
ಸಂಚಕ್ರತುಶ್ಚಾಪಿ ಶಿಕ್ಷಾಪ್ರಕರ್ಷಾತ್
ಚಕ್ರುಶ್ಚ ಸರ್ವೇ ಸ್ವಾಸ್ತ್ರದಾನೇ ಪ್ರತಿಜ್ಞಾಂ ॥೨೩.೭॥

ಬ್ರಹ್ಮನೂ ರುದ್ರನೂ ಬಂದು ಕೃಷ್ಣನನ್ನು ನಮಿಸಿ, ಅರ್ಜುನನ ಶಸ್ತ್ರಾಭ್ಯಾಸ ಉತ್ಕೃಷ್ಟವಾದ್ದರಿಂದ ಅವನಿಗೆ ಕೃಷ್ಣ ಎಂದು ನಾಮಕರಣ ಮಾಡಿದರು. ಎಲ್ಲರೂ ಸಮಯ ಬಂದಾಗ ತಮ್ಮ ತಮ್ಮ ಅಸ್ತ್ರಗಳನ್ನು ಅವನಿಗೆ ಉಪದೇಶಿಸುವುದಾಗಿ ಪ್ರತಿಜ್ಞೆಗೈದರು.

ಅರ್ಜುನ ತಪಸ್ಸಿನಿಂದ ಶಿವನನ್ನು ಒಲಿಸಿಕೊಳ್ಳಬೇಕು. ಬಳಿಕ ತಾವು ತಮ್ಮ ಅಸ್ತ್ರಗಳನ್ನು ಉಪದೇಶಿಸುವೆವೆಂದರು ದೇವತೆಗಳು. 'ಕೃಷ್ಣ' ಎಂದರೆ ಕೃಷ್ಟ, ಉತ್ಕೃಷ್ಟ, ಶಸ್ತ್ರಾಭ್ಯಾಸದಲ್ಲಿ. ಅದರಿಂದ ಅರ್ಜುನ ಕೃಷ್ಣನೆನಿಸಿದ.

ಅನುಜ್ಞಾತಾಸ್ತೇ ಪ್ರಯಯುಃ ಕೇಶವೇನ
ಕ್ರೀಡಾರ್ಥಮಿಂದ್ರೋ ಯುಯುಧೇ ಹಿ ತತ್ರ।
ಪ್ರೀತ್ಯಾ ಕೀರ್ತಿಂ ದಾತುಮಪ್ಯರ್ಜುನಸ್ಯ
ತತಸ್ತುಷ್ಟಃ ಸಹ ದೇವೈರ್ಯಯೌ ಸ್ವಃ ॥೨೩.೮॥

ಶ್ರೀಕೃಷ್ಣನ ಅನುಜ್ಞೆ ಪಡೆದು ಬ್ರಹ್ಮಾದಿ ದೇವತೆಗಳು ಹೊರಟುಹೋದರು. ಇಂದ್ರ ಕ್ರೀಡೆಗೋಸ್ಕರವೆ ಕೃಷ್ಣನೊಡನೆ ಯುದ್ಧ ಮಾಡಿದ್ದ. ಅಸುರಾವೇಶದಿಂದಲ್ಲ. ಅರ್ಜುನನಿಗೆ ಕೀರ್ತಿ ತಂದುಕೊಡುವುದಕ್ಕಾಗಿ ಅವನೊಡನೆಯೂ ಪ್ರೀತಿಯಿಂದಲೆ ಯುದ್ಧ ಮಾಡಿದ್ದ. ಅದರಿಂದ ಸಂತುಷ್ಟನಾಗಿ ದೇವತೆಗಳೊಂದಿಗೆ ಅವನೂ ಸ್ವರ್ಗಕ್ಕೆ ತೆರಳಿದ.

ಜರಿತಾರ್ಯಾದಿ ಪಕ್ಷಿಗಳು

ದೈತ್ಯಾಶ್ಚ ನಾಗಾಶ್ಚ ಪಿಶಾಚಯಕ್ಷಾ
ಹತಾಶ್ಚ ಸರ್ವೇ ತದ್ವನಸ್ಥಾ ಹಿ ತಾಭ್ಯಾಂ।
ಋತೇ ಚತುಃಪಕ್ಷಿಣಶ್ಚಾಶ್ವಸೇನಂ
ಮಯಂ ಚ ನಾನ್ಯತ್ ಕಿಂಚಿದಾಸಾತ್ರ ಮುಕ್ತಂ ॥೨೩.೯॥

ದೈತ್ಯರು ನಾಗರು ಪಿಶಾಚರು ಯಕ್ಷರು ಮುಂತಾಗಿ ಆ ಕಾಡಿನಲ್ಲಿದ್ದ ಎಲ್ಲರೂ ಕೃಷ್ಣಾರ್ಜುನರಿಂದ ಹತರಾದರು. ನಾಲ್ಕು ಪಕ್ಷಿಗಳನ್ನೂ ಅಶ್ವಸೇನನನ್ನೂ ಮಯನನ್ನು ಬಿಟ್ಟರೆ ಬೇರೇನೂ ಅಲ್ಲಿ ಉಳಿಯಲಿಲ್ಲ.

ನಾಲ್ಕು ಪಕ್ಷಿಗಳಿಂದರೆ ಜರಿತಾರಿ ಸಾರಿಸೃಕ್ವ ಸ್ತಂಬಮಿತ್ರ ದ್ರೋಣ ಎಂಬ ನಾಲ್ವರು ಪಕ್ಷಿರೂಪದ ಮುನಿಗಳು. ಇವರು ವೇದದ್ರಷ್ಟೃಗಳಾದ ಋಷಿಗಳು. ಇವರ ತಂದೆ ಮಂದಪಾಲನೆಂಬ ಮುನಿ. ಈತ ತಪಸ್ಸು ಮಾಡಿ ಪಿತೃಲೋಕಕ್ಕೆ ಹೋಗಲು ಬಯಸಿದರೂ ಆ ಲೋಕ ಅವನಿಗೆ ಗೋಚರವಾಗಲಿಲ್ಲ. ಯಮನಲ್ಲಿ ಇದಕ್ಕೆ ಕಾರಣವನ್ನು ಕೇಳಿದಾಗ ನೀನು ಸಂತತಿ ಪಡೆದು ಪಿತೃಋಣ ತೀರಿಸಲಿಲ್ಲ ಎಂದ ಯಮ. ಮುನಿ ಹಿಂದೆ ಬಂದು ಭೂಮಿಯಲ್ಲಿ ಸಂತತಿ ಪಡೆಯಲು ಜರಿತಾ ಎಂಬ ಒಂದು ಹೆಣ್ಣು ಹಕ್ಕಿಯನ್ನು ಹಕ್ಕಿ ರೂಪದಿಂದ ಕೂಡಿದ. ಏಕೆಂದರೆ ಹಕ್ಕಿ ಜಾತಿಯಲ್ಲಿ ಬೇಗನೆ ಅನೇಕ ಸಂತತಿಯನ್ನು ಪಡೆಯಬಹುದು ಎಂದು. ಜರಿತೆಯಲ್ಲಿ ಜರಿತಾರಿ ಮುಂತಾದ ನಾಲ್ಕು ಮಕ್ಕಳನ್ನು ಪಡೆದು ಬಳಿಕ ಲಪಿತಾ ಎಂಬ ಇನ್ನೊಂದು ಹೆಣ್ಣು ಹಕ್ಕಿಯನ್ನು ಹೆಂಡತಿಯನ್ನಾಗಿ ಸ್ವೀಕರಿಸಿದ. ಇತ್ತ ಈ ನಾಲ್ಕು ಮಕ್ಕಳ ಕ್ಷೇಮಕ್ಕಾಗಿ ಅಗ್ನಿಯನ್ನು ಬೇಡಿ ವರವನ್ನೂ ಪಡೆದ.

ಅಶ್ವಸೇನನೆಂಬ ಸರ್ಪ

ಅಯಮಗ್ನೇಜರಿತೇತ್ಯಾದಿಮಂತ್ರೈಃ
ಸ್ತುತ್ವಾವಹ್ನಿಂ ಪಕ್ಷಿಣೋನೈವ ದಗ್ಧಾಃ ।
ಸ ಚಾಶ್ವಸೇನಃ ಪುತ್ರಕಸ್ತಕ್ಷಕಸ್ಯ
ಮಾತ್ರಾ ಗ್ರಸ್ತಃ ಪ್ರಾತಿಲೋಮ್ಯೇನ ಕಂಠೇ ॥೨೪೦॥

ಛಿನ್ನೇಽರ್ಜುನೇನಾಂತರಿಕ್ಷೇ ಪತಂತ್ಯಾ-
ಸ್ತಸ್ಯಾಃ ಶಕ್ರೇಣಾವಿತಶ್ಛಿನ್ನಪುಚ್ಛಃ ।
ವಧಾನ್ಮಾತುಃ ಪುಚ್ಛಭಂಗಾಚ್ಚ ರೋಷಾತ್
ಹಂತುಂ ಪಾರ್ಥಂ ಕರ್ಣತೂಣೀರಗೋಽಭೂತ್ ॥೨೪೧॥

'ಅಯಮಗ್ನೇ ಜರಿತಾ' ಇತ್ಯಾದಿ ಮಂತ್ರಗಳಿಂದ ಅಗ್ನಿಯನ್ನು ಸ್ತೋತ್ರ ಮಾಡಿದ್ದರಿಂದ ಪಕ್ಷಿಗಳು ಸುಟ್ಟುಹೋಗಲಿಲ್ಲ. ಅಶ್ವಸೇನ ತಕ್ಷಕನ ಮಗ. ಅವನ ತಾಯಿ ಅವನನ್ನು ಹಿಂದು ಮುಂದಾಗಿ ನುಂಗಿ ಆಕಾಶದಲ್ಲಿ ಹಾರುತ್ತಿದ್ದಾಗ ಅವಳ ಕುತ್ತಿಗೆಯನ್ನು ಅರ್ಜುನ ಕತ್ತರಿಸಿದ. ಅದರಿಂದ ಅವನ ಬಾಲ ತುಂಡಾಯಿತು. ಆದರೆ ಅವನನ್ನು ಇಂದ್ರ ರಕ್ಷಿಸಿದ. ಅವನು, ತನ್ನ ತಾಯನ್ನು ಕೊಂದಿದ್ದಕ್ಕೆ ಮತ್ತು ತನ್ನ ಬಾಲವನ್ನೂ ಕತ್ತರಿಸಿದ್ದಕ್ಕೆ ಕೋಪದಿಂದ ಅರ್ಜುನನನ್ನು ಕೊಲ್ಲುವ ಉದ್ದೇಶದಿಂದ ಕರ್ಣನ ಬತ್ತಳಿಕೆಯನ್ನು ಸೇರಿಕೊಂಡ.

ಹದಿನೈದು ದಿನಗಳ ಕಾಲ ಕಾಳ್ಗಿಚ್ಚು ಧಗಧಗಿಸಿ ಕಾಡನ್ನು ಸುಟ್ಟಿತು. ಆಗ ಬೆಂಕಿಯ ನಾಲಿಗೆ ಜರಿತಾರಿ ಮುಂತಾದ ಪಕ್ಷಿಗಳನ್ನು ಭಕ್ಷಿಸಲು ಬಂದಿತು. ತಂದೆ ಮಂದಪಾಲ ಎಂದೋ ಮಕ್ಕಳನ್ನು ಹಾಗೇ ಬಿಟ್ಟು

ಹೋಗಿದ್ದಾನೆ. ಮಕ್ಕಳಿಗಿನ್ನೂ ರೆಕ್ಕೆ ಬಲಿತಿಲ್ಲ. ಹಾರಿಹೋಗುವಂತಿಲ್ಲ. ಬಿಲದೊಳಗೆ ಸೇರಿಕೊಳ್ಳೋಣ ಎಂದರೆ ಇಲಿ ಹೆಗ್ಗಣಗಳ ಕಾಟ. ಮೇಲೆ ಬೆಕ್ಕುಗಳ ಕಾಟ. ತಾಯಿಯಾದರೂ ಬದುಕಿರಲಿ ಎಂದು ಅವಳನ್ನು ದೂರಕಳಿಸಿ ಮಕ್ಕಳು ಅಗ್ನಿಸ್ತುತಿ ರೂಪವಾದ 'ಅಯಮಗ್ನೇ ಜರಿತಾ ತೇ ಅಭೂದಪಿ' ಎಂದು ಮುಂತಾದ ಎರಡೆರಡು ಋಚೆಗಳ ನಾಲ್ಕು ಮಂತ್ರ (ಋಗ್ವೇದ 10.142)ಗಳನ್ನು ನಾಲ್ಕು ಪಕ್ಷಿಗಳು ಕಂಡುಕೊಂಡು ಸ್ತುತಿಸಿದುವು. ಅಗ್ನಿಸಂತುಷ್ಟನಾಗಿ ಅಭಯ ನೀಡಿದ. ಮಂದಪಾಲ ಮಕ್ಕಳ ಕ್ಷೇಮದ ವರವನ್ನು ಅಗ್ನಿಯಲ್ಲಿ ಬೇಡಿ ಪಡೆದಿದ್ದುದು ಮಕ್ಕಳಿಗಾಗಲಿ ತಾಯಿಗಾಗಲಿ ತಿಳಿದಿರಲಿಲ್ಲ. ಅವನು ಹಿಂತಿರುಗಿ ಬಂದಾಗ ಮೊದಲಿಗೆ ತಾಯಿ ಮಕ್ಕಳು ಎಲ್ಲರೂ ಅವನನ್ನು ಜರಿದರು. ಕೊನೆಗೆ ಜೊತೆಗೂಡಿದರು. ಅಗ್ನಿ ಪುನಃ ಆರು ದಿನಗಳ ಕಾಲ ಕಾಡನ್ನು ಸುಟ್ಟ. ಒಟ್ಟು ಇಪ್ಪತ್ತೊಂದು ದಿನಗಳ ಕಾಲ ಪೂರ್ತಿ ಕಾಡನ್ನು ಭಕ್ಷಿಸಿದ. ತೃಪ್ತಿ ಹೊಂದಿದ.(ಆದಿ 260.15)

ಪಾವಕಶ್ಚ ತದಾ ದಾವಂ ದಗ್ಧ್ವಾ ಸಮೃಗಪಕ್ಷಿಣಂ।
ಅಹೋಭಿರೇಕವಿಂಶದ್ಭಿರ್ವಿರರಾಮ ಸುತರ್ಪಿತಃ॥

(ಆದಿ 260-15)

ಅಶ್ವಸೇನ ತಕ್ಷಕನ ಮಗ. ತಕ್ಷಕನಿಗಾಗಿ ಖಾಂಡವವನವನ್ನು ಅಗ್ನಿಯಿಂದ ರಕ್ಷಿಸಿಕೊಂಡಿದ್ದ ಇಂದ್ರ. ಈಗ ತಕ್ಷಕ ಕುರುಕ್ಷೇತ್ರಕ್ಕೆ ಹೋಗಿದ್ದರೂ ಅವನ ಹೆಂಡತಿ ಮಕ್ಕಳಿದ್ದಾರೆ ಎಂದು ಇಂದ್ರ ವನವನ್ನು ರಕ್ಷಿಸಲು ಯತ್ನಿಸಿದ. ಆದರೂ ಅಗ್ನಿ ಕೃಷ್ಣಾರ್ಜುನರ ಸಹಾಯದಿಂದ ಕಾಡನ್ನು ಸುಡುತ್ತ ಬರುವಾಗ ಅಶ್ವಸೇನನನ್ನು ತಾಯಿ ನುಂಗಿದಳು. ಆದರೆ ಹಿಂದು ಮುಂದಾಗಿ ನುಂಗಿದಳು.

'ಹಿಂದುಮುಂದಾಗಿ' ಎಂದರೆ ಮೊದಲು ತಲೆಯನ್ನು ನುಂಗಿದಳು. ಬಳಿಕ ಇಡೀ ಶರೀರವನ್ನು ನುಂಗಿದಳು. ಪ್ರಸವ ಕಾಲದಲ್ಲಿ ಹೆಚ್ಚಾಗಿ ಮಕ್ಕಳ ತಲೆ ಮೊದಲು, ಬಳಿಕ ಬಾಲ ಹೊರಗೆ ಬರುತ್ತದೆ. ಮರಣಕಾಲದಲ್ಲಿ ಬಾಲದಿಂದ ತೊಡಗಿ ಶರೀರ ನಿಶ್ಚೇಷ್ಟವಾಗುತ್ತದೆ. ಈಗ ತಾಯಿ ಮಗನನ್ನು ನುಂಗುವುದೆಂದರೆ ಅದು ಮರಣಕ್ಕೆ ಸಮಾನ. ಬಾಲದಿಂದ ತೊಡಗಿ ನುಂಗಬೇಕಿತ್ತು. ಆದರೆ ತಲೆಯಿಂದ ತೊಡಗಿ ನುಂಗಿದ್ದಾಳೆ. ಇದು ತಿರುವು ಮುರುವು ಎನ್ನುತ್ತದೆ ಜನಾರ್ದನೀಯ[1]

1. ಪ್ರಾಣ ಸಂಬಂಧ ರೂಪೋತ್ಪತ್ತೇಃ ಪ್ರಾಯಃ ಶಿರಃ ಪೂರ್ವಕತ್ವೇನ ಪ್ರಾಣ ವಿಯೋಗರೂಪ ನಾಶಸ್ಯ ಪಾದಪೂರ್ವಕತ್ವೇನ ಗ್ರಸನಸ್ಯಾಪಿ ನಾಶ ಪ್ರತಿನಿಧಿತ್ವಾತ್ ತತ್ಪ್ರತಿಲೋಮ್ಯೇನ ಶಿರಃಪ್ರಭೃತಿಗ್ರಸ್ತ ಇತ್ಯರ್ಥಃ। ಯದ್ವಾ ಇತ್ಥಂಭೂತಲಕ್ಷಣೇ ತೃತೀಯಾ। ಯಥಾ ಮಾತುಃ ಕಂಠಪ್ರದೇಶೇಽಶ್ವಸೇನಸ್ಯ ಪುಚ್ಛಂ ಭವತಿ, ಅಸ್ಯ ಕಂಠಪ್ರದೇಶೇ ಮಾತುಃ ಪುಚ್ಛಂ ಭವತಿ ತಥಾ ಗ್ರಸ್ತಃ। -ಜನಾರ್ದನೀಯ

ಹಾವು ಕಪ್ಪೆಯನ್ನು ನುಂಗಿದರೆ ಬಹಳ ಹೊತ್ತಿನವರೆಗೆ ಅದು ಹೊಟ್ಟೆಯಲ್ಲಿ ಬದುಕಿರುತ್ತದೆ. ಇಲ್ಲಿ ತಕ್ಷಕನ ಮಡದಿ ಸಾಮಾನ್ಯ ಹಾವೂ ಅಲ್ಲ. ನಾಗರೆಂಬ ಉಪದೇವತೆಗಳ ಜಾತಿಯಲ್ಲಿ ಹುಟ್ಟಿದವಳು. ಅದರಿಂದ ಅವಳು ಅಶ್ವಸೇನನನ್ನು ನುಂಗಿದ್ದು ಆತ ಸಾಯದಿರಲಿ ಎಂದು. ಅವಳು ಆಕಾಶದಲ್ಲಿ ಹಾರುತ್ತಿದ್ದಾಗ ಅರ್ಜುನ ಅವಳ ಕುತ್ತಿಗೆಯನ್ನು ಕತ್ತರಿಸಿದ. ಆ ಕುತ್ತಿಗೆ ಭಾಗದಲ್ಲಿ ಅಶ್ವಸೇನನ ಬಾಲವಿದ್ದುದರಿಂದ ಬಾಲ ಕತ್ತರಿಸಿ ಹೋಯಿತು. ಅಷ್ಟರಲ್ಲಿ ದೇವೇಂದ್ರ ಪ್ರಬಲ ಚಂಢ ಮಾರುತವನ್ನು ನಿರ್ಮಿಸಿ ಅರ್ಜುನನನ್ನು ಒಂದುಕ್ಷಣ ಪ್ರಜ್ಞಾಶೂನ್ಯನನ್ನಾಗಿಸಿ ಅಶ್ವಸೇನ ತಪ್ಪಿಸಿಕೊಂಡು ಓಡಲು ಅವಕಾಶಮಾಡಿಕೊಟ್ಟ, ಆದರೂ ಕೃಷ್ಣಾರ್ಜುನರು ಅವನಿಗೆ ಆಶ್ರಯಹೀನನಾಗೆಂದು ಶಪಿಸಿದರು. ಆತ ಕರ್ಣನ ಬತ್ತಳಿಕೆಯೊಳಗೆ ಸೇರಿಕೊಂಡು ಅರ್ಜುನನ ವಧೆಗಾಗಿ ಕಾದಿದ್ದು ಮುಂದೆ ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನ ಬಾಣದಿಂದಲೆ ಹತನಾದ.

ಮಯನೆಂಬ ದಾನವಶಿಲ್ಪಿ

ಮಯಃ ಕೃಷ್ಣೇನಾತ್ತ ಚಕ್ರೇಣ ದೃಷ್ಟ್ವಾ
ಯಯೌ ಪಾರ್ಥಂ ಶರಣಂ ಜೀವಿತಾರ್ಥೀ।
ಪಾರ್ಥಾರ್ಥಮೇನಂ ನ ಜಘಾನ ಕೃಷ್ಣಃ
ಸ್ವಭಕ್ತಶ್ಚೇತ್ಯತಿಮಾಯಂ ರಮೇಶಃ ॥೨೪೨॥

ಚಕ್ರಧಾರಿಯಾದ ಶ್ರೀಕೃಷ್ಣನ ಕಣ್ಣಿಗೆ ಬಿದ್ದ ಮಯ ಪ್ರಾಣ ರಕ್ಷಣೆಗಾಗಿ ಅರ್ಜುನನನ್ನು ಮೊರೆಹೊಕ್ಕ. ಅರ್ಜುನನಿಗಾಗಿ ಕೃಷ್ಣ ಆತನನ್ನು ಕೊಲ್ಲದೆ ಬಿಟ್ಟ. ಅಲ್ಲದೆ ಅತಿ ಮಾಯಾವಿಯಾದರೂ ತನ್ನ ಭಕ್ತನೆಂದು ಕೃಷ್ಣ ಅವನನ್ನು ಕೊಲ್ಲಲಿಲ್ಲ.

ದೇವಾರಿರಿತ್ಯೇವ ಮಯಿ ಪ್ರಕೋಪಃ
ಕೃಷ್ಣಸ್ಯ ತೇನಾಹಮಿಮಂ ಪುರಂದರಂ।
ಪಾರ್ಥಾತ್ಮಕಂ ಶರಣಂ ಯಾಮಿ ತೇನ
ಕೃಷ್ಣಪ್ರಿಯಃ ಸ್ಯಾಮಿತಿ ತಸ್ಯ ಬುದ್ಧಿಃ ॥೨೪೩॥

ನಾನು ದೇವತೆಗಳ ಶತ್ರುವೆಂದು ಕೃಷ್ಣನಿಗೆ ನನ್ನಲ್ಲಿ ಮಹಾಕೋಪ. ಅದರಿಂದ ನಾನು ಅರ್ಜುನ ರೂಪದ ದೇವೇಂದ್ರನನ್ನೆ ಮೊರೆಹೊಗುತ್ತೇನೆ. ಅದರಿಂದ ನಾನು ಕೃಷ್ಣನಿಗೆ ಪ್ರಿಯನಾದೇನೆಂಬುದು ಮಯನ ಆಲೋಚನೆಯಾಗಿತ್ತು.

ಬ್ರಹ್ಮನ ಆದೇಶದಂತೆ ತಾರಕಾಸುರನ ಮಕ್ಕಳಾದ ತಾರಾಕ್ಷ ಕಮಲಾಕ್ಷ ವಿದ್ಯುನ್ಮಾಲಿ ಎಂಬ ಮೂವರು ತ್ರಿಪುರಾಸುರರಿಗೆ ಆಕಾಶದಲ್ಲಿ

ಸದಾ ಸಂಚರಿಸುವ ಚಿನ್ನ ಬೆಳ್ಳಿ ಕಬ್ಬಿಣಗಳ ಅದ್ಭುತವಾದ ಮೂರು ಪಟ್ಟಣಗಳನ್ನು ನಿರ್ಮಿಸಿ ಕೊಟ್ಟವ ಮಯ. ತಲಾತಲವೆಂಬ ಪಾತಾಳದಲ್ಲಿ ಇವನ ವಾಸ. ಇವನ ಮಕ್ಕಳು ಮಾಯಾವಿ ದುಂದುಭಿಗಳು ವಾಲಿಯಿಂದ ಹತರಾಗುತ್ತಾರೆ. ಮಗಳಾದ ಮಂಡೋದರಿ ರಾವಣನ ಪಟ್ಟದರಾಣಿ, ಮಹಾ ಪತಿವ್ರತೆ. ಇನ್ನೊಬ್ಬ ಮಗ ವ್ಯೋಮಾಸುರ ಗೋಪಾಲಕರನ್ನು ಗುಹೆಯಲ್ಲಿ ಬಂಧಿಸಿಟ್ಟು ಕೃಷ್ಣನಿಂದ ಹತನಾಗುತ್ತಾನೆ. ಇನ್ನೊಬ್ಬ ಮಗ ಬಲ ಅತಲವೆಂಬ ಪಾತಾಳಲೋಕದ ಅಧಿಪತಿ. ವಾಯುಪುರಾಣಾನುಸಾರ ದೇವ ಶಿಲ್ಪಿ ವಿಶ್ವಕರ್ಮನ ಮಗನೆ ಅಸುರರ ವಿಶ್ವಕರ್ಮನಾದ ಈ ಮಯ. ಬ್ರಹ್ಮನ ವರಬಲದಿಂದ ಮಹಾಶಿಲ್ಪಿ ಎನಿಸಿದ.

ಇಂದ್ರ ಅರ್ಜುನನೊಡನೆ ಯುದ್ಧ ಮಾಡುತ್ತಿದ್ದಷ್ಟು ಕಾಲ ಮಯ ತಕ್ಷಕನ ನಿವಾಸದಲ್ಲಿ ಅಡಗಿದ್ದ. ಇಂದ್ರ ಹದಿನೈದು ದಿನಗಳ ಕಾಲ ಯುದ್ಧಮಾಡಿ ಸೋತು ಹಿಂತಿರುಗಿದುದನ್ನು ಕಂಡು ಹತಾಶನಾಗಿ ಅರ್ಜುನನ ಕಣ್ಣು ತಪ್ಪಿಸಿ ಓಡಲು ಯತ್ನಿಸಿದ. ಆದರೆ ಚಕ್ರಧಾರಿ ಶ್ರೀಕೃಷ್ಣ ಅವನನ್ನು ನೋಡಿದ. ಇನ್ನು ನಾನು ಬದುಕಿ ಉಳಿಯಲಾರೆ ಎಂದು ಭಯದಿಂದ ಆತ ಅರ್ಜುನನನ್ನು ಶರಣಾದ. ಏಕೆ ಕೃಷ್ಣನನ್ನೆ ಶರಣಾಗಲಿಲ್ಲ? ಕೃಷ್ಣನಿಗಿಂತ ಅರ್ಜುನ ಬಲಿಷ್ಠನೆಂದು ಭ್ರಾಂತಿಯೆ? ಎಂದರೆ ಅಲ್ಲ, ಕೃಷ್ಣನ ಭಕ್ತ ತಾನು ಆದರೂ ಆತ ತನ್ನ ಮೇಲೆ ಚಕ್ರಪ್ರಯೋಗಕ್ಕೆ ಸಿದ್ಧನಾಗಿದ್ದಾನೆ. ಇದಕ್ಕೆ ಕಾರಣ, ತಾನು ಆತನ ಭಕ್ತನಲ್ಲ ಎಂದಲ್ಲ. ತಾನು ಅಸುರ ಜಾತಿಯವನು. ಅಸುರ ಎಂದರೆ ಸುರವಿರೋಧಿ, ದೇವತೆಗಳ ಶತ್ರು. ಅದರಿಂದ ತಾನು ಅಸುರ ಜಾತಿಯವನಾದರೂ ಸುರವಿರೋಧಿಯಲ್ಲ ಎಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿ ಸುರಾಧಿಪತಿ ದೇವೇಂದ್ರನ ಅವತಾರನಾದ ಅರ್ಜುನನ್ನೆ ಶರಣಾದ. ಅರ್ಜುನ, ಅಭಯ ನೀಡಿದೊಡನೆ ಕೃಷ್ಣ ಚಕ್ರವನ್ನು ಉಪಸಂಹರಿಸಿದ. -ವಾದಿರಾಜೀಯ

ಪ್ರಾಣೋಪಕೃತ್ ಪ್ರತ್ಯುಪಕಾರಮಾಶು
ಕಿಂ ತೇ ಕರೋಮೀತಿ ಸ ಪಾರ್ಥಮಾಹ ।
ಕೃಷ್ಣಪ್ರಸಾದಾದ್ಧಿ ಭವಾನ್ ವಿಮುಕ್ತ-
ಸ್ತಸ್ಮೈ ಕರೋತ್ವಿತ್ಯವದತ್ ಸ ಪಾರ್ಥಃ ॥೨೪೪॥

ನನ್ನ ಜೀವ ಉಳಿಸಿ ಉಪಕಾರ ಮಾಡಿದ್ದಕ್ಕೆ ನಾನೇನು ಪ್ರತ್ಯುಪಕಾರ ಮಾಡಲಿ ಎಂದು ಮಯ ಕೇಳಿದಾಗ ಅರ್ಜುನ, 'ಕೃಷ್ಣನ ಅನುಗ್ರಹದಿಂದ ನೀನು ಬದುಕಿ ಉಳಿದೆ. ಅದರಿಂದ ಅವನಿಗೆ ಪ್ರತಿಯಾಗಿ ಏನಾದರೂ ಸೇವೆ ಮಾಡು' ಎಂದ.

ಕೃಷ್ಣೋಽಪಿ ರಾಜ್ಞೋಽತಿವಿಚಿತ್ರರೂಪ-
ಸಭಾಕೃತಾವಾದಿಶತ್ತಾಂ ಸ ಚಕ್ರೇ।
ಅನಿರ್ಗಮಂ ಪ್ರಾಣಿನಾಮರ್ಥಿತೌ ತೌ
ಹುತಾಶನೇನಾಥ ವಿಧಾಯ ಜಗ್ಮತುಃ ॥೨೪೫॥

'ಧರ್ಮರಾಜನಿಗೆ ಅತ್ಯಂತ ವಿಚಿತ್ರರೂಪದ ಸಭಾಭವನವನ್ನು ನಿರ್ಮಾಣ ಮಾಡಿಕೊಡೆಂ'ದು ಶ್ರೀಕೃಷ್ಣ ಮಯನಿಗೆ ಆದೇಶ ನೀಡಿದ. ಮಯ ಹಾಗೇ ಒಂದು ಸಭಾಭವವನ್ನು ನಿರ್ಮಿಸಿದ. ಬೇರೆ ಯಾವ ಪ್ರಾಣಿಗಳೂ ಕಾಡಿಂದ ಹೊರಗೆ ಹೋಗಕೂಡದೆಂದು ಅಗ್ನಿ ಪ್ರಾರ್ಥಿಸಿದ್ದರಿಂದ ಕೃಷ್ಣಾರ್ಜುನರು ಹಾಗೇ ಮಾಡಿ ಹೊರಟುಹೋದರು.

ದೃಷ್ಟ್ವಾ ಚ ತೌ ಪಾಂಡವಾಃ ಸರ್ವ ಏವ
ಮಹಾಮುದಂ ಪ್ರಾಪುರೇತನ್ನಿಶಮ್ಯ।
ಕೃಷ್ಣೋಽಪಿ ಪಾರ್ಥೈರ್ಮುಮುದೇಽನಂತಶಕ್ತಿಃ
ಸುಖಜ್ಞಾನಪ್ರಭವೌದಾರ್ಯವೀರ್ಯಃ ॥೨೪೬॥

॥ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಖಾಂಡವದಾಹೋ ನಾಮ
ವಿಂಶೋಽಧ್ಯಾಯಃ ॥

ಪಾಂಡವರೆಲ್ಲರೂ ಕೃಷ್ಣಾರ್ಜುನರನ್ನು ಕಂಡು ಖಾಂಡವ ವನ ದಹನವನ್ನು ಕೇಳಿ ಬಹಳ ಸಂತೋಷಪಟ್ಟರು. ಅನಂತಶಕ್ತಿ, ಸುಖ, ಜ್ಞಾನ, ಪ್ರಭುತ್ವ, ಔದಾರ್ಯ, ವೀರ್ಯಗಳುಳ್ಳ ಶ್ರೀಕೃಷ್ಣನೂ ಪಾಂಡವರ ಜೊತೆಗೆ ಆನಂದಿಸಿದ.

ಇಲ್ಲಿಗೆ ಶ್ರೀಮದಾನಂದ ತೀರ್ಥ ಭಗವತ್ಪಾದರು ರಚಿಸಿದ
ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಖಾಂಡವ ದಹನವೆಂಬ
ಇಪ್ಪತ್ತನೇ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೧

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಪಾರ್ಥಾನ್ ಲಬ್ಧಸಭಾನ್ ವಿಧಾಯ ಮಯತಃ ಪ್ರಾಪ್ತಃ ಪುರಂ ಸ್ವಾಂ ಗತಃ
ಕ್ಷೇತ್ರಂ ಕೌರವ ಮರ್ಕಪರ್ವಣಿ ಪುರೀಂ ಸಂಪ್ರಾಪ್ಯ ಕರ್ತಾ ಕ್ರತೋಃ ।
ಪಾಂಡೂನ್ ಪ್ರಾಪ್ಯ ಜರಾಸುತೇ ವಿನಿಹತೇ ತೈಃ ಕಾರಯಿತ್ವಾಧ್ವರಂ
ಪ್ರಾಪ್ತಃ ಸ್ವಂ ಪುರಮಚ್ಯುತೋ ವಿಜಯತೇ ದ್ಯೂತೇ ಜಿತೈಶ್ಚ ಸ್ಮೃತಃ ॥ ೨೧ ॥

ಪಾಂಡವರಿಗೆ ಮಯಾಸುರನ ಮೂಲಕ ಸಭಾಭವನವನ್ನು ಮಾಡಿಸಿಕೊಟ್ಟು ತನ್ನ ಪಟ್ಟಣಕ್ಕೆ ಹೋದ. ಸೂರ್ಯಗ್ರಹಣದಲ್ಲಿ ಕುರುಕ್ಷೇತ್ರಕ್ಕೆ ಹೋದ. ದ್ವಾರಕೆಗೆ ಹೋಗಿ ಯಾಗ ಮಾಡಿದ. ಪಾಂಡವರನ್ನು ಸೇರಿ ಅವರಿಂದ ಜರಾಸಂಧ ಹತನಾಗಲು ರಾಜಸೂಯ ಯಾಗ ಮಾಡಿಸಿ ತನ್ನ ಪಟ್ಟಣಕ್ಕೆ ಬಂದ. ದ್ಯೂತದಲ್ಲಿ ಪರಾಜಿತರಾದ ಪಾಂಡವರಿಂದ ಸ್ಮರಿಸಲ್ಪಟ್ಟ. ಇಂಥ ಶ್ರೀಕೃಷ್ಣ ಮೆರೆಯುತ್ತಾನೆ.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೧

ಪಾಂಡವ ವನಪ್ರವೇಶ

॥ ಶ್ರೀಗುರುಭ್ಯೋ ನಮಃ ಹರಿಃ ಓಂ ॥

ಮಯನಿರ್ಮಿತ ಸಭಾಭವನ

ಓಂ ಜನಾರ್ದನಾಜ್ಞಯಾ ಮಯಃ ಸಮಸ್ತ ಕೌತುಕೋತ್ತರಾಂ ।
ಸಭಾಂ ವಿಧಾಯ ಭೂಭೃತೇ ದದೌ ಗದಾಂ ವೃಕೋದರೇ ॥೧॥

ಶ್ರೀಕೃಷ್ಣನ ಆಜ್ಞೆಯಿಂದ ಮಯಾಸುರ ಎಲ್ಲ ಆಶ್ಚರ್ಯಗಳಿಂದ ತುಂಬಿ ಉತ್ತಮವಾಗಿರುವ ಸಭಾಭವನವನ್ನು ನಿರ್ಮಿಸಿ ಧರ್ಮರಾಜನಿಗೆ ನೀಡಿದ. ಹಾಗೆಯೆ ಒಂದು ಗದೆಯನ್ನು ಭೀಮನಿಗೆತಂದಿತ್ತ.

ಕೇವಲ ಹದಿನಾಲ್ಕು ತಿಂಗಳ ಅವಧಿಯಲ್ಲಿ ಹತ್ತುಸಾವಿರ ಮೊಳ ಉದ್ದಗಲವಾಗಿದ್ದು ಎಲ್ಲ ಋತುಗಳ ಗುಣಾಂಶಗಳನ್ನು ಹೊಂದಿರುವ, ಕೆರೆ ಬಾವಿ ಉದ್ಯಾನಗಳಿಂದ ಕೂಡಿದ ಸಭಾಭವನವನ್ನು ಮಯ ನಿರ್ಮಿಸಿಕೊಟ್ಟ, ಎಂಟು ಸಾವಿರ ಮಂದಿ ಕಿಂಕರರೆಂಬ ರಾಕ್ಷಸರು ಈ ಭವನದ ಉಸ್ತುವಾರಿ ನೋಡಿಕೊಳ್ಳಲು ನಿಯುಕ್ತರಾದರು. ಇದು ಎಷ್ಟು ಅದ್ಭುತವಾಗಿತ್ತೆಂದರೆ ದುರ್ಯೋಧನ ಭ್ರಮೆಗಳಲ್ಲಿ ಸಿಲುಕಿ ನಗೆಪಾಟಲಾದ.

ಸ ವಾಯುಧಾರಿತಾಂ ಗದಾಂ ಹಿ ಯೌವನಾಶ್ವಭೂಭೃತಾ ।
ಪ್ರಸಾದತೋಽಸ್ಯ ಲಂಭಿತಾಮವಾಪ್ಯ ಮೋದಮಾಪ ಹ ॥೨॥

ಮಯ ತಂದಿತ್ತ ಗದೆ ವಾಯುದೇವ ಧರಿಸಿದ ಗದೆಯಾಗಿತ್ತು ಅದು ಮೊದಲಿಗೆ ವಾಯುವಿನ ಅನುಗ್ರಹದಿಂದ ರಾಜಾ ಮುಚುಕುಂದನಿಗೆ ಲಭ್ಯವಾಗಿತ್ತು. ಅದನ್ನು ಪಡೆದು ಭೀಮಸೇನ ಸಂತಸಗೊಂಡ.

ಕೈಲಾಸದ ಉತ್ತರದಲ್ಲಿ ಮೈನಾಕದ ಬಳಿ ಬಿಂದು ಸರೋವರ. ಅದರ ಬಳಿ ದೈತ್ಯ ಚಕ್ರವರ್ತಿ ವೃಷಪರ್ವರಾಜನ ಸಭಾ ಭವನದ ಅವಶೇಷಗಳಾದ ವಿಚಿತ್ರ ಮಣಿರತ್ನಗಳಿದ್ದು. ಅವನ್ನೆ ತಂದು ಸಭಾಭವನ ನಿರ್ಮಿಸಿದ್ದ, ಮಯ. ಅಲ್ಲಿಯೆ ವಾಯುದೇವನ ಮೂಲಗದೆಯೂ ಇತ್ತು. ಅದೂ

ಗಾಂಡೀವದಂತೆಯೆ ಲಕ್ಷಭಾರದಷ್ಟು ಭಾರವಾಗಿತ್ತು. ಈ ಗದೆಯೊಂದಿಗೆ ದೇವದತ್ತವೆಂಬ ಶಂಖವೂ ಇತ್ತು. ಅದನ್ನು ತಂದು ಅರ್ಜುನನಿಗೆ ಕೊಟ್ಟ.

ಪುನಶ್ಚ ವತ್ಸರದ್ವಯಂ ಸಮುಷ್ಯ ಕೇಶವೋ ಯಯೌ ।
ಸಮರ್ಚಿತಶ್ಚ ಪಾಂಡವೈರ್ವಿಯೋಜನೇಕಸ್ಯ ಚಾಕ್ಷಮೈಃ ॥೩॥

ಇಂದ್ರಪ್ರಸ್ಥದಲ್ಲಿ ಶ್ರೀಕೃಷ್ಣ ಪುನಃ ಎರಡು ವರ್ಷಕಾಲ ವಾಸಮಾಡಿ ದ್ವಾರಕೆಗೆ ಹೊರಟ. ಆಗ ಅವನ ವಿಯೋಗವನ್ನು ಸಹಿಸಲು ಅಸಮರ್ಥರಾದ ಪಾಂಡವರು ಅವನನ್ನು ಬಹಳ ಸತ್ಕರಿಸಿದರು.

ಸಮಂತಪಂಚಕದಲ್ಲಿ ವಸುದೇವನ ಯಜ್ಞ

ತತೋ ವಸನ್ ಸ್ವಪುರ್ಯಜಃ ಕ್ಷಚಿದ್ರವಿಗ್ರಹೇ ಹರಿಃ ।
ಸದಾರಪುತ್ರಬಾಂಧವಃ ಸಮಂತಪಂಚಕಂ ಯಯೌ ॥೪॥

ಬಳಿಕ ದ್ವಾರಕೆಯಲ್ಲಿದ್ದಾಗ ಶ್ರೀಕೃಷ್ಣ ಒಮ್ಮೆ ಸೂರ್ಯಗ್ರಹಣಕಾಲದಲ್ಲಿ ಪತ್ನೀಪುತ್ರ ಬಾಂಧವರೊಂದಿಗೆ ಸಮಂತ ಪಂಚಕಕ್ಕೆ ತೆರಳಿದ.

ಪರಶುರಾಮ ದುಷ್ಟಕ್ಷತ್ರಿಯರ ಸಂಹಾರ ಮಾಡಿ ಅವರ ನೆತ್ತರಿನಿಂದ ಕುರುಕ್ಷೇತ್ರದಲ್ಲಿ ಐದು ಸರೋವರಗಳನ್ನು ನಿರ್ಮಿಸಿ ಆ ನೆತ್ತರಿನಿಂದ ಪಿತೃಗಳಿಗೆ ತರ್ಪಣ ನೀಡಿದ. ಪಿತೃಗಳು ತೃಪ್ತರಾಗಿ ಆ ಸರೋವರಗಳು ಪವಿತ್ರ ತೀರ್ಥವೆನಿಸಲಿ ಎಂದರು. 'ಸಮಂತ' ಎಂದರೆ 'ಸಮೇತಾನಾಂ ಅಂತಃ ಯಸ್ಮಿನ್' ಯಾವ ಪ್ರದೇಶದಲ್ಲಿ 'ಸಮ್' ಗುಂಪಾಗಿ ಬಂದ ದುಷ್ಟ ಕ್ಷತ್ರಿಯರ 'ಅಂತ' ನಾಶವಾಯಿತೋ ಆ ಪ್ರದೇಶ. ಅಲ್ಲಿರುವ ಐದು ಸರೋವರ 'ಸಮಂತ ಪಂಚಕ' ವೆನಿಸಿತು. ಸ್ಯಮಂತ ಪಂಚಕವೆಂದೂ ಇದಕ್ಕೆ ಹೆಸರಿದೆ. ಹಾಗೂ ಒಂದು ಮೂಲ ಪಾಠವಿದೆ.

ಪೃಥಾಸುತಾಶ್ಚ ಸರ್ವಶಃ ಸದಾರಪುತ್ರಮಾತೃಕಾಃ ।
ಕ್ಷಿತೀಶ್ವರಾಶ್ಚ ಸರ್ವಶಃ ಪ್ರಿಯಾಪ್ರಿಯಾಶ್ಚ ಯೇ ಹರೇಃ ॥೫॥

ಪಾಂಡವರೂ ಕೂಡ ಎಲ್ಲರೂ ಪತ್ನೀಪುತ್ರ ಮಾತೆಯರೊಂದಿಗೆ ಅಲ್ಲಿಗೆ ಹೋದರು. ರಾಜರುಗಳು ಎಲ್ಲರೂ ಹೋದರು. ಅವರಲ್ಲಿ ಕೆಲವರು ಶ್ರೀಕೃಷ್ಣನಿಗೆ ಪ್ರಿಯರು, ಕೆಲವರು ಅಪ್ರಿಯರು, ಕೆಲವರು ಕೆಲಮೊಮ್ಮೆ ಪ್ರಿಯರು, ಕೆಲವೊಮ್ಮೆ ಅಪ್ರಿಯರು, ಹೀಗೆ ಮಧ್ಯಮರು.

ತಥೈವ ನಂದಗೋಪಕಃ ಸದಾರಗೋಪಗೋಪಿಕಃ ।
ಮುನೀಶ್ವರಾಶ್ಚ ಸರ್ವಶಃ ಸಮೀಯುರತ್ರ ಚ ಪ್ರಜಾಃ ॥೬॥

ಹಾಗೆಯೆ ನಂದಗೋಪನೂ ಕೂಡ ಯಶೋದೆ ಮತ್ತು ಗೋಪಗೋಪಿಯರೊಂದಿಗೆ ಹೋದ. ಮುನಿಶ್ರೇಷ್ಠರೂ ಇತರ ಸಮಸ್ತ ಜನರೂ ಹೋದರು.

ಪ್ರಿಯಾಶ್ಚ ಯೇ ರಮೇಶಿತುರ್ಹರಿಂ ತ್ರಿರೂಪಮೇತ್ಯ ತೇ ।
ವಸಿಷ್ಠವೃಷ್ಣಿ ನಂದನೌ ಭೃಗೂತ್ತಮಂ ತಥಾರ್ಚಯನ್ ॥೭॥

ಹರಿಗೆ ಪ್ರಿಯರಾದವರು ವೇದವ್ಯಾಸ ಕೃಷ್ಣ ಪರಶುರಾಮ ಈ ಮೂರು ರೂಪಗಳಿಂದ ಇದ್ದ ಹರಿಯ ಬಳಿಗೆ ಹೋಗಿ ಆರಾಧಿಸಿದರು.

ಕೃತಾರ್ಥತಾಂ ಚ ತೇ ಯಯೂ ರಮೇಶಪಾದದರ್ಶನಾತ್ ।
ರವಿಗ್ರಹೇ ಸಮಾಪ್ಲುತಾ ಭೃಗೂದ್ವಹೋತ್ಥತೀರ್ಥಕೇ ॥೮॥

ಹರಿಭಕ್ತರು ಪರಶುರಾಮನಿಂದ ನಿರ್ಮಿತವಾಗಿದ್ದ ಆ ಸಮಂತಪಂಚಕದ ರಾಮಹ್ರದ ತೀರ್ಥದಲ್ಲಿ ಸೂರ್ಯಗ್ರಹಣ ಕಾಲದಲ್ಲಿ ಸ್ನಾನಮಾಡಿ ರಮಾರಮಣನ ಪಾದಗಳ ಸಂದರ್ಶನದಿಂದ ಧನ್ಯತೆ ಪಡೆದರು.

ಅನುಗ್ರಹಂ ವಿಧಾಯ ಸ ಸ್ವಕೇಷು ಕೇಶವಸ್ತ್ರಿವೃತ್ ।
ಅಯಾಜಯಚ್ಚ ಶೂರಜಂ ಮಖೈಃ ಸಮಾಪ್ತದಕ್ಷಿಣೈಃ ॥೯॥

ಮೂರು ರೂಪಗಳಿಂದ ಇದ್ದ ಶ್ರೀಹರಿ ತನ್ನ ಭಕ್ತರಲ್ಲಿ ಅನುಗ್ರಹ ಮಾಡಿ ವಸುದೇವನಿಂದ ಪೂರ್ಣದಕ್ಷಿಣೆಗಳಿಂದ ಯುಕ್ತವಾದ ಯಾಗಗಳನ್ನು ಮಾಡಿಸಿದ.

ಸಮಸ್ತ ಲೋಕಸಂಸ್ಥಿತಾತ್ಮ ಭಕ್ತಿಮಜ್ಜನಸ್ಯ ಸಃ ।
ಸುಕಾಲದರ್ಶನಾತ್ ಪರಂ ವ್ಯಧಾದನುಗ್ರಹಂ ಹರಿಃ ॥೧೦॥

ಶ್ರೀಹರಿ ಸರ್ವಲೋಕ ವ್ಯಾಪ್ತನಾದ ತನ್ನಲ್ಲಿ ಭಕ್ತಿಹೊಂದಿದ ಜನರಿಗೆಲ್ಲ ಗ್ರಹಣ ಪುಣ್ಯಕಾಲದಲ್ಲಿ ದರ್ಶನವಿತ್ತು ಪರಮಾನುಗ್ರಹ ಮಾಡಿದ.

ಶ್ರೀಕೃಷ್ಣನ ಏಕಾಹಯಾಗ

ತತೋ ಯಯೌ ಸ್ವಕಾಂ ಪುರೀಂ ಪೃಥಾಸುತೈಃ ಸಹಾಚ್ಯುತಃ ।
ಚಕಾರ ತತ್ರ ಚಾಹ್ನಿಕಂ ಕ್ರತುಂ ಮಹಾಶ್ವಮೇಧಿಕಂ । ೧೧॥

ಬಳಿಕ ಪಾಂಡವರೊಂದಿಗೆ ಶ್ರೀಕೃಷ್ಣ ದ್ವಾರಕೆಗೆ ತೆರಳಿದ. ಅಲ್ಲಿ ಮಹಾಶ್ವಮೇಧ ರೂಪವಾದ ಏಕಾಹ ಕ್ರತುವನ್ನು ಮಾಡಿದ.

ಅಶ್ವಮೇಧವೆಂದರೆ ಸಮಗ್ರ ಭೂಮಂಡಲವನ್ನಾಳುವ ಏಕಚಕ್ರಾಧಿಪತಿಯಾದ ಸಾರ್ವಭೌಮ ದೊರೆ ಮಾಡಬೇಕಾದ ಯಜ್ಞ. ಇನ್ನಾರಿಗೂ ಅದನ್ನು ಮಾಡಲು ಅಧಿಕಾರವಿಲ್ಲ. ಇದು ಸೋಮಯಾಗ. ಆದರೂ ಪಶುಬಲಿ ಇದೆ. ಬಲಿಪಶು ಮುಖ್ಯವಾಗಿ ಕುದುರೆ. ಅದರ ಶರೀರದ ಮುಂಭಾಗ ಕಪ್ಪಾಗಿದ್ದು ಹಿಂಭಾಗ ಬಿಳಿಯಾಗಿದ್ದು ಹಣೆಯಲ್ಲಿ ಸ್ವಾಭಾವಿಕವಾದ ತಿಲಕವಿರಬೇಕು. ಅದರ ತಂದೆ ತಾಯಿಗಳು

ಸೋಮಪಾನ ಮಾಡಿದವುಗಳಾಗಿರಬೇಕು. ಈ ಕುದುರೆಯೂ ಹುಟ್ಟಿದೊಡನೆ ನೀರು ಕುಡಿಯುವುದಕ್ಕೆ ಮೊದಲು ಸೋಮಪಾನ ಮಾಡಿರಬೇಕು. ಅದಕ್ಕೆ ಪ್ರೋಕ್ಷಣ ಸಂಸ್ಕಾರ ಮಾಡಿ ಸಕಲ ದೇವತೆಗಳನ್ನು ಆವಾಹಿಸಿ ಉತ್ಸರ್ಜನ ಮಾಡಿ ಒಂದು ವರ್ಷಕಾಲ ಯಥೇಚ್ಛ ತಿರುಗಲು ಬಿಡಬೇಕು. ಶತ್ರುರಾಜರು ಕಟ್ಟಿಹಾಕಿದರೆ ಯುದ್ಧದಲ್ಲಿ ಗೆದ್ದು ಬಿಡಿಸಿಕೊಳ್ಳಬೇಕು. ಒಂದು ವರ್ಷವಾದ ಬಳಿಕ ಎಲ್ಲ ರಾಜರ ಕಪ್ಪದೊಂದಿಗೆ ಅದನ್ನು ತಂದು ಯಾಗ ಮಾಡಬೇಕು. ಯಜಮಾನ ಅಂದಿನವರೆಗೆ ಊರಹೊರಗೆ ಯಾಗಶಾಲೆಯಲ್ಲಿಯೆ ಇದ್ದು ಪ್ರತಿದಿನವೂ ವಿಷ್ಣುಕ್ರಮಣ ಹೋಮಗಳನ್ನು ಮಾಡುತ್ತಿರಬೇಕು. ಕುದುರೆ ಬಂದಬಳಿಕ ಅದನ್ನು ಕೊಂದು ಸವನೀಯಯಾಗದಲ್ಲಿ ಹೃದಯಾದಿ ಅಂಗಗಳನ್ನು ಹೋಮಿಸಿ ಸೋಮಯಾಗ ನಡೆಸಬೇಕು. ಅದರ ಕೊನೆಯಲ್ಲಿ ಅವಭೃಥ ಸ್ನಾನ ಮಾಡಿದರೆ ಅಶ್ವಮೇಧ ಮುಗಿಯಿತು. ಅದರಿಂದ ಬ್ರಹ್ಮಹತ್ಯಾದಿ ಸಕಲ ಪಾಪ ಪರಿಹಾರ, ಸರ್ವಾಭೀಷ್ಟಪ್ರಾಪ್ತಿ. 'ಸರ್ವಸ್ಯಾಪ್ತೈ ಸರ್ವಸ್ಯ ಜಿತ್ಯೈ ಸರ್ವಮೇವ ತೇನಾಪ್ನೋತಿ ಸರ್ವಂ ಜಯತಿ' ಎಂದು ಶ್ರುತಿ ಈ ಯಾಗವನ್ನು ಪ್ರಶಂಸೆ ಮಾಡಿದೆ. ಸರ್ವಶಕ್ತನಾದ ಶ್ರೀಕೃಷ್ಣ ಒಂದೇ ದಿನದಲ್ಲಿ ಈ ಅಶ್ವಮೇಧಯಾಗವನ್ನು ನಡೆಸಿದ.

ಹಯಂ ಸಭೀಮಫಲ್ಗುನಾ ಹರೇ ರಥಂ ಸಮಾಸ್ಥಿತಾಃ ।
ವ್ಯಚಾರಯನ್ ಹರೇಃ ಸುತಾ ದಿನಸ್ಯ ಪಾದಮಾತ್ರತಃ ॥೧೨॥

ಭೀಮಾರ್ಜುನರೊಂದಿಗೆ ಕೃಷ್ಣಪುತ್ರರೂ ರಥವೇರಿ ಹಗಲಿನ ಕಾಲಂಶ (ಒಂದು ಯಾಮ) ಮಾತ್ರದಲ್ಲಿಯೆ ಯಾಗದ ಕುದುರೆಯನ್ನು ಎಲ್ಲೆಡೆ ಸಂಚಾರ ಮಾಡಿಸಿದರು.

ಜಿತಾಃ ಸಮಸ್ತ ಭೂಭೃತೋ ಜರಾಸುತಾದಯಃ ಕ್ಷಣಾತ್ ।
ವೃಕೋದರಾದಿಭಿಸ್ತು ತೈರ್ಹಯಶ್ಚ ದಿವ್ಯ ಆಯಯೌ ॥೧೩॥

ಜರಾಸಂಧಾದಿ ಸಮಸ್ತ ರಾಜರೂ ಭೀಮಾದಿಗಳಿಂದ ಕ್ಷಣದಲ್ಲಿ ಪರಾಜಿತರಾದರು. ದಿವ್ಯವಾದ ಆ ಕುದುರೆ ಒಂದೇ ಯಾಮದಲ್ಲಿ ಹಿಂತಿರುಗಿತು.

ಹಯಶ್ಚ ಕೃಷ್ಣನಿರ್ಮಿತೋ ದಿನೇನ ಲಕ್ಷಯೋಜನಂ ।
ಕ್ಷಮೋ ಹಿ ಗಂತುಮಂಜಸಾ ದಿನಾಶ್ವಮೇಧಸಿದ್ಧಯೇ ॥೧೪॥

ಆ ಕುದುರೆ ದಿನಾಶ್ವಮೇಧ ಸಿದ್ಧಿಗಾಗಿಯೆ ಕೃಷ್ಣನಿಂದ ನಿರ್ಮಿತವಾಗಿದ್ದು ಒಂದು ದಿನದಲ್ಲಿ ಲಕ್ಷ ಯೋಜನ ಪರ್ಯಂತ ಚೆನ್ನಾಗಿ ಸಂಚರಿಸಲು ಸಮರ್ಥವಾಗಿತ್ತು.

ಬ್ರಾಹ್ಮಣ ಪುತ್ರರ ಮರಣ

ಪರಾಶರಾತ್ಮಜೋ ಹರಿರ್ಹರಿಂ ಯದಾ ತ್ವದೀಕ್ಷಯತ್ ।
ತದಾಸಸಾದ ಹ ದ್ವಿಜಸ್ತ್ರಣಾವಹೋ ರುರಾವ ಚ ॥೧೫॥

ವೇದವ್ಯಾಸರೂಪಿ ಹರಿ ಕೃಷ್ಣರೂಪಿ ಹರಿಯನ್ನು ಯಜ್ಞದಲ್ಲಿ ದೀಕ್ಷಿತನನ್ನಾಗಿ ಮಾಡಿದ. ಆಗ ಅಲ್ಲಿ ಒಬ್ಬ ಬ್ರಾಹ್ಮಣ ಕೈಯಲ್ಲಿ ಹುಲ್ಲುಕಡ್ಡಿಯನ್ನು ಹಿಡಿದು ಬಂದ. ಅಳತೊಡಗಿದ.

ವ್ರಜಂತಿ ಜನ್ಮನೋಽನು ಮೇ ಸದಾ ಸುತಾ ಅದೃಶ್ಯತಾಂ ।
ಇತೀರಿತೋಽರ್ಜುನೋಽಬ್ರವೀದಹಂ ಹಿ ಪಾಮಿ ತೇ ಸುತಾನ್ ॥೧೬॥

'ಯಾವಾಗಲೂ ನನ್ನ ಮಕ್ಕಳು ಹುಟ್ಟಿದೊಡನೆ ಅದೃಶ್ಯರಾಗುತ್ತಾರೆ' ಎಂದು ಬ್ರಾಹ್ಮಣ ಹೇಳಿದಾಗ ಅರ್ಜುನ 'ನಾನು ನಿನ್ನ ಮಕ್ಕಳನ್ನು ಕಾಪಾಡುವೆನು' ಎಂದ.

ಸಕೃಷ್ಣರಾಮಕಾಷ್ಣಿಭಿಃ ಸುತಾ ನ ಮೇಽತ್ರ ಪಾಲಿತಾಃ ।
ಕ್ವ ತೇಽತ್ರ ಶಕ್ತಿರಿತ್ಯಮುಂ ಜಗಾದ ಸೋಽರ್ಜುನಂ ದ್ವಿಜಃ ॥೧೭॥

ಆಗ ಅರ್ಜುನನಿಗೆ ಬ್ರಾಹ್ಮಣ ನುಡಿದ, 'ಕೃಷ್ಣ, ಬಲರಾಮ, ಪ್ರದ್ಯುಮ್ನರೂ ನನ್ನ ಮಕ್ಕಳನ್ನು ಕಾಪಾಡಲಿಲ್ಲ ಎಂದಮೇಲೆ ನಿನಗೆ ಈ ವಿಷಯದಲ್ಲಿ ಸಾಮರ್ಥ್ಯವೆಲ್ಲಿ?'

[1]'ಕಾಪಾಡಲಿಲ್ಲ' ಎಂದರೆ ಕಾಪಾಡಲು ಯತ್ನಿಸಲಿಲ್ಲ, ಕಾಪಾಡುವೆವೆಂದು ಆಶ್ವಾಸನೆ ನೀಡಲಿಲ್ಲ ಎಂದೇ ಅರ್ಥಗ್ರಹಿಸಬೇಕು. 'ಕೃಷ್ಣ ಬಲರಾಮರೂ ಕಾಪಾಡಲು ಶಕ್ತರಾಗಲಿಲ್ಲ' ಎಂದು ಬ್ರಾಹ್ಮಣ ಹೇಳಲಾರ. ಹಾಗೆ ಹೇಳಿದರೆ ಅದು ಸುಳ್ಳಾಗುವುದು. ವಿಷ್ಣು ಭಕ್ತನಾದ ಆ ಬ್ರಾಹ್ಮಣ ಇಂಥ ಸುಳ್ಳು ಹೇಳಲಾರ.

ಅರ್ಜುನನ ದರ್ಪಶಾಂತಿ

ತದಾ ಜಗಾದ ಫಲ್ಗುನೋಽಸುರೈರ್ವಿದೂಷಿತಾತ್ಮನಾ ।
ನ ವಿಪ್ರ ತಾದೃಶೋಽಸ್ಮ್ಯಹಂ ಯಥೈವ ಕೇಶವಾದಯಃ ॥೧೮॥

ಅರ್ಜುನ ಅಸುರಾವೇಶ ಪ್ರಯುಕ್ತ ಕಲುಷಿತವಾದ ಅಂತಃಕರಣದಿಂದ ನುಡಿದ 'ಬ್ರಾಹ್ಮಣ, ನಾನು ಕೃಷ್ಣಮುಂತಾದವರಂತೆ ಅಲ್ಲ!'

ಅಸುರಾವೇಶ ಪ್ರಯುಕ್ತ ಅರ್ಜುನನ ಅಂತಃಕರಣ ಕಲುಷಿತವಾಗಿ ಅಹಂಕಾರ ಯುಕ್ತವಾಯಿತು. ಅದರಿಂದ ತಾನು ಕೃಷ್ಣನಂತೆ ಅಶಕ್ತನಲ್ಲ ಎಂದ.

1. ಕೃಷ್ಣಾದಿಭಿಃ ಪಾಲಯಿಷ್ಯಾಮ ಇತ್ಯಪ್ರತಿಜ್ಞಾತಾ ಇತ್ಯರ್ಥಃ । -ತಾಮ್ರಪರ್ಣೀಯ

ಮಯಾ ಜಿತಾ ಹಿ ಖಾಂಡವೇ ಸುರಾಸ್ತಥಾಸುರಾನಹಂ ।
ನಿವಾತವರ್ಮನಾಮಕಾನ್ ವಿಜೇಷ್ಯ ಉತ್ತರತ್ರ ಹಿ ॥೧೯॥

ನಾನು ಹಿಂದೆ ಖಾಂಡವದಲ್ಲಿ ದೇವತೆಗಳನ್ನು ಗೆದ್ದಿದ್ದೇನೆ. ಮುಂದೆ ನಿವಾತ ಕವಚರೆಂಬ ಅಸುರರನ್ನೂ ಗೆಲ್ಲುವವನಿದ್ದೇನೆ.

ಖಾಂಡವದಲ್ಲಿ ದೇವತೆಗಳನ್ನು ಗೆದ್ದುದು ಆಗಿಹೋದ ಸಂಗತಿ. ನಿವಾತಕವಚರೆಂಬ ಅಸುರರನ್ನು ಗೆಲ್ಲುವುದು ಮುಂದೆ ಆಗಲಿರುವಂಥದ್ದು, ಭವಿಷ್ಯ ಅರ್ಜುನನಿಗೆ ಹೇಗೆ ಗೊತ್ತು ಎಂದರೆ, ಪ್ರತಿಕಲ್ಪದಲ್ಲಿಯೂ ರಾಮಕಥೆ, ಕೃಷ್ಣಕಥೆ, ಪಾಂಡವರ ಕಥೆಗಳು ಒಂದೇರೀತಿ ಇರುತ್ತವೆ. ಅದರಿಂದ ಹಿಂದಿನ ಕಲ್ಪದ ವೃತ್ತಾಂತಗಳನ್ನು ತಿಳಿದಿರುವ ಅರ್ಜುನ ಅದರಂತೆಯೆ ಇರುವ ಭವಿಷ್ಯವನ್ನು ತಿಳಿಯುವುದು ಸಂಭವನೀಯವೆ. ಆದರೆ ಅದೇರೀತಿ ತಾನು ಬ್ರಾಹ್ಮಣ ಪುತ್ರರನ್ನು ರಕ್ಷಿಸುವ ವಿಷಯದಲ್ಲಿ ಸೋಲುತ್ತೇನೆ ಎಂದೂ ತಿಳಿಯಬೇಕಾಗಿತ್ತು ನಿಜ. ಆದರೂ ತತ್ಕಾಲದಲ್ಲಿ ಅಸುರಾವೇಶದಿಂದ ಆ ಭವಿಷ್ಯವನ್ನು ಸುಳ್ಳು ಮಾಡುವೆನೆಂದುಕೊಂಡಿರಬಹುದು. ಅಥವಾ ಋಷ್ಯಶೃಂಗನಿವಾಸಿಗಳಾದ ಮುನಿಗಳು ಪಾಂಡವರಿಗೆ ನಿವಾತಕವಚರ ಬಗ್ಗೆ ಭೂತಭವಿಷ್ಯವೆಲ್ಲ ಹೇಳಿದ್ದರು. ಬ್ರಾಹ್ಮಣಪುತ್ರರ ಬಗ್ಗೆ ಹೇಳಿರಲಿಲ್ಲ ಎನ್ನಬಹುದು.

ನಿವಾತ ಕವಚಾಶ್ಚೈವ ವಾಸವೇನಾಪಿ ದುರ್ಜಯಾಃ ।
ಮಯೈವ ನಿಹತಾಃ ಸಂಖ್ಯೇ ಹಿರಣ್ಯ ಪುರವಾಸಿನಃ ॥

'ಇಂದ್ರನಿಗೂ ಅಜೇಯರಾಗಿದ್ದ ನಿವಾತಕವಚರನ್ನು ನಾನು ಕೊಂದಿದ್ದೇನೆ' ಎಂದು ಭಾಗವತದಲ್ಲಿ ಅರ್ಜುನ ಹೇಳಿದಂತೆ ಕಾಣುತ್ತದೆ. ಇದು ಸರಿಯಲ್ಲ. ಅರ್ಜುನನಿನ್ನೂ ನಿವಾತಕವಚರನ್ನು ಕೊಂದಿಲ್ಲ ಎನ್ನುವ ಸಮಸ್ಯೆ ಬಂದರೆ [1]'ಮುಂದೆ ನಡೆಯುವುದು ನಿಶ್ಚಿತವಾಗಿರುವಲ್ಲಿ ಆಗಲೆ ನಡೆದು ಹೋಗಿದೆ ಎನ್ನುವುದೂ ಉಂಟೆಂ' ಬ ಅಭಿಪ್ರಾಯ ಭಾಗವತಕ್ಕೆ ಇದೆ ಎಂದು ನಿರ್ಣಯ ನಿರ್ಣಯಿಸುತ್ತಿದೆ.

ನಿವಾತಕವಚರು ಪ್ರಹ್ಲಾದನ ತಮ್ಮನಾದ ಸಂಹ್ಲಾದನ ಮಕ್ಕಳು. ಇವರು ಮೂರುಕೋಟಿ, ಸಮುದ್ರದಲ್ಲಿ ಅಡಗಿದ್ದು ಇಂದ್ರಾದಿಗಳನ್ನು ಪೀಡಿಸುತ್ತಿದ್ದರು. ದೇವತೆ ಗಂಧರ್ವ ನಾಗ ರಾಕ್ಷಸರಿಂದ ಅವರಿಗೆ ಮರಣವಿರಲಿಲ್ಲ. ಅರ್ಜುನ ಸ್ವರ್ಗದಿಂದ ಹಿಂದಿರುಗಿ ಬರುವಾಗ ಅವರನ್ನು ಕೊಂದ.

1. ಏಷ್ಯತ್ತು ನಿಶ್ಚಿತಂ ಯತ್ ತದತೀತ್ವೇನ ಭಣ್ಯತೇ ।

ಉದೀರ್ಯ ಚೇತಿ ಕೇಶವಂ ಸ ಊಚಿವಾನ್ ವ್ರಜಾಮ್ಯಹಂ ।
ಇತೀರಿತೋಽವದದ್ಧರಿಸ್ತವಾತ್ರ ಶಕ್ಯತೇ ನು ಕಿಂ ॥೨೦॥
ವಿಲಜ್ಜಮಾನಮೀಕ್ಷ್ಯ ತಂ ಜಗಾದ ಕೇಶವೋಽರಿಹಾ ।
ವ್ರಜೇತಿ ಸ ಪ್ರತಿಶ್ರವಂ ಚಕಾರ ಹಾಪ್ಯರಕ್ಷಣೇ ॥೨೧॥
ವಹ್ನಿಂ ಪ್ರವೇಕ್ಷ್ಯೇಽಶಕ್ತಶ್ಚೇದಿತ್ಯುಕ್ತ್ವಾ ಸರ್ವಯಾದವೈಃ ।
ಯಯೌ ನ ರಾಮಪ್ರದ್ಯುಮ್ನಾವನಿರುದ್ಧಂ ಚ ಕೇಶವಃ ।
ನ್ಯಯೋಜಯತ್ತತ್ಸಾಹಾಯ್ಯೇ ಯಶಸ್ತೇಷ್ವಭಿರಕ್ಷಿತುಂ ॥೨೨॥

ಹೀಗೆ ಹೇಳಿ ಕೃಷ್ಣನ ಮುಂದೆ ಅರ್ಜುನ, 'ನಾನು ಹೋಗುತ್ತೇನೆ' ಎಂದ. ಅವನು ಹೀಗೆ ಹೇಳಿದಾಗ ಕೃಷ್ಣನೆಂದ, 'ಈ ವಿಷಯದಲ್ಲಿ ನಿನಗೆ ಏನಾದರೂ ಮಾಡಲು ಸಾಧ್ಯವಿದೆಯೆ?' ಎಂದು. ಅರ್ಜುನ ಲಜ್ಜಿತನಾದ. ಅದನ್ನು ಕಂಡು ಕೃಷ್ಣ 'ಆಗಲಿ, ಹೋಗು' ಎಂದ. ಆಗ ಅರ್ಜುನ ಬ್ರಾಹ್ಮಣಪುತ್ರ ರಕ್ಷಣೆಯ ಪ್ರತಿಜ್ಞೆಯನ್ನು ಮಾತ್ರವಲ್ಲದೆ 'ನಾನು ಈ ವಿಷಯದಲ್ಲಿ ಅಶಕ್ತನೆನಿಸಿದರೆ ಅಗ್ನಿಪ್ರವೇಶ ಮಾಡುವೆನು' ಎಂದೂ ಪ್ರತಿಜ್ಞೆಯನ್ನು ಮಾಡಿದ. ಅವನು ಹೀಗೆ ಹೇಳಿ ಎಲ್ಲ ಯಾದವರೊಂದಿಗೆ ಹೊರಟ. ಆದರೆ ಬಲರಾಮಪ್ರದ್ಯುಮ್ನ ಅನಿರುದ್ಧರನ್ನು ಕೃಷ್ಣ ಅರ್ಜುನನ ಸಹಾಯಕ್ಕೆ ಕಳಿಸಲಿಲ್ಲ. ಇದು ಅವರ ಕೀರ್ತಿಯನ್ನು ಕಾಪಾಡುವುದಕ್ಕಾಗಿ.

ಅರ್ಜುನ ಬ್ರಾಹ್ಮಣಪುತ್ರನ ರಕ್ಷಣೆಗೆ ಹೋಗುತ್ತೇನೆ ಎಂದಾಗ ಕೃಷ್ಣ 'ಇದಕ್ಕೆ ನೀನೇ ಸಮರ್ಥ, ಹೋಗು' ಎನ್ನದೆ, ಎಲ್ಲ ಜನರ ಮುಂದೆ 'ನಿನೇನು ಮಾಡಬಲ್ಲೆ? ಈ ಕಾರ್ಯ ನಿನ್ನಿಂದಾದೀತೆ?' ಎಂದು ಸಂದೇಹ ವ್ಯಕ್ತಪಡಿಸಿದಾಗ ಅರ್ಜುನ ಬಹಳ ಲಜ್ಜಿತನಾದ. ಬಳಿಕ ಕೃಷ್ಣ 'ಆಗಲಿ ಹೋಗು' ಎಂದಾಗ ತನ್ನ ಸಾಮರ್ಥ್ಯದ ಬಗ್ಗೆ ಕೃಷ್ಣನಿಗೆ ವಿಶ್ವಾಸ ಉಂಟೆಂದು ತಿಳಿದು ಸಮಾಧಾನಗೊಂಡ. ಈ ರೀತಿ ವ್ಯಾಖ್ಯಾನಿಸುವುದು ಹರಿವಂಶಕ್ಕೆ ಅನುಗುಣವಾಗಿದೆ. ಅಲ್ಲಿ,

ರಕ್ಷಸೀತ್ಯೇವಮುಕ್ತಸ್ತು ವ್ರೀಡಿತೋಽಸ್ಮಿ ನರಾಧಿಪ ।
ತತೋ ಮಾಂ ವ್ರೀಡಿತಂ ಮತ್ವಾ ಪುನರಾಹ ಜನಾರ್ದನಃ ॥

ಎಂದು ಅರ್ಜುನ ತಾನು ನಾಚಿದೆನೆನ್ನುತ್ತಾನೆ.

[1]ಸತ್ಯಾಭಿನವೀಯದಲ್ಲಿ ಬೇರೆ ರೀತಿಯ ವಿವರಣೆ ಇದೆ. 'ವಿಲಜ್ಜಮಾನ' ಎಂದರೆ ಅಲಜ್ಜಮಾನ ನಾಚಿಕೆ ಇಲ್ಲದವ. ನಾಚಿಕೆ ಇಲ್ಲದೆ ಆತ್ಮಪ್ರಶಂಸೆ ಮಾಡಿಕೊಳ್ಳುತ್ತಿದ್ದಾನೆ ಅರ್ಜುನ. ಇದಕ್ಕೆ ತಕ್ಕ ಮದ್ದು

1. ವಿಲಜ್ಜಮಾನಮೀಕ್ಷ್ಯೇತ್ಯಸ್ಯ ಲಜ್ಜಾರಹಿತಮೀಕ್ಷ್ಯೇತ್ಯರ್ಥಃ । -ಸತ್ಯಾಭಿನವೀಯ

ಮಾಡಬೇಕೆಂದು ಬಗೆದು ಕೃಷ್ಣ 'ಆಗಲಿ ಹೋಗು' ಎಂದ. ಅವನು ಹೋಗಿ ಯತ್ನಿಸಬೇಕು, ಸೋತು ಆತ್ಮಹತ್ಯೆಗೆ ಹೊರಡಬೇಕು. ಅಹಂಕಾರ ಬಿಡಬೇಕು ಎನ್ನುವುದು ಕೃಷ್ಣನ ಅಭಿಪ್ರಾಯವಿತ್ತು.

ಬಲರಾಮ ಪ್ರದ್ಯುಮ್ನ ಅನಿರುದ್ಧರನ್ನು ಕೃಷ್ಣ ತಡೆದ. ನೀವು ಒಂದುವೇಳೆ ಸೋತರೆ ನಿಮ್ಮ ಯಶಸ್ಸಿಗೆ ಕುಂದು. ಅದರಿಂದ ನೀವು ಹೋಗಬೇಡಿ. ಅರ್ಜುನ ಮಾತ್ರ ಹೋಗಲಿ ಎಂದ.

ಪ್ರಿಯೋ ಹಿ ನಿತರಾಂ ರಾಮಃ ಕೃಷ್ಣಸ್ಯಾನು ಚ ತಂ ಸುತಃ ।
ಅನಿರುದ್ಧಃ ಕಾಷ್ಣಿರ್ಮನು ಪ್ರದ್ಯುಮ್ನಾದ್ ಯೋಽಜನಿಷ್ಟ ಹಿ ॥೨೩॥
ರುಕ್ಮಿಪುತ್ರ್ಯಾಂ ರುಕ್ಮವತ್ಯಾಮಾಹೃತಾಯಾಂ ಸ್ವಯಂವರೇ ॥೨೪॥

ಕೃಷ್ಣನಿಗೆ ಅತ್ಯಂತ ಪ್ರಿಯ ಬಲರಾಮ. ಅವನ ಅನಂತರ ಪ್ರದ್ಯುಮ್ನ. ಅವನ ಅನಂತರ ಅನಿರುದ್ಧ. ಪ್ರದ್ಯುಮ್ನನಿಂದ ಸ್ವಯಂವರದಲ್ಲಿ ಅಪಹೃತಳಾದ ರುಕ್ಮಿಪುತ್ರಿಯಾದ ರುಕ್ಮವತಿಯಲ್ಲಿ ಹುಟ್ಟಿದವನು ಈ ಅನಿರುದ್ಧ.

ಮೂಲರೂಪದಲ್ಲಿಯೂ ರತಿ ಮನ್ಮಥರಿಗೆ ಪುತ್ರನಾಗಿ ಜನಿಸಿದ್ದವ ಅನಿರುದ್ಧ. ಅವತಾರದಲ್ಲಿಯೂ ಅದೇ ಹೆಸರು. ಈ ಪ್ರದ್ಯುಮ್ನ ಅನಿರುದ್ಧರಲ್ಲಿ ಶ್ರೀಹರಿಯ ಪ್ರದ್ಮುಮ್ನ ಅನಿರುದ್ಧ ರೂಪಗಳ ಆವೇಶವಿತ್ತು.

ರತಿರೇವ ಹಿ ಯಾ ತಸ್ಯಾಂ ಜಾತೋಽಸೌ ಕಾಮನಂದನಃ ।
ಪೂರ್ವಮಪ್ಯನಿರುದ್ಧಾಖ್ಯೋ ವಿಷ್ಣೋಸ್ತನ್ನಾಮ್ನ ಏವ ಚ ।
ಆವೇಶಯುಕ್ತೋ ಬಲವಾನ್ ರೂಪವಾನ್‌ಸರ್ವಶಾಸ್ತ್ರವಿತ್ ॥೨೫॥

ರುಕ್ಮವತಿ ಹಿಂದೆ ರತಿಯೆ. ಅವಳಲ್ಲಿ ಹುಟ್ಟಿದ ಈ ಪ್ರದ್ಯುಮ್ನಪುತ್ರ ಅನಿರುದ್ಧ ಹಿಂದೆಯೂ ಕಾಮಪುತ್ರ ಅನಿರುದ್ಧನೆ. ಅದೇ ಹೆಸರಿನ ವಿಷ್ಣುವಿನ ಆವೇಶಯುಕ್ತನಾಗಿದ್ದು ಬಲಿಷ್ಠನೂ ಸುಂದರನೂ ಸರ್ವಶಾಸ್ತ್ರವೇತ್ತನೂ ಆದ.

ಮುಂದೆ ಅನಿರುದ್ಧ ಬಾಣಾಸುರನ ಮಗಳಾದ ಉಷೆಯನ್ನು ಮದುವೆಯಾಗುತ್ತಾನೆ. ಉಷೆಯೂ ಮೂಲರೂಪದಲ್ಲಿ ಉಷೆಯೆ, ಅನಿರುದ್ಧನ ರಾಣಿ. ಈ ಅನಿರುದ್ಧ ಉಷೆಯರ ಮಗನೆ ವಜ್ರ. ಅವನನ್ನು ಪಾಂಡವರು ಇಂದ್ರಪ್ರಸ್ಥದಲ್ಲಿ ಯಾದವರ ರಾಜ್ಯಕ್ಕೆ ಉತ್ತರಾಧಿಕಾರಿಯಾಗಿ ಪಟ್ಟಗಟ್ಟಿ ಮಹಾಪ್ರಸ್ಥಾನ ಕೈಗೊಂಡರು.

ತಸ್ಮಾತ್ತಾಂಸ್ತ್ರೀನೃತೇ ಕೃಷ್ಣಃ ಪಾರ್ಥಸಾಹಾಯ್ಯಕಾರಣಾತ್ ।
ನ್ಯಯೋಜಯತ್‌ಸೂತಿಕಾಲೇ ಬ್ರಾಹ್ಮಣ್ಯಾಃ ಸ ಚ ಫಲ್ಗುನಃ ॥೨೬॥

ಅಸ್ತ್ರೈರಸ್ತ್ರೈಶ್ಚಕಾರ ದಿಗ್ಬಂಧಂ ಕುಮಾರೋಽಥಾಪಿ ತತ್ ಕ್ಷಣಾತ್ ।
ಅದರ್ಶನಂ ಯಯೌ ಪಾರ್ಥೋ ವಿಷಣ್ಣಃ ಸಹ ಯಾದವೈಃ ॥೨೭॥
ಅಧಿಕ್ಷಿಪ್ತೋ ಬ್ರಾಹ್ಮಣೇನ ಯಯೌ ಯತ್ರ ಶ್ರಿಯಃ ಪತಿಃ ॥೨೮॥

ಅದರಿಂದ ಅವರು ಮೂವರನ್ನು ಬಿಟ್ಟು ಉಳಿದ ಯಾದವರನ್ನು ಕೃಷ್ಣ ಅರ್ಜುನನ ಸಹಾಯಕ್ಕೆ ಕಳಿಸಿದ. ಅರ್ಜುನ ಬ್ರಾಹ್ಮಣಪತ್ನಿಯ ಪ್ರಸವಕಾಲದಲ್ಲಿ ಅಸ್ತ್ರಗಳಿಂದ ದಿಗ್ಬಂಧ ಮಾಡಿದ. ಆದರೂ ಕ್ಷಣದಲ್ಲಿ ಶಿಶು ಕಣ್ಮರೆಯಾಯಿತು. ಅರ್ಜುನನೂ ಎಲ್ಲ ಯಾದವರೂ ವಿಷಣ್ಣರಾದರು. ಬ್ರಾಹ್ಮಣ ಅರ್ಜುನನನ್ನು ಜರಿದ. ಅರ್ಜುನ ಕೃಷ್ಣನೆಡೆಗೆ ಬಂದ.

ಉಲ್ಕಾಪಾತ ಭೂಕಂಪ ಮುಂತಾದ ಉತ್ಪಾತಗಳಾಗುತ್ತಿದ್ದಂತೆ ನಡುರಾತ್ರಿ ನವಪ್ರಸೂತವಾದ ಶಿಶು ಅಪಹೃತವಾಯಿತು. ಅದು ಅತ್ತ ಧ್ವನಿ ಮಾತ್ರ ಕೇಳಿಸಿತು. ಅಪಹರಿಸಿದ ವ್ಯಕ್ತಿ ಯಾರಿಗೂ ಕಾಣಿಸಲಿಲ್ಲ. ಬ್ರಾಹ್ಮಣ ಕೃಷ್ಣನ ಸನ್ನಿಧಿಯಲ್ಲಿಯೆ ಅರ್ಜುನನನ್ನು ಹೀನಾಯವಾಗಿ ಜರಿದ. 'ಈ ನಪುಂಸಕ ಅರ್ಜುನನಿತ್ತ ಆಶ್ವಾಸನೆಯನ್ನು ನಂಬಿದ ನಾನೆಂಥ ಮೂಢ! ದೈವವೆ ಪ್ರತಿಕೂಲವಿರುವಾಗ ಈ ದುರ್ಬುದ್ಧಿಯ ಅರ್ಜುನ ಆತ್ಮಪ್ರಶಂಸೆ ಮಾಡಿಕೊಳ್ಳುತ್ತ ದೈವಕ್ಕೆ ಇದಿರುನಿಂತ! ಇಂಥ ಅರ್ಜುನನಿಗೆ ಧಿಕ್ಕಾರ!' ಎಂದ ಬ್ರಾಹ್ಮಣ. ಒಡನೆ ಅರ್ಜುನ ಯಮ ಇಂದ್ರ ಅಗ್ನಿ ನಿಋತಿಸೋಮ ವಾಯು ವರುಣ ಲೋಕಗಳನ್ನೂ ಪಾತಾಳ ಅಂತರಿಕ್ಷಾದಿಗಳನ್ನೂ ಶೋಧಿಸಿ ನೋಡಿ ಬ್ರಾಹ್ಮಣ ಪುತ್ರನನ್ನು ಎಲ್ಲಿಯೂ ಕಾಣದೆ ಸೋತು ತಿರುಗಿ ಕೃಷ್ಣನ ಬಳಿಗೇ ಬಂದು, ಅಗ್ನಿ ಪ್ರವೇಶಕ್ಕೆ ಸನ್ನದ್ಧನಾದ.

ಅನಂತಾಸನಕ್ಕೆ ಪ್ರಯಾಣ

ಅಗ್ನಿಂ ವಿವಿಕ್ಷಂತಮಮುಂ ನಿವಾರ್ಯ
ಯಯೌ ಸವಿಪ್ರಃ ಸಹಫಲ್ಗುನೋ ಹರಿಃ ।
ಆಶಾಮುದೀಚೀಂ ಬೃಹತಾ ರಥೇನ
ಕ್ಷಣೇನ ತೀರ್ತ್ವೈವ ಚ ಸಪ್ತ ವಾರಿಧೀನ್ ॥೨೯॥

ಅಗ್ನಿಪ್ರವೇಶಕ್ಕೆ ಉದ್ಯುಕ್ತನಾದ ಅರ್ಜುನನನ್ನು ಕೃಷ್ಣ ತಡೆದು ಬ್ರಾಹ್ಮಣನನ್ನೂ ಅರ್ಜುನನನ್ನೂ ಜೊತೆಗೆ ಕರೆದುಕೊಂಡು ದೊಡ್ಡ ರಥದಿಂದ ಏಳು ಸಮುದ್ರಗಳನ್ನು ದಾಟಿ ಉತ್ತರದಿಕ್ಕಿಗೆ ಪ್ರಯಾಣ ಮಾಡಿದ.

'ದೊಡ್ಡ ರಥ' ವೆಂದರೆ, ಶೈಬ್ಯ ಸುಗ್ರೀವ ಮೇಘಪುಷ್ಪ ಬಲಾಹಕವೆಂಬ ನಾಲ್ಕು ಕುದುರೆಗಳನ್ನು ಕಟ್ಟಿದ್ದು ಗರುಡ ಧ್ವಜವುಳ್ಳ ಕೃಷ್ಣನ ರಥ. ಸಾರಥಿ ದಾರುಕನನ್ನು ಇಳಿಸಿ ಅರ್ಜುನನನ್ನು ಸಾರಥ್ಯ ಮಾಡಲು ಹೇಳಿ ಬ್ರಾಹ್ಮಣನೊಂದಿಗೆ ಕೃಷ್ಣ ರಥವೇರಿದ.

[1]ಭಾಗವತದಲ್ಲಿ ಶ್ರೀಕೃಷ್ಣ ರಥವನ್ನೇರಿ ಪಶ್ಚಿಮ ದಿಕ್ಕಿಗೆ ಪ್ರಯಾಣ ಮಾಡಿದನೆಂದಿದೆ. ನಿರ್ಣಯದಲ್ಲಿ ಉತ್ತರದಿಕ್ಕಿಗೆ ಎಂದಿದೆ. ಆದರೂ ವಿರೋಧವಿಲ್ಲ. ಉತ್ತರೋತ್ತರ ಗತಿಯೂ ಊರ್ಧ್ವಗತಿಯೂ ಮುಕ್ತಿ ಎನಿಸುವುದರಿಂದ ಮುಕ್ತಲೋಕವಾದ ಅನಂತಾಸನವೂ ಉತ್ತರದಲ್ಲಿಯೆ ಇದೆ. 'ವ್ಯತ್ಯಾಸಃ ಪ್ರಾತಿಲೋಮ್ಯಂ ಚ' ಎಂಬಂತೆ ಇದು ದಿಕ್ಕುಗಳ ವ್ಯತ್ಯಾಸ. ಉತ್ತರ ದಿಕ್ಕನ್ನು ಪಶ್ಚಿಮ ಎಂದು ಭಾಗವತ ವ್ಯತ್ಯಾಸ ಮಾಡಿ ಹೇಳಿದೆ. ಅದರಿಂದ ಉತ್ತರದಿಕ್ಕಿಗೆ ಹೋದನೆನ್ನುವುದು ಸಮಂಜಸವೆ.

ಅಥವಾ ಪ್ರತ್ಯಕ್ ಪುರುಷನಿರುವ ಅಂದರೆ ಕೃಷ್ಣನಿಗೆ ಮೂಲರೂಪಿಯಾದ ಅನಂತಾಸನ ನಾಮಕ ನಾರಾಯಣನಿರುವ ದಿಕ್ಕು 'ಪ್ರತೀಚೀ' ಎಂಬ ಅಭಿಪ್ರಾಯದಿಂದ ಭಾಗವತ ಉತ್ತರವನ್ನೇ ಪಶ್ಚಿಮ ಎಂದಿದೆ. ಅಥವಾ ವಾಯುವ್ಯ ದಿಕ್ಕಿನಲ್ಲಿ ಅನಂತಾಸನವಿದೆ. ಈಶಾನ್ಯವನ್ನು ಪ್ರಾಗುದೀಚೀ ಎನ್ನುವಂತೆ ವಾಯವ್ಯವನ್ನು 'ಪ್ರತ್ಯುದೀಚೀ' ಪಶ್ಚಿಮೋತ್ತರ ಎನ್ನುತ್ತೇವೆ. ಹೀಗೆ ಕೋಣದಿಕ್ಕುಗಳು ಉಭಯ ರೂಪವೆನಿಸುವುದರಿಂದ ವಾಯವ್ಯವನ್ನು ಪಶ್ಚಿಮ ಎಂದಾಗಲಿ ಉತ್ತರ ಎಂದಾಗಲಿ ಎರಡು ಬಗೆಯಿಂದಲೂ ವ್ಯವಹರಿಸಬಹುದು ಎನ್ನುತ್ತದೆ ವಾದಿರಾಜೀಯ.

ದದುಶ್ಚ ಮಾರ್ಗಂ ಗಿರಯೋಽಬ್ಧಯಸ್ತಥಾ
ವಿದಾರ್ಯ ಚಕ್ರೇಣ ತಮೋಽಂಧಮೀಶಃ।
ಘನೋದಕಂ ಚಾಪ್ಯತಿತೀರ್ಯ ಯತ್ರ
ದದರ್ಶ ಧಾಮ ಸ್ವಮನಂತವೀರ್ಯಃ ॥೩೦॥

ಪರ್ವತಗಳೂ ಸಮುದ್ರಗಳೂ ರಥಕ್ಕೆ ದಾರಿ ಬಿಟ್ಟುಕೊಟ್ಟವು. ಅನಂತಶಕ್ತಿಉಳ್ಳ

---

1. ಆಶಾಮುದೀಚೀಂ ಬೃಹತಾ ರಥೇನೇತ್ಯಸ್ಯ 'ಸಹೈವ ರಥಮಾಸ್ಥಾಯ ಪ್ರತೀಚೀಂ ದಿಶಮಾವಿಶದ್' ಇತಿ ಭಾಗವತೋಕ್ತ್ಯಾ ವಿರೋಧ ಇತಿ ಚೇನ್ನ। ಉತ್ತರೋತ್ತರ ಗತೇರೂರ್ಧ್ವಗತೇಶ್ಚ ಮುಕ್ತತ್ವೇನ ಮುಕ್ತಿತಯಾಭಿಮತಾನಂತಾಸನಲೋಕೋಽಪಿ ಉತ್ತರಸ್ಯಾಮೇವ ದಿಶಿ ವಕ್ತವ್ಯಃ। ಅತಸ್ತಾತ್ಪರ್ಯ ನಿರ್ಣಯಕಾರೋಕ್ತಮೇವ ತಾತ್ಪರ್ಯಂ। ಭಾಗವತೋಕ್ತಸ್ತು ವ್ಯತ್ಯಾಸಃ ಪ್ರಾತಿಲೋಮ್ಯಂ ಚೇತಿ ವಚನಾತ್ ದಿಗ್‌ವ್ಯತ್ಯಾಸೇನ ಉದೀಚೀಮೇವ ಪ್ರತೀಚೀಮಿತ್ಯಾಹೇತಿ ಪರಿಹಾರಸಂಭವಾತ್। ಪ್ರತ್ಯಕ್ ಪುರುಷಃ ಸ್ವಮೂಲರೂಪೀ ಅನಂತಾಸನೋ ನಾರಾಯಣಃ ಪ್ರತ್ಯಗಿತ್ಯುಚ್ಯತೇ। ತಸ್ಯ ಸಂಬಂಧಿನೀ ಪ್ರತೀಚೀತಿ ವ್ಯುತ್ಪತ್ತ್ಯಾ ಉದೀಚ್ಯೇವ ಪ್ರತೀಚೀತ್ಯುಚ್ಯತೇ। ಅತೋಽಪಿ ನ ವಿರೋಧಃ। ಯದ್ವಾ ವಾಯವ್ಯಾಂ ದಿಶಿ ಅನಂತಾಸನೋ ಲೋಕಃ। ಸಾ ಚ ದಿಕ್, ಯಥೈಶಾನೀ ದಿಕ್ ಪ್ರಾಗುದೀಚೀತ್ಯುಚ್ಯತೇ, ತಥಾ ಪ್ರತ್ಯಗುದೀಚೀತ್ಯುಚ್ಯತೇ। ಕೋಣದಿಶಾಮುಭಯರೂಪತ್ವಾತ್। ಅತ ಉಭಯಥಾಪಿ ಪ್ರಯೋಗೋ ನ ದೋಷಾಯೇತಿ ಜ್ಞೇಯಂ। -ವಾದಿರಾಜೀಯ.

ಸರ್ವೇಶ್ವರ ಶ್ರೀಕೃಷ್ಣ ಚಕ್ರದಿಂದ ಅಂಧಂತಮಸ್ಸನ್ನು ಭೇದಿಸಿ ಘನೋದಕವನ್ನೂ ದಾಟಿ ತನ್ನ ಧಾಮವನ್ನು ಕಂಡ.

ಕೃಷ್ಣನ ಆಜ್ಞೆಯಂತೆ ಪರ್ವತದೇವತೆಗಳು ರಥಕ್ಕೆ ಪರ್ವತದೊಳಗೇ ಸುರಂಗಮಾರ್ಗಮಾಡಿ ದಾರಿ ಕೊಟ್ಟರು. ವರುಣ ರಥಮಾರ್ಗದಲ್ಲಿ ಸಮುದ್ರಜಲವನ್ನು ಸ್ತಂಭಿಸಿ ದಾರಿಮಾಡಿಕೊಟ್ಟ. ಸಪ್ತದ್ವೀಪ ಸಪ್ತಸಾಗರ ಸಪ್ತ ಕುಲಪರ್ವತಗಳನ್ನೂ ಲೋಕಾಲೋಕ ಪರ್ವತವನ್ನೂ ದಾಟಿ ಅಂಧಂತಮಸ್ಸನ್ನು ರಥ ಪ್ರವೇಶಿಸಿದಾಗ ಅಲ್ಲಿ ರಥಚಕ್ರಗಳು ಕೆಲವೆಡೆ ಕೆಸರಿನಂತೆ ಗಟ್ಟಿಯಾದ ಕತ್ತಲಲ್ಲಿ ಹೂತುಹೋದುವು. ಕೆಲವೆಡೆ ಬೆಟ್ಟದಂತೆ ದಾರಿಗೆ ಅಡ್ಡವಾಗಿ ಕತ್ತಲು ಕಾಣಿಸಿಕೊಂಡಿತು. ಆಗ ಶ್ರೀಕೃಷ್ಣ ಸಾವಿರಾರು ಸೂರ್ಯರಂಥ ಪ್ರಖರ ತೇಜಸ್ಸುಳ್ಳ ತನ್ನ ಸುದರ್ಶನ ಚಕ್ರದಿಂದ ದಾರಿಗೆ ಅಡ್ಡವಾಗಿದ್ದ ಎಲ್ಲ ತಮಸ್ಸನ್ನು ಸೀಳಿ ದಾರಿ ಮಾಡಿಕೊಂಡು ಮುಂದೆ ಮುಂದೆ ಸರಿದ ಎಂದ ಭಾಗವತ ಹರಿವಂಶಗಳಲ್ಲಿ ಹೇಳಿದೆ.[1] ಕತ್ತಲು ಎಂದರೆ ಬೆಳಕಿನ ಅಭಾವವೆಂದು ಸಾಮಾನ್ಯವಾಗಿ ತಿಳಿಯುವುದುಂಟು. ಅದಕ್ಕೆ ಕಾರಣ ನಾವು ಕಾಣುವ ಕತ್ತಲು ಅಷ್ಟು ವಿರಳವಾಗಿದ್ದು ನಮಗೆ ಅಡೆ ತಡೆ ಉಂಟುಮಾಡುವುದಿಲ್ಲ. ಅಂಧಂತಮಸ್ಸಿನಲ್ಲಿ ನಿಬಿಡವಾಗಿದ್ದು ಆಯುಧಗಳಿಂದ ಸೀಳುವಂತಿರುತ್ತದೆ. ಅದರಿಂದ ಅದು ಬರಿ ಬೆಳಕಿನ ಅಭಾವವಲ್ಲ, ಪ್ರತ್ಯೇಕ ದ್ರವ್ಯವೆಂದು ತರ್ಕತಾಂಡವದಲ್ಲಿ ಪ್ರತಿಪಾದಿಸಲಾಗಿದೆ.

ಸಂಸ್ಥಾಪ್ಯ ದೂರೇ ಸರಥಂ ಸವಿಪ್ರಂ
ಪಾರ್ಥಂ ಸ್ವರೂಪೇ ದ್ವಿಚತುಷ್ಕಬಾಹೌ ।
ಸಮಸ್ತರತ್ನೋಜ್ಜ್ವಲದಿವ್ಯಭೂಷಣೇ
ವಿವೇಶ ನಿತ್ಯೋರುಗುಣಾರ್ಣವೇ ಪ್ರಭುಃ ॥೩೧॥

ರಥದಲ್ಲಿ ಬ್ರಾಹ್ಮಣನೊಂದಿಗೆ ಅರ್ಜುನನನ್ನು ದೂರದಲ್ಲಿ ನಿಲ್ಲಿಸಿ ಪ್ರಭು ಶ್ರೀಕೃಷ್ಣ ಸಮಸ್ತರತ್ನಗಳಿಂದ ಉಜ್ವಲವಾದ ದಿವ್ಯಾಭರಣಭೂಷಿತವಾದ ನಿತ್ಯ ಮಹಾಗುಣ ಸಾಗರವೆನಿಸಿರುವ ಅಷ್ಟಬಾಹುಯುಕ್ತವಾದ ತನ್ನ ಮೂಲರೂಪವನ್ನು ಪ್ರವೇಶಿಸಿದ.

---

1. ತಮಃ ಸುಘೋರಂ ಗಗನಚ್ಛದಂ ಮಹದ್ ವಿದಾರಯದ್ ಭೂರಿತರೇಣ ರೋಚಿಷಾ।
ಮನೋಜವಂ ನಿರ್ವಿವಿಶೇ ಸುದರ್ಶನಂ ಗುಣಚ್ಯುತೋ ರಾಮಶರೋ ಯಥಾ ಚಮೂಂ ॥
– ಭಾಗವತ (10.89.51)

ತತಃ ಕದಾಚಿದ್ದುಃಖೇನ ರಥಮೂಹುಸ್ತುರಂಗಮಾಃ ।
ಪಂಕಭೂತಂ ಹಿ ತಿಮಿರಂ ಅಶ್ವಾನಾಂ ಜಾಯತೇಽನಘ ।
ಅಥ ಪರ್ವತ ಭೂತಂ ತತ್ ತಿಮಿರಂ ಸಮಜಾಯತ।
ತತಶ್ಚಕ್ರೇಣ ಗೋವಿಂದಃ ಪಾಟಯಾಮಾಸ ತತ್ ತಮಃ ॥ ಹರಿವಂಶ (2-113-21,22)

'ದೂರದಲ್ಲಿ' ಅಂದರೆ ಅಮುಕ್ತಸ್ಥಾನದಲ್ಲಿ[1] ಧಾಮತ್ರಯದಲ್ಲಿಯೂ ಮುಕ್ತಸ್ಥಾನ ಅಮುಕ್ತಸ್ಥಾನ ಎಂದು ಎರಡು ಭಾಗಗಳಿವೆ. ಮುಕ್ತಸ್ಥಾನದಲ್ಲಿ ಅಮುಕ್ತರಿಗೆ ಪ್ರವೇಶವಿಲ್ಲ. ಅದರಿಂದ ಶ್ರೀಕೃಷ್ಣ ಅರ್ಜುನನನ್ನೂ ಬ್ರಾಹ್ಮಣನನ್ನೂ ಅಮುಕ್ತ ಸ್ಥಾನದಲ್ಲಿಯೆ ನಿಲ್ಲಿಸಿ ತಾನು ಮುಕ್ತಸ್ಥಾನದಲ್ಲಿರುವ ತನ್ನ ಮೂಲರೂಪದೊಂದಿಗೆ ಸೇರಿ ಒಂದಾದ.

ಸಹಸ್ರಮೂರ್ಧನ್ಯುರುಶೇಷಭೋಗ
ಆಸೀನರೂಪೇಽಮಿತಸೂರ್ಯದೀಧಿತೌ ।
ರಮಾಸಹಾಯೇ ತಟಿದುಜ್ವಲಾಂಬರೇ
ಮುಕ್ತೈರ್ವಿರಿಂಚಾದಿಭಿರರ್ಚಿತೇ ಸದಾ ॥೩೨॥

ಆ ವಿಷ್ಣುರೂಪ ಸಾವಿರ ಹೆಡೆಗಳುಳ್ಳ ಉತ್ತಮವಾದ ಶೇಷನ ಮೈಮೇಲೆ ಕುಳಿತಿತ್ತು. ಅಮಿತ ಸೂರ್ಯರಂತೆ ಹೊಳೆಯುತ್ತಿತ್ತು. ಮಿಂಚಿನಂತೆ ಹೊಳೆವ ಬಟ್ಟೆಯನ್ನು ಉಟ್ಟಿತ್ತು. ಮುಕ್ತ ಬ್ರಹ್ಮಾದಿಗಳಿಂದ ಸದಾ ಆರಾಧಿಸಲ್ಪಡುತ್ತಿತ್ತು.

ಈ ವಿಷ್ಣುರೂಪವನ್ನು ಮುಕ್ತರಾದ ಬ್ರಹ್ಮಾದಿಗಳು ಆರಾಧಿಸುತ್ತಾರೆ ಎಂದರೆ ಇದು ಮುಕ್ತಸ್ಥಾನವೆನ್ನುವುದು ಸ್ಪಷ್ಟ. ಮುಂದೆ 35ನೇ ಶ್ಲೋಕದಲ್ಲಿ 'ಅಪ್ರಾಕೃತವಾದ ಅನಂತಾಸನ' ಎನ್ನುವುದರಿಂದಲೂ ಇದು ಮುಕ್ತಸ್ಥಾನ. ಅದ್ದರಿಂದ ಇಲ್ಲಿ ವರ್ಣಿತನಾದ ಶೇಷನೂ ಮುಕ್ತಶೇಷ. ಅಮುಕ್ತರಿಗೆ ಯಾರಿಗೂ ಅಲ್ಲಿ ಪ್ರವೇಶವಿಲ್ಲ.

ಸ್ಥಿತ್ವೈಕರೂಪೇಣ ಮುಹೂರ್ತಮೀಶ್ವರೋ
ವಿನಿರ್ಯಯೌ ವಿಪ್ರಸುತಾನ್ ಪ್ರಗೃಹ್ಯ ।
ಸುನಂದನಂದಾದಯ ಏವ ಪಾರ್ಷದಾ-
ಸ್ತೇ ವೈಷ್ಣವಾ ಭೂಮಿತಲೇ ಪ್ರಜಾತಾಃ ॥೩೩॥

ಸರ್ವೇಶ್ವರನಾದ ಶ್ರೀಕೃಷ್ಣ ಆ ರೂಪದಲ್ಲಿ ಐಕ್ಯ ಹೊಂದಿ ಒಂದು ಮುಹೂರ್ತ ಕಾಲವಿದ್ದು ಬ್ರಾಹ್ಮಣ ಪುತ್ರರನ್ನು ಕರೆದುಕೊಂಡು ಬಂದ. ಅವರು ಸುನಂದ ನಂದ ಮುಂತಾದ ವಿಷ್ಣುಪಾರ್ಷದರೇ ಪ್ರಾರಬ್ಧಕರ್ಮದಿಂದ ಭೂಮಿಯಲ್ಲಿ ಹುಟ್ಟಿದ್ದರು.

ಶ್ರೀಕೃಷ್ಣ ಮುಕ್ತನಿಯಾಮಕವಾದ ತನ್ನ ರೂಪದಲ್ಲಿ ಸೇರಿ ಒಂದು ಮುಹೂರ್ತಕಾಲ ಅಂದರೆ ನಲವತ್ತೆಂಟು ನಿಮಿಷ ಮಾತ್ರವಿದ್ದು ಹೊರಗೆ ಬಂದು ಅಮುಕ್ತಸ್ಥಾನದಲ್ಲಿ[2] ಮುಕ್ತಸ್ಥಾನದ ದ್ವಾರಪಾಲಕರಾಗಿರುವ ನಂದ

---

1. ದೂರೇ ಅಮುಕ್ತಸ್ಥಾನೇ । -ತಾಮ್ರಪರ್ಣೀಯ
2. ವಾಸುದೇವೋ ರಥಂ ಸಪಾರ್ಥವಿಪ್ರಂ ಅಪ್ರಾಕೃತ ಸದನಾನ್ನಿರ್ಗತ್ಯಾಗಾದಿತ್ಯರ್ಥಃ। ನನು ವಿನಿರ್ಯಯೌ

ಸುನಂದ ಮುಂತಾದವರನ್ನು ಶಿಶುರೂಪದಲ್ಲಿ ತಂದ.

ದರ್ಪಂ ನಿಹಂತುಂ ಹರಿರರ್ಜುನಸ್ಯ
ಸಮಾನಯದ್ವಿಪ್ರಸುತಾನ್ ಪರೇಶಃ।
ಪ್ರೀತಿರ್ಮಹತ್ಯೇವ ಯತೋಽರ್ಜುನೇ ಹರೇಃ
ಸಂಶಿಕ್ಷಯಾಮಾಸ ತತಃ ಸ ಏನಂ ॥೩೪॥

ಶ್ರೀಕೃಷ್ಣ ಅರ್ಜುನನ ಅಹಂಕಾರವನ್ನು ಕಳೆಯಲೆಂದೇ ಬ್ರಾಹ್ಮಣನ ಶಿಶುಗಳನ್ನು ಅನಂತಾಸನಕ್ಕೆ ತಂದಿದ್ದ. ಅರ್ಜುನನಲ್ಲಿ ಅವನಿಗೆ ಪ್ರೀತಿ ಅಧಿಕವಾಗಿದ್ದುದರಿಂದಲೇ ಅವನಿಗೆ ಹೀಗೆ ಜ್ಞಾನೋದಯ ಉಂಟುಮಾಡಿದ.

ಅಪ್ರಾಕೃತಾತ್ಸದನಾದ್ವಾಸುದೇವೋ
ನಿಃಸೃತ್ಯ ಸೂರ್ಯಾಧಿಕಲಕ್ಷದೀಧಿತೇಃ।
ರಥಂ ಸಮಾರುಹ್ಯ ಸಪಾರ್ಥವಿಪ್ರ
ಆಗಾತ್ಸುತಾಂಶ್ಚೈವ ದದೌ ದ್ವಿಜಾಯ ॥೩೫॥

ಲಕ್ಷಾಧಿಕ ಸೂರ್ಯಕಾಂತಿಯಿಂದ ಹೊಳೆವ ಅಪ್ರಾಕೃತವಾದ ಅನಂತಾಸನ ಲೋಕದಿಂದ ಶ್ರೀಕೃಷ್ಣ ಹೊರಗೆ ಬಂದು ಅರ್ಜುನ ಬ್ರಾಹ್ಮಣ ಮತ್ತು ಮಕ್ಕಳೊಂದಿಗೆ ರಥವೇರಿ ದ್ವಾರಕೆಗೆ ಹಿಂತಿರುಗಿದ. ಬ್ರಾಹ್ಮಣನಿಗೆ ಅವನ ಮಕ್ಕಳನ್ನು ಒಪ್ಪಿಸಿದ.

ಇದು ಅನಂತಾಸನ ಲೋಕವೆಂದು ಹರಿವಂಶ ಭಾಗವತಗಳಲ್ಲಾಗಲಿ ನಿರ್ಣಯದಲ್ಲಾಗಲಿ ಹೇಳಿಲ್ಲ. ವಿಷ್ಣುಧಾಮ ಎಂದು ಮಾತ್ರ ಹೇಳಿದೆ. ವಾಸ್ತವದಲ್ಲಿ ಅದು ಅನಂತಾಸನವೆಂದಿಟ್ಟುಕೊಳ್ಳಬೇಕು.

ಮಕ್ಕಳನ್ನು ಕೊಟ್ಟನೆಂದರೆ ಹರಿವಂಶದಲ್ಲಿ ಹೇಳಿದಂತೆ ಶ್ರೀಹರಿ ಹಿಂದೆ ಮೂರು ಶಿಶುಗಳನ್ನು ಒಯ್ದಿದ್ದ. ಇದೀಗ ನಾಲ್ಕನೇ ಶಿಶುವನ್ನೊಯ್ದುದರಿಂದ ನಾಲ್ಕು ಮಕ್ಕಳನ್ನು ಹಿಂತಿರುಗಿ ಕೊಟ್ಟ.[1]

ಲೋಕಶಿಕ್ಷಾರ್ಥಮೇವಾಸೌ ಪ್ರಾಯಶ್ಚಿತ್ತಂ ಚ ಜಾಲನೇ।
ಚಕ್ರೇ ಸಾರ್ಧಮುಹೂರ್ತೇನ ಸಮಾಗಮ್ಯ ಪುನರ್ಮಖಂ ॥೩೬॥

ವಿಪ್ರಸುತಾನ್ ಪ್ರಗೃಹ್ಯೇತ್ಯನೇನತೇ ಭಗವತ್ಸಮೀಪಸ್ಥಾ ಇತಿ ಜ್ಞಾಯತೇ। ತದಯುಕ್ತಂ। ಅಮುಕ್ತಾನಾಂ ಮುಕ್ತಸ್ಥಾನಾನ್ವಯಾಯೋಗಾತ್। ಮುಕ್ತೈರ್ಬ್ರಿಂಚಾದಿಭಿರಿತಿ ಮುಕ್ತಸ್ಥಾನತ್ವಂ ಚೋಕ್ತಮಿತಿ ಚೇನ್ನ। ವಿನಿರ್ಯಯೌ ವಿಪ್ರಸುತಾನ್ ಪ್ರಗೃಹ್ಯೇತ್ಯತ್ರ ಅಮುಕ್ತ ಸ್ಥಾನಗತಾನಾದಾಯೇತ್ಯುಪಪತ್ತೇಃ ಮುಕ್ತಸ್ಥಾನಾನ್ವಯಾಭಾವಾತ್। -ತಾಮ್ರಪರ್ಣೀಯ

ಜಯವಿಜಯಾದಿವತ್ ಅಮುಕ್ತಗಮ್ಯಮುಕ್ತಸ್ಥಾನದ್ವಾರಪಾಲಕತಯಾ ಸ್ಥಿತಾನ್ ವಿಪ್ರಸುತಾನ್ ಪ್ರಗೃಹ್ಯೇತ್ಯರ್ಥಃ। -ವಾದಿರಾಜೀಯ

1. ದ್ವಿಜಾಯ ಸುತಾನ್ ಚತುಃಸಂಖ್ಯಾಕಾನ್ ದದೌ। ತದುಕ್ತಂ ಹರಿವಂಶೇ...। -ಜನಾರ್ದನೀಯ

ಶ್ರೀಕೃಷ್ಣ ಒಂದುವರೆ ಮುಹೂರ್ತದೊಳಗೆ ದ್ವಾರಕೆಗೆ ಹಿಂತಿರುಗಿ ಬಂದು, ಯಾಗವನ್ನು ಬಿಟ್ಟು ಹೋದುದಕ್ಕೆ ಲೋಕಶಿಕ್ಷಾರ್ಥವಾಗಿ ಪ್ರಾಯಶ್ಚಿತ್ತ ಮಾಡಿದ. ತಿರುಗಿ ಯಾಗವನ್ನು ನಡೆಸಿದ.

ಯಜ್ಞದಲ್ಲಿ ದೀಕ್ಷಿತನಾದ ಯಜಮಾನ ಯಾಗವನ್ನು ಬಿಟ್ಟು ಬೇರೆ ಕಡೆಗೆ ಹೋದರೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಎಂದು ಲೋಕಶಿಕ್ಷಾರ್ಥವಾಗಿ ಕೃಷ್ಣ ಪ್ರಾಯಶ್ಚಿತ್ತ ಮಾಡಿಕೊಂಡ. ಪಾಪಪರಿಹಾರಕ್ಕಾಗಿ ಅಲ್ಲ.

ಅವನು ಕೇವಲ ಒಂದೂವರೆ ಮುಹೂರ್ತಕಾಲ ಅಂದರೆ ಕೇವಲ ಮೂರು ಗಳಿಗೆ ಕಾಲದಲ್ಲಿ (ಒಂದು ಗಂಟೆ ಹನ್ನೆರಡು ನಿಮಿಷಗಳಲ್ಲಿ) ಅನಂತಾಸನದ ವರೆಗೆ ಹೋಗಿ ಬಂದಿದ್ದು ಮಾತ್ರವಲ್ಲದೆ ಅಲ್ಲಿ ಎರಡು ಗಳಿಗೆ ಕಾಲ ಮುಕ್ತನಿಯಾಮಕರೂಪದೊಂದಿಗೆ ಸೇರಿ ಕುಳಿತ ಶ್ರೀಕೃಷ್ಣ. ಅದರಿಂದ ಅನಂತಾಸನಕ್ಕೆ ಹೋಗಿ ಬರಲು ಒಂದು ಗಳಿಗೆ ಕಾಲ. (ಇಪ್ಪತ್ತನಾಲ್ಕು ನಿಮಿಷ) ಮಾತ್ರ ಬೇಕಾಯಿತು. ಕಾಲಾತೀತನಾದ ಕಾಲನಿಯಾಮಕನಾದ ಹರಿಗೆ ಇದೇನೂ ಅಚ್ಚರಿಯಲ್ಲ.

ಮುಹೂರ್ತ ಮಲ್ಪಕಾಲೇ ಸ್ಯಾತ್ ಘಟಿಕಾದ್ವಿತಯೇಽಪಿಚ।

'ಅಲ್ಪಕಾಲವನ್ನೂ ಎರಡು ಗಳಿಗೆಯನ್ನೂ ಮುಹೂರ್ತ ಎನ್ನುತ್ತಾರೆ' ಎಂದು ಶಬ್ದಾರ್ಣವ ವಚನವನ್ನು ಜನಾರ್ದನೀಯ ಉದ್ಧರಿಸಿದೆ. ಅನಂತಾಸನದಲ್ಲಿ ಕೃಷ್ಣನಿದ್ದ ಒಂದು ಮುಹೂರ್ತವೆಂದರೆ ಎರಡು ಗಳಿಗೆ ಎಂದು ವರದರಾಜೀಯ ಹೇಳಿದೆ.

ಬ್ರಹ್ಮಾದೀನಾಗತಾಂಶ್ಚೈವ ಸದಾ ಸ್ವಪರಿಚಾರಕಾನ್ ।
ಪೂಜಯಿತ್ವಾಭ್ಯನುಜ್ಞಾಯ ಬ್ರಾಹ್ಮಣಾನಪ್ಯಪೂಜಯತ್ ॥೩೭॥

ಶ್ರೀಕೃಷ್ಣ ಯಜ್ಞಕ್ಕೆ ಆಗಮಿಸಿದ್ದ, ಸದಾ ತನ್ನ ಸೇವಕರಾದ ಬ್ರಹ್ಮಾದಿಗಳನ್ನು ಸತ್ಕರಿಸಿ ಹೋಗಲು ಅನುಜ್ಞೆ ನೀಡಿ ಬ್ರಾಹ್ಮಣರನ್ನು ಸತ್ಕರಿಸಿದ.

ದಂತವಕ್ರ ವಧ

ಸಸ್ನಾವವಭೃಥಂ ಕೃಷ್ಣಃ ಸದಾರಃ ಸಸುಹೃಜ್ಜನಃ ।
ಆಯಾಂತಂ ದ್ವಾರಕಾಂ ಕೃಷ್ಣಂ ದಂತವಕ್ರೋ ರುರೋಧ ಹ ॥೩೮॥

ಪತ್ನಿಯರೊಂದಿಗೂ ಮಿತ್ರಜನರೊಂದಿಗೂ ಕೂಡಿ ಶ್ರೀಕೃಷ್ಣ ಅವಭೃಥ ಸ್ನಾನವನ್ನೂ ಮಾಡಿದ. ಸ್ನಾನಮಾಡಿ ದ್ವಾರಕೆಗೆ ಹಿಂತಿರುಗಿ ಬರುವಾಗ ಮಾರ್ಗದಲ್ಲಿ ದಂತವಕ್ರ ಅವನನ್ನು ಅಡ್ಡಗಟ್ಟಿದ.

ಅವಭೃಥವೆಂದರೆ ಅದೊಂದು ಇಷ್ಟಿ, ವರುಣ ದೇವತೆ. ನೀರಲ್ಲಿಯೆ ಹೋಮ. ನೀರಲ್ಲಿಯೆ ಪ್ರಯಾಜ ಅನೂಯಾಜ ಆಜ್ಯಭಾಗ ಪುರೋಡಾಶಹೋಮಗಳೆಲ್ಲವನ್ನೂ ಮಾಡಬೇಕು. ಬಳಿಕ ಅದೇ ನೀರಲ್ಲಿ ಎಲ್ಲರೂ ಸ್ನಾನ ಮಾಡಬೇಕು. ಮೊದಲಿಗೆ ಯಜಮಾನ ಎಲ್ಲರ ತಲೆಗೂ ಬೊಗಸೆಯಿಂದ ನೀರನ್ನೆತ್ತಿ ಸುರಿಯಬೇಕು. ಬಳಿಕ ಎಲ್ಲರೂ ಮುಳುಗಿ ಮೈತೊಳೆದುಕೊಳ್ಳಬೇಕು. ಸಕಲ ರೋಗಾದಿ ನಿವಾರಕ ಈ ಸ್ನಾನ. ಶ್ರೀಕೃಷ್ಣ ದ್ವಾರಕೆಯಿಂದ ಯಮುನಾ ತೀರಕ್ಕೆ ಹೋಗಿ ಅಲ್ಲಿ ಅವಭೃಥೇಷ್ಟಿ ಸ್ನಾನಗಳನ್ನು ತೀರಿಸಿ ದ್ವಾರಕೆಗೆ ಬರುವಾಗ ದಾರಿಯಲ್ಲಿ ದಂತವಕ್ರ ಅಡ್ಡಗಟ್ಟಿದ.

[1]ಅವಭೃಥ ಸ್ನಾನಕ್ಕಾಗಿ ಶ್ರೀಕೃಷ್ಣ ಯಮುನಾತೀರಕ್ಕೆ ಬಂದನೆಂದು ಭಾಗವತ ಹೇಳುವುದರಿಂದ ಯಮುನೆಯಲ್ಲಿ ಅವಭೃಥಸ್ನಾನ ಮಾಡಿದನೆಂದು ಯೋಗ್ಯ ಪದವನ್ನು ಅಧ್ಯಾಹಾರ ಮಾಡಿಕೊಂಡು ಅನ್ವಯ ಮಾಡಬೇಕು. ಅದರಿಂದಲೆ 'ದ್ವಾರಕೆಗೆ ಬರುವಾಗ' ಎಂದಿದೆ ಎನ್ನುತ್ತದೆ ವಾದಿರಾಜೀಯ.

ಜಘಾನ ಗದಯಾ ಕೃಷ್ಣಸ್ತತ್‌ಕ್ಷಣಾತ್ ಸವಿಡೂರಥಂ।
ವಿಡೂರಥಸ್ತಮೋಽ ಗಚ್ಛದ್ ದಂತವಕ್ರೇ ಚ ಯೋಽಸುರಃ ॥೩೯॥

ಶ್ರೀಕೃಷ್ಣ ದಂತವಕ್ರನನ್ನೂ ಜೊತೆಗೆ ಅವನ ತಮ್ಮನಾದ ವಿಡೂರಥನನ್ನೂ ಗದೆಯಿಂದ ತತ್‌ಕ್ಷಣ ಕೊಂದ. ವಿಡೂರಥ ತಮಸ್ಸಿಗೆ ತೆರಳಿದ. ದಂತವಕ್ರನಲ್ಲಿದ್ದ ಆದಿಹಿರಣ್ಯಾಕ್ಷನೆಂಬ ಅಸುರನೂ ತಮಸ್ಸಿಗೇ ಹೋದ.

ಭಾಗವತದಲ್ಲಿ ರಾಜಸೂಯದ ಅಗ್ರಪೂಜೆಯ ಸಂದರ್ಭದಲ್ಲಿ ಶಿಶುಪಾಲ ವಧೆ ನಡೆಯಿತೆಂದು ಹೇಳಿದ ಬಳಿಕ ಶ್ರೀಕೃಷ್ಣ ಏಕಾಹಯಾಗ ಮಾಡಿದನೆಂದೂ ಅನಂತರ ದಂತವಕ್ರನನ್ನು ಕೊಂದನೆಂದೂ ಹೇಳಿದೆ. ಶಿಶುಪಾಲವಧೆಯ ಸಮಾಚಾರ ಕೇಳಿ ತಿಳಿದು ಸಿಟ್ಟಾಗಿ ದಂತವಕ್ರ ಬಂದಿದ್ದನೆಂದೂ ಹೇಳಿದೆ. ಆದರೆ ವಸ್ತುತಃ ಅಣ್ಣನಾದ ಹಿರಣ್ಯಕಶಿಪುವಿಗಿಂತ ಮೊದಲು ಹಿರಣ್ಯಾಕ್ಷ, ರಾವಣನಿಗಿಂತ ಮೊದಲು ಕುಂಭಕರ್ಣ ಹತನಾದಂತೆ ಶಿಶುಪಾಲನಿಗಿಂತ ಮೊದಲು ದಂತವಕ್ರ ಹತನಾದ. ಈ ಅಭಿಪ್ರಾಯದಿಂದಲೆ ನಿರ್ಣಯದಲ್ಲಿ ಶಿಶುಪಾಲವಧೆಗಿಂತ ಮೊದಲು ದಂತವಕ್ರವಧೆ ಉಕ್ತವಾಗಿದೆ.

---

1. ಉದ್ಯಾಪನ ಸ್ನಾನ ಹೇತೋರ್ಯಮುನಾ ತೀರಮಾಗತಂ ಇತಿ ಭಾಗವತೋಕ್ತೇಃ ಯಮುನಾಯಾಂ ಸಸ್ನಾವಿತಿ ಯೋಗ್ಯಪದಾಧ್ಯಾಹಾರೇಣ ಯೋಜನಾ। ಅತ ಏವ ಆಯಾಂತಂ ದ್ವಾರಕಾಂ ಕೃಷ್ಣಂ ಇತ್ಯುಕ್ತಂ।
– ವಾದಿರಾಜೀಯ

ಹರೇಶ್ಚ ಪಾರ್ಷದಃ ಕ್ಷಿಪ್ರಂ ಹರಿಮೇವ ಸಮಾಶ್ರಿತಃ ॥೪೦॥

ದಂತವಕ್ರನಲ್ಲಿದ್ದ ಹರಿಪಾರ್ಷದನಾದ ವಿಜಯನೆಂಬ ವೈಕುಂಠದ್ವಾರಪಾಲಕ ಬೇಗನೆ ಹರಿಯ ಉದರವನ್ನು ಪ್ರವೇಶಿಸಿದ.

ಕೃಷ್ಣೇ ಪ್ರಾಪ್ತೇ ಸ್ವಲೋಕಂ ಚ ನಿಃಸೃತ್ಯಾಸ್ಮಾತ್ ಸ್ವರೂಪತಃ ।
ಏಕೀಭಾವಂ ಸ್ವರೂಪೇಣ ದ್ವಾರಪೇಣ ಗಮಿಷ್ಯತಿ ॥೪೧॥

ಮುಂದೆ ಕೃಷ್ಣ ತನ್ನ ಧಾಮವನ್ನು ಸೇರಿದಾಗ ವಿಜಯ ಅವನೊಳಗಿಂದ ಹೊರಗೆ ಬಂದು ಅಲ್ಲಿ ದ್ವಾರಪಾಲಕವಾಗಿರುವ ತನ್ನ ಮೂಲರೂಪದೊಂದಿಗೆ ಸೇರಿ ಒಂದಾಗುತ್ತಾನೆ.

ಭೂಗೋಳ ವರ್ಣನೆ

ತತಃ ಕೃಷ್ಣಃ ಪುರೀಮೇತ್ಯ ಬೋಧಯಾಮಾಸ ಫಲ್ಗುನಂ ।
ಕಿಮೇತದ್ ದೃಷ್ಟಮಿತ್ಯೇವ ತೇನ ಪೃಷ್ಟೋ ರಮಾಪತಿಃ ॥೪೨॥

ಬಳಿಕ ಕೃಷ್ಣ ದ್ವಾರಕೆಗೆ ಬಂದು ಅರ್ಜುನನಿಗೆ ಹೇಳತೊಡಗಿದ. ಏಕೆಂದರೆ 'ನಾನು ನೋಡಿದ ಸ್ಥಳಗಳು ಏನೆಂ'ದು ಅರ್ಜುನ ಶ್ರೀಕೃಷ್ಣನನ್ನು ಕೇಳಿದ.

ಅಯಂ ದ್ವೀಪಃ ಸಾಗರಶ್ಚ ಲಕ್ಷಯೋಜನವಿಸ್ತೃತೌ ।
ತದನ್ಯೇ ತು ಕ್ರಮೇಣೈವ ದ್ವಿಗುಣೇನೋತ್ತರೋತ್ತರಾಃ ॥೪೩॥

'ಈ ಜಂಬೂದ್ವೀಪವೂ ಲವಣಸಮುದ್ರವೂ ಲಕ್ಷಯೋಜನ ವಿಸ್ತಾರವಾಗಿದೆ. ಬೇರೆ ದ್ವೀಪಸಾಗರಗಳು ಕ್ರಮವಾಗಿ ಒಂದಕ್ಕಿಂತ ಇನ್ನೊಂದು ಎರಡರಷ್ಟು ಹೆಚ್ಚು ವಿಸ್ತಾರವಾಗಿವೆ.

ಜಂಬುದ್ವೀಪದ ವಿಸ್ತಾರ ಒಂದು ಲಕ್ಷ ಯೋಜನ. ಅದರ ಸುತ್ತಲೂ ಇರುವ ಲವಣಸಮುದ್ರವೂ ಒಂದು ಲಕ್ಷ ಯೋಜನ ಅಗಲ. ಮುಂದೆ ಪ್ಲಕ್ಷದ್ವೀಪ. ಅದು ಲವಣಸಮುದ್ರದ ಸುತ್ತಲೂ ಆವರಿಸಿದೆ. ಅಗಲ ಎರಡು ಲಕ್ಷ ಯೋಜನಗಳು. ಅದನ್ನು ಆವರಿಸಿರುವ ಇಕ್ಷು ಸಮುದ್ರವೂ ಎರಡು ಲಕ್ಷ ಯೋಜನ ಅಗಲ. ಹೀಗೆ ಮುಂದೆ ಶಾಲ್ಮಲಿದ್ವೀಪ ಸುರಾ ಸಮುದ್ರಗಳು, ಕುಶದ್ವೀಪ ಸರ್ಪಿಸಮುದ್ರಗಳು ಕ್ರೌಂಚದ್ವೀಪ ದಧಿಸಮುದ್ರಗಳು, ಶಾಕದ್ವೀಪ ಕ್ಷೀರಸಮುದ್ರಗಳು, ಪುಷ್ಕರದ್ವೀಪ ಶುದ್ಧೋದ ಸಮುದ್ರಗಳು ಕ್ರಮವಾಗಿ ನಾಲ್ಕು, ಎಂಟು, ಹದಿನಾರು, ಮೂವತ್ತೆರಡು, ಅರವತ್ತನಾಲ್ಕು ಲಕ್ಷಯೋಜನ ಅಗಲವಾಗಿರುತ್ತವೆ. ಜಂಬು ದ್ವೀಪದಲ್ಲಿ ನಡುವೆ ಮೇರು ಪರ್ವತವಿದೆ. ಮೇರು ಪರ್ವತದ ಕೇಂದ್ರ ಬಿಂದುವಿನಿಂದ ಜಂಬುದ್ವೀಪ ಅರ್ಧಲಕ್ಷ ಯೋಜನ ಅಗಲವಾಗಿದೆ. ಅದರಿಂದ ಮೇರು ಪರ್ವತದಿಂದ ಎಲ್ಲ ದ್ವೀಪ ಸಾಗರಗಳ ಒಟ್ಟು ಅಗಲ ಎರಡುಕೋಟಿ ಐವತ್ತಮೂರುವರೆ ಲಕ್ಷ ಯೋಜನಗಳು.

ಅಂತ್ಯಾಧ್ಯರ್ಧಸ್ಥಲಂ ಹೈಮಂ ಬಾಹ್ಯತೋ ವಾಜ್ರಲೇಪಿಕಂ ।
ಏತತ್ಸರ್ವಂ ಲೋಕನಾಮ ಹ್ಯೇತಸ್ಮಾದ್ದ್ವಿಗುಣಂ ತಮಃ ॥೪೪॥

ಕೊನೆಯದಾದ ಶುದ್ಧೋದ ಸಮುದ್ರದ ಅರ್ಧಕ್ಕಿಂತ ಸ್ವಲ್ಪ ಹೆಚ್ಚು ಅಗಲ ವಜ್ರಲೇಪ ಸಹಿತ ಸ್ವರ್ಣ ಭೂಮಿ. ಇದೆಲ್ಲವೂ ಲೋಕವೆನಿಸುತ್ತದೆ. ಇದಕ್ಕಿಂತ ಎರಡು ಪಟ್ಟು ಅಧಿಕ ಅಂಧಂತಮಸ್ಸು.

ವರ್ತುಲಾಕಾರವಾದ ಶುದ್ಧೋದ ಸಮುದ್ರದ ಒಂದು ಭಾಗದ ಅಗಲ ಅರವತ್ತನಾಲ್ಕು ಲಕ್ಷ ಯೋಜನಗಳು. ಪೂರ್ವ ಪಶ್ಚಿಮ ಭಾಗಗಳೆರಡರ ಅಗಲಗಳು ಒಟ್ಟು ನೂರಿಪ್ಪತ್ತೆಂಟು ಲಕ್ಷ ಯೋಜನಗಳು. ಇದರ ಅರ್ಧವೆಂದರೆ ಅರವತ್ತನಾಲ್ಕು ಲಕ್ಷ, ಅದಕ್ಕೆ ಸ್ವಲ್ಪ ಅಧಿಕ ಎಂದರೆ ನಲವತ್ತೆರಡು ಲಕ್ಷ ಇಪ್ಪತ್ತೆಂಟು ಸಾವಿರದ ಐನೂರ ಎಪ್ಪತ್ತೊಂದು ಯೋಜನಗಳನ್ನು ಸೇರಿಸಿದರೆ 'ಅಧ್ಯರ್ಧ' ಅಂದರೆ, ನೂರಾರು ಲಕ್ಷ ಇಪ್ಪತ್ತೆಂಟು ಸಾವಿರದ ಐನೂರೆಪ್ಪತ್ತೊಂದು ಯೋಜನ ಅಗಲ ವಜ್ರಲೇಪ ಸಹಿತವಾದ ಸ್ವರ್ಣ ಭೂಮಿ. ಇದರಲ್ಲಿ ಸ್ವರ್ಣ ಭೂಮಿ ಶುದ್ಧೋದ ಸಮುದ್ರದ ಅರ್ಧದಷ್ಟು, ಅಂದರೆ ಅರವತ್ತನಾಲ್ಕು ಲಕ್ಷ ಯೋಜನ. ಉಳಿದ ನಲವತ್ತೆರಡು ಲಕ್ಷ ಇಪ್ಪತ್ತೆಂಟು ಸಾವಿರದ ಐನೂರೆಪ್ಪತ್ತೊಂದು ಯೋಜನ ವಜ್ರ ಭೂಮಿಯ ವಿಸ್ತಾರ. 'ಅಧ್ಯರ್ಧ' ಎಂದರೆ ಒಂದೂವರೆ ಪಟ್ಟು ಎಂದು ಗ್ರಹಿಸಿದರೆ ಬ್ರಹ್ಮಾಂಡದ ವಿಸ್ತಾರ ಐವತ್ತು ಕೋಟಿಯೊಜನಕ್ಕಿಂತಲೂ ಹೆಚ್ಚಾದೀತು. ಅದು ಬ್ರಹ್ಮಾಂಡ ಐವತ್ತು ಕೋಟಿ ಯೋಜನ ವಿಸ್ತೃತ ಎಂದೆನ್ನುವ ಭಾಗವತ ವಚನಕ್ಕೆ ವಿರುದ್ಧವಾಗುವುದು. ಶಬ್ದ ಕಾಮಧೇನುವಿನಂತೆ ಬೇಕಾದ ಅರ್ಥವನ್ನು ಕೊಡಬಲ್ಲದು. ವಾಸ್ತವ ಪ್ರಮೇಯವನ್ನು ಮಾತ್ರ ವ್ಯತ್ಯಾಸಮಾಡುವ ಹಾಗಿಲ್ಲ. ಅದರಿಂದ ಹೀಗೇ ಅರ್ಥೈಸಬೇಕು ಎನ್ನುತ್ತದೆ[1] ವಾದಿರಾಜೀಯ.

---

1. ವರ್ತುಲತಯಾ ಸ್ಥಿತಾಂತ್ಯ ಸಮುದ್ರಸ್ಯ ಭಾಗದ್ವಯೇ ಮಿಲಿತ್ವಾ ಯತ್ ಪರಿಮಾಣಂ ಅಷ್ಟಾವಿಂಶೋತ್ತರ ಶತಲಕ್ಷ ಯೋಜನಾತ್ಮಕಂ, ತತೋಽರ್ಧಂ ಚತುಃ ಷಷ್ಟಿ ಲಕ್ಷ ಯೋಜನಾನಿ। ತಾನಿ ಚ ಅಧಿಯತ್ಕಿಂಚಿದಧಿಕ ಸಂಖ್ಯಯಾ ಅಷ್ಟಾವಿಂಶತ್ ಸಹಸ್ರಾಖ್ಯಯಾ ಸಹಿತಾದ್ ದ್ವಿಲಕ್ಷೋತ್ತರ ಚತ್ವಾರಿಂಶಲ್ಲಕ್ಷ ಪರಿಮಿತಯಾ ಸಹಿತಂ ಅಧ್ಯರ್ಧಂ ಸ್ಥಲಮಿತ್ಯರ್ಥಃ। ಬಾಹ್ಯತೋ ವಾಜ್ರಲೇಪಿಕಂ ವಜ್ರಲೇಪಸ್ಥಲ ಸಹಿತಂ ಹೈಮಂ ಸುವರ್ಣಮಯಂ। ತತ್ರ ಸುವರ್ಣಭೂಮಿಸ್ತು ಅರ್ಧಪದೋಕ್ತ ಚತುಃಷಷ್ಟಿಲಕ್ಷಯೋಜನ ಪರಿಮಿತಾ। ಉರ್ವರಿತಾಷ್ಟಾವಿಂಶತ್ ಸಹಸ್ರಾಖ್ಯಾಂಶೇನ ಸಹಿತ ದ್ವಿಲಕ್ಷೋತ್ತರ ಚತ್ವಾರಿಂಶಲ್ಲಕ್ಷ ಪರಿಮಿತಂ ವಜ್ರಲೇಪಸ್ಥಲಮಿತಿ ವಿವೇಕಃ। ತಾವತ್ ತದರ್ಧಂ ಚೇತ್ಯರ್ಥ ಕಥನೇ ಭೂಗೋಳಸ್ಯ ಪಂಚಾಶತ್ ಕೋಟಿತೋಽಪ್ಯಧಿಕಂ ಸ್ಯಾತ್। ತಚ್ಚಾಂಡಕೋಶಾದ್ ಬಹಿರಯಂ ಪಂಚಾಶತ್ ಕೋಟಿ ವಿಸ್ತೃತ ಇತಿ ಭಾಗವತೋಕ್ತಿವಿರುದ್ಧಂ। ತಸ್ಮಾತ್ ಶಬ್ದಸ್ಯ ಕಾಮದುಘತ್ವೇನ ಅರ್ಥಸ್ಯ ಚ ವ್ಯತ್ಯಾಸಾಯೋಗಾತ್ ಉಕ್ತೈವ ಯೋಜನಾ । –ವಾದಿರಾಜೀಯ

[1]ಜನಾರ್ದನೀಯ ವರದರಾಜೀಯಗಳ ಪ್ರಕಾರ ಶುದ್ಧೋದ ಸಮುದ್ರದ ಒಂದು ಭಾಗದ ಅಗಲವಾದ ಅರವತ್ತನಾಲ್ಕು ಲಕ್ಷಕ್ಕೆ ಒಂದೂವರೆ ಪಟ್ಟು ಅಂದರೆ ತೊಂಬತ್ತಾರು ಲಕ್ಷ ಯೋಜನವೆ ವಜ್ರಲೇಪ ಸಹಿತ ಸ್ವರ್ಣ ಭೂಮಿಯ ವಿಸ್ತಾರ. ಎಲ್ಲ ದ್ವೀಪಸಾಗರಗಳು ಎರಡು ಕೋಟಿ ಐವತ್ತನಾಲ್ಕು ಲಕ್ಷ. ಒಟ್ಟು ಮೂರುವರೆ ಕೋಟಿ ಯೋಜನಗಳು.

ಅಂಧಂ ಯತ್ರ ಪತಂತ್ಯುಗ್ರಾ ಮಿಥ್ಯಾಜ್ಞಾನಪರಾಯಣಾಃ ।
ಘನೋದಕಂ ತದ್ದ್ವಿಗುಣಂ ತದಂತೇ ಧಾಮ ಮಾಮಕಂ ॥೪೫॥
ಯತ್ತದ್ ದೃಷ್ಟಂ ತ್ವಯಾ ಪಾರ್ಥ ತತ್ರ ಮುಕ್ತೈರಜಾದಿಭಿಃ ।
ಸೇವ್ಯಮಾನಃ ಸ್ಥಿತೋ ನಿತ್ಯಂ ಸರ್ವೈಃ ಪರಮಪೂರುಷಃ ॥೪೬॥

ಅಂಧಂ ತಮಸ್ಸೆಂದರೆ ಭಯಂಕರ ಮಿಥ್ಯಾಜ್ಞಾನ ಪರಾಯಣರು ಬೀಳುವ ಸ್ಥಳ. ಇದಕ್ಕಿಂತ ಇಮ್ಮಡಿ ಘನೋದಕ ಸಮುದ್ರ. ಅದರಾಚೆಗೆ ನೀನು ನೋಡಿದ ನನ್ನ ಅನಂತಾಸನ ಲೋಕ. ಅಲ್ಲಿ ಮುಕ್ತರಾದ ಎಲ್ಲ ಬ್ರಹ್ಮಾದಿ ದೇವತೆಗಳಿಂದ ಸದಾ ಸೇವ್ಯನಾಗಿ ಪರಮ ಪುರುಷನಾದ ನಾನಿರುತ್ತೇನೆ.

ಲೋಕಾಲೋಕಪ್ರದೇಶಸ್ತು ಪಂಚಾಶಲ್ಲಕ್ಷವಿಸ್ತೃತಃ ।
ಸಪಂಚಾಶತ್ಸಹಸ್ರಶ್ಚ ತಸ್ಯಾಪಿ ಗಣನಂ ತಥಾ ॥೪೭॥

ಲೋಕಾಲೋಕ ಪ್ರದೇಶ ಐವತ್ತು ಲಕ್ಷ ಐವತ್ತು ಸಾವಿರ ಯೋಜನವಿಸ್ತಾರವಾಗಿದೆ. ಆದರೆ ಅದರ ಗಣನೆ ಭಾಗವತಾದಿ ಗ್ರಂಥಗಳಲ್ಲಿ ಐವತ್ತು ಲಕ್ಷವೆಂದು ಉಕ್ತವಾಗಿದೆ.

[2]ವಜ್ರಲೇಪ ಮತ್ತು ಅಂಧಂತಮಸ್ಸುಗಳ ನಡುವೆ ಲೋಕಾಲೋಕ ವೆಂಬ ಪರ್ವತವಿದೆ. ಅದರ ಒಳಗಿನ ಅರ್ಧಭಾಗದಲ್ಲಿ ಸೂರ್ಯ ಸಂಚಾರವಿರುವುದರಿಂದ. 'ಲೋಕ' ಬೆಳಕು ಇದೆ. ಹೊರಗಿನ ಅರ್ಧಭಾಗದಲ್ಲಿ ಸೂರ್ಯಸಂಚಾರವಿಲ್ಲ. ಮತ್ತು ಅಂಧಂತಮಸ್ಸಿಗೆ ಆ ಭಾಗ ಸಮೀಪದಲ್ಲಿಯೂ ಇದೆ. ಹೀಗಾಗಿ 'ಅಲೋಕ' ಬೆಳಕು ಇಲ್ಲ, ಕತ್ತಲು. ಅದರಿಂದ ಈ ಪರ್ವತ ಪ್ರದೇಶ ಲೋಕಾಲೋಕವೆನಿಸುತ್ತದೆ.

---

1. ಅಧ್ಯರ್ಧಂ ಅರ್ಧೇನ ಅಧಿಕಂ ಪೂರ್ವೋಕ್ತ ಚತುಃಷಷ್ಟಿ ಲಕ್ಷ ಯೋಜನಾನಾಮರ್ಧೇನ ದ್ವಾತ್ರಿಂಶಲ್ಲಕ್ಷ ಯೋಜನ ಪರಿಮಾಣೇನ ಅಧಿಕಂ ಚತುಃಷಷ್ಟಿ ಲಕ್ಷ ಯೋಜನ ಪರಿಮಾಣಂ ಸ್ಥಲಂ ಹೈಮಂ ಸುವರ್ಣಮಯಂ। ಷಣ್ಣವತಿ ಲಕ್ಷ ಯೋಜನ ವಿಸ್ತೀರ್ಣಂ ಹೈಮಸ್ಥಲಮಿತ್ಯರ್ಥಃ। ಬಾಹ್ಯತೋ ಬಹಿರ್ಭಾಗೇ ವಾಜ್ರಲೇಪಿಕಂ। ಚತುಃ ಪಂಚಾಶಲ್ಲಕ್ಷಾಧಿಕ ಕೋಟಿ ದ್ವಯಯೋಜನ ಸಂಖ್ಯಾಕಾಃ ಸರ್ವೇ ದ್ವೀಪಸಮುದ್ರಾಃ ಷಣ್ಣವತಿ ಲಕ್ಷಯೋಜನ ವಿಸ್ತೀರ್ಣಂ ಹೈಮ ಸ್ಥಲಂ, ಏವಂ ಸರ್ವಂ ಮಿಲಿತ್ವಾ ಸಾರ್ಧಕೋಟಿ ತ್ರಯ ಪರಿಮಾಣಮುಕ್ತಂ। -ಜನಾರ್ದನೀಯ

2. ಅರ್ಧೇ ಸೂರ್ಯಲೋಕಸಂಚಾರೋಽಸ್ತಿ। ಪುನರರ್ಧೇ ತಮಃಸಮೀಪಸ್ಥತ್ವಾತ್ ತಮ ಏವೇತಿ ಭಾವೇನ ಲೋಕಾಲೋಕ ಇತ್ಯುಕ್ತಂ। -ವಾದಿರಾಜೀಯ

[1]ಲೋಕಾಲೋಕದ ವಿಸ್ತಾರವನ್ನು ನಿಖರವಾಗಿ ಹೇಳಬೇಕೆಂದರೆ ಅದು ಐವತ್ತು ಲಕ್ಷದ ಐವತ್ತು ಸಾವಿರ ಯೋಜನಗಳು. ಭಾಗವತಾದಿಗಳಲ್ಲಿ ಐವತ್ತು ಲಕ್ಷ ಮಾತ್ರ ಉಕ್ತವಾಗಿದೆ. ಇದು ಒಂದು ಗ್ರಾಮ ಹತ್ತುಯೋಜನಕ್ಕಿಂತ ಸ್ವಲ್ಪ ಹೆಚ್ಚಿದ್ದರೂ ಹತ್ತು ಯೋಜನವೆಂದು ಹೇಳುವಂತೆ ಎಂದಿಟ್ಟುಕೊಳ್ಳಬೇಕು. ಈ ಗ್ರಂಥ ಭಾಗವತಾದಿಗಳ ತಾತ್ಪರ್ಯ ನಿರ್ಣಯ ಮಾಡುವ ಉದ್ದೇಶದಿಂದಲೆ ಹೊರಟಿರುವುದರಿಂದ ನಿಖರವಾಗಿ ಹೆಚ್ಚುಕಡಿಮೆ ಇಲ್ಲದಂತೆಯೆ ಹೇಳುತ್ತಿದೆ ಎಂದು ಜನಾರ್ದನೀಯ ವರದರಾಜೀಯ.

ಯೋಜನಾನಾಂ ಪಂಚವಿಂಶತ್ಕೋಟಯೋ ಮೇರುಪರ್ವತಾತ್ ।
ಚತಸೃಷ್ವಪಿ ದಿಕ್ಷೂರ್ಧ್ವಮಧಶ್ಚಾಂಡಂ ಪ್ರಕೀರ್ತಿತಂ ॥೪೮॥

ಬ್ರಹ್ಮಾಂಡವು ಮೇರುಪರ್ವತದಿಂದ ನಾಲ್ಕು ದಿಕ್ಕುಗಳಲ್ಲಿ ಮೇಲೂ ಕೆಳಗೂ ಇಪ್ಪತ್ತೈದು ಕೋಟಿ ಯೋಜನ ಎನ್ನಲಾಗಿದೆ.

ಜಂಬೂದ್ವೀಪದ ಮಧ್ಯದಲ್ಲಿ ಮೇರುಪರ್ವತವಿದೆ. ಮೇರು ಪರ್ವತದ ಸುತ್ತಲೂ ನಾಲ್ಕು ದಿಕ್ಕುಗಳಲ್ಲಿ ಜಂಬೂದ್ವೀಪ ಐವತ್ತು ಸಾವಿರ ಯೋಜನ ವಿಸ್ತಾರವಾಗಿದೆ. ಜಂಬುದ್ವೀಪ ಒಂದು ಲಕ್ಷ ಯೋಜನ ವಿಸ್ತಾರವೆನ್ನುವುದು ಪೂರ್ವ ಪಶ್ಚಿಮ ಎರಡು ಭಾಗಗಳ ಒಟ್ಟು ವಿಸ್ತಾರದ ದೃಷ್ಟಿಯಿಂದ. ಇದಕ್ಕಿಂತ ದ್ವಿಗುಣ ಪ್ಲಕ್ಷದ್ವೀಪ ಎಂದು ಮುಂತಾಗಿ ಹೇಳುವ ಸೌಕರ್ಯಕ್ಕಾಗಿ ಹಾಗೆ ಹೇಳಿದೆ. ಹೀಗಾಗಿ ಮೇರುವಿನಿಂದ ಅಂಧಂತಮಸಿನವರೆಗೆ ಲೋಕಾಲೋಕದ ವಿಸ್ತಾರವೂ ಸೇರಿದಂತೆ ನಾಲ್ಕು ಕೋಟಿ ಯೋಜನವಾಗುತ್ತದೆ. ಅಂಧಂತಮಸ್ಸು ಲೋಕಾಲೋಕವನ್ನು ಬಿಟ್ಟು ಭೂಮಿ ಪರಿಮಾಣದ ಎರಡುಪಟ್ಟು ಅಂದರೆ ಆರುಕೋಟಿ ತೊಂಬತ್ತೊಂಬತ್ತು ಲಕ್ಷ ಯೋಜನ ವಿಸ್ತಾರ. ಅದರ ಎರಡು ಪಟ್ಟು ಘನೋದಕ, ಹದಿಮೂರು ಕೋಟಿ ತೊಂಬತ್ತೆಂಟು ಲಕ್ಷ ಯೋಜನ ವಿಸ್ತಾರ. ಅನಂತಾಸನ ಮೂರು ಲಕ್ಷ ಯೋಜನ. ಬಳಿಕ ಬ್ರಹ್ಮಾಂಡ ಕಟಾಹ. ಹೀಗೆ ಮೇರುವಿನಿಂದ ಬ್ರಹ್ಮಾಂಡ ಕಟಾಹಪರ್ಯಂತ ಇಪ್ಪತ್ತೈದು ಕೋಟಿ ಯೋಜನ ಪ್ರಮಾಣ ಸರಿಯಾಗುತ್ತದೆ ಎನ್ನುತ್ತದೆ ಜನಾರ್ದನೀಯ.[2]

---

1. ದಶಯೋಜನಾತ್ ಕಿಂಚಿದಧಿಕಸ್ಯಾಪಿ ಗ್ರಾಮಾದೇರ್ದಶಯೋಜನಾದಿವ್ಯವಹಾರಸ್ಯ ಲೋಕೇ ದರ್ಶನಾತ್ ಪಂಚಾಶಲ್ಲಕ್ಷವಿಸ್ತೃತ ಇತಿ ಘಟತೇ। ಅಸ್ಯ ತು ತಾತ್ಪರ್ಯಗ್ರಂಥತ್ವಾತ್ ಯಥಾವಸ್ತು ಕಥನಮೇವ ಕೃತಮಿತಿ ಭಾವಃ। -ಜನಾರ್ದನೀಯ
2. ಜಂಬುದ್ವೀಪಸ್ಯ ಮಧ್ಯ ಏವ ಮೇರುಪರ್ವತಸ್ತಿಷ್ಠತಿ। ಮೇರೋಃ ಸಕಾಶಾತ್ ಚತುರ್ದಿಕ್ಷು ಜಂಬುದ್ವೀಪಃ

[1]ವಾದಿರಾಜೀಯ ಪ್ರಕಾರ ಮೇರು ಪರ್ವತದಿಂದ ಎಲ್ಲ ದ್ವೀಪಸಾಗರಗಳ ಒಟ್ಟು ವಿಸ್ತಾರ ಎರಡುಕೋಟಿ ಐವತ್ತಮೂರುವರೆ ಲಕ್ಷ ಯೋಜನಗಳು. ಇದು ಒಂದು ಭಾಗದ ಅಳತೆ. ಎರಡು ಭಾಗಗಳು ಸೇರಿದರೆ ಐದು ಕೋಟಿ ಏಳು ಲಕ್ಷ ಯೋಜನಗಳು. ವಜ್ರಲೇಪ ಸಹಿತ ಸ್ವರ್ಣಭೂಮಿ ಎರಡು ಪಾರ್ಶ್ವಗಳೂ ಸೇರಿ ಒಂದು ಕೋಟಿ ಆರು ಲಕ್ಷ ಇಪ್ಪತ್ತೆಂಟು ಸಾವಿರದ ಐನೂರ ಎಪ್ಪತ್ತೊಂದು ಯೋಜನಗಳು. ಲೋಕಾಲೋಕ ಪರ್ವತದ ಒಂದು ಪಾರ್ಶ್ವ ಐವತ್ತು ಲಕ್ಷ ಐವತ್ತು ಸಾವಿರ ಯೋಜನವಾದ್ದರಿಂದ ಎರಡೂ ಪಾರ್ಶ್ವಗಳು ಸೇರಿ ಒಂದು ಕೋಟಿ ಒಂದು ಲಕ್ಷ ಯೋಜನಗಳು. ಈ ಮೂರೂ ಸೇರಿದರೆ ಒಟ್ಟು ಏಳು ಕೋಟಿ ಹದಿನಾಲ್ಕು ಲಕ್ಷ ಇಪ್ಪತ್ತೆಂಟು ಸಾವಿರದ ಐನೂರ ಎಪ್ಪತ್ತೊಂದು ಯೋಜನಗಳು ಭೂಮಿಯ ಪ್ರಮಾಣ. ಇದರ ಎರಡರಷ್ಟು ತಮಸ್ಸು.

ಪಂಚಾಶತ್ ಸಹಸ್ರ ಯೋಜನ ವಿಸ್ತೀರ್ಣಃ। ಅತ ಏವ ಮೇರು ಪರ್ವತಾದ್ ಅಂಧಂತಮಃ ಪರ್ಯಂತಂ ಲೋಕಾಲೋಕ ಪರ್ವತ ಪರಿಮಾಣೇನ ಸಹ ಕೋಟಿ ಚತುಷ್ಟಯಂ ಭವತಿ। ಲಕ್ಷನ್ಯೂನ ಕೋಟಿ ಸಪ್ತಕ ಪರಿಮಾಣಂ ತಮಃ। ದ್ವಿಲಕ್ಷನ್ಯೂನಂ ಚತುರ್ದಶ ಕೋಟಿ ಪರಿಮಾಣಂ ಘನೋದಕಂ। ತ್ರಿಲಕ್ಷ ಪರಿಮಾಣ ಮನಂತಾಸನಂ। ಏವಂ ಮೇರು ಪರ್ವತಮಾರಭ್ಯ ಅಂಡಪರ್ಯಂತಂ ಪಂಚವಿಂಶತಿ ಕೋಟಿಯೋ ಭವಂತಿ। -ಜನಾರ್ದನೀಯ

1. ಯುಕ್ತಾಭೂತ್ ಸ್ವರ್ಣಭೂಮ್ಯಂತಃ ಕೋಟಿ ಪಂಚಕಯೋಜನಾ।
ಲಕ್ಷೈಶ್ಚ ಸಪ್ತಭಿರ್ಯುಕ್ತಾ ನಿತ್ಯಮಾಸೀದ್ ವಿಚಾರಣೇ।
ಸಪಂಚಾಶತ್ ಸಹಸ್ರಾರ್ಧಕೋಟಿರ್ಮೂಲಕೃತೈವಹಿ।
ಲೋಕಾಲೋಕಗಿರೇರ್ಮಾನಸಂಖ್ಯಾ ಸಂಕೀರ್ತಿತಾ ಸ್ಫುಟಂ।
ಅತೋಽಂತಿಮಸಮುದ್ರಸ್ಯ ಪರಿತೋ ಮಂಡಲಾಕೃತೇಃ।
ಭಾಗದ್ವಯೇ ಮಿಲಿತ್ವಾಷ್ಟಾವಿಂಶಲ್ಲಕ್ಷಯುತಂ ತು ಯತ್।
ಕೋಟಿ ಯೋಜನ ಮಾನಂ ಸ್ಯಾತ್ ತತೋಽಪ್ಯರ್ಧಂ ತು ಯದ್ ಭವೇತ್।
ಚತುಃಷಷ್ಟ್ಯಾಖ್ಯಮೇತಚ್ಚ ಕಯಾಽಪ್ಯಧಿಕ ಸಂಖ್ಯಯಾ।
ಚತ್ವಾರಿಂಶಲ್ಲಕ್ಷಯುಕ್ತ ಲಕ್ಷದ್ವಿತಯ ರೂಪಯಾ।
ಯುತಮಧ್ಯರ್ಧಶಬ್ದೋಕ್ತಂ...॥
ತತ್ರ ಭೂಃ ಕೋಟಿ ಸಂಖ್ಯಾಯಾಂ ಸಪ್ತಭಿಃ ಕೋಟಿಭಿರ್ಯುತಾ
ತತೋ ದ್ವಿಗುಣಿತಸ್ಯಾಂಧತಮಸಃ ಸ್ಯುಶ್ಚತುರ್ದಶ
ಘನೋದಕಸ್ಯ ತಸ್ಮಾಚ್ಚ ದ್ವಿಗುಣಸ್ಯ ವಿಚಾರಣೇ
ಅಷ್ಟಾವಿಂಶತ್ ಕೋಟಯಃ ಸ್ಯುಃ ಕೋಟಿಸಂಖ್ಯೈವಮೇವ ಹಿ।
ಏವಂಚೈಕೋನ ಪಂಚಾಶತ್ ಕೋಟಯಸ್ತ್ರಿಷು ಖಂಡಿತಾಃ
ಅವಶಿಷ್ಟೈಕ ಕೋಟಿಸ್ತು ವಿಭಜ್ಯಾ...॥
...ಯದತ್ರೋರ್ವರಿತಂ ತ್ರಿಕಂ
ತಸ್ಯಚ ದ್ವಾದಶಕ್ರೋಶಾನ್ ಕೃತ್ವೈವ ವಿಭಜೇದ್ ಬುಧಃ॥ -ಭೂಗೋಲವರ್ಣನ

ತಮಸ್ಸಿನ ಎರಡರಷ್ಟು ಘನೋದಕ. ಈ ಮೂರೂ ಸೇರಿದರೆ ಮೂರು ಯೋಜನ ಕಡಿಮೆ ಐವತ್ತು ಕೋಟಿ ಯೋಜನವಾಗುತ್ತದೆ, ಬ್ರಹ್ಮಾಂಡದ ಅಗಲ. ಅನಂತಾಸನ ಘನೋದಕಸಮುದ್ರದ ಮಧ್ಯದಲ್ಲಿ ಬರುವುದರಿಂದ ಅದರ ಅಳತೆಯನ್ನು ಪ್ರತ್ಯೇಕವಾಗಿ ತೆಗೆದುಕೊಂಡಿಲ್ಲ. ಈಗ ಕಡಿಮೆ ಯಾಗಿರುವ ಮೂರು ಯೋಜನಗಳನ್ನು ಒಂದು:ಎರಡು:ನಾಲ್ಕರ ಪ್ರಮಾಣದಲ್ಲಿ ಭೂಮಿ ತಮಸ್ಸು ಘನೋದಕಗಳಿಗೆ ಹಂಚಿದರೆ ಐವತ್ತು ಕೋಟಿಯೋಜನಗಳು ಬ್ರಹ್ಮಾಂಡ ವಿಸ್ತಾರವೆನ್ನುವುದು ಸಮಂಜಸವಾಗುವುದು.

ಅಬಗ್ನೀರನಭೋಽಹಂಕೃನ್ಮಹತ್ತತ್ತ್ವಗುಣತ್ರಯೈಃ।
ಕ್ರಮಾದ್ದಶಗುಣೈರೇತದಾವೃತಂ ಪರತಸ್ತತಃ ॥೪೯॥

ಕ್ರಮವಾಗಿ ಒಂದಕ್ಕಿಂತ ಇನ್ನೊಂದು ಹತ್ತು ಪಟ್ಟು ಅಧಿಕವಾಗಿರುವ ಜಲ ತೇಜೋ ವಾಯು ಆಕಾಶ ಅಹಂಕಾರ ಮಹತ್ತತ್ವ ಗುಣತ್ರಯಗಳಿಂದ ಈ ಬ್ರಹ್ಮಾಂಡ ಆವೃತವಾಗಿದೆ.

[1]ಐವತ್ತು ಕೋಟಿ ಯೋಜನ ವಿಸ್ತಾರವಾದ ಹದಿನಾಲ್ಕು ಲೋಕಗಳನ್ನು ಒಳಗೊಂಡ ಬ್ರಹ್ಮಾಂಡವನ್ನು ಆವರಿಸಿ ನೂರು ಕೋಟಿ ಯೋಜನ ದಪ್ಪವಾದ ಪೃಥಿವೀ ಮಹಾಭೂತದ ಆವರಣ ಒಂದಿದೆ ಎಂದು ಮತ್ಸ್ಯಪುರಾಣ ಹೇಳಿದೆ.

ಆದರೆ ವರಾಹ ಪುರಾಣದಲ್ಲಿ ಅದು ಹತ್ತು ಲಕ್ಷ ಯೋಜನ ದಪ್ಪ ಎಂದು ಉಕ್ತವಾಗಿದೆ.

ಈ ಆವರಣ ಬ್ರಹ್ಮಾಂಡ ಕಟಾಹ ಎನಿಸಿದೆ. ಇದಕ್ಕೆ ಹೊರಗೆ ಜಲತೇಜ ವಾಯು ಆಕಾಶ ಅಹಂಕಾರ ಮಹತ್ತತ್ವ ಗುಣತ್ರಯಗಳು ಕ್ರಮವಾಗಿ ಒಂದಕ್ಕಿಂತ ಇನ್ನೊಂದು ಹತ್ತು ಪಾಲು ಹೆಚ್ಚು ದಪ್ಪವಾಗಿ ಆವರಿಸಿವೆ. ಅವು ನವಾವರಣಗಳೆನಿಸಿವೆ.

ವ್ಯಾಪ್ತೋಽಹಂ ಸರ್ವಗೋಽನಂತೋಽನಂತರೂಪೋ ನಿರಂತರಃ।
ಅನಂತಶೀರ್ಷೋರ್ಽನಂತಾಕ್ಷೋಽನಂತಪಾದಕರೋರುಕಃ।
ಅನಂತಗುಣಮಾಹಾತ್ಮ್ಯಶ್ಚಿದಾನಂದಶರೀರಕಃ ॥೫೦॥

---

1. ತದುಕ್ತಂ ಮಾತ್ಸ್ಯೇ-
   ಶತಾರ್ಧಕೋಟಿ ವಿಸ್ತಾರಾ ಪೃಥಿವೀ ಕೃತ್ಸ್ನಶಃ ಸ್ಮೃತಾ।
   ಲೋಕವಿಸ್ತಾರ ಮಾತ್ರಂತು ಪೃಥಿವ್ಯರ್ಧಂತು ಬಾಹ್ಯತಃ।
   ತದುಕ್ತಂ ವಾರಾಹೇ -
   ದಶಲಕ್ಷಂ ಯೋಜನಾನಾಂ ಕಟಾಹಘನತಾ ಸ್ಮೃತಾ।
   ಅತಏವ ಖರ್ಪರಪರಿಮಾಣಮಾಗಮಾದಾವನೇಕಧೋಕ್ತಂ। -ಜನಾರ್ದನೀಯ

ನಾನು ಎಲ್ಲೆಡೆ ಅಂತರ್ಯಾಮಿಯಾಗಿ ವ್ಯಾಪಿಸಿದ್ದೇನೆ. ನಾಶರಹಿತ, ಅನಂತರೂಪ, ಸ್ವಗತಭೇದ ವರ್ಜಿತ, ಅನಂತಶೀರ್ಷ, ಅನಂತನೇತ್ರ, ಅನಂತಪಾದ ಹಸ್ತ ಊರುಗಳುಳ್ಳವ ಅನಂತಗುಣಮಹಿಮೆ ಉಳ್ಳವ. ಜ್ಞಾನಾನಂದ ಶರೀರಿ.

[1]ಹರಿವಂಶದಲ್ಲಿ, 'ಅರ್ಜುನ! ನೀನು ನೋಡಿದ ಏಳು ಪರ್ವತಗಳಾಗಲಿ ಕೆಸರಿನಂತೆ ಘನೀಭೂತವಾದ ತಮಸ್ಸಾಗಲಿ ನಾನೆ. ನಾನೇ ತಮಸ್ಸು, ನಾನೇ ಅದನ್ನು ಚಕ್ರದಿಂದ ಸೀಳಿದವನು' ಎಂದು ಮುಂತಾಗಿ ಹೇಳಿದೆ. ಅದರ ಅಭಿಪ್ರಾಯ 'ನಾನೇ ಪರ್ವತ ತಮಸ್ಸು ಮುಂತಾದವುಗಳಲ್ಲಿ ಅಂತರ್ಯಾಮಿಯಾಗಿ ವ್ಯಾಪಿಸಿದ್ದೇನೆ, ಜ್ಞಾನಾನಂದ ಶರೀರಿಯೆ ಆಗಿದ್ದೇನೆ' ಎಂದು ನಿರ್ಣಯ ಹೇಳುತ್ತಿದೆ.

ಮದ್ವಶಾ ಏವ ಸರ್ವೇಽಪಿ ತ್ವಂ ಚಾನ್ಯೇ ಚ ಧನಂಜಯ ।
ಮತ್ಪ್ರಸಾದಾದ್ ಬಲಂ ಚೈವ ವಿಜಯಶ್ಚಾಖಿಲಾ ಗುಣಾಃ ॥೫೧॥

ನೀನೂ ಇತರರೂ ನನ್ನ ಅಧೀನದಲ್ಲಿಯೆ ಇರುವವರು. ನನ್ನ ಅನುಗ್ರಹದಿಂದಲೇ ಎಲ್ಲರಿಗೂ ಬಲ ಜಯ ಮತ್ತು ಎಲ್ಲ ಗುಣಗಳೂ ಲಭಿಸುವುವು.

ತಸ್ಮಾನ್ನ ವಿಸ್ಮಯಃ ಕಾರ್ಯೋ ನ ದರ್ಪಶ್ಚ ತ್ವಯಾನಘ ।
ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ॥೫೨॥
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ।
ಇತ್ಯುಕ್ತಃ ಪ್ರಣಿಪತ್ಯೈನಂ ಕ್ಷಮಸ್ವೇತ್ಯಾಹ ಫಲ್ಗುನಃ ॥೫೩॥

ಅದರಿಂದ ನೀನು ನಿನ್ನ ಪರಾಕ್ರಮಕ್ಕೆ ಬೆರಗಾಗುವುದಾಗಲಿ, ನಾನು ಹಿಂದೆ ಬಲಿಷ್ಠರಾದ ಶತ್ರುಗಳನ್ನು ಗೆದ್ದಿದ್ದೇನೆ ಮುಂದೆಯೂ ಗೆಲ್ಲುತ್ತೇನೆ ಎಂದು ಅಹಂಕಾರ ಪಡುವುದಾಗಲಿ ಮಾಡಬೇಡ. ನನ್ನ ಭಕ್ತನಾಗಿದ್ದು ನನ್ನಲ್ಲಿ ಮನಸ್ಸಿಟ್ಟು ನನ್ನನ್ನು ಆರಾಧಿಸು ನಮಿಸು. ಆಗ ನೀನು ನನ್ನನ್ನೆ ಹೊಂದುವಿ ನಿಜ ಹೇಳುತ್ತೇನೆ, ನೀನು ನನಗೆ ಪ್ರಿಯನಾಗಿರುವಿ' ಹೀಗೆ ಶ್ರೀಕೃಷ್ಣ ಹೇಳಿದಾಗ ಅರ್ಜುನ ಅವನನ್ನು ನಮಿಸಿ 'ಕ್ಷಮಿಸು' ಎಂದ.

ಇದೇ ಮಾತನ್ನು ಮುಂದೆ ಭಗವದ್ಗೀತೆಯಲ್ಲಿಯೂ ಶ್ರೀಕೃಷ್ಣ ಉಪದೇಶಿಸುತ್ತಾನೆ. (18.65)

ಉಷಿತ್ವಾ ಕತಿಚಿನ್ಮಾಸಾನ್ ಯಯುಃ ಸರ್ವೇಽಪಿ ಪಾಂಡವಾಃ ।
ಅನುಜ್ಞಾತಾಃ ಕೇಶವೇನ ಭಕ್ತಿನಮ್ರಧಿಯೋಽಚ್ಯುತೇ ।
ಸಂಭಾವಿತಾಃ ಕೇಶವೇನ ಸೌಹಾರ್ದೇನಾಧಿಕೇನ ಚ ॥೫೪॥

---

1. ಅಹಂ ತೇ ಪರ್ವತಾಃ ಸಪ್ತ ಯೇ ದೃಷ್ಟಾ ವಿವಿಧಾಸ್ತ್ವಯಾ।
ಪಂಕಭೂತಂ ಹಿ ತಿಮಿರಂ ದೃಷ್ಟವಾನಸಿ ಯದ್ಧಿ ತತ್।
ಅಹಂ ತಮೋ ಘನೀಭೂತಂ ಅಹಮೇವ ಚ ಪಾಟಕಃ। -ಹರಿವಂಶ (2.114.114)

ಶ್ರೀಕೃಷ್ಣನಲ್ಲಿ ಭಕ್ತಿಯಿಂದ ವಿನಮ್ರವಾದ ಬುದ್ಧಿಯುಳ್ಳ ಪಾಂಡವರು ಎಲ್ಲರೂ ಕೆಲವು ತಿಂಗಳ ಕಾಲ ದ್ವಾರಕೆಯಲ್ಲಿ ವಾಸಮಾಡಿ ಅವನಿಂದ ಬಹಳ ಪ್ರೀತಿಪೂರ್ವಕ ಆದೃತರಾಗಿ ಅವನ ಅನುಜ್ಞೆ ಪಡೆದು ಇಂದ್ರಪ್ರಸ್ಥಕ್ಕೆ ಹಿಂತಿರುಗಿದರು.

ಚತುರ್ದಶ ಲೋಕಗಳು

ತತಃ ಕದಾಚಿತ್ ಪ್ರವರೇ ಸಭಾತಲೇ
ಧರ್ಮಾತ್ಮಜೋ ರಾಜಭಿರ್ಭ್ರಾತೃಭಿಶ್ಚ ।
ವೃತೋ ನಿಶಮ್ಯೈವ ಸಭಾಃ ಸುರಾಣಾಂ
ಯಥಾ ಸ್ಥಿತಾ ನಾರದಮನ್ವಪೃಚ್ಛತ್ ॥೫೫॥

ಒಮ್ಮೆ ದೊಡ್ಡ ಸಭಾಂಗಣದಲ್ಲಿ ರಾಜರುಗಳಿಂದಲೂ ಸೋದರರಿಂದಲೂ ಪರಿವೃತನಾದ ಯುಧಿಷ್ಠಿರ ನಾರದರಿಂದ ದೇವಸಭೆಗಳ ಬಗ್ಗೆ ಯಥಾವತ್ತಾಗಿ ಕೇಳಿ ತಿಳಿದ ಬಳಿಕ ಪುನಃ ಪ್ರಶ್ನಿಸಿದ.

'ಮುನಿಯೆ, ತಾವು ಮಯನಿರ್ಮಿತವಾದ ನನ್ನ ಸಭೆಯನ್ನು ಕಂಡಿರಿ. ಬ್ರಹ್ಮಾಂಡದೊಳಗೆ ಇದಕ್ಕೆ ಸಮವಾದ ಉತ್ತಮವಾದ ಸಭೆಯನ್ನು ಇನ್ನೆಲ್ಲಿಯಾದರೂ ನೋಡಿದಿರೇನು? ಅವು ಯಾವುವು? ಅವುಗಳ ಸೌಂದರ್ಯವೇನು? ಯಾರು ನಿರ್ಮಾಪಕರು? ಎಲ್ಲವನ್ನೂ ಹೇಳಿ' ಎಂದು ಧರ್ಮರಾಜ ಕೇಳಿದಾಗ ತ್ರಿಲೋಕ ಸಂಚಾರಿಗಳಾದ ನಾರದರು ಎಲ್ಲ ಲೋಕಪಾಲಕರ ಸಭೆಗಳ ಬಗ್ಗೆ ಹೇಳಿದರು. ಬಳಿಕ ಧರ್ಮರಾಜ ಪುನಃ ಪ್ರಶ್ನಿಸುತ್ತಾನೆ.

ಅಂತರಿಕ್ಷಂ ತ್ವಯಾ ಪ್ರೋಕ್ತಂ ಲಕ್ಷಯೋಜನಮುಚ್ಛ್ರಿತಂ ।
ಅರ್ಧಕೋಟ್ಯುಚ್ಛ್ರಿತಃ ಸ್ವರ್ಗೋ ವಿಮಾನಾವಲಿಸಂಕುಲಃ ॥೫೬॥

'ಭೂಮಿಯಿಂದ ಅಂತರಿಕ್ಷಲೋಕ ಒಂದು ಲಕ್ಷ ಯೋಜನ ಎತ್ತರದಲ್ಲಿ ಇದೆ ಎಂದು ನೀವು ಹೇಳಿರುವಿರಿ. ವಿಮಾನ ಸಮೂಹಗಳಿಂದ ತುಂಬಿದ ಸ್ವರ್ಗಲೋಕ ಅರ್ಧಕೋಟಿ ಯೋಜನ ಎತ್ತರವೆಂದೂ ಹೇಳಿರುವಿರಿ.

ಭುವಃ ಸ್ವರ್ಗಶ್ಚ ಕೋಟ್ಯೈವ ಯೋಜನಾನಾಂ ಪ್ರವಿಸ್ತೃತೌ ।
ಮಹರ್ಜನಸ್ತಪಶ್ಚೈವ ಕ್ರಮಾದರ್ಧ್ಯರ್ಧಯೋಜನಾಃ ॥೫೭॥

ಭುವರ್ಲೋಕವೂ ಸ್ವರ್ಗಲೋಕವೂ ಒಂದು ಕೋಟಿ ಯೋಜನ ವಿಸ್ತಾರವಾಗಿವೆ. ಮಹ, ಜನ, ತಪ ಲೋಕಗಳು ಕ್ರಮವಾಗಿ ಒಂದಕ್ಕಿಂತ ಇನ್ನೊಂದು ಒಂದೂವರೆಪಟ್ಟು ಎತ್ತರವಾಗಿವೆ.

'ಅರ್ಧ್ಯರ್ಧ' ಎಂದರೆ ಒಂದೂವರೆ ಪಟ್ಟು ಹೆಚ್ಚು ಎತ್ತರ.
ಭೂರ್ಲೋಕದಿಂದ ಸ್ವರ್ಗಲೋಕ ಐವತ್ತು ಲಕ್ಷ ಯೋಜನ ಎತ್ತರ

ದಲ್ಲಿರುವುದರಿಂದ ಸ್ವರ್ಗಲೋಕದಿಂದ ಮಹಲೋ೯ಕ ಎಪ್ಪತ್ತೈದು ಲಕ್ಷ ಯೋಜನ ಎತ್ತರದಲ್ಲಿ ಇದೆ. ಮಹಲೋ೯ಕದಿಂದ ಜನಲೋಕ ಒಂದು ಕೋಟಿ ಹನ್ನೆರಡುವರೆ ಲಕ್ಷ ಯೋಜನ ಎತ್ತರದಲ್ಲಿದೆ. ಜನಲೋಕದಿಂದ ತಪೋಲೋಕ ಒಂದು ಕೋಟಿ ಆರವತ್ತೆಂಟು ಲಕ್ಷ ಎಪ್ಪತ್ತೈದು ಸಾವಿರ ಯೋಜನ ಎತ್ತರದಲ್ಲಿದೆ ಎಂದು ವಾದಿರಾಜೀಯ ಹೇಳಿದೆ.[1]

ತಾಮ್ರಪರ್ಣೀಯದಲ್ಲಿ 'ಅಧ್ಯರ್ಧ' ಎಂದರೆ ಒಂದಕ್ಕಿಂತ ಇನ್ನೊಂದು ಅರ್ಧಕೋಟಿ ಅಧಿಕವಿಸ್ತಾರ, ಸ್ವರ್ಗ ಒಂದು ಕೋಟಿ ಯೋಜನ ವಿಸ್ತಾರವಾಗಿರುವುದರಿಂದ ಮಹಲೋ೯ಕ ಒಂದೂವರೆ ಕೋಟಿ ಯೋಜನ, ಜನಲೋಕ ಎರಡು ಕೋಟಿ, ತಪೋಲೋಕ ಎರಡೂವರೆ ಕೋಟಿ ಎಂದು ವ್ಯಾಖ್ಯಾನಿಸಿದೆ.[2]

ಪಂಚಾಶತ್ಕೋಟಿವಿಸ್ತಾರೋ ಯೋಜನಾನಾಂ ಸಮಸ್ತಶಃ।
ಯಾವಂತ ಏತೇ ಮಿಲಿತಾಸ್ತತ್ಪ್ರಮಾಣ ಉದೀರಿತಃ ॥೫೮॥
ಸತ್ಯಾಖ್ಯೋ ಬ್ರಹ್ಮಲೋಕಸ್ತು ಯತ್ರ ಬ್ರಹ್ಮಾ ವಿರಾಜತೇ।
ತತಶ್ಚ ದ್ವಿಗುಣಃ ಪ್ರೋಕ್ತೋ ವಿಷ್ಣುಲೋಕಃ ಸನಾತನಃ ॥೫೯॥

ಮಹ ಜನ ತಪ ಈ ಮೂರು ಲೋಕಗಳು ಒಟ್ಟು ಐವತ್ತು ಕೋಟಿ ಯೋಜನ ವಿಸ್ತಾರವಾಗಿವೆ. ಸತ್ಯಲೋಕ ತಪೋಲೋಕದಿಂದ ಸ್ವರ್ಗ ಮಹ ಜನ ತಪ ಈ ಎಲ್ಲ ಲೋಕಗಳ ಒಟ್ಟು ಎತ್ತರದಷ್ಟು ಎತ್ತರವಾಗಿದೆ. ಅದು ಬ್ರಹ್ಮಲೋಕ. ಅಲ್ಲಿ ಬ್ರಹ್ಮ ವಿಶೇಷವಾಗಿ ವಿರಾಜಿಸುತ್ತಾನೆ. ಅದಕ್ಕಿಂತ ಇಮ್ಮಡಿ ಎತ್ತರದಲ್ಲಿ ಸನಾತನವಾದ ವಿಷ್ಣುಲೋಕ ವೈಕುಂಠವಿದೆ.

[3]ಸ್ವರ್ಗ ಮಹ ಜನ ತಪ ಲೋಕಗಳ ಒಟ್ಟು ಎತ್ತರ ನಾಲ್ಕು ಕೋಟಿ

---

1. ಅಧ್ಯರ್ಧಯೋಜನಾಃ ಅಧಿಕಮರ್ಧಂ ಯಸ್ಯ ಪೂರ್ವಪ್ರಮಾಣಸ್ಯ ತದಧ್ಯರ್ಧಂ। ತಾವದ್ಯೋಜನೈ ರುತ್ತರೋತ್ತರೋಚ್ಛ್ರಾಯವಂತಃ। ಸ್ವರ್ಗಲೋಕಾತ್ ಮಹಲೋ೯ಕಃ ಪಂಚೋತ್ತರ-ಸಪ್ತತಿಲಕ್ಷೋತ್ತುಂಗ ಇತ್ಯರ್ಥಃ। ಮಹಲೋ೯ಕಾದುಪರಿ ಜನಲೋಕಃ ಸಾರ್ಧದ್ವಾದಶಲಕ್ಷೋತ್ತರ ಕೋಟಿಯೋಜನೋತ್ತುಂಗಃ ಜನಲೋಕಾತ್ತಪೋಲೋಕೋಽಪಿ ಕೋಟಿಯೋಜನಾದುಪರಿ ಅಷ್ಟೋತ್ತರ ಷಷ್ಟಿಲಕ್ಷಾದುಪರಿ ಪಂಚಸಪ್ತತಿ ಸಹಸ್ರಯೋಜನೋತ್ತುಂಗಃ।

-ವಾದಿರಾಜೀಯ

2. ಮಹರಾದಯೋ ಲೋಕಾ ಅಧಿಕಾರ್ಧಕೋಟಿಯೋಜನಾ ಇತ್ಯರ್ಥಃ। ಮಹಲೋ೯ಕಃ ಸಪಂಚಾಶಲ್ಲಕ್ಷ ಕೋಟಿಯೋಜನಃ। ಜನೋಲೋಕಃ ಕೋಟಿದ್ವಯ ಯೋಜನಃ। ತಪೋಲೋಕಃ ಸಪಂಚಾಶಲ್ಲಕ್ಷ ಕೋಟಿದ್ವಯಯೋಜನ ಇತಿ ಭಾವಃ।

-ತಾಮ್ರಪರ್ಣೀಯ

3. ಮಿಲಿತ್ವೈಷಾಂ ತು ಲೋಕಾನಾಂ ಯತ್ ಕೋಟೀನಾಂ ಚತುಷ್ಟಯಂ।
ಲಕ್ಷಾಣಿ ಷಟ್ ಸಹಸ್ರಾಣಾಂ ಪಂಚವಿಂಶತಿರೇವ ಚ।
ಏತಾವತ್ಯಾ ಯೋಜನಾನಾಂ ಸಂಖ್ಯಯಾ ಪುನರುಚ್ಛ್ರಿತಃ।

ಆರು ಲಕ್ಷದ ಇಪ್ಪತ್ತೈದು ಸಾವಿರ ಯೋಜನವಾಗುತ್ತದೆ. ತಪೋಲೋಕದಿಂದ ಸತ್ಯಲೋಕ ಅಷ್ಟು ಎತ್ತರದಲ್ಲಿ ಇದೆ. ಅದರಿಂದ ಭೂಮಿಯಿಂದ ಸತ್ಯಲೋಕದ ಎತ್ತರ ಎಂಟು ಕೋಟಿ ಹನ್ನೆರಡುವರೆ ಲಕ್ಷ ಯೋಜನಗಳು. ಅದರ ಎರಡರಷ್ಟು ಅಂದರೆ ಹದಿನಾರು ಕೋಟಿ ಇಪ್ಪತ್ತೈದು ಲಕ್ಷ ಯೋಜನ ಎತ್ತರದಲ್ಲಿ ಭೂಮಿಯಿಂದ ಮೇಲೆ ವೈಕುಂಠಲೋಕವಿದೆ ಎಂದು ವಾದಿರಾಜರು ಭೂಗೋಳ ವರ್ಣನೆಯಲ್ಲಿ ಹೇಳಿದ್ದಾರೆ. ವರದರಾಜೀಯವೂ ಹಾಗೇ ಹೇಳಿದೆ.

[4]ಮಹ, ಜನ, ತಪ ಈ ಮೂರು ಲೋಕಗಳ ಒಟ್ಟು ವಿಸ್ತಾರ ಐವತ್ತು ಕೋಟಿ ಯೋಜನವೆಂದಿರುವುದರಿಂದ ಪ್ರತ್ಯೇಕಗಣನೆ ಮಾಡಿದರೆ ಸ್ವಲ್ಪ ಕಡಿಮೆ ಹದಿನಾರು ಕೋಟಿ ಎಪ್ಪತ್ತಮೂರು ಲಕ್ಷ ಯೋಜನಗಳಾಗುವುವು. ಸತ್ಯಲೋಕಕ್ಕೂ ಬೇರೆ ವಿಸ್ತಾರ ಹೇಳಿಲ್ಲದಿರುವುದರಿಂದ ಇದನ್ನೇ ಇಟ್ಟುಕೊಳ್ಳಬೇಕು ಎನ್ನುತ್ತದೆ ವಾದಿರಾಜೀಯ.

[5]ತಾಮ್ರಪರ್ಣೀಯದಲ್ಲಿ 'ಮಹರ್ಜನಸ್ತಪಶ್ಚೈವ ಕ್ರಮಾದರ್ಧ್ಯರ್ಧ ಯೋಜನಾಃ' ಎನ್ನುವ ಮಾತಿಗೆ ಮಹರ್ಜನಸ್ತಪೋ ಲೋಕವಿಸ್ತಾರಪರವಾಗಿ ವ್ಯಾಖ್ಯಾನವಿರುವುದರಿಂದ ಅದರಂತೆ ಮಹಲೋರ್ೀಕ ಒಂದೂವರೆ ಕೋಟಿ, ಜನಲೋಕ ಎರಡುಕೋಟಿ,

---

ಸ್ಯಾದ್ ಬ್ರಹ್ಮಣಃ ಸತ್ಯಲೋಕಃ ಸರ್ವಕಾಮ ಧುರಂಧುರಃ
ಕೋಟೀನಾಮಷ್ಟಕಾಲ್ಲಕ್ಷ ದ್ವಿಷಟ್ಕಾತ್ ತದುಪರ್ಯಪಿ।
ಪಂಚಾಶದ್ಭಿಃ ಸಹಸ್ರೈಶ್ಚಾಪ್ಯುಚ್ಛ್ರಿತಂ ತದ್ವಿಧೇಃ ಪದಂ।
ಸತ್ಯಲೋಕಪ್ರಮಾಣಾತ್ತು ದ್ವಿಗುಣೀಕೃತಮಾನವಾನ್
ವಿಷ್ಣೋರ್ಲೋರ್ೀಕಸ್ತು ವಿಜ್ಞೇಯೋ ಯಂ ವೈಕುಂಠಂ ವಿದುರ್ಬುಧಾಃ।
ಕೋಟೀನಾಂ ಷೋಡಶೈಃ ಪಂಚವಿಂಶಲ್ಲಕ್ಷಯುತೈಃ ಸ ಚ।
ಭೂಲೋಕಾದುಚ್ಛ್ರಿತೋ ಜ್ಞೇಯಃ। -ಭೂಗೋಲವರ್ಣನ

ತಪೋಲೋಕಾತ್ ಪಂಚವಿಂಶತಿ ಸಹಸ್ರಾಧಿಕ ಷಡ್‌ಲಕ್ಷ ಸಹಿತ ಚತುಃಕೋಟಿ ಯೋಜನೋಚ್ಚಃ ಸತ್ಯಾಖ್ಯೋ ಲೋಕ ಇತ್ಯರ್ಥಃ। ತತಃ ಸತ್ಯಲೋಕಾತ್ ದ್ವಿಗುಣಕೋಚ್ಛ್ರಿತದೇಶೇ ವಿಷ್ಣುಲೋಕೋ ವೈಕುಂಠಲೋಕಃ। -ವರದರಾಜೀಯ

4. ಸಮಸ್ತಶಃ ಲೋಕತ್ರಯ ಸಮೂಹಃ ಮಿಲಿತ್ವಾ ಸಂಖ್ಯಾಯಾಂ ಪಂಚಾಶತ್ ಕೋಟಿ ವಿಸ್ತಾರಃ। ಏವಂ ಚ ಪ್ರತ್ಯೇಕಂ ಗಣನಾಯಾಂ ಷೋಡಶ ಕೋಟಿಭ್ಯ ಉಪರಿ ಕಂಚಿದೂನ ತ್ರಿಸಪ್ತತಿ ಲಕ್ಷ ಯೋಜನ ಪ್ರಮಾಣೇನ ಏಕೈಕಸ್ಯ ವಿಸ್ತಾರೋ ಜ್ಞೇಯಃ। ವಿಸ್ತಾರಸ್ತು ಸತ್ಯ ಲೋಕಾದೇರಪಿ ಪೃಥಗನುಕ್ತೇಃ ಮಹರ್ಲೋಕಾದಿವದೇವ ಜ್ಞೇಯಃ। -ವಾದಿರಾಜೀಯ

5. ಸ್ವರ್ಗಲೋಕಃ ಕೋಟಿಯೋಜನಃ। ಮಹರಾದಯಃ ಷಟ್ ಕೋಟಿಯೋಜನಾಃ। ಸತ್ಯಲೋಕಃ ಷಟ್ ಕೋಟಿಯೋಜನಃ। ವೈಕುಂಠಲೋಕೋ ದ್ವಾದಶ ಕೋಟಿಯೋಜನಃ। -ತಾಮ್ರಪರ್ಣೀಯ

ತಪೋಲೋಕ ಎರಡೂವರೆ ಕೋಟಿ. ಒಟ್ಟು ಆರು ಕೋಟಿಯಾಗುತ್ತದೆ. ಮಹರಾದಿಗಳ ಒಟ್ಟು ವಿಸ್ತಾರದಷ್ಟು ಸತ್ಯಲೋಕದ ವಿಸ್ತಾರ ಅಂದರೆ ಆರುಕೋಟಿ ಯೋಜನಗಳು. ಅದಕ್ಕಿಂತ ಎರಡು ಪಟ್ಟು ಅಂದರೆ ಹನ್ನೆರಡು ಕೋಟಿ ವೈಕುಂಠದ ವಿಸ್ತಾರ.

ಉತ್ತರೋತ್ತರತಃ ಸರ್ವೇ ಸುಖೇ ಶತಗುಣೋತ್ತರಾಃ ।
ಅನಂತಜನಸಂಪೂರ್ಣಾ ಅಪಿ ತೇ ಹೀಚ್ಛಯಾ ಹರೇಃ ॥೬೦॥
ಅವಕಾಶವಂತೋ ದಿವ್ಯತ್ವಾತ್ ಪೂರ್ಯಂತೇ ನ ಕದಾಚನ ।
ಸರ್ವಕಾಮಸುಖೈಃ ಪೂರ್ಣಾ ದಿವ್ಯಸ್ತ್ರೀಪುರುಷೋಜ್ವಲಾಃ ॥೬೧॥

ಅಂತರಿಕ್ಷದಿಂದ ತೊಡಗಿ ಮೇಲೆ ಮೇಲೆ ಹೋದಂತೆ ಎಲ್ಲ ಲೋಕಗಳೂ ಸುಖದ ವಿಷಯದಲ್ಲಿ ಒಂದಕ್ಕಿಂತ ಒಂದು ನೂರು ಪಟ್ಟು ಶ್ರೇಷ್ಠ. ಅಸಂಖ್ಯ ಜನರಿಂದ ತುಂಬಿದ್ದರೂ ಹರೀಚ್ಛೆಯಿಂದ ದಿವ್ಯವಾಗಿರುವುದರಿಂದ ಸಾಕಷ್ಟು ಅವಕಾಶ ಉಳ್ಳವುಗಳಾಗಿವೆ. ಅವು ಎಂದೂ ಪೂರ್ತಿಯಾಗುವುದಿಲ್ಲ. ಅಭೀಷ್ಟವಾದ ಎಲ್ಲ ಸುಖಭೋಗಗಳಿಂದ ತುಂಬಿರುತ್ತವೆ. ದಿವ್ಯ ಸ್ತ್ರೀಪುರುಷರಿಂದ ಶೋಭಿಸುತ್ತವೆ.

ದಿವ್ಯರತ್ನಸಮಾಕೀರ್ಣಂ ತಥಾ ಪಾತಾಲಸಪ್ತಕಂ ।
ಅಧಸ್ತಾಚ್ಛೇಷದೇವೇನ ಬಲಿನಾ ಸಮಧಿಷ್ಠಿತಂ ॥೬೨॥

ದಿವ್ಯರತ್ನಗಳಿಂದ ತುಂಬಿದ ಏಳು ಪಾತಾಳಗಳೂ ಅಂತರಿಕ್ಷಾದಿ ಲೋಕಗಳಂತೆಯೇ. ಒಂದಕ್ಕಿಂತ ಒಂದು ನೂರುಪಟ್ಟು ಶ್ರೇಷ್ಠ. ಅವುಗಳನ್ನು ಕೆಳಗೆ ಬಲಿಷ್ಠನಾದ ಶೇಷದೇವ ಹೊತ್ತಿದ್ದಾನೆ.

ಅತಲ ವಿತಲ ಸುತಲ ತಲಾತಲ ಮಹಾತಲ ರಸಾತಲ ಪಾತಾಲ ಹೀಗೆ ಭೂಮಿಯಿಂದ ಕೆಳಗೆ ಏಳು ಲೋಕಗಳಿವೆ. ಅವೆಲ್ಲವುಗಳಿಗೂ ಪಾತಾಲ ಲೋಕಗಳು ಎಂದು ವ್ಯವಹಾರವಿದೆ. ಅತಲದಲ್ಲಿ ಬಲ ಎಂಬ ಅಸುರ. ವಿತಲದಲ್ಲಿ ಹಾಟಕೇಶ್ವರ ನಾಮಕನಾದ ಶಿವ, ಸುತಲದಲ್ಲಿ ಬಲಿ ಚಕ್ರವರ್ತಿ ವಾಮನರು, ತಲಾತಲದಲ್ಲಿ ಮಯಾಸುರ, ಮಹಾತಲದಲ್ಲಿ ಕ್ರೋಧ ವಶವೆಂಬ ಸರ್ಪಗಣ, ರಸಾತಳದಲ್ಲಿ ನಿವಾತಕವಚ ಕಾಲಕೇಯ ರಾಕ್ಷಸರು, ಪಾತಾಳದಲ್ಲಿ ವಾಸುಕಿ ಮೊದಲಾದ ಸರ್ಪಗಳು ವಾಸಮಾಡುತ್ತಾರೆ.

ಕಾಮಭೋಗಸಮಾಯುಕ್ತಾ ಬಹುವರ್ಷಸಹಸ್ರಿಣಃ ।
ಸಪ್ತದ್ವೀಪೇಷು ಪುರುಷಾ ನಾರ್ಯಶ್ಚೋಕ್ತಾಃಸುರೂಪಿಣಃ ॥೬೩॥

ಏಳು ಪಾತಾಳ ಲೋಕಗಳಲ್ಲಿಯೂ ಇರುವ ಸ್ತ್ರೀಪುರುಷರು ಸುರೂಪಿಗಳು. ಯಥೇಚ್ಛ ಸುಖಭೋಗ ಶಾಲಿಗಳು. ಮತ್ತು ಅನೇಕ ಸಾವಿರ ವರ್ಷಕಾಲ ಬಾಳುತ್ತಾರೆ.

ಜಂಬೂದ್ವೀಪದಲ್ಲಿ ಯುಗಾನುಸಾರವಾಗಿ ಆಯುಷ್ಯ ಸುಖಭೋಗ ಮುಂತಾದುವು ಹ್ರಾಸ ಹೊಂದುವುದರಿಂದ ಏಳು ದ್ವೀಪಗಳಲ್ಲಿ ಅನೇಕ ಸಾವಿರ ವರ್ಷ ಆಯುಷ್ಯ ಎನ್ನಲಾಗದು. ಅದರಿಂದ ಇಲ್ಲಿ 'ಸಪ್ತದ್ವೀಪ' ಗಳೆಂದು ಸಪ್ತಪಾತಾಳಗಳು ವಿವಕ್ಷಿತವಾಗಿವೆ.[1]

ಏಷಾಂ ಚ ಸರ್ವಲೋಕಾನಾಂ ಧಾತಾ ನಾರಾಯಣಃ ಪರಃ ।
ವಿಷ್ಣುಲೋಕಸ್ಥಿತೋ ಮುಕ್ತೈಃ ಸದಾ ಸರ್ವೈರುಪಾಸ್ಯತೇ ॥೬೪॥

ಈ ಎಲ್ಲ ಲೋಕಗಳಿಗೆ ಸರ್ವೋತ್ತಮನಾದ ಶ್ರೀಹರಿಯೇ ರಕ್ಷಕ ವಿಷ್ಣುಲೋಕಗಳಲ್ಲಿದ್ದು ಅವನು ಎಲ್ಲ ಮುಕ್ತರುಗಳಿಂದಲೂ ಆರಾಧಿಸಲ್ಪಡುತ್ತಾನೆ.

ಯಮಸಭೆಯಲ್ಲಿ ಪಾಂಡುರಾಜ

ಸೇವಕಾ ಬ್ರಹ್ಮಣಃ ಸರ್ವೇ ವೇದಾ ದೇವಾಶ್ಚ ಸರ್ವಶಃ ।
ಶಕ್ರಸ್ಯ ಮುನಯಃ ಸರ್ವೇ ಹರಿಶ್ಚಂದ್ರಶ್ಚ ಭೂಮಿಪಃ ॥೬೫॥

ಎಲ್ಲ ವೇದಾಭಿಮಾನಿಗಳೂ ಬ್ರಹ್ಮನಿಗೆ ಪರಿವಾರದವರು. ಎಲ್ಲ ದೇವತೆಗಳೂ ಮುನಿಗಳೂ ಹರಿಶ್ಚಂದ್ರನೂ ದೇವೇಂದ್ರನಿಗೆ ಪರಿವಾರದವರು.

ಅಖಿಲಾ ಅಪಿ ರಾಜಾನಃ ಪಾಂಡುಶ್ಚಾಸ್ಮತ್ಪಿತಾ ಮುನೇ ।
ಯಮಸ್ಯೈವಾನುಗಾಃ ಪ್ರೋಕ್ತಾ ರಾಜಭಿಸ್ತೈರ್ಯಮೇನ ಚ ॥೬೬॥
ಉಪಾಸ್ಯಮಾನೋ ಭಗವಾನ್ ರಾಮೋ ಯಮಸಭಾತಲೇ ॥೬೭॥

ಎಲ್ಲ ರಾಜರೂ ನಮ್ಮ ತಂದೆಯಾದ ಪಾಂಡುವೂ ಯಮನಿಗೇ ಪರಿವಾರವೆಂದು ಹೇಳಿದಿರಿ. ಮುನಿಯೆ, ಆ ರಾಜರೂ ಯಮನೂ ಯಮಸಭೆಯಲ್ಲಿ ಭಗವಾನ್ ಶ್ರೀರಾಮಚಂದ್ರನನ್ನು ಆರಾಧಿಸುವರೆಂದೂ ಹೇಳಿದಿರಿ.

ಉಕ್ತ ಇಂದ್ರೇಣ ಚೋಪಾಸ್ಯೋ ವಾಮನಾತ್ಮಾ ಜನಾರ್ದನಃ ।
ಪ್ರಾದುರ್ಭಾವಾಶ್ಚ ನಿಖಿಲಾ ಬ್ರಹ್ಮಣೋಪಾಸಿತಾಃ ಸದಾ ।
ವರುಣಸ್ಯಾನುಗಾ ನಾಗಾಸ್ತತ್ರ ಮತ್ಸ್ಯಕೃತಿರ್ಹರಿಃ ॥೬೮॥

ಇಂದ್ರ ವಾಮನರೂಪಿ ಹರಿಯನ್ನೂ ಬ್ರಹ್ಮ ಹರಿಯ ಎಲ್ಲ ಅವತಾರಗಳನ್ನೂ ಸದಾ ಆರಾಧಿಸುವರೆಂದೂ ಹೇಳಿದಿರಿ. ನಾಗರು ವರುಣನ ಪರಿವಾರದವರು. ಅಲ್ಲಿ ಮತ್ಸ್ಯರೂಪಿ ಹರಿ ಆರಾಧ್ಯನೆನಿಸಿದ್ದಾನೆ.

---

1. ಸಪ್ತದ್ವೀಪೇಷು ಅಧಃಸ್ಥ ಸಪ್ತಲೋಕೇಷು। ನ ತು ಜಂಬ್ವಾದಿ ದ್ವೀಪೇಷು। ಜಂಬುದ್ವೀಪೇ ಯುಗಾನುಸಾರೇಣ ಆಯುಭೋ೯ಗಾದ್ಯಲ್ಪತ್ವಾತ್। -ಜನಾರ್ದನೀಯ

ಗಂಧರ್ವಾ ಧನದಸ್ಯಾಪಿ ತತ್ರ ಕಲ್ಕೀ ಹರಿಃ ಪ್ರಭುಃ ।
ರುದ್ರಸ್ಯೋಗ್ರಾಣಿ ಭೂತಾನಿ ನೃಸಿಂಹಾತ್ಮಾ ಶಿವೇನ ಚ ॥೬೯॥
ಉಪಾಸ್ಯತೇ ಸದಾ ವಿಷ್ಣುರಿತ್ಯಾದ್ಯುಕ್ತಂ ತ್ವಯಾನಘ ।
ಸರ್ವರತ್ನಸ್ಥಲಾನ್ ದಿವ್ಯಾನ್ ದೇವಲೋಕಾನ್ ಪ್ರಭಾಪತಾ ॥೭೦॥

ಗಂಧರ್ವರು ಕುಬೇರನ ಪರಿವಾರ. ಅಲ್ಲಿ ಕಲ್ಕಿರೂಪನಾದ ಪ್ರಭು ಶ್ರೀಹರಿ ಉಪಾಸ್ಯನಾಗಿದ್ದಾನೆ. ಭಯಂಕರ ಭೂತಗಳು ರುದ್ರನ ಪರಿವಾರ. ನರಸಿಂಹ ರೂಪನಾದ ವಿಷ್ಣು ರುದ್ರನಿಂದ ಸದಾ ಉಪಾಸ್ಯನಾಗಿದ್ದಾನೆ ಎಂದು ಮುಂತಾಗಿ ದಿವ್ಯ ಸಕಲ ರತ್ನಸ್ಥಳಗಳುಳ್ಳ ದೇವಲೋಕಗಳನ್ನು ವರ್ಣಿಸುತ್ತ ಹೇಳಿದ್ದೀರಿ.

ತತ್ರ ಮೇ ಸಂಶಯೋ ಭೂಯಾನ್ ಹರಿಶ್ಚಂದ್ರಃ ಕಥಂ ನೃಪಃ ।
ಐಂದ್ರಂ ಸಭಾತಲಂ ಪ್ರಾಪ್ತಃ ಪಾಂಡುರ್ನಾಸ್ಮತ್ಪಿತಾ ಮುನೇ ॥೭೧॥

ಅದರಲ್ಲಿ ನನಗೆ ಒಂದು ದೊಡ್ಡ ಸಂಶಯ. ಮುನಿಯೆ, ರಾಜಾ ಹರಿಶ್ಚಂದ್ರನಿಗೆ ಇಂದ್ರನ ಸಭೆ ಲಭ್ಯವಾಗಿದೆ, ನಮ್ಮ ತಂದೆಯಾದ ಪಾಂಡುವಿಗೆ ಇಲ್ಲ, ಇದು ಹೇಗೆ?

ಇತ್ಯುಕ್ತೋ ನಾರದಃ ಪ್ರಾಹ ರಾಜಸೂಯಕೃತೋನ್ನತಿಂ ।
ಹರಿಶ್ಚಂದ್ರಸ್ಯ ತಾಂ ದೃಷ್ಟ್ವಾ ಪಿತಾ ಯಮ ಸಭಾತಲೇ ।
ಸ್ಥಿತಸ್ತ್ವಾಮವದತ್ ಪಾಂಡೂ ರಾಮದ್ವಯಸುದೈವತೇ ॥೭೨॥

ಧರ್ಮರಾಜ ಹೀಗೆ ಕೇಳಿದಾಗ ನಾರದರು ಹೇಳಿದರು 'ಧರ್ಮರಾಜ, ಹರಿಶ್ಚಂದ್ರನಿಗೆ ರಾಜಸೂಯಯಾಗದಿಂದ ಉನ್ನತಿ ಲಭಿಸಿದೆ. ಅದನ್ನು ನೋಡಿ ನಿಮ್ಮ ತಂದೆ, ಪರಶುರಾಮ ಶ್ರೀರಾಮ ಇಬ್ಬರಿಂದ ಶೋಭಿಸುವ ಯಮನ ಸಭೆಯಲ್ಲಿ ನಿನಗೆ ಈ ಮಾತನ್ನು ಹೇಳಿದ್ದಾನೆ.'[1]

ಕರೋತು ರಾಜಸೂಯಂ ಮೇ ಪುತ್ರೋ ಜ್ಯೇಷ್ಠೋಽನುಜಾರ್ಚಿತಃ ।
ಪಾಲಿತೋ ವಾಸುದೇವೇನ ಕಿಂ ತಸ್ಯಾಸಾಧ್ಯಮತ್ರ ಹಿ ॥೭೩॥

'ನನ್ನ ಜ್ಯೇಷ್ಠ ಪುತ್ರ ರಾಜಸೂಯಯಾಗ ಮಾಡಲಿ. ಅಜೇಯರಾದ ತಮ್ಮಂದಿರಿಂದ ಅವನು ಪೂಜಿತನಾಗಿದ್ದಾನೆ ಮತ್ತು ಶ್ರೀಕೃಷ್ಣನಿಂದ ರಕ್ಷಿತನೂ ಆಗಿದ್ದಾನೆ. ಅವನಿಗೆ ಇದರಲ್ಲಿ ಅಸಾಧ್ಯವೇನಿದೆ?'

ಏತಚ್ಛ್ರುತ್ವಾ ಧರ್ಮಸುತೋ ಭ್ರಾತೃಭಿಃ ಸಹಿತೋ ವಶೀ ।
ಅವಾಪ್ತಿಂ ರಾಜಸೂಯಸ್ಯ ಮಂತ್ರಯಾಮಾಸ ಧರ್ಮವಿತ್ ॥೭೪॥

ಇದನ್ನು ಕೇಳಿ ಜಿತೇಂದ್ರಿಯನಾದ ಧರ್ಮರಾಜ ಸೋದರರಿಂದೊಡಗೂಡಿ ರಾಜಸೂಯಯಾಗ ಮಾಡುವ ಬಗ್ಗೆ ಮಂತ್ರಾಲೋಚನೆ ಮಾಡಿದ.

---

1. 'ತಾಂ ದೃಷ್ಟ್ವಾ ಪಿತಾ ಯಮಸಭಾತಲೇ ಸ್ಥಿತಸ್ತ್ವಾಮವದತ್ ಪಾಂಡೂ ರಾಮದ್ವಯ ಸುದೈವತೇ। ಕರೋತು ರಾಜಸೂಯಮಿ'ತಿ ಕ್ವಚಿತ್ ಪಾಠಃಕ್ವಚಿತ್ 'ತಾಂ ದೃಷ್ಟ್ವಾ ಪಿತಾ ಮಾಂ ಪ್ರಾಹ ಪಾಂಡವ। ಕರೋತು ರಾಜಸೂಯಮಿ'ತಿ ಪಾಠಃ। -ತಾಮ್ರಪರ್ಣೀಯ

ರಾಜಸೂಯಕ್ಕೆ ಶ್ರೀಕೃಷ್ಣನ ಸಮ್ಮತಿ

ಸುಕಾರ್ಯಮೇತದಿತ್ಯಲಂ ನಿಶಮ್ಯ ಸೋದರೋದಿತಂ ।
ಅಯಾತಯತ್ ಸ್ವಸಾರಥಿಂ ಸ ಕೇಶವಾಯ ಭೂಪತಿಃ ॥೭೫॥

ಇದು ಬಹಳ ಒಳ್ಳೆಯ ಕಾರ್ಯ ಎಂದು ಸೋದರರು ಹೇಳಿದ್ದನ್ನು ಕೇಳಿ ರಾಜಾ ಯುಧಿಷ್ಠಿರ ಶ್ರೀಕೃಷ್ಣನ ಬಳಿಗೆ ತನ್ನ ಸಾರಥಿಯನ್ನು ಕಳಿಸಿದ.

ತದೈವ ಕೇಶವಸ್ಯ ಯಾಃ ಸ್ತ್ರಿಯಸ್ತದೀಯತಾತಕೈಃ ।
ಸಹೋದರೈಶ್ಚ ಯಾಪಿತಃ ಸ ದೂತ ಆಪ ಮಾಧವಂ ॥೭೬॥

ಅದೇ ಸಮಯದಲ್ಲಿ ಕೃಷ್ಣನ ಹದಿನಾರು ಸಾವಿರ ಪತ್ನಿಯರ ತಂದೆಗಳೂ ಸೋದರರೂ ಕೃಷ್ಣನಿಗೆ ಒಬ್ಬ ದೂತನನ್ನು ಕಳಿಸಿದ್ದರು. ಅವನೂ ಬಂದ.

[1]ಕೃಷ್ಣಪತ್ನಿಯರಲ್ಲಿ ಕೆಲವರು ಗಂಧರ್ವಾದಿ ಕುಲಗಳಲ್ಲಿ ಹುಟ್ಟಿದ್ದರಿಂದ ಯಾರು ರಾಜಕುಲದಲ್ಲಿ ಹುಟ್ಟಿದ್ದರೋ ಅವರ ತಂದೆಗಳೂ ಸೋದರರೂ ಕೃಷ್ಣನಿಗೆ ದೂತನನ್ನು ಕಳಿಸಿದರೆಂದಿಟ್ಟುಕೊಳ್ಳಬೇಕು ಎನ್ನುತ್ತದೆ ಜನಾರ್ದನೀಯ.

ಪ್ರಣಮ್ಯ ಕೇಶವಂ ವಚಃ ಸ ಆಹ ಮಾಗಧೇನ ತೇ ।
ವಿವಾಹಬಾಂಧವಾ ರಣೇ ವಿಜಿತ್ಯ ರೋಧಿತಾ ಗಿರೌ ॥೭೭॥

ದೂತ ಕೃಷ್ಣನನ್ನು ನಮಿಸಿ ಈ ಮಾತನ್ನು ನುಡಿದ. ನಿಮಗೆ ವಿವಾಹ ಸಂಬಂಧ ಬಂಧುಗಳಾಗಿರುವವರನ್ನು ಜರಾಸಂಧ ಯುದ್ಧದಲ್ಲಿ ಗೆದ್ದು ಬೆಟ್ಟದ ಕಣಿವೆಗಳಲ್ಲಿ ಬಂಧಿಸಿದ್ದಾನೆ.

[2]ವಿವಾಹ ಸಂಬಂಧ ಬಂಧುಗಳೆಂದರೆ ತಮ್ಮ ಕನ್ಯೆಯರನ್ನು ಕೊಟ್ಟು ವಿವಾಹ ಮಾಡಿರುವ ಮಾವಂದಿರು.

ನೃಪಾಯುತದ್ವಯೇನ ಸೋಽಷ್ಟವಿಂಶಕೈಃ ಶತೈರಪಿ ।
ಯಿಯಕ್ಷುರುಗ್ರರೂಪಿಣಂ ತ್ರಿಲೋಚನಂ ತ್ವಯಿ ಸ್ಥಿತೇ ॥೭೮॥

ಜರಾಸಂಧ ಉಗ್ರರೂಪಿಯಾದ ಮುಕ್ಕಣ್ಣನಿಗೆ ಆ ಇಪ್ಪತ್ತರೆಡು ಸಾವಿರದ ಎಂಟು ನೂರು ಮಂದಿ ರಾಜರುಗಳನ್ನು ಬಲಿಕೊಡಲು ಸಂಕಲ್ಪಿಸಿದ್ದಾನೆ. ಇಷ್ಟೆಲ್ಲ ನೀವು ಇಲ್ಲಿ ಇರಲಾಗಿ ನಡೆದಿದೆ.

---

1. ಕಾಶ್ಚಿದ್ ಗಂಧರ್ವಾದಿಷು ಜಾತಾಃ। ತತ್ ಪಿತೃವ್ಯಾವೃತ್ತ್ಯರ್ಥಂ ಯಾಃ ಸ್ತ್ರಿಯಃ ಇತ್ಯುಕ್ತಂ।
-ಜನಾರ್ದನೀಯ
2. ಸ್ವಪುತ್ರೀವಿವಾಹೇನ ಬಾಂಧವಾ ವಿವಾಹ ಬಾಂಧವಾಃ ಶ್ವಶುರಾ ಇತ್ಯರ್ಥಃ। -ವಾದಿರಾಜೀಯ

ಷಡಶೀತಿಃ ಸಮಾನೀತಾಃ ಶೇಷಾ ರಾಜಂಶ್ಚತುರ್ದಶ।
ಜರಾಸಂಧೇನ ರಾಜಾನಸ್ತತಃ ಕ್ರೂರಂ ಪ್ರವತ್ಸ್ಯತೇ॥

'ಎಂಬತ್ತಾರು ಮಂದಿ ರಾಜರನ್ನು ತಂದಿದ್ದಾನೆ. ಹದಿನಾಲ್ಕು ಇನ್ನೂ ಬಾಕಿ. ಬಳಿಕ ಕ್ರೂರನರಬಲಿಯನ್ನು ಕೊಡಲಿದ್ದಾನೆ, ಜರಾಸಂಧ' ಎನ್ನುತ್ತದೆ ಮಹಾಭಾರತ. ಈ ವಿರೋಧಪರಿಹಾರಕ್ಕೆ ಲಕ್ಷಾಲಂಕಾರ ಹೇಳುತ್ತದೆ. 'ಹೆಚ್ಚಿನವರು ಎಂಬತ್ತಾರು ರಾಜಕುಲದಲ್ಲಿ ಉತ್ಪನ್ನರಾದವರು. ಅವರನ್ನು ತಂದಿದ್ದಾನೆ. ಉಳಿದವರು ಹದಿನಾಲ್ಕು ಕುಲದವರು ಅವರ ಅಧೀನರಾದ ಬೇರೆ ರಾಜರು. ಅವರನ್ನೂ ತಂದು ಕುಲಾನ್ಯೇಕಶತಂ ನೃಪಾಃ। (ಸಭಾ. 15. 19) 'ನೂರು ಕುಲಗಳ ರಾಜರು' ಎಂದು ಹಿಂದೆ ಹೇಳಿದ ಎಲ್ಲ ರಾಜರನ್ನೂ ಒಟ್ಟಾಗಿ ಕ್ರೂರವಾದ ನರಬಲಿ ಕೊಡಲು ಜರಾಸಂಧ ಸಿದ್ಧನಾಗಿದ್ದಾನೆ ಎಂದರ್ಥ'.[1]

ವಿಮೋಚಯಸ್ವ ತಾನ್ ಪ್ರಭೋ ನಿಹತ್ಯ ಮಾಗಧೇಶ್ವರಂ।
ಅವೈದಿಕಂ ಮಖಂ ಚ ತಂ ವಿಲುಂಪ ಧರ್ಮಗುಪ್ತಯೇ ॥೭೯॥

ಪ್ರಭು, ನೀನು ಆ ಜರಾಸಂಧನನ್ನು ಕೊಂದು ರಾಜರನ್ನು ಬಂಧನದಿಂದ ಬಿಡಿಸು. ವೈದಿಕ ಧರ್ಮರಕ್ಷಣೆಗಾಗಿ ಅವೈದಿಕವಾದ ಆ ಯಜ್ಞವನ್ನು ನಿಲ್ಲಿಸು.

ಅಶ್ವಮೇಧದಂತೆ ಪುರುಷಮೇಧವೂ ಒಂದು ವೇದವಿಹಿತವಾದ ಯಾಗವೇ. ಆದರೆ ಅದರಲ್ಲಿ ಪುರುಷನನ್ನು ಬಲಿಕೊಡುವುದಿಲ್ಲ. ಉತ್ಸರ್ಜನ ಮಾಡುವುದಿದೆ. ಜರಾಸಂಧ ಬಲಿಕೊಡುತ್ತಿದ್ದಾನೆ. ಇದು ವೇದ ವಿರುದ್ಧ.

ಇತೀರಿತೇಽಥ ಸಾರಥಿಂ ನಿಶಾಮ್ಯ ಧರ್ಮಜಸ್ಯ ಚ।
ನಿಶಮ್ಯ ತದ್ವಚಸ್ತದಾ ಜಗಾಮ ಪಾಂಡವಾಲಯಂ ॥೮೦॥

ದೂತ ಹೀಗೆ ಹೇಳಿದಾಗ ಶ್ರೀಕೃಷ್ಣ ಧರ್ಮರಾಜನ ಸಾರಥಿಯನ್ನೂ ಕಂಡು ಅವನ ಮಾತನ್ನು ಕೇಳಿ ಪಾಂಡವರ ಅರಮನೆಗೆ ತೆರಳಿದ.

ಸ ಪಾಂಡವೈಃ ಸಮರ್ಚಿತೋ ಮಖಾಯ ಧರ್ಮಜೇನ ಚ।
ಪ್ರಪೃಷ್ಟ ಆಹ ಮಾಧವೋ ವಚೋ ಜಗತ್ಸುಖಾವಹಂ ॥೮೧॥

ಶ್ರೀಕೃಷ್ಣ ಪಾಂಡವರಿಂದ ಸತ್ಕೃತನಾದ. ಬಳಿಕ ಯಾಗದ ವಿಷಯದಲ್ಲಿ ಧರ್ಮರಾಜ ಸಲಹೆ ಕೇಳಿದಾಗ ಲೋಕಕ್ಕೆ ಸುಖದಾಯಕವಾಗುವ ಮಾತನ್ನು ನುಡಿದ.

---

1. ಷಡಶೀತಿಃ ಷಡಶೀತಿ ಕುಲೋತ್ಪನ್ನಾಃ। ಶೇಷಾ ಏತಚ್ಛೇಷಭೂತಾ ಅನ್ಯೇ ರಾಜಾನ ಶ್ಚೇತಿ ಕುಲಾನ್ಯೇಕಶತಂ ನೃಪಾ ಇತಿ ಪ್ರಾಗುಕ್ತನೃಪಾ ಇತ್ಯರ್ಥಃ। -ಲಕ್ಷಾಲಂಕಾರ.

ರಾಜಸೂಯದ ವೈಶಿಷ್ಟ್ಯ

ಕ್ರತುರ್ಯಥಾವಿಧಾನತಃ ಕೃತೋ ಹಿ ಪಾರಮೇಷ್ಠ್ಯಕಂ।
ಪದಂ ನಯೇತ ತತ್ಪದೇ ಸುಯೋಗ್ಯಮೇವ ನಾನ್ಯಥಾ ॥೮೨॥

ವಿಧ್ಯುಕ್ತವಾಗಿ ಈ ಯಾಗವನ್ನು ಮಾಡಿದರೆ ಮಾತ್ರ ಅದು ಬ್ರಹ್ಮಪದವಿಯನ್ನೂ ಕೊಡಬಲ್ಲದು. ಇಲ್ಲದಿದ್ದರೆ ಇಲ್ಲ. ಅದೂ ಆ ಪದವಿಗೆ ಯೋಗ್ಯನಾದವನಿಗೆ ಮಾತ್ರ, ಅಯೋಗ್ಯನಿಗೆ ಅಲ್ಲ.

ಋಜುಯೋಗಿಗಳು ಮಾತ್ರ ಬ್ರಹ್ಮಪದವಿಗೆ ಯೋಗ್ಯರು. ಅವರೂ ರಾಜಸೂಯಯಾಗವನ್ನು ವಿಧ್ಯುಕ್ತವಾಗಿ ಮಾಡಬೇಕು. ಆಗ ಅದು ಆ ಪದವಿಯನ್ನು ಕೊಡುವುದು. ಬೇರೆಯವರು ಯಾಗಮಾಡಿದರೂ ಆ ಪದವಿ ಸಿಗಲಾರದು.

ಅಯೋಗ್ಯಕಾನ್ ಮಹಾಪದೇ ವಿಧಾತುರೇಷ ಹಿ ಕ್ರತುಃ।
ಸಮಾನಯೋಗ್ಯತಾಗಣಾತ್ ಕರೋತಿ ಮುಕ್ತಿಗಂ ವರಂ ॥೮೩॥

ಬ್ರಹ್ಮನ ಆ ಮಹಾಪದವಿಗೆ ಅನರ್ಹನು ಮಾಡುವ ಈ ಯಾಗ ಅವನನ್ನು ಮುಕ್ತಿಯಲ್ಲಿ ತಮ್ಮ ಸಮಾನ ಯೋಗ್ಯತೆ ಉಳ್ಳ ಇತರರಿಗಿಂತ ಶ್ರೇಷ್ಠನನ್ನಾಗಿ ಮಾಡಬಲ್ಲದು.

ಬ್ರಹ್ಮಪದವಿಗೆ ಯೋಗ್ಯರಲ್ಲದವರು ಈ ಯಾಗವನ್ನು ಮಾಡಿದರೆ ಅದು ವ್ಯರ್ಥವಾಗುವುದಿಲ್ಲ. ಯಾಗಮಾಡಿದವನು ಮುಂದೆ ಮುಕ್ತಿಯಲ್ಲಿ ತಮ್ಮ ಸಮಾನ ಯೋಗ್ಯತೆ ಉಳ್ಳವರ ನಡುವೆ ಅಗ್ರಸ್ಥಾನ ಪಡೆದು ಮೆರೆಯುತ್ತಾನೆ. ಅಂದರೆ, ರಾಜಸೂಯಯಾಗ ಮಾಡಲು ಶಕ್ತಿ ಇಲ್ಲದ್ದರಿಂದ ಅದನ್ನು ಮಾಡದಿದ್ದರೂ ಜ್ಞಾನ ಭಕ್ತ್ಯಾದಿಗಳಲ್ಲಿ ಸಮಾನ ಯೋಗ್ಯತೆ ಉಳ್ಳವರು ಮುಕ್ತಿಗೆ ಜೊತೆಯಲ್ಲಿಯೆ ಬರುತ್ತಾರೆ. ಅವರು ಅಲ್ಲಿ ಯಾಗಮಾಡಿದವರಿಗೆ ಎದ್ದು ನಿಂತು ಗೌರವಿಸುವುದು ಮುಂತಾದುವನ್ನು ಮಾಡುತ್ತಾರೆ. ಇದೇ ಶ್ರೇಷ್ಠತೆ. ಸಮಾನವಾಗಿ ಷಡ್ರಸಾನ್ನ ಭೋಜನಕ್ಕೆ ಕುಳಿತವರ ಪಂಕ್ತಿಯಲ್ಲಿ ಒಬ್ಬ ವೃದ್ಧನನ್ನು ಮೊದಲಿಗೆ ಕೂಡಿಸುತ್ತಾರೆ ಹೇಗೋ ಹಾಗೆ. ಯೋಗ್ಯತಾ ಸಾಮ್ಯವಿರುವಾಗ ಆನಂದತಾರತಮ್ಯವಿರಲು ಶಕ್ಯವಿಲ್ಲ. -ವಾದಿರಾಜೀಯ[1]

---

1. ರಾಜಸೂಯಯಾಗಕರಣೇ ಶಕ್ತ್ಯಭಾವೇನ ತದಕರಣೇಽಪಿ ಸಮಾನಾ ಜ್ಞಾನಭಕ್ತ್ಯಾದೌ ಸದೃಶೀ ಯೋಗ್ಯತಾ ಯೇಷಾ ತೇ ತೇಷಾಂ ಆ ಸಮಂತಾತ್ ಸ್ಥಿತಾದ್ ಗಣಾತ್ ಪ್ರತಿಕಲ್ಪಂ ಮುಕ್ತಗಣಾತ್ ವರಂ ಶ್ರೇಷ್ಠಂ ಅಭ್ಯುತ್ಥಾನ ಪ್ರಿಯಸಂಭಾಷಣಾದಿನಾ ಸತ್ಕಾರಯೋಗ್ಯಂ ಕರೋತಿ। ಸಮಾನ ಷಡ್ರಸಾನ್ನ ಭೋಜಿನಾಂ ಪಂಕ್ತೌ ಯಥಾ ಕಂಚಿತ್ ವೃದ್ಧಮಗ್ರೇ ಸ್ಥಾಪಯಂತಿ ತಥೇತ್ಯರ್ಥಃ। ಯೋಗ್ಯತಾಸಾಮ್ಯೇ ಆನಂದ ತಾರತಮ್ಯಾಯೋಗಾತ್ ಉಕ್ತವಿಧಯೈವ ವರತ್ವಮೂಹ್ಯಂ। -ವಾದಿರಾಜೀಯ

ಯೋಗ್ಯತೆ ಸಮಾನವಿದ್ದರೆ ಶ್ರೇಷ್ಠತೆ ಬರಲಾರದು. ಶ್ರೇಷ್ಠತೆ ಬಂದಿದೆ ಎಂದರೆ ಸಮಾನತೆ ಸುಳ್ಳು ಎಂಬ ಪ್ರಶ್ನೆ ಬಂದರೆ ತಾಮ್ರಪರ್ಣೀಯಲ್ಲಿ ಹೀಗೆ ಸಮಾಧಾನ ನೀಡಿದೆ. ' ಅಪರೋಕ್ಷ ಜ್ಞಾನದಿಂದ ವ್ಯಕ್ತವಾಗುವ ಸ್ವರೂಪಾನಂದದಲ್ಲಿ ಸಮಾನತೆಯೆ ಇದೆ. ಅಪರೋಕ್ಷಾನಂತರ ಮಾಡುವ ರಾಜಸೂಯಾದಿ ಪ್ರಯತ್ನದಿಂದ ಆನಂದಾತಿಶಯ ಉಂಟಾಗುವ ಪ್ರಯುಕ್ತ ಶ್ರೇಷ್ಠತೆಯೂ ಬರುತ್ತದೆ. ಬೃಹದಾರಣ್ಯಕಭಾಷ್ಯ ಋಗ್ಭಾಷ್ಯ ಟೀಕೆಗಳಲ್ಲಿ ಹಾಗೇ ಹೇಳಿದೆ. ಆದರೂ ಮನುಷ್ಯರಿಗೆ ಋಷಿಗಳಿಗೆ ಮತ್ತು ರಾಜರಿಗೆ ತಮ್ಮ ಸಮಾನಿಕರಿಗಿಂತ ಶ್ರೇಷ್ಠತೆ ಬರಬಹುದು. ಅವರಿಗೆ ಆನಂದ ವೃದ್ಧಿಹ್ರಾಸಗಳಿವೆ. ದೇವತೆಗಳಿಗೆ ಹೇಗೆ? ಪ್ರಕೃತದಲ್ಲಿ ಪಾಂಡು ಪರಾವಹನೆಂಬ ಮರುದ್ದೇವತೆ, ಅವನಿಗೆ ಮೋಕ್ಷದಲ್ಲಿ ಆನಂದವೃದ್ಧಿ ಹ್ರಾಸಗಳು ಹೇಗೆ? ಎಂಬ ಪ್ರಶ್ನೆ ಬರಬಹುದು. ಅದಕ್ಕೆ ಸಮಾಧಾನ ಹೀಗೆ 'ಮರುತಶ್ಚ ಸಮಾಃ ಸರ್ವೇ ಸಪ್ತ ತೇಷು ಪ್ರಧಾನಕಾಃ' 'ನಲವತ್ತೊಂಬತ್ತು ಮಂದಿ ಮರುತ್ತುಗಳು ಯೋಗ್ಯತೆಯಲ್ಲಿ ಸಮಾನರಾದರೂ ಅವರಲ್ಲಿ ಏಳು ಮಂದಿ ಪ್ರಧಾನರು' ಎಂದಿರುವುದರಿಂದ ಇಂಥ ಪ್ರಾಧಾನ್ಯವನ್ನು ರಾಜಸೂಯಯಾಗತಂದು ಕೊಡಬಹುದು.[1]

ಪುರಾ ತು ಮುಕ್ತಿತೋಽಧಿಕಂ ಸ್ವಜಾತಿತಃ ಕರೋತಿ ಚ ।
ಅತಸ್ತ್ರಿಶಂಕುಪುತ್ರಕೋ ನೃಪಾನತೀತ್ಯ ವರ್ತತೇ ॥೮೪॥

ಮುಕ್ತಿಗಿಂತ ಮೊದಲು ಈ ಯಾಗ ಯಜಮಾನನನ್ನು ತನ್ನ ಸಮಾನ ಜಾತಿಯವರಿಗಿಂತ ಶ್ರೇಷ್ಠನನ್ನಾಗಿ ಮಾಡುತ್ತದೆ. ಅದರಿಂದಲೆ ಹರಿಶ್ಚಂದ್ರ ಎಲ್ಲ ರಾಜರಿಗಿಂತ ಮಿಗಿಲಾಗಿದ್ದಾನೆ.

ಬೇರೆ ಎಲ್ಲ ರಾಜರೂ ಯಮನ ಸಭೆಯಲ್ಲಿದ್ದಾರೆ. ಹರಿಶ್ಚಂದ್ರ ರಾಜಸೂಯಯಾಗಮಾಡಿದ್ದರಿಂದ ಯಮಸಭೆಗಿಂತಲೂ ಶ್ರೇಷ್ಠವಾದ ಇಂದ್ರಸಭೆಯಲ್ಲಿ ಕುಳಿತಿದ್ದಾನೆ.

---

1. ನನು ಸಾಮ್ಯೇ ಆಧಿಕ್ಯಾಯೋಗಃ ಸತಿ ಚಾಧಿಕ್ಯೇ ನ ಸಾಮ್ಯಂ। ತಥಾಚ ಕಥಂ ಸಮಾನ ಯೋಗ್ಯತಾ-ಗಣಾದಾಧಿಕ್ಯಮುಚ್ಯತೇ ಇತಿ ಚೇದುಚ್ಯತೇ। ಅಪರೋಕ್ಷ ಜ್ಞಾನವ್ಯಂಗ್ಯ ಪ್ರಚುರಾನಂ ದೇನ ಸಾಮ್ಯಂ। ತದುತ್ತರಭಾವಿ ರಾಜಸೂಯಾದಿ ಪ್ರಯತ್ನಾಧಿಕ್ಯೇನ ಆನಂದಾತಿಶಯ ಇತ್ಯುಭಯೋಪಪತ್ತೇಃ। ತದುಕ್ತಂ ಬೃಹದಾರಣ್ಯಕ ಭಾಷ್ಯೇ ಮನುಷ್ಯಾಣಾಂ ಯೋಗ್ಯತಯಾ ಸ್ವಸಮೇಭ್ಯ ಇತ್ಯತ್ರ ಪ್ರಯತ್ನಾಧಿಕ್ಯಾದಾಧಿಕ್ಯಂ ಮುಕ್ತೌ ಪ್ರಾಪ್ತುಂ ಶಕ್ಯತ ಇತ್ಯತಃ ಸಮೃದ್ಧ ಇತ್ಯುಕ್ತಮಿತಿ। ಋಗ್ಭಾಷ್ಯ ಟೀಕಾಯಾಂ ಚ... ಏತದ್ಘಟನಂ ಚಾನ್ಯತ್ರ ದ್ರಷ್ಟವ್ಯಮಿತ್ಯುಕ್ತಂ। ನನ್ವಸ್ತು ಮನುಷ್ಯಾಣಾಂ ಋಷೀಣಾಂ ರಾಜ್ಞಾಂ ಚ ಸಮಾನಾದಾಧಿಕ್ಯಂ। ತೇಷಾಂ ವೃದ್ಧಿಹ್ರಾಸ ಭಾಕ್ತ್ವಾತ್। ದೇವಾನಾಮೇತತ್ ಕಥಂಸ್ಯಾತ್? ಇತಿ ಚೆನ್ನ। ಮರುತಶ್ಚ ಸಮಾಃ ಸರ್ವೇ ಸಪ್ತ ತೇಷು ಪ್ರಧಾನಕಾ ಇತ್ಯುಕ್ತರೀತ್ಯಾ ಮರುತ್ತ್ವವಸುತ್ವಾದಿ ಸಮಾನಯೋಗ್ಯತಾಪನ್ನಗಣಾತ್ ಮುಕ್ತಿಗಂ ವರಂ ಕರೋತೀತ್ಯುಪಪತ್ತೇಃ। -ತಾಮ್ರಪರ್ಣೀಯ.

ಸುರಾಂಶಕೋಽಪಿ ತೇ ಪಿತಾ ವಿನಾ ಹಿ ರಾಜಸೂಯತಃ।
ನ ಶಕ್ನುಯಾತ್ ತ್ರಿಶಂಕುಜಾದ್ ವರತ್ವಮಾಪ್ತುಮದ್ಯ ತು ॥೮೫॥

ನಿನ್ನ ತಂದೆಯಾದ ಪಾಂಡು ದೇವಾಂಶ ಸಂಭೂತನಾದರೂ ರಾಜಸೂಯಯಾಗವಿಲ್ಲದೆ ಹರಿಶ್ಚಂದ್ರನಿಗಿಂತ ಹೆಚ್ಚಿನ ಸ್ಥಾನ ಪಡೆಯಲು ಶಕ್ತನಾಗುವುದಿಲ್ಲ.

ತಪಶ್ಚರನ್ ಸಮಾಗತೇ ಶಚೀಪತೌ ಪಿತಾ ತವ।
ಮರುದ್ಗಣೋತ್ತಮಃ ಪುರಾ ನ ತೂತ್ಥಿತಃ ಶಶಾಪ ಸಃ ॥೮೬॥

ಏಕೆಂದರೆ ನಿನ್ನ ತಂದೆ ಹಿಂದೆ ಮೂಲರೂಪದಲ್ಲಿ ಮರುತ್ತುಗಳಲ್ಲಿ ಉತ್ತಮನಾದ ಪರಾವಹ. ಅವನು ತಪಸ್ಸು ಮಾಡುತ್ತಿದ್ದಾಗ ದೇವೇಂದ್ರ ಬಂದರೂ ಎದ್ದು ನಿಲ್ಲಲಿಲ್ಲ. ಅದರಿಂದ ದೇವೇಂದ್ರ ಶಪಿಸಿದ.

ವ್ರಜಸ್ವ ಮಾನುಷೀಂ ತನುಂ ತತೋ ಮೃತಃ ಪುನರ್ದಿವಂ।
ಗತೋಽಪಿ ಚ ಸ್ವಕಾಂ ತನುಂ ಪ್ರವೇಷ್ಟುಮತ್ರ ನೇಶಸೇ।
ತದಾಧಿಕಸ್ತ್ರಿಶಂಕುಜೋ ಭವಿಷ್ಯತಿ ತ್ವದಿತ್ಯಥ ॥೮೭॥

'ಮನುಷ್ಯ ಜನ್ಮ ಹೊಂದು. ಬಳಿಕ ಸತ್ತು ಸ್ವರ್ಗಕ್ಕೆ ಹೋದರೂ ನಿನ್ನ ಮೂಲ ರೂಪವನ್ನು ಪ್ರವೇಶಿಸಲು ಶಕ್ತನಾಗಲಾರೆ. ಆಗ ನಿನಗಿಂತಲೂ ಹರಿಶ್ಚಂದ್ರ ಶ್ರೇಷ್ಠನೆನಿಸುತ್ತಾನೆ' ಎಂದು.

ಕ್ಷಮಾಪಿತಶ್ಚ ವಾಸವೋ ಜಗಾದ ರಾಜಸೂಯತಃ।
ತ್ರಿಶಂಕುಜಾಧಿಕೋ ಭವಾನವಾಪ್ಸ್ಯತಿ ಸ್ವಕಾಂ ತನುಂ ॥೮೮॥

ಪರಾವಹ ಕ್ಷಮೆ ಕೇಳಿದಾಗ ದೇವೇಂದ್ರ ನುಡಿದ, 'ರಾಜಸೂಯಯಾಗದಿಂದ ನೀನು ಹರಿಶ್ಚಂದ್ರನಿಗಿಂತ ಮಿಗಿಲೆನಿಸುವೆ ಮತ್ತು ನಿನ್ನ ಮೂಲರೂಪವನ್ನು ಹೊಂದುವಿ'.

ನಾವು ದೇವಪೂಜೆ ಮುಂತಾದ ಕಾರ್ಯದಲ್ಲಿ ನಿರತರಾಗಿದ್ದರೂ ಗುರುಹಿರಿಯರು ಬಂದಾಗ ಅವರನ್ನು ಇದಿರುಗೊಂಡು ಸತ್ಕರಿಸಿ ಅವರ ಅನುಜ್ಞೆ ಪಡೆದೇ ಕಾರ್ಯವನ್ನು ಮುಂದುವರಿಸಬೇಕೆಂದು ವಿಧಿ ಇದೆ. ಇದನ್ನು ಉಲ್ಲಂಘಿಸಿದರೆ ಬಹಳ ದೋಷವಿದೆ ಎನ್ನಲು ಪರಾವಹ ಮರುತ ಉದಾಹರಣೆ.

ಅತಃ ಸುಕಾರ್ಯ ಏವ ತೇ ಯುಧಿಷ್ಠಿರ ಕ್ರತೂತ್ತಮಃ।
ಭವದ್ಭಿರಪ್ಯವಾಪ್ಯತೇ ಸ್ವಯೋಗ್ಯತಾಮುನಾಖಿಲಾ ॥೮೯॥

ಅದರಿಂದ ಧರ್ಮರಾಜ, ಈ ಶ್ರೇಷ್ಠವಾದ ರಾಜಸೂಯಯಾಗ ನಿನಗೆ ಉತ್ತಮ ಕಾರ್ಯವೆನಿಸುತ್ತದೆ. ನೀವೂ ಕೂಡ ಈ ಯಾಗದಿಂದ ನಿಮ್ಮ ಯೋಗ್ಯತಾನುಗುಣ ಫಲವನ್ನು ಪೂರ್ಣವಾಗಿ ಹೊಂದುವಿರಿ.

ಉದೀರ್ಯ ಚೈವಮೀಶ್ವರಃ ಕ್ರತೋರಮುಷ್ಯ ಯೋಗ್ಯತಾ ।
ವೃಕೋದರೇ ಯತೋಽಖಿಲಾ ಚತುರ್ಮುಖತ್ವಯೋಗ್ಯತಾ ॥೯೦॥
ತತಃ ಸುಪೂರ್ಣಮಸ್ಯ ತತ್ ಫಲಂ ವಿಧಾತುಮಂಜಸಾ ।
ಜಗಾದ ವಾಯುವಾಹನೋ ವಚೋ ಯುಧಿಷ್ಠಿರಂ ತ್ವಿದಂ ॥೯೧॥

ರಾಜಸೂಯಯಾಗಕ್ಕೆ ಪೂರ್ಣ ಅರ್ಹತೆ ಇರುವುದು ಭೀಮಸೇನನಲ್ಲಿಯೆ. ಏಕೆಂದರೆ ಅವನಲ್ಲಿಯೆ ಬ್ರಹ್ಮಪದವಿಯ ಯೋಗ್ಯತೆ ಇದೆ. ಅದರಿಂದ ರಾಜಸೂಯದ ಪೂರ್ಣಫಲವಾದ ಬ್ರಹ್ಮಪದವಿಯನ್ನು ಭೀಮನಿಗೆ ಚೆನ್ನಾಗಿ ಕೊಡಿಸುವ ಉದ್ದೇಶದಿಂದ ವಾಯುವಾಹನನಾದ ಶ್ರೀಕೃಷ್ಣ ಧರ್ಮರಾಜನಿಗೆ ಈ ಮಾತನ್ನು ಹೇಳಿದ.

[1]ಶ್ರೀಕೃಷ್ಣನಿಗೆ ಭೀಮನಲ್ಲಿ ಹೆಚ್ಚು ಪ್ರೀತಿ ಎಂಬುದನ್ನು ತೋರುವುದಕ್ಕಾಗಿ 'ವಾಯುವಾಹನ' ಎಂದಿದೆ. 'ಪ್ರಾಜ್ಞೇನಾತ್ಮನಾ ಅನ್ವಾರೂಢ ಉತ್ಸರ್ಜದ್‌ಯಾತಿ' ಎಂಬ ಶ್ರುತಿ ಹೇಳುವಂತೆ ಜೀವರ ಮರಣ ಕಾಲದಲ್ಲಿ ಮುಖ್ಯಪ್ರಾಣ ಬಲಹೆಗಲಲ್ಲಿ ಹರಿಯನ್ನೂ ಎಡಹೆಗಲಲ್ಲಿ ಜೀವನನ್ನೂ ಹೊತ್ತು ದೇಹದಿಂದ ದೇಹಕ್ಕೆ ಹೋಗುತ್ತಾನೆ, ಆಗ ಹರಿಗೆ ವಾಯು ವಾಹನ ಎಂಬ ಅರ್ಥದಲ್ಲಿ 'ವಾಯುವಾಹನ' ಎಂಬ ಪುಣ್ಯನಾಮವಿದೆ. 'ವರದೋ ವಾಯುವಾಹನಃ' ಎಂದು ವಿಷ್ಣುಸಹಸ್ರ ನಾಮವೂ ಹೇಳುತ್ತದೆ ಎನ್ನುತ್ತದೆ ವಾದಿರಾಜೀಯ.

[2]ಕೃಷ್ಣಾವತಾರದಲ್ಲಿಯೂ ಶ್ರೀಹರಿ ಸದಾ ವಾಯುವಿನ ಹೆಗಲಮೇಲೆ ಏರಿಯೇ ಇರುತ್ತಿದ್ದ. ಯಮಕಭಾರತ ಹಾಗೇ ಹೇಳಿದೆ.
'ಸೋವನಿಮಧ್ಯೇ ರಂಗನ್ನರಿದರಯುಗ್ ಬಾಲರೂಪಮಧ್ಯೇರಂಗನ್'
ಎಂಬುದಕ್ಕೆ ಕೃಷ್ಣಲೀಲಾಪ್ರಕಾಶಿಕಾವ್ಯಾಖ್ಯಾನದಲ್ಲಿ 'ಕೃಷ್ಣ ಬಾಲರೂಪಿಯಾದ ವಾಯುವಿನ ಹೆಗಲನ್ನೇರಿ ಎಲ್ಲೆಡೆ ಸಂಚರಿಸಿದನೆ'ಂದು ಹೇಳಿದೆ.

---

1. ಭೀಮಸೇನೇ ಅಧಿಕಪ್ರೀತಿ ಸೂಚನಾಯ ವಾಯುವಾಹನ ಇತ್ಯುಕ್ತಂ। ಜೀವನಾಮುತ್ಕ್ರಮಣ ಸಮಯೇ ವಾಯುರ್ವಾಹನಂ ಯಸ್ಯೇತಿ ವಿಗ್ರಹಃ। ಪ್ರಾಜ್ಞೇನಾತ್ಮನಾನ್ವಾರೂಢ ಉತ್ಸರ್ಜದ್ಯಾತೀತಿ ಶ್ರುತೇಃ। ದಕ್ಷಿಣಸ್ಕಂಧೇ ಪರಮಾತ್ಮಾನಂ ವಾಮಸ್ಕಂಧೇ ಜೀವಂ ಚಾರೋಪ್ಯ ದೇಹಾದ್ ದೇಹಾಂತರಂ ಗಚ್ಛತೀತಿ ಪ್ರಸಿದ್ಧೇರ್ವಾಯುವಾಹನ ಇತಿ ಭಗವತಃ ಪುಣ್ಯನಾಮ। ವರದೋ ವಾಯುವಾಹನ ಇತಿ ಸಹಸ್ರ ನಾಮಸು ಪಾಠಾಚ್ಚ। -ವಾದಿರಾಜೀಯ

2. ಕೃಷ್ಣಾವತಾರೇ ಭಗವತಃ ಸರ್ವದಾ ವಾಯ್ವಾರೂಢತಯೈವಾವಸ್ಥಾನಾದಿತಿ ಭಾವಃ। ತದುಕ್ತಂ ಯಮಕ ಭಾರತೇ 'ಸೋಽವನಿ ಮಧ್ಯೇ ರಂಗನ್ನರಿದರಯುಗ್ ಬಾಲರೂಪಮಧ್ಯೇರಂ ಗನ್' ಇತಿ। ವ್ಯಾಖ್ಯಾತಂ ಚ ಕೃಷ್ಣ ಲೀಲಾ ಪ್ರಕಾಶಿಕಾಯಾಂ- 'ಸ ಚಾರಿದರಯುಗ್ ವಿಷ್ಣುರ್ಬಾಲರೂಪಂ ಸಮೀರಣಂ। ಅಧಿರುಹ್ಯ ಸಮಂತಾದ್ ಗನ್' ಇತಿ। ಸ್ಕಾಂದೇ ಚ 'ವೈಕುಂಠಾಧಿಪತೇರ್ವಾಯುಃ ಕ್ವಚಿದ್ ವಾಹನತಾಂ ವ್ರಜೇತ್। ಕದಾಚಿದಂಗತಾಂ ಯಾತಿ ಕದಾಚಿಚ್ಚಸ್ತತಾಂ ವ್ರಜೇತ್' ಇತಿ। -ತಾಮ್ರಪರ್ಣೀಯ

ಸ್ಕಂದ ಪುರಾಣದಲ್ಲಿಯೂ ವಾಯು ಶ್ರೀಹರಿಗೆ ಕೆಲವೊಮ್ಮೆ ವಾಹನನಾಗಿ, ಕೆಲವೊಮ್ಮೆ ಅಂಗವಾಗಿ, ಕೆಲವೊಮ್ಮೆ ಶಸ್ತ್ರವಾಗಿಯೂ ಸೇವೆ ಮಾಡುತ್ತಾನೆ ಎಂದಿದೆ ಎನ್ನುತ್ತದೆ ತಾಮ್ರಪರ್ಣೀಯ.

ಕ್ವ ರಾಜಸೂಯಮದ್ಯ ತೇ ಜರಾಸುತೇ ತು ಜೀವತಿ ।
ಜಯೇತ್ಕ ಏವ ತಂ ಯುಧಾ ಮೃತೋ ನ ಯೋಽಪಿ ಸೀರಿಣಾ ॥೯೨॥

ಜರಾಸಂಧ ಬದುಕಿರುವಷ್ಟು ಕಾಲ ನಿನಗೆ ಈ ರಾಜಸೂಯಯಾಗ ಎಲ್ಲಿ ಕೈಗೂಡೀತು? ಯಾರು ತಾನೆ ಅವನನ್ನು ಗೆಲ್ಲಬಲ್ಲ? ಬಲರಾಮನಿಂದಲೂ ಯುದ್ಧದಲ್ಲಿ ಅವನು ಹತನಾಗಲಿಲ್ಲ.

ವಿರಿಂಚಶರ್ವವಾಕ್ಯತಃ ಸಮಸ್ತ ಲೋಕಜಾಯಿನಿ ।
ಸ್ಥಿತೇ ತು ತೇ ಜರಾಸುತೇ ನ ಸೇತ್ಸ್ಯತಿ ಕ್ರತೂತ್ತಮಃ ॥೯೩॥

ಬ್ರಹ್ಮರುದ್ರರ ವರದಿಂದ ಸಮಸ್ತ ಲೋಕವನ್ನು ಗೆದ್ದಿರುವ ಈ ಜರಾಸಂಧನಿರುವಷ್ಟು ಕಾಲ ನಿನಗೆ ಈ ಶ್ರೇಷ್ಠವಾದ ಯಾಗ ಕೈಗೂಡುವುದಿಲ್ಲ.

ಇತೀರಿತೇ ರಥಾಂಗಿನಾ ಜಗಾದ ಧರ್ಮನಂದನಃ ।
ನಿವರ್ತಿತಂ ಮನಃ ಕ್ರತೋರಲಂ ಮಮಾಮುನಾ ಪ್ರಭೋ ॥೯೪॥

ಶ್ರೀಕೃಷ್ಣ ಹೀಗೆ ಹೇಳಿದಾಗ ಧರ್ಮರಾಜ ಹೇಳಿದ, 'ಪ್ರಭು, ಈ ನಿನ್ನ ಮಾತಿನಿಂದ ಜರಾಸಂಧ ನಿಮಿತ್ತವಾಗಿ ನನ್ನ ಮನಸ್ಸು ಯಾಗದ ಆಲೋಚನೆಯನ್ನು ಬಿಟ್ಟಿದೆ. ನನಗೆ ಈ ಯಾಗವೂ ಬೇಡ, ಅದರ ಫಲವೂ ಬೇಡ.

ಈ ರೀತಿ ಶ್ರೀಕೃಷ್ಣ ಜರಾಸಂಧನ ಭಯವನ್ನೊಡ್ಡುತ್ತ ಧರ್ಮರಾಜನನ್ನು ಯಾಗಪ್ರಯತ್ನದಿಂದ ಹಿಮ್ಮೆಟ್ಟುವಂತೆ ಮಾಡಿ, ಆತನಿಗೆ ಯಾಗದಲ್ಲಿ ಪೂರ್ಣ ಅರ್ಹತೆ ಇಲ್ಲ ಎಂಬುದನ್ನು ತೋರಿಸಿ ಕೊಟ್ಟಿದ್ದಾನೆ. ಮುಂದೆ, ಜರಾಸಂಧನ ವಧೆಯಲ್ಲಿ ಭೀಮ ಉತ್ಸಾಹ ತೋರುವುದರಿಂದ ಅವನಲ್ಲಿ ಪೂರ್ಣ ಅರ್ಹತೆ ಉಂಟೆಂಬುದನ್ನೂ ತೋರಿಸಿ ಕೊಡುತ್ತಾನೆ.

ಬಭೂವಿರೇ ಚ ಭೂಭೃತೋ ನ ಚಾಧಿರಾಜ್ಯಮಾಪಿರೇ ।
ಯದಾ ಚ ಚಕ್ರವರ್ತಿನಸ್ತದೇದೃಶಾ ನ ಶತ್ರವಃ ॥೯೫॥

'ಏಕೆಂದರೆ ಹಿಂದೆಯೂ ಅನೇಕ ರಾಜರಿದ್ದರು. ಅವರು ರಾಜಸೂಯಯಾಗ ಮಾಡಿ ಚಕ್ರವರ್ತಿಗಳೆನಿಸಲಿಲ್ಲ. ಕೆಲವರು ಹರಿಶ್ಚಂದ್ರನಂತೆ ಚಕ್ರವರ್ತಿಗಳಾದರು. ಆ ಕಾಲದಲ್ಲಿ ಅವರಿಗೆ ಜರಾಸಂಧನಂಥ ಶತ್ರುಗಳಿರಲಿಲ್ಲ.'

ಭೀಮಸೇನನ ಉತ್ಸಾಹ

ಇತೀರಿತೇಽಮುನಾವದತ್ ಪ್ರಧಾನಮಾರುತಾತ್ಮಜಃ ।
ಪದಂ ಚತುರ್ಮುಖಸ್ಯ ವಾ ಸುಸಾಧ್ಯಮೇವ ಯತ್ನತಃ ॥೯೬॥

ಧರ್ಮರಾಜ ಹೀಗೆ ಹೇಳಿದಾಗ ಭೀಮಸೇಂದ, 'ಚತುರ್ಮುಖನ ಪದವಿಯನ್ನೂ ಕೂಡ ಪ್ರಯತ್ನದಿಂದ ಚೆನ್ನಾಗಿ ಸಂಪಾದಿಸಲು ಸಾಧ್ಯವೆ ಇದೆ.'

ನಿಜಾನುಭಾವವರ್ಜಿತಾ ಹರೇರನುಗ್ರಹೋಜ್ಝಿತಾಃ ।
ಮಹಾಪ್ರಯತ್ನವರ್ಜಿತಾ ಜನಾ ನ ಜಗ್ಮುರುನ್ನತಿಂ ॥೯೭॥

ತಮ್ಮಲ್ಲಿ ಸ್ವಾಭಾವಿಕ ಬಲವಿಲ್ಲ, ಹರಿಯ ಅನುಗ್ರಹವನ್ನು ಸಂಪಾದಿಸಲಿಲ್ಲ, ಮಹಾ ಪ್ರಯತ್ನವನ್ನು ಮಾಡುವುದಿಲ್ಲ ಎಂದರೆ ಇಂಥ ಜನರು ಎಂದೂ ಉನ್ನತಿಯನ್ನು ಪಡೆಯುವುದಿಲ್ಲ.

ಸ್ಥಿರೋಽನುಭಾವ ಏವ ಮೇ ಮಹಾನನುಗ್ರಹೋ ಹರೇಃ ।
ಪ್ರಯತ್ನಮೇಕಮಗ್ರತೋ ನಿಧಾಯ ಭೂತಿಮಾಪ್ನುಮಃ ॥೯೮॥

ನನ್ನಲ್ಲಿ ಸ್ಥಿರವಾದ ಬಲವಿದೆ. ಹರಿಯ ಪರಮಾನುಗ್ರಹವಿದೆ. ಪ್ರಯತ್ನ ಒಂದನ್ನು ಮುಂದಿಟ್ಟುಕೊಂಡು ಸಂಪತ್ತನ್ನು ಗಳಿಸೋಣ.

ಇತೀರಿತೇಽಮುನಾ ಹರಿಃ ಸಮುದ್ಯಮಾತ್ ಪ್ರಧಾನತಃ ।
ಸ್ಥಿತೇ ಹಿ ಯಜ್ಞಕಾರಣೇ ವೃಕೋದರೇ ಜಗಾದ ಹ ॥೯೯॥

ಹೀಗೆ ಭೀಮ ಹೇಳಿದಾಗ ಮಹಾಪ್ರಯತ್ನ ಮಾಡಿ ಯಜ್ಞಕ್ಕೆ ಮುಖ್ಯವಾಗಿ ಭೀಮನೆ ಕಾರಣನಾಗುವುದರಿಂದ ಶ್ರೀಕೃಷ್ಣನುಡಿದ.

ಮಹಾಭಾರತದಲ್ಲಿ ಈ ಭೀಮನ ಮಾತುಗಳನ್ನು ಅರ್ಜುನ ಹೇಳಿದಂತೆ ಕಾಣುತ್ತದೆ. 'ಜಯಸ್ಯ ಹೇತುಃ ಸಿದ್ಧಿರ್ಹಿ ಕರ್ಮ ದೈವಂ ಚ ಸಂಶ್ರಿತಂ' ಎಂದು ಮುಂತಾಗಿ ಅರ್ಜುನ ಯುಧಿಷ್ಠಿರನ ಮುಂದೆ ವೀರಾವೇಶದಿಂದ ನುಡಿಯುತ್ತಾನೆ. ಇದು ಪುರುಷ ವ್ಯತ್ಯಾಸವೆನ್ನಬಹುದು. ಅಥವಾ ಅರ್ಜುನನಲ್ಲಿ ಆವಿಷ್ಟನಾದ ವಾಯುವೆ ನುಡಿದುದೆನ್ನಬಹುದು.

ಸ ಏಕ ಏವ ಪೂರುಷೋ ಜರಾಸುತೋಽದ್ಯ ವರ್ತತೇ ।
ಸಮಸ್ತ ಸದ್ವಿರೋಧಿನಾಂ ಬಲಂ ಕಲೇರನಂತರಃ ॥೧೦೦॥

ಈಗ ಕಲಿಯ ಅನಂತರದಲ್ಲಿ ಸಮಸ್ತ ಸಜ್ಜನ ವಿರೋಧಿಗಳಿಗೆ ಬಲದಾಯಕನಾಗಿರುವವನು ಆ ಜರಾಸಂಧನೊಬ್ಬನೆ ಇದ್ದಾನೆ.

ತಥಾ ಸತಾಂ ಸಮಾಶ್ರಯೋ ಯದುದ್ಭವಾಃ ಸತಾಂ ಗುಣಾಃ ।
ಸ ಏಕ ಏವ ತಾದೃಶಸ್ತ್ವಯಾ ವಿಚಿಂತ್ಯ ಯಾತ್ಯತಾಂ ॥೧೦೧॥

ಅದೇ ರೀತಿಯಲ್ಲಿ ಸಜ್ಜನರ ಸದ್ಗುಣಗಳ ಅಭಿವ್ಯಕ್ತಿಗೆ ಕಾರಣನಾಗಿ ಅವರಿಗೆ ಆಸರೆಯಾಗಿ ನಿಲ್ಲಬಲ್ಲ ಒಬ್ಬ ವ್ಯಕ್ತಿ ಬೇಕು. ಅಂಥವನನ್ನು ಆಲೋಚಿಸಿ ಕಳಿಸು.

ಯದಿ ಸ್ಮ ತೇನ ಮಾಗಧೋ ನಿಹನ್ಯತೇ ಸತಾಂ ಜಯಃ ।
ವಿಪರ್ಯಯೇಣ ಚಾಸತಾಮಿತಿ ಸ್ಮ ವಿದ್ಧಿ ನಾನ್ಯಥಾ ॥೧೦೨॥

ಅವನಿಂದ ಜರಾಸಂಧ ಹತನಾದರೆ ಸಜ್ಜನರಿಗೆ ಜಯ. ಇಲ್ಲದಿದ್ದರೆ ದುರ್ಜನರಿಗೆ ಜಯ. ಇದು ಅನ್ಯಥಾ ಆಗದೆಂದು ತಿಳಿ.

ಸ ಪಾರಮೇಷ್ಠ್ಯಸತ್ಪದಂ ಪ್ರಯಾತ್ಯಸಂಶಯಂ ಯುಧಿ ।
ಯ ಏವ ಹಂತಿ ಮಾಗಧಂ ಸ ವೇದ ಧರ್ಮಪಾಲಕಃ ॥೧೦೩॥
ನಿಹಂತಿ ಮಾಗಧೇಶ್ವರಂ ಸ ಏವ ವೈಷ್ಣವಂ ಜಗತ್ ।
ಕರೋತಿ ಶರ್ವಪಾಲಿತೋ ಯತಃ ಸ ಬಾರುಹದ್ರಥಃ ॥೧೦೪॥

ಯಾರು ಯುದ್ಧದಲ್ಲಿ ಜರಾಸಂಧನನ್ನು ಕೊಲ್ಲುವನೋ ಅವನು ಉತ್ತಮವಾದ ಬ್ರಹ್ಮಪದವಿಯನ್ನು ಗಳಿಸುತ್ತಾನೆ. ಸಂಶಯವಿಲ್ಲ. ಯಾರು ಜರಾಸಂಧನನ್ನು ಕೊಂದು ಜಗತ್ತನ್ನು ವಿಷ್ಣುಭಕ್ತಿಭರಿತವನ್ನಾಗಿ ಮಾಡುತ್ತಾನೋ ಅವನೇ ವೇದ ಧರ್ಮಪಾಲಕ ನೆನಿಸುತ್ತಾನೆ. ಏಕೆಂದರೆ ಜರಾಸಂಧ ಶಿವಭಕ್ತ.

ನಿಹಂತಿ ಶೈವನಾಯಕಂ ಯ ಏವ ವೈಷ್ಣವಾಗ್ರಣೀಃ ।
ಇತಿ ಸ್ಮ ಭಾವಸಂಯುತೇ ವದತ್ಯಜೇಽ ಬಿಭೀನ್ನೃಪಃ ॥೧೦೫॥

ಯಾರು ಶೈವನಾಯಕನನ್ನು ಕೊಲ್ಲುವನೋ ಅವನೇ ವೈಷ್ಣವಾಗ್ರಣಿಯಾಗಿರುತ್ತಾನೆ. ಹೀಗೆ ಶ್ರೀಕೃಷ್ಣ ಅಭಿಪ್ರಾಯಗರ್ಭಿತವಾಗಿ ಹೇಳಲು ಧರ್ಮರಾಜ ಭೀತನಾದ.

ಶ್ರೀಕೃಷ್ಣನುಡಿದ ಮಾತು ಅಭಿಪ್ರಾಯಗರ್ಭಿತವಾಗಿದ್ದು ಭೀಮನನ್ನೆ ಗಮನದಲ್ಲಿಟ್ಟುಕೊಂಡು ಆಡಿದ ಮಾತಾಗಿತ್ತು. ಜರಾಸಂಧನ ವಧೆಗೆ ಭೀಮನನ್ನು ಕಳಿಸಬೇಕು ಎಂದು. ಅದನ್ನು ತಿಳಿದು ಧರ್ಮರಾಜ ಭಯಪಟ್ಟ.

ಯುಧಿಷ್ಠಿರೇ ಬ್ರುವತ್ಯಜಂ ಮಖೇನ ಮೇ ತ್ವಲಂ ತ್ವಿತಿ ।
ತಮಾಹ ಮಾರುತಾತ್ಮಜೋ ನಿಹನ್ಮಿ ಮಾಗಧಂ ರಣೇ ॥೧೦೬॥

ನನಗೆ ಈ ಯಾಗವೆ ಬೇಡ ಎಂದು ಧರ್ಮರಾಜ ಭಯದಿಂದ ಶ್ರೀಕೃಷ್ಣನಿಗೆ ಹೇಳಿದಾಗ 'ಜರಾಸಂಧನನ್ನು ನಾನು ಕೊಲ್ಲುತ್ತೇನೆ' ಎಂದ ಭೀಮ.

ಇತೀರಿತೇಽವದದ್ಧರಿರ್ವ್ಯಜಾಮಹೇ ವಯಂ ತ್ರಯಃ ।
ಅಹಂ ಚ ಭೀಮಫಲ್ಗುನೌ ನಿಹಂತುಮೇವ ಮಾಗಧಂ ।
ವೃಕೋದರೇಣ ಹನ್ಯತೇ ಯದಿ ಸ್ಮ ಮಾಗಧಾಧಿಪಃ ॥೧೦೭॥

ಮಖಶ್ಚ ಸೇತ್ಸ್ಯತೇ ಧ್ರುವಂ ಜಗಚ್ಚ ತೇ ವಶೇ ಭವೇತ್ ॥೧೦೮॥

ಭೀಮ ಹೀಗೆ ಹೇಳಿದಾಗ ಶ್ರೀಕೃಷ್ಣನೆಂದ 'ನಾನು ಮತ್ತು ಭೀಮಾರ್ಜುನರು, ಹೀಗೆ ನಾವು ಮೂವರು ಕೂಡಿ ಜರಾಸಂಧನನ್ನು ಕೊಲ್ಲಲು ಹೋಗುತ್ತೇವೆ. ಭೀಮ ಜರಾಸಂಧನನ್ನು ಕೊಂದರೆ ನಿನ್ನ ಯಾಗ ನಿಶ್ಚಯವಾಗಿ ಕೈಗೂಡುವುದು. ಜಗತ್ತೂ ನಿನ್ನ ವಶಕ್ಕೆ ಬರುವುದು'.

ಇತೀರಿತೇ ತು ಶೌರಿಣಾ ಜಗಾದ ಧರ್ಮನಂದನಃ ।
ಸ ಶೂರಸೇನಮಂಡಲಪ್ರಹಾಣತೋ ಹರೇಸ್ತ್ರಸನ್ ॥೧೦೯॥

ಶ್ರೀಕೃಷ್ಣ ಸ್ವಯಂ ಜರಾಸಂಧ ನಿಮಿತ್ತವಾಗಿ ಮಥುರೆಯನ್ನು ಬಿಟ್ಟು ಹೋದುದರಿಂದ ಭೀತನಾದ ಧರ್ಮರಾಜ ಶ್ರೀಕೃಷ್ಣನ ಮಾತನ್ನು ಕೇಳಿ ನುಡಿದ.

ಭಯಾದ್ಧಿ ಯಸ್ಯ ಮಾಧುರಂ ವಿಹಾಯ ಮಂಡಲಂ ಗತಾಃ ।
ಭವಂತ ಏವ ಸಾಗರಂ ತತೋ ಬಿಭೇಮ್ಯಹಂ ರಿಪೋಃ । ॥೧೧೦॥

'ಜರಾಸಂಧನ ಭಯದಿಂದ ನೀವೆ ಮಥುರೆಯನ್ನು ಬಿಟ್ಟು ಸಮುದ್ರ ಮಧ್ಯಕ್ಕೆ ಹೋಗಿರುವಿರಿ. ಅದರಿಂದ ಅವನಿಗೆ ನಾನು ಹೆದರುತ್ತೇನೆ.

ಇಮೌ ಹಿ ಭೀಮಫಲ್ಗುನೌ ಮಮಾಕ್ಷಿಣೇ ಸದಾ ಪ್ರಭೋ ।
ಮನೋನಿಭೋ ಭವಾನ್ಸದಾ ನ ವೋ ವಿನಾಸ್ಮ್ಯಹಂ ಪುಮಾನ್ ॥೧೧೧॥

ಪ್ರಭು, ಈ ಭೀಮಾರ್ಜುನರು ನನಗೆ ಸದಾ ಎರಡು ಕಣ್ಣುಗಳು. ನೀನು ನನಗೆ ಮನಸ್ಸು ಅಥವಾ ಜೀವ. ನೀವಿಲ್ಲದಿದ್ದರೆ ನಾನು ಪುರುಷನಾಗಲಾರೆ.

ಅತೋ ನ ಜೀವಿತಾತ್ ಪ್ರಿಯಾನಹಂ ರಿಪೋರ್ಬಲೀಯಸಃ ।
ಸಕಾಶಮಾತ್ಮ ಹೇತುತಃ ಪ್ರಯಾತಯಾಮಿ ವಃ ಪ್ರಭೋ ॥೧೧೨॥

ಅದರಿಂದ ನನಗೆ ಪ್ರಾಣಕ್ಕಿಂತ ಹೆಚ್ಚು ಪ್ರಿಯರಾಗಿರುವ ನಿಮ್ಮನ್ನು ನನ್ನ ಸ್ವಾರ್ಥಕ್ಕಾಗಿ ಬಲಿಷ್ಠನಾದ ಶತ್ರುವಿನ ಬಳಿಗೆ ಕಳಿಸಲಾರೆ.

ಇತೀರಿತೇಽವದತ್ ಪುನರ್ಯಕೋದರೋಽರಿಕಕ್ಷಭುಕ್ ।
ಯದೀಯನೇತೃಕಾ ರಮಾವಿರಿಂಚಶರ್ವಪೂರ್ವಕಾಃ ॥೧೧೩॥
ವಶೇ ಚ ಯಸ್ಯ ತದ್ ಬಲಂ ಸುರಾಸುರೋರಗಾದಿನಾಂ ।
ಸ ಏಷ ಕೇಶವಃ ಪ್ರಭುಃ ಕ್ವ ಚಾಸ್ಯ ಬಾರುಹದ್ರಥಃ ॥೧೧೪॥

ಧರ್ಮರಾಜನಿಗೆ ಹೀಗೆ ಹೇಳಿದಾಗ ಶತ್ರುಗಳೆಂಬ ಕಾಡಿಗೆ ಕಾಡ್ಗಿಚ್ಚಿನಂತಿರುವ ಭೀಮ ಪುನಃ ಹೇಳಿದ, 'ರಮಾ ಬ್ರಹ್ಮ ರುದ್ರಾದಿಗಳು ಕೂಡ ಯಾರ ಸಂಕಲ್ಪದ ಪ್ರೇರಣೆಯಿಂದ ಜಗತ್ತನ್ನು ಆಳುವರೋ, ಸುರ ಅಸುರ ಉರಗಾದಿಗಳ ಬಲ ಯಾರ ವಶದಲ್ಲಿರುವುದೋ ಆ ವಿಷ್ಣುವೇ ಈ ಪ್ರಭು ಶ್ರೀಕೃಷ್ಣ. ಅವನ ಮುಂದೆ ಜರಾಸಂಧನೆಲ್ಲಿ?

ಅದರಿಂದ ಜರಾಸಂಧನಿಗೆ ಹೆದರಿ ಶ್ರೀಕೃಷ್ಣ ಮಥುರೆಯನ್ನು ತ್ಯಜಿಸಿದನೆನ್ನುವುದು ಅಸಂಗತ. ಅವನ ಸಂಕಲ್ಪಾನುಸಾರ ನಾವೆಲ್ಲ ಪ್ರವೃತ್ತಿ ಮಾಡುತ್ತೇವೆ. ಜರಾಸಂಧನನ್ನು ನಾವು ಕೊಲ್ಲಬೇಕೆಂಬುದು ಅವನ ಸಂಕಲ್ಪವಾಗಿದ್ದರಿಂದ ಅವನು ಕೊಲ್ಲದೆ ಬಿಟ್ಟಿದ್ದಾನೆ.

ಅಧೃಷ್ಯಮಸ್ತಿ ಮೇ ಬಲಂ ಹರಿಪ್ರಣಾಯಕಸ್ಯ ಚ ।
ಸಮಸ್ತ ಲೋಕನೇತರಿ ಪ್ರಭೌ ಹಿ ಸರ್ವಶಕ್ತಿತಾ ॥೧೧೫॥
ಅಜೇಯತಾ ತಥಾರ್ಜುನೇ ಹರೇರ್ವರೋದ್ಭವಾಸ್ತಿ ಹಿ ।
ಅತೋ ವಯಂ ತ್ರಯೋಽದ್ಯ ತಂ ಪ್ರಯಾಮ ಮಾಗಧಂ ರಿಪುಂ ೧೧೬॥

ಹರಿಯ ಪ್ರೇರಣೆಯಂತೆ ನಡೆಯುವ ನನ್ನಲ್ಲಿ ಶತ್ರುಗಳಿಗೆ ಇದಿರಿಸಲಾಗದಂಥ ಬಲವಿದೆ. ಸಕಲ ಲೋಕನಾಯಕನಾದ ಪ್ರಭು ಶ್ರೀಕೃಷ್ಣನಲ್ಲಿ ಸರ್ವಶಕ್ತಿ ಇದೆ. ಅರ್ಜುನನಲ್ಲಿ ಹರಿಯ ವರದಿಂದ ಬಂದ ಅಜೇಯತ್ವವಿದೆ. ಅದರಿಂದ ನಾವು ಮೂವರು ಈಗಲೇ ಶತ್ರುವಾದ ಜರಾಸಂಧನ ಬಳಿಗೆ ಹೋಗುವೆವು.

'ನಾನು ಭೂಮಿಯ ಮೇಲಿರುವಷ್ಟು ಕಾಲ ಅರ್ಜುನನಿಗೆ ಸೋಲೆಂಬುದೆ ಇಲ್ಲ' ಎಂದು ಶ್ರೀಕೃಷ್ಣ ಇಂದ್ರನಿಗೆ ಅನೇಕ ಬಾರಿ ವರ ನೀಡಿದ್ದ. ಆವರ ಬಲದಿಂದ ಅರ್ಜುನನಲ್ಲಿ ಅಜೇಯತ್ವವಿರುವುದರಿಂದ, ನೀನು ಅವನ ರಕ್ಷಣೆಯ ಬಗ್ಗೆ ಆತಂಕಗೊಳ್ಳಬೇಡ. ನನ್ನಲ್ಲಿ ಸ್ವಾಭಾವಿಕ ಬಲವೆ ಇದೆ. ಶ್ರೀಕೃಷ್ಣನಂತೂ ಸರ್ವಶಕ್ತ. ಹೀಗಾಗಿ ಮೂವರ ಬಗ್ಗೆಯೂ ಚಿಂತಿಸಬೇಡವೆಂದು ಭೀಮ ಧರ್ಮರಾಜನಿಗೆ ಹೇಳುತ್ತಿದ್ದಾನೆ.

'ಕೃಷ್ಣೇ ನಯೋ ಮಯಿ ಬಲಂ ಜಯಃ ಪಾರ್ಥೇ ಧನಂಜಯೇ' ಎಂಬ ಮಹಾಭಾರತದ ಭೀಮವಚನಕ್ಕೆ ಇದು ವಿವರಣೆ. ಏಕೆಂದರೆ ಬಲ ನನ್ನದು, ಅರ್ಜುನನಿಗೆ ಜಯ ಎನ್ನುವುದಕ್ಕೆ ವಿವರಣೆ ಬೇಕಾಗುತ್ತದೆ. ಮತ್ತು ಕೃಷ್ಣನಲ್ಲಿ 'ನಯ'ವಿದೆ ಎಂದರೆ ಕೇವಲ ರಾಜನೀತಿಯಲ್ಲ, ಸಕಲ ಲೋಕನಾಯಕತ್ವವಿದೆ. ಬಲಿಷ್ಠನಾದ ಭೀಮನಿಗೂ ನಯನ ಮಾಡುವ, ಪ್ರೇಕರನಾಗುವಂಥ ಸರ್ವಶಕ್ತತ್ವವಿದೆ ಎಂದರ್ಥ.

ಹನಿಷ್ಯ ಏವ ಮಾಗಧಂ ಹರೇಃ ಪುರೋ ನ ಸಂಶಯಃ ।
ಇತೀರಿತೇಽಮುನಾ ಹರಿರ್ಜಗಾದ ಧರ್ಮನಂದನಂ ॥೧೧೭॥

ನಾನು ಶ್ರೀಕೃಷ್ಣನ ಸಂಮುಖದಲ್ಲಿ ಜರಾಸಂಧನನ್ನು ಕೊಂದೇ ತೀರುತ್ತೇನೆ. ಇದಕ್ಕೆ ಸಂಶಯವಿಲ್ಲ. ಹೀಗೆ ಭೀಮ ಹೇಳಿದಾಗ ಶ್ರೀಕೃಷ್ಣ ಧರ್ಮರಾಜನಿಗೆ ನುಡಿದ.

ವಯಂ ತ್ರಯಃ ಸಮೇತ್ಯ ತಂ ಪ್ರಯಾತಯಾಮ ಮೃತ್ಯವೇ ।
ಹನಿಷ್ಯತಿ ಸ್ಫುಟಂ ರಣೇ ವೃಕೋದರೋ ಜರಾಸುತಂ ॥೧೧೮॥

ನಾವು ಮೂವರು ಕೂಡಿ ಜರಾಸಂಧನನ್ನು ಮೃತ್ಯುವಿಗೆ ಕಳಿಸಿಕೊಡುತ್ತೇವೆ. ನಿಶ್ಚಯವಾಗಿ ಭೀಮ ಜರಾಸಂಧನನ್ನು ಯುದ್ಧದಲ್ಲಿ ಕೊಲ್ಲುತ್ತಾನೆ.

ನಾವು ಮೂವರು ಕೂಡಿ ಜರಾಸಂಧನನ್ನು ಯುದ್ಧಕ್ಕೆ ಆಹ್ವಾನಿಸುವೆವು. ಆಗ ಅವನು 'ಅವಮಾನಾಚ್ಚ ಲೋಭಾಚ್ಚ ಬಾಹುವೀರ್ಯಾಚ್ಚದರ್ಪಿತಃ' ಎಂದು ಮಹಾಭಾರತದಲ್ಲಿ ಹೇಳಿದಂತೆ, ಬಾಹು ಬಲದರ್ಪಿತನಾದ್ದರಿಂದ ಅರ್ಜುನನನ್ನು ಯುದ್ಧಕ್ಕೆ ಕರೆಯಲು ಅವಮಾನಪಡುತ್ತಾನೆ. ನನ್ನನ್ನು ಕರೆಯಲು ಪ್ರಾಣಭಯದಿಂದ ಅಂಜುತ್ತಾನೆ, ಭೀಮನೊಡನೆ ಹೋರಾಡಿ ಒಂದು ವೇಳೆ ಗೆಲ್ಲಲೂ ಬಹುದೆಂದು ಜಯ ಲೋಭದಿಂದ ಭೀಮನನ್ನೆ ಕರೆಯುತ್ತಾನೆ ಎಂದು ಅಭಿಪ್ರಾಯ.

ಭಯಂ ನ ಕಾರ್ಯಮೇವ ತೇ ಮಯಾ ಹತಃ ಸ ನೇತಿ ಹ ।
ಮಯಾ ಹಿ ನೀತಿಹೇತುತಃ ಸ್ವಯಂ ನ ಹನ್ಯತೇ ರಿಪುಃ ॥೧೧೯॥

ನಾನು ಇಂದಿನವರೆಗೂ ಅವನನ್ನು ಕೊಲ್ಲಲಿಲ್ಲವೆಂದು ನೀನು ಭಯಪಡಬೇಕಾಗಿಲ್ಲ. ನೀತಿಯನ್ನು ತೋರುವ ಸಲುವಾಗಿ ನಾನು ಸ್ವಯಂ ಅವನನ್ನು ಕೊಲ್ಲುತ್ತಿಲ್ಲ ಅಷ್ಟೆ.

ನಾನು ಜರಾಸಂಧನನ್ನು ಹದಿನೆಂಟು ಬಾರಿಯೂ ಯುದ್ಧದಲ್ಲಿ ಕೊಲ್ಲದೆ ಕೊನೆಗೆ ಮಥುರೆಯನ್ನೆ ಬಿಟ್ಟು ದೂರದ ದ್ವಾರಕೆಗೆ ಹೋಗಿದ್ದರೆ ಅದು ನನ್ನ ಅಶಕ್ತಿಯಿಂದಲ್ಲ, ಜರಾಸಂಧನ ಭಯದಿಂದಲ್ಲ. ಕೇವಲ ರಾಜನೀತಿ. ಬಹಳ ಸೈನ್ಯ ಉಳ್ಳ ಬಲಿಷ್ಠನಾದ ಶತ್ರುವಿನ ವಿರೋಧ ಬಂದಾಗ ಅಲ್ಪ ಸೈನ್ಯ ಉಳ್ಳ ರಾಜನೀತಿ ಪಟುವಾದ ರಾಜನು ಹೀಗೇ ನಡೆದುಕೊಳ್ಳಬೇಕು. ಮೊದಲಿಗೆ ತನ್ನನ್ನು ತಾನು ಹೀಗೆ ರಕ್ಷಿಸಿಕೊಂಡು, ಇನ್ನೊಬ್ಬರ ಮೂಲಕ ತನ್ನ ಶತ್ರುವನ್ನು ನಾಶಪಡಿಸಬೇಕು.

ಸ ಶರ್ವಸಂಶ್ರಯಾಗ್ರಣೀರ್ಮದಾಶ್ರಯೋತ್ತಮೇನ ತು ।
ನಿಹನ್ಯತೇ ಯದಾ ತದಾ ಪ್ರಕಾಶಿತಂ ಹಿ ಮೇ ಬಲಂ ॥೧೨೦॥

ಶಿವನನ್ನು ಆಶ್ರಯಿಸಿರುವವರಲ್ಲಿ ಅಗ್ರಗಣ್ಯ ಜರಾಸಂಧ. ನನ್ನನ್ನು ಆಶ್ರಯಿಸಿದವರಲ್ಲಿ ಅಗ್ರಗಣ್ಯನಾಗಿರುವವನೊಬ್ಬ ಅವನನ್ನು ಕೊಂದಾಗಲೆ ನನ್ನ ಶಕ್ತಿ ಎಷ್ಟೆಂಬುದು ಬೆಳಕಿಗೆ ಬರುತ್ತದೆ.

'ನಾನು ಸ್ವಯಂ ಜರಾಸಂಧನನ್ನು ಕೊಲ್ಲುವುದಕ್ಕಿಂತ ನನ್ನ ಆಶ್ರಿತನೊಬ್ಬನಿಂದ ಕೊಲ್ಲಿಸಿದರೆ ನನ್ನ ಶಕ್ತಿ ಇನ್ನೂ ಹೆಚ್ಚಾಗಿ ಮೆರೆಯುತ್ತದೆ. ಸಜ್ಜನರಿಗೆ ಸಂತೋಷವಾಗುತ್ತದೆ. ಇದೂ ನನ್ನ ನೀತಿ.'

ಅತೋ ನ ಶಂಕಿತಂ ಮನಃ ಕುರುಷ್ವ ಭೂಪತೇ ಕ್ವಚಿತ್ ।
ಪ್ರದರ್ಶಯಾಮಿ ತೇಽನುಜೌ ನಿಹತ್ಯ ಮಾಗಧೇಶ್ವರಂ ॥೧೨೧॥

ಅದರಿಂದ, ಧರ್ಮರಾಜ ನೀನು ಯಾರ ವಿಷಯದಲ್ಲಿಯೂ ಸಂದೇಹ ಪಡಬೇಡ. ಜರಾಸಂಧನನ್ನು ಕೊಂದು ನಿನ್ನ ತಮ್ಮಂದಿರನ್ನು ನಾನು ನಿನ್ನ ಮುಂದೇ ತಂದು ತೋರುತ್ತೇನೆ.

ನನ್ನಲ್ಲಿ ನಿನಗೆ ನಂಬಿಕೆಯಿದ್ದರೆ ಭೀಮನ ಬಲವೆಷ್ಟೆಂಬುದರ ಅರಿವಿದ್ದರೆ ನಿನ್ನ ತಮ್ಮಂದಿರನ್ನು ನನ್ನಲ್ಲಿ ನ್ಯಾಸವಾಗಿ ಬಿಟ್ಟುಬಿಡು. ಅವರನ್ನು ಕ್ಷೇಮವಾಗಿ ಹಿಂತಿರುಗಿ ತಂದು ನಿನಗೇ ಒಪ್ಪಿಸುತ್ತೇನೆ, ಸಂದೇಹಬೇಡ. ನಮ್ಮಲ್ಲಿ ಯಾರ ವಿಷಯದಲ್ಲಿಯೂ 'ಗೆದ್ದು ಬರುವರೋ, ಇಲ್ಲ, ಮಡಿವರೋ' ಎಂದೂ ಎಂದಿಗೂ ಸಂಶಯಪಡಬೇಡ.

ಇತೀರಿತಃ ಸ ವಿಷ್ಣುನಾ ವಿಚಾರ್ಯ ತದ್ಗುಣಾನ್ ಪರಾನ್ ।
ತಥೇತಿ ಚಾಹ ತೇ ತ್ರಯಃ ಪ್ರತಸ್ಥುರಾಶು ಮಾಗಧಾನ್ ॥೧೨೨॥

ಹೀಗೆ ಶ್ರೀಕೃಷ್ಣ ಹೇಳಿದಾಗ ಧರ್ಮರಾಜ ಅವರ ಉತ್ತಮ ಗುಣಗಳನ್ನು ಪರ್ಯಾಲೋಚಿಸಿ 'ಹಾಗೇ ಆಗಲಿ' ಎಂದ. ಅವರು ಮೂವರೂ ಬೇಗನೆ ಮಗಧ ದೇಶಕ್ಕೆ ಹೊರಟರು.

'ನನ್ನಲ್ಲಿ ನಿನಗೆ ನಂಬಿಕೆ ಇಲ್ಲ!' ಎನ್ನುವ ಆಕ್ಷೇಪದ ಧ್ವನಿಯನ್ನು ಕೃಷ್ಣನ ಮಾತಿನಲ್ಲಿ ಕಂಡು ಧರ್ಮರಾಜ. 'ಬೇಡ, ಹೀಗೆ ಹೇಳಬೇಡ. ನೀನು ನಮ್ಮನ್ನು ಸರ್ವಥಾ ರಕ್ಷಿಸುವಿ ಎಂದು ನನಗೆ ವಿಶ್ವಾಸವಿದೆ' ಎನ್ನುತ್ತ ಜರಾಸಂಧನ ವಧೆಗೆ ಹೋಗಲು ಮೂವರಿಗೂ ಅನುಮತಿ ನೀಡುತ್ತಾನೆ. ಆಗ ಮೂವರೂ ಸ್ನಾತಕ ಬ್ರಾಹ್ಮಣ ವೇಷ ತೊಟ್ಟು ನಿರಾಯುಧರಾಗಿ ಮಗಧ ದೇಶದ ಕಡೆಗೆ ಪ್ರಯಾಣ ಮಾಡಿದರು.

ಮಗಧ ದೇಶದಲ್ಲಿ ಕೃಷ್ಣಭೀಮಾರ್ಜುನರು

ಸಮೇತ್ಯ ಮಾಗಧಾಂಸ್ತು ತೇ ಶಿವೋರುಲಿಂಗಮಿತ್ಯಲಂ ।
ಸುಮಾಲ್ಯವಸ್ತ್ರಭೂಷಣೈಃ ಸಮರ್ಚಿತಂ ಗಿರಿಂ ಯಯುಃ ॥೧೨೩॥

ಶ್ರೀಕೃಷ್ಣ ಭೀಮಾರ್ಜುನರು ಮಗಧ ದೇಶಕ್ಕೆ ಹೋಗಿ ಅಲ್ಲಿ ಶಿವನ ದೊಡ್ಡ ಲಿಂಗವೆಂದು ಒಳ್ಳೆಯ ಮಾಲೆ ವಸ್ತ್ರ ಅಲಂಕಾರಗಳಿಂದ ಬಹಳವಾಗಿ ಪೂಜೆಗೊಳ್ಳುತ್ತಿದ್ದ ಒಂದು ಬೆಟ್ಟದ ಶಿಖರದ ಬಳಿಗೆ ಹೋದರು.

ಬಿಹಾರದ ಪಟ್ನಾದ ಬಳಿ ಇರುವ ರಾಜಗೃಹ ಮಗಧದ ರಾಜಧಾನಿಯಾಗಿತ್ತು. ಅದರ ಸುತ್ತಲೂ ವೈಹಾರ, ವಾರಾಹ, ವೃಷಭ,

ಋಷಿ, ಚೈತ್ಯಕ ಎಂಬ ಐದು ಬೆಟ್ಟಗಳ ಸಮೂಹವಿದ್ದುದರಿಂದ ದುರ್ಗಮವಾಗಿತ್ತು. 'ಗಿರಿವ್ರಜ' ಎಂದೂ ಇನ್ನೊಂದು ಸಾರ್ಥಕನಾಮ ಅದಕ್ಕೆ ಇತ್ತು. ಚೈತ್ಯಕ ಪರ್ವತದ ಒಂದು ಶಿಖರ ಲಿಂಗಾಕಾರವಾಗಿತ್ತು. ಅದ್ದನ್ನು ಶಿವಲಿಂಗವೆಂದು ಎಲ್ಲರೂ ಪೂಜಿಸುತ್ತಿದ್ದರು.

ಸ್ವಶೀರ್ಷತೋಽಪಿ ಚಾದೃತಂ ಜರಾಸುತೇನ ತೇ ಗಿರಿಂ।
ನ್ಯಪಾತಯಂತ ಬಾಹುಭಿಸ್ತಮಸ್ಯ ಚೋತ್ತಮಾಂಗವತ್ ॥೧೨೪॥

ಜರಾಸಂಧ ಯಾವ ಬೆಟ್ಟವನ್ನು ತನ್ನ ತಲೆಗಿಂತಲೂ ಹೆಚ್ಚಾಗಿ ಆದರಿಸುತ್ತಿದ್ದನೋ ಆ ಬೆಟ್ಟವನ್ನು ಮೂವರೂ ತಮ್ಮ ಬಾಹುಗಳಿಂದ ಹೊಡೆದು ಕೆಡವಿದರು. ಜರಾಸಂಧನ ತಲೆಯೇ ಉರುಳಿದಂತಾಯಿತು.

ಹಂಸ ಡಿಭಿಕರು ಉಪದ್ರವ ಮಾಡಿದಾಗ ದುರ್ವಾಸರು ಜರಾಸಂಧನ ಬಳಿಗೆ ಬಂದು ದೂರಿತ್ತರು. ಆದರೆ ಜರಾಸಂಧ ಸುಮ್ಮನಿದ್ದ. ಮುನಿ ಕೋಪದಿಂದ 'ಇನ್ನು ಶಿವ ನಿನ್ನ ಪಟ್ಟಣದಲ್ಲಿ ಇರುವುದಿಲ್ಲ. ಪರ್ವತ ಲಿಂಗಪೂಜೆ ವಿಫಲವಾಗುವುದೆಂ' ದು ಶಪಿಸಿದರು. ಅದರಿಂದ ಆ ಬೆಟ್ಟದ ಶಿಖರ ಲಿಂಗವಾಗಿರಲಿಲ್ಲ. ಆದರೂ ಲಿಂಗವೆಂದು ಪೂಜಿಸುತ್ತಿದ್ದ ಜರಾಸಂಧ. ಅದರಿಂದ ಬೀಳಿಸಿದರು.

ಅದ್ವಾರತಸ್ತೇ ನಗರಂ ಪ್ರವಿಶ್ಯ
ಮಾಷಸ್ಯ ನಾಲೇನ ಕೃತಾಸ್ತ್ರಿಭೇರೀಃ।
ಪುಷ್ಟಿಪ್ರದಾ ಬಿಭಿದುಸ್ತಸ್ಯ ಕೀರ್ತಿ-
ಶಾಸ್ತ್ರೋಪಮಾ ನ್ಯಕ್ಕೃತಮಾಗಧೇಶಾಃ ॥೧೨೫॥

ಅವರು ಅದ್ವಾರದಿಂದ ನಗರವನ್ನು ಪ್ರವೇಶಿಸಿದರು. ಮಾಷಾಸುರನ ಕಂಠನಾಳದಿಂದ ಮಾಡಿದ ಭೇರಿಗಳು ಅಲ್ಲಿ ಜರಾಸಂಧನ ಕೀರ್ತಿಯನ್ನು ಹೊಗಳುವ ಶಾಸ್ತ್ರಗಳಂತಿದ್ದುವು. ಧ್ವನಿಯಿಂದ ಜನರಿಗೆ ಪುಷ್ಟಿ ನೀಡುತ್ತಿದ್ದುವು. ಕೃಷ್ಣಭೀಮಾರ್ಜುನರು ಜರಾಸಂಧನನ್ನು ತೃಣೀಕರಿಸುತ್ತ ಆ ಭೇರಿಗಳನ್ನೂ ಒಡೆದರು.

ಅದ್ವಾರದಿಂದ ಎಂದರೆ ಪ್ರಾಕಾರದ ಗೋಡೆಯನ್ನು ಒಡೆದು ಹೊಸ ದಾರಿ ಮಾಡಿಕೊಂಡು ನಗರವನ್ನು ಪ್ರವೇಶಿಸಿದರು. ಶತ್ರುಗಳ ನಗರವನ್ನು ಮಹಾದ್ವಾರದಿಂದ ಪ್ರವೇಶಿಸಬಾರದು ಎಂದು.

ಮಾಷಾದನೆಂಬ ವೃಷಭ ರೂಪದ ಅಸುರ ಪ್ರಜೆಗಳನ್ನು ಹಿಂಸಿಸುತ್ತಿದ್ದ. ಅವನನ್ನು ಜರಾಸಂಧನ ತಂದೆ ಬೃಹದ್ರಥ ರಾಜ ಕೊಂದು ಆ ಎತ್ತಿನ ಎರಡು ಕೊಂಬುಗಳು ಮತ್ತು ಕಂಠನಾಳಗಳಿಂದ ಚರ್ಮವನ್ನು ಕಟ್ಟಿ

ಬಿಗಿದು ಮೂರು ನಗಾರಿಗಳನ್ನು ಮಾಡಿಸಿದ್ದ. ಒಂದು ಬಾರಿ ಹೊಡೆದರೆ ಅವು ಒಂದು ತಿಂಗಳ ಪರ್ಯಂತ ಅನುರಣನ ಧ್ವನಿಯುಂಟು ಮಾಡುತ್ತ ಆ ಧ್ವನಿಯಿಂದಲೆ ಜರಾಸಂಧನಿಗೂ ಪ್ರಜೆಗಳಿಗೂ ಬಲ ಪುಷ್ಟಿಗಳನ್ನು ನೀಡುತ್ತಿದ್ದುವು. ಅದರಿಂದ ಎಲ್ಲರೂ ಅವುಗಳನ್ನು ದಿವ್ಯ ಪುಷ್ಪಗಳಿಂದ ಪೂಜಿಸುತ್ತಿದ್ದರು. ಮೊದಲಿಗೆ ಆ ನಗಾರಿಗಳನ್ನು ಕೃಷ್ಣಭೀಮಾರ್ಜುನರು ಒಡೆದರು. ಒಡನೆ ಎಲ್ಲೆಡೆ ಉತ್ಪಾತಗಳು ಕಂಡುಬಂದುವು. ಶಾಂತಿಗಾಗಿ ಜರಾಸಂಧ ಆನೆಯ ಮೇಲೆ ಕುಳಿತು ಮಂಗಳಾರತಿ ಮಾಡಿಸಿಕೊಂಡ. ಹೋಮಹವನಗಳನ್ನು ಮಾಡಿಸಿ ಉಪವಾಸವ್ರತ ಕೈಗೊಂಡ.[1]

ಮಾಷಾದಾಸುರನಿಗೇ ಮಾಷಾಸುರ ಎಂದು ಸಂಕ್ಷಿಪ್ತ ನಾಮ. ಈ ಭೇರಿಯೊಂದಿಗೇ ಜರಾಸಂಧನ ಕೀರ್ತಿ ಮತ್ತು ಅವನು ಪ್ರಚಾರ ಮಾಡುತ್ತಿದ್ದ ಶೈವಶಾಸ್ತ್ರನಶಿಸಿದ್ದರಿಂದಲೂ ಭೇರಿ 'ಕೀರ್ತಿಶಾಸ್ತ್ರೋಪಮ' ವೆನಿಸಿದೆ. ಮೊದಲಿಗೆ ಅದು ಕೀರ್ತಿಯನ್ನು ಹೊಗಳುವ ಗ್ರಂಥದಂತೆ ಖ್ಯಾತಿಯನ್ನು ಹರಡಿಸುತ್ತಿತ್ತು. ಈಗ ತಾನು ನಾಶವಾಗಿ ಆ ಗ್ರಂಥವನ್ನೂ ಲುಪ್ತಗೊಳಿಸಿತು.

ತಥಾಪಣೇಭ್ಯೋ ಬಹುಮಾಲ್ಯಗಂಧಾನ್
ಪ್ರಸಹ್ಯ ಸಂಗೃಹ್ಯ ಶುಭಾಂಶ್ಚ ದಧ್ಮುಃ।
ಅದ್ವಾರತಸ್ತಸ್ಯ ಗೃಹಂ ಚ ಸಸ್ಮು-
ರ್ಭೋರ್ಜಶಬ್ದತಸ್ತಂ ಚ ನೃಪಂ ಪ್ರಸಸ್ಮುಃ ॥೧೨೬॥

ಶ್ರೀಕೃಷ್ಣ ಭೀಮ ಅರ್ಜುನರು ಅಂಗಡಿಗಳಿಂದ ಒಳ್ಳೆಯ ಅನೇಕ ಹೂಮಾಲೆ ಮತ್ತು ಗಂಧಗಳನ್ನು ಬಲಾತ್ಕಾರವಾಗಿ ತೆಗೆದು ಧಾರಣ ಮಾಡಿದರು. ಅದ್ವಾರದಿಂದಲೆ ಜರಾಸಂಧನ ಅರಮನೆಯನ್ನು ಪ್ರವೇಶಿಸಿದರು. 'ಎಲೋ ಜರಾಸಂಧ!' ಎಂದು ಕೂಗುತ್ತ ಅವನ ಬಳಿಗೆ ನಡೆದರು.

ತಾನ್ ವಿಪ್ರವೇಷಾನ್ ಸ ನಿಶಾಮ್ಯ ರಾಜಾ
ಮಹಾಭುಜಾನ್ ಸ್ನಾತಕವೇಷಯುಕ್ತಾನ್ ।

---

1. ವೃಷಭರೂಪೀ ಮಾಷಾದನಾಮಕೋಽಸುರೋ ಮಾಷಾದ ವೃಷಭಃ। ತಂ ಮಾಷಾದಂ ಹತ್ವಾ ಮಾಷನಾಲಾನ್ ಶೃಂಗದ್ವಯ ಕಂಠನಾಲಾಖ್ಯಾನ್ ತ್ರೀನ್ ನಾಲಾನ್ ತೇನ ಚರ್ಮಣಾ ಆನಹ್ಯ ಬದ್ಧ್ವಾತಿಸ್ರೋ ಭೇರ್ಯಃ ಯಥಾ ಭವಂತಿ ತಥಾ ಚಕಾರ। ತ್ರಿಭಿರೇತೈಸ್ತಾಡಿತಾಸ್ತಿಸ್ರೋ ಭೇರ್ಯಃ ಪ್ರಾಣದನ್... ಪರಿತಃ ಅಗ್ನಿಃ ನೀರಾಜನ ರೂಪೋಽಗ್ನಿಃ ಯಥಾಭವತಿತಥಾ ಕುರ್ವನ್ ಅಕುರ್ವನ್ ಮಂಗಲಾರಾತ್ಯಾ ಸತ್ಕೃತವಂತಃ। -ಲಕ್ಷಾಲಂಕಾರಃ
ಶಾಸ್ತ್ರಂ ಶೈವಶಾಸ್ತ್ರಂ ಶಾಸನಂ ಚ। ನಿದೇಶ ಗ್ರಂಥಯೋಃ ಶಾಸ್ತ್ರಮಿತ್ಯನುಶಾಸನಂ। ತೇಷಾಮುಪಮಾ ಯಾಸಾಂ ತಾಃ ಮಾಷಕೃತಾಸ್ತ್ರಿಭೇರೀರಿತಿ ಸಂಬಂಧಃ ।

ದ್ವಿತೀಯವರ್ಣಾನ್ ಪ್ರವಿಚಿಂತ್ಯ ಬಾಹೂನ್
ಜ್ಯಾಕರ್ಕಶಾನ್ ವೀಕ್ಷ್ಯ ಬಭಾಷ ಏತಾನ್ ॥೧೨೭॥

ಅವರು ಬ್ರಾಹ್ಮಣ ವೇಷದಲ್ಲಿದ್ದರು. ಅದರಲ್ಲಿಯೂ ಸ್ನಾತಕ ವೇಷಯುಕ್ತರಾಗಿದ್ದರು. ಆದರೆ ಮಹಾಬಾಹುಗಳು. ಬಾಹುಗಳು ಬಿಲ್ಲಿನ ಹೆದೆಯ ಚಿಹ್ನೆಯಿಂದ ಕೂಡಿದ್ದು ಕಠಿನವಾಗಿದ್ದುವು. ಅದನ್ನು ನೋಡಿ ಜರಾಸಂಧ ಅವರು ಕ್ಷತ್ರಿಯರೇ ಇರಬಹುದೆಂದು ಆಲೋಚಿಸಿ ಕೇಳಿದ.

ವಿವಾಹಕ್ಕೆ ಮೊದಲು ಕಾಶಿಯಾತ್ರೆಗೆ ಹೊರಟ ಬ್ರಾಹ್ಮಣರಂತಿದ್ದರು. ಅದರಿಂದ ಬ್ರಾಹ್ಮಣರೆಂದು ಸತ್ಕಾರ ಮಾಡಿದರೆ ಮೂವರೂ ನಿರಾಕರಿಸಿದರು. 'ನೀವು ಯಾರು?' ಎಂದು ಜರಾಸಂಧ ವಿಚಾರಿಸಿದ. ಶ್ರೀಕೃಷ್ಣನೆಂದ. 'ಇವರಿಬ್ಬರೂ ಒಂದು ವ್ರತವನ್ನು ಕೈಗೊಂಡಿರುವುದರಿಂದ ಮೌನಿಗಳಾಗಿದ್ದಾರೆ. ಇಂದು ಮಧ್ಯರಾತ್ರಿವರೆಗೂ ಈ ಮೌನವಿರುತ್ತದೆ.' ಜರಾಸಂಧ ಅವರನ್ನು ಯಾಗಶಾಲೆಯಲ್ಲಿ ಇರಿಸಿ ಅಂತಃಪುರಕ್ಕೆ ನಡೆದ. ಮಧ್ಯರಾತ್ರಿಯಲ್ಲಿ ಬಂದು ಪುನಃ ಮಾತನಾಡಿಸಿದ.

ಕೇ ಷ್ಮಾಥ ಕಿಂ ಹೇತುತ ಆಗತಾಶ್ಚ
ಕುತಶ್ಚ ಮೇ ಪರ್ವತಲಿಂಗಭೇದನಂ ।
ಕೃತಂ ಭವದ್ಭಿಃ ಕುತ ಏವ ದುರ್ನಯಾಃ
ಕೃತಾಸ್ತಥಾನ್ಯೇ ದ್ವಿಜವರ್ಯವೇಷೈಃ ॥೧೨೮॥

'ಯಾರು ನೀವು? ಏಕೆ ಬಂದಿರಿ? ನನ್ನ ಪರ್ವತಾಕಾರದ ಶಿವಲಿಂಗವನ್ನು ಏಕೆ ಕೆಡವಿದಿರಿ? ಬ್ರಾಹ್ಮಣೋತ್ತಮರ ವೇಷ ಧರಿಸಿದ್ದೂ ಬೇರೆ ಅನ್ಯಾಯಾಚರಣೆಗಳನ್ನು ಏಕೆ ಮಾಡಿದಿರಿ?

ಮಹಾದ್ವಾರದಿಂದ ಪ್ರವೇಶಿಸದೆ ಅದ್ವಾರದಿಂದ ಏಕೆ ಪ್ರವೇಶ ಮಾಡಿದಿರಿ? ಪರ್ವತಲಿಂಗವನ್ನು ಏಕೆ ಕೆಡವಿದಿರಿ? ಭೇರಿಗಳನ್ನು ಏಕೆ ಒಡೆದಿರಿ? ಅಂಗಡಿಗಳನ್ನು ಏಕೆ ಲೂಟಿ ಮಾಡಿದಿರಿ? ಸ್ನಾತಕ ಬ್ರಾಹ್ಮಣ ವೇಷ ತೊಟ್ಟು, ಮದುವೆಯಾದವರಂತೆ ಗಂಧ ಮಾಲ್ಯಗಳನ್ನು ಏಕೆ ಧರಿಸಿದಿರಿ? ನಾನು ಮಾಡಿದ ಸತ್ಕಾರಗಳನ್ನು ಏಕೆ ನಿರಾಕರಿಸಿದಿರಿ? ಬ್ರಾಹ್ಮಣ ವೇಷದಲ್ಲಿದ್ದರೂ ಭುಜಗಳಲ್ಲಿ ಬಿಲ್ಲಿನ ಹಗ್ಗದ ಚಿಹ್ನೆ ಇದೆ, ಗಂಧಮಾಲ್ಯ ಧರಿಸಿರುವಿರಿ ಕ್ಷತ್ರಿಯ ತೇಜಸ್ಸಿದೆ, ನೀವಾರು? ಎಂದು ಮುಂತಾಗಿ ಜರಾಸಂಧ ಕೇಳಿದ.

ಇತಿ ಬ್ರುವಾಣಂ ಭಗವಾನುವಾಚ
ಕಾರ್ಯಂ ಹಿ ಶತ್ರೋರಖಿಲಂ ಪ್ರತೀಪಂ ।

ಇತ್ಯುಕ್ತ ಊಚೇ ನ ಹಿ ವಿಪ್ರಶತ್ರು-
ರಹಂ ಕುತೋ ವೋ ಮಮ ಶತ್ರುತಾ ಭವೇತ್ ॥೧೨೯॥

ಜರಾಸಂಧ ಹೀಗೆ ಕೇಳಿದಾಗ ಭಗವಾನ್ ಶ್ರೀಕೃಷ್ಣ ನುಡಿದ, 'ಶತ್ರುವಿಗೆ ಎಲ್ಲ ರೀತಿಯಿಂದ ವಿರುದ್ಧಾಚರಣೆ ಮಾಡುವುದು ಯುಕ್ತವೆ'. ಅದನ್ನು ಕೇಳಿ ಜರಾಸಂಧ ನುಡಿದ. 'ನಾನು ಬ್ರಾಹ್ಮಣರಿಗೆ ಶತ್ರುವಲ್ಲ. ನಿಮಗೆ ನನ್ನಲ್ಲಿ ಏಕೆ ಶತ್ರುತ್ವ?

ಶತ್ರುವಿಗೆ ಪ್ರತೀಕಾರ ಮಾಡಲೆಂದೇ ಬಂದಿದ್ದೇವೆ. ಅದರಿಂದ ಅದ್ವಾರದಿಂದಲೆ ಬಂದೆವು. ಭೇರಿಗಳನ್ನು ಒಡೆದೆವು. ಅಂಗಡಿ ಲೂಟಿ ಮುಂತಾದ ವಿರುದ್ಧಾಚರಣವನ್ನು ಮಾಡಿದೆವು ಎನ್ನುತ್ತಾನೆ ಶ್ರೀಕೃಷ್ಣ. 'ನಾನು ನಿಮಗೆ ಹೇಗೆ ಶತ್ರು?' ಎನ್ನುತ್ತಾನೆ ಜರಾಸಂಧ.

ಇತ್ಯುಕ್ತವಾಕ್ಯಂ ನೃಪತಿಂ ಜಗಾದ
ಜನಾರ್ದನೋ ನೈವ ಹಿ ತಾದೃಶಾ ದ್ವಿಜಾಃ।
ಅಹಂ ರಿಪುಸ್ತೇಽಸ್ಮಿ ಹಿ ವಾಸುದೇವ
ಇಮೌ ಚ ಭೀಮಾರ್ಜುನನಾಮಧೇಯೌ ॥೧೩೦॥

ಜರಾಸಂಧ ಹೀಗೆ ಹೇಳಿದಾಗ ಶ್ರೀಕೃಷ್ಣ ಹೇಳಿದ 'ನಾವೇನೂ ಅಂಥ ಬ್ರಾಹ್ಮಣರು ಸರ್ವಥಾ ಅಲ್ಲ. ನಾನು ನಿನ್ನ ಶತ್ರು ವಾಸುದೇವ. ಇವರೂ ಭೀಮ ಅರ್ಜುನ ಎಂದು ಹೆಸರುಳ್ಳವರು.

ಯದ್ ಬಾಂಧವಾನ್ನಃ ಪಿಶಿತಾಶಿಧರ್ಮತೋ
ರೌದ್ರೇ ಮಖೇ ಕಲ್ಪಯಿತುಂ ಪಶುತ್ವೇ।
ಇಚ್ಛಸ್ಯರೇ ವೇದಪಥಂ ವಿಹಾಯ
ತಂ ತ್ವಾಂ ಬಲಾಚ್ಛಾಸ್ತುಮಿಹಾಗತಾ ವಯಂ ॥೧೩೧॥

ಎಲೋ ದುಷ್ಟ, ನೀನು ವೇದಮಾರ್ಗವನ್ನು ತೊರೆದು ರಾಕ್ಷಸ ವೃತ್ತಿಯಿಂದ ನಮ್ಮ ಬಾಂಧವರನ್ನು ಭೈರವಯಾಗದಲ್ಲಿ ಬಲಿಪಶುವಾಗಿ ಮಾಡಲು ಬಯಸಿರುವಿ. ಅಂಥ ನಿನಗೆ ಬಲಾತ್ಕಾರವಾಗಿ ಶಾಸನ ಮಾಡಲು ನಾವು ಇಲ್ಲಿಗೆ ಬಂದಿದ್ದೇವೆ.

ವಿಮೋಕ್ಷಯಾಮಃ ಸ್ವಜನಾನ್ ಯದಿ ತ್ವಂ
ನ ಮೋಚಯಸ್ಯದ್ಯ ನಿಗೃಹ್ಯ ಚ ತ್ವಾಂ।
ಮುಂಚಾಥ ವಾ ತಾನಭಿಯಾಹಿ ಚಾಸ್ಮಾನ್
ರಣಾಯ ಮರ್ತ್ಯಂ ಕೃತನಿಶ್ಚಯೋಽತ್ರ ॥೧೩೨॥

ನೀನು ನಮ್ಮ ಬಾಂಧವರನ್ನು ಬಿಡುಗಡೆ ಮಾಡದಿದ್ದರೆ ನಿನ್ನನ್ನು ನಿಗ್ರಹಿಸಿ ಅವರನ್ನು ನಾವೆ ಬಿಡಿಸಿಕೊಳ್ಳುತ್ತೇವೆ. ಅದರಿಂದ ಅವರನ್ನು ಬಿಟ್ಟು ಕೊಡು ಇಲ್ಲವೆ, ಸಾಯಲು ನಿಶ್ಚಯ

ಮಾಡಿದ್ದರೆ ನಮ್ಮೊಡನೆ ಯುದ್ಧಕ್ಕೆ ಬಾ.

ಇತೀರಿತೋಽಸೌ ಮಗಧಾಧಿಪೋ ರುಷಾ
ಜಗಾದ ನಾಹಂ ಶಿವಯಾಗಯುಕ್ತಾನ್ ।
ಮೋಕ್ಷ್ಯೇ ಪಶೂನ್ ಯುಗಪದ್ವಾ ಕ್ರಮೇಣ
ಯೋತ್ಸ್ಯೇ ಚ ವೋಽಥಾಪಿ ಚಮೂಸಹಾಯಾನ್ ॥೧೩೩॥

ಶ್ರೀಕೃಷ್ಣ ಹೀಗೆ ಹೇಳಿದಾಗ ಜರಾಸಂಧ ಕೋಪದಿಂದ ನುಡಿದ. 'ನಾನು ಭೈರವಯಾಗಕ್ಕೆ ಮೀಸಲಾಗಿಟ್ಟಿರುವ ಈ ಪಶುಗಳನ್ನು ಬಿಡಲಾರೆ. ನಿಮ್ಮ ಮೂವರೊಡನೆ ಏಕಕಾಲದಲ್ಲಾಗಲಿ, ಕ್ರಮವಾಗಿ ಒಬ್ಬೊಬ್ಬರೊಡನೆಯಾಗಲಿ, ಸೈನ್ಯ ಸಮೇತವಾಗಿಯಾಗಲಿ ಅಥವಾ ಏಕಾಂಗಿಯಾಗಲಿ ನಾನು ನಿಮ್ಮೊಡನೆ ಯುದ್ಧವನ್ನೇ ಮಾಡುವೆನು.'

ನಿರಾಯುಧಃ ಸಾಯುಧೋ ವಾ ಯುಷ್ಮದಿಷ್ಟಾಯುಧೇನ ವಾ ।
ಏಕೋಽಪಿ ಸಕಲೈರ್ಯೋತ್ಸ್ಯೇ ಸಸೈನ್ಯೋ ವಾ ಸಸೈನಿಕಾನ್ ॥೧೩೪॥

ನಿರಾಯುಧನಾಗಿಯೋ ಆಯುಧ ಸಹಿತನಾಗಿಯೋ ಅಥವಾ ನಿಮಗೆ ಇಷ್ಟವಾದ ಆಯುಧದಿಂದಲೋ ಒಬ್ಬನೇ ನಿಮ್ಮೆಲ್ಲರೊಡನೆ ಹೋರಾಡುವೆನು. ಅಥವಾ ಸೈನ್ಯ ಸಹಿತನಾಗಿ ಸೈನ್ಯ ಸಮೇತರಾದ ನಿಮ್ಮೊಡನೆ ಯುದ್ಧವನ್ನೂ ಮಾಡಲು ಸಿದ್ಧನಿದ್ದೇನೆ.

ಇತ್ಯುಕ್ತವಂತಮವದದಜಿತೋರುಬಲೋ ಹರಿಃ
ಏಹ್ಯೇಕಮೇಕೋ ವಾಸ್ಮಾಸು ಸಸೈನ್ಯೋ ವಾ ರಣೇ ನೃಪ ॥೧೩೫॥

ಜರಾಸಂಧ ಹೀಗೆ ಹೇಳಿದಾಗ ಸರ್ವಶಕ್ತನಾದ ಅಜಿತನಾದ ಶ್ರೀಹರಿ ನುಡಿದ, 'ನಮ್ಮಲ್ಲಿ ಯಾರಾದರೊಬ್ಬರೊಡನೆ ಹೋರಾಡಲು ನೀನು ಏಕಾಕಿಯಾಗಿ ಬಾ, ಇಲ್ಲವೆ, ಸೈನ್ಯ ಸಮೇತರಾದ ನಮ್ಮೊಡನೆ ಯುದ್ಧಕ್ಕೆ ಸೈನ್ಯ ಸಹಿತನಾಗಿಯಾದರೂ ಬಾ.' .

ಭೀಮನ ಯಶಸ್ಸು

ಯೇನ ಕಾಮಯಸೇ ಯೋದ್ಧುಂ ತಂ ನ ಆಸಾದಯ ದ್ರುತಂ ।
ನಿರಾಯುಧಃ ಸಾಯುಧೋ ವಾ ತ್ವದಭೀಷ್ಟಾಯುಧೇನ ವಾ ॥೧೩೬॥

ನೀನು ಯಾರೊಡನೆ ಹೋರಾಡಲು ಬಯಸುವಿಯೊ ಅವನನ್ನೇ ಆರಿಸಿಕೊಳ್ಳು. ನಿರಾಯುಧನಾಗಿಯೋ ಸಾಯುಧನಾಗಿಯೋ ನಿನಗಿಷ್ಟವಾದ ಆಯುಧ ಧರಿಸಿಯೋ ನೀನು ಬರಬಹುದು.

ಇತ್ಯಾಹ ಭಗವಾನ್ ಶತ್ರುಂ ಯಶೋ ಭೀಮೇ ವಿವರ್ಧಯನ್ ।
ಘಾತಯಿತ್ವಾ ಸ್ವಶತ್ರುಂ ಚ ಭೀಮೇನಾನುಗ್ರಹಂ ಪರಂ ॥೧೩೭॥
ಭೀಮಸ್ಯ ಕರ್ತುಮಿಚ್ಛಂಶ್ಚ ಭಕ್ತಿ ಜ್ಞಾನಾದಿವರ್ಧನಂ ।
ತೃಣೇಕರ್ತುಂ ರಿಪುಂ ಚೈವ ನಿರಾಯುಧತಯಾಗಮತ್ ॥೧೩೮॥

ಶ್ರೀಕೃಷ್ಣ ತನ್ನ ಶತ್ರುವನ್ನು ಭೀಮನಿಂದ ಕೊಲ್ಲಿಸಿ ಅವನಿಗೆ ಪರಮಾನುಗ್ರಹ ಮಾಡಲು ಮತ್ತು ಅವನ ಯಶಸ್ಸನ್ನೂ ಭಕ್ತಿ ಜ್ಞಾನಾದಿಗಳನ್ನೂ ಹೆಚ್ಚಿಸಲು ಬಯಸಿದ್ದರಿಂದ ಜರಾಸಂಧನಿಗೆ ಹೀಗೆ ಹೇಳಿದ. ಶತ್ರುವನ್ನು ತೃಣೀಕರಿಸಲೆಂದೇ ನಿರಾಯುಧನಾಗಿ ಅಲ್ಲಿಗೆ ಹೋಗಿದ್ದ.

ಕೃಷ್ಣಭೀಮಾರ್ಜುನಾಸ್ತೇನ ವಿಪ್ರವೇಷಾಶ್ಚ ತೇಽಭವನ್ ।
ನಿರಾಯುಧಃ ಕ್ಷತ್ರವೇಷೋ ನೈವ ಯೋಗ್ಯಃ ಕಥಂಚನ ॥೧೩೯॥

ಕ್ಷತ್ರಿಯ ವೇಷದಲ್ಲಿದ್ದು ನಿರಾಯುಧರಾಗಿರುವುದು ಯಾವರೀತಿಯಿಂದಲೂ ಯೋಗ್ಯವೆನಿಸುವುದಿಲ್ಲ. ಅದರಿಂದ ಕೃಷ್ಣ ಭೀಮ ಅರ್ಜುನರು ಬ್ರಾಹ್ಮಣವೇಷ ಧರಿಸಿ ಬಂದಿದ್ದರು.

[1]ಶ್ರಾದ್ಧ ಭೋಜನಕ್ಕೆ ಮಾತ್ರ ಯೋಗ್ಯರಾದ ಬ್ರಾಹ್ಮಣರೂ ನಿನ್ನನ್ನು ಕೊಲ್ಲಬಲ್ಲರು. ಇನ್ನು ಕ್ಷತ್ರಿಯರ ಬಗ್ಗೆ ಏನು ಹೇಳಬೇಕು ಎಂದು ಹಾಸ್ಯ ಮಾಡುವ ಅಭಿಪ್ರಾಯದಿಂದ ಬ್ರಾಹ್ಮಣ ವೇಷದಿಂದ ಬಂದಿದ್ದರು ಎನ್ನುತ್ತದೆ ವಾದಿರಾಜೀಯ.

ತತೋ ಜಗ್ಮುರ್ವಿಪ್ರವೇಷಾಸ್ತ್ರಣೀಕರ್ತುಂ ಚ ಮಾಗಧಂ ।
ಮಾಗಧಸ್ಯ ಸಸೈನ್ಯಸ್ಯ ಸ್ವಗೃಹೇ ಸಂಸ್ಥಿತಸ್ಯ ಚ ॥೧೪೦॥
ನಿರಾಯುಧೇನ ಭೀಮೇನ ಸಮಾಹ್ವಾನೇ ಕೃತೇಽಮಿತಂ ।
ಧರ್ಮಂ ಯಶಶ್ಚ ಭೀಮಸ್ಯ ವರ್ಧಯಾಮಾಸ ಕೇಶವಃ ॥೧೪೧॥

ಅದರಿಂದ ಅವರು ಬ್ರಾಹ್ಮಣ ವೇಷದಿಂದ, ಜರಾಸಂಧನನ್ನು ತೃಣೀಕರಿಸುವ ಉದ್ದೇಶದಿಂದಲೆ, ಹೋಗಿದ್ದರು. ಜರಾಸಂಧ ಸೈನ್ಯ ಸಮೇತನಾಗಿರುವಾಗ, ಮತ್ತು ತನ್ನ ಮನೆಯಲ್ಲಿಯೆ ಇರುವಾಗ ನಿರಾಯುಧನಾದ ಭೀಮ ಹೊರಗಿಂದ ಬಂದು ಯುದ್ಧಕ್ಕೆ ಆಹ್ವಾನ ಮಾಡಿದರೆ ಭೀಮನಿಗೆ ಅಮಿತವಾಗಿ ಪುಣ್ಯ ಮತ್ತು ಕೀರ್ತಿ ಹೆಚ್ಚುವುದು. ಹಾಗೆ ಹೆಚ್ಚುವಂತೆ ಮಾಡಿದ ಶ್ರೀಕೃಷ್ಣ.

[2]ಶತ್ರು ನಿರಾಯುಧನಾಗಿ ಮನೆಯಲ್ಲಿ ಕುಳಿತಿರುವಾಗ ಭೀಮ ಆಯುಧ ಸಹಿತನಾಗಿ ಆಕ್ರಮಿಸುವುದು ಧರ್ಮವಾಗುವುದಿಲ್ಲ. ಅದರಿಂದ ನಿರಾಯುಧನಾದ ಭೀಮನನ್ನೇ ಕೃಷ್ಣ ಕರೆತಂದಿದ್ದ. ದುರ್ಮಾರ್ಗದಲ್ಲಿರುವ ಶತ್ರುವನ್ನು ಅಮಾರ್ಗದಿಂದ ಬಂದು ಆಕ್ರಮಿಸುವುದೇ ಧರ್ಮವಾಗುವುದ

---

1. ಶ್ರಾದ್ಧಭೋಜಿನೋ ಬ್ರಾಹ್ಮಣಾ ಅಪಿ ತ್ವಾಂಹನ್ಯುಃ ಕಿಮುತ ಕ್ಷತ್ರಿಯಾ ಇತಿ ಸೂಚನಾಯ ವಿಪ್ರವೇಷಾಶ್ಚಾಭವನ್ನಿತ್ಯುಕ್ತಮಿತಿ ಭಾವಃ । -ವಾದಿರಾಜೀಯ
2. ನಿರಾಯುಧತಯಾ ಗೃಹೇ ಸ್ಥಿತಂ ಪ್ರತಿ ಸಾಯುಧತಯಾ ಆಗಮನಸ್ಯಾಧರ್ಮತ್ವಾದಿತಿ ಭಾವಃ। ಇದಂ ಚೋಪಲಕ್ಷಣಂ। ದುರ್ಮಾರ್ಗವರ್ತಿನಂ ಪ್ರತಿ ಅಮಾರ್ಗೇಣ ಗಮನಸ್ಯ ನ್ಯಾಯ್ಯತ್ವಾದದ್ವಾರೇಣ ಗಮನಂ ಚೇತ್ಯಪಿ ದ್ರಷ್ಟವ್ಯಂ। -ವಾದಿರಾಜೀಯ

ರಿಂದ ಭೀಮನನ್ನು ಅದ್ವಾರದಿಂದ ಪ್ರವೇಶ ಮಾಡಿಸಿದ ಎನ್ನುತ್ತದೆ ವಾದಿರಾಜೀಯ.

ತೃತೀಯಮರ್ಜುನಂ ಚೈವ ಸಮಾದಾಯ ಯಯೌ ರಿಪುಂ ।
ಹರಿಸ್ತಸ್ಮಾಚ್ಚ ಭೀಮಸ್ಯ ಮಹಾಧಿಕ್ಯಂ ಪ್ರಕಾಶಯನ್ ॥೧೪೨॥
ಮುಖೇನ ಮಾಗಧಸ್ಯೈವ ವೃಣ್ವೇಕಂ ನ ಇತಿ ಬ್ರುವನ್ ।
ವೃಣ್ವೇಕಮಸ್ಮಾಸ್ವಿತಿ ಸ ಪ್ರೋಕ್ತ ಆಹ ಜರಾಸುತಃ ॥೧೪೩॥

ನಮ್ಮಲ್ಲಿ ಒಬ್ಬನನ್ನು ಆರಿಸಿಕೊಳ್ಳು ಎಂದು ಹೇಳಿ ಜರಾಸಂಧನ ಮುಖದಿಂದಲೇ ಅರ್ಜುನನಿಗಿಂತ ಭೀಮನಿಗೆ ಹೆಚ್ಚು ಶ್ರೇಷ್ಠತ್ವವನ್ನು ಹೇಳಿಸಿ ಬೆಳಕಿಗೆ ತರುವುದಕ್ಕಾಗಿ ಶ್ರೀಕೃಷ್ಣ ಮೂರನೆಯವನಾಗಿ ಅರ್ಜುನನನ್ನೂ ಕರೆದುಕೊಂಡು ಶತ್ರುವಿನ ಬಳಿಗೆ ಬಂದಿದ್ದ. ಅದರಿಂದ ನಮ್ಮಲ್ಲಿ ಒಬ್ಬನನ್ನು ಆರಿಸಿಕೊಳ್ಳೆಂದು ಕೃಷ್ಣ ಹೇಳಿದಾಗ ಜರಾಸಂಧ ನುಡಿದ.

ನಮ್ಮಲ್ಲಿ ಯಾರಾದರೊಬ್ಬರನ್ನು ನೀನು ಆರಿಸಿಕೊಳ್ಳಬಹುದೆಂದು ಶ್ರೀಕೃಷ್ಣ ಜರಾಸಂಧನಿಗೆ ಹೇಳಿದಾಗ ಜರಾಸಂಧ ಹೇಳಿದ. 'ಅರ್ಜುನ ಬಹಳ ದುರ್ಬಲ, ಅವನು ನನಗೆ ಏನೂ ಸಾಟಿಯಲ್ಲ, ನಾನು ಭೀಮನನ್ನೇ ಆರಿಸಿಕೊಳ್ಳುತ್ತೇನೆ' ಎಂದು. ಇದರಿಂದ ಭೀಮನಿಗೆ ಹೋಲಿಸಿದಾಗ ಅರ್ಜುನ ಎಷ್ಟು ದುರ್ಬಲ ಎಂಬುದು ಲೋಕಕ್ಕೆ ತಿಳಿಯಿತು. ಈ ಉದ್ದೇಶದಿಂದಲೇ ಶ್ರೀಕೃಷ್ಣ ಅರ್ಜುನನನ್ನು ಜೊತೆಗೆ ಕರೆತಂದಿದ್ದ.

ಕುರ್ಯಾಂ ನೈವಾರ್ಜುನೇನಾಹಮಬಲೇನೈವ ಸಂಗರಂ ।
ಪಂಚಪಂಚಾಶದಬ್ದೋಽದ್ಯ ಹ್ಯಯಮೇವ ತು ಬಾಲವತ್
ಅಬಲತ್ವಾದ್ ಯುವಾಪ್ಯೇಷ ಬಾಲ ಏವ ಮತೋ ಮಮ ॥೧೪೪॥

'ನಾನು ಈ ದುರ್ಬಲನಾದ ಅರ್ಜುನನೊಡನೆ ಯುದ್ಧ ಮಾಡಲಾರೆ. ವಯಸ್ಸಿನಲ್ಲಿ ಐವತ್ತೈದರವನಾದರೂ ಬಲದಲ್ಲಿ ಇನ್ನೂ ಬಾಲಕನಂತಿದ್ದಾನೆ. ಏಕೆಂದರೆ ಯುವಕನಾಗಿದ್ದರೂ ದುರ್ಬಲನಾದ್ದರಿಂದ ನನ್ನ ದೃಷ್ಟಿಯಲ್ಲಿ ಈತ ಬಾಲಕನೆ.'

ಇತ್ಯುಕ್ತೋಽಪ್ಯರ್ಜುನೋ ನಾಹ ಕುರು ತರ್ಹಿ ಪರೀಕ್ಷಣಂ ।
ಬಾಹುಭ್ಯಾಂ ಧನುಷಾ ವೇತಿ ಶಂಕಮಾನಃ ಪರಾಜಯಂ ॥೧೪೫॥

ಜರಾಸಂಧ ಹೀಗೆ ಹೇಳುತ್ತಿದ್ದರೂ 'ಹಾಗಾದರೆ ಬಾಹುಗಳಿಂದಾಗಲಿ ಬಿಲ್ಲಿನಿಂದಾಗಲಿ ಪರೀಕ್ಷೆ ಮಾಡಿ ನೋಡು' ಎನ್ನಲಿಲ್ಲ ಅರ್ಜುನ. ಏಕೆಂದರೆ ಅವನು ತನಗೆ ಪರಾಜಯವಾದೀತೆಂದು ಶಂಕಿಸಿದ್ದ.

ಅತೋ ಭೀಮೇ ಬಲಾಧಿಕ್ಯಂ ಸುಪ್ರಸಿದ್ಧಮಭೂನ್ಮಹತ್ ।
ಏತದರ್ಥಂ ಹಿ ಕೃಷ್ಣೇನ ಸಮಾನೀತಃ ಸ ಫಲ್ಗುನಃ ॥೧೪೬॥

ಅದರಿಂದ ಭೀಮನಲ್ಲಿಯೆ ಬಲ ಬಹಳ ಹೆಚ್ಚೆಂಬುದು ಸುಪ್ರಸಿದ್ಧವಾಯಿತು. ಇದಕ್ಕಾಗಿಯೆ ಕೃಷ್ಣ ಅರ್ಜುನನನ್ನು ಜೊತೆಗೆ ಕರೆತಂದಿದ್ದ.

ಜಾನನ್ ಕೃಷ್ಣೇ ಬಲಂ ಘೋರಮವಿಷಹ್ಯಂ ಸ ಮಾಗಧಃ ।
ಕುತ್ಸಯನ್ ಗೋಪ ಇತಿ ತಂ ಭಯಾನ್ನೈವಾಹ್ವಯತ್ ಪ್ರಭುಂ ॥೧೪೪೭॥

ಕೃಷ್ಣನಲ್ಲಿರುವ ಶಕ್ತಿ ಭಯಂಕರ, ಯಾರಿಗೂ ಇದಿರಿಸಲಾಗದಂಥದ್ದು ಎಂದು ತಿಳಿದಿದ್ದ ಜರಾಸಂಧ ತೋರಿಕೆಗೆ ಅವನನ್ನು ಗೋವಳನೆಂದು ತಿರಸ್ಕರಿಸಿದರೂ ವಸ್ತುತಃ ಭಯದಿಂದಲೆ ಯುದ್ಧಕ್ಕೆ ಕರೆದಿರಲಿಲ್ಲ.

ಆಹ್ವಯಾಮಾಸ ಭೀಮಂ ತು ಸ್ಯಾದ್ವಾ ಮೇ ಜೀವನಂ ತ್ವಿತಿ ॥೧೪೪೮॥

ಭೀಮನೊಡನೆ ಯುದ್ಧ ಮಾಡಿದರೆ ಒಂದು ವೇಳೆ ತಾನು ಬದುಕಿ ಉಳಿಯಲೂಬಹುದೆಂಬ ಆಸೆಯಿಂದ ಭೀಮನನ್ನೇ ಯುದ್ಧಕ್ಕೆ ಕರೆದ, ಜರಾಸಂಧ.

ಹನಿಷ್ಯತ್ಯೇವ ಮಾಂ ಕೃಷ್ಣ ಇತ್ಯಾಸೀನ್ನೃಪತೇರ್ಭಯಂ ।
ತಸ್ಮಾತ್ತಂ ನಾಹ್ವಯಾಮಾಸ ವಾಸುದೇವಂ ಸ ಮಾಗಧಃ ॥೧೪೪೯॥

ಕೃಷ್ಣನೊಡನೆ ಯುದ್ಧ ಮಾಡಿದರೆ ಅವನು ತನ್ನನ್ನು ಕೊಲ್ಲುವುದು ನಿಶ್ಚಿತವೆಂದು ಜರಾಸಂಧನಿಗೆ ಭಯವಿದ್ದಿತು. ಅದರಿಂದ ಅವನು ಶ್ರೀಕೃಷ್ಣನನ್ನು ಯುದ್ಧಕ್ಕೆ ಕರೆಯಲಿಲ್ಲ.

ಅರ್ಜುನೇ ತು ಜಿತೇ ಕೃಷ್ಣಭೀಮೌ ಮಾಂ ನಿಹನಿಷ್ಯತಃ ।
ತ್ರಯಾಣಾಂ ದುರ್ಬಲಾಹ್ವಾನಾನ್ನಶ್ಯೇತ್ ಕೀರ್ತಿಶ್ಚ ಮೇ ಧ್ರುವಂ ೧೫೦

ತಾನು ಅರ್ಜುನನನ್ನು ಗೆದ್ದರೂ ಅನಂತರ ಕೃಷ್ಣ ಭೀಮರು ತನ್ನನ್ನು ಕೊಲ್ಲವರು ಮತ್ತು ಮೂವರೊಳಗೆ ದುರ್ಬಲನಾದ ಈತನನ್ನು ಯುದ್ಧಕ್ಕೆ ಕರೆದರೆ ನನ್ನ ಕೀರ್ತಿಯೂ ನಿಶ್ಚಿತವಾಗಿ ನಶಿಸುವುದು.

ಇತಿ ಮತ್ವಾಹ್ವಯಾಮಾಸ ಭೀಮಸೇನಂ ಸ ಮಾಗಧಃ ।
ಕಥಂಚಿಜ್ಜೀವಿತಂ ವಾ ಸ್ಯಾನ್ನ ತು ನಶ್ಯತಿ ಮೇ ಯಶಃ ॥೧೪೫೧॥

ಹೀಗೆ ಆಲೋಚಿಸಿ ಜರಾಸಂಧ ಭೀಮಸೇನನನ್ನೇ ಯುದ್ಧಕ್ಕೆ ಕರೆದ. 'ನಾನು ಬದುಕಿ ಉಳಿಯಲಿ ಅಥವಾ ಅಳಿಯಲಿ, ಹೇಗಾದರೂ ನನ್ನ ಕೀರ್ತಿಗೆ ಕುಂದಿಲ್ಲ' ಎಂದು.

ಇತೀಕ್ಷ್ಯ ಭೀಮಂ ಪ್ರತಿಯೋಧನಾಯ
ಸಂಗೃಹ್ಯ ರಾಜಾ ಸ ಜರಾಸುತೋ ಬಲೀ ।
ರಾಜ್ಯೇ ನಿಜಂ ಚಾತ್ಮಜಮಭ್ಯಷಿಂಚತ್
ಪುರಾ ಖ್ಯಾತಂ ಪತ್ರತಾಪಾಖ್ಯರುದ್ರಂ ॥೧೪೫೨॥

ಹೀಗೆ ಆಲೋಚಿಸಿ ಬಲಿಷ್ಠನಾದ ಜರಾಸಂಧ ತನ್ನೊಡನೆ ಯುದ್ಧ ಮಾಡಲು ಭೀಮನನ್ನು ಆರಿಸಿಕೊಂಡು ರಾಜ್ಯದಲ್ಲಿ ತನ್ನ ಮಗನನ್ನು ಕೂಡಿಸಿ ಅಭಿಷೇಕ ಮಾಡಿದ. ಅವನು

ಹಿಂದೆ ಪತ್ರತಾಪನೆಂಬ ಪ್ರಸಿದ್ಧ ರುದ್ರ.

ಭವ, ಭೀಮ, ರೈವತ, ಅಜ, ಅಜೈಕಪಾದ್, ಅಹಿರ್ಬುಧ್ನಿ, ಮಹಾನ್, ವೃಷಾಕಪಿ, ವಿರೂಪಾಕ್ಷ, ಉಗ್ರ, ವಾಮ ಎಂದು ಏಕಾದಶ ರುದ್ರರು ಹರಿವಾಯುಗಳ ಭಕ್ತರು. ಭವನೇ ಮೂಲ ರುದ್ರ. ಉಳಿದವರು ವಿಷ್ವಕ್ಸೇನ ಅಶ್ವಿನೀದೇವತೆಗಳು ಗಣಪತಿ ಕುಬೇರ ಮುಂತಾದವರಿಗೆ ಸಮಾನರು. ಇವರಲ್ಲಿ ಯಾರೋ ಒಬ್ಬನಿಗೆ ಪತ್ರತಾಪ ಎಂದು ಇನ್ನೊಂದು ಹೆಸರಿರಬಹುದು. ಇವನಿಗೆ ಎರಡು ಅವತಾರಗಳಿವೆ. ಒಂದು, ಜರಾಸಂಧನ ಮಗನಾದ ಸಹದೇವ. ಒಂದು ಅಕ್ಷೌಹಿಣಿ ಸೈನ್ಯ ಸಮೇತನಾಗಿ ಪಾಂಡವರ ಪಕ್ಷದಲ್ಲಿ ಹೋರಾಡಿ ಹದಿನಾಲ್ಕನೆ ದಿನ ರಾತ್ರಿಯುದ್ಧದಲ್ಲಿ ದ್ರೋಣನಿಂದ ಹತನಾಗುತ್ತಾನೆ. ಇನ್ನೊಂದು ಅವತಾರ ಬಾಹ್ಲೀಕನ ಮಗನಾದ ಸೋಮದತ್ತ. ಈತನ ಮಕ್ಕಳು ಭೂರಿ, ಭೂರಿಶ್ರವ, ಶಲ - ಮೂವರೂ ಅಜೈಕಪಾದ್ ಅಹಿರ್ಬುಧ್ನಿ ವಿರೂಪಾಕ್ಷ ಎಂಬ ರುದ್ರರ ಅವತಾರಗಳೆ. ಈತ ಕೌರವರ ಪಕ್ಷದಲ್ಲಿ ನಿಂತು ಹೋರಾಡಿ ಹದಿನೈದನೆ ದಿನ ಸಾತ್ಯಕಿಯಿಂದ ಹತನಾಗುತ್ತಾನೆ. ಭೂರಿ ಭೂರಿಶ್ರವರೂ ಹದಿನಾಲ್ಕನೆ ದಿನ ಸಾತ್ಯಕಿಯಿಂದಲೆ ಹತರಾಗುತ್ತಾರೆ. ಶಲನೂ ಅಂದೆ ದ್ರೌಪದೀಪುತ್ರರಿಂದ ಹತನಾಗುತ್ತಾನೆ. ಬಾಹ್ಲೀಕನೂ ಭೀಮನಿಂದ ಹತನಾಗುತ್ತಾನೆ.

ಭೀಮಜರಾಸಂಧ ಯುದ್ಧ

ಬಲಂ ಭೀಮೇ ಮನ್ಯಮಾನೋಽಧಿಕಂ ತು
ಗದಾಶಿಕ್ಷಾಮಾತ್ಮನಿ ಚಾಧಿಕಾಂ ನೃಪಃ ।
ಭೀತೋ ನಿಯುದ್ಧೇಽಸ್ಯ ದದೌ ಗದಾಂ ಸ
ಭೀಮಾಯ ಚಾನ್ಯಾಂ ಸ್ವಯಮಗ್ರಹೀದ್ ಬಲೀ ॥೧೫೩॥

ದೈಹಿಕ ಬಲ ಭೀಮನಲ್ಲಿ ಹೆಚ್ಚಿದ್ದರೂ ಗದಾಭ್ಯಾಸ ಕೌಶಲ ತನ್ನಲ್ಲಿಯೆ ಹೆಚ್ಚೆಂದು ಭಾವಿಸಿದ್ದ ಜರಾಸಂಧ ಮುಷ್ಟಿಯುದ್ಧಕ್ಕೆ ಹೆದರಿ ಭೀಮನಿಗೆ ಒಂದು ಗದೆಯನ್ನು ಕೊಟ್ಟು ತಾನೂ ಇನ್ನೊಂದು ಗದೆಯನ್ನೆತ್ತಿಕೊಂಡ.

ತದರ್ಥಮೇವಾಶು ಗದಾಂ ಪ್ರಗೃಹ್ಯ
ಭೀಮೋ ಯಯೌ ಮಾಗಧಸಂಯುತೋ ಬಹಿಃ ।
ಪುರಾತ್ಸಕೃಷ್ಣಾರ್ಜುನ ಏವ ತತ್ರ
ತ್ವಯುಧ್ಯತಾಂ ಕೇಶವಪಾರ್ಥಯೋಃ ಪುರಃ ॥೧೫೪॥

ಅದಕ್ಕೇ ಬಲಿಷ್ಠನಾದ ಭೀಮನೂ ಗದೆಯನ್ನು ಹಿಡಿದು ಬೇಗನೆ ಜರಾಸಂಧನೊಂದಿಗೆ

ಕೃಷ್ಣಾರ್ಜುನ ಸಮೇತನಾಗಿ ನಗರದಿಂದ ಹೊರಗೆ ಹೋದ. ಅಲ್ಲಿ ಇಬ್ಬರೂ ಕೃಷ್ಣಾರ್ಜುನರ ಮುಂದೆ ಯುದ್ಧ ಮಾಡಿದರು.

'ತದರ್ಥಮೇವ' 'ಅದಕ್ಕೇ' ಎಂದರೆ, ಗದಾಭ್ಯಾಸದ ಕೌಶಲವೂ ಕೂಡ ತನ್ನಲ್ಲಿಯೇ ಹೆಚ್ಚು ಎಂಬುದನ್ನು ತೋರಿಸುವ ಸಲುವಾಗಿಯೇ ಭೀಮ ಗದೆಯನ್ನು ಹಿಡಿದ ಎಂದು ವಾದಿರಾಜೀಯ ಹೇಳಿದೆ.

'ತದರ್ಥಮೇವ' ಎಂಬುದಕ್ಕೆ ತಾಮ್ರಪರ್ಣೀಯ ಬೇರೆಯೆ ಅರ್ಥ ಹೇಳಿದೆ. 'ಅವನಿಗಾಗಿಯೆ' ಎಂದರ್ಥ. ಭೀಮ ಗದೆಯನ್ನು ಹಿಡಿದುದು ತನಗಾಗಿ ಅಲ್ಲ. ತಾನು ಮುಷ್ಟಿಯಿಂದಲೆ ಜರಾಸಂಧನನ್ನು ಮುಗಿಸಬಲ್ಲ. ಜರಾಸಂಧನಿಗಾಗಿ, ಅವನ ಅಪೇಕ್ಷೆಯ ಈಡೇರಿಕೆಗಾಗಿ ತಾನು ಗದೆಯನ್ನು ಹಿಡಿದ.

ಮಹಾಭಾರತದಲ್ಲಿ ಭೀಮ ಜರಾಸಂಧರು ಗದಾಯುದ್ಧ ಮಾಡುವುದಿಲ್ಲ. ಭಾಗವತದಲ್ಲಿ ಮಾಡುತ್ತಾರೆ.

ವಾಚಾಜಯತ್ತಂ ಪ್ರಥಮಂ ವೃಕೋದರಃ
ಶಿವಾಶ್ರಯಂ ವಿಷ್ಣುಗುಣಪ್ರಕಾಶಯಾ ।
ತತೋ ಗದಾಭ್ಯಾಮಭಿಪೇತತುಸ್ತೌ
ವಿಚಿತ್ರಮಾರ್ಗಾನಭಿ ದರ್ಶಯಂತೌ ॥೧೫೫॥

ಮೊದಲಿಗೆ ಭೀಮ ವಿಷ್ಣುಗುಣ ಪ್ರತಿಪಾದಕ ಶಾಸ್ತ್ರದಿಂದ ಶಿವಭಕ್ತನಾದ ಜರಾಸಂಧನನ್ನು ವಾದ ಯುದ್ಧದಲ್ಲಿ ಗೆದ್ದ. ಬಳಿಕ ಇಬ್ಬರೂ ಗದೆಗಳಿಂದ ನಾನಾ ವರಸೆಗಳನ್ನು ಪ್ರದರ್ಶಿಸುತ್ತ ಹೋರಾಡಿದರು.

ತಯೋರ್ಗದೇ ತೇಽಶನಿಸನ್ನಿಕಾಶೇ
ಚೂರ್ಣೀಕೃತೇ ದೇಹಮಹಾದ್ರಢಿಮ್ನಾ ।
ಅನ್ಯೋನ್ಯಯೋರ್ವಕ್ಷಸಿ ಪಾತಿತೇ ರುಷಾ
ಯಥಾಶ್ಮನೋಃ ಪಾಂಸುಪಿಂಡೌ ಸುಮುಕ್ತೌ ॥೧೫೬॥

ವಜ್ರಾಯುಧದಂತೆ ಕಠಿಣವಾದ ಗದೆಗಳನ್ನು ಅವರು ಕೋಪದಿಂದ ಪರಸ್ಪರ ಎದೆಗಳ ಮೇಲೆ ಎಸೆದಾಗ ಮೈಯ ಮಹಾ ಕಾಠಿನ್ಯದಿಂದ ಆ ಗದೆಗಳೇ ಕಲ್ಲು ಬಂಡೆಗಳ ಮೇಲೆ ಎಸೆದ ಮಣ್ಣಹೆಂಟೆಗಳಂತೆ ಪುಡಿಯಾದುವು.

ಸಂಚೂರ್ಣಿತಗದೌ ವೀರೌ ಮುಷ್ಟಿಭಿರ್ಜಘ್ನತುರ್ಮಿಥಃ ।
ಬ್ರಹ್ಮಾಂಡಸ್ಫೋಟಸಂಕಾಶೈರ್ಯಥಾ ಕೇಶವಕೈಟಭೌ ॥೧೫೭॥

ಗದೆಗಳು ಪುಡಿಯಾದಾಗ ಆ ವೀರರು ವಿಷ್ಣು ಕೈಟಭರಂತೆ ಬ್ರಹ್ಮಾಂಡ

ಸ್ಫೋಟಕಾರಿಗಳಂತಿರುವ ಮುಷ್ಟಿಗಳಿಂದ ಪರಸ್ಪರ ಹೊಡೆದರು.

ಚಚಾಲ ಪೃಥ್ವೀ ಗಿರಯಶ್ಚ ಚೂರ್ಣಿತಾಃ
ಕುಲಾಚಲಾಶ್ಚೇಲುರಲಂ ವಿಚುಕ್ಷುಭುಃ ।
ಸಮಸ್ತವಾರಾಂಪತಯಃ ಸುರಾಸುರಾ
ವಿರಿಂಚಶರ್ವಾದಯ ಆಸದನ್ನಭಃ ॥೧೫೫॥

ಆ ಮುಷ್ಟಿ ಯುದ್ಧದ ರಭಸಕ್ಕೆ ಭೂಮಿ ನಡುಗಿತು. ಬೆಟ್ಟಗಳು ಪುಡಿಯಾದುವು. ಕುಲಪರ್ವತಗಳೂ ಚಲಿಸಿದುವು. ಸಕಲ ಸಮುದ್ರಗಳೂ ಕ್ಷೋಭೆಗೊಂಡುವು. ಬ್ರಹ್ಮರುದ್ರಾದಿಗಳೂ ಸಕಲ ದೇವಾಸುರರೂ ಆಕಾಶದಲ್ಲಿ ನೆರೆದರು.

ಸುರಾಸ್ತು ಭೀಮಸ್ಯ ಜಯಾಭಿಕಾಂಕ್ಷಿಣ-
ಸ್ತಥಾಸುರಾದ್ಯಾ ಮಗಧಾಧಿಪಸ್ಯ ।
ಪಶ್ಯಂತಿ ಸರ್ವೇ ಕ್ರಮಶೋ ಬಲಂ ಸ್ವಂ
ಸಮಾದದೇ ಮಾರುತನಂದನೋಽಪಿ ॥೧೫೬॥

ದೇವತೆಗಳು ಭೀಮನ ಜಯಾಕಾಂಕ್ಷಿಗಳು ಅಸುರರು ಮುಂತಾದವರು ಜರಾಸಂಧನ ಜಯಾಕಾಂಕ್ಷಿಗಳು. ಎಲ್ಲರೂ ಯುದ್ಧವನ್ನು ವೀಕ್ಷಿಸಿದರು. ಭೀಮ ತನ್ನ ಬಲವನ್ನು ಕ್ರಮವಾಗಿ ಆದಾನದಿಂದ ವ್ಯಕ್ತಮಾಡಿಕೊಳ್ಳತೊಡಗಿದ.

ಮುಖ್ಯಪ್ರಾಣನಿಗೆ ಅವತಾರಗಳಲ್ಲಿ ಮೂಲರೂಪದಷ್ಟೇ ಬಲವಿದೆ. ಆದರೆ ಅದು ಸದಾ ವ್ಯಕ್ತವಾಗಿರಬೇಕಾಗಿಲ್ಲ. ಶ್ರೀಹರಿಯ ಬಲ ಮಾತ್ರ ಸದಾ ವ್ಯಕ್ತ. ವಾಯುದೇವ ತನ್ನ ಬಲವನ್ನು ಕೆಲವೊಮ್ಮೆ ಸ್ವೇಚ್ಛೆಯಿಂದ ವ್ಯಕ್ತಮಾಡಿಕೊಳ್ಳುತ್ತಾನೆ. ಕೆಲವೊಮ್ಮೆ ಅದು ಸ್ವಾಭಾವಿಕವಾಗಿಯೆ ವ್ಯಕ್ತವಾಗಿರುತ್ತದೆ. ಇನ್ನು ಕೆಲವೊಮ್ಮೆ ಕೇವಲ ಮೂಲರೂಪ ಸ್ಮರಣೆ ಮಾಡಿದರೆ ಸಾಕು, ಇಚ್ಛೆಮಾಡದೆಯೆ ಬಲ ವ್ಯಕ್ತವಾಗುತ್ತದೆ. ಇದು ಆದಾನ. ಪ್ರಕೃತದಲ್ಲಿ ಭೀಮ ತನ್ನ ಮೂಲರೂಪದ ಶಕ್ತಿಯನ್ನು ಸ್ಮರಿಸಿದೊಡನೆ ಶಕ್ತಿ ವ್ಯಕ್ತವಾಯಿತು.

ಮಾನಯಿತ್ವಾ ವರಂ ಧಾತುರ್ದಿವಸಾನ್ ದಶ ಪಂಚ ಚ ।
ವಾಸುದೇವಾಜ್ಞಯಾ ಭೀಮಃ ಶತ್ರುಂ ಹಂತುಂ ಮನೋ ದಧೇ ॥೧೬೦॥

ಭೀಮ ಹದಿನೈದು ದಿನಗಳ ಕಾಲ ಯುದ್ಧಮಾಡಿ ಬ್ರಹ್ಮನ ವರಕ್ಕೆ ಮಾನ್ಯತೆ ನೀಡಿ ಕೃಷ್ಣನ ಆಜ್ಞೆಯಂತೆ ಶತ್ರುವನ್ನು ಕೊಲ್ಲಲು ಸಂಕಲ್ಪ ಮಾಡಿದ.

ಬ್ರಹ್ಮನ ವರಕ್ಕೆ ಮಾನ್ಯತೆ ನೀಡಿ ಹದಿನೈದು ದಿನ ಯುದ್ಧ ಮಾಡಿದ್ದಲ್ಲ. 'ಭೀಮ ನನ್ನಿದಿರು ಒಂದು ಕ್ಷಣವೋ ಅರ್ಧಕ್ಷಣವೋ ನಿಲ್ಲಬಲ್ಲ' ಎಂದು

ಜರಾಸಂಧ ತನ್ನ ಪೌರುಷವನ್ನು ಹೇಳಿಕೊಂಡಿದ್ದಕ್ಕೆ ಭೀಮ ನಿರಂತರವಾಗಿ ಹದಿನೈದು ದಿನ ಹಗಲುರಾತ್ರಿ, ಆಹಾರ ನಿದ್ರೆಗಳಿಲ್ಲದೆ ಯುದ್ಧ ಮಾಡಿದ. ಆಗ ಕೇವಲ ತನ್ನ ಯುದ್ಧ ಕೌಶಲವನ್ನಷ್ಟೇ ತೋರಿದ್ದ. ಕೊನೆಯಲ್ಲಿ ಕೃಷ್ಣನ ಆಜ್ಞೆಯಂತೆ ಬ್ರಹ್ಮನ ವರವನ್ನು ಮಾನ್ಯ ಮಾಡುವುದಕ್ಕಾಗಿ ಕೊಲ್ಲಲು ಸಂಕಲ್ಪಿಸಿದ. ಮಹಾಭಾರತದಲ್ಲಿ ಹಾಗೇ ಹೇಳಿದೆ.

ಕಾರ್ತಿಕಸ್ಯತು ಮಾಸಸ್ಯ ಪ್ರವೃತ್ತಂ ಪ್ರಥಮೇಽಹನಿ।
ತದಾ ತದ್ ಯುದ್ಧಮಭವತ್ ದಿನಾನಿ ದಶ ಪಂಚ ಚ।
ಅನಾಹಾರಂ ದಿವಾರಾತ್ರ ಮವಿಶ್ರಾಂತ ಮವರ್ತತ॥ (ಸಭಾ 24.33)

ಬ್ರಹ್ಮನ ವರವೆಂದರೆ, ಹಿಂದೆ ಜರಾಸಂಧ ಮಥುರೆಯನ್ನು ಮುತ್ತಿದಾಗ ಶ್ರೀಕೃಷ್ಣ ಅವನನ್ನೇಕೆ ಕೊಲ್ಲಲಿಲ್ಲ ಎಂಬ ಪ್ರಶ್ನೆಗೆ ಮಹಾಭಾರತ ಹೀಗೆ ಸಮಾಧಾನ ನೀಡಿದೆ.

ನಾತ್ಮನಾऽऽತ್ಮವತಾಂ ಮುಖ್ಯ ಇಯೇಷ ಮಧುಸೂದನಃ।
ಬ್ರಾಹ್ಮಣಾಜ್ಞಾಂ ಪುರಸ್ಕೃತ್ಯ ಹಂತುಂ ಹಲಧರಾನುಜಃ॥ (ಸಭಾ 22.46)

ಇಲ್ಲಿ ಲಕ್ಷಾಲಂಕಾರ ಕೊಟ್ಟ ವಿವರಣೆಯಂತೆ 'ಬ್ರಾಹ್ಮಣಾಜ್ಞೆ' ಎಂದರೆ ಬ್ರಹ್ಮನ ವರ, ಬ್ರಹ್ಮನ ಆಪೇಕ್ಷೆ, ವಾಯುವೆ ಭೀಮರೂಪದಿಂದ ಜರಾಸಂಧನನ್ನು ಕೊಲ್ಲಲಿ ಎಂದು. ಭೀಮ ಈಗ ಆ ಬ್ರಹ್ಮವರವನ್ನು ಮಾನ್ಯ ಮಾಡುತ್ತ ಕೊಲ್ಲಲು ಸಂಕಲ್ಪಿಸಿದ.

ಭಾಗವತದಲ್ಲಿ ಪ್ರಕ್ಷಿಪ್ತ ಶ್ಲೋಕ ಹೇಳುವಂತೆ ಭೀಮಜರಾಸಂಧರು ರಾತ್ರಿ ಯುದ್ಧ ಮಾಡುತ್ತಿರಲಿಲ್ಲ, ಮಿತ್ರರಂತಿದ್ದರು. ಇಪ್ಪತ್ತೇಳು ಹಗಲುಗಳಲ್ಲಿ ಯುದ್ಧ ಮಾಡಿದರು. ನಿರ್ಣಯ ಮಹಾಭಾರತದ ಹೇಳಿಕೆಯನ್ನೆ ಮನ್ನಿಸಿದೆ. ಅಲ್ಲಿ ಹೇಳುವಂತೆ ಕಾರ್ತಿಕ ಪ್ರತಿಪದೆಯಂದು ಯುದ್ಧ ಪ್ರಾರಂಭ. ಚತುರ್ದಶಿ ರಾತ್ರಿ ಜರಾಸಂಧ ಕುಸಿಯಲು ಪ್ರಾರಂಭಿಸಿದ. ಭೀಮ ಇನ್ನೂ ಹೆಚ್ಚು ಬಲಿಷ್ಠನಾದ. ಅಮಾವಾಸ್ಯೆ ದಿನದಲ್ಲಿ ಶತ್ರುವನ್ನು ಕೊಲ್ಲಲು ಸಂಕಲ್ಪಿಸಿದ.

ಜರಾಸಂಧ ವಧೆ

ಸ ಪ್ರಣಮ್ಯ ಹೃಷೀಕೇಶಂ ಹರ್ಷಾದಾಶ್ಲಿಷ್ಯ ಫಲ್ಗುನಂ।
ರಿಪುಂ ಜಗ್ರಾಹ ಮುಕುಟೇ ವಾರಣಂ ಮೃಗರಾಡಿವ ॥೧೬೧॥

ಭೀಮ ಸಂತೋಷದಿಂದ ಕೃಷ್ಣನನ್ನು ನಮಿಸಿ ಅರ್ಜುನನನ್ನು ಆಲಿಂಗಿಸಿ ಸಿಂಹ ಆನೆಯನ್ನು ಹೇಗೋ ಹಾಗೆ ಶತ್ರುವನ್ನು ತಲೆಯಲ್ಲಿ ಹಿಡಿದ.

'ಕಿರೀಟದಲ್ಲಿ' ಎಂದು ಮೂಲದಲ್ಲಿ ಇದೆ. ಮಹಾಭಾರತದಲ್ಲಿ 'ಅವಮುಚ್ಯ ಕಿರೀಟಂ' ಕಿರೀಟವನ್ನು ಕೆಳಗಿಟ್ಟು ಯುದ್ಧಕ್ಕೆ ನಿಂತಿದ್ದ, ಜರಾಸಂಧ. ಅದರಿಂದ 'ಕಿರೀಟ'ವೆಂದರೆ ಕಿರೀಟದ ಸ್ಥಾನ, ತಲೆ.

ಪೃಷ್ಠೇಽಸ್ಯ ಜಾನುಮಾಧಾಯ ಕೂರ್ಮದೇಶಂ ಬಭಂಜ ಹ।
ಮೃತಿಕಾಲೇ ಪುನರ್ದೇಹಂ ವಿದದಾರ ಯಥಾ ಪುರಾ ॥೧೬೨॥

ಭೀಮ ಜರಾಸಂಧನ ಬೆನ್ನಮೇಲೆ ಮೊಣಕಾಲಿಟ್ಟು ಸೊಂಟವನ್ನು ಮುರಿದ. ಹಿಂದೆ ಹುಟ್ಟಿದಾಗ ಹೇಗಿತ್ತೋ ಹಾಗೇ ಸಾಯುವಾಗ ಇರುವಂತೆ ಶರೀರವನ್ನು ಎರಡು ಭಾಗವಾಗಿ ಸೀಳಿದ.

ಮರ್ಮಣ್ಯೇವ ನ ಹಂತವ್ಯೋ ಮಯಾಯಮಿತಿ ಮಾರುತಿಃ।
ಸ್ವಪೌರುಷಪ್ರಕಾಶಾಯ ಬಭಂಜೈನಮಮರ್ಮಣಿ ॥೧೬೩॥

ನಾನು ಈತನನ್ನು ಮರ್ಮಸ್ಥಳದಲ್ಲಿ ಹೊಡೆಯಬಾರದೆಂದು ಭೀಮ ತನ್ನ ಪೌರುಷವನ್ನು ಮೆರೆಸುವುದಕ್ಕಾಗಿ ಮರ್ಮವಲ್ಲದ ಸ್ಥಾನದಲ್ಲಿಯೆ ಅವನನ್ನು ಮುರಿದ.'

ಮಹಾಭಾರತದಲ್ಲಿಯೂ ಭಾಗವತದಲ್ಲಿಯೂ ಮೇಲುನೋಟಕ್ಕೆ ಭೀಮನಿಗೆ ಜರಾಸಂಧನ ಮರ್ಮಸ್ಥಾನ ತಿಳಿದಿರಲಿಲ್ಲ. ಭಾಗವತದಲ್ಲಿ ಪ್ರಕ್ಷಿಪ್ತ ಶ್ಲೋಕ ಒಂದು, 'ಕೃಷ್ಣ! ನನಗೆ ಜರಾಸಂಧನನ್ನು ಯುದ್ಧದಲ್ಲಿ ಗೆಲ್ಲಲು ಶಕ್ತಿ ಇಲ್ಲ' ಎಂದು ಭೀಮ ಹೇಳಿದನೆಂದಿದೆ. ಬಳಿಕ ಕೃಷ್ಣ ಒಂದು ಹುಲ್ಲು ಕಡ್ಡಿಯನ್ನು ಎರಡಾಗಿ ಸೀಳಿ ತೋರಿಸಿದ. ಅದನ್ನು ಕಂಡು ಭೀಮ ಜರಾಸಂಧನನ್ನು ಕಾಲಲ್ಲಿ ಹಿಡಿದು ಎರಡಾಗಿ ಸೀಳಿದ. ಆದರೆ ತಿರುಗಿ ಆ ಎರಡು ಸೀಳುಗಳು ಒಂದಾಗಿ ಸೇರಿದುವು. ಜರಾಸಂಧ ಪುನಃ ಯುದ್ಧಕ್ಕೆ ನಿಂತ. ಕೃಷ್ಣ ಈಗ ಹುಲ್ಲುಕಡ್ಡಿಯನ್ನು ಸೀಳಿ ಎರಡು ಸೀಳುಗಳನ್ನು ವ್ಯತ್ಯಾಸವಾಗಿ ಸೇರಿಸಿ ತೋರಿಸಿದ. ಭೀಮ ಜರಾಸಂಧನ ಶರೀರವನ್ನು ಹಾಗೇ ಮಾಡಿದ ಎಂದಿದೆ. ಆದರೆ ಅದೇ ಮಹಾಭಾರತ-

ಜಾನುಭ್ಯಾಂ ಭರತರ್ಷಭಃ।
ಬಭಂಜ ಪೃಷ್ಠಂ ಸಂಕ್ಷಿಪ್ಯ ನಿಷ್ಪಿಷ್ಯ ವಿನನಾದ ಚ।(ಸಭಾ 25.10)
'ಬೆನ್ನ ಮೇಲೆ ಮೊಣಕಾಲೂರಿ ಸೊಂಟ ಮುರಿದನೆಂ'ದು ಹೇಳಿ,
ಕರೇ ಗೃಹೀತ್ವಾ ಚರಣಂ ದ್ವಿಧಾ ಚಕ್ರೇ ಮಹಾಬಲಃ।
'ಶರೀರವನ್ನು ಎರಡಾಗಿ ಸೀಳಿದ' ಎಂದಿದೆ.

ಆದರಿಂದ ಶ್ರೀಕೃಷ್ಣ ಹುಲ್ಲುಕಡ್ಡಿಯನ್ನು ಸೀಳಿದುದು ಭೀಮನಿಗೆ ಶತ್ರುವಿನ ಮರ್ಮಸ್ಥಳ ಗೊತ್ತಿರಲಿಲ್ಲ ಎಂದಲ್ಲ. ಕೇವಲ ಹಾಗೆ ಮಾಡಲು

ಪ್ರೋತ್ಸಾಹವಿತ್ತು ಹುರಿದುಂಬಿಸುವುದಕ್ಕಾಗಿ ಹಾಗೆ ಮಾಡಿದ್ದ. ವಸ್ತುತಃ ಭೀಮ ತನ್ನ ಪೌರುಷ ಮೆರೆಸುವುದಕ್ಕಾಗಿಯೆ ಮರ್ಮಸ್ಥಾನವಲ್ಲದ ಸೊಂಟವನ್ನು ಮುರಿದ. ಬಳಿಕ ನನಗೆ ಮರ್ಮಸ್ಥಾನವೂ ಗೊತ್ತೆಂದು ತೋರಲು ಶರೀರವನ್ನು ಸೀಳಿದ. ಇದೇ ಮಹಾಭಾರತ ಭಾಗವತಗಳ ಆಂತರ್ಯ.

ಭಜ್ಯಮಾನೇ ಶರೀರೇಽಸ್ಯ ಬ್ರಹ್ಮಾಂಡಸ್ಫೋಟಸನ್ನಿಭಃ।
ಬಭೂವ ರಾವೋ ಯೇನೈವ ತ್ರಸ್ತಮೇತಜ್ಜಗತ್ತ್ರಯಂ ॥೧೬೪॥

ಜರಾಸಂಧನ ಶರೀರ ಮುರಿದಾಗ ಬ್ರಹ್ಮಾಂಡ ಸ್ಫೋಟಕದಂಥ ಶಬ್ದ ಉಂಟಾಯಿತು. ಅದರಿಂದ ಮೂಲೋಕ ನಡುಗಿತು.

ನಿಹತ್ಯ ಕೃಷ್ಣಸ್ಯ ರಿಪುಂ ಸ ಭೀಮಃ
ಸಮರ್ಪಯಾಮಾಸ ತದರ್ಚನಂ ಹರೇಃ।
ಕೃತಾಂ ಹಿ ಭೀಮೇನ ಸಮರ್ಚನಾಂ ತಾಂ
ಸಮಕ್ಷಮಾದಾತುಮಿಹಾಗತೋ ಹ್ಯಜಃ ॥೧೬೫॥

ಕೃಷ್ಣನ ಶತ್ರುವನ್ನು ಭೀಮ ಕೊಂದು ಆ ಆರಾಧನೆಯನ್ನು ಕೃಷ್ಣನಿಗೆ ಅರ್ಪಿಸಿದ. ಭೀಮ ಮಾಡುವ ಆ ಆರಾಧನೆಯನ್ನು ಪ್ರತ್ಯಕ್ಷ ಸ್ವೀಕರಿಸುವುದಕ್ಕಾಗಿಯೆ ಅಲ್ಲಿಗೆ ಕೃಷ್ಣ ಬಂದಿದ್ದ.

ಇದನ್ನು ಪಂಡಿತಾಚಾರ್ಯರು ಹರಿವಾಯುಸ್ತುತಿಯಲ್ಲಿ- ಪ್ರತ್ಯಕ್ಷ ಭೂತಂ ನಿಖಿಲಮಖಭುಜಂ ತರ್ಪಯಾಮಾಸಿಥ। ಎಂದು ಸ್ತುತಿಸಿದ್ದಾರೆ.

ಸ್ವೀಕೃತ್ಯ ಪೂಜಾಂ ಚ ವೃಕೋದರಸ್ಯ
ದೃಢಂ ಸಮಾಶ್ಲಿಷ್ಯ ಚ ತಂ ಜನಾರ್ದನಃ।
ಪ್ರೀತೋ ನಿತಾಂತಂ ಪುನರೇವ ಕೃಷ್ಣಂ
ನನಾಮ ಭೀಮಃ ಪ್ರಣತೋಽರ್ಜುನೇನ ॥೧೬೬॥

ಭೀಮ ಮಾಡಿದ ಆ ಆರಾಧನೆಯನ್ನು ಶ್ರೀಕೃಷ್ಣ ಸ್ವೀಕರಿಸಿ ಅವನನ್ನು ಗಾಢವಾಗಿ ಆಲಿಂಗಿಸಿ ಬಲು ಸಂತುಷ್ಟನಾದ. ಅರ್ಜುನನೂ ಸಂತುಷ್ಟನಾಗಿ ಭೀಮನನ್ನು ನಮಿಸಿದ. ಭೀಮ ಶ್ರೀಕೃಷ್ಣನನ್ನು ನಮಿಸಿದ.

ಭೀಮನ ಈ ಸೇವೆಯಿಂದಾದಷ್ಟು ಸಂತೋಷ ಶ್ರೀಕೃಷ್ಣನಿಗೆ ಮುಂದೆ ನಡೆದ ರಾಜಸೂಯಯಾಗದಿಂದಲೂ ಆಗಿರಲಿಲ್ಲವಂತೆ! ಪಂಡಿತಾಚಾರ್ಯರು ಹೇಳುತ್ತಾರೆ-

ತಾವತ್ಯಾಯೋಜಿ ತೃಪ್ತ್ಯಾಕಿಮು ವದ ಭಗವನ್
ರಾಜಸೂಯಾಶ್ವಮೇಧೇ ?

ಜಗ್ಮುಃ ಸುರಾಶ್ಚಾತಿತರಾಂ ಪ್ರಹೃಷ್ಟಾ
ಬ್ರಹ್ಮಾದಯೋ ದೀನತರಾಶ್ಚ ದೈತ್ಯಾಃ ।
ಬಲಾದುಮೇಶಸ್ಯ ವರೇ ಪ್ರಭಗ್ನೇ
ವೃಕೋದರೇಣಾಚ್ಯುತಸಂಶ್ರಯೇಣ ॥೧೬೭॥

ಶ್ರೀಕೃಷ್ಣನನ್ನಾಶ್ರಯಿಸಿದ್ದ ಭೀಮ ಹೀಗೆ ತನ್ನ ಬಲದಿಂದ ಶಿವನ ವರವನ್ನು ಭಂಗಗೊಳಿಸಿದಾಗ ಬ್ರಹ್ಮಾದಿ ದೇವತೆಗಳು ಬಹಳ ಸಂತುಷ್ಟರಾಗಿ ಹೋದರು. ದೈತ್ಯರು ಬಹಳ ದುಃಖಿತರಾದರು.

ಸುತೋ ಯಯೌ ಶರಣಂ ತಾನ್ ರಮೇಶ-
ಭೀಮಾರ್ಜುನಾನ್ ಸಹದೇವೋಽಸ್ಯ ಧೀಮಾನ್ ।
ರಥಂ ಸ್ವಸಾರಂ ಚ ದದೌ ಸ ಮಾರುತೇ-
ರ್ನನಾಮ ಕೃಷ್ಣಂ ಪರಯೈವ ಭಕ್ತ್ಯಾ ॥೧೬೮॥

ಜರಾಸಂಧನ ಮಗನಾದ ಸಹದೇವ ಬುದ್ಧಿಯುಳ್ಳವ. ಅವನು ಶ್ರೀಕೃಷ್ಣ ಭೀಮ ಅರ್ಜುನರನ್ನು ಮೊರೆಹೊಕ್ಕ. ಭೀಮನಿಗೆ ತನ್ನ ತಂಗಿಯನ್ನೂ ರಥವನ್ನೂ ಕೊಟ್ಟ. ಪರಮಭಕ್ತಿಯಿಂದ ಶ್ರೀಕೃಷ್ಣನನ್ನು ನಮಿಸಿದ.

ರಥೋ ಹ್ಯಸೌ ವಸುನಾ ವಾಸುದೇವಾತ್
ಶಕ್ರಾಂತರಾಪ್ತೋ ವಸುವಂಶಜತ್ವಾತ್ ।
ಜರಾಸುತಸ್ಯಾಸ ವೃಕೋದರಸ್ತಂ
ಹರೇ ರಥಂ ಪ್ರಾರ್ಪಯಾಮಾಸ ತಸ್ಮೈ ॥೧೬೯॥

ಈ ರಥ ಹಿಂದೆ ಶ್ರೀಹರಿ ದೇವೇಂದ್ರನ ಮೂಲಕ ವಸುಚಕ್ರವರ್ತಿಗೆ ನೀಡಿದ್ದ ರಥವಾಗಿತ್ತು. ಜರಾಸಂಧ ವಸುಚಕ್ರವರ್ತಿಯ ವಂಶದವನಾದ್ದರಿಂದ ಅವನ ವಶಕ್ಕೆ ಈ ರಥ ಬಂದಿತ್ತು. ಹರಿಯ ಈ ರಥವನ್ನು ಭೀಮ ಕೃಷ್ಣನಿಗೇ ಅರ್ಪಿಸಿದ.

ದೇವಾಸುರ ಸಂಗ್ರಾಮದಲ್ಲಿ ಶ್ರೀಹರಿ ದೇವೇಂದ್ರನಿಗೆ ಈ ರಥವನ್ನು ಕೊಟ್ಟಿದ್ದ. ಅದನ್ನು ಇಂದ್ರ ತನ್ನ ಮಿತ್ರನಾದ ವಸುಚಕ್ರವರ್ತಿಗೆ ನೀಡಿದ. ಈ ರಥದಿಂದ 'ಉಪರಿ' ಮೇಲೆ ಆಕಾಶದಲ್ಲಿ 'ಚರ' ಸಂಚರಿಸಿದ್ದರಿಂದ ಉಪರಿಚರ ವಸು ಎನಿಸಿದ ಆತ. ಅವನ ವಂಶದವನು ಜರಾಸಂಧನಾದ್ದರಿಂದ ಅವನ ವಶಕ್ಕೆ ರಥ ಬಂದಿತ್ತು. ಈಗ ಭೀಮನ ವಶಕ್ಕೆ ಬಂದಿತು. ಭೀಮ ಧರ್ಮರಾಜನಿಗೆ ಅರ್ಪಿಸಿದ. ಧರ್ಮರಾಜ ಶ್ರೀಕೃಷ್ಣನಿಗೆ ಅರ್ಪಿಸಿದ. ಅದರಿಂದ ಭೀಮನೆ ತನ್ನ ಅಣ್ಣನಾದ ಧರ್ಮರಾಜನ ಮೂಲಕ ಕೃಷ್ಣನಿಗೆ ಅರ್ಪಿಸಿದಂತಾಯಿತು.

ಸಹದೇವನಿಗೆ ಸಹದೇವನ ತಂಗಿ

ಕೃಷ್ಣೋಽಸ್ಮರದ್ ಗರುಡಂ ಸ ಧ್ವಜೋಽಭೂತ್
ರಥಂ ಕೃಷ್ಣೋಽಥಾರುಹತ್ ಪಾಂಡವಾಭ್ಯಾಂ।
ಭೀಮಃ ಕನ್ಯಾಂ ಸಹದೇವಸ್ಯ ಹೇತೋಃ
ಸಮಗ್ರಹೀದನುಜಸ್ಯಾತ್ಮನಃ ಸಃ ॥೧೭೦॥

ಶ್ರೀಕೃಷ್ಣ ಗರುಡನನ್ನು ಸ್ಮರಿಸಿದ. ಒಡನೆ ಗರುಡ ಧ್ವಜದಲ್ಲಿ ಬಂದು ಕುಳಿತ. ಬಳಿಕ ಭೀಮಾರ್ಜುನರೊಡನೆ ಶ್ರೀಕೃಷ್ಣ ರಥವೇರಿದ. ಭೀಮ ಕನ್ಯೆಯನ್ನು ತಮ್ಮನಾದ ಸಹದೇವನಿಗಾಗಿ ಸ್ವೀಕರಿಸಿದ.

ಸಹದೇವನಿಗೆ ಇದು ಎರಡನೆ ಮದುವೆ. ದ್ರೌಪದಿ ಮೊದಲನೆ ಹೆಂಡತಿ.

ನಕುಲಸ್ಯಾದಾನ್ಮದ್ರರಾಜೋ ಹಿ ಪೂರ್ವಂ
ಸ್ವೀಯಾಂ ಕನ್ಯಾಂ ಸಾ ತಥೈಷಾಪ್ಯುಷಾ ಹಿ।
ಏಕಾ ಪೂರ್ವಂ ತೇ ಅಶ್ವಿನೋಶ್ಚೈವ ಭಾರ್ಯಾ
ಯಮೌ ರೇಮಾತೇ ಯದುಷಾ ಅಶ್ವಿಭಾರ್ಯಾ ॥೧೭೧॥

ನಕುಲನಿಗೆ ಪೂರ್ವದಲ್ಲಿಯೆ ಮದ್ರರಾಜ ತನ್ನ ಮಗಳನ್ನು ಮದುವೆ ಮಾಡಿಕೊಟ್ಟಿದ್ದ. ಅವಳೂ ಈ ಜರಾಸಂಧನ ಮಗಳೂ ಒಬ್ಬಳೇ, ಹಿಂದೆಯೂ ಅಶ್ವಿನೀ ದೇವತೆಗಳ ಹೆಂಡತಿಯಾಗಿದ್ದ ಉಷೆಯೆ. ಅವರಿಬ್ಬರೊಡನೆ ನಕುಲ ಸಹದೇವರು ರಮಿಸಿದರು. ಅನಿರುದ್ಧಪತ್ನಿ ಉಷೆ ಬೇರೆ. ಅಶ್ವಿನೀದೇವತೆಗಳ ಪತ್ನಿ ಉಷಃಕಾಲದ ಅಭಿಮಾನಿನಿ ಉಷಸ್.

ಅಣ್ಣನಾದ ನಕುಲ ಹಿಂದೆಯೆ ಮದ್ರರಾಜನಾದ ಶಲ್ಯನ ಮಗಳನ್ನು ಮದುವೆಯಾಗಿದ್ದಾನೆ. ಆದ್ದರಿಂದ ತಮ್ಮನಾದ ಸಹದೇವ ಜರಾಸಂಧನ ಮಗಳನ್ನು ಮದುವೆಯಾಗುತ್ತಾನೆ.

ಮಹಾಭಾರತ ಪ್ರಚಲಿತ ಪಾಠದಲ್ಲಿ ಮದ್ರರಾಜಕುಮಾರಿ ವಿಜಯಾದೇವಿಯನ್ನು ಸಹದೇವ ಮದುವೆಯಾಗಿ ಸುಹೋತ್ರನೆಂಬ ಮಗನನ್ನು ಪಡೆಯುತ್ತಾನೆ. ಗರುಡಪುರಾಣವೂ 'ಶಲ್ಯಾತ್ಮಜಾ ಸಹದೇವಸ್ಯ ಭಾರ್ಯಾ' ಎಂದು ಅದನ್ನೇ ಹೇಳುತ್ತಿದೆ. ಮಹಾಭಾರತ ದ ಔತ್ತರೇಯ ಪಾಠದಲ್ಲಿ ಮದ್ರರಾಜನ ಹೆಸರು ದ್ಯುತಿಮಂತ. ವಿಜಯಾದೇವಿಗೇ ಪಾರ್ವತಿ ಎಂದು ಇನ್ನೊಂದು ಹೆಸರು. 'ಸಹದೇವಾತ್ ಸುಹೋತ್ರಂ ತು ವಿಜಯಾಸೂತ ಪಾರ್ವತೀ' ಎಂದು ಭಾಗವತ ನವಮಸ್ಕಂಧ ಹೇಳುತ್ತಿದೆ. ಪಾರ್ವತಿ ತಿಲೋತ್ತಮೆಯ ಅವತಾರ. ಅದರಿಂದ ಮದ್ರರಾಜನ ಕುಮಾರಿ

ಉಷೆಯ ಅವತಾರಭೂತಳು ನಕುಲಪತ್ನಿ ಇನ್ನೊಬ್ಬಳಿರಬೇಕು. ಅಥವಾ ಅಶ್ವಿನೀದೇವತೆಗಳಿಗೆ ಮೂಲರೂಪದಲ್ಲಿ ಇಬ್ಬರಿಗೂ ಒಂದೇ ಹೆಸರಿರುವಂತೆ ಅವತಾರದಲ್ಲಿಯೂ ಕೆಲವೊಮ್ಮೆ ನಕುಲ ಸಹದೇವ ನಾಮಗಳು ಪರಸ್ಪರ ಅದಲು ಬದಲಾಗಲೂಬಹುದು. ಸಭಾಪರ್ವದಲ್ಲಿ ಶಕುನಿಪುತ್ರನಾದ ಉಲೂಕನನ್ನು ಕೊಲ್ಲುವುದಾಗಿ ನಕುಲ ಪ್ರತಿಜ್ಞೆ ಮಾಡುತ್ತಾನೆ. ಶಲ್ಯಪರ್ವದಲ್ಲಿ ಸಹದೇವ ಉಲೂಕನನ್ನು ಕೊಲ್ಲುತ್ತಾನೆ. ಈ ವಿರೋಧವನ್ನು ಹೀಗೇ ಪರಿಹರಿಸಬೇಕಾಗುತ್ತದೆ.

[1]ಅನಿರುದ್ಧನ ಹೆಂಡತಿಯ ಹೆಸರೂ ಉಷೆ ಎಂದಿದೆ. ಅವಳು ಬೇರೆ, ಅಶ್ವಿನೀದೇವತೆಗಳ ಹೆಂಡತಿಯಾದ ಉಷೆ ಬೇರೆ. ಅಶ್ವಿನೀದೇವತೆಗಳ ಹೆಂಡತಿ 'ಉಷಸ್'. ಇದು ಸಕಾರಾಂತ ಶಬ್ದ. ಅನಿರುದ್ಧ ಪತ್ನಿ 'ಉಷಾ' ಇದು ಆಕಾರಾಂತ ಶಬ್ದ. ಅದರಿಂದ ಅನಿರುದ್ಧ ಪತ್ನಿ ಉಷೆ ಅಶ್ವಿನೀದೇವತೆಗಳ ಪತ್ನಿ ಹೇಗಾಗುವಳು ಎನ್ನುವ ಪ್ರಶ್ನೆಗೆ ಅವಕಾಶವಿಲ್ಲ.

[2]ಮೂಲದಲ್ಲಿ ಎರಡುಬಾರಿ 'ಉಷೆ ಅಶ್ವಿನೀದೇವತೆಗಳ ಭಾರ್ಯೆ' ಎಂದು ಹೇಳಿದ್ದೇಕೆ ಎಂಬ ಪ್ರಶ್ನೆ ಬಂದರೆ ಜರಾಸಂಧನ ಮಗಳನ್ನು ಭೀಮ ತನಗಾಗಿ ತರಲಿಲ್ಲ. ಅವಳು ಮೂಲದಲ್ಲಿ ಅಶ್ವಿನೀದೇವತೆಗಳ ಭಾರ್ಯೆ ಉಷೆಯಾದ್ದರಿಂದ ಎಂದು ಮೊದಲಿಗೆ ಹೇಳಿದೆ. ಮದ್ರರಾಜನ ಮಗಳೂ

---

1. ನನೂಷಾನಾಮ್ನ್ಯನಿರುದ್ಧಸ್ಯ ಪತ್ನೀ। ತಸ್ಯಾಃ ಕಥಮಶ್ವಿಭಾರ್ಯಾತ್ವಮಿತ್ಯದ ಆಹ ಯದುಷಾ ಇತಿ। ಅಶ್ವಿಭಾರ್ಯಾ ಉಷಾ ಉಷಃ ಕಾಲಾಭಿಮಾನಿತ್ವಾತ್ ಸಕಾರಾಂತೋಽಷಃಶಬ್ದವಾಚ್ಯಾ। ಅನಿರುದ್ಧ ಭಾರ್ಯಾ ತು ಆಕಾರಾಂತೋಽಷಾಶಬ್ದವಾಚ್ಯೇತಿ ತಯೋರ್ವಿಭಾಗ ಇತಿ ಭಾವಃ। ಅತೋ ನ ಪೌನರುಕ್ತ್ಯಮಿತಿ ಜ್ಞೇಯಂ। ಅತ ಏವ ಅನಿರುದ್ಧಶ್ಚ ತತ್ಸೂನುರುಷಾರಮಣ ಉಚ್ಯತ ಇತ್ಯನುಶಾಸನಂ।
-ವಾದಿರಾಜೀಯ

2. ನನು ನಕುಲಸ್ಯಾಗ್ರಜತ್ವಾತ್ ತದರ್ಥಂ ಸ್ವಾರ್ಥಂ ವಾ ಕನ್ಯಾಮಗೃಹೀತ್ವಾ ಕಿಮರ್ಥಂ ಭೀಮಃ ಸಹದೇವಾರ್ಥೇಽಗ್ರಹೀದಿತ್ಯತ ಆಹ ಯದುಷೇತಿ। ನನ್ವೇಕಸ್ಯಾ ಉಷಸಃ ಕಥಮುಭಯ ಭಾರ್ಯಾತ್ವಮಿತ್ಯತ ಆಹ ಏಕೇತಿ। ಯತಃ ಪೂರ್ವಮೇಕೈವೋಷಾ ಅಶ್ವಿನೋರ್ನೀತಭಾರ್ಯಾ ಅತಸ್ತೇ ಯಮೌ ರೇಮಾತೇ। ಯದ್ವಾನನೂಷಾ ಅನಿರುದ್ಧಭಾರ್ಯಾ ಕಥಮಶ್ವಿಭಾರ್ಯೇತಿ ಶಂಕಾಂ ಸ್ಪಷ್ಟಂ ಪದವಿಭಾಗ ಕರಣೇನ ವಾರಯತಿ ಯದಿತಿ। ಯದ್ಯಸ್ಮಾತ್ ಉಷಾಃ ಸಕಾರಾಂತೋಽಷಃ ಶಬ್ದವಾಚ್ಯಾಶ್ವಿಭಾರ್ಯಾ ಅತೋತ್ರ ನಾನಿರುದ್ಧಭಾರ್ಯೋಚ್ಯತೇ। ಉಷಾಹಿ ಇತ್ಯತ್ರಾಪಿ 'ಉಷಾಃ ಹಿ' ಇತಿ ಪದವಿಭಾಗ ಇತಿಭಾವಃ। ಯದ್ಯಪಿ ರಾತ್ರಿಮಾನಮಜಾನದ್ಬಿಸ್ತತೋ ನಾಮೇತ್ಯುಷಾ ಸ್ಮೃತೇತಿ ಛಾಂದೋಗ್ಯಭಾಷ್ಯೇ, ಸೂಷಾ ಚಮೇ ಸುದಿನಂ ಚಮೇ ಇತಿ ಶ್ರುತೌ ಚಾಶ್ವಿಭಾರ್ಯಾಯಾಮಪ್ಯಾಕಾರಾಂತೋಽಷಾಶಬ್ದಃ ಪ್ರಯುಕ್ತಃ। ಅತಏವ ಛಾಂದೋಗ್ಯಭಾಷ್ಯೇ ಟೀಕಾಯಾಂ ವ್ಯಾಸತೀರ್ಥಮುನಿಃ ಸೂಷಾ ಚ ಮ ಇತಿ ಪ್ರಯೋಗಪ್ರದರ್ಶನೇನಾಶ್ವಿಭಾರ್ಯಾಯಾಮಾಕಾರಾಂತೋಽಷಾಶಬ್ದಪ್ರಯೋಗಃ ಸಮರ್ಥಿತಃ। ತಥಾಪಿ ಬಹುಪ್ರಯೋಗಾಪೇಕ್ಷಯಾ ಏತದಿತಿ ಜ್ಞಾತವ್ಯಂ।
-ತಾಮ್ರಪರ್ಣೀಯ

ಜರಾಸಂಧನ ಮಗಳೂ ಒಬ್ಬಳೆ ಉಷೆ. ಅವಳೊಡನೆ ನಕುಲಸಹದೇವರು ಇಬ್ಬರು ರಮಿಸಿದುದು ಮೂಲದಲ್ಲಿಯೂ ಅವಳು ಇಬ್ಬರು ಅಶ್ವಿನೀದೇವತೆಗಳ ಭಾರ್ಯೆಯಾಗಿದ್ದುದರಿಂದ ಎಂದು ಎರಡನೆ ಬಾರಿ ಹೇಳಿದೆ ಎಂದು ಸಮಾಧಾನ.

'ರಾತ್ರಿಮಾನಮಜಾನದ್ಭಿಸ್ತತೋ ನಾಮೇತ್ಯುಷಾಸ್ಮೃತಾ'
ಎಂದು ಛಾಂದೋಗ್ಯ ಭಾಷ್ಯದಲ್ಲಿಯೂ,
'ಸೂಷಾ ಚಮೇ ಸುದಿನಂ ಚ ಮೇ'

ಎಂದು ರುದ್ರ ಚಮಕದಲ್ಲಿಯೂ ಅಶ್ವಿಭಾರ್ಯೆಯನ್ನು ಆಕಾರಾಂತ ಉಷಾ ಶಬ್ದದಿಂದ ಕರೆದಿರುವುದುಂಟು. 'ಸೂಷಾ ಚ ಮೇ' ಎಂಬ ವೈದಿಕ ಪ್ರಯೋಗದ ಆಧಾರದಿಂದ ಛಾಂದೋಗ್ಯಭಾಷ್ಯ ಟೀಕಾ ವ್ಯಾಸತೀರ್ಥೀಯದಲ್ಲಿ ಅಶ್ವಿನೀಭಾರ್ಯೆಗೆ ಆಕಾರಾಂತ ಉಷಾ ಶಬ್ದವೂ ನಾಮವಾಗಬಹುದೆಂದು ಸಮರ್ಥಿಸಲಾಗಿದೆ. ಆದರೂ ಬಹುಪ್ರಯೋಗಾನುಸಾರವಾಗಿ ಆಕಾರಾಂತ ಉಷಾಶಬ್ದ ಅನಿರುದ್ಧ ಪತ್ನಿಯ ನಾಮ. ಸಕಾರಾಂತ ಉಷಸ್ ಶಬ್ದ ಅಶ್ವಿನೀಭಾರ್ಯೆಯ ನಾಮ. ಅದರಿಂದ ಅನಿರುದ್ಧನ ಪತ್ನಿ ಅಶ್ವಿನೀಪತ್ನಿ ಹೇಗಾಗುತ್ತಾಳೆ ಎಂಬ ಪ್ರಶ್ನೆಗೆ ಅವಕಾಶವಿಲ್ಲ. - ತಾಮ್ರಪರ್ಣೀಯ.

ತತಃ ಕೃಷ್ಣಾಯಾಮಗ್ರಜಭ್ರಾತೃಭಾರ್ಯಾ
ವೃತ್ತಿಂ ಹಿ.ತೌ ಚಕ್ರತುರ್ಮಾದ್ರಿಪುತ್ರೌ ।
ಜರಾಸುತಸ್ಯಾತ್ಮಜಃ ಕೇಶವಾದೀನ್
ರತ್ನೈಃ ಸಮಭ್ಯರ್ಚ್ಯ ಯಯಾವನುಜ್ಞಯಾ ॥೧೭೨॥

ಎರಡನೆ ವಿವಾಹವಾದ ಬಳಿಕ ನಕುಲ ಸಹದೇವರು ದ್ರೌಪದಿಯನ್ನು ಅತ್ತಿಗೆ ಎಂದು ಪೂಜ್ಯ ಭಾವನೆಯಿಂದಲೆ ಕಾಣಲು ತೊಡಗಿದರು. ಜರಾಸಂಧ ಪುತ್ರ ಸಹದೇವ ಶ್ರೀಕೃಷ್ಣ ಭೀಮಾರ್ಜುನರನ್ನು ರತ್ನಗಳಿಂದ ಸತ್ಕರಿಸಿ ಅನುಜ್ಞೆಪಡೆದು ತನ್ನ ಅರಮನೆಗೆ ತೆರಳಿದ.

ನಕುಲ ಸಹದೇವರು ಎರಡನೆ ವಿವಾಹವಾದ ಬಳಿಕ ತಮ್ಮ ಸರದಿ ಬಂದಾಗಲೂ ಮೊದಲಿನಂತೆ ದ್ರೌಪದೀದೇಹದಲ್ಲಿ ಉಷೆಯ ಸಂಗವನ್ನು ಮಾಡುತ್ತಿರಲಿಲ್ಲ.

ತದಾಜ್ಞಯಾ ಪಿತೃಕಾರ್ಯಾಣಿ ಕೃತ್ವಾ
ತದಾಜ್ಞಯೈವಾಮುಚತ್ತಾನ್ ನೃಪಾಂಶ್ಚ ।
ತೈಃ ಸಂಸ್ತುತಃ ಕೇಶವೋ ಭೀಮ ಪಾರ್ಥ-
ಯುಕ್ತೋ ಯಯೌ ಭಕ್ತಿನಮ್ರೈರ್ಯಥಾವತ್ ॥೧೭೩॥

ಸಹದೇವ ಶ್ರೀಕೃಷ್ಣ ಭೀಮಾರ್ಜುನರ ಆಜ್ಞೆಯಿಂದ ಪಿತೃಕಾರ್ಯವನ್ನು ನಡೆಸಿ, ಅವರ ಆಜ್ಞೆಯಿಂದಲೆ ರಾಜರುಗಳನ್ನು ಬಂಧಮುಕ್ತರನ್ನಾಗಿ ಮಾಡಿದ. ಭಕ್ತಿ ನಮ್ರರಾದ ಆ ರಾಜರುಗಳಿಂದ ಶ್ರೀಕೃಷ್ಣ ಅವರ ಯೋಗ್ಯತಾನುಸಾರ ಸ್ತುತಿಸಲ್ಪಟ್ಟು ಭೀಮಾರ್ಜುನರಿಂದೊಡಗೂಡಿ ಹೊರಟ.

ಸಂಭಾವಿತಾಸ್ತೇ ಸಹದೇವೇನ ಸಮ್ಯಕ್
ಪ್ರಶಸ್ಯ ಕೃಷ್ಣಂ ಭೀಮಸೇನಂ ಚ ಸರ್ವೇ ।
ಯಯುರ್ಗೃಹಾನ್ ಸ್ವಾನಪತತ್ಕೇಶವದ್ವಿಟ್
ಜರಾಸುತೋಽಂಧೇ ತಮಸಿ ಕ್ರಮೇಣ ॥೧೭೪॥

ಸಹದೇವನಿಂದ ಸತ್ಕೃತರಾದ ಆ ರಾಜರೆಲ್ಲರೂ ಕೃಷ್ಣನನ್ನೂ ಭೀಮನನ್ನೂ ಚೆನ್ನಾಗಿ ಸ್ತುತಿಸಿ ತಮ್ಮ ಮನೆಗಳಿಗೆ ಹೊರಟು ಹೋದರು. ಕೃಷ್ಣದ್ವೇಷಿಯಾದ ಜರಾಸಂಧ ಅಸಿಪತ್ರಾದಿ ಅನೇಕ ನರಕಗಳನ್ನು ಅನುಭವಿಸಿ ಕ್ರಮವಾಗಿ ಅಂಧಂತಮಸ್ಸಿನಲ್ಲಿ ಬಿದ್ದ.

ಕೃಷ್ಣಶ್ಚ ಪಾರ್ಥೌ ಚ ತಥೈಕಯಾನಂ
ಸಮಾಸ್ಥಿತಾ ಧರ್ಮಜಮಭ್ಯಗಚ್ಛನ್ ।
ತೇಷಾಂ ಶಂಖಿಧ್ವನಿಸಂಬೋಧಿತಾತ್ಮಾ
ರಾಜಾ ಪ್ರೀತಶ್ಚಾತಿತರಾಂ ಬಭೂವ ॥೧೭೫॥

ಶ್ರೀಕೃಷ್ಣನೂ ಭೀಮಾರ್ಜುನರೂ ಒಂದೇ ರಥವನ್ನೇರಿ ಧರ್ಮರಾಜನ ಬಳಿಗೆ ಹೋದರು. ಅವರ ಶಂಖಿಧ್ವನಿಯಿಂದಲೆ ಅವರು ಗೆದ್ದು ಬಂದರೆಂದು ತಿಳಿದು ಧರ್ಮರಾಜ ಬಹಳ ಸಂತುಷ್ಟನಾದ.

ದ್ವೈಪಾಯನೋಽಥ ಭಗವಾನಭಿಗಮ್ಯ ಪಾರ್ಥಾ-
ನಾಜ್ಞಾಪಯತ್ಸಕಲಸಂಭೃತಿಸಾಧನಾಯ ।
ತಂ ರಾಜಸೂಯಸಹಿತಂ ಪರಮಾಶ್ವಮೇಧ-
ಯಜ್ಞಂ ಸಮಾದಿಶದನನ್ಯಕೃತಂ ವಿರಿಂಚಾತ್ ॥೧೭೬॥

ಅಷ್ಟರಲ್ಲಿ ಭಗವಾನ್ ವ್ಯಾಸರು ಪಾಂಡವರ ಬಳಿಗೆ ಬಂದು ಯಾಗದ ಸಕಲ ಸಿದ್ಧತೆಗಳನ್ನು ಮಾಡಲು ಆಜ್ಞಾಪಿಸಿದರು. ಬ್ರಹ್ಮದೇವನು ಹೊರತು ಇನ್ನಾರೂ ಮಾಡದಿದ್ದ ರಾಜಸೂಯ ಸಹಿತವಾದ ಮಹಾಶ್ವಮೇಧ ಯಾಗವನ್ನು ನಡೆಸಲು ಅಪ್ಪಣೆಯಿತ್ತರು.

[1]'ರಾಜಸೂಯ' ದಿಂದ ಅಂದರೆ ರಾಜರ ನಿಗ್ರಹದಿಂದ ಯುಕ್ತವಾದ

---

1. ತಂ ರಾಜಸೂಯ ಸಹಿತಮಿತ್ಯತ್ರ ರಾಜ್ಞಾಂ ಸೂಯಂ ಸೂದನಂ ಜಯ ಇತಿ ಯಾವತ್ ತೇನ ಸಹಿತಂ ವರಾಶ್ವ ಮೇಧಂ। ವರಮಿತಿ ವಿಶೇಷಣಂ ಸಗರಾದಿಭಿಃ ಕೃತ ರಾಜಸೂಯಾದಪ್ಯಸ್ಯೋತ್ತಮತ್ವ ಜ್ಞಾಪನಾರ್ಥಂ। ಉತ್ತಮತ್ವಂ ಚ ಭಕ್ತ್ಯಾದ್ಯತಿ ಶಯೇನ। ಅತ ಏವ ವಿರಿಂಚಾದನನ್ಯ ಕೃತಮಿತ್ಯುಕ್ತಂ। ಭೀಮಸೇನ ಸದೃಶ ಭಕ್ತೇಃ ವಿರಿಂಚಾದಿತರತ್ರಾಸಂಭವಾದಿತಿ ಭಾವಃ। -ವಾದಿರಾಜೀಯ

ಮಹಾ ಅಶ್ವಮೇಧಕ್ಕೆ ವ್ಯಾಸರು ಆದೇಶನೀಡಿದರು. ಮಹಾ ಅಶ್ವಮೇಧ ವೆಂದರೆ ಸಗರ ಚಕ್ರವರ್ತಿ ಮುಂತಾದವರ ಅಶ್ವಮೇಧಕ್ಕಿಂತಲೂ ಉತ್ತಮವೆಂದು ಅಭಿಪ್ರಾಯ. ಭಕ್ಷ್ಯಾದಿ ಗುಣ ಪ್ರಯುಕ್ತವೆ ಇದಕ್ಕೆ ಉತ್ತಮತ್ವ. ಅದರಿಂದಲೆ ಬ್ರಹ್ಮನ ಹೊರತು ಇನ್ನಾರೂ ಮಾಡದಿದ್ದಂಥ ಯಾಗ ಎಂದಿದೆ. ಏಕೆಂದರೆ ಭೀಮನ ಭಕ್ತಿ ಬ್ರಹ್ಮನಲ್ಲಿ ಹೊರತು ಇನ್ನಾರಲ್ಲೂ ಕಾಣಲು ಸಿಗದು.

ಭೀಮನ ದಿಗ್ವಿಜಯ

ಕರ್ತಾ ಹಿ ತಸ್ಯ ಪರಮೇಷ್ಠಿಪದಂ ಪ್ರಯಾತಿ
ಯದ್ಯನ್ಯಸದ್ಗುಣವರೈಃ ಪರಮೇಷ್ಠಿತುಲ್ಯಃ ।
ಭೀಮೇ ಮಖಿಸ್ಯ ಫಲಮಭ್ಯಧಿಕಂ ವಿಧಾತುಂ
ವ್ಯಾಸಃ ಕ್ರತುಂ ತಮದಿಶದ್‌ಗುರುರಬ್ಜಜಸ್ಯ ॥೧೭೭॥

ಆ ಯಾಗ ಮಾಡುವವನು ಬ್ರಹ್ಮಪದವಿ ಹೊರತು ಬೇರೆ ಉತ್ತಮ ಗುಣಗಳಲ್ಲಿ ಬ್ರಹ್ಮನಿಗೆ ಸಮಾನನಾಗಿದ್ದರೆ ಬ್ರಹ್ಮಪದವಿಯನ್ನು ಪಡೆಯುತ್ತಾನೆ. ಭೀಮ ಬ್ರಹ್ಮನಿಗೆ ಸಮಾನನಾದ್ದರಿಂದ ಅವನಿಗೆ ಯಾಗದ ಪೂರ್ಣಫಲ ಸಿಗುವಂತೆ ಮಾಡಲು ಬ್ರಹ್ಮನಿಗೆ ಗುರುವಾದ ವ್ಯಾಸರು ಭೀಮನಿಗೆ ಯಾಗದ ದಿಗ್ವಿಜಯಕ್ಕೆ ಆದೇಶ ನೀಡಿದರು.

ಅಸಾಧಾರಣಹೇತುರ್ಯಃ ಕರ್ಮಣೋ ಯಸ್ಯ ಚೇತನಃ ।
ಸ ಏವ ತತ್ಫಲಂ ಪೂರ್ಣಂ ಭುಂಕ್ತೇಽನ್ಯೋಽಲ್ಪಮಿತಿ ಸ್ಥಿತಿಃ ॥೧೭೮॥

ಯಾರು ಯಾವ ಕರ್ಮಕ್ಕೆ ಮುಖ್ಯ ಕಾರಣನೋ ಅವನು ಆ ಕರ್ಮದ ಪೂರ್ಣಫಲಕ್ಕೆ ಭಾಗಿಯಾಗುವನು. ಇತರರು ಯೋಗ್ಯತಾನುಸಾರ ಅಲ್ಪಫಲವನ್ನೆ ಪಡೆಯುವರು. ಇದು ಶಾಸ್ತ್ರನಿರ್ಣಯ.

ವಿನಾ ವಿಷ್ಣುಂ ನಿರ್ಣಯೋಽಯಂ ಸ ಹಿ ಕರ್ಮಫಲೋಜ್ಝಿತಃ ।
ಹೇತವೋಽಪಿ ಹಿ ಪಾಪಸ್ಯ ನ ಪ್ರಾಯಃ ಫಲಭಾಗಿನಃ ॥೧೭೯॥
ದೇವಾಃ ಪುಣ್ಯಸ್ಯ ದೈತ್ಯಾಶ್ಚ ಮಾನುಷಾಸ್ತು ದ್ವಿಭಾಗಿನಃ ।
ಅಸಾಧಾರಣಹೇತುಶ್ಚ ಭೀಮ ಏವ ಪ್ರಕೀರ್ತಿತಃ ॥೧೮೦॥
ಯಜ್ಞಸ್ಯಾಸ್ಯ ಜರಾಸಂಧವಧಾತ್ ಕರ್ಣಜಯಾದಪಿ ।
ಜಯಾಚ್ಚ ಕೀಚಕಾದೀನಾಮನ್ಯೈರ್ಜೇತುಮಶಕ್ಯತಃ ॥೧೮೧॥

ವಿಷ್ಣುವನ್ನು ಹೊರತುಪಡಿಸಿಯೆ ಈ ನಿರ್ಣಯ. ಏಕೆಂದರೆ ಅವನು ಎಲ್ಲ ಕರ್ಮಗಳಿಗೂ ಮುಖ್ಯ ಕಾರಣನೇ ಆಗಿದ್ದರೂ ಪೂರ್ಣಕಾಮನಾದ್ದರಿಂದ ಕರ್ಮಫಲವನ್ನು ಉಣ್ಣುವುದಿಲ್ಲ. ದೇವತೆಗಳು ಪಾಪಕರ್ಮಕ್ಕೆ ಮುಖ್ಯ ಕಾರಣರಾದರೂ ಸಾಮಾನ್ಯವಾಗಿ

ಪಾಪಫಲಕ್ಕೆ ಭಾಗಿಗಳಾಗುವುದಿಲ್ಲ. ಹಾಗೇ ದೈತ್ಯರು ಪುಣ್ಯಕರ್ಮ ಮಾಡಿದರೂ ಸಾಮಾನ್ಯವಾಗಿ ಪುಣ್ಯ ಫಲಕ್ಕೆ ಭಾಗಿಗಳಾಗುವುದಿಲ್ಲ. ಮನುಷ್ಯರು ಪುಣ್ಯಪಾಪಗಳೆರಡರಲ್ಲಿಯೂ ಅಂಶಮಾತ್ರಕ್ಕೆ ಭಾಗಿಗಳೆನಿಸುತ್ತಾರೆ. ಈ ಯಾಗದಲ್ಲಿ ಜರಾಸಂಧನ ವಧೆಯಿಂದಲೂ ಬೇರೆಯವರಿಗೆ ಗೆಲ್ಲಲು ಅಶಕ್ಯರಾದ ಕರ್ಣಕೀಚಕಾದಿಗಳನ್ನು ಗೆದ್ದುದರಿಂದಲೂ ಭೀಮನೆ ಮುಖ್ಯ ಕಾರಣನೆನಿಸಿದ್ದಾನೆ.

[1]ಬ್ರಹ್ಮಸೂತ್ರ ಗುಹಾಧಿಕರಣದಲ್ಲಿ ಹೇಳಿದಂತೆ ವಿಷ್ಣುವೂ ಶುಭಕರ್ಮ ಫಲರಸವನ್ನು ಉಣ್ಣುತ್ತಾನೆ. ಅದರಿಂದ ದೇವತೆಗಳಂತೆ ಕರ್ಮದಿಂದ ಪುಣ್ಯ ಸಂಪಾದನೆ ಮಾಡುವ ಮೂಲಕ ಕರ್ಮಫಲವನ್ನು ಉಣ್ಣುವುದಿಲ್ಲ ಎನ್ನುವುದು ಇಲ್ಲಿ ವಿವಕ್ಷಿತವಾಗಿದೆ. ದೇವತೆಗಳಿಗೆ ಸ್ವೋತ್ತಮಾಪರಾಧ ಹೊರತು ಬೇರೆ ಪಾಪ ಲೇಪವಾಗುವುದಿಲ್ಲ. ದೈತ್ಯರಿಗೆ ಅವರಿಂದ ಯಜ್ಞಾದಿಕರ್ಮ ಮಾಡಿಸುವ ಆಚಾರ್ಯರ ತಪಃಶಕ್ತಿಯಿಂದ ಹೊರತು ಬೇರೆ ರೀತಿಯಿಂದ ಪುಣ್ಯಫಲಭೋಗವಿಲ್ಲ. ಹಾಗಾದರೆ ಇಂದ್ರನಿಗೆ ವ್ರತಹತ್ಯೆಯಿಂದ ದುಃಖಾನುಭವ ಹೇಗೆ? ಅಶ್ವತ್ಥಾಮನಿಗೆ ದುರ್ಯೋಧನನ ಪತ್ನಿಯಲ್ಲಿ ಸಂತತಿಯನ್ನು ಪಡೆಯುವ ಸಂಕಲ್ಪ ಮಾಡಿದ ಮಾತ್ರದಿಂದ ಬ್ರಹ್ಮಚರ್ಯನಷ್ಟವಾಯಿತು ಹೇಗೆ ಎಂದರೆ ಅದೆಲ್ಲವೂ ಪ್ರಾರಬ್ಧಕರ್ಮಕ್ಕೆ ಕೇವಲ ಸೂಚಕವಷ್ಟೆ

[2]ದುರ್ಯೋಧನಾದಿ ದೈತ್ಯರು ಪುಂಡರೀಕಯಾಗಾದಿ ಪುಣ್ಯ ಕರ್ಮ ಮಾಡುತ್ತಾರೆ. ಆದರೆ ಅದರ ಪೂರ್ಣಫಲ ಅವರಲ್ಲಿ ಆವೇಶಗೊಂಡಿರುವ

---

1. ಯದ್ಯಪಿ ಗುಹಾಧಿಕರಣೇ ವಿಷ್ಣೋಃ ಕರ್ಮಫಲಭೋಕ್ತೃತ್ವಮುಕ್ತಂ। ತಥಾಪ್ಯತ್ರ ದೇವೇಷ್ವಿವ ಅಪೂರ್ವೋತ್ಪತ್ತಿದ್ವಾರಾ ಕರ್ಮಫಲಭೋಕ್ತೃತ್ವಾಭಾವಾತ್ ಅಶುಭಭೋಗಸ್ಯ ಸರ್ವಥಾ ಅಭಾವಾಚ್ಚ ತದಭಾವೋಕ್ತಿಃ। ಪಾಪಸ್ಯ ದೇವಾ ಹೇತವಃ ಸಾಕ್ಷಾತ್ ಕರ್ತಾರೋಽಪಿ ಫಲಭಾಗಿನೋ ನ ಭವಂತಿ। ಉತ್ತಮದ್ರೋಹೇ ಪ್ರಾಪ್ತವ್ಯಹಾನೇಃ ಪ್ರಾಯ ಇತ್ಯುಕ್ತಂ। ಉತ್ತಮದ್ರೋಹಾತಿರಿಕ್ತ ಪಾಪೇಷ್ವಪಿ ವೃತ್ರ ಹತ್ಯಾದಿನಾ ಪ್ರಾರಬ್ಧಾನರ್ಥ ಸೂಚನಾತ್ ಅಶುಭಾಭಾವಜೋನ್ಯಾಹಸ್ಯ ಅಶುಭೇ ಕೃತೇಽಭಾವಾಚ್ಚ ಪ್ರಾಯ ಇತ್ಯುಕ್ತಂ। ದೈತ್ಯಾನಾಂ ಪುಣ್ಯಕಾರಯಿತೃತ್ವಾಭಾವಾತ್ ಸಾಕ್ಷಾತ್ ಸ್ವಕ್ರಿಯಮಾಣ ಪುಣ್ಯಸ್ಯೇತ್ಯರ್ಥಃ। ಆಚಾರ್ಯತೇಜಸಾ ದುರ್ಯೋಧನಾದೀನಾಂ ಸ್ವರ್ಗಪ್ರಾಪ್ತೇಃ ಪ್ರಾಯ ಇತ್ಯುಕ್ತಂ।
-ತಾಮ್ರಪರ್ಣೀಯ

2. ದೇವಾಃ ಪಾಪಸ್ಯ ಹೇತವೋಽಪಿ ಪ್ರಾಯಃ ಫಲಭಾಗಿನೋ ನ ಭವಂತಿ। ದೈತ್ಯಾಶ್ಚ ಪ್ರಾಯಃ ಸ್ವಕೃತಪುಣ್ಯಸ್ಯ ಫಲಭಾಗಿನೋ ನ ಭವಂತಿ। ದುರ್ಯೋಧನಾದಯೋ ದೈತ್ಯಾಃ ಪುಂಡರೀಕ ಯಾಗಾದಿ ಪುಣ್ಯಂ ಕುರ್ವಂತಿ। ತಸ್ಯಾಪಿ ಸಂಪೂರ್ಣಂ ಫಲಂ ತದಾವಿಷ್ಟೋ ಮುಖ್ಯಪ್ರಾಣ ಏವ ಗೃಹ್ಣಾತಿ। ತೇಷಾಮಪಿ ದಂಭೇನ ವಾ ಈರ್ಷ್ಯಯಾ ವಾ ಕರ್ತೃತ್ವಾತ್ ಕಿಂಚಿದೇವ ಫಲಂ ಭವತೀತಿ ಭಾವಃ। ಮಾನುಷಾಸ್ತು ದ್ವಿಭಾಗಿನಃ ದೇವ ದೈತ್ಯಾ ಪಹೃತ ಪುಣ್ಯ ಪಾಪಫಲಯೋಃ ಭಾಗಿನ ಏಕೈಕ ಭಾಗವಂತ ಇತಿ ಯೋಜನಾ।
-ವಾದಿರಾಜೀಯ

ಮುಖ್ಯ ಪ್ರಾಣನಿಗೇ ಹೋಗುತ್ತದೆ. ಆ ದೈತ್ಯರು ದಂಭಾಚಾರಕ್ಕೋ ಅಸೂಯೆಯಿಂದಲೋ ಯಾಗಮಾಡುವುದರಿಂದ ಅತ್ಯಲ್ಪಫಲವೆ ಅವರಿಗೆ ಸಿಗುತ್ತದೆ. ಮನುಷ್ಯರು ಪುಣ್ಯಪಾಪ ಕರ್ಮಗಳೆರಡರ ಫಲವನ್ನೂ ಸ್ವಲ್ಪ ಪಡೆಯುತ್ತಾರೆ. ಅಂದರೆ ಪುಣ್ಯವನ್ನು ದೇವತೆಗಳೂ ಪಾಪವನ್ನು ದೈತ್ಯರೂ ಬಹುಪಾಲು ಅಪಹರಿಸಿದ ಮೇಲೆ ಅಲ್ಪ ಅಂಶಕ್ಕೆ ಮಾತ್ರ ಮನುಷ್ಯರು ಭಾಗಿಗಳಾಗುತ್ತಾರೆ.

ದ್ವಿತೀಯಃ ಫಲ್ಗುನಶ್ಚೈವ ತೃತೀಯಸ್ತು ಯುಧಿಷ್ಠಿರಃ
ತಸ್ಮಾದ್ ಬ್ರಹ್ಮಪದಪ್ರಾಪ್ತ್ಯೈ ವ್ಯಾಸೋ ಭೀಮಸ್ಯ ತಂ ಕ್ರತುಂ।
ಅನನ್ಯಕೃತಮಾದಿಶ್ಯ ದಿಶಾಂ ವಿಜಯಮಾದಿಶತ್ ॥೧೪೨॥

ಈ ಯಾಗ ನಡೆಯುವಲ್ಲಿ ಎರಡನೆ ಮುಖ್ಯ ಕಾರಣ ಅರ್ಜುನ. ಮೂರನೆಯವನು ಧರ್ಮರಾಜ. ಅದರಿಂದ ಭೀಮನಿಗೆ ಬ್ರಹ್ಮಪದವಿ ಪ್ರಾಪ್ತಿಗಾಗಿ ವ್ಯಾಸರು ಬೇರೆ ಯಾರೂ ಮಾಡದಿದ್ದ ಆ ಮಹಾಯಾಗವನ್ನು ನಡೆಸಲು ಭೀಮನಿಗೇ ಆದೇಶಿಸಿ ದಿಗ್ವಿಜಯಕ್ಕೆ ಅಪ್ಪಣೆ ನೀಡಿದರು.

ಅಥಾಬ್ರವೀದ್ ಧನಂಜಯೋ ಧನುರ್ಧ್ವಜೋ ರಥೋ ವರಃ।
ಮಮಾಸ್ತಿ ತದ್ ದಿಶಾಂ ಜಯೋ ಮಮೈವ ವಾಂಛಿತಃ ಪ್ರಭೋ ॥೧೪೩॥

ಆಗ ಅರ್ಜುನ 'ಪ್ರಭು, ಉತ್ತಮವಾದ ಧನುಸ್ಸು ಧ್ವಜ ರಥವೆಲ್ಲವೂ ನನ್ನಲ್ಲಿ ಇದೆ. ಅದರಿಂದ ದಿಗ್ವಿಜಯ ಕಾರ್ಯವನ್ನು ಮುಖ್ಯವಾಗಿ ನನಗೇ ವಹಿಸಿಕೊಡಬೇಕು' ಎಂದ.

ಇತೀರಿತೋಽಖಿಲಪ್ರಭುರ್ಜಗಾದ ಸತ್ಯಮಸ್ತಿ ತೇ।
ಸಮಸ್ತ ಸಾಧನೋನ್ನತಿರ್ಮಹಚ್ಚ ವೀರ್ಯಮಸ್ತಿ ಹಿ ॥೧೪೪॥
ತಥಾಪಿ ಕೀಚಕಾದಯೋ ವೃಕೋದರಾದೃತೇ ವಶಂ।
ನ ಯಾಂತಿ ನಾಪಿ ತೇ ವಶಂ ಪ್ರಯಾತಿ ಕರ್ಣ ಏವ ಚ ॥೧೪೫॥

ಅರ್ಜುನ ಹೀಗೆ ಹೇಳಿದಾಗ ಸರ್ವಶಕ್ತರಾದ ವ್ಯಾಸರು ಹೇಳಿದರು. 'ನಿನಗೆ ಸಕಲ ಸಾಧನ ಸಂಪತ್ತೂ ನಿಶ್ಚಯವಾಗಿ ಇದೆ. ಮಹತ್ತಾದ ಬಲವೂ ಇದೆ. ಆದರೂ ಕೀಚಕಾದಿಗಳು ಭೀಮನಿಗೆ ವಶರಾಗುವರು, ನಿನಗಲ್ಲ. ಕರ್ಣನೂ ನಿನಗೆ ವಶನಾಗುವುದಿಲ್ಲ.

ಬಲಾಧಿಕೋಽಸಿ ಕರ್ಣತಸ್ತಥಾಪಿ ನಾಮೃತಃ ಕರಂ।
ದದಾತಿ ತೇ ಹ್ಯತಿಸ್ಪೃಧಾ ನ ವಧ್ಯ ಏಷ ತೇಽದ್ಯ ಚ ॥೧೪೬॥

ನೀನು ಕರ್ಣನಿಗಿಂತ ಬಲದಲ್ಲಿ ಹೆಚ್ಚೇ ಆದರೂ ಕರ್ಣ ಬದುಕಿರುವಷ್ಟು ಕಾಲ ನಿನ್ನಲ್ಲಿ ತೀವ್ರವಾದ ಸ್ಪರ್ಧೆ ಇರುವುದರಿಂದ ಕಪ್ಪ ಕೊಡುವುದಿಲ್ಲ. ಈಗ ನೀನು ಅವನನ್ನು ಕೊಲ್ಲುವುದೂ ಶಕ್ಯವಿಲ್ಲ.

ಸವರ್ಮಕುಂಡಲತ್ವತೋ ನ ವಧ್ಯ ಏಷ ಯತ್ ತ್ವಯಾ ।
ತತೋ ವೃಕೋದರೋ ದಿಶಂ ಪ್ರಯಾತು ತೇ ಪಿತುಃ ಪ್ರಿಯಾಂ ॥೧೮೬॥

ಕರ್ಣ ಈಗ ಕವಚಕುಂಡಲ ಯುಕ್ತನಾಗಿರುವುದರಿಂದ ನಿನಗೆ ವಧ್ಯನೆನಿಸುವುದಿಲ್ಲ. ಅದರಿಂದ ಭೀಮನೆ ಪೂರ್ವದಿಕ್ಕಿನ ವಿಜಯಕ್ಕೆ ಹೊರಡಲಿ.

[1]ಪೂರ್ವದಿಕ್ಕು ಎಂದರೆ ಭರತಖಂಡದಲ್ಲಿ ಪೂರ್ವದಿಕ್ಕು. ಇಲ್ಲದಿದ್ದರೆ 'ಎಲ್ಲ ದಿಕ್ಕುಗಳಲ್ಲಿ ಸಪ್ತ ದ್ವೀಪಗಳನ್ನು ಗೆದ್ದು ಬಾ' ಎಂದು ಅರ್ಜುನನಿಗೆ ಮುಂದೆ ಆದೇಶಿಸುವುದು ಕೂಡಲಾರದು.

ಜೀವಗ್ರಾಹಭಯಾತ್ ಕರ್ಣೋ ದದಾತಿ ಕರಮಂಜಸಾ ।
ಭೀಮಾಯ ನಾತ್ರ ಸಂದೇಹೋ ಜಿತೋಽನೇನ ಚ ಸಂಯುಗೇ ॥೧೮೮॥

ಈ ಹಿಂದೆ ಯುದ್ಧದಲ್ಲಿ ಭೀಮನಿಗೆ ಸೋತಿರುವ ಕರ್ಣ ಜೀವಂತವಾಗಿ ಸೆರೆ ಸಿಕ್ಕುವ ಭಯದಿಂದ ಭೀಮನಿಗೆ ಚೆನ್ನಾಗಿ ಕಪ್ಪ ನೀಡುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಅಜೇಯೌ ಶರ್ವವಚನಾತ್ ರಣೇ ಕೀಚಕಪೌಂಡ್ರಕೌ ।
ವಶಂ ಪ್ರಯಾತೋ ಭೀಮಸ್ಯ ತಥಾವಧ್ಯೋಽಪಿ ಚೇದಿಪಃ ॥೧೮೯॥

ರುದ್ರವರದಿಂದ ಯುದ್ಧದಲ್ಲಿ ಅಜೇಯರೆನಿಸಿದ ಕೀಚಕ ಪೌಂಡ್ರಕರೂ ಭೀಮನಿಗೆ ವಶರಾಗುವರು. ಅವಧ್ಯನಾದ ಶಿಶುಪಾಲನೂ ಅವನಿಗೆ ವಶನಾಗುವನು.

ಜೀವಗ್ರಾಹಭಯಂ ಹ್ಯೇಷಾಂ ಭೀಮಾನ್ಮಾಗಧಪಾತನಾತ್ ।
ತಸ್ಮಾತ್ ಕರಂ ಪ್ರಯಚ್ಛಂತಿ ಜಿತಾ ವಾ ಪೂರ್ವಮೇವ ವಾ ॥೧೯೦॥

ಭೀಮನಿಂದ ಜರಾಸಂಧ ಹತನಾದ್ದರಿಂದ ಇವರೆಲ್ಲರಿಗೂ ಜೀವಂತ ಸೆರೆ ಸಿಕ್ಕುವ ಭಯವಿದೆ. ಪರಾಜಿತರಾಗಿ ಅಥವಾ ಅದಕ್ಕೂ ಮೊದಲಿಗೇ ಅವರು ಕಪ್ಪ ಕೊಡುತ್ತಾರೆ.

ಪ್ರಯಾಹಿ ಚ ತ್ವಂ ಧನದಪ್ರಪಾಲಿತಾಂ
ದಿಶಂ ದ್ವೀಪಾನ್ ಸಪ್ತ ಚಾಶೇಷದಿಕ್ಷು ।
ನಾಗಾಂಶ್ಚ ದೈತ್ಯಾಂಶ್ಚ ತಥಾಧರಸ್ಥಾನ್
ವಿಜಿತ್ಯ ಶೀಘ್ರಂ ಪುನರೇಹಿ ಚಾತ್ರ ॥೧೯೧॥

ಅದರಿಂದ ಅರ್ಜುನ, ನೀನು ಭರತಖಂಡದಲ್ಲಿ ಉತ್ತರದಿಕ್ಕಿಗೆ ಹೋಗು. ಹೊರಗೆ ಎಲ್ಲ ದಿಕ್ಕುಗಳಲ್ಲಿ ಸಪ್ತದ್ವೀಪಗಳನ್ನೂ ಪಾತಾಳಗಳಲ್ಲಿರುವ ನಾಗರನ್ನೂ ದೈತ್ಯರನ್ನೂ ಗೆದ್ದು ಬೇಗನೆ ಹಿಂತಿರುಗಿ ಬಾ.

---

1. ತೇ ಪಿತುಃ ಪ್ರಿಯಾಮೈಂದ್ರೀಮಿತ್ಯರ್ಥಃ। ಇದಮಪಿ ಭರತಖಂಡಾಪೇಕ್ಷಯಾ। ಅನ್ಯಥಾ 'ದ್ವೀಪಾನ್ ಸಪ್ತ ಚಾಶೇಷದಿಕ್ಷು' ಇತಿ ವಕ್ಷ್ಯಮಾಣ ವಿರೋಧಾತ್। –ವಾದಿರಾಜೀಯ

ರಥೋ ಹಿ ದಿವ್ಯೋಽಂಬರಗಸ್ತವಾಸ್ತಿ
ದಿವ್ಯಾನಿ ಚಾಸ್ತ್ರಾಣಿ ಧನುಶ್ಚ ದಿವ್ಯಂ ।
ಯೇಽನ್ಯೇ ಚ ಬಾಣಪ್ರಮುಖಾ ಅಜೇಯಾಃ
ಶರ್ವಾಶ್ರಯಾಸ್ತಾನಪಿ ಭೀಮ ಏತು ॥೧೯೨॥

ನಿನಗೆ ಅಂತರಿಕ್ಷದಲ್ಲಿ ಸಂಚರಿಸುವ ದಿವ್ಯರಥವಿದೆ. ದಿವ್ಯ ಅಸ್ತ್ರಗಳಿವೆ. ದಿವ್ಯ ಧನುಸ್ಸಿದೆ. ಇನ್ನು ಶಿವನನ್ನು ಆಶ್ರಯಿಸಿ ಅಜೇಯರಾಗಿರುವ ಬಾಣಾಸುರ ಮುಂತಾದವರನ್ನು ಕೂಡ ಭೀಮನೇ ಆಕ್ರಮಿಸಲಿ.

ಬಹುಲಕ್ಷ ಯೋಜನ ವಿಸ್ತಾರದ ಏಳು ಸಮುದ್ರಗಳನ್ನು ದಾಟಿ ಸಪ್ತದ್ವೀಪಗಳಲ್ಲಿ ದಿಗ್ವಿಜಯ ಮಾಡುವುದು ನೆಲದಲ್ಲಿ ಸಂಚರಿಸುವ ರಥವಾಗಿದ್ದರೆ ಅರ್ಜುನನಿಗೆ ಶಕ್ಯವಲ್ಲ. ಆಕಾಶದಲ್ಲಿ ಸಂಚರಿಸುವ ದಿವ್ಯರಥವಿದೆ.[1]

ತಥಾಸುರಾಶ್ಚಾಪಿ ಸಮಸ್ತಶೋಽಸ್ಯ
ಬಲಿಂ ಪ್ರಯಚ್ಛಂತಿ ಮದಾಜ್ಞಯೇತರೇ ।
ದಿಶಂ ಪ್ರತೀಚೀಮಥ ದಕ್ಷಿಣಾಂ ಚ
ಯಾತಾಂ ಯಮೌ ಕ್ರಮಶೋ ಹ್ಯಧ್ವರಾರ್ಥೇ ॥೧೯೩॥
ಯಶಶ್ಚ ಧರ್ಮಶ್ಚ ತಯೋರಪಿ ಸ್ಯಾ-
ದಿತಿ ಸ್ಮ ಕೃಷ್ಣೇನ ಸುತೇನ ಕಾಲ್ಯಾಃ ।
ಉಕ್ತೇ ಯಯುಸ್ತೇ ತಮಭಿಪ್ರಣಮ್ಯ
ದಿಶೋ ಯಥೋಕ್ತಾಃ ಪರಮೋರುಸದ್ಗುಣಾಃ ॥೧೯೪॥

ಇತರ ಸಮಸ್ತ ದೇವತೆಗಳೂ ನನ್ನ ಪ್ರೇರಣೆಯಿಂದ ಭೀಮನಿಗೆ ಕಪ್ಪ ಕೊಡುತ್ತಾರೆ. ನಕುಲ ಸಹದೇವರು ಕ್ರಮವಾಗಿ ಪಶ್ಚಿಮ ದಕ್ಷಿಣ ದಿಕ್ಕುಗಳಿಗೆ ಯಾಗದ ದಿಗ್ವಿಜಯಕ್ಕೆ ಹೋಗಲಿ. ಏಕೆಂದರೆ ಯಾಗ ಮಾಡಿದ ಯಶಸ್ಸೂ ಪುಣ್ಯವೂ ಅವರಿಗೂ ಲಭಿಸಲಿ ಎಂದು ವೇದವ್ಯಾಸರು ಹೇಳಿದಾಗ ಉತ್ತಮವಾದ ಮಹಾಗುಣಗಳುಳ್ಳ ಪಾಂಡವರು ಅವರನ್ನು ನಮಿಸಿ ಆಯಾ ದಿಕ್ಕುಗಳಿಗೆ ಹೊರಟರು.

[2]'ಸುರಾಶ್ಚಾಪಿ' ಎಂದು ಪದವಿಭಾಗ. 'ಅಸುರಾಶ್ಚಾಪಿ' ಎಂದಲ್ಲ.

1. ಬಹುಲಕ್ಷಯೋಜನಾಭ್ಯಂತರಿತ ಸಪ್ತಸಮುದ್ರೋತ್ತರಣಂ ಕಥ ಮರ್ಜುನಸ್ಯೇತ್ಯತ ಉಕ್ತಂ ರಥೋ ಹಿ ದಿವ್ಯೋಽಂಬರಗ ಇತಿ। -ವಾದಿರಾಜೀಯ
2. ತಥಾಸುರಾಶ್ಚಾಪಿ ಸಮಸ್ತಶ ಇತ್ಯತ್ರ ಸುರಾ ಇತಿ ಪದಚ್ಛೇದಃ 'ಹಿಮವಚ್ಛಿಖರೇ ದೇವಾನಿ'ತಿ ವಕ್ಷ್ಯಮಾಣತ್ವಾತ್ । -ವಾದಿರಾಜೀಯ
ಇತರೇ ಕೀಚಕ ಬಾಣಾದಿಭ್ಯೋಽನ್ಯೇಽಸುರಾ ಬಲಿಂ ಕರಂ ಪ್ರಯಚ್ಛಂತಿ। ತವೇತಿ ಶೇಷಃ। ನನು

ಮುಂದೆ ಭೀಮ ಹಿಮಾಲಯದ ಶಿಖರಗಳಲ್ಲಿ ಇಂದ್ರಾದಿ ದೇವತೆಗಳನ್ನು ಗೆದ್ದ ವೃತ್ತಾಂತ ಬರುತ್ತದೆ ಎನ್ನುತ್ತದೆ ವಾದಿರಾಜೀಯ.

ವರದರಾಜೀಯ ಜನಾರ್ದನೀಯಗಳಲ್ಲಿ 'ಅಸುರಾಶ್ಚಾಪಿ' ಎಂದು ಪದವಿಭಾಗ ಮಾಡಿ ಕೀಚಕ ಬಾಣ ಮುಂತಾದ ಅಸುರರಿಗಿಂತ ಬೇರೆ ಅಸುರರೆಲ್ಲರೂ ಅರ್ಜುನನಿಗೆ ಕಪ್ಪ ಕೊಡುತ್ತಾರೆ. ಅವರಲ್ಲಿಯೂ ತ್ರೈಗರ್ತರು ಮುಂತಾದವರು ರುದ್ರವರದಿಂದ ಅಜೇಯರಾಗಿದ್ದರೂ 'ನನ್ನ ಪ್ರೇರಣೆಯಿಂದ' ಅಂದರೆ ಶ್ರೀಹರಿಪ್ರೇರಣೆಯಿಂದ ಅರ್ಜುನನಿಗೆ ಕಪ್ಪ ಕೊಡುತ್ತಾರೆ' ಎಂದು ಜನಾರ್ದನೀಯವೂ ಭೀಮನಿಗೆ ಕಪ್ಪ ಕೊಡುತ್ತಾರೆ ಎಂದು ವರದರಾಜೀಯವೂ ಹೇಳಿದೆ.

ತಾಮ್ರಪರ್ಣೀಯದಲ್ಲಿ 'ಸುರಾಶ್ಚಾಪಿ' ಎಂಬ ಪದಚ್ಛೇದಪಕ್ಷದಲ್ಲಿ ಇಂದ್ರಾದಿ ದೇವತೆಗಳೂ ಬೇರೆ ಗರುಡಾದಿ ದೇವತೆಗಳೂ ಭೀಮನಿಗೆ ಕಪ್ಪ ಕೊಡುತ್ತಾರೆ ಎಂದರ್ಥ. 'ಅಸುರಾಶ್ಚಾಪಿ' ಎಂಬ ಪದಚ್ಛೇದ ಪಕ್ಷದಲ್ಲಿ 'ತಥಾ' ಬಾಣಾದಿಗಳಂತೆ ಎಲ್ಲ ಅಸುರರೂ ಭೀಮನಿಗೆ ಕಪ್ಪಕೊಡುತ್ತಾರೆ, ಅವರಿಗಿಂತ ಬೇರೆಯವರಾದ ದೇವತೆಗಳೂ ಕಪ್ಪ ಕೊಡುತ್ತಾರೆ ಎಂದು ವ್ಯಾಖ್ಯಾನಿಸಲಾಗಿದೆ.

ವೃಕೋದರೋಽಜಯನ್ನೃಪಾನ್ ವಿರಾಟಮಾಸಸಾದ ಹ।
ಜಿತೇಽತ್ರ ಕೀಚಕೇ ರಣೇ ಸಮಾದದೇ ಕರಂ ತತಃ ॥೧೯೫॥

ಭೀಮಸೇನ ರಾಜರನ್ನು ಗೆಲ್ಲುತ್ತ ವಿರಾಟರಾಜನಲ್ಲಿಗೂ ಬಂದ. ಅಲ್ಲಿ ಕೀಚಕ ಯುದ್ಧದಲ್ಲಿ ಸೋತಾಗ ಭೀಮ ಅವನಿಂದ ಕಪ್ಪ ತೆಗೆದುಕೊಂಡ.

ತತಃ ಕ್ರಮಾನ್ನೃಪಾನ್ ಜಿತ್ವಾ ಚೇದೀನಾಂ ವಿಷಯಂ ಗತಃ।
ಮಾತೃವಾಕ್ಯಾದ್ ಭಯಾಚ್ಚೈವ ಶಿಶುಪಾಲೇನ ಪೂಜಿತಃ ॥೧೯೬॥

ಬಳಿಕ ಕ್ರಮೇಣ ರಾಜರನ್ನು ಗೆದ್ದು ಭೀಮ ಚೇದಿ ದೇಶಕ್ಕೆ ಹೋದ. ಅಲ್ಲಿ ತಾಯಿಯ

ತ್ರೈಗರ್ತಾದಯೋಽಸುರಾ ರುದ್ರಾದಿವರಾದಜೇಯಾಃ ಕಥಂ ಬಲಿಂ ಪ್ರಯಚ್ಛಂತೀತ್ಯತ ಆಹ ಮದಾಜ್ಞಯೇತಿ। ಕೇಚಿತ್ತಥಾಸುರಾ ಇತ್ಯತ್ರ ಸುರಾ ಇತಿ ಪದಚ್ಛೇದಂ ಕುರ್ವಂತಿ। ತತ್ರ ಸುರಾ ಬಲಿಂ ಪ್ರಯಚ್ಛಂತಿ ಭೀಮಾಯೇತ್ಯಧ್ಯಾಹಾರೇಣ ಯೋಜ್ಯಂ। -ಜನಾರ್ದನೀಯ

ಮದಾಜ್ಞಯಾ ಸಮಸ್ತಶಃ ಶಕ್ರಾದಿ ಸುರಾಶ್ಚ ಕರಂ ದಾಸ್ಯಂತಿ। ತಥಾ ಇತರೇ ಶೇಷಗರುಡರುದ್ರಾಶ್ಚ ಮದಾಜ್ಞಯಾ ದಾಸ್ಯಂತೀತ್ಯರ್ಥಃ। ಯದ್ವಾ ತಥಾ ಬಾಣಾದಿವತ್ ಸಮಸ್ತಶೋಽಸುರಾಶ್ಚ ಕರಂ ಪ್ರದಾಸ್ಯಂತಿ। ತಥಾ ಇತರೇ ಅಸುರೇಭ್ಯ ಇತರೇ ದೇವಾಶ್ಚ ಮದಾಜ್ಞಯಾ ದಾಸ್ಯಂತೀತ್ಯರ್ಥಃ।
-ತಾಮ್ರಪರ್ಣೀಯ

ಉಪದೇಶದಿಂದಲೂ ಭೀಮನ ಭಯದಿಂದಲೂ ಶಿಶುಪಾಲ ಕಪ್ಪ ನೀಡಿ ಸತ್ಕರಿಸಿದ.

ಮಾತೃಷ್ವಸುರ್ಗೃಹೇ ಚೋಷ್ಯ ದಿವಸಾನ್ ಕತಿಚಿತ್ಸುಖಂ ।
ಕರಂ ಸುಮಹದಾದಾಯ ತತಃ ಪೂರ್ವಾಂ ದಿಶಂ ಯಯೌ ॥೧೯೭॥

ಭೀಮ ಚಿಕ್ಕಮ್ಮನ ಮನೆಯಲ್ಲಿ ಕೆಲವು ದಿನ ಸುಖವಾಗಿದ್ದು ಕಪ್ಪವನ್ನು ತೆಗೆದುಕೊಂಡು ಅಲ್ಲಿಂದ ಪೂರ್ವ ದಿಕ್ಕಿಗೆ ಹೊರಟ

ಕುಂತಿಯ ತಂಗಿ ಶ್ರುತಶ್ರವೆ ಚೇದಿರಾಜ ದಮಘೋಷನ ರಾಣಿ ಶಿಶುಪಾಲನ ತಾಯಿಯಾದ್ದರಿಂದ ಭೀಮನಿಗೆ ಅವಳು ಚಿಕ್ಕಮ್ಮ. ಅವಳ ಬಳಿಯಲ್ಲಿ ಭೀಮ ಮೂವತ್ತು ದಿನಗಳ ಕಾಲ ಇದ್ದ.

ಕ್ರಮೇಣ ಸರ್ವಾನ್ನಿರ್ಜಿತ್ಯ ಪೌಂಡ್ರಕಂ ಚ ಮಹಾಬಲಂ ।
ವಿರಥೀಕೃತ್ಯ ಕರ್ಣಂ ಚ ಕರಮಾದಾಯ ಸರ್ವತಃ ॥೧೯೮॥
ಹಿಮವಚ್ಛಿಖರೇ ದೇವಾನ್ ಜಿತ್ವಾ ಶಕ್ರಪುರೋಗಮಾನ್
ಕ್ರೀಡಾರ್ಥಂ ಯಧ್ಯತಸ್ತೇಭ್ಯಸ್ತುಷ್ಟೇಭ್ಯೋ ರತ್ನಸಂಚಯಾನ್ ॥೧೯೯॥
ಬಾಹುಯುದ್ಧೇನ ಶೇಷಂ ಚ ಗರುಡಂ ಚ ಮಹಾಬಲಂ ।
ಕ್ರೀಡಮಾನೌ ವಿನಿರ್ಜಿತ್ಯ ಭೂಷಣಾನ್ಯಾಪ ತೋಷತಃ ।
ತಾಭ್ಯಾಂ ಚ ದೃಢಮಾಶ್ಲಿಷ್ಟಃ ಸ್ನೇಹವಿಕ್ಲಿನ್ನಯಾ ಧಿಯಾ ॥೨೦೦॥

ಭೀಮ ಪೂರ್ವ ದಿಕ್ಕಿನಲ್ಲಿ ಕ್ರಮದಿಂದ ಎಲ್ಲ ರಾಜರನ್ನೂ ಗೆದ್ದು ಮಹಾಬಲಿಷ್ಠನಾದ ಪೌಂಡ್ರಕ ವಾಸುದೇವನನ್ನೂ ಕರ್ಣನನ್ನೂ ವಿರಥನನ್ನಾಗಿ ಮಾಡಿ ಎಲ್ಲರಿಂದಲೂ ಕಪ್ಪ ತೆಗೆದುಕೊಂಡು ಹಿಮಾಲಯದ ಶಿಖರದಲ್ಲಿ ಇಂದ್ರಾದಿ ದೇವತೆಗಳನ್ನೂ ಗೆದ್ದು ಕ್ರೀಡೆಗಾಗಿ ಯುದ್ಧ ಮಾಡಿ ಸಂತುಷ್ಟರಾದ ಅವರಿಂದ ರತ್ನಗಳ ರಾಶಿಗಳನ್ನು ಪಡೆದ. ಮಹಾಬಲಿಷ್ಠರಾದ ಶೇಷ ಗರುಡರೂ ಬಾಹು ಯುದ್ಧದಿಂದ ಕ್ರೀಡೆ ಮಾಡಿದರು. ಆ ಕ್ರೀಡೆಯಲ್ಲಿ ಅವರನ್ನು ಗೆದ್ದು ಅವರಿಂದ ಸ್ನೇಹಾರ್ದ್ರ ಅಂತಃಕರಣದಿಂದ ಗಾಢವಾಗಿ ಆಲಿಂಗಿತನಾಗಿ ಸಂತೋಷದಿಂದ ಅವರು ನೀಡಿದ ಆಭರಣಗಳನ್ನು ಸ್ವೀಕರಿಸಿದ.

ಪ್ರೋಪ್ಲೂಯಮಾನಃ ಸ ತತೋಽಂಬುಧೌ ಬಲೀ
ಜಗಾಮ ಬಾಣಸ್ಯ ಪುರಂ ಹರಂ ಚ ।
ರಣೇಽಜಯದ್ವಾರಣರೂಪಮಾಸ್ಥಿತಂ
ಕ್ರೀಡಂತಮೇತೇನ ಚ ತೋಷಿತೋ ಹರಃ ॥೨೦೧॥

ಬಳಿಕ ಬಲಿಷ್ಠನಾದ ಭೀಮ ಸಮುದ್ರದಲ್ಲಿ ಈಜಾಡಿ ಬಾಣನ ನಗರಕ್ಕೆ ಹೋಗಿ ಅಲ್ಲಿ ಯುದ್ಧದಲ್ಲಿ ಆನೆಯ ರೂಪವನ್ನು ತಳೆದು ಕ್ರೀಡೆಯಾಡಿದ ಶಿವನನ್ನು ಗೆದ್ದ. ಸಂತೋಷಗೊಳಿಸಿದ.

ಪೃಷ್ಟಶ್ಚ ಗಿರಿಶೇನಾಸೌ ವಿಸ್ತರಂ ದಿಗ್ಜಯಸ್ಯ ಚ ।
ಸಿಂಹವ್ಯಾಘ್ರಾದಿರೂಪಾಶ್ಚ ಆತ್ಮನಾ ವಿಜಿತಾ ಯಥಾ ।
ಗರುತ್ಮಚ್ಛೇಷಶಕ್ರಾದ್ಯಾ ದೇವಾಃ ಸರ್ವೇ ತದಬ್ರವೀತ್ ॥೨೦೨॥

ಶಿವ ಭೀಮನ ದಿಗ್ವಿಜಯ ವೃತ್ತಾಂತವನ್ನು ವಿಸ್ತಾರವಾಗಿ ಕೇಳಲು ಬಯಸಿದಾಗ ಸಿಂಹ ಹುಲಿ ಮುಂತಾದ ರೂಪದಿಂದ ಬಂದ ಗರುಡ ಶೇಷ ಇಂದ್ರಾದಿ ಸಕಲ ದೇವತೆಗಳೂ ತನ್ನಿಂದ ಹೇಗೆ ಪರಾಜಿತರಾದರೆಂಬುದನ್ನು ಅವನಿಗೆ ಬಣ್ಣಿಸಿ ಹೇಳಿದ.

ನಿಶಮ್ಯ ಶಂಕರೋಽಖಿಲಂ ಮಖಿಸ್ಯ ಚ ಪ್ರಸಾಧಕಂ ।
ಹರಿಂ ತತೋ ಬಲೇಃ ಸುತಾದ್ ದದೌ ಚ ರತ್ನಸಂಚಯಂ ॥೨೦೩॥

ಶಿವ ಎಲ್ಲವನ್ನೂ ಕೇಳಿ ಈ ಯಾಗವನ್ನು ಸ್ವತಃ ನಿಂತು ಮಾಡಿಸಿಕೊಳ್ಳುವವನು ಶ್ರೀಹರಿಯೆ ಎಂದು ತಿಳಿದು ಬಾಣಾಸುರನಿಂದ ರತ್ನ ಸಮೂಹವನ್ನು ಕೊಡಿಸಿದ.

ಸ ಬಾಣದೈತ್ಯತೋ ಮಹಚ್ಛಿವೇನ ದತ್ತಮುತ್ತಮಂ ।
ಪ್ರಗೃಹ್ಯ ರತ್ನಸಂಚಯಂ ಸ್ವಕಂ ಪುರಂ ಸಮಾಯಯೌ ॥೨೦೪॥

ಭೀಮ ಬಾಣಾಸುರನ ಮೂಲಕ ಶಿವನಿತ್ತ ಉತ್ತಮವಾದ ದೊಡ್ಡ ರತ್ನ ರಾಶಿಯನ್ನು ತೆಗೆದುಕೊಂಡು ತನ್ನ ಪಟ್ಟಣಕ್ಕೆ ಹಿಂತಿರುಗಿದ.

ಸ ವಿಪ್ರಯಾದವೇಶ್ವರಂ ದ್ವಿಧಾ ಸ್ಥಿತಂ ಜನಾರ್ದನಂ ।
ಪುರೋ ನಿಧಾಯ ತದ್ವಸು ಪ್ರಭೂತಮಾನಮತ್ತದಾ ॥೨೦೫॥

ಒಡನೆ ಆ ಮಹಾಸಂಪತ್ತನ್ನು ಮುಂದೆ ಇಡುತ್ತ ವೇದವ್ಯಾಸ ಕೃಷ್ಣ ಎಂದು ಎರಡು ರೂಪಗಳಿಂದ ಇದ್ದ ಹರಿಯನ್ನು ನಮಿಸಿದ.

ಸೋಽಭಿವಂದ್ಯಾಗ್ರಜಂ ಚೈವ ಯಥಾವೃತ್ತಂ ನ್ಯವೇದಯತ್
ಆತ್ಮನಃ ಕೃಷ್ಣಯೋಃ ಸರ್ವಂ ಧರ್ಮರಾಜಾಗ್ರತೋ ಮುದಾ ॥೨೦೬॥
ಯಥಾ ಜಿತಾಃ ಕೀಚಕಾದ್ಯಾ ವಿಕಲವ್ಯಸಹಾಯವಾನ್ ।
ಯಥಾ ಜಿತಃ ಪೌಂಡ್ರಕಶ್ಚ ಕರ್ಣಾದ್ಯಾಶ್ಚ ತಥಾಪರೇ ॥೨೦೭॥
ಯಥಾ ಸಿಂಹಾದಿತನವಃ ಶೇಷವೀಂದ್ರೇಂದ್ರಪೂರ್ವಕಾಃ ।
ಯಥಾ ಗಜತನುಃ ಶರ್ವಸ್ತಚ್ಚ ಸರ್ವಮವರ್ಣಯತ್ ॥೨೦೮॥

ಭೀಮ ಧರ್ಮರಾಜನನ್ನು ವಂದಿಸಿ ಅವನ ಸಮಕ್ಷಮದಲ್ಲಿ ವೇದವ್ಯಾಸ ಕೃಷ್ಣರಿಗೆ ತನ್ನ ಎಲ್ಲ ವೃತ್ತಾಂತವನ್ನೂ ಸಂತೋಷದಿಂದ ನಿವೇದಿಸಿದ. ಕೀಚಕ ಮುಂತಾದವರನ್ನೂ ಏಕಲವ್ಯ ಪೌಂಡ್ರಕರನ್ನೂ ಇತರ ಕರ್ಣಾದಿ ರಾಜರನ್ನೂ ಸಿಂಹಾದಿರೂಪದಿಂದ ಬಂದ ಶೇಷಗರುಡ ಇಂದ್ರಾದಿ ದೇವತೆಗಳನ್ನೂ ಆನೆಯ ರೂಪದಿಂದ ಬಂದ ಶಿವನನ್ನೂ ತಾನು ಹೇಗೆ ಗೆದ್ದನೆಂಬುದೆಲ್ಲವನ್ನೂ ಯಥಾವತ್ತಾಗಿ ಬಣ್ಣಿಸಿದ.

ಸಂಭಾವಿತಶ್ಚ ಕೃಷ್ಣಾಭ್ಯಾಂ ರಾಜ್ಞಾ ಚ ಸ ಮಹಾಬಲಃ ।
ಆಜ್ಞಯಾ ವಾಸುದೇವಸ್ಯ ಯಜ್ಞಾಂಗಾನಿ ಸಮಾರ್ಜಯತ್ ॥೨೦೯॥

ಮಹಾ ಬಲಿಷ್ಠನಾದ ಭೀಮ ವ್ಯಾಸಕೃಷ್ಣರಿಂದಲೂ ಧರ್ಮರಾಜನಿಂದಲೂ ಆದರಿಸಲ್ಪಟ್ಟು ಕೃಷ್ಣನ ಆಜ್ಞೆಯಿಂದ ಯಾಗಕ್ಕೆ ಅವಶ್ಯ ಬೇಕಾದುದನ್ನೆಲ್ಲ ಸಿದ್ಧಪಡಿಸಿದ.

ಊಚೇ ತಂ ಭಗವಾನ್ ವ್ಯಾಸೋ ಜಿತಂ ಸರ್ವಂ ತ್ವಯಾರಿಹನ್ ।
ಜಯೇ ಸರ್ವಸ್ಯ ಯಜ್ಞೋಽಯಂ ಪೂರ್ಣೋ ಭವತಿ ನಾನ್ಯಥಾ ॥೨೧೦॥
ವಿರಿಂಚಃ ಸರ್ವಜಿತ್ ಪೂರ್ವಂ ದ್ವಿತೀಯಸ್ತ್ವಮಿಹಾಭವಃ ।
ಇತ್ಯುಕ್ತ್ವಾನಂ ಸಮಾಶ್ಲಿಷ್ಯ ಯಜ್ಞಾಂಗಾನಿ ಸಮಾದಿಶತ್ ॥೨೧೧॥

ಭಗವಾನ್ ವೇದವ್ಯಾಸರು ಭೀಮಸನ್ನು ಆಲಿಂಗಿಸಿ ಹೇಳಿದರು 'ಶತ್ರುನಾಶಕನೆ, ನೀನು ಎಲ್ಲರನ್ನೂ ಗೆದ್ದಿರುವೆ. ಎಲ್ಲರನ್ನು ಗೆದ್ದಾಗಲೆ ಈ ಯಾಗ ಪೂರ್ತಿ ಕೈಗೂಡುವುದು. ಇಲ್ಲದಿದ್ದರೆ ಇಲ್ಲ. ಹಿಂದೆ ಬ್ರಹ್ಮ ಎಲ್ಲರನ್ನೂ ಹೀಗೇ ಗೆದ್ದಿದ್ದ. ಅನಂತರ ಈ ರೀತಿ ಗೆದ್ದವನು ನೀನು ಎರಡನೆಯವನಾದೆ.' ಹೀಗೆ ಹೇಳಿ ಯಾಗ ಸಾಧನಗಳನ್ನು ಸಿದ್ಧಗೊಳಿಸಲು ಆದೇಶಿಸಿದರು.

ನಕುಲ-ಸಹದೇವರ ದಿಗ್ವಿಜಯ

ತದೈವಾನ್ಯಾ ದಿಶೋ ಜಿತ್ವಾ ಸಮೀಯುಸ್ತಸ್ಯ ಯೇಽನುಜಾಃ ।
ಸಹದೇವೋ ದಕ್ಷಿಣಾಶಾಂ ಜಿತ್ವಾ ರತ್ನಾನ್ಯುಪಾಹರತ್ ॥೨೧೨॥

ಅಷ್ಟರಲ್ಲಿ ಬೇರೆ ದಿಕ್ಕುಗಳನ್ನು ಗೆದ್ದು ಯುಧಿಷ್ಠಿರನ ಇತರ ತಮ್ಮಂದಿರೂ ಬಂದರು. ಸಹದೇವ ದಕ್ಷಿಣ ದಿಕ್ಕನ್ನು ಗೆದ್ದು ರತ್ನಗಳನ್ನು ತಂದ.

ತತ್ರ ರುಕ್ಮೀ ನ ಯುಯುಧೇ ಸಹದೇವೇನ ವೀರ್ಯವಾನ್ ॥೨೧೩॥
ಜಿತಃ ಕೃಷ್ಣೇನ ಪೂರ್ವಂ ಯಃ ಶರ್ವಾದಾಪ ಧನುರ್ವರಂ ।
ತಪಸಾ ತೋಷಿತಾತ್ ಕೃಷ್ಣಾದನ್ಯಾನೇವಾಮುನಾಖಿಲಾನ್ ॥೨೧೪॥
ವಿಜೇಷ್ಯಸಿ ಯದಾ ಕೃಷ್ಣವಿರೋಧಸ್ತೇ ತದಾ ಧನುಃ ।
ಮಾಮೇಷ್ಯತೀತಿ ತೇನೋಕ್ತೋ ನ ವ್ಯರುಧ್ಯತ ಕೇಶವೇ ॥೨೧೫॥
ಸ್ವಸುಃ ಸ್ನೇಹಾಚ್ಚ ಕೃಷ್ಣಸ್ಯ ಯಜ್ಞಕಾರಯಿತೃತ್ವತಃ ।
ಭೀಮಾರ್ಜುನಬಲಾಚ್ಚೈವ ಮಾದ್ರೇಯಾಯ ದದೌ ಕರಂ ॥೨೧೬॥

ದಕ್ಷಿಣದಲ್ಲಿ ವೀರ್ಯಶಾಲಿಯಾದ ರುಕ್ಮಿ ಸಹದೇವನೊಡನೆ ಯುದ್ಧ ಮಾಡಲಿಲ್ಲ. ಏಕೆಂದರೆ ಹಿಂದೆ ರುಕ್ಮಿಣೀ ಸ್ವಯಂವರ ಕಾಲದಲ್ಲಿ ಕೃಷ್ಣನಿಂದ ಪರಾಜಿತನಾದ ಆತ ಶಿವನನ್ನು ತಪಸ್ಸಿನಿಂದ ಒಲಿಸಿಕೊಂಡು ಉತ್ತಮ ಧನುಸ್ಸನ್ನು ಪಡೆದ. ಆದರೆ 'ಈ ಧನುಸ್ಸಿನಿಂದ ಕೃಷ್ಣನನ್ನು ಹೊರತು ಬೇರೆ ಎಲ್ಲರನ್ನೂ ಗೆಲ್ಲುವಿ. ಕೃಷ್ಣನೊಡನೆ ವಿರೋಧ ಮಾಡಿದರೆ

ಧನುಸ್ಸು ನನ್ನ ಬಳಿಗೇ ಹಿಂತಿರುಗಿ ಬರುವುದು' ಎಂದು ಶಿವ ಹೇಳಿದ್ದ. ಅದರಿಂದಲೂ ತಂಗಿಯಾದ ರುಕ್ಮಿಣಿಯ ಮೇಲಿನ ಪ್ರೀತಿಯಿಂದಲೂ ರುಕ್ಮಿ ಕೃಷ್ಣನಲ್ಲಿ ವಿರೋಧ ಮಾಡುತ್ತಿರಲಿಲ್ಲ. ಈಗ ಕೃಷ್ಣನೆ ಸ್ವತಃ ನಿಂತು ಯಾಗವನ್ನು ಮಾಡಿಸುತ್ತಿದ್ದುದರಿಂದ ಮತ್ತು ಭೀಮಾರ್ಜುನರ ಬಲದಿಂದ ರುಕ್ಮಿ ಸಹದೇವನಿಗೆ ಕಪ್ಪ ಕೊಡಬೇಕಾಯಿತು.

ಜಿಗ್ಯೇ ಬಲೇನಾನ್ಯನೃಪಾನ್ ಸಹದೇವಃ ಪ್ರತಾಪವಾನ್ ॥೨೧೭॥

ಪ್ರತಾಪಶಾಲಿಯಾದ ಸಹದೇವ ಬೇರೆ ರಾಜರನ್ನು ಸ್ವಸಾಮರ್ಥ್ಯದಿಂದಲೇ ಗೆದ್ದ.

ತಥಾ ಸ್ಮೃತಂ ಸಮಾಗತಂ ಘಟೋತ್ಕಚಂ ವಿಭೀಷಣೇ ।
ಸಮಾದಿಶದ್ ಯಯೌ ಚ ಸೋಽಪ್ಯಸೌ ದದೌ ಮಹಾಕರಂ ॥೨೧೮॥

ಸ್ಮರಿಸಿದೊಡನೆ ಬಂದ ಘಟೋತ್ಕಚನನ್ನು ಸಹದೇವ ವಿಭೀಷಣನ ಬಳಿಗೆ ಕಳುಹಿಸಿದ. ಒಡನೆ ಅವನು ಅಲ್ಲಿಗೆ ಹೋದ. ವಿಭೀಷಣ ಅವನಿಗೆ ಬಹಳ ಕಪ್ಪವನ್ನು ಕೊಟ್ಟ.

ಪುರಾ ಹಿ ರಾಘವೋದಿತಂ ತದಸ್ಯ ಸೋಽಖಿಲಂ ತದಾ ।
ವಿಚಾರ್ಯ ಕೇಶವಂ ಚ ತಂ ಬಲಂ ಚ ಭೀಮಪಾರ್ಥಯೋಃ ।
ದಿವೌಕಸಶ್ಚ ಪಾಂಡವಾನವೇತ್ಯ ಸೋಽದದಾತ್ ಕರಂ ॥೨೧೯॥

ಘಟೋತ್ಕಚ ಬಂದಾಗ ವಿಭೀಷಣ ಹಿಂದೆ ಅವನಿಗೆ ಶ್ರೀರಾಮ ಹೇಳಿದ್ದನ್ನೆಲ್ಲ ನೆನೆಸಿಕೊಂಡ. ಶ್ರೀಕೃಷ್ಣ ಶ್ರೀರಾಮನೇ ಎಂಬುದನ್ನು ಆಲೋಚಿಸಿ, ಭೀಮಾರ್ಜುನರ ಬಲವನ್ನೂ ಆಲೋಚಿಸಿ ಪಾಂಡವರನ್ನು ದೇವತೆಗಳೆಂದೂ ತಿಳಿದು ಕಪ್ಪಕೊಟ್ಟ.

ಶ್ರೀರಾಮಚಂದ್ರ ವಿಭೀಷಣನಿಗೆ ಅಂದೇ ಹೇಳಿದ್ದ, 'ಘಟೋತ್ಕಚ ಬಂದಾಗ ಪಾಂಡವರ ರಾಜಸೂಯ ಯಾಗಕ್ಕೆ ಕಪ್ಪಕೊಡು' ಎಂದು. ಅದನ್ನು ನೆನೆದು ರಾಮನಾಜ್ಞೆ ಎಂದು ವಿಭೀಷಣ ಕಪ್ಪ ಕೊಟ್ಟ ಎಂದು ಜನಾರ್ದನೀಯ ತಾಮ್ರಪರ್ಣೀಯಗಳಲ್ಲಿ ಹೇಳಿದೆ.

ಮಹೌಘರತ್ನಸಂಚಯಂ ಸ ಆಪ್ಯ ಭೀಮಸೇನಜಃ ।
ಯಯೌ ಚ ಮಾದ್ರಿನಂದನಂ ಸ ಚಾಯಯೌ ಸ್ವಕಂ ಪುರಂ ॥೨೨೦॥

ಘಟೋತ್ಕಚ ವಿಭೀಷಣನಿಂದ ಮಹೌಘ ರತ್ನರಾಶಿಯನ್ನು ತೆಗೆದುಕೊಂಡು ಸಹದೇವನ ಬಳಿಗೆ ಬಂದ. ಬಳಿಕ ಸಹದೇವ ತನ್ನ ಪಟ್ಟಣಕ್ಕೆ ಹಿಂದಿರುಗಿದ.

ಮಹೌಘವೆಂದರೆ ಕೋಟಿಗೂ ಮಿಗಿಲಾದ ಸಂಖ್ಯೆ. ಒಂದು ಕೋಟಿಗೆ ಅರವತ್ತು ಸೊನ್ನೆಗಳನ್ನು ಸೇರಿಸಿದರೆ ಸಿಗುವಂಥದ್ದು.

ನಕುಲಃ ಪಶ್ಚಿಮಾಶಾಯಾಂ ವಿಜಿಗ್ಯೇಽಖಿಲಭೂಭೃತಃ ।
ಕರಮಾಪ ಚ ವೀರೋಽಸೌ ಸೌಹಾರ್ದಾದೇವ ಮಾತುಲಾತ್ ।
ಆಯಯೌ ಚ ಮಹಾರತ್ನಸಂಚಯೇನ ಸ್ವಕಂ ಪುರಂ ॥೨೨೧॥

ವೀರನಾದ ನಕುಲ ಪಶ್ಚಿಮ ದಿಕ್ಕಿನಲ್ಲಿ ಎಲ್ಲ ರಾಜರನ್ನೂ ಗೆದ್ದ. ಪ್ರೀತಿಯಿಂದಲೆ ತನ್ನ ಸೋದರಮಾವನಾದ ಶಲ್ಯನಿಂದಲೂ ಕಪ್ಪವನ್ನು ಪಡೆದ. ಮಹಾರತ್ನರಾಶಿ ಸಮೇತನಾಗಿ ತನ್ನ ಪಟ್ಟಣಕ್ಕೆ ಹಿಂತಿರುಗಿದ.

ನಕುಲನಿಗೆ ಶಲ್ಯ ಸೋದರಮಾವ ಮಾತ್ರವಲ್ಲ ಹೆಣ್ಣುಕೊಟ್ಟ ಮಾವನೂ ಹೌದು.

ಅರ್ಜುನನ ದಿಗ್ವಿಜಯ

ಅರ್ಜುನಃ ಕಪಿವರೋಚ್ಛ್ರಿತಧ್ವಜಂ
ಸ್ಯಂದನಂ ಸಮಧಿರುಹ್ಯ ಗಾಂಡಿವೀ ।
ಯಾತ ಏವ ದಿಶಮುತ್ತರಾಂ ತದಾ
ಪಾರ್ವತೇಯಕುನೃಪಾಃ ಸಮಾಯಯುಃ ॥೨೨೨॥

ಅರ್ಜುನ ಕಪಿಶ್ರೇಷ್ಠನಾದ ಹನುಮಂತನಿಂದ ಯುಕ್ತವಾದ ಉನ್ನತಧ್ವಜವುಳ್ಳ ರಥವೇರಿ ಗಾಂಡೀವಧರಿಸಿ ಉತ್ತರ ದಿಕ್ಕಿಗೆ ಹೋದಾಗ ಪರ್ವತವಾಸಿಗಳಾದ ಕ್ಷುದ್ರ ರಾಜರು ಅವನನ್ನು ತಡೆದರು.

ಪರ್ವತವಾಸಿಗಳಾದ ಈ ರಾಜರು ಕ್ಷುದ್ರರು. ಏಕೆಂದರೆ ಅವರು ಉತ್ತಮವಾದ ಕ್ಷತ್ರಿಯ ಕುಲದಲ್ಲಿ ಹುಟ್ಟಿದವರಲ್ಲ. ಆಭೀರ ನಿಷಾದ ಮುಂತಾದ ಪಂಗಡದ ಕಾಡುಜನರು.

ತ್ರೈಗರ್ತಾಃ ಪಾರ್ವತೇಯಾಶ್ಚ ಸಹಿತಾಃ ಪಾಂಡುನಂದನಂ ।
ಅಭ್ಯೇತ್ಯ ಯೋಧಯಾಮಾಸುರ್ಜಾನಂತಸ್ತಚ್ಚಿಕೀರ್ಷಿತಂ ॥೨೨೩॥

ತ್ರಿಗರ್ತದೇಶದ ರಾಜನಿಂದ ಕೂಡಿದ ಪರ್ವತ ರಾಜ್ಯಗಳ ನಾಯಕರು ಅರ್ಜುನನ ಬಳಿಗೆ ಬಂದು ಅವನ ಉದ್ದೇಶವನ್ನರಿತು ಯುದ್ಧಮಾಡಿದರು.

ತ್ರಿಗರ್ತ ಈಗಿನ ಲಾಹೋರ್ ಜಿಲ್ಲೆಯ ಜಲಂಧರ. ಇಲ್ಲಿ ಸುಶರ್ಮ ಆಳುತ್ತಿದ್ದ. ಇವನು ಜರಾಸಂಧನ ಮಿತ್ರ. ದುರ್ಯೋಧನನ ಕಡೆಯಿಂದ ವಿರಾಟನಗರಕ್ಕೆ ಬಂದು ದಕ್ಷಿಣ ಗೋಗ್ರಹಣ ನಡೆಸಿ ವಿರಾಟನನ್ನು ಸೆರೆಹಿಡಿದಾಗ ಭೀಮ ಅವನನ್ನು ಬಿಡಿಸಿದ.

ತಾನ್ ವಿಜಿತ್ಯ ಯುಗಪತ್ಸ ಪಾಂಡವಃ
ಸಂಜಯನ್ ಕ್ರಮಶ ಏವ ತಾಂ ದಿಶಂ ।
ಪ್ರಾವ್ರಜಚ್ಚ ಭಗದತ್ತಮೂರ್ಜಿತಂ
ತೇನ ಚಾಸ್ಯ ಸಮಭೂನ್ಮಹಾರಣಃ ॥೨೨೪॥

ಅವರೆಲ್ಲರನ್ನೂ ಒಮ್ಮೆಗೇ ಪರಾಭವಗೊಳಿಸಿ ಅರ್ಜುನ ಕ್ರಮವಾಗಿ ಆ ಉತ್ತರದಿಕ್ಕನ್ನು ಗೆದ್ದು ಬಲಿಷ್ಠನಾದ ಭಗದತ್ತನಲ್ಲಿಗೆ ಹೋದ. ಅವನೊಂದಿಗೆ ದೊಡ್ಡ ಯುದ್ಧ ನಡೆಯಿತು.

ಸೋಽಭಿಯುಧ್ಯ ಸಗಜೋ ದಿನಾಷ್ಟಕಂ
ಶ್ರಾಂತ ಆಹ ಪುರುಹೂತನಂದನಂ ।
ಬ್ರೂಹಿ ತೇ ಸಮರಕಾರಣಂ ತ್ವಿತಿ
ಪ್ರಾಹ ದೇಹಿ ಕರಮಿತ್ಯಥಾರ್ಜುನಃ ॥೨೨೫॥

ಭಗದತ್ತ ಸುಪ್ರತೀಕವೆಂಬ ಆನೆಯನ್ನೇರಿ ಬಂದು ಎಂಟು ದಿನಗಳ ಕಾಲ ಯುದ್ಧ ಮಾಡಿ ಆಯಾಸಗೊಂಡು ಅರ್ಜುನನಿಗೆ ಹೇಳಿದ 'ನಿನ್ನ ಯುದ್ಧಕ್ಕೆ ಕಾರಣವೇನು ಹೇಳು' ಅರ್ಜುನನೆಂದ 'ಕಪ್ಪ ಕೊಡು'.

ಸೋಽಪ್ಯದಾತ್ಕರಮಮುಷ್ಯ ವಾಸವೋ
ಮದ್ಗುರುಸ್ತವ ಪಿತೇತಿ ಸಾದರಂ ।
ನೈವ ಜೇತುಮಿಹ ಶಕ್ಷ್ಯಸಿ ತ್ವಮಿ-
ತ್ಯಾವದದ್ಧರಿವರಾಸ್ತ್ರತೇಜಸಾ ॥೨೨೬॥

'ನಿನ್ನ ತಂದೆ ಇಂದ್ರ ನನಗೆ ಗುರು' ಎನ್ನುತ್ತ ಭಗದತ್ತ ಆದರಪೂರ್ವಕವಾಗಿ ಅರ್ಜುನನಿಗೆ ಕಪ್ಪವನ್ನಿತ್ತ. ಆದರೆ 'ನನ್ನಲ್ಲಿರುವ ವೈಷ್ಣವಾಸ್ತ್ರ ತೇಜಸ್ಸಿನಿಂದ ನೀನು ನನ್ನನ್ನು ಗೆಲ್ಲಲು ಸಾಧ್ಯವಿಲ್ಲ' ಎಂದ.

ಸ್ನೇಹಪೂರ್ವಂ ಪ್ರದತ್ತೇ ತು ಕರೇ ನೈವಾಹ ಚೋತ್ತರಂ ।
ಅರ್ಜುನೋ ವ್ಯರ್ಥಕಲಹಮನಿಚ್ಛನ್ ಸ್ನೇಹಯಂತ್ರಿತಃ ॥೨೨೭॥

ಸ್ನೇಹಪೂರ್ವಕವಾಗಿ ಅವನು ಕಪ್ಪವನ್ನು ಕೊಟ್ಟಾದ ಬಳಿಕ ಅರ್ಜುನ ಏನೂ ಉತ್ತರಕೊಡಲಿಲ್ಲ. ಸ್ನೇಹಕ್ಕೆ ಕಟ್ಟುಬಿದ್ದು ವ್ಯರ್ಥಕಲಹವನ್ನು ಬಯಸದೆ ಸುಮ್ಮನಾದ.

[1]'ನಿನ್ನ ತಂದೆ ನನಗೆ ಗುರು' ಎಂದಿದ್ದಾನೆ ಭಗದತ್ತ. ಅದರಿಂದ ಗುರುಪುತ್ರನಾದ ತನಗೂ ಆತ ಶಿಷ್ಯ. ತಂದೆಯ ಶಿಷ್ಯ ಮಗನಿಗೂ ಶಿಷ್ಯನೆ. ಇನ್ನೇಕೆ ಕಲಹ ಎಂದು ಅರ್ಜುನ ಸುಮ್ಮನಾದ. 'ನೀನು ನನ್ನನ್ನು ಗೆಲ್ಲಲಾರೆ' ಎಂದು ಭಗದತ್ತನಾಡಿದ ಮಾತನ್ನು ಸಹಿಸಿಕೊಂಡ. ಅವನು ತೋರಿದ ಸ್ನೇಹ ಆದರಗಳನ್ನು ಮೆಚ್ಚಿಕೊಂಡ.

ಪಾರ್ಥೋಽಜಿತ್ವಾಷ್ಟವರ್ಷಾಣಿ ಷಟ್ ದ್ವೀಪಾನಪರಾನಪಿ ।
ಅಜಯಚ್ಚತುರ್ದಿಶಮಪಿ ಸರ್ವಶಸ್ತ್ರಾಸ್ತ್ರತೇಜಸಾ ॥೨೨೮॥

---

1. ಪಿತುಃ ಶಿಷ್ಯೋ ಹ್ಯಾತ್ಮ ಶಿಷ್ಯ ಇತಿವಚನಾತ್ ಅರ್ಜುನೋಽಪಿ ಮದ್ಗುರುರಿತ್ಯಭಿಪ್ರಾಯೇಣ ಸಾದರಂ ಪ್ರೀತಿಪೂರ್ವಕಂ ಅಮುಷ್ಯ ಕರಂ ದದೌ। -ಜನಾರ್ದನೀಯ

ಅರ್ಜುನ ಎಂಟು ವರ್ಷಗಳನ್ನೂ ಆರು ದ್ವೀಪಗಳನ್ನೂ ವಶಪಡಿಸಿಕೊಂಡು ಸಕಲಶಸ್ತ್ರಾಸ್ತ್ರತೇಜಸ್ಸಿನಿಂದ ನಾಲ್ಕೂ ದಿಕ್ಕುಗಳನ್ನು ಗೆದ್ದ.

ಈ ಜಂಬೂದ್ವೀಪದಲ್ಲಿ ನಾವಿರುವ ಭಾರತ ವರ್ಷ ಹೊರತಾಗಿ ಇನ್ನೂ ಬೇರೆ ಎಂಟು ವರ್ಷಗಳಿವೆ. ಕಿಂಪುರುಷ ಹರಿವರ್ಷ ಇಲಾವೃತ ಭದ್ರಾಶ್ವ ಕೇತುಮಾಲ ಹಿರಣ್ಮಯ ರಮ್ಯಕ ಕುರು ಎಂದು. ಜಂಬೂದ್ವೀಪವಲ್ಲದೆ ಇನ್ನೂ ಆರು ದ್ವೀಪಗಳಿವೆ ಪ್ಲಕ್ಷ ಶಾಲ್ಮಲಿ ಕುಶ ಕ್ರೌಂಚ ಶಾಕ ಪುಷ್ಕರ ಎಂದು.

[1]ಹಿಂದೆ ವ್ಯಾಸರು ಸಪ್ತದ್ವೀಪಗಳನ್ನು ಗೆದ್ದು ಬಾ ಎಂದಿದ್ದರು. ಇಲ್ಲಿ ಆರೇ ದ್ವೀಪಗಳನ್ನು ಗೆದ್ದಂತೆ ಕಾಣುತ್ತದೆ. ಆದರೂ ವಿರೋಧವಿಲ್ಲ. ಹಿಂದೆ ಜಂಬುದ್ವೀಪದ ಎಂಟು ವರ್ಷಗಳನ್ನು ಒಟ್ಟಾಗಿ ಒಂದು ದ್ವೀಪವೆಂದು ಪರಿಗಣಿಸಿ ಸಪ್ತದ್ವೀಪವೆಂದಿದೆ. ಇಲ್ಲಿ ಅವುಗಳನ್ನು ಪ್ರತ್ಯೇಕ ಹೇಳಿ ಉಳಿದ ಆರು ದ್ವೀಪಗಳನ್ನೂ ಹೇಳಿದೆ. ಬರಿ ಆರು ದ್ವೀಪಗಳೆ ಅಲ್ಲ ಇನ್ನೂ ಹೆಚ್ಚೆಂದು ಸೂಚಿಸುವುದಕ್ಕಾಗಿ ಈ ಶ್ಲೋಕದ ತೃತೀಯಪಾದದಲ್ಲಿ ಒಂದು ಅಕ್ಷರ ಹೆಚ್ಚು

ಪಾತಾಲಸಪ್ತಕಂ ಗತ್ವಾ ಜಿತ್ವಾ ದೈತೇಯದಾನವಾನ್ ।
ಬಲೇಶ್ಚ ವಿಷ್ಣುವಚನಾತ್ ಕರಂ ಜಗ್ರಾಹ ಸಾಮತಃ ॥೨೨೯॥

ಅರ್ಜುನ ಏಳು ಪಾತಾಳಗಳನ್ನು ಹೊಕ್ಕು ದೈತ್ಯದಾನವರನ್ನು ಗೆದ್ದು ಶ್ರೀಹರಿಯ ಆಜ್ಞೆಯಂತೆ ಬಲಿಯಿಂದ ಕಪ್ಪವನ್ನು ಸಾಮದಿಂದಲೆ ತೆಗೆದುಕೊಂಡ.

ಸಾಮ ದಾನ ಭೇದ ದಂಡ ಎಂದು ಪರರಾಜರೊಡನೆ ವ್ಯವಹರಿಸಲು ನಾಲ್ಕು ಉಪಾಯಗಳಿವೆ. ಸಾಮವೆಂದರೆ ಶಾಂತಿಪೂರ್ವಕವಾದ ಒಪ್ಪಂದ. ದಾನವೆಂದರೆ ಹಣಕೊಟ್ಟು ಪರರಾಜರನ್ನು ವಶದಲ್ಲಿಟ್ಟುಕೊಳ್ಳುವುದು. ಭೇದವೆಂದರೆ ಪರರಾಜರೊಳಗೆ ಪರಸ್ಪರ ಒಡಕು ಉಂಟುಮಾಡಿ ಅವರ ಬಲವನ್ನು ಕುಗ್ಗಿಸಿ ತನ್ನ ವಶದಲ್ಲಿಟ್ಟುಕೊಳ್ಳುವುದು. ದಂಡ ಎಂದರೆ ನೇರ ಸೈನಿಕ ಕಾರ್ಯಾಚರಣೆಯಿಂದ ವಶಮಾಡಿಕೊಳ್ಳುವುದು. ಅರ್ಜುನ ಬಲಿಯನ್ನು ಸಾಮೋಪಾಯದಿಂದಲೆ ಗೆದ್ದು ಕಪ್ಪವನ್ನು ತೆಗೆದುಕೊಂಡ. ಇದು ಶ್ರೀಹರಿಯ ಆಜ್ಞೆಯಿಂದ ಸಾಧ್ಯವಾಯಿತು.

ಇಲ್ಲಿ ಶ್ರೀಹರಿ ಎಂದರೆ ಬಲಿಯ ಅರಮನೆಯಲ್ಲಿಯೆ ಇರುವ

---

1. ಪೂರ್ವಂ ಜಂಬೂದ್ವೀಪಸ್ಥಾಷ್ಟಖಂಡಾಪೇಕ್ಷಯಾ ಸಪ್ತದ್ವೀಪಾಂಶ್ಚಪ್ರಯಾಹೀತಿವ್ಯಾಸೇನೋಕ್ತಮಿತಿ ಜ್ಞಾಪಯಿತುಂ ಪಾರ್ಥಇತ್ಯಸ್ಮಿನ್ ಶ್ಲೋಕಸ್ಥ ತೃತೀಯ ಪಾದೇ ನವಾಕ್ಷರಾಣಿ। - ಜನಾರ್ದನೀಯ

ವಾಮನಮೂರ್ತಿ ಎಂದು ತಾಮ್ರಪರ್ಣೀಯ ಹೇಳಿದೆ. ಶ್ರೀಹರಿಯ ಕಪಿಲಾವತಾರವೆಂದು ಜನಾರ್ದನೀಯ ಹೇಳಿದೆ.[1]

ಜಿತ್ವಾ ಚ ವಾಸುಕಿಂ ಭೂರಿರತ್ನಮಾದಾಯ ಸತ್ವರಃ ।
ಆಜಗಾಮ ಪುರಂ ಸ್ವೀಯಂ ವೀರೋ ವತ್ಸರಮಾತ್ರತಃ ॥೨೩.೦॥

ವಾಸುಕಿಯನ್ನೂ ಗೆದ್ದು ಬಹಳ ರತ್ನವನ್ನು ತೆಗೆದುಕೊಂಡು ಬೇಗನೆ ಒಂದೇ ವರ್ಷದಲ್ಲಿ ವೀರನಾದ ಅರ್ಜುನ ತನ್ನ ಪಟ್ಟಣಕ್ಕೆ ಹಿಂತಿರುಗಿ ಬಂದ.

ಸುವರ್ಣರತ್ನಗಿರಯಶ್ಚತುರ್ಭಿಸ್ತೈಃ ಸಮಾರ್ಜಿತಾಃ ।
ಚತ್ವಾರೋ ಯೋಜನಾನಾಂ ಹಿ ದಶತ್ರಿಂಶಚ್ಛತಂ ತಥಾ ॥೨೩.೧॥
ಚತುಃಶತಂ ಚ ಕ್ರಮಶ ಉಚ್ಛ್ರಿತಾ ದಿಗ್ಜಯಾರ್ಜಿತಾಃ ।
ಪ್ರತೀಚ್ಯಾದ್ಯಪಸವ್ಯೇನ ಕ್ರಮಾದ್ ದಿಗ್ಭ್ಯಃ ಸಮಾರ್ಜಿತಾಃ ॥೨೩.೨॥

ಬಂಗಾರ ರತ್ನಗಳ ನಾಲ್ಕು ಬೆಟ್ಟಗಳನ್ನೆ ನಕುಲ ಸಹದೇವ ಭೀಮ ಅರ್ಜುನರು ನಾಲ್ವರು ಸಂಪಾದಿಸಿದರು. ಪಶ್ಚಿಮದಿಂದ ತೊಡಗಿ ಅಪ್ರದಕ್ಷಿಣವಾಗಿ ನಾಲ್ಕು ದಿಕ್ಕುಗಳಿಂದ ಅವರು ದಿಗ್ವಿಜಯದಲ್ಲಿ ಸಂಪಾದಿಸಿದ ರತ್ನಪರ್ವತಗಳು ಕ್ರಮವಾಗಿ ಹತ್ತು ಮೂವತ್ತು ನೂರು ಮತ್ತು ನಾನ್ನೂರು ಯೋಜನ ವಿಸ್ತಾರವಾಗಿದ್ದುವು.

'ಅಪಸವ್ಯ' ವೆಂದರೆ ಎಡವಲ್ಲ, ಬಲ ಎಂದು ಸಾಮಾನ್ಯವಾಗಿ ಗ್ರಹಿಕೆ. ಅದರಿಂದ ಪ್ರದಕ್ಷಿಣವಾಗಿ ಎನ್ನಬೇಕಾಗುತ್ತದೆ. ಆದರೆ ವಸ್ತುತಃ ಶರೀರದ ಭಾಗಗಳನ್ನು ಹೇಳುವಾಗ ಮಾತ್ರ, ಹಾಗೆ ಅರ್ಥ. ಬೇರೆ ಕಡೆ ಅಪಸವ್ಯ ಎಂದರೆ ಎಡ ಎಂದೂ ಅರ್ಥವಿದೆ. 'ಶರೀರದ ಎಡಭಾಗವನ್ನು ಸವ್ಯ ವೆಂದೂ ಬಲಭಾಗವನ್ನು ಅಪಸವ್ಯವೆಂದೂ ಹೇಳುತ್ತಾರೆ' ಎಂಬ ಕೋಶ ವಚನದಲ್ಲಿ 'ಶರೀರದ ಎಡಭಾಗ, ಬಲಭಾಗ' ಎಂದು ಸ್ಪಷ್ಟ ಹೇಳಿದೆ. ಪ್ರಕೃತ ಶರೀರದ ಬಗ್ಗೆ ಹೇಳುತ್ತಿಲ್ಲ. ದಿಕ್ಕಿನ ಬಗ್ಗೆ ಹೇಳುತ್ತಿರುವುದರಿಂದ ಅಪಸವ್ಯವೆಂದರೆ ಎಡ, ಅಪ್ರದಕ್ಷಿಣ ಎಂದು ವಾದಿರಾಜೀಯ ಹೇಳಿದೆ.[2]

ನಕುಲ ಸಂಪಾದಿಸಿದ ರತ್ನಪರ್ವತ ಹತ್ತು ಯೋಜನ ಉದ್ದ ಅಗಲ ಎತ್ತರವಾಗಿತ್ತು. ಸಹದೇವನದು ಮೂವತ್ತು ಯೋಜನ. ಭೀಮನದು

---

1. ವಿಷ್ಣುವಚನಾತ್ ಬಲಿದ್ವಾರಸ್ಥವಾಮನವಚನಾತ್ । -ತಾಮ್ರಪರ್ಣೀಯ
   ವಿಷ್ಣುವಚನಾತ್ ಬಲಿದ್ವಾರಸ್ಥ ಕಪಿಲಾಖ್ಯ ವಿಷ್ಣುವಚನಾತ್ । -ಜನಾರ್ದನೀಯ
2. ವಾಮಂ ಶರೀರೇ ಸವ್ಯಂ ಸ್ಯಾದಪಸವ್ಯಂ ತು ದಕ್ಷಿಣೇ ಇತ್ಯನುಶಾಸನೇ ಶರೀರ ಇತಿ ವಿಶೇಷಣಾದಪಸವ್ಯಪದಂ ಶರೀರ ಕರಚರಣಾದಿಷ್ವೇವ ದಕ್ಷಿಣವಾಚಕಂ। ಅನ್ಯತ್ರ ತು ವಾಮ-ವಾಚಕಮಪೀತಿ ಸೂಚಿತಂ। ಅತೋ ದಿಗ್ವಿಷಯತ್ವಾತ್ ಅಪಸವ್ಯಪದಂ ವಾಮವಾಚಕಮಿತಿ ಜ್ಞೇಯಂ।
   -ವಾದಿರಾಜೀಯ

ನೂರು ಯೋಜನ. ಅರ್ಜುನನದು ನಾನೂರು ಯೋಜನ. ಏಕೆಂದರೆ ಅರ್ಜುನ ಇಂದ್ರಾವತಾರನಾದ ಪ್ರಯುಕ್ತ ದೇವದೂತರು ಏಳು ದ್ವೀಪಗಳಲ್ಲಿರುವ ಎಲ್ಲ ರತ್ನಗಳನ್ನೂ ಅರ್ಜುನನಿಗೆ ತಂದೊಪ್ಪಿಸಿದ್ದರು.[1]

ವಿಶ್ವಕರ್ಮಕೃತತ್ವಾತ್ತು ಪುರಸ್ಯಾಲ್ಪೇಽಪಿ ಚ ಸ್ಥಲೇ ।
ಅಂತರ್ಗತಾಸ್ತೇ ಗಿರಯಸ್ತದದ್ಭುತಮಿವಾಭವತ್ ॥೨೩೩॥

ಇಂದ್ರಪ್ರಸ್ಥದಲ್ಲಿ ಇರುವ ಸ್ಥಳಾವಕಾಶ ಅಲ್ಪವಾಗಿದ್ದರೂ ಆ ನಗರ ವಿಶ್ವಕರ್ಮ ನಿರ್ಮಿತವಾದ್ದರಿಂದ ಆ ಎಲ್ಲ ರತ್ನಪರ್ವತಗಳೂ ನಗರದೊಳಗೆ ಇರಲು ಶಕ್ಯವಾಯಿತು. ಇದೊಂದು ನೋಡುವವರಿಗೆ ಬಹಳ ಅದ್ಭುತವಾಗಿತ್ತು.

ರಾಜಸೂಯ ಯಾಗ

ತತೋ ಯಜ್ಞಃ ಪ್ರವವೃತೇ ಕೃಷ್ಣದ್ವೈಪಾಯನೇರಿತಃ ।
ಋತ್ವಿಜೋ ಮುನಯೋಽತ್ರಾಸನ್ ಸರ್ವವಿದ್ಯಾಸು ನಿಷ್ಠಿತಾಃ ॥೨೩೪॥

ಬಳಿಕ ವೇದವ್ಯಾಸರ ನೇತೃತ್ವದಲ್ಲಿ ಯಾಗ ಪ್ರಾರಂಭವಾಯಿತು. ಸರ್ವ ವಿದ್ಯಾ ನಿಷ್ಣಾತರಾದ ಮುನಿಗಳು ಈ ಯಾಗದಲ್ಲಿ ಋತ್ವಿಜರಾದರು.

ಯಾಜ್ಞವಲ್ಕ್ಯಮುನಿ ಅಧ್ವರ್ಯು ಎಂಬ ಋತ್ವಿಜ. ಪೈಲ ಧೌಮ್ಯರು ಹೋತೃ ಗಣದ ಋತ್ವಿಜರು. ಸುಸಾಮ ಮುನಿ ಉದ್ಗಾತೃ ಎಂಬ ಋತ್ವಿಜ. ಸ್ವಯಂ ವೇದವ್ಯಾಸರು ಬ್ರಹ್ಮನೆಂಬ ಋತ್ವಿಜನೆನಿಸಿದರು. ಈ ಮುನಿಗಳ ಮಕ್ಕಳು ಮತ್ತು ಶಿಷ್ಯರು ಬೇರೆಬೇರೆ ಋತ್ವಿಜರಾಗಿ ಕಾರ್ಯವಹಿಸಿ ಕೊಂಡರು ಎಂದು ಮಹಾಭಾರತ ಹೇಳಿದೆ. ಬೇರೆ ಋತ್ವಿಜರು- ಅಧ್ವರ್ಯುವಿಗೆ ಸಹಾಯಕರಾಗಿ ಪ್ರತಿಪ್ರಸ್ಥಾತೃ, ನೇಷ್ಟೃ, ಉನ್ನೇಷ್ಟೃ ಎಂದು ಮೂವರು. ಬ್ರಹ್ಮನಿಗೆ ಬ್ರಾಹ್ಮಣಾಚ್ಛಂಸಿ, ಆಗ್ನೀಧ್ರ, ಪೋತೃ ಎಂದು ಮೂರು ಜನ. ಹೋತೃವಿಗೆ ಮೈತ್ರಾವರುಣ, ಅಚ್ಛಾವಾಕ, ಗ್ರಾವಸ್ತುತ್ ಎಂದು ಮೂವರು. ಉದ್ಗಾತೃವಿಗೆ ಪ್ರಸ್ತೋತೃ, ಪ್ರತಿಹರ್ತೃ ಸುಬ್ರಹ್ಮಣ್ಯ ಎಂದು ಮೂರು ಜನ. ಸದಸ್ಯ ಎಂದು ಇನ್ನೊಬ್ಬ ಬೇರೆ ಋತ್ವಿಜನಿದ್ದಾನೆ ಹೀಗೆ ಒಟ್ಟು ಹದಿನೇಳು ಮಂದಿ ಋತ್ವಿಜರು, ವೇದೋಕ್ತ ಯಜ್ಞಗಳಲ್ಲೆಲ್ಲ ಬೇಕು. ಇವರೆಲ್ಲರೂ ಸಕಲ ವಿದ್ಯಾನಿಷ್ಣಾತರು.

---

3. ನಕುಲಾರ್ಜಿತೋ ಗಿರಿಃ ದಶಯೋಜನೋಚ್ಛ್ರಿತಃ। ಸಹದೇವಾರ್ಜಿತ ಸ್ತ್ರಿಂಶದ್ಯೋಜನೋಚ್ಛ್ರಿತಃ। ಭೀಮಸೇನಾರ್ಜಿತಃ ಶತಯೋಜನೋಚ್ಛ್ರಿತಃ ಇತಿ ಭಾವಃ। ಸಪ್ತದ್ವೀಪಾಶ್ರಿತವಿತ್ತಾನಿ ಅರ್ಜುನಸ್ಯೇಂದ್ರಾವತಾರತ್ವಾದ್ದೇವದೂತೈರಾನೀತಾನೀತಿ ಜ್ಞೇಯಂ। -ವಾದಿರಾಜೀಯ

ಮಹಾಭಾರತ ಹೇಳುವಂತೆ 'ವೇದಮೂರ್ತಿ'ಗಳು. ವೇದಗಳೆ ಮೂರ್ತಿಮತ್ತಾಗಿ ಬಂದಂತಿರುವವರು.[1]

ದ್ವೈಪಾಯನೋಕ್ತವಿಧಿನಾ ದೀಕ್ಷಿತಂ ಚಕ್ರಿರೇ ನೃಪಂ
ಜ್ಯೇಷ್ಠತ್ವಾದ್ ಯಾಜಮಾನ್ಯಂ ತು ಪ್ರಣೀಧಾಯ ಯುಧಿಷ್ಠಿರೇ ॥೨೩೫॥
ಭೀಮಾರ್ಜುನಾದಯಃ ಸರ್ವೇ ಸಹ ತೇನ ಸಮಾಸಿರೇ ।
ಬ್ರಹ್ಮಾಣೇಪದಯೋಗ್ಯತ್ವಾತ್ ಕೃಷ್ಣೈಕಾ ಯಜ್ಞಪತ್ನ್ಯಭೂತ್ ॥೨೩೬॥
ಪದಾಯೋಗ್ಯತಯಾ ನಾನ್ಯಾಃ ಪತ್ನ್ಯಸ್ತೇಷಾಂ ಸಹಾಸಿರೇ ।
ಆಜ್ಞಯೈವ ಜಗದ್ಧಾತುರ್ವ್ಯಾಸಸ್ಯಾನಂತತೇಜಸಃ ॥೨೩೭॥

ಋತ್ವಿಜರು ವೇದವ್ಯಾಸರ ಆದೇಶದಂತೆ ಧರ್ಮರಾಜನನ್ನು ಯಜ್ಞದಲ್ಲಿ ದೀಕ್ಷಿತನನ್ನಾಗಿ ಮಾಡಿದರು. ಭೀಮಾರ್ಜುನಾದಿಗಳೆಲ್ಲರೂ ಯಜಮಾನತ್ವವನ್ನು ಜ್ಯೇಷ್ಠನಾದ ಪ್ರಯುಕ್ತ ಧರ್ಮರಾಜನಲ್ಲಿ ಇರಿಸಿ ತಾವು ಅವನೊಡನೆ ಕುಳಿತರು. ಸರಸ್ವತೀಪದವಿಗೆ ಯೋಗ್ಯಳಾದ್ದರಿಂದ ದ್ರೌಪದಿಯೊಬ್ಬಳೆ ಯಜಮಾನ ಪತ್ನಿಯಾಗಿ ಕುಳಿತಳು. ಪಾಂಡವರ ಬೇರೆ ಪತ್ನಿಯರು ಸರಸ್ವತೀಪದವಿಗೆ ಯೋಗ್ಯರಲ್ಲವಾದ್ದರಿಂದ ಅನಂತಶಕ್ತಿಉಳ್ಳ ಲೋಕಧಾರಕರಾದ ವೇದವ್ಯಾಸರ ಆಜ್ಞೆಯಂತೆ ಪಾಂಡವರ ಜೊತೆಗೆ ಕುಳಿತುಕೊಳ್ಳಲಿಲ್ಲ.

ಸ್ಥಲಮಪ್ಯತ್ರ ಸರ್ವಂ ಹಿ ರತ್ನಹೇಮಮಯಂ ತ್ವಭೂತ್ ।
ಕಿಮು ಪಾತ್ರಾದಿಕಂ ಸರ್ವಂ ಶಿಬಿರಾಣಿ ಚ ಸರ್ವಶಃ ॥೨೩೮॥

ಯಾಗಶಾಲೆಯಲ್ಲಿ ಎಲ್ಲ ಸ್ಥಳವೂ ಸುವರ್ಣರತ್ನಮಯವಾಗಿತ್ತು. ಯಜ್ಞಪಾತ್ರೆಗಳು ಮುಂತಾದವೂ ವಾಸಸ್ಥಳಗಳೂ ಸುವರ್ಣರತ್ನಮಯವೆಂದು ಬೇರೇನು ಹೇಳಬೇಕು?

ಆಹೂತಂ ದಿಗ್ಜಯೇ ಪಾರ್ಥೈಸ್ತದಾ ಲೋಕದ್ವಿಸಪ್ತಕಂ ।
ಸರ್ವಮತ್ರಾಗಮದ್ ಬ್ರಹ್ಮರುದ್ರಶಕ್ರಾದಿಪೂರ್ವಕಂ ॥೨೩೯॥

ದಿಗ್ವಿಜಯ ಕಾಲದಲ್ಲಿ ಭೀಮಾದಿಗಳು ಹದಿನಾಲ್ಕು ಲೋಕಗಳನ್ನೂ ಆಹ್ವಾನಿಸಿದ್ದರು. ಅದರಿಂದ ಬ್ರಹ್ಮ ರುದ್ರ ಇಂದ್ರ ಮುಂತಾಗಿ ಎಲ್ಲರೂ ಯಾಗಕ್ಕೆ ಬಂದರು.

---

1. ತತೋ ದ್ವೈಪಾಯನೋ ರಾಜನ್ ಋತ್ವಿಜಃ ಸಮುಪಾನಯತ್ ।
ವೇದಾನಿವ ಮಹಾಭಾಗಾನ್ ಸಾಕ್ಷಾನ್ಮೂರ್ತಿಮತೋ ದ್ವಿಜಾನ್ ।
ಸ್ವಯಂ ಬ್ರಹ್ಮತ್ವಮಕರೋತ್ ತಸ್ಯ ಸತ್ಯವತೀಸುತಃ ।
ಧನಂಜಯಾನಾಮೃಷಭಃ ಸುಸಾಮಾ ಸಾಮಗೋಽಭವತ್ ।
ಯಾಜ್ಞವಲ್ಕ್ಯೋ ಬಭೂವಾಥ ಬ್ರಹ್ಮಿಷ್ಠೋಽಧ್ವರ್ಯುಸತ್ತಮಃ ।
ಪೈಲೋ ಹೋತಾ ವಸೋಃ ಪುತ್ರೋ ಧೌಮ್ಯೇನ ಸಹಿತೋಽಭವತ್।
ಏತೇಷಾಂ ಪುತ್ರವರ್ಗಾಶ್ಚ ಶಿಷ್ಯಾಶ್ಚ ಭರತರ್ಷಭ।
ಬಭೂವುರ್ಹೋತ್ರಗಾಃ ಸರ್ವೇ ವೇದವೇದಾಂಗ ಪಾರಗಾಃ ॥ (ಮಹಾಭಾರತ ಸಭಾ 36-36)

ಭೀಷ್ಮೋ ದ್ರೋಣಶ್ಚ ವಿದುರೋ ಧೃತರಾಷ್ಟ್ರಃ ಸಹಾತ್ಮಜಃ ।
ಸಸ್ತ್ರೀಕಾ ಆಯಯುಸ್ತತ್ರ ಬಾಹ್ಲೀಕಶ್ಚ ಸಹಾತ್ಮಜಃ ॥೨೪೦॥

ಭೀಷ್ಮ ದ್ರೋಣ ವಿದುರ ಧೃತರಾಷ್ಟ್ರ, ಅವನ ಮಕ್ಕಳು, ಹೆಂಡಂದಿರು, ಬಾಹ್ಲೀಕ ಅವನ ಮಕ್ಕಳು ಎಲ್ಲರೂ ಅಲ್ಲಿಗೆ ಬಂದರು.

ತಥೈವ ಯಾದವಾಃ ಸರ್ವೇ ಬಲಭದ್ರಪುರೋಗಮಾಃ ।
ರುಕ್ಮಿಣೀಸತ್ಯಭಾಮಾದ್ಯಾ ಮಹಿಷ್ಯಃ ಕೇಶವಸ್ಯ ಚ ॥೨೪೧॥

ಬಲರಾಮ ಮುಂತಾದ ಎಲ್ಲ ಯಾದವರೂ ಬಂದರು. ರುಕ್ಮಿಣೀ ಸತ್ಯಭಾಮೆ ಮುಂತಾದ ಕೃಷ್ಣನ ಮಹಿಷಿಯರೂ ಬಂದರು.

ತತ್ರ ಸರ್ವಜಗದೇಕಸಂಗಮೇ
ತತ್ತ್ವನಿರ್ಣಯಕಥಾ ಬಭೂವಿರೇ ।
ಪ್ರಾಶ್ನಿಕೋಽತ್ರ ಪರಿಪೂರ್ಣಚಿದ್ಘನೋ
ವ್ಯಾಸ ಏವ ಭಗವಾನ್ ಬಭೂವ ಹ ॥೨೪೨॥

ಎಲ್ಲ ಲೋಕದ ಜನರೂ ಒಂದೆಡೆ ಸೇರಿದ್ದ ಆ ಯಾಗಶಾಲೆಯಲ್ಲಿ ತತ್ವನಿರ್ಣಯಕ್ಕಾಗಿ ವಿಚಾರಗೋಷ್ಠಿಗಳು ನಡೆದವು. ಆ ಗೋಷ್ಠಿಗಳಲ್ಲಿ ಪರಿಪೂರ್ಣ ಚಿದಾನಂದಸ್ವರೂಪರಾದ ಭಗವಾನ್ ವ್ಯಾಸರೆ ಪ್ರಾಶ್ನಿಕರಾಗಿದ್ದರು.

ವಿಚಾರಗೋಷ್ಠಿಗಳು ವಾದ ಜಲ್ಪ ವಿತಂಡಾ ಎಂದು ಮೂರು ಬಗೆಯಾಗಿರುವುವು. ಸ್ನೇಹ ಸೌಜನ್ಯ ಪೂರ್ಣವಾಗಿ ಕೇವಲ ತತ್ವನಿಷ್ಕರ್ಷೆಯ ಉದ್ದೇಶದಿಂದ ನಡೆಸುವ ಗೋಷ್ಠಿ ವಾದ ಎನಿಸುತ್ತದೆ. ತತ್ವನಿರ್ಣಯ ಉದ್ದೇಶದ ಜೊತೆಗೆ ಜಯ ಗಳಿಸಿ ಕೀರ್ತಿಯನ್ನೂ ಹಣವನ್ನೂ ಸಂಪಾದಿಸುವ ಉದ್ದೇಶದಿಂದಲೂ ನಡೆಸುವ ಚರ್ಚೆ ಜಲ್ಪವೆನಿಸುತ್ತದೆ. ನಾಸ್ತಿಕರ ಮುಂದೆ ಆವರ ವಾದವನ್ನು ಮುರಿಯುವ ಉದ್ದೇಶದಿಂದಲೆ ನಡೆಸುವ ಚರ್ಚೆ ವಿತಂಡಾ. ಇವುಗಳಲ್ಲಿ ಜಲ್ಪ ವಿತಂಡಾ ಗಳಲ್ಲಿ ವಾದಿ ಪ್ರತಿವಾದಿಗಳು ಯಾರು ಸರಿಯಾಗಿ ವಾದಿಸುತ್ತಿದ್ದಾರೆ, ಯಾರು ವಂಚನೆ ಮಾಡುತ್ತಿದ್ದಾರೆ, ಯಾರು ಗೆದ್ದ, ಯಾರು ಸೋತ ಇತ್ಯಾದಿಗಳ ಬಗ್ಗೆ ತೀರ್ಪು ಕೊಡುವವರು ಪ್ರಾಶ್ನಿಕರು. ಸೌಜನ್ಯಪೂರ್ಣ ವಾಗಿಯೆ ಚರ್ಚೆ ನಡೆಯುತ್ತಿದ್ದರೆ ಈ ಪ್ರಾಶ್ನಿಕರ ಆವಶ್ಯಕತೆ ಇರುವುದಿಲ್ಲ. ಪ್ರಕೃತ ರಾಜಸೂಯಯಾಗದಲ್ಲಿ ನಡುವೆ ಅಭಿಷೇಚನೀಯವೆಂದು ಒಂದು ಯಾಗವಿದೆ. ಅದರಲ್ಲಿ ವಿದ್ವಾಂಸರ ಚರ್ಚೆಗಳೂ ನಡೆಯಬೇಕು.

ಪಾಂಡಿತ್ಯ ದರ್ಶನಾರ್ಥಾಯ ಕೇಚನ ದ್ವಿಜಸತ್ತಮಾಃ ।

ತರ್ಕಾರ್ಥಮಾಗತಾಃ ಕೇಚಿತ್ ಕೇಚನ ದ್ವಿಜಸತ್ತಮಾಃ ॥
(ಸಭಾ 71-31)

ಎಂದು ಮಹಾಭಾರತ ಹೇಳುವಂತೆ ಜಲ್ಪ ವಿತಂಡಾಗಳೂ ಆಗ ನಡೆದಿದ್ದುವು. ಆದರಿಂದ ವೇದವ್ಯಾಸರು ಅಲ್ಲಿ ಪ್ರಾಶ್ನಿಕರಾಗಿ ಕುಳಿತರು.

ಅಶೇಷ ಸಂಶಯ ಚ್ಛೇತ್ತಾ ನಿಃಸಂಶಯ ಉದಾರಧೀಃ

'ತಾನು ಸಂಶಯರಹಿತನಾಗಿದ್ದು ಎಲ್ಲರ ಎಲ್ಲ ಸಂಶಯಗಳನ್ನು ಕಳೆಯಬಲ್ಲ ಉತ್ತಮ ಜ್ಞಾನಿ' ಪ್ರಾಶ್ನಿಕನಿರಬೇಕು. ಈ ಲಕ್ಷಣ ಪೂರ್ಣವಾಗಿ ಇರುವುದು ವೇದವ್ಯಾಸರಲ್ಲಿಯೆ.

ತತ್ತ್ವನಿರ್ಣಯಕಥಾಸು ನಿರ್ಣಯೋ
ವಾಸುದೇವಗುಣವಿಸ್ತರೋಽಭವತ್ ।
ನಾಸ್ತಿ ತತ್ಸದೃಶ ಉತ್ತಮಃ ಕುತಃ
ಪಾರ ಏಷ ನ ತತೋಽನ್ಯ ಇತ್ಯಪಿ ॥೨೪೩॥

ತತ್ವನಿರ್ಣಯಕ್ಕಾಗಿ ನಡೆದ ಗೋಷ್ಠಿಗಳಲ್ಲಿ ಶ್ರೀಹರಿಯ ಗುಣಪೂರ್ಣತ್ವದ ಬಗ್ಗೆ ನಿರ್ಣಯವಾಯಿತು - 'ಹರಿಗೆ ಸಮಾನನೆ ಇಲ್ಲ, ಇನ್ನು ಉತ್ತಮನೆಲ್ಲಿ? ತಾರತಮ್ಯದಲ್ಲಿ ಕೊನೆಯವನು ಅವನೇ ಹೊರತು ಇನ್ನೊಬ್ಬನಿಲ್ಲ' ಎಂದು.

ಅಗ್ರಪೂಜೆ

ಬಾದರಾಯಣಭೃಗೂತ್ತರಾಮಯೋಃ
ಶೃಣ್ವತೋಃ ಪರಮನಿರ್ಣಯೇ ಕೃತೇ ।
ಮೋದಮಾನಜನತಾಸಮಾಗಮೇಽ-
ಪೃಚ್ಛದತ್ರ ನೃಪತಿರ್ಯತವ್ರತಂ ॥೨೪೪॥

ವೇದವ್ಯಾಸ ಪರಶುರಾಮರು ಕೇಳುತ್ತಿದ್ದಂತೆ ಪರತತ್ವ ನಿರ್ಣಯ ನಡೆದಾಗ ಸಂತುಷ್ಟರಾದ ಜನರ ಗೋಷ್ಠಿಯಲ್ಲಿ ಧರ್ಮರಾಜ ಭೀಷ್ಮನನ್ನು ಕೇಳಿದ.

ಜಾನಮಾನೋಽಪಿ ನೃಪತಿಃ ಕೃಷ್ಣಂ ಪೂಜ್ಯತಮಂ ಹರಿಂ ।
ಸಂಶಯಂ ಭೂಭೃತಾಂ ಛೇತ್ತುಂ ಭೀಷ್ಮಂ ಪಪ್ರಚ್ಛ ಧರ್ಮವಿತ್ ॥೨೪೫॥

ಧರ್ಮರಾಜ ಕೃಷ್ಣನನ್ನು ಸರ್ವೋತ್ತಮ ಪೂಜ್ಯನೆನಿಸಿದ ಶ್ರೀಹರಿಯೆ ಎಂದು ತಿಳಿದಿದ್ದರೂ ರಾಜರ ಸಂಶಯವನ್ನು ಕಳೆವ ಉದ್ದೇಶದಿಂದ ಭೀಷ್ಮನಲ್ಲಿ ಪ್ರಶ್ನೆಗೈದ.

ನಾಸ್ತಿ ನಾರಾಯಣಸಮಮಿತಿ ವಾದೇನ ನಿರ್ಣಯೇ ।
ಕೃತೇ ಬ್ರಹ್ಮಾದಿಭಿರಪಿ ಕೃಷ್ಣಂ ಮರ್ತ್ಯಂ ಹಿ ಮೇನಿರೇ ॥೨೪೬॥

ನೃಪಾಸ್ತಸ್ಯಾದಯಂ ಕೃಷ್ಣೋ ನಾರಾಯಣ ಇತಿ ಸ್ಮ ಹ।
ಸಮ್ಯಗ್ ಜ್ಞಾಪಯಿತುಂ ಧರ್ಮಸೂನುರ್ಭೀಷ್ಮಮಪೃಚ್ಛತ ॥೨೪೭॥

ಏಕೆಂದರೆ ನಾರಾಯಣನಿಗೆ ಸಮರಿಲ್ಲ ಎಂದು ಬ್ರಹ್ಮಾದಿಗಳು ವಾದದಿಂದ ನಿರ್ಣಯ ಮಾಡಿದ್ದರೂ ರಾಜರು ಇನ್ನೂ ಕೃಷ್ಣನನ್ನು ಮನುಷ್ಯನೆಂದೇ ತಿಳಿದಿದ್ದರು. ಅದರಿಂದ ಕೃಷ್ಣ ನಾರಾಯಣನೇ ಎಂದು ಅವರಿಗೆ ಚೆನ್ನಾಗಿ ಮನವರಿಕೆ ಮಾಡಿಸಲು ಧರ್ಮರಾಜ ಭೀಷ್ಮನನ್ನು ಪ್ರಶ್ನಿಸಿದ.

ಬ್ರಹ್ಮಾದಯಃ ಸುರಾ ಯಸ್ಮಾದ್ ದೃಶ್ಯಂತೇ ಮರ್ತ್ಯವನ್ನೃಭಿಃ।
ನ ಚೈವಾತಿತರಾಭ್ಯಾಸೋ ನೃಣಾಮಸ್ತಿ ಮುನಿಷ್ವಪಿ ॥೨೪೮॥

ಬ್ರಹ್ಮಾದಿ ದೇವತೆಗಳು ಅಲ್ಲಿಗೆ ಮನುಷ್ಯವೇಷದಿಂದ ಬಂದಿದ್ದರಿಂದ ಮನುಷ್ಯರಿಗೆ ಮನುಷ್ಯರಂತೆಯೆ ಕಂಡರು. ಸದಾ ಅರಣ್ಯಗಳಲ್ಲಿ ಇರುವ ಮುನಿಗಳಲ್ಲಿಯೂ, ಅವರು ಹೆಚ್ಚು ಪರಿಚಿತರಾಗದ್ದರಿಂದ, ಮನುಷ್ಯರಿಗೆ ವಿಶ್ವಾಸವಿರಲಿಲ್ಲ.

ಸರ್ವಶಾಸ್ತ್ರವಿದಂ ಭೀಷ್ಮಂ ಜಾನಂತ್ಯೇತೇ ನೃಪಾ ಅಪಿ।
ತಸ್ಮಾದ್ ಭೀಷ್ಮಮಪೃಚ್ಛತ್ಸ ಕುಲವೃದ್ಧತ್ವತಸ್ತಥಾ ॥೨೪೯॥

ಭೀಷ್ಮ ಸರ್ವಶಾಸ್ತ್ರಗಳನ್ನು ಬಲ್ಲವನೆಂದು ಈ ರಾಜರೂ ತಿಳಿದಿದ್ದಾರೆ. ಅವನು ಮನೆತನದಲ್ಲಿ ಅತ್ಯಂತ ಹಿರಿಯನೂ ಆದ್ದರಿಂದ ಧರ್ಮರಾಜ ಅವನನ್ನೇ ಕೇಳಿದ.

ಪಿತಾಮಹಾಗ್ರ್ಯಪೂಜಾರ್ಹಃ ಕೋಽತ್ರ ಲೋಕಸಮಾಗಮೇ।
ಬ್ರಹ್ಮಶರ್ವಾದಯಶ್ಚಾತ್ರ ಸಂತಿ ರಾಜಾನ ಏವ ಚ ॥೨೫೦॥

ತಾತ, ಎಲ್ಲ ಜನರೂ ಸೇರಿರುವ ಈ ಯಜ್ಞಮಂಟಪದಲ್ಲಿ ಅಗ್ರಪೂಜೆಗೆ ಅರ್ಹನು ಯಾರು? ಬ್ರಹ್ಮ ರುದ್ರಾದಿಗಳೂ ಇಲ್ಲಿ ಇದ್ದಾರೆ, ರಾಜರುಗಳೂ ಇದ್ದಾರೆ.

ಇತಿ ಪೃಷ್ಟೋಽಬ್ರವೀದ್ ಭೀಷ್ಮಃ ಕೃಷ್ಣಂ ಪೂಜ್ಯತಮಂ ಪ್ರಭುಂ ॥೨೫೧॥

ಧರ್ಮರಾಜ ಹೀಗೆ ಕೇಳಿದಾಗ ಭೀಷ್ಮನೆಂದ, 'ಪ್ರಭು ಶ್ರೀಕೃಷ್ಣನೆ ಪರಮಪೂಜ್ಯ'.

ರಾಜಸೂಯಾಶ್ವಮೇಧ ಯಾಗವೆಂದರೆ ಅನೇಕ ಯಾಗಗಳ ಸಮೂಹ. ಅವುಗಳಲ್ಲಿ ಅಭಿಷೇಚನೀಯ ಯಾಗ ಒಂದು. ಅದರಲ್ಲಿ ರಾಜನಿಗೆ ಪುಣ್ಯ ತೀರ್ಥಜಲದ ಅಭಿಷೇಕವಿದೆ. ಅದೇ ಸಮಯದಲ್ಲಿ ಪ್ರತಿಷ್ಠಿತರಾದ ಗಣ್ಯ ವ್ಯಕ್ತಿಗಳನ್ನು ಆರಿಸಿ ಅವರಿಗೆ ಮೊದಲ ಅರ್ಘ್ಯ ಪಾದ್ಯ ಮಧುಪರ್ಕಗಳ ಗೌರವ ನೀಡಬೇಕು. ಋತ್ವಿಜ, ಗುರು, ಆಚಾರ್ಯ, ಸ್ನಾತಕ, ರಾಜ, ಪ್ರಿಯಬಂಧು - ಈ ಆರು ಮಂದಿಗೆ ಮೊದಲು ಸತ್ಕಾರವಿದೆ. ಅವರಲ್ಲಿಯೂ ಸರ್ವಶ್ರೇಷ್ಠನಾದ ವ್ಯಕ್ತಿಗೆ ಮೊದಲ ಸತ್ಕಾರ. ಶ್ರೀಕೃಷ್ಣನೆ ಈ ಅಗ್ರಪೂಜೆಗೆ ಅರ್ಹನೆಂದು ಭೀಷ್ಮನುಡಿದ.

[1]ನಿರ್ಣಯದಲ್ಲಿ ಹೀಗೆ ಭೀಷ್ಮ ಹೇಳಿದರೂ ಭಾಗವತದಲ್ಲಿ ಈ ಮಾತನ್ನು ಹೇಳುವವನು ಸಹದೇವ. ಆದರೆ ಮಹಾಭಾರತದಲ್ಲಿಯೂ ಭೀಷ್ಮನ ಮಾತಿನಂತೆ ಸಭೆಯಲ್ಲಿ ಅಧಿಕೃತವಾಗಿ ಘೋಷಣೆ ಮಾಡುವವನು ಸಹದೇವ. ಆದರಿಂದ ನಿರ್ಣಯದಲ್ಲಿ ಈ ಅಂಶವೂ ವಿವಕ್ಷಿತ ಎಂದಿಟ್ಟುಕೊಳ್ಳಬೇಕು.

ಯದ್ಯಪ್ಯೇಕಸ್ತ್ರಿಧಾ ವಿಷ್ಣುರ್ವಸಿಷ್ಠಭೃಗುವೃಷ್ಣಿಷು ।
ಪ್ರಾದುರ್ಭೂತಸ್ತಥಾಪ್ಯೇತೇ ನೃಪಾ ಹಿ ವ್ಯಾಸರಾಮಯೋಃ ।
ವಿಪ್ರತ್ವಾನ್ನ ವಿರುಧ್ಯಂತೇ ತತ ಏವ ಚ ಯುಕ್ತತಾಂ ॥೨೫೨॥
ಮನ್ಯಂತೇ ನ ವಿರೋಧಶ್ಚ ತೇಷಾಂ ತತ್ರ ಹಿ ತಾದೃಶಃ ॥೨೫೩॥

ಒಬ್ಬನೆ ವಿಷ್ಣು ವಸಿಷ್ಠ ಭೃಗು ಮತ್ತು ವೃಷ್ಣಿ ಕುಲಗಳಲ್ಲಿ ವ್ಯಾಸ ಪರಶುರಾಮ ಕೃಷ್ಣ ಎಂದು ಮೂರು ರೂಪಗಳಿಂದ ಅವತರಿಸಿದ್ದಾನೆ. ಆದರೂ ರಾಜರು ವ್ಯಾಸ ಪರಶುರಾಮರನ್ನು ಅವರು ಬ್ರಾಹ್ಮಣರಾದ್ದರಿಂದ ವಿರೋಧಿಸುವುದಿಲ್ಲ. ಬ್ರಾಹ್ಮಣರಾದ್ದರಿಂದಲೆ ಅಗ್ರಪೂಜೆಗೆ ಅರ್ಹತೆಯನ್ನು ಒಪ್ಪುತ್ತಾರೆ. ಕೃಷ್ಣನಲ್ಲಿರುವಂತೆ ವ್ಯಾಸ ಪರಶುರಾಮರಲ್ಲಿ ಅವರಿಗೆ ವೈರವೂ ಇರುವುದಿಲ್ಲ.

ಅವಿವಾದೇ ಪ್ರಸಿದ್ಧಿಶ್ಚ ನೈವಾಸ್ಯ ಭವಿತಾ ಕ್ವಚಿತ್ ।
ತಸ್ಮಾತ್ಕೃಷ್ಣಾಯ ದಾತವ್ಯಮಿತಿ ಭೀಷ್ಮೇಣ ಚಿಂತಿತಂ ॥೨೫೪॥

ವಿವಾದ ಉಂಟಾಗದಿದ್ದರೆ ಕೃಷ್ಣ ನಾರಾಯಣನೆನ್ನುವುದರ ಪ್ರಸಿದ್ಧಿ ಎಂದೂ ಉಂಟಾಗಲಾರದು. ಆದರಿಂದ ಕೃಷ್ಣನಿಗೇ ಅಗ್ರಪೂಜೆ ನೀಡಬೇಕೆಂದು ಭೀಷ್ಮ ಆಲೋಚಿಸಿದ.

ವೇದವ್ಯಾಸರೂ ಪರಶುರಾಮರೂ ಕುಲದಲ್ಲಿ ಅತ್ಯಂತ ಹಿರಿಯರು ಮಾತ್ರವಲ್ಲ, ಬ್ರಾಹ್ಮಣರು. ಅವರಿಗೆ ಅಗ್ರಪೂಜೆ ನೀಡಿದರೆ ಯಾರೂ ವಿರೋಧಿಸುವುದಿಲ್ಲ. ಆದರೆ ಇದು ಕೇವಲ ಬ್ರಾಹ್ಮಣರೆಂದು ವಿನಃ ಪರಮಾತ್ಮನ ಅವತಾರವೆಂದಲ್ಲ. ಇತ್ತ ಪರಮಾತ್ಮನ ಅವತಾರವಾದ ಕೃಷ್ಣನಿಗೆ ಪೂಜೆ ಇಲ್ಲ ಅವನು ಪರಮಾತ್ಮನ ಅವತಾರವಲ್ಲವೆಂದೂ ಸಾಮಾನ್ಯರು ತಿಳಿಯಬಹುದು. ಕೃಷ್ಣನಿಗೆ ಅಗ್ರಪೂಜೆ ನೀಡಿದರೆ ರಾಜರ ದೃಷ್ಟಿಯಲ್ಲಿ ಬೇರೆ ಯಾವ ಅರ್ಹತೆಯೂ ಅವನಲ್ಲಿ ಕಾಣದುದರಿಂದ ಪರಮಾತ್ಮನ

---

1. ಪ್ರಥಮ ವಕ್ತಾ ದೇವವ್ರತಃ ಸಹದೇವಂ ಪ್ರತಿ। ಸಹದೇವಸ್ತು ಸಭ್ಯಾನ್ ಪ್ರತಿ। ವಕ್ತೇತಿ ವಚನ ಶಾಬಲ್ಯೇನಾರ್ಥಃ ಸಂಭಾವಿತ ಇತ್ಯನುಕ್ತೇ ಸಂಭವತಃ। ಉಕ್ತಂಚ ತತ್ರೈವ ಭಾರತೇ ತಸ್ಮೈ ಭೀಷ್ಮಾಭ್ಯನುಜ್ಞಾತಃ ಸಹದೇವ ಇತಿ। ಅತ್ರ ದೇವವ್ರತಸ್ತತ್ರ ಸಹದೇವಶ್ಚ ಗ್ರಾಹ್ಯಾವಿತಿ ನ ವಿರೋಧಃ।
-ಭಾಗವತ ಸತ್ಯಧರ್ಮೀಯ

ಅವತಾರವೆಂದೇ ಪೂಜಿ ನೀಡಬೇಕು. ಇದನ್ನು ಶಿಶುಪಾಲಾದಿಗಳು ಒಪ್ಪದೆ ವಿವಾದ ಮಾಡುವರು. ಕೊನೆಯಲ್ಲಿ ಶ್ರೀಕೃಷ್ಣ ಪರಮಾತ್ಮನ ಅವತಾರವೆಂದೇ ಸಿದ್ಧವಾಗುವುದೆಂದು ಭೀಷ್ಮರು ಆಲೋಚಿಸಿದ್ದರು.

ಕೃಷ್ಣಾಯ ದತ್ತೇ ರಾಜಾನೋ ವಿವಾದಂ ಕುರ್ಯುರಂಜಸಾ ।
ವಿವಾದೇನ ಚ ಕೀರ್ತಿಃ ಸ್ಯಾದ್ ವಾಸುದೇವಸ್ಯ ವಿಸ್ತೃತಾ ।
ತತಃ ಕೃಷ್ಣಾಯಾಗ್ರ್ಯಪೂಜಾ ದತ್ತಾ ಪಾರ್ಥೈರ್ಜಗತ್ಪುರಃ ॥೨೫೫॥

ಶ್ರೀಕೃಷ್ಣನಿಗೆ ಅಗ್ರಪೂಜೆ ನೀಡಿದರೆ ರಾಜರು ಬಹಳ ಆಗ್ರಹದಿಂದ ವಿವಾದವೆಬ್ಬಿಸುತ್ತಾರೆ. ವಿವಾದದಿಂದ ಕೃಷ್ಣನ ಕೀರ್ತಿ ಹರಡುತ್ತದೆ, ಎಂದು ಭೀಷ್ಮ ಆಲೋಚಿಸಿದ. ಹೀಗೆ ವಿವಾದ ಉಂಟಾಗಲೆಂದೇ ಪಾಂಡವರೂ ಎಲ್ಲರ ಮುಂದೆ ಕೃಷ್ಣನಿಗೆ ಅಗ್ರಪೂಜೆ ನೀಡಿದರು.

ವ್ಯಾಸಭಾರ್ಗವಯೋಃ ಸಾಕ್ಷಾತ್ತದ್ಪೈಕ್ಯಾತ್ತದನಂತರಂ ।
ಅಗ್ರ್ಯಂ ಪೂಜಾಂ ದದುಶ್ಚಾನ್ಯಾನ್ ಯಥಾಯೋಗ್ಯಮಪೂಜಯನ್ ॥೨೫೬॥

ಶ್ರೀಕೃಷ್ಣನಿಗೆ ಪೂಜೆ ನೀಡಿದ ಬಳಿಕ ವ್ಯಾಸ ಪರಶುರಾಮರಿಗೆ ಕೃಷ್ಣನಿಂದ ಸಾಕ್ಷಾತ್ ಅಭೇದವಿರುವುದರಿಂದ ಅಗ್ರಪೂಜೆ ನೀಡಿದರು. ಬಳಿಕ ಉಳಿದವರನ್ನು ಅವರ ಯೋಗ್ಯತೆಗೆ ಅನುಗುಣವಾಗಿ ಪೂಜಿಸಿದರು.

ಕೃಷ್ಣನಿಗೂ ವ್ಯಾಸ ಪರಶುರಾಮರಿಗೂ ಕೇವಲ ಸಾದೃಶ್ಯದಿಂದ ಅಭೇದ ಹೇಳುವುದಿಲ್ಲ. ಇಂದ್ರಾರ್ಜುನರಂತೆ ವೈಲಕ್ಷಣ್ಯಯುಕ್ತವಾದ ಅಭೇದವೂ ಅಲ್ಲ. ಒಂದಿಷ್ಟು ವೈಲಕ್ಷಣ್ಯವಿಲ್ಲದ ಸಾಕ್ಷಾತ್ ಅಭೇದವೆ ಉಂಟು. ಅದರಿಂದ ವ್ಯಾಸ ಪರಶುರಾಮರಿಗೆ ಅಗ್ರಪೂಜೆ ಸಿಗಲಿಲ್ಲವೆಂದಾಗುವುದಿಲ್ಲ. ಮೂರು ರೂಪಗಳಲ್ಲಿ ಒಬ್ಬನೆ ಪರಮಾತ್ಮನಿಗೆ ಮತ್ತೆ ಮತ್ತೆ ಅಗ್ರ ಪೂಜೆಯಾದುದು ವಿಶೇಷ.[1]

ಶಿಶುಪಾಲ ವಧ

ಅಗ್ರ್ಯೋಪಹಾರ ಉಪಯಾಪಿತ ಏವ ಕೃಷ್ಣೇ
ಕೋಪಾದನಿಂದದಮುಮಾಶು ಚ ಚೇದಿರಾಜಃ ।
ಶ್ರುತ್ವೈವ ತತ್ ಪವನಜೋಽಭಿಯಯೌ ನೃಪಂ ತಂ
ಹಂತುಂ ಜಗದ್ಗುರುವಿನಿಂದಕಮೃದ್ಧಮನ್ಯುಃ ॥೨೫೭॥

ಶ್ರೀಕೃಷ್ಣನಿಗೆ ಅಗ್ರಪೂಜೆ ಮಾಡಿದೊಡನೆ ಶಿಶುಪಾಲ ಕೋಪದಿಂದ ಅವನನ್ನು

1. ವ್ಯಾಸ ಭಾರ್ಗವಯೋಃ ಕೃಷ್ಣತನ್ಮಾತ್ರತ್ವಾತ್ ಅನಂತರದಾನೇಽಪ್ಯಗ್ರಪೂಜಾ ವಿರೋಧೋ ನ। ಏಕಸ್ಯೈವ ಪುನಃ ಪುನಃ ಪೂಜಾರೂಪತ್ವಾದಿತಿ ಭಾವಃ। -ತಾಮ್ರಪರ್ಣೀಯ

ನಿಂದಿಸಿದ. ಅದನ್ನು ಕೇಳಿದೊಡನೆ ಭೀಮ ಬಹಳ ಕುಪಿತನಾಗಿ ಜಗದ್ಗುರು ನಿಂದಕನಾದ ಆ ರಾಜನನ್ನು ಕೊಲ್ಲಲು ಹೊರಟ.

ದೂರೇಽಪಿ ಕೇಶವವಿನಿಂದನಕಾರಿಜಿಹ್ವಾ-
ಮುಚ್ಛೇತ್ಸ್ಯ ಇತ್ಯುರುತರಾಸ್ಯ ಸದಾ ಪ್ರತಿಜ್ಞಾ।
ಭೀಮಸ್ಯ ತಂ ತು ಜಗೃಹೇ ಸರಿದಾತ್ಮಜೋಽಥ
ಸಂಪ್ರೋಚ್ಯ ಕೇಶವವಚೋ ನಿಜಯೋರ್ವಧಾಯ ॥೨೫೮॥

ಪರೋಕ್ಷದಲ್ಲಿಯಾದರೂ ಕೂಡ ಕೇಶವನನ್ನು ನಿಂದಿಸುವ ನಾಲಿಗೆಯನ್ನು ಕತ್ತರಿಸುವೆನೆಂಬುದು ಸದಾ ಭೀಮನ ಮಹಾಪ್ರತಿಜ್ಞೆ. ಆದರೆ ಶ್ರೀಹರಿ ತನ್ನವರ ವಧೆಗೆ ಕೊಟ್ಟ ಮಾತನ್ನು ಹೇಳಿ ಭೀಷ್ಮ ಭೀಮನನ್ನು ತಡೆದ.

ಮಯ್ಯೇವ ವಧ್ಯಾವಿತಿ ತಾವಾಹ ಯತ್ ಕೇಶವಃ ಪುರಾ ।
ತಚ್ಛ್ರುತ್ವಾ ಭೀಮಸೇನೋಽಪಿ ಸ್ಥಿತೋ ಭೀಷ್ಮಕರಗ್ರಹಾತ್ ॥೨೫೯॥

'ಮೂರು ಜನ್ಮಗಳಲ್ಲಿಯೂ ನನ್ನಿಂದಲೆ ನೀವು ಹತರಾಗುವಿರೆಂದು ಶ್ರೀಹರಿ ಹಿಂದೆಯೆ ಅವರಿಗೆ ವರ ನೀಡಿದ್ದ' ಎಂದು ಭೀಷ್ಮ ಹೇಳಿದುದನ್ನು ಕೇಳಿ ಭೀಮ, ಶತ್ರುಗಳಿಗೆ ಭಯಂಕರನಾಗಿದ್ದರೂ, ಭೀಷ್ಮ ತನ್ನ ಕೈಹಿಡಿದು ತಡೆದನೆಂದು, ತಡೆದು ನಿಂತ.

ಭೀಷ್ಮ ಹರಿಯ ದಶಾವತಾರಗಳನ್ನೂ ಬಣ್ಣಿಸಿ ಹೇಳಿದರು, 'ಶ್ರೀಕೃಷ್ಣನಲ್ಲಿ ಬ್ರಾಹ್ಮಣಶ್ರೇಷ್ಠನಂತೆ ವೇದವೇದಾಂಗ ಜ್ಞಾನವಿದ್ದು ಕ್ಷತ್ರಿಯನಂತೆ ಅತ್ಯುತ್ತಮವಾದ ಬಲವೂ ಇದೆ. ಅದರಿಂದ ಅವನು ಋತ್ವಿಗ್ ಗುರು ಆಚಾರ್ಯ ಸ್ನಾತಕ ಎಲ್ಲವೂ ಆಗಿದ್ದಾನೆ. ಸರ್ವೇಶ್ವರನಾದ್ದರಿಂದ ರಾಜನೂ ಹೌದು. ಅದರಿಂದ ಶಿಶುಪಾಲನ ಆಕ್ಷೇಪ-ಋತ್ವಿಜರು ವೇದವ್ಯಾಸರು, ಗುರು ಅಂದರೆ ಬಂಧುಗಳಲ್ಲಿ ಹಿರಿಯನಾದವನು ವಸುದೇವ, ಆಚಾರ್ಯದ್ರೋಣ, ಪ್ರಿಯನಾದ ಮಾವ ದ್ರುಪದ ಇವರೆಲ್ಲರನ್ನೂ ಬಿಟ್ಟು ಕೃಷ್ಣನನ್ನೇ ಏಕೆ ಅಗ್ರಪೂಜೆಗೆ ಆರಿಸಿಕೊಂಡಿರೆಂಬ ಆಕ್ಷೇಪ, ಅರ್ಥಹೀನ. ಬ್ರಾಹ್ಮಣರಲ್ಲಿ ಜ್ಞಾನ, ಕ್ಷತ್ರಿಯರಲ್ಲಿ ಬಲ, ವೈಶ್ಯರಲ್ಲಿ ಧನ, ಶೂದ್ರರಲ್ಲಿ ವಯಸ್ಸು ಶ್ರೇಷ್ಠತೆಗೆ ಮಾನದಂಡ. ಸರ್ವಶಕ್ತನಾದ ಕೃಷ್ಣನಲ್ಲಿ ಕ್ಷತ್ರಿಯನಿಗಿರಬೇಕಾದ ಬಲ ಪೂರ್ಣಪ್ರಮಾಣದಲ್ಲಿ ಇದೆ. ಅವನು ತನ್ನ ಬಲವನ್ನು ತಾನೇ ಸಾಬೀತುಪಡಿಸುತ್ತಾನೆ ಮಾತ್ರವಲ್ಲದೆ ಶಿಶುಪಾಲನ ಮೂಲರೂಪ ಜಯ ಶ್ರೀಹರಿಯಿಂದಲೆ ತಾನು ಹತನಾಗಬೇಕೆಂದು ವರಪಡೆದವ. ಅದರಿಂದ ಭೀಮ, ನೀನು ಶಿಶುಪಾಲನನ್ನು ಶಿಕ್ಷಿಸುವ ಆವಶ್ಯಕತೆ ಇಲ್ಲ' ಎನ್ನುತ್ತ ತಡೆದ ಭೀಷ್ಮ.

ಜಾನನ್ನಪಿ ಹರೇರಿಷ್ಟಂ ಸ್ವಕರ್ತವ್ಯತಯೋತ್ಥಿತಃ ।
ಭೀಮ ಏತಾವದುಚಿತಮಿತಿ ಮತ್ವಾ ಸ್ಥಿತಃ ಪುನಃ ॥೨೬೦॥

ಶ್ರೀಹರಿಯ ಸಂಕಲ್ಪವನ್ನು ಭೀಮ ತಿಳಿದವನೇ ಆಗಿದ್ದರೂ ತನ್ನ ಕರ್ತವ್ಯವೆಂದು ಎದ್ದಿದ್ದ. ಬಳಿಕ ಇಷ್ಟು ಸಾಕೆಂದುಕೊಂಡು ಸುಮ್ಮನಾದ.

ಶಿಶುಪಾಲನನ್ನು ತಾನೇ ಕೊಲ್ಲಬೇಕೆಂಬುದು ಹರಿಯ ಸಂಕಲ್ಪ. ಅದು ಸರ್ವಜ್ಞನಾದ ಭೀಮನಿಗೆ ಗೊತ್ತು. ಆದರೂ ಹರಿನಿಂದಕನನ್ನು ಕೊಲ್ಲುವುದಾಗಿ ತಾನು ಮಾಡಿದ ಪ್ರತಿಜ್ಞೆಯನ್ನು ನೆನೆದು ಕೊಲ್ಲಲು ಹೊರಟ. ಕೊಲ್ಲಲಿಲ್ಲ. ಹರೀಚ್ಛೆಗೆ ವಿರೋಧವಾಗಿ ಹೋಗಕೂಡದೆಂದು. ಅದಕ್ಕೆ ಭೀಷ್ಮ ತಡೆದುದು ಅನುಕೂಲವಾಯಿತು. ಅದನ್ನು ನೆಪ ಮಾಡಿಕೊಂಡು 'ಇಷ್ಟು ಸಾಕು, ಕೊಲ್ಲಲು ಉದ್ಯುಕ್ತನಾದುದೇ ಸಾಕು, ಪ್ರತಿಜ್ಞೆ ಹಾಳಾಗುವುದಿಲ್ಲ' ಎಂದುಕೊಂಡು ಭೀಮ ಸುಮ್ಮನಾದ.

ದೇವಸಂಘಭವಿನಾಂ ಮಹಾನಭೂತ್
ವೀಕ್ಷ್ಯತೋಷ ಇಹ ಕೇಶವೇಽಧಿಕಾಂ ।
ಅರ್ಚನಾಂ ಯ ಇಹ ಮಾನುಷೋ ಜನೋ
ಮಧ್ಯ ಏವ ಸ ತು ಸಂಸ್ಥಿತೋಽಭವತ್ ॥೨೬೧॥
ಆಸುರಾ ಇಹ ಸುಯೋಧನಾದಯ-
ಸ್ತತ್ರ ತೇ ವಿಮನಸೋ ಬಭೂವಿರೇ ।
ದುರ್ವಚೋಭಿರಧಿಕಂ ಚ ಚೇದಿಪಃ
ಕೃಷ್ಣಮಾರ್ಚ್ಛದುರುಸದ್ಗುಣಾರ್ಣವಂ ॥೨೬೨॥

ಶ್ರೀಕೃಷ್ಣನಿಗೆ ಹೆಚ್ಚಿನ ಸತ್ಕಾರ ನಡೆದುದನ್ನು ಕಂಡು ದೈವೀಪ್ರಕೃತಿಯ ಉತ್ತಮ ಚೇತನರಿಗೆ ಮಹಾ ಆನಂದವಾಯಿತು. ಮನುಷ್ಯ ಸ್ವಭಾವದ ಜನರು ತಟಸ್ಥರಾಗಿದ್ದರು. ಆಸುರ ಸ್ವಭಾವದ ದುರ್ಯೋಧನಾದಿಗಳು ಮನಸ್ಸಿನಲ್ಲಿ ಕೊರಗಿದರು. ಶಿಶುಪಾಲ ಮಹಾಸದ್ಗುಣಗಳ ಸಾಗರನಾದ ಶ್ರೀಕೃಷ್ಣನಲ್ಲಿ ಕೆಟ್ಟ ಮಾತುಗಳಿಂದ ಬಹಳ ದೋಷಾರೋಪಣಗೈದ.

ಸಮಾಹ್ವಯಚ್ಚ ಕೇಶವಂ ಯುಧೇ ತಮಾಶು ಕೇಶವಃ।
ನಿವಾರ್ಯ ತಸ್ಯ ಸಾಯಕಾನ್ ಜಘಾನ ಚಾರಿಣಾ ಪ್ರಭುಃ ॥೨೬೩॥

ಶಿಶುಪಾಲ ಶ್ರೀಕೃಷ್ಣನನ್ನು ಯುದ್ಧಕ್ಕೆ ಕರೆದ. ಸರ್ವಶಕ್ತನಾದ ಕೃಷ್ಣ ಅವನ ಬಾಣಗಳನ್ನು ತಡೆದು ಸುದರ್ಶನ ಚಕ್ರದಿಂದ ಅವನನ್ನು ತರಿದ.

ಅಗ್ರಪೂಜೆ ನಡೆಯುತ್ತಿದ್ದ ಯಾಗಮಂಟಪದಲ್ಲಿಯೆ ಶಿಶುಪಾಲನ

ಶಿರಶ್ಛೇದವಾದಂತೆ ಭಾಗವತದಲ್ಲಿ ಮೇಲುನೋಟಕ್ಕೆ ಕಾಣಬಹುದು. ಮಹಾಭಾರತ ಔತ್ತರೇಯ ಪಾಠವೂ ಹಾಗೇ ಇದೆ. ಆದರೆ ದಾಕ್ಷಿಣಾತ್ಯಪಾಠದಲ್ಲಿ ನಿರ್ಣಯದಲ್ಲಿ ಹೇಳಿದಂತೆಯೆ ರಣರಂಗದಲ್ಲಿ ಶಿಶುಪಾಲನ ಶಿರಶ್ಛೇದ ನಡೆಯುತ್ತದೆ. ಭೀಷ್ಮ, ಶಿಶುಪಾಲನ ನೇತೃತ್ವದಲ್ಲಿ ಸಮಸ್ತ ಶತ್ರುರಾಜರನ್ನು ಕೃಷ್ಣನ ಮೇಲೆ ಯುದ್ಧ ಸಾರಲು ಆಹ್ವಾನಿಸಿದ. ಎಲ್ಲರೂ ರಣರಂಗದಲ್ಲಿ ಸೇರಿದರು. ಶ್ರೀಕೃಷ್ಣನೂ ರಥವೇರಿದ. ಭೀಷ್ಮನೆ ಅವನಿಗೆ ಹಸ್ತಲಾಘವವಿತ್ತು ರಥಾರೋಹಣ ಮಾಡಿಸಿದ. ಬಳಿಕ ಕೃಷ್ಣ ತನ್ನ ತೇಜೋಬಲದಿಂದ ಶತ್ರುರಾಜರನ್ನೆಲ್ಲ ಹಿಂದೆ ಸರಿಯಲು ಹೇಳಿ ಹಿಮ್ಮೆಟ್ಟಿಸಿ ಶಿಶುಪಾಲನ ಕುಕೃತ್ಯಗಳನ್ನೆಲ್ಲ ಬಣ್ಣಿಸಿ ಕೊನೆಗೆ 'ಈ ಪಾಪಿ ರುಕ್ಮಿಣಿಯನ್ನೂ ಬಯಸಿದ್ದ' ಎಂದ. ಶಿಶುಪಾಲ ಆಗ 'ನಿನ್ನ ಹೆಂಡತಿಯ ಮೇಲೆ ಅನ್ಯರು ಕಣ್ಣಿಟ್ಟಿರುವರೆನ್ನಲು ನಿನಗೆ ನಾಚಿಕೆ ಇಲ್ಲ?' ಎನ್ನುತ್ತ ರಥವೇರಿ ಕೃಷ್ಣನ ಮುಂದೆ ನಿಂತು ಘೋರವಾದ ಯುದ್ಧ ನಡೆಸುತ್ತಾನೆ. ಮಾಯಾಯುದ್ಧವನ್ನು ಮಾಡುತ್ತಾನೆ. ಸಾರಥಿಯಾದ ದಾರುಕ ಆಶ್ಚರ್ಯ ಭಯಗಳಿಂದ ಯುಕ್ತನಾಗಿ 'ನಾನಿಂಥ ಯುದ್ಧವನ್ನೇ ಎಂದೂ ಕಂಡಿಲ್ಲ. ನಿನ್ನಿಚ್ಛೆಯಿಂದ ಮಾತ್ರವೆ ನಾನಿನ್ನೂ ಬದುಕೆ ಉಳಿದಿದ್ದೇನೆ. ಬೇಗನೆ ಅವನನ್ನು ಕೊಲ್ಲು' ಎಂದು ಬೇಡಿಕೊಂಡ. ಆಗ ಕೃಷ್ಣ ಶಂಖನಾದಗೈದು ಚಕ್ರದಿಂದ ಶಿರಶ್ಛೇದಗೈದ. ನಿರ್ಣಯದಲ್ಲಿ 'ಅವನ ಬಾಣಗಳನ್ನು ತಡೆದು' ಎಂದು ಎಲ್ಲವನ್ನೂ ಸಂಕ್ಷೇಪವಾಗಿ ಹೇಳಿದೆ.

ನಿಕೃತ್ಯಮಾನಕಂಧರಃ ಸ ಭಕ್ತಿಮಾನಭೂದ್ಧರೌ ।
ತಮಾಶ್ರಿತಶ್ಚ ಯೋಽಸುರೋ ಮಹಾತಮಃ ಪ್ರಪೇದಿವಾನ್ ॥೨೬೪॥
ಜಯಃ ಪ್ರವಿಶ್ಯ ಕೇಶವಂ ಪುನಶ್ಚ ಪಾರ್ಷದೋಽಭವತ್ ।
ಅಸೌ ಚ ಪಾಂಡವೈಃ ಕ್ರತುಃ ಪ್ರವರ್ತಿತೋ ಯಥೋದಿತಃ ॥೨೬೫॥

ಶಿರಶ್ಛೇದವಾಗುತ್ತಿದ್ದಂತೆ ಶಿಶುಪಾಲ ಕೃಷ್ಣನಲ್ಲಿ ಭಕ್ತಿ ಭರಿತನಾದ. ಅವನಲ್ಲಿ ಸೇರಿಕೊಂಡಿದ್ದ ಅಸುರ ಮಹಾತಮಸ್ಸನ್ನು ಹೊಂದಿದ. ಜಯ ಕೃಷ್ಣನನ್ನು ಪ್ರವೇಶಿಸಿ ಕೃಷ್ಣ ಪರಂಧಾಮಕ್ಕೆ ತೆರಳಿದಾಗ ಅಲ್ಲಿ ದ್ವಾರಪಾಲಕನಾದ. ಪಾಂಡವರು ಯಾಗವನ್ನು ವಿಧ್ಯುಕ್ತವಾಗಿ ಮುಂದುವರಿಸಿದರು.

ಶಿಶುಪಾಲ ವೈಕುಂಠದ ದ್ವಾರಪಾಲಕನಾದ ಜಯನ ಅವತಾರ. ಶಿರಶ್ಛೇದಕಾಲದಲ್ಲಿ ಅವನು ಭಕ್ತಿ ಭರಿತನಾಗಿ ಸುದರ್ಶನ ಚಕ್ರ ಸ್ಪರ್ಶದಿಂದ ಪುನೀತನಾಗಿ ತೇಜೋ ರೂಪದಿಂದ ಹೊರಗೆ ಬಂದು ಕೃಷ್ಣನನ್ನು ನಮಿಸಿ ಅವನ ಉದರವನ್ನು ಪ್ರವೇಶಿಸಿದ. ಇದನ್ನು ಎಲ್ಲರೂ

ಪ್ರತ್ಯಕ್ಷ ಕಂಡರು. ಅವನ ಶರೀರದಲ್ಲಿ ಆವೇಶಗೊಂಡಿದ್ದ ಆದಿ ಹಿರಣ್ಯಕಶಿಪು ಕೃಷ್ಣನನ್ನು ಕೊನೆಗಾಲದಲ್ಲಿಯೂ ದ್ವೇಷಿಸಿ ತಮಸ್ಸಿನಲ್ಲಿ ಬಿದ್ದ. ಬಳಿಕ ಶಿಶುಪಾಲನಿಗೆ ಅಂತ್ಯ ಸಂಸ್ಕಾರ ನಡೆಯಿತು. ಅವನ ಮಗನಿಗೆ ಚೇದಿರಾಜ್ಯ ಸಿಂಹಾಸನದಲ್ಲಿ ಪಟ್ಟಾಭಿಷೇಕವನ್ನೂ ಧರ್ಮರಾಜನೆ ಮಾಡಿ ಯಾಗವನ್ನು ಮುಂದುವರಿಸಿದ. ಚಕ್ರಧಾರಿ ಶ್ರೀಕೃಷ್ಣ ಆ ಯಾಗವನ್ನು ಕೊನೆತನಕವೂ ರಕ್ಷಿಸಿದ.

ರಾಜಸೂಯದ ವೈಭವ

ಸುವರ್ಣರತ್ನಭಾರಕಾನ್ ಬಹೂನ್‌ನೃಪಾ ಉಪಾನಯನ್ ।
ಉಪಾಯನೇ ಸುಯೋಧನಂ ನೃಪೋಽದಿಶದ್‌ಗ್ರಹೇಽಸ್ಯ ಚ ॥೨೬॥

ಕಪ್ಪಕಾಣಿಕೆಯಾಗಿ ಬಹಳ ಸುವರ್ಣರತ್ನಗಳ ಭಾರಗಳನ್ನು ರಾಜರು ತಂದಿತ್ತರು. ಅವುಗಳನ್ನು ತೆಗೆದಿಟ್ಟುಕೊಳ್ಳುವ ಕಾರ್ಯದಲ್ಲಿ ದುರ್ಯೋಧನನನ್ನು ಧರ್ಮರಾಜ ನೇಮಿಸಿದ್ದ.

'ಭಾರ' ಎಂಬುದು ಒಂದು ತೂಕ, ಇಪ್ಪತ್ತು ತೊಲೆ. ಇಂಥ ಭಾರದ ಚಿನ್ನರತ್ನಗಳನ್ನು ಒಂದು ಸಹಸ್ರಕ್ಕೆ ಕಡಿಮೆಯಿಲ್ಲದಂತೆ ರಾಜರು ತಂದಾಗ ಪ್ರತಿಯೊಬ್ಬರೂ ತಾವು ತಂದ ಕಪ್ಪವೇ ಯಾಗದ ಪೂರ್ಣ ವೆಚ್ಚಕ್ಕೆ ಸರಿತೂಗಬೇಕೆಂಬ ಬಯಕೆ ಉಳ್ಳವರಾಗಿದ್ದರಂತೆ ! (ಸಭಾ. 38.14) ಅವನ್ನು ಬೊಕ್ಕಸದಲ್ಲಿ ತುಂಬಿ ಲೆಕ್ಕವಿಡುವ ಕಾರ್ಯ ದುರ್ಯೋಧನನದು. ಅವನಿಗೆ ರಾಶಿ ರತ್ನಸುವರ್ಣಗಳನ್ನು ಕಂಡು ಮತ್ಸರ ಹೆಚ್ಚಲೆಂದೆ ಹರಿಯ ಸಂಕಲ್ಪದಿಂದ ಧರ್ಮರಾಜ ಅವನನ್ನು ಅದಕ್ಕೆ ನೇಮಿಸಿದ್ದ. ಊಟೋಪಚಾರಗಳ ಮೇಲ್ವಿಚಾರಣೆಯನ್ನೂ ಹಾಗೇ ದುಃಶಾಸನನಿಗೆ ಒಪ್ಪಿಸಿದ್ದ. ಒಂದು ಲಕ್ಷ ಬ್ರಾಹ್ಮಣರ ಭೋಜನವಾದಾಗ ಒಮ್ಮೆ ಶಂಖಧ್ವನಿಯನ್ನು ಧರ್ಮರಾಜ ಏರ್ಪಡಿಸಿದ್ದ. ಇಂಥ ಶಂಖಧ್ವನಿ ಕೇಳುವವರಿಗೆ ನಿರಂತರವಾಗಿ ಕೇಳಿಸುತ್ತಿತ್ತು. ಅದನ್ನು ಕೇಳಿ ದುರ್ಯೋಧನನಿಗೂ ಮೈನವಿರೆದ್ದಿತಂತೆ-

'ಅನಿಶಂ ಶಬ್ದ ಮಶ್ರೌಷಂ ತತೋ ರೋಮಾಣಿ ಮೇಽಹೃಷನ್'
(ಸಭಾ 76-55)

ಯುಯುತ್ಸು ಎಂಜಲು ಎಲೆ ತೆಗೆಸುವ ಕೆಲಸವನ್ನೂ ಅಶ್ವತ್ಥಾಮ ಬ್ರಾಹ್ಮಣರ ಸ್ವಾಗತ ಸತ್ಕಾರ ಕಾರ್ಯವನ್ನೂ ಸಂಜಯ ರಾಜರ ಉಪಚಾರವನ್ನೂ ಭೀಷ್ಮ ದ್ರೋಣರು ಅತಿಥಿ ಸತ್ಕಾರವನ್ನೂ ವಿದುರ

ಬೊಕ್ಕಸದ ಹಣವಿನಿಯೋಗವನ್ನೂ ಕೃಪ ಬ್ರಾಹ್ಮಣರ ದಕ್ಷಿಣೆ ಮೇಲ್ವಿಚಾರಣವನ್ನೂ ಶ್ರೀಕೃಷ್ಣ ಬ್ರಾಹ್ಮಣರ ಕಾಲು ತೊಳೆಯುವ ಕೆಲಸವನ್ನೂ ವಹಿಸಿಕೊಂಡರು.

ಅಭೋಜಯಂಸ್ತಥಾ ದ್ವಿಜಾನ್ ಯಥೇಷ್ಟಭಕ್ಷ್ಯಭೋಜ್ಯಕೈಃ ।
ಸುವರ್ಣರತ್ನಭಾರಕಾನ್ ಬಹೂಂಶ್ಚ ದಕ್ಷಿಣಾ ದದುಃ ॥೨೬೭॥

ಬ್ರಾಹ್ಮಣರಿಗೆ ಯಥೇಚ್ಛ ಭಕ್ಷ್ಯ ಭೋಜ್ಯಗಳನ್ನು ಪಾಂಡವರು ಉಣಬಡಿಸಿದರು. ಸುವರ್ಣರತ್ನಗಳ ಬಹುಭಾರಗಳನ್ನು ದಕ್ಷಿಣೆಯಾಗಿ ನೀಡಿದರು.

ಯದಿಷ್ಟಮಾಸ ಯಸ್ಯ ಚ ಪ್ರದತ್ತಮೇವ ಪಾಂಡವೈಃ ।
ಸಮಸ್ತಮತ್ರ ಸರ್ವಶೋಽಥ ಸಸ್ನುರುದ್ಧತಾ ಮುದಾ ॥೨೬೮॥

ಯಾರಿಗೆ ಏನು ಬೇಕು ಅದೆಲ್ಲವನ್ನೂ ಪಾಂಡವರು ನೀಡಿದರು. ಯಾಗದ ಕೊನೆಯಲ್ಲಿ ಎಲ್ಲರೂ ಆನಂದ ತುಂದಿಲರಾಗಿ ಅವಭೃಥಸ್ನಾನ ಮಾಡಿದರು.

ನದತ್ಸುರೋರುದುಂದುಭಿಪ್ರಗೀತದೇವಗಾಯಕಾಃ ।
ಪ್ರನೃತ್ತದಿವ್ಯಯೋಷಿತಃ ಸುರಾಪಗಾಂ ವ್ಯಗಾಹಯನ್ ॥೨೬೯॥

ಗಂಧರ್ವರು ದೊಡ್ಡ ದೇವದುಂದುಭಿ ನಾದಗಳೊಂದಿಗೆ ಉತ್ಕೃಷ್ಟವಾದ ಗಾನ ಮಾಡಿದರು. ಅಪ್ಸರೆಯರು ಉತ್ಕೃಷ್ಟ ನಾಟ್ಯ ಮಾಡಿದರು. ಹೀಗೆ ವೈಭವದಿಂದ ಪಾಂಡವರು ಗಂಗಾನದಿಯಲ್ಲಿ ಇಳಿದು ಅವಗಾಹನ ಸ್ನಾನ ಮಾಡಿದರು.

ಸಮಸ್ತರಾಜಸಂಯುತಾ ವಿಗಾಹ್ಯ ಜಾಹ್ನವೀಜಲೇ ।
ಪುರಂ ಯಯುಃ ಪುನಶ್ಚ ತೇ ಸ್ವಸದ್ಮ ಚಾಗಮನ್ ಸುರಾಃ ॥೨೭೦॥

ಪಾಂಡವರು ಎಲ್ಲ ರಾಜರೊಂದಿಗೆ ಗಂಗಾಜಲದಲ್ಲಿ ಮುಳುಗಿ ಸ್ನಾನಮಾಡಿ ತಿರುಗಿ ತಮ್ಮ ಪಟ್ಟಣಕ್ಕೆ ತೆರಳಿದರು. ದೇವತೆಗಳೂ ತಮ್ಮ ಲೋಕಗಳಿಗೆ ಹಿಂತಿರುಗಿದರು.

ದುರ್ಯೋಧನ ಅಪಹಾಸಕ್ಕೆ ಗುರಿಯಾದ

ಗತೇಷು ಸರ್ವರಾಜಸು ಸ್ವಕಂ ಪುರಂ ಸ್ವಕೇಷು ಚ ।
ಸಭೀಷ್ಮಕೇಷು ಸರ್ವಶಃ ಸಹಾಂಬಿಕೇಯಕೇಷು ಚ ॥೨೭೧॥
ವಿಚಿತ್ರರತ್ನಕಾರಿತೇ ರವಿಪ್ರಭೇ ಸಭಾತಲೇ ।
ಸಕೇಶವೋ ವರಾಸನೇ ವಿವೇಶ ಧರ್ಮನಂದನಃ ॥೨೭೨॥

ಎಲ್ಲ ರಾಜರು ತಮ್ಮ ತಮ್ಮ ಪಟ್ಟಣಗಳಿಗೆ ತೆರಳಿದಾಗ ಭೀಷ್ಮ ಧೃತರಾಷ್ಟ್ರರೊಂದಿಗೆ ತಮ್ಮವರೆಲ್ಲರೂ ಹಸ್ತಿನಾವತಿಗೆ ಹೊರಟು ಹೋದಾಗ ಧರ್ಮರಾಜ ವಿಚಿತ್ರರತ್ನ ನಿರ್ಮಿತವಾದ ಸೂರ್ಯನಂತೆ ಬೆಳಗುವ ಸಭಾಂಗಣದಲ್ಲಿ ಕೃಷ್ಣನೊಂದಿಗೆ ಕುಳಿತ.

ತಥೈವ ರುಕ್ಮಿಣೀಮುಖಾಃ ಪರಿಗ್ರಹಾ ರಮೇಶಿತುಃ ।
ತಥೈವ ಭೀಮಫಲ್ಗುನಾವುಪಾವಿಶನ್ ಹರೇರುಪ ॥೨೭೩॥
ಸಹೈವ ವಾಯುಸೂನುನಾ ತಥೈವ ಪಾರ್ಷತಾತ್ಮಜಾ ।
ಉಪೈವ ರುಕ್ಮಿಣೀಂ ಶುಭಾಂ ತಥೈವ ಸತ್ಯಭಾಮಿನೀಂ ॥೨೭೪॥

ರುಕ್ಮಿಣಿ ಮೊದಲಾದ ಕೃಷ್ಣಪತ್ನಿಯರೂ ಭೀಮಾರ್ಜುನರೂ ಕೃಷ್ಣನ ಸಮೀಪದಲ್ಲಿ ಕುಳಿತರು. ಭೀಮನೊಂದಿಗೆ ದ್ರೌಪದಿ ರುಕ್ಮಿಣೀಸತ್ಯಭಾಮೆಯರ ಸಮೀಪದಲ್ಲಿ ಕುಳಿತಳು.

ಯಮೌ ಚ ಪಾರ್ಷತಾದಯೋ ಧನಂಜಯಾಂತಿಕೇಽವಿಶನ್ ।
ತಥೈವ ರಾಮಸಾತ್ಯಕೀ ಸಮೀಪ ಏವ ಭೂಭೃತಃ ॥೨೭೫॥
ಸಮಾಸತಾಂ ಚ ಸಾ ಸಭಾ ವ್ಯರೋಚತಾಧಿಕಂ ತಥಾ ।
ಯಥಾ ಸಭಾ ಸ್ವಯಂಭುವಃ ಸಮಾಸ್ಥಿತಾ ಚ ವಿಷ್ಣುನಾ ॥೨೭೬॥

ನಕುಲ ಸಹದೇವರೂ ಧೃಷ್ಟದ್ಯುಮ್ನಾದಿಗಳೂ ಅರ್ಜುನನ ಬಳಿಯಲ್ಲಿ ಕುಳಿತರು. ಬಲರಾಮ ಸಾತ್ಯಕಿಗಳು ಧರ್ಮರಾಜನ ಬಳಿ ಕುಳಿತರು. ಆ ಸಭೆ ವಿಷ್ಣುವಿನಿಂದ ಅಲಂಕೃತವಾದ ಬ್ರಹ್ಮನ ಸಭೆಯಂತೆ ಬಹಳ ಶೋಭಿಸಿತು.

ವಿಚಿತ್ರಹೇಮಮಾಲಿನಃ ಶುಭಾಂಬರಾಶ್ಚ ತೇಽಧಿಕಂ ।
ಸ್ಫುರತ್ಕಿರೀಟಕುಂಡಲಾ ವಿರೇಜುರತ್ರ ತೇ ನೃಪಾಃ ॥೨೭೭॥

ಶುಭ್ರವಸ್ತ್ರಗಳನ್ನು ಉಟ್ಟು ಹೊಳೆವ ಕಿರೀಟ ಕುಂಡಲಗಳನ್ನೂ ವಿಚಿತ್ರ ಸುವರ್ಣ ಮಾಲೆಗಳನ್ನೂ ಧರಿಸಿದ್ದ ರಾಜರು ಅಲ್ಲಿ ಶೋಭಿಸಿದರು.

ವಿಶೇಷತೋ ಜನಾರ್ದನಃ ಸಭಾರ್ಯಕೋ ಜಗತ್ಪ್ರಭುಃ ।
ಯಥಾ ದಿವೌಕಸಾಂ ಸದಸ್ಯನಂತಸದ್ಗುಣಾರ್ಣವಃ ॥೨೭೮॥

ದೇವತೆಗಳ ಸಭೆಯಲ್ಲಿ ಅನಂತ ಸದ್ಗುಣ ಸಮುದ್ರನಾದ ಜಗದೊಡೆಯನಾದ ವಿಷ್ಣುವಿನಂತೆ ಈ ಸಭೆಯಲ್ಲಿ ವಿಶೇಷವಾಗಿ ಶ್ರೀಕೃಷ್ಣ ಸಪತ್ನೀಕನಾಗಿ ಶೋಭಿಸಿದ.

ಉಪಾಸಿರೇ ಚ ತಂ ನೃಪಾಃ ಸಮಸ್ತಶಃ ಸುಹೃದ್ಗಣಾಃ ।
ತದಾ ಜಗಾಮ ಖಡ್ಗಭೃತ್ ಸುಯೋಧನಃ ಸಹಾನುಜಃ ॥೨೭೯॥

ಎಲ್ಲ ರಾಜರೂ ಸ್ನೇಹಿತರ ಸಮೂಹಗಳೂ ಕೃಷ್ಣನನ್ನು ಆರಾಧಿಸಿದರು. ಅದೇ ಕಾಲದಲ್ಲಿ ಅಲ್ಲಿಗೆ ಖಡ್ಗಧಾರಿಯಾದ ದುರ್ಯೋಧನ ತಮ್ಮನೊಂದಿಗೆ ಬಂದ.

ದ್ವಾರಂ ಸಭಾಯಾ ಹರಿನೀಲರಶ್ಮಿ-
ವ್ಯೂಢಂ ತ್ವಜಾನನ್ ಸ ವಿಹಾಯ ಭಿತ್ತಿಂ।
ಅಭ್ಯಂತರಾಣಾಂ ದೃಶಿ ನೋ ವಿಘಾತಿನೀಂ
ಸಂಸ್ಫಾಟಿಕಾಮಾಶು ದೃಢಂ ಚುಚುಂಬೇ ॥೨೮೦॥

ಸಭಾಂಗಣ ದ್ವಾರ ಇಂದ್ರ ನೀಲಮಣಿ ಪ್ರಕಾಶದಿಂದ ಆಚ್ಛಾದಿತವಾಗಿದ್ದುದರಿಂದ ತಿಳಿಯದೆ ಅದನ್ನು ಬಿಟ್ಟು ಒಳಗಿರುವವರು ಹೊರಗೆ ಕಾಣುವಂತೆ ಪಾರದರ್ಶಕವಾಗಿದ್ದ ಸ್ಫಟಿಕದ ಗೋಡೆಗೆ ಗಟ್ಟಿಯಾಗಿ ಮುಖವನ್ನು ತಾಗಿಸಿಕೊಂಡ.

ಗಟ್ಟಿಯಾಗಿ ತಾಗಿಸಿಕೊಂಡುದರಿಂದ ತಲೆಸುತ್ತು ಬಂದಿತು. ಆದರೂ ಸಾವರಿಸಿಕೊಂಡು ಮುಂದೆ ತೆರೆದ ಬಾಗಿಲಿಗೆ ಬಂದ. ಬಾಗಿಲು ಹಾಕಿದೆ ಎಂಬ ಭ್ರಮೆಯಿಂದ, ಎರಡೂ ಕೈಗಳಿಂದ ಬಲವಾಗಿ ತಳ್ಳಿ ಮುಂದೆ ಮುಗ್ಗರಿಸಿ ಬಿದ್ದ.

ಪ್ರವೇಶಯೇತಾಂ ಚ ಯಮೌ ತಮಾಶು
ಸಭಾಂ ಭುಜೌ ಗೃಹ್ಯ ನೃಪೋಪದಿಷ್ಟೌ।
ತತ್ರೋಪವಿಶ್ಯ ಕ್ಷಣಮನ್ಯತೋಽಗಾ-
ದಮೃಷ್ಯಮಾಣಃ ಶ್ರಿಯಮೇಷು ದಿವ್ಯಾಂ ॥೨೪೧॥

ಧರ್ಮರಾಜನ ಆಜ್ಞೆಯಂತೆ ನಕುಲ ಸಹದೇವರು ಬೇಗನೆ ಬಂದು ದುರ್ಯೋಧನನ ಕೈಗಳನ್ನು ಹಿಡಿದು 'ಇದು ಬಾಗಿಲು, ಇದು ಬಾಗಿಲು' ಎಂದು ಹೇಳುತ್ತ ಸಭಾಂಗಣದೊಳಗೆ ಕರೆತಂದು ಕುಳ್ಳಿರಿಸಿದರು. ಅಲ್ಲಿ ಆತ ಒಂದು ಕ್ಷಣ ಕುಳಿತು ಪಾಂಡವರಲ್ಲಿರುವ ಆ ದಿವ್ಯ ಸಂಪತ್ತನ್ನು ನೋಡಿ ಸಹಿಸಲಾಗದೆ ಬೇರೆ ಕಡೆಗೆ ನಡೆದ.

ತತ್ರೇಂದ್ರನೀಲಭುವಿ ರತ್ನಮಯಾನಿ ದೃಷ್ಟ್ವಾ
ಪದ್ಮಾನಿ ನೀರಮನಸಾ ಜಗೃಹೇ ಸ್ವವಸ್ತ್ರಂ।
ರತ್ನೋರುದೀಧಿತಿನಿಗೂಢಜಲಂ ಸ್ಥಲಂ ಚ
ಮತ್ವಾಪಪಾತ ಸಹಿತೋಽವರಜೈರ್ಜಲೌಘೇ ॥೨೪೨॥

ದುರ್ಯೋಧನ ಅಲ್ಲಿ ಇಂದ್ರ ನೀಲಮಣಿಯ ನೆಲದಲ್ಲಿ ರತ್ನಮಯವಾದ ಪದ್ಮಗಳನ್ನು ಕಂಡು ನೀರೆಂಬ ಭ್ರಾಂತಿಯಿಂದ ಉಟ್ಟಬಟ್ಟೆಯನ್ನು ಮೇಲೆತ್ತಿಕೊಂಡ. ರತ್ನಗಳ ಮಹಾಪ್ರಕಾಶದಿಂದ ಆಚ್ಛಾದಿತವಾದ ನೀರನ್ನು ನೆಲವೆಂದು ಭ್ರಮಿಸಿ ತಮ್ಮಂದಿರೊಂದಿಗೆ ಆಳವಾದ ಆ ನೀರಲ್ಲಿ ಬಿದ್ದ.

ತಂ ಪ್ರಾಹಸದ್ ಭಗವತಾ ಕ್ಷಿತಿಭಾರನಾಶ-
ಹೇತೋಃ ಸುಸೂಚಿತ ಉರುಸ್ವರತೋಽತ್ರ ಭೀಮಃ।
ಪಾಂಚಾಲರಾಜಸುತಯಾ ಚ ಸಮಂ ತಥಾನ್ಯೈಃ
ಸ್ವೀಯೈಸ್ತಥಾನು ಜಹಸುರ್ಭಗವನ್ಮಹಿಷ್ಯಃ ॥೨೪೩॥

ಭೂ ಭಾರ ನಾಶಕ್ಕಾಗಿ ಭಗವಾನ್ ಶ್ರೀಕೃಷ್ಣ ನಗಲು ಸನ್ನೆ ಮಾಡಿದ್ದನ್ನು ತಿಳಿದ ಭೀಮ ದೊಡ್ಡ ಧ್ವನಿಯಿಂದ ನಕ್ಕುಬಿಟ್ಟ. ಜೊತೆಗೆ ದ್ರೌಪದಿಯೂ ನಕ್ಕಳು. ಧೃಷ್ಟದ್ಯುಮ್ನ ಮುಂತಾದ ಇತರ ಬಂಧುಗಳೂ ಕೃಷ್ಣನ ಪತ್ನಿಯರೂ ನಕ್ಕರು.

ಮಂದಸ್ಮಿತೇನ ವಿಲಸದ್ವದನೇಂದುಬಿಂಬೋ
ನಾರಾಯಣಸ್ತು ಮುಖಮೀಕ್ಷ್ಯ ಮರುತ್ಸುತಸ್ಯ ।
ನೋವಾಚ ಕಿಂಚಿದಥ ಧರ್ಮಸುತೋ ನಿವಾರ್ಯ
ಪ್ರಾಸ್ಥಾಪಯದ್ವಸನಮಾಲ್ಯವಿಲೇಪನಾನಿ ॥೨೮೪॥

ಹೊಳೆಯುವ ಚಂದ್ರನಂಥ ಮುಖವುಳ್ಳ ಶ್ರೀಕೃಷ್ಣ ಮುಗುಳು ನಗುನಗುತ್ತ ಭೀಮನ ಮುಖ ನೋಡಿದ. ಏನೂ ಹೇಳಲಿಲ್ಲ. ಧರ್ಮರಾಜ ಎಲ್ಲರನ್ನೂ ತಡೆದ, ನಗಬೇಡಿರಿ ಎಂದ. ದುರ್ಯೋಧನ ಮುಂತಾದವರಿಗೆ ಬಟ್ಟೆ ಹೂಮಾಲೆ ಗಂಧಗಳನ್ನು ಕಳಿಸಿಕೊಟ್ಟ.

ಸಭಾಪರ್ವದಲ್ಲಿ ಶ್ರೀಕೃಷ್ಣ ದ್ವಾರಕೆಗೆ ಹೋದ ಬಳಿಕ ಮಯಸಭಾಂಗಣದಲ್ಲಿ ದುರ್ಯೋಧನನಿಗೆ ಮಾನಭಂಗ. ಆದರೆ ಭಾಗವತ ದಶಮಸ್ಕಂಧ (ಅ.75)ದ ಅನುಸಾರವಾಗಿ ನಿರ್ಣಯ ಹೇಳುತ್ತಿದೆ. ಭಾರತದಲ್ಲಿ ಇದು ಕಾಲ ವ್ಯತ್ಯಾಸ.

ಕೃಷ್ಣಾವೃಕೋದರಗತಂ ಬಹುಲಂ ನಿಧಾಯ
ಕ್ರೋಧಂ ಯಯೌ ಸಶಕುನಿರ್ಧೃತರಾಷ್ಟ್ರಸೂನುಃ ।
ಸುವ್ರೀಡಿತೋ ನೃಪತಿದತ್ತವರಾಂಬರಾದೀನ್
ನ್ಯಕ್ಕೃತ್ಯ ಮಾರ್ಗಗತ ಆಹ ಸ ಮಾತುಲಂ ಸ್ವಂ ॥೨೮೫॥

ದುರ್ಯೋಧನ ಶಕುನಿಗಳು ನಾಚಿ ಧರ್ಮರಾಜ ಕಳಿಸಿಕೊಟ್ಟ ಒಳ್ಳೆಯ ಬಟ್ಟೆ ಮುಂತಾದುವನ್ನು ತಿರಸ್ಕರಿಸಿ ದ್ರೌಪದೀಭೀಮರ ಬಗ್ಗೆ ಹೆಚ್ಚಿನ ಕ್ರೋಧವನ್ನು ಮನಸ್ಸಿನಲ್ಲಿಟ್ಟುಕೊಂಡು ಹಸ್ತಿನಾವತಿಗೆ ಹೊರಟು ಹೋದರು. ದಾರಿಯಲ್ಲಿ ದುರ್ಯೋಧನ ಶಕುನಿಗೆ ಹೇಳಿದ.

ಜೂಜಿನ ಸಲಹೆ

ಯೌ ಮಾಮಹಸತಾಂ ಕೃಷ್ಣಾಭೀಮೌ ಕೃಷ್ಣಸ್ಯ ಸನ್ನಿಧೌ ।
ತಯೋರಕೃತ್ವಾ ಸಂತಾಪಂ ನಾಹಂ ಜೀವಿತುಮುತ್ಸಹೇ ॥೨೮೬॥

'ಕೃಷ್ಣನ ಇದಿರಿನಲ್ಲಿ ದ್ರೌಪದಿ ಭೀಮರು ನನ್ನನ್ನು ನೋಡಿ ಹಾಸ್ಯ ಮಾಡಿದರು. ಅವರಿಗೆ ಸಂತಾಪ ಉಂಟುಮಾಡದೆ ನಾನು ಬದುಕಿರಲಾರೆ'

'ಕೃಷ್ಣನಿದಿರಲ್ಲಿ ಭೀಮದ್ರೌಪದಿಯರು ನನ್ನ ಕಡೆಗೆ ನೋಡಿ ಅಪಹಾಸ ಮಾಡುತ್ತ ಗಟ್ಟಿಯಾಗಿ ನಕ್ಕರು. ಕೃಷ್ಣ ನೋಡಿಯೂ ಸುಮ್ಮನಿದ್ದ. 'ಮೌನಂ ಸಂಮತಿ ಲಕ್ಷಣಂ' ಮೌನದಿಂದಲೆ ಸಮ್ಮತಿ ನೀಡಿದ. ಅದರಿಂದ ಭೀಮ ದ್ರೌಪದಿಯರಿಗೆ ಕಷ್ಟ ಉಂಟುಮಾಡಬೇಕು. ಕೃಷ್ಣ ಅಸಹಾಯಕನಾಗಿ ಅವರ ಕಷ್ಟವನ್ನು ನೋಡಿ ಮರುಗುವಂತಾಗಬೇಕು ಎಂಬುದು

ದುರ್ಯೋಧನನ ಮನೋರಥ.

ಯದಿ ಮೇ ಶಕ್ತಿರತ್ರ ಸ್ಯಾದ್ ಘಾತಯೇಯಂ ವೃಕೋದರಂ ।
ಅಗ್ರಪೂಜಾಂ ಚ ಕೃಷ್ಣಸ್ಯ ವಿಲುಂಪೇಯಂ ನ ಸಂಶಯಃ ॥೨೪೭॥

ನನಗೆ ಶಕ್ತಿ ಇರುತ್ತಿದ್ದರೆ ಆಗಲೆ ಭೀಮನನ್ನು ಕೊಲ್ಲುತ್ತಿದ್ದೆ. ಕೃಷ್ಣನಿಗೆ ಅಗ್ರಪೂಜೆಯಾಗುವುದನ್ನೂ ತಪ್ಪಿಸುತ್ತಿದ್ದೆ. ಇದರಲ್ಲಿ ಸಂಶಯವಿಲ್ಲ.

'ಆದರೆ ನಾನು ಆಗಲೆ ಅವರ ಮೇಲೆ ಕೈಮಾಡಿದ್ದರೆ ಶಿಶುಪಾಲನಿಗಾದ ಗತಿಯೆ ನನಗೂ ಆಗುತ್ತಿತ್ತು' ಎನ್ನುತ್ತಾನೆ ದುರ್ಯೋಧನ. (ಸಭಾ 77-29)

ಈದೃಶಂ ಪಾಂಡವೈಶ್ವರ್ಯಂ ದೃಷ್ಟ್ವಾ ಕೋ ನಾಮ ಜೀವಿತಂ ।
ಇಚ್ಛೇತ ಕರದಾ ಯೇಷಾಂ ವೈಶ್ಯವತ್ ಸರ್ವಭೂಮಿಪಾಃ ॥೨೪೮॥

ಪಾಂಡವರಿಗೆ ಎಲ್ಲ ರಾಜರೂ ವೈಶ್ಯರಂತೆ ಕರ ನೀಡುತ್ತಿದ್ದಾರೆ. ಅವರ ಈ ಐಶ್ವರ್ಯವನ್ನು ಕಂಡು ಯಾರು ತಾನೆ ಬದುಕಿರಲು ಬಯಸಿಯಾನು?

ಇತ್ಯುಕ್ತಃ ಶಕುನಿರ್ವೈರಂ ದೃಢೀಕರ್ತುಂ ವಚೋಽಬ್ರವೀತ್ ।
ಕಿಂ ತೇ ವೈರೇಣ ರಾಜೇಂದ್ರ ಭ್ರಾತೃಭಿರ್ಬಲಿಭಿಃ ಪುನಃ ॥೨೪೯॥

ದುರ್ಯೋಧನ ಹೀಗೆ ಹೇಳಿದಾಗ ಶಕುನಿ ಅವನ ದ್ವೇಷಭಾವನೆಯನ್ನು ಇನ್ನಷ್ಟು ದೃಢಪಡಿಸಲು ಹೇಳಿದ- 'ಮಹಾರಾಜ, ನಿನ್ನ ಸೋದರರು ಬಲಶಾಲಿಗಳು. ಅವರೊಡನೆ ವೈರ ಮಾಡಿ ಏನು ಪ್ರಯೋಜನ?'

ಅನುಜೀವಸ್ತ ತಾನ್ ವೀರಾನ್ ಗುಣಜ್ಯೇಷ್ಠಾನ್ ಬಲಾಧಿಕಾನ್ ।
ಇತೀರಿತೋಽತಿಸಂವೃದ್ಧಕೋಪ ಆಹ ಸುಯೋಧನಃ ॥೨೯೦॥

'ಪಾಂಡವರು ಗುಣದಲ್ಲಿಯೂ ಮೇಲು ಬಲದಲ್ಲಿಯೂ ಮೇಲು. ವೀರರಾದ ಅವರನ್ನು ಅನುಸರಿಸಿ ಬದುಕಿರು' ಶಕುನಿ ಹೀಗೆ ಕೇಳಿದಾಗ ದುರ್ಯೋಧನ ಅತಿಯಾಗಿ ಕೆರಳಿದ. ಕೋಪದಿಂದ ನುಡಿದ.

ಯದಿ ತೇಷಾಂ ತದೈಶ್ವರ್ಯಂ ನ ಮಾಂ ಗಚ್ಛೇದಶೇಷತಃ ।
ಸರ್ವಥಾ ನೈವ ಜೀವೇಯಮಿತಿ ಸತ್ಯಂ ಬ್ರವೀಮಿ ತೇ ॥೨೯೧॥

'ಪಾಂಡವರ ಆ ಸಂಪತ್ತು ಪೂರ್ತಿಯಾಗಿ ನನ್ನ ವಶಕ್ಕೆ ಬಾರದಿದ್ದಲ್ಲಿ ನಾನು ಸರ್ವಥಾ ಬದುಕಿರಲಾರೆ. ನಾನು ನಿನಗೆ ನಿಜವನ್ನೇ ಹೇಳುತ್ತಿದ್ದೇನೆ.'

ನ ತು ಬಾಹುಬಲಾಚ್ಛಕ್ಯಮಾದಾತುಂ ತಾಂ ಶ್ರಿಯಂ ಕ್ವಚಿತ್ ।
ನೇಂದ್ರೋಽಪಿ ಸಮರೇ ಶಕ್ತಸ್ತಾನ್ ಜೇತುಂ ಕಿಮು ಮಾನುಷಾಃ ॥೨೯೨॥

'ಬಾಹುಬಲದಿಂದ ಆ ಸಂಪತ್ತನ್ನು ಕಸಿಯಲು ಎಂದೂ ಶಕ್ಯವಿಲ್ಲ. ಇಂದ್ರನೂ ಯುದ್ಧದಲ್ಲಿ ಅವರನ್ನು ಗೆಲ್ಲಲಾರ. ಇನ್ನು ಮನುಷ್ಯರ ಬಗ್ಗೆ ಏನು ಹೇಳಬೇಕು?'

ಇತೀರಿತಃ ಪಾಪತಮ ಆಹ ಗಾಂಧಾರಕೋ ನೃಪಃ ।
ಪಾಪಿನಾಮಖಿಲಾನಾಂ ಚ ಪ್ರಧಾನಂ ಚಕ್ರವರ್ತಿನಾಂ ॥೨೯೩॥

ದುರ್ಯೋಧನ ಹೀಗೆ ಹೇಳಿದಾಗ ಪಾಪಿ ಚಕ್ರವರ್ತಿಗಳೆಲ್ಲರಲ್ಲಿ ಮುಖ್ಯನಾದ ಆ ದುರ್ಯೋಧನನಿಗೆ ಮಹಾಪಾಪಿಯಾದ ಗಾಂಧಾರರಾಜ ಶಕುನಿ ನುಡಿದ.

ಯಾಂಯಾಂ ಶ್ರಿಯಂ ಪ್ರದೀಪ್ತಾಂ ತ್ವಂ ಪಾಂಡವೇಷು ಪ್ರಪಶ್ಯಸಿ ।
ತಾಮಕ್ಲೇಶತ ಆದಾಸ್ಯೇ ಕ್ರೀಡನ್ನಕ್ಷೈಸ್ತವದಂತಿಕೇ ॥೨೯೪॥

'ಯಾವ ಯಾವ ಸಂಪತ್ತು ಪಾಂಡವರಲ್ಲಿ ಬೆಳಗುವುದನ್ನು ನೀನು ಕಾಣುತ್ತಿರುವೆಯೊ ಅದನ್ನು ನಾನು ಕ್ಲೇಶವಿಲ್ಲದೆ ಜೂಜಾಡುತ್ತಲೇ ನಿನ್ನ ಬಳಿಗೆ ಸೆಳೆದು ತರುವೆನು.'

ಇತೀರಿತಃ ಪ್ರಸನ್ನಧೀಃ ಸುಯೋಧನೋ ಬಭೂವ ಹ ।
ಪ್ರಜಗ್ಮತುಶ್ಚ ತಾವುಭೌ ವಿಚಿತ್ರವೀರ್ಯಜಂ ನೃಪಂ ॥೨೯೫॥

ಶಕುನಿ ಹೀಗೆ ಹೇಳಿದಾಗ ದುರ್ಯೋಧನನ ಮನಸ್ಸು ಪ್ರಸನ್ನವಾಯಿತು. ಅವರಿಬ್ಬರೂ ರಾಜಾ ಧೃತರಾಷ್ಟ್ರನ ಬಳಿಗೆ ಹೋದರು.

ಧೃತರಾಷ್ಟ್ರನ ಸಮ್ಮತಿ

ಧೃತರಾಷ್ಟ್ರಮಥೋವಾಚ ದ್ವಾಪರಾಂಶೋಽತಿಪಾಪಕೃತ್ ।
ನಾಸ್ತಿಕ್ಯರೂಪಃ ಶಕುನಿರ್ವಿವರ್ಣಂ[1] ಹರಿಣಂ ಕೃಶಂ ॥೨೯೬॥
ದುರ್ಯೋಧನಂ ಚ ತಚ್ಛ್ರುತ್ವಾ ಕುತ ಇತ್ಯಾಹ ದುರ್ಮನಾಃ ।
ಅಬ್ರೂತಾಂ ತೌ ನೃಪಾಯಾಶು ದ್ವಾಭ್ಯಾಂ ಯನ್ಮಂತ್ರಿತಂ ಪಥಿ ॥೨೯೭॥

'ದುರ್ಯೋಧನ ಸೊರಗಿದ್ದಾನೆ. ಮೊದಲಿನ ಮೈಕಾಂತಿ ಇಲ್ಲದೆ 'ಬಿಳಚಿಕೊಂಡಿದ್ದಾನೆ' ಎಂದು ಮುಂತಾಗಿ ಧೃತರಾಷ್ಟ್ರನ ಮುಂದೆ ಬಣ್ಣಿಸಿದ, ದ್ವಾಪರ ಎಂಬ ಅಸುರನ ಅಂಶ, ನಾಸ್ತಿಕ್ಯ ಬುದ್ಧಿಗೆ ಅಭಿಮಾನಿ, ಮಹಾಪಾಪಕಾರಿಯಾದ ಶಕುನಿ. ಇದನ್ನು ಕೇಳಿ ಧೃತರಾಷ್ಟ್ರ ದುಃಖಿತನಾಗಿ 'ಏಕೆ?' ಎಂದ. ಆಗ ದುರ್ಯೋಧನ ಶಕುನಿ ಇಬ್ಬರು ತಾವು ದಾರಿಯಲ್ಲಿ ಬರುವಾಗ ಮಾತನಾಡಿಕೊಂಡಿದ್ದನ್ನು ಬೇಗನೆ ಹೇಳಿದರು.

ಶ್ರುತ್ವೈವ ತನ್ನೇತ್ಯವದತ್ಸ ಭೂಪತಿ-
ರ್ವಿರೋಧಿ ಧರ್ಮಸ್ಯ ವಿನಾಶಕಾರಣಂ ।

---

1. ವಿವರ್ಣಂ ವಿಗತಪೂರ್ವವರ್ಣಂ ಹರಿಣಃ ಪಾಂಡರಃ ಪಾಂಡುಃ ಇತ್ಯಭಿಧಾನಾತ್ ಕಾಮಲಾವ್ಯಾಧಿಗ್ರಸ್ತವತ್ ಪಾಂಡುವರ್ಣಂ। -ವಾದಿರಾಜೀಯ

ಕುಮಂತ್ರಿತಂ ವೋ ನ ಮಮೈತದಿಷ್ಟಂ
ಸ್ವಬಾಹುವೀರ್ಯಾಪ್ತ ಮಹಾಶ್ರಿಯೋ ಹಿ ತೇ ॥೨೯೮॥

ಅದನ್ನು ಕೇಳಿದೊಡನೆ ಧೃತರಾಷ್ಟ್ರ 'ಪಗಡೆಯಾಟ ಬೇಡ' ಎಂದ. 'ಅದು ಧರ್ಮ ವಿರೋಧಿ. ನಮ್ಮ ವಿನಾಶಕ್ಕೆ ಕಾರಣ. ಅದರಿಂದ ನಿಮ್ಮ ಈ ಕೆಟ್ಟ ಆಲೋಚನೆ ನನಗೆ ಇಷ್ಟವಾಗುವುದಿಲ್ಲ. ಪಾಂಡವರು ತಮ್ಮ ಬಾಹುಬಲದಿಂದ ಆ ಮಹಾಸಂಪತ್ತನ್ನು ಗಳಿಸಿದ್ದಾರೆ.

ತ್ವಯಾಪಿ ನಿರ್ಜಿತ್ಯ ದಿಶೋ ಮಖಾಗ್ರ್ಯಾಃ
ಕಾರ್ಯಾಃ ಸ್ಪೃಧೋ ಮಾ ಗುಣವತ್ತಮೈಸ್ತೈಃ ।
ವಿಶೇಷತೋ ಭ್ರಾತೃಭಿರಗ್ರ್ಯಪೌರುಷೈ-
ರಿತ್ಯುಕ್ತ ಆಹಾಶು ಸುಯೋಧನಸ್ತಂ ॥೨೯೯॥

'ನೀನೂ ದಿಗ್ವಿಜಯಮಾಡಿ ಒಳ್ಳೆಯ ಯಜ್ಞಗಳನ್ನು ಮಾಡಬೇಕು ಹೊರತು ಒಳ್ಳೆಯ ಗುಣವಂತರೊಡನೆ, ಅದರಲ್ಲಿಯೂ ವಿಶೇಷವಾಗಿ ಉತ್ತಮ ಪೌರುಷಶಾಲಿಗಳಾದ ಸೋದರರೊಡನೆ ಮತ್ಸರಿಸಬಾರದು' ಹೀಗೆ ಧೃತರಾಷ್ಟ್ರ ಹೇಳಿದಾಗ ದುರ್ಯೋಧನನುಡಿದ.

ಯದಿ ಶ್ರಿಯಂ ಪಾಂಡವಾನಾಂ ನಾಕ್ಷೈರಾಹರ್ತುಮಿಚ್ಛಸಿ ।
ಮೃತಮೇವಾದ್ಯ ಮಾಂ ವಿದ್ಧಿ ಪಾಂಡವೈಸ್ತ್ವಂ ಸುಖೀ ಭವ ॥೩೦೦॥

ಪಾಂಡವರ ಸಂಪತ್ತನ್ನು ಜೂಜಾಟದಿಂದ ಅಪಹರಿಸಲು ನೀನು ಒಪ್ಪಿಗೆ ಕೊಡದಿದ್ದರೆ ನಾನಿಂದು ಸತ್ತೆನೆಂದೇ ತಿಳಿ. ನೀನು ಪಾಂಡವರೊಂದಿಗೇ ಸುಖದಿಂದಿರು.

ಯದಿ ಮಜ್ಜೀವನಾರ್ಥೀ ತ್ವಮಾನಯಾಶ್ವಿಹ ಪಾಂಡವಾನ್ ।
ಸಭಾರ್ಯಾನ್ ದೇವನಾಯೈವ ನ ಚಾಧರ್ಮೋಽತ್ರ ಕಶ್ಚನ ॥೩೦೧॥

ನಾನು ಬದುಕಿರಬೇಕೆಂದು ನೀನು ಬಯಸುವಿಯಾದರೆ ಪಾಂಡವರನ್ನು ಪತ್ನೀ ಸಮೇತ ಜೂಜಾಟಕ್ಕೆ ಇಲ್ಲಿಗೆ ಕರೆಸಿಕೊಳ್ಳು. ಇದರಲ್ಲಿ ಯಾವ ಅಧರ್ಮವೂ ಇಲ್ಲ.

ಅಧರ್ಮವಿಲ್ಲವೆಂದರೆ ಅಧರ್ಮವನ್ನು ನೋಡಬಾರದೆಂದು ಅಭಿಪ್ರಾಯ. ಕ್ಷತ್ರಿಯನಿಗೆ ಶತ್ರುಜಯದಿಂದಲೇ ಬದುಕು. ಅದನ್ನು ಧರ್ಮದಿಂದಾಗಲಿ ಅಧರ್ಮದಿಂದಾಗಲಿ ಸಾಧಿಸಿಕೊಳ್ಳಬಹುದು.

ಕ್ಷತ್ರಿಯಸ್ಯ ಮಹಾರಾಜ ಜಯೇ ವೃತ್ತಿಃ ಸಮಾಹಿತಾ।
ಸ ವೈ ಧರ್ಮಸ್ತ್ವಧರ್ಮೋ ವಾ ಸ್ವವೃತ್ತೌ ಕಾ ಪರೀಕ್ಷಣಾ ?
(ಸಭಾ 81.7)

ವೇದಾನುಜೀವಿನೋ ವಿಪ್ರಾಃ ಕ್ಷತ್ರಿಯಾಃ ಶಸ್ತ್ರಜೀವಿನಃ ।
ತ್ರುಟ್ಯತೇ ಯೇನ ಶತ್ರುಶ್ಚ ತಚ್ಛಸ್ತ್ರಂ ನೈವ ಚೇತರತ್ ॥೩೦೨॥

ಬ್ರಾಹ್ಮಣರು ವೇದಗಳಿಂದ ಜೀವಿಸುವಂತೆ ಕ್ಷತ್ರಿಯರು ಶಸ್ತ್ರಗಳಿಂದ ಜೀವಿಸುವವರು. ಯಾವುದರಿಂದ ಶತ್ರುನಾಶ ಹೊಂದುವನೋ ಅದು ಶಸ್ತ್ರ ಹೊರತು ಇನ್ನೇನೂ ಅಲ್ಲ.

ಗುಪ್ತವಾಗಿಯೋ ಪ್ರಕಟವಾಗಿಯೋ ಯಾವ ಉಪಾಯ ಶತ್ರುವನ್ನು ನಾಶಮಾಡುವುದೋ ಅದು ಶಸ್ತ್ರ. 'ಶ' ಎಂದರೆ ಶತ್ರು. ಅವನನ್ನು 'ತ್ರ' ನಾಶಮಾಡುವಂಥದ್ದು, (ತೃಟ್ ಛೇದನೇ ಡಪ್ರತ್ಯಯ) ಜೂಜು ಅಂತಹ ಒಂದು ಶಸ್ತ್ರವೆ. ಅದರಿಂದ ಅಧರ್ಮವಲ್ಲ ಎನ್ನುತ್ತಾನೆ ದುರ್ಯೋಧನ. ವಸ್ತುತಃ 'ಶಸ್' ಎಂದರೆ ಶಾಸನ, 'ತ್ರ' ಅದಕ್ಕೆ ಉಪಾಯವಾದ ಧನುರ್ಬಾಣ ಮುಂತಾದುದು. ಶತ್ರುವಿಗೆ ಶಾಸನ ಅನುಶಾಸನ ಮಾಡುವಂಥದ್ದು. ಇದು ಧರ್ಮ, ಇದು ಅಧರ್ಮವೆಂಬ ವಿವೇಕ ತರುವಂಥದ್ದು ಶಸ್ತ್ರ. ದುರ್ಯೋಧನ ಬೇಕೆಂದೇ ಈ ಅರ್ಥಬಿಟ್ಟು ತನಗೆ ಬೇಕಾದ ಅರ್ಥವನ್ನು ಹಚ್ಚುತ್ತಾನೆ.[1]

ಅತಃ ಸ್ವಧರ್ಮ ಏವಾಯಂ ತವಾಪಿ ಸ್ಯಾತ್ ಫಲಂ ಮಹತ್ ।
ಇತ್ಯುಕ್ತೋ ಮಾ ಫಲಂ ಮೇಕಸ್ತು ತವೈವಾಸ್ತ್ವಿತಿ ಸೋಕಬ್ರವೀತ್ ॥೩೦॥

'ಅದರಿಂದ ನಮಗೆ ಇದು ಸ್ವಧರ್ಮವೆ. ನಿನಗೂ ಇದರಿಂದ ಮಹತ್ತಾದ ಫಲ ದೊರಕುವುದು.' ಹೀಗೆ ದುರ್ಯೋಧನ ಹೇಳಿದಾಗ 'ಫಲ ನಿನಗೇ ಇರಲಿ ನನಗೆ ಬೇಡ' ಎಂದ ಧೃತರಾಷ್ಟ್ರ.

ಏವಂ ಬ್ರುವನ್ನಪಿ ನೃಪ ಆವಿಷ್ಟಃ ಕಲಿನಾ ಸ್ವಯಂ।
ಪುತ್ರಸ್ನೇಹಾಚ್ಚ ವಿದುರಮಾದಿಶತ್ ಪಾಂಡವಾನ್ ಪ್ರತಿ ॥೩೦೪॥

ಧೃತರಾಷ್ಟ್ರ ಹೀಗೆ ಹೇಳುತ್ತಿದ್ದರೂ ಸ್ವಯಂ ಕಲಿಯಿಂದ ಆವಿಷ್ಟನಾಗಿದ್ದುದರಿಂದ ಪುತ್ರಮೋಹದಿಂದ ವಿದುರನನ್ನು ಪಾಂಡವರ ಬಳಿಗೆ ಹೋಗಲು ಆಜ್ಞಾಪಿಸಿದ.

• ಆವಿವೇಶ ಕಲಿಸ್ತಂ ಹಿ ಯದಾ ಪುತ್ರತ್ವಸಿದ್ಧಯೇ ।
ಅಂಶೇನ ತತ ಆರಭ್ಯ ನೈವಾಸ್ಮಾದಪಜಗ್ಮಿವಾನ್ ॥೩೦೫॥

ಕಲಿ ಧೃತರಾಷ್ಟ್ರನ ಮಗನಾಗಿ ಜನಿಸುವುದಕ್ಕಾಗಿ ಎಂದು ಅವನನ್ನು ಪ್ರವೇಶಿಸಿದನೋ ಅಂದಿನಿಂದ ಆರಂಭಿಸಿ ಒಂದಂಶದಿಂದ ಸದಾ ಅವನಲ್ಲಿ ಇದ್ದ. ಅವನಿಂದ ದೂರ ಹೋಗಲಿಲ್ಲ.

ಜೀವ ಹುಟ್ಟುವುದಕ್ಕೆ ಮೊದಲು ತಂದೆಯ ಶರೀರದಲ್ಲಿ ಮೂರು ತಿಂಗಳ ಕಾಲ ಇರುತ್ತಾನೆ. ಬಳಿಕ ತಾಯಿಯ ಗರ್ಭದಲ್ಲಿ ಒಂಬತ್ತು

---

1. ಶಾಸ್ಯತೇ ಯೇನ ವೈರೀ ತಚ್ಛಸ್ತ್ರಮಿತಿ ಸಹಜ ವ್ಯುತ್ಪತ್ತಿಂ ವಿಹಾಯ ಸ್ವಾನುಕೂಲವ್ಯುತ್ಪತ್ತಿಮಾಹ ತೃಟ್ಯತ ಇತಿ। ಅಪ್ಯಕ್ಷರಸಾಮ್ಯಾನ್ನಿರ್ಬ್ಭಾಯಾದಿತಿ ವಚನಾತ್ ತೃಟಛೇದನೇ ಇತಿ ಧಾತೋಃ ಕರ್ಮಣಿ ಡ ಪ್ರತ್ಯಯೇ ಶಃ ಶತ್ರುಃ ತೃಟ್ಯತೇ ಯೇನ ತತ್ ಶಸ್ತ್ರಂ। ನಿರುಕ್ತತ್ವಾತ್ ಸಕಾರಾಗಮ ಇತಿ ದುರ್ಭಾವಃ।
-ವಾದಿರಾಜೀಯ

ತಿಂಗಳು. ಕಲಿ ಹಾಗೆ ಧೃತರಾಷ್ಟ್ರನ ಶರೀರವನ್ನು ಪ್ರವೇಶಿಸಿ ಗಾಂಧಾರಿಯ ಗರ್ಭಕ್ಕೆ ಹೋಗುವಾಗ ಒಂದು ಅಂಶದಿಂದ ಧೃತರಾಷ್ಟ್ರನಲ್ಲಿಯೆ ಸ್ಥಿರವಾಗಿ ಕುಳಿತು ಅವನ ಬುದ್ಧಿಯನ್ನು ಕೆಡಿಸಿದ.

ಯಾವತ್ ಪುರಂ ಪರಿತ್ಯಜ್ಯ ವನಮೇವ ವಿವೇಶ ಹ ।
ತದಂತರಾ ತತಸ್ತಸ್ಯ ಪಾಪಯುಕ್ತಂ ಮನೋಽಭವತ್ ॥೩೦॥

ಅದರಿಂದಲೆ ಮುಂದೆ ಹಸ್ತಿನಾವತಿಯನ್ನು ತೊರೆದು ಕಾಡಿಗೆ ಹೋಗುವವರೆಗೂ ಧೃತರಾಷ್ಟ್ರನ ಮನಸ್ಸು ಪಾಪಯುಕ್ತವೆ ಆಗಿತ್ತು.

ಭೀಮ ಒಂದೇ ಸಮನೆ ಧೃತರಾಷ್ಟ್ರನನ್ನು ಹೀನಾಯವಾಗಿ ಬೈದು ಹಂಗಿಸಿ ಅವಮಾನಿಸಿದ. ವಿದುರನೂ 'ಭೀಮನ ಕೈಯ ಅನ್ನದ ಪಿಂಡವನ್ನು ನಾಯಿಯಂತೆ ತಿನ್ನುತ್ತ ಏಕೆ ಬದುಕಬೇಕು? ಕಾಡಿಗೆ ಹೋಗಬಾರದೆ?' ಎಂದು ಉಪದೇಶಿಸಿದ. ಅದರಿಂದ ಧೃತರಾಷ್ಟ್ರನಲ್ಲಿದ್ದ ಕಲ್ಯಾವೇಶ ತೊಲಗಿತು. ಆತ ಕಾಡಿಗೆ ಹೊರಟ.

ಧರ್ಮರಾಜನಿಗೆ ಕರೆ

ನ್ಯವಾರಯತ್ ತಂ ವಿದುರೋ ಮಹತ್ ತೇ
ಪಾಪಂ ಕುಲಸ್ಯಾಪಿ ವಿನಾಶಕೋಽಯಂ ।
ಸಮುದ್ಯಮೋ ನಾತ್ರ ವಿಚಾರ್ಯಮಸ್ತಿ
ಕೃಧಾ ನ ತಸ್ಮಾದಯಶಶ್ಚ ತೇ ಸ್ಯಾತ್ ॥೨೭॥

ವಿದುರ ಧೃತರಾಷ್ಟ್ರನನ್ನು ತಡೆಯಲು ಯತ್ನಿಸಿದ - 'ನಿನಗೆ ಇದರಿಂದ ಮಹಾಪಾಪ ಬರುವುದು. ಕುಲಕ್ಕೂ ನಾಶಕವಾದ ಯತ್ನ ಇದು. ಇದರಲ್ಲಿ ವಿಚಾರ ಮಾಡಬೇಕಾದುದು ಏನೂ ಇಲ್ಲ. ಅದರಿಂದ ಮಾಡಲೆಬೇಡ. ನಿನಗೆ ಅಪಕೀರ್ತಿಯೂ ಬರುವುದು'..

ಇತಿ ಬ್ರುವಾಣಂ ಕಲಹೋಽತ್ಯ ನ ಸ್ಯಾ-
ನ್ನಿವಾರಯಾಮೋ ವಯಮೇವ ಯಸ್ಮಾತ್ ।
ದ್ರಷ್ಟುಂ ಸುತಾನ್ ಕ್ರೀಡತ ಏಕಸಂಸ್ಥಾ-
ನಿಚ್ಛಾಮಿ ಪಾರ್ಥಾಂಶ್ಚ ಸುಯೋಧನಾದೀನ್ ॥೩೦॥

ವಿದುರ ಹೀಗೆ ಹೇಳಿದಾಗ ಧೃತರಾಷ್ಟ್ರನೆಂದ. 'ಜೂಜಿನಲ್ಲಿ ಕಲಹವಾಗದು. ನಾವೇ ತಡೆಯುತ್ತೇವೆ. ಪಾಂಡವರೂ ದುರ್ಯೋಧನಾದಿಗಳೂ ನಮ್ಮ ಮಕ್ಕಳು. ಅವರು ಒಂದೆಡೆ ಕುಳಿತು ಆಟವಾಡುವುದನ್ನು ನಾನು ನೋಡಲು ಬಯಸುತ್ತೇನೆ.

ನಾವು ಎಂದರೆ ನಾನು ಭೀಷ್ಮ ದ್ರೋಣ ಮತ್ತು ನೀನು ಇರುವಾಗ ಯಾರಿಗೂ ಏನೂ ಅನ್ಯಾಯವಾಗಲಾರದು, ಕಲಹವಾಗದು, ನಾವು ತಡೆಯುತ್ತೇವೆ.

ಅತಃ ಕ್ಷಿಪ್ರಮುಪಾನೇಯಾಃ ಪಾರ್ಥಾ ಇತಿ ಬಲೋದಿತಃ।
ಯಯೌ ಸ ವಿದುರಃ ಪಾರ್ಥಾನ್ ದ್ವಾರಕಾಂ ಕೇಶವೇ ಗತೇ ॥೩೦೯॥

ಆದರಿಂದ ಬೇಗನೆ ಪಾಂಡವರನ್ನು ಇಲ್ಲಿಗೆ ಕರೆದು ತಾ ಎಂದು ಧೃತರಾಷ್ಟ್ರ ಬಲವಾಗಿ ಹೇಳಿದಾಗ ವಿದುರ ಪಾಂಡವರ ಬಳಿಗೆ ನಡೆದ. ಆಗ ಶ್ರೀಕೃಷ್ಣ ಇಂದ್ರಪ್ರಸ್ಥದಲ್ಲಿ ಇರಲಿಲ್ಲ, ದ್ವಾರಕೆಗೆ ಹೋಗಿದ್ದ.

ಶ್ರೀಕೃಷ್ಣನ ಅನುಪಸ್ಥಿತಿ

ಗತೇ ಹಿ ಪಾರ್ಥಸನ್ನಿಧೇಃ ಸುಯೋಧನೇಽಥ ನಾರದಃ।
ಶಶಂಸ ಧರ್ಮಸೂನುನಾ ಪ್ರಚೋದಿತೋಽರಿಮಾಗತಂ ॥೩೧೦॥

ಪಾಂಡವರ ಬಳಿಯಿಂದ ದುರ್ಯೋಧನ ಅತ್ತ ಹೊರಟು ಹೋದಾಗ ನಾರದಮುನಿ ಧರ್ಮರಾಜನ ಅಪೇಕ್ಷೆಯಂತೆ ಶತ್ರುವಾದ ಸಾಲ್ವನ ಆಗಮನದ ವಾರ್ತೆಯನ್ನು ಹೇಳಿದರು.

ಕ ಉದ್ಯಮೀ ನೃಪೇಷ್ವಿತಿ ಪ್ರಪೃಷ್ಟ ಆಹ ನಾರದಃ।
ಸ ಸೌಭರಾಡ್ವರಂ ಶಿವಾದವಾಪ ವೃಷ್ಣಿನಿರ್ಜಯಂ ॥೩೧೧॥
ಪಾಂಸುಮುಷ್ಟಿಂ ಸಕೃದ್ಗ್ರಾಸೀ ಬಹೂನಬ್ದಾಂಸ್ತಪಶ್ಚರನ್।
ಆಜಗಾಮ ಹರಾದಾಪ್ಯ ವರಂ ಕೃಷ್ಣಜಯೇ ಪುನಃ ॥೩೧೨॥

ರಾಜರುಗಳಲ್ಲಿ ವಿಜಯಕ್ಕೆ ಪ್ರಯತ್ನಿಸುವವರು ಯಾರು ಎಂದು ಧರ್ಮರಾಜ ನಾರದರನ್ನು ಕೇಳಿದ. ನಾರದರು ಹೇಳಿದರು, 'ಸಾಲ್ವ ಹಿಂದೆಯೆ ಶಿವನಿಂದ ವರವನ್ನು ಪಡೆದಿದ್ದ. ಆದರೂ ರುಕ್ಮಿಣೀ ಸ್ವಯಂವರ ಕಾಲದಲ್ಲಿ ಕೃಷ್ಣನಿಂದ ಪರಾಜಿತನಾಗಿ ದಿನಕ್ಕೊಮ್ಮೆ ಮುಷ್ಟಿದೂಳನ್ನು ಮಾತ್ರ ಉಣ್ಣುತ್ತ ಬಹು ವರ್ಷಕಾಲ ತಪಸ್ಸು ಮಾಡಿ ಶಿವನಿಂದ ಕೃಷ್ಣ ಜಯದ ವಿಷಯದಲ್ಲಿಯೂ ವರ ಪಡೆದು ಈಗ ಪುನಃ ಬಂದಿದ್ದಾನೆ.

ಸ ಶ್ರುತ್ವಾ ಮಾಗಧವಧಂ ದಿಶಾಂ ವಿಜಯಮೇವ ಚ।
ರಾಜಸೂಯಂ ಕ್ರತುಂ ಚೈವ ಶಿಶುಪಾಲವಧಂ ತಥಾ ॥೩೧೩॥
ಯದೂನ್‌ಪ್ರತ್ಯುದ್ಯಮಂ ತೂರ್ಣಂ ಕರೋತೀತಿ ನಿಶಮ್ಯ ತತ್।
ಸಮೈಕ್ಷದ್ ಧರ್ಮಜಃ ಕೃಷ್ಣಮುಖಶೀತಾಂಶುಮಂಡಲಂ ॥೩೧೪॥

ಪಾಂಡವರು ಮಾಡಿದ ಜರಾಸಂಧ ವಧ, ದಿಗ್ವಿಜಯ, ರಾಜಸೂಯಯಾಗ, ಶಿಶುಪಾಲವಧಗಳನ್ನು ಕೇಳಿ ಸಾಲ್ವಯಾದವರ ಮೇಲೆ ಬೇಗನೆ ದಾಳಿ ಮಾಡಲಿದ್ದಾನೆ' ಎಂದು ನಾರದರು ಹೇಳಿದರು. ಅದನ್ನು ಕೇಳಿ ಧರ್ಮರಾಜ ಶ್ರೀಕೃಷ್ಣನ ಮುಖವನ್ನು ಅವಲೋಕಿಸಿದ. ಅದು ಚಂದ್ರ ಮಂಡಲಕ್ಕೆ ಸದೃಶವಾಗಿತ್ತು.

ಶ್ರೀಕೃಷ್ಣ ನನ್ನ ಗುರುವಾದ ಜರಾಸಂಧನನ್ನು ಭೀಮನ ಕೈಯಿಂದ ಕೊಲ್ಲಿಸಿದ್ದಾನೆ. ಪ್ರಾಣಮಿತ್ರನಾದ ಶಿಶುಪಾಲನನ್ನು ಕೊಂದಿದ್ದಾನೆ ಎಂದು

ಸಾಲ್ವನಿಗೆ ಮಹಾಕೋಪ. ಇದೆಲ್ಲ ನಡೆಯುತ್ತಿದ್ದಾಗ ಸಾಲ್ವ ತಪಸ್ಸಿನಲ್ಲಿ ನಿರತನಾಗಿದ್ದ. ಈಗ ತಪಸ್ಸು ಮುಗಿದ ಬಳಿಕ ದ್ವಾರಕೆಯ ಮೇಲೆ ದಾಳಿ. ಇದನ್ನು ಕೇಳಿ ಧರ್ಮರಾಜ ಕಳವಳಗೊಂಡು ಕೃಷ್ಣನ ಮುಖವನ್ನು ಅವಲೋಕಿಸಿದರೆ ಮುಖ ನಿರ್ವಿಕಾರವಾಗಿತ್ತು. ಹಿಂದಿನಂತೆಯೆ ಚಂದ್ರಮಂಡಲ ಸದೃಶವಾಗಿತ್ತು. ಸಾಲ್ವನ ವೃತ್ತಾಂತವನ್ನು ಕೇಳಿದೊಡನೆ ಕೋಪಾಗ್ನಿಯಿಂದ ಉರಿಯಬೇಕಾಗಿತ್ತು. ಆದರೆ ತಂಪಾದ ಕಿರಣಗಳನ್ನು ಚೆಲ್ಲುವ ಚಂದ್ರಬಿಂಬದಂತೆಯೇ ಇತ್ತು. ಲೀಲಾ ಮಾತ್ರದಿಂದ ಸಕಲ ಲೋಕ ಲಯಗೈವ ಸರ್ವಶಕ್ತನಾದ ಕೃಷ್ಣನಿಗೆ ಕೋಪ ಬರಲಿಲ್ಲ ಎಂದು ಸೂಚಿಸುವುದಕ್ಕಾಗಿ ಚಂದ್ರಮಂಡಲ್ಕ ಸದೃಶವಾದ ಮುಖವನ್ನು ಅವಲೋಕಿಸಿದ ಎಂದಿದೆ.[1]

ಅಸ್ತ್ವಿತ್ಯುಕ್ತ್ವಾ ಸ ಗೋವಿಂದಃ ಪ್ರೇಷಯಾಮಾಸ ಯಾದವಾನ್ ।
ಪ್ರದ್ಯುಮ್ನಾದೀನ್ ದಿನೈಃ ಕೈಶ್ಚಿತ್ಸ್ವಯಂ ಚಾಗಾತ್ಸಹಾಗ್ರಜಃ ॥೩೧॥

'ಆಗಲಿ' ಎಂದು ಹೇಳಿ ಶ್ರೀಕೃಷ್ಣ ಪ್ರದ್ಯುಮ್ನ ಮುಂತಾದ ಯಾದವರನ್ನು ಮುಂದೆ ಕಳಿಸಿಕೊಟ್ಟ. ಕೆಲವು ದಿನಗಳ ನಂತರ ತಾನೂ ಬಲರಾಮನೊಂದಿಗೆ ಹೊರಟುಹೋದ.

'ಕಿಂಚಿತ್ ಪ್ರಹಸ್ಯಾಸ್ತು ನಾಮೇತ್ಯಾಹ ಸಾ ಹಿ ಮಹಾತ್ಮತಾ'

'ಶ್ರೀಕೃಷ್ಣ ನಸುನಕ್ಕು 'ಆಗಲಿ' ಎಂದ. ಇದೇ ಶ್ರೀಕೃಷ್ಣನ ವ್ಯಕ್ತಿತ್ವದ ಔನ್ನತ್ಯ'. ಎಂದು ಭಾಗವತ ಹೇಳಿದೆ. ಹೀಗೆ ಭಾಗವತದಲ್ಲಿ 'ಅಸ್ತು' ಎಂದಿರುವುದರಿಂದಲೇ ಶ್ರೀಮದಾಚಾರ್ಯರೂ 'ಅಸ್ತು' ಎಂಬ ಪದವನ್ನೆ ಬಳಸಿದ್ದಾರೆ. ಅದರಿಂದ ಗುರುಶಿಷ್ಯರುಗಳಾದ ವ್ಯಾಸಮಧ್ವರಲ್ಲಿ ಕೇವಲ ಅಭಿಪ್ರಾಯದಲ್ಲಿ ಮಾತ್ರವಲ್ಲದೆ ಶಬ್ದೋಚ್ಚಾರಣೆಯಲ್ಲಿಯೂ ಏಕ ರೂಪತೆ ಇದೆ ಎನ್ನುವುದು ಸ್ಪಷ್ಟವಾಗುವುದು. ಕೆಲವೆಡೆ ಗುರುಗಳ ರತ್ನದಂಥ ಮಾತುಗಳೊಂದಿಗೆ ತಮ್ಮ ಚಿನ್ನದಂಥ ಮಾತುಗಳ ಮಣಿಗಳನ್ನು ಸೇರಿಸಿ ಸುಂದರವಾದ ಮಾಲೆಯನ್ನು ರಚಿಸುತ್ತಾರೆ ಶ್ರೀಮದಾಚಾರ್ಯರು.[2]

---

1 ಮತ್ತು 2. ನಾರದೇನ ಬಹುಧಾ ಕ್ರೋಧಜನಕವಚನೇ ಉಕ್ತೇಽಪಿ ಕ್ರೀಡಾಮಾತ್ರೇಣ ಸಕಲಜಗತ್-ಸಂಹರಣಶಕ್ತಸ್ಯ ಕೃಷ್ಣಸ್ಯ ಕ್ರೋಧೋ ನಾಭೂದಿತಿ ಸೂಚನಾಯ ಕೃಷ್ಣಮುಖಶೀತಾಂಶು ಮಂಡಲ-ಮಿತ್ಯಬ್ರವೀತ್। ತದುಕ್ತಂ ಭಾಗವತೇ 'ಕಿಂಚಿತ್ ಪ್ರಹಸ್ಯಾಸ್ತು ನಾಮೇತ್ಯಾಹ ಸಾ ಹಿ ಮಹಾತ್ಮತಾ' ಇತಿ। ತಸ್ಮಾದೇವಾಚಾರ್ಯೈರಸ್ತ್ವಿತ್ಯುಕ್ತ್ವೇತ್ಯುಕ್ತಂ। ಅತೋ ನ ಕೇವಲಮರ್ಥತಃ ಸಾಮ್ಯಂ ಕಿಂತು ಶಬ್ದತೋಽಪಿ ಗುರುಶಿಷ್ಯಗ್ರಂಥಯೋಃ ಸಾಮ್ಯಂ। ಕ್ವಚಿತ್ಕ್ವಚಿತ್ ಗುರುವಾಕ್ಯರತ್ನೈಃ ಸಹ ಸ್ವವಾಕ್ಯ ಹೈಮಮಣಿಮಾಲಾಮಲಂ ಕುರುತೇ ಭಗವಾನಾಚಾರ್ಯ ಇತಿ ಜ್ಞೇಯಂ। -ವಾದಿರಾಜೀಯ

ಧರ್ಮರಾಜ ಜೂಜಿಗೆ

ವಿದುರಸ್ತು ತತೋ ಗತ್ವಾ ಧರ್ಮರಾಜಮಥಾಹ್ವಯತ್ ।
ಭ್ರಾತೃಭಿರ್ವಾರ್ಯಮಾಣೋಽಪಿ ಕೃಷ್ಣಯಾ ಚ ಸ ಧರ್ಮರಾಟ್ ॥೩೧೬॥
ಸಾರ್ಧಂ ಮಾತ್ರಾ ಭ್ರಾತೃಭಿಶ್ಚ ಕೃಷ್ಣಯಾ ಚ ಯಯೌ ದ್ರುತಂ ॥೩೧೭॥

ಬಳಿಕ ವಿದುರ ಹೋಗಿ ಧರ್ಮರಾಜನನ್ನು ಕರೆದ. ಸೋದರರೂ ದ್ರೌಪದಿಯೂ ಬೇಡವೆಂದು ತಡೆದರೂ ಧರ್ಮರಾಜ ತಾಯಿ ತಮ್ಮಂದಿರೊಡಗೂಡಿ ದ್ರೌಪದೀ ಸಹಿತನಾಗಿ ಬೇಗನೆ ಹಸ್ತಿನಾವತಿಗೆ ತೆರಳಿದ.

ಜ್ಯೇಷ್ಠಾಜ್ಞಯೈವ ವಿದುರ ಆಹ್ವಯನ್ನಪಿ ಧರ್ಮಜಂ ।
ನಾಗಂತವ್ಯಮಿತಿ ಪ್ರಾಹ ದೋಷಾನುಕ್ತ್ವಾ ತ್ವಜಾನ್ಬಹೂನ್ ॥೩೧೮॥

ಹಿರಿಯನಾದ ಧೃತರಾಷ್ಟ್ರನ ಅಪ್ಪಣೆಯಂತೆ ವಿದುರ ಧರ್ಮರಾಜನನ್ನು ಜೂಜಿಗೆ ಬರಹೇಳಿದರೂ ಜೂಜಿನಲ್ಲಿ ಬಹಳ ಅನರ್ಥ ಉಂಟೆಂದು ಹೇಳುತ್ತ ಬರಬೇಡವೆಂದೂ ಉಪದೇಶಿಸಿದ.

ಇತೀಹ ದೋಷಸಂಚಯಸ್ತಥಾಪಿ ತೇ ಪಿತುರ್ವಚಃ ।
ಸಮೀಕ್ಷ್ಯ ತದ್ದ್ವಯಂ ಸ್ವಯಂ ಕುರುಷ್ವ ಕಾರ್ಯಮಾತ್ಮನಃ ॥೩೧೯॥

'ಹೀಗೆ ಜೂಜಿನಲ್ಲಿ ಅನರ್ಥಗಳು ಬಹಳ ಇವೆ. ಆದರೂ ಬರಲೇಬೇಕೆಂದು ದೊಡ್ಡಪ್ಪನ ಆಜ್ಞೆಯೂ ಇದೆ. ಇವೆರಡನ್ನೂ ನೀನು ಸ್ವತಃ ಚೆನ್ನಾಗಿ ಆಲೋಚಿಸಿ ನಿನಗೆ ಯೋಗ್ಯವಾದ ಕಾರ್ಯದಲ್ಲಿ ಪ್ರವೃತ್ತಿ ಮಾಡು'.

ಇತೀರಿತೋಽಪಿ ಪಾಂಡವೋ ಯಯೌ ಕಲಿಪ್ರವೇಶತಃ ।
ವಿಚಿತ್ರವೀರ್ಯಜಂ ನೃಪಂ ಸಮಾಸದತ್ ಸಸೈನಿಕಃ ॥೩೨೦॥

ವಿದುರ ಹೀಗೆ ಹೇಳಿದರೂ ಧರ್ಮರಾಜ ಕಲ್ಯಾವೇಶದಿಂದ ಸೈನ್ಯ ಸಮೇತನಾಗಿ ಧೃತರಾಷ್ಟ್ರನ ಬಳಿಗೆ ಬಂದ.

ಕಲ್ಯಾವೇಶಾನ್ನೃಪತಿಃ ಪ್ರತಿಜಜ್ಞೇ ಪೂರ್ವಮೇವ ಧರ್ಮಾತ್ಮಾ ।
ಆಹೂತೋ ದ್ಯೂತರಣಾನ್ನಿವರ್ತೇಯಂ ನೈವ ವಾರಿತೋಽಪೀತಿ ॥೩೨೧॥

ಕಲ್ಯಾವೇಶದಿಂದ ಧರ್ಮಾತ್ಮನಾದ ಧರ್ಮರಾಜ ಹಿಂದೆ ಪ್ರತಿಜ್ಞೆ ಮಾಡಿದ್ದ, 'ಜೂಜಿನ ಯುದ್ಧಕ್ಕೆ ಕರೆದರೆ ಯಾರು ತಡೆದರೂ ನಾನು ಹಿಮ್ಮೆಟ್ಟುವುದಿಲ್ಲ' ಎಂದು.

'ಜೂಜಾಟಕ್ಕೆ ಕರೆದಾಗ ಹಿಮ್ಮೆಟ್ಟದಿರುವುದು ನನ್ನ ವ್ರತ' ಎನ್ನುತ್ತಾನೆ ಧರ್ಮರಾಜ, ವಿದುರನ ಮುಂದೆ, ಮತ್ತು ಶಕುನಿಯ ಮುಂದೆ-

'ಆಹೂತೋಽಹಂ ನ ನಿವರ್ತೇ ಕದಾಚಿತ್
ತದಾಹಿತಂ ಶಾಶ್ವತಂ ವೈ ವ್ರತಂ ಮೇ' (ಸಭಾ 83-16)

'ಆಹೂತೋ ನ ನಿವರ್ತೇಯಮಿತಿ ಮೇ ವ್ರತಮಾಹಿತಂ'

(ಸಭಾ 84-18)

'ಇದಂ ವೈ ದೇವನಂ ಪಾಪಂ' ಜೂಜು ಅಧರ್ಮ. 'ನಿಕೃತ್ಯಾ ಕಾಮಯೇ ನಾಹಂ ಸುಖಾನ್ಯುತ ಧನಾನಿ ವಾ' ಮೋಸದಿಂದ ಸಂಪಾದಿಸಿದ ಸುಖ ಸಂಪತ್ತು ನನಗೆ ಬೇಡ ಎನ್ನುತ್ತಾನೆ ಧರ್ಮರಾಜ. ಆದರೂ ಜೂಜಿಗೆ ಬಾ ಎಂದರೆ ಇಲ್ಲವೆನ್ನಲಾರೆ ಎಂದು ಪ್ರತಿಜ್ಞೆ ಮಾಡಿದ್ದಾನೆ. ಇದು ಕಲ್ಯಾವೇಶವೆಸರಿ.

ತೇನಾಯಾತ್ಸ್ವಸುಹೃದ್ಭಿ-
ರ್ನಿವಾರ್ಯಮಾಣೋ ನಾಗಪುರಮಾಶು ।
ನ ಹಿ ಧರ್ಮೋ ದ್ಯೂತಕೃತೋ
ವಿಶೇಷತಃ ಕ್ಷತ್ರಿಯಸ್ಯ ಲೋಕಗುರೋಃ ॥೩.೨೨॥

'ಜೂಜಾಡುವವನಿಗೆ ಯಾವ ಧರ್ಮವೂ ಇರುವುದಿಲ್ಲ. ವಿಶೇಷವಾಗಿ ಲೋಕಕ್ಕೆ ಧರ್ಮಾಚಾರವನ್ನು ತೋರಿಕೊಡುವ ಕ್ಷತ್ರಿಯನಿಗೆ ಜೂಜು ಸರ್ವಥಾ ಧರ್ಮವಲ್ಲ' ಎಂದು ಬಂಧುಮಿತ್ರರು ತಡೆಯುತ್ತಿದ್ದರೂ ಧರ್ಮರಾಜ ಹಸ್ತಿನಾಪುರಕ್ಕೆ ಆಗಮಿಸಿದ.

ವೈಚಿತ್ರವೀರ್ಯತನಯೇನ ತು ಪಾಂಡುಪುತ್ರಾಃ
ಸಂಭಾವಿತಾಸ್ತಮುಪ ಚ ನ್ಯವಸನ್ನಿಶಾಯಾಂ ।
ಪ್ರಾತಸ್ತು ಭೀಷ್ಮಮುಖಿರಾಃ ಸಕಲಾಶ್ಚ ಭೂಪಾ
ಆಸೇದುರಾಶು ಚ ಸಭಾಂ ಸಹ ಪಾಂಡುಪುತ್ರೈಃ ॥೩.೨೩॥

ಧೃತರಾಷ್ಟ್ರನಿಂದ ಆದರಿಸಲ್ಪಟ್ಟ ಪಾಂಡವರು ಅಂದು ರಾತ್ರಿ ಅವನ ಬಳಿ ವಾಸ ಮಾಡಿದರು. ಬೆಳಿಗ್ಗೆ ಅವರೂ, ಜೊತೆಗೆ ಭೀಷ್ಮಾದಿಗಳೂ ಎಲ್ಲ ರಾಜರೂ ಸಭಾಂಗಣವನ್ನು ಹೊಕ್ಕರು.

ವೈಚಿತ್ರವೀರ್ಯನೃಪತಿರ್ವಿದುರಾನ್ವಿತೋಽಸ್ಯ
ಗಾಂಧಾರರಾಜಸಹಿತಾಸ್ತನಯಾಃ ಸಕರ್ಣಾಃ ।
ಪ್ರಾಪ್ತಾಃ ಸಭಾತಲಮಥಾಹ್ವಯದತ್ರ ಧರ್ಮ-
ರಾಜಂ ಸುತಃ ಸುಬಲಕಸ್ಯ ಸ ದೇವನಾಯ ॥೩.೨೪॥

ರಾಜಾ ಧೃತರಾಷ್ಟ್ರ ವಿದುರ ಸಮೇತನಾಗಿ ಸಭಾಂಗಣಕ್ಕೆ ಬಂದ. ಕೌರವರೂ ಶಕುನಿ ಸಮೇತರಾಗಿ ಕರ್ಣನೊಂದಿಗೆ ಬಂದರು. ಶಕುನಿ ಧರ್ಮರಾಜನನ್ನು ಪಗಡೆಯಾಟಕ್ಕೆ ಕರೆದ.

ಸರ್ವಾಂಶ್ಚ ತತ್ರ ಕಲಿರಾವಿಶದೇವ ಭೀಮ
ಪೂರ್ವಾನ್ವಿನೈವ ಚತುರಃ ಸಪೃಥಾಂ ಚ ಕೃಷ್ಣಾಂ ।

ಕ್ಷತ್ತಾರಮೇವ ಚ ತತೋ ನ ಹಿ ಭೀಷ್ಮಮುಖ್ಯೈ-
ಸ್ತೇ ವಾರಿತಾಃ ಕುಲವಿನಾಶನಕರ್ಮವೃತ್ತಾಃ ॥೩೨೫॥

ಅಲ್ಲಿ ಭೀಮ ಮುಂತಾದ ನಾಲ್ವರು ಪಾಂಡವರು ಕುಂತಿ ದ್ರೌಪದಿ ವಿದುರ ಹೀಗೆ ಏಳು ಮಂದಿಯನ್ನು ಹೊರತು ಇನ್ನೆಲ್ಲರನ್ನೂ ಕಲಿಯೆ ಪ್ರವೇಶಿಸಿದ್ದ. ಅದರಿಂದ ಕುಲನಾಶಕವಾದ ಕೃತ್ಯಕ್ಕೆ ಹೊರಟಿದ್ದ ಅವರನ್ನು ಭೀಷ್ಮ ಮುಂತಾದವರು ಯಾರೂ ತಡೆಯಲಿಲ್ಲ.

'ನಾತಿ ಪ್ರೀತೇನ ಮನಸಾ ತೇಽನ್ವವರ್ತಂತ ಭಾರತ'

ಭೀಷ್ಮಾದಿಗಳಿಗೆ ಮನಸಿನಲ್ಲಿ ಸಂತೋಷವಿರಲಿಲ್ಲ. ಆದರೂ ಬಂದರು, ಜೂಜನ್ನು ಸುಮ್ಮನೆ ನೋಡುತ್ತ ಕುಳಿತರು. ಏಕೆಂದರೆ ಅವರಲ್ಲಿಯೂ ಆಗ ಕಲ್ಯಾವೇಶವಿತ್ತು. 'ಕಲಿಯೇ ಪ್ರವೇಶಿಸಿದನೆಂ' ದರೆ ಕಲಿ ತಾನೇ ಪ್ರವೇಶಿಸಿದ. ಬೇರೆ ಯಾರಾದರೊಬ್ಬ ದೈತ್ಯನನ್ನು ಕಳಿಸಲಿಲ್ಲ, ಎಂದರ್ಥ ಎನ್ನುತ್ತದೆ ವಾದಿರಾಜೀಯ.[1]

ಜೂಜಿನಲ್ಲಿ ಸೋಲು

ಭೀಮಾದಿಭಿಃ ಸ ವಿದುರೇಣ ಚ ವಾರ್ಯಮಾಣೋ
ದ್ಯೂತೇ ನಿಧಾಯ ಪಣಮಪ್ಯಖಿಲಂ ಸ್ವವಿತ್ತಂ ।
ಗಾಂಧಾರಕೇಣ ವಿದಿತಾಕ್ಷಹೃದಾ ಜಿತೋ ದ್ರಾಕ್
ಪಾಂಡೋಃ ಸುತೋಽಥ ನಕುಲಂ ನ್ಯದಧಾತ್ ಪಣಾಯ ॥೩೨೬॥

ಭೀಮ ಮುಂತಾದವರೂ ವಿದುರನೂ ತಡೆಯುತ್ತಿದ್ದರೂ ಧರ್ಮರಾಜ ತನ್ನೆಲ್ಲ ಸಂಪತ್ತನ್ನೂ ಜೂಜಿನಲ್ಲಿ ಪಣವಿಟ್ಟು ಜೂಜಿನ ಮರ್ಮಜ್ಞನಾದ ಶಕುನಿಯಿಂದ ಬೇಗನೆ ಪರಾಜಿತನಾದ. ಬಳಿಕ ನಕುಲನನ್ನು ಪಣಕ್ಕಿಟ್ಟ.

ತಸ್ಮಿನ್ ಜಿತೇಽಥ ಸಹದೇವಮಥಾರ್ಜುನಂ ಚ
ಭೀಮಂ ಚ ಸೋಮಕಸುತಾಂ ಸ್ವಮಪಿ ಕ್ರಮೇಣ ।
ರಾಜಾ ನಿಧಾಯ ವಿಜಿತೋಽಥ ಸುಯೋಧನಃ ಸ್ವಂ
ಸೂತಂ ದಿದೇಶ ಪೃಷತಾತ್ಮಜಪುತ್ರಿಕಾಯಾಃ ॥೩೨೭॥

ಧರ್ಮರಾಜ ನಕುಲನನ್ನು ಸೋತಾಗ ಸಹದೇವನನ್ನೂ ಪಣಕ್ಕಿಟ್ಟು ಸೋತ. ಬಳಿಕ ಅರ್ಜುನನನ್ನೂ ಭೀಮನನ್ನೂ ದ್ರೌಪದಿಯನ್ನೂ ತನ್ನನ್ನೂ ಕ್ರಮವಾಗಿ ಪಣಕ್ಕಿಟ್ಟು ಸೋತ. ಆಗ ದುರ್ಯೋಧನ ತನ್ನ ಸಾರಥಿಯಾದ ಪ್ರಾತಿಕಾಮಿಯನ್ನು ದ್ರೌಪದಿಯ ಬಳಿಗೆ ಕಳಿಸಿದ.

---

1. ಕಲಿರಾವಿಶದೇವೇತ್ಯತ್ರ ಕಲಿರೇವಾವಿಶದಿತ್ಯೇವಕಾರ ಸಂಬಂಧಃ। ನ ತ್ವನ್ಯಂ ಕಂಚಿದ್ ದೈತ್ಯಂ ಪ್ರೇಷಿತವಾನಿತಿ ಭಾವಃ । -ವಾದಿರಾಜೀಯ

ಸೂತೋ ಗತ್ವಾ ತದಂತಂ ಸಮಕಥಯದಿಮಾಂ
ದ್ಯೂತಮಧ್ಯೇ ಜಿತಾಸಿ
ಕ್ಷಿಪ್ರಂ ಚಾಯಾಹಿ ರಾಜ್ಞಾಂ ಸಮಿತಿಮುರುತರಾ-
ಮಿತ್ಯಥೋ ಸಾಪ್ಯವಾದೀತ್ ।
ನಾಹಂ ಯಾಸ್ಯೇ ಗುರೂಣಾಂ ಸಮಿತಿಮಿತಿ ಯಯೌ
ಸೋಽಪ್ಯಮುಂ ಭೀಮಭೀತಂ
ಜ್ಞಾತ್ವಾ ದುಶ್ಶಾಸನಂ ಸೋಽಪ್ಯದಿಶದಥ ನೃಪೋ
ಧಾರ್ತರಾಷ್ಟ್ರೋಽನುಜಂ ಸ್ವಂ ॥೩೮॥

ಪ್ರಾತಿಕಾಮಿ ದ್ರೌಪದಿಯ ಬಳಿಗೆ ಹೋಗಿ ಹೇಳಿದ. 'ನೀನು ಜೂಜಿನಲ್ಲಿ ಪರಾಜಿತಳಾಗಿರುವೆ. ರಾಜರ ಮಹಾಸಭೆಗೆ ಬೇಗನೆ ಬಾ' ಎಂದು. ಆಗ ದ್ರೌಪದಿ ಹೇಳಿದಳು. 'ನಾನು ಗುರು ಹಿರಿಯರಿಂದ ತುಂಬಿದ ಸಭೆಗೆ ಬರಲಾರೆ' ಸಾರಥಿ ಹಿಂತಿರುಗಿ ಬಂದ. ಅವನು ಭೀಮನಿಗೆ ಅಂಜುತ್ತಾನೆ ಎಂದು ತಿಳಿದು ದುರ್ಯೋಧನ ತನ್ನ ತಮ್ಮನಾದ ದುಃಶಾಸನನನ್ನೇ ಕಳಿಸಿದ.

'ರಾಜಸಭೆಗೆ ಬಾ' ಎಂದರೆ ಅದು ಸಾಧ್ಯವೆ? ಅರಮನೆಯಲ್ಲಿ ದ್ರೌಪದಿ ಬಹಿಷ್ಠೆಯಾಗಿ ಏಕವಸ್ತ್ರ ಧರಿಸಿ ಗಾಂಧಾರಿಯ ಅಂತಃಪುರದಲ್ಲಿ ಇದ್ದಳು. ಅರಮನೆಯ ಹೊರಗೆ ಜೂಜಿಗಾಗಿಯೆ ಒಂದು ಹರದಾರಿಯಷ್ಟು ಉದ್ದಗಲದ ಸಾವಿರ ಕಂಬಗಳೂ ನೂರು ದ್ವಾರಗಳೂ ಉಳ್ಳ ದೊಡ್ಡ ಸಭಾಭವನವನ್ನು ದುರ್ಯೋಧನ ಕಟ್ಟಿಸಿದ್ದ. ದೇಶದ ಎಲ್ಲ ರಾಜರನ್ನೂ ಅಲ್ಲಿಗೆ ಕರೆಸಿಕೊಂಡಿದ್ದ. ಗುರುಹಿರಿಯರು ಭೀಷ್ಮಾದಿಗಳೂ ಇದ್ದರು.

'ಅಸೂರ್ಯಂಪಶ್ಯಾ ರಾಜದಾರಾಃ' ಎಂಬಂತೆ ಅರಮನೆ ಬಿಟ್ಟು ಹೊರಗೆ ಬಾರದ ಅಂತಃಪುರಸ್ತ್ರೀಯರು ಗುರುಹಿರಿಯರಿಂದ ರಾಜರಿಂದ ತುಂಬಿದ ದೊಡ್ಡಸಬೆಗೆ ಬರುವುದಾಗದು. ಅದರಲ್ಲಿಯೂ ದ್ರೌಪದಿ ರಜಸ್ವಲೆಯಾಗಿದ್ದಳು. ಆದರೂ ಅವಳು ಈಗ ದಾಸಿ. ದಾಸಿ ರಜಸ್ವಲೆಯಾಗಿ ಏಕವಸ್ತ್ರೆಯಾದರೂ ವಿವಸ್ತ್ರೆಯಾದರೂ ಚಿಂತೆ ಇಲ್ಲ ಎನ್ನುತ್ತಾನೆ ದುರ್ಯೋಧನ. ಅದರಿಂದ ವಸ್ತ್ರಾಪಹಾರ ಯತ್ನವನ್ನು ಯಾರೂ ತಡೆಯಲಿಲ್ಲ! ದ್ರೌಪದಿ ತಾನು ರಾಜಸಭೆಗೆ ಬರಲಾರೆ ಎಂದು ಸ್ಪಷ್ಟ ಹೇಳಲಿಲ್ಲ. ಮೋಸದ ಜೂಜಿನಲ್ಲಿ ಸೋತರೆ ಅದು ಸೋಲೆನಿಸುವುದೇ? ಕೇಳು. ಹೋಗು ಎಂದು ಪ್ರಾತಿಕಾಮಿಯನ್ನು ಹಿಂದೆ ಕಳಿಸಿದಳು. ಇದು ಅರ್ಥಾತ್ ಬರಲು ನಿರಾಕರಿಸಿದಂತಾಯಿತು. ಅದರಿಂದ ದುಃಶಾಸನನ್ನೇ ಕಳಿಸುತ್ತಾನೆ ದುರ್ಯೋಧನ.

ಸ ಪಾಪಪೂರುಷೋತ್ತಮಃ ಪ್ರಗೃಹ್ಯ ಕೇಶಪಕ್ಷಕೇ ।
ಪುರಃ ಸ್ವಮಾತುರಾನಯತ್ ಸಭಾಮಯುಗ್ಮವಾಸಸೀಂ ॥೩೨॥

ಪಾಪಪುರುಷರಲ್ಲಿ ಅಗ್ರಗಣ್ಯನಾದ ದುಃಶಾಸನ ತನ್ನ ತಾಯಿಯ ಮುಂದೆಯೆ ಏಕವಸ್ತ್ರೆಯಾದ ದ್ರೌಪದಿಯನ್ನು ಕೇಶಪಾಶದಲ್ಲಿ ಹಿಡಿದು ಸಭೆಗೆ ಎಳೆದು ತಂದ.

ಮಹಾಭಾರತದಲ್ಲಿ ಸಭೆಯ ಮುಂದೆ ದ್ರೌಪದಿ ಕೇಳುತ್ತಾಳೆ, 'ಧರ್ಮರಾಜ ಜೂಜಿನಲ್ಲಿ ಮೊದಲಿಗೆ ತನ್ನನ್ನು ಸೋತನೆ? ನನ್ನನ್ನೆ?' ಎಂದು. ಆದರೆ ಮೊದಲಿಗೇ ಪ್ರಾತಿಕಾಮಿ ಹೇಳಿದ್ದಾನೆ, 'ಮೊದಲಿಗೆ ತನ್ನನ್ನು ಸೋತ, ಬಳಿಕ ನಿನ್ನನ್ನು' ಎಂದು.

ನ್ಯಸ್ತಾಃ ಪೂರ್ವಂ ಭ್ರಾತರಸ್ತೇನ ರಾಜ್ಞಾ
ಸ್ವಯಂ ಚಾತ್ಮಾ ತ್ವಮಥೋ ರಾಜಪುತ್ರೀ। (ಸಭಾ 89-18)

ಈಗ ದ್ರೌಪದಿಗೆ ಪ್ರಶ್ನಿಸಲು ಅವಕಾಶವಿಲ್ಲ. ಅದರಿಂದ ಮೊದಲಿಗೆ ತನ್ನನ್ನು ಸೋತಿದ್ದರೆ ಬಳಿಕ ನನ್ನನ್ನು ಪಣಕ್ಕಿಡುವ ಅಧಿಕಾರವಿಲ್ಲ ಎಂದು ಆಕ್ಷೇಪಿಸುವ ಅಭಿಪ್ರಾಯದಿಂದ ದ್ರೌಪದಿ ಪುನಃ ಕೇಳುತ್ತಾಳೆ ಎನ್ನಬೇಕು. ಆದರಿಂದಲೆ ದ್ರೌಪದಿ ತಾನೇ ಸಭೆಯ ಮುಂದೆ ಹೀಗೆ ಆಕ್ಷೇಪಿಸಲಿ ಎನ್ನುತ್ತಾನೆ ದುರ್ಯೋಧನ. ಭೀಷ್ಮರೂ ಹೇಳುತ್ತಾರೆ. ಧರ್ಮರಾಜ ಮೊದಲಿಗೆ ತನ್ನನ್ನು ಸೋತಿದ್ದರೂ ಪತಿಗೆ ಸತಿಯ ಮೇಲೆ ಅಧಿಕಾರವಿರುವುದರಿಂದ ಅವಳನ್ನು ಪಣಕ್ಕಿಡಬಹುದು ಎಂದು.

ವಸ್ತುತಃ ಮಹಾಭಾರತದ ಈ ಪ್ರಚಲಿತ ಪಾಠ ಸರಿಯಲ್ಲ. ನಿರ್ಣಯ ಹೇಳುವಂತೆ ಧರ್ಮರಾಜ ಮೊದಲಿಗೆ ದ್ರೌಪದಿಯನ್ನು ಸೋತು ಬಳಿಕ ತನ್ನನ್ನು ಪಣಕ್ಕಿಟ್ಟು ಸೋತಿದ್ದಾನೆ. ಭೀಮ ಹೇಳುವಂತೆ ಜೂಜುಕೋರರು ತಮ್ಮ ಮನೆಯಲ್ಲಿಟ್ಟುಕೊಂಡಿರುವ ವೇಶ್ಯೆಯರನ್ನು ಕೂಡ ಪಣಕ್ಕಿಡುವುದಿಲ್ಲ. ಧರ್ಮರಾಜ ಪತಿವ್ರತೆಯಾದ ಧರ್ಮ ಪತ್ನಿಯನ್ನು ಪಣಕ್ಕಿಡಬಹುದೆ? ಇಟ್ಟು ಸೋತರೂ ಜೂಜಿನಲ್ಲಿ ಸೋತುದು ಸೋತಂತೆ ಅಲ್ಲ. ಅದರಿಂದಲೆ ಒಬ್ಬ ಜೂಜಿನಲ್ಲಿ ಸೋತ ದ್ರವ್ಯವನ್ನು ಆತನ ಸಂಬಂಧಿಕರು ಹಿಂದೆ ಪಡೆಯಬಹುದೆಂದು ನಿಯಮವಿದೆ. ಅದರಿಂದ ದ್ರೌಪದಿ ಕೇಳುತ್ತಾಳೆ, ಮೊದಲಿಗೆ ಹೇಳಿರಿ, ಧರ್ಮರಾಜ ತನ್ನನ್ನು ಸೋತನೆ? ಎಂದರೆ ಸೋತಂತಾಯಿತೆ?' ಅಥವಾ ಸೋತೆನೆಂದು ದಾಸ್ಯವನ್ನು ಅಂಗೀಕರಿಸಿದ ಪ್ರಯುಕ್ತ ಪತ್ನಿಯಾದ ತಾನು ಈಗ ದಾಸಿಯಾಗಿರುವೆನೆ? ಎಂದು. ಭೀಷ್ಮರ ಅಭಿಪ್ರಾಯದಲ್ಲಿ- ಜೂಜಿನಲ್ಲಿ

ಸೋತರೆ ಸೋತಂತಾಗುವುದಿಲ್ಲ, ಎನ್ನೋಣ ಆದರೆ ಧರ್ಮರಾಜ ಸೋಲೊಪ್ಪಿಕೊಂಡಿದ್ದಾನೆ. ನಾವೇನು ಮಾಡಲಿ?

ಉಕ್ತಂ ಜಿತೋಽಸ್ಮೀತಿ ಚ ಪಾಂಡವೇನ
ತಸ್ಮಾನ್ನ ಶಕ್ನೋಮಿ ವಿವೇಕ್ತುಮೇತತ್ (ಸಭಾ 89-60)

ಈ ಅಭಿಪ್ರಾಯದಿಂದಲೆ 'ನೀನು ಧರ್ಮರಾಜನನ್ನೇ ಕೇಳು' ಎನ್ನುತ್ತಾರೆ ಭೀಷ್ಮರು.

ಸಮಾಹೃತಾ ರಜಸ್ವಲಾ ಜಗಾದ ಭೀಷ್ಮಪೂರ್ವಕಾನ್ ।
ಅಧರ್ಮ ಏಷ ವ್ಯಾರ್ಯತೇ ನ ಧರ್ಮಿಭಿರ್ಭವದ್ವಿಧೈಃ ॥೩೩೦॥

ರಜಸ್ವಲೆಯಾಗಿದ್ದ ದ್ರೌಪದಿ ಸಭೆಯಲ್ಲಿ ತರಲ್ಪಟ್ಟು ಭೀಷ್ಮಾದಿಗಳನ್ನು ಆಕ್ಷೇಪಿಸಿದಳು, 'ಇದು ಅಧರ್ಮ. ನಿಮ್ಮಂಥ ಧಾರ್ಮಿಕರು ಇದನ್ನು ಏಕೆ ತಡೆಯುತ್ತಿಲ್ಲ?'

ಕಥಂ ಛಲಾತ್ಮಕೇ ದ್ಯೂತೇ ಜಿತೇ ಧರ್ಮಜಯೋ ಭವೇತ್ ।
ನ ಹಿ ದ್ಯೂತಂ ಧರ್ಮ್ಯಮಾಹುರ್ವಿಶೇಷೇಣ ಚ ಭೂಭುಜಾಂ ॥೩೩೧॥

ಮೋಸದಿಂದ ತುಂಬಿದ ಜೂಜಿನಲ್ಲಿ ಗೆದ್ದ ಮಾತ್ರಕ್ಕೆ ಹೇಗೆ ನ್ಯಾಯವಾಗಿ ಗೆದ್ದಂತಾದೀತು? ಜೂಜನ್ನು ಧರ್ಮಕಾರ್ಯವೆಂದು ಬಲ್ಲವರು ಹೇಳುವುದಿಲ್ಲ. ವಿಶೇಷವಾಗಿ ಕ್ಷತ್ರಿಯರಿಗೆ ಅದು ಸರ್ವಥಾ ಧರ್ಮವಲ್ಲ.

[1]ಶಕುನಿಯ ದಾಳಗಳು ಅವನಿಚ್ಛೆಯಂತೆ ಬೀಳುವಂಥ ವಿಚಿತ್ರವಾದ ಮೂಳೆಗಳಿಂದ ನಿರ್ಮಿತವಾದವುಗಳು. ಅದರಿಂದ ಇದು ಬರಿ ಮೋಸ.

[2]ಜೂಜು ಅಧರ್ಮ. ಅದರಲ್ಲಿಯೂ ಕಪಟದ ಜೂಜು ಮಹಾಅಧರ್ಮ.

ಯೇ ಧರ್ಮಂ ನ ವದಂತೀಹ ನ ತೇ ವೃದ್ಧಾ ಇತೀರಿತಾಃ ।
ಅವೃದ್ಧಮಂಡಿತಾಂ ನೈವ ಸಭೇತ್ಯಾಹುರ್ಮನೀಷಿಣಃ ॥೩೩೨॥

ಯಾರು ಧರ್ಮವನ್ನು ಹೇಳುವುದಿಲ್ಲವೋ ಅವರು ಜ್ಞಾನಿಗಳೆನಿಸುವುದಿಲ್ಲ. ಜ್ಞಾನಿಗಳಿಲ್ಲದ ಸಭೆಯನ್ನು ಸಭೆ ಎಂದು ತಿಳಿದವರು ಹೇಳವುದಿಲ್ಲ.

ಕಥಂ ದ್ಯೂತೇ ಜಿತಾ ಚಾಹಮಜಿತೇ ಸ್ವಪತೌ ಸ್ಥಿತೇ ।
ಸಮಾನಧರ್ಮಿಣೇಮಾಹುರ್ಭಾರ್ಯಾಂ ಯಸ್ಮಾದ್ ವಿಪಶ್ಚಿತಃ ॥೩೩೩॥

---

1. ಛಲಂ ಛದ್ಮ, ಸ್ವೇಚ್ಛಾನುಸಾರೇಣ ಪತದಸ್ಥಿವಿಶೇಷಕೃತಾಕ್ಷರೂಪತ್ವಾತ್ ಛಲಾತ್ಮಕಮಿತ್ಯುಕ್ತಂ। – ವಾದಿರಾಜೀಯ
2. ದ್ಯೂತಮೇವ ಧರ್ಮೋ ನ ಭವತಿ। ಛಲಾತ್ಮಕಂ ಸುತರಾಮಧರ್ಮಃ। – ಜನಾರ್ದನೀಯ

ನನ್ನ ಪತಿ ಪರಾಜಿತನಾಗದಿದ್ದಾಗ ನಾನು ಹೇಗೆ ಪರಾಜಿತಳಾದೆ? ಏಕೆಂದರೆ ಪತ್ನಿಯನ್ನು ಪತಿಯ ಸಹಧರ್ಮಿಣಿ ಎನ್ನುತ್ತಾರೆ ಬಲ್ಲವರು.

[1]ಧರ್ಮದಿಂದ ಯುದ್ಧ ಮಾಡಿ ಗೆದ್ದರೇ ಜಯ. ಅಧರ್ಮದಿಂದ ಕೊಂದರೆ ಅದು ಜಯವಲ್ಲ. ನಿದ್ದೆ ಮಾಡುತ್ತಿರುವವರ ತಲೆ ಕಡಿದರೆ ಅದನ್ನು ಜಯವೆನ್ನುವುದಿಲ್ಲ.

ಸಹೈವ ಕರ್ಮ ಕರ್ತವ್ಯಂ ಪತೌ ದಾಸೇ ಹಿ ಭಾರ್ಯಯಾ।
ದಾಸೀತ್ವಂ ಮೇ ಪೃಥಜ್ನ ಸ್ಯಾಜ್ಜಿತೇಽಪಿ ಹಿ ಪತೌ ತತಃ ॥೩೩॥

ಪತಿ ದಾಸನಾದಾಗಲೂ ಪತ್ನಿ ಅವನು ಮಾಡುವ ಕೆಲಸವನ್ನು ಅವನ ಜೊತೆಗೇ ಮಾಡಬೇಕು. ಅದರಿಂದ ಪತಿ ಪರಾಜಿತನಾದರೂ ನನಗೆ ಪ್ರತ್ಯೇಕವಾಗಿ ದಾಸ್ಯ ಬರುವುದಿಲ್ಲ.

ಇತ್ಯುಕ್ತಾ ಅಪಿ ಭೀಷ್ಮಾದ್ಯಾಃ ಕಲ್ಯಾವೇಶೇನ ಮೋಹಿತಾಃ।
ಪೃಚ್ಛ ಧರ್ಮಜಮಿತ್ಯುಕ್ತ್ವಾ ತೂಷ್ಣೀಮೇವ ಬಭೂವಿರೇ ॥೩೫॥

ದ್ರೌಪದಿ ಹೀಗೆ ಹೇಳಿದರೂ ಭೀಷ್ಮಾದಿಗಳು ಕಲ್ಯಾವೇಶದಿಂದ ಮೂಢರಾಗಿ ಧರ್ಮರಾಜನನ್ನೇ ಕೇಳು ಎಂದು ಹೇಳಿ ಸುಮ್ಮನೆ ಕುಳಿತರು.

ಇಲ್ಲಿ ಭೀಷ್ಮಾದಿಗಳು 'ಧರ್ಮರಾಜನನ್ನೇ ಕೇಳು' ಎಂದು ಉಪದೇಶಿಸುತ್ತಿಲ್ಲ. 'ಬೇಕಾದರೆ ಕೇಳು!' ಎಂದು ಆಕ್ಷೇಪಿಸುತ್ತಿದ್ದಾರೆ. ಎಲ್ಲರಿಗೂ ಉಪದೇಶ ಮಾಡಬೇಕಾದವರು ಮೋಹದಿಂದ ಜೂಜನ್ನು ನ್ಯಾಯವೆಂದು ಒಪ್ಪಿಕೊಂಡಿದ್ದಾರೆ. ಇದು ಕಲ್ಯಾವೇಶದ ಪರಿಣಾಮ.

ದುರ್ಯೋಧನಪ್ರತೀಪಂ ಹಿ ನ ಕಶ್ಚಿದಶಕತ್ತದಾ।
ಉವಾಚ ವಿದುರಸ್ತತ್ರ ನ ಧರ್ಮೋಽಕಯಮಿತಿ ಸ್ಫುಟಂ ॥೩೬॥

ದುರ್ಯೋಧನನಿಗೆ ವಿರೋಧವಾಗಿ ನುಡಿಯಲೂ ನಡೆಯಲೂ ಯಾರೂ ಆಗ ಶಕ್ತರಾಗಲಿಲ್ಲ. ಆಗ ವಿದುರನೊಬ್ಬನೆ ಇದು ಧರ್ಮವಲ್ಲವೆಂದು ಸ್ಪಷ್ಟವಾಗಿ ನುಡಿದ.

[2]ವಿದುರನೂ ಧರ್ಮರಾಜನಂತೆಯೆ ಯಮನ ಅವತಾರ. ಅದರಿಂದ ಅವನಲ್ಲಿಯೂ ಕಲ್ಯಾವೇಶ ಉಂಟಾಗಲು ಶಕ್ಯವಿದೆ. ಆದರೂ 'ಅವಿದ್ಯಾ ನಿದ್ರಾಂ ವಿದ್ರಾವ್ಯ' ಎಂದು ವಾಯುಸ್ತುತಿ ಹೇಳುವಂತೆ, ಕಲಿಯ

---

1. ಶಕುನಿನಾಽಧರ್ಮಂ ಪುರಸ್ಕೃತ್ಯ ಪ್ರವೃತ್ತತ್ವಾನ್ನಾಯಂ ಜಯೋ ಜಯಃ। ನಹಿ ನಿದ್ರಾಂ ಕುರ್ವಾಣಸ್ಯ ಶಿರಶ್ಛೇದೇನ ವಧೋ ಜಯ ಇತ್ಯುಚ್ಯತ ಇತಿಭಾವಃ। -ವಾದಿರಾಜೀಯ
2. ವಿದುರಸ್ಯಾಪಿ ಯಮರೂಪತ್ವೇನ ಕಲ್ಯಾವೇಶ ಸಂಭವೇಽಪಿ 'ಅವಿದ್ಯಾನಿದ್ರಾಂ ವಿದ್ರಾವ್ಯೇ'ತಿ ವಚನಾತ್ ಕಲಿಮದನಿರ್ಭೇದಿ ಭೀಮಸೇನ ಪಕ್ಷ ಪಾತಿತ್ವಾತ್ ನ ಕಲ್ಯಾವೇಶ ಇತಿಜ್ಞೇಯಂ। -ವಾದಿರಾಜೀಯ

ಆಟೋಪವನ್ನು ಅಡಗಿಸಬಲ್ಲ ಭೀಮನ ಪಕ್ಷಪಾತಿಯಾಗಿದ್ದುದರಿಂದ ಕಲ್ಯಾವೇಶವಿರಲಿಲ್ಲ.

ನ ತಸ್ಯ ವಾಕ್ಯಂ ಜಗ್ರಾಹ ಧೃತರಾಷ್ಟ್ರಃ ಸಹಾತ್ಮಜಃ ।
ಊರ್ಧ್ವಬಾಹುಃ ಸ ಚುಕ್ರೋಶ ದೇವಾನಾಂ ಖ್ಯಾಪಯಂಸ್ತದಾ ॥೩೩೭॥
ಸ್ವಾಶಕ್ತಿಂ ದ್ರೌಪದೀಂ ಚಾಹ ಜಿತಾ ನೈವಾಸಿ ಧರ್ಮತಃ ।
ಅಧರ್ಮೋ ಹಿ ಮಹಾನೇತಾಂ ಸಭಾಮಾಕ್ರಮ್ಯ ತಿಷ್ಠತಿ ॥೩೩೮॥

ತನ್ನ ಮಾತನ್ನು ಧೃತರಾಷ್ಟ್ರನಾಗಲಿ ಅವನ ಮಕ್ಕಳಾಗಲಿ ಕೇಳದಿದ್ದಾಗ ವಿದುರ ತನ್ನ ಅಶಕ್ತಿಯನ್ನು ತೋರುತ್ತ ಎರಡು ಕೈಯೆತ್ತಿ ದೇವತೆಗಳಿಗೆ ಸಾರಿ ಹೇಳಿದ. ದ್ರೌಪದಿಗೂ 'ನ್ಯಾಯವಾಗಿ ನೀನು ಸರ್ವಥಾ ಪರಾಜಿತಳೆ ಅಲ್ಲ. ಮಹಾ ಅಧರ್ಮವೆ ಈ ಸಭೆಯನ್ನು ಆಕ್ರಮಿಸಿಕೊಂಡಿದೆ' ಎಂದ.

ಇಲ್ಲಿ ಬಹಳ ಅನ್ಯಾಯವಾಗುತ್ತಿದೆ. ನಾನು ಯಾರಿಗೆ ಹೇಳಲಿ. ನನ್ನ ಮಾತನ್ನು ಯಾರೂ ಕೇಳುವುದಿಲ್ಲ. ಅವರನ್ನು ಶಿಕ್ಷಿಸಲೂ ನನಗೆ ಶಕ್ತಿ ಇಲ್ಲ. ದೇವತೆಗಳೆ, ನೀವಾದರೂ ಕೇಳಿ ಎಂದು ವಿದುರ ಎರಡು ಕೈಗಳೆತ್ತಿ ಕೂಗಿ ಹೇಳಿದ.

ವಿಕರ್ಣನ ದಂಭಾಚಾರ

ಏವಂ ತು ವಿದುರೇಣೋಕ್ತೇ ವಿಕರ್ಣಃ ಪಾಪಕೋಽಪಿ ಸನ್ ।
ಆಹ ಡಂಭಾರ್ಥಮೇವಾತ್ರ ಧರ್ಮವಿತ್ತ್ವಂ ಪ್ರಕಾಶಯನ್ ॥೩೩೯॥
ಅಧರ್ಮ ಏವಾಯಮಿತಿ ಕರ್ಣೋಽಥೈನಮಭರ್ತ್ಸಯತ್ ॥೩೪೦॥

ಈ ರೀತಿಯಾಗಿ ವಿದುರ ಹೇಳಿದಾಗ ವಿಕರ್ಣ ಕೆಟ್ಟ ಪಾಪಿಯಾಗಿದ್ದರೂ ಡಂಬಾಚಾರಕ್ಕಾಗಿ ತಾನು ಧರ್ಮವನ್ನು ಬಲ್ಲವನೆಂದು ತೋರಿಕೊಳ್ಳುತ್ತ 'ಇದು ಅಧರ್ಮ' ಎಂದ. ಆಗ ಅವನನ್ನು ಕರ್ಣ ಗದರಿದ.

ದುರ್ಯೋಧನನ ಒಬ್ಬ ತಮ್ಮನಾದ ವಿಕರ್ಣ ಸಭೆಯಲ್ಲಿ ಎದ್ದು ನಿಂತು ವಾದಿಸುತ್ತಾನೆ. 'ಜೂಜು ಒಂದು ದುಶ್ಚಟ, ಅಧರ್ಮ. ಅದರಲ್ಲಿ ಸೋತರೆ ಅದು ಸೋಲಲ್ಲ. ದ್ರೌಪದಿ ಐವರು ಪಾಂಡವರಿಗೂ ಪತ್ನಿ. ಧರ್ಮರಾಜನಿಗೆ ಮಾತ್ರವಲ್ಲ. ಅದರಿಂದ ಅವಳನ್ನು ಪಣವಾಗಿ ಇಡಲು ಧರ್ಮರಾಜನಿಗೆ ಹಕ್ಕೂ ಇಲ್ಲ' ಎಂದು.

ಆಗ ಕರ್ಣ ಗದರಿದ, 'ಭೀಷ್ಮ ಮುಂತಾದವರು ಏನೂ ಆಕ್ಷೇಪಿಸದೆ ಸುಮ್ಮನಿರುವಾಗ ಹಿರಿಯರ ಮುಂದೆ ಸಣ್ಣವನಾದ ನೀನು ಮಾತನಾಡಬೇಡ' ಎಂದು.

ಧರ್ಮರಾಜನಿಗೆ ಭೀಮನ ಶಾಸನ

ದೃಷ್ಟ್ವಾ ಭೀಮಃ ಕ್ಲಿಶ್ಯಮಾನಾಂ ಚ ಕೃಷ್ಣಾಂ
ಧರ್ಮಾತ್ಯಯಂ ಧರ್ಮರಾಜೇ ಚ ದೃಷ್ಟ್ವಾ।
ರಾಜಾ ಶಾಸ್ಯೋ ಯುವರಾಜೇನ ಧರ್ಮಾ-
ಚ್ಚಲನ್ ಯಸ್ಮಾದ್ ವಾಕ್ಯಮಿದಂ ಬಭಾಷೇ ॥೩೪೧॥
ಇಮಾಂ ನ್ಯಸ್ತವತೋ ದ್ಯೂತೇ ಧಕ್ಷ್ಣೋಯೌ ಹಿ ತೇ ಭುಜೌ।
ನೈವಮಿತ್ಯರ್ಜುನೋಽವಾದೀತ್ತಮಾಹಾಥ ವೃಕೋದರಃ।
ವಕ್ತವ್ಯಂ ನ ತು ಕರ್ತವ್ಯಂ ತಸ್ಮಾನ್ನ ಹಿ ಮಯಾ ಕೃತಂ ॥೩೪೨॥

ದ್ರೌಪದಿ ಕ್ಲೇಶಪಡುವುದನ್ನೂ ಧರ್ಮರಾಜನಲ್ಲಿ ಧರ್ಮಚ್ಯುತಿಯಾಗಿರುವುದನ್ನೂ ಕಂಡು, ರಾಜ ಧರ್ಮಮಾರ್ಗದಿಂದ ದೂರ ಸರಿಯುವಾಗ ಯುವರಾಜ ಅವನಿಗೆ ಶಾಸನ ಮಾಡಬೇಕೆಂದು, 'ದ್ರೌಪದಿಯನ್ನು ಜೂಜಿನಲ್ಲಿ ಪಣಕ್ಕಿಟ್ಟ ನಿನ್ನ ಕೈಗಳನ್ನು ಸುಡಬೇಕು' ಎಂದ. 'ಅಣ್ಣ! ಹಾಗೆ ಹೇಳಬೇಡ' ಎಂದ ಅರ್ಜುನ. ಆಗ ಭೀಮ ನುಡಿದ, 'ಹೇಳಬೇಕು, ಮಾಡಬಾರದು. ಅದರಿಂದಲೆ ನಾನು ಮಾಡಲಿಲ್ಲ.'

ಉತ್ತಮೇ ವಚಸಾ ಶಿಕ್ಷಾ ಮಧ್ಯಮೇಽರ್ಥಾಪಹಾರಣಂ।
ಅಧಮೇ ದೇಹದಂಡಶ್ಚ ತಸ್ಮಾದ್ ವಾಚ್ಯೋ ಯುಧಿಷ್ಠಿರಃ ॥೩೪೩॥

ಉತ್ತಮರಿಗೆ ಮಾತಿನಿಂದಲೆ ಶಿಕ್ಷೆ. ಮಧ್ಯಮರಿಗೆ ಧನಾಪಹಾರ. ಅಧಮರಿಗೆ ದೇಹದಂಡನೆ. ಅದರಿಂದ ನಾನು ಯುಧಿಷ್ಠಿರನಿಗೆ ಮಾತಿನಿಂದ ಹೇಳಬೇಕು.

ಮಹಾಭಾರತದಲ್ಲಿ ಭೀಮ ಯುಧಿಷ್ಠಿರನಿಗೆ 'ಅಣ್ಣ, ಜೂಜುಕೋರರು ತಮ್ಮ ವೇಶ್ಯೆಯರನ್ನೂ ಪಣಕ್ಕಿಡುವುದಿಲ್ಲ. ನೀನು ಪಟ್ಟದರಾಣಿಯನ್ನು ಪಣಕ್ಕಿಟ್ಟೆ, ಸುಡಬೇಕು ನಿನ್ನ ಕೈಗಳನ್ನು' ಎನ್ನುತ್ತ, 'ಸಹದೇವ, ಬೆಂಕಿ ತಾ' ಎನ್ನುತ್ತಾನೆ. ಅರ್ಜುನನೆಂದ 'ಧರ್ಮರಾಜ ದ್ಯೂತದ ಕರೆಯನ್ನು ಮನ್ನಿಸಿ ಬಂದ. ಅದು ಕ್ಷತ್ರಿಯನ ಧರ್ಮ. ಸೋಲು ನಿಶ್ಚಿತವೆಂದು ಅರಿತಿದ್ದರೂ ತನ್ನಿಚ್ಛೆಗೆ ವಿರುದ್ಧವಾಗಿದ್ದರೂ ಧರ್ಮಪಾಲನೆಗಾಗಿ ಅವನು ಆಟವಾಡಿದ್ದಾನೆ. ಇದು ನಮಗೂ ಕೀರ್ತಿ ತರುವಂಥದ್ದು' ಆಗ ಭೀಮನೆಂದ 'ನೀನು ಹೇಳುವುದು ನಿಜ. ಅದರಿಂದ ನಾನು ಅವನ ಕೈಗಳನ್ನು ಸುಡಲಿಲ್ಲ. ದುಶ್ಚಟದಿಂದ ಜೂಜಾಡಿದ್ದರೆ ಸುಟ್ಟು ಬಿಡುತ್ತಿದ್ದೆ' ಹೀಗೆ ಹೇಳಿ ಸುಮ್ಮನಾದ. ಇದು ಪ್ರಚಲಿತಪಾಠ. ಇಲ್ಲಿ ಭೀಮನೇಕೆ 'ಕೈಗಳನ್ನು ಸುಡಬೇಕು' ಎಂದ? ಬೆಂಕಿ ತರಲು ಸಹದೇವನಿಗೆ ಏಕೆ ಆಜ್ಞಾಪಿಸಿದ ಎಂಬ ಪ್ರಶ್ನೆಗೆ ಉತ್ತರವಿಲ್ಲ. ಲಕ್ಷಾಲಂಕಾರ ಪಾಠದಲ್ಲಿ ಭೀಮ ಹೇಳುವುದೇ ಬೇರೆ - 'ಯುಧಿಷ್ಠಿರ ಮಾಡಿದ ಈ ಅಧರ್ಮವನ್ನು

ನೀನೂ ಧರ್ಮವೆನ್ನುವುದಾದರೆ ಜೊತೆಗೆ ನಿನ್ನ ತೋಳುಗಳನ್ನೂ ಸುಟ್ಟುಬಿಡುತ್ತೇನೆ'.[1]

ಪ್ರಚಲಿತ ಪಾಠ -

ಏವಮಸ್ಮಿನ್ಕೃತಂ ವಿದ್ಯಾಂ ಯದಿ ನಾಹಂ ಧನಂಜಯ
ದೀಪ್ತೇಗ್ನೌ ಸಹಿತೌ ಬಾಹೂ ನಿರ್ದಹೇಯಂ ಬಲಾದಿವ।
(ಸಭಾ 90.10)

ಲಕ್ಷಾಲಂಕಾರ ಪಾಠ -

ಏವಮಸ್ಮಿನ್ ಕೃತೇ ವಿದ್ಯಾಂ ಯದಿ ಸ್ಮಾಹ ಧನಂಜಯ
ದಿಪ್ತೇಗ್ನೌ ಸಹಿತೌಬಾಹೂ ಪ್ರಕ್ಷಿಪೇಯಂ ಬಲಾದಿವ।

ಭೀಮನ ಭ್ರಾತೃಭಕ್ತಿ

ಅಥ ಕರ್ಣೋಽಬ್ರವೀತ್ ಕೃಷ್ಣಾಮಪತಿರ್ಯಸಿ ಶೋಭನೇ।
ಧಾರ್ತರಾಷ್ಟ್ರಗೃಹಂ ಯಾಹೀತ್ಯಥ ದುರ್ಯೋಧನೋಽವದತ್ ॥೩೪೪॥
ಯುಧಿಷ್ಠಿರೋ ದುಃಖಹೇತುಸ್ತವೈಕೋ
ಯದ್ಯೇನಮನ್ಯೇ ನ ಗುರುರ್ನ ಏಷಃ।
ಇತಿ ಬ್ರೂಯುರಥವಾ ಭೀಮಪಾರ್ಥಾ-
ವೇಕೋಽಪಿ ವಾ ಭೀಮ ಇಹೋತ್ಸೃಜೇ ತ್ವಾಂ ॥೩೪೬॥
ಪರಸ್ಪರ ವಿರೋಧಾರ್ಥಂ ಪಾಂಡವಾನಾಮಿದಂ ವಚಃ ॥೩೪೫॥

ಬಳಿಕ ಕರ್ಣ ದ್ರೌಪದಿಗೆ ಹೇಳಿದ, 'ಸುಂದರಿ, ನಿನಗೆ ಇನ್ನು ಪತಿಗಳಿಲ್ಲ. ದುರ್ಯೋಧನನ ಮನೆಗೇ ಹೋಗು'. ದುರ್ಯೋಧನನೂ ಪಾಂಡವರಲ್ಲಿ ಪರಸ್ಪರ ವಿರೋಧ ಉಂಟುಮಾಡುವ ಉದ್ದೇಶದಿಂದ ಈ ಮಾತನ್ನು ನುಡಿದ- 'ದ್ರೌಪದಿ, ಯುಧಿಷ್ಠಿರನೊಬ್ಬನೇ ನಿನಗೆ ಈ ರೀತಿ ದುಃಖ ನೀಡುವವನು. ಉಳಿದವರು ಈತನನ್ನು ನಮಗೆ ಈತ ಪೂಜ್ಯನಲ್ಲ ಎನ್ನಲಿ, ನಾನು ನಿನ್ನನ್ನು ಬಿಟ್ಟುಬಿಡುತ್ತೇನೆ. ಭೀಮಾರ್ಜುನರಾಗಲಿ, ಕೊನೆಗೆ ಭೀಮನೊಬ್ಬನೆ ಆಗಲಿ ಹಾಗೆ ಹೇಳಿದರೂ ನಿನ್ನನ್ನು ಬಿಟ್ಟುಬಿಡುತ್ತೇನೆ.'

ಈಗ ತಾನೆ ಭೀಮ ಯುಧಿಷ್ಠಿರನ ಕೈಗಳನ್ನು ಸುಡುತ್ತೇನೆ ಎಂದಿದ್ದಾನೆ. ಆದರಿಂದ ಕೊನೆಗೆ ಭೀಮನಾದರೂ 'ಯುಧಿಷ್ಠಿರ ನನಗೆ ಪೂಜ್ಯನಲ್ಲ' ಎನ್ನಬಹುದೆಂದು ದುರಾಸೆ ದುರ್ಯೋಧನನಿಗೆ. ಇದು ಭೇದೋಪಾಯ.

---

1. ಏವಂ ದೃಶ್ಯಮಾನ ಪ್ರಕಾರೇಣ ಕೃತೇ ಧರ್ಮರಾಜೇನ ಕೃತೇ ಸತಿ ಅಸ್ಮಿನ್ ಧರ್ಮರಾಜೇ ವಿದ್ಯಾಂ ಧರ್ಮಬುದ್ಧಿಂ ಯದಿ ಭವಾನ್ ಆಹ ಸ್ಮ ತರ್ಹಿ ತವ ಚ ತಸ್ಯ ಚ ಸಹಿತೌ ಬಾಹೂ ಅಗ್ನೌ ಪ್ರಕ್ಷಿಪೇಯಮಿತಿ ಸಂಬಂಧಃ। -ಲಕ್ಷಾಲಂಕಾರ

ಇತ್ಯುಕ್ತ ಊಚೇ ಪವಮಾನಸೂನುಃ
ಪೂಜ್ಯೋಽಸ್ಮಾಕಂ ಧರ್ಮಜಃ ಸಂಶಯೋ ನ।
ಗುರುಶ್ಚಾಹಂ ವೋಽಖಿಲಾನಾಂ ಯತೋ ಹಿ
ಬಲಜ್ಯೇಷ್ಠಂ ಕ್ಷತ್ರಮಾಹುರ್ಮಹಾಂತಃ ॥೩೪೭॥

ಆಗ ಭೀಮನೆಂದ, ಧರ್ಮರಾಜ ನಮಗೆಲ್ಲರಿಗೂ ಪೂಜ್ಯನೆ. ಇದರಲ್ಲಿ ಸಂಶಯವಿಲ್ಲ. ನಾನು ನಿಮಗೆಲ್ಲರಿಗೂ ಪೂಜ್ಯ. ಏಕೆಂದರೆ ಕ್ಷತ್ರಿಯರಲ್ಲಿ ಯಾರು ಹೆಚ್ಚು ಬಲಿಷ್ಠನೋ ಅವನು ಪೂಜ್ಯ ಎನ್ನುತ್ತಾರೆ ಹಿರಿಯರು.

'ನಮಗೆಲ್ಲರಿಗೂ ಪೂಜ್ಯನಾದ ಧರ್ಮರಾಜ ಈ ಸೋಲನ್ನು ಸೋಲೆಂದು ಒಪ್ಪಿಕೊಂಡಿದ್ದಾನೆ. ಇಲ್ಲದಿದ್ದರೆ ಈ ಅಖಂಡ ಬ್ರಹ್ಮಾಂಡದಲ್ಲಿ ಪಾಂಚಾಲಿಯ ಮುಂದಲೆಯನ್ನು ಮುಟ್ಟಿ ಬದುಕಿ ಉಳಿಯಲು ಯಾರಿಗೆ ತಾನೆ ಶಕ್ಯವಿದ್ದಿತು? ಈ ಬಾಹುಗಳನ್ನು ನೋಡಿ, ಇವುಗಳ ನಡುವೆ ಸಿಕ್ಕಿಕೊಂಡರೆ ದೇವೇಂದ್ರನೂ ಬಿಡಿಸಿಕೊಳ್ಳಲಾರ' ಎಂದ ಭೀಮ.

ಬಲಜ್ಯೇಷ್ಠ್ಯೇ ಯದಿ ವಃ ಸಂಶಯಃ ಸ್ಯಾ-
ದುತ್ತಿಷ್ಠಧ್ವಂ ಸರ್ವ ಏವಾದ್ಯ ವೀರಾಃ।
ಮೃದ್ನಾಮಿ ವಃ ಪಾದತಲೇನ ಸರ್ವಾನ್
ಸಹಾನುಬಂಧಾನ್ ಯಶ್ಚ ಮಾಂ ಯೋದ್ಧುಕಾಮಃ ॥೩೪೮॥

ಬಲದಲ್ಲಿ ನಾನು ನಿಮ್ಮೆಲ್ಲರನ್ನೂ ಮೀರಿಸಿರುವೆನೆಂಬ ವಿಷಯದಲ್ಲಿ ನಿಮಗೆ ಸಂಶಯವಿರುವುದೇ ಆದರೆ ಈಗಲೆ ಎಲ್ಲ ವೀರರೂ ಎದ್ದೇಳಿರಿ. ಎಲ್ಲರನ್ನೂ ಪರಿವಾರ ಸಮೇತ ನನ್ನ ಕಾಲಿಂದ ತುಳಿದು ಹೊಸಕಿ ಹಾಕುತ್ತೇನೆ. ಯಾರು ನನ್ನೊಡನೆ ಹೋರಾಡಲು ಬಯಸುತ್ತಾನೆ?

ಇತಿ ಬ್ರುವನ್ ಸಮುತ್ಥಿತೋ ನದನ್ ವೃಕೋದರೋ ಯದಾ।
ವಿಘೂರ್ಣಿತಾ ಸಭಾಽಖಿಲಾ ಭಯಾನ್ನ ಚಾಹ ಕಿಂಚನ ॥೩೪೯॥

ಹೀಗೆ ಹೇಳುತ್ತ ಗುಡುಗುತ್ತ ಭೀಮನೆದ್ದು ನಿಂತಾಗ ಇಡೀ ಸಭೆ ಭಯದಿಂದ ನಡುಗಿ ಏನೂ ಹೇಳದಾಯಿತು.

ಭೀಷ್ಮೋ ದ್ರೋಣೋ ವಿದುರಾದ್ಯಾಃ ಕ್ಷಮಸ್ವ
ಸರ್ವಂ ತ್ವಯೋಕ್ತಂ ಸತ್ಯಮಿತ್ಯೇವ ಹಸ್ತೌ।
ಗೃಹೀತ್ವೈನಂ ಸ್ಥಾಪಯಾಮಾಸುರಸ್ಮಿನ್-
ಸ್ಥಿತೇ ಶಾಂತಿಂ ಚಾಪಿರೇ ಧಾರ್ತರಾಷ್ಟ್ರಾಃ ॥೩೫೦॥

ಭೀಷ್ಮ ದ್ರೋಣ ವಿದುರ ಮುಂತಾದವರು 'ತಾಳು, ಭೀಮಸೇನ. ನೀನು ಹೇಳಿದುದೆಲ್ಲವೂ ನಿಜವೆ' ಎಂದು ಎರಡೂ ಕೈಗಳನ್ನು ಹಿಡಿದು ಕೂಡಿಸಿದರು. ಭೀಮ ಸುಮ್ಮನಾದ, ಕೌರವರು ನೆಮ್ಮದಿ ಹೊಂದಿದರು.

ನಿವಾರಿತೋ ಧರ್ಮಜೇನ ಗುರುಭಿಶ್ಚಾಪರೈಸ್ತದಾ ।
ಮಾನನಾರ್ಥಂ ಗುರೂಣಾಂ ತು ಭೀಮಸ್ತಾನ್ನ ಜಘಾನ ಹ ॥೩೫೧॥

ಧರ್ಮರಾಜನೂ ಭೀಮನನ್ನು ತಡೆದ, ಬೇರೆ ಹಿರಿಯರೂ ತಡೆದರು ಎಂದು ಹಿರಿಯರಿಗೆ ಗೌರವ ಕೊಡುವುದಕ್ಕಾಗಿ ಭೀಮ ಕೌರವರನ್ನು ಆಗ ಕೊಲ್ಲಲಿಲ್ಲ.

ನೈವಾತಿವರ್ತತೇ ಜ್ಯೇಷ್ಠಂ ಧರ್ಮಾತ್ಮಾನಂ ಯುಧಿಷ್ಠಿರಂ.।
ತೇಷಾಂ ಪಾಪಾಭಿವೃದ್ಧ್ಯರ್ಥಂ ಜ್ಯೇಷ್ಠವೃತ್ತಿಂ ಚ ದರ್ಶಯನ್ ॥೩೫೨॥

ಕೌರವರ ಪಾಪ ಇನ್ನೂ ಹೆಚ್ಚುವುದಕ್ಕಾಗಿ ಮತ್ತು ಅಣ್ಣನಲ್ಲಿ ತಮ್ಮ ಹೇಗೆ ವರ್ತಿಸಬೇಕೆನ್ನುವುದನ್ನು ತೋರುವುದಕ್ಕಾಗಿ ಭೀಮ ಧರ್ಮಾತ್ಮನಾದ ಯುಧಿಷ್ಠಿರನ ಮಾತನ್ನು ಮೀರಲಿಲ್ಲ.

[1]ಭೀಮಸೇನನಿಗಿಂತಲೂ ಧರ್ಮರಾಜ ಯೋಗ್ಯತೆಯಲ್ಲಿ ಹೆಚ್ಚಿನವನೆಂಬ ಭ್ರಮೆಯಿಂದ ಕೌರವರ ಪಾಪ ಹೆಚ್ಚಲಿ. ಮತ್ತು ಅವರು ಹದಿಮೂರು ವರ್ಷಕಾಲ ನಿರಂತರ ವಿಷ್ಣು ವೈಷ್ಣವದ್ವೇಷ ಮಾಡಿ ಪಾಪ ಹೆಚ್ಚಿಸಿಕೊಳ್ಳಲಿ ಎಂದು ಭೀಮ ಸುಮ್ಮನಿದ್ದ.

ಭೀಮನ ಪ್ರತಿಜ್ಞೆ

ಅಥ ದುರ್ಯೋಧನಃ ಪಾಪೋ ಭೀಮಸೇನಸ್ಯ ಪಶ್ಯತಃ ।
ಊರುಂ ಸಂದರ್ಶಯಾಮಾಸ ಕೃಷ್ಣಾಯೈ ಭೀಮ ಆಹತಂ ॥೩೫೩॥

ತವೋರುಮೇನಂ ಗದಯೋರುವೇಗಯಾ
ವಿಭೇತ್ಸ್ಯ ಇತ್ಯೇವ ಪುನಃ ಸುಯೋಧನಃ ।
ಊಚೇ ನಾನ್ಯದ್ ಭವತಾಮಸ್ತಿ ವಿತ್ತಂ
ದ್ಯೂತೇ ಕೃಷ್ಣಂ ಸ್ಥಾಪಯಧ್ವಂ ಪಣಾಯ ॥೩೫೪॥

ಒಳಿಕ ಪಾಪಿ ದುರ್ಯೋಧನ ಭೀಮಸೇನ ನೋಡುತ್ತಿದ್ದಂತೆಯೆ ದ್ರೌಪದಿಗೆ ತನ್ನ ತೊಡೆಯನ್ನು ತೋರಿದ. ಭೀಮ ಹೇಳಿದ, 'ನಿನ್ನ ಈ ತೊಡೆಯನ್ನು ಬಲು ವೇಗದ ನನ್ನ

1. ಭೀಮಸೇನಾದಪಿ ಯುಧಿಷ್ಠಿರೋ ಜ್ಯೇಷ್ಠ ಇತ್ಯಾದಿಭ್ರಮಜನನೇನ ಪಾಪಾಭಿವೃದ್ಧ್ಯರ್ಥಂ। ತ್ರಯೋದಶ ವರ್ಷಪರ್ಯಂತಂ ಪುನಃ ಪುನರಪಿ ವಿಷ್ಣುವೈಷ್ಣವ ದ್ರೋಹೇಣ ಪಾಪಾಭಿವೃದ್ಧ್ಯರ್ಥಂ ವಾ।
-ವಾದಿರಾಜೀಯ

ಗದೆಯಿಂದ ಕುಟ್ಟಿ ಪುಡಿ ಮಾಡುತ್ತೇನೆ, ನಿಶ್ಚಯ' ದುರ್ಯೋಧನನೆಂದ 'ನಿಮಗೆ ಜೂಜಿನಲ್ಲಿ ಪಣವಾಗಿಡಲು ಇನ್ನು ಬೇರೆ ಸಂಪತ್ತು ಏನೂ ಇಲ್ಲ. ಕೃಷ್ಣನನ್ನು ಪಣವಾಗಿಟ್ಟು ಆಡಿರಿ'.

[1]ದ್ರೌಪದಿಗೆ ತೊಡೆಯನ್ನು ತೋರಿದನೆಂದರೆ ನನ್ನ ಹೆಂಡತಿಯಾಗಿ ತೊಡೆಯ ಮೇಲೆ ಕುಳಿತುಕೊ ಎನ್ನುವ ದುರಾಭಿಪ್ರಾಯದಿಂದ ಎಡತೊಡೆಯನ್ನು ತೋರಿಸಿದ ಎಂದರ್ಥ.

ಅಥಾಬ್ರವೀದ್ವೃಕೋದರಃ ಕೃತೇಽವಮಾನನೇ ಹರೇಃ ।
ನಿಪಾತ್ಯ ಭೂತಲೇ ಹಿ ತೇ ಶಿರೋ ಮೃದಿಷ್ಯ ಇತ್ಯಲಂ ॥೩೫॥

ಹೀಗೆ ದುರ್ಯೋಧನ ಶ್ರೀಕೃಷ್ಣನಿಗೆ ಅವಮಾನ ಮಾಡಿದಾಗ ಭೀಮನೆಂದ, 'ನಿನ್ನನ್ನು ನೆಲದ ಮೇಲೆ ಕೆಡವಿ ತಲೆಯನ್ನು ಚೆನ್ನಾಗಿ ತುಳಿಯುವೆನು'.

ಸ ವಧ್ಯ ಏವ ಮೇ ಸದಾ ಪರೋಕ್ಷತೋಽಪಿ ಯೋ ಹರಿಂ ।
ವಿನಿಂದಯೇದಿತಿ ಧ್ರುವಂ ಪ್ರತಿಶ್ರುತಂ ಹಿ ಮಾರುತೇಃ ॥೩೬॥

ಪರೋಕ್ಷದಲ್ಲಿಯಾದರೂ ಸರಿಯೆ, ಯಾರು ಹರಿಯನ್ನು ನಿಂದಿಸುವನೋ ಅವನು ಸದಾ ನನಗೆ ವಧಾರ್ಹನೇ ಆಗುತ್ತಾನೆ ಎಂಬುದು ಭೀಮನ ದೃಢಪ್ರತಿಜ್ಞೆ.

ಪುನಶ್ಚ ಪಾಪವೃದ್ಧಯೇ ತದೈವ ನೋ ಜಘಾನ ತಂ ।
ವಿಕರ್ತನಾತ್ಮಜಃ ಪುನರ್ಜಗಾದ ಸೋಮಕಾತ್ಮಜಾಂ ॥೩೭॥
ಪ್ರಯಾಹಿ ಭೂಭೃತೋ ಹಿ ನೋ ಗೃಹಂ ನ ಸಂತಿ ಪಾಂಡವಾಃ ।
ಇತೀರಿತೇ ಸಮುತ್ಥಿತೋ ವೃಕೋದರೋಽನು ಚಾರ್ಜುನಃ ।
ಉಭೌ ಚ ತೌ ಯುಧಿಷ್ಠಿರೋ ನ್ಯವಾರಯತ್ತಥಾಪರೇ ॥೩೮॥

ಇನ್ನಷ್ಟು ಪಾಪ ವೃದ್ಧಿಯಾಗಲಿ ಎಂದು ಭೀಮ ಆಗಲೆ ದುರ್ಯೋಧನನನ್ನು ಕೊಲ್ಲದೆ ಬಿಟ್ಟ. ಕರ್ಣ ಪುನಃ ದ್ರೌಪದಿಗೆ ಹೇಳಿದ 'ನಿನಗೆ ಇನ್ನು ಈ ಪಾಂಡವರಿಲ್ಲ. ನೀನು ಇನ್ನು ನಮ್ಮ ರಾಜನಾದ ದುರ್ಯೋಧನನ ಮನೆಗೇ ಹೋಗು'. ಕರ್ಣ ಹೀಗೆ ಹೇಳಿದಾಗ ಭೀಮ ಎದ್ದ. ಅರ್ಜುನನೂ ಎದ್ದ. ಆಗ ಅವರನ್ನು ಯುಧಿಷ್ಠಿರನೂ ಇನ್ನಿತರರೂ ತಡೆದರು.

ತತೋ ನಿಷಣ್ಣಯೋಸ್ತಯೋಃ ಸುಯೋಧನೋ ವಚೋಽಬ್ರವಿತ್ ।
ದುಶ್ಶಾಸನೈಷಾಂ ವಾಸಾಂಸಿ ದಾಸಾನಾಂ ನೋ ವ್ಯಪಾಕುರು ॥೩೯॥
ಇತ್ಯುಕ್ತೋಽಭ್ಯಗಮತ್ಪಾರ್ಥಾನ್ ಸ್ವವಾಸಾಂಸ್ಯಥ ತೇ ದದುಃ ।
ತೇ ಚರ್ಮವಸನಾ ಭೂತ್ವಾ ತಾನಶಿಷ್ಟಾನ್ಪ್ರಕಾಶ್ಯ ಚ ।
ನಿಷೇದುಶ್ಚ ಕ್ಷಮಾಯಾಂ ತೇ ಕ್ಷಮಾಮಾಲಂಬ್ಯ ವಿಸ್ತೃತಾಂ ॥೪೦॥

---

1. ಮಮ ಭಾರ್ಯಾ ಭೂತ್ವಾ ಊರಾವುಪವಿಶೇತಿ ದುರ್ಭಾವೇನ ಊರುಂ ವಾಮೋರುಂ ಪ್ರದರ್ಶಯಾಮಾಸೇತ್ಯರ್ಥಃ । -ವಾದಿರಾಜೀಯ

ಭೀಮಾರ್ಜುನರು ಕುಳಿತ ಮೇಲೆ ದುರ್ಯೋಧನನೆಂದ 'ದುಃಶಾಸನ, ಇವರು ನಮ್ಮ ದಾಸರು. ಅವರ ಉಟ್ಟ ಬಟ್ಟೆಗಳನ್ನು ತೆಗೆ'. ಹೀಗೆ ಹೇಳಿದಾಗ ದುಃಶಾಸನ ಪಾಂಡವರ ಬಳಿಗೆ ನಡೆದ. ಪಾಂಡವರು ಅತ್ಯಂತ ತಾಳ್ಮೆ ವಹಿಸಿ ತಮ್ಮ ಬಟ್ಟೆಗಳನ್ನು ಬಿಚ್ಚಿಕೊಟ್ಟರು. ಕೃಷ್ಣಾಜಿನವನ್ನು ಉಟ್ಟು ಕೌರವರನ್ನು ಅಸಭ್ಯರೆಂದು ತೋರಿಸುತ್ತ ನೆಲದ ಮೇಲೆ ಕುಳಿತರು.

ಪುನರ್ದುರ್ಯೋಧನೇನೋಕ್ತಃ ಪಾರ್ಥಾನಾಮಥ ಪಶ್ಯತಾಂ ।
ಚಕರ್ಷ ವಾಸೋ ದ್ರೌಪದ್ಯಾಸ್ತದಾವಾದೀದ್ವೃಕೋದರಃ ॥೩೬೧॥

ಪುನಃ ದುರ್ಯೋಧನನ ಮಾತಿನಂತೆ ದುಃಶಾಸನ ಪಾಂಡವರು ನೋಡುತ್ತಿದ್ದಂತೆಯೆ ದ್ರೌಪದಿಯ ಸೀರೆಯನ್ನು ಸೆಳೆದ. ಆಗ ಭೀಮ ನುಡಿದ.

ಪಾಪೇಷು ಪೂರ್ವಸ್ಯ ತಥಾಽಧಮಸ್ಯ
ವಂಶೇ ಕುರೂಣಾಮುರುಧರ್ಮಶೀಲಿನಾಂ ।
ದುಶ್ಶಾಸನಸ್ಯಾಸ್ಯ ವಿದಾರ್ಯ ವಕ್ಷಃ
ಪಿಬಾಮಿ ರಕ್ತಂ ಜಗತಃ ಸಮಕ್ಷಂ ॥೩೬೨॥

'ಪಾಪಿಗಳಲ್ಲಿ ಶ್ರೇಷ್ಠ ಮತ್ತು ಮಹಾಧರ್ಮಶೀಲರಾದ ಕುರುಗಳ ವಂಶದಲ್ಲಿ ನೀಚನಾದ ಈ ದುಃಶಾಸನನ ಎದೆಯನ್ನು ಬಗಿದು ಲೋಕದ ಸಮಕ್ಷಮದಲ್ಲಿ ರಕ್ತಪಾನ ಮಾಡುವೆನು'.

ಅಕ್ಷಯಾಂಬರ

ವಿಕೃಷ್ಯಮಾಣೇ ವಸನೇ ತು ಕೃಷ್ಣಾ
ಸಸ್ಮಾರ ಕೃಷ್ಣಂ ಸುವಿಶೇಷತೋಽಪಿ ।
ತದಾನ್ಯದಾಸೀದ್ವಸನಂ ಚ ತಸ್ಯಾ
ದಿವ್ಯಂ ಸುಸೂಕ್ಷ್ಮಂ ಕನಕಾವದಾತಂ ॥೩೬೩॥

ದುಃಶಾಸನ ಸೀರೆಯನ್ನು ಸೆಳೆಯುವಾಗ ಸದಾ ಕೃಷ್ಣಸ್ಮರಣೆ ಮಾಡುವ ದ್ರೌಪದಿ ಇನ್ನೂ ವಿಶೇಷವಾಗಿ ಶ್ರೀಕೃಷ್ಣನನ್ನು ನೆನೆದಳು. ಆಗ ಅವಳಿಗೆ ಬಂಗಾರದಂತೆ ಶುಭ್ರವಾದ ಬಲು ತೆಳ್ಳಗಿನ ಇನ್ನೂ ಉತ್ತಮವಾದ ಬೇರೆ ಸೀರೆ ಪ್ರಾದುರ್ಭವಿಸಿತು.

ಹೇ ಕೃಷ್ಣ ದ್ವಾರಕಾವಾಸಿ, ಎಲ್ಲಿರುವೆ? ಹೇ ಯಾದವನಂದನ, ಕೌರವರು ನನ್ನನ್ನು ಬಾಧಿಸುತ್ತಿರುವುದು ನಿನಗೆ ತಿಳಿಯುವುದಿಲ್ಲವೆ? ಹೇ ಪ್ರಭು ರಮಾನಾಥ, ಗೋಕುಲ ಪಾಲಕ ದುಃಖನಾಶಕ, ಕೌರವ ಸಮುದ್ರದಲ್ಲಿ ಮುಳುಗಿರುವ ನನ್ನನ್ನು ಉದ್ಧರಿಸು ಜನಾರ್ದನ! ಕೃಷ್ಣಕೃಷ್ಣ ಮಹಾಯೋಗಿ. ಜಗನ್ನಾಥ ಜಗತ್ಪಿತ, ಕೌರವರ ನಡುವೆ ಸಿಲುಕಿ ದುಃಖ ಪಡುತ್ತಿದ್ದೇನೆ. ನಿನ್ನನ್ನೆ ಮೊರೆ ಹೊಕ್ಕಿದ್ದೇನೆ, ಕಾಪಾಡು ಗೋವಿಂದ! ಎಂದು

ಮುಂತಾಗಿ ದ್ರೌಪದಿ ಕೃಷ್ಣನನ್ನು ಬೇಡಿದಳು. ಆಗ,

ತತಸ್ತು ಧರ್ಮೋಽಂತರಿತೋ ಮಹಾತ್ಮಾ
ಸಮಾವೃಣೋದ್ ವಿವಿಧೈಃ ಸುವಸ್ತ್ರೈಃ।

'ಧರ್ಮಸ್ವರೂಪನಾದ ಶ್ರೀಕೃಷ್ಣ ದ್ರೌಪದಿಯನ್ನು ನಾನಾ ಬಗೆಯ ಸೀರೆಗಳಿಂದ ಆಚ್ಛಾದಿಸಿದ' ದ್ರೌಪದಿಯ ಪಾತಿವ್ರತ್ಯ ಜ್ಞಾನಭಕ್ತ್ಯಾದಿ ಧರ್ಮವೆ, ಅಂದರೆ, ಆ ಧರ್ಮಕ್ಕೆ ಒಲಿದ ಕೃಷ್ಣನೆ, ಕಾಪಾಡಿದ.

ಪುನಃ ಪುನಶ್ಚೈವ ವಿಕರ್ಷಮಾಣೇ
ದುಶ್ಶಾಸನೇಽನ್ಯಾನಿ ಚ ತಾದೃಶಾನಿ।
ಬಭೂವುರಂತಂ ನ ಜಗಾಮ ಪಾಪಃ
ಶ್ರಾಂತೋ ನ್ಯಷೀದತ್ ಸ್ವಿನ್ನಗಾತ್ರಃ ಸಭಾಯಾಂ ॥೩೬೪॥

ಪುನಃ ಪುನಃ ದುಃಶಾಸನ ಸೀರೆ ಎಳೆಯುತ್ತಿದ್ದಂತೆ ಅದೇ ರೀತಿಯ ಬೇರೆ ಸೀರೆಗಳು ಪ್ರಾದುರ್ಭವಿಸಿದವು. ಪಾಪಿಯಾದ ಆತ ನೋಡಿದರೆ ಸೀರೆಗಳಿಗೆ ಕೊನೆಯೆ ಇರಲಿಲ್ಲ. ಸೋತು ಮೈ ಬೆವೆತುಕೊಂಡು ನೆಲದ ಮೇಲೆ ಕುಸಿದು ಕುಳಿತ.

ವಸ್ತ್ರೋಚ್ಚಯೇ ಶೈಲನಿಭೇ ಪ್ರಜಾತೇ
ದುರ್ಯೋಧನಃ ಪ್ರಾಹ ಸಂಜಾತಕೋಪಃ।
ಪ್ರವೇಶಯೈನಾಂ ಗೃಹಮೇವ ಶೀಘ್ರಂ
ಕಿಂನಶ್ಚಿರೇಣೇತಿ ಸುಮಂದಬುದ್ಧಿಃ ॥೩೬೫॥

ಸೀರೆಗಳ ರಾಶಿ ಬೆಟ್ಟದಂತಾಗಲು ಮಹಾಮಂದ ಬುದ್ಧಿಯವನಾದ ದುರ್ಯೋಧನ ಕೋಪಗೊಂಡು ನುಡಿದ, 'ದುಃಶಾಸನ, ಇನ್ನೇಕೆ ವಿಲಂಬ? ಇವಳನ್ನು ಬೇಗನೆ ಮನೆಯೊಳಕ್ಕೆ ಒಯ್ಯು!'

ದ್ರೌಪದಿಯ ಪ್ರತಿಜ್ಞೆ

ತಚ್ಛ್ರುತ್ವಾ ವಚನಂ ಕೃಷ್ಣಾ ಪ್ರತಿಜ್ಞಾಮಕರೋತ್ತದಾ।
ಭೀಮೋ ದುರ್ಯೋಧನಂ ಹಂತಾ ಕರ್ಣಂ ಹಂತಾ ಧನಂಜಯಃ ॥೩೬೬
ಶಕುನಿಂ ತ್ವಕ್ಷಕಿತವಂ ಸಹದೇವೋ ಹನಿಷ್ಯತಿ।
ಇತ್ಯುಕ್ತೇ ತತ್ತಥೇತ್ಯಾಹ ಭೀಮಸೇನಃ ಸಭಾತಲೇ ॥೩೬೭॥

ಅದನ್ನು ಕೇಳಿದ ದ್ರೌಪದಿ ಸಭೆಯಲ್ಲಿ ಪ್ರತಿಜ್ಞೆ ಮಾಡಿದಳು, 'ಭೀಮ ದುರ್ಯೋಧನನನ್ನು ಕೊಲ್ಲುತ್ತಾನೆ. ಅರ್ಜುನ ಕರ್ಣನನ್ನು ಕೊಲ್ಲುತ್ತಾನೆ. ಜೂಜಿನಲ್ಲಿ ವಂಚನೆ ಮಾಡುವ ಶಕುನಿಯನ್ನು ಸಹದೇವ ಕೊಲ್ಲುತ್ತಾನೆ' ದ್ರೌಪದಿ ಹೀಗೆ ಹೇಳಿದಾಗ 'ಅದು ಹಾಗೇ ಆಗುವುದು' ಎಂದ, ಭೀಮ.

ಮಹಾಭಾರತದಲ್ಲಿ ದ್ರೌಪದಿ ಹೀಗೆ ಪ್ರತಿಜ್ಞೆ ಮಾಡಿದಾಗ ಅಂತರಿಕ್ಷದಿಂದ ದೊಡ್ಡ ಪುಷ್ಪವೃಷ್ಟಿಯಾಯಿತು ಎಂದಿದೆ.

'ಅದು ಹಾಗೇ ಆಗುವುದು' ಎಂದರೆ, ಹಾಗೆ ಹೇಳುತ್ತ ಭೀಮ ಆ ಪ್ರತಿಜ್ಞೆಯನ್ನು ಸ್ವೀಕರಿಸಿದ. ಅನುಮೋದಿಸಿದ.

ಪ್ರತಿಜ್ಞಾಮಾದದೇ ಪಾರ್ಥಸ್ತಾಂ ಮಾದ್ರೀನಂದನಸ್ತಥಾ।
ನಕುಲಃ ಪ್ರತಿಜಜ್ಞೇಽಥ ಶಾಕುನೇಯವಧಂ ಪ್ರತಿ॥ ॥೩೬॥

ಅರ್ಜುನನೂ ಆ ಪ್ರತಿಜ್ಞೆಯನ್ನು ಸ್ವೀಕರಿಸಿದ. ಸಹದೇವನೂ ಹಾಗೇ ಮಾಡಿದ. ನಕುಲನೂ ಶಕುನಿಯ ಮಗನನ್ನು ಕೊಲ್ಲುವುದಕ್ಕೆ ಪ್ರತಿಜ್ಞೆ ಮಾಡಿದ.

ಶಕುನಿಯನ್ನೂ ಶಕುನಿಯ ಮಗನಾದ ಉಲೂಕನನ್ನೂ ಸಹದೇವನೇ ಕೊಲ್ಲುತ್ತಾನೆ ಎಂದು ನಿರ್ಣಯ ಮುಂದೆ ಹೇಳಿದೆ–

'ಉಲೂಕಂ ಸಹದೇವೋಽಥ ಶಕುನಿಂ ಚಾತಿ ಪಾಪಿನಂ।'

ಆದರಿಂದ ಮೂಲರೂಪದಲ್ಲಿ ಹೇಗೋ ಹಾಗೆ ಅವತಾರದಲ್ಲಿಯೂ ಕೆಲವೊಮ್ಮೆ ನಕುಲ ಸಹದೇವರ ಹೆಸರುಗಳು ಕಾರ್ಯಗಳು ಎಲ್ಲವೂ ಪರಸ್ಪರ ಅನ್ವಯವಾಗುತ್ತವೆ ಎನ್ನಬೇಕಾಗುತ್ತದೆ. ಇಲ್ಲದಿದ್ದರೆ ಸಹದೇವನ ಮೂಲಕ ಕೊಲ್ಲಿಸುತ್ತೇನೆ ಎಂದು ನಕುಲ ಪ್ರತಿಜ್ಞೆ ಮಾಡಿದನೆಂದು ಹೇಳುವಂತಿಲ್ಲ. ನಕುಲ ಸ್ಪಷ್ಟವಾಗಿ,

ಉಲೂಕಂ ಚ ದುರಾತ್ಮಾನಂ ಸೌಬಲಸ್ಯ ಸುತಂ ಪ್ರಿಯಂ
ಕ್ರೂರಂ ಹಂತಾಸ್ಮಿ ಸಮರೇ (ಸಭಾ. 99-46)

ಎಂದು ತಾನೇ ಕೊಲ್ಲುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಉಲೂಕನಲ್ಲದೆ ಇನ್ನಾರೋ ಒಬ್ಬ ಶಕುನಿ ಪುತ್ರನನ್ನು ಕೊಲ್ಲುವುದೂ ಅಲ್ಲ. ಉಲೂಕನನ್ನು ಎಂದೇ ಸ್ಪಷ್ಟ ಹೇಳುತ್ತಾನೆ. ಸಹದೇವನಿಂದಾಗದಿದ್ದರೆ ನಾನು ಕೊಲ್ಲುತ್ತೇನೆ ಎಂದು ಶರತ್ತನ್ನು ಒಡ್ಡುವುದಂತೂ ಸಹದೇವನಿಗೆ ಅಪಮಾನಕರ.

ಅಥವಾ ಕೌರವರನ್ನು ನಾಶಮಾಡುವೆ. 'ನಿರ್ಹರ್ತರಾಷ್ಟ್ರಾಂ ಪೃಥಿವೀಂ ಕರ್ತಾಸ್ಮಿ ನಚಿರಾದಿವ' ಎಂದು ಮುಂದಿನ ಶ್ಲೋಕದಲ್ಲಿಯೂ 'ತಾನ್ ಧಾರ್ತರಾಷ್ಟ್ರಾನ್ ದುರ್ವೃತ್ತಾನ್ ಮುಮೂರ್ಷೂನ್ ಕಾಲ-ನೋದಿತಾನ್। ಗಮಯಿಷ್ಯಾಮಿ ಭೂಯಿಷ್ಠಾನ್ ಅಹಂ ವೈವಸ್ವತಕ್ಷಯಂ' ಎಂದು ಹಿಂದಿನ ಶ್ಲೋಕದಲ್ಲಿಯೂ ನಕುಲ ಹೇಳುವುದರಿಂದ ಭೀಮಾದಿಗಳೆಲ್ಲ ಶತ್ರುನಿಗ್ರಹ ಮಾಡುವಾಗ ನಾನೂ ಜೊತೆಗಿರುತ್ತೇನೆ ಎನ್ನುವುದೇ ಅವನ ಅಭಿಪ್ರಾಯವೆನ್ನಬಹುದು.

ಭೀಮನ ಕೋಪಾವೇಶ

ತತಃ ಸುಯೋಧನಾನುಜಶ್ಚಕರ್ಷ ಪಾರ್ಷತಾತ್ಮಜಾಂ ।
ಗೃಹಾಯ ತಾಂ ನಿಶಾಮ್ಯ ತು ಕ್ರುಧಾಹ ಮಾರುತಾತ್ಮಜಃ ॥೩೬॥

ಬಳಿಕ ದುಃಶಾಸನ ದ್ರೌಪದಿಯನ್ನು ಮನೆಯೊಳಗೆ ಸೆಳೆದೊಯ್ಯಲು ತೊಡಗಿದ. ಅದನ್ನು ನೋಡಿ ಭೀಮ ಕೋಪದಿಂದ ನುಡಿದ.

ಅರ್ಜುನಾರ್ಜುನ ನೈವಾತ್ರ ಕ್ಷಮಾ ಮೇ ತಾತ ರೋಚತೇ ।
ಪತಿತಸ್ಯಾಸ್ಯ ದೇಹಸ್ಯ ಕಾಷ್ಠವಿಷ್ಠಾಸಮಸ್ಯ ಚ ।
ಫಲಾನಿ ತ್ರೀಣಿ ಶಿಷ್ಯಂತೇ ವಿದ್ಯಾ ಕರ್ಮ ಸುತಾ ಇತಿ ॥೩೭॥

ಅರ್ಜುನ, ಅರ್ಜುನ, ಈಗ ಸಹನೆ ಮಾಡಿಕೊಳ್ಳುವುದು ನನಗೆ ಸರಿಕಾಣುವುದಿಲ್ಲ. ಈ ಶರೀರ ಪತನ ಹೊಂದಿದಾಗ ಕಟ್ಟಿಗೆಯಂತೆ ಇಲ್ಲವೆ ಮಲದಂತೆ ಆಗುವುದು. ವಿದ್ಯೆ ಕರ್ಮ ಸಂತಾನ ಇವು ಮೂರೇ ಬದುಕಿನ ಫಲವಾಗಿ ಉಳಿವವು.

ಹೆಣವನ್ನು ಸುಟ್ಟರೆ ಕಟ್ಟಿಗೆಗೆ ಸಮಾನ. ಉರಿದು ಬೂದಿಯಾಗುವುದು. ಹಾಗೇ ಬಿಟ್ಟರೆ ಅಮೇಧ್ಯಕ್ಕೆ ಸಮಾನ, ಕೊಳೆತು ನಾರುವುದು. ಅದರಿಂದ ಶರೀರ ನಶ್ವರ. ಬದುಕಿನ ಫಲವಾಗಿ ಉಳಿಯುವುದು ಗಳಿಸಿದ ವಿದ್ಯೆ. ಮಾಡಿದ ಕರ್ಮ ಮತ್ತು ಹುಟ್ಟಿಸಿದ ಸಂತಾನ ಇವು ಮೂರೆ. ಇವು ಪರಲೋಕದಲ್ಲಿಯೂ ಸುಖ ನೀಡುವವುಗಳು.

ಇತಿ ವೇದೋದಿತಂ ವಾಕ್ಯಂ ನ ಸುತೋ ದಾರಧರ್ಷಣೇ ।
ದುಷ್ಟದಾರೋ ನ ಚಾಪ್ನೋತಿ ಲೋಕಾನರ್ಹೋ ಹಿ ದೂಷಿತಃ ॥೩೮॥
ಅರಕ್ಷಣಾದ್ ದೂಷಿತಾಯಾ ನ ತ್ಯಾಗಾಚ್ಚ ಶುಭಂ ಭವೇತ್ ॥೩೯॥

ಇದು ವೇದೋಕ್ತ ವಚನ. ಪತ್ನಿಯನ್ನು ಯಾರಾದರೂ ಬಲಾತ್ಕರಿಸಿದರೆ ಪತಿಗೆ ಸತ್ಸಂತಾನ ಇಲ್ಲವಾಗುವುದು. ಮತ್ತು ಪತ್ನಿ ಕೆಟ್ಟರೆ ಪತಿ ಪುಣ್ಯಲೋಕಗಳನ್ನು ಪಡೆಯಲಾರ. ಏಕೆಂದರೆ ಅವನ ಅರ್ಧ ಅಂಗವೆ ಕೆಟ್ಟು ಹೋಗಿರುತ್ತದೆ. ಪತ್ನಿ ಕೆಟ್ಟು ಹೋದ ಬಳಿಕ ತಾನು ರಕ್ಷಣೆ ಮಾಡದಿದ್ದರೂ ಪರಿತ್ಯಾಗ ಮಾಡಿದರೂ ಸುಖವಿಲ್ಲ.

[1]ಒಮ್ಮೆ ಕೆಟ್ಟು ಹೋದ ಹೆಂಡತಿಯನ್ನು ಪುನಃ ಪುನಃ ಪಾಪ ಮಾಡದಂತೆ ಸಂಕೋಲೆ ಮುಂತಾದವುಗಳಿಂದ ಕಟ್ಟಿಹಾಕಿ ಸ್ವಲ್ಪವೆ ಅನ್ನಪಾನಾದಿಗಳನ್ನು ಕೊಡುತ್ತ ಇದ್ದರೆ, ಚೆನ್ನಾಗಿ ರಕ್ಷಣೆ ಮಾಡದಿದ್ದರೆ,

1. ಯಥಾ ಪುನಃ ಪುನಃ ಪಾಪಂ ನಕರಿಷ್ಯತಿ ತಥಾ ಶೃಂಖಲಾದಿನಾ ನಿರ್ಬಂಧಂ ಕೃತ್ವಾ ಕಿಂಚಿದನ್ನಪಾನಾದಿಕಂ ಚ ದತ್ವಾ ರಕ್ಷಣಾಭಾವಚ್ಚ ಶುಭಂ ನ ಭವತಿ। ಅಗ್ನಿಸಾಕ್ಷಿ ಕತಯಾ ಗೃಹೀತಪಾಣೇರ್ಭಾರ್ಯಾಯಾಃ ಸಂಗಮಾತ್ರಂ ತ್ಯಕ್ತ್ವಾನ್ನಸ್ಯಾಪ್ಯದಾನೇನ ಪರಲೋಕೋ ನಾಸ್ತೀತಿ ಭಾವಃ । ಸರ್ವಥಾ ಪರಿತ್ಯಾಗಾತ್

ಅದರಿಂದಲೂ ಸುಖವಿಲ್ಲ. ಏಕೆಂದರೆ ಅಗ್ನಿಸಾಕ್ಷಿಯಾಗಿ ಮದುವೆಯಾದ ಬಳಿಕ ಸಂಗವನ್ನೆ ಮಾಡದೆ, ಸರ್ವಥಾ ಪರಿತ್ಯಾಗ ಮಾಡಿದರೂ, ಅಂದರೆ, ಮುಂದೆ ಅವಳು ಪುನಃ ಪುನಃ ತಪ್ಪು ಮಾಡುವುದನ್ನು ಉಪೇಕ್ಷಿಸಿ ಬಿಟ್ಟರೂ ಪರಲೋಕ ಸರ್ವಥಾ ಇಲ್ಲ. ಅವಳು ಪ್ರತ್ಯಕ್ಷವಾಗಿ ಪುನಃ ಪುನಃ ಪಾಪ ಮಾಡುವುದರಿಂದ ತನಗೆ ಅಪಕೀರ್ತಿಯೆ. ಐಹಿಕವಾಗಿಯೂ ಸುಖವಿಲ್ಲ. ಅತಿ ನಿರ್ಬಂಧದಲ್ಲಿಟ್ಟು ರಕ್ಷಿಸಿದರೂ ಅವಳು ತನ್ನ ಮನೆಯಲ್ಲಿಯೆ ತನ್ನ ಕಣ್ಣ ಮುಂದೆ ಹಿಂಸೆಯನ್ನು ಅನುಭವಿಸುವುದನ್ನು ಕಂಡರೆ ತನಗೆ ನಿತ್ಯ ದುಃಖ. ಇದು ಐಹಿಕ ನರಕವಾಗುವುದರಿಂದ ಅದರಿಂದಲೂ ಸುಖವಿಲ್ಲ.

ಅತೋಽದ್ಯ ಸಾನುಬಂಧಕಾನ್ನಿಹನ್ಮಿ ಧಾರ್ತರಾಷ್ಟ್ರಕಾನ್ ।
ಇತಿ ಬ್ರುವನ್ವ್ಯಲೋಕಯದ್ರಿಪೂನ್ ದಹನ್ನಿವೌಜಸಾ ॥೩೭೩॥

ಅದರಿಂದ ನಾನು ಈಗಲೆ ಕೌರವರನ್ನು ಬಂಧು ಸಮೇತವಾಗಿ ಸಂಹರಿಸುವೆನು ಎಂದು ಹೇಳುತ್ತ ಭೀಮ ಓಜಸ್ಸಿನಿಂದ ಶತ್ರುಗಳನ್ನು ಸುಟ್ಟುಬಿಡುವಂತೆ ನೋಡಿದ.

ಮಹಾಭಾರತ ಪ್ರಚಲಿತ ಪಾಠದಲ್ಲಿ ಈ ಶ್ಲೋಕ ಕಾಣುವುದಿಲ್ಲ.

ಅದಕ್ಕೆ ಸಮಾನಾರ್ಥಕವಾದ ದೇವಲ ವಚನ ಉದಾಹೃತವಾಗಿದೆ-

ತ್ರೀಣಿ ಜ್ಯೋತೀಂಷಿ ಪುರುಷ ಇತಿ ವೈ ದೇವಲೋಽಬ್ರವೀತ್ ।
ಅಪತ್ಯಂ ಕರ್ಮ ವಿದ್ಯಾ ಚ ಯತಃ ಸೃಷ್ಟಾಃ ಪ್ರಜಾಸ್ತತಃ ॥
ತನ್ನೋ ಜ್ಯೋತಿರಭಿಹತಂ ದಾರಾಣಾ ಮಭಿಮರ್ಶನಾತ್ ।
ಧನಂಜಯ ಕಥಂಸ್ವಿತ್ ಸ್ಯಾತ್ ಅಪತ್ಯಮಭಿಮೃಷ್ಟಜಂ ॥
(ಸಭಾ 94.5, 7)

ಮನುಷ್ಯನ ಬಾಳಿನಲ್ಲಿ ಜ್ಯೋತಿರೂಪವಾದ ಮೂರು ಫಲಗಳಿವೆ ಎಂದು ದೇವಲ ಮುನಿ ಹೇಳಿದ್ದಾನೆ. ಸಂತತಿ ಕರ್ಮ ವಿದ್ಯೆ ಎಂದು ಇವು ಮೂರು ಪರಲೋಕದ ದಾರಿ ತೋರುವ ಜ್ಯೋತಿಗಳು. ಪತ್ನಿಗೆ ಬಲಾತ್ಕಾರ ನಡೆದರೆ ಸಂತತಿ ಎಂಬ ಜ್ಯೋತಿ ಆರಿದಂತೆಯೆ. ಏಕೆಂದರೆ ಆಗ ಶುದ್ಧ ಸಂತಾನ ಸಿಗುವುದೆಂತು?'

ಉಪರಿ ತಯಾ ಪುನಃ ಪುನಃ ಕ್ರಿಯಮಾಣ ಪಾಪಸ್ಯೋಪೇಕ್ಷಣಾತ್ ಪರಲೋಕೋ ನ ಭವತಿ। ಸ್ವಾಧ್ಯಕ್ಷ ಏವ ಪುನಃ ಪುನಃ ಪಾಪಕರಣೇನ ಸ್ವಯಶೋಭಂಗಾದ್ಯೈಹಿಕಂ ಚ ಶುಭಂ ನ ಭವತೀತಿ ಭಾವಃ । ತರ್ಹಿ ನಿರ್ಬಂಧೇನೈವ ಸಾ ರಕ್ಷಣೀಯಾ । ತದಾ ಕಾ ಹಾನಿರಿತಿ ಚೇತ್ ಸತ್ಯಂ। ಸ್ವಗೃಹ ಏವ ಸದಾ ನಿರ್ಬಂಧ ಮನುಭವಂತ್ಯಾಃ ಸ್ವಭಾರ್ಯಾಯಾ ದರ್ಶನಸ್ಯ ನಿತ್ಯದುಃಖದಾಯಕತ್ವೇನ ಐಹಿಕ ನರಕೋಪಮತಯಾ ತತೋಪಿ ಶುಭಾಭಾವಾದಿತಿ ಭಾವಃ । -ವಾದಿರಾಜೀಯ

ದದರ್ಶ ಚ ಮಹಾಘೋರಮಾದಾತುಂ ಪರಿಘಂ ರುಷಾ ।
ಕರ್ತುಂ ವ್ಯವಸಿತೋ ಬುದ್ಧ್ಯಾ ನಿಃಶೇಷಾನ್ ಧಾರ್ತರಾಷ್ಟ್ರಕಾನ್ ॥೩೭೪॥

ಭೀಮ ಕೌರವರನ್ನು ಆಗಲೆ ನಿಃಶೇಷರನ್ನಾಗಿ ಮಾಡಲು ಮನಸ್ಸಿನಲ್ಲಿ ನಿಶ್ಚಯಿಸಿದವನಂತೆ ಪರಿಘವನ್ನು ಎತ್ತಿಕೊಳ್ಳಲು ಮಹಾಭಯಂಕರವಾಗಿ ದಿಟ್ಟಿಸಿ ನೋಡಿದ.

ಪರಿಘವೆಂದರೆ ಕಬ್ಬಿಣದ ಕಟ್ಟು ಹಾಕಿಸಿದ ದೊಣ್ಣೆ ಎಂದು ಜನಾರ್ದನೀಯ ವರದರಾಜೀಯಗಳಲ್ಲಿ ಹೇಳಿದೆ. ವಾದಿರಾಜೀಯದಲ್ಲಿ ಆ ಸಭಾ ಭವನದ ದೊಡ್ಡ ಕಂಬ, ಅದನ್ನು ಕಿತ್ತು ಎಸೆದರೆ ಪೂರ್ತಿ ಶತ್ರುಧ್ವಂಸವಾಗುತ್ತದೆ ಎಂದಿದೆ.[1]

ತದಾ ಶಿವಾ ವವಾಶಿರೇ ಸುಯೋಧನಾಗ್ನಿಗೇಹತಃ ।
ತಥೈವ ತತ್ಪತುರ್ಗೃಹೇಽಪ್ಯಭೂದ್ ಭಯಾನಕಂ ಬಹು ॥೩೭೫॥

ಆಗ ದುರ್ಯೋಧನನ ಯಾಗಶಾಲೆಯಲ್ಲಿ ಹೆಣ್ಣು ನರಿಗಳು ಕೂಗಿದುವು. ಧೃತರಾಷ್ಟ್ರನ ಅರಮನೆಯಲ್ಲಿಯೂ ಬಹುಭಯಾನಕ ಉತ್ಪಾತಗಳು ಕಂಡುಬಂದುವು.

ನಿಮಿತ್ತಾನ್ಯತಿಘೋರಾಣಿ ಕುಪಿತೇ ಮಾರುತಾತ್ಮ ಜೇ ।
ದೃಷ್ಟ್ವಾಂಬಿಕೇಯೋ ವಿದುರಂ ಪಪ್ರಚ್ಛೈಷಾಂ ಫಲಂ ದ್ರುತಂ ॥೩೭೬॥

ಭೀಮ ಕುಪಿತನಾದಾಗ ಅತಿ ಭಯಾನಕ ಉತ್ಪಾತಗಳುಂಟಾದುದನ್ನು ಕಂಡು ಧೃತರಾಷ್ಟ್ರ ಬೇಗನೆ ವಿದುರನ ಮುಂದೆ ಅವುಗಳ ಫಲವನ್ನು ಕೇಳಿದ.

ಆಹ ತಂ ವಿದುರೋ ಜ್ಯೇಷ್ಠಂ ಕ್ಷಣೇಽಸ್ಮಿಂಸ್ತವ ಪುತ್ರಕಾಃ ।
ಸಾನುಬಂಧಾ ನಶಿಷ್ಯಂತಿ ವೃಕೋದರಬಲಾಹತಾಃ ॥೩೭೭॥

ವಿದುರ ಧೃತರಾಷ್ಟ್ರನಿಗೆ ಹೇಳಿದ, 'ಇದೇ ಕ್ಷಣದಲ್ಲಿ ನಿನ್ನ ಮಕ್ಕಳೂ, ಬಂಧು ಬಾಂಧವರೂ ಭೀಮನ ಬಲವಾದ ಹೊಡೆತಕ್ಕೆ ಸಿಕ್ಕಿ ನಾಶವಾಗುತ್ತಾರೆ.'

ಕ್ರೀಡಸೇಽರ್ಭಕವತ್ತ್ವಂ ಹಿ ಕಿಂ ಜಿತಂ ಕಿಂ ಜಿತಂ ತ್ವಿತಿ ।
ಅಧರ್ಮೇಣ ಜಿತಾನತ್ರ ಜಿತಾನ್ ಪಶ್ಯಸಿ ಪಾಂಡವಾನ್ ॥೩೭೮॥

ಆದರೂ ನೀನು ಏನು ಗೆದ್ದೆವು ಏನು ಗೆದ್ದೆವೆಂದು ಮಕ್ಕಳಂತೆ ಆಡುತ್ತಿರುವೆ. ಅಧರ್ಮದಿಂದ ಪಾಂಡವರನ್ನು ಗೆದ್ದು ನ್ಯಾಯವಾಗಿ ಗೆದ್ದೆವೆಂದುಕೊಳ್ಳುತ್ತಿ.

ಸ್ತ್ರೀಷು ದ್ಯೂತೇಷು ವಾ ದತ್ತಂ ಮದಾಂಧೇನ ನರೇಣ ವಾ ।
ನ ದತ್ತಮಾಹುರ್ವಿದ್ವಾಂಸಸ್ತಸ್ಯ ಬಂಧುಭಿರೇವ ಚ ॥೩೭೯॥

---

1. ಪರಿತೋ ಘಾತಯತೀತಿ ಪರಿಘಃ ಸ್ಥೂಲಸ್ತಂಭಃ । -ವಾದಿರಾಜೀಯ

ಆಹಾರ್ಯಂ ಪುನರಾಹುಶ್ಚ ತಥಾಪಿ ನ ತು ಪಾಂಡವೈಃ ।
ತತ್ಕೃತಂ ತವ ಪುತ್ರಾಣಾಂ ಖ್ಯಾಪಯದ್ಭಿರಶಿಷ್ಟತಾಂ ॥೩೮೦॥

ವೇಶ್ಯಾಸ್ತ್ರಿಯರಿಗೆ ಕೊಟ್ಟಿದ್ದು, ಜೂಜುಗಳಲ್ಲಿ ಕೊಟ್ಟಿದ್ದು, ಮತ್ತೇರಿ ಎಚ್ಚರದಪ್ಪಿದ ಮನುಷ್ಯ ಕೊಟ್ಟಿದ್ದು ಇವನ್ನು ಬಲ್ಲವರು ನ್ಯಾಯವಾಗಿ ಕೊಟ್ಟಿದ್ದೆಂದು ಹೇಳುವುದಿಲ್ಲ. ಅವರ ಬಂಧುಗಳು ಅವನ್ನು ಹಿಂದಿರುಗಿ ಪಡೆಯಬಹುದು ಎನ್ನುತ್ತಾರೆ. ಆದರೂ ಪಾಂಡವರು ಹಾಗೆ ಮಾಡಲಿಲ್ಲ. ನಿನ್ನ ಮಕ್ಕಳು ಎಷ್ಟು ಅಸಭ್ಯರೆಂದು ಲೋಕಕ್ಕೆ ತೋರಿಸುತ್ತಿದ್ದಾರೆ.

ಧೃತರಾಷ್ಟ್ರನ ವರದಾನ

ಇತ್ಯುಕ್ತ ಆಹಾಂಬಿಕೇಯೋ ನಿಮಿತ್ತಾನಾಂ ಫಲಂ ಕಥಂ ।
ನ ಭವೇದಿತಿ ಸ ಪ್ರಾಹ ದ್ರುತಂ ಕೃಷ್ಣಾ ವಿಮೋಚ್ಯತಾಂ ॥೩೮೧॥

ವಿದುರ ಹೀಗೆ ಹೇಳಿದಾಗ ಧೃತರಾಷ್ಟ್ರ 'ಈ ಉತ್ಪಾತಗಳ ಫಲ ಬಾರದಂತೆ ಮಾಡುವ ಬಗೆ ಹೇಗೆ ಎಂದು ಕೇಳಿದ. ಒಡನೆ ವಿದುರನೆಂದ, 'ದ್ರೌಪದಿಯನ್ನು ಮೊದಲು ಬಿಡಿಸು'.

ತೋಷಯಸ್ವ ವರೈಶ್ಚೈನಾಮನ್ಯಥಾ ತೇ ಸುತಾನ್ಮೃತಾನ್ ।
ವಿದ್ಧಿ ಭೀಮೇನ ನಿಷ್ಪಿಷ್ಟಾನ್ನಾತ್ರ ತೇ ಸಂಶಯೋ ಭವೇತ್ ॥೩೮೨॥

ಅವಳಿಗೆ ವರಗಳನ್ನಿತ್ತು ಸಂತೋಷಗೊಳಿಸು. ಇಲ್ಲದಿದ್ದರೆ ನಿನ್ನ ಮಕ್ಕಳು ಭೀಮನಿಂದ ಪುಡಿಯಾಗಿ ಈ ಕ್ಷಣದಲ್ಲಿ ಸತ್ತರೆಂದೇ ತಿಳಿ. ಇದರಲ್ಲಿ ನಿನಗೆ ಸಂಶಯಬೇಡ.

ಕೃಷ್ಣಾ ಚ ಪಾಂಡವಾಶ್ಚೈವ ತಪೋವೃದ್ಧಿಮಭೀಪ್ಸವಃ ।
ತಪಸಾ ನೈವ ಧಕ್ಷ್ಯಂತಿ ತೇನ ಜೀವಂತಿ ತೇ ಸುತಾಃ ॥೩೮೩॥

ದ್ರೌಪದಿಯಾಗಲಿ ಪಾಂಡವರಾಗಲಿ ತಪೋವೃದ್ಧಿಯನ್ನು ಬಯಸುವುದರಿಂದ ತಪಸ್ಸಿನಿಂದ ಸುಡುತ್ತಿಲ್ಲ. ಅದರಿಂದ ನಿನ್ನ ಮಕ್ಕಳು ಇನ್ನೂ ಬದುಕಿದ್ದಾರೆ.

ತಪಸ್ಸೆಂದರೆ ನಿಷ್ಕಾಮಕರ್ಮದ ಅನಂತಪುಣ್ಯ. ಕೋಪಾವೇಶದಿಂದ ಶತ್ರುಗಳನ್ನು ಕೊಲ್ಲುವ ಕ್ಷುದ್ರಕಾಮನೆಗಳು ಈ ನಿಷ್ಕಾಮ ಕರ್ಮಕ್ಕೆ ವಿರೋಧಿ. ಅದರಿಂದ ಪಾಂಡವರು ಈಗ ಎಲ್ಲವನ್ನು ಸಹಿಸಿಕೊಂಡು ಮುಂದೆ ಅವರ ಪಾಪದ ಕೊಡ ತುಂಬಿದಾಗ ರಣಯಜ್ಞ ರೂಪವಾದ ನಿಷ್ಕಾಮಕರ್ಮವನ್ನೆ ಮಾಡುತ್ತಾರೆ.

ತಥಾಪಿ ಯದಿ ಕೃಷ್ಣಾಂ ತ್ವಂ ನ ಮೋಚಯಸಿ ತೇ ಸುತಾನ್ ।
ಹನಿಷ್ಯತಿ ನ ಸಂದೇಹೋ ಬಲೇನೈವ ವೃಕೋದರಃ ॥೩೮೪॥

ಇಷ್ಟಾದರೂ ನೀನು ದ್ರೌಪದಿಯನ್ನು ಬಿಡಿಸದಿದ್ದರೆ ನಿನ್ನ ಮಕ್ಕಳನ್ನು ಭೀಮ ತನ್ನ ಬಾಹುಬಲದಿಂದಲೆ ಕೊಲ್ಲುತ್ತಾನೆ, ಸಂಶಯವಿಲ್ಲ.

ಇತೀರಿತೇ ವಿನಿರ್ಭರ್ತ್ಸ್ಯ ಪುತ್ರಂ ದುಃಶಾಸನಂ ನೃಪಃ ।
ಅಮೋಚಯದ್ವರೈಶ್ಚೈನಾಂ ಛಂದಯಾಮಾಸ ಪಾರ್ಷತೀಂ ॥೩೮೫॥

ವಿದುರ ಹೀಗೆ ಹೇಳಿದಾಗ ಧೃತರಾಷ್ಟ್ರ ಪುತ್ರದುಃಶಾಸನನನ್ನು ಬೈದು ದ್ರೌಪದಿಯನ್ನು ಬಿಡಿಸಿದ. ವರಗಳನ್ನು ಸ್ವೀಕರಿಸುವಂತೆ ಅವಳಿಗೆ ಒತ್ತಾಯಿಸಿದ.

ಛಂದಿತಾ ಸಾ ವರೈಸ್ತೇನ ಧರ್ಮೇ ಭಾಗವತೇ ಸ್ಥಿತಾ ।
ನೈವಾತ್ಮನೋ ವರಾನ್ವವ್ರೇ ವವ್ರೇ ತೇಷಾಂ ವಿಮೋಕ್ಷಣಂ ॥೩೮೬॥

ವರಗಳನ್ನು ಸ್ವೀಕರಿಸಲು ಧೃತರಾಷ್ಟ್ರ ದ್ರೌಪದಿಗೆ ಒತ್ತಾಯಿಸಿದರೂ ಭಾಗವತ ಧರ್ಮದಲ್ಲಿ ನಿಷ್ಠಳಾದ ಅವಳು ತನಗಾಗಿ ವರಗಳನ್ನು ಕೇಳಲಿಲ್ಲ. ಕೇವಲ ಪಾಂಡವರ ವಿಮೋಚನೆಯನ್ನೇ ಕೇಳಿದಳು.

ಜೂಜಿನಲ್ಲಿ ಕಳೆದುಕೊಂಡಿದ್ದನ್ನು ಅವನ ಕಡೆಯವರು ಹಿಂದಿರುಗಿ ಪಡೆಯಬಹುದು. ಇದು ವರವೇ ಅಲ್ಲ. ಅದರಿಂದ ದ್ರೌಪದಿ ಪಾಂಡವರನ್ನೂ ಅವರ ರಾಜ್ಯವನ್ನೂ ಬಿಡಿಸಿಕೊಂಡಳಷ್ಟೆ, ತನ್ನನ್ನು ತುಂಬಿದ ಸಭೆಗೆ ಎಳೆದು ತಂದು ಅಪಮಾನಿಸಿದಕ್ಕೆ ಪ್ರತಿಯಾಗಿ ಅವರಿಗೆ ಏನೂ ಶಿಕ್ಷೆಯನ್ನು ಕೇಳಲಿಲ್ಲ. ತನ್ನ ನಿಷ್ಕಾಮಕರ್ಮ ರೂಪವಾದ ಭಾಗವತ ಧರ್ಮಕ್ಕೆ ಚ್ಯುತಿ ತಂದುಕೊಳ್ಳಲಿಲ್ಲ.

ಯುಧಿಷ್ಠಿರಸ್ಯ ಸಭ್ರಾತುಃ ಸರಾಷ್ಟ್ರಸ್ಯ ವಿಮೋಕ್ಷಣಂ ।
ದದೌ ನೃಪೋಽಸ್ಯಾ ನ ಪುನಶ್ಛಂದ್ಯಮಾನಾಪಿ ಸಾವೃಣೋತ್ ॥೩೮೭॥

ಧೃತರಾಷ್ಟ್ರ ಧರ್ಮರಾಜನನ್ನೂ ಅವನ ತಮ್ಮಂದಿರನ್ನೂ ರಾಜ್ಯಸಹಿತ ಬಿಡುಗಡೆ ಮಾಡಿ ಹಿಂದಿರುಗಿಸಿದ. ಇನ್ನೂ ವರ ಕೇಳೆಂದು ಒತ್ತಾಯಿಸಿದರೂ ದ್ರೌಪದಿ ಕೇಳಲಿಲ್ಲ.

ಭರ್ತುರ್ವಿಷ್ಣೋಶ್ಚ ನಾನ್ಯಸ್ಮಾದ್ವರಸ್ವೀಕಾರ ಇಷ್ಯತೇ ।
ಏವಂ ಹಿ ಭಗವದ್ಧರ್ಮಸ್ತಸ್ಮಾತ್ಸಾ ನಾವೃಣೋತ್ಪರಂ ॥೩೮೮॥

ಹೆಣ್ಣು ತನ್ನ ಗಂಡನಿಂದ ಅಥವಾ ಪರಮಾತ್ಮನಿಂದ ಹೊರತು ಬೇರೆಯವರಿಂದ ವರ ಪಡೆಯಕೂಡದು. ಭಾಗವತ ಧರ್ಮ ಹೀಗಿದೆ. ಅದರಿಂದ ದ್ರೌಪದಿ ಬೇರೆ ವರ ಪಡೆಯಲಿಲ್ಲ.

ಅಧರ್ಮತೋ ಹೃತತ್ವಾತ್ತು ತದ್ದಾನಂ ನ ವರೋ ಭವೇತ್ ।
ಇತಿ ಮತ್ವಾ ಪಾಂಡವಾನಾಂ ವವ್ರೇ ಕೃಷ್ಣಾ ವಿಮೋಕ್ಷಣಂ ॥೩೮೯॥

ಧೃತರಾಷ್ಟ್ರ ಪಾಂಡವರ ಬಿಡುಗಡೆಯನ್ನು ನೀಡಿದುದು ವರವಾಗುವುದಿಲ್ಲ. ಏಕೆಂದರೆ ಅದು ಅನ್ಯಾಯದಿಂದ ಅಪಹೃತವಾಗಿರುವಂಥದ್ದು. ಹೀಗೆ ಆಲೋಚಿಸಿ ದ್ರೌಪದಿ ಪಾಂಡವರ ಬಿಡುಗಡೆಯನ್ನು ಕೇಳಿದಳು.

ಶ್ವಶುರಾದ್ಯೈಹಿಕವರಾಃ ಕ್ಷತ್ರಿಯಾಯಾಸ್ತ್ರಯೋ ಯತಃ ।
ಉಕ್ತಾಃ ಶತಂ ಚ ವಿಪ್ರಾಯಾ ಧರ್ಮೇ ಭಾಗವತೇ ತತಃ ।
ಹೇತುನಾ ತೇನ ವವ್ರೇ ಸಾ ನಾನ್ಯತ್ ಕಿಂಚಿದತಃ ಪರಂ ॥೩೯೦॥

ಕ್ಷತ್ರಿಯ ಸ್ತ್ರೀಗೆ ಮಾವನಿಂದ ಮೂರು ಐಹಿಕ ವರಗಳೂ ಬ್ರಾಹ್ಮಣ ಸ್ತ್ರೀಗೆ ನೂರು ಐಹಿಕ ವರಗಳೂ ಭಾಗವತ ಧರ್ಮದಲ್ಲಿ ವಿಹಿತವಾಗಿವೆ. ಅದರಿಂದಲೂ ದ್ರೌಪದಿ ಮೇಲೆ ಹೇಳಿದ ವರಗಳನ್ನು ಹೊರತು ಬೇರೇನನ್ನು ಕೇಳಲಿಲ್ಲ.

ಜೂಜಿನಲ್ಲಿ ಕಳೆದುಕೊಂಡಿದ್ದನ್ನು ಹಿಂದಿರುಗಿಪಡೆದುದರಿಂದ ಅದು ವರವೇ ಅಲ್ಲ ಎಂದು ಭಾಗವತ ಧರ್ಮಪಾಲನೆಯಾಗಿದೆ. ಅದನ್ನು ವರವೆಂದಿಟ್ಟುಕೊಂಡರೂ ಭಾಗವತ ಧರ್ಮಕ್ಕೆ ಚ್ಯುತಿ ಬರಲಿಲ್ಲ. ಏಕೆಂದರೆ ಕ್ಷತ್ರಿಯ ಸ್ತ್ರೀಗೆ ಮಾವನಿಂದ ಮೂರು ವರ ಪಡೆಯಲು ಭಾಗವತ ಧರ್ಮದಲ್ಲಿ ಒಪ್ಪಿಗೆ ಇದೆ. ಈಗ ದ್ರೌಪದಿ ಧರ್ಮರಾಜನ ಬಿಡುಗಡೆ, ಅವನ ತಮ್ಮಂದಿರ ಬಿಡುಗಡೆ ಮತ್ತು ರಾಜ್ಯ ಸಂಪತ್ತಿನ ಬಿಡುಗಡೆ ಎಂದು ಮೂರೇ ವರ ಪಡೆದಿದ್ದಾಳೆ. ಮಹಾಭಾರತದಲ್ಲಿಯೂ ದ್ರೌಪದಿ ಧರ್ಮರಾಜನ ಬಿಡುಗಡೆ, ಅವನ ಸೋದರರ ಬಿಡುಗಡೆ ಮತ್ತು ಆಯುಧ ರಥ ಮುಂತಾದವುಗಳ ಬಿಡುಗಡೆ ಎಂದು ಮೂರು ವರ ಕೇಳಿ ಹೆಚ್ಚಿನ ವರ ಬೇಡ, ಕ್ಷತ್ರಿಯ ಸ್ತ್ರೀಗೆ ಅದು ನಿಷಿದ್ಧ ಎನ್ನುತ್ತಾಳೆ-

ಏಕಮಾಹುರ್ವೈಶ್ಯವರಂ ದ್ವೌ ತು ಕ್ಷತ್ರಸ್ತ್ರಿಯಾ ವರೌ ।
ತ್ರಯಸ್ತು ರಾಜ್ಞೋ ರಾಜೇಂದ್ರ ಬ್ರಾಹ್ಮಣಸ್ಯ ಶತಂ ವರಾಃ ॥
(ಸಭಾ 93-.34)

'ರಾಜನಿಂದ ವೈಶ್ಯರು ಒಂದು ವರ, ಕ್ಷತ್ರಿಯಸ್ತ್ರೀ ಎರಡು ಅಥವಾ ಮೂರು ವರ, ಬ್ರಾಹ್ಮಣರು ನೂರು ವರ ಪಡೆಯಬಹುದು'. ದ್ರೌಪದಿ ಎರಡು ಬಾರಿ ವರ ಪಡೆದಿದ್ದಾಳೆ. ಪುನಃ ಮೂರನೆ ಬಾರಿ ನಾನು ಕೇಳಲಾರೆ ಎನ್ನುತ್ತಾಳೆ, ಭಾರತದಲ್ಲಿ.

ತತೋ ವಿಮುಕ್ತಾಃ ಪ್ರಯಯುಶ್ಚ ಪಾರ್ಥಾ
ಗುರೂನ್ ಪ್ರಣಮ್ಯ ಸ್ವಪುರಂ ಸಕೃಷ್ಣಾಃ ।
ದುರ್ಯೋಧನಾನಂತರಜೋ ಜಗಾದ
ತಾತಂ ನಿಜಂ ಪಾಪಕೃತಾಂ ಪ್ರಧಾನಃ ॥೩೯೧॥

ಆಗ ಪಾಂಡವರು ವಿಮುಕ್ತರಾಗಿ ಹಿರಿಯರನ್ನು ನಮಸ್ಕರಿಸಿ ದ್ರೌಪದಿಯೊಂದಿಗೆ ತಮ್ಮ ಪಟ್ಟಣಕ್ಕೆ ಹೊರಟರು. ಆಗ ಪಾಪಕಾರಿಗಳಲ್ಲಿ ಅಗ್ರಗಣ್ಯನಾದ ದುಃಶಾಸನ ಧೃತರಾಷ್ಟ್ರನ ಮುಂದೆ ನುಡಿದ.

ಎರಡನೇ ಜೂಜು

ಸಮಸ್ತ ಪಾಂಡವಶ್ರಿಯಂ ಸಮಾಗತಾಮಹೋ ಪುನಃ ।
ವ್ಯಮೋಚಯೋ ವೃಕೋದರಾದ್ವಧಶ್ಚ ನೋ ಧ್ರುವಂ ಭವೇತ್ ॥೯೨

ನಮ್ಮ ಕೈಗೇ ಬಂದಿದ್ದ ಪಾಂಡವರ ಎಲ್ಲ ಸಂಪತ್ತನ್ನೂ ಪುನಃ ಅವರಿಗೇ ಬಿಟ್ಟುಕೊಟ್ಟೆ! ಏನಾಶ್ಚರ್ಯ! ಇನ್ನು ಭೀಮನಿಂದ ನಮ್ಮ ವಧೆಯಾಗುವುದು ನಿಶ್ಚಿತ!

ಪಾಂಡವರಿಗೆ ಪರಮಾವಧಿ ವಿರೋಧವೆಸಗಿದ್ದಾಯಿತು. ಇನ್ನು ತುಳಿದ ಹಾವಿನಂತೆ ಕೆರಳಿದ ಅವರು ನಮ್ಮನ್ನು ಬಿಡುವರೆ? ಎಂದು ದುಃಶಾಸನನಿಗೆ ಭಯ.

ಅತಃ ಪುನಶ್ಚ ಪಾಂಡವಾನ್ ಸಮಾಹ್ವಯಸ್ವ ನಃ ಕೃತೇ ।
ಪುನಶ್ಚ ದೇವನಂ ಭವೇಜ್ಜಿತಾ ವನಂ ಪ್ರಯಾಂತು ಚ ॥೯೩॥

ಅದರಿಂದ ನಮಗಾಗಿ ಪಾಂಡವರನ್ನು ಪುನಃ ಕರೆಸು. ಇನ್ನೊಮ್ಮೆ ಜೂಜು ನಡೆಯಲಿ. ಸೋತವರು ಕಾಡಿಗೆ ಹೋಗಲಿ.

ತೇನೋಕ್ತಃ ಸ ತದಾ ರಾಜಾ ಪಾಂಡವಾನ್ ಪುನರಾಹ್ವಯತ್ ।
ಪುನಃ ಪಿತ್ರಾ ಸಮಾಹೂತೋ ದೇವನಾಯ ಯುಧಿಷ್ಠಿರಃ ॥೯೪॥
ಭ್ರಾತೃಭಿರ್ವಾರ್ಯಮಾಣೋಽಪಿ ಕೃಷ್ಣಯಾ ಚಾಗಮತ್ ಸಭಾಂ ।

ದುಃಶಾಸನ ಹೀಗೆ ಹೇಳಿದಾಗ ಧೃತರಾಷ್ಟ್ರ ಪಾಂಡವರನ್ನು ಪುನಃ ಕರೆಸಿದ. ದೊಡ್ಡಪ್ಪ ಪುನಃ ಜೂಜಿಗೆ ಕರೆದಾಗ ಧರ್ಮರಾಜ ಸೋದರರು ಮತ್ತು ದ್ರೌಪದಿ ತಡೆಯುತ್ತಿದ್ದರೂ ಸಭೆಗೆ ನಡೆದ.

ಸೋದರರು ದ್ರೌಪದಿ ಮಾತ್ರವಲ್ಲದೆ ಭೀಷ್ಮ ದ್ರೋಣ ವಿದುರ ಯುಯುತ್ಸು ಕೃಪ ಸಂಜಯ ಗಾಂಧಾರಿ ಕುಂತಿ ವಿಕರ್ಣ ಅಶ್ವತ್ಥಾಮ ಸೋಮದತ್ತ ಬಾಹ್ಲೀಕ ಎಲ್ಲರೂ ಯುಧಿಷ್ಠಿರನನ್ನು ತಡೆದರು. ಆದರೂ ಅವನು ಕೇಳಲಿಲ್ಲ.

ದೇವಕಾರ್ಯಾರ್ಥ ಸಿದ್ಧ್ಯರ್ಥಂ ಮುಹೂರ್ತಂ ಕಲಿರಾವಿಶತ್।
(ಸಭಾ.98.28)

ಮುಂದೆ ನಡೆಯಬೇಕಾದ ದೇವಕಾರ್ಯ, ಭೂಭಾರನಾಶ ನಡೆಯಲೇಬೇಕಾಗಿದೆ. ಅದಕ್ಕೆ ಹರೀಚ್ಛೆಯಿಂದ ಮುಹೂರ್ತಕಾಲ ಯುಧಿಷ್ಠಿರನಲ್ಲಿ ಕಲ್ಯಾವೇಶ ಉಂಟಾಯಿತು. 'ಜೂಜು ನಡೆಯಲಿ' ಎಂದ.

ದ್ವಾದಶಾಬ್ದಂ ವನೇ ವಾಸಮಜ್ಞಾತಂ ತ್ವೇಕವತ್ಸರಂ ॥೯೫॥

ವಾಸಂ ಪ್ರಸಿದ್ಧನೃಪತೇಃ ಪುರೇ ನೈವಾತಿದೂರತಃ ॥೩೯೬॥
ಕೃಷ್ಣಾಯಾಃ ಪಾಂಡವಾನಾಂ ವಾ ದರ್ಶನೇಽಜ್ಞಾತವಾಸಿನಾಂ ।
ಏಕಸ್ಯಾಪಿ ಸಮಸ್ತಾನಾಂ ದ್ವಾದಶಾಬ್ದಂ ಪುನರ್ವನಂ ॥೩೯೭॥
ವತ್ಸರಾಜ್ಞಾತವಾಸಂ ಚ ತ್ಯಾಗೇಽಪ್ಯುಕ್ತವಿಧೇಸ್ತಥಾ ।
ದುರ್ಯೋಧನಃ ಪಣಂ ಚಕ್ರೇ ಬುದ್ಧ್ಯಾ ದುಶ್ಶಾಸನೋಕ್ತಯಾ ॥೩೯೮॥

ಹನ್ನೆರಡು ವರ್ಷ ವನವಾಸ ಮಾಡಬೇಕು. ಹೆಚ್ಚು ದೂರವಿರದ ಒಬ್ಬ ಪ್ರಸಿದ್ಧ ರಾಜನ ಪಟ್ಟಣದಲ್ಲಿ ಒಂದು ವರ್ಷ ಅಜ್ಞಾತವಾಸ ಮಾಡಬೇಕು. ಅಜ್ಞಾತವಾಸ ಮಾಡುತ್ತಿರುವಾಗ ದ್ರೌಪದಿಯನ್ನಾಗಲಿ, ಪಾಂಡವರಲ್ಲಿ ಒಬ್ಬನನ್ನಾಗಲಿ ಇಲ್ಲವೆ ಎಲ್ಲರನ್ನೂ ನೋಡಿದರೆ ತಿರುಗಿ ಎಲ್ಲರೂ ಹನ್ನೆರಡು ವರ್ಷ ವನವಾಸವನ್ನೂ ಒಂದು ವರ್ಷ ಹಿಂದಿನಂತೆ ಅಜ್ಞಾತವಾಸವನ್ನೂ ಮಾಡಬೇಕು. ಈ ವನವಾಸ ಅಜ್ಞಾತವಾಸಗಳನ್ನು ನಡುವೆ ಬಿಟ್ಟರೆ ಪುನಃ ಪ್ರಾರಂಭದಿಂದಲೆ ಮಾಡಬೇಕು. ಹೀಗೆ ದುಃಶಾಸನನ ಸಲಹೆಯಂತೆ ದುರ್ಯೋಧನ ಪಣವನ್ನು ನಿರ್ಧರಿಸಿದ.

ಇದು ಒಂದು ಪಣ. ಸಮಸ್ತ ರಾಜ್ಯವನ್ನು ಕಳೆದುಕೊಳ್ಳುವುದು ಜೊತೆಗೆ ಇದ್ದೇ ಇದೆ.

ಪಾಂಡವರ ವನವಾಸ ಪ್ರಸ್ಥಾನ

ಗಾಂಧಾರೇಣ ಪುನಶ್ಚಾಕ್ಷಹೃದಯಜ್ಞೇನ ಧರ್ಮಜಃ ।
ಪರಾಜಿತೋ ವನಂ ಯಾತುಮೈಚ್ಛತ್ಸಭ್ರಾತೃಕೋ ಯದಾ ॥೩೯೯॥
ತದಾ ನನರ್ತ ಪಾಪಕೃತ್ಸುಯೋಧನಾನುಜೋ ಹಸನ್ ।
ಪದಂಶ್ಚ ಮಾರುತಾತ್ಮಜಂ ಪುನಃ ಪುನಶ್ಚ ಗೌರಿತಿ ॥೪೦೦॥

ಜೂಜಿನ ಮರ್ಮಜ್ಞನಾದ ಶಕುನಿಯಿಂದ ಯುಧಿಷ್ಠಿರ ಪುನಃ ಪರಾಜಿತನಾಗಿ ಸೋದರರೊಂದಿಗೆ ಕಾಡಿಗೆ ಹೋಗಲು ಬಯಸಿದಾಗ ಪಾಪಕಾರಿಯಾದ ದುಃಶಾಸನ ಅಟ್ಟಹಾಸ ಮಾಡುತ್ತ ಭೀಮನನ್ನು ಪುನಃ ಪುನಃ 'ಬಸವ ಬಸವ' ಎಂದೆನ್ನುತ್ತ ನರ್ತಿಸಿದ.

ಬಂದ ಅತಿಥಿಗಳಿಗೆ ಮಧುಪರ್ಕದಲ್ಲಿ 'ಗೌಃ ಗೌಃ ಗೌಃ' ಎಂದು ಮೂರು ಬಾರಿ ಹೇಳಿ ಒಂದು ಗೂಳಿಯನ್ನು ಉತ್ಸರ್ಜನ ಮಾಡುವುದು ರೂಢಿಯಲ್ಲಿತ್ತು. ಆ ಗೂಳಿ ಬೀದಿಬಸವನಾಗಿ ಸಂಚರಿಸುತ್ತದೆ. ಅದನ್ನು ಯಾರೂ ನೋಡಿಕೊಳ್ಳುವುದಿಲ್ಲ. ಅಂಥ ಬಸವನಂತೆ ಪಾಂಡವರು ಇನ್ನು ಅಲೆಯುತ್ತಾರೆ, ಯಾವ ಕೆಲಸಕ್ಕೂ ಬಾರದವರಾಗುತ್ತಾರೆ ಎಂದು ದುಃಶಾಸನ ಹಾಸ್ಯ ಮಾಡುತ್ತಾನೆ.

ಉವಾಚ ಚ ಪುನಃ ಕೃಷ್ಣಾಂ ನೃತ್ಯನ್ನೇವ ಸಭಾತಲೇ ।
ಅಪತಿರ್ಹ್ಯಸಿ ಕಲ್ಯಾಣಿ ಗಚ್ಛ ದುರ್ಯೋಧನಾಲಯಂ ॥೪೦೧॥
ಏತೇಽಖಿಲಾಃ ಷಂಢತಿಲಾಸ್ತಮೋಽಂಧಂ-
ಪ್ರಾಪ್ತಾ ನ ಚೈಷಾಂ ಪುನರುತ್ಥಿತಿಃ ಸ್ಯಾತ್ ।
ಇತಿ ಬ್ರುವಾಣೋಽನುಚಕಾರ ಭೀಮಂ
ತದಾಹಸನ್ ಧಾರ್ತರಾಷ್ಟ್ರಾಶ್ಚ ಸರ್ವೇ ॥೪೦೨॥

ಪುನಃ ಸಭಾಂಗಣದಲ್ಲಿ ಕುಣಿಯುತ್ತಲೇ ದುಃಶಾಸನ ದ್ರೌಪದಿಗೆ ಹೇಳಿದ, ಸುಂದರಿ, ನೀನು ಇನ್ನು ದುರ್ಯೋಧನನ ಮನೆಗೆ ಹೋಗು. ನಿನಗೆ ಇನ್ನು ಪತಿಗಳಿಲ್ಲ. ಇವರೆಲ್ಲರೂ ಎಣ್ಣೆ ಇಲ್ಲದ ಎಳ್ಳುಕಾಳುಗಳು. ನಪುಂಸಕರು. ಎಂದೂ ಮೇಲೇಳದಂಥ ದುಃಸ್ಥಿತಿಗೆ ಇಳಿದಿದ್ದಾರೆ. ಇನ್ನು ಮೇಲೇಳುವುದಿಲ್ಲ ಎಂದು ಹೇಳುತ್ತ ಭೀಮನ ನಡಿಗೆಯನ್ನು ತನ್ನ ನಡೆಯಿಂದ ಅಣಕಿಸಿದ. ಆಗ ಕೌರವರೆಲ್ಲರೂ ನಕ್ಕರು.

ತದಾಕರೋದ್ ಭೀಮಸೇನಃ ಪ್ರತಿಜ್ಞಾಂ
ಹಂತಾಸ್ಮಿ ವೋ ನಿಖಿಲಾನ್ ಸಂಗರೇಽಹಂ ।
ಇತೀರಿತೇ ಶರಣಂ ದ್ರೋಣಮೇವ
ಜಗ್ಮುಃ ಸಮಸ್ತಾ ಧೃತರಾಷ್ಟ್ರಪುತ್ರಾಃ ॥೪೦೩॥

ಆಗ ಭೀಮಸೇನ ಪ್ರತಿಜ್ಞೆ ಮಾಡಿದ, 'ನಾನು ಯುದ್ಧದಲ್ಲಿ ನಿಮ್ಮೆಲ್ಲರನ್ನೂ ಕೊಲ್ಲುತ್ತೇನೆ' ಎಂದು. ಭೀಮ ಹೀಗೆ ಹೇಳಿದಾಗ ಕೌರವರೆಲ್ಲರೂ ದ್ರೋಣನನ್ನು ಮೊರೆಹೊಕ್ಕರು.

ಯತ್ರ ದ್ರೋಣಸ್ತತ್ರ ಪುತ್ರಸ್ತತ್ರ ಭೀಷ್ಮಃ ಕೃಪಸ್ತಥಾ ।
ನ ಚಾತ್ಯೇತಿ ಗುರೂನ್ ಭೀಮ ಇತಿ ತಂ ಶರಣಂ ಯಯುಃ ॥೪೦೪॥

ಎಲ್ಲಿ ದ್ರೋಣನಿರುವನೋ ಅಲ್ಲಿ ಅಶ್ವತ್ಥಾಮ, ಅಲ್ಲಿ ಭೀಷ್ಮ ಕೃಪರು. ಭೀಮ ಈ ಎಲ್ಲ ಗುರಿಹಿರಿಯರನ್ನು ಅತಿಕ್ರಮಿಸುವುದಿಲ್ಲ ಎಂದು ಆಲೋಚಿಸಿ ಕೌರವರು ದ್ರೋಣನನ್ನೆ ಮೊರೆಹೊಕ್ಕರು.

ಅಬ್ರವೀದ್ ಧಾರ್ತರಾಷ್ಟ್ರಾಂಶ್ಚ ದ್ರೋಣೋ ವಿಪ್ರೋಽಪಿ ಸನ್ನಹಂ ।
ಸಪುತ್ರಃ ಸಕೃಪಃ ಶಸ್ತ್ರಂ ಗ್ರಹೀಷ್ಯೇ ಭವತಾಂ ಕೃತೇ ॥೪೦೫॥

ದ್ರೋಣ ಕೌರವರಿಗೆ ಹೇಳಿದ, 'ನಾನು ಬ್ರಾಹ್ಮಣನಾದರೂ ಅಶ್ವತ್ಥಾಮಕೃಪರೊಂದಿಗೆ ನಿಮಗಾಗಿ ಶಸ್ತ್ರ ಹಿಡಿಯುವೆನು.

ರಕ್ಷಣೇ ಭವತಾಂ ಚೈವ ಕುರ್ಯಾಂ ಯತ್ನಂ ಸ್ವಶಕ್ತಿತಃ ।
ನ ತು ಭೀಮಾದ್ ರಕ್ಷಿತುಂ ವಃ ಶಕ್ತಃ ಸತ್ಯಂ ಬ್ರವೀಮ್ಯಹಂ ॥೪೦೬॥

ನನ್ನ ಶಕ್ತಿ ಇದ್ದಷ್ಟು ನಿಮ್ಮ ರಕ್ಷಣೆಗೆ ಯತ್ನ ಮಾಡುವೆನು. ಆದರೆ ಭೀಮನಿಂದ ನಿಮ್ಮನ್ನು ರಕ್ಷಿಸಲು ನಾನು ಶಕ್ತನಲ್ಲ. ನಿಜವನ್ನೇ ಹೇಳುತ್ತಿದ್ದೇನೆ.

ತತೋ ಯಯುಃ ಪಾಂಡವಾಸ್ತೇ ಸಭಾಯಾ
ವನಾಯ ಕೃಷ್ಣಾಸಹಿತಾಃ ಸುಶೂರಾಃ ।
ಗತ್ಯಾನುಚಕ್ರೇ ಯುವಸಿಂಹಖೇಲ-
ಗತಿಂ ಭೀಮಂ ಧಾರ್ತರಾಷ್ಟ್ರೋಽಪಹಸ್ಯ ॥೪೦೭॥

ಅಷ್ಟರಲ್ಲಿ ಮಹಾಶೂರರಾದ ಪಾಂಡವರು ದ್ರೌಪದಿಯೊಂದಿಗೆ ಸಭೆಯಿಂದ ಕಾಡಿಗೆ ಹೊರಟರು. ದುರ್ಯೋಧನ ಯೌವನಭರಿತ ಸಿಂಹದಂತೆ ಗಂಭೀರ ನಡೆಯುಳ್ಳ ಭೀಮನನ್ನು ಅಣಕಿಸುತ್ತ ಅವನ ನಡಿಗೆಯನ್ನು ತನ್ನ ನಡಿಗೆಯಿಂದ ಅನುಕರಣ ಮಾಡಿದ.

ದೃಷ್ಟ್ವಾ ಸಭಾಯಾ ಅರ್ಧನಿಷ್ಕ್ರಾಂತದೇಹೋ
ವ್ಯಾವೃತ್ಯ ಭೀಮಃ ಪ್ರಾಹ ಸಂರಕ್ತನೇತ್ರಃ ।
ಊರುಂ ತವಾನ್ಯಂ ಚ ರಣೇ ವಿಭೇತ್ಸ್ಯ
ಇತ್ಯುಕ್ತ್ವಾಸೌ ನಿರ್ಗತೋಽಸತ್ಸಭಾಯಾಃ ॥೪೦೮॥

ಆಗ ಸಭಾಂಗಣದಿಂದ ಅರ್ಧ ಹೊರಗೆ ಹೋಗಿದ್ದ ಭೀಮ ಹಿಂತಿರುಗಿ ಕೆಂಗಣ್ಣಿಂದ ನೋಡುತ್ತ 'ನಿನ್ನ ಇನ್ನೊಂದು ತೊಡೆಯನ್ನು ಯುದ್ಧದಲ್ಲಿ ಮುರಿಯುವೆನು' ಎಂದ. ಹೀಗೆ ಹೇಳಿ ಆ ದುಷ್ಟಸಭೆಯಿಂದ ಹೊರಗೆ ನಡೆದ.

ಈ ಹಿಂದೆ ದುರ್ಯೋಧನ ದ್ರೌಪದಿಗೆ ಎಡ ತೊಡೆಯನ್ನು ತೋರಿದ್ದ. ಅದನ್ನು ಮುರಿವೆನೆಂದು ಭೀಮ ಆಗಲೆ ಪ್ರತಿಜ್ಞೆ ಮಾಡಿದ್ದ. ಇದೀಗ ತನ್ನ ನಡಿಗೆಯನ್ನು ಅಣಕಿಸಿದ್ದಕ್ಕೆ ಇನ್ನೊಂದು ತೊಡೆಯನ್ನೂ ಮುರಿವ ಪ್ರತಿಜ್ಞೆ ಮಾಡುತ್ತಾನೆ ಭೀಮ.

ಪ್ರಯಾತಾನನು ತಾನ್ ಕುಂತೀ ಪ್ರಯಯೌ ಪುತ್ರಗೃದ್ಧಿನೀ ।
ರೋರುದ್ಯಮಾನಾಂ ವಿದುರಃ ಸ್ಥಾಪಯಾಮಾಸ ತಾಂ ಗೃಹೇ ॥೪೦೯॥

ಮಕ್ಕಳನ್ನು ಪ್ರೀತಿಸುವ ತಾಯಿ ಕುಂತಿ ಕಾಡಿಗೆ ಹೊರಟ ಪಾಂಡವರನ್ನು ತಾನೂ ಅಳುತ್ತ ಹಿಂಬಾಲಿಸಿದಳು. ವಿದುರ ಅವಳನ್ನು ತಡೆದು ತನ್ನ ಮನೆಯಲ್ಲಿ ನಿಲ್ಲಿಸಿದ.

ಪಾಂಡವರು ನಡೆದ ರೀತಿ

ಪ್ರಣಮ್ಯ ತಾಂ ಯಯುಃ ಪಾರ್ಥಾಃ ಸಕೃಷ್ಣಾಃ ಶೀಘ್ರಗಾಮಿನಃ ।
ಯುಧಿಷ್ಠಿರೋಽವಾಗ್ವದನೋ ಯಯೌ ನ ಕ್ರೋಧಚಕ್ಷುಷಾ ।
ದಹೇಯಂ ಕೌರವಾನ್ಸರ್ವಾನಿತಿ ಕಾರುಣಿಕೋ ನೃಪಃ ॥೪೧೦॥

ಪಾಂಡವರು ದ್ರೌಪದೀ ಸಹಿತರಾಗಿ ಕುಂತಿಯನ್ನು ನಮಿಸಿ ಶೀಘ್ರವಾಗಿ ಹೆಜ್ಜೆಯಿಡುತ್ತ ಹೊರಟರು. ಧರ್ಮರಾಜ ಮುಖ ತಗ್ಗಿಸಿಕೊಂಡು ನಡೆದ. ಕೋಪದ ಕಣ್ಣಿಂದ ಎಲ್ಲ ಕೌರವರನ್ನೂ ಸುಡಬಾರದೆಂದು ಕರುಣಾಳುವಾದ ಯುಧಿಷ್ಠಿರ ಹಾಗೆ ಮಾಡಿದ.

ಭೀಮ ಕೋಪದಿಂದ ಕೌರವರನ್ನು ನೋಡುತ್ತಾನೆ-

ಕ್ರುದ್ಧಸ್ಯ ತಸ್ಯ ಸ್ರೋತೋಭ್ಯಃ ಕರ್ಣಾದಿಭ್ಯೋ ನರಾಧಿಪ।
ಸಧೂಮಃ ಸಸ್ಫುಲಿಂಗಾರ್ಚಿಃ ಪಾವಕಃ ಸಮಜಾಯತ।
ಭ್ರುಕುಟೀಕೃತ ದುಷ್ಪ್ರೇಕ್ಷ್ಯಮಭವತ್ ತಸ್ಯ ತನ್ಮುಖಂ।
ಯುಗಾಂತಕಾಲೇ ಸಂಪ್ರಾಪ್ತೇ ಕೃತಾಂತಸ್ಯೇವ ರೂಪಿಣಃ।

(ಸಭಾ 94.14)

'ಕೋಪಾಗ್ನಿಯಿಂದ ಮೈಯೆಲ್ಲ ಉರಿಯುತ್ತಿದ್ದ ಭೀಮನ ಕಣ್ಣು ಮೂಗು ಕಿವಿ ಮುಂತಾದ ದ್ವಾರಗಳಿಂದ ಬೆಂಕಿ ಹೊಗೆ ಕಿಡಿ ಜ್ವಾಲೆಗಳಿಂದ ಕೂಡಿ ಹೊರಗೆ ಕಾಣಿಸಿಕೊಂಡಿತು. ಹುಬ್ಬು ಗಂಟಿಕ್ಕಿದ್ದ ಆ ಭೀಮನ ಮುಖ ಪ್ರಳಯಕಾಲದ ಆ ಲಯಮೂರ್ತಿಯಂತೆ ನೋಡಲು ಅಸಾಧ್ಯವಾಗಿತ್ತು'

ಭೀಮ ಇಷ್ಟು ಕೋಪದಿಂದ ಕೌರವರನ್ನು ನೋಡಿದರೂ ಅವರು ಸುಟ್ಟು ಹೋಗುವುದಿಲ್ಲ. ಧರ್ಮರಾಜ ಕೋಪದಿಂದ ನೋಡಿದರೆ ಸುಟ್ಟುಹೋದಾರೆಂದು ಏಕೆ ಭಯ ಎಂಬ ಪ್ರಶ್ನೆ ಬರಬಹುದು. ಆದರೆ ಭೀಮ ವಿದ್ಯೆಯನ್ನು ತಪಸ್ಸನ್ನು ತನ್ನ ಜೀವನಕ್ಕಾಗಿ ಬಳಸಿಕೊಳ್ಳುವವನಲ್ಲ. ಅದರಿಂದ ಕೋಪದೊಂದಿಗೆ ತಪಸ್ಸು ಸೇರುವುದಿಲ್ಲ. ಧರ್ಮರಾಜ ತಪಸ್ಸನ್ನು ತನ್ನ ಜೀವನಕ್ಕಾಗಿ ಉಪಯೋಗಿಸಿಕೊಳ್ಳುವವನು. ಅದರಿಂದ ಕೋಪದಿಂದ ನೋಡಿದರೆ ಕೋಪದೊಂದಿಗೆ ತಪಸ್ಸೂ ಸೇರಿಕೊಂಡು ಕೌರವರನ್ನು ಸುಡಬಹುದು. ಹಂಸಕ್ಕೆ ನೀರನ್ನು ಬಿಟ್ಟು ಹಾಲನ್ನು ಮಾತ್ರ ಸ್ವೀಕರಿಸುವ ಸಾಮರ್ಥ್ಯ ಉಂಟು. ಹಾಗೇ ಭೀಮ ತಪಸ್ಸಿನ ಪುಣ್ಯವನ್ನು ಸೇರಿಸದೆ ಕೇವಲ ಕೋಪದಿಂದ ನೋಡಲು ಶಕ್ತನಾಗಿದ್ದಾನೆ. ಧರ್ಮರಾಜ ಇತರ ಪಕ್ಷಿಗಳಂತೆ ವಿವೇಚನೆ ಮಾಡಲು ಅಸಮರ್ಥ. ಅದರಿಂದ ಅವನು ಕೋಪದಿಂದ ನೋಡಿದರೆ ಕೌರವರು ಸುಟ್ಟುಹೋಗುವ ಸಂಭವವಿದೆ.[1]

1. ಭೀಮಸೇನೇನ ಕ್ರೋಧ ಚಕ್ಷುಷಾ ದರ್ಶನೇಪಿ ಕುತಃ ಕೌರವಾಣಾಂ ನ ದಾಹಃ ? ಧರ್ಮರಾಜಸ್ಯ ಕ್ರೋಧಚಕ್ಷುಷಾ ಕುತೋ ದಾಹಶಂಕೇತಿ ಚೇತ್ ಸತ್ಯಂ। ಭೀಮಸ್ಯ ವಿದ್ಯೋಪಜೀವನಾಭಾವತ್ ನ

ಆದರಿಂದ ಧರ್ಮರಾಜ ಮುಖವನ್ನು ತಗ್ಗಿಸಿ ಉತ್ತರೀಯದಿಂದ ಮುಚ್ಚಿಕೊಳ್ಳುತ್ತಾನೆ.

ಉದ್ಧೃತ್ಯ ಬಾಹೂ ಪ್ರಯಯೌ ಬಾಹುಶಾಲೀ ವೃಕೋದರಃ।
ಆಭ್ಯಾಮೇವಾಖಿಲಾನ್ ಶತ್ರೂನ್ ಶಕ್ತೋ ಹಂತುಮಹಂ ತ್ವಿತಿ ॥೪೧೧॥

ಬಾಹುಶಾಲಿಯಾದ ವೃಕೋದರ ಎರಡು ತೋಳುಗಳನ್ನು ಮೇಲೆತ್ತಿ ತೋರುತ್ತ ನಡೆದ. ಈ ಎರಡು ತೋಳುಗಳಿಂದಲೆ ಎಲ್ಲ ಶತ್ರುಗಳನ್ನು ಕೊಲ್ಲಲು ನಾನು ಶಕ್ತ ಎಂದು.

ಅಬದ್ಧಕೇಶಾ ಪ್ರಯಯೌ ದ್ರೌಪದೀ ಸಾ ಸಭಾತಲಾತ್ ।
ಮುಕ್ತಕೇಶಾ ಭವಿಷ್ಯಂತಿ ಧಾರ್ತರಾಷ್ಟ್ರಸ್ತ್ರಿಯಸ್ತ್ವಿತಿ ॥೪೧೨॥

ದ್ರೌಪದಿ ಮುಕ್ತಕೇಶಳಾಗಿಯೆ ಸಭಾಂಗಣದಿಂದ ಹೊರಟಳು. 'ಕೌರವರ ಹೆಂಡಿರು ಸದಾ ಮುಕ್ತ ಕೇಶರಾಗುವರು' ಎಂದು.

ದ್ರೌಪದಿ ಕೂದಲುಗಳಿಂದ ಮುಖ ಮುಚ್ಚಿಕೊಂಡು ಅಳುತ್ತ ನಡೆದಳು. 'ನಾನು ಈಗ ಕೆದರಿದ ಕೂದಲಿನವಳು ಏಕವಸ್ತ್ರೆ ರಜಸ್ವಲೆ ಅಳುತ್ತ ಹಸ್ತಿನಾವತಿಯಿಂದ ಹೊರಗೆ ಹೋಗುತ್ತಿದ್ದೇನೆ. ಹಾಗೇ ಕೌರವಸ್ತ್ರೀಯರು ರಣರಂಗದಲ್ಲಿ ಪತಿಸುತ ಬಂಧು ಬಾಂಧವರನ್ನೆಲ್ಲ ಕಳೆದುಕೊಂಡು ವಿಧವೆಯರಾಗಿ ಸದಾ ಕೆದರಿದ ಕೂದಲಿನವರಾಗಿ ಏಕವಸ್ತ್ರೆಯರಾಗಿ ಅಗಲಿದವರ ಶವದ ಮೇಲೆ ಹೊರಳಾಡಿ ಮೈಯೆಲ್ಲ ರಣರಂಗದ ದೂಳಿಂದ ರಜಸ್ವಲೆಯರಾಗಿ ಸತ್ತವರಿಗೆ ತಿಲೋದಕವಿತ್ತು ಹಸ್ತಿನಾವತಿಗೆ ಮರಳಬೇಕು' ಎನ್ನುವುದು ದ್ರೌಪದಿಯ ಭಾವವಾಗಿತ್ತು.

ವರ್ಷನ್ ಪಾಂಸೂನ್ ಯಯೌ ಪಾರ್ಥ ಇತ್ಥಂ ಶತ್ರುಷು ಸಾಯಕಾನ್ ।
ವರ್ಷಯಾಮೀತ್ಯಭಿಪ್ರಾಯಃ ಪರಮಾಸ್ತ್ರವಿದಾಂ ವರಃ ॥೪೧೩॥

ಮಹಾ ಅಸ್ತ್ರಜ್ಞರಲ್ಲಿಯೆ ಉತ್ತಮನಾದ ಅರ್ಜುನ ದಾರಿಯುದ್ದಕ್ಕೂ ಧೂಳೆರಚುತ್ತ ನಡೆದ. ಹೀಗೇ ಶತ್ರುಗಳ ಮೇಲೆ ನಾನು ಬಾಣಗಳನ್ನು ಎರಚುತ್ತೇನೆ ಎಂಬುದು ಅವನ ಭಾವವಾಗಿತ್ತು.

ಕ್ರೋಧ ಚಕ್ಷುಷಾ ತಪಸೋ ಮೇಲನಂ। ಅತೋ ನ ದಾಹಃ। ಧರ್ಮರಾಜಸ್ಯ ತು ವಿದ್ಯೋಪ ಜೀವಿತ್ವಾತ್ ಕ್ರೋಧೇನ ಸಹ ತಪೋ ಮಿಲಿತಂ ಗಚ್ಛೇದೇವ। ಅತಸ್ತಪಃ ಸಾಮರ್ಥ್ಯಾತ್ ದಾಹೋ ಭವೇದಿತಿ ವಿವೇಕ ಸಂಭವಾತ್। ಯಥಾ ಹಂಸಸ್ಯ ನೀರಂ ವಿಹಾಯ ಕ್ಷೀರ ಮಾತ್ರಾದಾನೇ ಶಕ್ತಿರಸ್ತಿ ತಥಾ ಶ್ರೀ ಭೀಮಸೇನಸ್ತಪೋಽಸಂಕಲಯ್ಯ ಕೇವಲಂ ಕ್ರೋಧಮೇವ ಕರ್ತುಂ ಶಕ್ನೋತಿ। ಧರ್ಮರಾಜಸ್ಯ ತು ಪಕ್ಷ್ಯಂತರವತ್ ನ ತಥಾ ವಿವೇಚನಶಕ್ತಿರಸ್ತಿ। ತಸ್ಮಾದ್ ಧರ್ಮರಾಜ ಕ್ರೋಧ ಏವ ದಾಹಶಂಕೇತಿ ಭಾವಃ। -ವಾದಿರಾಜೀಯ

ಯಮಾವವಾಙ್ಮುಖೌ ಯಾತೌ ನಾವಯೋಃ ಶತ್ರವೋ ಮುಖಂ ।
ಪಶ್ಯಂತ್ವಸ್ಯಾಮವಸ್ಥಾಯಾಮಿತ್ಯೇವ ಧೃತಚೇತಸೌ ॥೪೧೪॥

ನಕುಲ ಸಹದೇವರು ಮುಖ ತಗ್ಗಿಸಿಕೊಂಡು ನಡೆದರು. ಅವರು, ನಮ್ಮ ಶತ್ರುಗಳು ಇನ್ನುಮುಂದೆ ಈ ಅವಸ್ಥೆಯಲ್ಲಿ ನಮ್ಮ ಮುಖವನ್ನು ನೋಡುವಂತಾಗಬಾರದೆಂದು ಮನಸ್ಸಿನಲ್ಲಿ ಮಾಡಿಕೊಂಡಿದ್ದರು.

ಪ್ರೇತಸಂಸ್ಕಾರಸೂಕ್ತಾನಿ ಪಠನ್ ಧೌಮ್ಯೋಽಗ್ರತೋ ಯಯೌ ।
ಹತೇಷು ಧಾರ್ತರಾಷ್ಟ್ರೇಷು ಮಯಾ ಕಾರ್ಯಾಃ ಕ್ರಿಯಾ ಇತಿ ॥೪೧೫॥

ಶವಸಂಸ್ಕಾರ ಸೂಕ್ತಗಳನ್ನು ಪಠಿಸುತ್ತ ಧೌಮ್ಯರು ಮುಂದೆ ನಡೆದರು. ಕೌರವರು ಹತರಾದಾಗ ನಾನು ಈ ಕಾರ್ಯ ಮಾಡಬೇಕು ಎಂದು.

ತಾನಥಾನುಯಯುಃ ಸೂತಾ ರಥೈಃ ಪರಿಚತುರ್ದಶೈಃ ।
ಸೂದಾಃ ಪೌರೋಗವಾಶ್ಚೈವ ಭೃತ್ಯಾ ಯೇ ತ್ವಾಪ್ತಕಾರಿಣಃ ॥೪೧೬॥

ಪಾಂಡವರನ್ನು ಹದಿನಾಲ್ಕು ಉಪರಥಗಳಿಂದ ಕೂಡಿದ ಐದು ಮುಖ್ಯ ರಥಗಳಿಂದ ಸಾರಥಿಗಳೂ ಅಡಿಗೆಯವರೂ ಪಾಕಾಧ್ಯಕ್ಷರೂ ಬೇರೆ ಆಪ್ತರಾದ ಭೃತ್ಯರೂ ಹಿಂಬಾಲಿಸಿದರು.

ಪಾಂಡವರು ಹಸ್ತಿನಾಪುರದ ವರ್ಧಮಾನ ಎಂಬ ಹೆಬ್ಬಾಗಿಲಿನಿಂದ ಹೊರಗೆ ಬಂದು ಆಯುಧಪಾಣಿಗಳಾಗಿ ಉತ್ತರದಿಕ್ಕಿಗೆ ಹೊರಟರು. ಇಂದ್ರಸೇನ, ವಿಶೋಕ, ಪೂರು ಮುಂತಾದ ನಿಷ್ಠಾವಂತರಾದ ಪಾಂಡವರ ಸಾರಥಿಗಳು ಹದಿನಾಲ್ಕು ಉಪರಥಗಳಿಂದ ಯುಕ್ತವಾದ ಐದು ರಥಗಳಲ್ಲಿ ಜೊತೆಗೆ ಬಂದರು. ಹಿಂದಿನಿಂದ ಯುಧಿಷ್ಠಿರ. ಅವನ ಎರಡು ಪಾರ್ಶ್ವಗಳಲ್ಲಿ ಎರಡು ಉಪರಥಗಳು. ಮುಂದೆ ನಾಲ್ವರು ಪಾಂಡವರಿಗೆ ಪ್ರತಿಯೊಬ್ಬನಿಗೆ ಎರಡು ಪಾರ್ಶ್ವಗಳಲ್ಲಿ ಎರಡು ಉಪರಥಗಳು. ಹಿಂದೆ ಒಂದು ಉಪರಥ ಹೀಗೆ ಒಟ್ಟು ಹನ್ನೆರಡು ಉಪರಥಗಳು, ಯುಧಿಷ್ಠಿರನ ಎರಡು ಉಪರಥಗಳು ಸೇರಿದರೆ ಹದಿನಾಲ್ಕು ಉಪರಥಗಳಾಗುವುವು. ಐವರು ಪಾಂಡವರಿಗೂ ತಾವು ಕುಳಿತುಕೊಳ್ಳುವ ಪ್ರಧಾನ ರಥ ಬೇರೆಯೆ ಇದ್ದಿತು.[1]

ಈಗ ನಡೆದು ಹೋಗುತ್ತಿದ್ದ ಪಾಂಡವರನ್ನು ಅವರ ಸಾರಥಿಗಳು ರಥಗಳಲ್ಲಿ ಹಿಂಬಾಲಿಸಿ ಗೌರವ ತೋರಿದರು.

---

1. ಪರಿ ಪರಿತಶ್ಚತುರ್ದಶ ಸಂಖ್ಯಾಕಾ ಉಪರಥಾ ಯೇಷಾಂ ತೇ ತಥೋಕ್ತಾಸ್ತೈಃ ಪಂಚ ಪಾಂಡವಾನಾಂ ರಥೈಃ। ಧರ್ಮರಾಜಸ್ಯ ರಾಜತಯಾ ಪೃಷ್ಠಗಾಮಿತ್ವೇನ ಪೃಷ್ಠೇ ನ ರಥಾಂತರಾಪೇಕ್ಷಾ। ಅತಸ್ತಸ್ಯ ದ್ವಾವೇವ ಪಾರ್ಶ್ವೇ ರಥೌ। ಅನ್ಯೇಷಾಂ ಯೋದ್ಧೃತಯಾ ಏಕಃ ಪೃಷ್ಠೇ ರಥಃ। ದ್ವೌ ದ್ವೌ ಪಾರ್ಶ್ವಯೋಃ। ಏವಂ ಚತುರ್ದಶ ಉಪರಥಾ ಇತಿ ಜ್ಞೇಯಂ । -ವಾದಿರಾಜೀಯ

ತತಸ್ತೇ ಜಾಹ್ನವೀತೀರೇ ವನೇ ವಟಮುಪಾಶ್ರಿತಾಃ ।
ನ್ಯಷೀದನ್ನಾಗತಾನ್ ದೃಷ್ಟ್ವಾ ಸಮಸ್ತಾನ್ ಪುರವಾಸಿನಃ ॥೪೧೭॥

ಬಳಿಕ ಪಾಂಡವರು ಎಲ್ಲ ನಗರವಾಸಿಗಳೂ ತಮ್ಮನ್ನು ಹಿಂಬಾಲಿಸಿ ಬಂದುದನ್ನು ಕಂಡು ಗಂಗಾನದೀತೀರದ ಕಾಡಿನಲ್ಲಿ ಒಂದು ಆಲದ ಮರದ ಬುಡವನ್ನಾಶ್ರಯಿಸಿ ಕುಳಿತರು.

ತತಸ್ತು ತೇ ಸರ್ವಜಗನ್ನಿವಾಸಂ
ನಾರಾಯಣಂ ನಿತ್ಯಸಮಸ್ತ ಸದ್ಗುಣಂ ।
ಸ್ವಯಂಭುಶರ್ವಾದಿಭಿರರ್ಚಿತಂ ಸದಾ
ಭಕ್ತ್ಯಾಸ್ಮರನ್ ಭಕ್ತಭವಾಪಹಂ ಪ್ರಭುಂ ॥೪೧೮॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಪಾಂಡವವನಪ್ರವೇಶೋ ನಾಮ
ಏಕವಿಂಶೋಽಧ್ಯಾಯಃ ॥

ಸರ್ವ ಜಗನ್ನಿವಾಸನೂ ನಿತ್ಯ ಸಕಲ ಸದ್ಗುಣನೂ ಸದಾ ಬ್ರಹ್ಮ ರುದ್ರಾದಿಗಳಿಂದ ಪೂಜಿತನೂ ಭಕ್ತರ ಸಂಸಾರವನ್ನು ಕಳೆವವನೂ ಆದ ಪ್ರಭು ನಾರಾಯಣನನ್ನು ಪಾಂಡವರು ಭಕ್ತಿಯಿಂದ ನೆನೆದರು.

ಇಲ್ಲಿಗೆ ಶ್ರೀಮದಾನಂದತೀರ್ಥ ಭಗವತ್ಪಾದರು ರಚಿಸಿದ
ಶ್ರೀಮನ್ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಪಾಂಡವವನಪ್ರವೇಶವೆಂಬ
ಇಪ್ಪತ್ತೊಂದನೆ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೨

ಶ್ರೀರಾಘವೇಂದ್ರಯತಿವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ಭಾವಸಂಗ್ರಹಃ

ಪಾರ್ಥಾ ಯಾತಾ ಅರಣ್ಯಂ ನಿಹತನಿಶಿಚರಾಃ ಪ್ರೀಣಯಂತೋ ದ್ವಿಜೌಘಾನ್
ವಾರ್ತಾಂ ಶ್ರುತ್ವಾ ಸ್ವಕೀಯಾಂ ಉಪಗತ ಹರಿಣಾ ಮಾನಿತಾಃ ಸಿಂಧುರಾಜಂ ।
ಜಿತ್ವಾ ದುರ್ಯೋಧನಾದೀನ್ ಹರಿಹಯಪುರುಷವ್ರಾತಬದ್ಧಾನ್ ವಿಮೋಚ್ಯ
ಪ್ರಾಪ್ತಾ ಧರ್ಮಾತ್ ಪ್ರಸಾದಂ ಯಮಥ ಮುರರಿಪುಂ ತುಷ್ಟುವುಸ್ತಂ ಪ್ರಪದ್ಯೇ ॥೨೨॥

ಪಾಂಡವರು ಅರಣ್ಯಕ್ಕೆ ಹೋಗಿ ರಾಕ್ಷಸರನ್ನು ಕೊಂದು ಬ್ರಾಹ್ಮಣ ಸಮೂಹಗಳನ್ನು ಸಂತೋಷಪಡಿಸಿದರು. ತಮ್ಮ ವಾರ್ತೆಯನ್ನು ಕೇಳಿ ಬಂದ ಶ್ರೀಕೃಷ್ಣನಿಂದ ಸತ್ಕೃತರಾದರು. ಜಯದ್ರಥನನ್ನು ಗೆದ್ದು ಗಂಧರ್ವ ಸಮೂಹಗಳಿಂದ ಬದ್ಧರಾದ ದುರ್ಯೋಧನಾದಿಗಳನ್ನು ಬಿಡಿಸಿ ಯಮನಿಂದ ಅನುಗ್ರಹವನ್ನು ಪಡೆದರು. ಕೃಷ್ಣನನ್ನು ಸ್ತುತಿಸಿದರು. ಇಂಥ ಶ್ರೀಕೃಷ್ಣನನ್ನು ಶರಣು ಹೊಂದುತ್ತೇನೆ.

ಶ್ರೀಮದಾನಂದತೀರ್ಥ ಭಗವತ್ಪಾದ ಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೨೨

ಅರಣೇ ಪ್ರಾಪ್ತಿ

॥ ಶ್ರೀಗುರುಭ್ಯೋ ನಮಃ ಹರಿಃ ಓಂ ॥

ಕಿರ್ಮೀರ ವಧ

ಓಂ ಆಗಂತುಕಾಮಾನ್ ಪುರವಾಸಿನಸ್ತೇ
ಸಂಸ್ಥಾಪ್ಯ ಕೃಚ್ಛ್ರೇಣ ಕುರುಪ್ರವೀರಾಃ ।
ರಾತ್ರೌ ಪ್ರವಿಷ್ಟಾ ಗಹನಂ ವನಂ ಚ
ಕಿರ್ಮೀರಮಾಸೇದುರಥೋ ನರಾಶಂ ॥೧॥

ಪಾಂಡವರು ತಮ್ಮ ಜೊತೆಗೆ ಕಾಡಿಗೆ ಬರಲು ಬಯಸಿದ ನಗರವಾಸಿಗಳನ್ನು ಕಷ್ಟದಿಂದ ತಡೆದು ನಿಲ್ಲಿಸಿ ರಾತ್ರಿಯಲ್ಲಿ ದಟ್ಟವಾದ ಕಾಡನ್ನು ಪ್ರವೇಶಿಸಿದರು. ಅಲ್ಲಿ ಕಿರ್ಮೀರನೆಂಬ ನರಭಕ್ಷಕ ರಾಕ್ಷಸನನ್ನು ಸಂಧಿಸಿದರು.

ಹಸ್ತಿನಾವತಿಯಿಂದ ಹೊರಟ ಪಾಂಡವರು ಮೂರುದಿನ ಪ್ರಯಾಣ ಮಾಡಿ ಕಾಮ್ಯಕವನವೆಂಬ ಕಾಡಿಗೆ ಬಂದರು. ಅದು ಕಿರ್ಮೀರನೆಂಬ ನರಭಕ್ಷಕ ರಾಕ್ಷಸನ ವಾಸಸ್ಥಾನವಾಗಿತ್ತು. ನಡುರಾತ್ರಿಯಲ್ಲಿ ಕೊಳ್ಳಿಹಿಡಿದು ಪ್ರತ್ಯಕ್ಷನಾದ ರಾಕ್ಷಸ.

ಬಕಾನುಜೋಽಸೌ ನಿಖಿಲೈರಜೇಯೋ
ವರಾದ್ ಗಿರೀಶಸ್ಯ ನಿಹಂತುಕಾಮಃ ।
ಸದಾರಸೋದರ್ಯಮಭಿಪ್ರಸಸ್ರೇ
ಭೀಮಂ ಮಹಾವೃಕ್ಷಗಿರೀನ್ ಪ್ರಮುಂಚನ್ ॥೨॥

ಕಿರ್ಮೀರ ಬಕಾಸುರನ ತಮ್ಮ. ರುದ್ರನ ವರಬಲದಿಂದ ಎಲ್ಲರಿಗೂ ಅಜೇಯನಾಗಿದ್ದ. ಪತ್ನೀ ಸೋದರರ ಸಮೇತ ಭೀಮನನ್ನು ಕೊಲ್ಲಲು ಬಯಸಿ ಅವನು ದೊಡ್ಡ ಮರಗಳನ್ನೂ ಬೆಟ್ಟಗಳನ್ನೂ ಎಸೆಯುತ್ತ ಇದಿರಿಗೆ ಬಂದ.

ಕಿರ್ಮೀರ ಬಕಾಸುರನ ತಮ್ಮ. ಹಿಡಿಂಬಾಸುರನ ಮಿತ್ರ. ಭೀಮ ಇಬ್ಬರನ್ನೂ ಕೊಂದು ಹಿಡಿಂಬಿಯನ್ನು ಅಪಹರಿಸಿದನೆಂದು ಅವನಿಗೆ ಕೋಪ. ಅವನ ಮಾಯೆಯನ್ನು ಧೌಮ್ಯರು ಮಂತ್ರ ಬಲದಿಂದ ನಾಶಪಡಿಸಿದರು.

ಆಗ ಧರ್ಮರಾಜ ರಾಕ್ಷಸನ ಪರಿಚಯವನ್ನು ಅವನ ಮುಖದಿಂದಲೆ ಕೇಳಿ ತಿಳಿದ. ತನ್ನ ಪರಿಚಯವನ್ನೂ ಹೇಳಿದ. ತನಗೆ ಭೀಮ ಸಿಕ್ಕಿದ್ದು ಬಹಳ ಸಂತೋಷ. ಅವನನ್ನು ಕೊಂದು ಬಕಹಿಡಿಂಬರಿಗೆ ರಕ್ತದ ತರ್ಪಣ ನೀಡುತ್ತೇನೆ. ತಿಂದು ಅಗಸ್ತ್ಯನಂತೆ ಅರಗಿಸಿಕೊಳ್ಳುತ್ತೇನೆ ಎನ್ನುತ್ತ ಆಕ್ರಮಣ ಮಾಡಿದ. ದ್ರೌಪದಿ ಅವನನ್ನು ಕಂಡು ಭಯದಿಂದ ಕಣ್ಮುಚ್ಚಿ ಮೂರ್ಛೆ ಹೋದಂತೆ ತೋರಿಕೊಂಡುದನ್ನು ಕಂಡು ಭೀಮ ಕ್ರುದ್ಧನಾಗಿ ರಾಕ್ಷಸನನ್ನು ಇದಿರಿಸಿದ. 'ಕಿರ್ಮೀರಂ ದುರ್ಮತೀನಾಂ ಪ್ರಥಮಂ' ಕಿರ್ಮೀರ ದುರ್ಜನಾಗ್ರೇಸರ' ಎಂದು ಹರಿವಾಯುಸ್ತುತಿ ಹೇಳಿದೆ.

ಸ ಸಂಪ್ರಹಾರಂ ಸಹ ತೇನ ಕೃತ್ವಾ
ಭೀಮೋ ನಿಪಾತ್ಯಾಶು ಧರಾತಲೇ ತಂ ।
ಚಕ್ರೇ ಮಖೇ ಸಂಗರನಾಮಧೇಯೇ
ಪ್ರಸಹ್ಯ ನಾರಾಯಣದೈವತೇ ಪಶುಂ ॥೩॥

ಭೀಮ ಕಿರ್ಮೀರನೊಡನೆ ಹೋರಾಡಿ ಬೇಗನೆ ನೆಲದ ಮೇಲೆ ಕೆಡವಿ ನಾರಾಯಣ ದೇವತಾಕವಾದ ಯುದ್ಧವೆಂಬ ಯಜ್ಞದಲ್ಲಿ ಅವನನ್ನು ಬಲಾತ್ಕಾರವಾಗಿ ಬಲಿಪಶುವನ್ನಾಗಿ ಮಾಡಿದ.

ಯಜ್ಞದಲ್ಲಿ ಬಲಿಪಶುವನ್ನು ಶಸ್ತ್ರದಿಂದ ಗಾಯಮಾಡದೆ ಗಂಟಲು ಒತ್ತಿ ಕೊಲ್ಲುವಂತೆ ಕಿರ್ಮೀರನನ್ನೂ ಭೀಮ ಹಾಗೇ ಗಂಟಲು ಹಿಚುಕಿಯೆ ಕೊಂದ. ಯುದ್ಧವೆಂಬ ಯಜ್ಞದಲ್ಲಿ ಈತ ಪಶುವೆಂಬ ಭಾವನೆಯಿಂದಲೇ ಭೀಮ ಹಾಗೆಮಾಡಿದ. 'ಪಶುಮಾರಮಮಾರಯತ್' ಎಂದು ಮಹಾಭಾರತ ಇದನ್ನು ಹೇಳಿದೆ. ಬಕನನ್ನು ಭೀಮ ಮಂತ್ರ ಬಲದಿಂದ ಕೊಂದನೆಂದು ತಿಳಿದಿದ್ದ ಕಿರ್ಮೀರನಿಗೆ ದೇಹಬಲವನ್ನೇ ತೋರಿದ ಭೀಮ.

ಅಕ್ಷಯ ಪಾತ್ರೆ

ನಿಹತ್ಯ ರಕ್ಷೋ ವನಮಧ್ಯಸಂಸ್ಥಾ-
ಸ್ತದಾ ಯತೀನಾಮಯುತೈಃ ಸಮೇತಾಃ ।
ಅಶೀತಿಸಾಹಸ್ರಮುನಿಪ್ರವೀರೈ
ರ್ದಶಾಂಶಯುಕ್ತೈಃ ಸಹಿತಾ ವ್ಯಚಿಂತಯನ್ ॥೪॥

ಪಾಂಡವರು ಕಿರ್ಮೀರನನ್ನು ಕೊಂದ ಬಳಿಕ ತಮ್ಮೊಡನೆ ಬಂದಿದ್ದ ಹತ್ತು ಸಾವಿರ ಯತಿಗಳ ಮತ್ತು ಎಂಬತ್ತೆಂಟು ಸಾವಿರ ಮುನೀಶ್ವರರ ಜೊತೆಗೆ ಅರಣ್ಯಮಧ್ಯದಲ್ಲಿ ವಾಸಮಾಡುತ್ತ ಅವರ ಪೋಷಣೆಯ ಬಗ್ಗೆ ಚಿಂತಿಸಿದರು.

ವಿಚಿಂತ್ಯ ತೇಷಾಂ ಭರಣಾಯ ಧರ್ಮಜಃ
ಸಂಪೂಜ್ಯ ಸೂರ್ಯಸ್ಥಿತಮಚ್ಯುತಂ ಪ್ರಭುಂ।
ದಿನೇಕಕ್ಷಯಾನ್ನಂ ಪಿಠರಂ ತದಾಪ
ರತ್ನಾದಿದಂ ಕಾಮವರಾನ್ನದಂ ಚ ॥೫॥

ಆ ಯತಿಗಳ ಮತ್ತು ಮುನಿಗಳ ಪೋಷಣೆಗೆ ತಕ್ಕ ಉಪಾಯವನ್ನು ಆಲೋಚಿಸಿ ಹಗಲಿನಲ್ಲಿ ಸೂರ್ಯಾಂತರ್ಗತನಾದ ಪ್ರಭು ಶ್ರೀ ನಾರಾಯಣನನ್ನು ಆರಾಧಿಸಿ ಪ್ರತಿದಿನವೂ ಅಕ್ಷಯ ಅನ್ನವನ್ನೂ ಬೇಕಾದ ಉತ್ತಮ ಭಕ್ಷ್ಯಾದಿಗಳನ್ನೂ ರತ್ನ ಮುಂತಾದವುಗಳನ್ನೂ ಕೊಡಬಲ್ಲ ಒಂದು ಅಕ್ಷಯಪಾತ್ರೆಯನ್ನು ಪಡೆದರು.

ಧೌಮ್ಯರು ಧರ್ಮರಾಜನಿಗೆ 'ಓಂ ಘೃಣಿಃ ಸೂರ್ಯ ಆದಿತ್ಯಃ' ಎಂಬ ಅಷ್ಟಾಕ್ಷರ ಸೌರಮಂತ್ರವನ್ನು ಮತ್ತು,

ಸೂರ್ಯೋರ್ಯಮಾ ಭಗಸ್ತ್ವಷ್ಟಾ ಪೂಷಾರ್ಕಃ ಸವಿತಾ ರವಿಃ।

ಎಂದು ಮುಂತಾಗಿ ಸೂರ್ಯಾಷ್ಟೋತ್ತರ ಶತನಾಮ ಸ್ತೋತ್ರವನ್ನು ಉಪದೇಶಿಸುತ್ತಾರೆ. ಧರ್ಮರಾಜ ಗಂಗಾಜಲದಲ್ಲಿ ಸೂರ್ಯಾಭಿಮುಖನಾಗಿ ನಿಂತು ಮಂತ್ರವನ್ನು ಜಪಿಸಿ ಸ್ತೋತ್ರಮಾಡಿದ. ಸೂರ್ಯನಾರಾಯಣ ಪ್ರತ್ಯಕ್ಷವಾಗಿ ಒಂದು ತಾಮ್ರಪಾತ್ರೆಯನ್ನು[1] ಕೊಟ್ಟು, 'ನಿನಗೆ ನಾನು ಈ ಪಾತ್ರೆಯ ಮೂಲಕ ಹನ್ನೆರಡು ವರ್ಷಕಾಲ ಅಕ್ಷಯವಾದ ಅನ್ನನೀಡುತ್ತೇನೆ, ದ್ರೌಪದಿ ಅದರಲ್ಲಿ ಪಕ್ವಾನ್ನಗಳನ್ನೂ ಭಕ್ಷ್ಯ ಭೋಜ್ಯಗಳನ್ನೂ ಕಂದಮೂಲ ಫಲಾದಿಗಳನ್ನೂ ಬಡಿಸಲಿ, ಅವು ಅಕ್ಷಯವಾಗುತ್ತವೆ' ಎಂದ.

[2]ಇದು ಅನ್ನ ಬಡಿಸುವ ಪಾತ್ರೆ. ಈ ಪಾತ್ರೆಯಲ್ಲಿ ಹಾಕಿದ ಸ್ವಲ್ಪ ಅನ್ನವೂ ಅಕ್ಷಯವಾಗುತ್ತಿತ್ತು. ಇಷ್ಟು ಮಾತ್ರವಲ್ಲದೆ ಅಪೇಕ್ಷಿತವಾದ ಮುತ್ತುರತ್ನಾದಿಗಳನ್ನೂ ಗೋವುಗಳನ್ನೂ ಚಿಂತಾಮಣಿಯಂತೆ ಕೊಡುತ್ತಿತ್ತು. ಅದರಿಂದ ಧರ್ಮರಾಜ ಬ್ರಾಹ್ಮಣರಿಗೆ ಅವರು ಬೇಡುವುದನ್ನೆಲ್ಲ ಕೊಡುತ್ತಿದ್ದ.

---

1. ದಿನೇ ಅಹ್ನಿ ಸಂಪೂಜ್ಯ ಪಿಠರಂ ತಾಮ್ರಮಯಪಾತ್ರಮಾಪೇತ್ಯರ್ಥಃ। ಗೃಹ್ಣೀಷ್ವ ಪಿಠರಂ ತಾಮ್ರಂ ಮಯಾ ದತ್ತಂ ನರಾಧಿಪೇತ್ಯಾರಣ್ಯಪರ್ವವಚನಾತ್। -ತಾಮ್ರಪರ್ಣೀಯ
2. ಗವಾಂ ಚೇತಿ। ಸ್ವಗೃಹೇ ಇತಿ ಶೇಷಃ। ಯದ್ವಾ ವನಮಾಪ್ಯಾಪಿ ಗವಾಂ ಲಕ್ಷಮಿತ್ಯಾದಿ ದದಾತೀತ್ಯರ್ಥಃ। ಏವಂ ದಿನಕರಾತ್ ಪ್ರಾಪ್ಯ ದಿವಾಕರಸಮದ್ಯುತಿಃ। ಕಾಮಾನ್ ಮನೋಽಭಿಲಷಿತಾನ್ ಬ್ರಾಹ್ಮಣೇಭ್ಯೋಽದದಾತ್ ಪ್ರಭುರಿತಿ ಭಾರತವಚನಾತ್ ಪಾತ್ರಮಹಿಮ್ನಾಪೇಕ್ಷಿತ ದಾನಸಂಭವಾತ್। -ತಾಮ್ರಪರ್ಣೀಯ

ಬಭಾರ ತೇನೈವ ಯುಧಿಷ್ಠಿರಸ್ತಾನ್
ಪ್ರತೇಕಶಸ್ತ್ರಿಂಶತದಾಸದಾಸಿಕಾನ್ ।
ಸುವರ್ಣಪಾತ್ರೇಷು ಹಿ ಭುಂಜತೇ ಯೇ
ಗೃಹೇ ತದೀಯೇ ಬಹುಕೋಟಿದಾಸಕೇ ॥೬॥

ಹಿಂದೆ ಕೋಟಿಗಟ್ಟಲೆ ದಾಸರುಗಳಿದ್ದ ತನ್ನ ಅರಮನೆಯಲ್ಲಿ ಪ್ರತಿಯೊಬ್ಬರೂ ಪ್ರತ್ಯೇಕವಾಗಿ ಮೂವತ್ತು ಮಂದಿ ದಾಸದಾಸಿಯರುಗಳಿಂದ ಯುಕ್ತರಾಗಿದ್ದು ಸುವರ್ಣ ಪಾತ್ರೆಗಳಲ್ಲಿ ಅನ್ನ ಉಣ್ಣುತ್ತಿದ್ದ ಆ ಯತಿಗಳು ಮುಂತಾದವರನ್ನು ಯುಧಿಷ್ಠಿರ ಅರಣ್ಯದಲ್ಲಿಯೂ ಆ ಅಕ್ಷಯ ಪಾತ್ರೆಯ ಬಲದಿಂದ ಹಾಗೇ ಪೋಷಿಸಿದ.

[1]ಈ ಯತಿಗಳೂ ಮುನಿಗಳೂ ಈಗ ಹೊಸದಾಗಿ ಬಂದವರಲ್ಲ. ಹಿಂದೆ ಇಂದ್ರಪ್ರಸ್ಥದಲ್ಲಿಯೂ ಯುಧಿಷ್ಠಿರ ಅವರನ್ನು ತನ್ನ ಅರಮನೆಯಲ್ಲಿ ಇರಿಸಿಕೊಂಡು ಪ್ರತಿಯೊಬ್ಬರಿಗೂ ಮೂವತ್ತು ಮಂದಿ ದಾಸದಾಸಿಯರನ್ನು ಕೊಟ್ಟು ಪ್ರತಿದಿನ ದ್ರೌಪದಿಯ ಹಸ್ತದಿಂದ ಪಾಕವಾದ ಪವಿತ್ರವಾದ ಅನ್ನವನ್ನು ಸುವರ್ಣಪಾತ್ರೆಯಲ್ಲಿ ಉಣಿಸಿ ಸಾಕುತ್ತಿದ್ದ. ಅವರೆಲ್ಲರೂ ಈಗ ಅವನ ವಿರಹವನ್ನು ಸಹಿಸಲಾರದೆ ಅವನೊಂದಿಗೆ ಕಾಡಿಗೂ ಬಂದಿದ್ದರು. ಜ್ಞಾನಿಗಳಾದ ಅವರನ್ನು ಧರ್ಮರಾಜ ತಡೆಯಲಿಲ್ಲ. ಉಳಿದ ನಗರವಾಸಿಗಳನ್ನೆಲ್ಲ ಹಿಂದಕ್ಕೆ ಕಳಿಸಿದ್ದ.

ಪ್ರತಿದಿನ ಧರ್ಮರಾಜ ಎಲ್ಲ ಬ್ರಾಹ್ಮಣರನ್ನೂ ತಮ್ಮಂದಿರನ್ನೂ ಉಣಿಸಿ ಬಳಿಕ ತಾನು ಉಣ್ಣುತ್ತಾನೆ. ಬಳಿಕ ದ್ರೌಪದಿ ಉಣ್ಣುತ್ತಾಳೆ. ಆದಾದ ಬಳಿಕ ಆ ಪಾತ್ರೆಯಲ್ಲಿ ಅನ್ನ ಬಡಿಸಿದರೆ ಅಕ್ಷಯವಾಗುತ್ತಿರಲಿಲ್ಲ.

ಅರಣ್ಯದಲ್ಲಿ ಸ್ವರ್ಗಸುಖ

ಸತ್ಸಂಗಮಾಕಾಂಕ್ಷಿಣ ಏವ ತೇಽವಸನ್
ಪಾರ್ಥೈಃ ಸಹಾನ್ಯೇ ಚ ಮುನೀಂದ್ರಬೃಂದಾಃ ।
ಶೃಣ್ವಂತ ಏಭ್ಯಃ ಪರಮಾರ್ಥಸಾರಾಃ
ಕಥಾ ವದಂತಶ್ಚ ಪುರಾತನಾಸ್ತಥಾ ॥೭॥

ಆ ಯತಿಗಳೂ ಬೇರೆ ಮುನೀಶ್ವರರ ಸಮೂಹಗಳೂ ಸರ್ವೋತ್ತಮನಾದ ಶ್ರೀಹರಿಯ

---

1. ತೇ ಚ ಋಷಯೋ ನಾಗಂತುಕಾ ಇತ್ಯಾಹ ಸುವರ್ಣೇತಿ। ತದೀಯೇ ಗೃಹೇ ಯುಧಿಷ್ಠಿರ ಗೃಹೇ। ತದುಕ್ತಂ ಭಾರತೇ- ಅಷ್ಟಾಶೀತಿ ಸಹಸ್ರಾಣಿ ಸ್ನಾತಕಾ ಗೃಹಮೇಧಿನಃ। ತ್ರಿಂಶದ್ದಾಸಿಕ ಏಕೈಕಸ್ತಾನ್ ಬಿಭರ್ತಿ ಯುಧಿಷ್ಠಿರಃ। ದಶಾನ್ಯಾನಿ ಸಹಸ್ರಾಣಿ ನಿತ್ಯಮಾಗ್ರಾ ಯನ್ನಮುತ್ತಮಂ। ಭುಂಜತೇ ರುಕ್ಮಪಾತ್ರ್ಯಾಭಿರ್ಯುಧಿಷ್ಠಿರ ನಿವೇಶನ ಇತಿ। -ತಾಮ್ರಪರ್ಣೀಯ

ಕುರಿತಾದ ಮಾತುಕತೆಗಳನ್ನು ಪಾಂಡವರಿಂದ ಕೇಳುತ್ತಲೂ ಅವರಿಗೆ ಪ್ರಾಚೀನ ಕಥೆಗಳನ್ನು ಹೇಳುತ್ತಲೂ ಕೇವಲ ಸತ್ಸಂಗದಲ್ಲಿ ಇರುವುದನ್ನು ಬಯಸಿಯೆ ಅವರೊಂದಿಗೆ ವಾಸ ಮಾಡಿದರು.

ಏವಂ ಗಜಾನಾಂ ಬಹುಕೋಟಿಬೃಂದಾನ್
ತಥಾ ರಥಾನಾಂ ಚ ಹಯಾಂಶ್ಚ ಬೃಂದಶಃ।
ವಿಸೃಜ್ಯ ರತ್ನಾನಿ ನರಾಂಶ್ಚ ಬೃಂದಶೋ
ವನೇ ವಿಜಹ್ರುರ್ದಿವಿ ದೇವವತ್ಸುಖಂ ॥೮॥

ಹಿಂದೆ ಇಂದ್ರಪ್ರಸ್ಥದಲ್ಲಿದ್ದ ಬಹು ಕೋಟಿ ವೃಂದ ಆನೆ ರಥಗಳನ್ನೂ ವೃಂದ ಕುದುರೆಗಳನ್ನೂ ವೃಂದ ದಾಸದಾಸಿಯರನ್ನೂ ರತ್ನಗಳನ್ನೂ ಪರಿತ್ಯಜಿಸಿ ಪಾಂಡವರು ಕಾಡಿನಲ್ಲಿಯೂ ಹೀಗೆ ಸ್ವರ್ಗದಲ್ಲಿ ದೇವತೆಗಳಂತೆ ಸುಖವಾಗಿಯೆ ವಿಹರಿಸಿದರು.

ವೃಂದವೆಂದರೆ ಒಂದು ಸಂಖ್ಯೆ. ಹತ್ತು ಕೋಟಿ ಒಂದು ಅರ್ಬುದವಾಗುತ್ತದೆ. ಹತ್ತು ಅರ್ಬುದ ಒಂದು ವೃಂದ.

'ಹೀಗೆ ವಿಹರಿಸಿದರೆ' ಂದರೆ ಹಿಂದೆ ಹೇಳಿದಂತೆ ಸದಾ ಹರಿಕಥೆಗಳನ್ನು ಹೇಳುತ್ತ ಕೇಳುತ್ತ ಸುಖವಾಗಿಯೆ ವಿಹರಿಸಿದರು.

'ಪಾಂಡವಾನಾಂ ಚ ಮುಕ್ತಾನಾಂ ಅಂತರಂ ಕಿಂಚಿದೇವ ಹಿ'
(ಗೀತಾ.ತಾ. 3.19)

ಪಾಂಡವರಿಗೂ ಮುಕ್ತರಿಗೂ ವ್ಯತ್ಯಾಸ ಬಲುಕಡಿಮೆ ಇದ್ದಿತು.

[1]ಇದರಿಂದ ಪಾಂಡವರು ಬ್ರಹ್ಮಸೂತ್ರ ಸಾಧನಾಧ್ಯಾಯ ಪ್ರಥಮ ಪಾದೋಕ್ತವಾದ ವೈರಾಗ್ಯ ಭಾಗ್ಯವನ್ನು ಸಂಪಾದಿಸಿ 'ಪರಮಾರ್ಥಸಾರ' ಪದಸೂಚಿತವಾದ ಹರಿಭಕ್ತಿಯಿಂದಲೂ ತುಂಬಿಕೊಂಡು ಉಪಾಸನಾಪಾದೋಕ್ತ ಪ್ರಾಥಮಿಕ ಉಪಾಸನಾರೂಪವಾದ ಶಾಸ್ತ್ರಾಭ್ಯಾಸವನ್ನೂ ಮಾಡುತ್ತ ಕಾಡಿನಲ್ಲಿ ಉಚಿತವಾದ ಸ್ಥಳಗಳಲ್ಲಿ ವಿಹರಿಸಿದರು ಎಂದಂತಾಯಿತು. -ವಾದಿರಾಜೀಯ

ಗವಾಂ ಚ ಲಕ್ಷಂ ಪ್ರದದಾತಿ ನಿತ್ಯಶಃ
ಸುವರ್ಣಭಾರಾಂಶ್ಚ ಶತಂ ಯುಧಿಷ್ಠಿರಃ।
ಸಭ್ರಾತೃಕೋಽಸೌ ವನಮಾಪ್ಯ ಶಕ್ರವ-
ನ್ಮುಮೋದ ವಿಪ್ರೈಃ ಸಹಿತೋ ಯಥಾಸುಖಂ ॥೯॥

1. ಅನೇನ ಸಾಧನಾಧ್ಯಾಯೇ ಪ್ರಥಮ ಪಾದೋಕ್ತ ವೈರಾಗ್ಯಭಾಗ್ಯಂ ಸಂಪಾದ್ಯ ಪರಮಾರ್ಥಸಾರ ಪದ ಸೂಚಿತ ಹರಿಭಕ್ತಿ ಭರಿತಾಃ ಸಂತ ಉಪಾಸನಾ ಪಾದೋಕ್ತ ಪ್ರಾಥಮಿಕೋಪಾಸನಾರೂಪಶಾಸ್ತ್ರಾಭ್ಯಾಸಂ ಚ ಕುರ್ವಾಣಾಃ ತದುಚಿತಸ್ಥಲೇ ವನೇ ವಿಜಹ್ರುರಿತ್ಯುಕ್ತಂ ಭವತಿ। -ವಾದಿರಾಜೀಯ

ಯುಧಿಷ್ಠಿರ ಹಿಂದೆ ನಿತ್ಯವೂ ಲಕ್ಷ ಗೋವುಗಳನ್ನೂ ನೂರು ಸುವರ್ಣ ಭಾರಗಳನ್ನು ದಾನ ಮಾಡುತ್ತಿದ್ದ. ಈಗಲೂ ಸೋದರರೊಂದಿಗೆ ಕಾಡಿಗೆ ಹೋಗಿ ಮುನಿಗಳಿಂದ ಕೂಡಿ ಹಿಂದಿನಂತೆಯೆ ಸುಖವಾಗಿ ಇಂದ್ರನಂತೆಯೆ ಆನಂದಿಸಿದ.

ಅಕ್ಷಯಪಾತ್ರೆಯ ಮಹಿಮೆಯಿಂದ ಕಾಡಿನಲ್ಲಿಯೂ ಯುಧಿಷ್ಠಿರ ಬ್ರಾಹ್ಮಣರಿಗೆ ಲಕ್ಷ ಗೋದಾನ ನೂರು ಸುವರ್ಣ ಭಾರ ದಾನ ಮಾಡುತ್ತ, ಹಿಂದೆ ಒಮ್ಮೆ ಮೂರನೆ ಮನ್ವಂತರದಲ್ಲಿ ಇಂದ್ರನಾಗಿದ್ದ ಯಮನ ಅವತಾರ ಧರ್ಮರಾಜ ಇಂದ್ರನಂತೆಯೆ ಕಾಡಿನಲ್ಲಿ ವಾಸವಾಗಿದ್ದ.

[1]ಭಾರ ಎಂದರೆ ಇಪ್ಪತ್ತು ತೊಲೆ.

ಧೃತರಾಷ್ಟ್ರನ ಚಿಂತೆ

ಪಾರ್ಥೇಷು ಯಾತೇಷು ಕಿಮತ್ರ ಕಾರ್ಯ-
ಮಿತಿ ಸ್ಮ ಪೃಷ್ಟೋ ವಿದುರೋಽಗ್ರಜೇನ ।
ಆಹೂಯ ರಾಜ್ಯಂ ಪ್ರತಿಪಾದಯೇತಿ
ಪ್ರಾಹೈನಮಾಹಾಥ ರುಷಾಂಬಿಕೇಯಃ ॥೧೦॥

ಪಾಂಡವರು ಕಾಡಿಗೆ ಹೋದ ಬಳಿಕ ಧೃತರಾಷ್ಟ್ರ ವಿದುರನ ಮುಂದೆ 'ಈಗ ನಾವು ಮಾಡಬೇಕಾದುದೇನು?' ಎಂದು ಕೇಳಿದಾಗ 'ಪಾಂಡವರನ್ನು ಕರೆಸಿಕೊಂಡು ಅವರ ರಾಜ್ಯವನ್ನು ಅವರಿಗೇ ಹಿಂತಿರುಗಿ ಕೊಡು' ಎಂದ, ವಿದುರ. ಧೃತರಾಷ್ಟ್ರ ಸಿಟ್ಟಿನಿಂದ ಅವನಿಗೆ ಹೇಳಿದ.

ಜ್ಞಾತಂ ಪ್ರತೀಪೋಽಸಿ ಮಮಾತ್ಮಜಾನಾಂ
ನ ಮೇ ತ್ವಯಾ ಕಾರ್ಯಮಿಹಾಸ್ತಿ ಕಿಂಚಿತ್ ।
ಯಥೇಷ್ಟತಸ್ತಿಷ್ಠ ವಾ ಗಚ್ಛ ವೇತಿ
ಪ್ರೋಕ್ತೋ ಯಯೌ ವಿದುರಃ ಪಾಂಡುಪುತ್ರಾನ್ ॥೧೧॥

'ನೀನು ನನ್ನ ಮಕ್ಕಳಿಗೆ ವಿರೋಧಿಯಾಗಿರುವಿ ಎಂದು ನನಗೆ ಈಗ ತಿಳಿಯಿತು. ಇನ್ನು ನಿನ್ನಿಂದ ನನಗೆ ಏನೂ ಕೆಲಸವಿಲ್ಲ. ನೀನು ನಿನ್ನಿಷ್ಟದಂತೆ ಇಲ್ಲಿ ಇರು ಇಲ್ಲವೆ ಹೋಗು' ಎಂದು ಧೃತರಾಷ್ಟ್ರ ಹೇಳಿದಾಗ ವಿದುರ ಪಾಂಡವರ ಬಳಿಗೆ ನಡೆದ.

ಧೃತರಾಷ್ಟ್ರ 'ಈಗ ನಾವು ಮಾಡಬೇಕಾದುದೇನೆಂ'ದು ವಿದುರನ ಸಲಹೆಯನ್ನು ಕೇಳಿದುದು ಕೌರವರು ಜೂಜಿನಲ್ಲಿ ಅಪಹರಿಸಿದ ಪಾಂಡವರ ರಾಜ್ಯವನ್ನು ಪ್ರಜೆಗಳ ವಿಶ್ವಾಸ ಸಂಪಾದಿಸುವ ಮೂಲಕ ಹೇಗೆ

1. ವಿವೇಶ ಧರ್ಮಾತ್ಮವತಾಂ ವರಿಷ್ಠಸ್ತ್ರಿವಿಷ್ಟಪಂ ಶಕ್ರ ಇವಾಮಿತೌಜಾಃ। (ಭಾರ. ವನ 24-21)

ಭದ್ರಪಡಿಸಿಕೊಳ್ಳಬೇಕೆಂದು ತಿಳಿಯುವುದಕ್ಕಾಗಿ. ವಿದುರ ನೀಡಿದ ಸಲಹೆ ಅದಕ್ಕೆ ವ್ಯತಿರಿಕ್ತವಾಗಿತ್ತು. ಅದರಿಂದ ಧೃತರಾಷ್ಟ್ರನಿಗೆ ಕೋಪ ಬಂದಿತು. ಪದೇಪದೇ ಪಾಂಡವರಿಗೆ ರಾಜ್ಯ ನೀಡೆನ್ನುವಿ. ತಂದೆ ಮಕ್ಕಳನ್ನು ಬೇರ್ಪಡಿಸುತ್ತಿ. ಇನ್ನು ನಿನ್ನ ಸಲಹೆ ಬೇಡ. ನಿನ್ನ ಸಹವಾಸವೂ ಬೇಡ ಎನ್ನುತ್ತ ಧೃತರಾಷ್ಟ್ರ ಅಂತಃಪುರಕ್ಕೆ ನಡೆದ. ವಿದುರ ಪಾಂಡವರ ಬಳಿಗೆ ಹೋದ.

ತಸ್ಮಿನ್ ಗತೇ ಭ್ರಾತೃವಿಯೋಗಕರ್ಶಿತಃ
ಪಪಾತ ಭೂಮೌ ಸಹಸೈವ ರಾಜಾ ।
ಸಂಜ್ಞಾಮವಾಪ್ಯಾದಿಶದಾಶು ಸಂಜಯಂ
ಜೀವಾಮಿ ಚೇದಾಶು ಮಮಾನಯಾನುಜಂ ॥೧೨॥

ವಿದುರ ಹೊರಟುಹೋದಾಗ ಧೃತರಾಷ್ಟ್ರ ತಮ್ಮನ ವಿಯೋಗದಿಂದ ದುಃಖಿತನಾಗಿ ನೆಲಕ್ಕೆ ಒರಗಿದ. ಬಳಿಕ ಎಚ್ಚರಗೊಂಡು ಸಂಜಯನಿಗೆ ಹೇಳಿದ- 'ನಾನು ಬದುಕಬೇಕೆಂದಿದ್ದರೆ ನನ್ನ ತಮ್ಮನನ್ನು ಬೇಗನೆ ಕರೆದು ತಾ.'

'ನನ್ನ ತಮ್ಮನನ್ನು ಬೇಗನೆ ಕರೆತಂದರೆ ನಾನು ಬದುಕುವೆನು' ಎಂದೂ ಮೇಲಿನ ಮಾತನ್ನು ಅನುವಾದಿಸಬಹುದು.

---

[1]ಧೃತರಾಷ್ಟ್ರನ ದುಃಖಕ್ಕೆ ಸ್ವಾಭಾವಿಕವಾಗಿ ಅವನೆದೆಯಲ್ಲಿ ತುಂಬಿದ್ದ ಸೋದರ ವಾತ್ಸಲ್ಯ ಮುಖ್ಯ ಕಾರಣ. ಜೊತೆಗೆ, ಬುದ್ಧಿವಂತನಾದ ವಿದುರನ ಸಹಾಯದಿಂದ ಪಾಂಡವರು ಅಭಿವೃದ್ಧಿ ಹೊಂದಬಹುದೆಂಬ ಭಯವೂ ಇಲ್ಲದಿಲ್ಲ ಎಂದು ಮಹಾಭಾರತ ಹೇಳಿದೆ.

ಇತೀರಿತಃ ಸಂಜಯಃ ಪಾಂಡವೇಯಾನ್
ಪ್ರಾಪ್ಯಾನಯದ್ ವಿದುರಂ ಶೀಘ್ರಮೇವ ।
ಸೋಽಪ್ಯಾಗತಃ ಕ್ಷಿಪ್ರಮಪಾಸ್ತದೋಷೋ
ಜ್ಯೇಷ್ಠಂ ವವಂದೇಽಥ ಸ ಚೈನಮಾಶ್ಲಿಷತ್ ॥೧೩॥

ಧೃತರಾಷ್ಟ್ರ ಹೀಗೆ ಹೇಳಿದೊಡನೆ ಸಂಜಯ ಬೇಗನೆ ಪಾಂಡವರ ಬಳಿಗೆ ಹೋಗಿ ವಿದುರನನ್ನು ಕರೆದುತಂದ. ದೋಷರಹಿತನಾದ ವಿದುರ ಬೇಸರಿಸದೆ ಬೇಗನೆ ಹಿಂತಿರುಗಿ ಬಂದು ಧೃತರಾಷ್ಟ್ರನನ್ನು ನಮಿಸಿದ. ಧೃತರಾಷ್ಟ್ರ ಅವನನ್ನು ಬಿಗಿದಪ್ಪಿಕೊಂಡ.

'ಧರ್ಮಾತ್ಮರು ಯಾವಾಗಲೂ ಕಷ್ಟಕ್ಕೆ ಸಿಲುಕಿರುವವರಲ್ಲಿ ಹೆಚ್ಚು ಪಕ್ಷಪಾತಿಗಳಾಗಿರುತ್ತಾರೆ. ನನಗೆ ನಿನ್ನ ಮಕ್ಕಳಲ್ಲಿಯೂ ಪಾಂಡುವಿನ

---

1. ವಿದುರಸ್ಯ ಪ್ರಭಾವಂ ಚ ಸಂಧಿವಿಗ್ರಹಕಾರಿತಂ ।
ವಿವೃದ್ಧಿಂ ಚ ಪರಾಂ ಮತ್ವಾ ಪಾಂಡವಾನಾಂಭವಿಷ್ಯತಿ॥ -(ಭಾರ.ವನ 6.2)

ಮಕ್ಕಳಲ್ಲಿಯೂ ಸಮಾನವಾದ ಪ್ರೀತಿ ಇದೆ. ಆದರೆ ಪಾಂಡುವಿನ ಮಕ್ಕಳು ಈಗ ಕಷ್ಟಕ್ಕೆ ಸಿಲುಕಿರುವುದರಿಂದ ನನ್ನೆದೆ ಅವರ ಬಗ್ಗೆ ಹೆಚ್ಚಾಗಿ ಮಿಡಿಯುತ್ತಿದೆ. ನಾನು ನಿನ್ನ ಮಕ್ಕಳಿಗೆ ವಿರೋಧಿ ಎಂದು ಮಾತ್ರ ತಿಳಿಯಬೇಡ' ಎಂದು ವಿದುರ ಹೇಳಿದಾಗ ಧೃತರಾಷ್ಟ್ರ ಸಮಾಧಾನಗೊಂಡ.

ಅಂಕಂ ಸಮಾರೋಪ್ಯ ಸ ಮೂರ್ಧ್ನಿ ಚೈನ-
ಮಾಘ್ರಾಯ ಲೇಭೇ ಪರಮಾಂ ಮುದಂ ತದಾ।
ಕ್ಷತ್ತಾರಮಾಯಾಂತಮುದೀಕ್ಷ್ಯ ಸರ್ವೇ
ಸಸೌಬಲಾ ಧಾರ್ತಾರಾಷ್ಟ್ರಾ ಅಮರ್ಷಾತ್ ।
ಸಂಮಂತ್ರ್ಯ ಹಂತುಂ ಪಾಂಡವಾನಾಮುತೈಕಂ
ಛನ್ನೋಪಧೇನೈವ ಸಸೂತಜಾ ಯಯುಃ ॥೧೪॥

ಧೃತರಾಷ್ಟ್ರ ವಿದುರನನ್ನು ತೊಡೆಯ ಮೇಲೇರಿಸಿಕೊಂಡು ನೆತ್ತಿಯಲ್ಲಿ ಆಘ್ರಾಣನ ಮಾಡಿ ಪರಮಾನಂದ ಹೊಂದಿದ. ಆದರೆ ವಿದುರ ಪುನಃ ಬರುವುದನ್ನು ಕಂಡು ಅಸಹನೆಯಿಂದ ಶಕುನಿಯೂ ಎಲ್ಲ ಕೌರವರೂ ಮಂತ್ರಾಲೋಚನ ಮಾಡಿ ಪಾಂಡವರಲ್ಲಿ ಒಬ್ಬನನ್ನಾದರೂ ಕೊಲ್ಲುವುದಕ್ಕಾಗಿ, ಈ ದುರುದ್ದೇಶ ಯಾರಿಗೂ ತಿಳಿಯದಂತೆ ಅರಣ್ಯದರ್ಶನದ ನೆಪದಿಂದ ಕರ್ಣನೊಂದಿಗೆ ಹೊರಟರು.

ಮೈತ್ರೇಯ ಶಾಪ

ವಿಜ್ಞಾಯ ತೇಷಾಂ ಗಮನಂ ಸಮಸ್ತ-
ಲೋಕಾಂತರಾತ್ಮಾ ಪರಮೇಶ್ವರೇಶ್ವರಃ ।
ವ್ಯಾಸೋಽಭಿಗಮ್ಯಾವದದಾಂಬಿಕೇಯಂ
ನಿವಾರಯಾಶ್ವೇವ ಸುತಂ ತವೇತಿ ॥೧೫॥

ಕೌರವರು ದುರುದ್ದೇಶದಿಂದ ಕಾಮ್ಯಕವನಕ್ಕೆ ಹೊರಟಿದ್ದನ್ನು ಸಕಲ ಲೋಕದ ಅಂತರಾತ್ಮರಾದ ಪರಮೇಶ್ವರನಿಗೂ ಈಶ್ವರರಾದ ವೇದವ್ಯಾಸರು ತಿಳಿದು ಧೃತರಾಷ್ಟ್ರನ ಬಳಿಗೆ ಹೋಗಿ ನಿನ್ನ ಮಗನನ್ನು ಬೇಗನೆ ತಡೆದು ನಿಲ್ಲಿಸು ಎಂದರು.

ಕೌರವರು ವಿದುರನಿಗೆ ಧೃತರಾಷ್ಟ್ರ ನೀಡಿದ ಸತ್ಕಾರವನ್ನು ನೋಡಿ ಸಹಿಸದೆ, ಅವನು ಧೃತರಾಷ್ಟ್ರನಿಗೆ ಒತ್ತಾಯಿಸಿ ಪಾಂಡವರನ್ನು ಕರೆಸುವುದಕ್ಕೆ ಸಂಧಾನ ಮಾಡುವನೆಂದೂ ಅವನು ಪಾಂಡವರನ್ನು ಕರೆತರುವುದರೊಳಗಾಗಿ ಅವರನ್ನು ನಾಶಮಾಡಬೇಕೆಂದೂ ಕರ್ಣನ ಸಲಹೆಯಿಂದ ಕಾಮ್ಯಕ ವನಕ್ಕೆ ಹೊರಟರು. ಒಡನೆ ವೇದವ್ಯಾಸರು ಪ್ರಾದುರ್ಭೂತರಾಗಿ ರಥಗಳನ್ನು ನಿಲ್ಲಿಸಿ 'ಹಿಂದಿರುಗಿರಿ' ಎಂದರು. ಮರು ಮಾತಿಲ್ಲದೆ ಕೌರವರು

ಹಿಂತಿರುಗಿದರು. ಬಳಿಕ ವ್ಯಾಸರು ಧೃತರಾಷ್ಟ್ರನ ಬಳಿಗೆ ಬಂದು ಅರಣ್ಯದಲ್ಲಿರುವ ಪಾಂಡವರನ್ನು ಕೊಲ್ಲಲು ಹೊರಟಿದ್ದಾರೆ ಈ ನಿನ್ನ ಮಕ್ಕಳು. ಅದರಿಂದ ಅವರೇ ಪ್ರಾಣ ಕಳಕೊಳ್ಳುತ್ತಾರೆ. ಸ್ವಜನರ ದ್ವೇಷದಿಂದ ಪಾಪ ಮತ್ತು ಅಪಕೀರ್ತಿ ಬೇರೆ. ಅವರಿಗೆ ಬುದ್ಧಿ ಹೇಳು. ಪಾಂಡವರೊಂದಿಗೆ ಮೈತ್ರಿಯಿಂದ ಇರಲಿ' ಎಂದರು.

ಅವಾಪ್ಯ ಪಾರ್ಥಾನಯಮದ್ಯ ಮೃತ್ಯುಂ
ಸಹಾನುಬಂಧೋ ಗಮಿತಾ ಹ್ಯಸಂಶಯಂ ।
ಇತೀರಿತೇ ತೇನ ನಿವಾರಯೇತಿ
ಪ್ರೋಕ್ತೋ ಹರಿಃ ಪ್ರಾಹ ನ ಸಂವದೇ ತೈಃ ॥೧೬॥

'ಈತ ಪಾಂಡವರನ್ನು ಕೊಲ್ಲಲು ಹೋಗಿ ತಾನೆ ಪರಿವಾರ ಸಮೇತನಾಗಿ ಈಗಲೆ ಮರಣ ಹೊಂದುತ್ತಾನೆ, ಸಂಶಯವಿಲ್ಲ' ಎಂದು ವೇದವ್ಯಾಸರು ಹೇಳಿದಾಗ 'ನೀನೆ ತಡೆ' ಎಂದ ಧೃತರಾಷ್ಟ್ರ. ಆದರೆ ವ್ಯಾಸರು ಹೇಳಿದರು 'ನಾನು ಅವರೊಡನೆ ಮಾತನಾಡೆನು'.

[1]ಅವರೊಡನೆ ಎಂದರೆ ದುರ್ಯೋಧನ ಮುಂತಾದವರೊಡನೆ. ಆ ದುಷ್ಟರ ನಾಮೋಚ್ಚಾರಣ ಮಾಡಿದರೇ ಪಾಪ ಬರುತ್ತದೆ ಎಂದು ಸೂಚಿಸುವುದಕ್ಕಾಗಿ ವೇದವ್ಯಾಸರು ಅವರ ಹೆಸರನ್ನು ಹೇಳದೆ 'ಅವರೊಡನೆ' ಎನ್ನುತ್ತಾರೆ. ವೇದವ್ಯಾಸರು ಪಾಪಲೇಪ ರಹಿತರಾದರೂ ದುಷ್ಟರೊಡನೆ ಸಂಭಾಷಣೆ ಮಾಡಕೂಡದು ಎಂದು ಸಜ್ಜನರಿಗೆ ತಿಳಿಸುವುದಕ್ಕಾಗಿ 'ನಾನು ಅವರೊಡನೆ ಮಾತನಾಡೆನು, ಬುದ್ಧಿ ಹೇಳೆನು' ಎನ್ನುತ್ತಾರೆ ಹೊರತು ಬುದ್ಧಿ ಹೇಳಲು ಅಶಕ್ತರೆಂದಲ್ಲ.

ಮೈತ್ರೇಯ ಆಯಾಸ್ಯತಿ ಸೋಽಪಿ ವಾಚಂ
ಶಿಕ್ಷಾರ್ಥಮೇತೇಷ್ವಭಿಧಾಸ್ಯತೀಹ ।
ತಾಂ ಚೇತ್ಕರೋತ್ಯೇಷ ಸುತಸ್ತವಾಸ್ಯ
ಭದ್ರಂ ತದಾ ಶಪ್ಸ್ಯತಿ ತ್ವನ್ಯಥಾ ಸಃ ॥೧೭॥

'ಮೈತ್ರೇಯ ಮುನಿ ಬರುತ್ತಾನೆ, ಬುದ್ಧಿ ಹೇಳುತ್ತಾನೆ. ನಿನ್ನ ಮಗ ಅವನ ಮಾತಿನಂತೆ ನಡೆದುಕೊಂಡರೆ ಒಳ್ಳೆಯದು. ಇಲ್ಲದಿದ್ದಲ್ಲಿ ಅವನು ಶಪಿಸುತ್ತಾನೆ'.

ಉಕ್ತ್ವೇತಿ ರಾಜಾನಮನಂತಶಕ್ತಿ-
ರ್ವ್ಯಾಸೋ ಯಯೌ ತತ್ರ ಗತೇಷು ತೇಷು ।

---

1. ಆಹ ತೈಃ ಸಹ ನ ಸಂವದೇ। ದೋಷಿಣಾಂ ನಾಮೋಚ್ಚಾರಣಾತ್ ದೋಷ ಪ್ರಾಪ್ತಿರಿತಿ ಸ್ಮರಣಾತ್ ಸ್ವಯಂ ದೋಷಹೀನೋಽಪಿ ತೈರಿತ್ಯುಚೇ। ದುಷ್ಟೈಃ ಸಹ ಸಂವಾದೋ ನ ಕರ್ತವ್ಯ ಇತಿ ಅಹಂ ನ ಸಂವದೇ ತದ್ಬುದ್ಧಿಂ ನ ವದಿಷ್ಯ ಇತ್ಯುಚೇ। ನ ತು ಬೋಧನೇ ಅಶಕ್ತತ್ವಾದಿತಿ ಭಾವಃ ।-ಜನಾರ್ದನೀಯ

ಸುಯೋಧನಾದ್ಯೇಷು ಹತೇಷು ಪಾರ್ಥೈ
ಭೂರ್ಭಾರಹಾನಿರ್ನ ಭವೇದಿತಿ ಪ್ರಭುಃ ॥೧೮॥

ಅನಂತಶಕ್ತಿಯುಳ್ಳ ವೇದವ್ಯಾಸರು ಧೃತರಾಷ್ಟ್ರನಿಗೆ ಹೀಗೆ ಹೇಳಿ ಹೊರಟು ಹೋದರು. ದುರ್ಯೋಧನ ಮುಂತಾದವರು ಕಾಡಿಗೆ ಹೋಗಿ ಪಾಂಡವರಿಂದ ಹತರಾದರೆ ಭೂಭಾರ ನಾಶವಾದಂತಾಗದೆಂದು ಪ್ರಭು ವೇದವ್ಯಾಸರು ತಡೆದು ನಿಲ್ಲಿಸಲು ಹೇಳಿದರು.

ಭೂ ಭಾರ ಭೂತರಾದ ದುರ್ಯೋಧನಾದಿಗಳು ಮಾತ್ರ ಹತರಾದರೆ ಬಹು ಅಕ್ಷೌಹಿಣಿ ಸೈನ್ಯ ಸಮೇತವಾಗಿ ಸಕಲ ಭೂಭಾರ ನಾಶವಾಗದೆ ಹೋದೀತೆಂದು ವೇದವ್ಯಾಸರು ಆಲೋಚಿಸಿದರು.

ಸರ್ವಾಶ್ಚ ಚೇಷ್ಟಾ ಭಗವನ್ನಿಯುಕ್ತಾಃ
ಸದಾ ಸಮಸ್ತಸ್ಯ ಚಿತೋಽಚಿತಶ್ಚ ।
ತಥಾಪಿ ವಿಷ್ಣುರ್ನಿವಾರಯೇತ್ಕ್ವಚಿದ್-
ವಾಚಾ ವಿಧತ್ತೇ ಚ ಜನಾನ್ವಿಡಂಬಯನ್ ॥೧೯॥

ಎಲ್ಲ ಚೇತನ ಅಚೇತನಗಳ ಎಲ್ಲ ವ್ಯಾಪಾರಗಳೂ ಸದಾ ಅಂತರ್ಯಾಮಿಯಾದ ಭಗವಂತನಿಂದಲೆ ಪ್ರೇರಿತವಾಗಿರುತ್ತವೆ. ಆದರೂ ಅವನು ಕೆಲವೊಮ್ಮೆ ಅಕಾರ್ಯ ನಡೆಯುತ್ತಿದ್ದರೆ ಮಾತಿನಿಂದಲೆ ತಡೆಯುತ್ತಾನೆ. ಸತ್ಕಾರ್ಯವಾಗಿದ್ದರೆ ಮಾತಿನಿಂದಲೆ ವಿಧಿಸುತ್ತಾನೆ. ಇದು ಲೋಕದ ಜನರನ್ನು ಅನುಕರಿಸುವುದಕ್ಕಾಗಿ.

ಸರ್ವಾಂತರ್ಯಾಮಿಯಾದ ವೇದವ್ಯಾಸರು ದುರ್ಯೋಧನನ ಒಳಗೂ ಇದ್ದು ಅವನಿಗೆ ಒಳಗೇ ಸರಿಯಾದ ಪ್ರೇರಣೆ ನೀಡಬಹುದಾಗಿತ್ತು. ಹಾಗೆ ಮಾಡದೆ ಹೊರಗೆ ಮಾತಿನಿಂದಲೆ ಏಕೆ ತಡೆದರು ಎಂದರೆ ಭೂಭಾರಹರಣದ ಉದ್ದೇಶದಿಂದ ಒಳಗೆ ಬೇರೆಯೆ ಪ್ರೇರಣೆ ಮಾಡಿದರು, ಲೋಕಾನುಕರಣಕ್ಕಾಗಿ ಹೊರಗೆ ತಡೆಯಲು ಯತ್ನಿಸಿದಂತೆ ತೋರಿಕೊಂಡರು.

ಮೈತ್ರೇಯ ಆಗಾದಥ ಭೂಪತಿಶ್ಚ
ಪುತ್ರಾನ್ಸಮಾಹೂಯ ಸಕರ್ಣಸೌಬಲಾನ್ ।
ಸಂಪೂಜಯಾಮಾಸ ಮುನಿಂ ಸ ಚಾಹ
ದಾತುಂ ರಾಜ್ಯಂ ಪಾಂಡವಾನ್ಸಂಪ್ರಶಂಸನ್ ॥೨೦॥

ಬಳಿಕ ಮೈತ್ರೇಯ ಮುನಿ ಬಂದ. ಧೃತರಾಷ್ಟ್ರ ತನ್ನ ಮಕ್ಕಳನ್ನು ಕರ್ಣ ಶಕುನಿಗಳನ್ನೂ ಕರೆದು ಅವರೊಂದಿಗೆ ಕೂಡಿ ಮುನಿಯನ್ನು ಸತ್ಕರಿಸಿದ. ಮುನಿ ಪಾಂಡವರನ್ನು ಹೊಗಳುತ್ತ ಅವರಿಗೆ ರಾಜ್ಯವನ್ನು ಕೊಡಲು ಹೇಳಿದ.

ತೀರ್ಥಯಾತ್ರೆ ಮಾಡುತ್ತ ಕುರುಜಾಂಗಲಕ್ಕೆ ಬಂದ ಮೈತ್ರೇಯ ಮುನಿ ಕಾಮ್ಯಕವನದಲ್ಲಿ ಪಾಂಡವರು ವನವಾಸ ಮಾಡುತ್ತಿದ್ದುದನ್ನು ಕಂಡ. ಅವರ ಮುಖದಿಂದ ಕೌರವರ ಮೋಸದ ಜೂಜಿನ ಪ್ರಸಂಗವನ್ನೂ ಭೀಮ ಮಾಡಿದ ಕಿರ್ಮೀರವಧೆಯನ್ನೂ ಕೇಳಿ ತಿಳಿದ. ಧೃತರಾಷ್ಟ್ರನಿಗೆ ಬುದ್ಧಿ ಹೇಳಲು ಬಂದ.

ವಿಶೇಷತೋ ಭೀಮಬಲಂ ಶಶಂಸ
ಕಿರ್ಮೀರನಾಶಾದಿ ವದನ್ ಮುನೀಂದ್ರಃ ।
ಶ್ರುತ್ವಾ ಹಸಂಸ್ತದ್ ಧೃತರಾಷ್ಟ್ರಪುತ್ರ
ಆಸ್ಫಾಲಯಾಮಾಸ ನಿಜೋರುಮುಗ್ರಃ ॥೨೧॥

ಮುನೀಶ್ವರನಾದ ಮೈತ್ರೇಯ ಕಿರ್ಮೀರ ವಧೆ ಮುಂತಾದುವನ್ನು ವರ್ಣಿಸುತ್ತ ವಿಶೇಷವಾಗಿ ಭೀಮನ ಬಲವನ್ನು ಹೊಗಳಿದ. ಕ್ರೂರ ದುರ್ಯೋಧನ ಅದನ್ನು ಕೇಳಿ ಸಹಿಸದೆ ತನ್ನ ತೊಡೆಯನ್ನು ತಟ್ಟಿಕೊಂಡ.

ಮೈತ್ರೇಯ ಮುನಿ ಪಾಂಡವರನ್ನು ಹೊಗಳಿದ. ಬಕ ಹಿಡಿಂಬ ಕಿರ್ಮೀರರನ್ನೂ ಜರಾಸಂಧನನ್ನೂ ಕೊಂದ ಭೀಮನ ಬಲದ ಮುಂದೆ ನಿಮ್ಮ ಆಟವೇನೂ ನಡೆಯದು. ಪಾಂಡವರಿಗೆ ರಾಜ್ಯ ಕೊಟ್ಟು ಅವರೊಡನೆ ಶಾಂತಿಯಿಂದಿರಿ ಎಂದು ಉಪದೇಶಿಸಿದ. ಈ ಉಪದೇಶಕ್ಕೆ ದುರ್ಯೋಧನನೇನೂ ಹೇಳಲಿಲ್ಲ. ಏನೂ ಬೆಲೆಯನ್ನೇ ಕೊಡಲಿಲ್ಲ. ತಾನೇನೂ ಕಡಿಮೆಯವನಲ್ಲವೆಂದು ಸೂಚಿಸುತ್ತ ನಾಲ್ಕಾರು ಬಾರಿ ತೊಡೆ ತಟ್ಟಿಕೊಂಡ. ಇದು ದೊಡ್ಡವರಲ್ಲಿ ನಡೆದುಕೊಳ್ಳುವ ರೀತಿಯಲ್ಲ.

ಶಶಾಪ ಚೈನಂ ಮುನಿರುಗ್ರತೇಜಾ-
ಸ್ತವೋರುಭೇದಾಯ ಭವೇತ್ಸುಯುದ್ಧಂ ।
ಇತ್ಯೂಚಿವಾನ್ ಧೃತರಾಷ್ಟ್ರಾನತೋಽಪಿ
ಯಯೌ ನ ಚೇದ್ ರಾಜ್ಯದಸ್ತ್ವಂ ತಥೇತಿ ॥೨೨॥

ಭಯಂಕರ ತೇಜಸ್ವಿಯಾದ ಮೈತ್ರೇಯ ದುರ್ಯೋಧನನನ್ನು ಶಪಿಸಿದ. 'ಭೀಮನೊಡನೆ ನಿನಗೆ ಒಂದು ಮಹಾಯುದ್ಧ ನಡೆಯುವುದು. ಅದರಲ್ಲಿ ನಿನ್ನ ತೊಡೆ ಮುರಿಯುವುದು' ಎಂದು. ಬಳಿಕ ಧೃತರಾಷ್ಟ್ರ ನಮಿಸಿದರೂ 'ನೀನು ಪಾಂಡವರಿಗೆ ರಾಜ್ಯ ಕೊಡದಿದ್ದರೆ ನಾನು ಹೇಳಿದ್ದು ಆಗಿಯೆ ತೀರುವುದು' ಎಂದು ಹೇಳಿ ಹೊರಟುಹೋದ.

ಮೈತ್ರೇಯನಿಂದಲೆ ಕಿರ್ಮೀರವಧೆಯ ವೃತ್ತಾಂತವನ್ನು ಕೇಳಬಯಸಿದ ಧೃತರಾಷ್ಟ್ರ, ಆದರೆ ಮುನಿ 'ನಾನು ಪುನಃ ಮಾತನಾಡೆನು. ನನ್ನ ಮಾತು ದುರ್ಯೋಧನನಿಗೆ ಸಹ್ಯವಾಗದು. ನಾನು ಹೋದಮೇಲೆ ವಿದುರ ನಿನಗೆ ಎಲ್ಲವನ್ನೂ ಹೇಳುತ್ತಾನೆ' ಎನ್ನುತ್ತ ಹೊರಟುಹೋದ.

ಶ್ರೀಕೃಷ್ಣನ ಕೋಪ

ಶ್ರುತ್ವಾ ತು ಕಿರ್ಮೀರವಧಂ ಸ್ವಪಿತ್ರಾ
ಪೃಷ್ಟಂ ಕ್ಷತ್ತೋ್ರಕ್ತಂ ಸೋಽತ್ರಸದ್ಧಾರ್ತರಾಷ್ಟ್ರಃ ।
ವನೇ ವಸಂತೋಽಥ ಪೃಥಾಸುತಾಸ್ತೇ
ವಾರ್ತಾಂ ಸ್ವಕೀಯಾಂ ಪ್ರಾಪರ್ಯಯಾಮಾಸುರಾಶು ॥೨೩॥

ಕೃಷ್ಣೇ ಸೋಽಪಿ ದ್ರುತಮಾಯಾತ್ಸಸತ್ಯಃ
ಸಂಬಂಧಿನೋ ಯೇ ಚ ಪಾಂಚಾಲಮುಖ್ಯಾಃ ।
ಕ್ರುದ್ಧಂ ಕೃಷ್ಣಂ ಧಾರ್ತರಾಷ್ಟ್ರಾಯ ಪಾರ್ಥಾಃ
ಕ್ಷಮಾಪಯಾಮ್ಮಾಸುರುಚ್ಚೈರ್ಗುಣಂತಃ ॥೨೪॥

ಗುಣಾಂಸ್ತದೀಯಾನಮಿತಾನ್ಪ್ರಣಮ್ಯ
ತದಾ ರುದಂತೀ ದ್ರೌಪದೀ ಚಾಪ ಪಾದೌ ।
ಸಾ ಪಾದಯೋಃ ಪತಿತಾ ವಾಸುದೇವ-
ಮಸೌತ್ ಸಮಸ್ತಪ್ರಭುಮಾತ್ಮತಂತ್ರಂ ॥೨೫॥

ಧೃತರಾಷ್ಟ್ರ ವಿದುರನನ್ನು ಕೇಳಿದಾಗ ಅವನು ಕಿರ್ಮೀರ ವಧೆಯನ್ನು ಬಣ್ಣಿಸಿದ. ಅದನ್ನು ಕೇಳಿ ದುರ್ಯೋಧನ ಭಯಪಟ್ಟ. ಪಾಂಡವರು ಕಾಡಿನಲ್ಲಿ ವಾಸ ಮಾಡುತ್ತ ತಮ್ಮ ಕಷ್ಟದ ಸಮಾಚಾರವನ್ನು ಶ್ರೀಕೃಷ್ಣನಿಗೂ ದ್ರುಪದನಿಗೂ ಹೇಳಿಕಳಿಸಿದರು. ಕೂಡಲೆ ಶ್ರೀಕೃಷ್ಣ ಸತ್ಯಭಾಮಾ ಸಮೇತನಾಗಿ ಬಂದ. ದ್ರುಪದ ಮುಂತಾದ ಬಾಂಧವರೂ ಬಂದರು. ಶ್ರೀಕೃಷ್ಣ ಎಲ್ಲ ಸಮಾಚಾರವನ್ನು ಕೇಳಿತಿಳಿದು ದುರ್ಯೋಧನನ ಬಗ್ಗೆ ಕುಪಿತನಾದಾಗ ಪಾಂಡವರು ಅವನ ಅಪರಿಮಿತ ಗುಣಗಳನ್ನು ಹೊಗಳುತ್ತ ನಮಿಸಿ ಸಮಾಧಾನಗೊಳಿಸಿದರು. ದ್ರೌಪದಿ ಅಳುತ್ತ ಅವನ ಕಾಲುಗಳನ್ನು ಹಿಡಿದಳು. ಸ್ವತಂತ್ರ ಸರ್ವಶಕ್ತನಾದ ಅವನನ್ನು ಸ್ತೋತ್ರ ಮಾಡಿದಳು.

ಅಚಿಂತ್ಯನಿತ್ಯಾವ್ಯಯಪೂರ್ಣಸದ್ಗುಣಾ-
ರ್ಣವೈಕದೇಹಾಖಿಲದೋಷದೂರ ।
ರಮಾಬ್ಜಜೇರೇಶಸುರೇಂದ್ರಪೂರ್ವ-
ಬೃಂದಾರಕಾಣಾಂ ಸತತಾಭಿವಂದ್ಯ ॥೨೬॥

ಸಮಸ್ತ ಚೇಷ್ಟಾಪ್ರದ ಸರ್ವಜೀವ-
ಪ್ರಭೋ ವಿಮುಕ್ತಾಶ್ರಯ ಸರ್ವಸಾರ ।
ಇತಿ ಬ್ರುವಂತೀ ಸಕಲಾನುಭೂತಂ
ಜಗಾದ ಸರ್ವೇಶಿತುರಚ್ಯುತಸ್ಯ ॥೨೭॥

'ಹೇ ಅಚಿಂತ್ಯ ನಿತ್ಯ ಅವ್ಯಯ ಪೂರ್ಣಸದ್ಗುಣ ಸಾಗರ ಮಾತ್ರ ಶರೀರ! ಸಕಲದೋಷ

ವಿದೂರ! ಲಕ್ಷ್ಮೀಬ್ರಹ್ಮವಾಯು ಶಿವ ಇಂದ್ರಾದಿ ದೇವತೆಗಳಿಂದ ಸದಾವಂದ್ಯ! ಎಲ್ಲಕ್ಕೂ ಚೇಷ್ಟಾಪ್ರದ! ಸರ್ವಜೀವೇಶ್ವರ! ಮುಕ್ತಾಶ್ರಯ! ಸರ್ವೋತ್ತಮ!' ಎಂದು ಸ್ತೋತ್ರ ಮಾಡುತ್ತ ದ್ರೌಪದಿ ಸರ್ವೇಶನಾದ ಶ್ರೀಕೃಷ್ಣನಿಗೆ ತಾನು ಅನುಭವಿಸಿದ ಎಲ್ಲ ದುಃಖವನ್ನೂ ಹೇಳಿಕೊಂಡಳು.

[1]ದ್ರೌಪದಿ ಅಳುತ್ತಾಳೆ ದುಃಖವನ್ನು ಹೇಳಿಕೊಳ್ಳುತ್ತಾಳೆ ಎಂದರೆ ಅವಳ ಶರೀರದಲ್ಲಿರುವ ಭಾರತಿ ಹೊರತು ಅನ್ಯದೇವಿಯರು ಹಾಗೆ ಮಾಡುತ್ತಾರೆ ಎಂದು ಗ್ರಹಿಸಬೇಕು. ಅಥವಾ ಚತುರ್ಮುಖನಂತೆ ಕ್ಷಣಕಾಲ ಭಾರತಿಗೂ ದುಃಖವಾಗಬಹುದು.

ಮಹಾಭಾರತದಲ್ಲಿ ದ್ರೌಪದಿ ತಾನು ಅನುಭವಿಸಿದ ದುಃಖಗಳನ್ನು ಮಾತ್ರವಲ್ಲದೆ ಪಾಂಡವರಿಗೆ ಬಾಲ್ಯದಿಂದಲೆ ಕೌರವರು ಏನೇನು ಕಷ್ಟಗಳನ್ನು ಕೊಟ್ಟಿದ್ದರೋ ಅವೆಲ್ಲವನ್ನೂ ತಾನು ಕೇಳಿದಂತೆ ಬಣ್ಣಿಸಿ ಸ್ವಯಂವರದಿಂದಾರಂಭಿಸಿ ದ್ಯೂತಸಭೆಯಲ್ಲಿ ತನಗಾದ ಅಪಮಾನದ ವರೆಗೂ ತಾನು ಅನುಭವಿಸಿದ್ದನ್ನು ಹೇಳಿಕೊಂಡಳು.

ಯಸ್ಯಾಧಿಕಾನುಗ್ರಹಪಾತ್ರಭೂತಾ
ಸ್ವಯಂ ಹಿ ಶೇಷೇಶವಿಪಾದಿಕೇಭ್ಯಃ।
ಶ್ರುತ್ವಾ ಸಮಸ್ತಂ ಭಗವಾನ್ ಪ್ರತಿಜ್ಞಾಂ
ಚಕಾರ ತೇಷಾಮಖಿಲಾಶ್ಚ ಯೋಷಾಃ॥
ಪತೀನ್ ಸಮಾಲಿಂಗ್ಯ ವಿಮುಕ್ತಕೇಶಾ
ಭೀಮಾಹತಾನ್ ದರ್ಶಯೇ ನಾನ್ಯಥೇತಿ ॥೨೮॥
ತಾಂ ಸಾಂತ್ವಯಿತ್ವಾ ಮಧುರೈಃ ಸುವಾಕ್ಯೈ
ರ್ನಾರಾಯಣೋ ವಾಚಮಿಮಾಂ ಜಗಾದ ॥೨೯॥

ಶ್ರೀಕೃಷ್ಣನಿಗೆ ದ್ರೌಪದಿ ಸ್ವಯಂ ಶೇಷ ಶಿವ ಗರುಡಾದಿಗಳಿಗಿಂತ ಹೆಚ್ಚು ಅನುಗ್ರಹ ಪಾತ್ರಳಾದ್ದರಿಂದ ಅವನು ಎಲ್ಲವನ್ನೂ ಕೇಳಿ ಪ್ರತಿಜ್ಞೆ ಮಾಡಿದ, 'ಕೌರವರ ಹೆಂಡಂದಿರೆಲ್ಲರೂ ಭೀಮನಿಂದ ಹತರಾದ ತಮ್ಮ ಪತಿಗಳನ್ನು ಆಲಿಂಗಿಸಿ ಮುಕ್ತಕೇಶರಾಗುವುದನ್ನು ನಿಶ್ಚಯವಾಗಿ ನಿನಗೆ ತೋರಿಸುವೆನು' ಎಂದು.

ನಾನು ಇದ್ದಿದ್ದರೆ ಹೀಗಾಗುತ್ತಿರಲಿಲ್ಲ

ಯದೀಹಾಹಂ ಸ್ಥಿತೋ ನೈವಂ ಭವಿತಾಹಂ ತ್ವಯೋದ್ಧಯಂ।
ಸಾಲ್ವರಾಜಂ ದುರಾತ್ಮಾನಂ ಹತಶ್ಚಾಸೌ ಸುಪಾಪಕೃತ್ ॥೩೦॥

1. ರೋದನಂ ಭಾರತ್ಯತಿರಿಕ್ತಾನಾಮೇವೇತಿ ಕೇಚಿತ್। ಅನ್ಯೇತು ಭಾರತೀಕರ್ತೃಕಂ ಚ ಭವತಿ ಚತುರ್ಮುಖವತ್ ಕ್ಷಣಕಾಲಂ ದುಃಖವೃತ್ತ್ಯುಪಪತ್ತೇರಿತ್ಯಾಹುಃ। -ತಾಮ್ರಪರ್ಣೀಯ

ಶ್ರೀಕೃಷ್ಣ ದ್ರೌಪದಿಯನ್ನು ಒಳ್ಳೆಯ ಸವಿನುಡಿಗಳಿಂದ ಸಂತೈಸಿ ಈ ಮಾತನ್ನು ನುಡಿದ 'ನಾನು ಇಲ್ಲಿ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ನಾನು ಆಗ ದುರಾತ್ಮನಾದ ಸಾಲ್ವನೊಡನೆ ಯುದ್ಧ ಮಾಡುತ್ತಿದ್ದೆ. ಮಹಾಪಾಪಕಾರಿಯಾದ ಆತ ಹತನಾಗಿದ್ದಾನೆ'.

ಸನ್ನಿಧಾನೇಽಥ ದೂರೇ ವಾ ಕಾಲವ್ಯವಹಿತೇಽಪಿ ವಾ ।
ಸ್ವಭಾವಾದ್ವಾ ವ್ಯವಹಿತೇ ವಸ್ತುವ್ಯವಹಿತೇಽಪಿ ವಾ ॥೩೦॥
ನಾಶಕ್ತಿರ್ವಿದ್ಯತೇ ವಿಷ್ಣೋರ್ನಿತ್ಯಾವ್ಯವಹಿತತ್ವತಃ ।
ತಥಾಪಿ ನರಲೋಕಸ್ಯ ಕರೋತ್ಯನುಕೃತಿಂ ಪ್ರಭುಃ ॥೩೧॥

ವಸ್ತು ಹತ್ತಿರವಿರಲಿ ದೂರವಿರಲಿ. ಕಾಲ ಸ್ವಭಾವ ವಸ್ತುಗಳಿಂದ ವ್ಯವಧಾನದಲ್ಲಿರಲಿ. ನಿತ್ಯ ಅವ್ಯವಹಿತನಾದ ವಿಷ್ಣುವಿಗೆ ಅಶಕ್ತಿ ಇರುವುದಿಲ್ಲ. ಆದರೂ ಸರ್ವಶಕ್ತನಾದ ಅವನು ನರಲೋಕದ ಅನುಕರಣೆ ಮಾಡುತ್ತಾನೆ.

[1]ವಸ್ತು ಬಹಳ ಹತ್ತಿರವಿದ್ದರೂ ಬಹಳ ದೂರವಿದ್ದರೂ ದೋಷವೆ. ಕಣ್ಣಿಗೆ ರೆಪ್ಪೆ ಅತಿ ಸಮೀಪವಿರುವುದರಿಂದ ಕಾಣುವುದಿಲ್ಲ. ಅತಿ ದೂರದ ಬೆಟ್ಟದಲ್ಲಿ ಮರಗಳು ಕಾಣುವುದಿಲ್ಲ. ಕಾಲ ವ್ಯವಧಾನವೂ ದೋಷವೆ. ಭೂತಕಾಲದ ಅಥವಾ ಭವಿಷ್ಯತ್ಕಾಲದ ಘಟನೆಗಳು ಕಾಣುವುದಿಲ್ಲ. ಸ್ವಭಾವ ವ್ಯವಧಾನವೂ ದೋಷವೆ. ಸ್ವಭಾವದಿಂದಲೆ ನಿತ್ಯ ಅತೀಂದ್ರಿಯವಾದ ಪುಣ್ಯಪಾಪಾದಿಗಳನ್ನು ನಾವು ನೋಡುವುದು ಶಕ್ಯವಾಗುವುದಿಲ್ಲ. ವಸ್ತು ವ್ಯವಧಾನವೂ ದೋಷವೆ. ಗೋಡೆಯ ಆಚೆ ಇರುವ ವಸ್ತುವನ್ನು ನಾವು ನೋಡಲಾರೆವು. ನಾವು ಮನುಷ್ಯರು, ನಮಗೆ ಈ ವಿಷಯಗಳಲ್ಲಿ ಅಶಕ್ತಿ ಇದೆ. ಆದರೆ ಭಗವಂತನಿಗೆ ದೇಶ ಕಾಲ ಸ್ವಭಾವ ವಸ್ತು ಇವು ಯಾವುದರಿಂದಲೂ ವ್ಯವಧಾನವಿಲ್ಲ. ನಿತ್ಯ ಅವ್ಯವಹಿತ, ನಿತ್ಯ ಸರ್ವಶಕ್ತ, ನಿತ್ಯಸರ್ವವ್ಯಾಪ್ತ. 'ನಾನು ಇಲ್ಲಿ ಇದ್ದಿದ್ದರೆ ಹೀಗಾಗಗೊಡುತ್ತಿರಲಿಲ್ಲ!' ಎನ್ನುತ್ತಾನೆ. ಹಾಗಾದರೆ ಅವನು ಸರ್ವವ್ಯಾಪ್ತನಲ್ಲವೆ? ಅವನಿಗೂ ಸನ್ನಿಧಾನ ವ್ಯವಧಾನಗಳೆಂಬ ದೋಷಗಳುಂಟೆ? ಎಂಬ ಪ್ರಶ್ನೆಗೆ ಸಮಾಧಾನ - ಶ್ರೀಕೃಷ್ಣ ಸರ್ವವ್ಯಾಪ್ತನೆ. ಅವನು ಎಲ್ಲವನ್ನೂ ನೋಡಬಲ್ಲ, ಎಲ್ಲವನ್ನೂ ವ್ಯಾಪಿಸಬಲ್ಲ, ಎಲ್ಲವನ್ನೂ

---

1. ಸನ್ನಿಧಾನೇಽತಿ ಸಾಮೀಪ್ಯೇ ವಿದ್ಯಮಾನೇಽಕ್ಷಿಪಕ್ಷ್ಮಣಿ, ದೂರೇ ಪರ್ವತಾಗ್ರವರ್ತಿ ಘಟಾದೌ ಕಾಲವ್ಯವಹಿತೇ ಅತೀತಾದಿ ಕಾಲೇನ ವ್ಯವಹಿತೇ ಘಟಾದೌ, ವಸ್ತು ವ್ಯವಹಿತೇ ಕುಡ್ಯಾದಿನಾ ವ್ಯವಹಿತೇ ಘಟಾದೌ ವಿಷ್ಣೋರಶಕ್ತಿಃ ಜ್ಞಾನಾದ್ಯಸಾಮರ್ಥ್ಯಂ ನ ವಿದ್ಯತೇ। -ಜನಾರ್ದನೀಯ
ಸ್ವಭಾವ ವ್ಯವಹಿತಪದೇನ ನಿತ್ಯಾತೀಂದ್ರಿಯಂ ಧರ್ಮಾಧರ್ಮಾದಿಕಮುಚ್ಯತೇ। ಅಶಕ್ತಪದೇನ ದರ್ಶನಾಶಕ್ತಿಃ ವ್ಯಾಪನಾಶಕ್ತಿಃ ಕರಣಾಶಕ್ತಿಶ್ಚೋಚ್ಯತೇ। ಅತೀತೇಷು ಅತೀತ ಕಾಲೇ ವ್ಯಾಪ್ತಿಃ, ಅನಾಗತೇಷು ತದುತ್ಪತ್ತ್ಯನಂತರಂ ವ್ಯಾಪ್ತಿರಿತಿ ವಿವೇಕಃ। -ವಾದಿರಾಜೀಯ

ಮಾಡಬಲ್ಲ ಸರ್ವಶಕ್ತನೆ. ದ್ರೌಪದಿ ದೂರದ ಕೌರವರ ಸಭೆಯಲ್ಲಿ ನಿಂತು 'ಹಾ ಕೃಷ್ಣ' ಎಂದಾಗ ಅಕ್ಷಯಾಂಬರ ಸೃಷ್ಟಿಮಾಡಿ ನೀಡಿದ್ದೇ ಇದಕ್ಕೆ ಸಾಕ್ಷಿ. ಆದರೆ ಜೂಜಿನ ಸಂದರ್ಭದಲ್ಲಿ ತಾನಿರಲಿಲ್ಲವೆನ್ನುತ್ತ ನರಲೋಕದ ವಿಡಂಬನೆ ಮಾಡಿದ್ದಾನಷ್ಟೆ!

ದುಷ್ಟಾನಾಂ ದೋಷವೃದ್ಧ್ಯರ್ಥಂ
ಭೀಮಾದೀನಾಂ ಗುಣೋನ್ನತೇಃ।
ಯುಧಿಷ್ಠಿರೇಽತಿವೃದ್ಧಂ ತು ರಾಜಸೂಯಾದಿಸಂಭವಂ ॥೩೩॥
ಧರ್ಮಂ ಚ ಸಂಕ್ರಾಮಯಿತುಂ ಕೃಷ್ಣಾಯಾಮನುಜೇಷು ಚ।
ಯೋಗ್ಯತಾಕ್ರಮತೋ ವಿಷ್ಣುರಿಚ್ಛಯೇತ್ಥಮಚೀಕ್ಲೃಪತ್ ॥೩೪॥

ಶ್ರೀಕೃಷ್ಣ ಮಾಡಿದ ಈ ನರಲೋಕದ ಅನುಕರಣೆ ದುಷ್ಟರಲ್ಲಿ ದೋಷವೃದ್ಧಿಯಾಗುವುದಕ್ಕಾಗಿ ಮತ್ತು ಭೀಮ ಮುಂತಾದವರಲ್ಲಿ ಗುಣವೃದ್ಧಿಯಾಗುವುದಕ್ಕಾಗಿ. ಧರ್ಮರಾಜನಿಗೆ ರಾಜಸೂಯಾದಿಗಳಿಂದ ಉಂಟಾದ ಪುಣ್ಯ ಯೋಗ್ಯತೆಗೆ ಮೀರಿದ್ದರಿಂದ ಅದನ್ನು ಯೋಗ್ಯತಾನುಸಾರ ದ್ರೌಪದಿಯಲ್ಲಿಯೂ ತಮ್ಮಂದಿರಲ್ಲಿಯೂ ಹರಿದು ಬರುವಂತೆ ಮಾಡುವ ಉದ್ದೇಶದಿಂದಲೂ ಶ್ರೀಕೃಷ್ಣ ಸ್ವೇಚ್ಛೆಯಿಂದಲೆ ಹಾಗೆ ಮಾಡಿದ್ದ..

---

[1]ಶ್ರೀಕೃಷ್ಣ ಈಗ ಇಲ್ಲಿ ಇಲ್ಲ. ನಮ್ಮನ್ನು ತಡೆಯುವ ಶಕ್ತಿ ಪಾಂಡವರಲ್ಲಿ ಇಲ್ಲ ಎಂದು ಬಗೆದು ಕೌರವರು ನಿರಾತಂಕವಾಗಿ ದ್ರೌಪದಿಗೆ ತಮ್ಮಿಷ್ಟ ಬಂದಂತೆ ಅಪಚಾರ ಮಾಡಿ ತಮ್ಮ ಪಾಪದ ಕೊಡವನ್ನು ಮತ್ತು ಮತ್ತು ಯಥೇಚ್ಛವಾಗಿ ತುಂಬಿಕೊಳ್ಳಲಿ ಎಂಬ ಅಭಿಪ್ರಾಯದಿಂದ ಶ್ರೀಕೃಷ್ಣ ಪಾಂಡವರ ಬಳಿ ಇಲ್ಲದಿರುವಂತೆ ತೋರಿಕೊಂಡ. ಭೀಮ ಮುಂತಾದವರು ಹರಿಯ ಸಂಕಲ್ಪವನ್ನು ತಿಳಿದೇ ಅಶಕ್ತರಂತಿದ್ದು ಧರ್ಮರಾಜನಿಗೆ ಅನುವರ್ತಿಗಳಾಗಿದ್ದು ಕೌರವರು ಮಾಡಿದ ಎಲ್ಲ ಅಪಚಾರಗಳನ್ನೂ ಸುಮ್ಮನೆ

---

1. ಹರಿರತ್ರನಾಸ್ತಿ ಭೀಮಾದಯಸ್ತ್ವಶಕ್ತಾ: ಇತಿ ಮಿಥ್ಯಾಜ್ಞಾನೇನ ಪಾಪಾಭಿವೃದ್ಧ್ಯರ್ಥಂ। ಗುಣೋನ್ನತೇ: ಹರಿಸಂಕಲ್ಪಜ್ಞತ್ವ ಕ್ಷಮಾವತ್ತ್ವಾದಿ ಗುಣೋನ್ನತೇ:। ಧರ್ಮರಾಜಸ್ಯ ರಾಜಾಯೋಗ್ಯ ದ್ಯೂತಕರಣೋದ್ಯೋಗಾಖ್ಯದೋಷಾತ್ ಭೀಮಾದೀನಾಂ ದ್ರೌಪದ್ಯಾಶ್ಚ ತದನುಗುಣತ್ವಾಖ್ಯ ಗುಣಾತ್ ಆತ್ಮನಾಂ ಪಣೀಕರಣೇಪಿ ಸಹಿಷ್ಣುತ್ವಾಖ್ಯ ಗುಣಾಚ್ಚ। ತೂಷ್ಣೀಂ ಯುಧಿಷ್ಠಿರಗತ ಪುಣ್ಯಾಕರ್ಷಣೇ ನೈರ್ಘೃಣ್ಯಪ್ರಸಂಗಾತ್, ಅನ್ಯತ್ರ ತೂಷ್ಣೀಂ ಸಂಕ್ರಾಮಣೇ ವೈಷಮ್ಯ ಪ್ರಸಂಗಾಚ್ಚ ಉಭಯತ್ರ ದೋಷ ಗುಣೋಹನಂ ಗ್ರಂಥಕೃತೋಽಪ್ಯಭಿಮತಂ। ಜ್ಯೇಷ್ಠತ್ವೇನ ಪೂರ್ವಂ ಹೋಮಾದಿ ಕರ್ತೃತ್ವಾತ್ ಯುಧಿಷ್ಠಿರೇಽತಿವೃದ್ಧಂ ಸ್ವಯೋಗ್ಯತಾತಿರೇಕೇಣಾಪಿ ವೃದ್ಧಂ ಧರ್ಮಂ ಪುಣ್ಯಂ ತತ ಆಕೃಷ್ಯ ಕೃಷ್ಣಾಯಾಂ ದ್ರೌಪದ್ಯಾಂ ಅನುಜೇಷು ಭೀಮಾದಿಷು ಚ ಯೋಗ್ಯತಾಕ್ರಮತಃ ಭೀಮೇ ಅಧಿಕಂ ತದನು ದ್ರೌಪದ್ಯಾಂ ಪಶ್ಚಾದರ್ಜುನೇ ಅನಂತರಂ ಯಮಯೋರಿತಿ ಯೋಗ್ಯತಾಕ್ರಮೇಣ ಸಂಕ್ರಾಮಯಿತುಂ ಸಂಬಂಧಯಿತು ಮಿತ್ಯರ್ಥ:। -ವಾದಿರಾಜೀಯ

ನೋಡುತ್ತ ಸಹಿಸಿಕೊಂಡು ಇನ್ನೂ ಹೆಚ್ಚು ಪುಣ್ಯ ಸಂಪಾದಿಸಿಕೊಳ್ಳಲಿ ಎಂಬುದೂ ಇನ್ನೊಂದು ಉದ್ದೇಶವಾಗಿತ್ತು.

ಧರ್ಮರಾಜ ಹಿರಿಯನೆಂದು ರಾಜಸೂಯದಲ್ಲಿ ಯಜಮಾನನಾಗಿ ಕುಳಿತು ಯಾಗದ ಪುಣ್ಯವೆಲ್ಲವನ್ನೂ ಪಡೆದ. ಅದು ಅವನ ಯೋಗ್ಯತೆಗೆ ಹೆಚ್ಚಾಯಿತು. ಭೀಮಾದಿಗಳಿಗೆ ಕಡಿಮೆಯಾಯಿತು. ಇದನ್ನು ಸರಿಪಡಿಸಲು ಶ್ರೀಕೃಷ್ಣ ವಿನಾಕಾರಣ ಧರ್ಮರಾಜನಿಂದ ಪುಣ್ಯವನ್ನು ಕಸಿದರೆ ಅದು ನೈರ್ಘೃಣ್ಯ ನಿರ್ದಯತೆ ಎನಿಸುತ್ತದೆ. ವಿನಾಕಾರಣ ಭೀಮಾದಿಗಳಲ್ಲಿ ಆ ಪುಣ್ಯವನ್ನು ತುಂಬಿಸಿದರೆ ವೈಷಮ್ಯ ಪಕ್ಷಪಾತವೆನಿಸುತ್ತದೆ. ವೈಷಮ್ಯ ನೈರ್ಘೃಣ್ಯ ದೋಷರಹಿತನಾದ ಶ್ರೀಕೃಷ್ಣ ಜೂಜಿನ ಸಮಯದಲ್ಲಿ ಪ್ರತ್ಯಕ್ಷವಾಗಿ ಇಲ್ಲದೆ ಧರ್ಮರಾಜನಿಂದ ಅಧರ್ಮಕಾರ್ಯವಮಾಡಿಸಿದ. ರಾಜರಿಗೆ ಅಯೋಗ್ಯವಾದ ಜೂಜಾಟವಾಡಿಸಿದ. ಅದನ್ನು ನಿಮಿತ್ತವಾಗಿ ಮಾಡಿ ಅವನಲ್ಲಿದ್ದ ಅಧಿಕ ಪುಣ್ಯವನ್ನು ಕಸಿದ. ಭೀಮಾದಿಗಳೂ ದ್ರೌಪದಿಯೂ ತಮ್ಮನ್ನು ಪಣಕ್ಕಿಟ್ಟು ಜೂಜಾಡಿದ ಧರ್ಮರಾಜನ ಅಪರಾಧವನ್ನು ಹಿರಿಯನೆಂದು ತಡೆದುಕೊಂಡರು. ಶ್ರೀಕೃಷ್ಣ ಅವರಿಗೆ ಹಾಗೆ ಮಾಡಲು ಪ್ರೇರಿಸಿ ಅದನ್ನು ನಿಮಿತ್ತವಾಗಿ ಮಾಡಿ ಧರ್ಮರಾಜನ ಪುಣ್ಯವನ್ನು ಅವರಲ್ಲಿ ಸೇರುವಂತೆ ಮಾಡಿದ.

[1]ಶ್ರೀಕೃಷ್ಣ ಮಾಡಿದ ಈ ನರಲೋಕದ ಅನುಕರಣೆಯಿಂದ ದುಷ್ಟರು ಶ್ರೀಕೃಷ್ಣನನ್ನು ಅಶಕ್ತನೆಂದು ತಿಳಿದು ಪಾಪ ಹೆಚ್ಚಿಸಿಕೊಳ್ಳುತ್ತಾರೆ. ಭೀಮಾದಿಗಳು ಶ್ರೀಕೃಷ್ಣ ಲೋಕಾನುಕರಣೆ ಮಾಡುವುದನ್ನು ನೋಡಿ 'ಯದ್ಯದಾಚರತಿ ಶ್ರೇಷ್ಠಃ' ಎಂದು ಭಗವದ್ಗೀತೆಯಲ್ಲಿ ಹೇಳಿದಂತೆ ತಾವೂ ಹಾಗೇ ಮಾಡಿ ಜ್ಞಾನಾದಿಗಳನ್ನು ಗೋಪ್ಯವಾಗಿಡುವ ಮೂಲಕ ಪುಣ್ಯವೃದ್ಧಿ ಮಾಡಿಕೊಳ್ಳುತ್ತಾರೆ.

ಏಧಮಾನದ್ವಿಡಿತ್ಯೇವ ವಿಷ್ಣೋರ್ನಾಮ ಹಿ ವೈದಿಕಂ ॥೩೫॥

ಏಧಮಾನದ್ವಿಟ್ ಎಂಬ ವೈದಿಕನಾಮ ವಿಷ್ಣುವಿಗೆ ಪ್ರಸಿದ್ಧವಾಗಿದೆ.

ಶೃಣ್ವೇ ವೀರ ಉಗ್ರಮುಗ್ರಂ ದಮಾಯನ್
ಅನ್ಯಮನ್ಯಮತಿ ನೇನೀಯಮಾನಃ।

---

1. ದುಷ್ಟಾನಾಮಿತ್ಯಸ್ಯ ಪೂರ್ವಸಂಬಂಧಃ। ಅಶಕ್ತಿ ಜ್ಞಾನಾದ್ ದೋಷವೃದ್ಧಿರಿತಿ ಭಾವಃ। ಗುಣೋನ್ನತೇಃ। ಭಗವತಾ ಲೋಕಾನುಕರಣೇ ಕೃತೇ ಯದ್ಯದಾಚರತಿ ಶ್ರೇಷ್ಠ ಇತಿ ನ್ಯಾಯೇನ ಭೀಮಾದಿಭಿರಪಿ ತಥಾಕರಣೇ ಜ್ಞಾನಾದಿಗೂಹನಮಿತ್ಯಾದ್ಯುಕ್ತ ರೀತ್ಯಾ ಧರ್ಮಾಭಿವೃದ್ಧಿರಿತಿ ಭಾವಃ। -ತಾಮ್ರಪರ್ಣೀಯ

ಏಧಮಾನದ್ವಿಳುಭಯಸ್ಯ ರಾಜಾ
ಚೋಷ್ಕೂಯತೇ ವಿಶ ಇಂದ್ರೋ ಮನುಷ್ಯಾನ್ ॥

'ಏಧಮಾನದ್ವಿಟ್' ಎಂದು ಶ್ರೀಹರಿಯನ್ನು ಕೊಂಡಾಡುವ ಈ ಮಂತ್ರ ನಿರ್ಣಯದಲ್ಲಿ (ಅಧ್ಯಾಯ 1 ಶ್ಲೋಕ 101) ಉದಾಹೃತವಾಗಿದೆ. ಜೀವರು ತಮ್ಮ ಯೋಗ್ಯತೆ ಮೀರಿ ಹೆಚ್ಚು ಪುಣ್ಯ ಅಧಿಕಾರ ಸಂಪತ್ತುಗಳನ್ನು ಸಂಪಾದಿಸಿದಾಗ ಶ್ರೀಹರಿ ಅದನ್ನು ಸಹಿಸದೆ ಅವರನ್ನು ಮೆಟ್ಟುತ್ತಾನೆ ಎಂದು ಆ ನಾಮದ ಅರ್ಥ. ಶೇಷ ಲಕ್ಷ್ಮಣನಾಗಿ ಮಾಡಿದ ಅಧಿಕ ಪುಣ್ಯವನ್ನು ಬಲರಾಮನಾಗಿ ಕಳೆದಕೊಂಡ. ಗೌತಮ ಮುನಿ ತಾನು ಮಾಡಿದ ಅಧಿಕ ಪುಣ್ಯವನ್ನು ಇಂದ್ರನಿಗೆ ಶಾಪನೀಡುವ ಮೂಲಕ ಕಳೆದುಕೊಂಡ. ಸೂರ್ಯಚಂದ್ರರು ಅಧಿಕವಾಗಿದ್ದ ಪುಣ್ಯವನ್ನು ಸ್ವೋತ್ತಮ ಸ್ತ್ರೀಸಂಗಮಾಡಿ ಕಳೆದುಕೊಂಡರು. ಹಾಗೆ ಪ್ರಕೃತದಲ್ಲಿ ಧರ್ಮರಾಜ ರಾಜಸೂಯ ಯಾಗದಿಂದ ಸಂಪಾದಿಸಿದ ಅಧಿಕ ಪುಣ್ಯವನ್ನು ಜೂಜಾಡಿ ಕಳೆದುಕೊಂಡ. ಜೂಜಿನಲ್ಲಿ ರಾಜ್ಯವನ್ನು ದುರ್ಯೋಧನಾದಿಗಳು ಅಪಹರಿಸಿದರು. ಪುಣ್ಯವನ್ನು ಭೀಮಾದಿಗಳು ಅಪಹರಿಸಿದರು. ಧರ್ಮರಾಜನಿಗೂ ತನ್ನ ಯೋಗ್ಯತೆ ಮೀರಿ ಧರ್ಮಾಚರಣೆ ಮಾಡಲು ಅಧಿಕಾರವಿಲ್ಲ.

ಸ್ವಯೋಗ್ಯತಾಯಾ ಅಧಿಕಂ ಧರ್ಮಜ್ಞಾನಾದಿಜಂ ಫಲಂ ।
ಭೀಷ್ಮದ್ರೋಣಾಂಬಿಕೇಯಾದೇಃ ಪಾರ್ಥೇಷ್ವೇವ ನಿಧಾಪಿತುಂ ॥೩೬॥

ಭೀಷ್ಮ ದ್ರೋಣ ಧೃತರಾಷ್ಟ್ರ ಮುಂತಾದವರು ಗಳಿಸಿದ ಧರ್ಮಜ್ಞಾನಾದಿಗಳ ಫಲವಾದ ಪುಣ್ಯವನ್ನು ಪಾಂಡವರಲ್ಲಿ ತಂದು ಸೇರಿಸುವ ಉದ್ದೇಶದಿಂದಲೂ ಶ್ರೀಕೃಷ್ಣ ಹಾಗೆ ಮಾಡಿದ.

ಭೀಷ್ಮ ದ್ರೋಣ ಧೃತರಾಷ್ಟ್ರಾದಿಗಳು ಧರ್ಮಾಚರಣದಿಂದಲೂ ಜ್ಞಾನ ಭಕ್ತ್ಯಾದಿ ಸಂಪಾದನದಿಂದಲೂ ಅಧಿಕ ಪುಣ್ಯ ಗಳಿಸಿದ್ದರು. ಧರ್ಮಾಧರ್ಮ ನಿರ್ಣಯದಲ್ಲಿ ಅಧಿಕೃತವಾಗಿ ಮಾತನಾಡುವವರೆಂದು ಸರ್ವಮಾನ್ಯರಾಗಿದ್ದರು. ಆದರೂ ದ್ಯೂತ ಸಭಾಂಗಣದಲ್ಲಿ ದ್ರೌಪದಿ,

ಅಧರ್ಮ ಏಷ ವಾರ್ಯತೇ ನ ಧರ್ಮಿಭಿರ್ಭವದ್ವಿಧೈಃ ।

'ನಿಮ್ಮಂಥ ಧರ್ಮಿಷ್ಠರು ಈ ಸಭೆಯಲ್ಲಿ ಅಧರ್ಮ ನಡೆಯುತ್ತಿರುವುದನ್ನು ನೋಡಿ ತಡೆಯದೆ ಸುಮ್ಮನಿರುವಿರೇನು?' ಎಂದು ಮೊರೆಯಿಟ್ಟರೂ ಅವರು ಸುಮ್ಮನೇ ಇದ್ದರು. ಇದರಿಂದ ಅಧರ್ಮದಿಂದ ಹಿಂಸೆಪಟ್ಟ ಪಾಂಡವರಲ್ಲಿ ಪುಣ್ಯ ಬಂದು ಸೇರಿತು. ಹಾಗಾಗಲಿಂದೇ ಶ್ರೀಕೃಷ್ಣ ಜೂಜಿನ ಸಮಯದಲ್ಲಿ ದೂರ ಇದ್ದ. ಬಳಿಯಲ್ಲಿರುತ್ತಿದ್ದರೆ ತಡೆಯಬೇಕಾಗಿತ್ತು. ಆಗ ಈ ಉದ್ದೇಶ ನೆರವೇರುತ್ತಿರಲಿಲ್ಲ.

ಪುಣ್ಯಪಾಪ ಸಂಗ್ರಹ

ಪುನಶ್ಚ ಪಾಪವೃದ್ಧ್ಯರ್ಥಮಜೋ ದುರ್ಯೋಧನಾದಿಷು ।
ವ್ಯಾಸೋಽಂಬಿಕಾಸುತಂ ಪ್ರಾಹ ಪಾರ್ಥಾ ಮೇಽಭ್ಯಧಿಕಂ ಪ್ರಿಯಾಃ ॥೩೭॥

ದುರ್ಯೋಧನಾದಿಗಳಲ್ಲಿ ಪುನಃ ಪಾಪಸಂಗ್ರಹ ಹೆಚ್ಚಲೆಂದು ವೇದವ್ಯಾಸರು ಧೃತರಾಷ್ಟ್ರನ ಮುಂದೆ ತನಗೆ ಪಾಂಡವರೇ ಹೆಚ್ಚು ಪ್ರಿಯರು ಎಂದರು.

[1]ಪಾಂಡವರು ತನಗೆ ಹೆಚ್ಚುಪ್ರಿಯರು. ಅವರಲ್ಲಿ ದುರ್ಯೋಧನ ಸ್ನೇಹದಿಂದ ಇರಲಿ ಎಂದು ತಾನು ಆಜ್ಞೆ ಮಾಡಿದರೂ ದುರ್ಯೋಧನ ಅದನ್ನು ಉಲ್ಲಂಘಿಸಬೇಕು. ಈ ಆಜ್ಞೋಲ್ಲಂಘನದಿಂದಲೂ ಅವನಲ್ಲಿ ಪಾಪ ಸಂಗ್ರಹ ಹೆಚ್ಚಬೇಕು ಎನ್ನುವುದು ವೇದವ್ಯಾಸರ ಉದ್ದೇಶವಾಗಿತ್ತು.

ತೇಷಾಂ ಪ್ರವಾಸನಂ ಚೈವ ಪ್ರಿಯಂ ನ ಮಮ ಸರ್ವಥಾ ।
ಇತಿ ದುರ್ಯೋಧನಾದೀನಾಂ ಪಾಪವೃದ್ಧ್ಯರ್ಥಮೇವ ಸಃ ।
ಪ್ರಿಯಾ ಇತ್ಯೇವ ಕಥನಾತ್ ಪಾಂಡವಾನಾಂ ಶುಭೋನ್ನತೇಃ ॥೩೮॥

ಪಾಂಡವರನ್ನು ಕಾಡಿಗೆ ಅಟ್ಟಿದುದು ನನಗೆ ಸರ್ವಥಾ ಪ್ರಿಯವಲ್ಲ ಎನ್ನುತ್ತ ಪಾಂಡವರೇ ನನಗೆ ಪ್ರಿಯರೆಂದು ಹೇಳುವ ಮೂಲಕ ದುರ್ಯೋಧನಾದಿಗಳಲ್ಲಿ ಪಾಪವನ್ನು ಹೆಚ್ಚಿಸುವುದಕ್ಕಾಗಿಯೂ ಪಾಂಡವರಲ್ಲಿ ಪುಣ್ಯವನ್ನು ಹೆಚ್ಚಿಸುವುದಕ್ಕಾಗಿಯೂ ವೇದವ್ಯಾಸರು ಧೃತರಾಷ್ಟ್ರನ ಬಳಿಗೆ ಬಂದಿದ್ದರು.

[2]ಪಾಂಡವರು ಪ್ರಿಯರೆನ್ನುತ್ತ ಅವರ ಉನ್ನತ ಗುಣಗಳನ್ನು ಹೊಗಳುವ ಮೂಲಕ ದುರ್ಯೋಧನಾದಿಗಳಿಗೆ ಅಸೂಯೆಯನ್ನು ಹೆಚ್ಚಿಸಿ ಅವರಲ್ಲಿ ಪಾಪ ವೃದ್ಧಿಯಾಗುವಂತೆ ಮಾಡುವುದಕ್ಕಾಗಿ ವೇದವ್ಯಾಸರು ಬಂದಿದ್ದರೆಂದೂ ಶ್ಲೋಕವನ್ನು ಅನುವಾದಿಸಬಹುದು.

ಈ ಶ್ಲೋಕದಲ್ಲಿ 'ಗುಣೋನ್ನತೇಃ' ಎಂದು ತಾಮ್ರಪರ್ಣೀಯದ ಪಾಠ.

[3]ಜನಾರ್ದನೀಯ ವಾದಿರಾಜೀಯ ಮುಂತಾದವುಗಳಲ್ಲಿ 'ಶುಭೋನ್ನತೇಃ' ಎಂದು ಪಾಠ ಸ್ವೀಕೃತವಾಗಿದೆ.

---

1. ದುರ್ಯೋಧನಾದಿಷು ಪುನಶ್ಚ ಪಾಪವೃದ್ಧ್ಯರ್ಥಂ ಸ್ವಾಜ್ಞೋಲ್ಲಂಘನೇನ ಪಾಪ ವೃದ್ಧ್ಯರ್ಥಂ। -ವಾದಿರಾಜೀಯ
2. ಪ್ರಿಯಾ ಇತಿ ಪಾಂಡವಾನಾಂ ಗುಣೋನ್ನತೇಃ ಕಥನಾತ್ ತತ್ರಾಸೂಯಯಾ ದುರ್ಯೋಧನಾದೀನಾಂ ಪಾಪವೃದ್ಧ್ಯರ್ಥಂ ಇತ್ಯಂಬಿಕಾಸುತಂ ಪ್ರಾಹೇತಿ ಸಂಬಂಧಃ। -ತಾಮ್ರಪರ್ಣೀಯ
3. ಪಾಂಡವಾನಾಂ ಶುಭೋನ್ನತೇಃ ಪುಣ್ಯೋತ್ಕರ್ಷಾರ್ಥಂ। -ಜನಾರ್ದನೀಯ
ಪಾಂಡವಾನಾಂ ಶುಭೋನ್ನತೇಃ ಪುಣ್ಯೋನ್ನತೇಃ ತಾದರ್ಥ್ಯೇ ಚೇಯಂ ಷಷ್ಠೀ। -ವಾದಿರಾಜೀಯ

[1]ದುರ್ಯೋಧನಾದಿಗಳಲ್ಲಿ ಪಾಪವನ್ನು ಹೆಚ್ಚಿಸುವುದಕ್ಕಾಗಿ ಎಂದರೆ ಅವರ ಪಾಪವನ್ನು ಹೆಚ್ಚು ಪ್ರಕಟ ಮಾಡುವುದಕ್ಕಾಗಿ ಎಂದು ಜನಾರ್ದನೀಯ ಹೇಳುತ್ತದೆ. ಪಾಂಡವರ ಗುಣವನ್ನು ಹೆಚ್ಚಿಸುವುದಕ್ಕಾಗಿ ಎಂದರೂ ಗುಣವನ್ನು ಹೆಚ್ಚು ಪ್ರಕಟಪಡಿಸುವುದಕ್ಕಾಗಿ ಎಂದು ಗ್ರಹಿಸಿದೆ ತಾಮ್ರಪರ್ಣೀಯ.

[2]'ಪಾರ್ಥಾ ಏವ ಹಿ ಮೇ ಪ್ರಿಯಾಃ' 'ಪಾಂಡವರೇ ನನಗೆ ಹೆಚ್ಚು ಪ್ರಿಯರು' ಎನ್ನುತ್ತ ತಾನು ಪಾಂಡವರನ್ನು ಪ್ರಶಂಸಿಸಬೇಕು, ಕೌರವರನ್ನು ನಿಂದಿಸಬೇಕು. ಆದರಿಂದ ಪಾಂಡವರಿಗೆ ಪುಣ್ಯವೂ ಕೌರವರಿಗೆ ಪಾಪವೂ ಹೆಚ್ಚಬೇಕು. ಈ ಉದ್ದೇಶಗಳಿಂದ ವೇದವ್ಯಾಸರು ಬಂದು ಧೃತರಾಷ್ಟ್ರನ ಬಳಿಯಲ್ಲಿ ಪಾಂಡವರೇ ನನಗೆ ಪ್ರಿಯರು ಎಂದರು.

ಪಾಂಡವರನ್ನು ಪ್ರಶಂಸಿಸಿದ ಮಾತ್ರಕ್ಕೆ ಪಾಂಡವರಲ್ಲಿ ಪುಣ್ಯ ಹೆಚ್ಚುವುದು ಹೇಗೆ? ಕೌರವರನ್ನು ನಿಂದಿಸಿದ ಮಾತ್ರಕ್ಕೆ ಅವರಲ್ಲಿ ಪಾಪ ಹೆಚ್ಚುವುದು ಹೇಗೆ? ಎಂಬ ಪ್ರಶ್ನೆಗೆ ವಾದಿರಾಜೀಯದಲ್ಲಿ ಸಮಾಧಾನ ನೀಡಲಾಗಿದೆ-

---

ಅಕ್ರೂರ ಕಂಸನ ದೂತನಾಗಿ ಕೃಷ್ಣನನ್ನು ಬಿಲ್ಲಹಬ್ಬಕ್ಕೆ ಕರೆತರಲು
ಬರುವಾಗ ತನಗೆ ತಾನೇ ಹೇಳಿಕೊಳ್ಳುತ್ತಾನೆ - 'ಅಕ್ರೂರ! ಬಾಪ್ಪ!' ಎಂದು

---

2. ಪಾರ್ಥಾಃ ಪ್ರಿಯಾ ಇತಿ ಕಥನಾದೇವ ಪಾಂಡವಾನಾಂ ಶುಭೋನ್ನತೇಃ ಪುಣ್ಯೋತ್ಕರ್ಷಾರ್ಥಂ। ಗುಣೋನ್ನತೇರಿತಿ ಕ್ವಚಿತ್ ಪಾಠಃ। ದುರ್ಯೋಧನಾದೀನಾಂ ಪಾಪ ವೃದ್ಧ್ಯರ್ಥಮೇವ, ಪಾಪವೃದ್ಧಿ ಪ್ರಕಟನಾರ್ಥಮೇವ। -ಜನಾರ್ದನೀಯ
ದುರ್ಯೋಧನಾದೀನಾಮಿತಿ। ತೇಷಾಂ ಪ್ರವಾಸನಂ ಮಮಾಪ್ರಿಯಮಿತಿ ಕಥನಾತ್ ಪ್ರವಸನ ಕಾರಯಿತೄಣಾಂ ಪಾಪವೃದ್ಧ್ಯರ್ಥಂ ತಜ್ಜ್ಞಾಪನಾರ್ಥಂ। ಪ್ರಿಯಾ ಇತಿ ಕಥನಾತ್ ಪಾಂಡವಾನಾಂ ಗುಣೋನ್ನತೇಃ ಪ್ರಕಾಶಾಯ। -ತಾಮ್ರಪರ್ಣೀಯ

3. ನ ಕೇವಲಂ ದುರ್ಯೋಧನಾದಿಷು ಪಾಪ ವೃದ್ಧ್ಯರ್ಥಮಿದಂ ವಚನಂ। ಕಿಂತು ಪಾಂಡವಾನಾಂ ಪುಣ್ಯಾಭಿವೃದ್ಧ್ಯರ್ಥಂ ಚೇತಿ ಭಾವೇನಾಹ ಪ್ರಿಯಾ ಇತಿ। 'ಪಾರ್ಥಾ ಏವ ಹಿ ಮೇ ಪ್ರಿಯಾಃ' ಇತಿ ವಚನಾತ್ ಪಾಂಡವಾನಾಂ ಶುಭೋನ್ನತೇಃ ಪುಣ್ಯೋನ್ನತೇಃ ತಾದರ್ಥ್ಯೇಚೇಯಂ ಷಷ್ಠೀ। 'ಲಬ್ಧಾಂಗ ಸಂಗಂ ಪ್ರಣತಂ ಕೃತಾಂಜಲಿಂ ಮಾ ವಕ್ಷ್ಯತೇಽಕ್ರೂರ ತತೇತ್ಯುರುಶ್ರವಾಃ। ತದಾ ವಯಂ ಜನ್ಮಭೃತಃ' ಇತಿ ಭಾಗವತೋಕ್ತೇಃ ಹರಿಶ್ಲಾಘಾವಿಷಯತ್ವೇನ ಪಾಂಡವಾನಾಂ ಪುಣ್ಯೋನ್ನತ್ಯರ್ಥಂ ಇತ್ಯರ್ಥಃ। 'ಪಾರ್ಥಾ ಏವ ಹಿ ಮೇ ಪ್ರಿಯಾಃ' ಇತಿ ವದತಾ ದುರ್ಯೋಧನಾದೀನಾಮಪ್ರಿಯತ್ವಂ ಸೂಚಿತಂ। ಏವಂಚ 'ಮಹೀಯಸಾ ನೈವಾದೃತೋ ಯೋ ಧಿಗಮುಷ್ಯ ಜನ್ಮ ತತ್' ಇತಿ ತತ್ಕ್ರೋಕ್ತೇಃ ಹರಿಣಾ ಸ್ವಾಪ್ರಿಯತ್ವಕಥನಾತ್ ದುರ್ಯೋಧನಾದೀನಾಂ ಪಾಪಾಭಿವೃದ್ಧ್ಯರ್ಥಂ ಚೇತಿ। ತಥಾಚ ಪ್ರಾಕ್ತನ ಪಾಪಂ ಆಜ್ಞೋಲ್ಲಂಘನ ಜನಿತಮೇವ। ಇದಾನೀಂತನ ಪಾಪಂ ತು ಭಗವತಾ ಕೃತ ಗರ್ಹಾ ವಿಷಯತ್ವ ನಿಮಿತ್ತಮಿತಿ ನ ಪೌನರುಕ್ತ್ಯಂ॥ -ವಾದಿರಾಜೀಯ

ಶ್ರೀಕೃಷ್ಣನನ್ನನ್ನು ಪ್ರೀತಿಯಿಂದ ಬರಮಾಡಿಕೊಂಡರೇ ನನ್ನ ಜನ್ಮಸಾರ್ಥಕ. ಮಹಾತ್ಮರ ಪ್ರಶಂಸೆಗೆ ಪಾತ್ರನಾಗದವನ ಜನ್ಮ ನಿರರ್ಥಕ' ಎಂದು. ಇದರಿಂದ ಮಹಾತ್ಮರ ಪ್ರಶಂಸೆಗೆ ಪಾತ್ರನೆನಿಸುವುದು ಮಹಾಪುಣ್ಯಕರ. ನಿಂದೆಗೊಳಗಾಗುವುದು ಮಹಾಪಾಪಕರ ಎಂದು ತಿಳಿಯುತ್ತದೆ.

ದುರ್ಯೋಧನಾದಿಗಳಲ್ಲಿ ಪಾಪಸಂಗ್ರಹ ಹೆಚ್ಚಲೆಂದು ಹಿಂದಿನ ಶ್ಲೋಕದಲ್ಲಿ ಹೇಳಿದ್ದು ಆಜ್ಞೋಲ್ಲಂಘನ ಪ್ರಯುಕ್ತ ಪಾಪಹೆಚ್ಚಲಿ ಎಂಬ ಅಭಿಪ್ರಾಯದಿಂದ. ದುರ್ಯೋಧನಾದಿಗಳಲ್ಲಿ ಪಾಪವನ್ನು ಹೆಚ್ಚಿಸುವುದಕ್ಕಾಗಿ ಎಂದು ಈ ಶ್ಲೋಕದಲ್ಲಿ ಪುನಃ ಹೇಳಿದ್ದು ಮೇಲೆ ಹೇಳಿದಂತೆ ನಿಂದೆಗೊಳಗಾಗುವ ಪ್ರಯುಕ್ತ ಪಾಪ ಹೆಚ್ಚಲಿ ಎಂಬ ಅಭಿಪ್ರಾಯದಿಂದ. ಆದರಿಂದ ಪೌನರುಕ್ತ್ಯವಿಲ್ಲವೆಂದು ವಾದಿರಾಜೀಯ ಹೇಳಿದೆ.

ಗುರುತ್ವಾದ್ ಭೀಮಸೇನಸ್ಯ ಕ್ಷಮಾ ದ್ಯೂತೇಽರ್ಜುನಾದಿನಾಂ ।
ನಾತಿಧರ್ಮಸ್ವರೂಪೋಽತ್ರ ಧರ್ಮೋ ಭೀಮೇ ನಿರೌಪಧಃ ॥೩೯॥
ದ್ರೌಪದ್ಯಾ ಅಪ್ಯತಿಕ್ಲೇಶಾತ್ ಕ್ಷಮಾ ಧರ್ಮೋ ಮಹಾನಭೂತ್ ।
ಸಾ ಹಿ ಭೀಮಮನೋ ವೇದ ನ ಕಾರ್ಯಃ ಶಾಪ ಇತ್ಯಲಂ ॥೪೦॥

ಭೀಮಸೇನ ಅರ್ಜುನಾದಿಗಳಿಗೆ ಹಿರಿಯನಾದ್ದರಿಂದ ಕೌರವರು ಮಾಡುತ್ತಿದ್ದ ಅನ್ಯಾಯಗಳನ್ನು ಅರ್ಜುನಾದಿಗಳು ಸಹಿಸಿಕೊಂಡಿದ್ದುದು ಅವರಿಗೆ ಹೆಚ್ಚು ಪುಣ್ಯಕರವಾಗಿರಲಿಲ್ಲ. ಭೀಮ ಸಹಿಸಿಕೊಂಡಿದ್ದುದು ಅವನಿಗೆ ಬಹಳ ಪುಣ್ಯಕರವಾಗಿತ್ತು. ದ್ರೌಪದಿ ಅತ್ಯಂತ ಕ್ಲೇಶವನ್ನು ಸಹನೆ ಮಾಡಿದ್ದರಿಂದ ಅವಳಿಗೆ ಅದು ಮಹಾಪುಣ್ಯಕರವಾಯಿತು. ಅವಳು ಭೀಮನ ಇಚ್ಛೆಯನ್ನು ತಿಳಿದಿದ್ದಳು, ಶಾಪ ಕೊಡಬಾರದು ಎಂದು.

[1]ಭೀಮ ದ್ರೌಪದಿ ಮತ್ತು ಅರ್ಜುನಾದಿಗಳಲ್ಲಿ ಕ್ರಮವಾಗಿ ತಾರತಮ್ಯದಿಂದ ಧರ್ಮರಾಜನ ಪುಣ್ಯ ಬಂದು ಸೇರಲು ಕಾರಣ ಈ ಎರಡು ಶ್ಲೋಕಗಳಲ್ಲಿ ಉಕ್ತವಾಗಿದೆ. ಧರ್ಮರಾಜನ ಆಜ್ಞೆಯಂತೆಯೆ ಭೀಮನೂ

1. ಭೀಮಸೇನಸ್ಯ ಸ್ವಗುರುತ್ವಾತ್ ತಸ್ಮಿನ್ ಕ್ರುಧ್ಯತಿ ಸ್ವಯಂ ಕ್ರೋಧಮಕೃತ್ವಾ ದ್ಯೂತೇ ಅರ್ಜುನಾದೀನಾಂ ಯಾ ಕ್ಷಮಾ ಸಾ ಅತಿಧರ್ಮಸ್ವರೂಪೋ ಧರ್ಮೋ ನ। ಗುರೂಲ್ಲಂಘನಾಖ್ಯ ದೋಷಗ್ರಸ್ತತ್ವಾತ್। ಅತಸ್ತೇಷು ಪುಣ್ಯಮಲ್ಪಮೇವ ಸಂಕ್ರಾಮಿತಂ। ಅತ್ರದ್ಯೂತೇ ಈಷದನ್ಯಾಯವರ್ತಿನೋ ಧರ್ಮರಾಜಸ್ಯ ಭರ್ತ್ಸನಾತ್ ದುರ್ದ್ಯೂತೇ ದ್ರೌಪದ್ಯಾಕರ್ಷಣಾದಿ ಬಹ್ವನ್ಯಾಯವರ್ತಿನಾಂ ದುರ್ಯೋಧನಾದೀನಾಂ ವಧೋದ್ಯೋಗಾಚ್ಚ ಭೀಮೇ ನಿರೌಪಧೋ ಧರ್ಮಃ। ಅತಸ್ತತ್ರಾರ್ಜುನಾದಿಭ್ಯೋಽಪ್ಯತಿಶಯೇನ ಧರ್ಮಸಂಕ್ರಾಮಣಂ। ದ್ರೌಪದ್ಯಾ ಅಪ್ಯತಿಕ್ಲೇಶಾತ್ ಅತಿಕ್ಲೇಶಸಹನಾತ್ ಕ್ಷಮಾ

ಅರ್ಜುನಾದಿಗಳೂ ದ್ರೌಪದಿಯೂ ಎಲ್ಲವನ್ನೂ ಸಹಿಸಿ ಸುಮ್ಮನಿದ್ದರು. ಆದರೆ ಭೀಮ ಮೊದಲಿಗೆ ಧರ್ಮರಾಜನ ಜೂಜನ್ನು ಬಲವಾಗಿ ಪ್ರತಿಭಟಿಸಿದ. ಕೌರವರನ್ನು ಕೊಲ್ಲುವೆನೆಂದು ಕೋಪದಿಂದ ಎದ್ದುನಿಂತ. ಕೊನೆಗೆ ಅಣ್ಣನಿಗೆ ವಿಧೇಯನಾಗಿ ಸುಮ್ಮನಾದ. ಹೀಗೆ ಅಧರ್ಮ ಪ್ರತಿಭಟನೆ ಮತ್ತು ಹಿರಿಯನಿಗೆ ವಿಧೇಯನಾಗಿರುವುದು ಈ ಎರಡು ಕಾರಣಗಳಿಂದ ಭೀಮನಿಗೆ ಮಹಾಪುಣ್ಯ ಲಭಿಸಿತು. ಅರ್ಜುನಾದಿಗಳು ಹಾಗೆ ಮಾಡದೆ ಸುಮ್ಮನೇ ಇದ್ದರು. ಹಿರಿಯನಾದ ಭೀಮ ಕೋಪಗೊಂಡಾಗಲೂ ಅವರು ತಾವು ಕೋಪಗೊಳ್ಳದೆ ಸುಮ್ಮನಿದ್ದುದು ಧರ್ಮರಾಜನ ಇಚ್ಛೆಗೆ ಅನುಗುಣವಾದರೂ ಭೀಮನ ಇಚ್ಛೆಗೆ ಅನುಗುಣವಾಗದಿದ್ದುದರಿಂದ ಗುರೂಲ್ಲಂಘನವೆಂಬ ದೋಷದಿಂದ ಯುಕ್ತವಾಯಿತು. ಮಹಾಪುಣ್ಯಕರವಾಗಲಿಲ್ಲ. ದ್ರೌಪದಿ ಬಹುಕ್ಲೇಶ ಸಹನೆ ಮಾಡಿದಳು. ಪತಿಗಳ ಇಚ್ಛೆಗೆ ಅನುಗುಣವಾಗಿ ಶಾಪಕೊಡದೆ ಸುಮ್ಮನಿದ್ದಳು. ಈಗಲೆ ಶಾಪಕೊಟ್ಟು ಕೌರವರನ್ನು ಸುಟ್ಟುಬಿಟ್ಟರೆ ಭೂಭಾರ ಪೂರ್ತಿ ಕಳೆಯುವುದಿಲ್ಲ ಎಂದು ಶ್ರೀಕೃಷ್ಣನಿಗೆ ಅಭಿಪ್ರಾಯವಿತ್ತು. ಭೀಮನಿಗೂ ಅದೇ ಅಭಿಪ್ರಾಯವಿತ್ತು. ಇಬ್ಬರ ಅಭಿಪ್ರಾಯಾನುಸಾರ ದ್ರೌಪದಿ ಸುಮ್ಮನಿದ್ದಳು ಹೊರತು ತನ್ನ ಇಚ್ಛಾನುಸಾರವಲ್ಲ. ಅದರಿಂದ ಇಬ್ಬರ ಇಚ್ಛಾನುಸಾರ ವರ್ತಿಸಿದುದೂ ಬಹುಕ್ಲೇಶ ಸಹನೆ ಮಾಡಿದುದೂ ದ್ರೌಪದಿಗೆ ಅರ್ಜುನಾದಿಗಳಿಗಿಂತ ಹೆಚ್ಚಿನ ಪುಣ್ಯಕ್ಕೆ ಕಾರಣವಾಯಿತು ಎಂದು ವಾದಿರಾಜೀಯ ಹೇಳಿದೆ.

[2]ಭೀಮಸೇನ ಸರ್ವಜಗದ್ಗುರುವಾದ್ದರಿಂದ ಅವನ ನಿಂದೆಯನ್ನು ಕೌರವರು ಮಾಡುತ್ತಿದ್ದರೂ ಅರ್ಜುನಾದಿಗಳು ಸುಮ್ಮನೆ ಕೇಳಿದ್ದು

ಮಹಾಧರ್ಮೋಽಭೂತ್। ತರ್ಹಿ ಭೀಮೇ ಕ್ರುಧ್ಯತಿ ಸ್ವಯಂ ಕ್ರೋಧಾಚ್ಛಾಪಾದ್ಯದಾನೇನ ಅರ್ಜುನಾದಿವತ್ ಭೀಮೋಲ್ಲಂಘನಾಖ್ಯೋ ದೋಷಃ ಸ್ಯಾದಿತ್ಯತ ಆಹ ಸಾಹೀತಿ। ಭಿಮಮನ ಇತ್ಯುಪಲಕ್ಷಣಂ। ಶಾಪದಾನಾದೇತತ್‌ಕ್ಷಣ ಏವ ದುರ್ಯೋಧನಾದೀನಾಂ ಹನನೇ ಬಹುತರ ಭೂಭಾರನಾಶೋ ನ ಸ್ಯಾದಿತಿ ಕೃಷ್ಣಮನೋಽಪಿ ವೇದೇತ್ಯಪಿ ಜ್ಞಾತವ್ಯಂ। ಏವಂಚ ಕೃಷ್ಣಭೀಮ ಮನೋಽನು ಸಾರಿತ್ವಾಖ್ಯ ಪುಣ್ಯಬಲಾತ್ ಬಹುತರ ದುಃಖಸಹನೇನಾತಿ ಕ್ಷಮಾವತ್ತ್ವಾಖ್ಯ ಪುಣ್ಯ ಬಲಾಚ್ಚ ದುಷ್ಟಸಂಹಾರೋದ್ಯೋಗ ಕರಣಾನ್ಮಹಾಪುಣ್ಯವತಃ ಸ್ವಪತೇರನಂತರಮರ್ಜು ನಾದಿಭ್ಯೋಽಪ್ಯಾಧಿಕ್ಯೇನ ತಸ್ಯಾಂ ಪುಣ್ಯ ಸಂಕ್ರಾಮಣಮಿತಿ ವಾಕ್ಯ ಸಂದರ್ಭಸ್ಯಾಭಿಸಂಧಿಃ॥

-ವಾದಿರಾಜೀಯ

2. ಭೀಮಸೇನಸ್ಯ ಸರ್ವ ಜಗದ್ಗುರುತ್ವಾತ್ ಗುರೂಣಾಂ ಶಕ್ತೌ ಸತ್ಯಾಮಪಿ ಕ್ಷಮಾಯಾ ಅತಿ ಧರ್ಮತ್ವಾತ್। ಗುರುನಿಂದಾಶ್ರವಣಸ್ಯ ಮಹಾದೋಷಹೇತುತ್ವೇನ ದುರ್ಯೋಧನಾದಿಕೃತ ಭೀಮನಿಂದಾಂ ಶ್ರುತ್ವಾಪಿ ತೂಷ್ಣೀಂ ಸ್ಥಿತತ್ವಾದರ್ಜುನಾದೀನಾಮಿತಿ ಭಾವಃ। -ಪ್ರಮಾಣ ಸಂಗ್ರಹಃ

ದೋಷವಾಯಿತು. ಅದರಿಂದ ಅವರಿಗೆ ಹೆಚ್ಚು ಪುಣ್ಯ ಸಿಗಲಿಲ್ಲ' ಎಂದು ಪ್ರಮಾಣ ಸಂಗ್ರಹಕಾರರ ಅಭಿಪ್ರಾಯ.

ತಸ್ಮಾದ್ ಯಥಾಯೋಗ್ಯತಯಾ ಹರಿಣಾ ಧರ್ಮವರ್ಧನಂ ।
ಕೃತಂ ತತ್ರಾಸನ್ನಿಧಾನಕಾರಣಂ ಕೇಶವೋಽಬ್ರವಿತ್ ॥೪೧॥

ಅದರಿಂದ ಶ್ರೀಕೃಷ್ಣ ಜೂಜಿನ ಸಂದರ್ಭದಲ್ಲಿ ಪಾಂಡವರಲ್ಲಿ ಅವರವರ ಯೋಗ್ಯತಾನುಸಾರವೆ ಪುಣ್ಯವೃದ್ಧಿ ಉಂಟುಮಾಡಿದ. ತಾನು ಪಾಂಡವರ ಬಳಿ ಇರದಿದ್ದುದಕ್ಕೆ ಕಾರಣವನ್ನೂ ಹೇಳಿದ.

ಹಿಂದೆ ಮೂವತ್ತನೆ ಶ್ಲೋಕದಲ್ಲಿ ಸಾಲ್ವವಧೆಗಾಗಿ ತಾನು ಹೋಗಬೇಕಾಯಿತೆಂದು ಕಾರಣವನ್ನು ಹೇಳಿದ್ದಾನೆ ಶ್ರೀಕೃಷ್ಣ. ಆದರೆ ಸಾಲ್ವನನ್ನು ಕೊಲ್ಲಲು ನೀನೇ ಹೋಗಬೇಕಾಗಿರಲಿಲ್ಲ. ಬಲರಾಮ ಪ್ರದ್ಯುಮ್ನಾದಿಗಳನ್ನು ಮಾತ್ರವೆ ಕಳಿಸಬಹುದಿತ್ತು ಎಂದರೆ ಅದೇ ಕಥೆಯನ್ನು ವಿಸ್ತಾರವಾಗಿ ಹೇಳಲು ತೊಡಗಿದ್ದಾನೆ ಶ್ರೀಕೃಷ್ಣ.

ಸಾಲ್ವ ವಧ

ಸಾಲ್ವಂ ಶ್ರುತ್ವಾ ಸಮಾಯಾಂತಂ ರೌಕ್ಮಿಣೇಯಾದಯೋ ಮಯಾ ।
ಪ್ರಸ್ಥಾಪಿತಾ ಹಿ ಭವತಾಂ ಸಕಾಶೇ ತೇ ಯಯುಃ ಪುರೀಂ ।
ತದಾ ಸಾಲ್ವೋಽಪಿ ಸೌಭೇನ ದ್ವಾರಕಾಮರ್ದಯದ್ ಭೃಶಂ ॥೪೨॥

ನಾನು ನಿಮ್ಮಲ್ಲಿದ್ದಾಗ ಸಾಲ್ವ ಬರುತ್ತಿರುವ ವಾರ್ತೆಯನ್ನು ಕೇಳಿ ಪ್ರದ್ಯುಮ್ನ ಮೊದಲಾದವರನ್ನೇ ದ್ವಾರಕೆಗೆ ಕಳಿಸಿದೆ. ಅವರು ಹೋದರು. ಸಾಲ್ವ ಸೌಭ ವಿಮಾನದ ಬಲದಿಂದ ದ್ವಾರಕೆಯನ್ನು ಬಹಳ ಪೀಡಿಸಿದ.

ಪ್ರದ್ಯುಮ್ನ ಆಶು ನಿರಗಾದಥ ಸರ್ವಸೈನ್ಯೈ
ರನ್ಯೈಶ್ಚ ಯಾದವಗಣೈಃ ಸಹಿತೋಽನುಜೈಶ್ಚ ।
ಸಾಲ್ವೋಽವಗಮ್ಯ ತನಯಂ ಮಮ ತದ್ವಿಮಾನಾತ್
ಪಾಪೋಽವರುಹ್ಯ ರಥಮಾರುಹದತ್ರ ಯೋದ್ಧುಂ ॥೪೩॥

ಒಡನೆ ಪ್ರದ್ಯುಮ್ನ ಎಲ್ಲ ಸೈನ್ಯಗಳಿಂದಲೂ ಬೇರೆ ಯಾದವ ಗುಂಪುಗಳಿಂದಲೂ ತಮ್ಮಂದಿರಿಂದಲೂ ಕೂಡಿಕೊಂಡು ಸಾಲ್ವನೊಡನೆ ಯುದ್ಧಕ್ಕೆ ಹೊರಟ. ಆ ಪಾಪಿ ಪ್ರದ್ಯುಮ್ನನನ್ನು ನನ್ನ ಮಗನೆಂದು ತಿಳಿದು ಯುದ್ಧ ಮಾಡುವುದಕ್ಕೆ ವಿಮಾನದಿಂದ ಕೆಳಗಿಳಿದು ರಥವನ್ನೇರಿದ.

ಕೃಷ್ಣನೇ ಯುದ್ಧಕ್ಕೆ ಬಂದಿದ್ದರೆ ಸಾಲ್ವ ವಿಮಾನದಲ್ಲಿ ಕುಳಿತೇ ಯುದ್ಧ ಮಾಡುತ್ತಿದ್ದ. ಹಾಗೆ ಮಾಡಿದರೆ ಮಾತ್ರ ಅಜೇಯನಾಗುವನೆಂದು ಶಿವನ

ವರವಿದ್ದಿತು. ಈಗ ಯುದ್ಧಕ್ಕೆ ಬಂದವನು ಕೃಷ್ಣನಲ್ಲ, ಕೃಷ್ಣನ ಮಗ ಪ್ರದ್ಯುಮ್ನ. ಈತ ದುರ್ಬಲ. ಇವನೊಡನೆ ಹೋರಾಡಲು ವಿಮಾನ ಬೇಡ ಎಂದು ಸಾಲ್ವ ಕೆಳಗಿಳಿದು ರಥವೇರಿದ.

ಕೃತ್ವಾ ಸುಯುದ್ಧಮಮುನಾ ಮಮ ಪುತ್ರಕೋಽಸಾ-
ವಸ್ತ್ರಾಣಿ ತಸ್ಯ ವಿನಿವಾರ್ಯ ಮಹಾಸ್ತ್ರಜಾಲೈಃ।
ದತ್ತಂ ಮಯಾ ಶರಮಮೋಘಮಥಾದದೇ ತಂ
ಹಂತುಂ ನೃಪಂ ಕೃತಮತಿಸ್ತ್ವಶೃಣೋದ್ವಚಃ ಖೇ। ॥೪೪॥

ನನ್ನ ಮಗ ಪ್ರದ್ಯುಮ್ನ ಸಾಲ್ವನೊಡನೆ ಚೆನ್ನಾಗಿ ಯುದ್ಧ ಮಾಡಿ ಅವನ ಅಸ್ತ್ರಗಳನ್ನು ಮಹಾ ಅಸ್ತ್ರಸಮೂಹಗಳಿಂದ ತಡೆದು ಅವನನ್ನು ಕೊಲ್ಲಲು ನಿಶ್ಚಯಮಾಡಿ ನಾನು ಕೊಟ್ಟಿದ್ದ ಒಂದು ಅಮೋಘವಾದ ಬಾಣವನ್ನು ಎತ್ತಿಕೊಂಡ. ಅಷ್ಟರಲ್ಲಿ ಆಕಾಶದಲ್ಲಿ ಅಶರೀರವಾಣಿಯನ್ನು ಕೇಳಿದ.

ನಾರಾಯಣೇನ ಹಿ ಪುರಾ ಮನಸಾಭಿಕ್ಲೃಪ್ತಂ
ಕೃಷ್ಣಾವತಾರಮುಪಗಮ್ಯ ನಿಹನ್ಮಿ ಸಾಲ್ವಂ।
ಇತ್ಯೇವ ತೇನ ಹರಿಣಾಪಿ ಸ ಭಾರ್ಗವೇಣ
ವಿದ್ರಾವಿತೋ ನ ನಿಹತಃ ಸ್ವಮನೋಽನುಸಾರಾತ್ ॥೪೫॥

'ನಾರಾಯಣ ಹಿಂದೆಯೆ, ಮನಸ್ಸಿನಲ್ಲಿ ಸಂಕಲ್ಪಿಸಿದ್ದಾನೆ 'ಕೃಷ್ಣಾವತಾರ ಮಾಡಿಯೆ ಸಾಲ್ವನನ್ನು ಕೊಲ್ಲುವೆನೆ' ಂದು. ಅದರಿಂದಲೆ ಪರಶುರಾಮ ರೂಪನಾದ ಆ ಹರಿಯೂ ಕೂಡ ತನ್ನ ಈ ಸಂಕಲ್ಪಾನುಸಾರವಾಗಿ ಸಾಲ್ವನನ್ನು ಓಡಿಸಿದನೇ ಹೊರತು ಕೊಲ್ಲಲಿಲ್ಲ.

ವಧ್ಯಸ್ತ್ವಯಾ ನ ಹಿ ತತೋಽಯಮಯಂ ಚ ಬಾಣ-
ಶ್ಚಕ್ರಾಯುಧಸ್ಯ ದಯಿತೋ ನಿತರಾಮಮೋಘಃ।
ಮಾ ಮುಂಚ ತೇನ ತಮಿಮಂ ವಿನಿವರ್ತಯೇಽಹಂ
ಸಾಲ್ವಂ ಹೃದಿ ಸ್ಥಿತ ಇತೀರಿತಮೀರಣೇನ ॥೪೬॥

ಅದರಿಂದ ಈ ಸಾಲ್ವ ನಿನ್ನಿಂದ ಹತನಾಗುವವನಲ್ಲ. ಈ ಬಾಣ ಶ್ರೀಹರಿಗೆ ಬಹಳ ಪ್ರಿಯವಾದುದು. ಅಮೋಘವಾದುದು. ಅದನ್ನು ಪ್ರಯೋಗಿಸಬೇಡ. ನಾನೆ ಸಾಲ್ವನನ್ನು ಅವನ ಹೃದಯದಲ್ಲಿ ನಿಂತು ಪ್ರೇರಿಸಿ ಹಿಂತಿರುಗುವಂತೆ ಮಾಡುತ್ತೇನೆ ಎಂದು ನುಡಿದ, ವಾಯು.

ಶ್ರುತ್ವಾ ವಚಃ ಸ ಪವನಸ್ಯ ಶರಂ ತ್ವಮೋಘಂ
ಸಂಜಹ್ರ ಆಶು ಸ ಚ ಸಾಲ್ವಪತಿಃ ಸ್ವಸೌಭಂ।
ಆರುಹ್ಯ ಬಾಲಕಲಹೇನ ಕಿಮತ್ರ ಕಾರ್ಯಂ
ಕೃಷ್ಣೇನ ಸಂಗರ ಇತಿ ಪ್ರಯಯೌ ಸ್ವದೇಶಂ ॥೪೭॥

ವಾಯು ವಚನವನ್ನು ಕೇಳಿ ಪ್ರದ್ಯುಮ್ನ ಆ ಅಮೋಘ ಬಾಣವನ್ನು ಹಿಂತೆಗೆದುಕೊಂಡ. ಸಾಲ್ವ 'ಬಾಲಕನೊಡನೆ ಯುದ್ಧ ಮಾಡಿ ಏನು ಪ್ರಯೋಜನ? ಕೃಷ್ಣನೊಡನೆಯೆ ಯುದ್ಧ' ಎಂದು ಹೇಳುತ್ತ ವಿಮಾನವನ್ನು ಹತ್ತಿ ತನ್ನ ದೇಶಕ್ಕೆ ಹೊರಟ.

ಸಾಲ್ವ ಸೋತಿದ್ದರೂ ಸೋಲನ್ನೊಪ್ಪಿಕೊಳ್ಳದೆ ದರ್ಪದಿಂದ ಹೀಗೆ ಹೇಳುತ್ತಾನೆ!

ಪ್ರದ್ಯುಮ್ನಸಾಂಬಗದಸಾರಣಚಾರುದೇಷ್ಣಾಃ
ಸೇನಾಂ ನಿಹತ್ಯ ಸಹ ಮಂತ್ರಿಗಣೈಸ್ತದೀಯಾಂ ।
ಆಹ್ಲಾದಿನಃ ಸ್ವಪುರಮಾಯಯುರಪ್ಯಹಂ ಚ
ತತ್ಸಾಗಮಂ ಸಪದಿ ತೈಃ ಶ್ರುತವಾನಶೇಷಂ ॥೪೮॥

ಪ್ರದ್ಯುಮ್ನ ಸಾಂಬ ಗದ ಸಾರಣ ಚಾರುದೇಷ್ಣರು ಸಾಲ್ವನ ಸೈನ್ಯವನ್ನು ಅವನ ಮಂತ್ರಿಸಮೂಹದೊಂದಿಗೆ ನಾಶಪಡಿಸಿ ಆನಂದಗೊಂಡು ನಗರಕ್ಕೆ ಹಿಂತಿರುಗಿದರು. ಅದೇ ಸಮಯದಲ್ಲಿ ನಾನೂ ಅಲ್ಲಿಗೆ ಹೋದೆ. ಅವರಿಂದ ಎಲ್ಲವನ್ನೂ ಕೇಳಿ ತಿಳಿದೆ.

ಯಸ್ಮಿನ್ ಶರೇ ಕರಗತೇ ವಿಜಯೋ ಧ್ರುವಃ ಸ್ಯಾ-
ನ್ಮತ್ತೇಜಸಾ ತದನುಸಂಗ್ರಹಣಾತ್ಸುತಾನ್ಮೇ ।
ಯಾತಂ ನಿಶಮ್ಯ ರಿಪುಮಾತ್ಮಪುರೀಂ ಚ ಭಗ್ನಾಂ
ದೃಷ್ಟ್ವೈವ ತೇನ ತದನುವ್ರಜನಂ ಕೃತಂ ಮೇ ॥೪೯॥

ಯಾವ ಬಾಣ ಕೈಯಲ್ಲಿದ್ದರೆ ನನ್ನ ಪ್ರಭಾವದಿಂದ ವಿಜಯ ನಿಶ್ಚಯವಾಗಿ ದೊರೆಯುವುದೋ ಆ ಬಾಣವನ್ನು ಪ್ರದ್ಯುಮ್ನ ಹಿಡಿದಿದ್ದುದರಿಂದ ಶತ್ರು ಹೊರಟುಹೋದ. ಈ ಸಮಾಚಾರವನ್ನು ಕೇಳಿ ಮತ್ತು ಶತ್ರು ನಮ್ಮ ಪಟ್ಟಣವನ್ನು ನಾಶಮಾಡಿರುವುದನ್ನೂ ಕಂಡು ಒಡನೆಯೆ ಅವನ ಬೆನ್ನುಹತ್ತಿದೆ.

ತಂ ಸಾಗರೋಪರಿಗಸೌಭಗತಂ ನಿಶಾಮ್ಯ
ಮುಕ್ತೇ ಚ ತೇನ ಮಯಿ ಶಸ್ತ್ರಮಹಾಸ್ತ್ರವರ್ಷೇ ।
ತಂ ಸನ್ನಿವಾರ್ಯ ಚ ಮಯಾ ಶರಪೂಗವಿದ್ಧೋ
ಮಾಯಾಂ ಯುಯೋಜ ಮಯಿ ಪಾಪತಮಃ ಸ ಸಾಲ್ವಃ ॥೫೦॥

ಸಾಲ್ವ ಸಮುದ್ರದ ಮೇಲೆ ಸೌಭವಿಮಾನದಲ್ಲಿ ಸಂಚರಿಸುತ್ತಿದ್ದುದನ್ನು ನಾನು ಕಂಡೆ. ನನ್ನ ಮೇಲೆ ಅವನು ಪ್ರಯೋಗಿಸಿದ ಶಸ್ತ್ರ ಮಹಾಸ್ತ್ರಗಳ ಮಳೆಯನ್ನೂ ತಡೆದೆ. ಬಾಣ ಸಮೂಹಗಳಿಂದ ಅವನನ್ನು ಹೊಡೆದೆ. ಆಗ ಆ ಮಹಾಪಾಪಿ ಸಾಲ್ವನನ್ನಲ್ಲಿ ಮಾಯೆಗಳನ್ನು ಪ್ರಯೋಗಿಸಿದ.

ದ್ವಾರಕಾ ನಿವಾಸಿಯಂತೆ ಕಾಣುತ್ತಿದ್ದ ಒಬ್ಬ ಮನುಷ್ಯ ತಾನು ಆಹುಕನ

ದೂತನೆಂದು ಹೇಳಿಕೊಂಡು 'ಸಾಲ್ವ ದ್ವಾರಕೆಯಲ್ಲಿ ವಸುದೇವನನ್ನು ಕೊಂದು ಬಿಟ್ಟ, ನೀನಿನ್ನು ಇಲ್ಲಿ ಯುದ್ಧಮಾಡಿ ಫಲವಿಲ್ಲ, ಹಿಂತಿರುಗಿ ಬಂದು ದ್ವಾರಕೆಯನ್ನು ರಕ್ಷಿಸು' ಎಂದು ಆಹುಕನ ಸಂದೇಶವನ್ನು ತಿಳಿಸಿದ. ಬಳಿಕ ಸೌಭ ವಿಮಾನದಿಂದ ವಸುದೇವ ಕೆಳಗುರುಳಿದಂತೆ, ಬೀಳುತ್ತಿದ್ದ ಆತನನ್ನು ದಾನವರು ಆಯುಧಗಳಿಂದ ತಿವಿಯುತ್ತಿದ್ದಂತೆ ಕಾಣಿಸಿತು. ಬಳಿಕ ಸಾಲ್ವ ಮಾಯೆಯಿಂದಲೆ ತನ್ನ ರಥ ಸೈನ್ಯವೆಲ್ಲವನ್ನೂ ಅದೃಶ್ಯಗೊಳಿಸಿದ. ಅವರ ಧ್ವನಿಯೂ ಕೇಳಿಸದಾಯಿತು. ಒಡನೆ ಹತ್ತು ದಿಕ್ಕುಗಳಿಂದಲೂ ರಾಕ್ಷಸರ ಜಯಕಾರ ಧ್ವನಿ. ಹೀಗೆ ಅನೇಕ ಮಾಯೆಗಳನ್ನು ಸಾಲ್ವಪ್ರದರ್ಶಿಸಿದ.

ತಾಃ ಕ್ರೀಡಯಾ ಕ್ಷಣಮಹಂ ಸಮರೇ ನಿಶಾಮ್ಯ
ಜ್ಞಾನಾಸ್ತ್ರತಃ ಪ್ರತಿವಿಧಾಯ ಬಹೂಂಶ್ಚ ದೈತ್ಯಾನ್ ।
ಹತ್ವಾಶು ತಂ ಚ ಗಿರಿವರ್ಷಿಣಮಾಶು ಸೌಭಂ
ವಾರ್ಧ್ಯೌ ನ್ಯಪಾತಯಮರೀಂದ್ರವಿಭಿನ್ನಬಂಧಂ ॥೫೧॥

ಆ ಮಾಯೆಗಳನ್ನು ಯುದ್ಧದಲ್ಲಿ ನಾನು ಕ್ಷಣ ಕಾಲ ಲೀಲೆಯಿಂದ ನೋಡಿ ವಿಜ್ಞಾನಾಸ್ತ್ರದಿಂದ ನಿವಾರಿಸಿ ಬಹಳ ದಾನವರನ್ನು ಸಂಹರಿಸಿದೆ. ಸಾಲ್ವ ಬೆಟ್ಟಗಳನ್ನೆ ಮಳೆಗರೆದ. ನಾನು ಬೇಗನೆ ಚಕ್ರದಿಂದ ಅವನ ಸೌಭವನ್ನು ಕತ್ತರಿಸಿ ಸಮುದ್ರದಲ್ಲಿ ಬೀಳಿಸಿದೆ. ಅವನನ್ನು ಸಮುದ್ರದಲ್ಲಿ ಹಾಕಿದೆ.

ತಂ ಸ್ಯಂದನೇ ಸ್ಥಿತಮಥೋ ವಿಭುಜಂ ವಿಧಾಯ
ಬಾಣೇನ ತದ್ರಥವರಂ ಗದಯಾ ವಿಭಿದ್ಯ ।
ಚಕ್ರೇಣ ತಸ್ಯ ಚ ಶಿರೋ ವಿನಿಕೃತ್ಯ ಧಾತೃ
ಶರ್ವಾದಿಭಿಃ ಪ್ರತಿನುತಃ ಸ್ವಪುರೀಮಗಾಂ ಚ ॥೫೨॥

ಸಾಲ್ವ ರಥವೇರಿ ಬಂದ. ನಾನು ಅವನ ಬಾಹುಗಳನ್ನು ಬಾಣಗಳಿಂದ ಕತ್ತರಿಸಿ, ಉತ್ತಮವಾದ ರಥವನ್ನು ಗದೆಯಿಂದ ಮುರಿದು, ಶಿರವನ್ನು ಚಕ್ರದಿಂದ ತರಿದು ಬ್ರಹ್ಮರುದ್ರಾದಿಗಳಿಂದ ಹೊಗಳಿಸಿಕೊಳ್ಳುತ್ತ ನನ್ನ ಪಟ್ಟಣಕ್ಕೆ ಹಿಂತಿರುಗಿದೆ.

ತಸ್ಮಾದಿದಂ ವ್ಯಸನಮಾಸ ಹಿ ವಿಪ್ರಕರ್ಷಾತ್
ಮೇ ಕಾರ್ಯತಸ್ತ್ವಿತಿ ನಿಗದ್ಯ ಪುನಶ್ಚ ಪಾರ್ಥಾನ್ ।
ಕೃಷ್ಣಾಂ ಚ ಸಾಂತ್ವಯಿತುಮತ್ರ ದಿನಾನ್ಯವಾಸ
ಸತ್ಯಾ ಚ ಸೋಮಕಸುತಾಮನುಸಾಂತ್ವಯಂತೀ ॥೫೩॥

ನನ್ನ ಈ ಸಾಲ್ವವಧ ಕಾರ್ಯದ ದೆಸೆಯಿಂದ ನಾನು ದೂರವಿರಬೇಕಾಯಿತು. ಅದರಿಂದ ಈ ಕಷ್ಟ ಬಂದೊದಗಿತು' - ಹೀಗೆ ಹೇಳಿ ಶ್ರೀಕೃಷ್ಣ ಪಾಂಡವರನ್ನೂ

ದ್ರೌಪದಿಯನ್ನೂ ಸಂತೈಸುವುದಕ್ಕಾಗಿ ಪುನಃ ಕೆಲವು ದಿನಗಳ ಕಾಲ ಅವರೊಡನೆ ವಾಸ ಮಾಡಿದ. ಸತ್ಯಭಾಮೆಯೂ ದ್ರೌಪದಿಯನ್ನು ಸಂತೈಸಲು ಅಲ್ಲಿ ವಾಸ ಮಾಡಿದಳು.

ವನವಾಸದ ಒಂದು ವರ್ಷ

ಪಾಂಡವಾನಾಂ ಚ ಯಾ ಭಾರ್ಯಾಃ ಪುತ್ರಾ ಅಪಿ ಚ ಸರ್ವಶಃ ।
ಅನ್ವೇವ ಪಾಂಡವಾನ್ ಯಾತಾ ವನಮತ್ಯೈವ ಸಂಸ್ಥಿತಾಃ ॥೫೪॥

ಪಾಂಡವರ ಬೇರೆ ಪತ್ನಿಯರೂ ಎಲ್ಲ ಮಕ್ಕಳೂ ಅವರನ್ನು ಹಿಂಬಾಲಿಸಿ ಕಾಡಿಗೆ ಬಂದು ಜೊತೆಗೇ ಇದ್ದರು.

ಧೃಷ್ಟದ್ಯುಮ್ನಸ್ತತಃ ಕೃಷ್ಣಾಂ ಸಾಂತ್ವಯಿತ್ವೈವ ಕೇಶವಂ ।
ಪ್ರಣಮ್ಯ ಸಮನುಜ್ಞಾತೋ ಭಾಗಿನೇಯ್ಯೈಃ ಪುರಂ ಯಯೌ ॥೫೫॥

ಧೃಷ್ಟದ್ಯುಮ್ನ ದ್ರೌಪದಿಯನ್ನು ಸಂತೈಸಿ ಕೃಷ್ಣನನ್ನು ನಮಿಸಿ ಅವನ ಅನುಜ್ಞೆ ಪಡೆದು ದ್ರೌಪದೀಪುತ್ರರೊಂದಿಗೆ ತನ್ನ ಪಟ್ಟಣಕ್ಕೆ ಹೊರಟುಹೋದ.

ಧೃಷ್ಟಕೇತುಶ್ಚ ಭಗಿನೀಂ ಕಾಶಿರಾಜಃ ಸುತಾಮಪಿ ।
ಪುರಂ ಯಯತುರಾದಾಯ ಕುಂತ್ಯೈವಾನ್ಯಾಃ ಸಹ ಸ್ಥಿತಾಃ ॥೫೬॥

ಧೃಷ್ಟಕೇತು ತನ್ನ ತಂಗಿಯನ್ನೂ ಕಾಶಿರಾಜ ತನ್ನ ಮಗಳನ್ನೂ ಕರೆದುಕೊಂಡು ತಮ್ಮ ಪಟ್ಟಣಗಳಿಗೆ ಹೋದರು. ಪಾಂಡವರ ಬೇರೆ ಪತ್ನಿಯರು ಕುಂತಿಯ ಜೊತೆಗೇ ಇದ್ದರು.

ಧೃಷ್ಟಕೇತು ಶಿಶುಪಾಲನ ಮಗ. ಅವನ ತಂಗಿ ಧರ್ಮರಾಜನ ಹೆಂಡತಿಯಾದ ದೇವಕಿ. ಅವಳನ್ನೂ ಕರೆದುಕೊಂಡು ಧೃಷ್ಟಕೇತು ಚೇದಿ ಪಟ್ಟಣಕ್ಕೆ ಹೊರಟುಹೋದ. ಕಾಶಿರಾಜನ ಮಗಳು ಕಾಳೀದೇವಿ ಭೀಮಸೇನನ ಪತ್ನಿ. ಅವಳನ್ನು ಕರೆದುಕೊಂಡು ಕಾಶಿರಾಜ ಕಾಶಿಗೆ ಹೊರಟ. ನಕುಲ ಸಹದೇವರ ಪತ್ನಿಯರು ಪಾರ್ವತಿ ವಿಜಯಾ ಮತ್ತು ಕರೇಣುಮತಿ ಕುಂತಿಯ ಅಪೇಕ್ಷೆಯಂತೆ ಅವಳೊಂದಿಗೆ ವಿದುರನ ಮನೆಯಲ್ಲಿಯೆ ಇದ್ದರು.

ಪಾರ್ವತೀ ನಕುಲಸ್ಯಾಸೀತ್ ಭಾರ್ಯಾ ಪೂರ್ವಂ ತಿಲೋತ್ತಮಾ ।
ಪೂರ್ವೋಕ್ತೇ ಚೈವ ಯಮಯೋರ್ಭಾರ್ಯೇ ಕುಂತ್ಯಾ ನಿವಾರಿತಾಃ ॥೫೭॥

ಹಿಂದೆ ತಿಲೋತ್ತಮೆ ಎಂಬ ಅಪ್ಸರೆಯಾಗಿದ್ದವಳು ನಕುಲ ಪತ್ನಿ ಪಾರ್ವತಿ. ಅವಳನ್ನೂ ಹಿಂದೆ ಹೇಳಿದ ನಕುಲ ಸಹದೇವರ ಪತ್ನಿಯರಾದ ಶಲ್ಯ ಜರಾಸಂಧ ಪುತ್ರಿಯರನ್ನೂ ಕಾಡಿಗೆ ಹೋಗದಂತೆ ತಡೆದು ಕುಂತಿ ತನ್ನ ಬಳಿಯೆ ನಿಲ್ಲಿಸಿಕೊಂಡಿದ್ದಳು.

ಸುಭದ್ರಾಮಭಿಮನ್ಯುಂ ಚ ರಥಮಾರೋಪ್ಯ ಕೇಶವಃ ।
ಪಾಂಡವಾನಭ್ಯನುಜ್ಞಾಪ್ಯ ಸಭಾರ್ಯಃ ಸ್ವಪುರಂ ಯಯೌ ॥೫೮॥

ಸುಭದ್ರೆಯನ್ನೂ ಅಭಿಮನ್ಯುವನ್ನೂ ಶ್ರೀಕೃಷ್ಣ ರಥದಲ್ಲಿ ಕುಳ್ಳಿರಿಸಿಕೊಂಡು ಪಾಂಡವರಿಂದ ಬೀಳ್ಕೊಂಡು ಸತ್ಯಭಾಮಾ ಸಮೇತನಾಗಿ ದ್ವಾರಕೆಗೆ ತೆರಳಿದ.

ಕಂಚಿತ್ಕಾಲಂ ದ್ರೌಪದೇಯಾ ಉಷ್ಯ ಪಾಂಚಾಲಕೇ ಪುರೇ ।
ಯಯುರ್ದ್ವಾರಾವತೀಮೇವ ತತ್ರೋಷುಃ ಕೃಷ್ಣಪಾಲಿತಾಃ ॥೫೯॥

ದ್ರೌಪದಿಯ ಮಕ್ಕಳು ಪಾಂಚಾಲನಗರದಲ್ಲಿ ಕೆಲವು ಕಾಲ ಇದ್ದು ದ್ವಾರಕೆಗೆ ಹೋದರು. ಅಲ್ಲಿ ಶ್ರೀಕೃಷ್ಣನ ರಕ್ಷಣೆಯಲ್ಲಿ ವಾಸಮಾಡಿದರು.

ತತಃಪರಂ ಧರ್ಮರಾಜೋ ನಿರ್ವಿಣ್ಣಃ ಸ್ವಕೃತೇನ ಹ ।
ಭ್ರಾತೃಭಾರ್ಯಾಪದೇ ಕೃಷ್ಣಾಂ ಸ್ಥಾಪಯಾಮಾಸ ಸರ್ವದಾ ॥೬೦॥

ಅನಂತರ ಧರ್ಮರಾಜ ತನ್ನ ಕೃತ್ಯಕ್ಕೆ ತಾನೆ ಬೇಸತ್ತು ದ್ರೌಪದಿಯನ್ನು ಸದಾ ಸೋದರ ಪತ್ನೀ ಸ್ಥಾನದಲ್ಲಿಯೆ ಇರಿಸಿದ.

ತಾನು ಜೂಜಾಡಿದುದು ತಪ್ಪಾಯಿತೆಂದು ಪಶ್ಚಾತ್ತಾಪಪಟ್ಟು ವಿರಕ್ತಿಯಿಂದ ದ್ರೌಪದಿಯ ಸಂಗವನ್ನು ಬಿಟ್ಟು ಅವಳನ್ನು ಭೀಮನ ಬಳಿಯಲ್ಲಿಯೆ ಇರಿಸಿದ.

ಊಷುರ್ವನೇ ಚ ತೇ ಪಾರ್ಥಾ ಮುನಿಶೇಷಾನ್ನಭೋಜಿನಃ ।
ಭುಕ್ತವತ್ಸ್ವೇವಾನುಜೇಷು ಭುಂಕ್ತೇ ರಾಜಾ ಯುಧಿಷ್ಠಿರಃ ॥೬೧॥

ಪಾಂಡವರು ಮುನಿಗಳ ಭೋಜನಾನಂತರ ಅವರ ಶೇಷಾನ್ನ ಉಣ್ಣುತ್ತ ಕಾಡಿನಲ್ಲಿ ವಾಸಿಸಿದರು. ರಾಜಾ ಯುಧಿಷ್ಠಿರ ತಮ್ಮಂದಿರ ಭೋಜನಾ ನಂತರವೆ ಉಣ್ಣುತ್ತಿದ್ದ.

ಅಲಂಘ್ಯತ್ವಾತ್ತದಾಜ್ಞಾಯಾ ಅನುಜಾಃ ಪೂರ್ವಭೋಜಿನಃ ।
ತಸ್ಯಾನಂತರಮೇವೈಕಾ ಭುಂಕ್ತೇ ಸಾ ಪಾರ್ಷತಾತ್ಮಜಾ ॥೬೨॥

ಅಣ್ಣನ ಆಜ್ಞೆ ಅನುಲ್ಲಂಘನೀಯವಾದ್ದರಿಂದ ತಮ್ಮಂದಿರು ಮೊದಲಿಗೆ ಉಣ್ಣುತ್ತಿದ್ದರು. ಧರ್ಮರಾಜ ಉಂಡ ಬಳಿಕ ದ್ರೌಪದಿಯೊಬ್ಬಳೇ ಉಣ್ಣುತ್ತಿದ್ದಳು.

ಏವಂ ಸದಾ ವಿಷ್ಣುಪರಾಯಣಾನಾಂ
ತತ್ಪ್ರಾರ್ಪಣಾನ್ನೈಕಭುಜಾಂ ಪ್ರಯಾತಃ ।
ಸಂವತ್ಸರಸ್ತತ್ರ ಜಗಾದ ಕೃಷ್ಣಾ
ಭೀಮಾಜ್ಞಯಾ ಧರ್ಮರಾಜಂ ಸುವೇತ್ರೀ ॥೬೩॥

ಈ ರೀತಿಯಾಗಿ ಸದಾ ವಿಷ್ಣುಭಕ್ತರಾದ ಪಾಂಡವರು ವಿಷ್ಣುವಿಗೆ ನಿವೇದಿತವಾದ ಅನ್ನವನ್ನು ಮಾತ್ರ ಉಣ್ಣುತ್ತ ಒಂದು ವರ್ಷ ಕಳೆದರು. ಬಳಿಕ ಒಳ್ಳೆಯ ನೀತಿಜ್ಞಳಾದ ದ್ರೌಪದಿ ಭೀಮನ ಪ್ರೇರಣೆಯಿಂದ ಧರ್ಮರಾಜನ ಬಳಿಯಲ್ಲಿ ಹೇಳತೊಡಗಿದಳು.

ದ್ರೌಪದಿ ಒಳ್ಳೆಯ ನೀತಿಜ್ಞಳು. ಏಕೆಂದರೆ ದ್ರುಪದ ಒಬ್ಬ ಬ್ರಾಹ್ಮಣನ ಮುಖದಿಂದ ಅವಳಿಗೆ ಬೃಹಸ್ಪತಿ ನೀತಿಯನ್ನು ಅಭ್ಯಾಸ ಮಾಡಿಸಿದ್ದನೆಂದು ಅವಳೆ ಧರ್ಮರಾಜನಿಗೆ ಹೇಳುತ್ತಾಳೆ. (ವನಪರ್ವ 32.61)

ದುರ್ಜನರಲ್ಲಿ ಕ್ಷಮೆ ಸಲ್ಲದು

ಅತಿಮಾರ್ದವಯುಕ್ತತ್ವಾದ್ ಧರ್ಮರಾಜಶ್ಚತುರ್ದಶೇ ।
ಅಪಿ ವರ್ಷೇ ಗುರುಭಯಾದ್ ರಾಜ್ಯಂ ನೇಚ್ಛೇದಿತಿ ಪ್ರಭುಃ ।
ಮಾರುತಿಃ ಪ್ರೇಷಯಾಮಾಸ ಕೃಷ್ಣಾಂ ಪ್ರಸ್ತಾವಹೇತವೇ ॥೬೪॥

ಧರ್ಮರಾಜ ಅತಿಯಾದ ಮೃದು ಸ್ವಭಾವದವನಾದ್ದರಿಂದ ಹದಿನಾಲ್ಕನೇ ವರ್ಷದಲ್ಲಿಯೂ ಭೀಷ್ಮಾದಿಗಳು ಹಿರಿಯರು ಎನ್ನುವ ಭಯದಿಂದ ಅವರಲ್ಲಿ ವಿರೋಧಿಸಿ ರಾಜ್ಯವನ್ನು ಸಂಪಾದಿಸಲು ಒಪ್ಪದಿರಬಹುದು ಎಂದು ಭೀಮ ಆ ವಿಷಯ ಪ್ರಸ್ತಾವ ಮಾಡುವ ಉದ್ದೇಶದಿಂದ ದ್ರೌಪದಿಯನ್ನು ಧರ್ಮರಾಜನ ಬಳಿಗೆ ಕಳಿಸಿದ.

ಹದಿಮೂರು ವರ್ಷ ವನವಾಸ ಅಜ್ಞಾತವಾಸಗಳನ್ನು ಮುಗಿಸಿದ ಬಳಿಕ ಹದಿನಾಲ್ಕನೆ ವರ್ಷದಲ್ಲಿ ಕೌರವರಿಂದ ಅರ್ಧರಾಜ್ಯವನ್ನು ಹಿಂತಿರುಗಿ ಪಡೆಯಬೇಕು. ಅದಕ್ಕೆ ಗುರುಹಿರಿಯರೊಡನೆ ಯುದ್ಧ ಅನಿವಾರ್ಯ. ಆದರೆ ಅತಿ ಮೃದು ಸ್ವಭಾವದ ಧರ್ಮರಾಜ ಕೌರವರನ್ನು ಕ್ಷಮಿಸಿ 'ನಮಗೆ ರಾಜ್ಯ ಬೇಡ ಭೀಮನಿಗೂ ಕೌರವರಿಗೂ ಎಂದೂ ಹೊಂದಿಕೆಯಾಗದು. ಅದರಿಂದ ನಮಗೆ ವನವಾಸವೆ ಲೇಸು' ಎನ್ನಬಹುದು. ಯುದ್ಧ ಮಾಡಲು ಒಪ್ಪದಿರಬಹುದು. ಅದಕ್ಕೆ ಈಗಲೆ ಆ ವಿಷಯವನ್ನು ಚರ್ಚಿಸಿ ಧರ್ಮರಾಜನನ್ನು ಮುಂದಿನ ಯುದ್ಧಕ್ಕೆ ಒಪ್ಪಿಸಬೇಕು. ಈ ವಿವಾದಕ್ಕೆ ವಿಷಯ ಪ್ರಸ್ತಾವನೆಗಾಗಿ ಭೀಮ ಒಳ್ಳೆಯ ನೀತಿಜ್ಞಳಾದ ದ್ರೌಪದಿಯನ್ನು ಕಳಿಸುತ್ತಾನೆ. ಅವಳು ಎಷ್ಟು ಕ್ಲೇಶಗಳನ್ನು ಸಹಿಸಿಕೊಂಡಳೆಂಬುದು ಧರ್ಮರಾಜನಿಗೆ ಗೊತ್ತು. ಅದಕ್ಕೆ ಅವನು ಪಶ್ಚಾತ್ತಾಪದಿಂದ ಕೊರಗುತ್ತಿದ್ದಾನೆ. ಅದರಿಂದ ಅವಳ ಮಾತು ಪರಿಣಾಮ ಬೀರಬಹುದು. ಒಂದುವೇಳೆ ಅದಾಗದಿದ್ದರೆ ತಾನೇ ಸರಿಯಾಗಿ ಬೋಧಿಸುತ್ತೇನೆ ಎಂಬುದು ಭೀಮನ ಆಲೋಚನೆಯಾಗಿತ್ತು.

ಕ್ಷಮಾ ಸರ್ವತ್ರ ಧರ್ಮೋ ನ ಪಾಪಹೇತುಶ್ಚ ದುರ್ಜನೇ ।
ರಾಜ್ಞಾಂ ಸಾಮರ್ಥ್ಯಯುಕ್ತಾನಾಮಿತಿ ಸಂಸ್ಥಾಪ್ಯ ಶಾಸ್ತ್ರತಃ ॥೬೫॥
ಹತ್ವಾ ಚತುರ್ದಶೇ ವರ್ಷೇ ಧಾರ್ತರಾಷ್ಟ್ರಾನರಾಜ್ಯದಾನ್ ।
ಕುರ್ವಾಂ ರಾಜ್ಯಂ ಪುರೋ ಗಂತಾ ಭವಾನೀತ್ಯಗ್ರಜೇನ ಹ ॥೬೬॥
ಕಾರಯನ್ಸತ್ಯಶಪಥಂ ವಿವಾದಸ್ಯ ಕ್ರಮೇಚ್ಛಯಾ ।
ಆದಿಶತ್ಪ್ರಥಮಂ ಕೃಷ್ಣಾಂ ಭೀಮಃ ಸಾ ನೃಪಮಬ್ರವೀತ್ ॥೬೭॥

ಕ್ಷಮೆ ಎಲ್ಲರ ವಿಷಯದಲ್ಲಿ ಧರ್ಮವಾಗುವುದಿಲ್ಲ. ಶಕ್ತಿಉಳ್ಳ ರಾಜರಿಗೆ ದುರ್ಜನರ ವಿಷಯದಲ್ಲಿ ಕ್ಷಮೆ ಪಾಪಕ್ಕೇ ಕಾರಣವಾಗುತ್ತದೆ ಎಂದು ಧರ್ಮರಾಜನಿಗೆ ಶಾಸ್ತ್ರಾಧಾರದಿಂದ ಮನದಟ್ಟು ಮಾಡಿಸಿ ಮುಂದೆ ಹದಿನಾಲ್ಕನೇ ವರ್ಷದಲ್ಲಿ ಕೌರವರು ರಾಜ್ಯವನ್ನು ಹಿಂದಿರುಗಿಸದಿದ್ದರೆ ಅವರನ್ನು ಕೊಂದು ರಾಜ್ಯವನ್ನು ವಶಪಡಿಸಿಕೊಳ್ಳಲು ತಾನು ಮುಂದಾಗುವೆನೆಂದು ಧರ್ಮರಾಜನಿಂದ ಸತ್ಯ ಪ್ರತಿಜ್ಞೆ ಮಾಡಿಸುವುದಕ್ಕಾಗಿ ವಿವಾದೋಪಕ್ರಮದ ಉದ್ದೇಶದಿಂದ ಭೀಮ ಮೊದಲಿಗೆ ದ್ರೌಪದಿಯನ್ನು ಧರ್ಮರಾಜನ ಬಳಿಗೆ ಕಳಿಸಿದ. ದ್ರೌಪದಿ ಅವನ ಮುಂದೆ ನುಡಿದಳು.

ನೈವ ಕ್ಷಮಾ ಕುಜನತಾಸು ನೃಪಸ್ಯ ಧರ್ಮ
ಸ್ತಾಂ ತ್ವಂ ವೃಥೈವ ಧೃತವಾನಸಿ ಸರ್ವಕಾಲಂ।
ಇತ್ಯುಕ್ತ ಆಹ ನೃಪತಿಃ ಪರಮಾ ಕ್ಷಮೈವ
ಸರ್ವತ್ರ ತದ್ವಿಧೃತಮೇವ ಜಗತ್‌ಸಮಸ್ತಂ ॥೬೮॥

'ದುರ್ಜನರಲ್ಲಿ ಕ್ಷಮೆ ತೋರುವುದು ರಾಜನಿಗೆ ಸರ್ವಥಾ ಧರ್ಮವಾಗುವುದಿಲ್ಲ. ನೀನು ಯಾವಾಗಲೂ ಅವರಲ್ಲಿ ವ್ಯರ್ಥವಾಗಿ ತಾಳ್ಮೆ ವಹಿಸುತ್ತಿರುವಿ'. ದ್ರೌಪದಿ ಹೀಗೆ ಹೇಳಿದಾಗ ಧರ್ಮರಾಜನೆಂದ, 'ಎಲ್ಲ ಬಗೆಯ ಜನರಲ್ಲಿಯೂ ಕ್ಷಮೆ ತೋರುವುದು ರಾಜನಿಗೆ ಪರಮಧರ್ಮ. ಸಮಸ್ತ ಪ್ರಪಂಚವೂ ಈ ಕ್ಷಮಾಧರ್ಮದ ಬಲದಿಂದಲೇ ನಿಂತಿದೆ.' 'ನಿನ್ನ ಈ ಸತ್ಯ ಧರ್ಮಕ್ಷಮೆ ಎಲ್ಲವೂ ನಿನಗೆ ದುಃಖವನ್ನೆ ತಂದಿದೆ. ಏಕೆಂದರೆ ಪಾಪಿಗಳಲ್ಲಿ ನೀನು ಕ್ಷಮೆ ತೋರುವಿ, ಸತ್ಯ ಧರ್ಮಗಳನ್ನು ಆಚರಿಸುವಿ,' ಎನ್ನುತ್ತಾಳೆ ದ್ರೌಪದಿ.

> ಜನರಲ್ಲಿ ಕ್ಷಮಾಗುಣವಿಲ್ಲದಿದ್ದರೆ ಪರಸ್ಪರ ಹಿಂಸೆ ಕಲಹ ದೌರ್ಜನ್ಯ ಗಳಾಗುವುದರಿಂದ ಬದುಕೇ ದುಸ್ತರವಾಗಿ ಲೋಕನಾಶವಾಗುವುದು. ಅದರಿಂದ ಸಮಸ್ತ ಪ್ರಪಂಚ ನಿಂತಿರುವುದು ಈ ಕ್ಷಮಾಗುಣದಿಂದಲೆ ಎನ್ನುತ್ತಾನೆ ಧರ್ಮರಾಜ.

ಎಲ್ಲ ಮಾಡುವವನು ಹರಿಯೆ

ಕರ್ತಾ ಚ ಸರ್ವಜಗತಃ ಸುಖದುಃಖಯೋರ್ಹಿ
ನಾರಾಯಣಸ್ತದನು ದತ್ತಮಿಹಾಸ್ಯ ಸರ್ವಂ।
ತಸ್ಮಾನ್ನ ಕೋಪವಿಷಯೋಽಸ್ತಿ ಕುತಶ್ಚ ಕಶ್ಚಿತ್
ತಸ್ಮಾತ್ ಕ್ಷಮೈವ ಸಕಲೇಷು ಪರೋಽಸ್ಯ ಧರ್ಮಃ ॥೬೯॥

ಸಮಸ್ತ ಪ್ರಪಂಚಕ್ಕೆ ಸುಖದುಃಖಗಳನ್ನು ಉಂಟುಮಾಡುವವನು ಶ್ರೀಹರಿ. ಅವನೆ ಜಗತ್ತಿಗೆ ಸುಖದುಃಖವೆಲ್ಲವನ್ನೂ ಯೋಗ್ಯತಾನುಗುಣವಾಗಿ ಕೊಡುತ್ತಾನೆ. ಅದರಿಂದ

ನಮ್ಮ ಕೋಪಕ್ಕೆ ಯೋಗ್ಯನೆನಿಸುವ ವ್ಯಕ್ತಿ ಯಾರೂ ಎಲ್ಲಿಯೂ ಇಲ್ಲ. ಆದರಿಂದ ಎಲ್ಲರಲ್ಲಿಯೂ ಕ್ಷಮೆ ತೋರುವುದೇ ರಾಜನಿಗೆ ಪರಮಧರ್ಮ.

ನಮಗೆಸುಖ ದುಃಖ ನೀಡುವವರು ಮಾನವರೇ ಆಗಿದ್ದರೆ ದುರ್ಜನರು ದುಃಖ ನೀಡುವರೆಂದು ಅವರಲ್ಲಿ ಕೋಪ ಮಾಡಬಹುದಿತ್ತು. ಆದರೆ ಶ್ರೀಹರಿಯೆ ಎಲ್ಲರಿಗೂ ಎಲ್ಲ ಕಾಲಕ್ಕೂ ಸುಖ ದುಃಖ ಉಂಟುಮಾಡುತ್ತಾನೆ ಎನ್ನುವುದು ಶಾಸ್ತ್ರಸಿದ್ಧವಾದ ವಿಷಯವಾಗಿದೆ. ಅಂದಮೇಲೆ ದುರ್ಜನರಲ್ಲಿ ಕೋಪಮಾಡುವುದು ಯುಕ್ತವಲ್ಲ. ಅವರಲ್ಲಿಯೂ ಕ್ಷಮೆ ತೋರಬೇಕು, ಇದು ಧರ್ಮರಾಜನ ವಾದ.

ಪುರುಷ ಪ್ರಯತ್ನ ಬೇಕು

ಇತ್ಯುಕ್ತವಂತಂ ನೃಪಮಾಹ ಪಾರ್ಷತೀ
ಯದಿ ಕ್ಷಮಾ ಸರ್ವನರೇಷು ಧರ್ಮಃ।
ರಾಜ್ಞಾ ನ ಕೃತ್ಯಂ ನ ಚ ಲೋಕಯಾತ್ರಾ
ಭವೇಜ್ಜಗತ್ ಕಾಪುರುಷೈರ್ವಿನಶ್ಯೇತ್ ॥೭೦॥

ಹೀಗೆ ಧರ್ಮರಾಜ ಹೇಳಿದಾಗ ದ್ರೌಪದಿ ಹೇಳಿದಳು, 'ಎಲ್ಲ ಜನರಲ್ಲಿಯೂ ಕ್ಷಮೆ ತೋರುವುದು ರಾಜನ ಧರ್ಮವೆನ್ನುವುದಾದರೆ ರಾಜನಿದ್ದೇನು ಪ್ರಯೋಜನ? ಲೋಕವ್ಯವಹಾರವೂ ನಡೆಯದು, ಜಗತ್ತೂ ದುರ್ಜನರಿಂದ ನಾಶಹೊಂದೀತು.

ದುರ್ಜನರು ಅಧರ್ಮಾಚರಣೆ ಮಾಡುವಾಗ ರಾಜ ದಂಡಿಸಬೇಕು. ಅದಕ್ಕೇ ರಾಜನಿರುತ್ತಾನೆ. ಅವರಲ್ಲಿಯೂ ಕ್ಷಮೆ ತೋರಬೇಕೆನ್ನುವುದಾದರೆ ರಾಜನಿಗೆಏನು ಕೆಲಸವಿದೆ? ಅವನಿದ್ದೇನು ಪ್ರಯೋಜನ? ಲೋಕವ್ಯವಹಾರ ಕೃಷಿವಾಣಿಜ್ಯಾದಿಗಳು ಸರಿಯಾಗಿ ನಡೆಯಬೇಕಾದರೆ ಜನರು ನ್ಯಾಯನೀತಿಗಳನ್ನು ಅನುಸರಿಸಬೇಕು. ಅವರು ಅನುಸರಿಸುವಂತೆ ರಾಜ ನೋಡಿಕೊಳ್ಳಬೇಕು. ರಾಜ ಸುಮ್ಮನಿದ್ದರೆ ಅವನ ಕ್ಷಮಾಗುಣದಿಂದ ದುರ್ಜನರು ದುರ್ಲಾಭಪಡೆಯುತ್ತಾರೆ. ಅದರಿಂದ ರಾಜನಿದ್ದೂ ಇಲ್ಲದಂತೆ. ಹೀಗಾಗಿ ಲೋಕವ್ಯವಹಾರ ನಡೆಯದು. ದುರ್ಜನರು ವಿಧ್ವಂಸಕ ಕೃತ್ಯಗಳಿಂದ ಲೋಕವನ್ನು ನಾಶಮಾಡುವರು.

ಸತ್ಯಂ ಚ ವಿಷ್ಣುಃ ಸಕಲಪ್ರವರ್ತಕೋ
ರಮಾವಿರಿಂಚೇಶಪುರಃಸರಾಶ್ಚ।
ಕಾಷ್ಠಾದಿವತ್ತದ್ವಶಗಾಃ ಸಮಸ್ತಾ
ಸ್ತಥಾಪಿ ನ ವ್ಯರ್ಥತಾ ಪೌರುಷಸ್ಯ ॥೭೦॥

ಶ್ರೀಹರಿಯೆ ಸಕಲಪ್ರವರ್ತಕನೆನ್ನುವುದು ನಿಜ. ರಮಾ ಬ್ರಹ್ಮರುದ್ರಾದಿಗಳೆಲ್ಲರೂ. ಅವನ ಅಧೀನದಲ್ಲಿ ಮರದ ಕೈಗೊಂಬೆಗಳಂತೆ ಇರುವರೆನ್ನುವುದೂ ನಿಜವೆ. ಆದರೂ ಪುರುಷ ಪ್ರಯತ್ನ ವ್ಯರ್ಥವಾಗದು.

ಮಹಾಭಾರತದಲ್ಲಿ ಮೇಲುನೋಟಕ್ಕೆ ದ್ರೌಪದಿ ಧರ್ಮರಾಜನ ಧರ್ಮಬುದ್ಧಿಯನ್ನೆ ನಿಂದಿಸುತ್ತಾಳೆ. 'ಧರ್ಮಕ್ಕಾಗಿಯೆ ನಿನ್ನ ರಾಜ್ಯ, ಧರ್ಮಕ್ಕಾಗಿಯೆ ನಿನ್ನ ಪ್ರಾಣ ಎಂಬ ವಿಷಯ ಸಕಲ ಲೋಕಕ್ಕೆ ತಿಳಿದ ವಿಷಯ. ನೀನು ನಿನ್ನ ಸೋದರರನ್ನೂ ಪರಿತ್ಯಜಿಸಬಲ್ಲೆ, ನನ್ನನ್ನೂ ತ್ಯಾಗಮಾಡಬಲ್ಲೆ, ಆದರೆ ಧರ್ಮವನ್ನು ಬಿಡಲಾರೆ ಎನ್ನುವುದು ನನಗೆ ಗೊತ್ತು. ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ ಎಂದೂ ಹೇಳುತ್ತಾರೆ. ಆದರೆ ಅದು ಸುಳ್ಳು, ಧರ್ಮ ನಿನ್ನನ್ನು ರಕ್ಷಿಸಲಿಲ್ಲ. ಎಲ್ಲ ದೈವಾಧೀನ.

ಯಥಾ ದಾರುಮಯೀಂ ಯೋಷಾಂ ನರಃ ಸ್ಥಿರಸಮಾಹಿತಃ
ಇಂಗಯತ್ಯಂಗಮಂಗಾನಿ ತಥಾ ರಾಜನ್ನಿಮಾಃ ಪ್ರಜ್ಞಾಃ
(ವನ 30.23)

ಮರದ ಗೊಂಬೆಯ ಅಂಗಾಂಗಗಳನ್ನು ಸೂತ್ರಧಾರ ಹೇಗೆ ಆಡಿಸುವನೋ ಹಾಗೇ ದೈವ ಎಲ್ಲರನ್ನೂ ಆಡಿಸುತ್ತದೆ.

ಆಜ್ಞೋ ಜಂತುರನೀಶೋಽಯಮಾತ್ಮನಃ ಸುಖದುಃಖಯೋಃ।
ಈಶ್ವರ ಪ್ರೇರಿತೋ ಗಚ್ಛೇತ್ ಸ್ವರ್ಗಂ ನರಕಮೇವ ಚ ॥
(ವನ 30.28)

ಮಾನವನೇನೂ ಅರಿಯಲಾರ. ಅವನ ಸುಖದುಃಖಗಳಿಗೆ ಅವನು ಹೊಣೆಯಲ್ಲ. ದೈವಪ್ರೇರಣೆಯಂತೆ ಸ್ವರ್ಗಕ್ಕೋ ನರಕಕ್ಕೋ ಹೋಗುತ್ತಾನೆ.

ನ ಮಾತೃಪಿತೃವದ್ ರಾಜನ್ ಧಾತಾ ಭೂತೇಷು ವರ್ತತೇ।
ರೋಷಾದಿವ ಪ್ರವೃತ್ತೋಽಯಂ ಯಥಾಯಮಿತರೋ ಜನಃ॥
(ವನ.30.28)

ದೈವ ನಮ್ಮಲ್ಲಿ ತಂದೆತಾಯಿಗಳಂತೆ ವಾತ್ಸಲ್ಯ ತೋರದೆ ಶತ್ರುವಿನಂತೆ ವರ್ತಿಸುತ್ತದೆ.

ತವೇಮಾಮಾಪದಂ ದೃಷ್ಟ್ವಾ ಸಮೃದ್ಧಿಂ ಚ ಸುಯೋಧನೇ
ಧಾತಾರಂ ಗರ್ಹಯೇ ಪಾರ್ಥ ವಿಷಮಂ ಯೋಽನುಪಶ್ಯತಿ
(ವನ 30.40)

ನಿನ್ನ ಈ ಕಷ್ಟವನ್ನೂ ದುರ್ಯೋಧನನ ಸಂಪತ್ತನ್ನೂ ಕಂಡು ನನಗೆ ದೈವವನ್ನು ನಿಂದಿಸಬೇಕೆನಿಸುತ್ತದೆ. ಅದು ಪಕ್ಷಪಾತಿಯಾಗಿದೆ.

ಹೀಗೆ ದ್ರೌಪದಿ ಧರ್ಮಾಚರಣೆಯನ್ನೂ ದೈವಶ್ರದ್ಧೆಯನ್ನೂ ನಿಂದಿಸುತ್ತ ದುರ್ಯೋಧನನನ್ನು ಬಲಾತ್ಕಾರವಾಗಿ ಆಕ್ರಮಿಸಿ ರಾಜ್ಯ ಸಂಪಾದಿಸಲು ಉಪದೇಶಿಸುತ್ತಾಳೆ ಎಂದು ಮೇಲುನೋಟಕ್ಕೆ ಕಾಣುತ್ತದೆ. ಮಹಾಭಾರತ ನೀಲಕಂಠೀಯ ವ್ಯಾಖ್ಯಾನ ಹಾಗೇ ಸ್ವೀಕರಿಸಿದೆ-

'ಇತೋಽಧ್ಯಾಯ ದ್ವಯಸ್ಯ ತಾತ್ಪರ್ಯಂ

ಸುಶೀಲಾಪಿ ಸ್ತ್ರೀ ಧರ್ಮಂ ತ್ಯಾಜಯತಿ ಕಿಮುತೇತರೇತಿ'

'ಸುಶೀಲೆಯಾದ ದ್ರೌಪದಿಯಂಥ ಹೆಂಡತಿಯೂ ಧರ್ಮರಾಜನನ್ನು ಧರ್ಮಮಾರ್ಗದಿಂದ ತೊಲಗಿಸುವಳೆಂದ ಮೇಲೆ ಬೇರೆ ಸ್ತ್ರೀಯರ ಬಗ್ಗೆ ಏನು ಹೇಳಬೇಕು ಎಂಬುದು ಇಲ್ಲಿಯ ಎರಡು ಅಧ್ಯಾಯಗಳ ಒಟ್ಟು ತಾತ್ಪರ್ಯ'.

ನಿರ್ಣಯದಲ್ಲಿ ಈ ಭ್ರಮ ನಿರಸನವಾಗಿದೆ. ಪುರುಷ ಪ್ರಯತ್ನಕ್ಕೆ ಬೆಲೆಕೊಡದೆ ದೈವವೆ ಎಲ್ಲವನ್ನೂ ಮಾಡುತ್ತದೆ ತಪ್ಪು ಯಾರೂ ಮಾಡುವುದಿಲ್ಲ ಅದರಿಂದ ಎಲ್ಲರಲ್ಲಿಯೂ ಸತ್ಯ ಧರ್ಮ ಅಹಿಂಸೆ ಕ್ಷಮೆಗಳನ್ನು ತೋರಬೇಕು ಎನ್ನುವಿಯಾದರೆ ಕರ್ತವ್ಯ ಕರ್ಮವನ್ನು ತೊರೆದು ದೈವದ ಕೈಗೊಂಬೆಯಾಗುವಿಯಾದರೆ ದೈವವಾಗಲಿ ಧರ್ಮವಾಗಲಿ ನಿನ್ನನ್ನು ಕಾಪಾಡುವುದಿಲ್ಲ. ನೀನು ದುಃಖಭಾಜನನಾಗುವೆ. ನಿನ್ನ ವಾದದಲ್ಲಿ ದೈವ ಪಕ್ಷಪಾತಿ ಎನಿಸುತ್ತದೆ. ವಸ್ತುತಃ ಅದು ಪುರುಷಪ್ರಯತ್ನಕ್ಕೆ ಅನುಗುಣವಾಗಿಯೆ ಸುಖ ದುಃಖ ನೀಡುವುದರಿಂದ ಪಕ್ಷಪಾತಿಯಲ್ಲ. ಅದು ಸುಖದುಃಖ ನೀಡುವುದೂ ರಾಜಾದಿಗಳ ಮೂಲಕ. ಅದರಿಂದ ರಾಜ ಅಧರ್ಮಿಗಳನ್ನು ದಂಡಿಸಬೇಕು. ಕ್ಷಮೆ ತೋರಬಾರದು ತನಗೆ ಕಷ್ಟ ತಂದುಕೊಳ್ಳಬಾರದು ಎನ್ನುತ್ತಿದ್ದಾಳೆ ದ್ರೌಪದಿ.

ತದಾಜ್ಞಯಾ ಪುರುಷಶ್ಚೇಷ್ಟಮಾನ-
ಶ್ಚೇಷ್ಟಾನುಸಾರೇಣ ಶುಭಾಶುಭಸ್ಯ ।
ಭೋಕ್ತಾ ನ ತಚ್ಚೇಷ್ಟಿತಮನ್ಯಥಾ ಭವೇತ್
ಕರ್ತಾ ತಸ್ಮಾತ್ ಪುರುಷೋಽಪ್ಯಸ್ಯ ವಶ್ಯಃ ॥೭೨॥

ಜೀವನು ಹರಿಯ ಪ್ರೇರಣೆಯಿಂದ ಕರ್ಮ ಮಾಡುತ್ತಾನೆ. ಆ ಕರ್ಮಾನುಸಾರ ಸುಖದುಃಖಗಳನ್ನು ಉಣ್ಣುತ್ತಾನೆ. ಅವನ ಕರ್ಮವು ವ್ಯರ್ಥವಾಗುವುದಿಲ್ಲ. ಅದರಿಂದ ಜೀವನೂ ಅವನ ಕರ್ಮಗಳಿಗೆ ಹರಿಯ ಅಧೀನನಾಗಿದ್ದು ಕರ್ತನೆನಿಸುತ್ತಾನೆ ಎನ್ನಬೇಕು.

ಜೀವ ಹರಿಪ್ರೇರಣೆಯಿಂದಲೆ ಕರ್ಮಮಾಡುತ್ತಾನೆ, ನಿಜ. ಆದರೂ ಅವನು ಆ ಕರ್ಮಕ್ಕೆ ಕರ್ತನೆನ್ನಲೇಬೇಕು. ಏಕೆಂದರೆ ಆ ಕರ್ಮದ ಫಲವನ್ನು ಅವನು ಉಣ್ಣುತ್ತಾನೆ. ಕರ್ತೃವಲ್ಲವೆಂದು ಎಲ್ಲರೂ ಒಪ್ಪುವ ಅಚೇತನವಾದ ಕಲ್ಲು ಮಣ್ಣು ಮುಂತಾದುದು ಫಲವನ್ನು ಉಣ್ಣುವುದಿಲ್ಲ. ಫಲ ಉಣ್ಣುವುದರಿಂದ ಜೀವ ಕರ್ತನೆ. ಆದರೆ ಹರಿಗೆ ಅಧೀನನಾಗಿ ಕರ್ತನೆನಿಸುತ್ತಾನೆ.

ವೃಥಾ ಯದಿ ಸ್ಯಾತ್ ಪೌರುಷಂ ಕಸ್ಯ ಹೇತೋಃ
ವಿಧಿರ್ನಿಷೇಧಶ್ಚ ಸಮಸ್ತ ವೇದಗಃ ।
ವಿಧೇರ್ನಿಷೇಧಸ್ಯ ಚ ನೈವ ಗೋಚರಃ
ಪುಮಾನ್ ಯದಿ ಸ್ಯಾದ್ ಭವತೋ ಹಿ ತೌ ಹರೇಃ ॥೭೩॥

ಜೀವನು ಮಾಡುವ ಕರ್ಮ ವ್ಯರ್ಥವಾಗುವುದಾದರೆ ಎಲ್ಲ ವೇದಗಳಲ್ಲಿ ವಿಧಿನಿಷೇಧಗಳು ಯಾರಿಗಾಗಿ ಹೊರಟಿವೆ? ಜೀವನು ವಿಧಿನಿಷೇಧಗಳಿಗೆ ಒಳಪಡುವುದಿಲ್ಲವಾದರೆ ಹರಿಗೇ ಆ ವಿಧಿನಿಷೇಧಗಳೆನ್ನಬೇಕಾದೀತು.

ಎಲ್ಲವೂ ಹರಿಪ್ರೇರಣೆ ಎಂದ ಮಾತ್ರಕ್ಕೆ 'ಜೀವರ ಪ್ರಯತ್ನ ವ್ಯರ್ಥ, ಹೋತನ ಕತ್ತಿನಲ್ಲಿ ನೇತಾಡುವ ಮೊಲೆಯಂತೆ' ಎನ್ನುವುದಾದರೆ 'ಸತ್ಯಂವದ' 'ಧರ್ಮಂಚರ' ಸತ್ಯವನ್ನೇ ಹೇಳು, ಧರ್ಮಮಾರ್ಗದಲ್ಲಿ ನಡೆ ಎಂದು ಮುಂತಾಗಿ ವೇದದ ವಿಧಿ 'ನ ಸುರಾಂ ಪಿಬೇತ್' 'ಮದ್ಯಪಾನ ಮಾಡಬೇಡ' ಎಂದು ಮುಂತಾಗಿ ನಿಷೇಧ ಯಾರಿಗೆ? ಜೀವನಿಗೆ ಯಾವುದರಲ್ಲಿಯೂ ಕರ್ತೃತ್ವವಿಲ್ಲವೆಂದರೆ ಅವನಿಗೆ ಈ ವಿಧಿನಿಷೇಧಗಳು ಕೂಡಲಾರವು. ಹರಿಗೆ ಕರ್ತೃತ್ವವಿರುವುದರಿಂದ ಅವನಿಗೇ ವಿಧಿನಿಷೇಧಗಳೆಂದು ಹೇಳಬೇಕಾದೀತು.

ತೇನೈವ ಲೇಪಶ್ಚ ಭವೇದಮುಷ್ಯ
ಪುಣ್ಯೇನ ಪಾಪೇನ ಚ ನೈವ ಚಾಸೌ ।
ಲಿಪ್ಯೇತ ತಾಭ್ಯಾಂ ಪರಮಃ ಸ್ವತಂತ್ರಃ
ಕರ್ತಾ ತತಃ ಪುರುಷೋಽಪ್ಯಸ್ಯ ವಶ್ಯಃ ॥೭೪॥

ಅದರಿಂದ ಹರಿಗೆ ಪುಣ್ಯಪಾಪಗಳ ಲೇಪಗಳಿವೆ ಎಂದೂ ಹೇಳಬೇಕಾದೀತು. ಆದರೆ ಅವನು ಸರ್ವಥಾ ಲೇಪ ಉಳ್ಳವನಲ್ಲ. ಏಕೆಂದರೆ ಅವನು ಪರಮ ಸ್ವತಂತ್ರ. ಹೀಗಾಗಿ ಜೀವ ಅಸ್ವತಂತ್ರನಾದರೂ ಅವನು ಕರ್ತ ಎಂದೆನ್ನಲೇಬೇಕು.

ಮಹಾಭಾರತದಲ್ಲಿ ದ್ರೌಪದಿ-

ಕರ್ಮ ಚೇತ್ ಕೃತಮನ್ವೇತಿ ಕರ್ತಾರಂ ನಾನ್ಯಮೃಚ್ಛತಿ।
ಕರ್ಮಣಾ ತೇನ ಪಾಪೇನ ಲಿಪ್ಯತೇ ನೂನಮೀಶ್ವರಃ

ಅಥ ಕರ್ಮಕೃತಂ ಪಾಪಂ ನಚೇತ್ ಕರ್ತಾರಮೃಚ್ಛತಿ
ಕಾರಣಂ ಬಲಮೇವೇಹ ಜನಾನ್ ಶೋಚಾಮಿ ದುರ್ಬಲಾನ್ ।
(ವನ 30.42.43)

'ಕರ್ಮದ ಫಲವನ್ನು ಕರ್ತನೆ ಉಣಬೇಕೆಂದರೆ ಹರಿಯೆ ಕರ್ತನಾದ್ದರಿಂದ ಮಾಡಿದ ಪಾಪವನ್ನು ಅವನೆ ಉಣಬೇಕಾಗುತ್ತದೆ. ಆದರೆ ಅವನು ಶಕ್ತನಾದ್ದರಿಂದ ಉಣ್ಣುವುದಿಲ್ಲ. ದುರ್ಬಲರಾದ ಜೀವರನ್ನೇ ಪೀಡಿಸುತ್ತಾನೆ'

ಎಂದು ಹೇಳಿದಂತೆ ಮೇಲುನೋಟಕ್ಕೆ ಕಾಣುತ್ತದೆ. ವಸ್ತುತಃ ಜೀವನು ಕರ್ತನಲ್ಲವೆನ್ನುವ ಪಕ್ಷದಲ್ಲಿ ಹರಿಯೆ ಫಲ ಉಣಬೇಕಾಗುತ್ತದೆ, ಅವನು ಶಕ್ತನಾದ್ದರಿಂದ ತಾನು ಉಣದೆ ದುರ್ಬಲರಾದ ಜೀವರಿಗೆ ಉಣಿಸುತ್ತಾನೆ ಎಂದು ವೈಷಮ್ಯ ನೈರ್ಘೃಣ್ಯಾದಿದೋಷವನ್ನೂ ಹೇಳಬೇಕಾಗುತ್ತದೆ. ಅದರಿಂದ ಜೀವನಿಗೆ ಭಗವದಧೀನ ಕರ್ತೃತ್ವವನ್ನು ಒಪ್ಪಲೇಬೇಕು ಎಂದು ಅಭಿಪ್ರಾಯ.

ನೀಲಕಂಠೀ ಪ್ರಕಾರ ದ್ರೌಪದಿ ಇಲ್ಲಿ ಧರ್ಮಾಧರ್ಮಗಳನ್ನೂ ಪರಮಾತ್ಮನನ್ನೂ ಅಲ್ಲಗಳೆದು ನಾಸ್ತಿಕ್ಯವನ್ನು ಹೇಳುತ್ತಾಳೆ! ಮುಂದೆ ಯುಧಿಷ್ಠಿರ ಪ್ರತ್ಯಕ್ಷ ಅನುಮಾನ ಆಗಮಗಳಿಂದ ಅವುಗಳನ್ನು ಸಾಧಿಸುತ್ತಾನೆ!

ಇದು ಸರಿಯಲ್ಲ. ದ್ರೌಪದಿ ನಾಸ್ತಿಕ್ಯವನ್ನು ಹೇಳುತ್ತಿಲ್ಲ. ವೇದದ ವಿಧಿ ನಿಷೇಧಗಳಿಗೆ ಜೀವ ಬದ್ಧನಾಗದಿದ್ದರೆ ಸ್ವತಂತ್ರನಾದ ಹರಿಯೂ ಬದ್ಧನಾಗದಿರುವುದರಿಂದ ಆ ವಿಧಿ ನಿಷೇಧಗಳು ಅರ್ಥಹೀನ ಉನ್ಮತ್ತವಚನದಂತಾಗುವುದು. ವೇದಪ್ರಾಮಾಣ್ಯ ಒಪ್ಪುವವರು ಹಾಗೆ ಹೇಳಲಾರರು. ಅದರಿಂದ ಜೀವ ಅಸ್ವತಂತ್ರನಾದರೂ ಹರಿಯ ಪ್ರೇರಣೆಯಿಂದ ಕರ್ಮಮಾಡುವುದರಿಂದ ಕರ್ತೃತ್ವವಿದೆ. ಕರ್ಮ ಫಲ ಉಣ್ಣುತ್ತಾನೆ. ವಿಧಿನಿಷೇಧಗಳು ಸಾರ್ಥಕ ಎನ್ನುತ್ತಾಳೆ. ಇದು ವೇದದ ಅಭಿಪ್ರಾಯವೆಂದು ಬ್ರಹ್ಮಸೂತ್ರದ 'ಕರ್ತಾ ಶಾಸ್ತ್ರಾರ್ಥವತ್ವಾತ್' ಎಂಬ ಅಧಿಕರಣ ನಿರ್ಣೈಸಿದೆ.

ಹರಿಯೇ ಎಲ್ಲ ಮಾಡುತ್ತಾನೆ

ಇತೀರಿತೋ ಧರ್ಮಜಃ ಕೃಷ್ಣಯೈವ
ನಿರುತ್ತರತ್ವಂ ಗಮಿತಸ್ತ್ವಭರ್ತ್ಸಯತ್ ।

ಕುತರ್ಕಮಾಶ್ರಿತ್ಯ ಹರೇರಪಿ ತ್ವಂ
ಅಸ್ವಾತಂತ್ರ್ಯಂ ಸಾಧಯಸೀತಿ ಚೋಕ್ತ್ವಾ ॥೭೫॥

ದ್ರೌಪದಿ ಹೀಗೆ ಹೇಳಿದಾಗ ಧರ್ಮರಾಜ ನಿರುತ್ತರನಾದ. ನೀನು ಕುತರ್ಕ ಬಲದಿಂದ ಹರಿಗೂ ಅಸ್ವಾತಂತ್ರ್ಯವನ್ನು ಸಾಧಿಸುತ್ತಿರುವಿ ಎಂದು ಹೇಳುತ್ತ ದ್ರೌಪದಿಯನ್ನು ಬೈದುಬಿಟ್ಟ.

[1]ದ್ರೌಪದಿ, ನೀನು ಜೀವ ತನ್ನ ಕರ್ಮಕ್ಕೆ ತಾನೆ ಕರ್ತ, ತಾನೆ ಫಲಭೋಕ್ತನೆನ್ನುತ್ತ ಅರ್ಥಾತ್ ಹರಿಗೆ ಕರ್ತೃತ್ವವಿಲ್ಲ, ಆತ ಅಸ್ವತಂತ್ರ ಎಂದು ಕುತರ್ಕ ಮಾಡುತ್ತಿರುವೆ. ಏಕೆಂದರೆ 'ಸ್ವತಂತ್ರಃ ಕರ್ತಾ' ಎಂಬಂತೆ ಕರ್ತೃತ್ವವೆಂದರೆ ಸ್ವಾತಂತ್ರ್ಯವೆ. ಅದು ಜೀವನಲ್ಲಿ ಇರುವುದಾದರೆ ಅವನೆ ಸ್ವತಂತ್ರ. ಹರಿ ಹೇಗೆ ಸ್ವತಂತ್ರನಾಗುವನು? ಹರಿಯೆ ಸ್ವತಂತ್ರನೆಂದೂ ಹರಿಯ ಅಧೀನನಾಗಿ ಜೀವನೂ ಸ್ವತಂತ್ರ ಎಂದೂ ಎನ್ನುವುದು ವಿರುದ್ಧ. 'ಅಧೀನ' 'ಸ್ವತಂತ್ರ' ಇವು ಪರಸ್ಪರ ವಿರುದ್ಧ ಎಂದು ಧರ್ಮರಾಜ ಹೇಳುತ್ತಿದ್ದಾನೆ.

ಮತ್ತು, ಜೀವನಿಗೆ ಕರ್ತೃತ್ವವಿಲ್ಲದಿದ್ದರೆ ವೇದದ ವಿಧಿ ನಿಷೇಧಗಳು ವ್ಯರ್ಥ ಎನ್ನುವುದಾದರೆ, ಜೀವನಿಗೆ ಕರ್ತೃತ್ವ ಇದ್ದರೂ ವೇದದಲ್ಲಿ ಹರಿಗೆ ಸ್ವಾತಂತ್ರ್ಯವನ್ನು ಹೇಳುವ ವಚನಗಳು ಅರ್ಥಶೂನ್ಯವಾಗುವುವು ಎಂಬ ದೋಷವಿದ್ದೇ ಇದೆ ಎನ್ನುತ್ತಾನೆ ಧರ್ಮರಾಜ. ಮಹಾಭಾರತದಲ್ಲಿ ಅವನ ಮಾತು-

ಈಶ್ವರಂ ಚಾಪಿ ಭೂತಾನಾಂ ಧಾತಾರಂ ಮಾ ಚ ವೈ ಕ್ಷಿಪ।
(ವನ.31-41)

ದ್ರೌಪದಿಯ ಪ್ರಬಲವಾದ ತರ್ಕಬದ್ಧವಾದ ವಾದಕ್ಕೆ ಧರ್ಮರಾಜ ನಿರುತ್ತರನಾದ್ದರಿಂದ ಅವಳನ್ನು ಹೇಗಾದರೂ ಸುಮ್ಮನಾಗಿಸಬೇಕೆಂದು ಅವನು ಹೀಗೆ ಹೇಳಬೇಕಾಯಿತು. ಇದನ್ನು ಯಥಾರ್ಥವೆಂದೇ ತಿಳಿದು ನೀಲಕಂಠೀ ವ್ಯಾಖ್ಯಾನ ಜಿಜ್ಞಾಸುಗಳನ್ನು ತಪ್ಪುದಾರಿಗೆಳೆದಿದೆ.

---

1 ಯತ್ತಾವದುಕ್ತಂ ಕ್ಷಮಾಯಾಃ ಕರ್ತವ್ಯತ್ವೇ ರಾಜ್ಞಾ ನ ಕೃತ್ಯಮಿತಿ, ತದಸತ್। ದಂಡಂ ವಿನಾ ರಕ್ಷಣಾರ್ಥಂ ತದುಪಯೋಗಾತ್।ಯದಪ್ಯನುಮಿತಂ, ತದಸತ್। ಕ್ರಿಯಾ ಸ್ವಾತಂತ್ರ್ಯ ಲಕ್ಷಣ ಕರ್ತೃತ್ವಸ್ಯ ಜೀವನಿಷ್ಠತ್ವೇ ಭಗವತ್ ಸ್ವಾತಂತ್ರ್ಯ ವಿರೋಧಾತ್। ಭಗವದಧೀನ ಕರ್ತೃತ್ವ ಸಾಧನಾದದೋಷ ಇತಿ ಚೇತ್ ಅನ್ಯಾಧೀನಃ ಕ್ರಿಯಾಸ್ವತಂತ್ರಶ್ಚೇತ್ಯಸ್ಯ ವ್ಯಾಹತತ್ವಾತ್। ಯದಪಿ ತರ್ಕಿತಂ ಯದಿ ಜೀವಃ ಕರ್ತಾ ನ ಸ್ಯಾತ್ ತದಾ ವಿಧಿನಿಷೇಧ ಶಾಸ್ತ್ರ ವೈಯರ್ಥ್ಯಮಿತಿ, ತದಪ್ಯಚಾರು। ಯದಿ ಜೀವಃ ಕ್ರಿಯಾಸ್ವತಂತ್ರಃ ಸ್ಯಾತ್ ತರ್ಹಿ ಭಗವತ್ ಸ್ವಾತಂತ್ರ್ಯ ಪರ ವೇದಸ್ಯಾಪ್ರಾಮಾಣ್ಯಂ ಸ್ಯಾದಿತಿ ಪ್ರತಿಕೂಲ ತರ್ಕಪರಾಹತತ್ವಾತ್ ಕುತರ್ಕತ್ವಮಿತಿ ಭಾವಃ। -ತಾಮ್ರಪರ್ಣೀಯ

ಛಲೇನ ತೇನ ಪ್ರತಿಭರ್ತ್ಸಿತಾ ಸಾ
ಕ್ಷಮಾಪಯಾಮಾಸ ನೃಪಂ ಯತಃ ಸ್ತ್ರೀ ।
ವಾಚಾಲತಾ ನಾತಿತರಾಂ ಹಿ ಶೋಭತೇ
ಸ್ತ್ರೀಣಾಂ ತತಃ ಪ್ರಾಹ ವೃಕೋದರಸ್ತಂ ॥೭೬॥

ಧರ್ಮರಾಜ ಹೀಗೆ ಛಲದಿಂದ ದ್ರೌಪದಿಯನ್ನು ಬೈದಾಗ ಅವಳು ಸತಿಯಾದ್ದರಿಂದ, ಪತಿಯ ಮುಂದೆ ಸತಿ ಇಂಥ ವಿಷಯದಲ್ಲಿ ಹೆಚ್ಚು ಮಾತನಾಡುವುದು ಶೋಭಿಸುವುದಿಲ್ಲ ವಾದ್ದರಿಂದ, ಕ್ಷಮೆ ಬೇಡಿ ಸುಮ್ಮನಾದಳು. ಆಗ ಭೀಮ ಮಾತನಾಡಲು ತೊಡಗಿದ.

[1]ಛಲವೆಂದರೆ ಹಟವಲ್ಲ. ಒಬ್ಬನು ಮಾಡಿದ ಗಟ್ಟಿ ಆಕ್ಷೇಪಕ್ಕೆ ಸರಿಯಾದ ಉತ್ತರ ಕೊಡಲಾಗದಿದ್ದಾಗ ಅವನ ಮಾತಿಗೆ ಅವನ ನಿಜವಾದ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ, ಬೇಕೆಂದೇ, ಬೇರೆ ಅರ್ಥ ತೆಗೆದುಕೊಂಡು ಬೈಯುವುದು 'ಛಲ' ಎನಿಸುತ್ತದೆ. ದ್ರೌಪದಿ ಜೀವರಿಗೆ ಕರ್ತೃತ್ವವಿದೆ ಎಂದಿದ್ದಾಳೆ. ಕರ್ತೃತ್ವವೆಂದರೆ ಅವಳ ಅಭಿಪ್ರಾಯದಲ್ಲಿ ಜೀವರಲ್ಲಿರುವುದು ಹರಿಯಲ್ಲಿರುವ ಸ್ವತಂತ್ರ ಕರ್ತೃತ್ವಲ್ಲ. ಹರಿಪ್ರೇರಣೆಯಿಂದ ಕರ್ಮ ಮಾಡುವ ಅಧೀನ ಕರ್ತೃತ್ವ ಮಾತ್ರ. ಇದನ್ನು ದ್ರೌಪದಿ ಬಲವಾಗಿ ಪ್ರತಿಪಾದಿಸಿದಾಗ ಧರ್ಮರಾಜ ನಿರುತ್ತರನಾದ. ಕೋಪದಿಂದ ಅವಳನ್ನು ಸುಮ್ಮನಾಗಿಸುವುದಕ್ಕಾಗಿ 'ದ್ರೌಪದಿ, ನೀನು ಹರಿಯ ಸ್ವತಂತ್ರ ಕರ್ತೃತ್ವವನ್ನು ಜೀವರಿಗೆ ಕುಯುಕ್ತಿಯಿಂದ ಸಾಧಿಸುತ್ತಿರುವಿ' ಎಂದು ಆಕ್ಷೇಪಿಸಿದ. ಇದು ಛಲ.

ದ್ರೌಪದಿ ಮಹಾಭಾರತದಲ್ಲಿ 'ಜೀವಕರ್ತೃತ್ವವನ್ನು ಒಪ್ಪದಿದ್ದರೆ ಹರಿಯೇ ಕರ್ಮಫಲ ಉಣಬೇಕಾಗುತ್ತದೆ. ಅವನು ಶಕ್ತನಾದ್ದರಿಂದ ತಾನು ಉಣದೆ ಜೀವರಿಗೆ ಉಣಿಸುವುದಾದರೆ ವೈಷಮ್ಯ ನೈರ್ಘೃಣ್ಯ ದೋಷಕ್ಕೆ ಪಕ್ಕಾಗಬೇಕಾಗುತ್ತದೆ' ಎಂದು ವಾದಿಸಿದರೆ 'ದ್ರೌಪದಿ, ನೀನು ಹರಿಗೇ ಕರ್ಮಲೇಪವನ್ನು ಹೇಳುತ್ತಿರುವಿ' ಎಂದು ಮುಂತಾಗಿ ಆಕ್ಷೇಪಿಸುತ್ತಾನೆ. ಇದೆಲ್ಲವೂ ಛಲ. ವಾದದಲ್ಲಿ ಸೋತವರು ಬಳಸುವ ವಿಧಾನ.

ಧರ್ಮರಾಜ ಛಲದಿಂದ ಬೈದಾಗ 'ಪತಿಗೆ ಕೋಪ ಬಂದಿದೆ' ಎಂದುಕೊಂಡು ದ್ರೌಪದಿ ಸುಮ್ಮನಾದಳು. 'ಇನ್ನು ಭೀಮ ತನ್ನ ವಾದವನ್ನು ಮುಂದುವರಿಸಲಿ' ಎಂದು ಬಯಸಿದಳು. ಭೀಮ ಮಾತನಾಡಲು ತೊಡಗಿದ.

---

1. ಛಲೇನೇತಿ। ಕಾರ್ಯಾನುಕೂಲ ಪ್ರಯತ್ನವತ್ತ್ವಲಕ್ಷಣ ಕರ್ತೃತ್ವೇ ಸಾಧಿತೇ ಕಾರ್ಯಾನುಕೂಲಾನನ್ಯಾಧೀನ ಪ್ರಯತ್ನವತ್ತ್ವಲಕ್ಷಣಕರ್ತೃತ್ವಂ ಸಾಧಿತಮಿತಿ ಬುಧ್ಯಾ ದೂಷಣಾಭಿಧಾನಾಚ್ಛಲತ್ವಮಿತಿಭಾವಃ। ಟೀಕಾಸು ತು ವಿಪರ್ಯಯ ಪರ್ಯವಸಾನ ಮಜ್ಞಾತ್ವಾ ಪುಣ್ಯಾದಿ ಲೇಪಾಪಾದನೇನಾಸ್ವಾತಂತ್ರ್ಯಂ ಸಾಧಿತಮಿತಿ ಬುದ್ಧ್ಯಾ ದೂಷಣಾಭಿಧಾನಾಚ್ಛಲತ್ವಮಿತ್ಯುಕ್ತಂ। -ತಾಮ್ರಪರ್ಣೀಯ

ಜೀವನಿಗೆ ಕರ್ತೃತ್ವವಿದೆ

ರಾಜನ್ ವಿಷ್ಣುಃ ಸರ್ವಕರ್ತಾ ನ ಚಾನ್ಯಃ
ತತ್ತಂತ್ರಮೇವಾನ್ಯದಸೌ ಸ್ವತಂತ್ರಃ ।
ತಥಾಪಿ ಪುಂಸಾ ವಿಹಿತಂ ಸ್ವಕರ್ಮ
ಕಾರ್ಯಂ ತ್ಯಾಜ್ಯಂ ಚಾನ್ಯದತ್ಯಂತಯತ್ನಾತ್ ॥೭೭॥

ರಾಜನೆ, ವಿಷ್ಣುವೆ ಸರ್ವಕರ್ತ. ಬೇರೆ ಯಾರೂ ಅಲ್ಲ. ಅವನಿಗಿಂತ ಬೇರೆ ಎಲ್ಲವೂ ಅವನ ಅಧೀನ. ಅವನು ಸ್ವತಂತ್ರ. ಆದರೂ ಜೀವ ವಿಹಿತ ಸ್ವಕರ್ಮವನ್ನು ಅತ್ಯಂತ ಪ್ರಯತ್ನದಿಂದ ಮಾಡಲೇಬೇಕು. ನಿಷಿದ್ಧಕರ್ಮವನ್ನು ಹಾಗೇ ತ್ಯಜಿಸಲೂಬೇಕು.

[1]ಧರ್ಮರಾಜ ದ್ರೌಪದಿಯ ವಾದವನ್ನು ಕುತರ್ಕವೆಂದ. ಏಕೆಂದರೆ ವಿಷ್ಣುವೇ ಕರ್ತನಾಗಿರುವಾಗ ಜೀವ ಕರ್ತ ಎಂದರೆ ವಿರುದ್ಧವಾಗುವುದು ಎಂದು. ವಸ್ತುತಃ ದ್ರೌಪದಿ ಜೀವನಿಗೆ ಅಧೀನ ಕರ್ತೃತ್ವ, ಅಂದರೆ ದತ್ತ ಸ್ವಾತಂತ್ರ್ಯವನ್ನು ಮಾತ್ರ ಹೇಳಿದ್ದಾಳೆ. ಮುಖ್ಯ ಕರ್ತೃತ್ವ ಅಂದರೆ ಪೂರ್ಣ ಸ್ವಾತಂತ್ರ್ಯ ವಿಷ್ಣುವಿನಲ್ಲಿಯೆ ಇದೆ.

ನಿಷಿದ್ಧಕರ್ಮವನ್ನು ತೊರೆಯಲೂ ಕೆಲವೊಮ್ಮೆ ಅತ್ಯಂತ ಪ್ರಯತ್ನವೆ ಬೇಕಾಗುತ್ತದೆ. ಉದಾ: ಓರ್ವಳು ಶೀಲಗೆಟ್ಟ ಹೆಂಗಸು ಬಂದು ನನ್ನ ಸಂಗ ಮಾಡೆಂದು ಕುತ್ತಿಗೆಗೆ ಜೋತು ಬೀಳುತ್ತಾಳೆ, ಬಲಾತ್ಕಾರ ಮಾಡುತ್ತಾಳೆ ಎಂದರೆ ಆಗ ಅತ್ಯಂತ ಪ್ರಯತ್ನದಿಂದಲೆ ಅವಳಿಂದ ದೂರವಿರಬೇಕಾಗುತ್ತದೆ.

ಪ್ರತ್ಯಕ್ಷಮೇತತ್ ಪುರುಷಸ್ಯ ಕರ್ಮ
ತೇನಾನುಮೇಯಾ ಪ್ರೇರಣಾ ಕೇಶವಸ್ಯ ।
ಸ್ವಕರ್ಮ ಕೃತ್ವಾ ವಿಹಿತಂ ಹಿ ವಿಷ್ಣುನಾ
ತತ್ಪ್ರೇರಣೇತ್ಯೇವ ಬುಧೋಽನುಮನ್ಯತೇ ॥೭೮॥

ಜೀವನು ಕರ್ಮಮಾಡುವುದು ಪ್ರತ್ಯಕ್ಷವೇ ಇದೆ. ಅದರಿಂದ ವಿಷ್ಣುಪ್ರೇರಣೆಯನ್ನು ಅನುಮಾನದಿಂದ ಊಹಿಸಿ ತಿಳಿಯಬಹುದು. ಜ್ಞಾನಿಯು ವಿಷ್ಣು ವಿಧಿಸಿದ ಸ್ವಕರ್ಮವನ್ನು ತಾನು ಮಾಡಿ ಅವನ ಪ್ರೇರಣೆಯೆಂದು ಭಾವಿಸುತ್ತಾನೆ.

1. ವಿಷ್ಣುಃ ಕರ್ತೇತ್ಯುಕ್ತ್ವಾ ಪುನರ್ಜೀವಕರ್ತೃತ್ವಾಂಗೀಕಾರೋ ವ್ಯಾಹತ ಇತ್ಯತ ಆಹ ಅತ್ಯಂತಯತ್ನಾದಿತಿ। ಅತ್ಯಂತ ಯತ್ನಂ ವಿಧಾಯೇತಿ ಲ್ಯಬ್‌ಲೋಪನಿಮಿತ್ತಾ ಪಂಚಮೀ। ಕರ್ತೃತ್ವಂ ದ್ವಿವಿಧಂ ಮುಖ್ಯಮಮುಖ್ಯಂ ಚ। ತತ್ರಾದ್ಯಂ ಕಾರ್ಯಾನುಗುಣಾನನ್ಯಾಧೀನ ಪ್ರಯತ್ನವತ್ವಲಕ್ಷಣಂ ಕರ್ತೃತ್ವಂ ಈಶ್ವರೇ। ದ್ವಿತೀಯಂ ಕಾರ್ಯಾನುಗುಣಾನ್ಯಾಧೀನ ಪ್ರಯತ್ನ ವತ್ವಲಕ್ಷಣಂ ಕರ್ತೃತ್ವಂ ಜೀವಸ್ಯೇತಿ ವ್ಯವಸ್ಥಾಶ್ರಯಣೇನಾವಿರೋಧ ಇತಿ ಭಾವಃ। ತಥಾ ಚ ಸೂತ್ರಂ- ಉಪಲಬ್ಧಿವದನಿಯಮಃ। ಶಕ್ತಿ ವಿಪರ್ಯಯಾದಿತಿ। ಏತೇನ ಕುತರ್ಕಮಾಶ್ರಿತ್ಯೇತಿ ಯದನುಮಾನ ದೂಷಣಮುಕ್ತಂ ತದಪಾಸ್ತಂ।
-ತಾಮ್ರಪರ್ಣೀಯ

[1]ನಾವು ಕರ್ಮ ಮಾಡುವಾಗ 'ನಾನು ಕರ್ಮ ಮಾಡುತ್ತಿದ್ದೇನೆ. ಈ ಕರ್ಮಕ್ಕೆ ನಾನು ಕರ್ತ' ಎಂದು ನಮಗೆ ಪ್ರತ್ಯಕ್ಷಾನುಭವವೆ ಇದೆ. ಇದು ಜೀವಕರ್ತೃತ್ವ ವಿಷಯದಲ್ಲಿ ಸಾಕ್ಷಿ ಪ್ರತ್ಯಕ್ಷ ಪ್ರಮಾಣ. ನಮ್ಮ ಪ್ರಯತ್ನ ಕೆಲವೊಮ್ಮೆ ಕುಂಠಿತವಾಗುವುದೂ ಕಂಡಿದೆ. ಮಾಡಲು ಬಯಸಿದರೂ ಮಾಡಲಾಗುತ್ತಿಲ್ಲ. ಅದರಿಂದ ನಾವು ಅಸ್ವತಂತ್ರರು ನಮ್ಮ ಪ್ರಯತ್ನ ಪರಮಾತ್ಮನ ಇಚ್ಛೆಯಂತೆ ನಡೆದೀತು, ನಮ್ಮ ಇಚ್ಛಾನುಸಾರವಲ್ಲ ಎಂದು ಅನುಮಾನದಿಂದ ಸಿದ್ಧವಾಗುತ್ತದೆ. ಅನುಮಾನವೆಂದರೆ ಸಂಶಯವಿಲ್ಲ. ವಿಮರ್ಶೆ. ಜ್ಞಾನಿಗಳು ವಿಮರ್ಶೆ ಮಾಡುತ್ತಾರೆ. 'ಶ್ರುತಿಸ್ಮೃತೀ ಮಮೈವಾಜ್ಞೇ' ಎನ್ನುವಂತೆ ಶ್ರೌತಸ್ಮಾರ್ತ ಕರ್ಮಗಳೆಲ್ಲವನ್ನೂ ವಿಷ್ಣುವೆ ವಿಧಿಸಿದ್ದಾನೆ ಎಂದು ತಿಳಿದು ತಮಗೆ ವಿಹಿತವಾದ ಕರ್ಮವನ್ನು ಮಾಡಿ ಪರಮಾತ್ಮ ಪ್ರೇರಣೆಯಿಂದಲೆ ಮಾಡಿದೆವೆನ್ನುತ್ತಾರೆ. ಅದರಿಂದ ಪರಮಾತ್ಮಪ್ರೇರಣೆ ಅನುಮಾನದಿಂದ ಸಿದ್ಧವಾಗುವುದೆನ್ನಲು ಜ್ಞಾನಿಗಳ ವ್ಯವಹಾರ ಸಾಕ್ಷಿಯಾಗಿದೆ.

[2]ಆಸ್ತಿಕರು ಸಂಧ್ಯಾವಂದನಾದಿ ವಿಹಿತ ಕರ್ಮಗಳನ್ನು ಮಾಡುತ್ತಾರೆ. ಕಾಮುಕರು ಮಾಡುವುದಿಲ್ಲ. ಇದರಿಂದಲೂ ಹರಿಪ್ರೇರಣೆ

---

1. ಕರ್ಮಕರ್ತೃತ್ವಂ ಅಹಂ ಕರ್ತೇತಿ ಸಾಕ್ಷಿ ಪ್ರತ್ಯಕ್ಷ ಸಿದ್ಧಂ।ತೇನ ಪ್ರತ್ಯಕ್ಷಸಿದ್ಧ ಕರ್ತೃತ್ವೇನ 'ಏಮತಮೀಶಾಧೀನಂ ಅಸ್ವತಂತ್ರನಿಷ್ಠ ಧರ್ಮತ್ವಾತ್ ಸಂಮತವತ್ ಜಿಘೃಕ್ಷೋಃ ಗ್ರಹಣಾಭಾವೇನ ಕ್ವಚಿತ್ ಕ್ವಚಿತ್ ಪ್ರತಿಹತತ್ವಾತ್ ರಾಜಪುರುಷಕರ್ತೃತ್ವವತ್ ಇತ್ಯನುಮಾನೇನ ಭಗವತ್ ಪ್ರೇರಣಾನುಮೇಯೇತ್ಯರ್ಥಃ। ಜೀವಸ್ಯೇಶ್ವರಾಧೀನ ಕರ್ತೃತ್ವೇ ವೃದ್ಧಾಂಗೀಕಾರಂ ಚ ಪ್ರಮಾಣಯನ್ನಾಹ ಸ್ವಕರ್ಮೇತಿ। ವಿಷ್ಣುನಾ ವಿಹಿತಂ ಶ್ರುತಿಸ್ಮೃತೀ ಮಮೈವಾಜ್ಞೇ ಇತಿ ವಚನಾದಿತಿ ಭಾವಃ। -ತಾಮ್ರಪರ್ಣೀಯ

2. ಪ್ರತ್ಯಕ್ಷಮೇತತ್ ಪುರುಷಸ್ಯೇತ್ಯತ್ರ ಏತತ್ ಸಂಧ್ಯಾವಂದನ ಯಜನಾದಿಕಂ ಕರ್ಮ ಪ್ರತ್ಯಕ್ಷಂ। ತ್ವಯೈವ ಪ್ರತಿದಿನಂ ಕ್ರಿಯಮಾಣತ್ವಾತ್। ತೇನ ಕರ್ಮಣಾ ಕೇಶವಸ್ಯ ಪ್ರೇರಣಾನುಮೇಯಾ। ಜೀವತ್ವಾವಿಶೇಷೇಽಪಿ ಕಾಮುಕೈರಕ್ರಿಯಮಾಣಂ ಸಂಧ್ಯಾವಂದನಾದಿಕಮಾಸ್ತಿಕೈಃ ಕಿಮರ್ಥಂ ಕ್ರಿಯತೇ? ನ ಚ ತತ್ತದ್ಯೋಗ್ಯತಯೈವ ತತ್ತದ್ ಘಟನೇತಿ ವಾಚ್ಯಂ। ಯೋಗ್ಯೇಷ್ವೇವ ಕಸ್ಯಚಿದಿಂದ್ರಾದೇಃ ಪರನಾರೀಕಾಮನಸ್ಯ ದರ್ಶನಾತ್। ಸ್ವಸ್ಯಾನಿಷ್ಟಭೂತ ನರಕಹೇತು ಪಾಪಕರ್ಮಣೋಽಪಿ ಸ್ವಾನಿಷ್ಟತ್ವೇನ ಸ್ವಾನಿಷ್ಟಸ್ಯ ಚ ಸ್ವಕರ್ತೃಕತ್ವಾಯೋಗೇನ ಅನ್ಯಪ್ರೇರ್ಯತ್ವನಿಯಮಾತ್। ಕಿಂ ಬಹುನಾ ಅನಿಷ್ಟಹೇತು ಭೂತಾನಂತ ಕರ್ಮಪರಂಪರಾಯಾ ಅಪಿ ಸ್ವಾನಿಷ್ಟತ್ವ ನಿಯಮೇನ ಸ್ವತಂತ್ರ ಪ್ರೇರಕಾಂತರಂ ವಿನಾ ಸ್ವಸ್ಯ ಕರ್ತೃತ್ವಾಸಂಭವಾತ್। ಜಡಂ ಕರ್ಮೈವ ಚೇತನಂ ಪ್ರೇರಯತೀತಿ ಪ್ರಕ್ರಿಯಾಲತಾಂ ತು ಕುಠಾರ ಏವ ಛಿನತ್ತಿ। ನಹಿ ಕುಠಾರಃ ಸ್ವಯಮೇವ ದೇವದತ್ತಮುದೂಹ್ಯ ಗಚ್ಛತಿ। ಕಿಂತು ದೇವದತ್ತ ಕರಧೃತಃ ಸನ್ ತದಿಚ್ಛಯಾ ಛಿನತ್ತಿ, ತದಿಚ್ಛಾಭಾವೇ ನ ಛಿನತ್ತಿ ಚ। ಅತಃ ಸುಷ್ಠೂಕ್ತಂ ತೇನಾನುಮೇಯಾ ಪ್ರೇರಣಾ ಕೇಶವಸ್ಯೇತಿ। ಕಥಮನ್ಯಥಾ ಭುಂಜಾನಃ ಸ್ವಜಿಹ್ವಾಂ ಸ್ವಯಮೇವ ದಂಶೇತ್? ಬುಧೋಽನುಮನ್ಯತ ಇತಿ ವದತಾ 'ನಿಷುಸೀದ ಗಣಪತೇ' 'ಯೋಽಂತಃಪ್ರವಿಶ್ಯೇ'ತ್ಯಾದಿ ಶ್ರುತಿಂ ಸ್ಮೃತಿಂ ಚ ಸ್ಮಾರಯತಿ।
-ವಾದಿರಾಜೀಯ

ನಿಯಾಮಕವೆಂದು ಒಪ್ಪಲೇಬೇಕು. ಅವರವರ ಸ್ವಭಾವ ಯೋಗ್ಯತೆಯೆ ನಿಯಾಮಕವೆನ್ನುವಂತಿಲ್ಲ. ಏಕೆಂದರೆ ಯೋಗ್ಯರಾದ ಇಂದ್ರಾದಿ ದೇವತೆಗಳಲ್ಲಿಯೂ ಕೆಲವೊಮ್ಮೆ ಪರಸ್ತ್ರೀ ಕಾಮನೆ ಮುಂತಾದವು ಕಂಡಿವೆ.

ತನಗೆ ಅನಿಷ್ಟವಾದ ನರಕಾದಿ ದುಃಖಗಳಿಗೆ ಕಾರಣವಾದ ಪ್ರವೃತ್ತಿ ಅನಿಷ್ಟವಾದರೂ ಜೀವನು ಅದರಲ್ಲಿ ತೊಡಗುವುದರಿಂದಲೂ ಹರಿಪ್ರೇರಣೆಯನ್ನು ಊಹಿಸಬಹುದು. ಅನಂತಕರ್ಮ ಪ್ರವಾಹ ಅನಿಷ್ಟಹೇತು ಎಂದು ತಿಳಿದೂ ಜೀವ ಕರ್ಮದಲ್ಲಿ ತೊಡಗುವುದು ಹರಿಪ್ರೇರಣೆಯಿಂದ ಎನ್ನಬೇಕು.

ಜಡವಾದ ಕರ್ಮವೆ ಜೀವನನ್ನು ಕರ್ಮದಲ್ಲಿ ಪ್ರೇರಿಸುತ್ತದೆ ಎನ್ನುವ ವಾದವನ್ನು ಕೊಡಲಿಯೆ ಕಡಿಯುತ್ತದೆ. ಹೇಗೆಂದರೆ ಕೊಡಲಿ ತಾನೆ ಮರ ಕಡಿವ ಮನುಷ್ಯನನ್ನು ಎತ್ತಿ ಕಾಡಿಗೆ ಕೊಂಡೊಯ್ಯುವುದಿಲ್ಲ. ಮನುಷ್ಯನ ಕೈಗೆ ಬಂದರೆ ಅವನ ಇಚ್ಛಾನುಸಾರ ತಾನು ಮರ ಕಡಿಯುತ್ತದೆ ಇಲ್ಲವೆ ಸುಮ್ಮನಿರುತ್ತದೆ. ಅದರಿಂದ ಎಲ್ಲ ಕರ್ಮಗಳಿಗೂ ವಿಷ್ಣುಪ್ರೇರಣೆ ಬೇಕೆಂದು ಅನುಮಾನದಿಂದ ಊಹಿಸುವುದು ಸಮಂಜಸವೇ ಆಗಿದೆ. ಇಲ್ಲದಿದ್ದರೆ ನಾವು ಉಣ್ಣುವಾಗ ನಮ್ಮ ನಾಲಿಗೆಯನ್ನು ನಾವೆ ಏಕೆ ಕಡಿದುಕೊಳ್ಳುತ್ತೇವೆ? ಅದರಿಂದ ಶ್ರೀಹರಿಯೆ ಪ್ರೇರಕ. ಈ ಅನುಮಾನ ಪ್ರಮಾಣದೊಂದಿಗೆ 'ನಿಷುಸೀದ ಗಣಪತೇ' 'ಯೋಽಂತಃ ಪ್ರವಿಶ್ಯ' ಮುಂತಾದ ಶ್ರುತಿಸ್ಮೃತಿಗಳನ್ನು ತೋರಿಸುವುದೂ ಇಲ್ಲಿ ವಿವಕ್ಷಿತವಾಗಿದೆ.

ತೇನೈತಿ ಸಮ್ಯಗ್‌ಗತಿಮಸ್ಯ ವಿಷ್ಣೋ
ರ್ಯನೋಽಶುಭೋ ದೈವಮಿತ್ಯೇವ ಮತ್ವಾ।
ಹಿತ್ವಾ ಸ್ವಕಂ ಕರ್ಮ ಗತಿಂ ಚ ತಾಮಸೀಂ
ಪ್ರಯಾತಿ ತಸ್ಮಾತ್ ಕಾರ್ಯಮೇವ ಸ್ವಕರ್ಮ ॥೭೯॥

ಜ್ಞಾನಿ ಹರಿಪ್ರೇರಣೆ ಎಂದುಕೊಂಡು ಕರ್ಮ ಮಾಡುವುದರಿಂದ ಹರಿಯ ಅನುಗ್ರಹದಿಂದ ವಿಷ್ಣುಲೋಕವನ್ನು ಪಡೆಯುತ್ತಾನೆ. ಅವಿವೇಕಿ ದೈವವೆ ಎಲ್ಲವನ್ನೂ ಮಾಡುತ್ತದೆ ಎನ್ನುತ್ತ ವಿಹಿತವಾದ ಸ್ವಕರ್ಮವನ್ನು ತ್ಯಾಗಮಾಡಿ ತಾಮಸಗತಿಯನ್ನು ಹೊಂದುತ್ತಾನೆ. ಅದರಿಂದ ಪ್ರತಿಯೊಬ್ಬನೂ ಸ್ವಕರ್ಮ ಮಾಡಲೇಬೇಕು.

ಹರಿಯ ಅಧಿನವಾದ ಕರ್ತೃತ್ವ ತನಗುಂಟೆಂದು ತಿಳಿದು ಕರ್ಮಮಾಡುವವನಿಗೆ ಉತ್ತಮ ಫಲ ಲಭಿಸುವುದು, ತನಗೆ ಕರ್ತೃತ್ವವಿಲ್ಲ, ದೈವವೆ ಎಲ್ಲ ಮಾಡುತ್ತದೆ ಎಂದು ತಿಳಿದು ಸ್ವಕರ್ಮ ಬಿಟ್ಟವನಿಗೆ ಅಧೋಗತಿ

ಲಭಿಸುವುದು. ಹೀಗೆ ಫಲ ಅಫಲಗಳಿಂದಲೂ ಜೀವನಿಗೆ ಕರ್ತೃತ್ವ ಸಿದ್ಧವಾಗುವುದು. ಮಹಾಭಾರತದಲ್ಲಿ ದ್ರೌಪದಿಯೂ ಇದೇ ಮಾತನ್ನು ಆಡಿದ್ದಳು.

ಯೋ ಹಿ ದಿಷ್ಟಮುಪಾಸೀನೋ ನಿರ್ವಿಚೇಷ್ಟಃ ಸುಖಂ ಶಯೀತ್
ಅವಸೀದೇತ್ ಸ ದುರ್ಬುದ್ಧಿರಾಮೋ ಘಟ ಇವೋದಕೇ
(ವನ 32. 14)

ಭೀಮ ದ್ರೌಪದಿಯರೊಳಗೆ ಸದಾ ಏಕಾಭಿಪ್ರಾಯವೆ ಇರುತ್ತದೆ.

ಜೀವಕರ್ತೃತ್ವ ಹರಿಯ ಅಧೀನ

ಜ್ಞಾತವ್ಯಂ ಚೈವಾಸ್ಯ ವಿಷ್ಣೋರ್ವಶತ್ವಂ
ಕರ್ತವ್ಯಂ ಚೈವಾತ್ಮನಃ ಕಾರ್ಯಕರ್ಮ ।
ಪ್ರತ್ಯಕ್ಷೈಷಾ ಕರ್ತೃತಾ ಜೀವಸಂಸ್ಥಾ
ತಥಾಗಮಾದನುಮಾನಾಚ್ಚ ಸರ್ವಂ ॥೮೦॥
ವಿಷ್ಣೋರ್ವಶೇ ತನ್ನ ಹೇಯಂ ದ್ವಯಂ ಚ
ಜಾನನ್ ವಿದ್ವಾನ್ ಕುರುತೇ ಕಾರ್ಯಕರ್ಮ ।
ತತ್ಪ್ರೇರಕಂ ವಿಷ್ಣುಮೇವಾಭಿಜಾನನ್
ಭವೇತ್ ಪ್ರಮಾಣತ್ರಿತಯಾನುಗಾಮೀ ॥೮೧॥

ಕರ್ಮಕರ್ತನಾದ ಜೀವ ಹರಿಯ ಅಧೀನನೆಂಬುದನ್ನು ತಿಳಿಯಲೇಬೇಕು. ತನ್ನ ಯೋಗ್ಯಕರ್ಮವನ್ನು ಆಚರಿಸಲೂಬೇಕು. ಜೀವನಲ್ಲಿರುವ ಈ ಕರ್ತೃತ್ವ ಪ್ರತ್ಯಕ್ಷ ಸಿದ್ಧ. ಹಾಗೇ ಅನುಮಾನಾಗಮಗಳಿಂದಲೂ ಸಿದ್ಧವಾಗಿದೆ. ಎಲ್ಲವೂ ವಿಷ್ಣುವಿನ ಅಧೀನವೆಂಬುದೂ ಪ್ರತ್ಯಕ್ಷಾನುಮಾನಾಗಮಗಳಿಂದ ಸಿದ್ಧವಾಗಿದೆ. ಅದರಿಂದ ಜೀವಕರ್ತೃತ್ವ ಮತ್ತು ಹರಿಯಧೀನತ್ವ ಇವೆರಡನ್ನೂ ತಿಳಿದ ಜ್ಞಾನಿ ತನಗೆ ಯೋಗ್ಯವಾದ ಕರ್ಮ ಮಾಡುತ್ತಾನೆ. ಹೀಗೆ ಯಾರು ಜೀವಕರ್ತೃತ್ವಕ್ಕೆ ವಿಷ್ಣು ಪ್ರೇರಕ ಎಂದು ತಿಳಿಯುವನೋ ಅವನು ಮೂರೂ ಪ್ರಮಾಣಗಳನ್ನು ಅನುಸರಿಸಿದಂತಾಗುವುದು.

ನಾನು ಕರ್ಮ ಮಾಡುತ್ತಿದ್ದೇನೆ ಎಂದು ಸಾಕ್ಷಿಪ್ರತ್ಯಕ್ಷವಿದೆ. ಕರ್ಮಫಲ ಉಣ್ಣುವುದರಿಂದ ಕರ್ಮಕರ್ತನಾಗಿರಲೇಬೇಕೆಂದು ಅನುಮಾನವಿದೆ. 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್' 'ಕರ್ಮ ಮಾಡುತ್ತಲೆ ಬದುಕಲು ಬಯಸಬೇಕು' ಎನ್ನುವ ಈಶೋಪನಿಷತ್ತಿನ ವಚನವೂ ಇದೆ. ಹೀಗೆ ಜೀವಕರ್ತೃತ್ವ ಮೂರು ಪ್ರಮಾಣಗಳಿಂದ ಸಿದ್ಧವಾಗಿದೆ. ಜೀವಕೃರ್ತತ್ವ ಹರಿಯ ಅಧೀನ ಎನ್ನುವಲ್ಲಿ ಜ್ಞಾನಿಗಳಿಗೆ ತಾವು ಹರಿಪ್ರೇರಣೆಯಿಂದ ಕರ್ಮ

ಮಾಡುತ್ತಿದ್ದೇವೆ ಎಂಬ ಪ್ರತ್ಯಕ್ಷವಿದೆ. ಜೀವನಲ್ಲಿರುವ ಕರ್ತೃತ್ವವೂ ಅಂಕುರದಂತೆ ಒಂದು ಕಾರ್ಯವೇ ಆಗಿರುವುದರಿಂದ ಹರಿಯ ಅಧೀನವೇ ಇರಬೇಕೆಂಬ ಅನುಮಾನವೂ ಇದೆ. 'ನ ಋತೇ ತ್ವತ್ಕ್ರಿಯತೇ' ಎಂಬ ಋಗ್ವೇದ ಮಂತ್ರವಚನ ರೂಪವಾದ ಆಗಮ ಪ್ರಮಾಣವೂ ಇದೆ. ಹೀಗೆ ಜೀವನ ಕರ್ತೃತ್ವವೂ ಹರಿಯ ಅಧೀನತ್ವವೂ ಮೂರು ಪ್ರಮಾಣಗಳಿಂದ ಸಿದ್ಧವಾಗಿರುವುದರಿಂದ ಸರ್ವಥಾ ಬಿಡಲಾಗದು.

ಪೂರ್ಣಂ ಪ್ರಮಾಣ ತತ್ರ್ರಯಂ ಚಾವಿರೋಧೇ-
ನೈಕತ್ರಸ್ಥಂ ತತ್ರ್ರಯಂ ಚಾವಿರೋಧಿ ।
ಪೃಥಙ್ಮಧ್ಯಂ ಚಾಪ್ರಮಾಣಂ ವಿರೋಧಿ
ಸ್ಯಾತ್ ತತ್ ತಸ್ಮಾತ್ ತ್ರಯಮೇಕತ್ರ ಕಾರ್ಯಂ ॥೮೨॥

ಪ್ರತ್ಯಕ್ಷ ಅನುಮಾನ ಆಗಮ ಇವು ಮೂರೂ ಒಂದೇ ವಿಷಯದಲ್ಲಿ ಪರಸ್ಪರ ಅವಿರೋಧಿಯಾಗಿ ಕೂಡಿಬಂದರೆ ಅದು ಪೂರ್ಣಪ್ರಮಾಣವೆನಿಸುತ್ತದೆ. ಮೂರು ಪ್ರಮಾಣಗಳು ಬೇರೆ ಬೇರೆ ವಿಷಯಗಳನ್ನು ಹೊಂದಿ ಪರಸ್ಪರ ವಿರೋಧ ಪರಿಹರಿಸಿಕೊಂಡರೆ ಮಧ್ಯಮ ಪ್ರಮಾಣವಾಗುವುದು. ಪರಸ್ಪರ ವಿರೋಧಿಯೆ ಆಗಿದ್ದರೆ ಅಪ್ರಮಾಣವೆ ಆಗುವುದು. ಅದರಿಂದ ಮೂರನ್ನೂ ಒಂದೇ ವಿಷಯದಲ್ಲಿ ಅವಿರೋಧವಾಗಿ ಕೂಡಿಸಬೇಕು.

[1]ಮೂರೂ ಪ್ರಮಾಣಗಳನ್ನು ಅನುಸರಿಸಬೇಕೆಂದು ಹಿಂದಿನ ಶ್ಲೋಕದಲ್ಲಿ ಹೇಳಿದೆ. ಅದೇಕೆ? ಒಂದೇ ವಿಷಯದಲ್ಲಿ ಅವಿರೋಧವಾಗಿ ಮೂರೂ ಪ್ರಮಾಣಗಳನ್ನು ಕೂಡಿಸುವ ಯತ್ನವೇಕೆ? ಜೀವಕರ್ತೃತ್ವವನ್ನು

---

1. ನನು ಯದುಕ್ತಂ ಭಗವದಧೀನ ಕರ್ತಾ ಜೀವ ಇತ್ಯಂಗೀಕಾರೇ ಪ್ರಮಾಣತ್ರಿತಯಾನುಸಾರೀ ಭವೇದಿತಿ ತದಯುಕ್ತಂ। ಪ್ರಮಾಣ ತ್ರಿತಯಾನುಸರಣಸ್ಯ ವ್ಯರ್ಥತ್ವಾತ್। ನಚ ವಿರೋಧ ಪರಿಹಾರ ಏವಾಸ್ಯ ಪ್ರಯೋಜನ ಮಿತಿ ವಾಚ್ಯಂ। ಜೀವಕರ್ತೃತ್ವ ಗ್ರಾಹಕ ಪ್ರತ್ಯಕ್ಷಸ್ಯ ಘಟಾದಿ ಪರಿದೃಶ್ಯಮಾನ ಕಾರ್ಯ ಕರ್ತೃತ್ವ ವಿಷಯತ್ವಂ, ಈಶ್ವರೇ ಸ್ವತಂತ್ರ ಕರ್ತೃತ್ವಗ್ರಾಹಕಾಣಾಂ ಸಹಿ ಸರ್ವಸ್ಯ ಕರ್ತಾ ನಾನ್ಯೋಕತೋಕಸ್ತೀತ್ಯಾದ್ಯಾಗಮಾನುಮಾನಾನಾಂ ಮಹದಾದಿ ಕರ್ತೃತ್ವ ವಿಷಯತ್ವಮಿತಿ, ಜೀವೇಶ್ವರ ಕರ್ತೃತ್ವ ಬೋಧಕ ಪ್ರತ್ಯಕ್ಷಾದೀನಾಂ ಭಿನ್ನ ವಿಷಯತ್ವೇಕಪಿ ವಿರೋಧಾಭಾವತ್। ನ ಚೈವಂ ಸತೀಶ್ವರಸ್ಯ ಸರ್ವ ಕರ್ತೃತ್ವಾವಬೋಧಕ ಪ್ರಮಾಣವಿರೋಧಃ। ವಿರೋಧೋ ಹಿ ಘಟಾದೇರಪೀಶಃ ಕರ್ತೇತಿ ವಿಶೇಷ ಪ್ರಮಾಣಭಾವೇ ಸ್ಯಾತ್। ನ ಚ ತದಸ್ತಿ। ಸಹಿ ಸರ್ವಸ್ಯಕರ್ತೇತಿ ಸರ್ವ ಶಬ್ದಸ್ಯ ಸಂಕೋಚಃ ಶಕ್ಯಃ। ಅಸ್ತುವಾ ಪ್ರಮಾಣ ತ್ರಯಸ್ಯ ಘಟಾದಿಲಕ್ಷಣೈಕ ವಿಷಯತ್ವಂ। ತಥಾಪಿ ಉಭಯೋರಪಿ ಸ್ವಾತಂತ್ರ್ಯೇಣ ಕರ್ತೃತ್ವಂ ಭವತು। ಘಟಾದಾವಪಿ ಭಗವತಃ ಸ್ವಾತಂತ್ರ್ಯಸ್ಯ ಭವದ್ಭಿರೇವಾಂಗೀಕಾರಾತ್। ಅಹಂ ಕರೋಮೀತಿ ಸ್ವಾತಂತ್ರ್ಯಾವಬೋಧಕ ಪ್ರತ್ಯಕ್ಷ ಬಲೇನ ಜೀವಸ್ವಾತಂತ್ರ್ಯಸ್ಯಾಸ್ಮಾಭಿರಭ್ಯುಪಗಮಾತ್। ಪ್ರಮಿತೇ ವಿರೋಧಸ್ಯಾ ಪ್ರಯೋಜಕತ್ವಾತ್ ಇತ್ಯತ ಆಹ ಪೂರ್ಣಮಿತಿ। ಪ್ರತ್ಯಕ್ಷಾದಿ ತ್ರಯಂ ಅವಿರೋಧೇನ ಸ್ವಾತಂತ್ರ್ಯ ಪಾರತಂತ್ರ್ಯ ವ್ಯವಸ್ಥಯಾ ಸ್ವತಂತ್ರ ಕರ್ತೃಶ್ವರಾಧಿನೋ ಜೀವಃ ಕರ್ತೇತಿ

ತಿಳಿಸುವ ಪ್ರತ್ಯಕ್ಷ ಕೇವಲ ಘಟಾದಿಕರ್ತೃತ್ವ ಭೋಜನಾದಿ ಕರ್ತೃತ್ವಗಳನ್ನು ಕುರಿತಾಗಿ ಹೊರಟಿದೆ. ಈಶ್ವರ ಕರ್ತೃತ್ವವನ್ನು ತಿಳಿಸುವ 'ನ ಋತೇ ತ್ವತ್ ಕ್ರಿಯತೇ' ಎಂದು ಮುಂತಾದ ಆಗಮವೂ' ಎಲ್ಲವೂ ಹರಿಯ ಅಧೀನ. ಕಾರ್ಯವಾದ್ದರಿಂದ, ಎಂಬ ಅನುಮಾನವೂ ಮಹತ್ತತ್ವಾದಿ ಸೃಷ್ಟಿಕರ್ತೃತ್ವವನ್ನು ಕುರಿತಾಗಿವೆ ಎಂದು ಬೇರೆ ಬೇರೆ ವಿಷಯಗಳಲ್ಲಿ ಪ್ರಮಾಣಗಳನ್ನು ವ್ಯವಸ್ಥಿತವಾಗಿ ವಿರೋಧ ಬಾರದಂತೆ ಕೂಡಿಸೋಣ. ಇದರಿಂದ ಜೀವನೂ ತನ್ನ ಕರ್ಮದಲ್ಲಿ ತಾನು ಸ್ವತಂತ್ರಕರ್ತ. ಈಶ್ವರನೂ ಅವನ ಕರ್ಮದಲ್ಲಿ ಅವನು ಸ್ವತಂತ್ರಕರ್ತ. ಪರಸ್ಪರ ವಿರೋಧವಿಲ್ಲ. 'ಸ ಹಿ ಸರ್ವಸ್ಯ ಕರ್ತಾ' ಎಂಬ ಆಗಮವೂ 'ಎಲ್ಲ ಭಗವದಧೀನ, ಕಾರ್ಯವಾದ್ದರಿಂದ' ಎನ್ನುವ ಅನುಮಾನವೂ ಜೀವನ ಕರ್ತೃತ್ವವನ್ನು ಭಗವದಧೀನವೆನ್ನುತ್ತಿರುವಂತೆ ಕಾಣಬಹುದು. ಆದರೆ 'ಎಲ್ಲವೂ' ಎಂದರೆ ಎಲ್ಲವೂ ಅಲ್ಲ, 'ಈಶ್ವರ ಮಾಡುವ ಎಲ್ಲವೂ ಈಶ್ವರನ ಅಧೀನ' ಎಂದು ಸಂಕೋಚ ಮಾಡಿದರೆ ವಿರೋಧ ಪರಿಹಾರ ಸುಲಭ. ಅದರಿಂದ ಜೀವನು ಮಾಡುವ ಭೋಜನಾದಿಗಳು ಈಶ್ವರನ ಅಧೀನವೆಂದಾಗುವುದಿಲ್ಲ. ಜೀವನ ಅಧೀನವೆಂದೇ ಸಿದ್ಧವಾಗುವುವು. 'ಎಲ್ಲವೂ' ಎಂಬ ಶಬ್ದಕ್ಕೆ ಮೇಲೆ ಹೇಳಿದಂತೆ ಸಂಕೋಚ ಮಾಡುವುದರಲ್ಲಿ ಬಾಧಕವೇನಿಲ್ಲ. 'ಘಟಾದಿಗಳನ್ನೂ ಈಶ್ವರನೇ ಮಾಡುತ್ತಾನೆ, ಜೀವನ ಭೋಜನವನ್ನೂ ಭಗವಂತನೇ ಮಾಡುತ್ತಾನೆ' ಎಂದೇನೂ ವಿಶೇಷ ಪ್ರಮಾಣವಿಲ್ಲ. ಅಥವಾ 'ಎಲ್ಲವೂ' ಎನ್ನುವುದನ್ನು ಸಂಕೋಚ ಮಾಡದೆಯೆ ಜೀವರ ಭೋಜನಾದಿ ಕರ್ಮದಲ್ಲಿಯೂ ಹರಿ ಸ್ವತಂತ್ರಕರ್ತನೆಂದೇ ಸ್ವೀಕರಿಸೋಣ. ಜೀವರಿಗೆ ನಾನು ಸ್ವತಂತ್ರನಾಗಿ ಭೋಜನ ಮಾಡುತ್ತಿದ್ದೇನೆ ಎನ್ನುವ ಪ್ರತ್ಯಕ್ಷ ಪ್ರಮಾಣ ವಿರುವುದರಿಂದ ಜೀವರೂ ಸ್ವತಂತ್ರಕರ್ತರೇ. ಇದು ವಿರೋಧವಲ್ಲವೆ?

ವ್ಯವಸ್ಥಾಮಾಶ್ರಿತ್ಯೈಕತ್ರಸ್ಥಂ ಘಟಾದ್ಯೇಕೈಕ ವಿಷಯಂ ಚೇತ್ ಪೂರ್ಣಂ ಪ್ರಮಾಣಂ ಭವತಿ। ಸಹಿ ಸರ್ವಸ್ಯೇತ್ಯಾದೌ ಸರ್ವಶಬ್ದ ಸಂಕೋಚಾಭಾವಾತ್। ಶ್ರುತೇರನುಮಾಯಾಶ್ಚ ಪ್ರತ್ಯಕ್ಷ ವಿರೋಧಾಭಾವಾತ್ ಪ್ರತ್ಯಕ್ಷಸ್ಯ ನಾನ್ಯೋಕತೋಸ್ತೀತ್ಯಾದಿ ಶ್ರುತಿವಿರೋಧಾಭಾವಚ್ಚ। ಪ್ರತ್ಯಕ್ಷಂ ಜೀವಸ್ಯ ಘಟಾದಿ ಕರ್ತೃತ್ವ ವಿಷಯಂ, ಶ್ರುತ್ಯನುಮಾನೇ ತ್ವೀಶ್ವರಸ್ಯ ಮಹದಾದಿ ಕರ್ತೃತ್ವ ವಿಷಯಕೇ ಇತಿ ಪೃಥಕ್ ಭಿನ್ನ ವಿಷಯಮತ ಏವಚೋಕ್ತರೀತ್ಯಾ ಅವಿರೋಧಿ ಚೇನ್ಮಧ್ಯಂ। ಏಕಸ್ಮಿನ್ ವಿಷಯೇ ಪ್ರಮಾಣತ್ರಯಸ್ಯ ವಕ್ತುಂ ಶಕ್ಯತ್ವೇಽಪಿ ಭಿನ್ನ ವಿಷಯತ್ವ ಕಲ್ಪನಸ್ಯ ಕ್ಲಿಷ್ಟತ್ವಾತ್। ಸ ಇದಂ ಸರ್ವಮಸೃಜತೇತ್ಯಾದೌ ಸರ್ವಶಬ್ದ ಸಂಕೋಚಕಲ್ಪನಾಚ್ಚ। ಜೀವೋಽಪಿ ಘಟಾದೌ ಸ್ವತಂತ್ರ ಕರ್ತೇಶ್ವರೋಽಪಿ ತಥೇತ್ಯಂಗೀಕಾರೇ ವಿರೋಧಾತ್ ತ್ರಯಮಪ್ಯಪ್ರಮಾಣಂ ಸ್ಯಾತ್। ತಸ್ಮಾತ್ ತತ್ತ್ರಯ ಮವಿರೋಧೇನ ಏಕಸ್ಮಿನ್ ವಿಷಯೇ ಕಾರ್ಯಂ। ತಥಾಚ ಸ್ವತಂತ್ರಕರ್ತೃರ್ಈಶ್ವರಾಧೀನೋ ಜೀವಃ ಕಾರ್ಯಾನುಕೂಲ ಪ್ರಯತ್ನ ಲಕ್ಷಣ ಕರ್ತೃತ್ವೋಪೇತ ಇತಿ ಯದುಕ್ತಂ ತದುಪಪನ್ನಮಿತಿ ಸಿದ್ಧಂ। -ತಾಮ್ರಪರ್ಣೀಯ

ಎಂದರೆ, ಪ್ರಮಾಣಿಸಿದ್ದವಾದ ಎರಡು ಪ್ರಮೇಯಗಳಲ್ಲಿ ವಿರೋಧ ಬಂದರೆ ಸಹಿಸಬೇಕು. ವಿರೋಧವನ್ನು ಎತ್ತಿಹೇಳಿದ್ದರಿಂದ ಉಪಯೋಗವಿಲ್ಲ.

ಈ ಆಕ್ಷೇಪಕ್ಕೆ ಉತ್ತರವಾಗಿ ಭೀಮಸೇನನ ಮೇಲಿನ ಮಾತು ಬಂದಿದೆ.

ಮೇಲೆ ಹೇಳಿದ ಜೀವಕರ್ತೃತ್ವ ಪ್ರತ್ಯಕ್ಷವನ್ನೂ ಎಲ್ಲವೂ ಹರಿಯ ಅಧೀನವೆನ್ನುವ ಆಗಮ ಅನುಮಾನಗಳನ್ನೂ ಜೀವರ ಭೋಜನಾದಿ ವಿಷಯದಲ್ಲಿಯೆ ವಿರೋಧವಿಲ್ಲದಂತೆ ಕೂಡಿಸಲು ಬರುತ್ತದೆ. ಜೀವರಿಗೆ ಅಸ್ವತಂತ್ರ ಕರ್ತೃತ್ವ ಈಶ್ವರನಿಗೆ ಸ್ವತಂತ್ರಕರ್ತೃತ್ವ ಎಂದು. ಇದೀಗ ಪೂರ್ಣಪ್ರಮಾಣವೆನಿಸುತ್ತದೆ. ಏಕೆಂದರೆ ಅನುಮಾನಾಗಮಗಳಿಗೆ ಸಂಕೋಚ ಮಾಡದೆ ಪ್ರತ್ಯಕ್ಷದೊಂದಿಗೆ ವಿರೋಧವನ್ನೂ ಪರಿಹಾರ ಮಾಡಿದಂತಾಯಿತು. ಸಂಕೋಚಮಾಡಿ ಜೀವಕರ್ತೃತ್ವ ಭೋಜನಾದಿಗಳಲ್ಲಿ, ಈಶ್ವರಕರ್ತೃತ್ವ ಮಹದಾದಿಸೃಷ್ಟಿಯಲ್ಲಿ ಎಂದು ವಿರೋಧಪರಿಹರಿಸುವುದು ಮಧ್ಯಮವಾಗುವುದು. ಪ್ರಶಸ್ತವೆನಿಸುವುದಿಲ್ಲ. ಇನ್ನು ಒಂದೇ ವಿಷಯದಲ್ಲಿ ಮೂರೂ ಪ್ರಮಾಣಗಳನ್ನು ಒಪ್ಪಿ ವಿರೋಧವನ್ನೂ ಅಂಗೀಕರಿಸುವುದು ವ್ಯಾಹತವೇ ಆಗುವುದು. ಆಗ ಪರಸ್ಪರ ವಿರೋಧದಿಂದ ಪ್ರಮಾಣಗಳೇ ಆಗಲಾರವು. ಇದು ಅಧಮ. ಎಷ್ಟುಮಾತ್ರಕ್ಕೂ ಅಂಗೀಕಾರಾರ್ಹವಲ್ಲ. ಜೀವನಿಗೆ ಅಸ್ವತಂತ್ರಕರ್ತೃತ್ವ ಹರಿಗೆ ಸ್ವತಂತ್ರಕರ್ತೃತ್ವ ಎಂಬುದು ಪೂರ್ಣಪ್ರಮಾಣ ಸಿದ್ಧವಾದ ಉತ್ತಮಪ್ರಮೇಯ. ಇದು ಶಕ್ಯವಿರುವಾಗ ಮಧ್ಯಮ ಪ್ರಮಾಣವೂ ಅಂಗೀಕಾರಾರ್ಹವಲ್ಲ. ಜ್ಞಾನಿಗಳು ಪೂರ್ಣಪ್ರಮಾಣವನ್ನೇ ಸ್ವೀಕರಿಸುತ್ತಾರೆ.

ಅಜ್ಞಃ ಪ್ರತ್ಯಕ್ಷಂ ತ್ವಪಹಾಯೈವ ದೈವಂ
ಮತ್ವಾ ಕರ್ತೃ ಸ್ವಾತ್ಮಕರ್ಮ ಪ್ರಜಹ್ಯಾತ್ ।
ವಿದ್ವಾನ್ ಜೀವಂ ವಿಷ್ಣುವಶೇ ವಿದಿತ್ವಾ
ಕರೋತಿ ಕರ್ತವ್ಯಮಜಸ್ರಮೇವ ॥೮೩॥

ಅಜ್ಞಾನಿ ಪ್ರತ್ಯಕ್ಷಸಿದ್ಧವಾದ ಜೀವಕರ್ತೃತ್ವವನ್ನು ಬಿಟ್ಟು ದೈವವೇ ಕರ್ತೃ ಎಂದು ತಿಳಿದು ಸ್ವಕರ್ಮ ಭ್ರಷ್ಟನಾಗುತ್ತಾನೆ. ಜ್ಞಾನಿ ಜೀವನನ್ನು ವಿಷ್ಣ್ವಧೀನನೆಂದು ತಿಳಿದು ಕರ್ತವ್ಯ ಕರ್ಮವನ್ನು ನಿರಂತರಮಾಡುತ್ತಾನೆ.

ಅಜ್ಞಾನಿ ಎಂದರೆ ಹಿಂದೆ ಹೇಳಿದಂತೆ ಮೂರು ಪ್ರಮಾಣಗಳನ್ನು ಪರಸ್ಪರ ವಿರೋಧವಿಲ್ಲದಂತೆ ಕೂಡಿಸಲು ತಿಳಿಯದವನು. ಆಗಮ ಅನುಮಾನಗಳ ವಿರೋಧಕ್ಕೆ ಹೆದರಿ ಜೀವಕರ್ತೃತ್ವವನ್ನು ತಿಳಿಸುವ ಪ್ರತ್ಯಕ್ಷವನ್ನೆ

ಅಪ್ರಮಾಣವೆಂದು ಬಗೆದು ದೈವವೆ ಎಲ್ಲಕ್ಕೂ ಕಾರಣ ತಾನೇನೂ ಮಾಡಬೇಕಾದುದಿಲ್ಲ ಎನ್ನುತ್ತ ಕೈಕಟ್ಟಿಕುಳಿತುಕೊಳ್ಳುತ್ತಾನೆ. ಕೆಲಮೊಮ್ಮೆ ಪ್ರಯತ್ನ ಮಾಡಿದರೂ ಅದು ವಿಫಲವಾಗುವುದನ್ನು ಕಂಡು ದೈವ ಕೆಡಿಸಿತೆಂದುಕೊಳ್ಳುತ್ತಾನೆ. ಪುರುಷಪ್ರಯತ್ನದಲ್ಲಿ ವಿಶ್ವಾಸವನ್ನೆ ಕಳೆದುಕೊಳ್ಳುತ್ತಾನೆ. ಜ್ಞಾನಿ ಪ್ರಯತ್ನದಲ್ಲಿ ವಿಶ್ವಾಸವಿಡುತ್ತಾನೆ. ಪ್ರಯತ್ನಕ್ಕೆ ಫಲನೀಡುವ ಪರಮಾತ್ಮನನ್ನು ನಂಬುತ್ತಾನೆ. ದತ್ತಸ್ವಾತಂತ್ರ್ಯ ತನಗೆ ಇರುವುದರಿಂದ ತಾನು ಕರ್ತವ್ಯ ಕರ್ಮ ವನ್ನಾಡಲೇಬೇಕೆಂದು ಪ್ರವೃತ್ತನಾಗುತ್ತಾನೆ. ಯತ್ನ ವಿಫಲವಾದಾಗ ತನ್ನ ಯತ್ನದಲ್ಲಿಯೇ ಏನೋ ಲೋಪದೋಷವಿದೆ ಎಂದು ಅದನ್ನು ಸರಿಪಡಿಸಿಕೊಳ್ಳುತ್ತಾನೆ. ಆಗ ಪರಮಾತ್ಮನ ದಯೆಯಿಂದ ಫಲ ಸಿಗುತ್ತದೆ.

ಅಜ್ಞಾನಿ ಎಂದರೆ ಮಂತ್ರ ಔಷಧಾದಿಗಳಿಂದಲೆ, ಪುರುಷ ಪ್ರಯತ್ನ ಏನೂ ಇಲ್ಲದೆ ಎಲ್ಲ ನಡೆಯುತ್ತದೆ ಎಂದು ತಿಳಿಯುವ ಮೂಢನಂಬಿಕೆಯ ಮನುಷ್ಯನೆಂದೂ ಗ್ರಹಿಸಬಹುದು. ಅವನು ದೈವ ಒಂದನ್ನೇ ನಂಬಿ ಸ್ವಕರ್ಮ ಭ್ರಷ್ಟನಾಗುತ್ತಾನೆ.

ಕರ್ಮಕಾರಣಗಳು

ಸ್ವಭಾವಾಖ್ಯಾ ಯೋಗ್ಯತಾ ಯಾ ಹಠಾಖ್ಯಾ
ಯಾನಾದಿಸಿದ್ಧಾ ಸರ್ವಜೀವೇಷು ನಿತ್ಯಾ ।
ಸಾ ಕಾರಣಂ ಪ್ರಥಮಂ ತು ದ್ವಿತೀಯ-
ಮನಾದಿಕರ್ಮೈವ ತಥಾ ತೃತೀಯಂ ॥೮೪॥
ಜೀವಪ್ರಯತ್ನಃ ಪೌರುಷಾಖ್ಯಸ್ತದೇತತ್
ತ್ರಯಂ ವಿಷ್ಣೋರ್ವಶಗಂ ಸರ್ವದೈವ ।
ಸ ಕಸ್ಯಚಿನ್ನ ವಶೇ ವಾಸುದೇವಃ
ಪರಾತ್ಪರಃ ಪರಮೋಽಸೌ ಸ್ವತಂತ್ರಃ ॥೮೫॥

ಸರ್ವಜೀವರಲ್ಲಿಯೂ ಅನಾದಿಸಿದ್ಧವಾದ ನಿತ್ಯವಾದ ಯೋಗ್ಯತೆಯೆ ಕರ್ಮಕ್ಕೆ ಮೊದಲನೇ ಕಾರಣ. ಈ ಯೋಗ್ಯತೆಗೇ ಸ್ವಭಾವವೆಂದೂ ಹೆಸರು, ಹಠ ಎಂದೂ ಹೆಸರು. ಅನಾದಿ ಕರ್ಮ ಎರಡನೇ ಕಾರಣ. ಜೀವಪ್ರಯತ್ನ ಮೂರನೇ ಕಾರಣ. ಇದಕ್ಕೇ ಪೌರುಷ ಎಂದೂ ಹೆಸರು. ಇವು ಮೂರೂ ಸದಾ ಹರಿಯ ಅಧೀನ ಹೊರತು, ಹರಿ ಯಾರಿಗೂ ಅಧೀನನಲ್ಲ. ಏಕೆಂದರೆ ಅವನು ಸರ್ವೋತ್ತಮ, ಪರಮಸ್ವತಂತ್ರ.

ಮಹಾಭಾರತದಲ್ಲಿ ದಿಷ್ಟ ಹಠ ಪೌರುಷ ಸ್ವಭಾವ ಈ ನಾಲ್ಕು

ಕರ್ಮಕಾರಣಗಳಿಂದಿದೆ. (ವನ 32.14-19) ಇಲ್ಲಿ ದಿಷ್ಟವೆಂದರೆ ಪೂರ್ವಕರ್ಮ. ಪೌರುಷವೆಂದರೆ ಪುರುಷಪ್ರಯತ್ನ. ಹಠ ಮತ್ತು ಸ್ವಭಾವಗಳು ಬೇರೆ ಬೇರೆಯಲ್ಲ. ಏಕೆಂದರೆ ಅಲ್ಲಿಯೆ ಮುಂದೆ ಕರ್ಮಕ್ಕೆ ಹಠ ದೈವ ಪ್ರಯತ್ನ ಮೂರೇ ಕಾರಣ, ನಾಲ್ಕನೆಯದಿಲ್ಲ ಎಂದಿದೆ. (ವನ 32.33, 35) ಅದರಿಂದ ಹಠ ಎಂದರೂ ಸ್ವಭಾವವೆಂದರೂ ಒಂದೇ, ಜೀವ ಯೋಗ್ಯತೆ ಎಂದಿಟ್ಟುಕೊಳ್ಳಬೇಕು ಎನ್ನುತ್ತದೆ ಲಕ್ಷ್ಮಾಲಂಕಾರ. ಏನೇ ಮಾಡಿದರೂ ತನ್ನ ಸ್ವಭಾವವನ್ನು ಬಿಡದಿರುವ ಹಟಮಾರಿತನವನ್ನು ಲೋಕದಲ್ಲಿ ಹಟವೆನ್ನುತ್ತೇವೆ. ಅದರಿಂದ ಸ್ವಭಾವವನ್ನು ಹಠ ಎಂದಿದೆ ಮಹಾಭಾರತ. ಆಕಸ್ಮಿಕ ಲಾಭವನ್ನು 'ಹಠ' ಎನ್ನುತ್ತಾನೆ ನೀಲಕಂಠ.

[1]ಮೇಲಿನ ಶ್ಲೋಕಕ್ಕೆ ತಾಮ್ರಪರ್ಣೀಯದಲ್ಲಿ ಹೀಗೆ ವಿವರಣೆ ಬಂದಿದೆ- ಜೀವನಲ್ಲಿ ಕರ್ತೃತ್ವ ಹರಿಯ ಅಧೀನವೆಂದು ಹಿಂದೆ ಹೇಳಿದೆ. ಅದರಿಂದ ಜೀವನಿಗೆ ಕ್ರಿಯೆಯನ್ನು ಮಾಡುವ ಸ್ವಾತಂತ್ರ್ಯವಿಲ್ಲ. ಕ್ರಿಯಾಸ್ವಾತಂತ್ರ್ಯವಿಲ್ಲದ ಕರ್ತೃತ್ವವೆಂಬುದೇನು? ಎಂಬ ಪ್ರಶ್ನೆಗೆ ಉತ್ತರ- ಜೀವರಲ್ಲಿ ಅನಾದಿ ಯೋಗ್ಯತಾ ಅದಕ್ಕನುಸಾರಿ ಅನಾದಿಕರ್ಮ ಮತ್ತು ಅದಕ್ಕನುಸಾರಿಯಾದ ಪ್ರಯತ್ನಗಳಿವೆ. ಇಂಥ ಪ್ರಯತ್ನವೆ ಕರ್ತೃತ್ವ, ಇದು ಹರಿಯ ಅಧೀನ. ಯೋಗ್ಯತಾದಿಗಳನ್ನು ಅನುಸರಿಸಿ ತಕ್ಕಫಲವನ್ನೆ ಹರಿ ಕೊಡುವುದರಿಂದ ಅವನಿಗೆ ವೈಷಮ್ಯ ನೈರ್ಘೃಣ್ಯ ದೋಷಗಳಿಲ್ಲ ಎಂದು.

---

1. ಜೀವಗತಂ ಕರ್ತೃತ್ವ ಮೀಶ್ವರಾಧೀನಮಿತ್ಯುಕ್ತಂ। ತಸ್ಯ ಕ್ರಿಯಾ ಸ್ವಾತಂತ್ರ್ಯಾ ಭಾವೇ ಕರ್ತೃತ್ವಂ ನಾಮ ಕಮಿತಿ ಜಿಜ್ಞಾಸಾಂ ವಾರಯನ್ ಜೀವಾನಾಂ ಕರ್ತೃತ್ವೇ ಫಲ ವೈಷಮ್ಯೇ ಕಂ ಕಾರಣಮಿತ್ಯಾಶಂಕಾಂ ಪರಿಹರತಿ ಸ್ವಭಾವೇತಿ। ಯೋಗ್ಯತಾ ಕರ್ಮ ಪ್ರಯತ್ನವತ್ತ್ವಂ ಕರ್ತೃತ್ವಂ। ಜೀವಸ್ಯ ತದೇತತ್ ತ್ರಯಂ ಭಗವದಾಯತ್ತಮಿತಿ ಭಾವಃ। ನನು ಯದುಕ್ತಂ ಸ್ವಾತಂತ್ರ್ಯೇಣ ಕರ್ತೃತ್ವಂ ವಿಷ್ಣೋರಿತಿ ತದಸತ್। ತಥಾ ತ್ವೇ ನಿರ್ನಿಮಿತ್ತಂ ಕಾಂಶ್ಚಿತ್ ಸುಖಿಯನ್ ಕಾಂಶ್ಚಿದ್ ದುಃಖಿಯನ್ ಭಗವಾನ್ ವಿಷಮೋ ನಿರ್ಘೃಣಶ್ಚ ಸ್ಯಾತ್। ಇತ್ಯತೋವಾಹ ಸ್ವಭಾವೇತ್ಯಾದಿನಾ। ನ ಭಗವತೋ ನಿರ್ನಿಮಿತ್ತಂ ಫಲದಾನೇನ ವೈಷಮ್ಯಾದಿದೋಷಃ। ಪ್ರಯತ್ನಸ್ಯ ಫಲವೈಚಿತ್ರ್ಯ ಕಾರಣತ್ವೇನ ಜೀವಪ್ರಯತ್ನ ಮಪೇಕ್ಷ್ಯ ಫಲದಾತುಸ್ತದಭಾವಾತ್। ತದೇತದುಕ್ತಂ ಪ್ರಯತ್ನಸ್ತೀಯೋ ಹೇತುರಿತಿ। ನ ಚ ಪ್ರಯತ್ನ ಸ್ಯಾಪೀಶ್ವರ ಕಾರಿತತ್ವೇನ ಪುನರ್ದೋಷಃ। ತತ್ತತ್ಕರ್ಮಾನುಸಾರೇಣ ಪ್ರಯತ್ನಮಾಪಾದ್ಯ ಫಲಪ್ರದತ್ವಾತ್। ತದೇತದುಕ್ತಂ ಕರ್ಮ ದ್ವಿತೀಯಂ ಕಾರಣಮಿತಿ। ನ ಚೈಷ ಹ್ಯೇವ ಸಾಧು ಕರ್ಮ ಕಾರಯ ತೀತ್ಯಾದಿಶ್ರುತ್ಯಾ ಕರ್ಮಣೋಽಪೀಶ್ವರ ಕಾರಿತತ್ವಾವಗಮಾತ್ ಪುನರ್ವೈಷಮ್ಯಾದಿ ದೋಷ ಇತಿ। ಪೂರ್ವ ಪೂರ್ವ ಕರ್ಮಾಪೇಕ್ಷಯೋತ್ತರೋತ್ತರ ಕರ್ಮಕಾರಿತ್ವಾಂಗೀಕಾರೇಣ ನಿರ್ನಿಮಿತ್ತತ್ವಾಭಾವತ್। ನ ಚ ಯತ್ರ ಪರ್ಯವಸಾನಂ ತದಾರಭ್ಯ ದೋಷ ಇತಿ ವಾಚ್ಯಂ। ಅನಾದಿತ್ವಾತ್ ಕರ್ಮಪ್ರವಾಹಸ್ಯ। ತದೇತದುಕ್ತಮನಾದಿ ಕರ್ಮೇತಿ। ನಚ ಜೀವ ವಿಶೇಷೇಷ್ವೇವ ಸುಖಾಪಾದಕ ಕಾರ್ಯಕಾರಣ ಭಾವಾಪನ್ನಾನಂತ ಕರ್ಮಪ್ರವಾಹ್ಯತ್ವಾದಯಿತುರನ್ಯತ್ರ ದುಃಖಾಪಾದಕ

ಎಲ್ಲರಿಗೂ ಕರ್ಮಕ್ಕೆ ಫಲ ಕೊಡುವವನು ಹರಿಯೆ ಎಂದಮೇಲೆ ಅವನು ಕೆಲವರಿಗೆ ಸುಖ ಕೆಲವರಿಗೆ ದುಃಖ ಎಂದೇಕೆ ಫಲವ್ಯತ್ಯಾಸ ಮಾಡುತ್ತಾನೆ ಎಂದರೆ ಅದಕ್ಕೆ ಜೀವನ ಪ್ರಯತ್ನದಲ್ಲಿರುವ ವೈಲಕ್ಷಣ್ಯ ಕಾರಣ. ಇದು ವೈಲಕ್ಷಣ್ಯಕ್ಕೆ ಮೂರನೇ ಕಾರಣ.

ಕೆಲವರು ಸತ್ಕರ್ಮದಲ್ಲಿ ಪ್ರಯತ್ನ ಮಾಡುತ್ತಾರೆ, ಅದಕ್ಕೆ ಸುಖನೀಡುತ್ತಾನೆ. ಕೆಲವರು ದುಷ್ಕರ್ಮದಲ್ಲಿ ಪ್ರಯತ್ನ ಮಾಡುತ್ತಾರೆ ಅದಕ್ಕೆ ದುಃಖ ನೀಡುತ್ತಾನೆ. ಅದರಿಂದ ಹರಿಗೆ ವೈಷಮ್ಯದೋಷವಿಲ್ಲ. ಆದರೆ ಪ್ರಯತ್ನವನ್ನೂ ಹರಿಯೆ ಮಾಡಿಸುವುದರಿಂದ ಪುನಃ ವೈಷಮ್ಯವಲ್ಲವೆ? ಎಂದರೆ, ಪ್ರಯತ್ನವನ್ನೂ ಜೀವನ ಪ್ರಾಚೀನ ಕರ್ಮಾನುಸಾರ ಮಾಡಿಸುತ್ತಾನೆ. ಈ ಅನಾದಿಕರ್ಮ ಎರಡನೇ ಕಾರಣ.

ಈ ಅನಾದಿಕರ್ಮಪರಂಪರೆಯಲ್ಲಿರುವ ಪ್ರತಿಯೊಂದು ಕರ್ಮವನ್ನೂ ಮಾಡಿಸಿದವನು ಹರಿಯೆ ಎಂದಮೇಲೆ ವೈಷಮ್ಯ ಪರಿಹಾರವಾಗಿಲ್ಲ ಎಂಬ ಆಕ್ಷೇಪ ಬರಬಹದು. ಆದರೆ ಕರ್ಮಪರಂಪರೆ ಅನಾದಿ. ಅದರಿಂದ ಯಾವುದೇ ಕರ್ಮವಮಾಡಿಸುವಾಗ ಅದರ ಹಿಂದಿನ ಕರ್ಮಕ್ಕೆ ಅನುಸಾರವಾಗಿಯೆ ಮಾಡಿಸುತ್ತಾನೆ. ಮೊದಲಿಗೆ ಎಲ್ಲರಿಂದಲೂ ಸತ್ಕರ್ಮ ಮಾಡಿಸಿದ್ದರೆ ಅದಕ್ಕೆ ಅನುಸಾರವಾಗಿ ಎಲ್ಲರಿಂದಲೂ ಸತ್ಕರ್ಮವನ್ನೆ ಮಾಡಿಸಿ ಸುಖವನ್ನೇ ಕೊಡಬಹುದಿತ್ತು. ಕರ್ಮಪರಂಪರೆ ಅನಾದಿಯಾದ್ದರಿಂದ 'ಮೊದಲಿಗೆ ಸತ್ಕರ್ಮ ಮಾಡಿಸಿದ್ದರೆ' ಎನ್ನುವ ಮಾತಿಗೇ ಅವಕಾಶವಿಲ್ಲ.

ಕಾರ್ಯಕಾರಣಭಾವಾಪನ್ನ ಕರ್ಮ ಪ್ರವಾಹ್ಯುತ್ಪಾದಯಿತುರೀಶ್ವರಸ್ಯ ಪುನರ್ವೈಷಮ್ಯಾದಿ ದೋಷಃ ಸ್ಯಾದಿತಿ ವಾಚ್ಯಂ ತತ್ತದ್ಯೋಗ್ಯತಾನುಸಾರೇಣ ತಾದೃಶ ಕರ್ಮೋತ್ಪಾದಕತ್ವೇನ ನಿರ್ನಿಮಿತ್ತತ್ವಾಭಾವಾತ್। ತದೇತದುಕ್ತಂ ಯೋಗ್ಯತಾ ಪ್ರಥಮಂ ಕಾರಣಮಿತಿ। ನನ್ವೇವಂ ಸತಿ ನ ಸ್ವಾತಂತ್ರ್ಯಂ ತದಪೇಕ್ಷಣಾದಿತ್ಯತ ಉಕ್ತಂ ತದೇತದಿತಿ। ನನು ಯೋಗ್ಯತಾಕರ್ಮಪ್ರಯತ್ನಾನಾಮುಪ್ಯಾರಂಭಣಾಧಿಕರಣ ನ್ಯಾಯೇನೇಶ್ವರಾಧೀನತ್ವೇ ಪುನರ್ವೈಷಮ್ಯಾದ್ಯಾಪಾತ ಇತಿ ಚೇತ್ ಅತ್ರವಕ್ತವ್ಯಂ। ವೈಷಮ್ಯನೈರ್ಘೃಣ್ಯಯೋಃ ಕಿಂ ಜೀವಾನಾಮಿವ ಪ್ರತ್ಯವಾಯ ಹೇತುತಯಾ ದೋಷತ್ವಮುತ ಸಮೋಽಹಂ ಸರ್ವಭೂತಾನಾಮಿತಿ ಶಾಸ್ತ್ರಾಪ್ರಾಮಾಣ್ಯಾಪಾದಕತಯಾ? ಉತ ಸರ್ವ ಸಮತ್ವರೂಪ ಸದ್ಗುಣ ವಿರೋಧಿತಯಾ? ನಾದ್ಯಃ। ಸ್ವತಂತ್ರಸ್ಯ ಪ್ರೇಕ್ಷಾವತಃ ಸ್ವಪ್ರತ್ಯವಾಯ ಸಂಪಾದನಾಯೋಗಾತ್। ತದೇತದುಕ್ತಂ ಪರಮಸ್ವತಂತ್ರ ಇತಿ। ನ ದ್ವಿತೀಯಃ ಅನಾದಿ ಸಿದ್ಧಯೋಗ್ಯತಾನುಸಾರಿತ್ವಸ್ಯೈವ ತತ್ರ ಸಮಶಬ್ದಾರ್ಥತ್ವಾತ್। ತದೇತದಾಹ ಯಾನಾದಿಸಿದ್ಧೇತಿ। ತೃತೀಯೇಽಪಿ ಕಿಂ ವಿವಿಧ ತತ್ತತ್ ಸ್ವಭಾವಕರಣಾದ್ ವೈಷಮ್ಯಾದಿ ಉತಾನಾದಿ ಸಿದ್ಧ ತತ್ತತ್ಸ್ವಭಾವಸ್ಯಾನ್ಯಥಾ ಕರಣ ಸಾಮರ್ಥ್ಯೇಽಪ್ಯಕರಣಾತ್? ತತ್ರ ನ ತಾವದಾದ್ಯಃ। ಯೋಗ್ಯತಾಯಾ ಅನಾದಿತ್ವಾದಿತ್ಯಾಹ ಯಾನಾದಿ ಸಿದ್ಧೇತಿ। ನ ದ್ವಿತೀಯಃ। ಸ್ವತಂತ್ರಸ್ಯೇಶಸ್ಯ ತಾದೃಶ ವೈಷಮ್ಯ ನೈರ್ಘೃಣ್ಯಯೋರದೂಷಣತ್ವಾತ್...।

-ತಾಮ್ರಪರ್ಣೀಯ

ಆದರೂ ಅನಾದಿ ಕಾಲದಿಂದ ಕೆಲವರಲ್ಲಿ ಸತ್ಕರ್ಮಗಳು, ಕೆಲವರಲ್ಲಿ ದುಷ್ಕರ್ಮಗಳು ಎನ್ನುವ ವ್ಯತ್ಯಾಸ ಹರಿಯ ಅಧೀನವೆ ಎಂದಮೇಲೆ ತಿರುಗಿ ವೈಷಮ್ಯ ದೋಷ ಶಂಕೆ ಬರುತ್ತದೆ. ಅದಕ್ಕೆ ಅನಾದಿ ಜೀವಯೋಗ್ಯತಾನುಸಾರ ಅನಾದಿ ಕರ್ಮಪರಂಪರೆಯನ್ನು ಹರಿ ಮಾಡಿಸುತ್ತಾನೆ ಎಂದು ಸಮಾಧಾನ. ಅದರಿಂದ ಜೀವರಲ್ಲಿ ಕರ್ಮಫಲ ವ್ಯತ್ಯಾಸಕ್ಕೆ ಜೀವರ ಅನಾದಿ ಯೋಗ್ಯತೆ ಕಾರಣ. ಇದು ಮೊದಲನೆ ಕಾರಣ.

ಹಾಗಾದರೆ ಹರಿಗೆ ಸ್ವಾತಂತ್ರ್ಯವೆ ಇಲ್ಲ. ಜೀವ ಯೋಗ್ಯತಾನುಸಾರ, ಅನಾದಿಕರ್ಮ, ಅನಾದಿಕರ್ಮಾನುಸಾರ ಪುರುಷ ಪ್ರಯತ್ನ, ಪುರುಷ ಪ್ರಯತ್ನಾನುಸಾರ ಸುಖ ದುಃಖ ಫಲ. ಹೀಗೆ ಹರಿ ಸ್ವೇಚ್ಛೆಯಿಂದ ಏನೂ ಮಾಡುವುದಿಲ್ಲ ಎಂದರೆ, ಈ ಮೂರೂ ಹರಿಯ ಅಧೀನವಾದ್ದರಿಂದ ತನ್ನ ಅಧೀನವಾದ ವಸ್ತುಗಳನ್ನು ಅನುಸರಿಸಿ ಪ್ರವೃತ್ತಿ ಮಾಡಿದರೆ ಸ್ವಾತಂತ್ರ್ಯಕ್ಕೆ ಕುಂದುಬರುವುದಿಲ್ಲ ಎಂದು ಉತ್ತರ.

ಯೋಗ್ಯತೆ ಕರ್ಮ ಪ್ರಯತ್ನ ಈ ಮೂರೂ ತನ್ನ ಅಧೀನವಿರುವಾಗ ಕೆಲವು ಜೀವರಲ್ಲಿ ಮೂರೂ ಒಳ್ಳೆಯದಾಗಿ ಕೆಲವರಲ್ಲಿ ಮೂರೂ ಕೆಟ್ಟದಾಗಿ ಇರುವಂತೆ ಮಾಡಿದರೆ ಹರಿಗೆ ತಿರುಗಿ ಪಕ್ಷಪಾತವರ್ತನೆಯ ದೋಷ ಬರುವುದಿಲ್ಲವೆ ಎಂದರೆ ಈ ಪಕ್ಷಪಾತವರ್ತನೆ ದೋಷವಲ್ಲವೆಂದೇ ಉತ್ತರ. ಜೀವಯೋಗ್ಯತೆಗೆ ಅನನುಗುಣವಾಗಿ ಸುಖದುಃಖಗಳನ್ನು ತನ್ನಿಷ್ಟಾನುಸಾರ ಕೊಟ್ಟರೆ ದೋಷವಾಗುತ್ತದೆ. ಸರ್ವಶಕ್ತನಾದ ಹರಿಗೆ ಅನಾದಿಯೋಗ್ಯತೆಯನ್ನೆ ಬದಲಿಸಿ ಎಲ್ಲರನ್ನೂ ಸಜ್ಜನರನ್ನಾಗಿ ಮಾಡಿ ಎಲ್ಲರಿಗೂ ಸುಖ ನೀಡುವ ಸಾಮರ್ಥ್ಯವೇನೋ ಇದೆ. ಆದರೆ ಅವನು ಹಾಗೆ ಮಾಡುವುದಿಲ್ಲ. ಏಕೆಂದರೆ ಅದು ಅವನ ಇಚ್ಛೆ. ಸ್ವತಂತ್ರನಾದ ಅವನಿಗೆ ಹೇಳಲು ನಾವು ಯಾರು? ಅವನು ತನ್ನ ಸಂಕಲ್ಪಾನುಸಾರ ಪರಸ್ಪರ ಅತ್ಯಂತ ವಿಲಕ್ಷಣವಾದ ಅನಂತ ಜೀವಯೋಗ್ಯತೆಗಳನ್ನು ಅನಾದಿಕಾಲದಿಂದ ಏನೂ ವ್ಯತ್ಯಾಸ ಮಾಡದೆ ಹಾಗೇ ಕಾಪಾಡಿಕೊಂಡು ಬಂದಿರುವುದು ಅಪಾರವಾದ ಮಹಿಮೆ ಎಂದೇ ಹೇಳಬೇಕು. ಅದರಿಂದ ಅವನು ಪರಾತ್ಪರ ಪರಮಸ್ವತಂತ್ರ.

ಜೀವ ಯೋಗ್ಯತೆ

ಹರಶ್ಚಾಸೌ ತಾರತಮ್ಯಸ್ಥಿತೋ ಹಿ
ಬ್ರಹ್ಮಾಣಮಾರಭ್ಯ ಕಲಿಶ್ಚ ಯಾವತ್ ।
ಹರಾಚ್ಚ ಕರ್ಮಾಣಿ ಭವಂತಿ ಕರ್ಮಜೋ
ಯತ್ನೋ ಯತೋ ಹರಕರ್ಮಪ್ರಯೋಕ್ತಾ ॥೮೬॥

ಜೀವಯೋಗ್ಯತೆ ಬ್ರಹ್ಮನಿಂದ ತೊಡಗಿ ಕಲಿಪರ್ಯಂತವೂ ತಾರತಮ್ಯದಿಂದ ಇರುತ್ತದೆ. ಆ ಯೋಗ್ಯತೆಯ ತಾರತಮ್ಯದಿಂದ ಪೂರ್ವಕರ್ಮಗಳು ತಾರತಮ್ಯದಿಂದ ಉಂಟಾಗುತ್ತವೆ. ಪೂರ್ವಕರ್ಮಗಳಿಂದ ಈಗಿನ ಪ್ರಯತ್ನಗಳು ತಾರತಮ್ಯದಿಂದ ಉಂಟಾಗುತ್ತದೆ. ಪುರುಷಪ್ರಯತ್ನ ಯೋಗ್ಯತೆಗೂ ಪೂರ್ವಕರ್ಮಕ್ಕೂ ಪ್ರಯೋಜಕವಾಗಿದೆ.

[1]ಯೋಗ್ಯತೆಯಲ್ಲಿ ತಾರತಮ್ಯವೆಂದರೆ ಬ್ರಹ್ಮಾದಿ ಮನುಷ್ಯೋತ್ತಮ ಪರ್ಯಂತ ಜೀವರಲ್ಲಿ ವಿಷ್ಣುವಿನ ವಿಷಯದಲ್ಲಿ ಸ್ವಾಭಾವಿಕವಾಗಿ ಸ್ವರೂಪದಲ್ಲಿರುವ ಭಕ್ತ್ಯಾದಿ ತಾರತಮ್ಯ. ಸಂಸಾರದಲ್ಲಿ ಅದು ಭಕ್ತ್ಯಾದಿ ಸಾಧನ ತಾರತಮ್ಯಕ್ಕೆ ಕಾರಣ. ಮೋಕ್ಷದಲ್ಲಿ ಸುಖರೂಪ ಫಲ ತಾರತಮ್ಯಕ್ಕೆ ಕಾರಣ. ಮಿಶ್ರ ಜೀವರಲ್ಲಿ ವಿಷ್ಣುಭಕ್ತಿಯೊಂದಿಗೆ ವಿಷ್ಣು ದ್ವೇಷವೂ ತಾರತಮ್ಯದಿಂದ ಬೆರೆತಿರುತ್ತದೆ. ಅವರಿಗೆ ಲಿಂಗಭಂಗವಾದಾಗ ಸುಖದೊಂದಿಗೆ ದುಃಖವೂ ಹಾಗೇ ತಾರತಮ್ಯದಿಂದಿರುತ್ತದೆ. ಗುಣದೋಷ ಮಿಶ್ರಣವಿರುವುದರಿಂದ ಇವರು ಮಿಶ್ರ ಜೀವರೆನಿಸುತ್ತಾರೆ. ಮನುಷ್ಯಾಧಮರಿಂದಾರಂಭಿಸಿ ಕಲಿಪರ್ಯಂತ ಜೀವರಲ್ಲಿ ಅಧಮ ಯೋಗ್ಯತೆ. ಅದಕ್ಕನುಸಾರ ಅವರಲ್ಲಿ ಕೇವಲ ವಿಷ್ಣುದ್ವೇಷವೆ ತಾರತಮ್ಯದಿಂದ ಇರುತ್ತದೆ. ಲಿಂಗಭಂಗಾನಂತರ ಕೇವಲ ದುಃಖವೆ ತಾರತಮ್ಯದಿಂದ ವ್ಯಕ್ತವಾಗುತ್ತದೆ. ಈ ಮೂರು ವಿಧದ ಯೋಗ್ಯತೆಗನುಗುಣವಾಗಿ ಪೂರ್ವಕರ್ಮವಿರುತ್ತದೆ.

ಮುಂದೆ ಹೇಳುವಂತೆ ಯೋಗ್ಯತೆ ಮತ್ತು ಪೂರ್ವಕರ್ಮಗಳು ಫಲಕೊಡಲು ಪ್ರಯತ್ನಬೇಕು. ಅದರಿಂದ ಅದು ಪ್ರಯೋಜಕ. ಒಬ್ಬನ ಪ್ರಯತ್ನ 'ಇವನ ಯೋಗ್ಯತೆ ಹೀಗೆ, ಪೂರ್ವಕರ್ಮ ಹೀಗೆ' ಎಂದು ತೋರಿಸುತ್ತದೆ. ಅದರಿಂದಲೂ ಅದು ಪ್ರಯೋಜಕವೆನಿಸಿದೆ.

---

1. ಬ್ರಹ್ಮಣ ಸರ್ವೇಭ್ಯಃ ಪ್ರಧಾನಾ ಯೋಗ್ಯತಾ। ತತಃ ಪರಂ ರುದ್ರಾದಿ ದೇವಾನಾರಭ್ಯ ಮನುಷ್ಯೋತ್ತಮ ಪರ್ಯಂತ ಂ ಕಿಂಚಿತ್ ಕಿಂಚಿದೇವ ಯೋಗ್ಯತಾ। ಇಯಂ ಚ ಯೋಗ್ಯತಾ ಇಹ ಜ್ಞಾನ ಭಕ್ತ್ಯಾದಿ ಗುಣಾನ್ ಪ್ರತಿ ಕಾರಣಂ। ಅಂತೇ ಮುಕ್ತಿಂ ಪ್ರತಿ ಕಾರಣಂ। ಅಸ್ಯಾಶ್ಚ ವಿಷ್ಣೌ ಕ್ರಿಯಮಾಣ ಜ್ಞಾನಭಕ್ತ್ಯಾದಿ ಗುಣಾನಾಂ ತಾರತಮ್ಯಾತ್ ತಾರತಮ್ಯಂ। ಪರತ್ರ ಮುಕ್ತೌ ಅನುಭೂಯಮಾನ ಸುಖತಾರತಮ್ಯಾತ್ ತಾರತಮ್ಯಂ। ಅತ ಏತೇ ಕೇವಲ ಗುಣ ಭರಿತತ್ವಾತ್ ಉತ್ತಮ ಜೀವಾ ಇತ್ಯುಚ್ಯಂತೇ। ಮಿಶ್ರೇಷು ಮಧ್ಯಮಾ ಯೋಗ್ಯತಾ। ಇಯಂ ಚೇಹ ವಿಷ್ಣುಭಕ್ತ್ಯಾದಿ ಗುಣಾನಾಂ ವಿಷ್ಣುದ್ವೇಷಾದಿ ದೋಷಾಣಾಂ ಚ ತಾರತಮ್ಯಾತ್ ತಾರತಮ್ಯೇನ ಸ್ಥಿತಾ। ಅಂತೇಽನುಭೂಯಮಾನ ಸುಖದುಃಖಯೋಃ ತಾರತಮ್ಯಾತ್ ತಾರತಮ್ಯವತೀ। ಗುಣದೋಷ ಮಿಶ್ರತ್ವಾತ್ ಮಧ್ಯಮಯೋಗ್ಯತೇತ್ಯುಚ್ಯತೇ। ಮನುಷ್ಯಾಧಮಮಾರಭ್ಯ ಕಲಿ ಪರ್ಯಂತಂ ಜೀವೇಷ್ವಧಮಾ ಯೋಗ್ಯತಾ। ಅಧಮತ್ವಂಚ ವಿಷ್ಣು ದ್ವೇಷ ಮಿಥ್ಯಾಜ್ಞಾನಾದಿದೋಷೈಕಪಾತ್ರತ್ವಾತ್।

-ವಾದಿರಾಜೀಯ

ಪ್ರಯತ್ನ - ದೈವ

ವಿನಾ ಯತ್ನಂ ನ ಹಠೋ ನಾಪಿ ಕರ್ಮ
ಫಲಪ್ರದೋ ವಾಸುದೇವೋಽಖಿಲಸ್ಯ।
ಸ್ವಾತಂತ್ರ್ಯಶಕ್ತೇರ್ವಿನಿಯಾಮಕೋ ಹಿ
ತಥಾಪ್ಯೇತಾನ್ಸೋಽಪ್ಯಪೇಕ್ಷ್ಯೈವ ಯುಂಜೇತ್ ॥೮೭॥

ಪ್ರಯತ್ನವಿಲ್ಲದೆ ಯೋಗ್ಯತೆಯೂ ಫಲಕೊಡುವುದಿಲ್ಲ. ಪೂರ್ವಕರ್ಮವೂ ಫಲಕೊಡುವುದಿಲ್ಲ. ಈ ಮೂರಕ್ಕೂ ಅನುಗುಣವಾಗಿ ಫಲಕೊಡುವವನು ಶ್ರೀಹರಿ. ಸ್ವಾತಂತ್ರ್ಯಶಕ್ತಿ ಇರುವುದರಿಂದ ಅವನೆ ಈ ಮೂರಕ್ಕೂ ನಿಯಾಮಕ. ಆದರೂ ಅವುಗಳನ್ನು ಅನುಸರಿಸಿಯೆ ಫಲ ಕೊಡುತ್ತಾನೆ.

[1]ಯೋಗ್ಯತೆ, ಪೂರ್ವಕರ್ಮ, ಪುರುಷಪ್ರಯತ್ನ ಇವುಗಳೆ ಫಲ ಕೊಡುವುದಾದರೆ ಹರಿ ಏಕೆ ಬೇಕು ಎಂದರೆ ಅವು ಸ್ವತಃ ಫಲ ನೀಡಲಾರವು. ಅವುಗಳಿಗೆ ಅನುಸಾರವಾಗಿ ಹರಿ ಫಲ ನೀಡಬೇಕು. ಅವು ಕೇವಲ ನಿಮಿತ್ತ ಮಾತ್ರ.. ಏಕೆಂದರೆ ಹರಿ ಸ್ವತಂತ್ರ. ಸ್ವತಂತ್ರನಾದರೂ ಮೂರನ್ನು ಅನುಸರಿಸಿಯೆ ಫಲಕೊಡುವುದರಿಂದ ಮೂರೂ ನಿಮಿತ್ತವಾಗುತ್ತವೆ, ಸಾರ್ಥಕವಾಗುತ್ತವೆ.

ಅಥವಾ ಜೀವರಿಗೆ ಹರಿಯೆ ಫಲಕೊಡುತ್ತಾನೆ ಎನ್ನುವಾಗ ಅವನಿಗೆ ಪಕ್ಷಪಾತದೋಷ ಪ್ರಸಕ್ತಿ ಬಂದರೆ ಅದರ ಪರಿಹಾರಕ್ಕೆ ಈ ಮೂರೂ ಏಕೆ ಬೇಕು? ಮೂರರಲ್ಲಿ ಯಾವುದಾದರೂ ಒಂದೇ ಸಾಕು ಎಂಬ ಆಕ್ಷೇಪ ಸಹಜ. ಅದಕ್ಕೆ ಉತ್ತರವಾಗಿ 'ಈ ಮೂರೂ ಸೇರಿದರೆ ಮಾತ್ರ ವಾಸುದೇವ ಮೂರಕ್ಕೂ ಅನುಸಾರವಾಗಿಯೆ ಫಲಕೊಡುತ್ತಾನೆ ಒಂದೊಂದಕ್ಕೇ ಅನುಸಾರವಾಗಿ ಅಲ್ಲ' ಎಂದಿದೆ. ನ್ಯಾಯಸುಧೆಯಲ್ಲಿ ಸಮಯಪಾದದ

---

1. ನನ್ವೇವಂ ಯೋಗ್ಯತಾದೇರೆವ ಫಲಪ್ರಾಪಕತ್ವೇ ಕಿಮೀಶ್ವರೇಣೇತ್ಯತ ಆಹ ವಾಸುದೇವ ಇತಿ। ಯೋಗ್ಯತಾದೀನಾಂ ಸ್ವಾತಂತ್ರ್ಯೇಣ ಫಲಪ್ರದತ್ವಾಭಾವಾದೀಶ್ವರೋಽಪೇಕ್ಷಿತ ಇತಿ ಭಾವಃ। ಯದ್ವಾ-ನನು ಭಗವಾನೇವ ಫಲಪ್ರದ ಇತ್ಯಂಗೀಕಾರೇ ವೈಷಮ್ಯಾದ್ಯಾಪತ್ತೇರನ್ಯದಪೇಕ್ಷಿತಂ ಚೇತ್ ಕಿಂ ಯೋಗ್ಯತಾದಿ ತ್ರಯೇಣ? ಏಕೈಕೇನಾಪಿ ಚಾರಿತಾರ್ಥ್ಯಾದಿತ್ಯತ ಆಹ ಫಲಪ್ರದ ಇತಿ। ವಾಸುದೇವೋಽಖಿಲಸ್ಯ ಯೋಗ್ಯತಾ ಕರ್ಮಾದಿ ಸಾಕಲ್ಯಸ್ಯ ಪ್ರಲಪ್ರದೋ, ನ ಪುನರೇಕೈಕಸ್ಯೇತ್ಯರ್ಥಃ। ಇಯಂ ಚ ಯೋಜನಾ ಸುಧಾಯಾಂ ಸಮಯಚರಣೇ ಈಶಾನುಗ್ರಹಯೋಗಿನಾ ಮಿತ್ಯನುವ್ಯಾಖ್ಯಾನಗ್ರಂಥೇ ಶ್ರೀಮಜ್ಜಯತೀರ್ಥಪೂಜ್ಯ ಚರಣೈಃ ಪ್ರದರ್ಶಿತಾ। -'ನ ಚೈವಂ ಸತಿ ತತ ಏವಾವಿದ್ಯಾನಿವೃತ್ತಿರ್ಭವತು, ಕಿಂ ತತ್ತ್ವಜ್ಞಾನೇನೇತಿ ವಾಚ್ಯಂ। ಈಶ್ವರಾನುಗ್ರಹಸ್ಯ ಪುರುಷಪ್ರಯತ್ನಾನುಸಾರೇಣೈವ ಫಲಪ್ರದತ್ವ ಸ್ವಾಭಾವ್ಯಾತ್। ಯಥೋಕ್ತಂ 'ಫಲಪ್ರದೋ ವಾಸುದೇವೋಽಖಿಲಸ್ಯೇ'ತಿ। ಅಖಿಲಸ್ಯ ಯೋಗ್ಯತಾ ಕರ್ಮ ಪ್ರಯತ್ನ ಸಾಕಲ್ಯಸ್ಯ। ನಪುನರೇಕೈಕಸ್ಯೇತ್ಯರ್ಥಃ' ಇತಿ। -ತಾಮ್ರಪರ್ಣೀಯ

'ಈಶಾನುಗ್ರಹಯೋಗಿನಾಂ' ಎಂಬ ಅನುವ್ಯಾಖ್ಯಾನ ವಿವರಣೆಯಲ್ಲಿ 'ಈಶ್ವರಾನುಗ್ರಹದಿಂದಲೆ ಅವಿದ್ಯಾನಿವೃತ್ತಿ ಎನ್ನೋಣ. ತತ್ವಜ್ಞಾನವೇಕೆ ಬೇಕು? ಎಂದು ಕೇಳಬಾರದು. ಈಶ್ವರಾನುಗ್ರಹ ಫಲಿಸಬೇಕಾದರೆ ಪುರುಷ ಪ್ರಯತ್ನವೂ ಬೇಕು. ಅದು ಇದ್ದರೆ ಮಾತ್ರ ಅದಕ್ಕೆ ಅನುಸಾರವಾಗಿ ಈಶ್ವರಾನುಗ್ರಹ ಫಲನೀಡುತ್ತದೆ. 'ಫಲಪ್ರದೋ ವಾಸುದೇವ್ಯೋಽಖಿಲಸ್ಯ' ಎಂಬ ನಿರ್ಣಯ ವಚನ ಹಾಗೇ ಹೇಳಿದೆ. ಅಲ್ಲಿ 'ಅಖಿಲಸ್ಯ' ಎಲ್ಲಕ್ಕೂ ಅಂದರೆ ಯೋಗ್ಯತೆ ಈಶ್ವರಾನುಗ್ರಹ ಪೂರ್ವಕರ್ಮ ಪ್ರಯತ್ನ ಇವೆಲ್ಲ ಸೇರಿದರೆ ಮಾತ್ರ ಅವುಗಳಿಗೆ ಅನುಗುಣವಾಗಿ ಹರಿ ಫಲ ನೀಡುತ್ತಾನೆ' ಎಂದಿದೆ.

ಪ್ರಯತ್ನವಿಲ್ಲದೆ ಯೋಗ್ಯತೆ ಹೇಗೆ ಫಲ ಕೊಡಲಾರದೋ ಹಾಗೇ ಯೋಗ್ಯತೆ ಇಲ್ಲದೆ ಪ್ರಯತ್ನವೂ ಫಲ ಕೊಡಲಾರದು ಎನ್ನುವುದೂ ಈ ಶ್ಲೋಕದ ಅಭಿಪ್ರಾಯ. ಪ್ರಯತ್ನದಿಂದ ತತ್ವಜ್ಞಾನ ಪಡೆದ ಮಾತ್ರಕ್ಕೆ ಸಾದಿಯೂ ಜೀವರೂಪಕ್ಕೆ ಬಾಹ್ಯವೂ ಆಗಿರುವ ಆ ತತ್ವಜ್ಞಾನ ಅನಾದಿಯಾಗಿ ಸ್ವರೂಪಕ್ಕೆ ಅಂಟಿಕೊಂಡಿರುವ ದೃಢಮೂಲವಾದ ಅವಿದ್ಯೆಯನ್ನು ಹೇಗೆ ಕಳೆದೀತು? ಅದಕ್ಕೆ ಯೋಗ್ಯತೆ ಬೇಕು. ಯೋಗ್ಯತೆಯಲ್ಲಿ ಅಡಗಿರುವ ಶುದ್ಧಜ್ಞಾನದ ಬೆಂಬಲ ಬೇಕು. ಯೋಗ್ಯತೆ ಇದ್ದಲ್ಲಿ ಈಶ್ವರಾನುಗ್ರಹವಿದ್ದೇ ಇರುತ್ತದೆ. ಹೀಗೆ ಈಶ್ವರಾನುಗ್ರಹಸಹಿತವಾದ ಸ್ವರೂಪಭೂತ ಶುದ್ಧಜ್ಞಾನದ ಜೊತೆಗೆ ಪ್ರಯತ್ನಜನ್ಯವಾದ ತತ್ವಜ್ಞಾನ ಸೇರಬೇಕು. ಆಗ ಪ್ರಬಲವಾದ ಅನಾದಿ ಅವಿದ್ಯೆಯೂ ನಿವೃತ್ತವಾಗುತ್ತದೆ ಎಂದು ನ್ಯಾಯಸುಧೆಯಲ್ಲಿ ಹೇಳಿದೆ.

ಹರಿ ಸ್ವತಂತ್ರ

ಏತಾನಪೇಕ್ಷ್ಯೈವ ಫಲಂ ದದಾನೀ-
ತ್ಯಸ್ಯೈವ ಸಂಕಲ್ಪ ಇತಿ ಸ್ವತಂತ್ರತಾ ।
ನಾಸ್ಯಾಪಗಚ್ಛೇತ್ಸ ಹಿ ಸರ್ವಶಕ್ತಿ
ರ್ನಾಶಕ್ತತಾ ಕ್ವಚಿದಸ್ಯ ಪ್ರಭುತ್ವಾತ್ ॥೮೮॥

ಯೋಗ್ಯತಾ ಕರ್ಮ ಪ್ರಯತ್ನಗಳನ್ನು ಅನುಸರಿಸಿಯೆ ಫಲ ನೀಡುವೆನೆಂದು ಹರಿಯ ಸಂಕಲ್ಪ. ಅದರಿಂದ ಅವನಲ್ಲಿ ಸ್ವಾತಂತ್ರ್ಯಕ್ಕೆ ಕುಂದಿಲ್ಲ. ಅವನು ಸರ್ವಶಕ್ತ. ಸಕಲ ಕಾರ್ಯದಲ್ಲಿಯೂ ಅತ್ಯಂತ ಸಮರ್ಥನಾದ್ದರಿಂದ ಯಾವ ವಿಷಯದಲ್ಲಿಯೂ ಅಶಕ್ತಿ ಇಲ್ಲ.

ರಾಜನನ್ನು ಭೃತ್ಯರು ಕೈಹಿಡಿದು ಆಸ್ಥಾನಮಂಟಪಕ್ಕೆ ಕರೆತಂದರೆ ರಾಜ ಅಸ್ವತಂತ್ರನೆನಿಸುವುದಿಲ್ಲ. ಶಕ್ತನಾದರೂ ಸ್ವೇಚ್ಛೆಯಿಂದ ಭೃತ್ಯರ ಹಸ್ತಲಾಘವ ಪಡೆಯುತ್ತಾನೆ. ಅದು ವೈಭವ. ಹಾಗೇ ಶ್ರೀಹರಿಯೂ ಸರ್ವಶಕ್ತನಾದರೂ

ಯೋಗ್ಯತಾದಿಗಳನ್ನು ಅನುಸರಿಸಿಯೆ ಫಲಕೊಡುವೆನೆಂದು ಸಂಕಲ್ಪಿಸಿದ್ದಾನೆ. ಅಶಕ್ತಿಯಿಂದಲ್ಲ. ಅವನು ಅತ್ಯಂತ ಸಮರ್ಥನಾದ್ದರಿಂದ ಯಾವ ವಿಷಯದಲ್ಲಿಯೂ ಅಶಕ್ತಿ ಅವನಿಗೆ ಇಲ್ಲ. ಅತ್ಯಂತ ಸಮರ್ಥನೆಂಬುದು 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ' ಇತ್ಯಾದಿ ಶ್ರುತಿಗಳಲ್ಲಿ ಪ್ರಸಿದ್ಧವಾಗಿದೆ.

ಶ್ರೀಹರಿ ಯೋಗ್ಯತೆಗೆ ಅನನುಗುಣವಾಗಿಯೂ ಕೆಲವೊಮ್ಮೆ ಕರ್ಮಮಾಡಿಸುವುದು ಉಂಟು. ರುದ್ರಇಂದ್ರಾದಿಗಳು ಬ್ರಹ್ಮಹತ್ಯಾದಿ ಪಾಪಕರ್ಮ ಮಾಡಿ ಬಳಲುತ್ತಾರೆ. ದುರ್ಯೋಧನ ಪೌಂಡರೀಕ ಯಾಗದಂಥ ಸತ್ಕರ್ಮ ಮಾಡುತ್ತಾನೆ. ಆದರೆ ಪರ್ಯವಸಾನದಲ್ಲಿ ಇದೂ ಯೋಗ್ಯತೆಗೆ ಅನುಗುಣವೆ ಏಕೆಂದರೆ ಬ್ರಹ್ಮಹತ್ಯಾನಿಮಿತ್ತದಿಂದ ರುದ್ರ ರಾಮನಾಮ ಜಪಿಸಿದ. ಇಂದ್ರ ನರಸಿಂಹಮಂತ್ರ ಜಪಿಸಿದ. ಪೌಂಡರೀಕಯಾಗನಿಮಿತ್ತದಿಂದ ದುರ್ಯೋಧನ ಪಾಂಡವರಿಗೆ ಇನ್ನಷ್ಟು ದುಃಖ ಕೊಟ್ಟ, ಸಾತ್ವಿಕರಿಗೆ ದುಃಖ ನೀಡಿ ಹರಿ ಅವರಿಗೆ 'ನಾ ಹಂ ಕರ್ತಾ ಹರಿಃ ಕರ್ತಾ' ಎನ್ನುವ ಪ್ರಜ್ಞೆಯನ್ನು ಬಲಪಡಿಸುತ್ತಾನೆ. ತಾಮಸರಿಗೆ ಸುಖಕೊಟ್ಟು ಅಹಂಕಾರ ಹೆಚ್ಚಿಸುತ್ತಾನೆ.

ಯಾವತ್ ಪರಮಭಕ್ತೈಸ್ತು ಭುಜ್ಯತೇ ದುಃಖಮುಲ್ಬಣಂ।
ತಾವನ್ಮೃಕ್ತೌ ಸುಖೋದ್ರೇಕಃ ತತ್ರ ಚೇದ್ ಭಕ್ತಿವರ್ಧನಂ
(ಭಾಗ.ತಾ. 3. 16. 49)

ಎಂಬಂತೆ ಸಂಸಾರದಲ್ಲಿ ಹೆಚ್ಚು ಕಷ್ಟ ಅನುಭವಿಸಿದಂತೆಲ್ಲ ಹೆಚ್ಚು ಭಕ್ತಿ ಸಂಪಾದಿಸಿ ಸಾತ್ವಿಕರು ಮೋಕ್ಷದಲ್ಲಿ ಹೆಚ್ಚು ಸುಖ ಹೊಂದುವರು. ಅದರಿಂದ ಹರಿಯ ವ್ಯಾಪಾರವೆಲ್ಲ ಜೀವರ ಯೋಗ್ಯತೆಗೆ ಅನುಗುಣವೇ ಆಗಿರುತ್ತದೆ. ಯೋಗ್ಯತೆಗೆ ಮೀರಿದ ಪುಣ್ಯಕರ್ಮ ಮಾಡಿಸುವುದು ಬಲು ಅಪರೂಪ ಅದೂ ತನ್ನಲ್ಲಿರುವ 'ಕರ್ತು ಮಕರ್ತುಮನ್ಯಥಾಕರ್ತುಂ' ಸಾಮರ್ಥ್ಯರೂಪದ ಐಶ್ವರ್ಯವನ್ನು ಸಜ್ಜನರಿಗೆ ತೋರಿಸುವುದಕ್ಕಾಗಿ. ಅಲ್ಲಿಯೂ ಅಧಿಕ ಪುಣ್ಯವನ್ನು ಹೇಗಾದರೂ ಕಳೆದು ಏಧಮಾನದ್ವಿಟ್ ಎನಿಸುತ್ತಾನೆ, ಜೀವಯೋಗ್ಯತೆಯನ್ನೆ ಪುರಸ್ಕರಿಸುತ್ತಾನೆ.

ಚಾತುರ್ವರ್ಣ್ಯ ಧರ್ಮ

ತಸ್ಮಾತ್ಕಾರ್ಯಂ ತೇನ ಕ್ಲೃಪ್ತಂ ಸ್ವಕರ್ಮ
ತತ್ಪೂಜಾರ್ಥಂ ತೇನ ತತ್ಪ್ರಾಪ್ತಿರೇವ।
ಅತೋಽನ್ಯಥಾ ನಿರಯಃ ಸರ್ವಥಾ ಸ್ಯಾತ್
ಸ್ವಕರ್ಮ ವಿಪ್ರಸ್ಯ ಜಪೋಪದೇಶೌ ॥೮೯॥

ವಿಷ್ಣೋರ್ಮುಖಾದ್ ವಿಪ್ರಜಾತಿಃ ಪ್ರವೃತ್ತಾ
ಮುಖೋತ್ಥಿತಂ ಕರ್ಮ ತೇನಾಸ್ಯ ಸೋಽದಾತ್ ॥೯೦॥

ಜೀವನಿಗೆ ಕರ್ತೃತ್ವವಿರುವುದರಿಂದ ಅವನು ಹರಿ ವಿಧಿಸುವ ಸ್ವಯೋಗ್ಯ ಕರ್ಮವನ್ನು ಹರಿಪೂಜೆಗಾಗಿ ಮಾಡಬೇಕು. ಅದರಿಂದಲೆ ಮೋಕ್ಷ ಸಾಧ್ಯ. ಹಾಗೆ ಕರ್ಮ ಮಾಡದಿದ್ದರೆ ಸರ್ವಥಾ ನರಕವೇ ಸಿಗುವುದು. ಬ್ರಾಹ್ಮಣನಿಗೆ ಸ್ವಯೋಗ್ಯ ಕರ್ಮ ಜಪ ಮತ್ತು ಉಪದೇಶ. ಏಕೆಂದರೆ ಬ್ರಾಹ್ಮಣ ಜಾತಿ ವಿಷ್ಣುವಿನ ಮುಖದಿಂದ ಉದ್ಭವಿಸಿತು. ಅದರಿಂದ ಅವನಿಗೆ ಮುಖದಿಂದಾಗುವ ಕರ್ಮವನ್ನೆ ವಿಧಿಸಿದ್ದಾನೆ, ಹರಿ.

ಬಾಹ್ವೋರ್ಜಾತಃ ಕ್ಷತ್ರಿಯಸ್ತೇನ ಬಾಹ್ವೋಃ
ಕರ್ಮಾಸ್ಯ ಪಾಪಪ್ರತಿವಾರಣಂ ಹಿ ।
ಪ್ರವರ್ತನಂ ಸಾಧುಧರ್ಮಸ್ಯ ಚೈವ
ಮುಖಸ್ಯ ಬಾಹ್ವೋಶ್ಚಾತಿಸಾಮೀಪ್ಯತೋಽಸ್ಯ ॥೯೧॥
ಜಪೋಪದೇಶೌ ಕ್ಷತ್ರಿಯಸ್ಯಾಪಿ ವಿಷ್ಣೋ-
ಶ್ಚಕ್ರೇ ಧರ್ಮೌ ಯಜ್ಞಕರ್ಮಾಪಿ ವಿಪ್ರೇ ।
ವೈಶ್ಯೇ ಯಸ್ಮಾದೂರುಜಸ್ತೇನ ತಸ್ಯ
ಪ್ರಜಾವೃದ್ಧಿಸ್ತಜ್ಜಕರ್ಮೈವ ಧರ್ಮಃ ॥೯೨॥
ತತ್ಸಾದೃಶ್ಯಾತ್ ಸ್ಥಾವರಾಣಾಂ ಚ ವೃದ್ಧಿಃ
ಕರೋರುವೋಃ ಸನ್ನಿಕೃಷ್ಟತ್ವ ಹೇತೋಃ ।
ವಾರ್ತಾತ್ಮಕಂ ಕರ್ಮ ಧರ್ಮಂ ಚಕಾರ
ವಿಷ್ಣುಸ್ತಸ್ಯೈವಾಂಘ್ರಿಜಃ ಶೂದ್ರ ಉಕ್ತಃ ॥೯೩॥
ಗತಿಪ್ರಧಾನಂ ಕರ್ಮ ಶುಶ್ರೂಷಣಾಖ್ಯಂ
ಸಾದೃಶ್ಯತೋ ಹಸ್ತಪದೋಸ್ತಥೈವ ।
ಹಸ್ತೋದ್ಭವಂ ಕರ್ಮ ತಸ್ಯಾಪಿ ಧರ್ಮಃ
ಸಂತಾನವೃದ್ಧಿಶ್ಚ ಸಮೀಪಗತ್ವಾತ್ ॥೯೪॥

ವಿಷ್ಣುವಿನ ಬಾಹುಗಳಿಂದ ಕ್ಷತ್ರಿಯ ಹುಟ್ಟಿದ. ಅದರಿಂದ ಅವನಿಗೆ ಸ್ವಕರ್ಮ, ದುಷ್ಟನಿಗ್ರಹ. ಜೊತೆಗೆ ವೈಷ್ಣವ ಧರ್ಮಪ್ರಚಾರವೂ ಅವನಿಗೆ ಕರ್ತವ್ಯವಾಗಿರುತ್ತದೆ. ಏಕೆಂದರೆ ಮುಖ ಮತ್ತು ಬಾಹುಗಳಿಗೆ ಅತ್ಯಂತ ಸಾಮೀಪ್ಯವಿರುವುದರಿಂದ ಜಪ ಉಪದೇಶಗಳನ್ನು ಕ್ಷತ್ರಿಯನಿಗೂ ಉಪದೇಶಿಸಿದ್ದಾನೆ, ಮತ್ತು ಯಜ್ಞಕರ್ಮವನ್ನು ಬ್ರಾಹ್ಮಣನಿಗೂ ಉಪದೇಶಿಸಿದ್ದಾನೆ. ವೈಶ್ಯ ತೊಡೆಗಳಿಂದ ಹುಟ್ಟಿದ ಪ್ರಯುಕ್ತ ತೊಡೆಗಳಿಂದಾಗುವ ಸಂತಾನವೃದ್ಧಿ ಅವನಿಗೆ ಧರ್ಮ. ಸಂತಾನವೃದ್ಧಿಗೋರಕ್ಷಣೆಗಳಿಗೆ ಸದೃಶವಾದ ಸ್ಥಾವರವೃದ್ಧಿ ಅಂದರೆ ಕೃಷಿ ಬೇಸಾಯ ವೃತ್ತಿಯೂ ಅವನಿಗೆ ಧರ್ಮ. ಕೈಗಳಿಗೂ ತೊಡೆಗಳಿಗೂ ಸಾಮೀಪ್ಯವಿರುವುದರಿಂದ ವೈಶ್ಯನಿಗೆ ವಾಣಿಜ್ಯ ಕೃಷಿ ಗೋರಕ್ಷಣ ಬಡ್ಡಿ ವ್ಯವಹಾರ ರೂಪವಾದ

ಕರ್ಮವನ್ನೂ ಹರಿ ವಿಧಿಸಿದ್ದಾನೆ. ಅವನ ಕಾಲುಗಳಿಂದ ಶೂದ್ರ ಜನಿಸಿದನೆಂದು ಉಕ್ತವಾಗಿರುವುದರಿಂದ ಓಡಾಡುವುದೇ ಹೆಚ್ಚಾಗಿರುವ ಶುಶ್ರೂಷಣವೆಂಬ ಕರ್ಮ ಅವನಿಗೆ ಧರ್ಮ. ಕೈಗಳಿಗೂ ಕಾಲುಗಳಿಗೂ ಸಾದೃಶ್ಯವಿರುವುದರಿಂದ ಕೈಗಳಿಂದಾಗುವ ಯುದ್ಧವೂ ಕೃಷಿ ವಾಣಿಜ್ಯಾದಿಗಳೂ ಶೂದ್ರನಿಗೆ ವಿಹಿತವೆ. ಕಾಲು ತೊಡೆಗಳಿಗೆ ಸಾಮೀಪ್ಯವಿರುವುದರಿಂದ ಸಂತಾನವೃದ್ಧಿಯೂ ಶೂದ್ರನಿಗೆ ವಿಹಿತವೆ.

ಇಲ್ಲಿ 'ಕರೋರೂರ್ವೋಃ' ಎಂದು ಸಾಮಾನ್ಯವಾಗಿ ಎಲ್ಲ ಕಡೆ ಪಾಠ ಕಾಣುತ್ತದೆ. 'ಕರ ಉರು ಊರು' ಎಂದು ಪದ ವಿಭಾಗವಿವಕ್ಷೆಯಲ್ಲಿ 'ಕೈಗಳು ಮತ್ತು ದೊಡ್ಡ ತೊಡೆಗಳು' ಎಂದು ಹೇಳಿದಂತಾಗುತ್ತದೆ. 'ದೊಡ್ಡ' ಎಂಬ ವಿಶೇಷಣವೇಕೆ ಎಂದು ತಿಳಿಯುವುದಿಲ್ಲ. ಆದರೆ ವರದರಾಜೀಯ ತಾಮ್ರಪರ್ಣೀಯ ವ್ಯಾಖ್ಯಾನಗಳ ಪ್ರಕಾರ 'ಕರೋರುವೋಃ' ಎಂದು ಪಾಠ. ಕೈ ಮತ್ತು ತೊಡೆ ಎಂಬ ಅರ್ಥದಲ್ಲಿ 'ಕರ ಊರು' ಎಂದೇ ಪದವಿಭಾಗ ಆಗ 'ಕರೋರ್ವೋಃ' ಎಂದಾಗಬೇಕಾಗಿತ್ತು. ರೇಫ ವಕಾರಗಳನ್ನು ಬಿಡಿಸಿ 'ಬಾರ್ಹದ್ರಥಃ' ಎಂಬುದನ್ನು 'ಬಾರುಹದ್ರಥಃ' (21.104, 114) ಎಂದು ನಿರ್ಣಯದಲ್ಲಿ ಹೇಳುವಂತೆಯೆ 'ಕರೋರುವೋಃ' ಎಂದು ಪ್ರಯೋಗಮಾಡಿರುವ ಸಂಭವವಿದೆ. ವರದರಾಜೀಯ ಕೊಡುವ ಸಮರ್ಥನೆ 'ಯಣಾದೇಶಂ ಬಾಧಿತ್ವಾ ಉವಙಾದೇಶಶ್ಛಾಂದಸ ಆಶ್ರಿತಃ' 'ಇಕೋ ಯಣಚಿ' ಸೂತ್ರದಂತೆ 'ಕರೋರು ಓಸ್' ಎಂಬಲ್ಲಿ ಉಕಾರಕ್ಕೆ 'ವ' ಕಾರರೂಪವಾದ ಯಣಾದೇಶ ಮಾಡಬೇಕಾಗಿತ್ತು. ಅದನ್ನು ಬಾಧಿಸಿ ಉವಙಾದೇಶ ಮಾಡಿದೆ. ಇದು ಛಾಂದಸವಾದ್ದರಿಂದ ಸಾಧು' ಎಂದು.

ತಾಮ್ರಪರ್ಣೀಯ ನೀಡುವ ವಿವರಣೆ - 'ಇಕೋ ಯಣಾದೇಶೇ ಕರ್ತವ್ಯೇ ಯಣಾಗಮಃ ಕೃತಇತಿ ಬೋಧ್ಯಂ' 'ಉಕಾರಕ್ಕೆ ವಕಾರಾದೇಶ ಮಾಡಬೇಕಾಗಿರುವಲ್ಲಿ ವಕಾರಾಗಮ ಮಾಡಿದೆ' ಎಂದು.

ಭುಜಾವುರೋ ಹೃದಯಂ ಯದ್ ಬಲಸ್ಯ
ಜ್ಞಾನಸ್ಯ ಚ ಸ್ಥಾನಮತೋ ನೃಪಾಣಾಂ ।
ಬಲಂ ಜ್ಞಾನಂ ಚೋಭಯಂ ಧರ್ಮ ಉಕ್ತಃ
ಪಾಣೌ ಕೃತೀನಾಂ ಕೌಶಲಂ ಕೇವಲಂ ಹಿ ।
ತಸ್ಮಾತ್ ಪಾಣ್ಯೋರೂರುಪದೋರುಪಸ್ಥಿತೇಃ
ವಿಟ್ ಶೂದ್ರಕೌ ಕರ್ಮಣಾಂ ಕೌಶಲೇತೌ ॥೯೫॥

ಬಾಹುಗಳು ಮತ್ತು ಎದೆ ಇವು ಬಲದ ಸ್ಥಾನಗಳು. ಹೃದಯ ಜ್ಞಾನಕ್ಕೆ ಸ್ಥಾನ. ಅದರಿಂದ ರಾಜರಿಗೆ ಬಲಕಾರ್ಯ ಜ್ಞಾನಕಾರ್ಯಗಳೆರಡೂ ಧರ್ಮವೆಂದು ವಿಹಿತವಾಗಿವೆ. ಕೈಯು ಕೇವಲ ಕರ್ಮ ನಿಪುಣತೆಗೆ ಸ್ಥಾನ. ಬಾಹುವಿನಂತೆ ಬಲದ ಸ್ಥಾನವಲ್ಲ. ಅದರಿಂದ ಕೈಗಳಿಗೂ

ತೊಡೆ ಕಾಲುಗಳಿಗೂ ಸಾಮೀಪ್ಯವಿರುವುದರಿಂದ ವೈಶ್ಯ ಶೂದ್ರರು ಕರ್ಮಕೌಶಲಯುಕ್ತರಾಗಿರಬೇಕು.

ದೇವತೆಗಳ ವರ್ಣಧರ್ಮ

ಪ್ರಾಧಾನ್ಯತೋ ಧರ್ಮವಿಶೇಷ ಏಷ
ಸಾಮಾನ್ಯತಃ ಸರ್ವ ಏವಾಖಿಲಾನಾಂ।
ವಯಂ ಹಿ ದೇವಾಸ್ತೇನ ಸರ್ವಂ ಹಿ ಕರ್ಮ
ಪ್ರಾಯೇಣ ನೋ ಧರ್ಮತಾಮೇತಿ ಶಶ್ವತ್ ॥೯೬॥

ಇದು ಪ್ರಾಧಾನ್ಯದೃಷ್ಟಿಯಿಂದ ಹೇಳಿದ ವಿಶೇಷ ಧರ್ಮ ವ್ಯವಸ್ಥೆ. ಸಾಮಾನ್ಯವಾಗಿ ಅಮುಖ್ಯ ದೃಷ್ಟಿಯಿಂದ ಹೇಳುವುದಾದರೆ ಎಲ್ಲರಿಗೂ ಎಲ್ಲ ಧರ್ಮವೂ ಅನುಮತವಾಗಿದೆ. ಏಕೆಂದರೆ ನಾವು ದೇವತೆಗಳಾಗಿರುವುದರಿಂದ ಪ್ರಾಯಃ ಎಲ್ಲ ಕರ್ಮವೂ ನಮಗೆ ಯಾವಾಗಲೂ ಧರ್ಮವೆಂದೇ ಎನಿಸುತ್ತದೆ.

'ಎಲ್ಲರಿಗೂ ಎಲ್ಲ ಧರ್ಮವೂ ಅನುಮತ' ಎಂದಿದ್ದು ದೇವತೆಗಳ ದೃಷ್ಟಿಯಿಂದ ಹೊರತು ಮಾನವರಿಗಲ್ಲ. ಅದರಿಂದಲೆ ಭೀಮ ಹೇಳುತ್ತಾನೆ, 'ಏಕೆಂದರೆ ನಾವು ದೇವತೆಗಳು ನಮಗೆ ಎಲ್ಲ ಕರ್ಮವೂ ಧರ್ಮವೇ' ಎಂದು. 'ಯಥಾ ಹ್ಯೇತೇ ಮುನಯ ಏವಂ ಸರ್ವವರ್ಣಾಃ ಸರ್ವಾಶ್ರಮಾಃ' ಎಂಬ ಶ್ರುತಿ ಹಾಗೇ ಹೇಳಿದೆ. ಬ್ರಹ್ಮಸೂತ್ರ (3.4.48) ದಲ್ಲಿ ಈ ವಿಚಾರವಿದೆ.

[1]ದೇವತೆಗಳಿಗೂ ಎಲ್ಲ ಕರ್ಮವೂ ಧರ್ಮವೆನಿಸುವುದು ದೇವಲೋಕದಲ್ಲಿ ಮಾತ್ರ. ಮಾನವಲೋಕದಲ್ಲಿ ಅವತಾರ ಮಾಡಿದಾಗ ಮಾನವರಂತೆ ಆಯಾ ವರ್ಣಧರ್ಮವನ್ನೇ ಅನುಸರಿಸಬೇಕು. ಕೆಲವೊಮ್ಮೆ ವ್ಯತಿರಿಕ್ತವಾಗಿ ನಡೆದರೂ ದೋಷವಿಲ್ಲ ಎಂಬ ಅಭಿಪ್ರಾಯದಿಂದ 'ಪ್ರಾಯಃ' ಎಂದಿದೆ.

ಮಾನವರ ದೃಷ್ಟಿಯಿಂದ ಹೇಳುವುದಾದರೆ ಆಪತ್ಕಾಲದಲ್ಲಿ

1. ದೇವಾನಾಮಪಿ ಮಾನುಷೇಷ್ವವತೀರ್ಣಾನಾಂ ತತ್ತದ್ ವರ್ಣಾಶ್ರಮಕರ್ಮಣ ಏವಾನುಷ್ಠೇಯತ್ವಾತ್ ಪ್ರಾಯ ಇತ್ಯುಕ್ತಂ। -ತಾಮ್ರಪರ್ಣೀಯ

ಸಾಮಾನ್ಯತಃ ಸರ್ವ ಏವಾಖಿಲಾನಾಮಿತ್ಯತ್ರ ಆಪದಿ ಬ್ರಾಹ್ಮಣಾನಾಂ ಕ್ಷತ್ರಿಯಧರ್ಮಃ, ಕ್ಷತ್ರಿಯಾಣಾಂ ವೈಶ್ಯಧರ್ಮಃ, ವೈಶ್ಯಾನಾಂ ಚ ಶೂದ್ರಧರ್ಮಃ। ಅತ್ಯಾಪದಿ ಬ್ರಾಹ್ಮಣಾನಾಂ ಕ್ಷತ್ರಿಯಾಣಾಂ ವಿಶಾಂ ಚ ಚತ್ವಾರೋಽಪಿ ಧರ್ಮಾಃ। ಶೂದ್ರಾಣಾಂ ತು ಕದಾಚಿತ್ ಬ್ರಾಹ್ಮಣ ಧರ್ಮ ವ್ಯತಿರಿಕ್ತಾಸ್ತ್ರಯೋಽಪಿ ಧರ್ಮಾ ಇತ್ಯನೇನ ಪ್ರಕಾರೇಣ ಅಖಿಲಾನಾಂ ಸಾಮಾನ್ಯತಃ ಸರ್ವೋಽಪಿ ಧರ್ಮ ಇತಿ ವಿವೇಕಃ।

-ವಾದಿರಾಜೀಯ

ಅನಿವಾರ್ಯವೆನಿಸಿದಾಗ ಬ್ರಾಹ್ಮಣನಿಗೆ ಕ್ಷತ್ರಿಯ ಧರ್ಮ, ಕ್ಷತ್ರಿಯನಿಗೆ ವೈಶ್ಯಧರ್ಮ, ವೈಶ್ಯನಿಗೆ ಶೂದ್ರ ಧರ್ಮ ಅನುಮತ. ಅತ್ಯಂತ ಆಪತ್ತಿನಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೆ ನಾಲ್ಕೂ ವರ್ಣಗಳ ಧರ್ಮವೂ ಅನುಮತ. ಶೂದ್ರರಿಗೆ ಕೆಲವೊಮ್ಮೆ ಬ್ರಾಹ್ಮಣಧರ್ಮ ಬಿಟ್ಟು ಉಳಿದ ಮೂರು ವರ್ಣಧರ್ಮಗಳು ಅನುಮತವಾಗಿವೆ.

ಏತೈರ್ಧರ್ಮೈರ್ವಿಷ್ಣುನಾ ಪೂರ್ವಕಲ್ಪೈಃ
ಸರ್ವೈರ್ವರ್ಣೈರ್ವಿಷ್ಣುರೇವಾಭಿಪೂಜ್ಯಃ।
ತದ್ಭಕ್ತಿರೇವಾಖಿಲಾನಾಂ ಚ ಧರ್ಮೋ
ಯಥಾಯೋಗ್ಯಂ ಜ್ಞಾನಮಸ್ಯಾಪಿ ಪೂಜಾ ॥೯೭॥

ಶ್ರೀಹರಿ ಆದಿ ಸೃಷ್ಟಿಯಲ್ಲಿಯೆ ಕೃಪ್ತಗೊಳಿಸಿರುವ ಈ ಧರ್ಮಗಳಿಂದ ಎಲ್ಲ ವರ್ಣದವರೂ ಅವನನ್ನು ಆರಾಧಿಸಬೇಕು. ಅವನಲ್ಲಿ ಯಥಾಯೋಗ್ಯ ಭಕ್ತಿ ಮಾಡಿ ಜ್ಞಾನಸಂಪಾದಿಸುವುದೇ ಎಲ್ಲ ವರ್ಣದವರಿಗೂ ಧರ್ಮ. ಅದೇ ಆರಾಧನೆ.

ಪಿತಾ ಗುರುಃ ಪರಮಂ ದೈವತಂ ಚ
ವಿಷ್ಣುಃ ಸರ್ವೇಷಾಂ ತೇನ ಪೂಜ್ಯಃ ಸ ಏವ।
ತದ್ಭಕ್ತತ್ವಾದ್ ದೇವತಾಶ್ಚಾಭಿಪೂಜ್ಯಾ
ವಿಶೇಷತಸ್ತೇಷು ಯೇಽತ್ಯಂತಭಕ್ತಾಃ ॥೯೮॥

ಹರಿಯೇ ಎಲ್ಲರಿಗೂ ತಂದೆ ಗುರು ಪರದೇವತೆಯೂ ಕೂಡ. ಅದರಿಂದ ಅವನೇ ಪೂಜ್ಯ. ಅವನ ಭಕ್ತರಾದ್ದರಿಂದ ದೇವತೆಗಳೂ ಪೂಜ್ಯರಾಗುತ್ತಾರೆ. ಅವರಲ್ಲಿಯೂ ಅತ್ಯಂತ ಭಕ್ತರು ವಿಶೇಷವಾಗಿ ಪೂಜ್ಯರು.

ಸಂಪೂಜಿತೋ ವಾಸುದೇವಃ ಸ ಮುಕ್ತಿಂ
ದದ್ಯಾದೇವಾಪೂಜಿತೋ ದುಃಖಮೇವ।
ಸ್ವತಂತ್ರತ್ವಾತ್ ಸುಖದಃಖಪ್ರದೋಽಸೌ
ನಾನ್ಯಃ ಸ್ವತಂತ್ರಸ್ತದ್ವಶಾ ಯತ್ ಸಮಸ್ತಾಃ ॥೯೯॥

ಚೆನ್ನಾಗಿ ಆರಾಧಿಸಿದರೆ ಹರಿ ಮೋಕ್ಷ ಸುಖವನ್ನು ನಿಶ್ಚಯವಾಗಿ ಕೊಡುತ್ತಾನೆ. ಆರಾಧಿಸದಿದ್ದರೆ ದುಃಖವನ್ನೇ ಕೊಡುತ್ತಾನೆ. ಸ್ವತಂತ್ರನಾದ್ದರಿಂದ ಅವನೆ ಸುಖದುಃಖಗಳನ್ನು ನೀಡುವವನು ಬೇರೆ ಯಾರೂ ಸ್ವತಂತ್ರನಿಲ್ಲ. ಎಲ್ಲರೂ ಅವನ ಅಧೀನರೆ.

ಸ್ವತಂತ್ರತ್ವಾತ್ ಸುಖಿಸಜ್ಞಾನಶಕ್ತಿ
ಪೂರ್ವೈರ್ಗುಣೈಃ ಪೂರ್ಣ ಏಷೋಽಖಿಲೈಶ್ಚ।

ಸ್ವತಂತ್ರತ್ವಾತ್ಸರ್ವದೋಷೋಜ್ಝಿತಶ್ಚ
ನಿಸ್ಸೀಮಶಕ್ತಿರ್ಹಿ ಯತಃ ಸ್ವತಂತ್ರಃ ॥೧೦೦॥

ಹರಿ ಸ್ವತಂತ್ರನಾದ್ದರಿಂದ ಆನಂದ ನಿರ್ಮಲಜ್ಞಾನ· ಬಲ ಮುಂತಾದ ಎಲ್ಲ ಗುಣಗಳಿಂದ ಪೂರ್ಣನಾಗಿದ್ದಾನೆ. ಸ್ವತಂತ್ರನಾದ್ದರಿಂದಲೆ ಸಕಲ ದೋಷರಹಿತನಾಗಿದ್ದಾನೆ. ಏಕೆಂದರೆ ಅಪರಿಮಿತ ಶಕ್ತಿ ಉಳ್ಳವನು ಸ್ವತಂತ್ರನೇ ಆಗಿರುತ್ತಾನೆ.

[1]ಶಕ್ತಿವಿಪರ್ಯಯಾತ್ ಎಂಬ ಬ್ರಹ್ಮಸೂತ್ರ (2.3.38)ದಲ್ಲಿ ಹೇಳಿದಂತೆ ಪೂರ್ಣಶಕ್ತಿ ಉಳ್ಳವನಾದ್ದರಿಂದ ಹರಿ ಸ್ವತಂತ್ರ. ಅಪೂರ್ಣಶಕ್ತಿ ಉಳ್ಳವರಾದ್ದರಿಂದ ಬೇರೆ ಎಲ್ಲರೂ ಅಸ್ವತಂತ್ರರು. ಹರಿ ಗುಣಪೂರ್ಣನಾಗಿರುವುದರಲ್ಲಿ ಸ್ವತಂತ್ರ, ದೋಷದೂರನಾಗಿರುವುದರಲ್ಲಿಯೂ ಸ್ವತಂತ್ರನಾಗಿರುವುದರಿಂದ ಅವನು ಗುಣಪೂರ್ಣ ಮತ್ತು ದೋಷದೂರನೆಂದು ಎಲ್ಲರೂ ಸ್ವಯೋಗ್ಯಕರ್ಮಗಳಿಂದ ಆರಾಧಿಸಬೇಕು.

ದೋಷಾಸ್ಪೃಷ್ಟೌ ಗುಣಪೂರ್ತೌ ಚ ಶಕ್ತಿ-
ರ್ನಿಸ್ಸೀಮತ್ವಾದ್ವಿದ್ಯತೇ ತಸ್ಯ ಯಸ್ಮಾತ್ ।
ಏವಂ ಗುಣೈರಖಿಲೈಶ್ಚಾಪಿ ಪೂರ್ಣೋ
ನಾರಾಯಣಃ ಪೂಜ್ಯತಮಃ ಸ್ವಧರ್ಮೈಃ ॥೧೦೧॥
ಅಸ್ಮಾಕಂ ಯತ್ತೇನ ನಾತಿಕ್ಷಮೈವ
ಧರ್ಮೋ ದುಷ್ಟಾನಾಂ ವಾರಣಂ ಹ್ಯೇವ ಕಾರ್ಯಂ ।
ಹನ್ಯಾದ್ದುಷ್ಟಾನ್ಯಃ ಕ್ಷತ್ರಿಯಃ ಕ್ಷತ್ರಿಯಾಂಶ್ಚ
ವಿಶೇಷತೋ ಯುದ್ಧಗತಾನ್ ಸ್ಮರನ್ ಹರಿಂ ॥೧೦೨॥
ಸ್ವಬಾಹುವೀರ್ಯೇಣ ಚ ತಸ್ಯ ಬಾಹೂ
ಚೈತನ್ಯಮಾತ್ರೌ ಭವತಃ ಸದೇಹೌ ।
ಪಾಪಾಧಿಕಾಂಶ್ಚೈವ ಬಲಾಧಿಕಾಂಶ್ಚ
ಹತ್ವಾ ಮುಕ್ತಾವಧಿಕಾನಂದವೃದ್ಧಿಃ ॥೧೦೩॥

ದೋಷರಹಿತನಾಗಿರುವುದಕ್ಕೂ ಗುಣಪೂರ್ಣನಾಗಿರುವುದಕ್ಕೂ ಶ್ರೀಹರಿಗೆ ಸಾಮರ್ಥ್ಯವಿದೆ. ಏಕೆಂದರೆ ಅವನ ಶಕ್ತಿ ಅಪರಿಮಿತ. ಅದರಿಂದ ಅವನು ಸಕಲ

---

1. ನಿಃಸೀಮಶಕ್ತಿರ್ಹಿ ಸ್ವತಂತ್ರಃ। ಹೀತ್ಯನೇನ ವ್ಯಾಪ್ತೇರಾಗಮಿಕತ್ವಂ ಸೂಚಯತಿ। ತಥಾ ಚ ಸೂತ್ರಂ -ಶಕ್ತಿವಿಪರ್ಯಯಾದಿತಿ। ತತ್ವಪ್ರಕಾಶಿಕಾಯಾಂ ಚ 'ಸ್ವಾತಂತ್ರ್ಯಾಪಾರತಂತ್ರ್ಯೇ ಸಾಧಯತ್ ಸೂತ್ರಮುಪನ್ಯಸ್ಯ ವ್ಯಾಚಷ್ಟೇ ಶಕ್ತೇತಿ। ಈಶ್ವರಸ್ಯ ಪೂರ್ಣಶಕ್ತಿತ್ವಾತ್ ಸ್ವಾತಂತ್ರ್ಯಂ। ಜೀವಸ್ಯ ತದ್ವಿಪರ್ಯಯಾದ ಸ್ವಾತಂತ್ರ್ಯಮಿತಿ। ಯಸ್ಮಾತ್ ತಸ್ಯ ಭಗವತೋ ನಿಃಸೀಮತ್ವಾತ್ ನಿರ್ಮರ್ಯಾದತ್ವೇನ ಶಕ್ತಿರ್ವಿದ್ಯತೇ, ಅತೋ ದೋಷಾಸ್ಪೃಷ್ಟೌ ಗುಣಪೂರ್ತೌ ಚ ಸ್ವತಂತ್ರಃ। -ತಾಮ್ರಪರ್ಣೀಯ

ಗುಣಗಳಿಂದಲೂ ಪೂರ್ಣ, ಸರ್ವದೋಷಗಳಿಂದಲೂ ರಹಿತನಾಗಿದ್ದು ನಮಗೆ ಸ್ವಧರ್ಮದಿಂದ ಅತ್ಯಂತ ಪೂಜ್ಯನೆನಿಸಿದ್ದಾನೆ. ಅದರಿಂದ ನಾವು ದುಷ್ಟರಾದ ಕೌರವರಲ್ಲಿ ಹೆಚ್ಚು ಕ್ಷಮೆ ತೋರುವುದು ಧರ್ಮವಾಗುವುದಿಲ್ಲ. ನಿಗ್ರಹವನ್ನೆ ಮಾಡಬೇಕು. ದುಷ್ಟರನ್ನು ನಿಗ್ರಹಿಸುವವನೆ ಕ್ಷತ್ರಿಯ. ವಿಶೇಷವಾಗಿ ರಣರಂಗದಲ್ಲಿ ಇದಿರಾಗುವ ದುಷ್ಟಕ್ಷತ್ರಿಯರನ್ನು ಹರಿಸ್ಮರಣಪೂರ್ವಕ ತನ್ನ ತೋಳ್ಬಲದಿಂದ ಯಾರು ಸಂಹರಿಸುವನೋ ಅವನ ಬಾಹುಗಳೂ ದೇಹವೂ ಚಿನ್ಮಯವಾಗುತ್ತವೆ. ಶತ್ರುವಿನಲ್ಲಿ ಪಾಪವೂ ಬಲವೂ ಹೆಚ್ಚಿದ್ದಷ್ಟು ಅವನ ನಿಗ್ರಹದಿಂದ ಮೋಕ್ಷದಲ್ಲಿ ಅಧಿಕ ಆನಂದ ವೃದ್ಧಿಯಾಗುವುದು.

[1]ಸಂಸಾರಾವಸ್ಥೆಯ ಬಾಹುಗಳೂ ದೇಹವೂ ಕೇವಲ ಚಿನ್ಮಯವಾಗಿರುವುದಿಲ್ಲ. ಹಾಲು ನೀರು ಬೆರೆತಂತೆ ಜಡವೂ ಬೆರೆತು ಮಿಶ್ರಣವಾಗಿರುತ್ತದೆ. 'ನನ್ನ ಬಾಹುವಿನಲ್ಲಿ ಹರಿಯ ಚಿನ್ಮಯ ಬಾಹುವಿದ್ದು ಅದೇ ಶತ್ರುನಿಗ್ರಹ ಮಾಡುತ್ತಿದೆ. ನನ್ನ ಬಾಹು ಕೇವಲ ನಿಮಿತ್ತಮಾತ್ರ' ಎಂದು ಹರಿಸ್ಮರಣಪೂರ್ವಕ ಯುದ್ಧಯಜ್ಞ ಮಾಡುತ್ತಿದ್ದರೆ ಈ ಧ್ಯಾನಾಭ್ಯಾಸರೂಪ ಉಪಾಸನೆಯ ಬಲದಿಂದ ಅಪರೋಕ್ಷವಾಗಿ ಜೀವಸ್ವರೂಪ ಭೂತ ಚಿನ್ಮಯಬಾಹುಗಳು ವ್ಯಕ್ತವಾಗುವುವು. ಜಡವಾದ ಬಾಹುಗಳು ಬಿಟ್ಟುಹೋಗುವುವು. ಅಪರೋಕ್ಷಾನಂತರದಲ್ಲಿ ಈ ಉಪಾಸನೆ ಮಾಡಿದರೆ ಮೋಕ್ಷದಲ್ಲಿ ಆನಂದವೃದ್ಧಿ ಫಲ.

ಅಥವಾ ಪ್ರಾಣಿನಿಗಿದು ವಸ್ತ್ರವೆಂಬ ಭಾವನೆಯಿಂದ ಭೋಜನದಲ್ಲಿ ಪೂರ್ವ ಉತ್ತರ ಆಪೋಽಶನ ಮಾಡಿದರೆ ಮೋಕ್ಷದಲ್ಲಿ ದಿವ್ಯವಸ್ತ್ರಲಾಭ'ವೆನ್ನುವಂತೆ ಅಪರೋಕ್ಷಕ್ಕಿಂತ ಹಿಂದಿನ ಉಪಾಸನೆಯೂ

---

1. ವಿಶೇಷತೋ ಹರಿಂ ಸ್ಮರನ್ ಕ್ರಿಯಾಪ್ರವರ್ತಕತ್ವೇನ ಪೂಜ್ಯತ್ವೇನ ಫಲಪ್ರದತ್ವೇನ ಚ। ನನ್ವಿದಂ ಫಲಂ ಅಪರೋಕ್ಷ ಜ್ಞಾನಿನಾಂ ಜಿಜ್ಞಾಸೂನಾಂ ವಾ? ನಾದ್ಯಃ। ಆನಂದಾಭಿವೃದ್ದೇರೇವ ಫಲತ್ವೇನ ಸ್ವರೂಪಾಭಿವ್ಯಕ್ತಿರೂಪ ಚೈತನ್ಯ ಮಾತ್ರತ್ವಸ್ಯ ಜ್ಞಾನಸಾಧ್ಯಸ್ಯ ಉತ್ತರಭಾವಿ ಕರ್ಮಫಲತ್ವಾಭಾವಾತ್। ಜ್ಞಾನಿನಾಮಾನಂದವೃದ್ದೇಃ ದುಷ್ಟನಿಗ್ರಹ ಫಲತ್ವೇನ ವಕ್ಷ್ಯಮಾಣತ್ವಾಚ್ಚ। ನ ದ್ವಿತೀಯಃ। ಜ್ಞಾನಾತ್ ಪೂರ್ವಭಾವಿಕರ್ಮಣಾಂ ಜ್ಞಾನ ಫಲಕತ್ವೇನ ಮುಕ್ತಿ ಫಲಕತ್ವಾಭಾವಾದಿತಿ ಚೇತ್ ಜ್ಞಾನಿನಾಮೇವೈತತ್ ಫಲಂ। ಸ್ವರೂಪಾಭಿವ್ಯಕ್ತೇರ್ಜ್ಞಾನಫಲತ್ವೇಪಿ 'ಸ್ವರೂಪಂ ಜ್ಞಾಯತೇ ತೇಷಾಂ ಷೋಡಶ್ಯಾ ಕಲಯೈವ ತ್ವಿ'ತ್ಯುಕ್ತರೀತ್ಯಾ ಚೈತನ್ಯವಿಕಾಸೇನ ಪ್ರಾಪ್ಯ ವಿಶೇಷಸ್ಯೋತ್ತರ ಭಾವಿ ಸಾಧನ ಸಾಧ್ಯತ್ವೇನ ತಸ್ಯೈವಾತ್ರ ವಿವಕ್ಷಿತತ್ವಾತ್। ಜಿಜ್ಞಾಸೂನಾಂ ಚೈತತ್ ಫಲಂ। ಸ್ವಬಾಹು ಶರೀರಾದೌ ಜ್ಞಾನಘನ ಭಗವದ್ಬಾಹ್ವಾದಿಕಂ ವರ್ತತೇ। ತದೇವ ಶತ್ರು ಸಂಹಾರಕಂ। ಅಹಂ ತು ನಿಮಿತ್ತಮಾತ್ರಮಿತಿ ಹರಿಧ್ಯಾನಪೂರ್ವಕಂ ಯುದ್ಧಕರ್ತೃಣಾಂ ತದ್ಧ್ಯಾನಾಭ್ಯಾಸೇನ ಅಪರೋಕ್ಷೀಕೃತ ಬ್ರಹ್ಮಣಾಂ ಚಿನ್ಮಾತ್ರ ಬಾಹ್ವಾದಿ ಭವತೀತಿ ಕಮನುಪಪನ್ನಂ। ಪ್ರಾಣಸ್ಯ ವಸ್ತ್ರ ಬುಧ್ಯಾ ತು ಭೋಜನೋಭಯತಃ ಪಿಬನ್। ಸ್ವರ್ಗೇ ಮುಕ್ತೌ ತಥಾ ದಿವ್ಯವಸ್ತ್ರ ಭಾಗೀ ಭವತ್ಯಲಮಿತ್ಯತ್ರೈವಮೇವ ವಕ್ತವ್ಯತ್ವಾತ್। -ತಾಮ್ರಪರ್ಣೀಯ

ಚಿನ್ಮಯ ಶರೀರ ಪ್ರಾಪ್ತಿಗೆ ಮತ್ತು ಮೋಕ್ಷದ ಆನಂದಾಭಿವೃದ್ಧಿಗೆ ಕಾರಣವಾಗಬಹುದು. ಅದೇರೀತಿ ಅಪರೋಕ್ಷೋತ್ತರದ ಉಪಾಸನೆಯೂ ಆನಂದಾಭಿವೃದ್ಧಿಗೆ ಹೇಗೋ ಹಾಗೆ ಚಿನ್ಮಯ ಶರೀರಪ್ರಾಪ್ತಿಗೂ ಕಾರಣವಾಗಬಹುದು. 'ಸ್ವರೂಪಂ ಜ್ಞಾಯತೇ ತೇಷಾಂ ಷೋಡಶ್ಯಾ ಕಲಯೈವ ತು' ಜೀವಸ್ವರೂಪದಲ್ಲಿ ಹದಿನಾರನೆ ಒಂದಂಶ ಮಾತ್ರ ಅಪರೋಕ್ಷದ ಪ್ರಭಾವದಿಂದ ವ್ಯಕ್ತವಾಗುತ್ತದೆ. ಉಳಿದುದೆಲ್ಲ ಅಪರೋಕ್ಷ ಜ್ಞಾನಾನಂತರದ ಉಪಾಸನೆಯ ಫಲ. ಅದು ಇಲ್ಲಿ ವಿವಕ್ಷಿತ ಎನ್ನಬಹುದು.

[1]ಅಥವಾ ವಿಷ್ಣು ಪೂಜಾರೂಪವಾಗಿ ದುಷ್ಟನಿಗ್ರಹ ಮಾಡುವ ಬಾಹುಗಳೇ ನಿಜವಾಗಿ ಚೈತನ್ಯಪೂರ್ಣವೆನಿಸುತ್ತವೆ. ಇಲ್ಲದಿದ್ದರೆ ಶವದ ಬಾಹುಗಳಂತೆ ವ್ಯರ್ಥವೆನಿಸುತ್ತವೆ. ಅಪವಿತ್ರವೆನಿಸುತ್ತವೆ ಎಂದೂ ಅಭಿಪ್ರಾಯ ಹೇಳಬಹುದು.

ರಾಜಧರ್ಮ

ಪ್ರೀತಿಶ್ಚ ವಿಷ್ಣೋಃ ಪರಮೈವ ತತ್ರ
ತಸ್ಮಾದ್ಧಂತವ್ಯಾಃ ಪಾಪಿನಃ ಸರ್ವಥೈವ।
ಯೇ ತ್ವಕ್ಷಧೂರ್ತಾ ಗ್ರಹಣಂ ಗತಾ ವಾ
ಪಾಪಾಸ್ತೇಽನ್ಯೈರ್ಘಾತನೀಯಾಃ ಸ್ವದೋರ್ಭ್ಯಾಂ।
ರಾಜಾನಂ ವಾ ರಾಜಪುತ್ರಂ ತಥೈವ
ರಾಜಾನುಜಂ ವಾಭಿಯಾತಂ ನಿಹನ್ಯಾತ್ ॥೧೦೪॥

ಮಹಾಪಾಪಿಗಳಾದ ಬಲಿಷ್ಠರಾದ ಶತ್ರುಗಳ ನಿಗ್ರಹದಲ್ಲಿ ಹರಿಗೆ ಬಹಳ ಪ್ರೀತಿ. ಅದರಿಂದ ಪಾಪಿಗಳನ್ನು ಸರ್ವಥಾ ಸ್ವತಃ ನಿಗ್ರಹಿಸಬೇಕು. ಕಪಟದ ಜೂಜಾಡುವ ಶಕುನಿಯಂಥವರನ್ನು ಅಥವಾ ಯುದ್ಧದಲ್ಲಿ ಸೆರೆ ಸಿಗುವ ಪಾಪಿಗಳನ್ನು ಬೇರೆಯವರ ಕೈಯಿಂದ ಕೊಲ್ಲಿಸಬೇಕು. ರಣರಂಗದಲ್ಲಿ ಇದಿರಾಗಿ ಬರುವ ದುರ್ಯೋಧನನಂಥ ರಾಜನನ್ನಾಗಲಿ, ರಾಜಕುಮಾರನನ್ನಾಗಲಿ ದುಃಶಾಸನನಂಥ ರಾಜಸೋದರನನ್ನಾಗಲಿ ತನ್ನ ಕೈಗಳಿಂದಲೆ ಸಂಹರಿಸಬೇಕು.

[2]ಸೆರೆಸಿಕ್ಕವರನ್ನೂ ಸ್ತ್ರೀಯರನ್ನೂ ಕೊಲ್ಲಿಸಕೂಡದೆಂದು ನಿಯಮವಿದೆ. ಆದರೆ ಅವರು ಪಾಪಿಗಳಾಗಿದ್ದಲ್ಲಿ ಕೊಲ್ಲಿಸಬಹುದು.

---

1. ಯದ್ವಾ ಅಂತಃಸ್ಥಿತ ಚೈತನ್ಯಂ ಮಾಪಯತ ಇತಿ ಚೈತನ್ಯ ಮಾತ್ರೌ ಭವತಃ। ಏವಂ ಶೌರ್ಯಕರಣೇ ಚೇತನ ಇತಿ ಜ್ಞಾಯತೇ। ನೋ ಚೇತ್ ತಸ್ಯ ಹಸ್ತೌ ದೇಹೋಽಪಿ ಶವದೇಹ ಇತಿಭಾವಃ।
-ವಾದಿರಾಜೀಯ
2. ಯದ್ಯಪಿ ಗ್ರಹಣಂ ಗತಾ ನ ಹಂತವ್ಯಾಃ। ತಥಾಪಿ ಪಾಪಿಷ್ಠಾಶ್ಚೇತ್ ತೇಷಾಂ ಹನನಮಪಿ ಧರ್ಮ ಏವ।
-ವಾದಿರಾಜೀಯ

ರಾಜ್ಞಃ ಪುತ್ರೋಽಪ್ಯಕೃತೋದ್ವಾಹಕೋ ಯಃ
ಸ ಘಾತನೀಯೋ ನ ಸ್ವಯಂ ವಧ್ಯ ಏವ ।
ಕ್ರೂರಂ ಚಾನ್ಯದ್ಧರ್ಮಯುಕ್ತಂ ಪರೈಸ್ತತ್
ಪ್ರಸಾಧನೀಯಂ ಕ್ಷತ್ರಿಯೈರ್ನ ಸ್ವಕಾರ್ಯಂ ॥೧೦೫॥

ರಾಜಕುಮಾರ ಭೀಷ್ಮನಂತೆ ಅವಿವಾಹಿತನಾಗಿದ್ದಲ್ಲಿ ಬೇರೆಯವರ ಕೈಯಿಂದ ಕೊಲ್ಲಿಸಬೇಕು. ಸ್ವತಃ ಕೊಲ್ಲಕೂಡದು. ಹಾಗೆಯೆ ಧರ್ಮಸಮ್ಮತವಾದ ಬೇರೆ ಯಾವುದೇ ಕ್ರೂರಕರ್ಮವನ್ನು ಕ್ಷತ್ರಿಯರು ಬೇರೆಯವರಿಂದಲೆ ಮಾಡಿಸಬೇಕು, ಹೊರತು ಸ್ವತಃ ಮಾಡಬಾರದು.

[1]ಕಳ್ಳತನ ಕೊಲೆ ಮುಂತಾದ ಅಪರಾಧಗಳಿಗೆ ವಧೆ ಕೈ ಕಾಲು ಕತ್ತರಿಸುವುದು ಮುಂತಾದ ಕ್ರೂರಶಿಕ್ಷೆಗಳು ರಾಜನಿಗೆ ಧರ್ಮಸಂಮತವಾದರೂ ಸ್ವತಃ ಮಾಡಬಾರದು. ಭೃತ್ಯರ ಕೈಯಿಂದಲೇ ಮಾಡಿಸಬೇಕು.

[2]ದ್ರೋಣಾದಿ ಗುರುಜನರ ವಧೆ ನಾರಾಯಣ ದ್ವಿಟ್ ತದನುಬಂಧಿ ನಿಗ್ರಹ ರೂಪವಾದ್ದರಿಂದ ಧರ್ಮಸಂಮತವೆ ಆಗಿದ್ದರೂ ಅದನ್ನು ತನ್ನ ಕೈಯಿಂದಲೇ ರಾಜ ಮಾಡಕೂಡದು. ಅನ್ಯರಿಂದ ಮಾಡಿಸಬೇಕು.

ಏವಂ ಧರ್ಮೋ ವಿಹಿತೋ ವೇದ ಏವ
ವಾಕ್ಯಂ ವಿಷ್ಣೋಃ ಪಂಚರಾತ್ರೇಷು ತಾದೃಕ್ ।
ಅಕ್ಷದ್ಯೂತಂ ನಿಕೃತಿಃ ಪಾಪಮೇವ
ಕೃತಂ ತ್ವಯಾ ಗರ್ಹಿತಂ ಸೌಬಲೇನ ॥೧೦೬॥

ಹೀಗೆ ಧರ್ಮ ವೇದದಲ್ಲಿಯೆ ವಿಹಿತವಾಗಿದೆ. ಪಂಚರಾತ್ರಗಳಲ್ಲಿ ವಿಷ್ಣುವಚನವೂ ಹಾಗೇ ಇದೆ. ಜೂಜು ಮೋಸದಿಂದ ಕೂಡಿದ್ದು ಪಾಪಕರವಾಗಿದೆ. ನಿಂದ್ಯವಾಗಿದೆ. ಅಂಥ ಜೂಜನ್ನು ನೀನು ಶಕುನಿಯೊಡನೆ ಆಡಿರುವೆ.

ನ ಕುತ್ರಚಿದ್ವಿಧಿರಸ್ಯಾಸ್ತಿ ತೇನ
ನ ತದ್ದತ್ತಂ ದ್ಯೂತಹೃತಂ ವದಂತಿ ।
ಭೀತೇನ ದತ್ತಂ ದ್ಯೂತದತ್ತಂ ತಥೈವ
ದತ್ತಂ ಕಾಮಿನ್ಯೈ ಪುನರಾಹಾರ್ಯಮೇವ ॥೧೦೭॥

ಜೂಜಾಡಲು ಶಾಸ್ತ್ರದಲ್ಲಿ ಎಲ್ಲಿಯೂ ವಿಧಿಯಿಲ್ಲ. ಅದರಿಂದ ಜೂಜಿನಲ್ಲಿ ಅವರು

---

1. ಧರ್ಮಯುಕ್ತಮೇವ ಕ್ರೂರಕರ್ಮ ಚೋರನಾಸಾಕರಕರ್ಣಶಿರಶ್ಛೇದಾದಿಕಂ ಪರೈಃ ಸ್ವಭಟೈರೇವ ಪ್ರಸಾಧನೀಯಂ। ಸ್ವೇನೈವ ಕಾರ್ಯಂ ನ। -ವಾದಿರಾಜೀಯ
2. ನಾರಾಯಣ ದ್ವಿಟ್ ತದನುಬಂಧಿ ನಿಗ್ರಹತ್ವೇನ ಧರ್ಮಸಾಧನಮಪ್ಯನ್ಯತ್ ಕ್ರೂರಂ ಗುರುವಧಾದಿಕಂ ಚೇತ್ ಪರೈಃ ಸಾಧನೀಯಮಿತ್ಯರ್ಥಃ। ಏತಚ್ಚ ದ್ರೋಣಾದಿವಿಷಯಂ । -ತಾಮ್ರಪರ್ಣೀಯ

ಅಪಹರಿಸಿದ ಸೊತ್ತನ್ನು ದತ್ತ ಎನ್ನುವುದಿಲ್ಲ. ಭಯದಿಂದ ಕೊಟ್ಟಿದ್ದು ಜೂಜಿನಲ್ಲಿ ಕೊಟ್ಟಿದ್ದು ವೇಶ್ಯೆಗೆ ಕೊಟ್ಟಿದ್ದು ಇವೆಲ್ಲವೂ ಬಂಧುಗಳು ಹಿಂದೆ ತೆಗೆದುಕೊಳ್ಳಲು ಯೋಗ್ಯವಾಗಿರುತ್ತವೆ.

ಏವಂ ಧರ್ಮಃ ಶಾಶ್ವತೋ ವೈದಿಕೋ ಹಿ
ದ್ಯೂತೇ ಸ್ತ್ರಿಯಾಂ ನಾಲ್ಪಮಾಹಾರ್ಯಮಾಹುಃ।
ಯದ್ಯೇಷಾಂ ವೈ ಭೋಗ್ಯಮಲ್ಪಂ ತದೀಯಂ
ಭೋಗೇನ ತದ್ಬಂಧುಭಿಸ್ತಚ್ಚ ಹಾರ್ಯಂ ॥೧೦೮॥

ನಿವಾರಣೇ ಪುರುಷಸ್ಯ ತ್ವಶಕ್ತೌ
ತದ್ರಾಜ್ಯಂ ನಃ ಪುನರಾಹಾರ್ಯಮೇವ।
ತ್ವಂ ಧರ್ಮನಿಷ್ಠಶ್ಚಾಗ್ರಜಶ್ಚೇತಿ ರಾಜನ್
ಋತೇಽನುಜ್ಞಾಂ ನ ಮಯಾ ತತ್ಕೃತಂ ಚ ॥೧೦೯॥

ಹೀಗೆ ವೇದೋಕ್ತ ಸನಾತನ ಧರ್ಮವಿದೆ. ಜೂಜಿನಲ್ಲಾಗಲಿ ವೇಶ್ಯಾಸ್ತ್ರೀಯ ಕೈಯಲ್ಲಾಗಲಿ ಕೊಟ್ಟಿದ್ದು ಅಲ್ಪವಾಗಿದ್ದರೆ ಹಿಂದೆ ತೆಗೆದುಕೊಳ್ಳಲು ಯೋಗ್ಯವಲ್ಲ. ಕೊಟ್ಟ ಆಸ್ತಿಗೆ ಆ ವ್ಯಕ್ತಿಯ ಬಂಧುಗಳು ವಾರಸುದಾರರಾಗಿದ್ದು ಅವರು ಅವನನ್ನು ಅಶಕ್ತಿಯಿಂದ ತಡೆಯದೆ ಬಿಟ್ಟಿದ್ದರೆ ಆ ಆಸ್ತಿ ಅಲ್ಪವಾಗಿದ್ದರೂ ಹಕ್ಕು ಇರುವುದರಿಂದ ಹಿಂದೆ ಪಡೆಯಬಹುದು. ಅಲ್ಪವಾದ ಭೋಗಕ್ಕೆ ಪ್ರತಿಯಾಗಿ ಬಹುಧನವನ್ನು ವೇಶ್ಯೆಯಾಗಲಿ ಜೂಜುಕೋರನಾಗಲಿ ವಂಚನೆಯಿಂದ ಬಾಲಕನ ಕೈಯಿಂದ ಪಡೆದಿದ್ದರೆ ಅದನ್ನೂ ಹಿಂದೆ ಪಡೆಯಬಹುದು. ಅದರಿಂದ ರಾಜನೆ! ನಮ್ಮ ರಾಜ್ಯವನ್ನು ಈಗಲೂ ನಾವು ಹಿಂತಿರುಗಿ ಪಡೆಯಬಹುದು. ನೀನು ಧರ್ಮನಿಷ್ಠ ಹಿರಿಯನೆಂದು ನಿನ್ನಾಜ್ಞೆ ಇಲ್ಲದೆ ನಾನು ಆ ಕಾರ್ಯವನ್ನು ಮಾಡಲಿಲ್ಲ.

ಜೂಜಿನಲ್ಲಾಗಲಿ ವೇಶ್ಯೆಯರಿಗಾಗಲಿ ಕೊಟ್ಟಿದ್ದು ಅಲ್ಪವಾದರೂ ಅದಕ್ಕೆ ಬಂಧುಗಳು ಹಕ್ಕುದಾರರಾಗಿದ್ದಲ್ಲಿ ಹಿಂದೆ ಪಡೆಯಬಹುದು. ಇನ್ನು ಅದು ಮಹತ್ತಾಗಿದ್ದರೆ ಏನು ಹೇಳಬೇಕು?

ನೀನು ಧರ್ಮನಿಷ್ಠ ಹಿರಿಯನಾದ್ದರಿಂದ ನಾನು ನಿನ್ನನ್ನು ತಡೆಯಲು ಶಕ್ತನಾಗಲಿಲ್ಲ. ಶಕ್ತನಾಗಿದ್ದೂ ತಡೆಯದಿರುತ್ತಿದ್ದರೆ ಆಗ ನನ್ನ ಅನುಮತಿ ಇತ್ತೆಂದಾಗುವುದರಿಂದ ಕೈಬಿಟ್ಟು ಹೋದ ರಾಜ್ಯವನ್ನು ಹಿಂತಿರುಗಿ ಪಡೆಯಲಾಗುತ್ತಿದ್ದಿಲ್ಲ. ಅಶಕ್ತಿಯಿಂದಲೆ ತಡೆಯದೆ ಬಿಟ್ಟ ಪ್ರಯುಕ್ತ ನಾವು ನಮ್ಮ ರಾಜ್ಯವನ್ನು ಹಿಂದೆ ಪಡೆಯಬಹುದು ಎನ್ನುತ್ತಾನೆ ಭೀಮ.

ದಾತಾಸ್ಯನುಜ್ಞಾಂ ಯದಿ ತಾನ್ ನಿಹತ್ಯ
ತ್ವಯ್ಯೇವ ರಾಜ್ಯಂ ಸ್ಥಾಪಯಾಮ್ಯದ್ಯ ಸಮ್ಯಕ್।

ಸತ್ಯಂ ಪಾಪೇಷ್ವಪಿ ಕರ್ತುಂ ಯದೀಚ್ಛಾ
ತಥಾಪಿ ಮಾಸಾ ದ್ವಾದಶ ನಃ ಪ್ರಯಾತಾಃ ॥೧೧೦॥

ಈಗಲೂ ನೀನು ಅನುಮತಿ ಇತ್ತರೆ ಆ ಶತ್ರುಗಳನ್ನು ಸಂಹರಿಸಿ ರಾಜ್ಯವನ್ನು ಚೆನ್ನಾಗಿ ನಿನ್ನ ವಶದಲ್ಲಿ ತಂದಿರಿಸುತ್ತೇನೆ. ಪಾಪಿಗಳಲ್ಲಿಯೂ ನೀನು ಕೊಟ್ಟ ಮಾತನ್ನು ಉಳಿಸಲು ಬಯಸುವಿಯಾದರೆ ಅದಕ್ಕೂ ಮಾರ್ಗವಿದೆ. ನಮಗೆ ಈಗಾಗಲೆ ವನವಾಸದಲ್ಲಿ ಹನ್ನೆರಡು ತಿಂಗಳು ಕಳೆದಿವೆ.

ವೇದಪ್ರಾಮಾಣ್ಯಾದ್ ವತ್ಸರಾಸ್ತೇ ಹಿ ಮಾಸ್ಯೈಃ
ಸಹಸ್ರಾಬ್ದಂ ಸತ್ರಮುಕ್ತಂ ನರಾಣಾಂ ।
ಅಜ್ಞಾತಮೇಕಂ ಮಾಸಮುಷ್ಯಾಥ ಶತ್ರೂನ್
ನಿಹತ್ಯ ರಾಜ್ಯಂ ಪ್ರತಿಪಾದಯಾಮಃ ॥೧೧೧॥

ಸಾವಿರ ವರ್ಷಗಳ ಸತ್ರಯಾಗವನ್ನು ಮನುಷ್ಯರಿಗೆ ಸಾವಿರ ತಿಂಗಳಲ್ಲಿ ಮಾಡಲು ವೇದದಲ್ಲಿ ಹೇಳಿರುವುದರಿಂದ ಆ ವೇದ ಪ್ರಾಮಾಣ್ಯದ ಆಧಾರದಿಂದ ನಾವು ಕಳೆದ ಹನ್ನೆರಡು ತಿಂಗಳು ಹನ್ನೆರಡು ವರ್ಷಗಳೇ ಆದುವು. ಇನ್ನು ಒಂದು ತಿಂಗಳು ಅಜ್ಞಾತವಾಸ ಮಾಡಿ ಶತ್ರುಗಳನ್ನು ಸಂಹರಿಸಿ ರಾಜ್ಯವನ್ನು ತಂದುಕೊಡುತ್ತೇವೆ.

'ಯೋ ಮಾಸಃ ಸ ಸಂವತ್ಸರಃ' ಮಾಸವು ಸಂವತ್ಸರಕ್ಕೆ ಪ್ರತಿನಿಧಿಯಾಗಬಲ್ಲುದು ಎಂದು ವೇದವಚನವಿದೆ. ಯಜ್ಞಗಳಲ್ಲಿ ಆಹುತಿಗೆ ಸೋಮಲತೆ ಸಿಗದಿದ್ದಾಗ ಅದಕ್ಕೆ ಪ್ರತಿನಿಧಿಯಾಗಿ ಅಮೃತಬಳ್ಳಿಯನ್ನು ಉಪಯೋಗಿಸಬಹುದು. 'ಸೋಮಾಭಾವೇ ಪೂತೀಕಾನಭಿಷುಣುಯಾತ್' ಎಂದು ವೇದ ಹೇಳಿದೆ. ಅದರಂತೆ, ಪರಮಾವಧಿ ನೂರು ವರ್ಷ ಬಾಳುವ ಮಾನವರಿಗೆ ಸಾವಿರ ವರ್ಷಗಳ ಸತ್ರ ಶಕ್ಯವಲ್ಲ. ಅದನ್ನು ವಿಧಿಸುವ ವೇದ ಅಶ್ಯಕವಾದ ಕರ್ಮವನ್ನು ವಿಧಿಸುವುದರಿಂದ ಅಪ್ರಮಾಣವಾದೀತು. ವೇದಪ್ರಾಮಾಣ್ಯ ಉಳಿಯಬೇಕಾದರೆ 'ಸಾವಿರಾರು ವರ್ಷ ಕಾಲ ಯಾಗ ಮಾಡುವುದು ಅಶಕ್ಯವಿದ್ದಲ್ಲಿ ಸಾವಿರ ತಿಂಗಳ ಕಾಲವಾದರೂ ಯಾಗ ಮಾಡಬಹುದು; ಸಾವಿರ ವರ್ಷ ಸತ್ರದ ಫಲ ದೊರಕುವುದೆಂ' ದು ವೇದಕ್ಕೆ ಅಭಿಪ್ರಾಯ ಹೇಳಬೇಕು. ಪ್ರಕೃತದಲ್ಲಿ ಹನ್ನೆರಡು ವರ್ಷ ವನವಾಸದ ಒಂದು ವರ್ಷ ಅಜ್ಞಾತವಾಸದ ಮಾತು ಕೊಟ್ಟಿದ್ದರೂ ದುಷ್ಟರಿಗೆ ಕೊಟ್ಟ ಮಾತೆಂದು ನಡೆಸದಿರಬಹುದು. ನಡೆಸುವುದಾದರೂ ಪ್ರತಿನಿಧಿಯಾಗಿ ಹನ್ನೆರಡು ತಿಂಗಳ ವನವಾಸ ಒಂದು ತಿಂಗಳ ಅಜ್ಞಾತವಾಸ ಮಾಡಿದರೆ ಸಾಕು ಎನ್ನುತ್ತಾನೆ ಭೀಮ.

ಮಾ ಮಿತ್ರಾಣಾಂ ತಾಪಕಸ್ತ್ವಂ ಭವೇಥಾ
ಸ್ತಥಾಮಿತ್ರಾಣಾಂ ನಂದಕಶ್ಚೈವ ರಾಜನ್ ।

ಜ್ವಲಸ್ವಾರೀಣಾಂ ಮೂರ್ಧ್ನಿ ಮಿತ್ರಾಣಿ ನಿತ್ಯ-
ಮಾಹ್ಲಾದಯನ್ವಾಸುದೇವಂ ಭಜಸ್ವ ॥೧೧೨॥

ರಾಜನೆ, ಮಿತ್ರ ರಾಜರಿಗೆ ದುಃಖದಾಯಕನಾಗಬೇಡ, ಶತ್ರುರಾಜರಿಗೆ ಸುಖದಾಯಕನಾಗಬೇಡ. ಶತ್ರುಗಳ ತಲೆಯಲ್ಲಿ ಬೆಂಕಿಯಂತೆ ಪ್ರಜ್ವಲಿಸು, ಮಿತ್ರರನ್ನು ಸುಖಪಡಿಸುತ್ತ ಶ್ರೀಹರಿಯನ್ನು ಆರಾಧಿಸು.

ಮಿತ್ರರಾಜರಿಗೆ ಸಂತೋಷ ನೀಡುತ್ತ ಶತ್ರುರಾಜರಿಗೆ ಬೆಂಕಿಯಾಗುವುದು ವಿಷ್ಣುಪೂಜೆಯೆ. ಹಾಗೆಮಾಡದೆ ದ್ರುಪದಾದಿ ಮಿತ್ರರಿಗೆ ವ್ಯಥೆ ನೀಡುತ್ತ ದುರ್ಯೋಧನ ಮುಂತಾದ ಶತ್ರುಗಳಿಗೆ ವಶನಾಗಿದ್ದು ಅವರಿಗೆ ಸಂತೋಷ ನೀಡುತ್ತಿ. ಇದು ಹರಿಗೆ ಸರ್ವಥಾ ಪ್ರಿಯವಾಗುವುದಿಲ್ಲ. ನಾನು ರಾಜ್ಯಲೋಭದಿಂದ ವಾದ ಮಾಡುತ್ತಿಲ್ಲ. ವಿಷ್ಣು ಪೂಜೆಯಾಗಲೆಂದು ಮಾತ್ರ ಬಯಸುತ್ತೇನೆ.

ಸ್ವತಂತ್ರತ್ವಂ ವಾಸುದೇವಸ್ಯ ಸಮ್ಯಕ್
ಪ್ರತ್ಯಕ್ಷತೋ ದೃಶ್ಯತೇ ಹ್ಯದ್ಯ ರಾಜನ್ ।
ಯಸ್ಮಾತ್ಕೃಷ್ಣೋ ವ್ಯಜಯಚ್ಛಂಕರಾದೀನ್
ಜರಾಸುತಾದೀನ್ ಕಾದಿವರೈರಜೇಯಾನ್ ॥೧೧೩॥

ರಾಜನೇ, ಶ್ರೀಹರಿ ಸ್ವತಂತ್ರನೆಂಬುದು ನಮಗೆ ಈಗಲೆ ಚೆನ್ನಾಗಿ ಪ್ರತ್ಯಕ್ಷ ಕಾಣುತ್ತದೆ. ಏಕೆಂದರೆ ರುದ್ರಾದಿಗಳನ್ನೂ ಬ್ರಹ್ಮಾದಿಗಳ ವರಬಲದಿಂದ ಅಜೇಯರಾದ ಜರಾಸಂಧಾದಿಗಳನ್ನೂ ಶ್ರೀಕೃಷ್ಣ ಗೆದ್ದಿದ್ದಾನೆ.

ಪಾರಿಜಾತಾಪಹರಣ ಕಾಲದಲ್ಲಿ ಶ್ರೀಕೃಷ್ಣ ರುದ್ರಾದಿಗಳನ್ನು ಗೆದ್ದುದು ಪ್ರಸಿದ್ಧವಾಗಿದೆ. ರೈವತಪರ್ವತದಲ್ಲಿ ಎಲ್ಲ ರಾಜರು ನೆರೆದಿದ್ದಾಗ ಕುಂತಿಯ ಪ್ರಾರ್ಥನೆಯಂತೆ ಕ್ರೀಡಾಯುದ್ಧದಲ್ಲಿ ಬ್ರಹ್ಮಾದಿಗಳ ವರದಿಂದ ಅಜೇಯರಾದ ಜರಾಸಂಧಾದಿಗಳನ್ನು ಗೆದ್ದುದೂ ಪ್ರತ್ಯಕ್ಷ ಸಿದ್ಧವಾಗಿದೆ. ಅದರಿಂದ ಅವನೇ ಸ್ವತಂತ್ರ.

ಬ್ರಹ್ಮಾದೀನಾಂ ಪ್ರಕೃತೇಸ್ತದ್ವಶತ್ವಂ
ದೃಷ್ಟಂ ಹಿ ನೋ ಬಹುಶೋ ವ್ಯಾಸದೇಹೇ ।
ಪಾರಾಶರ್ಯೋ ದಿವ್ಯದೃಷ್ಟಿಂ ಪ್ರದಾಯ
ಸ್ವಾತಂತ್ರ್ಯಂ ನೋಽದರ್ಶಯತ್ಸರ್ವಲೋಕೇ ॥೧೧೪॥

ಬ್ರಹ್ಮಾದಿಗಳು ಮಹಾಲಕ್ಷ್ಮಿಯ ಅಧೀನರು. ಮಹಾಲಕ್ಷ್ಮಿ ಶ್ರೀಹರಿಗೆ ಅಧೀನಳು ಎಂಬುದು ಅನೇಕ ಬಾರಿ ವೇದವ್ಯಾಸರೂಪಿ ಹರಿಯಲ್ಲಿ ಕಂಡಿದೆ. ವೇದವ್ಯಾಸರು ನಮಗೆ

ಅನೇಕಬಾರಿ ದಿವ್ಯದೃಷ್ಟಿ ಕೊಟ್ಟು ಸಕಲ ಲೋಕದ ವಿಷಯದಲ್ಲಿ ತನಗಿರುವ ಸ್ವಾತಂತ್ರ್ಯವನ್ನು ಪ್ರತ್ಯಕ್ಷ ತೋರಿಸಿದ್ದಾರೆ.

ತಸ್ಮಾದ್ರಾಜನ್ನಭಿನಿರ್ಯಾಹಿ ಶತ್ರೂನ್
ಹಂತುಂ ಸರ್ವಾನ್ಭೋಕ್ತುಮೇವಾಧಿರಾಜ್ಯಂ।
ಏವಂ ಚ ತೇ ಕೀರ್ತಿಧರ್ಮೌ ಮಹಾಂತೌ
ಪ್ರಾಪ್ಸ್ಯೌ ರಾಜನ್ವಾಸುದೇವಪ್ರಸಾದಾತ್ ॥೧೧೫॥

ಅದರಿಂದ ರಾಜನೆ, ಎಲ್ಲ ಶತ್ರುಗಳನ್ನು ಸಂಹರಿಸುವುದಕ್ಕೆ, ಎಲ್ಲ ರಾಜ್ಯವನ್ನು ಭೋಗಿಸುವುದಕ್ಕೆ ಹೊರಡು. ರಾಜನೆ, ನಾನು ಹೇಳುವಂತೆ ಮಾಡಿದರೆ ನಿನಗೆ ಹರಿಯ ಅನುಗ್ರಹದಿಂದ ಮಹತ್ತಾದ ಕೀರ್ತಿ ಪುಣ್ಯಗಳು ಲಭಿಸುವುವು.

ಧರ್ಮರಾಜನ ಪ್ರತಿಜ್ಞೆ

ಏವಮುಕ್ತೋಽಬ್ರವೀದ್ಭೀಮಂ ಧರ್ಮಪುತ್ರೋ ಯುಧಿಷ್ಠಿರಃ।
ತ್ರಯೋದಶಾಬ್ದಸ್ಯಾಂತೇಽಹಂ ಕುರ್ಯಾಮೇವ ತ್ವದೀರಿತಂ ॥೧೧೬॥

ಭೀಮ ಹೀಗೆ ಹೇಳಿದಾಗ ಧರ್ಮಪುತ್ರ ಯುಧಿಷ್ಠಿರ ಭೀಮನಿಗೆ ಹೇಳಿದ. 'ನೀನು ಹೇಳಿದ್ದನ್ನು ನಾನು ಹದಿಮೂರು ವರ್ಷಗಳ ಕೊನೆಯಲ್ಲಿ ಮಾಡುವೆನು'.

ಸತ್ಯಮೇತನ್ನ ಸಂದೇಹಃ ಸತ್ಯೇನಾತ್ಮಾನಮಾಲಭೇ।
ಲೋಕಾಪವಾದಭೀರುಂ ಮಾ ನಾತೋಽನ್ಯದ್ವಕ್ತುಮರ್ಹಸಿ ॥೧೧೭॥

'ಇದು ಸತ್ಯ. ಸಂಶಯವಿಲ್ಲ. ನನ್ನಾಣೆ ಇದೆ. ಲೋಕಾಪವಾದಕ್ಕೆ ಅಂಜುತ್ತಿರುವ ನನ್ನ ಮುಂದೆ ಇನ್ನು ಬೇರೆ ಏನೂ ಹೇಳಬೇಡ.'

ತುದಸೇ ಚಾತಿವಾಚಾ ಮಾಂ ಯದ್ಯೇವಂ ಭೀಮ ಮಾಂ ವದೇಃ।
ತದೈವ ಮೇಽತ್ಯಯಃ ಕಾರ್ಯೋ ಹಂತವ್ಯಾಶ್ಚೈವ ಶತ್ರವಃ।
ನೈತಾದೃಶೈರಿದಾನೀಂ ತು ವಾಕ್ಯೈರ್ಬಾಧಿತುಮರ್ಹಸಿ ॥೧೧೮॥

ನಾನು ಹೀಗೆ ಆಣೆ ಇಟ್ಟು ಹೇಳಿದಾಗಲೂ ನೀನು ಹೀಗೇ ಹೇಳುತ್ತಿದ್ದರೆ ಕ್ರೂರವಾದ ಮಾತಿನಿಂದ ನನಗೆ ನೋವು ಉಂಟು ಮಾಡುವಿ. ನೀನು ಅಂದೇ ನನ್ನನ್ನು ತಿರಸ್ಕರಿಸಿ ಶತ್ರುಗಳನ್ನು ಕೊಲ್ಲಬೇಕಾಗಿತ್ತು. ಈಗ ನೀನು ಇಂಥ ಮಾತುಗಳಿಂದ ನನ್ನನ್ನು ನೋಯಿಸುವುದು ಯುಕ್ತವಲ್ಲ.

ಭೀಷ್ಮದ್ರೋಣಾದಯೋಽಸ್ತ್ರಜ್ಞಾ ನಿವಾರ್ಯಾಶ್ಚ ಕಥಂ ಯುಧಿ।
ಪೂಜ್ಯಾಸ್ತೇ ಬಾಹುಯುದ್ಧೇನ ನ ನಿವಾರ್ಯಾಃ ಕಥಂಚನ ॥೧೧೯॥

ಭೀಷ್ಮದ್ರೋಣ ಮುಂತಾದವರು ಅಸ್ತ್ರಜ್ಞರು. ಅವರನ್ನು ಯುದ್ಧದಲ್ಲಿ ಇದಿರಿಸುವುದು

ಹೇಗೆ ಸಾಧ್ಯ? ಅವರು ಪೂಜ್ಯರು. ಬಾಹುಯುದ್ಧದಿಂದ ಯಾವ ರೀತಿಯಿಂದಲೂ ಅವರನ್ನು ಇದಿರಿಸಲಾಗದು.

ಅಸ್ತ್ರಾಣಿ ಜಾನನ್ನಪಿ ಹಿ ಪ್ರಯೋಜಯಸಿ ನ ಕ್ವಚಿತ್ ।
ತಸ್ಮಾತ್ತದೈವ ಗಂತವ್ಯಂ ವಿಜ್ಞಾತಾಸ್ತ್ರೇ ಧನಂಜಯೇ ॥೧೨೦॥

ನೀನು ಅಸ್ತ್ರಗಳನ್ನು ತಿಳಿದವನಾದರೂ ಅವುಗಳನ್ನು ಎಲ್ಲಿಯೂ ಪ್ರಯೋಗಿಸುವುದಿಲ್ಲ. ಅದರಿಂದ ಅರ್ಜುನ ಅಸ್ತ್ರಗಳನ್ನು ತಿಳಿದಾಗಲೆ, ಹದಿಮೂರು ವರ್ಷ ದಾಟಿದಾಗಲೆ ನಾವು ಯುದ್ಧಕ್ಕೆ ಹೋಗಬೇಕು.

ಇತ್ಯುಕ್ತೋ ಭೀಮಸೇನಸ್ತು ಸ್ನೇಹಭಂಗಭಯಾತ್ತತಃ ।
ನೋವಾಚ ಕಿಂಚಿದ್ವಚನಂ ಸ್ವಾಭಿಪ್ರೇತಮವಾಪ್ಯ ಚ ॥೧೨೧॥

ಹೀಗೆ ಧರ್ಮರಾಜ ಹೇಳಿದಾಗ ಭೀಮ ತಾನು ಇನ್ನೂ ಹೆಚ್ಚು ಮಾತನಾಡಿದರೆ ಸೋದರ ಸ್ನೇಹಕ್ಕೆ ಕುಂದು ಬಂದೀತೆಂಬ ಭಯದಿಂದ ಮತ್ತು ತನ್ನ ಉದ್ದೇಶ ಈಗಾಗಲೆ ನೆರವೇರಿದೆ ಎನ್ನುವ ತೃಪ್ತಿಯಿಂದ ಏನೂ ಹೇಳಲಿಲ್ಲ.

ಅಭಿಪ್ರಾಯೋ ಹಿ ಭೀಮಸ್ಯ ನಿಶ್ಚಯೇನ ತ್ರಯೋದಶೇ ।
ಯುಧಿಷ್ಠಿರಸ್ಯ ರಾಜ್ಯಾರ್ಥಂ ಗಮನಾರ್ಥೇ ಪ್ರತಿಶ್ರವಃ ॥೧೨೨॥

ಧರ್ಮರಾಜ ಹದಿಮೂರು ವರ್ಷದ ನಂತರವಾದರೂ ರಾಜ್ಯಕ್ಕಾಗಿ ಯುದ್ಧಮಾಡುವ ಬಗ್ಗೆ ಪ್ರತಿಜ್ಞೆ ಮಾಡಬೇಕೆಂಬುದೇ ಭೀಮನ ಉದ್ದೇಶವಾಗಿತ್ತು.

ಅನ್ಯಥಾತಿಮೃದುತ್ವಾತ್ಸ ನ ಗಚ್ಛೇದ್ ಭಿನ್ನಧೀಃ ಪರೈಃ ।
ಕೃತಕೃತ್ಯೇ ತದಾ ಭೀಮೇ ಸ್ಥಿತೇ ಧರ್ಮಾತ್ಮಜೋ ಹಿ ಸಃ ॥೧೨೩॥
ಭೀಷ್ಮದ್ರೋಣಾದಿವಿಜಯಃ ಕಥಂ ಸ್ಯಾದಿತಿ ಚಿಂತಯನ್ ।
ನಿವಾರಣಂ ಗುರೂಣಾಂ ಹಿ ಭೀಮ ಇಚ್ಛತಿ ನ ಕ್ವಚಿತ್ ॥೧೨೪॥
ತಸ್ಮಾತ್ತೇ ಹ್ಯರ್ಜುನೇನೈವ ನಿವಾರ್ಯಾ ಇತ್ಯಚಿಂತಯತ್ ।
ಆಪದ್ಯೇವ ಹಿ ಭೀಮಸ್ತಾನ್ನಿವಾರಯತಿ ನಾನ್ಯಥಾ ॥೧೨೫॥

ಇಲ್ಲದಿದ್ದರೆ ಮೃದುಸ್ವಭಾವದಿಂದಾಗಿ ಧರ್ಮರಾಜ ಶತ್ರುಗಳ ಮಾತುಗಳಿಂದ ಬುದ್ಧಿ ಪರಿವರ್ತನ ಹೊಂದಿ ಯುದ್ಧಪ್ರವೃತ್ತಿಯನ್ನು ಕೈಬಿಡಬಹುದು ಎಂದು ಭೀಮನಿಗೆ ಚಿಂತೆಯಾಗಿತ್ತು. ಈ ರೀತಿ ಭೀಮ ಕೃತಕೃತ್ಯನಾಗಿ ಕುಳಿತಾಗ ಧರ್ಮರಾಜ ಭೀಷ್ಮ ದ್ರೋಣಾದಿಗಳನ್ನು ಗೆಲ್ಲುವುದು ಹೇಗೆ ಎಂದು ಚಿಂತಿಸಿದ. ಗುರುಹಿರಿಯರನ್ನು ಇದಿರಿಸುವುದನ್ನು ಭೀಮ ಎಲ್ಲೂ ಇಷ್ಟಪಡುವುದಿಲ್ಲ. ಅದರಿಂದ ಅರ್ಜುನನೆ ಇದಿರಿಸಬೇಕಾಗುತ್ತದೆ ಎಂದು ಚಿಂತಿಸಿದ. ಆಪತ್ಕಾಲದಲ್ಲಿ ಮಾತ್ರ ಭೀಮ ಗುರುಹಿರಿಯರನ್ನು ಇದಿರಿಸುತ್ತಾನೆ ಹೊರತು ಬೇರೆ ಸಮಯದಲ್ಲಿ ಅಲ್ಲ.

ಧರ್ಮರಾಜ ತನ್ನ ಚಿಂತೆಯನ್ನು ಭೀಮನ ಮುಂದೆ ಹೇಳಿಕೊಂಡು 'ನನಗೆ ಈ ಚಿಂತೆಯಲ್ಲಿ ನಿದ್ದೆಯೆ ಬರುತ್ತಿಲ್ಲ' ಎನ್ನುತ್ತಾನೆ.

ವೇದವ್ಯಾಸರಿಂದ ಮಂತ್ರೋಪದೇಶ

ಏವಂ ಚಿಂತಾಸಮಾವಿಷ್ಟಂ ವಿಜ್ಞಾಯೈವ ಯುಧಿಷ್ಠಿರಂ ।
ಸರ್ವಜ್ಞಃ ಸರ್ವಶಕ್ತಿಶ್ಚ ಕೃಷ್ಣದ್ವೈಪಾಯನೋಽಗಮತ್ ।
ನೃಪತಿಂ ಬೋಧಯಾಮಾಸ ಚಿಂತಾವ್ಯಾಕುಲಮಾನಸಂ ॥೧೨೬॥

ಹೀಗೆ ಚಿಂತಾಮಗ್ನನಾಗಿದ್ದಾನೆ ಧರ್ಮರಾಜ ಎಂದು ತಿಳಿದೇ ಸರ್ವಜ್ಞರಾದ ಸರ್ವಶಕ್ತರಾದ ವೇದವ್ಯಾಸರು ಅವನ ಬಳಿಗೆ ಹೋದರು. ಚಿಂತೆಯಿಂದ ವ್ಯಾಕುಲಚಿತ್ತನಾದ ರಾಜನಿಗೆ ಬೋಧಿಸಿದರು.

ಇಮಂ ಮಂತ್ರಂ ವದಿಷ್ಯಾಮಿ ಯೇನ ಜೇಷ್ಯತಿ ಫಲ್ಗುನಃ ।
ಭೀಷ್ಮದ್ರೋಣಾದಿಕಾನ್‌ಸರ್ವಾಂಸ್ತಂ ತ್ವಂ ವದ ಧನಂಜಯೇ ॥೧೨೭॥

ನಿನಗೆ ಒಂದು ಮಂತ್ರವನ್ನು ಉಪದೇಶಿಸುತ್ತೇನೆ. ಅದನ್ನು ನೀನು ಅರ್ಜುನನಿಗೆ ಉಪದೇಶಿಸು. ಅದರಿಂದ ಅರ್ಜುನ ಭೀಷ್ಮದ್ರೋಣಾದಿಗಳೆಲ್ಲರನ್ನೂ ಪರಾಭವಗೊಳಿಸುತ್ತಾನೆ.

ಇತ್ಯುಕ್ತ್ವಾವದನ್ಮಂತ್ರಂ ಸರ್ವದೈವತದೃಷ್ಟಿದಂ ।
ನ ಸ್ವಯಂ ಹ್ಯವದತ್ ಪಾರ್ಥೇ ಫಲಾಧಿಕ್ಯಂ ಯತೋ ಭವೇತ್ ॥೧೨೮॥

ಹೀಗೆ ಹೇಳಿ ವೇದವ್ಯಾಸರು ಎಲ್ಲ ದೇವತೆಗಳ ಪ್ರತ್ಯಕ್ಷವನ್ನು ನೀಡಬಲ್ಲ ಮಂತ್ರವನ್ನು ಧರ್ಮರಾಜನಿಗೆ ಉಪದೇಶಿಸಿದರು. ತಾನೇ ಅರ್ಜುನನಿಗೆ ಉಪದೇಶಿಸಲಿಲ್ಲ, ತಾನೇ ಉಪದೇಶಿಸಿದ್ದರೆ ಅದರ ಫಲ ಜಾಸ್ತಿಯಾಗುತ್ತಿತ್ತು.

ಈ ಮಂತ್ರಕ್ಕೆ ಪ್ರತಿಸ್ಮೃತಿ ಎಂದು ಹೆಸರು. ಇದರ ಬಲದಿಂದ ರುದ್ರ ಇಂದ್ರ ಲೋಕಪಾಲಕರು ಎಲ್ಲರೂ ಒಲಿದು ಬಂದು ಅಸ್ತ್ರಮಂತ್ರ ಉಪದೇಶಿಸುತ್ತಾರೆ. ಅದರಿಂದ ಅರ್ಜುನ ಭೀಷ್ಮದ್ರೋಣಾದಿಗಳೆಲ್ಲರನ್ನೂ ಪರಾಭವಗೊಳಿಸಲು ಶಕ್ತನಾಗುತ್ತಾನೆ.

ಭೀಷ್ಮದ್ರೋಣಾದಿವಿಜಯ ಏತಾವದ್ ವೀರ್ಯಮೇವ ಹಿ ।
ಅಲಂ ನಾತೋಽಧಿಕಂ ಕಾರ್ಯಮೇತಾವದ್ ಯೋಗ್ಯಮಸ್ಯ ಚ ।
ಫಲ್ಗುನಸ್ಯೇತಿ ಭಗವಾನ್ ನ ಸ್ವಯಂ ಹ್ಯವದನ್ಮನುಂ ॥೧೨೯॥

ಭೀಷ್ಮದ್ರೋಣಾದಿಗಳನ್ನು ಗೆಲ್ಲುವುದಕ್ಕೆ ಇಷ್ಟು ಶಕ್ತಿ ಇದ್ದರೆ ಸಾಕು. ಇದಕ್ಕಿಂತ ಹೆಚ್ಚು ಏನು ಮಾಡಬೇಕಾದುದಿಲ್ಲ. ಇಷ್ಟು ಮಾಡುವುದು ಮಾತ್ರ ಅರ್ಜುನನಿಗೆ ಯೋಗ್ಯ ಎಂದು ಭಗವಾನ್ ವ್ಯಾಸರು ತಾನು ಸ್ವತಃ ಅವನಿಗೆ ಮಂತ್ರವನ್ನು ಉಪದೇಶಿಸಲಿಲ್ಲ.

ಗತೇ ವ್ಯಾಸೇ ಭಗವತಿ ಸರ್ವಜ್ಞೇ ಸರ್ವಕರ್ತರಿ ।

ಧರ್ಮರಾಜೋಽವದನ್ಮಂತ್ರಂ ಫಲ್ಗುನಾಯ ರಹಸ್ಯಮುಂ ॥೧೩೦॥

ಸರ್ವಜ್ಞ ಸರ್ವಕರ್ತರಾದ ಭಗವಾನ್ ವೇದವ್ಯಾಸರು ಹೊರಟು ಹೋದ ಬಳಿಕ ಧರ್ಮರಾಜ ಏಕಾಂತದಲ್ಲಿ ಅರ್ಜುನನಿಗೆ ಆ ಮಂತ್ರವನ್ನು ಉಪದೇಶಿಸಿದ.

ವೇದವ್ಯಾಸರು ಹೊರಟುಹೋದ ಬಳಿಕ ಧರ್ಮರಾಜ ದ್ವೈತವನವನ್ನು ಬಿಟ್ಟು ಕಾಮ್ಯಕವನಕ್ಕೆ ಹೋಗಿ ಅಲ್ಲಿ ಅರ್ಜುನನಿಗೆ ಮಂತ್ರವನ್ನು ಉಪದೇಶಿಸಿದ. ಹಿಮಾಲಯಕ್ಕೆ ಹೋಗಿ ಇಂದ್ರನನ್ನು ಸೇರು ಎಂದ.

ಕಿರಾತಾರ್ಜುನ ಯುದ್ಧ

ತಮಾಪ್ಯ ಫಲ್ಗುನೋ ಮಂತ್ರಂ ಯಯೌ ಜ್ಯೇಷ್ಠೌ ಪ್ರಣಮ್ಯ ಚ ॥೧೩೧॥
ಯಮಜೌ ಚ ಸಮಾಶ್ಲಿಷ್ಯ ಗಿರಿಮೇವೇಂದ್ರಕೀಲಕಂ ॥೧೩೨॥
ತಪಶ್ಚಚಾರ ತತ್ರಸ್ಥಃ ಶಂಕರಸ್ಥಂ ಹರಿಂ ಸ್ಮರನ್ ।
ಷಣ್ಮಾಸೇಽತಿಗತೇಽಪಶ್ಯನ್ಮೂಕಂ ನಾಮಾಸುರಂ ಗಿರೌ ॥೧೩೩॥

ಅರ್ಜುನ ಮಂತ್ರೋಪದೇಶ ಪಡೆದು ಅಣ್ಣಂದಿರನ್ನು ನಮಿಸಿ ನಕುಲ ಸಹದೇವರನ್ನೂ ಆಲಿಂಗಿಸಿ ಇಂದ್ರಕೀಲಕಪರ್ವತಕ್ಕೆ ಹೋದ. ಅಲ್ಲಿದ್ದು ಶಿವಾಂತರ್ಗತನಾದ ಹರಿಯನ್ನು ಸ್ಮರಿಸುತ್ತ ತಪಸ್ಸು ಮಾಡಿದ. ಆರು ತಿಂಗಳು ಕಳೆದಾಗ ಮೂಕನೆಂಬ ಅಸುರನನ್ನು ಬೆಟ್ಟದಲ್ಲಿ ಕಂಡ.

ಅರ್ಜುನ ಹಿಮಾಲಯದ ಗಂಧಮಾದನವೆಂಬ ಶಿಖರವನ್ನು ದಾಟಿ ಇಂದ್ರಕೀಲ ಪರ್ವತಕ್ಕೆ ನಡೆದ. ಅಲ್ಲಿಗೆ ಇಂದ್ರ ಬ್ರಾಹ್ಮಣ ವೇಷದಿಂದ ಬಂದು ಅರ್ಜುನನ ಮನೋದಾರ್ಢ್ಯವನ್ನು ಪರೀಕ್ಷಿಸಿ ತೃಪ್ತನಾಗಿ ಶಿವನನ್ನು ಅಂದರೆ ಶಿವಾಂತರ್ಗತನಾದ ಹರಿಯನ್ನು ಕುರಿತು ತಪಸ್ಸು ಮಾಡು ಎಂದ. ಅರ್ಜುನ ಮೊದಲಿಗೆ ಒಂದು ತಿಂಗಳಕಾಲ ಮೂರು ದಿನಗಳಿಗೊಮ್ಮೆಯೂ ಬಳಿಕ ಎರಡನೆ ತಿಂಗಳಲ್ಲಿ ಆರು ದಿನಗಳಿಗೊಮ್ಮೆಯೂ ಮೂರನೇ ತಿಂಗಳಲ್ಲಿ ಹದಿನೈದು ದಿನಗಳಿಗೊಮ್ಮೆಯೂ ಹಣ್ಣು ಎಲೆಗಳನ್ನು ತಿನ್ನುತ್ತ ತಪಸ್ಸು ಮಾಡಿದ. ನಾಲ್ಕನೆ ತಿಂಗಳಲ್ಲಿ ಬರಿ ಗಾಳಿ ಸೇವನೆ ಮಾಡಿದ. ಎರಡು ಕೈಗಳೆತ್ತಿ ಪಾದಾಂಗುಷ್ಠದ ಮೇಲೆ ನಿಂತು ಘೋರತಪ ಗೈದ. ಮುನಿಗಳು ಕೈಲಾಸಕ್ಕೆ ಹೋಗಿ ಶಿವನನ್ನು ಬೇಡಿದರು. ಅದೇ ಸಮಯದಲ್ಲಿ ಮೂಕಾಸುರ ಅರ್ಜುನನ್ನು ಕೊಲ್ಲಲು ಹೊಂಚು ಹಾಕುತ್ತಿದ್ದ. ಹಂದಿಯ ರೂಪದಿಂದ ಅಕಸ್ಮಾತ್ ಅರ್ಜುನನ ಕಣ್ಣಿಗೆ ಬಿದ್ದ.

ವರಾಹರೂಪಮಾಯಾತಂ ವಧಾರ್ಥಂ ಫಲ್ಗುನಸ್ಯ ಚ ।
ತಂ ಜ್ಞಾತ್ವಾ ಫಲ್ಗುನೋ ವೀರಃ ಸಜ್ಯಂ ಕೃತ್ವಾ ಚ ಗಾಂಡಿವಂ ॥೧೩೪॥
ಚಿಕ್ಷೇಪ ವಜ್ರಸಮಿತಾಂಸ್ತತ್ಕಾಯೇ ಸಾಯಕಾನ್ ಬಹೂನ್ ॥೧೩೫॥

ಹಂದಿಯ ರೂಪತಾಳಿ ಅರ್ಜುನನನ್ನು ಕೊಲ್ಲಲು ಬರುತ್ತಿದ್ದ ಮೂಕಾಸುರನನ್ನು ವೀರ ಅರ್ಜುನ ನೋಡಿ ಗಾಂಡೀವವನ್ನು ಹೆದೆಯೇರಿಸಿ ವಜ್ರಸಮಾನವಾದ ಅನೇಕ ಬಾಣಗಳನ್ನು ಅವನ ಮೈ ಮೇಲೆ ಎಸೆದ.

ಶಿವ ಪಾರ್ವತೀಸಮೇತನಾಗಿ ಗಣಗಳೊಂದಿಗೆ ಕಿರಾತ ವೇಷದಿಂದ ಬಂದು ಇದು ನನ್ನ ಬೇಟೆ ಎಂದ. ಅರ್ಜುನ ಅವನ ಮಾತಿಗೆ ಬೆಲೆಕೊಡದೆ ಹಂದಿಯ ಮೇಲೆ ಬಾಣಗಳನ್ನೆಸೆದ. ಶಿವನೂ ಎಸೆದ.

ಕಿರಾತರೂಪಸ್ತಮನು ಸಭಾರ್ಯಶ್ಚ ತ್ರಿಯಂಬಕಃ ।
ಸ ಮಮಾರ ಹತಸ್ತಾಭ್ಯಾಂ ದಾನವಃ ಪಾಪಚೇತನಃ ॥೧೩೬॥

ಶಿವನೂ ಪಾರ್ವತೀಸಮೇತ ಕಿರಾತರೂಪನಾಗಿ ಬಂದು ಆ ಅಸುರನನ್ನು ಬೆನ್ನಟ್ಟಿದ. ಪಾಪಿ ಚೇತನನಾದ ಆ ದಾನವ ಇಬ್ಬರಿಂದಲೂ ಹೊಡೆಸಿಕೊಂಡು ಪ್ರಾಣಬಿಟ್ಟ.

ಸಾಯುವಾಗ ಮೂಕಾಸುರ ರಾಕ್ಷಸರೂಪ ತಾಳಿಯೆ ಸತ್ತ.

ತೇನೋಕ್ತೋಕಸೌ ಮಯೈವಾಯಂ ವರಾಹೋಕನುಗತೋಕದ್ಯ ಹಿ ।
ತಮವಿಧ್ಯೋ ಯತಸ್ತ್ವಂ ಹಿ ತದ್ ಯುಧ್ಯಸ್ವ ಮಯಾ ಸಹ ॥೧೩೭॥

ಶಿವ ಅರ್ಜುನನಿಗೆ ಹೇಳಿದ, 'ನಾನು ಬೆನ್ನಟ್ಟಿದ್ದ ಹಂದಿಯನ್ನು ನೀನು ಹೊಡೆದಿರುವುದರಿಂದ ನನ್ನೊಂದಿಗೆ ಯುದ್ಧಮಾಡು' ಎಂದು.

ಮಹಾಭಾರತದಲ್ಲಿ ಅರ್ಜುನನೇ ಮೊದಲಿಗೆ ಕಿರಾತನೊಡನೆ ಜಗಳಕ್ಕೆ ನಿಂತ, 'ನೀನೇಕೆ ನನ್ನ ಬೇಟೆಯನ್ನು ಹೊಡೆದೆ?' ಎಂದು. ಆಗ ಕಿರಾತ 'ನಿಲ್ಲು ನಿಲ್ಲು' ಎನ್ನುತ್ತ ಯುದ್ಧಕ್ಕೆ ತೊಡಗಿದ. ಆದರೆ ಅರ್ಜುನ ಬೇಟೆಗೆ ಬಂದಿರಲಿಲ್ಲ. ಕಿರಾತನೇ ಬೇಟೆಗೆ ಬಂದಿದ್ದರಿಂದ 'ನನ್ನ ಬೇಟೆ' ಎಂದು ಅವನು ಹೇಳುವುದೇ ಯುಕ್ತ. ಅದರಿಂದ ಮಹಾಭಾರತದಲ್ಲಿ ಪುರುಷ ವ್ಯತ್ಯಾಸವನ್ನು ಅವಲಂಬಿಸಿ ನಿರೂಪಣೆ ಮಾಡಿದೆ ಎನ್ನಬೇಕು. ಶಿವನೇ ಬೇಡನ ವೇಷದಲ್ಲಿ ಬಂದು ಬೇಟೆಯ ನಿಯಮ ಮೀರಿ ತನ್ನ ಬೇಟೆಗೆ ಅರ್ಜುನ ಬಾಣ ಎಸೆದನೆಂದು ಅರ್ಜುನನೊಡನೆ ಯುದ್ಧಕ್ಕೆ ನಿಂತ.

ಇತ್ಯುಕ್ತಃ ಫಲ್ಗುನಃ ಪ್ರಾಹ ತಿಷ್ಠತಿಷ್ಠ ನ ಮೋಕ್ಷ್ಯಸೇ ।
ಇತ್ಯುಕ್ತ್ವಾ ತಾವುಭೌ ಯುದ್ಧಂ ಚಕ್ರತುಃ ಪುರುಷರ್ಷಭೌ ॥೧೩೮॥

ಶಿವ ಹೀಗೆ ಹೇಳಿದಾಗ ಅರ್ಜುನನೆಂದ 'ನಿಲ್ಲು ನಿಲ್ಲು ನಾನು ನಿನ್ನನ್ನು ಬಿಡುವುದಿಲ್ಲ. ಹೀಗೆ ಮಹಾಪುರುಷರಾದ ಅವರಿಬ್ಬರೂ ಹೇಳುತ್ತ ಯುದ್ಧ ಮಾಡಿದರು.

ತತ್ರಾಖಿಲಾನಿ ಶಸ್ತ್ರಾಣಿ ಫಲ್ಗುನಸ್ಯಾಗ್ರಸಚ್ಛಿವಃ ।
ತತೋಕರ್ಜುನಸ್ತು ಗಾಂಡೀವಂ ಸಮಾದಾಯಾಭ್ಯತಾಡಯತ್ ೧೩೯॥

ಆಗ ಅರ್ಜುನನ ಎಲ್ಲ ಬಾಣಗಳನ್ನೂ ಶಿವ ನುಂಗಿದ. ಬಳಿಕ ಅರ್ಜುನ ಗಾಂಡೀವ ವನ್ನೆತ್ತಿ ಹೊಡೆದ.

ಎಲ್ಲ ಬಾಣಗಳನ್ನೂ ಶಿವ ನುಂಗಿ ಅಕ್ಷಯ ಬತ್ತಳಿಕೆಗಳೆರಡೂ ಬರಿದಾಗುವಂತೆ ಮಾಡಿದ. ಆಗ ಅರ್ಜುನ ಗಾಂಡೀವದಿಂದಲೆ ಹೊಡೆಯಬೇಕಾಯಿತು.

ತದಪ್ಯಗ್ರಸದೇವಾಸೌ ಪ್ರಹಸನ್ ಗಿರಿಶಸ್ತದಾ ।
ಬಾಹುಯುದ್ಧಂ ತತಸ್ತ್ವಾಸೀತ್ತಯೋಃ ಪುರುಷಸಿಂಹಯೋಃ ॥೧೪೦॥

ಆಗ ಶಿವ ನಗುತ್ತ ಗಾಂಡೀವವನ್ನೂ ನುಂಗಿಬಿಟ್ಟ. ಬಳಿಕ ಆ ಪುರುಷ ಸಿಂಹರೊಳಗೆ ಬಾಹುಯುದ್ಧ ನಡೆಯಿತು.

ಗಾಂಡೀವವನ್ನು ಶಿವ ನುಂಗಿದ ಬಳಿಕ ಖಡ್ಗವನ್ನೂ ನುಂಗಿದ. ಬಳಿಕ ಕಲ್ಲು ಮರಗಳನ್ನೂ ನುಂಗಿದ. ಕೊನೆಗೆ ಮುಷ್ಟಿ ಯುದ್ಧ ಒಂದು ಮುಹೂರ್ತಕಾಲ ನಡೆಯಿತು.

ಪಿಂಡೀಕೃತ್ಯ ತತೋ ರುದ್ರಶ್ಚಿಕ್ಷೇಪ ಚ ಧನಂಜಯಂ ।
ಮೂರ್ಚ್ಛಾಮವಾಪ ಮಹತೀಂ ಫಲ್ಗುನೋ ರುದ್ರಪೀಡಿತಃ ॥೧೪೧॥

ಶಿವ ಅರ್ಜುನನನ್ನು ಮುದ್ದೆ ಮಾಡಿ ಎಸೆದ. ಶಿವನಿಂದ ಹೀಗೆ ಪೀಡಿತನಾದ ಅರ್ಜುನ ಗಾಢವಾದ ಮೂರ್ಛೆಯನ್ನು ಹೊಂದಿದ.

ಪೂರ್ವಂ ಸಂಪ್ರಾರ್ಥಯಾಮಾಸ ಶಂಕರೋ ಗರುಡಧ್ವಜಂ ।
ಅವರಾಣಾಂ ವರಂ ಮತ್ತೋ ಯೇಷಾಂ ತ್ವಂ ಸಂಪ್ರಯಚ್ಛಸಿ ॥೧೪೨॥
ಅಜೇಯತ್ವಂ ಪ್ರಸಾದಾತ್ತೇ ವಿಜೇಯಾಃ ಸ್ಯುರ್ಮಯಾಪಿ ತೇ ।
ಇತ್ಯುಕ್ತಃ ಪ್ರದದೌ ವಿಷ್ಣುರುಮಾಧೀಶಾಯ ತಂ ವರಂ ।
ತೇನಾಜಯಚ್ಛಿವಂ ತವಾಹಂ ಗಿರಿಶೋ ರಣಮಧ್ಯಗಂ ॥೧೪೩॥

ಹಿಂದೆ ಶಿವ ಹರಿಯನ್ನು ಬೇಡಿದ್ದ 'ನನಗಿಂತ ಕೆಳಗಿನವರಿಗೆ ಯಾರಿಗೆ ನೀನು ಅಜೇಯತ್ವ ವರವನ್ನು ಕೊಡುವಿಯೊ ಅವರು ನಿನ್ನ ಅನುಗ್ರಹದಿಂದ ನನಗೆ ಸೋಲುವಂತಾಗಬೇಕು' ಎಂದು. ಶಿವ ಹೀಗೆ ಹೇಳಿದಾಗ ವಿಷ್ಣು ಆಗಲಿ ಎಂದು ಶಿವನಿಗೆ ಆ ವರ ನೀಡಿದ್ದ. ಅದರಿಂದ ಶಿವ ಅರ್ಜುನನನ್ನು ರಣರಂಗ ಮಧ್ಯದಲ್ಲಿ ಪರಾಭವಗೊಳಿಸಿದ.

ನಾನು ಭೂಮಿಯಲ್ಲಿ ಇರುವಷ್ಟು ಕಾಲ ಅರ್ಜುನನನ್ನು ಯಾರೂ ಯುದ್ಧದಲ್ಲಿ ಪರಾಜಯಗೊಳಿಸಲಾರರೆಂದು ಶ್ರೀಕೃಷ್ಣ ದೇವೇಂದ್ರನಿಗೆ ವರನೀಡಿದ್ದ. ಆದರೂ ಅರ್ಜುನ ಹೇಗೆ ಕಿರಾತನಿಂದ ಪರಾಜಿತನಾದ? ಈ ಪ್ರಶ್ನೆಗೆ ಉತ್ತರ ಇಲ್ಲಿ ಇದೆ.

ವೇದವ್ಯಾಸರೂ ಧರ್ಮರಾಜನ ಮೂಲಕ ಅರ್ಜುನನಿಗೆ ಮಂತ್ರ ನೀಡಿದಾಗ ಮಂತ್ರದಿಂದ ಅಜೇಯನಾಗುವನೆಂದು ವರ ನೀಡಿದ್ದರು. ಆದರೂ ಕಿರಾತನಿಗೆ ಅರ್ಜುನ ಸೋತ. ಹೇಗೆ? ಈ ಪ್ರಶ್ನೆಗೆ ಉತ್ತರ ಮುಂದೆ ಬರುತ್ತದೆ.

ಕೇವಲಾನ್ ವೈಷ್ಣವಾನ್ ಮಂತ್ರಾನ್ ವ್ಯಾಸಃ ಪಾರ್ಥಾಯ ನೋ ದದೌ।
ಏತಾವತಾಲಂ ಭೀಷ್ಮಾದೇರ್ಜಯಾರ್ಥಮಿತಿ ಚಿದ್ಘನಃ ॥೧೪೪॥

ಚಿನ್ಮಯರಾದ ವೇದವ್ಯಾಸರು ಕೇವಲ ವೈಷ್ಣವ ಮಂತ್ರಗಳನ್ನು ಅರ್ಜುನನಿಗೆ ಕೊಡಲಿಲ್ಲ. ಭೀಷ್ಮಾದಿಗಳನ್ನು ಗೆಲ್ಲಲು ಇಷ್ಟು ಸಾಕು ಎಂದು.

'ಕೇವಲ ವೈಷ್ಣವ' ಎಂಬಲ್ಲಿ ವೈಷ್ಣವ ಎಂದರೆ ವಿಷ್ಣುದೇವತಾಕವಾದ ಮಂತ್ರ. ಎಲ್ಲ ಮಂತ್ರಗಳೂ ವಿಷ್ಣುದೇವತಾಕವೆ. ಅದರಿಂದ ವಿಶೇಷವಾಗಿ ವಿಷ್ಣುದೇವತಾಕ, ಅಂದರೆ ಅನ್ಯ ದೇವತಾದ್ವಾರಾ ವಿಷ್ಣುವನ್ನು ಹೇಳದೆ ನೇರವಾಗಿ ವಿಷ್ಣುವನ್ನೇ ಹೇಳುವ ಮಂತ್ರ 'ವೈಷ್ಣವ' ವೆನಿಸುತ್ತದೆ. ಪುನಃ 'ಕೇವಲ' ಎಂದು ವಿಶೇಷಣವೇಕೆ? ಎಂದರೆ, ವಿಷ್ಣು ದೇವತೆ ಮಾತ್ರವಲ್ಲ ಋಷಿಯೂ ಆಗಿದ್ದಾನೆ ಎಂಬ ಅಭಿಪ್ರಾಯದಿಂದ ಕೇವಲ ಶಬ್ದವಿದೆ ಎನ್ನಬೇಕು. ಅದರಿಂದ ವಿಷ್ಣುದೃಷ್ಟವಾದ ವಿಷ್ಣುದೇವತಾಕ ಮಂತ್ರ. ಇದು ಅಪಾರ ಶಕ್ತಿಯುತವಾದುದು. ಭೀಷ್ಮಾದಿಗಳನ್ನು ಮಾತ್ರ ಗೆಲ್ಲಲು ಇದು ಹೆಚ್ಚಾಯಿತು. ಹೆಚ್ಚು ಬಲದ ಮಂತ್ರವನ್ನು ಕಡಿಮೆ ಬಲದವರ ಮೇಲೆ ಪ್ರಯೋಗಿಸಿದರೆ ಅದು ಲೋಕವನ್ನು ಸುಡುತ್ತದೆ. ಅದಕ್ಕೆ ಭೀಷ್ಮಾದಿ ಜಯಕ್ಕೆ ಸಾಲುವಷ್ಟು ಶಕ್ತಿ ಉಳ್ಳ ಶಿವದೃಷ್ಟ ಶಿವಾಂತರ್ಗತ ವಿಷ್ಣುದೇವತಾಕ ಮಂತ್ರವನ್ನೇ ವೇದವ್ಯಾಸರು ಕೊಟ್ಟರು. ಈಗ ಶಿವದೃಷ್ಟ ಮಂತ್ರದ ಬಲದಿಂದ ಅರ್ಜುನ ಶಿವನನ್ನು ಪರಾಭವಗೊಳಿಸಲು ಶಕ್ತನಾಗಲಿಲ್ಲ. ವೇದವ್ಯಾಸರು ಸ್ವಯಂ ಮಂತ್ರವನ್ನು ಅರ್ಜುನನಿಗೆ ಉಪದೇಶ ಮಾಡದಿದ್ದುದೂ ಅರ್ಜುನನ ಈ ಪರಾಭವಕ್ಕೆ ಕಾರಣವಾಯಿತು.

ಕೇವಲೈರ್ವೈಷ್ಣವೈರ್ಮಂತ್ರೈಃ ಸ್ವದತ್ತೈರ್ವಿಜಯಾವಹೈಃ।
ಅತಿವೃದ್ಧಸ್ಯ ಪಾರ್ಥಸ್ಯ ದರ್ಪಃ ಸ್ಯಾದಿತಿ ಚಿಂತಯನ್ ॥೧೪೫॥

ವಿಜಯದಾಯಕವಾದ ಕೇವಲ ವೈಷ್ಣವ ಮಂತ್ರವನ್ನು ಕೊಟ್ಟರೆ ಅರ್ಜುನ ಅತಿ ಬಲಿಷ್ಠನಾಗುತ್ತಾನೆ. ಅದರಿಂದ ಅವನಿಗೆ ಅಹಂಕಾರ ಬಂದೀತೆಂದು ವೇದವ್ಯಾಸರು ಆಲೋಚಿಸಿದ್ದರು.

ಅನ್ಯದೇವತೆಗಳು ಯೋಗ್ಯತೆಗೆ ಮೀರಿದ ವರನೀಡಿ ಅಹಂಕಾರ

ಬರುವಂತೆ ಮಾಡಿ ಅನರ್ಥಕ್ಕೆ ಗುರಿ ಮಾಡುತ್ತಾರೆ. ಶ್ರೀಹರಿ ಯೋಗ್ಯತೆಗೆ ತಕ್ಕಷ್ಟೆ ವರನೀಡಿ ಅಹಂಕಾರ ಬಾರದಂತೆ ಮಾಡಿ ಕಾಪಾಡುತ್ತಾನೆ.

ಪಾಶುಪತಾಸ್ತ್ರ ಲಾಭ

ಪಾರ್ಥಃ ಸಂಜ್ಞಾಮವಾಪ್ಯಾಥ ಜಯಾರ್ಥ್ಯಾರಾಧಯಚ್ಛಿವಂ ।
ವ್ಯಾಸೋದಿತೇನ ಮಂತ್ರೇಣ ತಾನಿ ಪುಷ್ಪಾಣಿ ತಚ್ಛಿರಃ ॥೧೪೬॥
ಆರುಹನ್ಸ ತು ತಂ ಜ್ಞಾತ್ವಾ ರುದ್ರ ಇತ್ಯೇವ ಫಲ್ಗುನಃ ।
ನಮಶ್ಚಕ್ರೇ ತತಃ ಪ್ರಾದಾದಸ್ತ್ರಂ ಪಾಶುಪತಂ ಶಿವಃ ॥೧೪೭॥

ಅರ್ಜುನ ಮೂರ್ಛೆ ತಿಳಿದೆದ್ದು ಯುದ್ಧದಲ್ಲಿ ಜಯವಾಗಬೇಕೆಂದು ಬಯಸಿ ವ್ಯಾಸರು ಕೊಟ್ಟ ಮಂತ್ರದಿಂದಲೆ ಶಿವನನ್ನು ಆರಾಧಿಸಿದ. ಆಗ ಅವನು ಲಿಂಗದ ಮೇಲೇರಿಸಿದ ಹೂಗಳು ಕಿರಾತನ ತಲೆಯನ್ನೇರಿದುವು. ಅದನ್ನು ನೋಡಿ ಕಿರಾತನನ್ನು ಶಿವನೇ ಎಂದು ತಿಳಿದು ಅರ್ಜುನ ನಮಸ್ಕರಿಸಿದ. ಆಗ ಶಿವ ಪಾಶುಪತಾಸ್ತ್ರವನ್ನು ಅರ್ಜುನನಿಗೆ ನೀಡಿದ.

ಅರ್ಜುನ ಶ್ವಾಸರಹಿತನಾಗಿ ಸತ್ತಂತೆಯೆ ಬಿದ್ದು ಒಂದು ಮೂಹೂರ್ತವಾದ ಬಳಿಕ ಎದ್ದು ಮಣ್ಣಿನಿಂದ ಶಿವಲಿಂಗ ಮಾಡಿ ಅದರ ಮೇಲೆ ಹೂಗಳನ್ನು ಅರ್ಪಿಸಿದ. ಆ ಹೂಗಳು ಕಿರಾತನ ತಲೆಯ ಮೇಲೂ ಕಂಡುಬಂದುವು. ಆಗ ಅರ್ಜುನನಿಗೆ ಕಿರಾತ ಶಿವನೇ ಎಂದು ತಿಳಿಯಿತು. ಅರ್ಜುನ ನಮಿಸಿ ಪಾಶುಪತಾಸ್ತ್ರವನ್ನು ಬೇಡಿದ. ಶಿವ ಆ ಮಂತ್ರವನ್ನು ಉಪದೇಶಿಸಿದ.

ಅಸ್ತ್ರಂ ತದ್ ವಿಷ್ಣುದೈವತ್ಯಂ ಸಾಧಿತಂ ಶಂಕರೇಣ ಯತ್ ।
ತಸ್ಮಾತ್ ಪಾಶುಪತಂ ನಾಮ ಸ್ವಾನ್ಯಸ್ತ್ರಾಣ್ಯಪರೇ ಸುರಾಃ ।
ದದುಸ್ತದೈವ ಪಾರ್ಥಾಯ ಸರ್ವೇ ಪ್ರತ್ಯಕ್ಷಗೋಚರಾಃ ॥೧೪೮॥

ಆ ಪಾಶುಪತಾಸ್ತ್ರ ವಿಷ್ಣುದೇವತಾಕವೆ. ಶಿವನಿಂದ, ಪಶುಪತಿಯಿಂದ ಸಾಧಿತವಾದುದರಿಂದ ಪಾಶುಪತ ಎಂದು ಹೆಸರು. ಬಳಿಕ ಎಲ್ಲ ಬೇರೆ ದೇವತೆಗಳೂ ಆಗಲೆ ಪ್ರತ್ಯಕ್ಷರಾಗಿ ತಮ್ಮ ಅಸ್ತ್ರಗಳನ್ನು ಅರ್ಜುನನಿಗೆ ನೀಡಿದರು.

ಮಹಾಭಾರತದಲ್ಲಿ ಅರ್ಜುನ ಶಿವನಲ್ಲಿ ಬ್ರಹ್ಮಶಿರ ಎಂಬ ಪಾಶುಪತಾಸ್ತ್ರ ನೀಡು ಎಂದು ಬೇಡುತ್ತಾನೆ. (ವನ.40.9) ಬ್ರಹ್ಮಶಿರ ಎಂದರೆ ಗಾಯತ್ರೀಮಂತ್ರ. ಅದಕ್ಕೆ ಸವಿತೃಮಂಡಲಾಂತರ್ಗತ ನಾರಾಯಣನೆ ದೇವತೆ. ಅಂದರೆ, ಅದು ನಾರಾಯಣಾಸ್ತ್ರವೆ. ಪಶುಪತಿ ಸಾಧಿಸಿಕೊಂಡ ಮಂತ್ರವಾದ್ದರಿಂದ ಪಾಶುಪತ ಎನಿಸಿತು ಎಂದು ಲಕ್ಷ್ಮಾಲಂಕಾರ ಹೇಳಿದೆ. ಈ ಮಂತ್ರ ಉಪದೇಶ ನೀಡಿದಾಗ

ಅಸ್ತ್ರದೇವತೆಯಾದ ನಾರಾಯಣ ಮೂರ್ತಿಮತ್ತಾಗಿ ಬಂದು ಅರ್ಜುನನ ಬಳಿ ನಿಂತುದನ್ನು ದೇವದಾನವರೆಲ್ಲ ಕಂಡರು (ವನ. 40.24) ಬಳಿಕ ಶಿವ ಅರ್ಜುನನ ಮೈದಡವಿ ಶರೀರದ ನೋವನ್ನೆಲ್ಲ ಕಳೆದ. ಇನ್ನು ಸ್ವರ್ಗಕ್ಕೆ ಹೋಗು ಎಲ್ಲ ದೇತೆಗಳಿಂದ ಅಸ್ತ್ರಗಳನ್ನು ಪಡೆ ಎಂದ. ಹಿಂದೆ ಖಾಂಡವವನ ದಹನ ಕಾಲದಲ್ಲಿ ಎಲ್ಲ ದೇವತೆಗಳೂ ಹೇಳಿದ್ದರು, ಕಾಲಬಂದಾಗ ನಿನಗೆ ನಾವೆಲ್ಲರೂ ನಮ್ಮ ಅಸ್ತ್ರಗಳನ್ನು ನಿನಗೆ ಉಪದೇಶಿಸುವೆವೆಂದು. ಇದೀಗ ಆ ಕಾಲ ಬಂದಿತ್ತು. ಶಿವ ಗಾಂಡೀವವನ್ನು ಕೊಟ್ಟು ಅರ್ಜುನನನ್ನು ಹರಸಿದ. ವರುಣ ಕುಬೇರ ಯಮ ಇಂದ್ರರೂ ಬಂದರು.

ಸ್ವರ್ಗಲೋಕಕ್ಕೆ ಅರ್ಜುನ

ಇಂದ್ರೋಽರ್ಜುನಂ ಸಮಾಗಮ್ಯ ಪ್ರಾಹ ಪ್ರೀತೋಽಸ್ಮಿ ತೇಽನಘ ನರ್ಷ
ರುದ್ರದೇಹಸ್ಥಿತಂ ಬ್ರಹ್ಮ ವಿಷ್ಣ್ವಾಖ್ಯಂ ತೋಷಿತಂ ತ್ವಯಾ ।
ತೇನ ಲೋಕಂ ಮಮಾಗಚ್ಛ ಪ್ರೇಷಯಾಮಿ ರಥಂ ತವ ॥೧೫೦॥

ಇಂದ್ರ ಅರ್ಜುನನ ಬಳಿಗೆ ಬಂದು ಹೇಳಿದ 'ಪಾಪರಹಿತನಾದ ಅರ್ಜುನನೆ, ನಿನ್ನ ಬಗ್ಗೆ ನಾನು ಸಂತುಷ್ಟನಾಗಿದ್ದೇನೆ. ರುದ್ರದೇಹದಲ್ಲಿರುವ ವಿಷ್ಣುರೂಪಿ ಪರಬ್ರಹ್ಮನನ್ನು ನೀನು ಸಂತೋಷ ಪಡಿಸಿರುವಿ. ಅದರಿಂದ ನೀನು ನನ್ನ ಲೋಕಕ್ಕೆ ಬಾ. ನಿನಗೆ ರಥವನ್ನು ಕಳಿಸುತ್ತೇನೆ.

ಯಮ ವರುಣ ಕುಬೇರರಿಂದ ಅರ್ಜುನ ಯಮದಂಡ ವರುಣಪಾಶ ಕೌಬೇರಾಸ್ತ್ರ ಮಂತ್ರಗಳನ್ನು ಉಪದೇಶ ಪಡೆದ. ಬಳಿಕ ಇಂದ್ರ, ನಾನು ನಿನಗೆ ರಥ ಕಳಿಸುತ್ತೇನೆ, ಸ್ವರ್ಗಕ್ಕೆ ಬಾ, ಅಲ್ಲಿ ನನ್ನ ದಿವ್ಯ ಅಸ್ತ್ರಗಳನ್ನು ಉಪದೇಶಿಸುತ್ತೇನೆ ಎಂದು ಹೇಳಿಹೋದ. ಯಮ ವರುಣ ಕುಬೇರರನ್ನು ಹಣ್ಣು ನೀರುಗಳಿಂದಲೂ ಸ್ತೋತ್ರಗಳಿಂದಲೂ ಸತ್ಕರಿಸಿ ಕಳಿಸಿಕೊಟ್ಟ ಅರ್ಜುನ.

ಅರ್ಜುನ ಶಿವನನ್ನು ಸ್ತೋತ್ರ ಮಾಡುವಾಗ ಹೀಗೂ ಹೇಳಿದ್ದ-

ಶಿವಾಯ ವಿಷ್ಣುರೂಪಾಯ ವಿಷ್ಣವೇ ಶಿವರೂಪಿಣೇ ।
ದಕ್ಷಯಜ್ಞವಿನಾಶಾಯ ಹರಿರೂಪಾಯ ತೇ ನಮಃ ॥
(ವನ. 40.77)

'ವಿಷ್ಣುರೂಪನಾದ ಶಿವನಿಗೆ ನಮಸ್ಕಾರ, ಶಿವರೂಪನಾದ ವಿಷ್ಣುವಿಗೆ ನಮಸ್ಕಾರ. ದಕ್ಷಯಜ್ಞನಾಶಕನೂ ಹರಿರೂಪಿಯೂ ಆದ ನಿನಗೆ ನಮಸ್ಕಾರ' ಎಂದು. ಇಲ್ಲಿ ಶಿವವಿಷ್ಣುಗಳಿಗೆ ಅಭೇದವನ್ನೂ ಹೇಳುತ್ತಿಲ್ಲ. ಶಿವಾಂತರ್ಗತನಾದ ಶಿವಾಕಾರದ ವಿಷ್ಣುವಿಗೂ ಪ್ರತ್ಯೇಕ ವಿಷ್ಣುರೂಪ

ದಿಂದಿರುವ ಹರಿಗೂ ಅಭೇದವನ್ನು ಅರ್ಜುನ ಹೇಳುತ್ತಿದ್ದಾನೆ ಎಂದು ತಿಳಿಸಲು 'ರುದ್ರದೇಹದಲ್ಲಿರುವ ವಿಷ್ಣುರೂಪಿ ಪರಬ್ರಹ್ಮನನ್ನು ಸಂತೋಷಪಡಿಸಿರುವಿ' ಎಂದು ಇಂದ್ರ ಹೇಳುತ್ತಾನೆ.

ಇತ್ಯುಕ್ತ್ವಾ ಪ್ರಯಯಾವಿಂದ್ರಸ್ತದ್ರಥೇನೈವ ಮಾತಲಿಃ।
ಆಯಾತ್ಪಾರ್ಥಸ್ತಮಾರುಹ್ಯ ಯಯೌ ತಾತನಿಕೇತನಂ ॥೧೫೧॥

ಹೀಗೆ ಹೇಳಿ ಇಂದ್ರ ಹೊರಟುಹೋದ. ಬಳಿಕ ಅದೇ ರಥದಿಂದ ಮಾತಲಿ ಹಿಂತಿರುಗಿ ಬಂದ. ಅರ್ಜುನ ಆ ರಥವನ್ನೇರಿ ಸ್ವರ್ಗಕ್ಕೆ ತೆರಳಿದ.

ಇಂದ್ರನ ರಥ ಮಾಯಾಮಯ. ಅದನ್ನು ಹತ್ತು ಸಾವಿರ ಕುದುರೆಗಳು ಹೊತ್ತವು. ಅದರ ಧ್ವಜಕ್ಕೆ ವೈಜಯಂತ ಎಂದು ಹೆಸರು. ರಥದಲ್ಲಿ ನಾನಾ ಬಗೆಯ ಸಿಡಿಮದ್ದುಗಳು ವಾಯುಸ್ಫೋಟಗಳೂ ಇದ್ದುವು.

ಪೂಜಿತೋ ದೈವತೈಃ ಸರ್ವೈರಿಂದ್ರೇಣಾಭಿನಿವೇಶಿತಃ।
ತೇನ ಸಾರ್ಧಮುಪಾಸೀದತ್ತಸ್ಮಿನ್ನೈಂದ್ರೇ ವರಾಸನೇ ॥೧೫೨॥

ಅರ್ಜುನ ಎಲ್ಲ ದೇವತೆಗಳಿಂದಲೂ ಸತ್ಕೃತನಾಗಿ ಇಂದ್ರನಿಂದ ತನ್ನಾಸನದಲ್ಲಿ ಕುಳ್ಳಿರಿಸಲ್ಪಟ್ಟ. ಅರ್ಜುನ ಇಂದ್ರನೊಂದಿಗೆ ಉತ್ಕೃಷ್ಟವಾದ ಆ ಆಸನದಲ್ಲಿ ಕುಳಿತ.

ಪ್ರೀತ್ಯಾ ಸಮಾಶ್ಲಿಷ್ಯ ಕುರುಪ್ರವೀರಂ
ಶಕ್ರೋ ದ್ವಿತೀಯಾಂ ತನುಮಾತ್ಮನಃ ಸಃ।
ಈಕ್ಷನ್ಮುಖಿಂ ತಸ್ಯ ಮುಮೋದ ಸೋಽಪಿ
ಹ್ಯುವಾಸ ತಸ್ಮಿನ್ಪತ್ಸರಾನ್ಪಂಚ ಲೋಕೇ ॥೧೫೩॥

ಇಂದ್ರ ತನ್ನ ಎರಡನೆ ರೂಪವಾದ ಅರ್ಜುನನನ್ನು ಪ್ರೀತಿಯಿಂದಾಲಿಂಗಿಸಿ ಅವನ ಮುಖ ನೋಡುತ್ತ ಆನಂದಿಸಿದ. ಅರ್ಜುನ ಆ ಸ್ವರ್ಗಲೋಕದಲ್ಲಿ ಐದು ವರ್ಷಕಾಲ ವಾಸಮಾಡಿದ.

ಭೀಮನ ಮತದಂತೆ ಹದಿಮೂರು ತಿಂಗಳಲ್ಲಿಯೆ ಅರ್ಜುನ ವನವಾಸ ಅಜ್ಞಾತವಾಸ ಮುಗಿಸಿದ್ದುದರಿಂದ ಈ ಸ್ವರ್ಗವಾಸ ದೋಷವಲ್ಲ ಎನ್ನಬೇಕು.

ಊರ್ವಶಿಯ ಶಾಪ

ಅಸ್ತ್ರಾಣಿ ತಸ್ಮಾದದಿಶಚ್ಚ ವಾಸವೋ
ಮಹಾಂತಿ ದಿವ್ಯಾನಿ ತದೋರ್ವಶೀ ತಂ।
ಸಂಪ್ರಾಪ್ಯ ಭಾವೇನ ತು ಮಾನುಷೇಣ
ಮಾತಾ ಕುಲಸ್ಯೇತಿ ನಿವಾರಿತಾಭೂತ್ ॥೧೫೪॥

ದೇವೇಂದ್ರ ಅರ್ಜುನನಿಗೆ ಮಹಾದಿವ್ಯಾಸ್ತ್ರಗಳನ್ನು ಉಪದೇಶಿಸಿದ. ಊರ್ವಶಿ ಅರ್ಜುನನ ಬಳಿಗೆ ಬಂದು ಸಂಗವನ್ನು ಬೇಡಿದಳು. ಅರ್ಜುನ ತಾನು ಮನುಷ್ಯನೆಂಬ ಭಾವನೆಯಿಂದ ಊರ್ವಶಿ ತನ್ನ ಕುಲದ ಮಾತೆ ಎಂದುಕೊಂಡು ಅವಳ ಸಂಗವನ್ನು ನಿರಾಕರಿಸಿದ.

ಇಂದ್ರ ಅರ್ಜುನನಿಗೆ ವಜ್ರಾಸ್ತ್ರ ಮುಂತಾದವುಗಳನ್ನು ಉಪದೇಶಿಸಿದ. ಚಿತ್ರಸೇನಗಂಧರ್ವನ ಬಳಿ ಗಾಂಧರ್ವ ನೃತ್ಯ ಗೀತ ವಾದ್ಯಕಲೆ ಗಳನ್ನೂ ಕಲಿಯಲು ಏರ್ಪಾಡು ಮಾಡಿದ. ಒಮ್ಮೆ ಊರ್ವಶಿ ನೃತ್ಯ ಮಾಡುತ್ತಿದ್ದಾಗ ಅರ್ಜುನ ತದೇಕ ದೃಷ್ಟಿಯಿಂದ ಕಂಡ. ಇಂದ್ರ ಇದನ್ನು ತಪ್ಪಾಗಿ ತಿಳಿದೋ ಪರೀಕ್ಷೆಗಾಗಿಯೋ ಅವನ ಬಳಿಗೆ ಊರ್ವಶಿಯನ್ನು ಕಳಿಸಿದ. ಆದರೆ ಅರ್ಜುನ ಅವಳಿಗೆ ಭಕ್ತಿಯಿಂದ ಅಭಿವಾದನ ಮಾಡಿ 'ನೀನು ನನಗೆ ಕುಂತಿಯಂತೆ, ಶಚಿಯಂತೆ, ಏಕೆಂದರೆ ನನ್ನ ತಂದೆಯಾದ ಇಂದ್ರನ ಮಡದಿಯಾಗಿರುವೆ. ಮತ್ತು ನಮ್ಮ ಕುಲದ ಪೂರ್ವಿಕ ಪುರೂರವರಾಜ. ಅವನ ಮಡದಿಯೂ ಆಗಿರುವುದರಿಂದ ನೀನು ನಮ್ಮ ಕುಲದ ಮಾತೆ' ಎನ್ನುತ್ತ ಅವಳ ಸಂಗವನ್ನು ನಿರಾಕರಿಸಿದ.

ಷಂಢೋ ಭವೇತ್ಯೇವ ತಯಾಭಿಶಪ್ತೇ
ಪಾರ್ಥೇ ಶಕ್ರೋಽನುಗ್ರಹಂ ತಸ್ಯ ಚಾದಾತ್ ।
ಸಂವತ್ಸರಂ ಷಂಢರೂಪೀ ಚರಸ್ವ
ನ ಷಂಢತಾ ತೇ ಭವತೀತಿ ಧೃಷ್ಣುಃ ॥೧೫೫॥

ನೀನು ನಪುಂಸಕನಾಗೆಂದು ಊರ್ವಶಿ ಅರ್ಜುನನನ್ನು ಶಪಿಸಿದಾಗ ದೇವೇಂದ್ರ ಅವನಿಗೆ ಶಾಪ ಪರಿಹಾರವನ್ನು ಅನುಗ್ರಹಿಸಿದ -/'ನಪುಂಸಕ ವೇಷದಲ್ಲಿ ಒಂದು ವರ್ಷಕಾಲ ಮಾತ್ರ ಸಂಚರಿಸು, ನಪುಂಸಕತ್ವ ನಿನಗೆ ಬಾರದು' ಎಂದು.

ನಾವು ಅಪ್ಸರೆಯರು. ಯಾರಿಗೂ ನಿಯತ ಪತ್ನಿಯರಲ್ಲ. ಅದರಿಂದ ಕುಂತಿಯಂತೆ ಶಚಿಯಂತೆ ಎನ್ನಬೇಡ. ಪುರೂರವನ ವಂಶದಲ್ಲಿ ಹುಟ್ಟಿದ ನನ್ನ ಮಕ್ಕಳಾಗಲಿ ಮೊಮ್ಮಕ್ಕಳಾಗಲಿ ಸ್ವರ್ಗಕ್ಕೆ ಬಂದಾಗ ನನ್ನ ಸಂಗ ಮಾಡಿದ್ದಾರೆ ಎಂದಳು ಊರ್ವಶಿ. ಆದರೂ ಅರ್ಜುನ ಅವಳ ಕಾಲಿಗೆ ಬಿದ್ದು ಮಗನನ್ನು ಕಾಪಾಡು ಎಂದ. ಅವಳು ಕುಪಿತಳಾಗಿ ಶಾಪವಿತ್ತಳು. ಅರ್ಜುನ ಈ ಶಾಪವೃತ್ತಾಂತವನ್ನು ಚಿತ್ರಸೇನನ ಮೂಲಕ ಇಂದ್ರನಿಗೆ ತಿಳಿಸಿದಾಗ ಅವನು ಅರ್ಜುನನನ್ನು ಏಕಾಂತದಲ್ಲಿ ಸಂತೈಸಿ ಅವನ ಶೀಲದಾರ್ಢ್ಯಕ್ಕೆ ಮೆಚ್ಚಿಕೆ ವ್ಯಕ್ತಪಡಿಸಿ, ನಿಮ್ಮ ಅಜ್ಞಾತವಾಸಕಾಲದಲ್ಲಿ ಒಂದು ವರ್ಷ ಮಾತ್ರ ನಪುಂಸಕವೇಷ ನಿನಗೆ ಅನುಕೂಲವಾಗುವುದು ಚಿಂತಿಸಬೇಡ ಎಂದ.

ಅರ್ಜುನ ತಾನು ಶಿವನನ್ನು ಒಲಿಸಿಕೊಂಡುದುದು ಸ್ವರ್ಗಕ್ಕೆ ಬಂದುದು ಎಲ್ಲವೂ ತಾನು ಮೂಲೋಕದ ಗಂಡು ಎನಿಸಬೇಕೆಂಬ ಉದ್ದೇಶದಿಂದ. ಈಗ ಊರ್ವಶಿಯ ಶಾಪದಿಂದ ನಪುಂಸಕನಾದೆನೆಂದರೆ ಏನು ಗತಿ ಎಂದು ಬಹಳ ಚಿಂತಿಸಿದ್ದ. ಆ ಚಿಂತೆ ಪರಿಹಾರವಾದುದು ಮಾತ್ರವಲ್ಲ, ಅಜ್ಞಾತವಾಸ ಕಾಲದಲ್ಲಿ ಮಹಾಉಪಕಾರವೂ ಲಭಿಸಿತು.

ತತೋಽವಸತ್ ಪಾಂಡವೇಯೋ ಗಾಂಧರ್ವಂ ವೇದಮಭ್ಯಸನ್ ।
ಗಂಧರ್ವಾಚ್ಚಿತ್ರಸೇನಾತ್ತು ತಥಾಸ್ತ್ರಾಣಿ ಸುರೇಶ್ವರಾತ್ ॥೧೫೬॥

ಬಳಿಕ ಅರ್ಜುನ ಚಿತ್ರಸೇನ ಗಂಧರ್ವನಿಂದ ಗಾಂಧರ್ವ ವೇದವನ್ನೂ ಇಂದ್ರನಿಂದ ಅಸ್ತ್ರಗಳನ್ನೂ ಅಭ್ಯಾಸಮಾಡುತ್ತ ಸ್ವರ್ಗದಲ್ಲಿ ವಾಸಮಾಡಿದ.

ಕೃಷ್ಣನ ಕೈಲಾಸ ಯಾತ್ರೆ

ಸುಭದ್ರಯಾಭಿಮನ್ಯುನಾ ಸಹ ಸ್ವಕಾಂ ಪುರೀಂ ಗತಃ ।
ಜನಾರ್ದನೋಽತ್ರ ಸಂವಸನ್ ಕದಾಚಿದಿತ್ಥಮೈಕ್ಷತ ॥೧೫೭॥

ಪಾಂಡವರ ಬಳಿಯಿಂದ ಸುಭದ್ರೆ ಅಭಿಮನ್ಯುಗಳೊಂದಿಗೆ ತನ್ನ ಪಟ್ಟಣಕ್ಕೆ ಹಿಂತಿರುಗಿದ ಶ್ರೀಕೃಷ್ಣ ಒಮ್ಮೆ ಹೀಗೆ ಆಲೋಚಿಸಿದ.

ಮಯಾ ವರೋ ಹಿ ಶಂಭವೇ ಪ್ರದತ್ತ ಆಸ ಪೂರ್ವತಃ ।
ವರಂ ಗ್ರಹೀಷ್ಯ ಏವ ತೇ ಸಕಾಶತೋ ವಿಮೋಹಯನ್ ॥೧೫೮॥

ನಾನು ಕೃಷ್ಣಾವತಾರಕ್ಕಿಂತ ಹಿಂದೆಯೆ 'ಅಸುರ ಮೋಹನಕ್ಕಾಗಿ ನಿನ್ನಿಂದ ವರಪಡೆಯುವೆನೆ' ಂದು ಶಿವನಿಗೆ ವರ ನೀಡಿದ್ದೆ.

ತ್ವಾಮಾರಾಧ್ಯ ತಥಾ ಶಂಭೋ ಗ್ರಹೀಷ್ಯಾಮಿ ವರಂ ಸದಾ ।
ದ್ವಾಪರಾದೌ ಯುಗೇ ಭೂತ್ವಾ ಕಲಯಾ ಮಾನುಷಾದಿಷು ॥೧೫೯॥

ಶಿವನೆ, ನಾನು ದ್ವಾಪರಾದಿಯುಗದಲ್ಲಿ ಅಂಶದಿಂದ ಮನುಷ್ಯಾದಿಗಳಲ್ಲಿ ಅವತರಿಸಿ ಸದಾ ನಿನ್ನನ್ನಾರಾಧಿಸಿ ವರ ಪಡೆಯುತ್ತೇನೆ.

'ದ್ವಾಪರಾದಿ' ಎಂದರೆ 'ದ್ವಾಪರ ಮುಂತಾದ ಯುಗ' ವಲ್ಲ. ಏಕೆಂದರೆ ಕಲಿಯುಗದಲ್ಲಿ ಭಗವಂತನ ಅವತಾರವಿಲ್ಲ. ದ್ವಾಪರದ ಪ್ರಾರಂಭ ಎಂದೂ ಅರ್ಥವಲ್ಲ, ಶ್ರೀಕೃಷ್ಣ ದ್ವಾಪರದ ಕೊನೆ ಭಾಗದಲ್ಲಿ ಅವತರಿಸಿದ್ದಾನೆ. ಅದರಿಂದ 'ದ್ವಾಪರ ಮತ್ತು ಆದಿ, ಅದಕ್ಕಿಂತ ಮೊದಲಿನ ಕೃತ ತ್ರೇತಾಯುಗಗಳಿ' ಂದರ್ಥ.

ಸ್ವಾಗಮೈಃ ಕಲ್ಪಿತೈಸ್ತ್ವಂ ಚ ಜನಾನ್ ಮದ್ವಿಮುಖಾನ್ ಕುರು ।
ಮಾಂ ಚ ಗೋಪಯ ಯೇನ ಸ್ಯಾತ್ ಸೃಷ್ಟಿರೇಷೋತ್ತರಾಧರಾ ॥೧೬೦॥

ಶಿವನೆ, ನೀನು ನಿನ್ನ ಕಲ್ಪಿತ ಆಗಮಗಳಿಂದ ದುರ್ಜನರನ್ನು ನನಗೆ ವಿಮುಖರನ್ನಾಗಿಸು. ಲೋಕಕ್ಕೆ ನನ್ನನ್ನು ಮರೆಮಾಡು. ಅದರಿಂದ ಊರ್ಧ್ವ ಲೋಕಕ್ಕೆ ಹೊರಟಿರುವ ಅಸುರರು ಕೆಳಗೆ ಹೋಗುವಂತಾಗಲಿ.

ಈ ಎರಡು ಶ್ಲೋಕಗಳು ಪದ್ಮಪುರಾಣ ಉತ್ತರಖಂಡ (71-106, 107) ವಾಸುದೇವ ಸಹಸ್ರನಾಮ ಸ್ತೋತ್ರದಲ್ಲಿ ವಿಷ್ಣು ಶಿವನಿಗೆ ಹೇಳಿದನೆಂದು ಶಿವ ಪಾರ್ವತಿಗೆ ಹೇಳುವ ಮಾತುಗಳಾಗಿ ಬಂದಿವೆ. ಕಲ್ಪಿತ ಎಂದರೆ ವೇದದ ಆಧಾರವಿಲ್ಲದೆ ಶಿವ ತಾನೇ ಕಲ್ಪಿಸಿ ಹೇಳಿದ ಶಿವಸರ್ವೋತ್ತಮತ್ವಾದಿ ಪರವಾದ ಶೈವಾಗಮ. ಅದನ್ನು ಲೋಕದಲ್ಲಿ ಪ್ರಚಾರಮಾಡಿ ವಿಷ್ಣುವನ್ನು ಮರೆಮಾಡಲು ವಿಷ್ಣುವೆ ಶಿವನಿಗೆ ಆಜ್ಞಿಮಾಡಿದ್ದ.

ಇತಿ ವ್ಯಾಕೃತಂ ಕರ್ತುಮಭಿಪ್ರಾಯಂ ವಿಜಜ್ಞುಷೀ ।
ಪ್ರೀತ್ಯರ್ಥಂ ವಾಸುದೇವಸ್ಯ ರುಕ್ಮಿಣೀ ವಾಕ್ಯಮಬ್ರವೀತ್ ॥೧೬೧॥

ತನ್ನ ವಚನವನ್ನು ಸತ್ಯವಾಡುವ ಉದ್ದೇಶದಿಂದ ಶ್ರೀಕೃಷ್ಣ ಮನಸ್ಸಿನಲ್ಲಿ ಮಾಡಿಕೊಂಡಿದ್ದ ಅಭಿಪ್ರಾಯವನ್ನು ವಿಶೇಷವಾಗಿ ತಿಳಿದಿರುವ ರುಕ್ಮಿಣೀದೇವಿ ಅವನ ಪ್ರೀತಿಗಾಗಿ ಹೀಗೆ ನುಡಿದಳು-

---

ಜಾತೇಽಪಿ ಪುತ್ರೇ ಪುತ್ರಾರ್ಥಂ ಸಾ ಹಿ ವೇದ ಮನೋಗತಂ ।
ಪುತ್ರೋ ಮೇ ಬಲವಾನ್ ದೇವ ಸ್ಯಾತ್ ಸರ್ವಾಸ್ತ್ರವಿದುತ್ತಮಃ ॥೧೬೨॥

ಪುತ್ರ ಹುಟ್ಟಿದ್ದರೂ ಪುತ್ರೋತ್ಪಾದನ ಮಾಡುವ ಕೃಷ್ಣನ ಸಂಕಲ್ಪವನ್ನು ರುಕ್ಮಿಣಿ ಬಲ್ಲಳು. ಅದರಿಂದ ಕೃಷ್ಣನ ಪ್ರೀತಿಗಾಗಿ 'ದೇವ, ನನಗೆ ಬಲಿಷ್ಠನಾದ ಸರ್ವಾಸ್ತ್ರವೇತ್ತನಾದ ಉತ್ತಮ ಪುತ್ರ ಜನಿಸಬೇಕು' ಎಂದಳು.

ಪುತ್ರ ಮೊದಲೆ ಹುಟ್ಟಿದ್ದನೆಂಬುದು ಮುಂದೆ 197ನೇ ಶ್ಲೋಕದಲ್ಲಿ ಸ್ಪಷ್ಟವಾಗುತ್ತದೆ.

ಇತ್ಯುಕ್ತೋ ಭಗವಾನ್ ದೇವ್ಯಾ ಸಮ್ಮೋಹಾಯ ಸುರದ್ವಿಷಾಂ ।
ಯಯೌ ಸುಪರ್ಣಮಾರುಹ್ಯ ಸ್ವೀಯಂ ಬದರಿಕಾಶ್ರಮಂ ॥೧೬೩॥

ಅಸುರರಿಗೆ ಮೋಹ ಕವಿಸುವುದಕ್ಕಾಗಿ ದೇವಿ ಹೀಗೆ ಹೇಳಿದಾಗ ಭಗವಾನ್ ಶ್ರೀಕೃಷ್ಣ ಗರುಡಾರೂಢನಾಗಿ ತನ್ನ ಬದರಿಕಾಶ್ರಮಕ್ಕೆ ತೆರಳಿದ.

ಹರಿವಂಶದಲ್ಲಿ (ಭವಿಷ್ಯ ಪರ್ವ 88ನೇ ಅಧ್ಯಾಯ) ಶ್ರೀಕೃಷ್ಣನ ಕೈಲಾಸ ಯಾತ್ರೆಯ ವಿವರ ಬಂದಿದೆ. ತುಂಬಿದ ಯಾದವ ಸಭೆಯಲ್ಲಿ ಶ್ರೀಕೃಷ್ಣ ತಾನು ಪುತ್ರಪ್ರಾಪ್ತಿಗಾಗಿ ಶಿವನನ್ನು ಕುರಿತು ತಪಸ್ಸು ಮಾಡುವುದಕ್ಕೆ ಕೈಲಾಸಯಾತ್ರೆ ಮಾಡುವೆನೆನ್ನುತ್ತ ನಾನಿಲ್ಲದಾಗ ಪೌಂಡ್ರಕ ವಾಸುದೇವ ಆಕ್ರಮಣ

ಮಾಡಬಹುದು. ಎಲ್ಲರೂ ನಗರದ ಬಾಗಿಲು ಮುಚ್ಚಿ ಬೇಟೆ ವಿಹಾರ ಮುಂತಾದುವೆಲ್ಲ ನಿಲ್ಲಿಸಿ ಎಚ್ಚರದಿಂದಿರಿ ಎಂದು ಹೇಳಿ ಉಗ್ರಸೇನ ಸಾತ್ಯಕಿ ಉದ್ಧವರನ್ನು ನಗರ ರಕ್ಷಣೆಗೆ ನೇಮಿಸಿ ಗರುಡಾರೂಢನಾಗಿ ಹೊರಟು ಸಂಜೆಯ ವೇಳೆಗೆ ಬದರಿಕಾಶ್ರಮಕ್ಕೆ ಬರುತ್ತಾನೆ. ಅದು ತನ್ನದೆ ಆಶ್ರಮ. ಏಕೆಂದರೆ ಅದು ವ್ಯಾಸಾಶ್ರಮವೂ ಹೌದು ನಾರಾಯಣಾಶ್ರಮವೂ ಹೌದು. ವ್ಯಾಸನಾರಾಯಣರು ತನ್ನದೆ ಎರಡು ರೂಪಗಳು. ಮಾತ್ರವಲ್ಲ, ನಾರಾಯಣನೆ ಕೃಷ್ಣನಾಗಿ ಅವತರಿಸಿದ್ದಾನೆ.

ಏಷ ಮೋಹಂ ಸೃಜಾಮ್ಯಾಶು ಯೋ ಜನಾನ್ ಮೋಹಯಿಷ್ಯತಿ ।
ತ್ವಂ ಚ ರುದ್ರ ಮಹಾಬಾಹೋ ಮೋಹಶಾಸ್ತ್ರಾಣಿ ಕಾರಯ ॥೧೬೪॥
ಅತಥ್ಯಾನಿ ವಿತಥ್ಯಾನಿ ದರ್ಶಯಸ್ವ ಮಹಾಭುಜ ।
ಪ್ರಕಾಶಂ ಕುರು ಚಾತ್ಮಾನಮಪ್ರಕಾಶಂ ಚ ಮಾಂ ಕುರು ॥೧೬೫॥
ಅಹಂ ತ್ವಾಂ ಪೂಜಯಿಷ್ಯಾಮಿ ಲೋಕಸಂಮೋಹನೋತ್ಸುಕಃ ।
ತಮೋಽಸುರಾ ನಾನ್ಯಥಾ ಹಿ ಯಾಂತೀತ್ಯೇತನ್ಮತಂ ಮಮ ॥೧೬೬॥

ಮಹಾಬಾಹುವಾದ ರುದ್ರನೆ, ನಾನೂ ದುರ್ಜನರಿಗೆ ಮೋಹಕರವಾದ ಮೋಹಕ ಶಾಸ್ತ್ರವನ್ನು ನಿರ್ಮಿಸುತ್ತೇನೆ. ನೀನೂ ಮೋಹಕಶಾಸ್ತ್ರಗಳನ್ನು ಮಾಡು. ಇತರರಿಂದಲೂ ಮಾಡಿಸು. ಅತಥ್ಯ ವಿತ್ಯಥ್ಯಗಳನ್ನೂ ತೋರಿಸು. ಲೋಕಮೋಹದ ಕಾರ್ಯದಲ್ಲಿ ಉತ್ಸುಕನಾಗಿ ನಾನು ನಿನ್ನನ್ನು ಆರಾಧಿಸುವೆನು. ಅನ್ಯಥಾ ಅಸುರರು ತಮಸ್ಸಿಗೆ ಹೋಗಲಾರರು. ಇದು ನನ್ನ ಅಭಿಪ್ರಾಯ.

ಅಸುರರು ತಮಸ್ಸನ್ನು ಹೊಂದಬೇಕಾದರೆ ಅವರು ಸಚ್ಛಾಸ್ತ್ರಗಳನ್ನು ತೊರೆದು ದುಃಶಾಸ್ತ್ರಗಳನ್ನು ಸ್ವೀಕರಿಸಬೇಕು. ಅದಕ್ಕೆ ನಾನು ಮೋಹಕವಾದ ದುಷ್ಟಶಾಸ್ತ್ರವನ್ನು ಬುದ್ಧಾವತಾರದಲ್ಲಿ ರಚಿಸುತ್ತೇನೆ. ನೀನೂ ಪಾಶುಪತಾದಿ ಮೋಹಕಶಾಸ್ತ್ರಗಳನ್ನು ರಚಿಸು. ದಧೀಚಾದಿ ಮುನಿಗಳ ಮೂಲಕವೂ ಆ ದುಷ್ಟಶಾಸ್ತ್ರಗಳನ್ನು ಪ್ರಸಾರಮಾಡು ಎನ್ನುತ್ತಾನೆ ಶ್ರೀಹರಿ. ಶಿವಪುರಾಣದಲ್ಲಿ ಹೇಳುವಂತೆ ದಧೀಚ ಶಿವಭಕ್ತ, ವಿಷ್ಣುದ್ವೇಷಿ. ವಿಷ್ಣುವಿನೊಂದಿಗೆ ಜಗಳದಲ್ಲಿ ವಿಷ್ಣು ಚಕ್ರವನ್ನು ನಿಸ್ತೇಜಗೊಳಿಸಿ ತನ್ನ ಉದರದಲ್ಲಿ ಬ್ರಹ್ಮಾಂಡವನ್ನೂ ತ್ರಿಮೂರ್ತಿಗಳನ್ನೂ ತೋರುತ್ತ ಅದನ್ನು ಕಾಣಲು ವಿಷ್ಣುವಿಗೆ ದಿವ್ಯದೃಷ್ಟಿ ಕೊಟ್ಟನಂತೆ! ಇಂಥ ಮೋಹಕ ಕಥೆಗಳನ್ನು ದಧೀಚಾದಿಗಳು ಸೃಷ್ಟಿಸಿದರು.

ಶಿವ ಅತಥ್ಯ, ಅಂದರೆ ಎಲ್ಲಿಯೂ ಇಲ್ಲದ ಸುಳ್ಳಾದ ಲಿಂಗ ಮೂಲಾನ್ವೇಷಣ ಮುಂತಾದ ಕಥೆಗಳನ್ನು ಸೃಷ್ಟಿಸಿದ. ಅಥವಾ ಅತಥ್ಯ ಅಂದರೆ ನಿಷ್ಫಲವಾದ ಜಟಾ ರುದ್ರಾಕ್ಷ ಭಸ್ಮಾದಿಧಾರಣ ರೂಪವಾದ ಆಚರಣೆಗಳನ್ನು

ಪ್ರಚಾರ ಮಾಡಿದ. ವಿತಥ್ಯ ಎಂದರೆ ತನ್ನಲ್ಲಿಲ್ಲದೆ ಬೇರೆ ಕಡೆ ಸತ್ಯವಾಗಿರುವುದನ್ನು ತನ್ನಲ್ಲಿ ಹೇಳಿಕೊಂಡ. ಹರಿಯಲ್ಲಿಯೆ ಇರುವ ಸರ್ವಜ್ಞತ್ವ ಸರ್ವಶಕ್ತಿ ಮುಂತಾದುವನ್ನು ತನ್ನಲ್ಲಿ ಹೇಳಿಕೊಂಡ. ವಾಯು ಪೂರ್ತಿ ಹಾಲಾಹಲ ವಿಷಪಾನ ಮಾಡಿದ್ದನ್ನು ತಾನೆ ಮಾಡಿದಂತೆ ಪ್ರಸಿದ್ಧಿಗೆ ತಂದ. ಇದೆಲ್ಲವೂ ಹರಿಯಾಜ್ಞೆ. ಆದರಿಂದ ಶಿವನಿಗೆ ದೋಷ ಬರಲಿಲ್ಲ.

ಈ ಮೂರು ಶ್ಲೋಕಗಳು ವರಾಹಪುರಾಣದಲ್ಲಿ (70.36) ಬರುತ್ತವೆ.

ಇತ್ಯುಕ್ತಂ ವಚನಂ ಪೂರ್ವಂ ಕೇಶವೇನ ಶಿವಾಯ ಯತ್ ।
ತತ್ ಸತ್ಯಂ ಕರ್ತುಮಾಯಾಂತಂ ಕೃಷ್ಣಂ ಬದರಿಕಾಶ್ರಮಂ ।
ಸರ್ವಜ್ಞಾ ಮುನಯಃ ಸರ್ವೇ ಪೂಜಯಾಂಚಕ್ರಿರೇ ಪ್ರಭುಂ ॥೧೬೭॥

ಹೀಗೆ ಹಿಂದೆ ಶ್ರೀಕೃಷ್ಣ ತಾನು ಶಿವನಿಗೆ ಹೇಳಿದ್ದ ಮಾತನ್ನು ಸತ್ಯ ಮಾಡುವುದಕ್ಕಾಗಿ ಬದರಿಕಾಶ್ರಮಕ್ಕೆ ಬಂದಾಗ ಸರ್ವಜ್ಞರಾದ ಎಲ್ಲ ಮುನಿಗಳೂ ಆ ಪ್ರಭುವನ್ನು ಪೂಜಿಸಿದರು.

ಘಂಟಾಕರ್ಣ ಪಿಶಾಚ

ರಾತ್ರೌ ಕೃಷ್ಣೇ ಮುನಿಮಧ್ಯೇ ನಿವಿಷ್ಟೇ
ಘಂಟಾಕರ್ಣಃ ಕರ್ಣನಾಮಾ ಪಿಶಾಚೌ ।
ಸಮಾಯಾತಾಂ ಗಿರಿಶೇನ ಪ್ರದಿಷ್ಟೌ
ಕೃಷ್ಣಂ ದ್ರಷ್ಟುಂ ದ್ವಾರಕಾಂ ಗಂತುಕಾಮೌ ॥೧೬೮॥

ರಾತ್ರಿಯಲ್ಲಿ ಶ್ರೀಕೃಷ್ಣ ಮುನಿಗಳ ಮಧ್ಯದಲ್ಲಿ ಕುಳಿತಿದ್ದಾಗ ಘಂಟಾಕರ್ಣ ಮತ್ತು ಕರ್ಣ ಎಂಬ ಇಬ್ಬರು ಪಿಶಾಚಗಳು ಬಂದರು. ಅವರು ಶಿವನಿಂದ ಆದೇಶ ಪಡೆದು ಕೃಷ್ಣನನ್ನು ಕಾಣಲು ದ್ವಾರಕೆಗೆ ಹೋಗಲು ಬಯಸಿದ್ದರು.

ಶ್ರೀಕೃಷ್ಣ ರಾತ್ರಿಯಲ್ಲಿ ದೀಪಗಳ ಬೆಳಕಿನಲ್ಲಿ ಕುಳಿತು ಧ್ಯಾನಕ್ಕೆ ತೊಡಗಿದ. ಆಗ ಎಲ್ಲಕಡೆ 'ತಿನ್ನಿ, ತಿನ್ನಿ, ಮೃಗಗಳನ್ನು ಕೊಂದು ತನ್ನಿ, ಹರಿಯ ಅನುಗ್ರಹವೆನ್ನಿ, ವಿಷ್ಣು, ಕೃಷ್ಣ ಮಾಧವ ಅಚ್ಯುತ! ನಿನಗೆ ನಮಸ್ಕಾರ!' ಎನ್ನುತ್ತ ದೊಡ್ಡ ಶಬ್ದ ಮಾಡುತ್ತ ಬೇಟೆನಾಯಿಗಳ ಪಡೆಯೊಂದಿಗೆ ಪಿಶಾಚಗಳ ಸೈನ್ಯ ಕಾಡನ್ನು ಧ್ವಂಸ ಮಾಡುತ್ತ ಬಂದಿತು. ಈ ಸೈನ್ಯ ಘಂಟಾಕರ್ಣ ಮತ್ತು ಕರ್ಣ ಎಂಬ ಹೆಸರಿನ ಇಬ್ಬರು ಪಿಶಾಚಗಳದು. ಇವರು ಕುಬೇರನ ಭೃತ್ಯರು. ಹಿಂದೆ ಶಿವ ಭಕ್ತರಾಗಿದ್ದು ಹರಿನಾಮ ಕಿವಿಗೆ ಬೀಳದಂತೆ ಕಿವಿಗೆ ಗಂಟೆ ಕಟ್ಟಿಕೊಂಡು ಘಂಟಾಕರ್ಣ ನಾಮ ಹೊಂದಿದವರು. ಅವರು ಶಿವನಲ್ಲಿ ಮುಕ್ತಿಯನ್ನು ಬೇಡಿದಾಗ ಶಿವ, 'ಮುಕ್ತಿ ಬೇಕಾದರೆ ಶ್ರೀಕೃಷ್ಣನ ಬಳಿಗೆ ಹೋಗಿರಿ' ಎಂದ.

ಕುಬೇರನಲ್ಲಿ ವಿಷ್ಣು ಮಂತ್ರ ಉಪದೇಶಪಡೆದು ಬದರಿಕಾಶ್ರಮದಲ್ಲಿ 'ಎಲ್ಲಿ ಶ್ರೀಹರಿ ?' ಎಂದು ಎಲ್ಲರನ್ನೂ ವಿಚಾರಿಸುತ್ತ ಬಂದರು. ಶ್ರೀಕೃಷ್ಣನನ್ನೂ ಹಾಗೇ ಕೇಳಿದರು. ನೀನಾರು ಎಂದರು. 'ನಾನೊಬ್ಬ ಯಾದವ. ನೀವು ಪಿಶಾಚಗಳು ಈ ಪ್ರಶಾಂತವಾದ ಆಶ್ರಮಕ್ಕೆ ಬರಕೂಡದು ಹೋಗಿರಿ' ಎಂದ ಕೃಷ್ಣ. ಅವರು 'ನೀನೆ ಹೋಗು, ನಮಗೆ ಇಲ್ಲಿ ಕೆಲಸವಿದೆ. ಹರಿಧ್ಯಾನ ಮಾಡಬೇಕೆಂ'ದು ಹೇಳಿ ಮಾಂಸರಕ್ತಗಳನ್ನು ಉಂಡು ನೀರು ಕುಡಿದು ನೀರಿಂದ ನೆಲಸಾರಿಸಿ ದರ್ಭೆಗಳನ್ನು ಹಾಸಿ ನಾಯಿಗಳನ್ನು ದೂರಕ್ಕೆ ಅಟ್ಟಿ ಸುಖಾಸನದಲ್ಲಿ ಕುಳಿತು 'ಓಂ ನಮೋ ಭಗವತೇ ವಾಸುದೇವಾಯ' ಇತ್ಯಾದಿ ವಿಷ್ಣುಮಂತ್ರಗಳನ್ನೂ ಪ್ರಣವವನ್ನೂ ಜಪಿಸುತ್ತ 'ಶ್ರೀಹರಿ, ನೀನು ನಮ್ಮನ್ನು ಚಕ್ರದಿಂದ ಸಂಹರಿಸಿ ಈ ಹೀನಜನ್ಮವನ್ನು ಕಳೆದು ಮುಕ್ತಿನೀಡು. ಮನಸ್ಸನ್ನು ನಿರ್ಮಲಗೊಳಿಸಿ ಸದಾ ನಿನ್ನ ಸ್ಮರಣೆ ಕೊಡೆ'ಂದು ಧ್ಯಾನಿಸುವಾಗ ಹೃದಯ ಕಮಲದಲ್ಲಿ ಅವರಿಗೆ ಶ್ರೀಕೃಷ್ಣ ಕಾಣಿಸಿಕೊಂಡ.

ತೌ ದೃಷ್ಟ್ವಾ ಮುನಿಮಧ್ಯಸ್ಥಂ ಕೇಶವಂ ತದಬೋಧತಃ ।
ಕೃತ್ವಾ ಸ್ವಜಾತಿಚೇಷ್ಟಾಶ್ಚ ಧ್ಯಾನೇನೈನಮಪಶ್ಯತಾಂ ॥೧೬೯॥

ಆ ಪಿಶಾಚಗಳು ಮುನಿಗಳ ಮಧ್ಯದಲ್ಲಿದ್ದ ಕೃಷ್ಣನನ್ನು ಕಂಡು ಅವನಾರೆಂದು ತಿಳಿಯದೆ ತಮ್ಮ ಪಿಶಾಚ ಜಾತಿಗೆ ಅನುಗುಣವಾದ ಚೇಷ್ಟೆಗಳನ್ನು ಮಾಡಿ ಧ್ಯಾನದಿಂದ ಅವನನ್ನು ಕಂಡರು.

ದೃಷ್ಟ್ವಾ ಹೃದಿ ಸ್ಥಿತಂ ತೌತು ಕೌತೂಹಲಸಮನ್ವಿತೌ ।
ಸ್ತುತ್ವಾ ಭಕ್ತ್ಯಾ ಪ್ರಣಾಮಂ ಚ ಬಹುಶಶ್ಚಕ್ರತುಃ ಶುಭೌ ॥೧೭೦॥

ಪುಣ್ಯ ಚೇತನರಾದ ಆ ಪಿಶಾಚಗಳು ಹೃದಯದಲ್ಲಿಯೂ ಕೃಷ್ಣನನ್ನು ಕಂಡಾಗ ಕುತೂಹಲಭರಿತರಾಗಿ ಭಕ್ತಿಯಿಂದ ಸ್ತುತಿಸಿ ಮತ್ತೆ ಮತ್ತೆ ನಮಸ್ಕಾರ ಮಾಡಿದರು.

ಧ್ಯಾನದಲ್ಲಿ ಹರಿದರ್ಶನ ಪಡೆದ ಪಿಶಾಚಗಳು ಒಡನೆ ಎದ್ದು ಕುಣಿದರು. ಒಂದು ಬ್ರಾಹ್ಮಣಶವವನ್ನು ಕೃಷ್ಣನಿಗೆ ಅರ್ಪಿಸಿದರು.

ತಯೋಃ ಪ್ರಸನ್ನೋ ಭಗವಾನ್ ಸ್ಪೃಷ್ಟ್ವಾ ಗಂಧರ್ವಸತ್ತಮೌ ।
ಚಕಾರ ಕ್ಷಣಮಾತ್ರೇಣ ದಿವ್ಯರೂಪಸ್ವರಾನ್ವಿತೌ ॥೧೭೧॥

ಪ್ರಸನ್ನನಾದ ಭಗವಂತ ಅವರನ್ನು ಪ್ರೀತಿಯಿಂದ ಮೃದುವಾಗಿ ಸ್ಪರ್ಶಿಸಿ ಕ್ಷಣಮಾತ್ರದಿಂದ ದಿವ್ಯರೂಪ ಸ್ವರ ಯುಕ್ತರಾದ ಉತ್ತಮ ಗಂಧರ್ವರನ್ನಾಗಿ ಮಾಡಿದ.

ಪಿಶಾಚಗಳು ಅರ್ಪಿಸಿದ ಬ್ರಾಹ್ಮಣಶವವನ್ನು ತಿರುಗಿ ಬದುಕಿಸಿ ಕಳಿಸಿಕೊಟ್ಟ ಶ್ರೀಕೃಷ್ಣ.

ತಾಭ್ಯಾಂ ಪುನರ್ನತ್ತಗೀತಸಂಸ್ತವೈಃ ಪೂಜಿತಃ ಪ್ರಭುಃ ।
ಯಯೌ ಕೈಲಾಸಮದ್ರೀಶಂ ಚಕಾರೇವ ತಪೋಽತ್ರ ಚ ॥೧೭೨೨॥

ಆ ಪಿಶಾಚಗಳು ಪುನಃ ನರ್ತನ ಗಾನ ಸ್ತೋತ್ರಗಳಿಂದ ಪ್ರಭುವನ್ನು ಪೂಜಿಸಿದರು. ಬಳಿಕ ಶ್ರೀಕೃಷ್ಣ ಕೈಲಾಸ ಮಹಾಪರ್ವತವನ್ನೇರಿ ಅಲ್ಲಿ ತಪಸ್ಸು ಮಾಡುವಂತೆ ತೋರಿಕೊಂಡ.

ಸ್ವೀಯಾನೇವ ಗುಣಾನ್ ವಿಷ್ಣು ರ್ಧ್ಯಂಜನ್ ನಿತ್ಯೇನ ಶೋಚಿಷಾ ।
ಶಾರ್ವಂ ತಪಃ ಕರೋತೀವ ಮೋಹಯಾಮಾಸ ದುರ್ಜನಾನ್ ೧೭೩॥

ಶ್ರೀಹರಿ ತನ್ನ ಗುಣಗಳನ್ನೇ ನಿತ್ಯಜ್ಞಾನದಿಂದ ಧ್ಯಾನಿಸುತ್ತ ಶಿವನನ್ನು ಕುರಿತು ತಪಸ್ಸು ಮಾಡುವಂತೆ ತೋರಿ ದುರ್ಜನರನ್ನು ಮೋಹಗೊಳಿಸಿದ.

ಒಂದು ದಿನದಲ್ಲಿ ಹನ್ನೆರಡು ವರ್ಷ ಕಳೆಯಿತು !

ಪೂರ್ವಂ ತೇನೋದಿತಂ ಯತ್ತಲ್ಲೋಕಾನ್ಮೋಹಯತಾಂಜಸಾ ।
ಶರ್ವಂ ಪ್ರತಿ ತವಾಹಂ ತು ಕುರ್ಯಾಂ ದ್ವಾದಶವತ್ಸರಂ ॥೧೭೪॥
ತಪೋಽಸುರಾಣಾಂ ಮೋಹಾಯ ಸುರಾಃ ಸಂತು ಗತಜ್ವರಾಃ ।
ಇತಿ ತಸ್ಮಾತ್ತದಾ ಕೃಷ್ಣ ಏಕಾಹೇನ ಬೃಹಸ್ಪತಿಂ ॥೧೭೫॥
ಸ್ವಾಜ್ಞಯಾ ಚಾರಯಾಮಾಸ ಕ್ಷಿಪ್ರಂ ದ್ವಾದಶರಾಶಿಷು ।
ದ್ವಾದಶಾಬ್ದಮಭೂತ್ತೇನ ತದಹಃ ಕೇಶವಾಜ್ಞಯಾ ॥೧೭೬॥

'ಅಸುರಜನರನ್ನು ಚೆನ್ನಾಗಿ ಮೋಹಗೊಳಿಸುತ್ತ ನಿನ್ನ ಕುರಿತು ನಾನು ಹನ್ನೆರಡು ವರ್ಷ ಪರ್ಯಂತ ತಪಸ್ಸು ಮಾಡುವೆನು. ದೇವತೆಗಳು ನಿಶ್ಚಿಂತರಾಗಲಿ' ಎಂದು ಶ್ರೀಕೃಷ್ಣ ಶಿವನಿಗೆ ಹಿಂದೆ ಹೇಳಿದ್ದ. ಅದರಿಂದ ಕೃಷ್ಣ ಬೇಗನೆ ಒಂದೇ ದಿನದಲ್ಲಿ ಬೃಹಸ್ಪತಿಯನ್ನು ಹನ್ನೆರಡು ರಾಶಿಗಳಲ್ಲಿ ತಿರುಗುವಂತೆ ಮಾಡಿದ. ಹೀಗೆ ಕೃಷ್ಣನ ಇಚ್ಛೆಯಿಂದ ಆ ಒಂದು ದಿನವೆ ಹನ್ನೆರಡು ವರ್ಷವೆನಿಸಿತು.

ಹನ್ನೆರಡು ರಾಶಿಗಳಲ್ಲಿ ಬೃಹಸ್ಪತಿ ಸಂಚರಿಸಲು ಹನ್ನೆರಡು ವರ್ಷಗಳು ಬೇಕೆಂದು ನಿಯಮವಿದೆ. ಶ್ರೀಕೃಷ್ಣ ಒಂದೇ ದಿನದಲ್ಲಿ ಬೃಹಸ್ಪತಿಯನ್ನು ಹನ್ನೆರಡು ರಾಶಿಗಳಲ್ಲಿ ಸಂಚಾರ ಮಾಡಿಸಿದ್ದರಿಂದ ಆ ಒಂದು ದಿನ ಬಾರ್ಹಸ್ಪತ್ಯಮಾನದಿಂದ ಹನ್ನೆರಡು ವರ್ಷವೆ ಆಯಿತು. ಸೌರಮಾನದಲ್ಲಿ ಒಂದು ದಿನವೆ. ಹೀಗೆ ಶ್ರೀಕೃಷ್ಣ ಒಂದು ದಿನ ಮಾಡಿದ ತಪಸ್ಸು ದ್ವಾದಶವರ್ಷ ತಪಸ್ಸೆನಿಸಿತು.

ಏಕಸ್ಮಿನ್ನಹ್ನಿ ಭಗವಾನ್ ರಾಶಿಂ ರಾಶಿಂ ಚ ವತ್ಸರಂ ।
ಕಲ್ಪಯಿತ್ವೋಪವಾಸಾದೀನ್ ಮನಸಾ ನಿಯಮಾನಪಿ ॥೧೭೭॥

ಮಾಸವ್ರತಂ ಸಾರ್ಧಶತಶ್ವಾಸಕಾಲೈರಕಲ್ಪಯತ್ ।
ಮನಸೈವ ಸ್ವಭಕ್ತಾನಾಂ ದ್ವಾದಶಾಬ್ದವ್ರತಾಪ್ತಯೇ ॥೧೭೮॥

ಶ್ರೀಕೃಷ್ಣ ಒಂದು ದಿನದಲ್ಲಿ ಪ್ರತಿಯೊಂದು ರಾಶಿಯನ್ನು ವರ್ಷವನ್ನಾಗಿ ಮಾಡಿ ಉಪವಾಸಾದಿ ನಿಯಮಗಳನ್ನು ಮನಸಿನಲ್ಲಿ ಮಾಡಿಕೊಂಡು ನೂರೈವತ್ತು ಶ್ವಾಸಕಾಲಗಳಿಂದ ಮನಸಿನಲ್ಲಿಯೆ ಮಾಸವ್ರತವನ್ನೂ ಮಾಡಿದ. ತನ್ನ ಭಕ್ತರಿಗೆ ಹನ್ನೆರಡು ವರ್ಷದ ವ್ರತಲಾಭಕ್ಕಾಗಿ ಹೀಗೆ ಮಾಡಿದ್ದ ಶ್ರೀಕೃಷ್ಣ.

ಒಂದು ದಿನದಲ್ಲಿ ಇಪ್ಪತ್ತೊಂದು ಸಾವಿರದ ಆರು ನೂರು ಬಾರಿ ನಾವು ಉಸಿರಾಡುತ್ತೇವೆ. ಒಂದು ದಿನ ಹನ್ನೆರಡು ವರ್ಷವೆನಿಸುವಾಗ ಇಪ್ಪತ್ತೊಂದು ಸಾವಿರದ ಆರುನೂರು ಶ್ವಾಸಗಳಿಂದ ಹನ್ನೆರಡು ವರ್ಷವಾಗುತ್ತವೆ. ಒಂದು ಸಾವಿರದ ಎಂಟುನೂರು ಶ್ವಾಸಗಳಿಂದ ಒಂದು ವರ್ಷ. ನೂರೈವತ್ತು ಶ್ವಾಸಗಳಿಂದ ಒಂದು ತಿಂಗಳು, ಐದು ಶ್ವಾಸಗಳಿಂದ ಒಂದು ದಿನ. ಹೀಗೆ ಶ್ವಾಸ ವಿಭಾಗದಿಂದ ವರ್ಷವ್ರತ ಮಾಸವ್ರತ ದಿನವ್ರತಗಳನ್ನೂ ಶ್ರೀಕೃಷ್ಣ ಮಾಡಿದ.

ತತ್ರಾಸ್ಯ ಗರುಡಾದ್ಯಾಸ್ತು ಪರಿಚರ್ಯಾಂ ಸ್ವಪಾರ್ಷದಾಃ ।
ಚಕ್ರುರ್ಹೋಮಾದಿಕಾಶ್ಚೈವ ಕ್ರಿಯಾಶ್ಚಕ್ರೇ ಜನಾರ್ದನಃ ।
ಸ್ವಾತ್ಮಾನಂ ಪ್ರತಿ ಪಾಪಾನಾಂ ಶಿವಾಯೇತಿ ಪ್ರಕಾಶಯನ್ ॥೧೭೯॥

ಆಗ ಗರುಡ ಮುಂತಾದ ಪರಿವಾರದವರು ಶ್ರೀಕೃಷ್ಣನ ಸೇವೆ ಮಾಡಿದರು. ಶ್ರೀಕೃಷ್ಣ ಹೋಮಾದಿ ಕ್ರಿಯೆಗಳನ್ನು ಪಾಪಿಗಳಿಗೆ ಶಿವನ ಕುರಿತೆಂದು ತೋರುತ್ತ ವಸ್ತುತಃ ತನ್ನ ಕುರಿತಾಗಿಯೆ ಮಾಡಿದ.

ಗರುಡ ಸಮಿತ್ತುಗಳನ್ನೂ, ಚಕ್ರ ದೇವ ಹೂಗಳನ್ನೂ ತಂದಿತ್ತರು. ಶಂಖ ದೇವ ಸರ್ವದಿಕ್ಕುಗಳಲ್ಲಿ ರಕ್ಷೆ ಮಾಡುತ್ತಿದ್ದ. ನಂದಕ ಖಡ್ಗ ದರ್ಭೆಗಳನ್ನು ಕೊಯ್ದು ತಂದ. ಕೌಮೋದಕೀ ಗದ ಹತ್ತಿರದಲ್ಲಿಯೆ ಪರಿಚರ್ಯೆ ಮಾಡಿದ. ದೇವಶಾರ್ಙ್ಗ ಧನುಸ್ಸಿನ ಮುಂದೆ ನಿಂತು ರಕ್ಷಣೆ ಮಾಡಿದ. ಶ್ರೀಕೃಷ್ಣನ ಈ ಚಕ್ರಶಂಖಾದಿಗಳೆಲ್ಲರೂ ಚೇತನರು, ಜಡಗಳಲ್ಲ.

ಏವಂ ಸ್ಥಿತಂ ತಮರವಿಂದದಲಾಯತಾಕ್ಷಂ
ಬ್ರಹ್ಮೇಂದ್ರಪೂರ್ವಸುರಯೋಗಿವರಪ್ರಜೇಶಾಃ ।
ಅಭ್ಯಾಯಯುಃ ಪಿತೃಮುನೀಂದ್ರಗಣೈಃ ಸಮೇತಾ
ಗಂಧರ್ವಸಿದ್ಧವರಯಕ್ಷವಿಹಂಗಮಾದ್ಯಾಃ ॥೧೮೦॥

ಕಮಲಾಕ್ಷನಾದ ಶ್ರೀಕೃಷ್ಣ ಹೀಗೆ ತಪಸ್ಸು ಮಾಡುತ್ತಿದ್ದಾಗ ಬ್ರಹ್ಮ ಇಂದ್ರ ಮುಂತಾದ

ದೇವತೆಗಳೂ ಸನಕಾದಿ ಯೋಗಿಗಳೂ ದಕ್ಷ ಮುಂತಾದ ಪ್ರಜಾಪತಿಗಳೂ ಪಿತೃಗಳ ಮುನಿಶ್ರೇಷ್ಠರ ಸಮೂಹಗಳಿಂದ ಯುಕ್ತರಾಗಿ ಬಂದರು. ಗಂಧರ್ವ ಸಿದ್ಧ ಯಕ್ಷರು ಹಂಸಾದಿ ಪಕ್ಷಿಗಳು ಮುಂತಾದವರೂ ಬಂದರು.

ಕೃಷ್ಣನ ಪೂಜೆಗೆ ಶಿವ ಬಂದ

ಶರ್ವೋಽಪಿ ಸರ್ವಸುರದೈವತಮಾತ್ಮ ದೈವ-
ಮಾಯಾಂತಮಾತ್ಮ ಗೃಹಸನ್ನಿಧಿಮಾಶ್ವವೇತ್ಯ ।
ಅಭ್ಯಾಯಯೌ ನಿಜಗಣೈಃ ಸಹಿತಃ ಸಭಾರ್ಯೋ
ಭಕ್ತ್ಯತಿಸಂಭ್ರಮಗೃಹೀತಸಮರ್ಹಣಾಗ್ರ್ಯಃ ॥೧೮೧॥

ಎಲ್ಲ ದೇವತೆಗಳಿಗೂ ದೇವ ಮತ್ತು ತನ್ನ ಆರಾಧ್ಯ ದೈವವಾದ ಶ್ರೀಕೃಷ್ಣ ತನ್ನ ಮನೆಯ ಬಳಿಗೆ ಬಂದುದನ್ನು ನೋಡಿ ಶಿವ ಬೇಗನೆ ಪತ್ನೀ ಸಮೇತನಾಗಿ ತನ್ನ ಗಣಗಳೊಂದಿಗೆ ಅತಿ ಸಂಭ್ರಮದಿದ ಪೂಜಾ ಸಾಮಗ್ರಿಗಳನ್ನು ಹೊತ್ತು ಭಕ್ತಿಯಿಂದ ಇದಿರುಗೊಂಡ.

ಶಿವ ತಪಸ್ಸಿಗೆ ಒಲಿದು ಮೈದೋರಿದ್ದಲ್ಲ. ಸೇವೆಗೊಗಿ ಬಳಿಗೆ ಓಡಿ ಬಂದಿದ್ದ. ಶ್ರೀಕೃಷ್ಣನ ಈ ಕೈಲಾಸಯಾತ್ರೆಯ ವೈಖರಿ ವೇದದಲ್ಲಿಯೆ ಸೂಚ್ಯವಾಗಿ ಬಂದಿದೆ ಎಂದು ವಾದಿರಾಜರು ಹರಿಭಕ್ತಿಲತಾ ಎಂಬ ಗ್ರಂಥದಲ್ಲಿ ವರ್ಣಿಸಿದ್ದಾರೆ-

ಕುಮಾರಶ್ಚಿತ್ ಪಿತರಂ ವಂದಮಾನಂ
ಪ್ರತಿನಾನಾಮ ರುದ್ರೋಪಯಂತಂ ।
ಭೂರೇರ್ದಾತಾರಂ ಸತ್ವತಿಂಗೃಣೀಷೇ
ಸ್ತುತಸ್ತ್ವಂ ಭೇಷಜಾ ರಾಸ್ಯಸ್ಮೇ ॥

(ಋಗ್ವೇದ ಮಂ. 2 ಸೂ. 33 ಮಂ. 12)

'ಹೇ ರುದ್ರನೆ! ಶ್ರೀಕೃಷ್ಣ ಅಸುರ ಮೋಹನಕ್ಕಾಗಿ ಕೈಲಾಸಕ್ಕೆ ಬಂದು ನಿನ್ನನ್ನು ನಮಿಸಿದಾಗ ಹಿರಿಯರು ಕಿರಿಯರಿಗೆ ಬೀರೆ ಉದ್ದೇಶ ನಮಸ್ಕಾರ ಮಾಡಿದ್ದನ್ನು ಕಿರಿಯರು ಒಪ್ಪಿಕೊಳ್ಳಬಾರದು. ಅದು ಪಾಪ ಜನಕ ಎಂಬ ಭಯದಿಂದ ತಂದೆಯಾದ ಕೃಷ್ಣನಿಗೆ ಮಗನಾದ ನೀನು ಪ್ರತಿಯಾಗಿ ಭಕ್ತಿಯಿಂದ ದೀರ್ಘ ನಮಸ್ಕಾರಮಾಡಿರುವೆ. ಅವನು ನಿನ್ನನ್ನು ಹೊಗಳಿದಾಗ ನೀನು ಮೋಕ್ಷವೆಂಬ ಮಹಾಪುರುಷಾರ್ಥ ಪ್ರದನಾದ ಅವನನ್ನು ಹೊಗಳಿರುವೆ. ಅಂಥಾ ನೀನು ನಮಗೆ ಭವರೋಗಕ್ಕೆ ಔಷಧವಾದ ಜ್ಞಾನವನ್ನು ನೀಡು'.

ಅಭ್ಯೇತ್ಯ ಪಾದಯುಗಲಂ ಜಗದೇಕಭರ್ತುಃ
ಕೃಷ್ಣಸ್ಯ ಭಕ್ತಿಭರಿತಃ ಶಿರಸಾ ನನಾಮ ।
ಚಕ್ರೇ ಸ್ತುತಿಂ ಚ ಪರಮಾಂ ಪರಮಸ್ಯ ಪೂರ್ಣ-
ಷಾಡ್ಗುಣ್ಯವಿಗ್ರಹವಿದೋಷಮಹಾವಿಭೂತೇಃ ॥೧೮೨॥

ಭಕ್ತಿ ಭರಿತನಾದ ಶಿವ ಜಗತ್ತಿನ ಮುಖ್ಯಪ್ರಭುವಾದ ಶ್ರೀಕೃಷ್ಣನ ಎರಡು ಪಾದಗಳನ್ನು ಸಮೀಪಿಸಿ ತಲೆಬಾಗಿ ನಮಿಸಿದ. ಪೂರ್ಣ ಷಡ್ಗುಣ ಶರೀರಿಯೂ ನಿರ್ದುಷ್ಟ ಮಹಾಐಶ್ವರ್ಯ ಶಾಲಿಯೂ ಆದ ಸರ್ವೋತ್ತಮನಾದ ಕೃಷ್ಣನ ಸರ್ವೋತ್ತಮವಾದ ಸ್ತುತಿಯನ್ನೂ ಮಾಡಿದ.

ಶಿವ ಕೃಷ್ಣನಿಗೆ ಕೈಮುಗಿದುನಿಂತು ಕೇಶವಾದಿ ನಾಮನಿರ್ವಚನ ರೂಪದಲ್ಲಿ ಸ್ತುತಿ ಮಾಡಿದ. ಉದಾ. 'ಕ' ಎಂದರೆ ಬ್ರಹ್ಮ. 'ಈಶ' ನಾನು. 'ಕೇಶ'ರು ನಾವು ನಿನ್ನಿಂದ ಜನಿಸಿದವರಾದ್ದರಿಂದ ನೀನು 'ಕೇಶವ' ಇತ್ಯಾದಿ. ಭೂತ ಭವಿಷ್ಯವರ್ತಮಾನವೆಲ್ಲ ನಿನ್ನ ಅಧೀನ. ನೀನಿಲ್ಲದೆ ಏನೂ ಇಲ್ಲ (ಭವಿ. 88.64) ಎಂದು ಮುಂತಾಗಿ ಪುರುಷಸೂಕ್ತಾರ್ಥಗರ್ಭಿತವಾಗಿ ಚೇತನ ತಾರತಮ್ಯ ಭೇದಗಳನ್ನು ತಿಳಿಸುತ್ತ ಸರ್ವೋತ್ತಮನಾದ ಹರಿಯ ಸರ್ವೋತ್ತಮಸ್ತುತಿಯನ್ನು ಶಿವ ಮಾಡುತ್ತಾನೆ.

ಕೃಷ್ಣೋಽಪ್ಯಯೋಗ್ಯಜನಮೋಹನಮೇವ ವಾಂಛನ್
ತುಷ್ಟಾವ ರುದ್ರಹೃದಿಗಂ ನಿಜಮೇವ ರೂಪಂ ।
ರುದ್ರೋ ನಿಶಮ್ಯ ತದುವಾಚ ಸುರಾನ್ ಸಮಸ್ತಾನ್
ಸತ್ಯಂ ವದಾಮಿ ಶೃಣುತಾದ್ಯ ವಚೋ ಮದೀಯಂ ॥೧೮೩॥

ಕೃಷ್ಣ ಅಯೋಗ್ಯ ಜನರಿಗೆ ಮೋಹವಾಗಲಿ ಎಂದು ಬಯಸುತ್ತ ರುದ್ರನ ಹೃದಯದಲ್ಲಿದ್ದ ತನ್ನದೇ ಆದ ರುದ್ರರೂಪವನ್ನು ಸ್ತುತಿಸಿದ. ರುದ್ರ ಅದನ್ನು ಕೇಳಿ ಎಲ್ಲ ದೇವತೆಗಳಿಗೂ ಹೇಳಿದ, 'ನಾನು ನಿಜವನ್ನೇ ಹೇಳುತ್ತೇನೆ. ನನ್ನ ಮಾತನ್ನು ಈಗ ಕೇಳಿ'.

ಹರಿ ಸರ್ವೋತ್ತಮ

ವಿಷ್ಣುಃ ಸಮಸ್ತಸುಜನೈಃ ಪರಮೋಽಭ್ಯುಪೇಯ
ಸ್ತತ್ಪ್ರಾಪ್ತಯೇಽಹಮನಿಲೋಽಥ ರಮಾಭ್ಯುಪಾಯಾಃ ।
ಏಷಾ ಹ್ಯಶೇಷನಿಗಮಾರ್ಥವಿನಿರ್ಣಯೋಽರ್ಥೋ
ಯದ್ ವಿಷ್ಣುರೇವ ಪರಮೋ ಮಮ ಚಾಬ್ಜಯೋನೇಃ ॥೧೮೪॥
ಅವ್ಯಕ್ತತಃ ಸಕಲಜೀವಗಣಾಚ್ಚ ನಿತ್ಯ-
ಮಿತ್ಯೇವ ನಿಶ್ಚಯ ಉತೈತದನು ಸ್ಮರಧ್ವಂ ।

ಇತ್ಯುಕ್ತವತ್ಯಖಿಲದೇವಗಣಾ ಗಿರೀಶೇ
ಕೃಷ್ಣಂ ಪ್ರಣೇಮುರತಿವೃದ್ಧರಮೇಶಭಕ್ತ್ಯಾ ॥೧೮೫॥

'ಸಮಸ್ತ ಸಜ್ಜನರೂ ವಿಷ್ಣುವನ್ನು ಸರ್ವೋತ್ತಮನೆಂದು ಆರಾಧಿಸಬೇಕು. ನಾನು ವಾಯು ಮತ್ತು ರಮಾದೇವಿಯರು ಅವನ ಪ್ರಾಪ್ತಿಗೆ ದ್ವಾರಭೂತರು ಮಾತ್ರ. ಆ ವಿಷ್ಣು ನನಗಿಂತ, ಬ್ರಹ್ಮನಿಗಿಂತ, ಲಕ್ಷ್ಮಿಗಿಂತ, ಸಕಲ ಜೀವ ಸಮೂಹಕ್ಕಿಂತ ಸದಾ ಉತ್ತಮ ಎನ್ನುವುದೇ ಸಕಲಶಾಸ್ತ್ರಗಳ ನಿರ್ಣಯ. ಇದು ನಿಶ್ಚಯ. ಇದನ್ನೇ ಸದಾ ಉಪಾಸನೆ ಮಾಡಿರಿ'. ಹೀಗೆ ಶಿವ ಹೇಳಿದಾಗ ಎಲ್ಲ ದೇವ ಸಮೂಹಗಳೂ ಬಹಳ ಉಕ್ಕಿದ ಭಕ್ತಿಭಾವದಿಂದ ಕೃಷ್ಣನನ್ನು ನಮಿಸಿದರು.

ಏತದೇವ ಪರಂ ವಸ್ತು ನೈತಸ್ಮಾತ್ ಪರಮಸ್ತಿ ವಃ।
ಏಷ ವೋ ಮೋಕ್ಷದಾತಾ ಚ ಏಷ ಮಾರ್ಗ ಉದಾಹೃತಃ।
ಹರಿರೀಶಃ ಸದಾ ಧ್ಯೇಯೋ ಭವದ್ಭಿಃ ಸತ್ವಮಾಸ್ಥಿತೈಃ
ನಾನ್ಯೋ ಜಗತಿ ದೇವೋಽಸ್ತಿ ವಿಷ್ಣೋರ್ನಾರಾಯಣಾತ್ ಪರಃ
ಧ್ಯಾತ್ವಾ ಮಾಂ ಸರ್ವಯತ್ನೇನ ತತೋ ಜಾನೀತ ಕೇಶವಂ

'ಹರಿಯೆ ಪರವಸ್ತು. ಅವನಿಗಿಂತ ಹೆಚ್ಚಿನದಿಲ್ಲ. ಅವನೆ ಮೋಕ್ಷದಾಯಕ. ಅವನೆ ಮೋಕ್ಷಮಾರ್ಗ. ಅವನನ್ನೇ ಸದಾ ಧ್ಯಾನಿಸಬೇಕು. ಅವನಿಗಿಂತ ಹೆಚ್ಚಿನ ದೇವತೆ ಇನ್ನೊಬ್ಬ ಜಗತ್ತಿನಲ್ಲೇ ಇಲ್ಲ. ನನ್ನನ್ನು ಧ್ಯಾನಿಸಿ ಕೇಶವನನ್ನು ತಿಳಿಯಿರಿ.'

ಇವು ಹರಿವಂಶ ಭವಿಷ್ಯಪರ್ವ 89ನೇ ಅಧ್ಯಾಯದ ಶ್ಲೋಕಗಳು

ಉಕ್ತೈರನ್ಯೈಶ್ಚ ಗಿರಿಶ ವಾಕ್ಯೈಸ್ತತ್ತ್ವವಿನಿರ್ಣಯೈಃ।
ಕೃಷ್ಣಸ್ಯೈವ ಗುಣಾಖ್ಯಾನೈಃ ಪುನರಿಂದ್ರಾದಿದೇವತಾಃ।
ಜ್ಞಾನಾಭಿವೃದ್ಧಿಮಗಮನ್ ಪುರಾಪಿ ಜ್ಞಾನಿನೋಽಧಿಕಂ ॥೧೮೬॥

ಕೃಷ್ಣನ ಗುಣಗಳನ್ನೇ ಹೇಳುವ ತತ್ವನಿರ್ಣಯಾತ್ಮಕವಾದ ಶಿವನ ಈ ವಚನಗಳಿಂದಲೂ ಅವನ ಬೇರೆ ವಚನಗಳಿಂದಲೂ ಇಂದ್ರಾದಿ ದೇವತೆಗಳು, ಮೊದಲೇ ಜ್ಞಾನಿಗಳಾಗಿದ್ದರೂ, ಇನ್ನೂ ಚೆನ್ನಾಗಿ ಹೆಚ್ಚಿನ ಜ್ಞಾನ ಸಂಪಾದಿಸಿದರು.

ಸರ್ವದೇವೋತ್ತಮಂ ತಂ ಹಿ ಜಾನಂತ್ಯೇವ ಸುರಾಃ ಸದಾ।
ತಥಾಪಿ ತತ್ಪ್ರಮಾಣಾನಾಂ ಬಹುತ್ವಾದ್ ಯತ್ರ ಸಂಶಯಾಃ ॥೧೮೭॥
ಯುಕ್ತಿಮಾತ್ರಾತ್ತೇಽಪಿ ರುದ್ರವಾಕ್ಯಾದಪಗತಾಸ್ತದಾ ॥೧೮೮॥

ಹರಿಯನ್ನು ಸರ್ವದೇವೋತ್ತಮನೆಂದು ದೇವತೆಗಳು ಸದಾ ತಿಳಿದೇ ಇದ್ದಾರೆ.

ಆದರೂ ಅದಕ್ಕೆ ಇರುವ ಪ್ರಮಾಣಗಳು ಆಪಾತತಃ ನಾನಾ ಬಗೆಯಾದ್ದರಿಂದ ಎಲ್ಲಿ ಶುಷ್ಕತರ್ಕ ಪ್ರಯುಕ್ತ ಸಂಶಯಗಳಿದ್ದುವೋ ಅಲ್ಲಿ ಆ ಸಂಶಯಗಳೂ ಶಿವನ ಮಾತಿನಿಂದ ಪರಿಹಾರವಾದುವು.

'ಹರಿ ಶಿವನಿಗಿಂತ ಕಡಿಮೆಯವ, ಏಕೆಂದರೆ ಅವನು ತಪಸ್ಸಿನಿಂದ ಶಿವನನ್ನು ಒಲಿಸಿಕೊಂಡು ವರವನ್ನು ಬೇಡಿ ಪಡೆದ'. ಇದು ಒಂದು ಬಾಧಿತವಾದ ಶುಷ್ಕತರ್ಕ. ಅದರಿಂದ ಬರಬಹುದಾದ ಸಂಶಯ ಶಿವನ ಮಾತುಗಳಿಂದಲೆ ಪರಿಹಾರವಾಗಿದೆ.

ಛಿನ್ನೋ ನಃ ಸಂಶಯಃ ಸರ್ವಃ (ಭವಿ 89.19) 'ನಮ್ಮ ಎಲ್ಲ ಸಂದೇಹ ಪರಿಹಾರವಾಯಿತು' ಎನ್ನುತ್ತಾರೆ ದೇವತೆಗಳು.

ಶಿವನಿಂದ ಪುತ್ರ ವರ

ತತಃ ಕೃಷ್ಣಃ ಸುತವರಂ ತ್ವತ್ತ ಆದಾಸ್ಯ ಇತ್ಯಜಃ ।
ಯದುಕ್ತವಾನ್ ಶಿವಂ ಪೂರ್ವಂ ಸತ್ಯಂ ಕರ್ತುಂ ತದಬ್ರವೀತ್ ॥೧೮೯॥
ಪುತ್ರಂ ದೇಹೀತಿ ಸೋಽಪ್ಯಾಹ ಪೂರ್ವಮೇವ ಸುತಸ್ತವ ।
ಜಾತಃ ಪ್ರದ್ಯುಮ್ನನಾಮಾ ಯಃ ಸ ಮದ್ದತ್ತಃ ಪ್ರವಾದತಃ ॥೧೯೦॥

ಬಳಿಕ ಶ್ರೀಕೃಷ್ಣ 'ಶ್ರೇಷ್ಠ ಪುತ್ರನನ್ನು ನಿನ್ನಿಂದ ಪಡೆಯುವೆನು' ಎಂದು. ಹಿಂದೆ ಶಿವನಿಗೆ ತಾನು ಏನು ಹೇಳಿದ್ದನೋ ಅದನ್ನು ಸತ್ಯ ಮಾಡುವುದಕ್ಕಾಗಿ ಈಗ 'ಮಗನನ್ನು ಕೊಡೆಂ' ದು ಹೇಳಿದ. ಶಿವನೆಂದ, 'ಹಿಂದೆಯೆ ನಿನ್ನ ಪ್ರದ್ಯುಮ್ನನೆಂಬ ಮಗ ಹುಟ್ಟಿದ್ದ. ಅವನೆ ನಾನು ನಿನಗೆ ಕೊಟ್ಟ ಮಗನೆಂದು ಜನರು ಹೇಳಿಕೊಳ್ಳಲಿ'.

ನಾನು ನಿನಗೆ ಮಗನನ್ನು ಕೊಡುತ್ತಿಲ್ಲ. ನಿನ್ನ ಮಗನನ್ನು ನೀನು ಈಗಾಗಲೆ ಹುಟ್ಟಿಸಿರುವಿ. ಆದರೂ ನನ್ನ ವರದಿಂದ ಆತ ನಿನಗೆ ಮಗನಾಗಿ ಹುಟ್ಟಿದನೆಂದು ಅಜ್ಞಲೋಕ ತಿಳಿಯಲಿ.

ಪುರಾ ದಗ್ಧೋ ಮಯಾ ಕಾಮಸ್ತದಾಯಾಚತ ಮಾಂ ರತಿಃ ।
ದೇಹಿ ಕಾಂತಂ ಮಮೇತ್ಯೇವ ತದಾ ತಾಮಹಮಬ್ರವಂ ॥೧೯೧॥
ಉತ್ಪತ್ಸ್ಯತೇ ವಾಸುದೇವಾದ್ ಯದಾ ತಂ ಪತಿಮಾಪ್ಸ್ಯಸಿ ।
ಇತ್ಯತೋಽಸೌ ಮಯಾ ದತ್ತ ಇವ ದೇವ ತ್ವದಾಜ್ಞಯಾ ॥೧೯೨॥

ಹಿಂದೆ ನಾನು ಮನ್ಮಥನನ್ನು ಸುಟ್ಟಾಗ ರತಿ 'ನನಗೆ ಪತಿಯನ್ನು ನೀಡು' ಎಂದು ಬೇಡಿದಳು. ಆಗ ನಾನು ಅವಳಿಗೆ ಹೇಳಿದೆ, 'ಕೃಷ್ಣನಿಂದ ಅವನು ಹುಟ್ಟಿದಾಗ ನೀನು ನಿನ್ನ ಪತಿಯನ್ನು ಹೊಂದುವಿ' ಎಂದು. ಅದರಿಂದ ನಿನ್ನಾಜ್ಞೆಯಿಂದ ನಾನು ನಿನಗೆ ಮಗನನ್ನು ಕೊಟ್ಟಂತೇ ಆಯಿತು.

ದಾಸೋಽಸ್ಮಿ ತವ ದೇವೇಶ ಪಾಹಿ ಮಾಂ ಶರಣಾಗತಂ ।
ಇತ್ಯುಕ್ತ್ವಾಭಿಪ್ರಣಮ್ಯೈನಂ ಪುನರಾಹ ಸುರಾನ್ ಹರಃ ॥೧೯೩॥
ಯದರ್ಥಮೇಷ ಆಯಾತಃ ಕೇಶವಃ ಶೃಣುತಾಮರಾಃ ॥೧೯೪॥
ಯೋಽಸುರೋ ವಕ್ರನಾಮಾಸೀದವಧ್ಯೋ ಬ್ರಹ್ಮಣೋ ವರಾತ್ ।
ತದಾ ಜಾತಾದ್ವಾಸುದೇವಪುತ್ರಾತ್ಕಾಮಾದೃತೇ ಕ್ವಚಿತ್ ॥೧೯೫॥
ತಂ ಹಂತುಮೇವ ಪುತ್ರಂ ಸ್ವಂ ಪ್ರದ್ಯುಮ್ನಮುದರೇಽಪ್ಯ ಚ ।
ಆಯಾತ ಇಹ ತಂ ಚಾಪಿ ದದಾಹ ಸ್ವೋದರಾತ್ಸುತಂ ।
ನಿಸ್ಸಾರಯಿತ್ವಾ ಕಕ್ಷಂ ಚ ದಗ್ಧಂ ಪಶ್ಯತ ದೇವತಾಃ ॥೧೯೬॥

ದೇವೇಶ್ವರ, ನಾನು ನಿನ್ನ ದಾಸ, ಶರಣಾಗತನಾದ ನನ್ನನ್ನು ಕಾಪಾಡು. ಹೀಗೆ ಶಿವ ಹೇಳಿ ಶ್ರೀಕೃಷ್ಣನನ್ನು ನಮಿಸಿ ಪುನಃ ದೇವತೆಗಳಿಗೆ ಹೇಳಿದ, 'ದೇವತೆಗಳೆ, ಶ್ರೀಕೃಷ್ಣ ಇಲ್ಲಿಗೆ ಏಕೆ ಬಂದನೆಂಬುದನ್ನು ಕೇಳಿ. ವಕ್ರನೆಂಬ ಅಸುರ ಬ್ರಹ್ಮನ ವರದಿಂದ ತತ್ಕಾಲದಲ್ಲಿ ಹುಟ್ಟುವ ಕೃಷ್ಣಪುತ್ರನಾದ ಮನ್ಮಥನಿಂದ ಹೊರತು ಬೇರೆಯವರಿಂದ ಅವಧ್ಯನಾಗಿದ್ದ. ಅವನನ್ನು ಕೊಲ್ಲುವುದಕ್ಕಾಗಿಯೆ ತನ್ನ ಮಗನಾದ ಪ್ರದ್ಯುಮ್ನನನ್ನು ಹೊಟ್ಟೆಯಲ್ಲಿ ಇಟ್ಟುಕೊಂಡು ಇಲ್ಲಿಗೆ ಬಂದಿದ್ದ. ತನ್ನ ಹೊಟ್ಟೆಯಿಂದ ಮಗನನ್ನು ಹೊರಗೆ ತಂದು ಅವನ ಮೂಲಕ ಅಸುರನನ್ನೂ ಈ ಕಾಡನ್ನೂ ಸುಟ್ಟ. ಅವನು ಈ ಕಾಡನ್ನು ಸುಟ್ಟಿದ್ದನ್ನು ನೋಡಿರಿ.

ಜ್ವಾಲಾಮಾಲಾಕರಾಲೇನ ಸ್ವತೇಜೋವರ್ಧಿತೇನ ಚ ।
ಪ್ರದ್ಯುಮ್ನೇನೈವ ತಂ ದೈತ್ಯಂ ದಗ್ಧ್ವಾ ವನಸಮನ್ವಿತಂ ।
ಪುನಶ್ಚ ಸ್ವೋದರೇ ಪುತ್ರಂ ಸ್ಥಾಪಯಾಮಾಸ ಕೇಶವಃ ॥೧೯೭॥
ಸದ್ಯೋಗರ್ಭಂ ಪುನಸ್ತಂ ಚ ರುಕ್ಮಿಣ್ಯಾಂ ಜನಯಿಷ್ಯತಿ ॥೧೯೮॥

ಶ್ರೀಕೃಷ್ಣ ಪ್ರದ್ಯುಮ್ನನನ್ನು ತನ್ನ ತೇಜಸ್ಸಿನಿಂದ ತುಂಬಿಸಿ ಜ್ವಾಲೆಗಳ ಮಾಲೆಯಿಂದ ಭಯಂಕರನಾದ ಆತನಿಂದ ಕಾಡಿನೊಂದಿಗೇ ದೈತ್ಯನನ್ನು ಸುಡಿಸಿ ಪುನಃ ಅವನನ್ನು ತನ್ನ ಹೊಟ್ಟೆಯೊಳಗೆ ಇರಿಸಿಕೊಂಡ. ಹೀಗೆ ತತ್ಕಾಲದಲ್ಲಿ ಹುಟ್ಟಿದ ಈ ಪ್ರದ್ಯುಮ್ನನನ್ನು ಇನ್ನು ರುಕ್ಮಿಣಿಯಲ್ಲಿ ಹುಟ್ಟಿಸುತ್ತಾನೆ.

ಪೂರ್ವವತ್ ಕ್ಷಣಮಾತ್ರೇಣ ಯುವಾ ಚ ಸ ಭವಿಷ್ಯತಿ ॥೧೯೯॥
ದೃಷ್ಟಮೇತನ್ನಾರದಾದ್ಯೈರ್ಮುನಿಭಿಃ ಸರ್ವಮೇವ ಚ ।
ಏವಂ ಕ್ರೀಡತ್ಯಯಂ ದೇವಃ ಪೂರ್ಣೈಶ್ವರ್ಯೇಣ ಕೇವಲಂ ।
ಇತ್ಯುಕ್ತೇ ಕೇಶವಂ ನೇಮುರ್ದೇವಾಃ ಶಕ್ರಪುರೋಗಮಾಃ ॥೨೦೦॥

ಹಿಂದಿನಂತೆ ಪ್ರದ್ಯುಮ್ನ ಒಂದು ಕ್ಷಣದಲ್ಲಿ ಯುವಕನಾಗುತ್ತಾನೆ. ಇದೆಲ್ಲವೂ ನಾರದಾದಿ ಮುನಿಗಳಿಂದ ದೃಷ್ಟವಾಗಿದೆ. ಹೀಗೆ ಕೇವಲ ಪೂರ್ಣವಾದ ಶಕ್ತಿಯಿಂದ ಈ ದೇವ ಕ್ರೀಡಿಸುತ್ತಾನೆ'. ಹೀಗೆ ಶಿವ ಹೇಳಲು ಇಂದ್ರಾದಿ ದೇವತೆಗಳು ಶ್ರೀಕೃಷ್ಣನನ್ನು ನಮಿಸಿದರು.

ಹಿಂದೆ ಒಂದು ಕ್ಷಣದಲ್ಲಿ ಪ್ರದ್ಯುಮ್ನ ಯುವಕನಾದುದು ವಕ್ರಾಸುರ ವಧೆಯಲ್ಲಿ.

ರುಕ್ಮಿಣಿಯ ಗರ್ಭದಲ್ಲಿ ಹುಟ್ಟಿ ಶಂಬರಾಸುರನಿಂದ ಅಪಹೃತನಾಗಿ ಅವನ ಅರಮನೆಯನ್ನೆ ಸೇರಿದಾಗಲೂ ಒಂದು ಕ್ಷಣದಲ್ಲಿ ಅಂದರೆ ಅತ್ಯಲ್ಪಕಾಲದಲ್ಲಿ ಯೌವನ ಹೊಂದುತ್ತಾನೆ. ನಾಲ್ಕೇ ವರ್ಷಗಳಲ್ಲಿ ಹದಿನಾರರ ತಾರುಣ್ಯ ಬಂದಿತೆಂದು ಹರಿವಂಶ ಹೇಳಿದೆ.

ತತೋ ಹರಿರ್ಬ್ರಹ್ಮಸುರೇಂದ್ರಮುಖ್ಯೈಃ
ಸುರೈಃ ಸ್ತುತೋ ಗರುಡಸ್ಕಂಧಸಂಸ್ಥಃ ।
ಪುನಃಪುನಃ ಪ್ರಣತಃ ಶಂಕರೇಣ
ಸ್ತುತಸ್ತೃತೀಯೇಽಹ್ನಿ ನಿಜಾಂ ಪುರೀಮಗಾತ್ ॥೨೦೧॥

ಬಳಿಕ ಶ್ರೀಕೃಷ್ಣ ಬ್ರಹ್ಮ ಇಂದ್ರಾದಿ ದೇವತೆಗಳಿಂದಲೂ ಸ್ತುತನಾಗಿ ಗರುಡನ ಹೆಗಲೇರಿ ಶಿವನಿಂದ ಪುನಃ ಪುನಃ ನಮಸ್ಕೃತನಾಗಿ ಸ್ತುತನಾಗಿ ಮೂರನೆದಿನ ತನ್ನ ಪಟ್ಟಣಕ್ಕೆ ಹಿಂತಿರುಗಿದ.

ದ್ವಾರಕೆಯಿಂದ ಕೈಲಾಸಕ್ಕೆ ಹೋದ ಶ್ರೀಕೃಷ್ಣ ಮೂರು ದಿನಗಳೊಳಗೆ ಹಿಂತಿರುಗಿ ಬಂದಿದ್ದ. ಹರಿವಂಶದಲ್ಲಿ ಕಾಣುವಂತೆ ಹನ್ನೆರಡು ವರ್ಷಗಳ ಬಳಿಕ ಅಲ್ಲ. ಹನ್ನೆರಡು ವರ್ಷ ಒಂದೇ ದಿನವಾಗಿತ್ತು.

ಏಕಲವ್ಯ - ಬಲರಾಮ ಯುದ್ಧ

ಕೃಷ್ಣೇ ಪ್ರಯಾತೇ ನಿಲಯಂ ಪುರದ್ವಿಷೋ
ರಾತ್ರೌ ಪೌಂಡ್ರೋ ವಾಸುದೇವಃ ಸಮಾಗಾತ್ ।
ಸಹೈಕಲವ್ಯೇನ ನಿಜೇನ ಮಾತುಃ
ಪಿತ್ರಾ ತಥಾಕ್ಷೌಹಿಣೀಕತ್ರಯೇಣ ॥೨೦೨॥

ಶ್ರೀಕೃಷ್ಣ ಕೈಲಾಸಕ್ಕೆ ಹೋದ ಮರುದಿನವೆ ರಾತ್ರಿಯಲ್ಲಿ ಪೌಂಡ್ರಕ ವಾಸುದೇವ ಏಕಲವ್ಯ ಸಮೇತನಾಗಿ ತನ್ನ ತಾಯಿಯ ತಂದೆಯೊಂದಿಗೆ ಮೂರು ಅಕ್ಷೌಹಿಣಿ ಸೈನ್ಯಯುಕ್ತನಾಗಿ ದ್ವಾರಕೆಗೆ ಬಂದ.

ವಸುದೇವ ಮಹಾರಾಜ ಹಿಂದೆ ಕಾಶಿರಾಜನಿಗೆ ತನ್ನ ರಾಜ್ಯವನ್ನು ಕನ್ಯಾಶುಲ್ಕವಾಗಿ ಕೊಡಲು ಒಪ್ಪಿ ಅವನ ಮಗಳಾದ ಸುತನುವನ್ನು ಮದುವೆಯಾಗಿದ್ದ. ಅವಳಲ್ಲಿ ಪೌಂಡ್ರಕ ಹುಟ್ಟಿದೊಡನೆ ಅವನಿಗೆ ರಾಜ್ಯವನ್ನು ಒಪ್ಪಿಸಿ ಮುಂದೆ ದೇವಕಿಯನ್ನು ಮದುವೆಯಾದ ಬಳಿಕ ಎಂದೂ ಕಾಶಿಗೆ ಹೋಗಲೇ ಇಲ್ಲ. ತನ್ನನ್ನೂ ತಾಯಿಯನ್ನೂ ಮರೆತು ಬೇರೆ ಮದುವೆ ಮಾಡಿಕೊಂಡನೆಂದು ವಸುದೇವನಲ್ಲಿಯೂ ಎಲ್ಲ ಯಾದವರಲ್ಲಿಯೂ ಪೌಂಡ್ರಕ ದ್ವೇಷ ಬೆಳೆಸಿಕೊಂಡ.

ಪುರೀಂ ಪ್ರಭಂಜಂತಮಮುಂ ವಿದಿತ್ವಾ
ಸರಾಮಶೈನೇಯಯದುಪ್ರವೀರಾಃ ।
ಸಂಯೋಧಯಾಮಾಸುರಥಾಭ್ಯವರ್ಷತ್
ಶರೈರ್ನಿಷಾದಾಧಿಪ ಏಕಲವ್ಯಃ ॥೨೦೩॥

ಪೌಂಡ್ರಕ ದ್ವಾರಕೆಯನ್ನು ನಾಶಮಾಡಲು ತೊಡಗಿದುದನ್ನು ತಿಳಿದು ಬಲರಾಮ ಸಾತ್ಯಕಿ ಮತ್ತು ಬೇರೆ ಯಾದವವೀರರು ಚೆನ್ನಾಗಿ ಯುದ್ಧ ಮಾಡಿದರು. ಬೇಡರಿಗೆ ನಾಯಕನಾದ ಏಕಲವ್ಯ ಬಾಣಗಳ ಮಳೆಗರೆದ.

ತದಸ್ತ್ರಶಸ್ತ್ರೈಃ ಸಹಸಾ ವಿಷಣ್ಣಾ
ಯದುಪ್ರವೀರಾ ವಿಗತಪ್ರದೀಪಾಃ ।
ಸಹೈವ ರಾಮೇಣ ಶಿನೇಶ್ಚ ನಪ್ತ್ರಾ
ಸಮಾವಿಶನ್ ಸ್ವಾಂ ಪುರಮೇವ ಸರ್ವೇ ॥೨೦೪॥

ಯಾದವರು ಏಕಲವ್ಯನ ಅಸ್ತ್ರಶಸ್ತ್ರಗಳಿಂದ ಬೇಗನೆ ಪೀಡಿತರಾದ್ದರಿಂದ ದೀಪಗಳೂ ಆರಿದ್ದರಿಂದ ಬಲರಾಮ ಸಾತ್ಯಕಿಗಳೊಡನೆ ಎಲ್ಲರೂ ಪಟ್ಟಣವನ್ನು ಪ್ರವೇಶಿಸಿದರು.

ಎಂಬತ್ತೆಂಟು ಸಾವಿರ ಬೇಡರ ಸೈನ್ಯ ಏಕಲವ್ಯನಿಗಿತ್ತು. ಅವನ ಶಸ್ತ್ರಾಸ್ತ್ರಗಳಿಂದ ಯಾದವರ ದೀಪ ಆರಿದುವು ಎನ್ನುತ್ತದೆ ಜನಾರ್ದನೀಯ.

ದೀಪಿಕಾಸು ಪ್ರಶಾಂತಾಸು ನಿಃಶಬ್ದೇ ಸತಿ ಸರ್ವತಃ

'ದೀಪಗಳು ಆರಿದುವು ಎಲ್ಲೆಲ್ಲೂ ನಿಃಶಬ್ದವಾಯಿತು' ಎಂದಿದೆ ಹರಿವಂಶ. ದೀಪ ಏಕಲವ್ಯನ ಶಸ್ತ್ರಾಸ್ತ್ರಗಳಿಂದ ಆರಿದುವೆ, ಯಾದವರು ಸ್ವತಃ ಆರಿಸಿದರೆ ಎನ್ನುವುದು ತಿಳಿಯುವುದಿಲ್ಲ. ವಾದಿರಾಜೀಯ ಪ್ರಕಾರ ಇನ್ನೂ ಹೆಚ್ಚು ಶಸ್ತ್ರಾಸ್ತ್ರಗಳನ್ನು ತರಲು ನಗರವನ್ನು ಪ್ರವೇಶಿಸಬೇಕೆಂದು ಯಾದವರು ತಮ್ಮ ದೀಪಗಳನ್ನು ತಾವೇ ಆರಿಸಿದರು.

ನಿರ್ಣಯದ ಮುಂದಿನ ಶ್ಲೋಕದಲ್ಲಿ ಪುನಃ ದೊಡ್ಡ ದೀಪಗಳನ್ನು ಹಿಡಿದು ಆಯುಧಗಳನ್ನೂ ಎತ್ತಿಕೊಂಡು ಯಾದವರು ತಿರುಗಿ ನಗರದಿಂದ ಹೊರಗೆ ಬಂದರು ಎಂದಿದೆ. ದೀಪಗಳು ಆರಿದ್ದರಿಂದ ದೊಡ್ಡ ದೀಪಗಳನ್ನು ತರಲು ನಗರದೊಳಗೆ ಹೋಗಿದ್ದರು ಎಂದರೂ ಸರಿಯೆ, ಆಯುಧಗಳು ತೀರಿದ್ದರಿಂದ ಹೊಸ ಆಯುಧಗಳನ್ನು ತರಲು ದೀಪಗಳನ್ನು ತಾವೇ ಆರಿಸಿಕೊಂಡು ಹೋದರು ಎಂದರೂ ಸರಿಯೆ.[1]

---

1. ತದಸ್ತ್ರಶಸ್ತ್ರೈಃ ಏಕಲವ್ಯಾಸ್ತ್ರಶಸ್ತ್ರೈಃ ವಿಹತ ಪ್ರದೀಪಾಃ ನಾಶಿತ ಪ್ರಕೃಷ್ಟದೀಪಾಃ। -ಜನಾರ್ದನೀಯ
ವಿಹತಾಃ ಪ್ರದೀಪಾಃ ರಾತ್ರಿಯುದ್ಧ ದೀಪಾಃ ಯೇಷಾಂ ತೇ ತಥೋಕ್ತಾಃ। ಪ್ರಕಾಶೇ ಸತಿ ದೃಷ್ಟಾ ಪ
ಶರೈರ್ವಿಧ್ಯೇದಿತಿ ಭಯೇನ ದೀಪಾನ್ ನಾಶಿತವಂತ ಇತ್ಯರ್ಥಃ। -ವಾದಿರಾಜೀಯ

ಪುನಃ ಸಮಾದಾಯ ತಥೋರುದೀಪಿಕಾ
ಅಗ್ರೇ ಸಮಾಧಾಯ ಚ ರೌಹಿಣೇಯಂ ।
ವಿನಿಸ್ಸೃತಾ ಆತ್ತಶಸ್ತ್ರಾಃ ಸ್ವಪುರ್ಯಾಃ
ಸಿಂಹಾ ಯಥಾ ಧರ್ಷಿತಾಃ ಸದ್ಗುಹಾಯಾಃ ॥೨೦೫॥

ಯಾದವರು ಪುನಃ ದೊಡ್ಡ ದೀಪಗಳನ್ನು ಹಿಡಿದು ಆಯುಧಗಳನ್ನೂ ಎತ್ತಿಕೊಂಡು ಬಲರಾಮನನ್ನು ಮುಂದೆ ಮಾಡಿಕೊಂಡು ಕೆರಳಿಸಲ್ಪಟ್ಟ ಸಿಂಹಗಳು ಗುಹೆಯಿಂದ ಹೇಗೋ ಹಾಗೆ ತಮ್ಮ ನಗರದಿಂದ ಹೊರಗೆ ಬಂದರು.

ಅಥಾಸಸಾದೈಕಲವ್ಯಂ ರಥೇನ
ರಾಮಃಶ್ಯೈನೇಯಃ ಪೌಂಡ್ರಕಂ ವಾಸುದೇವಂ ।
ಅಯುಧ್ಯತಾಂ ತೌ ಸಾತ್ಯಕಿಃ ಪೌಂಡ್ರಕಶ್ಚ
ತಥಾನ್ಯೋನ್ಯಂ ವಿರಥಂ ಚಕ್ರತುಶ್ಚ ॥೨೦೬॥

ಬಲರಾಮ ರಥದಿಂದ ಏಕಲವ್ಯನನ್ನು ಇದಿರಿಸಿದ. ಸಾತ್ಯಕಿ ಪೌಂಡ್ರಕ ವಾಸುದೇವನನ್ನು ಇದಿರಿಸಿದ. ಸಾತ್ಯಕಿಯೂ ಪೌಂಡ್ರಕನೂ ಯುದ್ಧ ಮಾಡಿದರು. ಪರಸ್ಪರರನ್ನು ವಿರಥರನ್ನಾಗಿಸಿದರು.

ತತೋ ಗದಾಯುದ್ಧಮಭೂತ್ತಯೋರ್ವೀರಯೋ
ಸ್ತಥಾ ರಾಮಶ್ಚೈಕಲವ್ಯಶ್ಚ ವೀರೌ ।
ಕೃತ್ವಾನ್ಯೋನ್ಯಂ ವಿರಥಂ ತೌ ಗದಾಭ್ಯಾ-
ಮಯುಧ್ಯತಾಂ ಜಾತದರ್ಪೌ ಬಲಾಗ್ರ್ಯೌ ॥೨೦೭॥

ಬಳಿಕ ಸಾತ್ಯಕಿ ಪೌಂಡ್ರಕರೊಳಗೆ ಗದಾಯುದ್ಧ ನಡೆಯಿತು. ವೀರರೂ ಬಲಿಷ್ಠರೂ ದರ್ಪಶಾಲಿಗಳೂ ಆದ ಬಲರಾಮ ಏಕಲವ್ಯರೂ ಪರಸ್ಪರರನ್ನು ವಿರಥರನ್ನಾಗಿಸಿ ಗದೆಗಳಿಂದ ಯುದ್ಧ ಮಾಡಿದರು.

ತಸ್ಮಿನ್‌ಕಾಲೇ ಕೇಶವೋ ವೈನತೇಯ-
ಮಾರುಹ್ಯಾಯಾದ್‌ಯತ್ರ ತೇ ಯುದ್ಧಸಂಸ್ಥಾಃ ।
ದೃಷ್ಟ್ವಾ ಕೃಷ್ಣಂ ಹರ್ಷಸಂಪೂರಿತಾತ್ಮಾ
ರಾಮೋ ಹಂತುಂ ಚೈಕಲವ್ಯಂ ಸಮೈಚ್ಛತ್ ॥೨೦೮॥

ಅಷ್ಟರಲ್ಲಿ ಶ್ರೀಕೃಷ್ಣ ಗರುಡಾರೂಢನಾಗಿ ಯಾದವರು ಯುದ್ಧ ಮಾಡುತ್ತಿದ್ದ ಸ್ಥಳಕ್ಕೆ ಬಂದ. ಕೃಷ್ಣನನ್ನು ಕಂಡು ಬಲರಾಮ ಹರ್ಷಪೂರ್ಣ ಚಿತ್ತನಾಗಿ ಏಕಲವ್ಯನನ್ನು ಕೊಲ್ಲಲು ಬಯಸಿದ.

ಉದ್ಯಮ್ಯ ದೋರ್ಭ್ಯಾಂ ಸ ಗದಾಂ ಜವೇನ
ಯದಾಪತದ್ ರೌಹಿಣೇಯೋ ನಿಷಾದಂ ।

ಬಲಂ ಕೋಪಂ ಚಾಸ್ಯ ದೃಷ್ಟ್ವೈಕಲವ್ಯಃ
ಪರಾದ್ರವಜ್ಜೀವಿತೇಚ್ಛುಃ ಸುದೂರಂ ॥೨೦೯॥

ಬಲರಾಮ ವೇಗದಿಂದ ಎರಡೂ ಕೈಗಳಿಂದ ಗದೆಯನ್ನೆತ್ತಿ ಹಿಡಿದು ಏಕಲವ್ಯನ ಮೇಲೇರಿ ಬಂದಾಗ ಅವನ ಆ ಬಲವನ್ನೂ ಕೋಪವನ್ನೂ ಕಂಡು ಏಕಲವ್ಯ ಬದುಕಿ ಉಳಿವ ಆಸೆಯಿಂದ ಬಲು ದೂರಕ್ಕೆ ಪಲಾಯನಗೈದ.

ವಿದ್ರಾವಯನ್ರೌಹಿಣೇಯೋಽನ್ವಯಾತ್ತಂ
ಭೀತೋಽಪತಚ್ಚಿಕಲವ್ಯೋಽಂಬುಧೌ ಸಃ।
ವೇಲಾಂತಂ ತಂ ದ್ರಾವಯಿತ್ವಾತ್ರ ತಸ್ಥೌ
ರಾಮೋ ಗದಾಪಾಣಿರದೀನಸತ್ತ್ವಃ ॥೨೧೦॥

ಬಲರಾಮ ಏಕಲವ್ಯನನ್ನು ಬೆನ್ನಟ್ಟಿ ಹೋದ. ಏಕಲವ್ಯ ಅಂಜಿ ಸಮುದ್ರದಲ್ಲಿ ಬಿದ್ದ. ಮಹಾಬಲ ಬಲರಾಮ ಸಮುದ್ರ ತೀರದವರೆಗೂ ಅವನನ್ನು ಅಟ್ಟಿಸಿಕೊಂಡು ಹೋಗಿ ಅಲ್ಲಿ ಗದಾಪಾಣಿಯಾಗಿ ನಿಂತ.

ಸುಪಾಪೋಽಸಾವೇಕಲವ್ಯಃ ಸುಭೀತೋ
ರಾಮಂ ಮತ್ವೈವಾನುಯಾಂತಂ ಪುನಶ್ಚ।
ಸಮುದ್ರೈಕಶೀತಿಂ ಯೋಜನಾನಾಮತೀತ್ಯ
ಪಶ್ಚಾದ್ದೈಕ್ಷದ್ ದ್ವೀಪಮೇವಾಧಿರುಹ್ಯ ॥೨೧೧॥

ಮಹಾಪಾಪಿಯಾದ ಏಕಲವ್ಯ ಬಹಳ ಭೀತನಾಗಿ ಬಲರಾಮನಿನ್ನೂ ತನ್ನನ್ನು ಅಟ್ಟಿಸಿಕೊಂಡು ಬರುತ್ತಿದ್ದಾನೆ ಎಂದು ಭ್ರಮಿಸಿ ಸಮುದ್ರದಲ್ಲಿ ಎಂಬತ್ತು ಯೋಜನ ದೂರವನ್ನು ದಾಟಿ ಒಂದು ದ್ವೀಪವನ್ನೇರಿ ಹಿಂತಿರುಗಿ ನೋಡಿದ, ಬಲರಾಮ ಬರುತ್ತಿರುವನೆ? ಎಂದು.

ರಾಮೋ ವಿಜಿತ್ಯಾತಿಬಲಂ ರಣೇ ರಿಪುಂ
ಮುದೈವ ದಾಮೋದರಮಾಸಸಾದ।
ಪೌಂಡ್ರಸ್ತ್ವವಜ್ಞಾಯ ಶಿನಿಪ್ರವೀರಂ
ನಿವಾರ್ಯಮಾಣೋಽಭಿಯಯೌ ಜನಾರ್ದನಂ ॥೨೧೨॥

ಬಲರಾಮ ಅತಿ ಬಲಿಷ್ಠ ಶತ್ರುವಾದ ಏಕಲವ್ಯನನ್ನು ಯುದ್ಧದಲ್ಲಿ ಪರಾಜಯಗೊಳಿಸಿ ಆನಂದದಿಂದಲೆ ಕೃಷ್ಣನ ಬಳಿಗೆ ಬಂದ. ಆದರೆ ಪೌಂಡ್ರಕ ವಾಸುದೇವ ಸಾತ್ಯಕಿಯನ್ನು ತಿರಸ್ಕರಿಸಿ, ಅವನು ತಡೆಯುತ್ತಿದ್ದಂತೆಯೆ ಕೃಷ್ಣನ ಇದಿರಿಗೆ ಬಂದು ನಿಂತ.

ತಿರಸ್ಕರಿಸಿ ಎಂದರೆ ಆಲಕ್ಷ್ಯದಿಂದ ಬೆನ್ನು ಹಾಕಿ ಕೃಷ್ಣನ ಕಡೆಗೆ ಹೊರಟ ಪೌಂಡ್ರಕ. ಆಗ ಸಾತ್ಯಕಿ 'ನನ್ನನ್ನು ಸೋಲಿಸಿಯೆ ಮುಂದೆ ಹೊಗು' ಎಂದರೂ

ಆತ ಹಿಂತಿರುಗಲಿಲ್ಲ. ಸಾತ್ಯಕಿ ವೇಗವಾಗಿ ಅವನ ಮುಂದೆ ಹೋಗಿನಿಂತ. ಶ್ರೀಕೃಷ್ಣ ಇನ್ನೂ ನೋಡುತ್ತಲೆ ಇದ್ದ. ಪೌಂಡ್ರಕನಿನ್ನೂ ತಿರಸ್ಕಾರದಿಂದ ಕೃಷ್ಣನ ಬಳಿಗೇ ಹೊರಟ. ಆಗ ಕೋಪದಿಂದ ಸಾತ್ಯಕಿ ಅವನನ್ನು ಬೈದು ಗದೆಯಿಂದ ಹೊಡೆದ. ಶ್ರೀಕೃಷ್ಣ 'ಭೇಷ್' ಎಂದ. ಬಳಿಕ ಸಾತ್ಯಕಿಯನ್ನು ತಡೆದು 'ಅವನು ತನ್ನಿಷ್ಟದಂತೆ ಮಾಡಲಿ ಬಿಡು' ಎಂದ.

ಪೌಂಡ್ರಕ ವಧ

ತಂ ಕೇಶವೋ ವಿರಥಂ ವ್ಯಾಯುಧಂ ಚ
ಕ್ಷಣೇನ ಚಕ್ರೇ ಸ ಯಯೌ ನಿಜಾಂ ಪುರೀಂ ।
ಪ್ರಸ್ಥಾಪಯಾಮಾಸ ಪುನಶ್ಚ ದೂತಂ
ಕೃಷ್ಣಾಯೈಕೋ ವಾಸುದೇವೋಽಹಮಸ್ಮಿ ॥೨೧೩॥

ಮದೀಯಲಿಂಗಾನಿ ವಿಸೃಜ್ಯ ಚಾಶು
ಸಮಾಗಚ್ಛೇಥಾಃ ಶರಣಂ ಮಾಮನಂತಂ ।
ತದ್ದೂತೋಕ್ತಂ ವಾಕ್ಯಮೇತನ್ನಿಶಮ್ಯ
ಯದುಪ್ರವೀರಾ ಉಚ್ಚಕೈಃ ಪ್ರಾಹಸನ್ ಸ್ಮ ॥೨೧೪॥

ಶ್ರೀಕೃಷ್ಣ ಪೌಂಡ್ರಕನನ್ನು ಒಂದು ಕ್ಷಣದಲ್ಲಿ ವಿರಥನನ್ನಾಗಿ ನಿರಾಯುಧನನ್ನಾಗಿ ಮಾಡಿದ. ಆಗ ಪೌಂಡ್ರಕ ತನ್ನ ಪಟ್ಟಣಕ್ಕೆ ತೆರಳಿದ. ಪುನಃ ಶ್ರೀಕೃಷ್ಣನಿಗೆ ದೂತನನ್ನು ಅಟ್ಟಿದ - 'ವಾಸುದೇವ ನಾನೊಬ್ಬನೆ. ನನ್ನ ಚಿಹ್ನೆಗಳನ್ನು ನನಗೆ ಬಿಟ್ಟು ಕೊಟ್ಟು ಅನಂತನಾದ ನನ್ನನ್ನು ಬೇಗನೆ ಶರಣು ಹೊಂದು'. ದೂತ ನುಡಿದ ಈ ಮಾತನ್ನು ಕೇಳಿ ಯಾದವವೀರರು ಗಟ್ಟಿಯಾಗಿ ನಕ್ಕರು.

ಭಗವಂತನ ವಾಸುದೇವಾವತಾರ ನಾನೆ. ಲೋಕದ ಕಷ್ಟನಿವಾರಣೆ ಮಾಡುವವನು ನಾನೆ. ಅದರಿಂದ ಲೋಕದ ಕಷ್ಟ ಕಳೆವ ಚಕ್ರಾದಿಗಳಿಲ್ಲ ನನ್ನ ಚಿಹ್ನೆಗಳು. ನೀನು ವೇಷಧಾರಿ ಕಪಟ ವಾಸುದೇವ. ನಿನ್ನಲ್ಲಿರುವ ಚಕ್ರಾದಿಗಳನ್ನು ನನಗೆ ಬಿಟ್ಟುಕೊಟ್ಟು ಶರಣಾಗು ಎನ್ನುತ್ತಾನೆ ಪೌಂಡ್ರಕ. ಯಾದವವೀರರು ನಕ್ಕರು. ಏಕೆಂದರೆ ಪೌಂಡ್ರಕ ತಾನೆ ವೇಷಧಾರಿಯಾಗಿದ್ದ. ಇದು ಮುಂದೆ ಸ್ಪಷ್ಟವಿದೆ.

ಕೃಷ್ಣಃ ಪ್ರಹಸ್ಯಾಹ ತವಾಯುಧಾನಿ
ದಾತಾಸ್ಮ್ಯಹಂ ಲಿಂಗಭೂತಾನಿ ಚಾಜೌ ।
ಇತ್ಯುಕ್ತೋಽಸೌ ದೂತ ಏತ್ಯಾಹ ತಸ್ಮೈ
ಸ ಚಾಭ್ಯಗಾದ್ಯೋದ್ಧುಕಾಮೋ ಹರಿಶ್ಚ ॥೨೧೫॥

ಶ್ರೀಕೃಷ್ಣ ನಕ್ಕು ನುಡಿದ. 'ನಿನ್ನ ಚಿಹ್ನೆಗಳಾದ ಆಯುಧಗಳನ್ನು ಯುದ್ಧದಲ್ಲಿ ನಿನ್ನ ಮೇಲೆಯೆ ಎಸೆದು ಬಿಡುತ್ತೇನೆ' ಇದನ್ನು ಕೇಳಿ ದೂತ ಹಿಂತಿರುಗಿ ಬಂದು ಪೌಂಡ್ರಕನಿಗೆ ಹಾಗೇ ಹೇಳಿದ. ಪೌಂಡ್ರಕ ಯುದ್ಧವನ್ನು ಬಯಸಿ ತನ್ನ ನಗರದಿಂದ ಹೊರಗೆ ಬಂದ. ಅಷ್ಟರಲ್ಲಿ ಕೃಷ್ಣನೂ ನಗರಸಮೀಪಕ್ಕೆ ಬಂದಿದ್ದ.

ತಂ ಶಾತಕೌಂಭೇ ಗರುಡೇ ರಥಸ್ಥೇ
ಸ್ಥಿತಂ ಚಕ್ರಾದೀನ್ ಕೃತ್ರಿಮಾನ್ ಸಂದಧಾನಂ ।
ಶ್ರೀವತ್ಸಾರ್ಥೇ ದಗ್ಧವಕ್ಷಸ್ಥಲಂ ಚ
ದೃಷ್ಟ್ವಾ ಕೃಷ್ಣಃ ಪ್ರಾಹಸತ್ ಪಾಪಬುದ್ಧಿಂ ॥೨೧೬॥

ರಥದಲ್ಲಿ ಚಿನ್ನದ ಗರುಡನ ಮೇಲೆ ಕುಳಿತು ಕೃತ್ರಿಮವಾದ ಚಕ್ರಮುಂತಾದುವನ್ನು ಹಿಡಿದು ಶ್ರೀವತ್ಸಕ್ಕಾಗಿ ಎದೆಯನ್ನು ಸುಟ್ಟುಕೊಂಡಿದ್ದ ಪಾಪಬುದ್ಧಿಯ ಪೌಂಡ್ರಕನನ್ನು ಕಂಡು ಶ್ರೀಕೃಷ್ಣ ಜೋರಾಗಿ ನಕ್ಕ.

ಚತುರ್ಭುಜನಾಗಲು ಎರಡು ಚಿನ್ನದ ಪ್ರತ್ಯೇಕ ಕೈಗಳನ್ನೂ ಕಟ್ಟಿಕೊಂಡು ನಾಟಕದ ವೇಷಧಾರಿಯಂತೆ ಹಾಸ್ಯಾಸ್ಪದನಾಗಿದ್ದ ಪೌಂಡ್ರಕ.

ತತೋಽಸ್ತ್ರಶಸ್ತ್ರಾಣ್ಯಭಿವರ್ಷಮಾಣಂ
ವಿಜಿತ್ಯ ತಂ ವಾಸುದೇವೋಽರಿಣೈವ ।
ಚಕರ್ತ ತತ್ಕಂಧರಂ ತಸ್ಯ ಚಾನು
ಮಾತಾಮಹಸ್ಯಾಚ್ಛಿನತ್ ಸಾಯಕೇನ ॥೨೧೭॥

ಬಳಿಕ ಅಸ್ತ್ರಶಸ್ತ್ರಗಳ ಮಳೆಗರೆಯತೊಡಗಿದ ಪೌಂಡ್ರಕನನ್ನು ಪ್ರಭು ಶ್ರೀಕೃಷ್ಣ ಪರಾಭವಗೊಳಿಸಿ ಸುದರ್ಶನ ಚಕ್ರದಿಂದ ಅವನ ಕೊರಳನ್ನು ತರಿದ. ಬಳಿಕ ಅವನ ತಾಯಿಯ ತಂದೆಯಾದ ಕಾಶಿರಾಜನ ಕುತ್ತಿಗೆಯನ್ನೂ ಬಾಣದಿಂದ ತರಿದ.

ಅಪಾತಯಚ್ಚಾಶು ಶಿರಃ ಸ ತೇನ
ಕಾಶೀಶ್ವರಸ್ಯೇಶ್ವರೋ ವಾರಣಸ್ಯಾಂ ।
ಸ ಚ ಬ್ರಹ್ಮಾಹಂ ವಾಸುದೇವೋಽಸ್ಮಿ ನಿತ್ಯ-
ಮಿತಿ ಜ್ಞಾನಾದಗಮತ್ ತತ್ತಮೋಽಂಧಂ ॥೨೧೮॥

ಪ್ರಭು ಶ್ರೀಕೃಷ್ಣ ಕಾಶಿರಾಜನ ಶಿರಸ್ಸನ್ನು ಬೇಗನೆ ಅದೇ ಬಾಣದಿಂದ ಕಾಶೀನಗರದೊಳಗೆ ಬೀಳಿಸಿದ. ಪೌಂಡ್ರಕ ಸದಾ ನಾನೇ ಪರಬ್ರಹ್ಮ ವಾಸುದೇವ ಎಂದು ಹೇಳಿಕೊಳ್ಳುತ್ತಿದ್ದುದರಿಂದ ಅಂಧತಮಸ್ಸನ್ನು ಹೊಂದಿದ.

ಕಾಶೀನಗರದ ಹೊರಗೆ ಈ ಯುದ್ಧ ನಡೆದಿತ್ತು. ಶ್ರೀಕೃಷ್ಣ ಕಾಶಿರಾಜನ ರುಂಡವನ್ನು ಬಾಣದಿಂದ ಕತ್ತರಿಸಿ ಅದೇ ಬಾಣದಿಂದ ರುಂಡವನ್ನು

ಕಾಶೀನಗರದೊಳಗೆ ಬೀಳಿಸಿದ. ಏಕೆಂದರೆ ಕಾಶಿರಾಜನ ಮಗನಾದ ಸುದಕ್ಷಿಣನೂ ಪಾಪಿ. ಅವನನ್ನು ಕೆರಳಿಸಿ ನಾಶ ಮಾಡಬೇಕಾಗಿತ್ತು.

ಸಾಹಾಯ್ಯಕೃಚ್ಚಾಸ್ಯ ಚ ಕಾಶಿರಾಜೋ
ಯಥೈವ ಕಿಮ್ಮೀರಹಿಡಿಂಬಸಾಲ್ವಾಃ।
ಅನ್ಯೇ ಚ ದೈತ್ಯಾ ಅಪತಂಸ್ತಮೋಽಂಧಂ
ತಥೈವ ಸೋಽಪ್ಯಪತತ್ಪಾಪಬುದ್ಧಿಃ ॥೨೧೯॥

ಆ ಪೌಂಡ್ರಕನಿಗೆ ಸಹಾಯಕನಾಗಿದ್ದವ ಕಾಶಿರಾಜ. ಅದರಿಂದ ಕಿಮ್ಮೀರ ಹಿಡಿಂಬ ಸಾಲ್ವರೂ ಬೇರೆ ದೈತ್ಯರೂ ಹೇಗೆ ಅಂಧಂತಮಸ್ಸಿನಲ್ಲಿ ಬಿದ್ದರೊ ಹಾಗೇ ಪಾಪ ಬುದ್ಧಿಯವನಾದ ಕಾಶಿರಾಜನೂ ಬಿದ್ದ.

ಕಾಶಿದೇಶದ ಒಂದು ಭಾಗಕ್ಕೆ ಕಾಶಿರಾಜ ಒಡೆಯನಾಗಿದ್ದ. ಇನ್ನೊಂದು ಭಾಗಕ್ಕೆ ಪೌಂಡ್ರಕ. ಪೌಂಡ್ರಕ ಎರಡು ಅಕ್ಷೌಹಿಣಿ ಸೈನ್ಯವನ್ನು ತಂದಿದ್ದ. ಕಾಶಿರಾಜ ಅವನ ಸಹಾಯಕ್ಕಾಗಿ ಮೂರು ಅಕ್ಷೌಹಿಣಿ ಸೈನ್ಯ ತಂದಿದ್ದ. ಇಬ್ಬರೂ ಹತರಾದರು.

ಏಕಲವ್ಯ ವಧ

ನಿಹತ್ಯ ತೌ ಕೇಶವೋ ರೌಕ್ಮಿಣೇಯಂ
ಪುನರ್ವೈದರ್ಭ್ಯಾಂ ಜನಯಾಮಾಸ ಸದ್ಯಃ।
ಸ ಚೈಕಲವ್ಯೋ ರಾಮಜಿತಃ ಶಿವಾಯ
ಚಕ್ರೇ ತಪೋಽಜೇಯತಾಂ ಚಾಪ ತಸ್ಮಾತ್ ॥೨೨೦॥

ಪೌಂಡ್ರಕ ಮತ್ತು ಕಾಶಿರಾಜರಿಬ್ಬರನ್ನೂ ಕೊಂದು ಶ್ರೀಕೃಷ್ಣ ಪುನಃ ರುಕ್ಮಿಣಿಯಲ್ಲಿ ಪ್ರದ್ಯುಮ್ನನನ್ನು ತತ್‌ಕ್ಷಣದಲ್ಲಿ ಹುಟ್ಟಿಸಿದ. ಬಲರಾಮನಿಂದ ಪರಾಜಿತನಾದ ಏಕಲವ್ಯ ಶಿವನನ್ನು ಕುರಿತು ತಪಸ್ಸು ಮಾಡಿದ. ಶಿವನಿಂದ ಅಜೇಯತ್ವವನ್ನು ಪಡೆದ.

ಸ ಶರ್ವದತ್ತೇನ ವರೇಣ ದೃಪ್ತಃ
ಪುನರ್ಯೋದ್ಧುಂ ಕೃಷ್ಣಮೇವಾಸಸಾದ।
ತಸ್ಯಾಸ್ತ್ರಶಸ್ತ್ರಾಣಿ ನಿವಾರ್ಯ ಕೇಶವ-
ಶ್ಚಕ್ರೇಣ ಚಕ್ರೇ ತಮಪಾಸ್ತಕಂಧರಂ ॥೨೨೧॥

ಏಕಲವ್ಯ ಶಿವ ನೀಡಿದ ಆ ವರದಿಂದ ದೃಪ್ತನಾಗಿ ಪುನಃ ಯುದ್ಧ ಮಾಡಲು ಕೃಷ್ಣನ ಬಳಿಗೇ ಬಂದ. ಶ್ರೀಕೃಷ್ಣ ಅವನ ಅಸ್ತ್ರಶಸ್ತ್ರಗಳನ್ನು ತಡೆದು ಚಕ್ರದಿಂದ ಅವನ ಶಿರಶ್ಛೇದ ಗೈದ.

ಸ ಚಾಪ ಪಾಪಸ್ತಮ ಏವ ಘೋರಂ
ಕೃಷ್ಣದ್ವೇಷಾನ್ನಿತ್ಯದುಃಖಾತ್ಮಕಂ ತತ್।

ಏವಂ ಯದೂನಾಮೃಷಭೇಣ ಸೂದಿತೇ
ಪೌಂಡ್ರೇ ತಥಾ ಕಾಶಿರಾಜೇ ಚ ಪಾಪೇ
ಕಾಶೀಶಪುತ್ರಸ್ತು ಸುದಕ್ಷಿಣಾಖ್ಯ-
ಸ್ತಪೋಽಚರಚ್ಛಂಕರಾಯೋರುಭಕ್ತ್ಯಾ।
ಪ್ರತ್ಯಕ್ಷಗಂ ತಂ ಶಿವಂ ಪಾಪಬುದ್ಧಿಃ
ಕೃಷ್ಣಾಭಾವಂ ಯಾಚತೇ ದುಷ್ಟಚೇತಾಃ ॥೨೨೩॥

ಪಾಪಿಯಾದ ಆ ಏಕಲವ್ಯನೂ ಕೃಷ್ಣನ ಮೇಲಿನ ದ್ವೇಷದಿಂದ ನಿತ್ಯದುಃಖಿಮಯವಾದ ಘೋರವಾದ ತಮಸ್ಸನ್ನೇ ಹೊಂದಿದ. ಶ್ರೀಕೃಷ್ಣ ಪಾಪಿಯಾದ ಪೌಂಡ್ರಕನನ್ನೂ ಕಾಶಿರಾಜನನ್ನೂ ಕೊಂದಾಗ ಕಾಶಿರಾಜನ ಮಗ ಸುದಕ್ಷಿಣ ಎಂಬುವನು ಶಿವನನ್ನು ಕುರಿತು ಬಹಳ ಭಕ್ತಿಯಿಂದ ತಪಸ್ಸು ಮಾಡಿದ. ಪಾಪಬುದ್ಧಿಯ ದುಷ್ಟಮನಸ್ಸಿನ ಆತ ಪ್ರತ್ಯಕ್ಷನಾದ ಶಿವನಲ್ಲಿ ಶ್ರೀಕೃಷ್ಣನ ನಾಶವನ್ನು ಬೇಡಿದ.

ನಗರದೊಳಗೆ ಬಂದು ಬಿದ್ದ ಕಾಶಿರಾಜನ ರುಂಡವನ್ನು ಕಂಡು ಅವನ ಪತ್ನಿಯರೂ ಮಕ್ಕಳೂ ದುಃಖಿಸಿದರು. ಪಿತೃಕಾರ್ಯ ಮಾಡಿದ ಬಳಿಕ ಸುದಕ್ಷಿಣ ಶಿವನನ್ನು ತಪಸ್ಸಿನಿಂದ ಕಂಡು ಕೃಷ್ಣನನ್ನು ನಾಶ ಮಾಡುವ ಉಪಾಯವನ್ನು ಬೇಡಿದ.

ಸುದಕ್ಷಿಣ ಸಂಹಾರ

ಕೃತ್ಯಾಮಸ್ಮೈ ದಕ್ಷಿಣಾಗ್ನೌ ಶಿವೋಽಪಿ
ದೈತ್ಯಾವೇಶಾದದದಾದಾವೃತಾತ್ಮಾ ॥೨೨೪॥

ದೈತ್ಯಾವೇಶದಿಂದ ಆವೃತವಾದ ಮನಸುಳ್ಳ ಶಿವನೂ ಸುದಕ್ಷಿಣನಿಗೆ ದಕ್ಷಿಣಾಗ್ನಿ ಕುಂಡದಲ್ಲಿ ಭೂತಾಕಾರದ ಅಗ್ನಿಯನ್ನು ಸೃಷ್ಟಿಸಿ ನೀಡಿದ.

'ದಕ್ಷಿಣಾಗ್ನಿ ಕುಂಡದಲ್ಲಿ ಅಭಿಚಾರ ಹೋಮ ಮಾಡು. ಅದರಿಂದ ಮೇಲೆ ಎದ್ದು ಬರುವ ಭೂತಾಕಾರದ ದಕ್ಷಿಣಾಗ್ನಿ ನನ್ನ ಪ್ರಮಥಗಣ ಗಳೊಂದಿಗೆ ಹೋಗಿ ದ್ವಾರಕೆಯನ್ನು ನಾಶಮಾಡಿ ನಿನ್ನ ಅಭೀಷ್ಟವನ್ನು ಪೂರೈಸುತ್ತಾನೆ' ಎಂದು ಶಿವ ಸುದಕ್ಷಿಣನಿಗೆ ವರವಿತ್ತ. ಸುದಕ್ಷಿಣ ಹಾಗೇ ಅಭಿಚಾರ ಹೋಮ ಮಾಡಿ ದಕ್ಷಿಣಾಗ್ನಿಯನ್ನು ದ್ವಾರಕೆಗೆ ಕಳಿಸಿದ.

ಸ ದಕ್ಷಿಣಾಗ್ನಿಶ್ಚಾಸುರಾವೇಶಯುಕ್ತಃ
ಸಂಪೂಜಿತಃ ಕಾಶಿರಾಜಾತ್ಮಜೇನ।
ವರಾದುಮೇಶಸ್ಯ ವಿವೃದ್ಧಶಕ್ತಿ
ರ್ಯಯೌ ಕೃಷ್ಣೋ ಯತ್ರ ಸಂಪೂರ್ಣಶಕ್ತಿಃ ॥೨೨೫॥

ಆ ಆಭಿಚಾರಿಕಾಗ್ನಿಯೂ ಸುದಕ್ಷಿಣನಿಂದ ಪೂಜಿತನಾಗಿ ಅಸುರಾವೇಶ ಯುಕ್ತನಾಗಿ ಶಿವನ ವರದಿಂದ ಶಕ್ತಿ ತುಂಬಿಕೊಂಡು ಪೂರ್ಣಶಕ್ತನಾದ ಶ್ರೀಕೃಷ್ಣನಿರುವಲ್ಲಿಗೆ ನಡೆದ.

ಕೃಷ್ಣಸ್ತಸ್ಯ ಪ್ರತಿಘಾತಾರ್ಥಮುಗ್ರಂ
ಸಮಾದಿಶಚ್ಚಕ್ರಮನಂತವೀರ್ಯಃ ।
ಜಾಜ್ವಲ್ಯಮಾನಂ ತದಮೋಘವೀರ್ಯಂ
ವ್ಯದ್ರಾವಯದ್ವಹ್ನಿಮಿಮಂ ಸುದೂರಂ ॥೨೨೬॥

ಅನಂತಶಕ್ತಿಉಳ್ಳ ಶ್ರೀಕೃಷ್ಣ ಆಭಿಚಾರಿಕಾಗ್ನಿಯನ್ನು ತಡೆಯುವುದಕ್ಕೆ ಉಗ್ರವಾದ ಸುದರ್ಶನ ಚಕ್ರಕ್ಕೆ ಆಜ್ಞೆ ಮಾಡಿದ. ಅಮೋಘ ಶಕ್ತಿಉಳ್ಳ ಜಾಜ್ವಲ್ಯಮಾನವಾದ ಆ ಚಕ್ರ ಅಗ್ನಿಯನ್ನು ಬಲುದೂರಕ್ಕೆ ಅಟ್ಟಿತು.

ಅಗ್ನಿ ದ್ವಾರಕೆಯನ್ನು ಸುಡುತ್ತಿದೆ ಎಂಬ ವಾರ್ತೆಯನ್ನು ಕೇಳಿ ಪಗಡೆಯಾಡುತ್ತಿದ್ದ ಶ್ರೀಕೃಷ್ಣ ಬಳಿಯಲ್ಲಿದ್ದ ಸುದರ್ಶನ ಚಕ್ರಕ್ಕೆ ಆಜ್ಞೆ ಮಾಡಿದ. ಅದು ಅಗ್ನಿಯನ್ನು ಅಟ್ಟಿತು.

ಕೃತ್ಯಾತ್ಮಕೋ ವಹ್ನಿರಸೌ ಪ್ರಧಾನ-
ವಹ್ನೇಃ ಪುತ್ರಶ್ಚಕ್ರವಿದ್ರಾವಿತೋಽಥ ।
ಸಹಾನುಬಂಧಂ ಚ ಸುದಕ್ಷಿಣಂ ತಂ
ಭಸ್ಮೀಚಕಾರಾಶು ಸಪುತ್ರಭಾರ್ಯಂ ॥೨೨೭॥

ಈ ಆಭಿಚಾರಿಕಾಗ್ನಿ ಪ್ರಧಾನಾಗ್ನಿಯ ಒಬ್ಬ ಪುತ್ರ. ಸುದರ್ಶನ ಚಕ್ರ ಅವನನ್ನು ಓಡಿಸಿದಾಗ ಅವನು ಸುದಕ್ಷಿಣನನ್ನೇ ಮಕ್ಕಳು ಹೆಂಡಿರು ಮತ್ತು ಬಾಂಧವರೊಂದಿಗೆ ಸುಟ್ಟು ಬೂದಿ ಮಾಡಿದ.

ಆಭಿಚಾರಿಕಾಗ್ನಿ ಪ್ರಧಾನಾಗ್ನಿಪುತ್ರ, ಒಬ್ಬ ದೇವತೆ. ಅಸುರಾವೇಶದಿಂದ ಬಂದಿದ್ದ. ಅದರಿಂದ ಸುದರ್ಶನ ಚಕ್ರ ಅವನನ್ನು ಸುಡದೆ ಹಿಮ್ಮೆಟ್ಟಿಸಿತು. ಅಭಿಚಾರ ದೇವತೆ ತನ್ನ ಉದ್ದೇಶಿತವಾದ ಕಾರ್ಯವನ್ನು ಮಾಡಲಾಗದಿದ್ದಲ್ಲಿ ಹಿಂತಿರುಗಿ ಅಭಿಚಾರ ಮಾಡಿದವನನ್ನೆ ಆಹುತಿ ತೆಗೆದುಕೊಳ್ಳುತ್ತದೆ. ಹೀಗಾಗಿ ಅಗ್ನಿ ಹಿಂದೆ ಬಂದು ಸುದಕ್ಷಿಣನನ್ನು ಬಂಧು ಪರಿವಾರಸಮೇತವಾಗಿ ಸುಟ್ಟಿತು.

ವಾರಾಣಸೀ ದಹನ

ದಗ್ಧ್ವಾ ಪುರೀಂ ವಾರಣಸೀಂ ಸುದರ್ಶನಂ
ಪುನಃ ಪಾರ್ಶ್ವಂ ವಾಸುದೇವಸ್ಯ ಚಾಗಾತ್ ।
ಸುದಕ್ಷಿಣೋಽಸೌ ತಮ ಏವ ಜಗ್ಮಿವಾನ್
ಕೃಷ್ಣದ್ವೇಷಾತ್ಸಾನುಬಂಧಃ ಸುಪಾಪಃ ॥೨೨೮॥

ಸುದರ್ಶನ ಚಕ್ರ ವಾರಾಣಸೀ ನಗರವನ್ನು ಸುಟ್ಟು ಕೃಷ್ಣನ ಬಳಿಗೆ ತಿರುಗಿ ಬಂದಿತು. ಆ ಸುದಕ್ಷಿಣ ಮಹಾಪಾಪಿ. ಕೃಷ್ಣನಲ್ಲಿ ದ್ವೇಷ ಮಾಡಿದ್ದರಿಂದ ಸಪರಿವಾರನಾಗಿ ತಮಸ್ಸಿಗೆ ಹೋದ.

ವರಣಾ ಮತ್ತು ಅಸಿ ಎಂಬ ಎರಡು ನದಿಗಳಿಂದ ಸುತ್ತುವರಿದ ಪ್ರದೇಶವಾದ್ದರಿಂದ 'ವರಣಾಸಿ' ಎಂದು ಕಾಶೀಪಟ್ಟಣಕ್ಕೇ ಇನ್ನೊಂದು ಹೆಸರು. ಅದು ವ್ಯತ್ಯಾಸ ಹೊಂದಿ ವಾರಾಣಾಸಿ ವಾರಾಣಸಿ ವಾರಣಸಿ ವರಾಣಸಿ ವರಾಣಾಸಿ ಇತ್ಯಾದಿ ನಾನಾ ರೂಪ ತಳೆಯಿತು. ಈ ಪಟ್ಟಣ ಪವಿತ್ರ ಅವಿಮುಕ್ತ ಕ್ಷೇತ್ರ. ಆದರೂ ಪರಮ ಪಾಪಿಗಳಾದ ಕಾಶಿರಾಜ ಸುದಕ್ಷಿಣರಂಥ ದುರ್ಜನರ ಆಡಳಿತದಲ್ಲಿ ಅಪವಿತ್ರವಾಯಿತು. ವಿಷ್ಣುಚಕ್ರ ಅದನ್ನು ಸುಟ್ಟು ಪವಿತ್ರಗೊಳಿಸಿತು.

ರುಕ್ಮಿಣೀ ಕೃಷ್ಣ ಪ್ರಣಯ ಕಲಹ

ಕೃಷ್ಣಃ ಕ್ರೀಡನ್ ದ್ವಾರವತ್ಯಾಂ ಸುಪೂರ್ಣ
ನಿತ್ಯಾನಂದಃ ಕ್ವಚಿದಾಹ ಸ್ಮ ಭೈಷ್ಮೀಂ।
ವಿಡಂಬಯನ್ ಗೃಹಿಣಾಮೇವ ಚೇಷ್ಟಾ
ನಿತ್ಯಾವಿರೋಧೋಽಪಿ ತಯಾ ವಿದೋಷಯಾ ॥೨೨೯॥

ಪರಿಪೂರ್ಣ ನಿತ್ಯಾನಂದ ಸ್ವರೂಪನಾದ ಶ್ರೀಕೃಷ್ಣ ನಿರ್ದೋಷಳಾದ ರುಕ್ಮಿಣಿಯೊಡನೆ ಎಂದೂ ವಿರೋಧ ಮಾಡದವನಾದರೂ ಗೃಹಸ್ಥರ ಚರ್ಯೆಯನ್ನು ಅನುಕರಿಸುತ್ತ ಒಮ್ಮೆ ಆಟವಾಡುತ್ತಿದ್ದಾಗ ಅವಳಿಗೆ ಹೇಳಿದ-

ತ್ವಯಾ ನ ಕಾರ್ಯಂ ಮಮ ಕಿಂ ಚ ಭದ್ರೇ
ಮಯಾರೀಣಾಂ ಮಾನಭಂಗಾರ್ಥಮೇವ।
ಸಮಾಹೃತಾಸೀತಿ ಸಾ ಚಾವಿಯೋಗಂ
ಸದಾ ಕೃಷ್ಣೇನಾತ್ಮನೋಽಪ್ಯೇವ ವೇತ್ತ್ರೀ ॥೨೩೦॥
ಸ್ತ್ರಿಯಾ ಭೇತ್ತವ್ಯಂ ಭರ್ತುರಿತ್ಯೇವ ಧರ್ಮಂ
ವಿಜ್ಞಾ ಪಯಂತೀ ದುಃಖಿತೇವಾಸ ದೇವೀ।
ತಾಂ ಸಾಂತ್ವಯಾಮಾಸ ಗೃಹಸ್ಥಧರ್ಮಂ
ವಿಜ್ಞಾಪಯನ್ ದೇವದೇವೋಽಪ್ಯದುಃಖಾಂ ॥೨೩೧॥

'ರುಕ್ಮಿಣಿ, ನನಗೆ ನಿನ್ನಿಂದ ಏನೂ ಕಾರ್ಯವಾಗಬೇಕಾಗಿಲ್ಲ. ನನ್ನ ಶತ್ರುಗಳ ದರ್ಪ ಕಳೆವ ಉದ್ದೇಶದಿಂದಲೆ ನಾನು ನಿನ್ನನ್ನು ಎತ್ತಿಕೊಂಡು ಬಂದೆನಷ್ಟೆ!' ಎಂದು ಕೃಷ್ಣ ಹೇಳಿದಾಗ ರುಕ್ಮಿಣಿ ತನಗೆ ಕೃಷ್ಣನಿಂದ ಎಂದೂ ವಿಯೋಗವಿಲ್ಲವೆಂದು ತಿಳಿದವಳಾದರೂ ಹೆಂಡತಿ

ಗಂಡನಲ್ಲಿ ಭಯಪಡಬೇಕು ಎನ್ನುವ ಸ್ತ್ರೀ ಧರ್ಮವನ್ನು ಲೋಕಕ್ಕೆ ತಿಳಿಸುವುದಕ್ಕಾಗಿ ದುಃಖಿತಳಂತೆ ತೋರಿಕೊಂಡಳು. ಅವಳು ದುಃಖರಹಿತಳಾಗಿದ್ದರೂ ದೇವದೇವನಾದ ಶ್ರೀಕೃಷ್ಣ ಗೃಹಸ್ಥ ಧರ್ಮವನ್ನು ತೋರುತ್ತ ಅವಳನ್ನು ಸಂತೈಸಿದ.

ದಂಪತಿಗಳಲ್ಲಿ ಆಗಾಗ ಸರಸ ವಿರಸಗಳು ಸಾಧಾರಣ. ಅದನ್ನು ಅನುಕರಣ ಮಾಡುತ್ತ ಶ್ರೀಕೃಷ್ಣ ರುಕ್ಮಿಣಿಯನ್ನು 'ನೀನು ನನಗೆ ಬೇಕಾಗಿಲ್ಲ, ಎಲ್ಲಿಯಾದರೂ ಹೋಗು' ಎಂದ. ರುಕ್ಮಿಣಿಯೂ ಕೃಷ್ಣ ತನ್ನನ್ನು ಪರಿತ್ಯಜಿಸುತ್ತಿದ್ದಾನೆ ಎಂದು ಭಯಪಟ್ಟಂತೆ ತೋರಿಕೊಂಡಳು. ಏಕೆಂದರೆ ಹರಿಯ ಲೀಲೆಗಳಿಗೆ ಅನುಗುಣವಾಗಿಯೆ ರಮೆಯೂ ಲೀಲೆ ತೋರುವಳು. ಹೆಂಡತಿ ತಾನು ಗಂಡನಿಂದ ಪರಿತ್ಯಕ್ತಳಾಗಬಹುದೆಂಬ ಭೀತಿಯನ್ನು ಯಾವಾಗಲೂ ಇಟ್ಟುಕೊಂಡಿರಬೇಕು. ನಿರ್ಭಯಳಾಗಿ 'ಬಿಡುವೆಯಾದರೆ ಬಿಡು, ನಾನು ಇನ್ನೊಬ್ಬನನ್ನು ಸೇರುವೆನೆಂ'ದು ಹೇಳುವುದು ಭಾರತೀಯ ನಾರಿಗೆ ಶೋಭೆಯಲ್ಲ. ಅದರಿಂದ ಭಯ ಬೇಕು. ಅಂದರೆ, ಏನೂ ಪ್ರತ್ಯುತ್ತರ ಕೊಡದೆ ಸುಮ್ಮನಿರಬೇಕೆಂದಲ್ಲ. ಸುಮ್ಮನಿರಲು ಪತಿ ಆಜ್ಞಾ ಮಾಡಿದರೆ ಆ ಮಾತು ಬೇರೆ.

ಗಂಡಂದಿರು ಹೀಗೆ ಪರಿಹಾಸಕ್ಕಾಗಿ ಹೇಳುವುದು, ಮುಗ್ಧಳಾದ ಹೆಂಡತಿ ಅದನ್ನು ವಾಸ್ತವವೆಂದು ಬಗೆದು ಅಳುವುದು, ಬಳಿಕ ಗಂಡ ಹೆಂಡತಿಯನ್ನು ತಬ್ಬಿಕೊಂಡು ಸಂತೈಸುವುದು ಎಲ್ಲವೂ ಸಹಜ. ಇದೆಲ್ಲವನ್ನೂ ಕೃಷ್ಣ ರುಕ್ಮಿಣಿಯರು ಲೀಲೆಗಾಗಿ ಅನುಕರಿಸಿ ತೋರಿದರು. ಈ ಪ್ರಕರಣ ಭಾಗವತದಲ್ಲಿ ಬರುತ್ತದೆ.

ಬಲರಾಮನ ಜಲಕ್ರೀಡೆ

ಏವಂ ಕ್ರೀಡತ್ಯಬ್ಜನಾಭೇ ರಮಾಯಾಂ
ಕೃಷ್ಣಾದಿಷ್ಟೋ ಗೋಕುಲಂ ರೌಹಿಣೇಯಃ ।
ಪ್ರಾಯಾದ್ ದೃಷ್ಟ್ವಾ ತತ್ರ ನಂದಂ ಯಶೋದಾಂ
ತತ್ಪೂಜಿತಃ ಕೃಷ್ಣವಾರ್ತಾಂ ಚ ಪೃಷ್ಟಃ ॥೨೩॥

ಶ್ರೀಕೃಷ್ಣ ರುಕ್ಮಿಣಿಯೊಡನೆ ಹೀಗೆ ಕ್ರೀಡಿಸುತ್ತಿದ್ದಾಗ ಅವನ ಸಮ್ಮತಿಯಿಂದ ಬಲರಾಮ ಗೋಕುಲಕ್ಕೆ ಹೋದ. ಅಲ್ಲಿ ನಂದ ಯಶೋದೆಯರನ್ನು ಕಂಡು ಅವರಿಂದ ಸತ್ಕೃತನಾಗಿ ಕೃಷ್ಣನ ಬಗ್ಗೆ ಅವರು ಕೇಳಿದಾಗ ಹೇಳಿ ಸಂತೈಸಿದ.

ಮಾಸೌ ತತ್ರ ನ್ಯವಸದ್ ಗೋಪಿಕಾಭೀ
ರೇಮೇ ಕ್ಷೀಬೋ ಯಮುನಾಮಾಹ್ವಯಚ್ಚ ।

ಮತ್ತೋಕಯಮಿತ್ಯೇವ ನದೀಮನಾಗತಾಂ
ಚಕರ್ಷ ರಾಮೋ ಲಾಂಗಲೇನಾಗ್ರ್ಯವೀರ್ಯಃ ॥೨೩೩॥

ನಂದಗೋಕುಲದಲ್ಲಿ ಬಲರಾಮ ಎರಡು ತಿಂಗಳು ವಾಸವಾಗಿದ್ದ. ಮಹಾಬಲಿಯಾದ ಅವನೊಮ್ಮೆ ಮದ್ಯಪಾನದಿಂದ ಮತ್ತನಾಗಿ ಯಮುನಾ ನದಿಯನ್ನು ಕರೆದ. ಈತ ಮತ್ತನಾಗಿದ್ದಾನೆ ಎಂದು ನದಿ ಬಾರದಿದ್ದಾಗ ನೇಗಿಲಿನಿಂದ ಸೆಳೆದ.

ಚೈತ್ರ ವೈಶಾಖ ಎರಡು ಮಾಸಗಳನ್ನು ಬಲರಾಮ ನಂದಗೋಕುಲದಲ್ಲಿ ಕಳೆದ. ಗೋಪಿಕಾಸ್ತ್ರೀಯರೊಡನೆ ವನವಿಹಾರ ಮಾಡಿದ. ಆಗ ದೇವ ದುಂದುಭಿ ಮೊಳಗಿತು. ಪುಷ್ಪವೃಷ್ಟಿಯಾಯಿತು. ಮದ್ಯದ ಅಭಿಮಾನಿನಿಯೂ ಬಲರಾಮನ ನಿಯತ ಪತ್ನಿಯೂ ಆದ ವಾರುಣೀದೇವಿ ಪತಿಗಾಗಿ ಮರದ ಪೊಟರೆಗಳಿಂದ ಮದ್ಯವನ್ನು ಸುರಿಸಿದಳು. ಸುಗಂಧ ಭರಿತವಾದ ಆ ಮಧುವನ್ನು ಬಲರಾಮ ಪಾನಮಾಡಿ ಮತ್ತನಾಗಿ ಜಲಕ್ರೀಡೆಗಾಗಿ ಯಮುನಾ ನದಿಯನ್ನು ತಾನಿದ್ದಲ್ಲಿಗೇ ಬರಲು ಆಜ್ಞೆ ಮಾಡಿದ. ಕುಡಿದ ಮತ್ತಿನಲ್ಲಿ ಏನೋ ಅನ್ನುತ್ತಿದ್ದಾನೆ ಎಂದು ಯಮುನೆ ಅದಕ್ಕೆ ಲಕ್ಷ್ಯ ಕೊಡಲಿಲ್ಲ. ಬಲರಾಮ ನೇಗಿಲಿನಿಂದ ನದಿಯ ಪಾತ್ರವನ್ನೆ ತನ್ನ ಬಳಿಗೆ ಸೆಳೆಯತೊಡಗಿದ. ಕುಡಿದು ಮತ್ತನಾಗಿ ಅಸಂಬದ್ಧವಾಗಿ ಮಾತನಾಡುವುದೂ ಬಲರಾಮನಿಗೆ ಭೂಷಣವೆ. ಏಕೆಂದರೆ ಅವನು ಆಡಿದ್ದನ್ನು ಮಾಡಿತೋರಿಸಬಲ್ಲ ಸಮರ್ಥ. ಬೇರೆಯವರು ಅನುಕರಣ ಮಾಡಕೂಡದು. ಮಾಡಿದರೆ ನಗೆಪಾಟಲಾಗುತ್ತಾರೆ.

ಪುನಸ್ತಯಾ ಪ್ರಣತಃ ಸಂಸ್ತುತಶ್ಚ
ವ್ಯಸರ್ಜಯತ್ತಾಮಥ ನಂದಗೋಪಂ ।
ಆಪೃಚ್ಛ್ಯ ಚಾಗಾದ್ದ್ವಾರಕಾಂ ಕೇಶವಾಯ
ನ್ಯವೇದಯನ್ನಂದಗೋಪಾದಿಭಕ್ತಿಂ ॥೨೩೪॥

ಯಮುನೆ ಸ್ತೋತ್ರ ಮಾಡಿ ನಮಿಸಿದ್ದರಿಂದ ಅವಳನ್ನು ಬಿಟ್ಟ. ನಂದಗೋಪನಿಂದ ಬೀಳ್ಕೊಂಡು ದ್ವಾರಕೆಗೆ ಬಂದ. ಕೃಷ್ಣನ ಮುಂದೆ ನಂದಗೋಪಾದಿಗಳ ಭಕ್ತಿಯನ್ನು ಬಣ್ಣಿಸಿ ಹೇಳಿದ.

ಬಲರಾಮ ನೇಗಿಲಿನಿಂದ ನದಿಯನ್ನು ಸೆಳೆಯಲು ತೊಡಗಿದಾಗ ಯಮುನೆ ಮೂರ್ತಿಮತ್ತಾಗಿ ಬಂದು 'ಒಂದು ಹೆಡೆಯ ಮೇಲೆ ಹದಿನಾಲ್ಕು ಲೋಕಗಳನ್ನು ಹೊರುವ ಆದಿಶೇಷ ನೀನೆ' ಎಂದು ಸ್ತೋತ್ರ ಮಾಡಿದಾಗ ಬಿಟ್ಟ.

ಸ್ತ್ರೀಯರೊಡನೆ ಎಂದರೆ ಶ್ರೀಕೃಷ್ಣನ ಪ್ರೇಯಸಿಯರನ್ನು ಬಿಟ್ಟು ಬೇರೆ ತನ್ನವರೇ ಆದ ಗೋಪಿಯರೊಡನೆ ಜಲಕ್ರೀಡೆಯಾಡಿದ.

ಇಂದಿಗೂ ಬಲರಾಮ ಯಮುನೆಯನ್ನು ಸೆಳೆದ ಸ್ಥಳ ಅವನ ಮಹಾಶಕ್ತಿಗೆ ಸಾಕ್ಷಿಯಾಗಿದೆ.

ಮೈಂದ ವಿವಿದ ವಧ

ತದೈವ ಮೈಂದೋ ವಿವಿದಶ್ಚ ಭೌಮೌ
ಹತೌ ಸಖಾಯೌ ದಾನವಾವೇಶಯುಕ್ತೌ ।
ಆನರ್ತರಾಷ್ಟ್ರಂ ವಾಸುದೇವಪ್ರತೀಪೌ
ವ್ಯನಾಶಯೇತಾಂ ವಾಸುದೇವೋಕ್ತಚೋದೌ ॥೨೩೫॥

ಅದೇ ಸಮಯದಲ್ಲಿ ಅಸುರಾವೇಶಯುಕ್ತರಾಗಿ ನರಕಾಸುರನಿಗೆ ಮಿತ್ರರಾಗಿದ್ದ ಮೈಂದ ವಿವಿದರು ನರಕಾಸುರ ವಧೆಯಾದ ಬಳಿಕ ಶ್ರೀಕೃಷ್ಣನಿಗೆ ವಿರೋಧಿಗಳಾಗಿ ದ್ವಾರಕೆಯನ್ನು ನಾಶ ಮಾಡಲು ತೊಡಗಿದರು. ಶ್ರೀಕೃಷ್ಣ ಬಲರಾಮನಿಗೆ ಅವರನ್ನು ಕೊಲ್ಲಲು ಹೇಳಿದ.

ಮೈಂದ ವಿವಿದರು ರಾಮಾಯಣ ಕಾಲದ ಕಪಿಗಳು. ಅಶ್ವಿನೀದೇವತೆಗಳ ಅವತಾರಭೂತರು. ಸುಷೇಣನೆಂಬ ಕಪಿಯ ಮಕ್ಕಳು. ವಾಲಿಪತ್ನಿಯಾದ ತಾರೆಯ ಅಣ್ಣಂದಿರು. ಹತ್ತುಸಾವಿರ ಆನೆಗಳ ಬಲಉಳ್ಳವರು. ಇಬ್ಬರೂ ಶ್ರೀರಾಮನ ಸೇವೆ ಬಹಳ ಮಾಡಿದವರು. ಸಮುದ್ರ ಮಥನಕಾಲದಲ್ಲಿ ದೇವತೆಗಳಿಗೆ ಅಮೃತಪಾನ ದೊರಕಿದ ಬಳಿಕ ದೇವಾಸುರ ಸಂಗ್ರಾಮ ನಡೆಯಿತು. ಆಗ ದೇವತೆಗಳು ತಮ್ಮಲ್ಲಿ ಉಳಿದಿದ್ದ ಅಮೃತವನ್ನು ಜೋಪಾನವಾಗಿ ಇಟ್ಟುಕೊಳ್ಳಲು ಮೈಂದವಿವಿದರ ಕೈಯಲ್ಲಿ ಕೊಟ್ಟರು. ಆಗ ಇವರು ಬಲಾತ್ಕಾರವಾಗಿ ಸ್ವಲ್ಪ ಅಮೃತ ಕುಡಿದಿದ್ದರು. ದೇವಾಂಶ ಸಂಭೂತರೆಂದು ದೇವತೆಗಳೂ ಸುಮ್ಮನೆ ಬಿಟ್ಟಿದ್ದರು. ಆದರೆ ಬಲಾತ್ಕಾರದಿಂದ ಅಮೃತಪಾನ ಮಾಡಿದ್ದರಿಂದ ಅಸುರಾವೇಶ ಬಂದಿತು. ಅವರು ಮಾಡಿದ್ದ ಅಧಿಕವಾದ ಹರಿಸೇವೆಯ ಪುಣ್ಯವನ್ನು ಕಡಿಮೆ ಮಾಡಲು ಈ ಅಸುರಾವೇಶ. ಅದರಿಂದ ಕೃಷ್ಣನಿಗೆ ವಿರೋಧ ಮಾಡಿದರು.

ರಾಮಾಯ ಸೋಕದಾದ್ವರಮಬ್ಜನಾಭೋ
ವಧ್ಯಾವೇತೌ ಭವತಾಂ ತೇಕಪ್ಯವಧ್ಯೌ ।
ವರಾದ್ವಿರಿಂಚಸ್ಯ ತಥಾಮೃತಾಶನಾ-
ದುಭೌ ಚ ಮೈಂದೋ ವಿವಿದೋ ವ್ರಜೇತಿ ॥೨೩೬॥

ಶ್ರೀಕೃಷ್ಣ ಬಲರಾಮನಿಗೆ ವರವಿತ್ತ, 'ಈ ಮೈಂದವಿವಿದರು ಬ್ರಹ್ಮನ ವರಬಲದಿಂದ ಮತ್ತು ಅಮೃತಪಾನದಿಂದ ಅವಧ್ಯರಾದರೂ ನಿನ್ನ ಕೈಯಲ್ಲಿ ಹತರಾಗಲಿ, ಹೋಗು' ಎಂದು.

ಗತ್ವಾಸ ಮೈಂದಂ ಪ್ರಥಮಂ ಜಘಾನ
ಕ್ರೋಧಾದ್ ಯುದ್ಧಾಯಾಗತಂ ರೈವತಾಗ್ರೇ ।
ದಿನೇಽಪರಸ್ಮಿನ್ ವಿವಿದಂ ಜಘಾನ
ಶಿಲಾ ವರ್ಷಂತಂ ಮುಸಲೇನಾಗ್ರ್ಯಕರ್ಮಾ ॥೨೩೭॥

ತಯೋರಾವಿಷ್ಟೌ ತಾವಸುರೌ ತಮೋಽಂಧಂ
ಪ್ರಾಪ್ತೌ ಚ ತಾವಶ್ವಿನೌ ಸ್ವಂ ಚ ಲೋಕಂ ॥೨೩೮॥

ಮಹಾಕಾರ್ಯಗಳನ್ನೇ ಮಾಡುವ ಬಲರಾಮ ಹೋಗಿ ರೈವತ ಪರ್ವತದ ತುದಿಯಲ್ಲಿ ಯುದ್ಧಕ್ಕೆ ಬಂದ ಮೈಂದನನ್ನು ಮೊದಲಿಗೆ ಕೋಪದಿಂದ ಕೊಂದ. ಮರುದಿನ ಕಲ್ಲುಗಳನ್ನು ಮಳೆಗರೆಯುತ್ತಿದ್ದ ವಿವಿದನನ್ನೂ ಮುಸಲದಿಂದ ಹೊಡೆದು ಕೊಂದ. ಅವರಲ್ಲಿ ಆವಿಷ್ಟರಾಗಿದ್ದ ಅಸುರರು ಅಂಧಂತಮಸ್ಸನ್ನು ಹೊಂದಿದರು. ಅಶ್ವಿನೀ ದೇವತೆಗಳು ತಮ್ಮ ಲೋಕವನ್ನು ಸೇರಿದರು.

ಮೈಂದ ವಿವಿದರು ನರಕಾಸುರ ವಧೆಗೆ ಪ್ರತೀಕಾರವಾಗಿ ದ್ವಾರಕೆಯನ್ನು ನಾಶಮಾಡತೊಡಗಿದರು. ಬೆಂಕಿ ಹಚ್ಚಿದರು, ಬೆಟ್ಟಗಳನ್ನು ತಂದು ಎಸೆದರು. ಸಮುದ್ರದಲ್ಲಿ ನಿಂತು ಹತ್ತು ಸಾವಿರ ಆನೆಗಳಷ್ಟು ಬಲಿಷ್ಠವಾದ ಕೈಗಳಿಂದ ನೀರನ್ನೆತ್ತಿ ಎತ್ತಿ ಹಾಕಿ ನಗರದ ಸಮುದ್ರತೀರ ಪ್ರದೇಶವನ್ನು ಮುಳುಗಿಸಿದರು. ಋಷಿಗಳ ಆಶ್ರಮಗಳನ್ನು ನಾಶ ಮಾಡಿದರು. ಅಗ್ನಿಕುಂಡಗಳಲ್ಲಿ ಮಲ ಮೂತ್ರಗಳನ್ನು ಸುರಿದರು. ಸ್ತ್ರೀಪುರುಷರನ್ನು ತಂದು ಗುಹೆಗಳಲ್ಲಿಟ್ಟು ಬಂಡೆಗಲ್ಲುಗಳಿಂದ ದ್ವಾರಗಳನ್ನು ಮುಚ್ಚಿದರು. ಕುಲಸ್ತ್ರೀಯರನ್ನು ಕೆಡಿಸಿದರು. ರೈವತಪರ್ವತದಲ್ಲಿ ಬಲರಾಮ ಸ್ತ್ರೀಯರೊಡಗೂಡಿ ವಿಹರಿಸುತ್ತ ದಿವ್ಯ ಮಧುರವಾದ ಗಾನ ಮಾಡುವುದನ್ನು ಕೇಳಿ ಅಲ್ಲಿಗೂ ಹೋಗಿ ಅವರ ಮುಂದೆ ಕಪಿಚೇಷ್ಟೆ ಮಾಡಿದರು. ಬಲರಾಮ ನೋಡುತ್ತಿದ್ದಂತೆಯೆ ಮದ್ಯಪಾತ್ರೆಗಳನ್ನು ಅಪಹರಿಸಿದರು. ಸ್ತ್ರೀಯರನ್ನು ಅಣಕಿಸಿ ಗುದ ಪ್ರದರ್ಶನ ಮಾಡಿದರು. ಕುಪಿತನಾದ ಬಲರಾಮ ತಲೆಯ ಮೇಲೆ ಮುಸಲದಿಂದ ಹೊಡೆದ. ರಕ್ತ ಧಾರೆಯಾಗಿ ಹರಿಯಿತು. ಅವರು ನಿರಾಯುಧರೆಂದು ತಾನೂ ಮುಸಲವನ್ನು ಬದಿಗಿಟ್ಟು ಕೈಗಳಿಂದಲೆ ಗುದ್ದಿ ಮೊದಲನೆ ದಿನ ಮೈಂದನನ್ನೂ ಎರಡನೆ ದಿನ ವಿವಿದನನ್ನೂ ಕೊಂದ. ದೇವತೆಗಳು ಜಯಕಾರ ಮಾಡಿ ಪುಷ್ಪವೃಷ್ಟಿಗೈದರು. ನಿರ್ಣಯದಲ್ಲಿ ಮುಸಲದಿಂದ ಕೊಂದನೆಂದು ಹೇಳಿದಂತೆ ಕಾಣುತ್ತದೆ. ಆದರೆ ಮುಸಲದಿಂದಲೇ ಅಲ್ಲ. ಮೊದಲಿಗೆ ಮುಸಲದಿಂದ

ಹೊಡೆದರೂ ಅವರು ನಿರಾಯುಧರೆಂದು ಕೈಗಳಿಂದ ಹೊಡೆದುಕೊಂದ ಎಂದು ಭಾಗವತ ಸತ್ಯಧರ್ಮೀಯ ವ್ಯಾಖ್ಯಾನ ಹೇಳುತ್ತದೆ.[1]

ನಗರವನ್ನು ಸೆಳೆದ ನೇಗಿಲು

ದುರ್ಯೋಧನಸ್ಯಾಸ ಪುತ್ರೀ ರತಿರ್ಯಾ
ಪೂರ್ವಂ ನಾಮ್ನಾ ಲಕ್ಷಣಾ ಕಾಂತರೂಪಾ ।
ಸ್ವಯಂವರಸ್ಥಾಂ ತಾಂ ಬಲಾದೇವ ಸಾಂಬೋ
ಜಗ್ರಾಹ ಸಾ ಚೈನಮಾಸಾನುರಕ್ತಾ ॥೨೫೯॥

ದುರ್ಯೋಧನನ ಪುತ್ರಿ ಲಕ್ಷಣೆ ಎಂಬುವಳು ಸುಂದರರೂಪ ಉಳ್ಳವಳು. ಹಿಂದೆ ಅವಳು ರತಿದೇವಿ. ಸ್ವಯಂವರಕ್ಕೆ ನಿಂತಿದ್ದ ಅವಳನ್ನು ಸಾಂಬ ಬಲಾತ್ಕಾರದಿಂದ ಕೈಹಿಡಿದ. ಅವಳೂ ಅವನಲ್ಲಿ ಅನುರಕ್ತಳಾದಳು.

ಮನ್ಮಥನ ಅವತಾರನಾದ ಪಣ್ಮುಖನೆ ಶ್ರೀಕೃಷ್ಣನಿಂದ ಜಾಂಬವತಿಯಲ್ಲಿ ಸಾಂಬನಾಗಿ ಜನಿಸಿದ್ದ. ಅದರಿಂದ ರತಿಯ ಅವತಾರಳಾದ ಲಕ್ಷಣೆ ಸಾಂಬನಿಗೆ ನಿಯತ ಪತ್ನಿ. ಅದರಿಂದ ಸ್ವಯಂವರವನ್ನು ಸಹಿಸದೆ ಬಲಾತ್ಕಾರದಿಂದ ಕೈಹಿಡಿದ. ಕ್ಷತ್ರಿಯರಿಗೆ ಬಲಾತ್ಕಾರದಿಂದ ಕನ್ಯೆಯನ್ನು ಪರಿಗ್ರಹಿಸುವುದು ಭೂಷಣವೆ ಆಗಿತ್ತು.

ಬಲಾದ್ಗೃಹೀತಾಂ ವೀಕ್ಷ್ಯ ತಾಂ ಕರ್ಣಮುಖ್ಯಾ
ದುರ್ಯೋಧನಾದ್ಯಾ ಯುಯುಧುಃ ಕ್ರೋಧದೀಪ್ತಾಃ ।
ಕೃಚ್ಛ್ರೇಣ ತಂ ವಿರಥೀಕೃತ್ಯ ಚೈಕಂ
ಸರ್ವೇ ಸಮೇತಾ ಜಗೃಹುರ್ಧಾರ್ತರಾಷ್ಟ್ರಾಃ ।
ಕರ್ಣೇನ ಭೂರಿಶ್ರವಸಾ ಚ ಸಾರ್ಧಂ
ಬಾಹ್ವೋರ್ಬಲಾದೇವ ದುರ್ಯೋಧನಸ್ಯ ॥೨೪೦॥

ಸಾಂಬ ಲಕ್ಷಣೆಯನ್ನು ಬಲಾತ್ಕಾರವಾಗಿ ಕೈಹಿಡಿದುದನ್ನು ನೋಡಿ ಕರ್ಣ ಮುಂತಾದವರು ಮತ್ತು ದುರ್ಯೋಧನ ಮುಂತಾದವರು ಕೋಪದಿಂದ ಉರಿದು ಯುದ್ಧ ಮಾಡಿದರು. ಕರ್ಣ ಭೂರಿಶ್ರವರೊಂದಿಗೆ ಕೌರವರೆಲ್ಲರೂ ಸೇರಿ ಒಬ್ಬ ಸಾಂಬನನ್ನು ಕಷ್ಟದಿಂದ ವಿರಥನನ್ನಾಗಿ ಮಾಡಿ ದುರ್ಯೋಧನನ ಬಾಹುಬಲದಿಂದಲೆ ಸೆರೆಹಿಡಿದರು.

ಕರ್ಣ ಸಾಂಬನ ಉದ್ಧಟತನ ಕಂಡು 'ಹಿಡಿಯಿರಿ ಇವನನ್ನು. ಬಿಡಿಸಿಕೊಳ್ಳಲು ಯಾದವರು ಬಂದರೆ ಅವರ ದರ್ಪಮುರಿಯುವುದು'

---

1. ಸ ಸ್ವಾಯುಧಂ ನ ದಧಾರಾತೋ ಮಯಾಯುಧಧಾರಣಮಧಿರಣಮಧರ್ಮಮಿತಿ ತತ್ಯಾಗಃ।
-ಭಾಗವತ ಸತ್ಯಧರ್ಮೀಯ ಟೀಕಾ (10.91.25)

ಎನ್ನುತ್ತ ಮುಂದುವರಿದ. ಆಗ ಭೂರಿಶ್ರವ ದುರ್ಯೋಧನ ದುಃಶಾಸನ ಶಕುನಿ ಈ ನಾಲ್ವರು ಮಾತನಾಡಿಕೊಂಡು ಭೀಷ್ಮಾದಿಗಳ ಸಂಮತಿ ಇಲ್ಲದಿದ್ದರೂ ಸಾಂಬನನ್ನು ಸೆರೆಹಿಡಿದರು.

ಶ್ರುತ್ವೈವ ತದ್ವೃಷ್ಣಯಃ ಸರ್ವ ಏವ
ಸಮುದ್ಯಮಂ ಚಕ್ರಿರೇ ಕೌರವೇಷು ।
ನಿವಾರ್ಯ ತಾನ್ ಬಲಭದ್ರಃ ಸ್ವಯಂ ಯಯೌ
ಸಹೋದ್ಧವಃ ಕೌರವೇಯಾನ್ ಕ್ಷ್ಮಾರ್ಥೀ ॥೨೪೧॥

ಸಾಂಬನನ್ನು ಸೆರೆಯಲ್ಲಿಟ್ಟಿದ್ದನ್ನು ಕೇಳಿ ಎಲ್ಲ ಯಾದವರು ಕೌರವರೊಡನೆ ಯುದ್ಧಕ್ಕೆ ಸನ್ನದ್ಧರಾದರು. ಶಾಂತಿಯನ್ನು ಬಯಸಿದ ಬಲರಾಮ ಅವರನ್ನು ತಡೆದು ತಾನೇ ಉದ್ಧವನೊಂದಿಗೆ ಕೌರವರ ಬಳಿಗೆ ನಡೆದ.

ನಾರದರು ಬಂದ ಸಾಂಬ ಸೆರೆಸಿಕ್ಕಿದ ಸಮಾಚಾರವನ್ನು ತಿಳಿಸಿದರು. ಆಗ ಉಗ್ರಸೇನನ ಪ್ರೇರಣೆಯಿಂದ ಎಲ್ಲ ಯಾದವರೂ ಕೌರವರ ಮೇಲೆ ಆಕ್ರಮಣಕ್ಕೆ ಸನ್ನದ್ಧರಾದರು. ಬಲರಾಮ ಕುರುಕುಲ ಯದುಕುಲಗಳು ಪರಸ್ಪರ ವಿರೋಧಿಸುವುದನ್ನು ಇಷ್ಟಪಡಲಿಲ್ಲ ಮತ್ತು ಈ ಕಲಹದಿಂದಾಗಿ ಸಾಂಬನಿಗೆ ಅಪಾಯವೂ ಆದೀತೆಂದು ಬಗೆದ. ಜಗಳವಿಲ್ಲದೆ ನಾನೇ ಸಾಂಬನನ್ನು ಬಿಡಿಸಿಕೊಂಡು ಲಕ್ಷಣೆಯೊಂದಿಗೇ ಕರೆತರುವೆನೆನ್ನುತ್ತ ಉದ್ಧವನೊಂದಿಗೆ ಹಸ್ತಿನಾಪುರಕ್ಕೆ ತೆರಳಿದ.

ಪುರಸ್ಯ ಬಾಹ್ಯೋಪವನೇ ಸ್ಥಿತಃ ಸ
ಪ್ರಾಸ್ಥಾಪಯಚ್ಚೋದ್ಧವಂ ಕೌರವಾರ್ಥೇ ।
ಆಗತ್ಯ ಸರ್ವೇ ಕುರವೋಽಸ್ಯ ಪೂಜಾಂ
ಚಕ್ರುಃ ಸ ಚಾಹೋಗ್ರಸೇನಸ್ಯ ಚಾಜ್ಞಾಂ ॥೨೪೨॥

ಪಟ್ಟಣದ ಹೊರ ಉದ್ಯಾನದಲ್ಲಿ ಇಳಿದು ಬಲರಾಮ ಉದ್ಧವನನ್ನು ಕೌರವರ ಬಳಿಗೆ ಕಳಿಸಿದ. ಕೌರವರೆಲ್ಲರೂ ಬಂದು ಅವನಿಗೆ ಸತ್ಕಾರ ಮಾಡಿದರು. ಅವನು ಉಗ್ರಸೇನನ ಆಜ್ಞೆಯನ್ನು ತಿಳಿಸಿದ.

ಆಜ್ಞಾಪಯದ್ವೋ ನೃಪತಿಃ ಸ್ವಯಂ ನಃ
ಕುಮಾರಕಃ ಪ್ರಗೃಹೀತೋ ಭವದ್ಭಿಃ ।
ಏಕಃ ಸಮೇತೈರ್ಬಹುಭಿರ್ಬಾಂಧವಾರ್ಥಂ
ಕ್ಷಾಂತಂ ತನ್ನೋ ಮುಂಚತಾಶ್ವೇವ ಸಾಂಬಂ ॥೨೪೩॥

ಉಗ್ರಸೇನ ಮಹಾರಾಜ ನಿಮಗೆ ಆಜ್ಞೆಮಾಡಿದ್ದಾನೆ. ನಮ್ಮ ಒಬ್ಬ ಹುಡುಗನನ್ನು ನೀವೆಲ್ಲರೂ ಸೇರಿ ಅಧರ್ಮದಿಂದ ಸೆರೆಹಿಡಿದಿರುವಿರಿ. ಆದರೂ ಬಂಧುಗಳೆಂದು ನಿಮ್ಮನ್ನು

ಕ್ಷಮಿಸಿದ್ದೇವೆ. ಅದರಿಂದ ಸಾಂಬನನ್ನು ಬೇಗನೆ ನಮಗೆ ಬಿಟ್ಟುಕೊಡಿರಿ.

ಆಜ್ಞಾಪಯಾಮಾಸ ಚ ಉಗ್ರಸೇನ
ಇತ್ಯುಕ್ತಮೇವ ತು ನಿಶಮ್ಯ ಕುರುಪ್ರವೀರಾಃ ।
ಸಂಶ್ರಾವ್ಯ ದುಷ್ಟವಚನಾನಿ ಬಲಂ ಪುರಂ ಸ್ವಂ
ಕ್ರೋಧಾತ್ ಸಮಾವಿವಿಶುರತ್ರ ಚುಕೋಪ ರಾಮಃ ॥೨೪೪॥

ಉಗ್ರಸೇನ ಮಹಾರಾಜ ನಿಮಗೆ ಹೀಗೆ ಆಜ್ಞೆಮಾಡಿದ್ದಾನೆ'. ಹೀಗೆ ಬಲರಾಮ ಹೇಳಿದ್ದನ್ನು ಕೇಳಿ ಕೌರವರು ಕೋಪದಿಂದ ಅವನಿಗೆ ಕೆಟ್ಟ ಮಾತುಗಳನ್ನಾಡಿ ತಮ್ಮ ಪಟ್ಟಣವನ್ನು ಹೊಕ್ಕರು. ಬಲರಾಮ ಕೋಪಗೊಂಡ.

ಕೌರವರು ಹೇಳಿದರು, 'ನಾವು ಬಂಧುಗಳೆಂದು ಸುಮ್ಮನಿದ್ದುದರಿಂದ ಯಾದವರು ಸಿಂಹಾಸನವೇರಿ ನಮಗೆ ಸಮಾನರಾಗಿ ಮೆರೆಯುತ್ತಿದ್ದಾರೆ. ರಾಜಸಿಂಹಾಸನ ರಾಜಚಿಹ್ನೆಗಳನ್ನು ಅವರಿಗೆ ಕೊಟ್ಟವರು ನಾವು. ಈಗ ನಾಚಿಕೆ ಇಲ್ಲದೆ ನಮಗೇ ಆಜ್ಞೆ ಮಾಡುತ್ತಾರೆ. ಕಾಲಿನ ಚಪ್ಪಲಿ ತಲೆಯ ಮೇಲೇರಲು ಬಯಸಿದೆ!' ಎಂದು ಹೇಳಿ ಬಲರಾಮನೊಬ್ಬನನ್ನೆ ಬಿಟ್ಟು ಎಲ್ಲರೂ ಪಟ್ಟಣವನ್ನು ಹೊಕ್ಕರು. ಬಲರಾಮ ಕುಪಿತನಾದ. ಮೂಲೋಕವನ್ನು ಸುಡುವನೋ ಎಂಬಂತೆ ನೇಗಿಲು ಹಿಡಿದು ಎದ್ದುನಿಂತ. ಯಾದವರೂ ಕೃಷ್ಣನೂ ಕೋಪಿಸಿಕೊಂಡಿರುವಾಗ ನಾನು ರಾಜಿ ಮಾಡಲು ಬಂದೆನಲ್ಲ! ಕೊಂಕಣದ ಎಮ್ಮೆಗೆ ಕೊರಡೇ ಮದ್ದು. ಅಯೋಗ್ಯರಿಗೆ ತಕ್ಕಶಾಸ್ತಿ ಮಾಡುವೆನೆಂದು ಹೊರಟ.

ಸ ಲಾಂಗಲೇನ ತತ್ ಪುರಂ ವಿಕೃಷ್ಯ ಜಾಹ್ನವೀಜಲೇ ।
ನಿಪಾತಯನ್ ನಿವಾರಿತಃ ಪ್ರಣಮ್ಯ ಸರ್ವಕೌರವೈಃ ॥೨೪೫॥

ಬಲರಾಮ ತನ್ನ ನೇಗಿಲಿಂದ ಹಸ್ತಿನಾಪುರವನ್ನೇ ಸೆಳೆದು ಗಂಗೆಯ ನೀರಲ್ಲಿ ಬೀಳಿಸಲು ತೊಡಗಿದಾಗ ಎಲ್ಲ ಕೌರವರೂ ನಮಿಸಿ ತಡೆದರು.

ಕೌರವರು ಬೇಗನೆ ಸಾಂಬ ಲಕ್ಷಣೆಯರನ್ನು ಮುಂದೆಮಾಡಿಕೊಂಡು ಬಂದು ಕೈಮುಗಿದು ಸಮಸ್ತ ಭೂಮಂಡಲವನ್ನು ಹೊತ್ತ ಆದಿಶೇಷ, ಕೊನೆಯಲ್ಲಿ ಎಲ್ಲವನ್ನೂ ಲಯ ಮಾಡುವ ಸಂಕರ್ಷಣಮೂರ್ತಿ ನೀನು, ಶಾಂತನಾಗೆಂದು ಸ್ತುತಿಸಿದರು. ಕನ್ಯೆಯೊಂದಿಗೆ ಬಳುವಳಿಯಾಗಿ ಅಸಂಖ್ಯ ಆನೆ ಕುದುರೆ ರಥ ದಾಸದಾಸಿಯರನ್ನು ಕೊಟ್ಟ, ದುರ್ಯೋಧನ. ಇಂದಿಗೂ ಹಸ್ತಿನಾವತಿ ದಕ್ಷಿಣದಲ್ಲಿ ಉನ್ನತವಾಗಿದ್ದು ಗಂಗೆಯ ಕಡೆಗೆ ಬಾಗಿದಂತೆ ಕಾಣುವುದು ಬಲರಾಮನ ಈ ಲೀಲೆಗೆ ಸಾಕ್ಷಿಯಾಗಿದೆ.

ಸಭಾರ್ಯಮಾಶು ಪುತ್ರಕಂ ಸುಯೋಧನಾಭಿಪೂಜಿತಂ ।
ಸಪಾರಿಬರ್ಹಮಾಪ್ಯ ಚ ಪ್ರಜಗ್ಮಿವಾನ್ ಸ್ವಕಂಪುರಂ ॥೨೪೬॥

ದುರ್ಯೋಧನನಿಂದ ಸತ್ಕೃತನಾದ, ಪತ್ನೀ ಸಮೇತನಾದ ಪುತ್ರ ಸಾಂಬನನ್ನು ಬಳುವಳಿಯೊಂದಿಗೆ ಸ್ವೀಕರಿಸಿ ಬಲರಾಮ ತನ್ನ ಪಟ್ಟಣಕ್ಕೆ ಹಿಂತಿರುಗಿದ.

ಬಲರಾಮನಲ್ಲಿ ಹರಿಯಾವೇಶ

ಇತ್ಯಾದಿ ಕರ್ಮಾಣಿ ಮಹಾಂತಿ ರಾಮ-
ಸ್ಯಾಸನ್ ಶೇಷಸ್ಯಾಚ್ಯುತಾವೇಶಿನೋಽಲಂ ।
ಯಸ್ಯಾಚ್ಯುತಾವೇಶವಿಶೇಷಕಾಲಂ
ಜ್ಞಾತ್ವಾ ಭೀಮೋಽಪ್ಯಸ್ಯ ನೋದೇತಿ ಯುದ್ಧೇ ॥೨೪೭॥

ಇವೇ ಮೊದಲಾದ ಮಹಾಕಾರ್ಯಗಳು ಹರಿಯಾವೇಶದಿಂದ ಕೂಡಿದ ಶೇಷಾವತಾರಿ ಬಲರಾಮನಿಂದ ನಡೆದುವು. ಅವನಲ್ಲಿ ಹರಿ ವಿಶೇಷವಾಗಿ ಆವೇಶಗೊಳ್ಳುವ ಕಾಲವನ್ನು ತಿಳಿದು ಭೀಮನೂ ಆಗ ಅವನೊಡನೆ ಯುದ್ಧ ಮಾಡುತ್ತಿರಲಿಲ್ಲ.

ಭೀಮ ಬಲರಾಮನಲ್ಲಿ ಗದಾಭ್ಯಾಸ ಮಾಡುವಾಗ ಅವನ ಮೇಲೆ ಗದೆಯನ್ನು ಬೀಸುವುದು ಅನಿವಾರ್ಯವಾಗಿತ್ತು. ಆಗಲೂ ಕೆಲವೊಮ್ಮೆ ಶುಕ್ಲಕೇಶಾವೇಶ ಅಧಿಕಗೊಂಡಾಗ ಭೀಮ ಅದನ್ನು ತಿಳಿದು ಆಗ ಅವನ ಮೇಲೆ ಗದೆ ಎತ್ತುತ್ತಿರಲಿಲ್ಲ.

ಕ್ರೀಡಾಯುದ್ಧೇ ಬಹುಶೋ ರೌಹಿಣೇಯೇ
ವ್ಯಕ್ತಿಂ ವಿಷ್ಣೋರ್ಭೀಮಸೇನೋ ವಿದಿತ್ವಾ ।
ತಾತ್ಕಾಲಿಕೀಂ ಪೀಡ್ಯಮಾನೋಽಪಿ ತೇನ
ನೈವೋದ್ಯಮಂ ಕರುತೇ ವಿಷ್ಣುಭಕ್ತ್ಯಾ
ತದಾ ಜಯೀ ಪ್ರಭವತ್ಯೇಷ ರಾಮೋ
ನಾತಿವ್ಯಕ್ತಸ್ತತ್ರ ಯದಾ ಜನಾರ್ದನಃ ।
ತದಾ ಭೀಮೋ ವಿಜಯೀ ಸ್ಯಾತ್ಸದೈವ
ವಿಷ್ಣೋಃ ಕೇಶಾವೇಶವಾನ್ ಯತ್ಸ ರಾಮಃ ॥೨೪೯॥

ಭೀಮ ಬಲರಾಮನೊಂದಿಗೆ ಕ್ರೀಡೆಗಾಗಿ ಯುದ್ಧಮಾಡುವಾಗ ಅನೇಕಬಾರಿ ಅವನಲ್ಲಿ ತಾತ್ಕಾಲಿಕವಾಗಿ ಉಂಟಾಗುತ್ತಿದ್ದ ಹರಿಯ ವಿಶೇಷಾವೇಶವನ್ನು ತಿಳಿದು ತಾನು ಎಷ್ಟೇ ಹೊಡೆಸಿಕೊಂಡರೂ ವಿಷ್ಣುಭಕ್ತಿಯಿಂದ ಅವನ ಮೇಲೆ ಗದೆ ಎತ್ತುತ್ತಿರಲಿಲ್ಲ. ಆ ಕಾಲದಲ್ಲಿ ಬಲರಾಮ ವಿಜಯಿಯಾಗುತ್ತಿದ್ದ. ಯಾವಾಗ ಹರಿ ಅವನಲ್ಲಿ ಹೆಚ್ಚು ವ್ಯಕ್ತನಾಗುವುದಿಲ್ಲವೋ ಆಗ ಯಾವಾಗಲೂ ಭೀಮನೆ ವಿಜಯಿಯಾಗುತ್ತಿದ್ದ. ಸದಾ

ಬಲರಾಮನಲ್ಲಿ ಹರಿಯ ಕೇಶಾವೇಶವಿದ್ದೇ ಇರುತ್ತಿತ್ತು.

ಭೀಮ ಬಲರಾಮ ಶಲ್ಯ ಕೀಚಕರು ನಾಲ್ವರು ಕ್ರಮವಾಗಿ ಮಹಾಬಲಿಷ್ಠರೆಂದು ಆಕಾಲದಲ್ಲಿ ಪ್ರಸಿದ್ಧರಾಗಿದ್ದರು ಎಂದು ಮಹಾಭಾರತವೆ ಹೇಳಿದೆ. ಆದರೆ ಭೀಮ ಅನೇಕ ಬಾರಿ ಬಲರಾಮನಿಂದ ಬಾಹುಯುದ್ಧದಲ್ಲಿ ಸೋತನೆಂದೂ ಹರಿವಂಶ ಹೇಳಿದೆ. ಇದು ಹೇಗೆ ಎಂದರೆ ನಿರ್ಣಯ ಹೇಳುತ್ತದೆ ಕೇಶಾವೇಶ ಬಂದಾಗ ಇದು ನಡೆಯಿತು ಎಂದು.

ಉಷಾ ಪರಿಣಯ

ಏತಾದೃಶೇನೈವ ರಾಮೇಣ ಯುಕ್ತೇ
ಕೃಷ್ಣೇ ದ್ವಾರ್ವತ್ಯಾಂ ನಿವಸತ್ಯಬ್ಜನಾಭೇ।
ಸ್ವಪ್ನೇಽನಿರುದ್ಧೇನ ರತಾ ಕದಾಚಿತ್
ಬಾಣಾತ್ಮಜೋಷಾ ಚಿತ್ರಲೇಖಾಮುವಾಚ ॥೨೫೦॥
ತಮಾನಯೇತ್ಯಥ ಸಾ ಚಿತ್ರವಸ್ತ್ರೇ
ಪ್ರದರ್ಶ್ಯ ಲೋಕಾನ್ಸಮದರ್ಶಯತ್ತಂ।
ಪೌತ್ರಂ ವಿದಿತ್ವಾ ವಚನಾಚ್ಚ ತಸ್ಯಾಃ
ಕೃಷ್ಣಸ್ಯ ತಂ ಚಾನಯತ್ತತ್ರ ರಾತ್ರೌ ॥೨೫೧॥

ಇಂತಹ ಬಲರಾಮನಿಂದ ಯುಕ್ತನಾಗಿ ಕಮಲನಾಭ ಶ್ರೀಕೃಷ್ಣ ದ್ವಾರಕೆಯಲ್ಲಿ ವಾಸಮಾಡುತ್ತಿದ್ದಾಗ ಒಮ್ಮೆ ಸ್ವಪ್ನದಲ್ಲಿ ಅನಿರುದ್ಧನೊಂದಿಗೆ ರಮಿಸಿದ ಬಾಣಾಸುರಪುತ್ರಿ ಉಷೆ ಚಿತ್ರಲೇಖೆಗೆ ಹೇಳಿದಳು, 'ಆತನನ್ನು ಕರೆದು ತಾ' ಎಂದು. ಅವಳು ಚಿತ್ರವಸ್ತ್ರದಲ್ಲಿ ಜನರನ್ನು ಬರೆದು ತೋರಿಸಿ ಆತ ಶ್ರೀಕೃಷ್ಣನ ಮೊಮ್ಮಗನೆಂಬುದನ್ನು ತಿಳಿದು ರಾತ್ರಿಯಲ್ಲಿ ಅವನನ್ನು ಅಲ್ಲಿಗೆ ಕರೆತಂದಳು.

ಕೃಷ್ಣಪುತ್ರನಾದ ಪ್ರದ್ಯುಮ್ನನಿಂದ ರುಕ್ಮಿಯ ಮಗಳಾದ ರುಕ್ಮವತಿಯಲ್ಲಿ ಹುಟ್ಟಿದ ಅನಿರುದ್ಧನಿಗೆ ಬಾಣಾಸುರಪುತ್ರಿ ಉಷೆ ನಿಯತಪತ್ನಿ. ಬಾಣಾಸುರ ಬಲಿ ಚಕ್ರವರ್ತಿಯ ನೂರು ಮಂದಿ ಮಕ್ಕಳಲ್ಲಿ ಹಿರಿಯವ, ಶಿವಭಕ್ತ. ಶಿವಪಾರ್ವತಿಯರು ಸದಾ ಅವನ ಬಳಿಯಲ್ಲಿಯೆ ವಿಹರಿಸುತ್ತಿದ್ದರು. ಅವರ ಜೋಡಿಯನ್ನು ಕಂಡು ಉಷೆ ತನಗೂ ಒಬ್ಬ ಪತಿ ಬೇಕೆಂದುಕೊಂಡಳು. ಇದನ್ನು ಪಾರ್ವತಿ ತಿಳಿದು ಹೇಳಿದಳು, 'ವೈಶಾಖ ಶುದ್ಧ ದ್ವಾದಶಿ ರಾತ್ರಿಯಲ್ಲಿ ನೀನು ಸ್ವಪ್ನದಲ್ಲಿ ಯಾರೊಡನೆ ರಮಿಸುವೆಯೋ ಅವನು ನಿನಗೆ ಪತಿಯಾಗುವನು' ಎಂದು. ಅದರಂತೆ ರಾತ್ರಿ ಕನಸಿನಲ್ಲಿ ಅನಿರುದ್ಧನ ಪತ್ನಿಯಾಗಿ ಅವನೊಡನೆ ರಮಿಸಿದಳು. ಎಚ್ಚೆತ್ತು ನೋಡಿದರೆ ವಾಸ್ತವವಾಗೇ

ಪುರುಷಸಂಗ ಅವಳಿಗಾಗಿತ್ತು. 'ನನಗೆ ಅವನು ಬೇಕೆ' ಂದು ಅತ್ತಳು. ಅವನೆಂದರೆ ಯಾರು ? ಸಖಿ ಚಿತ್ರಲೇಖೆ ಎಂಬ ಅಪ್ಸರೆ ಬಟ್ಟೆಯ ಮೇಲೆ ಸುಂದರ ಪುರುಷರ ಚಿತ್ರ ಬರೆದು 'ನಿನ್ನ ಕನಸಿನ ರಾಜ ಯಾರೆಂದು ಹೇಳು' ಎಂದಳು. ಉಷೆ ಅನಿರುದ್ಧನ ಚಿತ್ರವನ್ನು ನೋಡಿ 'ಇವನೇ' ಎಂದಳು. ಒಡನೆ ಚಿತ್ರಲೇಖೆ ನಾರದರಿಂದ ಸಂಮೋಹಿನಿ ವಿದ್ಯೆಯನ್ನು ಉಪದೇಶ ಪಡೆದು ಅವರ ಅನುಮತಿಯಿಂದ ಶ್ರೀಕೃಷ್ಣನಿಗೂ ಇದು ಸಂಮತವೆಂಬ ವಿಶ್ವಾಸದಿಂದ ದ್ವಾರಕೆಗೆ ಹೋಗಿ ಅನಿರುದ್ಧನನ್ನು ಮಾಯೆಯಿಂದ ಎತ್ತಿತಂದಳು.

ಅನಿರುದ್ಧಂ ಗುಣೋದಾರಮಾನೀತಂ ಚಿತ್ರಲೇಖಯಾ ।
ಪ್ರಾಪ್ಯ ರೇಮೇ ಬಾಣಸುತಾ ದಿವಸಾನ್‌ಸುಬಹೂನಪಿ ॥೨೫೨॥

ಚಿತ್ರಲೇಖೆ ತಂದ ಉತ್ತಮಗುಣವಂತನಾದ ಅನಿರುದ್ಧನನ್ನು ಸೇರಿ ಉಷೆ ಬಹುದಿನಗಳ ಕಾಲ ರಮಿಸಿದಳು.

ಗಾಂಧರ್ವ ವಿಧಿಯಿಂದ ವಿವಾಹವಾಗಿ ಅನಿರುದ್ಧನೊಡನೆ ಉಷೆ ರಮಿಸಿದಳೆಂದು ಹರಿವಂಶ (ವಿಷ್ಣುಪರ್ವ 119-74) ಹೇಳಿದೆ. 'ಬಹುದಿನಗಳ ಕಾಲ' ಎಂದರೆ ಭಾಗವತ (10.78.1)ದ ಪ್ರಕಾರ ಮಳೆಗಾಲದ ನಾಲ್ಕು ತಿಂಗಳ ಕಾಲ ಅನಿರುದ್ಧನೊಡನೆ ಅಂತಃಪುರದಲ್ಲಿ ರಹಸ್ಯವಾಗಿ ಕೂಡಿ ರಮಿಸಿದ್ದಳು ಉಷೆ

ಗೂಢಂ ಕನ್ಯಾಗೃಹೇ ತಂ ತು ಜ್ಞಾತ್ವಾ ಕನ್ಯಾಭಿರಕ್ಷಿಣಃ ।
ಊಚುರ್ಬಾಣಾಯಾದಿಶಚ್ಚ ಕಿಂಕರಾನ್ ಗ್ರಹಣೇಽಸ್ಯ ಸಃ ॥೨೫೩॥

ಕನ್ಯೆಯ ರಕ್ಷಣೆಗೆ ನಿಯುಕ್ತರಾದ ಭಟರು ಕನ್ಯೆಯ ಅಂತಃಪುರದಲ್ಲಿ ರಹಸ್ಯವಾಗಿ ಅನಿರುದ್ಧನಿದ್ದುದನ್ನು ತಿಳಿದು ಬಾಣಾಸುರನಿಗೆ ತಿಳಿಸಿದರು. ಅವನು.ಅನಿರುದ್ಧನನ್ನು ಸೆರೆ ಹಿಡಿಯಲು ಭಟರನ್ನು ಕಳಿಸಿದ.

ಆಗತಾನನಿರುದ್ಧಸ್ತಾನ್‌ಪರಿಘೇಣ ಮಹಾಬಲಃ ।
ನಿಹತ್ಯ ದ್ರಾವಯಾಮಾಸ ಸ್ವಯಮಾಯಾತ್‌ತತೋಽಸುರಃ ॥೨೫೪॥
ಸ ತು ಯುದ್ಧಾವತಿಕೃಚ್ಛ್ರೇಣ ನಾಗಾಸ್ತ್ರೇಣ ಬಬಂಧ ತಂ ॥೨೫೫॥

ಮಹಾಬಲಿಷ್ಠನಾದ ಅನಿರುದ್ಧ ತನ್ನ ಬಳಿಗೆ ಬಂದ ಭಟರನ್ನು ಪರಿಘಾಯುಧದಿಂದ ಹೊಡೆದೊಡಿಸಿದ. ಆಗ ಬಾಣಾಸುರ ತಾನೆ ಬಂದ. ಯುದ್ಧಮಾಡಿ ಬಹುಕಷ್ಟದಿಂದ ಅನಿರುದ್ಧನನ್ನು ನಾಗಾಸ್ತ್ರದಿಂದ ಬಂಧಿಸಿದ.

'ಯುದ್ಧವಾದರೆ ಆಗಲಿ. ನೋಡಲು ನನಗೂ ಕುತೂಹಲ. ಯುದ್ಧ ಪ್ರಾರಂಭವಾದೊಡನೆ ನನಗೆ ತಿಳಿಸು' ಎಂದು ನಾರದರು ಚಿತ್ರಲೇಖೆಗೆ

ತಿಳಿಸಿದ್ದರು. ಆದರಂತೆ ಅವಳು ನಾರದರನ್ನು ಸ್ಮರಿಸಿದಳು. ಒಡನೆ ಅವರು ಬಂದು ಅನಿರುದ್ಧನನ್ನು ಕಂಡುಹೋದರು. ಬಾಣಾಸುರ ಕುಂಭಾಂಡನೆಂಬ ಮಂತ್ರಿಯ ಸಲಹೆಯಿಂದ ಅನಿರುದ್ಧನನ್ನು ಕೊಲ್ಲದೆ ಸೆರೆಯಲ್ಲಿಟ್ಟಿದ್ದ. ಇತ್ತ ನಾರದರು ಕೃಷ್ಣನಿಗೆ ಎಲ್ಲ ತಿಳಿಸಿದರು.

ಶೋಣಿತಪುರಕ್ಕೆ ಶ್ರೀಕೃಷ್ಣ

ಅಥ ಕೃಷ್ಣಃ ಸಮಾರುಹ್ಯ ಗರುಡಂ ರಾಮಸಂಯುತಃ ।
ಪ್ರದ್ಯುಮ್ನೇನ ಚ ತತ್ರಾಗಾತ್ ಪ್ರಥಮಂ ತತ್ರ ವಹ್ನಿಭಿಃ ॥೨೫೬॥
ಯುದ್ಧ್ವಾಂಗಿರಸಾ ಚೈವ ಕ್ಷಣಾದ್ ವಿದ್ರಾವ್ಯ ತಾನ್ ಹರಿಃ ।
ವಿದ್ರಾವ್ಯ ಶರ್ವಪ್ರಮಥಾನಾಸಸಾದ ಜ್ವರಂ ತತಃ ॥೨೫೭॥

ಬಳಿಕ ಶ್ರೀಕೃಷ್ಣ ಗರುಡನನ್ನೇರಿ ಬಲರಾಮ ಪ್ರದ್ಯುಮ್ನರೊಂದಿಗೆ ಬಾಣಾಸುರನ ಬಳಿಗೆ ಬಂದ. ಮೊದಲಿಗೆ ಅಗ್ನಿಗಳೊಡನೆ ಮತ್ತು ಅಂಗಿರಸನೊಡನೆ ಯುದ್ಧಮಾಡಿ ಕ್ಷಣದಲ್ಲಿ ಅವರನ್ನು ಓಡಿಸಿ ಶಿವನ ಪ್ರಮಥಗಣಗಳನ್ನೂ ಓಡಿಸಿ ಜ್ವರನನ್ನೂ ಇದಿರಿಸಿದ.

ನಾರದರಿಂದ ಅನಿರುದ್ಧನ ಬಂಧನದ ವಾರ್ತೆಯನ್ನು ಕೇಳಿ ಶ್ರೀಕೃಷ್ಣ ಗರುಡಾರೂಢನಾಗಿ ಬಲರಾಮ ಪ್ರದ್ಯುಮ್ನರೊಡನೆ ಬಾಣಾಸುರನ ಶೋಣಿತಪುರಕ್ಕೆ ಬಂದ. ಜೊತೆಗೆ ಹನ್ನೆರಡು ಅಕ್ಷೌಹಿಣಿ ಯಾದವ ಸೈನ್ಯವೂ ಬಂದಿತು. ಪಟ್ಟಣದ ಹೊರವಲಯದಲ್ಲಿ ಆಹವನೀಯಾಗ್ನಿ ಅವರನ್ನು ತಡೆದ. ಆಗ ಗರುಡ ಸಾವಿರ ಮುಖಗಳನ್ನು ಮಾಡಿಕೊಂಡು ದೇವಗಂಗಾಜಲವನ್ನು ಮುಖಗಳಿಂದ ತಂದು ಸುರಿಸಿ ಅಗ್ನಿಯನ್ನು ಶಾಂತಗೊಳಿಸಿದ. ಬಳಿಕ ಹನ್ನೆರಡು ಮಂದಿ ಅಗ್ನಿ ಪುತ್ರರೊಂದಿಗೆ ಅಂಗಿರಸನೂ ಬಂದು ಯುದ್ಧಮಾಡಿ ಪರಾಜಿತನಾದ. ಅಂಗಿರಸನೆಂದರೆ ಯಾರೆಂಬ ವಿಷಯದಲ್ಲಿ ವ್ಯಾಖ್ಯಾನಕಾರರಲ್ಲಿ ಮತಭೇದವಿದೆ.

ಯದಂಗ ದಾಶುಷೇ ತ್ವಮಗ್ನೇ ಭದ್ರಂ ಕರಿಷ್ಯಸಿ।
ತವೇತ್ತತ್ ಸತ್ಯಮಂಗಿರಃ ॥

ಎಂದು ಪ್ರಧಾನಾಗ್ನಿಯನ್ನು ಅಂಗಿರಸನೆಂದು ಕರೆದುದುಂಟು. ಬ್ರಹ್ಮಪುತ್ರನಾದ ಅಂಗಿರಸನೆಂಬ ಮುನಿ ಒಮ್ಮೆ, ಪ್ರಸಿದ್ಧ ಅಗ್ನಿ ತಪಸ್ಸಿಗಾಗಿ ಅದೃಶ್ಯನಾಗಿ ಹೋದಾಗ ತಾನೇ ಅಗ್ನಿಯ ಕಾರ್ಯ ಮಾಡಿ ಎರಡನೆ ಅಗ್ನಿಯೆನಿಸಿದನೆಂದು ವನಪರ್ವ (220ನೇ ಅಧ್ಯಾಯ) ದಲ್ಲಿ ವರ್ಣಿಸಿದೆ. ಕೆಲವರು ಅಂಗಿರಸನೆಂದರೆ ರುದ್ರನ ಪ್ರಮಥಗಣಗಳಲ್ಲಿ ಒಬ್ಬನೆಂದೂ ಹೇಳುತ್ತಾರೆ. ಶ್ರೀಕೃಷ್ಣ ಅಗ್ನಿದುರ್ಗವನ್ನು ದಾಟಿ ಶಂಖನಾದಪೂರ್ವಕ ಪಟ್ಟಣ

ಪ್ರವೇಶ ಮಾಡಿ ರುದ್ರನ ಪ್ರಮಥಗಣಗಳೊಂದಿಗೆ ಯುದ್ಧ ಮಾಡಿದ. ಆಗ ಶೈವ ಜ್ವರಾಭಿಮಾನಿ ಬಂದು ಇದಿರಿಸಿದ. ಅವನಿಗೆ ಮೂರು ತಲೆ ಮೂರುಕಾಲು ಒಂಬತ್ತು ಕಣ್ಣುಗಳು ಆರು ಕೈಗಳು. ಅವನ ಆಯುಧ ಭಸ್ಮ.

ಶೈವ ವೈಷ್ಣವ ಜ್ವರ

ತೇನ ಭಸ್ಮಪ್ರಹಾರೇಣ ಜ್ವರಿತಂ ರೋಹಿಣೀಸುತಂ ।
ಆಶ್ಲಿಷ್ಯ ವಿಜ್ವರಂ ಚಕ್ರೇ ವಾಸುದೇವೋ ಜಗತ್ಪ್ರಭುಃ ॥೨೫೮॥

ಜ್ವರನ ಭಸ್ಮಾಯುಧಪ್ರಹಾರದಿಂದ ಬಲರಾಮ ಜ್ವರಪೀಡಿತನಾದ. ಜಗನ್ನಾಥ ಶ್ರೀಕೃಷ್ಣ ಬಲರಾಮನನ್ನು ಆಲಿಂಗಿಸಿ ಜ್ವರದಿಂದ ಮುಕ್ತನನ್ನಾಗಿ ಮಾಡಿದ.

ಸ್ವಯಂ ವಿಕ್ರೀಡ್ಯ ತೇನಾಥ ಕಂಚಿತ್ಕಾಲಂ ಜನಾರ್ದನಃ ।
ನಿಷ್ಪಿಷ್ಯ ಮುಷ್ಟಿಭಿಶ್ಚಾನ್ಯಂ ಸಸರ್ಜ ಜ್ವರಮಚ್ಯುತಃ ॥೨೫೯॥

ಸ್ವಲ್ಪಕಾಲ ಶ್ರೀಕೃಷ್ಣ ತಾನೂ ಆ ಜ್ವರನೊಡನೆ ಆಟವಾಡಿ ಮುಷ್ಟಿಗಳಿಂದ ಮರ್ದಿಸಿ ಬೇರೆ ವೈಷ್ಣವ ಜ್ವರವನ್ನು ಸೃಷ್ಟಿಸಿದ.

ಬಲರಾಮನ ಮೇಲೆ ಶೈವಜ್ವರಾಭಿಮಾನಿ ದೇವತೆ ಭಸ್ಮವನ್ನೆಸೆದಾಗ ಅವನ ಮೈ ಕಾವೇರಿತು. ರೋಮಾಂಚ ಉಂಟಾಯಿತು. ಬಾಯಾಕಳಿಕೆ ಬಂದಿತು. ಕಣ್ಣು ಕತ್ತಲೆ ಕವಿಯಿತು. 'ಕೃಷ್ಣ! ಕಾಪಾಡು' ಎಂದ. ಶ್ರೀಕೃಷ್ಣ ಅವನನ್ನು ಆಲಿಂಗಿಸಿ ಸ್ವಸ್ಥನನ್ನಾಗಿ ಮಾಡಿದ. ಬಳಿಕ ಸ್ವಲ್ಪ ಕಾಲ ತಾನೇ ಅವನೊಡನೆ ಯುದ್ಧದ ಆಟವಾಡಿದ. ಎರಡು ತೋಳುಗಳಿಂದ ಬಿಗಿದು ನಿರ್ಜೀವನಂತಾಗಿಸಿ ನೆಲದಲ್ಲಿ ಎಸೆದ.

ಜ್ವರಗಳಿಗೂ ಶೈವ ವೈಷ್ಣವ ಮತಭೇದವಿದೆ ಎಂದು ತಿಳಿಯಬಾರದು. ಶೈವ ಜ್ವರವೆಂದರೆ ಶಿವ ನಿರ್ಮಿಸಿದ ಶಿವಭೃತ್ಯನಾದ ಉಷ್ಣಜ್ವರ. ಶ್ರೀಕೃಷ್ಣ ಶೀತಜ್ವರವನ್ನು ನಿರ್ಮಿಸಿ ಆ ಉಷ್ಣ ಜ್ವರದ ಇದಿರಿಗೆ ಕಳಿಸಿದ.

ಸ್ವಯಂ ಜಿತ್ವಾಪಿ ಗಿರಿಶಭೃತ್ಯಂ ನಾಲಮಿತಿ ಪ್ರಭುಃ ।
ಸ್ವಭೃತ್ಯೇನೈವ ಜೇತವ್ಯ ಇತ್ಯನ್ಯಂ ಸಸೃಜೇ ತದಾ ।
ಜ್ವರೇಣ ವೈಷ್ಣವೇನಾಸೌ ಸುಭೃಶಂ ಪೀಡಿತಸ್ತದಾ ॥೨೬೦॥
ಗ್ರಾಸಾರ್ಥಮುಪನೀತಶ್ಚ ಜಗಾಮ ಶರಣಂ ಹರಿಂ ।
ತೇನ ಸ್ತುತಃ ಸ ಭಗವಾನ್ ಮೋಚಯಾಮಾಸ ತಂ ಪ್ರಭುಃ ॥೨೬೧॥

ಶಿವಭೃತ್ಯನಾದ ಜ್ವರನನ್ನು ಶ್ರೀಕೃಷ್ಣ ಸ್ವಯಂ ಗೆದ್ದಿದ್ದರೂ, ಅದು ಸಾಲದೆಂದು, ತನ್ನ ಭೃತ್ಯನಿಂದಲೂ ಅವನನ್ನು ಗೆಲ್ಲಿಸಬೇಕೆಂದು, ಇನ್ನೊಬ್ಬ ಜ್ವರನನ್ನು ಆಗಲೆ ಸೃಷ್ಟಿಸಿದ. ಆ

ವೈಷ್ಣವ ಜ್ವರ ಶೈವ ಜ್ವರನನ್ನು ಬಹಳ ಪೀಡಿಸಿ ನುಂಗಲು ಬಾಯಿಯ ಬಳಿಗೆ ತಂದಾಗ ಶೈವಜ್ವರ ಕೃಷ್ಣನನ್ನು ಮೊರೆಹೊಕ್ಕ. ಅವನಿಂದ ಸ್ತುತನಾದ ಶ್ರೀಕೃಷ್ಣ ಅವನನ್ನು ಬಿಡುಗಡೆ ಮಾಡಿದ.

ನೆಲದ ಮೇಲೆ ಬಿದ್ದ ಶೈವ ಜ್ವರನೆದ್ದು ಕೃಷ್ಣನ ಶರೀರವನ್ನು ಹೊಕ್ಕು ಮೈರೋಮಾಂಚ ಬಾಯಾಕಳಿಕೆ ಮುಂತಾದುವನ್ನು ಉಂಟು ಮಾಡಿದನಂತೆ. ಇದು ಶ್ರೀಕೃಷ್ಣ ಆಡಿದ ಆಟ ಎನ್ನುತ್ತದೆ ನಿರ್ಣಯ. ಒಡನೆ ಶ್ರೀಕೃಷ್ಣ ವೈಷ್ಣವ ಜ್ವರನನ್ನು ಸೃಷ್ಟಿಸಿದ. ಅವನು ಶೈವ ಜ್ವರನನ್ನು ಕೃಷ್ಣನ ಮೈಯಿಂದ ಹೊರಗೆ ಸೆಳೆದು ತಂದು ಕೃಷ್ಣನ ಕೈಗೆ ಒಪ್ಪಿಸಿದ. ಕೃಷ್ಣ ಅವನನ್ನು ಕೊಲ್ಲಲು ಉದ್ಯುಕ್ತನಾದಾಗ ಆತ ಶರಣಾದ. ಬ್ರಹ್ಮದೇವನೂ ಅಶರೀರನಾಗಿ ಬಂದು 'ಈತನನ್ನು ಕೊಲ್ಲಬೇಡ' ಎಂದ. ಶ್ರೀಕೃಷ್ಣ ಪ್ರಸನ್ನನಾಗಿ ಶೈವಜ್ವರನ ಅಪೇಕ್ಷೆಯಂತೆ ವೈಷ್ಣವ ಜ್ವರನನ್ನು ತನ್ನೊಳಗೇ ಅಡಗಿಸಿಕೊಂಡ.

ಕ್ರೀಡಾರ್ಥಮತ್ಯಲ್ಪಜನೇಷ್ವಪಿ ಪ್ರಭುಃ
ಕಥಂಚಿದೇವ ವ್ಯಜಯದ್ ವ್ಯಥಾಂ ವಿನಾ ।
ಇತ್ಯಾದಿಮೋಹಾಯ ಸ ದರ್ಶಯತ್ಯಜೋ
ನಿತ್ಯಸ್ವತಂತ್ರಸ್ಯ ಕುತೋ ವ್ಯಥಾದಯಃ ॥೨೬೨॥

ಪ್ರಭು ಶ್ರೀಕೃಷ್ಣ ಅತ್ಯಲ್ಪ ಜನರಲ್ಲಿಯೂ ಮಹಾಪ್ರಯತ್ನದಿಂದಲೆ ಅನಾಯಾಸ ಜಯವನ್ನು ಸಂಪಾದಿಸಿದ ಎಂದು ಮೊದಲಾದುವನ್ನು ಮೋಹನಕ್ಕಾಗಿ ತೋರಿಸುತ್ತಾನೆ. ಸದಾ ಸ್ವತಂತ್ರನಾಗಿರುವವನಿಗೆ ನೋವು ಮುಂತಾದುವು ಎಲ್ಲಿ?

ಶೈವ ಜ್ವರನ ಆಕ್ರಮಣವನ್ನು ಕೃಷ್ಣನಿಗೆ ಇದಿರಿಸಲಾಗಲಿಲ್ಲ. ವೈಷ್ಣವ ಜ್ವರ ನಿರ್ಮಾಣದಂಥ ಮಹಾಪ್ರಯತ್ನದಿಂದಲೆ ಶೈವ ಜ್ವರನ ಮೇಲೆ ಅನಾಯಾಸ ವಿಜಯ ಸಂಪಾದಿಸಿದ ಎಂದು ಮೇಲುನೋಟಕ್ಕೆ ಕಾಣುತ್ತದೆ. ವಸ್ತುತಃ ಕೃಷ್ಣ ತಾನು ಸ್ವತಃ ಗೆದ್ದರೆ ಸಾಲದು, ಈ ಜ್ವರ ನನಗಿಂತ ಏಕೆ, ನನ್ನ ಭೃತ್ಯರಿಗಿಂತಲೂ ದುರ್ಬಲ ಎಂದು ತೋರಿಸುವುದಕ್ಕಾಗಿ ವೈಷ್ಣವ ಜ್ವರನನ್ನು ನಿರ್ಮಿಸಿದ.

ಶಿವ ಸ್ತಂಭನ

ಯದಾ ಜ್ವರಾದ್ಯಾ ಅಖಿಲಾಃ ಪ್ರವಿದ್ರುತಾ
ಸ್ತದಾ ಸ್ವಯಂ ಪ್ರಾಪ ಹರಿಂ ಗಿರೀಶಃ ।
ತಯೋರಭೂದ್ ಯುದ್ಧಮಥೈನಮಚ್ಯುತೋ
ವಿಜೃಂಭಯಾಮಾಸ ವಿಜೃಂಭಣಾಸ್ತ್ರತಃ ॥೨೬೩॥

ಜ್ವರ ಮುಂತಾದವರೆಲ್ಲರೂ ಪಲಾಯನ ಮಾಡಿದಾಗ ಶಿವ ಸ್ವತಃ ಶ್ರೀಕೃಷ್ಣನ ಮುಂದೆ

ಬಂದ. ಅವರೊಳಗೆ ಯುದ್ಧ ನಡೆಯಿತು. ಶ್ರೀಕೃಷ್ಣ ವಿಜೃಂಭಣಾಸ್ತ್ರದಿಂದ ಶಿವನನ್ನು ಸ್ತಂಭಿಸಿದ.

ಸ್ತಂಭಿಸಿದ ಎಂದರೆ ಕಲ್ಲಿನಂತೆ ಜಡವನ್ನಾಗಿ ಮಾಡಿದ ಎಂದರ್ಥವಲ್ಲ. ಕಲ್ಲು ಕಂಬದಂತೆ ನಿಂತ ಬಾಣ ಹೇಳುತ್ತಲಿ ಇದ್ದಾನೆ ಕೃಷ್ಣನನ್ನು ಹೊಡೆ ಎಂದು. ಶಿವ ಕೈಎತ್ತಲು ಯತ್ನಿಸುತ್ತಾನೆ, ಕೈ ಅವನ ವಶದಲ್ಲಿಲ್ಲ. ಶ್ರೀಕೃಷ್ಣ ಶಂಖನಾದ ಮಾಡಿದ. ಶತ್ರು ಸೈನ್ಯ ನಡುಗಿತು.

ವಿಜೃಂಭಿತೇ ಶಂಕರೇ ನಿಷ್ಪ್ರಯತ್ನೇ
ಸ್ಥಾಣೂಪಮೇ ಸಂಸ್ಥಿತೇ ಕಂಜಜಾತಃ ।
ದೈತ್ಯಾವೇಶಾದ್ ವಾಸುದೇವಾನಭಿಜ್ಞಂ
ಸಂಬೋಧಯಾಮಾಸ ಸದುಕ್ತಿಭಿಃ ಪ್ರಭುಃ ।
ಪ್ರಗೃಹ್ಯ ಶರ್ವಂ ಚ ವಿವೇಶ ವಿಷ್ಣೋಃ
ಸ ತೂದರಂ ದರ್ಶಯಾಮಾಸ ತತ್ರ ॥೨೬೪॥
ಶಿವಸ್ಯರೂಪಂ ಸ್ತಂಭಿತಂ ಬಿಲ್ವನಾಮ್ನಿ
ವನೇ ಗಿರೀಶೇನ ಚ ಯತ್ತಪಃ ಕೃತಂ ।
ಶೈವಂ ಪದಂ ಪ್ರಾಪ್ತುಮೇವಾಚ್ಯುತಾಚ್ಚ
ತಚ್ಚಾವದತ್ ಕಂಜಜಃ ಶಂಕರಸ್ಯ ॥೨೬೫॥

ಶಿವ ಸ್ತಂಭಿತನಾಗಿ ಏನೂ ಪ್ರಯತ್ನ ಮಾಡಲಾರದೆ ಮೋಟುಮರದಂತೆ ನಿಂತಾಗ ಅಸುರಾವೇಶದಿಂದ ಕೃಷ್ಣನನ್ನು ತಿಳಿಯದಿದ್ದ ಆತನನ್ನು ಬ್ರಹ್ಮದೇವ ಹಿಡಿದುಕೊಂಡು ಕೃಷ್ಣನ ಉದರವನ್ನು ಹೊಕ್ಕ. ಅಲ್ಲಿ ಒಳ್ಳೆಯ ಮಾತಿನಿಂದ ಶಿವನಿಗೆ ಬೋಧಿಸಿದ. ಬಿಲ್ವವೆಂಬ ವನದಲ್ಲಿ ಶಿವ ಹರಿಯಿಂದ ಶಿವಪದವಿಯನ್ನು ಹೊಂದಲು ಮಾಡಿದ್ದ ತಪಸ್ಸನ್ನೂ ಶಿವನಿಗೆ ಹೇಳಿದ. ತಪಸ್ಸು ಮಾಡುತ್ತಿದ್ದ ಆ ಶಿವರೂಪ ಸ್ತಂಭಿತವಾಗಿರುವುದನ್ನೂ ತೋರಿಸಿದ.

[1]ರಣರಂಗದಲ್ಲಿ ಶ್ರೀಕೃಷ್ಣನ ಜೃಂಭಣಾಸ್ತ್ರದಿಂದ ಸ್ತಂಭಿತನಾದ ಶಿವನನ್ನು ಬ್ರಹ್ಮ ಕೃಷ್ಣನ ಉದರದೊಳಗೊಯ್ದು ಅಲ್ಲಿ 'ಬಿಲ್ವವನದಲ್ಲಿ ನೀನು

1. ಬಿಲ್ವನಾಮ್ನಿ ವನೇಽಚ್ಯುತಾತ್ ಶೈವಂ ಪದಂ ಪ್ರಾಪ್ತುಂ ಗಿರಿಶೇನ ಯತ್ತಪಃ ಕೃತಂ ತಚ್ಚ ಕಂಜಜಃ ಶಂಕರಸ್ಯಾವದತ್ ತದೇವ ರೂಪಂ ಸ್ತಂಭಿತಂ ದರ್ಶಯಾಮಾಸ ಚ। ಶೈವಂ ಪದಂ ಪ್ರಾಪ್ತುಂ ತಪಃ ಕುರ್ವದ್ರೂಪಂ ಏಕೇನ ರೂಪೇಣ ಶೈವಪದಪ್ರಾಪ್ತಾವಪ್ಯಪರಾಂಶೇನ ತಸ್ಯಾಂತರಾಯ ಪರಿಹಾರಾರ್ಥಂ ತಪಃ ಕುರ್ವದೇವಾದ್ಯಾಪಿ ತಿಷ್ಠತಿ। ತದೇವ ರೂಪಂ ಬಾಣ ಸಹಾಯಂ ಕುರ್ವತಾ ತ್ವಯಾ ಕೃತಾಪರಾಧೇನ ಸ್ತಂಭಿತಮಾಸೀತ್। ಅತಃ ಪರಂ ತ್ವಂ ವಿಷ್ಣುಭಕ್ತಿಂ ಕರೋಷಿ ಚೇತ್ ತದ್ರೂಪಂ ಸ್ತಂಭನಂ ವಿಹಾಯ ತಪ ಏವ ಕರಿಷ್ಯತಿ। ತದಾ ತವ ಪದಸ್ಯಾಂತರಾಯೋ ನ ಭವತಿ। ನೋ ಚೇತ್ತಪೋಭಂಗಾತ್ ಪದಭಂಗೋಽಪಿ ಭವಿಷ್ಯತೀತಿ ಬಲವದ್ ಬಾಧಕಮುಕ್ತ್ವಾ ಬೋಧಯಾ ಮಾಸೇತಿ ಭಾವಃ। -ವಾದಿರಾಜೀಯ

ಹಿಂದೆ ಶಿವಪದವಿಯನ್ನು ಪಡೆಯುವುದಕ್ಕಾಗಿ ಉಗ್ರತಪ ಎಂಬ ಮೂಲರೂಪದಿಂದ ತಪಸ್ಸು ಮಾಡಿದ್ದೆ. ನಿನಗೆ ಶಿವಪದವಿಯನ್ನಿತ್ತ ಆ ಭಗವಂತನಿಗೇ ಈಗ ನೀನು ವಿರೋಧ ಮಾಡಿರುವಿ. ಅದರಿಂದ ತಪಸ್ಸು ಮಾಡಿದ ಆ ರೂಪವೂ ಸ್ತಂಭಿತವಾಗಿದೆ. ಅದರಿಂದೇನು ಅನಿಷ್ಟ ಎಂದರೆ ಈಗ ಸಿಕ್ಕಿರುವ ಶಿವಪದವಿ ಮುಂದೆ ಕೈತಪ್ಪಿ ಹೋಗದಂತೆ ಇಂದಿಗೂ ತಪಸ್ಸು ಮಾಡುತ್ತಿದೆ ಆರೂಪ. ಅದು ಸ್ತಂಭಿತವಾದ್ದರಿಂದ ತಪಸ್ಸು ನಿಂತಿದೆ. ತಪಸ್ಸು ನಿಂತರೆ ಪದವಿ ಉಳಿಯುವುದು ಕಷ್ಟ, ನೀನೀಗ ಕೃಷ್ಣನಲ್ಲಿ ಮಾಡಿದ ವಿರೋಧದ ಫಲ ಇದು' ಎಂದು ಉಪದೇಶಿಸಿದ.

ಭಾಗವತ ವಿಷ್ಣುಪುರಾಣಗಳಲ್ಲಿ ಈ ವಿವರ ದೊರಕುವುದಿಲ್ಲ. ಹರಿವಂಶದಲ್ಲಿ-

ಪ್ರವಿಶ್ಯ ಯೋಗಂ ಯೋಗಾತ್ಮಾ...
ನಿವೃತ್ತೋ ಹ್ಯಭವತ್ತದಾ ।(ವಿಷ್ಣು 125. 19)

ಶಿವ ಯೋಗ ಸಮಾಧಿಯನ್ನು ಪ್ರವೇಶಿಸಿ ಹೊರಬಂದನೆಂದಿದೆ. ~~ಯೋಗಸಮಾಧಿಯನ್ನಲ್ಲ, ಯೋಗೋ ಯೋಗವಿದಾಂ ನೇತಾ~~ ಎಂಬಂತೆ ಯೋಗನಾಮಕನಾದ ಕೃಷ್ಣನನ್ನು ಎಂದು ಗ್ರಹಿಸಬಹುದು.

ವ್ಯಪೇತ ಮೋಹೋಽಥ ವೃಷಧ್ವಜೋ ಹರಿಂ
ತುಷ್ಟಾವ ಬಾಣೋಽಭಿಸಸಾರ ಕೇಶವಂ ।
ತಸ್ಯಾಚ್ಯುತೋ ಬಾಹುಸಹಸ್ರಮಚ್ಛಿನತ್
ಪುನಶ್ಚಾರಿಂ ಜಗೃಹೇ ತಚ್ಛಿರೋಽರ್ಥೀ ॥೨೬೬॥

ಬಳಿಕ ಶಿವನ ಅಜ್ಞಾನ ತೊಲಗಿತು. ಅವನು ಕೃಷ್ಣನನ್ನು ತಿಳಿದು ಸ್ತೋತ್ರಮಾಡಿದ. ಆಗ ಬಾಣಾಸುರ ಕೃಷ್ಣನ ಮೇಲೆ ಆಕ್ರಮಿಸಲು ಬಂದ. ಕೃಷ್ಣ ಅವನ ಸಾವಿರ ತೋಳುಗಳನ್ನು ಕತ್ತರಿಸಿದ. ಪುನಃ ಆ ಶತ್ರುವನ್ನು ಶ್ರೀಕೃಷ್ಣ ಶಿರಶ್ಛೇದಕ್ಕಾಗಿ ಹಿಡಿದುಕೊಂಡ.

ತದಾ ಶಿವೇನ ಪ್ರಣತೋ ಬಾಣರಕ್ಷಣಕಾಮ್ಯಯಾ ।
ಕೃತ್ವಾ ಸ್ವಭಕ್ತಂ ಬಾಣಂ ತಂ ರರಕ್ಷ ದ್ವಿಭುಜೀಕೃತಂ ॥೨೬೭॥

ಆಗ ಬಾಣನ ರಕ್ಷಣೆಯ ಬಯಕೆಯಿಂದ ಶಿವ ಕೃಷ್ಣನನ್ನು ನಮಿಸಿದ. ದ್ವಿಭುಜನಾಗಿ ಮಾಡಲ್ಪಟ್ಟ ಬಾಣನನ್ನು ಶ್ರೀಕೃಷ್ಣ ತನ್ನ ಭಕ್ತನನ್ನಾಗಿ ಮಾಡಿ ಕಾಪಾಡಿದ.

ಬಾಣ ಹಿಂದೆ ಸಾವಿರ ಕೈಗಳಿಂದ ವಾದ್ಯಗಳನ್ನು ನುಡಿಸಿ ತಾಂಡವವಾಡುವ ಶಿವನನ್ನು ಮೆಚ್ಚಿಸಿದ್ದ. ಅದರಿಂದ ಶಿವ ಅವನನ್ನು ಮಗನನ್ನಾಗಿ ಮಾಡಿಕೊಂಡಿದ್ದ. "ನಾನು ಬಾಣನಿಗೆ ಅಭಯನೀಡಿದ್ದೇನೆ ನನ್ನ

ಮಾತನ್ನು ಉಳಿಸು' ಎಂದು ಶಿವ ಶ್ರೀಕೃಷ್ಣನಲ್ಲಿ ಬೇಡಿದಾಗ ಶ್ರೀಕೃಷ್ಣ. ಬಾಣನಲ್ಲಿದ್ದ ಅಸುರಾವೇಶವನ್ನು ಕಳೆದು ಭಕ್ತನನ್ನಾಗಿ ಮಾಡಿ ಕೊಲ್ಲದೆ ಬಿಟ್ಟ, ಕಾಪಾಡಿದ. ನಿರ್ಣಯದಲ್ಲಿ ಹರಿವಂಶಾನುಸಾರ ಬಾಣ ದ್ವಿಭುಜನಾದ. ಆದರೆ ಭಾಗವತದಲ್ಲಿ ಆತ ಚತುರ್ಭುಜ. ಅದಕ್ಕೆ ಸದ್ಯಧರ್ಮೀಯದಲ್ಲಿ ಎರಡು ಪಾರ್ಶ್ವಗಳಲ್ಲಿಯೂ ಪ್ರತ್ಯೇಕವಾಗಿ ದ್ವಿಭುಜ, ಒಟ್ಟು ಚತುರ್ಭುಜನೆ ಎಂದು ಸಮಾಧಾನ ಹೇಳಿದ್ದಾರೆ.[1]

ಷಣ್ಮುಖ ಪರಾಜಯ

ಮೋಚಯಿತ್ವಾನಿರುದ್ಧಂ ಚ ಯಯೌ ಬಾಣೇನ ಪೂಜಿತಃ ।
ಏವಮಗ್ನೀನಂಗಿರಸಂ ಜ್ವರಂ ಸ್ಕಂದಮುಮಾಪತಿಂ ।
ಬಾಣಂ ಚಾಯತ್ನತೋ ಜಿತ್ವಾ ಪ್ರಾಯಾದ್ ದ್ವಾರವತೀಂ ಪ್ರಭುಃ ॥೨೬೮॥

ಶ್ರೀಕೃಷ್ಣ ಅನಿರುದ್ಧನನ್ನು ಬಿಡಿಸಿ ಬಾಣನಿಂದ ಸತ್ಕೃತನಾಗಿ ಹೊರಟ. ಹೀಗೆ ಅಗ್ನಿಗಳನ್ನೂ ಅಂಗಿರಸನನ್ನೂ ಜ್ವರ ಸ್ಕಂದ ಶಿವರನ್ನೂ ಬಾಣನನ್ನೂ ಅಪ್ರಯತ್ನದಿದಲೆ ಗೆದ್ದು ದ್ವಾರಕೆಗೆ ಹೊರಟು ಹೋದ.

ಶ್ರೀಕೃಷ್ಣ ಸ್ಕಂದನನ್ನೂ ಇದೇ ಸಮಯದಲ್ಲಿ ಗೆದ್ದನೆಂದು ಇಲ್ಲಿ ಹೇಳಿದೆ. ಇದರ ವಿವರ ಹರಿವಂಶದಲ್ಲಿ ಕಾಣುತ್ತದೆ. ಸ್ಕಂದನ ಬ್ರಹ್ಮಾಸ್ತ್ರವನ್ನು ಚಕ್ರದಿಂದಲೂ ಶಕ್ತ್ಯಾಯುಧವನ್ನು ಹುಂಕಾರದಿಂದಲೂ ಹಿಮ್ಮೆಟ್ಟಿಸಿ ಸ್ಕಂದನನ್ನು ಕೊಲ್ಲುವೆನೆಂದು ಕೃಷ್ಣ ಚಕ್ರವನ್ನು ಹಿಡಿದೊಡನೆ ಅವನ ತಾಯಿ ಕೋಟವಿ ಬರುತ್ತಾಳೆ. ಸ್ಕಂದನ ರಕ್ಷಣೆಗಾಗಿ ಕೃಷ್ಣನಿಗಿದಿರಾಗಿ ನಗ್ನಳಾಗಿ ನಿಲ್ಲುತ್ತಾಳೆ. ವಿಷ್ಣುಪುರಾಣ ಭಾಗವತಗಳಲ್ಲಿ ಇವಳ ಹೆಸರು 'ಕೋಟರಾ' ಇವಳು ಬಾಣನ ರಕ್ಷಣೆಗಾಗಿ ಕೃಷ್ಣನ ಮುಂದೆ ನಿಲ್ಲುತ್ತಾಳೆ. ಎರಡನ್ನೂ ಸ್ವೀಕರಿಸಬಹುದು. ಕೊಟವಿ ಅಥವಾ ಕೋಟರೆ[2] ಬಾಣನಿಗೆ ತಾಯಿಯಂತೆ. ಸ್ಕಂದನಿಗೆ ತಾಯಿ. ಶಿವನಿಂದ ಆಜ್ಞಪ್ತಳಾದ ಪಾರ್ವತಿ ಯೋಗಬಲದಿಂದ ಲೋಕಕ್ಕೆ ಅದೃಶ್ಯಳಾಗಿ ಶ್ರೀಕೃಷ್ಣನಿಗೆ ಮಾತ್ರ ಕಾಣುವಂತೆ ನಗ್ನಳಾಗಿ ನಿಂತಳು, ಎನ್ನುತ್ತಾರೆ ಸತ್ಯಧರ್ಮರು (ಭಾಗ 10.78.20) ಹೀಗೆ ಕೋಟವಿ ನಿಂತಾಗ

---

1. ನನು ಭಾರತೇ ಹರಿವಂಶೇ ಚ ದ್ವಿಬಾಹುನಾ ಚ ಬಾಣೇನೇತಿ, ಕೃತ್ವಾ ದ್ವಿಬಾಹುಂ ತಂ ಬಾಣಂ ಛಿನ್ನಶಾಖಮಿವ ದ್ರುಮಮಿತಿ ಚ ದ್ವಿಬಾಹುತ್ವೋಕ್ತೇಃ ಕಥಮತ್ರ ಚತುರ್ಭುಜಮಿತ್ಯುಕ್ತಿರಿತಿಚೇತ್ ಅತ್ರ ಬಾಹುಶಬ್ದ ಏಕಬಾಹುಪರಸ್ತತ್ರ ತು ಭಾಗದ್ವಿಕಬಾಹು ಪರ ಇತಿ ದ್ವಿತ್ವಚತುಷ್ಟ್ವವಿರೋಧ ಸಂಭಾವತ್।
-ಭಾಗ.ಸತ್ಯಧರ್ಮೀಯ (10.78.45)

2. ತತೋ ಯೋಗಂ ಸಮಾಸ್ಥಾಯ ಹ್ಯದೃಶ್ಯಾ ಹಿಮವತ್ಸುತಾ। ಕೃಷ್ಣಸ್ಯೈಕಸ್ಯ ತದ್ರೂಪಂ ದರ್ಶಯಂತೀ ವ್ಯವಸ್ಥಿತಾ। ಅಂತರ್ಧಾನಮುಪಾಗಮ್ಯ ತ್ಯಕ್ತ್ವಾ ಸಾ ವಾಸಸೀ ಪುನಃ। ಪ್ರಮುಖೇ ವಾಸುದೇವಸ್ಯ ದಿಗ್ವಾಸಾಃ ಕೋಟರಾ ಸ್ಥಿತಾ ।
-ಭಾಗ. ಸತ್ಯಧರ್ಮೀಯಾ (10.78.20)

ಶ್ರೀಕೃಷ್ಣ ಸ್ತ್ರೀಯ ನಗ್ನ ಶರೀರವನ್ನು ನೋಡಬಾರದೆಂದು ಕಣ್ಣು ಮುಚ್ಚಿ 'ನಿನ್ನ ಮಗನೊಂದಿಗೆ ಆಚೆ ತೊಲಗು' ಎಂದ. ಹೀಗೆ ಸ್ಕಂದನನ್ನೂ ಶ್ರೀಕೃಷ್ಣ ಗೆದ್ದ.

ಯೇನಾಯತ್ನೇನ ವಿಜಿತಃ ಸರ್ವಲೋಕಹರೋ ಹರಃ ।
ಕಿಂ ಜ್ವರಾದಿಜಯೋ ವಿಷ್ಣೋಸ್ತಸ್ಯಾನಂತಸ್ಯ ಕಥ್ಯತೇ ॥೨೬೯॥

ಸರ್ವಲೋಕ ಸಂಹಾರಕನಾದ ಶಿವನನ್ನೆ ಶ್ರೀಕೃಷ್ಣ ಅಯತ್ನವಾಗಿ ಪರಾಭವಗೊಳಿಸಿದನೆಂದ ಮೇಲೆ ಅನಂತಶಕ್ತಿಉಳ್ಳ ಆ ವಿಷ್ಣುವಿಗೆ ಜ್ವರಾದಿ ವಿಜಯವನ್ನು ಏನು ಹೇಳಬೇಕು?

ಈದೃಶಾನಂತಸಂಖ್ಯಾನಾಂ ಶಿವಾನಾಂ ಬ್ರಹ್ಮಣಾಮಪಿ ।
ರಮಾಯಾ ಅಪಿ ಯದ್ವೀಕ್ಷಾಂ ವಿನಾ ನ ಚಲಿತುಂ ಬಲಂ ॥೨೭೦॥

ಇಂಥ ಅನಂತ ಶಿವ ಬ್ರಹ್ಮರಿಗೂ ರಮಾದೇವಿಗೂ ಹರಿಕಟಾಕ್ಷವಿಲ್ಲದೆ ಚಲಿಸುವುದಕ್ಕೂ ಶಕ್ತಿ ಇಲ್ಲ.

ಹಿಂದೆ ಅನಂತ ಕಲ್ಪಗಳಲ್ಲಿ ಆಗಿಹೋದ ಮುಂದೆ ಅನಂತ ಕಲ್ಪಗಳಲ್ಲಿ ಬರಲಿರುವ ಅನಂತ ಶಿವಬ್ರಹ್ಮರಿಗೂ ರಮಾದೇವಿಗೂ ಹರಿಯ ಕಟಾಕ್ಷ ಬಲವಿಲ್ಲದೆ ಚಲಿಸಲೂ ಶಕ್ತಿ ಇಲ್ಲ.

ನ ಚ ಜ್ಞಾನಾದಯೋ ಭಾವಾ ನ ಚಾಸ್ತಿತ್ವಮಪಿ ಕ್ವಚಿತ್ ।
ಅನಂತಶಕ್ತೇಃ ಕೃಷ್ಣಸ್ಯ ನ ಚಿತ್ರಂ ಶೂಲಿನೋ ಜಯಃ ॥೨೭೧॥

ಶ್ರೀಹರಿಯ ಕಟಾಕ್ಷವಿಲ್ಲದೆ ರಮಾ ಬ್ರಹ್ಮಾದಿಗಳಿಗೆ ಜ್ಞಾನಾದಿ ಗುಣಗಳಿಲ್ಲ. ಅಸ್ತಿತ್ವವೂ ಇಲ್ಲ. ಇಂಥ ಅನಂತಶಕ್ತಿಶಾಲಿ ಕೃಷ್ಣ ಶಿವನನ್ನು ಗೆದ್ದುದು ಏನೂ ಆಶ್ಚರ್ಯವಲ್ಲ.

ಚಿತ್ರಲೇಖಾಸಮೇತೋಷಾನ್ವಿತಪೌತ್ರಸಮನ್ವಿತಃ ।
ಸರಾಮಃ ಸಸುತೋ ವೀಂದ್ರಮಾರುಹ್ಯ ದ್ವಾರಕಾಂ ಗತಃ ॥೨೭೨॥
ರೇಮೇ ತತ್ರ ಚಿರಂ ಕೃಷ್ಣೋ ನಿತ್ಯಾನಂದೋ ನಿಜೇಚ್ಛಯಾ ॥೨೭೩॥

ಶ್ರೀಕೃಷ್ಣ ಚಿತ್ರಲೇಖಾ ಸಮೇತಳಾದ ಉಷೆಯೊಂದಿಗೆ ಮೊಮ್ಮಗನಾದ ಅನಿರುದ್ಧ, ಮಗನಾದ ಪ್ರದ್ಯುಮ್ನ ಮತ್ತು ಬಲರಾಮ ಇವರೆಲ್ಲರೊಡನೆ ಗರುಡಾರೂಢನಾಗಿ ದ್ವಾರಕೆಗೆ ಬಂದ. ಅಲ್ಲಿ ನಿತ್ಯಾನಂದನಾದ ಶ್ರೀಕೃಷ್ಣ ಸ್ವೇಚ್ಛಾನುಸಾರವಾಗಿ ಬಹುಕಾಲ ವಿಹರಿಸಿದ.

ಏವಂ ವಿಧಾನ್ಯಗಣಿತಾನಿ ಯದೂತ್ತಮಸ್ಯ
ಕರ್ಮಾಣ್ಯಗಣ್ಯಮಹಿಮಸ್ಯ ಮಹೋತ್ಸವಸ್ಯ ।
ನಿತ್ಯಂ ರಮಾ ಕಮಲಜನ್ಮ ಗಿರೀಶ ಶಕ್ರ-
ಸೂರ್ಯಾದಿಭಿಃ ಪರಿಣುತಾನಿ ವಿಮುಕ್ತಿದಾನಿ ॥೨೭೪॥

ಅಸಂಖ್ಯ ಮಹಿಮ ಪೂರ್ಣಾನಂದನಾದ ಶ್ರೀಕೃಷ್ಣನ ಈ ರೀತಿಯಾದ ಅಸಂಖ್ಯಕರ್ಮ ಗಳನ್ನು ರಮಾ ಬ್ರಹ್ಮರುದ್ರ ಇಂದ್ರ ಸೂರ್ಯ ಮುಂತಾದವರು ಸದಾ ಸ್ತುತಿಸುತ್ತಾರೆ ಮುಕ್ತಿ ಹೊಂದುತ್ತಾರೆ.

'ಈ ರೀತಿಯಾದ' ಎಂದರೆ ಅಸುರರಿಗೆ ಮಿಥ್ಯಾಜ್ಞಾನವನ್ನೂ ದೇವತೆಗಳಿಗೆ ತತ್ವಜ್ಞಾನವನ್ನೂ ನೀಡುವಂಥ ವಿಲಕ್ಷಣವಾದ ಕರ್ಮಗಳು.

ಪಾಂಡವರ ತೀರ್ಥಯಾತ್ರೆ

ಏವಂ ವಸತ್ಯಮಿತಪೌರುಷವೀರ್ಯಸಾರೇ
ನಾರಾಯಣೇ ಸ್ವಪುರಿ ಶಕ್ರಧನಂಜಯೋಕ್ತಃ।
ಸಂಪ್ರಾಪ್ಯ ಲೋಮಶಮುನಿಃ ಸಕಲಾನಿ ತೀರ್ಥಾ-
ನ್ಯಾಪ್ತುಂ ಸ ಪಾಂಡುತನಯೇಷು ಸಹಾಯ ಆಸೀತ್ ॥೨೭೫॥

ಹೀಗೆ ಅಮಿತ ಬಲ ವೀರ್ಯಗಳಿಂದ ತುಂಬಿದ ಶ್ರೀಕೃಷ್ಣ ತನ್ನ ನಗರದಲ್ಲಿ ವಾಸವಾಗಿದ್ದಾಗ ಇಂದ್ರಾರ್ಜುನರಿಂದ ಪ್ರಾರ್ಥಿತರಾದ ಲೋಮಶ ಮುನಿ ಪಾಂಡವರಿಗೆ ಎಲ್ಲ ತೀರ್ಥಗಳ ಯಾತ್ರೆ ಮಾಡುವಲ್ಲಿ ಸಹಾಯಕರಾದರು.

ಅರ್ಜುನನ ಬಗ್ಗೆ ಚಿಂತೆಬೇಡ ಅವನು ಸ್ವರ್ಗದಲ್ಲಿ ಅಸ್ತ್ರವಿದ್ಯೆಯನ್ನೂ ಜೊತೆಗೆ ಸಂಗೀತ ನೃತ್ಯ ಮುಂತಾದ ಕಲೆಗಳನ್ನೂ ಅಭ್ಯಾಸ ಮಾಡುತ್ತಿದ್ದಾನೆ. ನೀವು ಮನಃಶಾಂತಿಗಾಗಿ ತೀರ್ಥಯಾತ್ರೆ ಮಾಡಿರೆಂದು ಲೋಮಶಮುನಿ ಪಾಂಡವರಿಗೆ ಹೇಳಿ ಅವರಿಗೆ ತೀರ್ಥಯಾತ್ರೆಯ ಕಾಲದಲ್ಲಿ ರಾಕ್ಷಸ ಪಿಶಾಚಾದಿಗಳ ಬಾಧೆ ಬಾರದಂತೆ ಮಂತ್ರಬಲದಿಂದ ರಕ್ಷಣೆ ನೀಡಿದರು.

ಪೃಥ್ವೀಂ ಪ್ರದಕ್ಷಿಣತ ಏತ್ಯ ಸಮಸ್ತತೀರ್ಥ-
ಸ್ನಾನಂ ಯಥಾಕ್ರಮತ ಏವ ವಿಧಾಯ ಪಾರ್ಥಾಃ।
ಸಂಪೂಜ್ಯ ತೇಷು ನಿಖಿಲೇಷು ಹರಿಂ ಸುಭಕ್ತ್ಯಾ
ಕೃಷ್ಣೇ ಸಮರ್ಪಯಿತುಮಾಪುರಥ ಪ್ರಭಾಸಂ।
ಸಂಭಾವನಾಯ ಸಕಲೈರ್ಯದುಭಿಃ ಸಮೇತ
ಸ್ತೇಷಾಂ ಚ ರಾಮಸಹಿತೋ ಹರಿರಾಜಗಾಮ। ॥೨೭೬॥
ಪಾರ್ಥೈಃ ಸಂಪೂಜಿತಸ್ತತ್ರ ಕೃಷ್ಣೋ ಯದುಗಣೈಃ ಸಹ ॥೨೭೭॥
ಪಾರ್ಥಾನ್ಸಂಪೂಜಯಾಮಾಸುರ್ವೃಷ್ಣಯಶ್ಚಾಜ್ಞಯಾ ಹರೇಃ ॥೨೭೮॥

ಪಾಂಡವರು ಭೂಪ್ರದಕ್ಷಿಣೆ ಮಾಡುತ್ತ ಕ್ರಮವಾಗಿ ಸಕಲ ತೀರ್ಥಸ್ನಾನವನ್ನು ಮಾಡಿ ಅಲ್ಲಿ ಎಲ್ಲ ಕಡೆ ಹರಿಯನ್ನೆ ಒಳ್ಳೆಯ ಭಕ್ತಿಯಿಂದ ಆರಾಧಿಸಿ ಕೃಷ್ಣನಲ್ಲಿ ಸಮರ್ಪಿಸುವುದಕ್ಕಾಗಿ ಪ್ರಭಾಸ ಕ್ಷೇತ್ರಕ್ಕೆ ಬಂದರು. ಅವರನ್ನು ಸತ್ಕರಿಸಲು ಶ್ರೀಕೃಷ್ಣನೆ ಎಲ್ಲ ಯಾದವರೊಂದಿಗೆ ಮತ್ತು

ಬಲರಾಮನೊಂದಿಗೆ ಬಂದ. ಅಲ್ಲಿ ಯಾದವರೊಂದಿಗೆ ಕೃಷ್ಣನನ್ನು ಪಾಂಡವರು ಸತ್ಕರಿಸಿದರು. ಯಾದವರೂ ಕೃಷ್ಣನಾಜ್ಞೆಯಂತೆ ಪಾಂಡವರನ್ನು ಸತ್ಕರಿಸಿದರು.

ತತ್ರ ಭೀಮಂ ತಪೋವೇಷಂ ದೃಷ್ಟ್ವಾತಿಸ್ನೇಹಕಾರಣಾತ್ ।
ದುರ್ಯೋಧನಂ ನಿಂದಯತಿ ರಾಮೇ ಸಾತ್ಯಕಿರಬ್ರವೀತ್ ॥೨೭೯॥
ಸರ್ವೇ ವಯಂ ನಿಹತ್ಯಾದ್ಯ ಸಕರ್ಣಾನ್ ಧೃತರಾಷ್ಟ್ರಜಾನ್ ।
ಅಭಿಮನ್ಯುಂ ಸ್ಥಾಪಯಾಮೋ ರಾಜ್ಯೇ ಯಾವತ್ತ್ರಯೋದಶಂ ॥೨೮೦॥
ಸಂವತ್ಸರಂ ಸಮಾಪ್ಯೈವ ಪುರಂ ಯಾಸ್ಯಂತಿ ಪಾಂಡವಾಃ ।
ತತೋ ಯುಧಿಷ್ಠಿರೋ ರಾಜಾ ರಾಜ್ಯಂ ಶಾಸತು ಪೂರ್ವವತ್ ॥೨೮೧॥

ಪಾಂಡವರ ಮಧ್ಯದಲ್ಲಿ ಭೀಮನನ್ನು ತಪಸ್ಸಿನ ವೇಷದಲ್ಲಿ ಕಂಡು ಬಲರಾಮ ಅತಿಪ್ರೀತಿಯಿಂದ ದುರ್ಯೋಧನನನ್ನು ನಿಂದಿಸಿದಾಗ ಸಾತ್ಯಕಿ ನುಡಿದ. 'ನಾವೆಲ್ಲರೂ ಈಗಲೆ ಕರ್ಣನ ಸಮೇತ ಕೌರವರನ್ನು ಕೊಂದು ಅಭಿಮನ್ಯುವನ್ನು ರಾಜ್ಯದಲ್ಲಿ ಕುಳ್ಳಿರಿಸುವೆವು. ಹದಿಮೂರು ವರ್ಷಗಳನ್ನು ಕಳೆದು ಪಾಂಡವರು ಹಸ್ತಿನಾವತಿಗೆ ಹಿಂದಿರುಗಿ ಬಂದಾಗ ಧರ್ಮರಾಜನೆ ಹಿಂದಿನಂತೆ ರಾಜ್ಯವಾಳಲಿ.

ಏವಂ ವದತ್ಯೇವ ಶಿನಿಪ್ರವೀರೇ
ಜನಾರ್ದನಃ ಪಾರ್ಥಮುಖಾನ್ಯುದೀಕ್ಷ್ಯ ।
ಉವಾಚ ಶೈನೇಯ ನ ಪಾಂಡುಪುತ್ರಾಃ
ಪರೇಣ ಸಂಸಾಧಿತರಾಜ್ಯಕಾಮಾಃ ॥೨೮೨॥
ಸ್ವಬಾಹುವೀರ್ಯೇಣ ನಿಹತ್ಯ ಶತ್ರೂ-
ನಾಪ್ಸ್ಯಂತಿ ರಾಜ್ಯಂ ತ ಇತೀರಿತೇಽಮುನಾ ।
ತಥೇತಿ ಪಾರ್ಥಾ ಅವದಂಸ್ತತಸ್ತೇ
ಕೃಷ್ಣಂ ಪುರಸ್ಕೃತ್ಯ ಯಯುರ್ದಶಾರ್ಹಾಃ ॥೨೮೩॥

ಸಾತ್ಯಕಿ ಹೀಗೆ ಹೇಳಿದಾಗ ಶ್ರೀಕೃಷ್ಣ ಪಾಂಡವರ ಮುಖಗಳನ್ನು ನೋಡಿ ಹೇಳಿದ- 'ಸಾತ್ಯಕಿ, ಪಾಂಡವರು ಇತರರು ಸಂಪಾದಿಸಿ ಕೊಡುವ ರಾಜ್ಯವನ್ನು ಬಯಸುವುದಿಲ್ಲ. ತಮ್ಮ ಬಾಹುಬಲದಿಂದ ಶತ್ರುಗಳನ್ನು ಸಂಹರಿಸಿಯೆ ರಾಜ್ಯವನ್ನು ಸಂಪಾದಿಸುತ್ತಾರೆ.' 'ಕೃಷ್ಣ ಹೀಗೆ ಹೇಳಿದಾಗ ಪಾಂಡವರು 'ಹೌದು ಹಾಗೇ ಮಾಡುತ್ತೇವೆ' ಎಂದರು. ಬಳಿಕ ಎಲ್ಲ ಯಾದವರೂ ಕೃಷ್ಣನನ್ನು ಮುಂದೆ ಮಾಡಿಕೊಂಡು ಹೋದರು.

ಕ್ರಮೇಣ ಪಾರ್ಥಾ ಅಪಿ ಶೈಶಿರಂ ಗಿರಿಂ
ಸಮಾಸದಂಸ್ತತ್ರ ಕೃಷ್ಣಾಂ ಸುದುರ್ಗೇ ।
ವಿಷಜ್ಜಂತೀಂ ವೀಕ್ಷ್ಯ ತೈಃ ಸಂಸ್ಮೃತೋಽಥ
ಹೈಡಿಂಬ ಆಯಾತ್ ಸಹಿತೋ ನಿಶಾಚರೈಃ ॥೨೮೪॥

ಪಾಂಡವರು ಕ್ರಮವಾಗಿ ಹಿಮಾಲಯ ಪರ್ವತವನ್ನು ಸೇರಿದರು. ಅಲ್ಲಿ ಬಹಳ ದುರ್ಗಮವಾದ ದಾರಿಯಲ್ಲಿ ದ್ರೌಪದಿ ಅಶಕ್ತಿಯಿಂದ ಬಳಲಿದಂತೆ ತೋರಿಕೊಂಡಳು. ಅದನ್ನು ಕಂಡು ಪಾಂಡವರು ಘಟೋತ್ಕಚನನ್ನು ಸ್ಮರಿಸಿದರು. ಒಡನೆ ಅವನು ರಾಕ್ಷಸರ ಸಮೇತ ಬಂದ.

ಉವಾಹ ಕೃಷ್ಣಾಂ ಸ ತು ತಸ್ಯ ಭೃತ್ಯಾ
ಊಹುಃ ಪಾರ್ಥಾಂಸ್ತೇ ಬದರ್ಯಾಶ್ರಮಂ ಚ।
ಪ್ರಾಪ್ಯಾತ್ರ ನಾರಾಯಣಪೂಜಯಾ ಕೃತ-
ಸ್ವಕೀಯಕಾರ್ಯಾ ಯಯುರುತ್ತರಾಂ ದಿಶಂ ॥೨೮೫॥
ಅತೀತ್ಯ ಶರ್ವಶ್ವಶುರಂ ಗಿರಿಂ ತೇ
ಸುವರ್ಣಕೂಟಂ ನಿಷಧಂ ಗಿರಿಂ ಚ।
ಮೇರೋಃ ಪ್ರಾಚ್ಯಾಂ ಗಂಧಮಾದೇ ಗಿರೌ ಚ
ಪ್ರಾಪುರ್ಬದರ್ಯಾಶ್ರಮಮುತ್ತಮಂ ಭುವಿ ॥೨೮೬॥

ಘಟೋತ್ಕಚ ದ್ರೌಪದಿಯನ್ನು ಹೊತ್ತುಕೊಂಡ. ಅವನ ಭೃತ್ಯರು ಪಾಂಡವರನ್ನು ಹೊತ್ತರು. ಅವರು ಬದರಿಕಾಶ್ರಮವನ್ನು ಸೇರಿ ನಾರಾಯಣನ ಆರಾಧನಾ ರೂಪವಾಗಿ ತಮಗೆ ವಿಹಿತವಾದ ಪಿತೃಶ್ರಾದ್ಧಾದಿ ಕರ್ಮಗಳನ್ನು ಮಾಡಿ ಹಿಮಾಲಯವನ್ನೂ ದಾಟಿ ಇನ್ನೂ ಉತ್ತರದಿಕ್ಕಿಗೆ ಹೋದರು. ಸುವರ್ಣಕೂಟ ನಿಷಧ ಪರ್ವತಗಳನ್ನೂ ದಾಟಿ ಮೇರುವಿಗೆ ಪೂರ್ವದಲ್ಲಿ ಗಂಧಮಾದನ ಪರ್ವತದಲ್ಲಿ ಇರುವ, ಭೂಲೋಕದಲ್ಲಿಯೆ ಉತ್ತಮವಾದ ಇನ್ನೊಂದು ಬದರಿಕಾಶ್ರಮವನ್ನು ಸೇರಿದರು.

ತಸ್ಮಿನ್ ಮುನೀಂದ್ರೈರಭಿಪೂಜ್ಯಮಾನಾ
ನಾರಾಯಣಂ ಪೂಜಯಂತಃ ಸದೈವ।
ಚಕ್ರುಸ್ತಪೋ ಜ್ಞಾನಸಮಾಧಿಯುಕ್ತಂ
ಸುತತ್ತ್ವವಿದ್ಯಾಂ ಪ್ರತಿಪಾದಯಂತಃ ॥೨೮೭॥

ಆ ಬದರಿಕಾಶ್ರಮದಲ್ಲಿ ಪಾಂಡವರು ಮುನೀಂದ್ರರಿಂದ ಸತ್ಕೃತರಾಗಿ ನರ ಸೋದರನಾದ ನಾರಾಯಣನನ್ನು ಪೂಜಿಸುತ್ತ ಸದಾ ಅಪರೋಕ್ಷಜ್ಞಾನಧ್ಯಾನಗಳಿಂದ ಯುಕ್ತವಾದ ತಪಸ್ಸನ್ನಾಚರಿಸಿದರು. ಶಿಷ್ಯರಿಗೆ ಬ್ರಹ್ಮಸೂತ್ರಾದಿ ಉತ್ತಮ ತತ್ವಜ್ಞಾನವನ್ನೂ ಉಪದೇಶಿಸಿದರು.

ಸೌಂಗಧಿಕಾಹರಣ

ಏವಂ ಬದರ್ಯಾಂ ವಿಹರತ್ಸು ತೇಷು
ಕ್ವಚಿದ್ರಹಃ ಕೃಷ್ಣಯಾ ವಾಯುಸೂನೌ।

ಸ್ಥಿತೇ ಗರುತ್ಮಾನುರಗಂ ಜಹಾರ
ಮಹಾಹ್ರದಾದ್ ವಾಸುದೇವಾಸನಾಗ್ರ್ಯಃ ॥೨೮೮॥

ಹೀಗೆ ಪಾಂಡವರು ಬದರಿಕಾಶ್ರಮದಲ್ಲಿ ವಿಹರಿಸುತ್ತಿದ್ದಾಗ, ಒಂದುಕಡೆ ಏಕಾಂತ ಸ್ಥಳದಲ್ಲಿ ದ್ರೌಪದಿಯೊಡನೆ ಭೀಮನಿದ್ದಾಗ ಶ್ರೀಹರಿಯ ಉತ್ತಮ ಆಸನವೆನಿಸಿದ ಗರುಡ ಒಂದು ದೊಡ್ಡ ಸರೋವರದಿಂದ ಹಾವನ್ನು ಒಯ್ದ.

ತತ್ಪಕ್ಷವಾತೇನ ವಿಚಾಲಿತೇ ತು
ತಸ್ಮಿನ್ ಗಿರೌ ಕಮಲಂ ಹೈಮಮಗ್ರ್ಯಂ।
ಪಪಾತ ಕೃಷ್ಣಾಭೀಮಯೋಃ ಸನ್ನಿಧಾನ
ಉದ್ಯದ್ಭಾನೋರ್ಮಂಡಲಾಭಂ ಸುಗಂಧಂ ॥೨೮೯॥

ಗರುಡನ ರೆಕ್ಕೆಗಳ ಗಾಳಿಯಿಂದ ಆ ಗಂಧಮಾದನ ಪರ್ವತ ನಡುಗುತ್ತಿದ್ದಾಗ ಬಂಗಾರದ ಶ್ರೇಷ್ಠವಾದ ಒಂದು ಕಮಲ ದ್ರೌಪದೀ ಭೀಮರ ಬಳಿಯಲ್ಲಿ ಬಿದ್ದಿತು. ಅದು ಉದಿಸುವ ಸೂರ್ಯಮಂಡಲದಂತೆ ಹೊಳೆಯುತ್ತಿತ್ತು. ಸುಗಂಧಭರಿತವಾಗಿತ್ತು.

ದೃಷ್ಟ್ವಾತಿಗಂಧಂ ವರಹೇಮಕಂಜಂ
ಕುತೂಹಲಾದ್ ದ್ರೌಪದೀ ಭೀಮಸೇನಂ।
ಬಹೂನ್ಯಯಾಚತ್ ತಾದೃಶಾನ್ಯಾನುಭಾವ-
ಮಸ್ಯಾವಿಷಹ್ಯಂ ಜಾನತೀ ದೇವದೈತ್ಯೈಃ।
ತಯಾರ್ಥಿತಃ ಸಗದಸ್ತುಂಗಮೇನಂ
ಗಿರಿಂ ವೇಗಾದಾರುಹದ್ ವಾಯುಸೂನುಃ ॥೨೯೦॥

ಅತಿ ಸುಗಂಧಯುಕ್ತವಾದ ಉತ್ತಮವಾದ ಆ ಬಂಗಾರದ ಕಮಲವನ್ನು ಕಂಡು ದ್ರೌಪದಿ ಕುತೂಹಲದಿಂದ ಅಂಥ ಅನೇಕ ಹೂಗಳನ್ನು ನನಗೆ ತಾ ಎಂದು ಬೇಡಿದಳು. ದೇವತೆಗಳಿಗಾಗಲಿ ದೈತ್ಯರಿಗಾಗಲಿ ಸಹಿಸಲಸಾಧ್ಯವಾದ ಬಲ ಭೀಮನದೆಂದು ಅವಳು ಬಲ್ಲವಳಾಗಿದ್ದಳು. ಅವಳು ಬೇಡಿದಳೆಂದು ಭೀಮ ಗದಾಪಾಣಿಯಾಗಿ ವೇಗದಿಂದ ಆ ಉನ್ನತ ಪರ್ವತವನ್ನು ಏರಿದ.

ಪತಿಯ ಶಕ್ತಿಸಾಮರ್ಥ್ಯಗಳನ್ನು ಚೆನ್ನಾಗಿ ತಿಳಿದು ಅದಕ್ಕೆ ಅನುಗುಣವಾಗಿಯೆ ದ್ರೌಪದಿ ಬೇಡಿದ್ದಳು. ಆಗ ಭೀಮ ವೇಗದಿಂದ ಪರ್ವತವೇರಿದ. ಅವನಿಗೆ ಆಯಾಸವಾಗಿ ಶಕ್ತಿ ಕುಂದುವುದಾಗಲಿ ಭಯ ಸಂಭ್ರಮಗಳಾಗಲಿ ಇಲ್ಲವೇ ಇಲ್ಲ. (ವನ 148.16)

ಪ್ರಶಸ್ಯಮಾನಃ ಸುರಸಿದ್ಧಸಂಘೈಃ
ಮೃದ್ನನ್ ದೈತ್ಯಾನ್ ಸಿಂಹಶಾರ್ದೂಲರೂಪಾನ್।

ಆಸೇದಿವಾಂಸ್ತತ್ರ ಹನೂಮದಾಖ್ಯಂ
ನಿಜಂ ರೂಪಂ ಪ್ರೋದ್ಯದಾದಿತ್ಯಭಾಸಂ ॥೨೯೧॥

ಭೀಮ ಸಿಂಹ ಹುಲಿಗಳ ರೂಪದಿಂದ ಇದಿರಾದ ದೈತ್ಯರನ್ನು ಮರ್ದಿಸುತ್ತ, ದೇವತೆಗಳಿಂದಲೂ ಸಿದ್ಧರಿಂದಲೂ ಸ್ತುತಿಸಿಕೊಳ್ಳುತ್ತ ತನ್ನದೇ ಆದ, ಉದಿಸುವ ಸೂರ್ಯನಂತೆ ಹೊಳೆವ ಹನುಮಂತನೆಂಬ ಹೆಸರಿನ ಇನ್ನೊಂದು ರೂಪವನ್ನು ಸೇರಿದ.

ಗಜೇನಾನ್ಯಾನ್ ಗಜಾನ್ ಶ್ರೀಮಾನ್ ಸಿಂಹಂ ಸಿಂಹೇನ ವಾ ವಿಭುಃ।
ತಲ ಪ್ರಹಾರೈರನ್ಯಾಂಶ್ಚ ವ್ಯಹನತ್ ಪಾಂಡವೋ ಬಲೀ॥
(ವನ 148.52)

ಆನೆಗಳನ್ನೆತ್ತಿ ಆನೆಗಳ ಮೇಲೆ, ಸಿಂಹಗಳನ್ನೆತ್ತಿ ಸಿಂಹಗಳ ಮೇಲೆ ಪ್ರಹರಿಸಿದ. ಬೇರೆ ಮೃಗಗಳನ್ನು ಕೈಯಿಂದಲೆ ಸಂಹರಿಸಿದ ಬಲ ಭೀಮ. ಏಕೆ? ಮುಂದೆ ಹನುಮಂತನೂ ನೀನೇಕೆ ನಿರಪರಾಧಿಗಳಾದ ಮೃಗಗಳನ್ನು ಹಿಂಸಿಸುವಿ ಎಂದು ಕೇಳುತ್ತಾನೆ. (ವನ 148-95) ಇದಕ್ಕೆ ಅದೇ ವಾಯುವಿನ ಮೂರನೇ ರೂಪರಾದ ಶ್ರೀಮದಾಚಾರ್ಯರು ಉತ್ತರ ಕೊಡುತ್ತಾರೆ 'ಅವು ಸಾಮಾನ್ಯ ಮೃಗಗಳಲ್ಲ ಮೃಗರೂಪದ ದೈತ್ಯರು' ಎಂದು.

ಹನುಮ ಭೀಮರ ಲೀಲೆ

ಜಾನನ್ನಪ್ಯೇನಂ ಸ್ವೀಯರೂಪಂ ಸ ಭೀಮ-
ಶ್ಚಿಕ್ರೀಡ ಏತೇನ ಯಥಾ ಪರೇಣ।
ಧರ್ಮೋ ದೇವಾನಾಂ ಪರಮೋ ಮಾನುಷತ್ವೇ
ಸ್ವೀಯೇ ರೂಪೇಽಪ್ಯನ್ಯವದೇವ ವೃತ್ತಿಃ ॥೨೯೨॥
ಅನಾದಾನಂ ದಿವ್ಯಶಕ್ತೇರ್ವಿಶೇಷಾ-
ನ್ನರಸ್ವಭಾವೇ ಸರ್ವದಾ ಚೈವ ವೃತ್ತಿಃ।
ತಸ್ಮಾದ್ಭೀಮೋ ಹನುಮಾಂಶ್ಚೈಕ ಏವ
ಜ್ಯಾಯಃಕನೀಯೋವೃತ್ತಿಮತ್ಸ್ವಾಭಿಪೇದೇ ॥೨೯೩॥

ಭೀಮ ಹನುಮಂತನನ್ನು ತನ್ನ ರೂಪವೆ ಎಂದು ತಿಳಿದಿದ್ದರೂ ಬೇರೆಯವನೆಂಬಂತೆ ಅವನೊಡನೆ ಆಟವಾಡಿದ. ಮನುಷ್ಯರಾಗಿ ಅವತರಿಸಿದಾಗ ತಮ್ಮ ರೂಪದೊಡನೆಯೂ ಪರಕೀಯವೆಂಬಂತೆ ವರ್ತಿಸುವುದು, ವಿಶೇಷ ಬಲದಿಂದ ಮೂಲರೂಪದ ದಿವ್ಯಶಕ್ತಿಯನ್ನು ಅವತಾರರೂಪದಲ್ಲಿ ಸ್ವೀಕರಿಸದಿರುವುದು, ಮನುಷ್ಯ ಸ್ವಭಾವಾನುಸಾರವಾಗಿಯೆ ಸದಾ ವರ್ತಿಸುವುದು ದೇವತೆಗಳಿಗೆ ಮುಖ್ಯ ಧರ್ಮವಾಗಿರುತ್ತದೆ. ಅದರಿಂದ ಹನುಮಭೀಮ ರೊಬ್ಬರೇ ಆದರೂ ಹಿರಿಯ ಕಿರಿಯರಂತೆ ವರ್ತನೆ ತೋರಿದರು.

ಹನುಮಂತನಿಗೆ ಭೀಮ ಯಾರು ಎಂದು ತಿಳಿದಿದೆ. ಅವನಿಗೆ ಉಪಕಾರ ಮಾಡಲೆಂದೆ ದಾರಿಯಲ್ಲಿ ಕಾದು ಕುಳಿತಿದ್ದ. ಇದು ದೇವತೆಗಳು ಸ್ವರ್ಗಕ್ಕೆ ಹೋಗಿ ಬರುವ, ಮನುಷ್ಯರಿಗೆ ಅಗಮ್ಯವಾದ ಮಾರ್ಗ. ಇಲ್ಲಿ ದೇವತೆಗಳಿಗೆ ಅಪಚಾರ ಮಾಡಿದರೆ ಶಾಪಾದಿ ಅನರ್ಥ ಉಂಟಾದೀತೆಂದು ಎಚ್ಚರಿಸುವುದಕ್ಕಾಗಿ ಪ್ರೀತಿಯ ತಮ್ಮನಿಗೆ ಉಪದೇಶ ಮಾಡಲು ಅಣ್ಣ ಹನುಮ ಕುಳಿತಿದ್ದ. ಭೀಮನಿಗೆ ಹನುಮಂತನೆಂಬ ಒಬ್ಬ ಕಪಿ ಅಣ್ಣನೆಂದು ಮಾತ್ರ ಗೊತ್ತು. ಈತನೆ ಆ ಕಪಿ ಎಂದು ತಿಳಿದಿರಲಿಲ್ಲ. (ವನ 149-2) ಆದರೆ ಭೀಮನ ಈ ಅಜ್ಞಾನ ಕೇವಲ ನಟನೆ, ತಾನು ಮನುಷ್ಯನಾಗಿ ಅವತರಿಸಿದ್ದ ಪ್ರಯುಕ್ತ. ಅಣ್ಣ ತಮ್ಮ ಎಂಬ ಭೇದವೂ ಅಷ್ಟೇ.

ಸರ್ವೇ ಗುಣಾ ಆವೃತಾ ಮಾನುಷತ್ವೇ
ಯುಗಾನುಸಾರಾನ್ಮೂಲರೂಪಾನುಸಾರಾತ್ ।
ಕ್ರಮಾತ್ಸುರಾಣಾಂ ಭಾಗತೋ ವ್ಯಕ್ತರೂಪಾ
ಆದಾನತೋ ವ್ಯಕ್ತಿಮಾಯಾಂತ್ಯುರೂಣಾಂ ॥೨೯॥

ದೇವತೆಗಳು ಮನುಷ್ಯರಾಗಿ ಹುಟ್ಟಿದಾಗ ಅವರ ಎಲ್ಲ ಗುಣಗಳೂ ಯುಗಾನುಸಾರವಾಗಿ ಆವೃತವಾಗಿರುತ್ತವೆ. ಮೂಲರೂಪಾನುಸಾರ ಕ್ರಮದಿಂದ ಭಾಗಶಃ ವ್ಯಕ್ತವಾಗುತ್ತದೆ. ಉತ್ತಮ ದೇವತೆಗಳಿಗೆ ಮೂಲರೂಪದ ಗುಣಗಳು ಆದಾನ ಮಾಡುವುದರಿಂದಲೂ ವ್ಯಕ್ತವಾಗುತ್ತವೆ.

ಯಸ್ಯತ್ರೀಣ್ಯುದಿತಾನಿ ವೇದವಚನೇ ರೂಪಾಣಿ ದಿವ್ಯಾನ್ಯಲಂ
ಬಟ್ ತದ್ದರ್ಶತ ಮಿತ್ಥಮೇವ ನಿಹಿತಂ ದೇವಸ್ಯ ಭರ್ಗೋ ಮಹತ್

'ವಾಯುದೇವನ ಮೂಲರೂಪದ ಎಲ್ಲ ಗುಣಗಳೂ ಅವತಾರಗಳಲ್ಲಿ ವ್ಯಕ್ತವಾಗುತ್ತವೆ' ಎಂದು ಶ್ರೀಮದಾಚಾರ್ಯರೆ ಹೇಳಿದ್ದಾರೆ. ಇತರ ದೇವತೆಗಳಲ್ಲಿ ಹೀಗೆ ಇಲ್ಲ. ತಾರತಮ್ಯಾನುಗುಣವಾಗಿ ಉತ್ತಮರಲ್ಲಿ ಮೂಲರೂಪದ ಹೆಚ್ಚಿನ ಗುಣಗಳು ಅವತಾರದಲ್ಲಿ ವ್ಯಕ್ತವಾಗುತ್ತವೆ. ಕೆಳ ಕೆಳಗಿನವರಲ್ಲಿ ಅವ್ಯಕ್ತವಾಗಿರುವ ಗುಣಗಳೆ ಹೆಚ್ಚು. ಅಲ್ಪಗುಣಗಳೆ ವ್ಯಕ್ತವಾಗುತ್ತವೆ. ಇದು ಮೂಲರೂಪಾನುಸಾರವಾದ ವ್ಯವಸ್ಥೆ. ಯುಗಾನುಸಾರಿ ವ್ಯವಸ್ಥೆಯಲ್ಲಿ ಕೃತಯುಗದಲ್ಲಿ ಅಲ್ಪಾಂಶ ಮಾತ್ರ ಆವೃತವಾಗಿರುತ್ತದೆ. ತ್ರೇತಾದಿಯುಗಗಳಲ್ಲಿ ಆವೃತವಾಗುವ ಅಂಶ ಹೆಚ್ಚು ಹೆಚ್ಚಾಗುತ್ತ ಹೋಗುತ್ತದೆ. ವಾಯುದೇವ ಯುಗಾನುಸಾರವೂ ತನ್ನ ಗುಣಗಳನ್ನು ಆವೃತವಾಗಿಸಿಕೊಳ್ಳುವುದಿಲ್ಲ. ತ್ರೇತಾಯುಗದ ಹನುಮಂತನಿಗಿಂತ ದ್ವಾಪರದ ಭೀಮ ಯಾವ ಗುಣದಲ್ಲಿಯೂ ಕಡಿಮೆಯವನಲ್ಲ.

ಕಲಿಯುಗದ ಶ್ರೀಮದಾಚಾರ್ಯರೂ ಹಾಗೇ ಯಾವ ಗುಣದಲ್ಲಿಯೂ ಕಡಿಮೆಯಲ್ಲ. ತತ್ವಪ್ರದೀಪದಲ್ಲಿ ತ್ರಿವಿಕ್ರಮ ಪಂಡಿತಾಚಾರ್ಯರು ಶ್ರೀಮದಾಚಾರ್ಯರಲ್ಲಿ ಮೂಲರೂಪದ ಶಕ್ತಿಜ್ಞಾನ ಸೌಂದರ್ಯಾದಿ ಸಕಲ ಗುಣಗಳೂ ಕಾಣುತ್ತಿವೆ ಎಂದಿದ್ದಾರೆ.[1]

ನೈವಾವ್ಯಕ್ತಿಃ ಕಾಚಿದಸ್ತೀಹ ವಿಷ್ಣೋಃ
ಪ್ರಾದುರ್ಭಾವೇಷ್ವತಿಸುಪ್ತಶಕ್ತೇಃ ।
ಇಚ್ಛಾವ್ಯಕ್ತಿಃ ಪ್ರಾಯಶೋ ಮಾರುತಸ್ಯ
ತದನ್ಯೇಷಾಂ ವ್ಯಕ್ತತಾ ಕಾರಣೇನ ॥೨೯॥

ಅವತಾರಗಳಲ್ಲಿಯೂ ಬಲು ಚೆನ್ನಾಗಿ ವ್ಯಕ್ತವೇ ಆದ ಗುಣಗಳುಳ್ಳವ ಶ್ರೀಹರಿ. ಅದರಿಂದ ಅವನ ಗುಣಗಳಿಗೆ ಸ್ವಲ್ಪವೂ ಅವ್ಯಕ್ತತೆ ಎಂಬುದಿಲ್ಲ. ವಾಯುದೇವನಿಗೆ ಅವತಾರಗಳಲ್ಲಿ ಗುಣಗಳು ಪ್ರಾಯ ಇಚ್ಛೆಯಿಂದ ವ್ಯಕ್ತವಾಗುತ್ತವೆ. ಬೇರೆ ದೇವತೆಗಳಿಗೆ ಅವತಾರಗಳಲ್ಲಿ ಗುಣಗಳು ವಿಶೇಷ ಕಾರಣವಿದ್ದಾಗ ವ್ಯಕ್ತವಾಗುತ್ತವೆ.

ಶ್ರೀಹರಿಗೆ ಪರಶುರಾಮಾದಿ ಅವತಾರಗಳಲ್ಲಿಯೂ ಗುಣಗಳು ಪೂರ್ಣವ್ಯಕ್ತವಾಗಿರುತ್ತವೆ. ಎಂದೂ ಅವ್ಯಕ್ತವಾಗಿರುವುದೇ ಇಲ್ಲ. ರಾಮನ ಮುಂದೆ ಪರಶುರಾಮ ಸೋತಿದ್ದು ನಟನೆ. ವಾಯುವಿಗೆ ಪ್ರಾಯಃ ಇಚ್ಛೆ ಇದ್ದಾಗ ವ್ಯಕ್ತವಾಗುತ್ತದೆ. ನಹುಷ ಪ್ರಶ್ನಕಾಲದಲ್ಲಿ ಭೀಮನ ಮಾನುಷಬಲಕ್ಕೆ ಸ್ವಲ್ಪ ತಡೆ ಇದ್ದರೂ ದೈವಬಲವನ್ನು ವ್ಯಕ್ತಮಾಡುವ ಇಚ್ಛೆಇಲ್ಲದ್ದರಿಂದ ಅದು ವ್ಯಕ್ತವಾಗಲಿಲ್ಲ. ಆದರೆ ಇಚ್ಛೆ ಇಲ್ಲದಿದ್ದರೂ , ಹೆಚ್ಚಿನಂಶ ಸ್ವಾಭಾವಿಕವಾಗಿಯೇ ವ್ಯಕ್ತವಿದ್ದು ಕೇವಲ ಸ್ವಲ್ಪಾಂಶ ಅವ್ಯಕ್ತವಿರುತ್ತವೆ. ಅದೂ

---

1. ಸುರಾಣಾಂ ಮಾನುಷತ್ವೇ ಸರ್ವೇ ಗುಣಾ ಆವೃತಾಃ ಭಾಗತೋ ವ್ಯಕ್ತರೂಪಾಶ್ಚ। ಯುಗಾನುಸಾರಾತ್ ಕಲಿಯುಗೇ ಯಾವಂತೋ ಗುಣಾ ಆವೃತಾಃ ತಾವತಾಂ ದ್ವಾಪರಯುಗೇ ನಾವರಣಂ। ದ್ವಾಪರಯುಗೇ ಯಾವಂತೋ ಗುಣಾ ಆವೃತಾಃ ತಾವತಾಂ ತ್ರೇತಾಯುಗೇ ನಾವರಣಂ। ತ್ರೇತಾಯುಗೇ ಯಾವತಾಂ ಆವರಣಂ ಕೃತಯುಗೇ ನ ತಾವತಾಮಾವರಣಮಿತ್ಯೇಕೋ ಯುಗಾನುಸಾರಃ। ಏವಂ ಕೃತಯುಗೇ ಯಾವಾನ್ ಭಾಗೋ ವ್ಯಕ್ತಃ ತ್ರೇತಾಯುಗೇ ನ ತಾವತೋ ಭಾಗಸ್ಯ ವ್ಯಕ್ತಿರಿತ್ಯಾದಿ ಕ್ರಮೇಣಾಪರೋ ಯುಗಾನುಸಾರಃ। ಮೂಲರೂಪಮುತ್ತಮಂ ಚೇತ್ ಅವತಾರೇ ಆವೃತತ್ವಮಪ್ಯಲ್ಪಂ। ಅವರತ್ವೇ ತತೋಽಪ್ಯಧಿಕಮಾವರಣಮಿತ್ಯಾದಿನಾಽಽವರಣಕ್ರಮಃ ಮೂಲರೂಪಾನುಸಾರ ಇತಿ ವಿವೇಕಃ। ಉರೂಣಾಂ ದೇವಾನಾಂ ವಾಯುಶೇಷೇಂದ್ರಪ್ರಭೃತೀನಾಂ ಆದಾನತಃ ಕಿಂಚಿತ್‌ಕಿಂಚಿತ್ ಕಾರ್ಯಾರ್ಥಮಾದಾನೇ ಕೃತೇ ಸತಿ ವ್ಯಕ್ತಿಮಾಯಾಂತೀತಿ ಯೋಜನಾ। ಅತ ಏವ ರಾವಣಾಕೃಷ್ಟ ಲಕ್ಷ್ಮಣಸ್ಯ ಮೂಲರೂಪ ಸ್ಮರಣೇನ ತತಃ ಶಕ್ತ್ಯಾದಾನೇ ಸತಿ ಪುನರ್ಲಕ್ಷ್ಮಣಕರ್ಷಣೇಽಶಕ್ತಃ ಸನ್ ರಾವಣಃ ಪಪಾತೇತಿ ಪೌರಾಣಿಕೀ ಕಥೇತಿ ಜ್ಞೇಯಂ। -ವಾದಿರಾಜೀಯಂ

ತತ್ವವಿದ್ಯಾರ್ಯವರ್ಯಾಣಾಂ ಮೂಲರೂಪ ಇವ ಸರ್ವರೂಪೇಷ್ವಪಿ ಸೌಬಲ್ಯ ಸಾರ್ವಜ್ಞ ಸೌಲಕ್ಷಣ್ಯಾದಿ ಗುಣಾಃ ಪರಿದೃಶ್ಯಮಾನಾ ಯುಜ್ಯಂತೇ। -ತತ್ವಪ್ರದೀಪ

ಇಚ್ಛೆ ಇದ್ದಾಗ ವ್ಯಕ್ತವಾಗುತ್ತದೆ. ಕೆಲವೊಮ್ಮೆ ಮೂಲರೂಪದ ಗುಣಗಳನ್ನು ಆದಾನ ಮಾಡುವುದರಿಂದಲೂ ವ್ಯಕ್ತವಾಗುತ್ತವೆ. ಉದಾ. ಜರಾಸಂಧ ವಧೆಯ ಕಾಲದಲ್ಲಿ ಭೀಮ ಮೂಲರೂಪದ ಗುಣವನ್ನು ಆದಾನ ಮಾಡಿಕೊಳ್ಳುತ್ತಾನೆ, ಅಂದರೆ ಸ್ವೀಕರಿಸುತ್ತಾನೆ. ಅಂತೂ ಸ್ವಾಭಾವಿಕವಾಗಿ ವ್ಯಕ್ತವಾಗದಿದ್ದ ಅಲ್ಪಗುಣಗಳೂ ಯಾವುದಾದರೊಂದು ಬಗೆಯಿಂದ ವ್ಯಕ್ತವಾಗುವುದರಿಂದ 'ಇತ್ಥಮೇವ ನಿಹಿತಂ' ಎನ್ನಲಾಗಿದೆ. ಬೇರೆ ದೇವತೆಗಳಿಗೆ ತಮ್ಮಲ್ಲಿರುವ ಹರಿವಾಯುಗಳ ಆವೇಶದ ಅನುಸಂಧಾನ ಮೂಲರೂಪಸ್ಮರಣರೂಪ ವಿಶೇಷಕಾರಣಗಳಿಂದಲೆ ಮೂಲರೂಪದ ಸ್ವಾಭಾವಿಕ ಅವ್ಯಕ್ತ ಗುಣಗಳು ಅವತಾರಗಳಲ್ಲಿ ವ್ಯಕ್ತವಾಗುತ್ತವೆ. ಉದಾ. ಬಲರಾಮನಿಗೆ ಪ್ರಲಂಬಾಸುರ ವಧೆಯಲ್ಲಿ ಶುಕ್ಲ ಕೇಶಾವೇಶದ ಅನುಸಂಧಾನದಿಂದ ಹೆಚ್ಚಿನ ಬಲ ವ್ಯಕ್ತವಾಯಿತು. ಲಂಕೆಯಲ್ಲಿ ಲಕ್ಷ್ಮಣನಿಗೆ ಮೂಲರೂಪ ಸ್ಮರಣೆಯಿಂದ ಶರೀರದಲ್ಲಿ ಭಾರ ವ್ಯಕ್ತವಾಯಿತು.

ತಸ್ಮಾದ್ ಭೀಮೋ ಧರ್ಮವೃದ್ಧ್ಯರ್ಥಮೇವ
ಸ್ವೀಯೇ ರೂಪೇಽಪ್ಯನ್ಯವದ್ ವೃತ್ತಿಮೇವ।
ಪ್ರದರ್ಶಯಾಮಾಸ ತದಾಽಸುರಾಣಾಂ
ಮೋಹಾಯೈವಾಶಕ್ತವಚ್ಛಕ್ತರೂಪಃ ॥೨೯॥

ಅದರಿಂದ ಭೀಮ ಪುಣ್ಯವೃದ್ಧಿಗಾಗಿಯೆ ತನ್ನ ರೂಪದೊಡನೆ ಪರಕೀಯವೆನ್ನುವಂತೆ ವರ್ತನೆಯನ್ನು ಪ್ರದರ್ಶಿಸಿದ. ಅಸುರರಿಗೆ ಮೋಹ ಉಂಟುಮಾಡುವುದಕ್ಕಾಗಿಯೂ ಶಕ್ತಿಸ್ವರೂಪನಾದ ಆತ ಅಶಕ್ತನಂತೆ ವರ್ತನೆಯನ್ನು ಪ್ರದರ್ಶಿಸಿದ.

'ಇದು ಮನುಷ್ಯರು ಹೋಗುವ ಮಾರ್ಗವಲ್ಲ. ಹಿಂದೇ ಹೋಗು. ಮುಂದೆ ಹೋಗಿಯೆ ತೀರುವೆನೆನ್ನುವಿಯಾದರೆ ನಾನು ವೃದ್ಧ. ಎದ್ದೇಳಲಾರೆ. ನನ್ನನ್ನು ದಾಟಿ ಹೋಗು' ಎಂದ ಹನುಮಂತ. 'ನಿನ್ನೊಳಗೆ ಭಗವಂತನಿದ್ದಾನೆ. ದಾಟಲಾರೆ. ಬಾಲವನ್ನು ಸರಿಸು' ಎಂದ ಭೀಮ. 'ಬಾಲವನ್ನು ಸರಿಸಲೂ ನಾನು ಅಶಕ್ತ, ನೀನೇ ಸರಿಸು' ಭೀಮ ಸರಿಸಲು ಯತ್ನಿಸಿ ಸೋತ. ಲಜ್ಜೆಯಿಂದ ಮುಖ ತಗ್ಗಿಸಿ ಕೈಮುಗಿದು ತನ್ನ ಅಶಕ್ತಿಯನ್ನು ಒಪ್ಪಿಕೊಂಡು ಕ್ಷಮೆ ಬೇಡಿದ. ಇವೆಲ್ಲ ಕೇವಲ ಪ್ರದರ್ಶನಗಳು. ಇದರಿಂದ ಅವತಾರದಲ್ಲಿ ಮೂಲರೂಪದ ಗುಣಗಳನ್ನು ವ್ಯಕ್ತಮಾಡಬಾರದೆನ್ನುವ ಹರಿಯಾಜ್ಞೆಯನ್ನು ಪಾಲಿಸಿದ ಪುಣ್ಯ ಅಸುರರಿಗೆ ಮೋಹ ಉಂಟುಮಾಡುವ ಉದ್ದೇಶವೂ ನೆರವೇರಿತು.

ತದ್ರೂಪವೃದ್ಧಿಂ ಭೀಮಸೇನೋಽಥ ದೃಷ್ಟ್ವಾ
ಶ್ರುತ್ವಾ ಹನೂಮನ್ಮುಖಿತಃ ಕಥಾಶ್ಚ।

ರಾಮಸ್ಯ ತಚ್ಚಾತುರಾತ್ಮ್ಯಂ ಚ ದಿವ್ಯಂ
ಚಾತುರ್ಯುಗಂ ಧರ್ಮಮಪ್ಯಗ್ರ್ಯಮೇವ ॥೨೯೭॥
ಧ್ವಜಾದ್ ಬೀಭತ್ಸೋರ್ಗರ್ಜನೇನೈವ ಶತ್ರು
ಪರಾಭವೇ ತೇನ ದತ್ತೇಽರ್ಜುನಸ್ಯ ।
ಯಯೌ ಪ್ರಣಮ್ಯೈನಮಾಶ್ವೇವ ಭೀಮಃ
ಸೌಗಂಧಿಕಂ ವನಮಪ್ಯಗ್ರ್ಯರೂಪಂ ॥೨೯೮॥

ಹನುಮಂತನ ಆಕಾರ ಬೆಳೆದುದನ್ನು ಭೀಮಸೇನ ನೋಡಿ ಹನುಮಂತನ ಮುಖದಿಂದ ರಾಮನ ಕಥೆಗಳನ್ನೂ ರಾಮನ ಚಾತುರ್ಯವನ್ನೂ ನಾಲ್ಕು ಯುಗಗಳ ಉತ್ತಮ ಧರ್ಮವನ್ನೂ ಕೇಳಿ, ಅರ್ಜುನನ ಧ್ವಜದಲ್ಲಿ ಕುಳಿತು ಗರ್ಜನೆಯಿಂದಲೆ ಅವನ ಶತ್ರುಗಳ ಪರಾಭವ ಉಂಟು ಮಾಡುವ ವರವನ್ನು ಹನುಮಂತ ಕೊಟ್ಟ ಬಳಿಕ ಅವನನ್ನು ನಮಿಸಿ ಬೇಗನೆ ಸುಂದರಾಕಾರದ ಸೌಂಗಧಿಕವನಕ್ಕೆ ನಡೆದ.

ಭೀಮ ಬಹುವಿನಯದಿಂದ ನೀನಾರೆಂದು ಕೇಳಿದಾಗ ಹನುಮಂತ ತಾನು ರಾಮಾಯಣ ಕಾಲದವನೆಂದು ಪರಿಚಯ ಹೇಳಿಕೊಳ್ಳುತ್ತ ತಾನು ರಾಮಕಾರ್ಯಮಾಡಿದ ಬಗ್ಗೆ ರಾಮಾಯಣ ಕಥೆಗಳನ್ನು ಹೇಳಿದ. 'ಚಾತುರಾತ್ಮ್ಯ' ಎಂದರೆ ಶ್ರೀಹರಿ ವಾಸುದೇವಾದಿ ಚತುರ್ಮೂರ್ತಿ, ರಾಮ ಲಕ್ಷ್ಮಣ ಭರತ ಶತ್ರುಘ್ನ ರೂಪಗಳಿಂದ ಅವತರಿಸಿದ್ದನ್ನೂ ಹೇಳಿದ. ಕೃತ ತ್ರೇತಾದ್ವಾಪರ ಕಲಿಯುಗ ನಿಯಾಮಕವಾದ ಶುಕ್ಲರಕ್ತಪೀತ ಕೃಷ್ಣ ಎಂಬ ಹರಿಯ ನಾಲ್ಕು ರೂಪಗಳನ್ನೂ ಹೇಳಿದ. (ವನ 151.18-35) ಒಂದೇ ಬಾಣದಿಂದ ಸಪ್ತತಾಲ ಭೇದನ ಮಾಡಿದ ರಾಮನ ಚಾತುರ್ಯವನ್ನೂ ಹೇಳಿದ. ನೀನು ಸಾಗರೋಲ್ಲಂಘನಗೈದ ಆ ಮಹಾರೂಪವನ್ನು ತೋರು ಎಂದು ಭೀಮ ಕೇಳಿದಾಗ ಅದು ತ್ರೇತಾಯುಗದ ರೂಪ. ದ್ವಾಪರದವನಾದ ನೀನು ನೋಡಲಾರೆ ಎನ್ನುತ್ತ ನಾಲ್ಕು ಯುಗಗಳ ಧರ್ಮ ಜೀವನರೀತಿಗಳನ್ನೂ ಹೇಳಿ ತನ್ನ ಆಕಾರವನ್ನು ಹಿಗ್ಗಿಸಿ ಮುಗಿಲೆತ್ತರಕ್ಕೆ ಬೆಳೆದುನಿಂತ. ಭೀಮ ಹೆದರಿ ಕಣ್ಣು ಮುಚ್ಚಿದ. ಬಳಿಕ ಹನುಮಂತ ತನ್ನ ಗಾತ್ರ ಇಳಿಸಿ, ನೀನು ಸೌಗಂಧಿಕವನಕ್ಕೆ ಹೋಗು. ಆದರೆ ಅದು ಕುಬೇರನದು. ದೇವತೆಗಳನ್ನು ಭಕ್ತಿಯಿಂದ ಕಾಣಬೇಕು' ಎಂದು ಹೇಳಿ ನಾನೀಗಲೆ ಕೌರವರನ್ನು ಕೊಲ್ಲಲೆ ಎಂದು ಕೇಳುತ್ತಾನೆ. ಬೇಡ ಎಂದ ಭೀಮ. ಅರ್ಜುನನ ಧ್ವಜದಲ್ಲಿ ಕುಳಿತು ಗರ್ಜನೆ ಮಾಡು. ಜೊತೆಗೆ ನಾನೂ ಸಿಂಹನಾದ ಮಾಡುವೆ. ಅದರಿಂದ ಶತ್ರುನಿಗ್ರಹವಾಗಲಿ ಸಾಕು ಎಂದ. 'ನಿನ್ನಿಚ್ಛೆಯಂತೆ ಶ್ರೀರಾಮನೆ ತನ್ನ ವೈರಿಯಾಗಿದ್ದ ವಾಲಿಗೆ ಅರ್ಜುನಾವತಾರದಲ್ಲಿ ಸಾರಥ್ಯ ಮಾಡುವನೆಂದ ಮೇಲೆ ನಾನೂ ಅವನಿಗೆ ಪ್ರೋತ್ಸಾಹ ನೀಡುವುದು ನ್ಯಾಯವೆ ಎನ್ನುತ್ತ

'ತಥಾಸ್ತು' ಎಂದು ಹೇಳಿ ಅದೃಶ್ಯನಾದ ಹನುಮಂತ.

ಕ್ರೋಧವಶ ಸಂಹಾರ

ನರಾಗಮ್ಯಾಂ ನಲಿನೀಮೇತ್ಯ ತತ್ರ
ದೃಷ್ಟ್ವಾ ಪದ್ಮಾನ್ಯದ್ಭುತಾಕಾರವಂತಿ ।
ಹೈಮಾನಿ ದಿವ್ಯಾನ್ಯತಿಗಂಧವಂತಿ
ಸಮಾಸದದ್ವಾರ್ಯಮಾಣೋ ನರಾಶೈಃ ॥೨೯॥

ಭೀಮಸೇನ ಮಾನವರಿಗೆ ಅಗಮ್ಯವಾದ ಕಮಲವನಕ್ಕೆ ಹೋಗಿ ಅದರಲ್ಲಿ ಅದ್ಭುತರೂಪದ ದಿವ್ಯ ಸುಗಂಧಭರಿತ ಬಂಗಾರದ ಕಮಲಗಳನ್ನು ಕಂಡು ರಾಕ್ಷಸರು ತಡೆಯುತ್ತಿದ್ದಂತೆಯೆ ಪ್ರವೇಶಿಸಿದ.

ಹನುಮಂತ ಹೇಳಿದ ಮಾರ್ಗದಿಂದ ಮುಂದೆ ನಡೆದು ಭೀಮ ಗಂಧಮಾದನ ಪರ್ವತಕ್ಕೆ ಮಾಲೆಯಂತೆ ಶೋಭಿಸುವ ಒಂದು ನದಿಯನ್ನು ಕಂಡ. ಆ ನದಿಯಲ್ಲಿ ಒಂದೆಡೆ ಬಂಗಾರದ ಕಮಲಗಳ ಮಡುವಿತ್ತು. ಕ್ರೋಧವಶರೆಂಬ ರಾಕ್ಷಸರು ಅದನ್ನು ಕಾಯುತ್ತಿದ್ದರು. 'ಇದು ದೇವಯೋಗ್ಯ. ನೀನು ಮನುಷ್ಯ, ಆಚೆ ತೊಲಗು' ಎಂದರು ರಾಕ್ಷಸರು. 'ಬೇಕಾದರೆ ಕುಬೇರನ ಅನುಮತಿ ಬೇಡಿ ಪಡೆದು ಬಾ' ಎಂದರು. 'ನಾವು ಕ್ಷತ್ರಿಯರು ಇನ್ನೊಬ್ಬರಲ್ಲಿ ಬೇಡುವುದಿಲ್ಲ. ಬಲದಿಂದ ಕಾರ್ಯಸಾಧನೆ ಮಾಡಿಕೊಳ್ಳುವೆವು' ಎನ್ನುತ್ತ 'ಹರಿವ ನದಿ ಇದು ಯಾರೊಬ್ಬನ ಸೊತ್ತೂ ಅಲ್ಲವೆ'ಂದು ನೀರಿಗಿಳಿದ.

ತೇ ಭೀಮಮಾತ್ತಾಯುಧಮುಗ್ರರೂಪಂ
ಮಹಾಬಲಂ ರೂಪನವಾವತಾರಂ ।
ನ್ಯವಾರಯನ್ ಕ್ರೋಧವಶಾಃ ಸಮೇತಾಃ
ಶತಂ ಸಹಸ್ರಾಣ್ಯಯುತಾನಿ ಸಂಖ್ಯೇ ॥೩೦॥

ಆ ಕ್ರೋಧ ವಶ ರಾಕ್ಷಸರು ಎಲ್ಲರೂ ಸೇರಿ ಅನುಪಮ ಅತಿಸುಂದರಾಕಾರದ ಮಹಾ ಬಲನಾದ, ಉಗ್ರರೂಪನಾಗಿ ಆಯುಧ ಹಿಡಿದಿರುವ ಭೀಮನನ್ನು ತಡೆದರು. ಅವರು ಸಂಖ್ಯೆಯಲ್ಲಿ ನೂರು ಕೋಟಿ ಇದ್ದರು.

ವರಾಚ್ಛಿವಸ್ಯೈವ ಪರೈರಜೇಯಾಃ
ಶಸ್ತ್ರಾಸ್ತ್ರವೃಷ್ಟಿಂ ಮುಮುಚುಃ ಸುಭೀಮಾಂ ।
ಭೀಮೇಽಖಿಲಜ್ಞೇ ತಪಸಾಂ ನಿಧಾನೇ
ಬಲೋದಧೌ ಶೈವಶಾಸ್ತ್ರಂ ವದಂತಃ ॥೩೧॥

ಶಿವನ ವರದಿಂದ ಶತ್ರುಗಳಿಗೆ ಅಜೇಯರಾಗಿದ್ದ ಕ್ರೋಧವಶ ರಾಕ್ಷಸರು ಶಿವಶಾಸ್ತ್ರವನ್ನು ಹೇಳುತ್ತ ತಪಸ್ಸಿನ ಖನಿ ಸರ್ವಜ್ಞ ಬಲಸಾಗರನಾದ ಭೀಮನ ಮೇಲೆ ಬಲು ಭಯಂಕರವಾದ ಶಸ್ತ್ರಾಸ್ತ್ರಗಳ ಮಳೆಗರೆದರು.

ತಾನ್ ವೈಷ್ಣವೈರೇವ ಶಾಸ್ತ್ರೈಃ ಸ ಭೀಮೋ
ವಿಜಿತ್ಯ ಪೂರ್ವಂ ವಾಙ್ಮಯೇ ಸಂಗರೇ ತು ।
ಶಸ್ತ್ರಾಸ್ತ್ರವರ್ಷಸ್ಯ ಕುರ್ವನ್ ಪ್ರತೀಪಂ
ಜಘ್ನೇಽಖಿಲಾನ್ ಗದಯಾ ತೇಷು ವೀರಾನ್ ॥೩೦೨॥

ಭೀಮ ಆ ರಾಕ್ಷಸರನ್ನು ಮೊದಲಿಗೆ ವಾಙ್ಮಯ ಯುದ್ಧದಲ್ಲಿ ವೈಷ್ಣವ ಶಾಸ್ತ್ರಗಳಿಂದ ಪರಾಭವಗೊಳಿಸಿ ಅವರ ಶಸ್ತ್ರಾಸ್ತ್ರಗಳ ಮಳೆಯನ್ನು ತಡೆಯುತ್ತ ಅವರಲ್ಲಿ ವೀರರಾದ ಎಲ್ಲರನ್ನೂ ಗದೆಯಿಂದ ಸಂಹರಿಸಿದ.

ವಾತೇನ ಕುಂತ್ಯಾಂ ಬಲವಾನ್ ಸ ಜಾತಃ
ಶೂರಸ್ತಪಸ್ವೀ ದ್ವಿಷತಾಂ ನಿಹಂತಾ ।
ಸತ್ಯೇ ಚ ಧರ್ಮೇ ಚ ರತಃ ಸದೈವ
ಪರಾಕ್ರಮೇ ಶತ್ರುಭಿರಪ್ರಧೃಷ್ಯಃ ॥೩೦೩॥

ವಾಯುದೇವನಿಂದ ಕುಂತಿಯಲ್ಲಿ ಜನಿಸಿದ ಭೀಮ ಬಲಿಷ್ಠ ಶೂರ ತಪಸ್ವಿ ಶತ್ರುನಾಶಕ ಸತ್ಯಧರ್ಮಗಳಲ್ಲಿ ಸದಾ ನಿರತ. ಪರಾಕ್ರಮದಲ್ಲಿ ಶತ್ರುಗಳಿಗೆ ಎಂದೂ ಮಣಿಯದವ.

ಶ್ರೀಮದಾಚಾರ್ಯರು ತಾವು ಹೇಳಿದ ಭೀಮನ ಗುಣಗಳ ವಿಷಯದಲ್ಲಿ ಮಹಾಭಾರತ ಮೂಲಶ್ಲೋಕವನ್ನೆ ಆಧಾರವಾಗಿ ತೋರಿಸುತ್ತಿದ್ದಾರೆ. ಮಹಾಭಾರತ ವನಪರ್ವ (155-20)ದಲ್ಲಿ ಈ ಶ್ಲೋಕವಿದೆ. ಇಲ್ಲಿ 'ಸ ಜಾತಃ' ಎಂದು ಹೃಷೀಕೇಶತೀರ್ಥೀಯಪಾಠ. 'ಪ್ರಜಾತಃ' ಎಂದು ವರದರಾಜೀಯದಲ್ಲಿ ಕಾಣುವ ಪಾಠ. ಭಾರತದಲ್ಲಿ 'ಸುಜಾತಃ' ಎಂದು ಪಾಠವಿದೆ. 'ತಪಸ್ವೀ' ಎಂಬಲ್ಲಿ 'ತರಸ್ವೀ' ಎಂದು ಭಾರತದಲ್ಲಿ ಪಾಠವಿದೆ.

ತತ್ರಾಪರಾಂಶ್ಚೈವ ಬಹೂನಸತ್ಯಂ
ನಿರೀಶ್ವರಂ ಚಾಪ್ರತಿಷ್ಠಂ ಚ ಲೋಕಂ ।
ಸಿದ್ಧೋಽಹಮೀಶೋಽಹಮಿತಿ ಬ್ರುವಾಣಾನ್
ಗುಣಾನ್ ವಿಷ್ಣೋಃ ಖ್ಯಾಪಯನ್ ವಾದತೋಽಜೈತ್ ॥೩೦೪॥

ಅಲ್ಲಿ ಪ್ರಪಂಚ ಅಸತ್ಯ, ಭಗವಂತನಿಂದ ನಿರ್ಮಿತವಲ್ಲ, ಜ್ಞಾನಬಾಧ್ಯ ಎಂದೂ ನಾನು ಮುಕ್ತ ನಾನು ಭಗವಂತ ಎಂದೂ ಹೇಳುವ ಬೇರೆ ಬಹುಮಂದಿ ರಾಕ್ಷಸರನ್ನೂ ಭೀಮ ವಿಷ್ಣುವಿನ ಗುಣಗಳನ್ನು ಸಾಧಿಸುವ ಮೂಲಕ ವಾದದಲ್ಲಿ ಗೆದ್ದ.

ಭಿನ್ನಂ ವಿಷ್ಣುಮಧಿಕಂ ಸರ್ವತಶ್ಚ
ಬ್ರುವನ್ಪ್ರವೀರಾಂಲ್ಲಕ್ಷಮೇಷಾಂ ನಿಜಘ್ನೇ ।
ತೇ ತಸ್ಯ ವೀರ್ಯಂ ಚ ಬಲಂ ಚ ದೃಷ್ಟ್ವಾ
ವಿದ್ಯಾಬಲಂ ಬಾಹುಬಲಂ ತಥೈವ ।
ಅಶಕ್ನುವಂತಃ ಸಹಿತಾಃ ಸಮಸ್ತಾ
ಹತಪ್ರವೀರಾಃ ಸಹಸಾ ನಿವೃತ್ತಾಃ ॥೩೦॥

ವಿಷ್ಣುವನ್ನು ಸರ್ವವಿಲಕ್ಷಣ ಸರ್ವೋತ್ತಮನೆಂದು ಸಾಧಿಸಿ ಕ್ರೋಧವಶರಲ್ಲಿ ಒಂದು ಲಕ್ಷ ಮಹಾವೀರರನ್ನು ಸಂಹರಿಸಿದ, ಭೀಮಸೇನ. ಆಗ ಭೀಮನ ವೀರ್ಯವನ್ನೂ ವಿದ್ಯಾಬಲ ಬಾಹುಬಲಗಳೆಂಬ ಎರಡು ಬಗೆಯ ಬಲಗಳನ್ನೂ ನೋಡಿ ಅವರು ಎಲ್ಲರೂ ಜೊತೆಗೂಡಿದರೂ ಅವನನ್ನು ಇದಿರಿಸಲು ಶಕ್ತರಾಗದೆ, ತಮ್ಮ ಕಡೆಯ ಮಹಾವೀರರು ಹತರಾದಾಗ ಬೇಗನೆ ಪಲಾಯನ ಮಾಡತೊಡಗಿದರು.

'ತೇ ತಸ್ಯ ವೀರ್ಯಂ ಚ.....
ಸಹಸಾ ನಿವೃತ್ತಾಃ॥' ಎಂಬುದೂ ಮೂಲಭಾರತ ಶ್ಲೋಕ
(ವನ 155-22)

ವಿಕ್ರಮ್ಯ ತಾನ್ಗದಯಾಸೌ ನಿಹತ್ಯ
ವಿದ್ರಾವ್ಯ ಸರ್ವಾನ್ನಲಿನೀಂ ಪ್ರವಿಶ್ಯ ।
ಪೀತ್ವಾಮೃತಾಂಭಶ್ಚ ತತೋಽಂಬುಜಾನಿ
ದಿವ್ಯಾನಿ ಜಗ್ರಾಹ ಕುರುಪ್ರವೀರಃ ॥೩೬॥

ಕುರುಕುಲ ಶ್ರೇಷ್ಠನಾದ ಭೀಮ ತನ್ನ ಪರಾಕ್ರಮವನ್ನು ಮೆರೆದು, ಪಲಾಯನಕ್ಕೆ ತೊಡಗಿದ್ದ ಎಲ್ಲ ಕ್ರೋಧವಶರನ್ನೂ ಗದೆಯಿಂದ ಹೊಡೆದು ಓಡಿಸಿ ಕಮಲವನವನ್ನು ಹೊಕ್ಕು ಅಮೃತದಂಥ ನೀರನ್ನು ಕುಡಿದ. ಅಲ್ಲಿಯ ದಿವ್ಯ ಕಮಲಗಳನ್ನು ಎತ್ತಿಕೊಂಡ.

ಅಥೋ ಕಲಹಶಂಸೀನಿ ನಿಮಿತ್ತಾನಿ ಯುಧಿಷ್ಠಿರಃ ।
ದೃಷ್ಟ್ವಾ ಕೃಷ್ಣಾಮಪೃಚ್ಛಚ್ಚ ಕ್ವ ಭೀಮ ಇತಿ ದೀನಧೀಃ ॥೩೭॥

ಯುದ್ಧ ಸೂಚಕವಾದ ಉತ್ಪಾತಗಳನ್ನು ಕಂಡು ಯುಧಿಷ್ಠಿರ ಕಳವಳಗೊಂಡು ದ್ರೌಪದಿಯನ್ನು ಕೇಳಿದ, 'ಎಲ್ಲಿ ಭೀಮ?'

ಸೌಗಂಧಿಕಾರ್ಥಂ ಯಾತಂ ತಂ ಶ್ರುತ್ವಾ ಕೃಷ್ಣಾಮುಖಾನ್ನೃಪಃ ।
ಆರುಹ್ಯ ರಾಕ್ಷಸಶ್ರೇಷ್ಠಾನ್ಕೃಷ್ಣಯಾ ಭ್ರಾತೃಭಿಃ ಸಹ ॥೩೮॥
ಯಯೌ ವೃಕೋದರೋ ಯತ್ರ ದೃಷ್ಟ್ವೈವ ಚೈನಮವಸ್ಥಿತಂ ।
ಉವಾಚ ಮೈವಮಿತ್ಯೇನಂ ಭೀತೋ ಗಿರಿಶಕೋಪತಃ ॥೩೯॥

ಸೌಗಂಧಿಕ ಕಮಲಕ್ಕಾಗಿ ಭೀಮ ಹೋದುದನ್ನು ದ್ರೌಪದಿಯ ಮುಖದಿಂದ ಕೇಳಿ

ರಾಜಾ ಯುಧಿಷ್ಠಿರ ರಾಕ್ಷಸ ಶ್ರೇಷ್ಠರ ಹೆಗಲೇರಿ ದ್ರೌಪದಿ ಮತ್ತು ಸೋದರರೊಂದಿಗೆ ಭೀಮನಿದ್ದಲ್ಲಿಗೆ ಹೋದ. ಅಲ್ಲಿ ಭೀಮನಿದ್ದುದನ್ನು ನೋಡಿ ಶಿವನ ಕೋಪಕ್ಕೆ ಅಂಜಿ 'ಹೀಗೆ ಮಾಡಬೇಡ' ಎಂದು ಭೀಮನಿಗೆ ಹೇಳಿದ.

ಇಲ್ಲಿ ಸೋದರರೆಂದು ಬಹುವಚನವಿದೆ. ಆದರೆ ಅರ್ಜುನ ಸ್ವರ್ಗಕ್ಕೂ, ಭೀಮ ಸೌಂಗಧಿಕವನಕ್ಕೂ ಹೋಗಿದ್ದಾನೆ. ಉಳಿದ ಸೋದರರು ಧರ್ಮರಾಜನಿಗೆ ನಕುಲ ಸಹದೇವರಿಬ್ಬರೆ. ಅದರಿಂದ ದ್ವಿವಚನ ವಿರಬೇಕಾಗಿತ್ತು. ಆದರೂ ಧೌಮ್ಯ ಲೋಮಶಾದಿ ಮುನಿಗಳಲ್ಲಿ ಧರ್ಮರಾಜನಿಗೆ ಸೋದರ ವಾತ್ಸಲ್ಯವೇ ಇದ್ದಿತೆಂದು ಸೂಚಿಸುವುದಕ್ಕಾಗಿ ಅವರನ್ನೂ ಸೇರಿಸಿ ಬಹುಮಂದಿ ಸೋದರರೆಂದು ಬಹುವಚನವಿದೆ.

ಧರ್ಮರಾಜನಿಗೆ ಶಿವನ ಕೋಪದ ಭಯ ಏಕೆಂದರೆ ಇದು ಕುಬೇರನ ವನ. ಕುಬೇರ ಶಿವನ ಆಪ್ತಸಖ. ಅದರಿಂದ ಕುಬೇರನಿಗೆ ಅಪರಾಧಗೈದರೆ ಶಿವ ಕೋಪಗೊಳ್ಳಬಹುದು ಎಂದು ಮುಂದೆ ಹೇಳಿದೆ.

ದೇವೇಭ್ಯೋ ಮರಣಾದ್ ಭೀತಾ ರಾಕ್ಷಸಾ ವಿತ್ತಪಾಜ್ಞಯಾ।
ತದೀಯಾಂ ನಿಲಿನೀಂ ತೇ ಹಿ ರಕ್ಷಂತ್ಯಸ್ಯಾಶ್ರಯೋ ಹರಃ।
ಜಾನನ್ ವಿತ್ತೇಶ್ವರೋ ಭೀಮಮಾಹಾತ್ಮ್ಯಂ ನ ಚುಕೋಪ ಹ ॥೩೧೦॥

ದೇವತೆಗಳಿಂದ ತಮಗೆ ಮರಣ ಬಂದೀತೆಂದು ಹೆದರಿ ಈ ರಾಕ್ಷಸರು ಕುಬೇರನ ಅನುಮತಿಯಿಂದ ಅವನ ಕಮಲವನ್ನು ರಕ್ಷಿಸುತ್ತಿದ್ದರು. ಕುಬೇರನಿಗೆ ಆಶ್ರಯದಾತ ರುದ್ರ. ಅದರಿಂದ ಧರ್ಮರಾಜನಿಗೆ ರುದ್ರನ ಭಯ. ಆದರೆ ಕುಬೇರ ಭೀಮನ ಮಹಾತ್ಮೆಯನ್ನು ಬಲ್ಲವನಾದ್ದರಿಂದ ಕೋಪಮಾಡಲಿಲ್ಲ.

ಈ ರಾಕ್ಷಸರು ಬೇರೆಕಡೆ ಇರುತ್ತಿದ್ದರೆ ದೇವತೆಗಳ ಭಯವಿರುತ್ತಿತ್ತು. ಈಗ ಕುಬೇರನ ಆಶ್ರಯದಲ್ಲಿ ಅವನ ಸೇವಕರೇ ಆಗಿರುವುದರಿಂದ ದೇವತೆಗಳ ಭಯವಿಲ್ಲದೇ ಇದ್ದರು. ಭೀಮ ಅವರನ್ನು ಕೊಂದರೂ ಕುಬೇರ ಕೋಪಿಸಲಿಲ್ಲ. ಕೋಪಮಾಡಿ ಪ್ರಯೋಜನವಿಲ್ಲ. ಭೀಮ ಯಾರಿಗೂ ಮಣಿಯುವವನಲ್ಲ ಎಂದು. ಕುಬೇರ ಕೋಪ ಮಾಡದಿದ್ದುದರಿಂದ ಶಿವನ ಕೋಪಕ್ಕೂ ಅವಕಾಶವಿರಲಿಲ್ಲ.

ಮಣಿಮಂತನ ಸಂಹಾರ

ವಸತ್ಸು ತತ್ರ ಪಾರ್ಥೇಷು ಪುನಃ ಕತಿಪಯೈರ್ದಿನೈಃ।
ಉವಾಚ ಭೀಮಸೇನಸ್ಯ ಯಶೋಧರ್ಮಾಭಿವೃದ್ಧಯೇ ॥೩೧೧॥

ಪಂಚವರ್ಣಾನಿ ಪುಷ್ಪಾಣಿ ಕೃಷ್ಣಾ ವೀಕ್ಷ್ಯಾಹೃತಾನಿ ತು ।
ಮಾರುತೇನ ಕುಬೇರಸ್ಯ ಗೃಹಾನ್ನೃಭಿರಗಮ್ಯತಃ ॥೩೧೨॥

ಪಾಂಡವರು ಗಂಧಮಾದನದಲ್ಲಿ ವಾಸಮಾಡುತ್ತಿದ್ದಾಗಲೆ ಪುನಃ ಕೆಲವೇ ದಿನಗಳಲ್ಲಿ ಮಾನವರಿಗೆ ಅಗಮ್ಯವಾದ ಕುಬೇರನ ಕಮಲ ವನದಿಂದ ಗಾಳಿ ತಂದು ಬೀಳಿಸಿದ ಪಂಚವರ್ಣದ ಪುಷ್ಪಗಳನ್ನು ದ್ರೌಪದಿ ಕಂಡು ಭೀಮಸೇನನಿಗೆ ಯಶಸ್ಸೂ ಪುಣ್ಯವೂ ಹೆಚ್ಚಲಿ ಎಂಬ ಉದ್ದೇಶದಿಂದ ನುಡಿದಳು.

[1]ಮೂಲದಲ್ಲಿ ಕಮಲವನ ಮಡುವನ್ನು 'ಕುಬೇರನ ಮನೆ' ಎಂದುದು ಕುಬೇರನ ಮನೆಯಂತೆಯೆ ಮಡುವೂ ಅಗಮ್ಯ ಎಂದು ಸೂಚಿಸುವುದಕ್ಕಾಗಿ. ಮೊದಲು ಗಂಧಮಾದನದ ಮಡುವಿನಿಂದ ಒಂದೇ ಬಣ್ಣದ ಒಂದು ಬಂಗಾರದ ಕಮಲ ಗಾಳಿಗೆ ಹಾರಿ ಬಂದಿತ್ತು. ಇದೀಗ ಮೇರು ಪರ್ವತದ ತುದಿಯಲ್ಲಿ ಇರುವ ಮಡುವಿನಿಂದ ಪಂಚವರ್ಣದ ಅನೇಕ ಕಮಲಗಳು ಗಾಳಿಯಲ್ಲಿ ಹಾರಿ ಬಂದುವು. ಇದನ್ನು ನೆಪ ಮಾಡಿಕೊಂಡು ದ್ರೌಪದಿ ಮಹಾಪದ್ಮಶತತ್ರಯ ಸಂಖ್ಯೆಯಲ್ಲಿ ಇರುವ ರಾಕ್ಷಸರ ಸಂಹಾರದಿಂದ ಭೀಮನಿಗೆ ಇನ್ನೂ ಹೆಚ್ಚಿನ ಯಶಸ್ಸು ಪುಣ್ಯಗಳು ಬರಲಿ ಎಂಬ ಉದ್ದೇಶದಿಂದ ಆ ಹೂಗಳನ್ನು ತರಲು ಹೇಳಿದಳು ಹೊರತು ಅವಳಿಗೆ ಹೂವಿನ ವ್ಯೋಹವಿರಲಿಲ್ಲ. ವ್ಯೋಹವಿರಲಿಲ್ಲ ಎಂದು ಸೂಚಿಸುವುದಕ್ಕಾಗಿಯೆ ಮೂಲದಲ್ಲಿ 'ಹೂಗಳನ್ನು ತರಲು ಹೇಳಿದಳು' ಎಂದಿಲ್ಲ. 'ಹೂಗಳನ್ನು ಕಂಡು, ಹೋಗಲು ಹೇಳಿದಳು' ಎಂದಿಷ್ಟೆ ಹೇಳಿದೆ.

ಅಗಮ್ಯೋಽಯಂ ಗಿರಿಃ ಸರ್ವೈಃ ಕುಬೇರೇಣಾಭಿಪಾಲಿತಃ ।
ಅದ್ಯ ತ್ವಯೈವ ಗಂತವ್ಯೋ ವಿಧೂಯಾಖಿಲರಾಕ್ಷಸಾನ್ ॥೩೧೩॥

ಈ ಪರ್ವತ ಕುಬೇರನಿಂದ ರಕ್ಷಿತವಾಗಿದ್ದು ಎಲ್ಲರಿಗೂ ದುರ್ಗಮವಾಗಿದೆ. ಅದರಿಂದ ನೀನೆ ಎಲ್ಲ ರಾಕ್ಷಸರನ್ನೂ ಧಿಃಕರಿಸಿ ಈಗ ಹೋಗಬೇಕು.

---

1. ಕುಬೇರ ಗೃಹವತ್ ತತ್‌ಸಮೀಪಸ್ಥ ಸರೋವರಸ್ಯಾಪ್ಯಗಮ್ಯತ್ವ ಸೂಚನಾಯ ಗೃಹಾದಿತಿ ಲಾಕ್ಷಣಿಕ ಪ್ರಯೋಗಃ। ಪೂರ್ವಂ ಗಂಧಮಾದನ ಗಿರೌ ಸ್ಥಿತ ಸರೋವರೇ ಏಕವರ್ಣಮೇವ ಸೌವರ್ಣಂ ಕಮಲಂ। ಮೇರು ಮೂರ್ಧ್ನಿಸ್ಥಿತ ಸರೋವರೇ ತು ಪಂಚವರ್ಣಾನಿ ಕಮಲಾನಿ ಸಂತಿ। ತತಃ ಕಾನಿಚಿತ್ ಕುಸುಮಾನಿ ಮಾರುತೇನಾನೀತಾನಿ। ತಾನಿ ದೃಷ್ಟ್ವಾ ದ್ರೌಪದೀ ಪಂಚವರ್ಣ ಕುಸುಮ ವ್ಯಾಜೇನ ಪದ್ಮತ್ರಯ ಸಂಖ್ಯಾಕರಾಕ್ಷಸವಧೇನ ಭೀಮಸ್ಯ ಯಶೋಧರ್ಮಾಭಿವೃದ್ಧಿಮೇವ ಕಾರಯಿತುಂ ಭೀಮಂ ಪ್ರತ್ಯಾಹೇತಿ ವಿವೇಕೋ ಜ್ಞೇಯಃ। ಅತ ಏವ ಭೀಮಸ್ಯ ಯಶೋಧರ್ಮಾಭಿವೃದ್ಧಯ ಇತಿ ತಾದರ್ಥ್ಯಾರ್ಥಕ ಚತುರ್ಥೀ ಪ್ರಯೋಗಃ ಪುಷ್ಪೇಷು ತು ಪಂಚವರ್ಣಾನಿ ಪುಷ್ಪಾಣಿ ವೀಕ್ಷ್ಯೇತ್ಯೇವೋಕ್ತಂ। ನತು ತಾನ್ಯಾನಯೇತಿ। ತಸ್ಮಾತ್ ಭಾರತೀಮನೋಭಾವಂ ಭಾರತೀಪತಿರೇವ ವೇದೇತಿ ಜ್ಞೇಯಂ।

-ವಾದಿರಾಜೀಯ

'ಈ ಪರ್ವತ' ವೆಂದರೆ ಮೇರು ಪರ್ವತವೆಂದೆ ವಾದಿರಾಜೀಯ. ಬೇರೆ ವ್ಯಾಖ್ಯಾನಕಾರರು ಗಂಧಮಾದನ ಪರ್ವತವೆಂದೆ ಗ್ರಹಿಸಿದ್ದಾರೆ. ಪಾಂಡವರು ಐದು ವರ್ಷಕಾಲ ಗಂಧಮಾದನದ ಆರ್ಷ್ಟಿಷೇಣಾಶ್ರಮದಲ್ಲಿ ವಾಸ ಮಾಡಿದರು. ಅದರ ಕೊನೆಯಲ್ಲಿ ಒಂದು ದಿನ ಗರುಡ ಮೇರುಪರ್ವತ ತುದಿಯ ಒಂದು ಸರೋವರದಿಂದ ಹಾವನ್ನು ಎತ್ತಿಕೊಂಡು ಹೋಗುವಾಗ ರೆಕ್ಕೆಗಳ ಗಾಳಿಯಿಂದ ಅನೇಕ ಪಂಚವರ್ಣದ ಕಮಲಗಳು ಆಶ್ರಮದಲ್ಲಿ ಬಿದ್ದುವು. ಅದನ್ನು ಪಾಂಡವರು ದ್ರೌಪದಿ, ಮುನಿಗಳು ಎಲ್ಲರೂ ನೋಡಿದರು. ಒಮ್ಮೆ ಏಕಾಂತಪ್ರದೇಶದಲ್ಲಿ ದ್ರೌಪದಿ ಭೀಮನಲ್ಲಿ ಆ ಕಮಲಗಳನ್ನು ತರಲು ಹೇಳಿದಳು.

ಇತ್ಯುಕ್ತ ಆಶು ಸಗದಃ ಸಧನುಃ ಸಬಾಣೋ
ಭೀಮೋ ಗಿರೀಂದ್ರಮಜಿತೋರುಬಲೋ ವಿಗಾಹೇ।
ಪ್ರಾಪ್ತಂ ನಿಶಾಮ್ಯ ಬಲದೈವತಸೂನುಮತ್ರ
ಪದ್ಮತ್ರಯಂ ನ್ಯರುಣದುದ್ಧತರಾಕ್ಷಸಾನಾಂ ॥೩೧೪॥

ಅಗ್ರೇ ನಿಧಾಯ ಮಣಿಮಂತಮಜೇಯಮುಗ್ರಂ
ಶಂಭೋರ್ವರಾದ್ ವಿವಿಧಶಸ್ತ್ರಮಹಾಸ್ತ್ರವೃಷ್ಟ್ಯಾ।
ತಾನ್ ಸರ್ವರಾಕ್ಷಸಗಣಾನ್ ಮಣಿಮತ್ಸಮೇತಾನ್
ಭೀಮೋ ಜಘಾನ ಸಪದಿ ಪ್ರವರೈಃ ಶರೌಘೈಃ ॥೩೧೫॥

ದ್ರೌಪದಿ ಹೀಗೆ ಹೇಳಿದೊಡನೆ ಅಜೇಯನಾದ ಮಹಾಬಲಶಾಲಿ ಭೀಮ ಗದೆ ಧನುರ್ಬಾಣಗಳನ್ನು ಹಿಡಿದು ಬೆಟ್ಟವನ್ನೇರಿದ. ಅವನು ಬಂದುದನ್ನು ಕೇಳಿ ಮೂರು ಪದ್ಮಸಂಖ್ಯೆಯಲ್ಲಿದ್ದ ಬಲೋನ್ಮತ್ತರಾದ ರಾಕ್ಷಸರು ಶಿವನ ವರದಿಂದ ಅಜೇಯನಾದ ಮಣಿಮಂತನೆಂಬ ಕ್ರೂರ ರಾಕ್ಷಸನನ್ನು ಮುಂದೆ ಮಾಡಿಕೊಂಡು ನಾನಾ ಬಗೆಯ ಶಸ್ತ್ರ ಮಹಾಸ್ತ್ರಗಳ ಮಳೆಗರೆಯುತ್ತ ಬಂದು ತಡೆದರು. ಭೀಮ ಮಣಿಮಂತನ ಸಮೇತವಾಗಿ ಆ ಎಲ್ಲ ರಾಕ್ಷಸ ಸಮೂಹಗಳನ್ನು ಶ್ರೇಷ್ಠ ಬಾಣ ಸಮೂಹಗಳಿಂದ ಬೇಗನೆ ಸಂಹರಿಸಿದ.

ಆರ್ಷ್ಟಿಷೇಣ ಮುನಿ ಪಾಂಡವರಿಗೆ ಹೇಳಿದ್ದ, ಕುಬೇರನ ಮನೆಯ ಬಳಿಗೆ ಹೋಗಬೇಡಿರಿ. ಅದು ಮನುಷ್ಯರಿಗೆ ಅಗಮ್ಯ ಎಂದು. ಆದರೂ ಭೀಮನಿಗೆ ಭಯವಿಲ್ಲ. ದ್ರೌಪದಿಯ ಮಾತನ್ನು ಕೇಳಿ ಯಾರಿಗೂ ಹೇಳದೆ ಒಬ್ಬನೆ ಗದಾ ಧನುರ್ಬಾಣ ಖಡ್ಗಗಳನ್ನು ಹಿಡಿದು ಕುಬೇರ ಭವನದ ಬಳಿಗೆ ಹೋಗಿ ಶತ್ರುಗಳಿಗೆ ಮೈನವಿರೇಳುವಂತೆ ಶಂಖನಾದ ಧನುಷ್ಟಂಕಾರ ಮಾಡಿ ಭುಜತಟ್ಟಿಕೊಂಡ. 'ಭೀಮ ಬಂದುದನ್ನು ಕೇಳಿ' ಅಂದರೆ ಅವನ ಶಂಖ

ನಾದಾದಿಗಳನ್ನು ಕೇಳಿ, ರಾಕ್ಷಸರು ಬಂದರು. ಆಕಾಶದಲ್ಲಿ ನಿಂತು ಯುದ್ಧ ಮಾಡಿದರು. ಭೀಮನ ಬಾಣಗಳಿಗೀಡಾಗಿ ಮೈಯಿಂದ ರಕ್ತದ ಮಳೆಗರೆದರು. ಎಲ್ಲರೂ ಮಡಿದರು. ಮಣಿಮಂತನೂ ಭೀಮನ ಗದೆಯಿಂದ ಹತನಾದ.

'ಮೂರು ಪದ್ಮ' ಎಂದರೆ ಮುಂದೆ 319ನೇ ಶ್ಲೋಕದಲ್ಲಿ ಹೇಳುವಂತೆ ಮೂರು ಮಹಾಪದ್ಮ ವಿವಕ್ಷಿತ. ಮಹಾಭಾರತದಲ್ಲಿ ಮುನ್ನೂರು ಮಹಾಪದ್ಮ ಎಂದಿದೆ (ವನ. 162.58) ಮುನ್ನೂರರಲ್ಲಿ ಮೂರು ಪ್ರಧಾನ ಎಂಬ ಅಭಿಪ್ರಾಯ ನಿರ್ಣಯಕ್ಕೆ ಇರಬಹುದು.

ಅವಧ್ಯಾಂಸ್ತಾನ್ ಕ್ಷಣೇನೈವ ಹತ್ವಾ ಭೀಮೋ ಮಹಾಬಲಃ।
ರಣೇ ಕ್ರೋಧವಶಾನ್ಸರ್ವಾನತಿಷ್ಠದ್ ಗಿರಿಮೂರ್ಧನಿ ॥೩೧೬॥
ತೇ ಹತಾ ಭೀಮಸೇನೇನ ಪ್ರಾಪುರಂಧಂತಮೋಽಖಿಲಾಃ ॥೩೧೭॥

ಅವಧ್ಯರಾದ ಕ್ರೋಧವಶ ರಾಕ್ಷಸರನ್ನು ಯುದ್ಧದಲ್ಲಿ ಕ್ಷಣದಲ್ಲಿ ಕೊಂದು ಮಹಾ ಬಲಿಷ್ಠನಾದ ಭೀಮ ಪರ್ವತದ ತುದಿಯಲ್ಲಿ ನಿಂತ. ಭೀಮಸೇನನಿಂದ ಹತರಾದ ಆ ರಾಕ್ಷಸರೆಲ್ಲರೂ ಅಂಧಂತಮಸ್ಸಿಗೆ ಹೋದರು.

ಹತಃ ಸೌಗಂಧಿಕವನೇ ಮಣಿಮಾಂಶ್ಚ ಪುನಃ ಕಲೌ।
ಜಾತೋ ಮಿಥ್ಯಾಮತಿಂ ಸಮ್ಯಗಾಸ್ತೀರ್ಯಾಪ ತಮೋಽಧಿಕಂ ॥೩೧೮॥

ಸೌಗಂಧಿಕ ವನದಲ್ಲಿ ಹತನಾದ ಮಣಿಮಂತ ಪುನಃ ಕಲಿಯುಗದಲ್ಲಿ ಹುಟ್ಟಿ ಮಿಥ್ಯಾಜ್ಞಾನವನ್ನು ಚೆನ್ನಾಗಿ ಹರಡಿ ಮಹಾತಮಸ್ಸನ್ನು ಹೊಂದಿದ.

ತತೋ ವೈಶ್ರವಣೋ ರಾಜಾ ಮಹಾಪದ್ಮತ್ರಯೇ ಹತೇ।
ರಾಕ್ಷಸಾನಾಮವಧ್ಯಾನಾಂ ಸಖಾಯೇ ಮಣಿಮತ್ಯಪಿ।
ಆರುರೋಹ ರಥಂ ದಿವ್ಯಂ ಯೋದ್ಧುಕಾಮೋ ವೃಕೋದರಂ ॥೩೧೯॥

ಬಳಿಕ ಮೂರು ಮಹಾಪದ್ಮದಷ್ಟಿದ್ದ ಅವಧ್ಯರಾದ ರಾಕ್ಷಸರೂ ತನ್ನ ಮಿತ್ರನಾದ ಮಣಿಮಂತನೂ ಹತನಾದಾಗ ಕುಪಿತನಾದ ಕುಬೇರ ಭೀಮನೊಡನೆ ಯುದ್ಧಮಾಡಲು ದಿವ್ಯ ರಥವನ್ನೇರಿದ.

ಅಸುರಾವೇಶತಸ್ತಸ್ಯ ಭೀಮೇ ಕ್ರೋಧೋ ಮಹಾನಭೂತ್।
ಸ ಆಜಗಾಮ ಭೀಮೇನ ಯೋದ್ಧುಂ ವಿತ್ತಪತಿಃ ಸ್ವಯಂ ॥೩೨೦॥

ಅಸುರಾವೇಶದಿಂದ ಕುಬೇರನಿಗೆ ಭೀಮನ ಮೇಲೆ ಬಹಳ ಕೋಪ ಉಂಟಾಗಿತ್ತು. ಅದರಿಂದ ಅವನು ಸ್ವತಃ ಭೀಮನೊಡನೆ ಯುದ್ಧ ಮಾಡಲು ಬಂದ.

ತಸ್ಮಿನ್ಕಾಲೇ ಭೀಮಸೇನಸ್ಯ ಘೋಷಂ
ಶ್ರುತ್ವಾ ರಾಜಾಪೃಚ್ಛದಾಶು ಸ್ಮ ಕೃಷ್ಣಾಂ।

ಕ್ವ ಭೀಮ ಇತ್ಯೇವ ತಯೋದಿತಂ ಚ
ಶ್ರುತ್ವಾ ಜಗಾಮಾಶು ರಕ್ಷೋಽಕಂಸಸಂಸ್ಥಃ ॥೩೨೧॥

ಅದೇ ಸಮಯದಲ್ಲಿ ಭೀಮಸೇನನ ಸಿಂಹನಾದವನ್ನು ಕೇಳಿ ಧರ್ಮರಾಜ ದ್ರೌಪದಿಯನ್ನು ಕೇಳಿದ 'ಭೀಮನೆಲ್ಲಿ?' ಎಂದು. ಅವಳು ಹೇಳಿದಳು. ಅದನ್ನು ಕೇಳಿ ಧರ್ಮರಾಜನ ಬೇಗನೆ ಘಟೋತ್ಕಚನ ಹೆಗಲನ್ನೇರಿ ಭೀಮನ ಬಳಿಗೆ ಹೋದ.

ಸಭ್ರಾತೃಕೇ ಮುನಿಭಿಃ ಕೃಷ್ಣಯಾ ಚ
ಗತೇ ರಾಜನ್ಯತ್ರ ಭೀಮಂ ಕುಬೇರಃ ।
ದೃಷ್ಟ್ವಾಽಸುರಾವೇಶತೋ ಧರ್ಮಜಂ ಚ
ಕಿಂಚಿನ್ಮುಕ್ತಃ ಸ್ನೇಹಯುಕ್ತಸ್ತಥಾಸ ॥೩೨೨॥

ಸೋದರರೊಡನೆ ಮುನಿಗಳೊಡನೆ ಕೂಡಿ ದ್ರೌಪದೀ ಸಮೇತನಾಗಿ ಧರ್ಮರಾಜ ಕುಬೇರನ ಭವನಕ್ಕೆ ಹೋದಾಗ ಕುಬೇರ ಭೀಮನನ್ನೂ ಧರ್ಮರಾಜನನ್ನೂ ನೋಡಿ ಸ್ವಲ್ಪ ಅಸುರಾವೇಶದಿಂದ ಮುಕ್ತನಾಗಿ ಸ್ವಲ್ಪ ಸ್ನೇಹಯುಕ್ತನಾದ.

ಧೃತಾಯುಧಂ ಭೀಮಮೀಕ್ಷ್ಯಾಪಿ ಕಿಂಚಿದ್
ದೈತ್ಯಾವೇಶಾದ್ ಬಹು ಮೇನೇ ನ ಭೀಮಂ ।
ಅಗಸ್ತ್ಯಶಾಪಂ ಚಾವದತ್ ಸ್ವಸ್ಯ ಪೂರ್ವಂ
ಸಖಾಯನಾಶೇ ಕಾರಣಂ ರಾಜರಾಜಃ ॥೩೨೩॥

ಸ್ವಲ್ಪ ಅಸುರಾವೇಶವಿದ್ದ ಪ್ರಯುಕ್ತ ಆಯುಧಪಾಣಿಯಾದ ಭೀಮನನ್ನು ನೋಡಿಯೂ ಅವನಲ್ಲಿ ಮಹತ್ವವನ್ನು ಕಾಣಲಿಲ್ಲ, ಕುಬೇರ. ತನ್ನ ಮಿತ್ರನ ಮರಣಕ್ಕೆ ಅಗಸ್ತ್ಯರ ಶಾಪ ಕಾರಣ ಎಂದ.

ಎರಡನೆ ಬಾರಿ ಭೀಮ ಅಪರಾಧಮಾಡಿದನೆಂದು ಕುಬೇರನಿಗೆ ಕೋಪ ಬಂದಿತ್ತು. ಅವನು ಆಯುಧಪಾಣಿಯಾಗಿ ಸೈನ್ಯದೊಂದಿಗೆ ಹೊರಟಿದ್ದನ್ನು ಕಂಡು ರಾಕ್ಷಸರಿಗೆ ಉತ್ಸಾಹ. ಇನ್ನು ಜಯ ನಮಗೇ ಎಂದುಕೊಂಡರು. ಆದರೆ ಮರುಕ್ಷಣದಲ್ಲಿ ಭೀಮನನ್ನೂ ಧರ್ಮರಾಜನನ್ನೂ ಕಂಡು ಕುಬೇರ ಶಾಂತನಾದ. ಅಸುರಾವೇಶ ಹೋಯಿತು. ರಾಕ್ಷಸರು ನಿರಾಶರಾದರು.

ಕುಬೇರನಿಗೆ ಅಸುರಾವೇಶ ಪೂರ್ತಿ ಹೋಗಲಿಲ್ಲ. ಶಿವ ವರದಿಂದ ಅವಧ್ಯನಾದ ಮಣಿಮಂತನನ್ನೂ ಮೂರು ಮಹಾಪದ್ಮರಾಕ್ಷಸರನ್ನೂ ಏಕಾಕಿಯಾಗಿ ಕೊಂದ ಭೀಮನ ಬಲಕ್ಕೆ ಕುಬೇರ ಮಹತ್ವ ಕೊಡದೆ ಅಗಸ್ತ್ಯ ಶಾಪವೃತ್ತಾಂತವನ್ನು ಹೇಳಿದ. ಒಮ್ಮೆ ವಿಂಧ್ಯಪರ್ವತದ ಕುಶಾವತೀ ನಗರದಲ್ಲಿ ದೇವತೆಗಳ ಮಂತ್ರಾಲೋಚನೆ ನಡೆದಿತ್ತು. ಆಗ ಅಲ್ಲಿಗೆ ಮುನ್ನೂರು ಮಹಾಪದ್ಮರಾಕ್ಷಸ ಸೈನ್ಯ ಸಮೇತನಾಗಿ ಮಣಿಮಂತನೊಂದಿಗೆ ಕುಬೇರ

ಆಕಾಶ ಮಾರ್ಗವಾಗಿ ಪ್ರಯಾಣ ಮಾಡಿದ. ದಾರಿಯಲ್ಲಿ ಕೆಳಗೆ ಯಮುನಾ ತೀರದಲ್ಲಿ ಅಗಸ್ತ್ಯರು ಸೂರ್ಯಾಭಿಮುಖರಾಗಿ ನಿಂತು ತಪಸ್ಸು ಮಾಡುತ್ತಿದ್ದರು. ಮಣಿಮಂತ ಅವರ ತಲೆಯ ಮೇಲೆ ಉಗುಳಿದ. ಮುನಿ ಸಿಟ್ಟಾಗಿ ಮಣಿಮಂತನನ್ನೂ ಅವನ ಮಹಾ ಸೈನ್ಯವನ್ನೂ ಒಬ್ಬ ಮಾನವ ನಾಶ ಮಾಡುವನೆಂದೂ ಕುಬೇರನಿಗೆ ಆದರಿಂದ ಉಂಟಾಗುವ ಸಂತಾಪ ಆ ಮಾನವನ ದರ್ಶನದಿಂದಲೆ ಕಳೆಯುವುದೆಂದೂ ಶಪಿಸಿದ. ಅದರಿಂದ ಈಗ ಆ ಶಾಪವೇ ರಾಕ್ಷಸ ವಿನಾಶಕ್ಕೆ ಕಾರಣವಾಯಿತು. ಭೀಮನ ಬಲವಲ್ಲ ಎಂದ ಕುಬೇರ. ಆದರೆ ಮಣಿಮಂತನಿಗೆ ಶಿವನ ವರವಿದ್ದಾಗ ಮುನಿಶಾಪವೇನು ಮಾಡುತ್ತಿತ್ತು?

ನೀವು ಪಾಂಡವರು ಎಲ್ಲರೂ ಯಮ ವಾಯು ಮುಂತಾದ ದೇವತೆಗಳ ಪುತ್ರರಿಂದ ಮೇಲೆ ನನಗೂ ಪುತ್ರಸಮಾನರು ಅದರಿಂದ ಕ್ಷಮಿಸಿದ್ದೇನೆ, ಭೀಮ ಧರ್ಮಜ್ಞಾನವಿಲ್ಲದವ ಅಹಂಕಾರಿ. ಯಾರ ಭಯವಿಲ್ಲದ ಹುಡುಗ ಬುದ್ಧಿಯವ . ಅವನಿಗೆ ಇಂಥ ಸಾಹಸಕಾರ್ಯಕ್ಕೆ ಕೈಹಾಕದಂತೆ ಬುದ್ಧಿ ಹೇಳಿಂದು ಧರ್ಮರಾಜನಿಗೆ ಹೇಳುತ್ತಾನೆ! ಈ ಮಾತುಗಳನ್ನು ಕುಬೇರ ವಿನೋದಕ್ಕಾಗಿ ಪ್ರೀತಿಯಿಂದಲೆ ಆಡಿರಬೇಕು.

ದೈತ್ಯಾವೇಶಾದುಜ್ಝಿತಃ ಶಾಂತಭಾವೋ
ದದೌ ನಿಜಂ ಸ್ಥಾನಮೇಷಾಂ ಸುತುಷ್ಟಃ ।
ಆವಾಸಾರ್ಥಂ ತೇಽವಸಂಸ್ತತ್ರ ಪಾರ್ಥಾ
ಸ್ತಥಾನ್ಯೇಷಾಂ ದೈವತಾನಾಂ ಗೃಹೇಷು ॥೩.೨೪॥

ಕುಬೇರ ದೈತ್ಯಾವೇಶದಿಂದ ಮುಕ್ತನಾಗಿ ಶಾಂತಭಾವದಿಂದ ಕೂಡಿ ಸಂತುಷ್ಟನಾಗಿ ಪಾಂಡವರಿಗೆ ಆವಾಸ ಮಾಡಲು ತನ್ನ ಮನೆಯನ್ನೇ ಕೊಟ್ಟ. ಪಾಂಡವರು ಅಲ್ಲಿಯೂ ಬೇರೆ ಬೇರೆ ದೇವತೆಗಳ ಮನೆಗಳಲ್ಲಿಯೂ ವಾಸ ಮಾಡಿದರು.

ನಿವಾತ ಕವಚ ವಧ

ತತ್ರೈವ ತೇಷಾಂ ವಸತಾಂ ಮಹಾತ್ಮನಾ-
ಮಾನಂದಿನಾಮಬ್ದ ಚತುಷ್ಟಯೇ ಗತೇ ।
ಪಂಚಾಬ್ದಮಧ್ಯಾಪ್ಯ ಮಹಾಂತಿ ಚಾಸ್ತ್ರಾ-
ಣೀಂದ್ರೋ ಗುರ್ವರ್ಥಂ ಫಲ್ಗುನೇನಾರ್ಥಿತೋಽಭೂತ್ ॥೩.೨೫॥

ದೇವತೆಗಳ ಅರಮನೆಗಳಲ್ಲಿ ಪಾಂಡವರು ಆನಂದದಿಂದ ವಾಸ ಮಾಡುತ್ತಿದ್ದಂತೆ ನಾಲ್ಕು ವರ್ಷಗಳು ಕಳೆದಾಗ ಐದು ವರ್ಷಕಾಲ ಮಹಾ ಅಸ್ತ್ರಗಳನ್ನು ಅರ್ಜುನನಿಗೆ ದೇವೇಂದ್ರ ಕಲಿಸಿ ಗುರುದಕ್ಷಿಣೆಯ ಬಗ್ಗೆ ಅರ್ಜುನನಿಂದ ಪ್ರಾರ್ಥಿತನಾದ.

ವಧಂ ವವ್ರೇ ಸ್ವಶತ್ರೂಣಾಮಿಂದ್ರಃ ಪಾರ್ಥಾತ್ಸ್ವರೂಪತಃ ।
ನಿವಾತಕವಚಾಖ್ಯಾನಾಮೇಷಾಂ ಬ್ರಹ್ಮಾ ವರಂ ದದೌ ॥೩೨೬॥
ಅವಧ್ಯತಾಂ ಸುರೈರ್ದೈತ್ಯೈರ್ಗಂಧರ್ವೈರ್ಯಕ್ಷ ರಾಕ್ಷಸೈಃ ।
ಪುನರಿಂದ್ರೇಣಾರ್ಥಿತೋಽದಾಜ್ಜಹೀಮಾನ್ ನರದೇಹವಾನ್ ॥೩೨೭॥

ದೇವೇಂದ್ರ ತನ್ನ ಅವತಾರನೆ ಆದ ಅರ್ಜುನನಿಂದ ನಿವಾತಕವಚರೆಂಬ ಹೆಸರಿನ ತನ್ನ ಶತ್ರುಗಳ ವಧೆಯನ್ನು ಗುರುದಕ್ಷಿಣೆಯಾಗಿ ಕೇಳಿದ. ಏಕೆಂದರೆ ನಿವಾತಕವಚರಿಗೆ ಬ್ರಹ್ಮ ದೇವದಾನವ ಗಂಧರ್ವ ಯಕ್ಷರಾಕ್ಷಸರಿಂದ ಅವಧ್ಯತ್ವ ವರ ನೀಡಿದ್ದ. ಬ್ರಹ್ಮನೇ ಪುನಃ ಇಂದ್ರನಿಂದ ಪ್ರಾರ್ಥಿತನಾಗಿ ನೀನು ಇವರನ್ನು ಮನುಷ್ಯ ಶರೀರಿಯಾಗಿ ಸಂಹರಿಸು ಎಂದು ವರ ನೀಡಿದ್ದ.

ನಿವಾತಕವಚರು ಪ್ರಹ್ಲಾದನ ತಮ್ಮನಾದ ಸಂಹ್ಲಾದನ ಮಕ್ಕಳು ಸಮುದ್ರಮಧ್ಯದಲ್ಲಿ ಅವರ ಪಟ್ಟಣ. ಅದು ಅಮರಾವತಿಯನ್ನೂ ಮೀರಿಸುತ್ತ ದೇವತೆಗಳ ವಾಸಸ್ಥಾನವಾಗಿತ್ತು. ಅದನ್ನು ಇವರು ಆಕ್ರಮಿಸಿದ್ದರು. ಬ್ರಹ್ಮನಲ್ಲಿ ಅವಧ್ಯತ್ವ ವರವನ್ನು ಕೇಳುವಾಗ ಮಾನವರು ದುರ್ಬಲರೆಂದು ಅವರಿಂದ ಅವಧ್ಯತ್ವವನ್ನು ಕೇಳಿರಲಿಲ್ಲ.

ಇತಿ ತೇನಾರ್ಜುನಂ ಶಕ್ರಃ ಸ್ವಾತ್ಮಾನಂ ನರದೇಹಗಂ ।
ಜಗಾದ ತಾನ್ ಜಹೀತ್ಯೇವ ಕಿರೀಟಂ ಸ್ವಂ ನಿಬಧ್ಯ ಚ ॥೩೨೮॥

ಅದರಿಂದ ಇಂದ್ರ ಮನುಷ್ಯ ದೇಹದಲ್ಲಿರುವ ತನ್ನ ಅವತಾರನೆ ಆದ ಅರ್ಜುನನಿಗೆ ತನ್ನ ಕಿರೀಟವನ್ನು ತೊಡಿಸಿ ನಿವಾತಕವಚರನ್ನು ಕೊಲ್ಲು ಎಂದ.

ಐಂದ್ರಂ ಸ್ಯಂದನಮಾರುಹ್ಯ ಪಾರ್ಥೋ ಮಾತಲಿಸಂಯುತಃ ।
ಗಾಂಡೀವಂ ಧನುರಾದಾಯ ಯಯೌ ಹಂತುಂ ಮಹಾಸುರಾನ್ ॥೩೨೯॥

ಅರ್ಜುನ ಮಾತಲಿ ಸಮೇತನಾಗಿ ಇಂದ್ರನ ರಥವನ್ನೇರಿ ಗಾಂಡೀವ ಧನುಸ್ಸನ್ನು ಹಿಡಿದು ಮಹಾ ಅಸುರರನ್ನು ಕೊಲ್ಲಲು ಹೊರಟ.

ಶಂಖಂ ದದುಸ್ತಸ್ಯ ದೇವಾ ದೇವದತ್ತಃ ಸ ಶಂಖಿರಾಟ್ ।
ನಾದಯನ್ ಶಂಖಘೋಷೇಣ ಧನುರ್ಜ್ಯಾಸ್ಫಾರಯನ್ಮಹತ್ ॥೩೩೦॥
ದಧಾನಃ ಕುಂಡಲೇ ದಿವ್ಯೇ ಶಕ್ರದತ್ತೇ ಸುಭಾಸ್ವರೇ ।
ಆಸಸಾದ ಪುರಂ ದಿವ್ಯಂ ದೈತ್ಯಾನಾಮಿಂದ್ರನಂದನಃ ॥೩೩೧॥

ಅರ್ಜುನನಿಗೆ ದೇವತೆಗಳು ಒಂದು ಶಂಖವನ್ನು ಕೊಟ್ಟರು. ಅದು ದೇವದತ್ತ ಎಂಬ ಶ್ರೇಷ್ಠವಾದ ಶಂಖ. ಇಂದ್ರದತ್ತವಾದ ಹೊಳೆಯುವ ಕುಂಡಲಗಳನ್ನು ಧರಿಸಿ ಶಂಖನಾದದಿಂದ ಎಲ್ಲ ದಿಕ್ಕುಗಳನ್ನೂ ಪ್ರತಿಧ್ವನಿಗೊಳಿಸುತ್ತ ಮಹಾಧನುಸ್ಸನ್ನೂ

ಠೇಂಕರಿಸುತ್ತ ದಾನವರ ದಿವ್ಯನಗರವನ್ನು ಸೇರಿದ ಅರ್ಜುನ.

ತಸ್ಯ ಶಂಖಧ್ವನಿಂ ಶ್ರುತ್ವಾ ಗಾಂಡೀವಸ್ಯ ಚ ನಿಃಸ್ವನಂ ।
ಅಭಿಸಸ್ರುರ್ಮಹಾವೀರ್ಯಾ ನಿವಾತಕವಚಾಸುರಾಃ ॥೩೩೨॥

ಅರ್ಜುನನ ಶಂಖಧ್ವನಿಯನ್ನೂ ಗಾಂಡೀವದ ಧ್ವನಿಯನ್ನೂ ಕೇಳಿ ಮಹಾಬಲಿಷ್ಠರಾದ ನಿವಾತಕವಚಾಸುರರು ಇದಿರಿಗೆ ಬಂದರು.

ತಿಸ್ರಃ ಕೋಟ್ಯೋ ದಾನವಾನಾಂ ಸ್ವಯಂಭುವರಗರ್ವಿತಾಃ ।
ನಾನಾಯುಧೈ ರಣೇ ಪಾರ್ಥಮಭ್ಯವರ್ಷನ್ ಸುಸಂಹತಾಃ ॥೩೩೩॥

ಬ್ರಹ್ಮವರದಿಂದ ದೃಪ್ತರಾದ ಮೂರು ಕೋಟಿ ದಾನವರು ಚೆನ್ನಾಗಿ ಸಂಘಟಿತರಾಗಿ ಯುದ್ಧದಲ್ಲಿ ಅರ್ಜುನನ ಮೇಲೆ ನಾನಾ ಆಯುಧಗಳ ಮಳೆಗರೆದರು.

ತೇಷಾಂ ಸ ಶಸ್ತ್ರಾಣಿ ಕಿರೀಟಮಾಲೀ
ನಿವಾರ್ಯ ಗಾಂಡೀವಧನುಃಪ್ರಮುಕ್ತೈಃ ।
ಶರೈಃ ಶಿರಾಂಸಿ ಪ್ರಚಕರ್ತ ವೀರೋ
ಮಹಾಸ್ತ್ರಶಿಕ್ಷಾಬಲಸಂಪ್ರಯುಕ್ತೈಃ ॥೩೩೪॥

ಕಿರೀಟ ಹಾರಗಳನ್ನು ಧರಿಸಿದ ವೀರ ಅರ್ಜುನ ನಿವಾತಕವಚರ ಶಸ್ತ್ರಗಳನ್ನು ತಡೆದು ಗಾಂಡೀವ ಧನುಸ್ಸಿನಿಂದ ಮಹಾ ಅಸ್ತ್ರಗಳ ಅಭ್ಯಾಸ ಬಲದಿಂದ ಚೆನ್ನಾಗಿ ಬಾಣ ಪ್ರಯೋಗ ಮಾಡಿ ಅವರ ತಲೆಗಳನ್ನು ಕತ್ತರಿಸಿದ.

ಸರ್ವೇ ಹತಾಸ್ತೇನ ಮಹಾರಥೇನ
ತೇ ದಾನವಾಃ ಸೋಽಪಿ ಯಯೌ ತಥಾನ್ಯಾನ್ ।
ಪೌಲೋಮ ಕಾಲೇಯ ಗಣಾಭಿಧಾನಾನ್
ಷಷ್ಟಿಂ ಸಹಸ್ರಾಣಿ ಮಹಾರಥಾನಾಂ ॥೩೩೫॥

ಮಹಾರಥನಾದ ಅರ್ಜುನ ಆ ಎಲ್ಲ ದಾನವರನ್ನೂ ಸಂಹರಿಸಿದ. ಹಾಗೇ ಮಹಾರಥರಾದ ಅರವತ್ತು ಸಾವಿರ ಪೌಲೋಮ ಕಾಲೇಯ ಗಣಗಳೆಂಬ ಹೆಸರಿನ ಬೇರೆ ದಾನವರನ್ನೂ ಆಕ್ರಮಿಸಿದ

ದನುಪುತ್ರನಾದ ವೈಶ್ವಾನರನೆಂಬ ದಾನವನಿಗೆ ನಾಲ್ಕು ಮಂದಿ ಹೆಣ್ಣುಮಕ್ಕಳು - ಹಿರಣ್ಯಾಕ್ಷನ ಮಡದಿಯಾದ ಉಪದಾನವಿ, ಕ್ರತು ಮುನಿಯ ಮಡದಿ ಹಯಶಿರಾ ಮತ್ತು ಕಶ್ಯಪನ ಮಡದಿಯರಾದ ಪುಲೋಮ ಕಾಲಿಕಾ ಎಂಬ ಇಬ್ಬರು ಕನ್ಯೆಯರು. ಕಾಲಿಕೆಗೇ ಕಾಲಕೆ ಕಾಲಿ ಎಂದೂ ಹೆಸರಿದೆ. ಪುಲೋಮೆಯ ಮಕ್ಕಳು ಪೌಲೋಮರು. ಕಾಲಿಕೆಯ ಮಕ್ಕಳು ಕಾಲಿಕೇಯರು. ಕಾಲಕೇಯರು ಕಾಲೇಯರು, ಕಾಲಕಂಜರು ಎಂದು

ಅನೇಕ ಹೆಸರುಗಳು ಇವರಿಗೆ ಇವೆ. ದಕ್ಷಪುತ್ರಿ ಕಾಲೆಯಲ್ಲಿ ಜನಿಸಿದ ಕಾಲೇಯರು ಬೇರೆ. ವಿಪ್ರಚಿತ್ತಿಯ ಮಗಳಾದ ಕಾಲೆಯಲ್ಲಿ ಬೇರೆ ಕಾಲೇಯರು ಹುಟ್ಟಿದ್ದಾರೆ. ವೃತ್ರಾಸುರನ ಆಶ್ರಯದಲ್ಲಿ ಒಂದು ಕಾಲಕೇಯಗಣವಿದ್ದಿತು. ವೃತ್ರವಧೆಯಾದ ಬಳಿಕ ಇವರು ಸಮುದ್ರದಲ್ಲಿ ಹಗಲು ಹೊತ್ತಿನಲ್ಲಿ ಅಡಗಿ ರಾತ್ರಿ ಮುನಿಗಳನ್ನು ಹಿಡಿದು ತಿನ್ನುತ್ತಿದ್ದರು. ಅಗಸ್ತ್ಯರು ಸಮುದ್ರವನ್ನು ಏಕಾಪೋಶನ ಮಾಡಿದಾಗ ದೇವತೆಗಳೆ ಇವರನ್ನು ಕೊಂದರು. ಪ್ರಕೃತ ಪೌಲೋಮ ಕಾಲಕೇಯರೂ ಬ್ರಹ್ಮನ ವರದಿಂದ ಭೂಗರ್ಭದಲ್ಲಿಯೂ ನೀರಿನೊಳಗೂ ಆಕಾಶದಲ್ಲಿಯೂ ಎಲ್ಲೆಡೆ ಸಂಚರಿಸಬಲ್ಲ ಹಿರಣ್ಯಪುರವೆಂಬ ಪಟ್ಟಣವನ್ನು ಮಾಡಿಕೊಂಡರು. ಪುಲೋಮೆಯೂ ಕಾಲಿಕೆಯೂ ಅದಕ್ಕಾಗಿ ಸಾವಿರ ವರ್ಷ ತಪಸ್ಸು ಮಾಡಿದ್ದರು. ಮಕ್ಕಳಿಗೆ ದೇವದಾನವ ಗಂಧರ್ವ ಯಕ್ಷ ರಾಕ್ಷಸರಿಂದ ಅವಧ್ಯತ್ವ ವರವನ್ನು ಕೇಳಿ ಪಡೆದಿದ್ದರು. ಮಾನವರು ದುರ್ಬಲರೆಂದು ಅವರನ್ನು ಉಪೇಕ್ಷೆ ಮಾಡಿದ್ದರು. ಅದರಿಂದ ಇಂದ್ರ ಬ್ರಹ್ಮನ ಆದೇಶದಂತೆ ಮಾನವನಾಗಿ ಅರ್ಜುನ ರೂಪದಿಂದ ಬಂದು ಅವರನ್ನು ಪಾಶುಪತಾಸ್ತ್ರದಿಂದ ಸಂಹರಿಸಿದ.

ತಾನಸ್ತ್ರಶಸ್ತ್ರಾಣ್ಯಭಿವರ್ಷಮಾಣಾನ್
ಧನಂಜಯಃ ಪಾಶುಪತಾಸ್ತ್ರತೋ ದ್ರಾಕ್ ।
ದಗ್ಧ್ವಾ ಯಯೌ ಪುನರೇವೇಂದ್ರಸದ್ಮ
ತಂ ಸಸ್ವಜೇ ಪ್ರೀತಿಯುತಶ್ಚ ಶಕ್ರಃ ॥೩೩೬॥

ಆ ಪೌಲೋಮ ಕಾಲಿಕೇಯರು ಅಸ್ತ್ರಶಸ್ತ್ರಗಳ ಮಳೆ ಸುರಿಸುತ್ತಿದ್ದಂತೆಯೆ ಅರ್ಜುನ ಅವರನ್ನು ಬೇಗನೆ ಪಾಶುಪತಾಸ್ತ್ರದಿಂದ ಸುಟ್ಟು ಪುನಃ ಸ್ವರ್ಗಲೋಕಕ್ಕೆ ಹೋದ. ಇಂದ್ರ ಸಂತುಷ್ಟನಾಗಿ ಅವನನ್ನು ಆಲಿಂಗಿಸಿದ.

ಅರ್ಜುನ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದರೂ ಶತ್ರುಗಳು ಸಾಯಲಿಲ್ಲ. ಆಗ ಪಾಶುಪತಾಸ್ತ್ರವನ್ನು ಪ್ರಯೋಗಿಸಿದ. ಮೂರು ತಲೆ ಒಂಬತ್ತು ಕಣ್ಣುಗಳು ಆರು ಕೈಗಳುಳ್ಳ ಅಸ್ತ್ರದೇವತೆ ಪ್ರತ್ಯಕ್ಷನಾದ. ಅವನಿಗೆ ನಮಸ್ಕರಿಸಿ ಶತ್ರುಗಳ ಮೇಲೆ ಕಳಿಸಿದಾಗ ಒಡನೆಯೆ ಎಲ್ಲೆಡೆ ಹುಲಿಸಿಂಹ ಮುಂತಾದ ನಾನಾ ಮೃಗಗಳು ದೇವ ಋಷಿ ಗಂಧರ್ವ ಪಿಶಾಚಿ ಯಕ್ಷ ಮುಂತಾದ ನಾನಾ ಬಗೆಯ ಆಕೃತಿಗಳು ತುಂಬಿಕೊಂಡು ಮುಹೂರ್ತ ಮಾತ್ರದಲ್ಲಿ ಎಲ್ಲ ದಾನವರನ್ನೂ ಕೊಂದುವು. ಬಳಿಕ ಅರ್ಜುನ ಸ್ವರ್ಗಕ್ಕೆ ಹಿಂತಿರುಗಿದ. ಇಂದ್ರ ಅವನನ್ನು ಆಲಿಂಗಿಸಿ ನೆತ್ತಿಯನ್ನು ಆಘ್ರಾಣಿಸಿದ.

ಯಯುರಂಧಂತಮಶ್ಚಾಪಿ ಸರ್ವೇ ದೇವದ್ವಿಷೋಽಸುರಾಃ ।

ಅಥಾನುಜ್ಞಾಪ್ಯ ಪಿತರಂ ರಥೇನೇಂದ್ರೇಣ ಭಾಸ್ವತಾ ।
ಸೋದರ್ಯಾಣಾಂ ಸಕಾಶಂ ಸ ಯಯೌ ವಜ್ರಧರಾತ್ಮಜಃ ॥೩೩೭॥

ದೇವಶತ್ರುಗಳಾದ ಆ ಅಸುರರೆಲ್ಲರೂ ಅಂಧಂತಮಸ್ಸಿಗೆ ಹೋದರು. ಅರ್ಜುನ ಇಂದ್ರನ ಅನುಮತಿ ಪಡೆದು ಹೊಳೆಯುವ ಇಂದ್ರರಥದಿಂದ ಸೋದರರ ಬಳಿಗೆ ಬಂದ.

ಆಯಾಂತಮೀಕ್ಷ್ಯ ಬೀಭತ್ಸುಂ ಮುಮುದುರ್ಭ್ರಾತರೋಽಧಿಕಂ ।
ಊಷುಶ್ಚ ಚತುರೋಽಬ್ದಾಂಸ್ತೇ ಪುನರ್ಮೇರೌ ಪ್ರಮೋದಿನಃ ॥೩೩೮॥

ಅರ್ಜುನ ಬಂದುದನ್ನು ನೋಡಿ ಸೋದರರು ಬಹಳ ಸಂತೋಷಪಟ್ಟರು. ಬಳಿಕ ಪುನಃ ಮೇರುವಿನಲ್ಲಿ ನಾಲ್ಕು ವರ್ಷ ಆನಂದದಿಂದ ವಾಸ ಮಾಡಿದರು.

'ಪುನಃ ಮೇರುವಿನಲ್ಲಿ ನಾಲ್ಕು ವರ್ಷ' ಎಂದುದರಿಂದ ಹಿಂದೆಯೂ ಮೇರುವಿನಲ್ಲಿಯೆ ಕುಬೇರ ಭವನದಲ್ಲಿ ಪಾಂಡವರು ವಾಸಮಾಡಿದ್ದರೆಂದೂ ಭೀಮ ಪಂಚವರ್ಣದ ಕಮಲಗಳನ್ನು ಮೇರುವಿನಲ್ಲಿಯೆ ಸಂಪಾದಿಸಿದನೆಂದೂ ಹೇಳಿದಂತಾಯಿತು.

ಕಥಾಭಿರ್ವಾಸುದೇವಸ್ಯ ಧ್ಯಾನೇನಾಭ್ಯರ್ಚನೇನ ಚ ।
ಯಯೌ ಕಾಲಃ ಸುಖೇನೈವ ತೇಷಾಂ ವಿಷ್ಣುರತಾತ್ಮನಾಂ ॥೩೩೯॥

ಹರಿಯಲ್ಲಿಯೆ ನೆಟ್ಟ ಮನಸ್ಸುಳ್ಳ ಪಾಂಡವರಿಗೆ ಹರಿಕಥೆಗಳಿಂದಲೂ ಧ್ಯಾನ ಪೂಜೆಗಳಿಂದಲೂ ಸುಖವಾಗಿಯೆ ಕಾಲ ಕಳೆಯಿತು.

ನಹುಷ ಪ್ರಶ್ನೆ

ನೈವ ಶತ್ರೂನನುತ್ಸಾದ್ಯ ನಾನಾದಾಯ ಮಹದ್ಯಶಃ ।
ನಾಕೃತ್ವಾ ವಾಸುದೇವಾಜ್ಞಾಂ ರಾಜ್ಞಾಂ ಮುಖ್ಯಗತಿರ್ಭವೇತ್ ॥೩೪೦॥

ಶತ್ರುಗಳನ್ನು ನಾಶಮಾಡದೆ ಮಹಾ ಯಶಸ್ಸನ್ನು ಸಂಪಾದಿಸದೆ ಹರಿಯಾಜ್ಞೆಯನ್ನು ನಡೆಸದೆ ರಾಜರಿಗೆ ಮುಖ್ಯವಾದ ಸದ್ಗತಿ ದೊರೆಯಲಾರದು.

ತದನ್ಯೇಷಾಂ ತು ವರ್ಣಾನಾಂ ಕ್ಷಮಾ ಬಾಹ್ಯೇಷು ಶತ್ರುಷು ।
ಪ್ರಾಯೋ ಧರ್ಮ ಇತಿ ಪ್ರೋಕ್ತೋ ಹರೇರಾಜ್ಞಾಖಿಲಸ್ಯ ಚ ॥೩೪೧॥

ಬೇರೆ ವರ್ಣದವರಿಗೆ ಬಾಹ್ಯ ಶತ್ರುಗಳಲ್ಲಿ ಪ್ರಾಯಃ ಕ್ಷಮೆಯೆ ಧರ್ಮವೆಂದು ಉಕ್ತವಾಗಿದೆ. ನಾಲ್ಕು ವರ್ಣದವರಿಗೂ ನಾಲ್ಕು ಆಶ್ರಮದವರಿಗೂ ಶ್ರುತಿಸ್ಮೃತಿ ರೂಪವಾದ ಹರಿಯಾಜ್ಞೆಯನ್ನು ಅನುಸರಿಸುವುದೇ ಧರ್ಮವೆನಿಸುತ್ತದೆ.

ಬ್ರಾಹ್ಮಣಾದಿ ಬೇರೆ ವರ್ಣದವರಿಗೆ ಕಾಮಾದಿ ಅಂತಃ ಶತ್ರುಗಳ ನಿಗ್ರಹ ಧರ್ಮವೆ. ಬಾಹ್ಯ ಶತ್ರುಗಳನ್ನು ನಿಗ್ರಹಿಸುವ ಕಾರ್ಯ ಕ್ಷತ್ರಿಯರದು.

ಅದರಿಂದ ಬೇರೆ ವರ್ಣದವರು ಬಾಹ್ಯ ಶತ್ರುಗಳಲ್ಲಿ ಕ್ಷಮೆ ತೋರಬೇಕು. ಆದರೂ ವೇನನ ಕಾಲದಲ್ಲಿ ಅಧರ್ಮ ಅತಿಯಾಗಿ ಬೆಳೆದಾಗ ಮುನಿಗಳು ಅವನನ್ನು ಹುಂಕಾರದಿಂದ ಕೊಂದರು. ಹಾಗೆ ಕೆಲಮೊಮ್ಮೆ ಬಾಹ್ಯ ಶತ್ರುನಿಗ್ರಹವೂ ಬೇರೆವರ್ಣದವರಿಗೆ ಧರ್ಮವಾಗುವುದರಿಂದ 'ಪ್ರಾಯಃ' ಎಂದಿದೆ.

ಇತಿ ಭೀಮವಚಃ ಶ್ರುತ್ವಾ ಸಸೋದರ್ಯೋ ಯುಧಿಷ್ಠಿರಃ ।
ರಾಕ್ಷಸಸ್ಕಂಧಮಾರೂಢಃ ಕೃಷ್ಣಯಾ ಚಾಯಯೌ ಪುನಃ ॥೩೪.೨॥

ಹೀಗೆ ಭೀಮನ ಮಾತನ್ನು ಕೇಳಿ ಧರ್ಮರಾಜ ದ್ರೌಪದೀ ಸಮೇತನಾಗಿ ಸೋದರರೊಂದಿಗೆ ಘಟೋತ್ಕಚ ಮುಂತಾದ ರಾಕ್ಷಸರ ಹೆಗಲನ್ನೇರಿ ಪುನಃ ಹಿಮಾಲಯದ ಕಡೆಗೆ ಬಂದ.

ಪಾದೇಷು ತೇಷು ನಿವಸತ್ಸು ಹಿಮಾಲಯಸ್ಯ
ಯಾಮ್ಯಾಶ್ರಿತೇಷು ಪವಮಾನಸುತಃ ಕದಾಚಿತ್ ।
ಧನ್ವೀ ಮೃಗಾನನುಚರನ್ ಸಹಸಾಸಸಾದ
ಹ್ಯಾಯೋಃ ಸುತಂ ನಹುಷಮಾಜಗರೋರುರೂಪಂ ॥೩೪೩॥

ಹಿಮಾಲಯದ ದಕ್ಷಿಣ ತಪ್ಪಲಿನಲ್ಲಿ ಪಾಂಡವರು ವಾಸಮಾಡುತ್ತಿದ್ದಾಗ ಒಂದು ದಿನ ಭೀಮ ಬಿಲ್ಲು ಹಿಡಿದು ಮೃಗಗಳನ್ನು ಬೇಟೆಯಾಡುತ್ತ ಹೆಬ್ಬಾವಿನ ರೂಪದಲ್ಲಿದ್ದ ನಹುಷನ ಬಳಿಗೆ ಬಂದ.

ಪೂರ್ವಂ ಹಿ ವೃತ್ರವಧತೋಽಂಬುಜನಾಲತಂತು-
ಸಂಸ್ಥೇ ಶಚೀಪ್ರಣಯಿನಿ ಪ್ರವಿಚಿಂತ್ಯ ದೇವಾಃ ।
ಚಕ್ರುಸ್ತ್ರಿಲೋಕಪತಿಮಾಯುಸುತಂ ವರಂ ಚ
ದತ್ತ್ವಾಕ್ಷಿಗೋಚರತಪೋಽಸ್ಯ ಬಲಂ ಚ ಸರ್ವಂ ॥೩೪೪॥

ಹಿಂದೆ ವೃತ್ರವಧೆಯ ನಿಮಿತ್ತದಿಂದ ಇಂದ್ರ ಕಮಲನಾಳದ ತಂತುವಿನಲ್ಲಿ ಇದ್ದಾಗ ದೇವತೆಗಳು ವಿಚಾರಮಾಡಿ ನಹುಷನನ್ನು ಅವನ ಕಣ್ಣಿಗೆ ಬಿದ್ದವರ ತಪಸ್ಸೂ ಬಲವೂ ಪೂರ್ತಿಯಾಗಿ ಅವನಿಗೆ ಬರುವಂತೆ ವರನೀಡಿ ಮೂಲೋಕದ ಅಧಿಪತಿಯನ್ನಾಗಿ ಮಾಡಿದರು.

ದೇವೇಂದ್ರ ಅಪರೋಕ್ಷ ಜ್ಞಾನಿ. ಅವನಿಗೆ ಸ್ವೋತ್ತಮಾಪರಾಧ ಹೊರತು ಬೇರೆ ಕರ್ಮಲೇಪ ಇಲ್ಲ. ಆದರೂ ಪ್ರಾರಬ್ಧ ಫಲಕೊಡುತ್ತಿದೆ. ಅದಕ್ಕೆ ವೃತ್ರವಧೆ ಕೇವಲ ಸೂಚಕವಷ್ಟೆ, ಆದರಿಂದ ಇಂದ್ರ ತನ್ನ ಪ್ರಾರಬ್ಧವನ್ನು ಅನುಭವಿಸುವ ಈ ಕಾಲದಲ್ಲಿ ನರಸಿಂಹ ಮಂತ್ರ ಜಪದಿಂದ ಹೆಚ್ಚಿನ ಪುಣ್ಯ ಸಂಪಾದಿಸಲು ಸಹಾಯವಾಯಿತು ವೃತ್ರಹತ್ಯೆ. ಈಗ ಇಂದ್ರಪದವಿ

ಖಾಲಿಯಾಯಿತು. ಬೇರೆ ದೇವತೆಗಳು ಅದನ್ನು ಏರಲಿಲ್ಲ. ಅನ್ಯರ ಪದವಿಗಳನ್ನು ಏರದಿರುವುದು ದೇವತೆಗಳ ನಿಯಮ. ನಹುಷನಿಗೆ ಇಂದ್ರ ಪದವಿಯೇರುವ ಪ್ರಾರಬ್ಧವಿದ್ದಿತ್ತು. ಹೀಗೆ ವಿಚಾರಮಾಡಿ ನಹುಷನಿಗೆ ತಮ್ಮ ತಪೋಬಲವಿತ್ತು ಬಲಪಡಿಸಿ ಇಂದ್ರನ ಸಿಂಹಾಸನದಲ್ಲಿ ಕುಳ್ಳಿರಿಸಿದರು ದೇವತೆಗಳು.

ಸ ಸರ್ವಸುರವಿಪ್ರೇಂದ್ರತಪಶ್ಚ ಬಲಮಕ್ಷಯಂ ।
ಅವಾಪ್ಯ ವವೃಧೇ ನಿತ್ಯಂ ದರ್ಪಾದೈಚ್ಛಚ್ಛಚೀಮಪಿ ॥೩೪೫॥

ನಹುಷ ಎಲ್ಲ ದೇವ ಋಷಿಗಳ ತಪಸ್ಸನ್ನೂ ಅಕ್ಷಯವಾದ ಬಲವನ್ನೂ ಹೊಂದಿ ಸದಾ ಮೆರೆಯುತ್ತ ದರ್ಪದಿಂದ ಬೀಗಿದ. ದರ್ಪದಿಂದ ಶಚಿಯನ್ನೂ ಬಯಸಿದ.

ರಾಜಸವಾದ ಕಾಮ್ಯಕರ್ಮ ಮಾಡಿದ ರಾಜಸ ಜೀವರು ಮೇರುವಿನ ತುದಿಯಲ್ಲಿರುವ ಬೇರೆ ಅಮರಾವತಿಯಲ್ಲಿ ಸಾಂಕಲ್ಪಿಕ ಸ್ವರ್ಗದ ಅಧಿಪತಿಯಾಗಿರುವ ಇಂದ್ರನ ಪದಚ್ಯುತಿ ಮಾಡುತ್ತಾರೆ. ಆಗ ಹಿಂದಿನ ಶಚಿ ಹೊಸ ಇಂದ್ರನ ತೊಡೆಯನ್ನೇರುವ ವಿಚಿತ್ರ ಪ್ರಸಂಗ ಪದ್ಮಪುರಾಣೋಕ್ತ ಭಗವದ್ಗೀತಾ ಮಹಾತ್ಮ್ಯದಲ್ಲಿ ಬರುತ್ತದೆ. ಈ ಶಚಿಯಾರನಿಯತ ಪತ್ನಿಯೂ ಅಲ್ಲ. ಅಂತರಿಕ್ಷ ಲೋಕಕ್ಕಿಂತ ಮೇಲೆ ಇರುವ ಸ್ವರ್ಗಲೋಕದಲ್ಲಿ ಪುರಂದರ ಇಂದ್ರನಾಗಿ ಮೆರೆಯುತ್ತಾನೆ. ಅವನ ಪತ್ನಿ ಶಚೀದೇವಿ ಅವನ ನಿಯತ ಪತ್ನಿ. ಆದರೂ ನಹುಷ ತಾನು ಇಂದ್ರನ ಪದವಿಗೆ ಬಂದವನು, ನ್ಯಾಯವಾಗಿ ಶಚಿ ತನಗೆ ರಾಣಿಯಾಗಬೇಕೆಂದು ಹೇಳಿಕೊಳ್ಳುತ್ತಾನೆ.

ಸ ಇಂದ್ರವಚನಾಚ್ಛಚ್ಯಾ ಮಹರ್ಷಿಗಣವಾಹನೇ ।
ನಿಯುಕ್ತೋ ವಂಚನಾಯೈವ ವಾಹಯಾಮಾಸ ತಾನೃಷೀನ್ ॥೩೪೬॥

ಶಚಿ ಇಂದ್ರನ ಮಾತಿನಂತೆ ನಹುಷನನ್ನು ವಂಚಿಸುವುದಕ್ಕಾಗಿ ಮಹರ್ಷಿ ಸಮೂಹದಿಂದ ವಾಹನ ಹೊರಿಸಲು ಹೇಳಿದಳು. ನಹುಷ ಆ ಋಷಿಗಳಿಂದ ತನ್ನ ವಾಹನವನ್ನು ಹೊರಿಸಿದ.

ಶಚಿ ಹೇಳಿದ್ದು ವಂಚನೆಗಾಗಿ ಎನ್ನುವುದು ನಹುಷನಿಗೆ ತಿಳಿಯಲಿಲ್ಲ. ಏಕೆಂದರೆ ಋಷಿಗಳಿಂದ ವಾಹನ ಹೊರಿಸುವುದು ಅವನಿಗೆ ಹೊಸತೇನಲ್ಲ. ಅವನು ಅಷ್ಟರವರೆಗೆ ಸಹಸ್ರಾರು ಬ್ರಹ್ಮರ್ಷಿಗಳಿಂದ ವಾಹನ ಹೊರಿಸಿಕೊಂಡಿದ್ದಾನೆ. 'ಬ್ರಹ್ಮರ್ಷೀಣಾಂ ಸಹಸ್ರಂ ಹಿ ಉವಾಹ ಶಿಬಿಕಾಂ ಮಮ' (ವನ 183.36) ವಸ್ತುತಃ ಸ್ವೋತ್ತಮಸ್ತ್ರೀಯಾದ ಶಚಿಯನ್ನು ನಹುಷ ಬಯಸುವಾಗ ಋಷಿಗಳು ಹೇಗಾದರೂ ಅವನನ್ನು ನಿಗ್ರಹಿಸುವರೆಂದು ಶಚಿಗೆ ನಂಬಿಕೆ ಇದ್ದಿತು. ಆದರಿಂದ ಅವಳು ವಂಚನೆಗಾಗಿ ಹೇಳಿದಳು ಋಷಿಗಳಿಂದ

ಹೊರಿಸಿಕೊಂಡು ಬಂದರೆ ನಿನ್ನನ್ನು ನಾನು ಸೇರುವೆನೆಂದು. ಈ ಉಪಾಯವನ್ನು ಹೇಳಿಕೊಟ್ಟವನು ಇಂದ್ರನೆ. ಶಚಿಯ ಮೊರೆ ಕೇಳಿ ದುರ್ಗಾದೇವಿ ಉಪಶ್ರುತಿಯ ಮೂಲಕ ಅವಳನ್ನು ಮಾನಸ ಸರೋವರದ ಬಳಿಗೆ ತಂದು ಇಂದ್ರನ ಭೆಟ್ಟಿ ಮಾಡಿಸಿದಳು. ಶಚಿಯಿಂದ ಎಲ್ಲ ವೃತ್ತಾಂತವನ್ನು ಕೇಳಿ ತಿಳಿದ ಇಂದ್ರ ಮೇಲಿನಂತೆ ಉಪಾಯ ಮಾಡಲು ತಿಳಿಸಿದ.

ಸ ಶಚೀಪ್ರತಿಷೇಧಾರ್ಥಮಗಸ್ತ್ಯೇನ ಮಹಾತ್ಮನಾ ।
ವೇದಪ್ರಾಮಾಣ್ಯವಿಷಯೇ ಪೃಷ್ಟೋ ನೇತ್ಯಾಹ ಮೂಢಧೀಃ ।
ಪ್ರಮಾಣಮಿತಿ ತೇನೋಕ್ತೇ ಶಿರಸ್ಯೇನಂ ಪದಾಹನತ್ ॥೩೪೭॥

ನಹುಷನಿಗೆ ಶಚೀ ಸಂಗವಾಗದಂತೆ ಮಾಡುವುದಕ್ಕಾಗಿ ಮಹಾತ್ಮ ಅಗಸ್ತ್ಯ ವೇದ ಪ್ರಾಮಾಣ್ಯ ವಿಷಯದಲ್ಲಿ ಪ್ರಶ್ನೆ ಮಾಡಿದ. ಮೂಢಬುದ್ಧಿಯ ನಹುಷ ಪ್ರಮಾಣವಲ್ಲ ಎಂದ. ಪ್ರಮಾಣವೆ ಎಂದು ಅಗಸ್ತ್ಯ ವಾದಿಸಿದಾಗ ನಹುಷ ಅವನ ತಲೆಯನ್ನು ಕಾಲಿಂದ ತುಳಿದ.

[1]ನಹುಷ ವೇದವನ್ನು ಪ್ರಮಾಣವೆಂದು ಒಪ್ಪಿದರೆ ಪರಸ್ತ್ರೀ ಗಮನವನ್ನು ವೇದ ನಿಷೇಧಿಸಿರುವಾಗ ನೀನು ಹೇಗೆ ಮಾಡುವೆ ಎಂದು ಆಕ್ಷೇಪಿಸಿ ಶಚೀಸಂಗವನ್ನು ನಿವಾರಿಸುತ್ತೇನೆ. ಅಪ್ರಮಾಣವೆಂದು ವಾದಿಸಿದರೆ ನಾನು ಪ್ರಮಾಣವೆಂದು ವಾದಿಸಿ ಅವನನ್ನು ಸಿಟ್ಟಿಗೆಬ್ಬಿಸಿ ಅಪರಾಧ ಮಾಡಿಸಿ ಶಾಪನೀಡಿ ಶಚೀಸಂಗವಾಗದಂತೆ ಮಾಡುತ್ತೇನೆ, ಎನ್ನುವುದು ಅಗಸ್ತ್ಯರ ಅಭಿಪ್ರಾಯವಾಗಿತ್ತು.

ವೇದ ಪ್ರಾಮಾಣ್ಯದ ಬಗ್ಗೆ ವಿವಾದ ಮಾಡಿದ್ದು ಮಹಾಭಾರತದಲ್ಲಿ ಉದ್ಯೋಗಪರ್ವದಲ್ಲಿ ಬರುತ್ತದೆ. (ಅ.17) ನಹುಷ ಆಗ ಕಾಮಾತುರನಾಗಿದ್ದರಿಂದ ಬುದ್ಧಿಮೋಹ ಹೊಂದಿ ವೇದವನ್ನು ಅಪ್ರಮಾಣವೆಂದ. ಪ್ರಮಾಣ ಎಂದರೆ ವೇದ ಪರಸ್ತ್ರೀ ಗಮನವನ್ನು ನಿಷೇಧಿಸಿದೆ ಎನ್ನುತ್ತ ಅವರು ನನ್ನನ್ನು ತಡೆಯುತ್ತಾರೆ ಎಂದು ಅದಕ್ಕೆ ಅವಕಾಶ ನೀಡಬಾರದೆಂದು. ನಹುಷ ತಾನು ಹೀಗೆ ಹೇಳಿದರೂ ಕೊನೆಯಲ್ಲಿ ಋಷಿ ಶಾಪಕ್ಕೆ ಗುರಿಯಾಗುವೆನೆಂದು ತಿಳಿಯದಷ್ಟು ಮೂಢನೂ ಆಗಿದ್ದ. ಅದರಿಂದ

'ಮುನಿಯೇ! ನಿನ್ನ ವಾದ ಸಾಕು. ಮುಂದೆ ನಡೆ, ನಡೆ! 'ಸರ್ಪ ಸರ್ಪ!' ಎಂದು ಗದರುತ್ತ ಕಾಲಿಂದ ತುಳಿದ.

---

1. ವೇದಾಃ ಪ್ರಮಾಣಮಿತಿ ವದತಿ ಚೇತ್ ನ ಪರಸ್ತ್ರಿಯಂ ಗಚ್ಛೇದಿತಿ ಶ್ರುತ್ಯೈವ ಶಚೀಗಮನಾಶಾಂ ನಿವಾರಯಾಮಿ। ಅಪ್ರಮಾಣಮಿತಿ ವದತಿ ಚೇತ್ ನೇತಿ ವದಾಮಿ। ತದಾಸೌ ಕುಪಿತೋ ಮಯಿ ದ್ರೋಹಂ ಕರೋತಿ ಚೇತ್ ಶಾಪಂ ದಾಪಯಾಮಿ। ಅತ ಉಭಯಥಾಪಿ ಶಚೀಸಂಗಮಂ ನಿವಾರಯಾಮೀತಿ ಬುದ್ಧ್ಯಾ ಪ್ರಶ್ನಾಂತರಂ ವಿಹಾಯ ವೇದಪ್ರಾಮಾಣ್ಯ ವಿಷಯೇ ಪ್ರಶ್ನಃ ಕೃತ ಇತಿ ಭಾವಃ। –ವಾದಿರಾಜೀಯ

ತದಾ ಭೃಗುಂ ತಸ್ಯ ಜಟಾಸು ಲೀನಂ
ಕದಾಪಿ ತಸ್ಯಾಕ್ಷಿಪಥಂ ನ ಯಾತಂ ।
ಆವಿಶ್ಯ ಕಂಜಪ್ರಭವಃ ಶಶಾಪ
ವ್ರಜಾಶು ಪಾಪಾಜಗರತ್ವಮೇವ ॥೩೪೮॥

ಆಗ ನಹುಷನಿಗೆ ಎಂದೂ ದೃಷ್ಟಿಗೋಚರನಾಗದೆ ಅಗಸ್ತ್ಯನ ಜಟೆಯಲ್ಲಿ ಅಡಗಿ ಕುಳಿತಿದ್ದ ಭೃಗುಮುನಿಯಲ್ಲಿ ಬ್ರಹ್ಮ ಆವೇಶಗೊಂಡು 'ಪಾಪಿಯೆ, ನೀನು ಕೂಡಲೆ ಹೆಬ್ಬಾವಾಗೆ'ಂದು ಶಪಿಸಿದ.

ಅದೃಷ್ಟೇನ ತತೋಽಸ್ಮ್ಯಕ್ತೋ ಧ್ವಂಸ ಸರ್ಪೇತಿ ವೈ ರುಷಾ ।

(ವನ. 183.37)

'ಅದೃಶ್ಯನಾದ ಮುನಿಯಿಂದ ನಾನು 'ಸರ್ಪನಾಗಿ ಭೂಲೋಕಕ್ಕೆ ಹೋಗು' ಎಂದು ಶಪ್ತನಾದೆ' ಎಂದು ಧರ್ಮರಾಜನ ಮುಂದೆ ನಹುಷ ಹೇಳುತ್ತಾನೆ. ಅದೃಶ್ಯನಾದ ಮುನಿ ಎಂದರೆ ಅಗಸ್ತ್ಯನಲ್ಲ. [1]ಭೃಗುಮುನಿ. ಅವನು ನಹುಷನಿಗೆ ಶಾಪ ಕೊಡಲು ಹೇಗೆ ಸಮರ್ಥನಾದನೆಂದರೆ ಅವನು ನಹುಷನ ದೃಷ್ಟಿಗೆ ಎಂದೂ ಬೀಳಲಿಲ್ಲ. ಅಗಸ್ತ್ಯನ ಜಡೆಯಲ್ಲಿ ಅಡಗಿ ಕುಳಿತಿದ್ದ. ಆದರೂ ಎಲ್ಲ ದೇವತೆಗಳ ಮುನಿಗಳ ಬಲವನ್ನು ಹೊಂದಿದ್ದ ನಹುಷನನ್ನು ಒಬ್ಬ ಭೃಗುಮುನಿ ಏನು ಮಾಡಬಲ್ಲ ಎಂದು ಸರ್ವಶಕ್ತನಾದ ಬ್ರಹ್ಮ ಅವನಲ್ಲಿ ಆವೇಶಗೊಂಡು ಶಪಿಸಿದ. ಏಕೆಂದರೆ ಜಡೆಗೆ ಒದ್ದಾಗ ಭೃಗುಮುನಿಗೂ ಅವನೊಳಗಿದ್ದ ಬ್ರಹ್ಮನಿಗೂ ಪಾದಸ್ಪರ್ಶವಾಗಿತ್ತು. ಅಗಸ್ತ್ಯನಲ್ಲಿಯೆ ಬ್ರಹ್ಮ ಆವೇಶಗೊಂಡು ಶಾಪಕೊಡಬಹುದಾಗಿತ್ತು. ಆದರೆ, ನಹುಷನ ದೃಷ್ಟಿಗೆ ಬಿದ್ದ ಅಗಸ್ತ್ಯನಲ್ಲಿ ತಪಸ್ಸಿನ ಬಲವೆಲ್ಲ ಹೊರಟುಹೋಗಿತ್ತು. ತಪೋಬಲವಿಲ್ಲದವರಲ್ಲಿ ಬ್ರಹ್ಮನ ಆವೇಶವೂ ಬರುವುದಿಲ್ಲ.[2]

ಮಹಾಭಾರತದ ಔತ್ತರೇಯ ದಾಕ್ಷಿಣಾತ್ಯ ಪಾಠಗಳೆರಡಲ್ಲಿಯೂ

1. ಬಹುಮಹರ್ಷೀಣಾಂ ದೇವಾನಾಂ ಚ ತಪಸಾ ಬಲೇನ ಚಾಭಿವೃದ್ಧಂ ನಹುಷಂ ಕೇವಲಂ ಭೃಗುಶಾಪೋಪಿ ಸ್ಪಷ್ಟುಂ ನ ಶಕ್ನೋತೀತಿ ಧಿಯಾ ಭೃಗುಹೃದಯಸ್ಥಃ ಬ್ರಹ್ಮೈವ ಶಶಾಪೇತಿ ಜ್ಞೇಯಂ। ನಿರಪರಾಧಿನಃ ಶಾಪದಾನಾಯೋಗಾತ್ ಶಿರಸ್ಯೇನಂ ಪದಾಹನದಿತ್ಯುಕ್ತಂ। ಪದಾ ಶಿರಸಿ ತಾಡನೇ ಶಿರೋಜಟಾಂತಃ ಸ್ಥಿತಭೃಗೋಸ್ತಂದತರ್ಗತ ಬ್ರಹ್ಮಣಶ್ಚ ತಾಡನಮಭೂತ್। ಅತೋಽಪರಾಧಿನಿ ನೃಪೇ ಶಾಪೋಽಪ್ಯುಚಿತ ಇತಿ ಭಾವಃ। -ವಾದಿರಾಜೀಯ

2. ಸರ್ವದೇವ ಮುನೀಂದ್ರ ತಪಸೋಪಬೃಂಹಿತಸ್ಯ ಭೃಗುಶಾಪವಿಷಯತ್ವಾಯೋಗಾತ್ ಕಂಜಪ್ರಭವ ಪ್ರವೇಶೋಽಪೇಕ್ಷಿತಃ। ತಪೋಹೀನೇಷು ಚತುರ್ಮುಖ ಪ್ರವೇಶಯೋಗ್ಯತಾಭಾವಾತ್ ಅಗಸ್ತ್ಯ ಪರಿತ್ಯಾಗೇನ ಭೃಗು ಪ್ರವೇಶಃ। -ತಾಮ್ರಪರ್ಣೀಯ

'ಅಗಸ್ತ್ಯೇನ ತತೋಽಸ್ಮ್ಯಕ್ತೋ ಧ್ವಂಸ ಸರ್ಪೇತಿ ವೈ ರುಷಾ'

ಎಂದೇ ಪಾಠ ಕಾಣುತ್ತದೆ. ಆದರೆ ಲಕ್ಷ್ಮಾಲಂಕಾರದಲ್ಲಿ 'ಅದೃಷ್ಟೇನ' ಎಂದು ಪಾಠ ಹಿಡಿದು 'ಅದೃಷ್ಟೇನ ತತ ಇತ್ಯತ್ರ ಅದೃಷ್ಟೇನ ಅಗಸ್ತ್ಯಾಂತಃಸ್ಥಿತೇನ ಅದೃಷ್ಟೇನ ಬಹ್ಮಣಾ' ಎಂದು ಅಲ್ಲಿ ವ್ಯಾಖ್ಯಾನ ಮಾಡಲಾಗಿದೆ.

ಷಷ್ಠೇ ಕಾಲೇ ಯಸ್ತ್ವಯಾಸಾದಿತಃ ಸ್ಯಾತ್
ಸ ತೇ ವಶಂ ಯಾತು ಬಲಾಧಿಕೋಽಪಿ ।
ಯದಾ ಗೃಹೀತಂ ಪುರುಷಂ ನಿಹಂತುಂ
ನ ಶಕ್ನ್ಯಸೇ ಯದಿ ಸ ತ್ವದ್ಗ್ರಹೀತಃ ।
ಶಕ್ತೋಽಪಿ ನಾತ್ಮಾನಮಭಿಪ್ರಮೋಚಯೇತ್
ತದಾಸ್ಯ ಸ್ಯಾತ್ತ್ವತ್ತಪೋಽಗ್ರ್ಯಂ ಬಲಂ ಚ ॥೩೪॥

ಷಷ್ಠಕಾಲದಲ್ಲಿ ಯಾರು ನಿನಗೆ ಸಿಗುವನೋ ಅವನು ಮಹಾಬಲಿಷ್ಠನಾದರೂ ನಿನ್ನ ವಶಕ್ಕೆ ಬರಲಿ. ನೀನು ಹಿಡಿದ ವ್ಯಕ್ತಿಯನ್ನು ನಿನಗೆ ಕೊಲ್ಲಲು ಆಗದಿದ್ದಾಗ, ಆ ವ್ಯಕ್ತಿ ಶಕ್ತನಾಗಿದ್ದರೂ ತನ್ನನ್ನು ಬಿಡಿಸಿಕೊಳ್ಳದಿದ್ದಾಗ ನಿನ್ನ ಉತ್ತಮವಾದ ತಪಸ್ಸು ಬಲವೆಲ್ಲವೂ ಅವನಲ್ಲಿಯೆ ಹೋಗಿ ಸೇರುತ್ತದೆ.

[1]ಷಷ್ಠಕಾಲವೆಂದರೆ ಹಗಲನ್ನು ಎಂಟು ಭಾಗಮಾಡಿದರೆ ಆರನೇ ಭಾಗ ಅಂದರೆ ಸಾಯಂಕಾಲವೆಂದು ಜನಾರ್ದನೀಯ ಫಲಾರೀಯ ಪ್ರಮಾಣ ಸಂಗ್ರಹ ಮುಂತಾದ ವ್ಯಾಖ್ಯಾನಗಳು ಹೇಳಿವೆ. ಆದರೆ ವರದರಾಜೀಯದಲ್ಲಿ 'ಆಜಗರ ವ್ರತ ಪಾರಣಕಾಲ' ಎಂದಿದೆ. ನಹುಷನೀಗ 'ಆಜಗರ' ಎಂಬ ಉಪವಾಸ ವ್ರತ ಮಾಡುತ್ತಾನೆ. ಅದರ ಕೊನೆಯಲ್ಲಿ ಪಾರಣೆಗೆ ನಿನಗೆ ಯಾವುದೇ ಮೃಗ ಅಥವಾ ಮಾನವ ಸಿಕ್ಕಿದರೂ ನಿನ್ನ ವಶನಾಗುತ್ತಾನೆ ಎಂದು ಬ್ರಹ್ಮನ ವರ. 'ಭೀಮ, ನೀನು ಸುಂದರನಾಗಿರುವಿ. ನನ್ನ ವಂಶದ ಹೆಮ್ಮೆಯ ಪುತ್ರನಾಗಿದ್ದಿ. ನನಗೆ ನಿನ್ನನ್ನು ಹಿಡಿದುಕೊಳ್ಳಲು ಮನ ಒಪ್ಪುತ್ತಿಲ್ಲ. ಆದರೇನು? ನನ್ನ ಈ ಕ್ರೂರಸರ್ಪಜನ್ಮ ಬಂದಿದ್ದರಿಂದ ಬ್ರಹ್ಮನ ವರದಾನವೂ ಇರುವುದರಿಂದ ನಿನ್ನನ್ನು ನುಂಗುತ್ತಿದ್ದೇನೆ ' ಎನ್ನುತ್ತಾನೆ ನಹುಷ ।

ವಾದಿರಾಜೀಯದಲ್ಲಿ ಎರಡೂವರೆ ದಿನಗಳ ಕೊನೆಯಲ್ಲಿ ಬರುವ ರಾತ್ರಿ, ಷಷ್ಠಕಾಲ ಎಂದಿದೆ. ಎರಡು ದಿನಗಳಿಗೆ ಎರಡು ಹಗಲು ಎರಡು

1. ಷಷ್ಠೇ ಕಾಲೇ ಸಾಯಂಕಾಲೇ । -ಜನಾರ್ದನೀಯ
ಷಷ್ಠೇ ಕಾಲೇ ಆಜಗರವ್ರತ ಪಾರಣಾಕಾಲೇ । -ವರದರಾಜೀಯ
ಷಷ್ಠೇ ಕಾಲೇ ಸಾರ್ಧದಿನದ್ವಯಾಂತಿಮ ರಾತ್ರೌ। -ವಾದಿರಾಜೀಯ

ರಾತ್ರಿಗಳು. ಅನಂತರ ಒಂದು ಹಗಲು. ಇವು ಐದು ಕಾಲಗಳು. ಅನಂತರದ ರಾತ್ರಿ ಆರನೇ ಕಾಲ. ಆರನೇ ಭೋಜನ ಕಾಲ. ದಿನಕ್ಕೆ ಎರಡು ಬಾರಿ ಭೋಜನಕಾಲಗಳು, ಹಗಲು ಮತ್ತು ರಾತ್ರಿ ಎಂದು. ಪ್ರಾಯಶಃ ಆಜಗರ ವ್ರತವೂ ಹೀಗೇ ಇರಬೇಕು, ಐದು ಕಾಲ ಉಪವಾಸವಿದ್ದು ಆರನೇ ಕಾಲದಲ್ಲಿ ಪಾರಣ ಎಂದು.

ಸರ್ವದೇವಮುನೀಂದ್ರಾಣಾಂ ಯತ್ತಪಸ್ತ್ವಮುಪಾಶ್ರಿತಮ್ ।
ತಚ್ಚ ಸರ್ವಂ ತಮೇವೈತಿ ನಾತ್ರ ಕಾರ್ಯಾ ವಿಚಾರಣಾ ॥೩೫೦॥

ಎಲ್ಲ ದೇವತೆಗಳ ಮುನಿಗಳ ಯಾವ ತಪೋಬಲ ನಿನ್ನಲ್ಲಿ ಬಂದು ಸೇರಿರುವುದೋ ಅದೆಲ್ಲವೂ ಅವನನ್ನೇ ಸೇರುತ್ತದೆ. ಇದರಲ್ಲಿ ವಿಚಾರ ಮಾಡುವುದೇ ಬೇಡ.

ಯದಾ ಪ್ರಶ್ನಾಂಸ್ತ್ವದೀಯಾಂಶ್ಚ ಕಶ್ಚಿತ್ ಪರಿಹರಿಷ್ಯತಿ ।
ದಿವಂ ಗಂತಾಸಿ ಚ ತದಾ ವಿಸೃಜ್ಯಾಜಗರೀಂ ತನುಂ ॥೩೫೧॥
ಸ್ಮೃತಿಶ್ಚ ಮತ್ಪ್ರಸಾದೇನ ಸರ್ವದಾ ತೇ ಭವಿಷ್ಯತಿ ॥೩೫೨॥

ಯಾವಾಗ ನಿನ್ನ ಪ್ರಶ್ನೆಗಳನ್ನು ಒಬ್ಬನು ಪರಿಹರಿಸುವನೋ ಆಗ ನೀನು ಹಾವಿನ ಶರೀರವನ್ನು ಬಿಟ್ಟು ಸ್ವರ್ಗಕ್ಕೆ ಹೋಗುವಿ. ನನ್ನ ಅನುಗ್ರಹದಿಂದ ನಿನಗೆ ಪೂರ್ವ ಜನ್ಮದ ಸ್ಮರಣೆ ಸದಾ ಇರುತ್ತದೆ.

ಭೃಗುದೇಹಗತೇನೈವಂ ಶಪ್ತಃ ಕಮಲಯೋನಿನಾ ।
ಪಪಾತಾಜಗರೋ ಭೂತ್ವಾ ನಹುಷಃ ಕ್ಷಣಮಾತ್ರತಃ ॥೩೫೩॥

ಭೃಗು ಮುನಿಯ ಶರೀರದಲ್ಲಿದ್ದ ಬ್ರಹ್ಮನಿಂದ ಹೀಗೆ ಶಾಪ ಹೊಂದಿದ ನಹುಷ ಕ್ಷಣ ಮಾತ್ರದಲ್ಲಿ ಹೆಬ್ಬಾವಾಗಿ ಭೂಮಿಯಲ್ಲಿ ಬಿದ್ದ.

ಇಂದ್ರೋಽಪ್ಯವಾಪ ಸ್ವಂ ಸ್ಥಾನಮಿಷ್ಟ್ವಾ ವಿಷ್ಣುಂ ವಿಪಾಪಕಃ ।
ಧರ್ಮವೃದ್ಧ್ಯರ್ಥಮೇವೈತತ್ ಪಾಪಮಾಸೀಚ್ಛಚೀಪತೇಃ ॥೩೫೪॥

ಇಂದ್ರ ಪಾಪರಹಿತನಾಗಿದ್ದರೂ ವಿಷ್ಣುವನ್ನು ಯಾಗದಿಂದ ಆರಾಧಿಸಿ ತನ್ನ ಸ್ಥಾನವನ್ನು ಹೊಂದಿದ. ವೃತ್ರಹತ್ಯಾಪಾಪ ಇಂದ್ರನಿಗೆ ಹೀಗೆ ಪುಣ್ಯವೃದ್ಧಿಗೇ ಕಾರಣವಾಯಿತು.

ಅಪರೋಕ್ಷಜ್ಞಾನಿಯಾದ ದೇವೇಂದ್ರನಿಗೆ ಜ್ಞಾನೋತ್ತರ ಪಾಪಕರ್ಮಗಳಿಂದ ಲೇಪವಿಲ್ಲ. ಆದರಿಂದ ಅವನು ಪಾಪರಹಿತನೆ. ಆದರೂ ಮಹಾವ್ರತಯಾಗವನ್ನು ಮಾಡಿದ. ಅದರಲ್ಲಿ ವಿಶ್ವಾಮಿತ್ರರೆ ಹೋತೃಗಳಾಗಿ ಮೂರುಬಾರಿ ಬೃಹತೀಸಹಸ್ರವೆಂಬ ಶಸ್ತ್ರಮಂತ್ರದಿಂದ ಶಂಸನ ಮಾಡಿದರು. ಶ್ರೀಹರಿ ಮಾಡಿಸಿಕೊಂಡ. ಅದರಿಂದ ಇಂದ್ರನಿಗೆ ಮಹಾಪುಣ್ಯ ಲಭಿಸಿತು. ಸಾವಿರ ವರ್ಷ ಕಾಲ ನರಸಿಂಹ ಮಂತ್ರವನ್ನೂ ಜಪಿಸಿ ಅಪಾರವಾದ ಪುಣ್ಯ

ಸಂಪಾದಿಸಿದ. ಹೀಗೆ ಲೋಕದೃಷ್ಟಿಯಿಂದ ಪಾಪಕರ್ಮವೆನಿಸಿದ ಬ್ರಹ್ಮಹತ್ಯೆಯೂ ಇಂದ್ರನಿಗೆ ಮಹತ್ತಾದ ಪುಣ್ಯಕ್ಕೇ ಕಾರಣವಾಯಿತು.

ನ ಹಿ ಲೋಕಾವನಂ ಪಾಪಂ ತ್ರೈಲೋಕ್ಯೇಶಸ್ಯ ವಜ್ರಿಣಃ ।
ವೃತ್ರಂ ಹತ್ವಾ ಮಹಾನಾಸೇತ್ಯಾದಿವೇದಪದಂ ಚ ಯತ್ ॥೩೫॥

ಏಕೆಂದರೆ ಮೂಲೋಕದೊಡೆಯನಾದ ದೇವೇಂದ್ರ ಲೋಕರಕ್ಷಣೆಗಾಗಿ ಮಾಡಿದ ವೃತಹತ್ಯೆ ಪಾಪಹೇತುವಾಗದು ತಾನೆ? ಇಂದ್ರ ವೃತ್ರನನ್ನು ಕೊಂದು ಪುಣ್ಯ ಗಳಿಸಿದನೆಂದು ವೇದವಚನವಿದೆ.

ವೃತ್ರ ಬ್ರಾಹ್ಮಣ. ಅವನನ್ನು ಕೊಂದುದು ಬ್ರಹ್ಮಹತ್ಯೆ ಎನ್ನುವುದು ಲೋಕದೃಷ್ಟಿಯಿಂದ. ಲೋಕರಕ್ಷಣೆಗಾಗಿ ಲೋಕೇಶ್ವರನಾದ ಇಂದ್ರ ವೃತ್ರನನ್ನು ಕೊಲ್ಲಲೇ ಬೇಕಾಗಿತ್ತು. ಅದರಿಂದ ವಸ್ತುತಃ ಅದು ಮಹಾಪಾಪವಾಗಲಿಲ್ಲ. ಭಾಗವತದಲ್ಲಿ ಬ್ರಹ್ಮಹತ್ಯೆ ಅಟ್ಟಿಸಿಕೊಂಡು ಬಂದಿತೆಂದು ಹೇಳಿದೆ ಹೊರತು ಇಂದ್ರನನ್ನು ಹಿಡಿಯಲಿಲ್ಲ. ಅದರಿಂದ ವೇದ ಅವನನ್ನು ಕೊಂಡಾಡಿದೆ. ಇಂದ್ರೋ ವೃತ್ರಂ ಹತ್ವಾ ಮಹಾನಭವತ್। 'ಇಂದ್ರ ವೃತ್ರನನ್ನು ಕೊಂದರೂ ಪುಣ್ಯಗಳಿಸಿದ' ಎಂದು 'ಮಹಾನ್ ಆಸ' ಎಂದರೆ ಪುಣ್ಯಶಾಲಿಯೆನಿಸಿದನೆಂದರ್ಥ.

''ಕ್ವಚಿತ್ ಪಾಪಂ ಚ ಪುಣ್ಯಾನಾಂ ವೃದ್ಧಯೇ ಭವತಿ ಸ್ಫುಟಂ ।
ವೃತ್ರಹತ್ಯಾ ಯಥೇಂದ್ರಸ್ಯ ಜಾತಾ ಧರ್ಮಾಭಿವೃದ್ಧಯೇ ॥೩೬॥
ದೇವಾನಾಂ ವಾ ಮುನೀನಾಂ ವಾ ಭವೇದೇವಂ ನ ವೈ ನೃಣಾಂ ।
ಪಾಪಂ ಯತ್ ಪುಣ್ಯಮೇವೈತದಸುರಾಣಾಂ ವಿಲೋಮತಃ ।''
ಏವಂ ಸ್ಕಾಂದೇ ಹಿ ವಚನಂ ಪಾಪಂ ನೈತಚ್ಛುಚೀಪತೇಃ ॥೩೭॥

ಕೆಲವೆಡೆ ಪಾಪಕರ್ಮವೂ ಪುಣ್ಯವೃದ್ಧಿಗೇ ಕಾರಣವಾಗುವುದು ಸ್ಪಷ್ಟವಿದೆ. ಏಕೆಂದರೆ ಇಂದ್ರನಿಗೆ ವೃತ್ರಹತ್ಯಾ ಎಂಬ ಪಾಪಕರ್ಮ ಪುಣ್ಯವೃದ್ಧಿಗೆ ಕಾರಣವಾಯಿತು. ದೇವತೆಗಳ ಮತ್ತು ಮುನಿಗಳ ವಿಷಯದಲ್ಲಿ ಮಾತ್ರ ಇದು ಹೀಗೆ. ಮನುಷ್ಯರ ವಿಷಯದಲ್ಲಿ ಅಲ್ಲ. ಅಸುರರಿಗೆ ಇವಕ್ಕೆ ವ್ಯತಿರಿಕ್ತವಾಗಿ ಪುಣ್ಯಕರ್ಮವೂ ಪಾಪ ವೃದ್ಧಿಗೆ ಕಾರಣವಾಗುತ್ತದೆ ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ. ಅದರಿಂದ ವೃತ್ರಹತ್ಯೆ ಇಂದ್ರನಿಗೆ ಪಾಪಕರವಾಗಲಿಲ್ಲ.

ದೇವತೆಗಳಿಗೆ ಪಾಪಕರ್ಮವೂ ಪುಣ್ಯಕ್ಕೆ ಕಾರಣ. ಮಾನವರಿಗೆ ಪಾಪಕರ್ಮ ಪಾಪಕರವೆ, ಪುಣ್ಯಕರ್ಮ ಪುಣ್ಯಕರವೆ. ಅಸುರರಿಗೆ ಪುಣ್ಯಕರ್ಮವೂ ಪಾಪಕರವೇ. ಏಕೆಂದರೆ

'ಧರ್ಮೋ ಭವತ್ಯಧರ್ಮೋಪಿ ಕೃತೋ ಭಕ್ತೈಸ್ತವಾಚ್ಯುತ

ಪಾಪಂ ಭವತಿ ಧರ್ಮೋಽಪಿ ಯೋ ನ ಭಕ್ತ್ಯೈ ಕೃತೋ ಹರೇಃ'

ಎಂದು ಸದಾಚಾರ ಸ್ಮೃತಿಯಲ್ಲಿ ಹೇಳಿದಂತೆ ದೇವತೆಗಳು ಪಾಪಕರ್ಮ ಮಾಡಿದರೂ ಲೋಕರಕ್ಷಣಾದಿ ದ್ವಾರಾ ವಿಷ್ಣು ಪ್ರೀತಿಯಾಗಲೆಂದು ಭಕ್ತಿಯಿಂದಲೆ ಮಾಡುವುದರಿಂದ ಅವರಿಗೆ ಪಾಪಕರ್ಮವೂ ಪುಣ್ಯಕರವೆ. ಮಾನವರು ಫಲಾಪೇಕ್ಷೆಯಿಂದ ಮಾಡುವುದರಿಂದ ಪಾಪಕರ್ಮ ಪಾಪಕರವೆ. ಪುಣ್ಯಕರ್ಮ ಪುಣ್ಯಕರವೆ. ಅಸುರರು ವಿಷ್ಣುದ್ವೇಷದಿಂದಲೆ ಪುಣ್ಯಕರ್ಮ ವನ್ನಾಡುತ್ತಾರೆ. ಉದಾ. ಸಾಲ್ವರಾಜ ಮಕ್ಕಳಾದ ಹಂಸಡಿಭಕರ ಸಹಾಯದಿಂದ ಶ್ರೀಕೃಷ್ಣನನ್ನು ನಿಗ್ರಹಿಸುವ ಉದ್ದೇಶದಿಂದಲೆ ರಾಜಸೂಯ ಯಾಗ ಮಾಡಲು ಹೊರಟ. ಅದರಿಂದ ಪಾಪದ ಕೊಡ ತುಂಬಿತು. ಕೃಷ್ಣನ ಕೈಯಿಂದಲೆ ಮಕ್ಕಳೊಂದಿಗೆ ಹತನಾಗಿ ತಮಸ್ಸನ್ನು ಹೊಂದಿದ.

ನಾನ್ಯಸ್ಯ ಪದಮಾಪ್ಸ್ಯಂತಿ ತದ್ ದೇವಾನಾಂ ವ್ರತಂ ಪರಂ ।
ತಸ್ಮಾತ್ತೇ ನಹುಷಂ ಶಕ್ರಪದೇ ವಿದಧುರೀಶ್ವರಾಃ ॥೩೫॥

ಇನ್ನೊಬ್ಬರ ಪದವಿಯನ್ನು ಏರದಿರುವುದು ದೇವತೆಗಳಿಗೆ ಒಂದು ಮಹಾ ವ್ರತ. ಅದರಿಂದ ದೇವತೆಗಳು ತಾವು ಇಂದ್ರ ಪದವಿಯನ್ನೇರಲು ಶಕ್ತರಾಗಿದ್ದರೂ ನಹುಷನನ್ನು ಆ ಸ್ಥಾನದಲ್ಲಿ ಕುಳ್ಳಿರಿಸಿದರು.

ತಸ್ಮಿನ್ನೇವಂ ನಿಪತಿತೇ ಬ್ರಹ್ಮಣಃ ಶಾಪಕಾರಣಾತ್ ॥೩೫॥
ಅಷ್ಟಾವಿಂಶತಿಮೇ ಪ್ರಾಪ ಯುಗೇ ಭೀಮಸ್ತಮುಲ್ಬಣಂ ।
ಜಾನನ್ನೇವ ತದೀಯಂ ತತ್ತಪ ಆದಾತುಮೀಪ್ಸಯಾ ॥೩೬೦॥

ನಹುಷ ಬ್ರಹ್ಮನ ಶಾಪಪ್ರಯುಕ್ತ ಪತಿತನಾದಾಗ ಇಪ್ಪತ್ತೆಂಟನೇ ದ್ವಾಪರದಲ್ಲಿ ಭೀಮ ಅತನನ್ನು ಕ್ರೂರವಾದ ಹೆಬ್ಬಾವೆಂದು ತಿಳಿದಿದ್ದೂ ಅವನ ತಪಸ್ಸನ್ನು ಸೆಳೆದುಕೊಳ್ಳುವ ಇಚ್ಛೆಯಿಂದ ಬಳಿಗೆ ಬಂದ.

ಯತ್ತತ್ಸುರಾಣಾಂ ಸರ್ವೇಷಾಂ ಮುನೀನಾಂ ಚ ತಪಃ ಸ್ಥಿತಂ ।
ತದ್ಗ್ರಹೀತುಂ ವಶಗವದಿಚ್ಛಯೈವಾಸ ಮಾರುತಿಃ ॥೩೬೧॥

ನಹುಷನಲ್ಲಿದ್ದ ಎಲ್ಲ ದೇವತೆಗಳ ಮತ್ತು ಮುನಿಗಳ ತಪಸ್ಸನ್ನು ಸ್ವೀಕರಿಸುವುದಕ್ಕಾಗಿ ಭೀಮ ಸ್ವೇಚ್ಛೆಯಿಂದಲೆ ನಹುಷನ ವಶನಾದ.

ದೇವಾನಾಂ ಹಿ ನೃಜಾತಾನಾಮಲ್ಪಂ ವ್ಯಕ್ತಂ ಭವೇದ್ಬಲಂ ।
ಇಚ್ಛಯಾ ವ್ಯಕ್ತತಾಂ ಯಾತಿ ವಾಯೋರನ್ಯೇಷು ತಚ್ಚ ನ ॥೩೬೨॥
ನಿತ್ಯಂ ವ್ಯಕ್ತಾ ಗುಣಾ ವಿಷ್ಣೋರಿತಿ ಶಾಸ್ತ್ರಸ್ಯ ನಿರ್ಣಯಃ ।
ಏವಮನ್ಯೇಽಪಿ ಹಿ ಗುಣಾ ಮಾನುಷಾದಿಷು ಜನ್ಮಸು ॥೩೬೩॥

ಬೇರೆ ದೇವತೆಗಳು ಮನುಷ್ಯರಾಗಿ ಹುಟ್ಟಿದಾಗ ಅವರ ದಿವ್ಯಬಲ ಸ್ವಲ್ಪವೆ

ವ್ಯಕ್ತವಾಗುತ್ತದೆ. ವಾಯುವಿಗೆ ಇಚ್ಛೆಯಿಂದ ವ್ಯಕ್ತವಾಗುತ್ತದೆ. ಅನ್ಯರಲ್ಲಿ ಅದೂ ಇಲ್ಲ. ಆದಾನಾದಿ ಕಾರಣದಿಂದಲೆ ವ್ಯಕ್ತವಾಗಬೇಕು. ಶ್ರೀಹರಿಗೆ ಗುಣಗಳು ಸದಾ ವ್ಯಕ್ತವೆ ಆಗಿರುತ್ತವೆ. ಇದು ಶಾಸ್ತ್ರನಿರ್ಣಯ. ಹೀಗೇ ದೇವತೆಗಳಿಗೆ ಮನುಷ್ಯಾದಿ ಜನ್ಮಗಳಲ್ಲಿ ಬೇರೆ ಜ್ಞಾನಾನಂದಾದಿ ಗುಣಗಳೂ ಸ್ವಲ್ಪವೇ ವ್ಯಕ್ತವಾಗುತ್ತವೆ.

ದೇವಾನಾಂ ಮಾನುಷಾದೌ ತು ಶಕ್ಯೇಽಪ್ಯವ್ಯಕ್ತತಾ ಕೃತೇಃ ।
ಧರ್ಮವೃದ್ಧಿರ್ಭವೇತ್ತೇಷಾಂ ಪ್ರೀತೋ ಭವತಿ ಕೇಶವಃ ॥೩೬೪॥

ದೇವತೆಗಳು ಮನುಷ್ಯಾದಿ ಜನ್ಮಗಳಲ್ಲಿ ತಮ್ಮ ದಿವ್ಯಗುಣಗಳನ್ನು ವ್ಯಕ್ತಮಾಡಿಕೊಳ್ಳಲು ಶಕ್ತರಾಗಿದ್ದರೂ ವ್ಯಕ್ತಮಾಡಿಕೊಳ್ಳದಿರುವುದರಿಂದ ಅವರಿಗೆ ಪುಣ್ಯವೃದ್ಧಿಯಾಗುತ್ತದೆ. ವಿಷ್ಣು ಸುಪ್ರೀತನಾಗುತ್ತಾನೆ.

ತನ್ಮಾನುಷೇ ಬಲೇ ತಸ್ಯ ವರಾದ್ವಾರಿತವತ್ಸ್ಥಿತೇ ।
ದೈವಂ ಬಲಂ ಸುಶಕ್ತೋಽಪಿ ವ್ಯಕ್ತಂ ಚಕ್ರೇ ನ ಮಾರುತಿಃ ॥೩೬೫॥

ಅದರಿಂದ ಭೀಮ ತನ್ನ ಮಾನುಷಬಲ ಬ್ರಹ್ಮನ ವರದಿಂದ ಸ್ವಲ್ಪ ಪ್ರತಿಬದ್ಧವಾದಂತಿರಲು ದೈವಬಲವನ್ನು ವ್ಯಕ್ತಮಾಡಲು ಸುಶಕ್ತನಾದರೂ ವ್ಯಕ್ತಮಾಡಿಕೊಳ್ಳಲಿಲ್ಲ.

ಭೀಮೋ ನ ಶಶಾಕ ವಿಚೇಷ್ಟಿತುಂ (ವನ. 180.30)
ಗೃಹಿತೇ ವ್ಯಜಹಾತ್ ಸತ್ವಂ ವರದಾನ ವಿಮೋಹಿತಃ (ವನ 180.31)

'ಹೆಬ್ಬಾವಿನಿಂದ ಬಿಡಿಸಿಕೊಳ್ಳಲು ಭೀಮಶಕ್ತನಾಗಲಿಲ್ಲ. ವರದಾನ ಪ್ರಯುಕ್ತ ಅವನು ಮೋಹಗೊಂಡ' ಎಂದು ಮಹಾಭಾರತ ಹೇಳಿದೆ. ಶಕ್ತನಾದರೂ ಯಾರು ಬಿಡಿಸಿಕೊಳ್ಳುವುದಿಲ್ಲವೋ ಅವನಲ್ಲಿ ನಿನ್ನ ತಪೋಬಲವೆಲ್ಲ ಹೋಗಿ ಸೇರುತ್ತದೆ ಎಂದು ಬ್ರಹ್ಮಶಾಪ. ಈ ವಿರೋಧ ಪರಿಹಾರಕ್ಕೆ ನಿರ್ಣಯ ಹೇಳುತ್ತಿದೆ. ಭೀಮನ ಮಾನುಷಬಲ ಅಂದರೆ ಮನುಷ್ಯ ಜನ್ಮದಲ್ಲಿ ವ್ಯಕ್ತಮಾಡಲು ಯೋಗ್ಯವಾದ ಬಲವೂ ಬ್ರಹ್ಮನ ವರದಾನದಿಂದ ಪ್ರತಿಬದ್ಧವಾಗದು. ಆದರೂ ಸ್ವೇಚ್ಛೆಯಿಂದ ವ್ಯಕ್ತಮಾಡದಿದ್ದುದರಿಂದ ಸ್ವಲ್ಪ ಪ್ರತಿಬದ್ಧವಾದಂತಿತ್ತು. ಅದರಿಂದ ಅಶಕ್ತನಂತಿದ ಎಂದು. ಏಕೆಂದರೆ ವರದಾನದಿಂದ ಮೋಹಗೊಂಡನೆಂದರೆ ಮೂರ್ಛೆಯಂತೂ ಇಲ್ಲ. ಹೆಬ್ಬಾವಿನೊಂದಿಗೆ ಬಹಳ ಮಾತನಾಡುತ್ತಲೆ ಇದ್ದಾನೆ ಭೀಮ. ತೋರಿಕೆಗೆ ಬುದ್ಧಿಗೆಮಂಕು ಕವಿದಂತಾಗಿತ್ತು. ಏಕೆಂದರೆ ಶಕ್ತನಾಗಿದ್ದರೂ ಬಿಡಿಸಿಕೊಳ್ಳಲು ಯತ್ನಿಸುತ್ತಿಲ್ಲ! ಇದು ಮೋಹ, ಬುದ್ಧಿಮೋಹ.

ಸಂಜ್ಞಾಮುಮೋಹ ಸಹಸಾ ವರದಾನೇನ ತಸ್ಯಹಿ (ವನ 180.28)

ಎಂಬಲ್ಲಿಯೂ ಹೀಗೆ ಅರ್ಥಗ್ರಹಿಸಬೇಕು. ಎಚ್ಚರ ತಪ್ಪಿತ್ತೆಂದಲ್ಲ.

ಆತ್ಮಮೋಕ್ಷಾಯ ನ ಪ್ರಶ್ನಾನ್ವ್ಯಾಜಹಾರ ಸ ಚಾಭಿಭೂಃ ।
ವಿದ್ಯೋಪಜೀವನಂ ಧರ್ಮೋ ವಿಪ್ರಾಣಾಮಪಿ ನೋ ಯತಃ ॥೫೬॥
ಕಿಮುತ ಕ್ಷತ್ರಿಯಸ್ಯೇತಿ ಜಾನನ್ನಪಿ ವೃಕೋದರಃ ।
ತತ್ಪ್ರಶ್ನಪರಿಹಾರೇಣ ನಾತ್ಮಮೋಕ್ಷಂ ಸಮೈಚ್ಛತ ॥೫೭॥

ನಹುಷನ ಪ್ರಶ್ನೆಗಳಿಗೆ ಉತ್ತರಿಸಲು ಭೀಮ ಸಮರ್ಥನಾದರೂ ಉತ್ತರಿಸಲಿಲ್ಲ. ಏಕೆಂದರೆ ವಿದ್ಯೆಯನ್ನು ಜೀವನಕ್ಕಾಗಿ ಅವಲಂಬಿಸುವುದು ಬ್ರಾಹ್ಮಣರಿಗೆ ಕೂಡ ಧರ್ಮವಲ್ಲ. ಕ್ಷತ್ರಿಯನಿಗೆ ಇನ್ನೇನು? ಅದರಿಂದ ಭೀಮ ಬಲ್ಲವನಾಗಿದ್ದರೂ, ನಹುಷನ ಪ್ರಶ್ನೆಗಳಿಗೆ ಪರಿಹಾರ ನೀಡುವ ಮೂಲಕ ತನ್ನ ಬಿಡುಗಡೆ ಮಾಡಿಕೊಳ್ಳಲು ಬಯಸಲಿಲ್ಲ.

ಭೀಮ ತನ್ನ ಬಿಡುಗಡೆಗೆ ಪ್ರಯತ್ನವೆ ಮಾಡಲಿಲ್ಲ. ಬಾಹುಬಲದಿಂದ ತನ್ನನ್ನು ಬಿಡಿಸಿಕೊಳ್ಳಬಹುದಿತ್ತು. ಹೆಬ್ಬಾವು ಬಾಹುಗಳನ್ನು ಬಿಟ್ಟು ಮೈಗೆ ಮಾತ್ರ ಸುತ್ತಿಕೊಂಡಿತ್ತು. ಆದರೂ ಭೀಮ ಸುಮ್ಮನಿದ್ದ. 'ಯಾರು ನಿನ್ನ ಪ್ರಶ್ನೆಗಳಿಗೆ ಉತ್ತರಿಸುವನೋ ಅವನು ನಿನಗೆ ಶಾಪಮುಕ್ತಿ ನೀಡುವನೆಂದು ಬ್ರಹ್ಮ ವರ ನೀಡಿದ್ದಾನೆ' ಎಂದು ನಹುಷ ಹೇಳುತ್ತಿದ್ದರೂ ಭೀಮ ನಿನ್ನ ಪ್ರಶ್ನೆಗಳೇನು ಎನ್ನುವುದಿಲ್ಲ. ತನ್ನ ಬುದ್ಧಿಬಲವನ್ನೂ ಉಪಯೋಗಿಸಿಕೊಳ್ಳುವುದಿಲ್ಲ. ಏಕೆಂದರೆ ಬದುಕಿಗೆ ವಿದ್ಯೆಯನ್ನು ಅವಲಂಬಿಸಬಾರದು ಎಂದು. ವಿದ್ಯೆ ಹೇಳಿ ಕೊಡುವ ಬ್ರಾಹ್ಮಣನೆ ವಿದ್ಯೆಯನ್ನು ಅವಲಂಬಿಸುವುದು ಪ್ರಶಸ್ತವಲ್ಲ. ಇನ್ನು ಹೇಳಿ ಕೊಡುವ ಅಧಿಕಾರವಿಲ್ಲದ ಕ್ಷತ್ರಿಯನ ಬಗ್ಗೆ ಇನ್ನೇನು ಹೇಳಬೇಕು?

ಅಯತಂತಮಪಿ ಹ್ಯೇನಂ ಚಾಲನಾಯಾಪಿ ನಾಶಕತ್ ।
ಪೂರ್ಣೋಽಪಿ ಸರ್ವಲೋಕಾನಾಂ ಬಲೇನ ನಹುಷಸ್ತದಾ ।
ವೇಷ್ಟಯಿತ್ವೈವ ತಂ ಭೀಮಂ ಸ್ಥಿತೋಽಸೌ ನಾಶಕತ್ಪರಂ ॥೫೮॥

ಕಣ್ಣಿಗೆ ಬಿದ್ದ ಸಮಸ್ತಜನರ ಬಲದಿಂದಲೂ ತುಂಬಿದ್ದ ನಹುಷ ಆಗ ಭೀಮನನ್ನು, ಅವನು ಏನೂ ಪ್ರಯತ್ನ ಮಾಡದಿದ್ದಾಗಲೂ, ಅಲ್ಲಾಡಿಸಲೂ ಶಕ್ತನಾಗಲಿಲ್ಲ. ಭೀಮನನ್ನು ಸುತ್ತಿಕೊಂಡಿದ್ದ ಹೊರತು ಇನ್ನೇನ್ನೂ ಮಾಡಲು ಶಕ್ತನಾಗಲಿಲ್ಲ.

ಗುಹೆಯಂಥ ದೊಡ್ಡ ಬಾಯಿ ನಾಲ್ಕು ಕೋರೆದಾಡೆಗಳು. ಕಾಲಯವನಂತೆ ಭೀಕರವಾದ ಹಸಿದ ಹೆಬ್ಬಾವು ಭೀಮನನ್ನು ಸುತ್ತಿಕೊಂಡಿದೆ. ಆದರೆ ಕೇವಲ ಸುತ್ತಿಕೊಂಡಿದೆ ಹೊರತು ಕಚ್ಚುತ್ತಿಲ್ಲ, ನುಂಗುತ್ತಿಲ್ಲ. ಭೀಮ 'ಪೌರುಷಂ ತು ನಿರರ್ಥಕಂ' ಮನುಷ್ಯ ಪ್ರಯತ್ನ ವ್ಯರ್ಥ ಎನ್ನುತ್ತ ಏನೂ ಪ್ರಯತ್ನ ಮಾಡುತ್ತಿಲ್ಲ. ಇದರಿಂದ ಹೆಬ್ಬಾವಿಗೆ ಏನೂ

ಮಾಡುವ ಶಕ್ತಿ ಇರಲಿಲ್ಲ ಎನ್ನುವುದು ಸ್ಪಷ್ಟ. ನಹುಷನ ಪೌರುಷ ವ್ಯರ್ಥವೆನ್ನುತ್ತಿದ್ದಾನೆ ಭೀಮ ಎನ್ನಬೇಕು.

ಭ್ರಾತೃಮಾತ್ರಾದಿಷು ಸ್ನೇಹಾತ್ ಕ್ಷಿಪ್ರಮಾತ್ಮವಿಮೋಕ್ಷಣಂ ।
ಇಚ್ಛನ್ನಪಿ ನ ಮೋಕ್ಷಾಯ ಯತ್ನಂ ಚಕ್ರೇ ವೃಕೋದರಃ ॥೩೬॥

ಭೀಮ ಸೋದರರಲ್ಲಿ ಮತ್ತು ತಾಯಿ ಮುಂತಾದವರಲ್ಲಿರುವ ಪ್ರೀತಿಯಿಂದ ಬೇಗನೆ ತನ್ನ ಬಿಡುಗಡೆಯಾಗಬೇಕೆಂದು ಬಯಸಿದರೂ ಬಿಡುಗಡೆಗಾಗಿ ಯತ್ನ ಮಾಡಲಿಲ್ಲ.

ಭೀಮ ಸುಮ್ಮನೆ ಹಲುಬುತ್ತಿರುವಂತೆ ತೋರಿಕೊಳ್ಳುತ್ತಾನೆ. 'ಸೋದರರ ಬಗ್ಗೆ ಮತ್ತು ತಾಯಿಯ ಬಗ್ಗೆ ಚಿಂತಿಸುತ್ತಿದ್ದೇನೆ. ನನ್ನ ಬಗ್ಗೆ ನನಗೆ ಏನೂ ಚಿಂತೆಯಿಲ್ಲ. ನಾನಿಲ್ಲದಿದ್ದರೆ ಸೋದರರು ಕೌರವರೊಂದಿಗೆ ಯುದ್ಧಮಾಡಿ ರಾಜ್ಯವನ್ನು ಸಂಪಾದಿಸುವುದಿಲ್ಲ. ಮಕ್ಕಳ ವಿಜಯವನ್ನು ಕಾಣುವ ಹಂಬಲದಿಂದ ವೀರವಾತೆ ಕುಂತಿಯೂ ಅನಾಥಳಾಗುತ್ತಾಳೆ' ಎಂದು ಹೇಳಿಕೊಳ್ಳುತ್ತಾನೆ. ಇದರಿಂದ ಬಿಡುಗಡೆಯ ಬಯಕೆ ಇದೆ ಶಕ್ತಿಯಿಲ್ಲ ಎಂದಂತಾಗುವುದಿಲ್ಲವೆ? ವಾಯುವಿನ ಸತ್ಯಕಾಮತ್ವಕ್ಕೂ ಚ್ಯುತಿ ಬಂದಂತಾಗಿಲ್ಲವೆ? ಎಂದರೆ [1]'ಬೇಗನೆ ತನ್ನ ಬಿಡುಗಡೆಯಾಗಬೇಕೆಂದು ಬಯಸಿದ' ಎಂಬಲ್ಲಿ ಬೇಗನೆ ಎಂದರೆ ಕೂಡಲೆ ತಕ್ಷಣವೆ ಎಂದರ್ಥವಲ್ಲ. ಇಲ್ಲಿಯೆ ಮುಂದೆ ಭೀಮ 'ಸ್ವಲ್ಪ ಹೊತ್ತಿನಲ್ಲಿ ಹೆಬ್ಬಾವು ಸೋತು ಸ್ವತಃ ಶಕ್ತಿಗುಂದುತ್ತದೆ, ಆಗ ನಾನು ಬಿಡುಗಡೆ ಹೊಂದುತ್ತೇನೆ' ಎನ್ನುವುದರಿಂದ 'ಬೇಗನೆ' ಎಂದರೆ ಹೆಚ್ಚುವಿಲಂಬವಿಲ್ಲದೆ ಎಂದು ಮಾತ್ರ ಅರ್ಥವನ್ನು ಗ್ರಹಿಸಬೇಕು. ಈ ಇಚ್ಛೆಗೆ ಭಂಗ ಬಂದಿಲ್ಲ.

ಸರ್ವದೇವಮುನೀಂದ್ರಾಣಾಂ ತಪ ಆದಾತುಮತ್ರಗಂ ।
ಭ್ರಾತ್ರಾದಿಷು ಸ್ನೇಹವಶಾನ್ನ ಸ್ಥಾತವ್ಯಮಿಹೇತ್ಯಪಿ ॥೩೭೦॥
ಮನ್ವಾನಃ ಕಾಲತೋ ಭಂಗಂ ಸ್ವಯಮೇವೈಷ ಯಾಸ್ಯತಿ ।
ಆಜ್ಞಯಾ ವಾಸುದೇವಸ್ಯ ದಾರ್ಢ್ಯಾದ್ದೇಹಸ್ಯ ಮೇ ತಥಾ ॥೩೭೧॥
ಸ್ರಸ್ತಾಂಗೇ ಪತಿತೇ ಸರ್ಪೇ ಯಾಸ್ಯಾಮೀತಿ ವಿಚಿಂತಯನ್ ।
ತಸ್ಥೌ ಭೀಮೋ ಹರಿಂ ಧ್ಯಾಯನ್ ಸ್ವಭಾವಾನ್ನ ತದಿಚ್ಛಯಾ ॥೩೭೨॥

ನಹುಷನಲ್ಲಿದ್ದ ದೇವತೆಗಳ ಮುನೀಂದ್ರರ ತಪಸ್ಸನ್ನು ಸೆಳೆದುಕೊಳ್ಳುವುದಕ್ಕಾಗಿ ಭೀಮ ಸೋದರರು ತಾಯಿ ಮುಂತಾದವರ ಮೇಲಿನ ಸ್ನೇಹದಿಂದ ತಾನು ಹೆಚ್ಚು ಕಾಲ ಹಾವಿನ ತೆಕ್ಕೆಯಲ್ಲಿ ಇರಕೂಡದೆಂದು ತಿಳಿದವನಾಗಿದ್ದರೂ ಸ್ವಲ್ಪ ಹೊತ್ತಿನಲ್ಲಿ ಹಾವು ತಾನೇ ಶಕ್ತಿಗುಂದುತ್ತದೆ. ಹರಿಯ ಇಚ್ಛೆಯಿಂದ ಮತ್ತು ನನ್ನ ಶರೀರದ ದಾರ್ಢ್ಯದಿಂದ ಅದು ಶರೀರ ಶೈಥಿಲ್ಯ ಹೊಂದಿ ಕೆಳಗೆ ಬೀಳುವಾಗ ನಾನು ಹೊರಟು ಹೋಗುವೆನೆಂದು ಆಲೋಚಿಸಿ

ಸ್ವಾಭಾವಿಕವಾಗಿ ಹರಿಯನ್ನು ಧ್ಯಾನಿಸುತ್ತ ನಿಂತ ಹೊರತು ಬಿಡುಗಡೆಗೆ ಬಯಸಿ ಹರಿಧ್ಯಾನವನ್ನು ಮಾಡಲಿಲ್ಲ.

ವಾಯುವಿಗೆ ಹೊರತು ಇನ್ನೆಲ್ಲರಿಗೂ ಬಲದೊಂದಿಗೆ ಶ್ರಮವೂ ಉಂಟು. ಶ್ರಮದಿಂದ ಬಲಗುಂದುತ್ತಾರೆ. ವಾಯುವಿಗೆ ಬಲಮಾತ್ರವಿದೆ ಶ್ರಮವಿಲ್ಲ. ಅದರಿಂದ ಹೆಬ್ಬಾವು ವಜ್ರಕಾಯನಾದ ಭೀಮನನ್ನು ಬಲವಾಗಿ ಬಿಗಿದಷ್ಟೂ ಶ್ರಮದಿಂದ ಬಲಗುಂದಿ ಕೊನೆಗೆ ತಾನೇ ಬೀಳುತ್ತದೆ. ಅದರಿಂದ ಹರಿಯನ್ನು ತನ್ನ ಬಿಡುಗಡೆಗಾಗಿ ಧ್ಯಾನಿಸುವುದಿಲ್ಲ, ಭೀಮ ಮತ್ತು ಅವನು ಏನು ಇಚ್ಛೆ ಮಾಡುವನೋ ಹರಿಗೂ ಅದೇ ಇಚ್ಛೆ ಇರುತ್ತದೆ.

ಯತ್ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ
ಸಹಸ್ರ ಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಂ।

'ಭೀಮ, ನೀನು ಏನನ್ನು ನಿನಗಾಗಿ ಬಯಸುವಿಯೋ ಅದಕ್ಕಿಂತ ಸಾವಿರಪಾಲು ಹೆಚ್ಚು ನಾನು ನಿನಗಾಗಿ ಬಯಸುತ್ತೇನೆ' ಎನ್ನುತ್ತಾನೆ ಶ್ರೀಕೃಷ್ಣ. ಹೆಬ್ಬಾವು ಇನ್ನು ಕೆಲವೇ ನಿಮಿಷಗಳಲ್ಲಿ ತಾನಾಗಿ ಸೋತು ಬೀಳಲಿ ಎಂದು ಭೀಮ ಬಯಸಿದ್ದಾನೆ. ಹರೀಚ್ಛೆಯೂ ಹಾಗೇ ಇರುತ್ತದೆ. ಅದರಿಂದ 'ಹರಿಚ್ಛೆಯಿಂದ ಶರೀರಶೈಥಿಲ್ಯ ಹೊಂದಿ ಹಾವು ಬೀಳುವಾಗ' ಎಂದಿದೆ. ಈ ಅಭಿಪ್ರಾಯದಿಂದಲೆ ಮಹಾಭಾರತದಲ್ಲಿ ಹೇಳಿದೆ-

'ದೈವಮೇವ ಪರಂ ಮನ್ಯೇ ಪೌರುಷಂ ತು ನಿರರ್ಥಕಂ'

ತದೈವ ಬ್ರಹ್ಮವಚನಾತ್ ಪೂರ್ವೋಕ್ತಾತ್ ಕೇಶವಾಜ್ಞಯಾ।
ಬಲಂ ತಪಶ್ಚ ಸರ್ವಸ್ಯ ತತ್‌ಸ್ಥಮಾಯಾದ್ ವೃಕೋದರಂ ॥೩೭೩॥

ಆಗಲೇ ಹರಿಯಾಜ್ಞೆಯಿಂದ, ಹಿಂದೆ ಹೇಳಿದ ಬ್ರಹ್ಮನ ಮಾತಿನಿಂದ ನಹುಷನಲ್ಲಿದ್ದ ಎಲ್ಲ ದೇವಮುನಿಗಳ ತಪಸ್ಸೂ ಬಲವೂ ಭೀಮನಲ್ಲಿ ಬಂದುಸೇರಿತು.

ಪೂರಿತೇ ನಹುಷಸ್ಥೇನ ತಪಸಾ ಚ ಬಲೇನ ಚ।
ಭೀಮೇ ಸ ನಹುಷೋಽಥಾಸೀತ್ ಸ್ರಸ್ತಭೋಗಃ ಶನೈಃಶನೈಃ ॥೩೭೪॥

ನಹುಷನಲ್ಲಿದ್ದ ತಪಸ್ಸಿನಿಂದಲೂ ಬಲದಿಂದಲೂ ಭೀಮ ತುಂಬಿಕೊಂಡಾಗ ನಹುಷ ನಿಧಾನವಾಗಿ ಶರೀರ ಶೈಥಿಲ್ಯವನ್ನು ಹೊಂದಿದ.

ಧರ್ಮರಾಜ ನಹುಷನಲ್ಲಿಗೆ ಬಂದು: 'ಭೀಮನನ್ನು ಬಿಡು, ನಿನಗೆ ಬೇರೆ ಆಹಾರ ಕೊಡುವೆನೆ' ಎಂದರೆ ಆತ 'ಇಲ್ಲ, ಭೀಮನನ್ನು ಬಿಡಲಾರೆ. ನನ್ನ ಪ್ರಶ್ನೆಗಳಿಗೆ ನೀನು ಉತ್ತರಿಸಿದರೆ ಮಾತ್ರ ಬಿಡುತ್ತೇನೆ' ಎನ್ನುತ್ತಾನೆ. ಆದರೆ ಆಗಲೆ ಅವನು ಸೋತು ಶರೀರ ಶೈಥಿಲ್ಯ ಹೊಂದಿದ್ದಾನೆ. ಧರ್ಮರಾಜ ಪ್ರಶ್ನೆಗಳಿಗೆ ಉತ್ತರಿಸದಿದ್ದರೂ ಭೀಮನನ್ನೂ ಅವನು ಬಿಡಲೇಬೇಕಾಗಿದೆ.

ಆದರೂ ಧರ್ಮರಾಜನಿಂದ ಉತ್ತರ ಪಡೆದು ತಾನು ಶಾಪಮುಕ್ತನಾಗ ಬಯಸಿದ್ದಾನೆ. ಏಕೆಂದರೆ.

ಯುಧಿಷ್ಠಿರೋ ಧರ್ಮರಾಜಃ ಶಾಪಾತ್ ತ್ವಾಂ ಮೋಕ್ಷಯಿಷ್ಯತಿ
(ವನ. 183.40)

'ಧರ್ಮರಾಜ ನಿನ್ನ ಪ್ರಶ್ನೆಗಳಿಗೆ ಉತ್ತರ ನೀಡಿ ನಿನ್ನನ್ನು ಶಾಪಮುಕ್ತಗೊಳಿಸುತ್ತಾನೆ' ಎಂದೂ ಬ್ರಹ್ಮನ ವರವಿದ್ದಿತು.

ಗತೇ ಭೀಮೇ ನಿಮಿತ್ತಾನಿ ದೃಷ್ಟ್ವಾ ರಾಜಾ ಯುಧಿಷ್ಠಿರಃ।
ಪಪ್ರಚ್ಛ ಕ್ವ ಗತೋ ಭೀಮ ಇತಿ ಕೃಷ್ಣಾಂ ಚಲನ್ಮನಾಃ ॥೩೭॥

ಭೀಮ ಹೊರಟು ಹೋದಾಗ ರಾಜಾ ಯುಧಿಷ್ಠಿರ, ಉತ್ಪಾತಗಳನ್ನು ಕಂಡು ಶಂಕಾಗ್ರಸ್ತನಾಗಿ 'ಭೀಮನೆಲ್ಲಿಗೆ ಹೋದನೆ'ಂದು ದ್ರೌಪದಿಯನ್ನು ಕೇಳಿದ.

ಎಲ್ಲ ದೇವತೆಗಳ ಮತ್ತು ಮುನಿಗಳ ತಪಸ್ಸು ಮತ್ತು ಬಲ ಸಾಮಾನ್ಯ ಚಕ್ರವರ್ತಿಯನ್ನು ದೇವರಾಜ ಪದವಿಯಲ್ಲಿ ಕೂಡಿಸುವಷ್ಟು ಅಸಾಮಾನ್ಯ ಶಕ್ತಿಶಾಲಿಯಾಗಿದ್ದು ಅದೀಗ ನಹುಷನಿಂದ ಹೊರಗೆ ಬಂದು ಭೀಮನಲ್ಲಿ ಬಂದು ಸೇರುತ್ತಿದೆ. ಇಂಥ ಮಹತ್ವಪೂರ್ಣ ಘಟನೆಯನ್ನು ಸೂಚಿಸಲು ಉತ್ಪಾತಗಳುಂಟಾದುವು.

ಯಾತಂ ಮೃಗಾರ್ಥಂ ಸ ನಿಶಮ್ಯ ರಾಜಾ
ತದೂರುವೇಗಾತ್ಪತಿತಾನ್ನಗೇಂದ್ರಾನ್।
ದೃಷ್ಟ್ವಾ ಪಥಾ ತೇನ ಯಯೌ ಸ ತತ್ರ
ದೃಷ್ಟ್ವಾ ಚ ಸಪರ್ಣಾವೃತಮನ್ವಪೃಚ್ಛತ್ ॥೩೬॥

ಭೀಮ ಬೇಟೆಗೆ ಹೋಗಿದ್ದಾನೆ ಎಂದು ಕೇಳಿ ಧರ್ಮರಾಜ ಅವನ ನಡಿಗೆಯ ರಭಸಕ್ಕೆ ತೊಡೆಗಳ ಸ್ಪರ್ಶದಿಂದ ಬಿದ್ದ ದೊಡ್ಡ ಮರಗಳನ್ನು ನೋಡಿ ಆ ಮಾರ್ಗದಿಂದ ನಡೆದ. ಅಲ್ಲಿ ಭೀಮ ಹೆಬ್ಬಾವಿನಿಂದ ಸುತ್ತಲ್ಪಟ್ಟಿದ್ದನ್ನು ಕಂಡು ಕಾರಣವನ್ನು ಕೇಳಿದ.

ಸ ಕಾರಣಂ ನಹುಷಾತ್ಸರ್ವಮೇವ
ಶುಶ್ರಾವ ತತ್ಪ್ರಶ್ನಮಶೇಷತಶ್ಚ।
ಭ್ರಾತೃಸ್ನೇಹಾದ್ವ್ಯಾಕರೋದ್ಧರ್ಮಸೂನು-
ಸ್ತದೈವ ಸೋಽಪ್ಯಾರುಹತ್ಸ್ವರ್ಗಲೋಕಂ ॥೩೭॥

ಧರ್ಮರಾಜ ನಹುಷನಿಂದ ಎಲ್ಲವನ್ನೂ ಕೇಳಿ ತಿಳಿದುಕೊಂಡ. ಸೋದರ ಪ್ರೇಮದಿಂದ ನಹುಷನ ಎಲ್ಲ ಪ್ರಶ್ನೆಗಳನ್ನೂ ಉತ್ತರಿಸಿದ. ಆಗಲೆ ನಹುಷ ಸ್ವರ್ಗಲೋಕಕ್ಕೆ ತೆರಳಿದ.

ಬ್ರಾಹ್ಮಣನೆಂದರೆ ಯಾರು, ಮುಮುಕ್ಷು ತಿಳಿಯಬೇಕಾದ ಪರತತ್ವ ಯಾವುದು? ಯಾವ ಕರ್ಮದಿಂದ ಸದ್ಗತಿಯಾಗುವುದು? ಇತ್ಯಾದಿಯಾಗಿ ನಹುಷ ಕೇಳಿ ಧರ್ಮರಾಜನಿಂದ ಉತ್ತರಪಡೆದ. ವೇದ ಅಪ್ರಮಾಣವೆಂದು ಹೇಳಿದ್ದರಿಂದ ಹೊಂದಿದ ಅನರ್ಥವನ್ನು ಈ ತತ್ವವಿಚಾರದ ಮೂಲಕ ಪರಿಹರಿಸಿಕೊಂಡ.

ದಿವ್ಯಾಂಬರೇ ಕುಂಡಲಿನಿ ಸ್ವಪೂರ್ವೇ
ಗತೇ ವಿಮಾನೇನ ಸ ಧರ್ಮರಾಜಃ ।
ಭೀಮಶ್ಚಾಯಾತ್ ಸ್ವಾಶ್ರಮಾಯೈವ ಸರ್ವಂ
ಯುಧಿಷ್ಠಿರಃ ಕಥಯಾಮಾಸ ತತ್ರ ॥೩೭॥

ದಿವ್ಯ ವಸ್ತ್ರಗಳನ್ನೂ ಕುಂಡಲಗಳನ್ನೂ ಧರಿಸಿದ ತಮ್ಮ ವಂಶದ ಪೂರ್ವಜನಾದ ನಹುಷ ವಿಮಾನದಿಂದ ಸ್ವರ್ಗಕ್ಕೆ ಹೋದಾಗ ಧರ್ಮರಾಜನೂ ಭೀಮನೂ ತಮ್ಮಾಶ್ರಮಕ್ಕೆ ಬಂದರು. ಅಲ್ಲಿ ಎಲ್ಲ ವೃತ್ತಾಂತವನ್ನೂ ಧರ್ಮರಾಜ ಹೇಳಿದ.

ಶ್ರುತ್ವಾ ಕೃಷ್ಣಾ ಭ್ರಾತರಶ್ಚಾಸ್ಯ ಸರ್ವೇ
ಸರ್ವೇ ಮುನೀಂದ್ರಾ ಭೀಮಸೇನೇಽತಿಭಕ್ತಾಃ ।
ವ್ರೀಡಾಂ ಯಯುರ್ಭೀಮಸೇನಗ್ರಹೇಣ
ತಥಾಬ್ರುವನ್ ಸ್ನೇಹತೋ ಭೀಮಸೇನಂ ॥೩೮॥
ನೈತಾದೃಶಂ ಸಾಹಸಂ ತೇಽನುರೂಪಂ
ಶಕ್ತೋಽಪಿ ಯತ್ ಸ್ವಾತ್ಮವಿಮೋಕ್ಷಣಾಯ ।
ನೈವಾಕರೋರ್ಯತ್ನಮತೋ ನಿಜಾನಾಂ
ಮಹದ್ದುಃಖಂ ಹೃದಯೇ ಪ್ರಾರ್ಪಯಸ್ತ್ವಂ ॥೩೯॥
ಮೈವಂ ಪುನಃ ಕಾರ್ಯಮಿತಿ ಬ್ರುವಂತಃ
ಸಮಾಶ್ಲಿಷನ್ ಸರ್ವ ಏವೈತ್ಯ ಭೀಮಂ ।
ತತೋಽಹೋಭಿಃ ಕೈಶ್ಚಿದಾಪುಃ ಕುರೂಣಾಂ
ರಾಷ್ಟ್ರಂ ಪಾರ್ಥಾ ಮುನಿಮುಖ್ಯೈಃ ಸಮೇತಾಃ ॥೪೦॥

ಭೀಮನಲ್ಲಿ ಅತ್ಯಂತ ಭಕ್ತಿಯುಕ್ತರಾದ ದ್ರೌಪದಿಯೂ ಎಲ್ಲ ಸೋದರರೂ ಎಲ್ಲ ಮುನಿಗಳೂ ಭೀಮ ಹಾವಿನ ತೆಕ್ಕೆಯಲ್ಲಿದ್ದ ಬಗ್ಗೆ ನಾಚಿದರು. ಮತ್ತು ಸ್ನೇಹದಿಂದ ಹೇಳಿದರು, 'ಭೀಮ, ಇಂಥ ಸಹನೆ ನಿನಗೆ ತಕ್ಕುದಲ್ಲ. ನೀನು ನಿನ್ನ ಬಿಡುಗಡೆ ಮಾಡಿಕೊಳ್ಳಲು ಶಕ್ತನಾಗಿದ್ದು ಅದಕ್ಕೆ ಪ್ರಯತ್ನ ಮಾಡಲಿಲ್ಲ. ಆ ಮೂಲಕ ನೀನು ನಿನ್ನವರ ಹೃದಯದಲ್ಲಿ ಮಹಾ ಕಳವಳ ಉಂಟು ಮಾಡಿರುವೆ. ಹೀಗೆ ಮತ್ತೆ ನೀನು ಮಾಡಕೂಡದು' ಎಂದು ಹೇಳುತ್ತ ಎಲ್ಲರೂ ಬಂದು ಭೀಮನನ್ನು ಅಪ್ಪಿಕೊಂಡರು. ಬಳಿಕ ಕೆಲವು ದಿನಗಳಲ್ಲಿ ಪಾಂಡವರು

ಮುನೀಂದ್ರರಿಂದ ಸಮೇತರಾಗಿ ಕುರುರಾಜ್ಯದಲ್ಲಿರುವ ದ್ವೈತವನಕ್ಕೆ ಬಂದರು.

ತಚ್ಛ್ರುತ್ವಾತೇ ದ್ವಿಜಾಃ ಸರ್ವೇ ಭ್ರಾತರಶ್ಚಾಸ್ಯ ತೇತ್ರಯಃ
ಆಸನ್ ಸುವ್ರೀಡಿತಾ ರಾಜನ್ ದ್ರೌಪದೀ ಚ ಯಶಸ್ವಿನೀ
(ವನ 183.50)

'ಭೀಮ ಏನೂ ಮುಂದಾಲೋಚನೆ ಇಲ್ಲದೆ ತನಗೆ ಅಶಕ್ಯವಾದ ಸಾಹಸಕಾರ್ಯದಲ್ಲಿ ಒಬ್ಬನೇ ಮುನ್ನುಗ್ಗಿ ಅಪಾಯತಂದುಕೊಳ್ಳುತ್ತಾನೆ. ಇದು ನಾಚಿಕೆಗೇಡು' ಎಂದು ಭಾರತದಲ್ಲಿ ಹೇಳಿದಂತೆ ಕಾಣುತ್ತದೆ. ನಿರ್ಣಯ ಹೇಳುತ್ತಿದೆ. ಇದು ಸಾಹಸ, ಅಶಕ್ಯಕಾರ್ಯ ಪ್ರವೃತ್ತಿಯೆಂದು ನಾಚಿಕೆಯಲ್ಲ. ಮಹಾಬಲಿಷ್ಠನಾಗಿದ್ದೂ, ತನ್ನ ಬಾಹುಗಳು ಸ್ವಾಧೀನದಲ್ಲಿದ್ದೂ ತನ್ನನ್ನು ರಕ್ಷಿಸಿಕೊಳ್ಳಲು ಯತ್ನಿಸದಿದ್ದುದು ಸಹನ ಮಾಡಿದುದು ಅನುಚಿತ. ಅದರಿಂದ ದುರ್ಬಲನಾದ ನಹುಷನೂ ಅವನನ್ನು ಬಂಧಿಸಿದನೆಂದು ಎಲ್ಲೆಡೆ ಪ್ರಸಿದ್ಧಿಯಾಗುವುದೆಂದು ನಾಚಿಕೆ. ವಸ್ತುತಃ ಭೀಮನಿಗೆ ಇದು ಇಷ್ಟವೆ. ತನ್ನನ್ನು ಅಜ್ಞರು ಅಶಕ್ತರೆಂದು ತಿಳಿಯಲಿ ಹರಿಪ್ರೀತಿಯಾಗಲಿ ಎಂದು ಅವನಿಚ್ಛೆ.

ತತೋಽಮಿತೌಜಾ ಭಗವಾನುಪಾಗಮ-
ನ್ನಾರಾಯಣಃ ಸತ್ಯಭಾಮಾಸಹಾಯಃ।
ಸಂಪೂಜಿತಃ ಪಾಂಡವೈಸ್ತೈಃ ಸಮೇತ
ಶ್ಚಕ್ರೇಽಥ ಸೌಹಾರ್ದನಿಮಿತ್ತಸತ್ಕಥಾಃ ॥೩೮೨॥

ಬಳಿಕ ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣ ಸತ್ಯಭಾಮಾಸಮೇತನಾಗಿ ಅಲ್ಲಿಗೆ ಬಂದು ಪಾಂಡವರಿಂದ ಪೂಜಿತನಾಗಿ ಅವರೊಂದಿಗೆ ಸೌಹಾರ್ದದಿಂದ ವಿನೋದದ ಮಾತುಕತೆಗಳನ್ನಾಡಿದ.

ದ್ರೌಪದಿಯಿಂದ ಸ್ತ್ರೀ ಧರ್ಮೋಪದೇಶ

ಕೃಷ್ಣಾ ಚ ಸತ್ಯಾ ಚ ಪರಸ್ಪರಂ ಮುದಾ
ಸಂಭಾಷಣಂ ಚಕ್ರತುರ್ಯೋಷಿದಗ್ರ್ಯೇ।
ಪರೀಕ್ಷಂತ್ಯಾ ಸತ್ಯಯಾ ಸರ್ವವೇತ್ರ್ಯಾ
ನಿರ್ದೋಷಯಾ ಚೋದಿತಾ ಪ್ರಾಹ ಕೃಷ್ಣಾ ॥೩೮೩॥
ಸ್ತ್ರೀಧರ್ಮಾನಖಿಲಾಂಸ್ತತ್ರ ಸತ್ಯಾಂ ನಿರ್ದೋಷಸಂವಿದಂ।
ಜ್ಞಾತ್ವಾಪಿ ಕೃಷ್ಣಾ ಪ್ರೋವಾಚ ಲೋಕಶಿಕ್ಷಾರ್ಥಮೇವ ತು ॥೩೮೪॥

ಸ್ತ್ರೀಯರಲ್ಲಿ ಉತ್ತಮರಾದ ದ್ರೌಪದಿಯೂ ಸತ್ಯಭಾಮೆಯೂ ಪರಸ್ಪರ ಸಂಭಾಷಣೆಗೈದರು. ಸರ್ವಜ್ಞಳಾದ ನಿರ್ದೋಷಳಾದ ಸತ್ಯಭಾಮೆ ದ್ರೌಪದಿಯ ಧರ್ಮ

ಕೌಶಲವನ್ನು ವಿನೋದಕ್ಕಾಗಿ ಪರೀಕ್ಷಿಸುತ್ತ ಪ್ರಶ್ನಿಸಿದಾಗ ದ್ರೌಪದಿ ಎಲ್ಲ ಸ್ತ್ರೀಧರ್ಮಗಳನ್ನೂ ಹೇಳಿದಳು. ಸತ್ಯಭಾಮೆ ನಿರ್ದುಷ್ಟ ಜ್ಞಾನವುಳ್ಳವಳೆಂದು ತಿಳಿದೂ ಕೂಡ ದ್ರೌಪದಿ ಲೋಕಶಿಕ್ಷಾರ್ಥವಾಗಿ ಅವಳಿಗೆ ಎಲ್ಲ ಸ್ತ್ರೀಧರ್ಮಗಳನ್ನೂ ಉಪದೇಶಿಸಿದಳು.

ಕ್ರೀಡಾರ್ಥಮೇವ ವಚನಂ ಜ್ಞಾತ್ವಾ ಸತ್ಯಾಸಮೀರಿತಂ ।
ತಸ್ಯಾನುಸಾರಿವಾಕ್ಯಾನಿ ತತ್ಪ್ರೀತ್ಯಾ ಏವ ಸಾಬ್ರವೀತ್ ॥೩೮೫॥

ಸತ್ಯಭಾಮೆ ಹೇಳಿದ ಮಾತು ವಿನೋದಕ್ಕಾಗಿಯೇ ಹೇಳಿದ್ದೆಂದು ತಿಳಿದು ಅದಕ್ಕೆ ಅನುಸಾರವಾದ ಮಾತುಗಳನ್ನೆ, ಅವಳಿಗೆ ಪ್ರೀತಿಯಾಗಲೆಂದೇ, ದ್ರೌಪದಿ ಆಡಿದಳು.

ಮಹಾಭಾರತದ ದ್ರೌಪದೀಸತ್ಯಭಾಮಾಸಂವಾದ ಪರ್ವದಲ್ಲಿ ಸತ್ಯಾಭಾಮೆ ದುಷ್ಟಸ್ತ್ರೀಯಂತೆ ದ್ರೌಪದಿಯನ್ನು ರಹಸ್ಯದಲ್ಲಿ ಕೇಳುತ್ತಾಳೆ, 'ನೀನು ನಿನ್ನ ಪತಿಗಳನ್ನು ಹೇಗೆ ವಶಪಡಿಸಿಕೊಂಡೆ? ಏನಾದರೂ ಮಂತ್ರ ಮಾಟ ಮದ್ದು ಉಂಟೆ? 'ದ್ರೌಪದಿ ಆಗ ಆಕ್ಷೇಪಿಸುತ್ತಾಳೆ, 'ನಿನಗೆ ಏಕೆ ಈ ದುರ್ಬುದ್ಧಿ ಬಂದಿತು? ಹೆಂಡತಿ ಮಂತ್ರಮಾಟ ಮಾಡುತ್ತಾಳೆ ಮದ್ದಿಕ್ಕುತ್ತಾಳೆ ಎಂದು ತಿಳಿದರೆ ಪತಿ ಅವಳನ್ನು ಮನೆಯೊಳಗೆ ಸೇರಿಕೊಂಡ ಹಾವೆಂದು ತಿಳಿದು ಭಯಪಡುತ್ತಾನೆ, ನಾನಾ ರೋಗಗಳಿಗೆ ತುತ್ತಾಗುತ್ತಾನೆ, ನಪುಂಸಕನಾಗುತ್ತಾನೆ, ವಶನಾಗುವುದಿಲ್ಲ, ಪತಿಯಾಗಿ ಸುಖ ನೀಡುವುದಿಲ್ಲ. ಸದಾ ಪತಿಗೆ ಅನುಕೂಲಳಾಗಿರುವುದೇ ಪತಿಯನ್ನು ವಶೀಕರಿಸುವ ಉಪಾಯ. ದಾಸಿಯಂತೆ ಸೇವೆ ಮಾಡುತ್ತ ಅವನಿಗೆ ಪ್ರಿಯವಾದ ಹಿತವಾದ ವಸ್ತುಗಳನ್ನು ನೀಡಿ ಸಂತೋಷಪಡಿಸು. ಅವನು ನಿನಗೆ ವಶನಾಗುತ್ತಾನೆ' ಎಂದು. ಇದು ಮಹಾಭಾರತವೆ ಹೇಳುವಂತೆ 'ಸೋಪಹಾಸಂ ಪ್ರಭಾಷಿತಂ' ವಿನೋದಕ್ಕಾಗಿ ಹೇಳಿದುದು ಹೊರತು ಸತ್ಯಭಾವೆಗೆ ದ್ರೌಪದಿ ಹಿತೋಪದೇಶ ಮಾಡಿದಳೆಂದು ತಿಳಿಯಬಾರದು.

ತತಃ ಕತಿಪಯಾಹಾನಿ ನಿರುಷ್ಯಾತ್ರ ಜನಾರ್ದನಃ ।
ಯಯೌ ಸಭಾರ್ಯಃ ಸ್ವಪುರೀಂ ಪಾಂಡವಾನನುಮಾನ್ಯ ಚ ॥೩೮೬॥

ಬಳಿಕ ಶ್ರೀಕೃಷ್ಣ ಕೆಲವುದಿನ ಪಾಂಡವರ ಜೊತೆಗೆ ಇದ್ದು ಅವರಿಂದ ಬೀಳ್ಕೊಂಡು ಸತ್ಯಭಾಮೆಯೊಡನೆ ತನ್ನ ಪಟ್ಟಣಕ್ಕೆ ತೆರಳಿದ.

ಜಯದ್ರಥನ ಕಾಮಾಂಧತೆ

ತತಃ ಕದಾಚಿನ್ಮೃಗಯಾಂ ಗತೇಷು
ಪಾರ್ಥೇಷು ರಾಜಾ ಸೈಂಧವ ಆಸಸಾದ ।
ಸಕೋಟಿಕಾಶ್ಯಃ ಸಬಲಶ್ಚ ತೇಷಾಂ
ವರಾಶ್ರಮಂ ಸೋಽತ್ರ ದದರ್ಶ ಕೃಷ್ಣಾಂ ॥೩೮೭॥

ಬಳಿಕ ಒಮ್ಮೆ ಪಾಂಡವರು ಬೇಟೆಗೆ ಹೋಗಿದ್ದಾಗ ಅವರ ಆಶ್ರಮಕ್ಕೆ ರಾಜಾಸೈಂಧವ 'ಕೋಟಿಕಾಶ್ಯನೊಂದಿಗೆ ಸೈನ್ಯ ಸಮೇತನಾಗಿ ಬಂದ. ಅಲ್ಲಿ ದ್ರೌಪದಿಯನ್ನು ಕಂಡ.

ಭಾರತ ವ್ಯಾಖ್ಯಾನ ನೀಲಕಂಠೀ ಪ್ರಕಾರ ಕೋಟಿ ಎಂದರೆ ದುರ್ಗಮವಾದ ಅಂತಃಪುರ. ಅದನ್ನು ಕಾಯುವವರು ಕೋಟಿಕರು. ಕೋಟಿಕರಲ್ಲಿ 'ಆಸ್ಯ' ಮುಖ್ಯನೆ ಕೋಟಿಕಾಸ್ಯ. ಅಂತಃಪುರದ ಪ್ರಧಾನ ಕಾವಲುಗಾರ. ಆದರೆ, ಭಾರತದಲ್ಲಿ ಅವನು ಕೋಟಿಕಾಶ್ಯ. ರಾಜಾ ಸುರಥನ ಮಗ. (ವನ 266.6) ಆದರಿಂದ ನಿರ್ಣಯದಲ್ಲಿ ಈ ಹೆಸರನ್ನು ಕೋಟಿ ಮತ್ತು ಕಾಶ್ಯ ಎಂದು ಬಿಡಿಸಿ 'ಕೋಟಿಂ ಪ್ರೇಷಯಿತ್ವೈವ ಕಾಶ್ಯಂ' ಎಂದು ಮುಂದಿನ ಶ್ಲೋಕದಲ್ಲಿ ಹೇಳಿದೆ. ಕಾಶೀ ದೇಶದ ದೊರೆ ಕಾಶ್ಯ. ಅವನ ಹೆಸರು ಕೋಟಿ. ಕೆಲವು ಕಡೆ ಕೋಟಿಕ ಎಂದೂ ಕರೆದಿದೆ. ಇವನು ಶಿಬಿವಂಶದ ಸುರಥರಾಜನ ಮಗ. ಜಯದ್ರಥ ಅಥವಾ ಸೈಂಧವನಿಗೆ ಆಪ್ತ ಸ್ನೇಹಿತ. ಜಯದ್ರಥ ಒಂದು ಸ್ವಯಂವರಕ್ಕಾಗಿ ಅನೇಕಮಂದಿ ರಾಜರೊಡನೆ ಸಾಲ್ವದೇಶಕ್ಕೆ ಹೋಗುತ್ತ ದಾರಿಯಲ್ಲಿ ಕಾಮ್ಯಕವನದಲ್ಲಿ ಪಾಂಡವರ ಆಶ್ರಮಕ್ಕೆ ಬರುತ್ತಾನೆ. ಆಗ ಆಶ್ರಮದಲ್ಲಿ ದ್ರೌಪದಿ ಒಬ್ಬಳೆ ಇದ್ದಳು. ಪಾಂಡವರು ಬೇಟೆಗೆ ಹೋಗಿದ್ದರು. ತೃಣಬಿಂದು ಧೌಮ್ಯ ಮುಂತಾದ ಬ್ರಾಹ್ಮಣರು ಮಾತ್ರ ಇದ್ದರು. ಅವರ ರಕ್ಷಣೆಯಲ್ಲಿ ದ್ರೌಪದಿಯನ್ನು ಬಿಟ್ಟುಹೋಗಿದ್ದರು, ಪಾಂಡವರು.

ವ್ರಜನ್ ವಿವಾಹಾರ್ಥಮಸೌ ನಿಶಾಮ್ಯ
ಕೃಷ್ಣಾಂ ಕೋಟಿಂ ಪ್ರೇಷಯಿತ್ವೈವ ಕಾಶ್ಯಂ।
ಆಯಾಹಿ ಮಾಮಿತ್ಯವದತ್ ಸುಪಾಪ
ಸ್ತಯಾ ನಿರಸ್ತೋ ಜಗೃಹೇ ಕರೇ ಚ ॥೩೮॥

ವಿವಾಹಕ್ಕೆ ಹೋಗುತ್ತಿದ್ದ ಆ ಮಹಾಪಾಪಿ ಜಯದ್ರಥ ದ್ರೌಪದಿಯನ್ನು ಕಂಡು ಕೋಟಿಕಾಶ್ಯನನ್ನು ಕಳಿಸಿಕೊಟ್ಟು ನನ್ನ ಬಳಿಗೆ ಬಾ ಎಂದ. ಅವಳು ನಿರಾಕರಿಸಿದಾಗ ಕೈಯಲ್ಲಿ ಹಿಡಿದ.

ಆಶ್ರಮದ ದ್ವಾರದಲ್ಲಿ ತ್ರಿಲೋಕ ಸುಂದರಿಯಾದ ದ್ರೌಪದಿ ಒಬ್ಬಳೇ ಮತ್ತಿಮರದ ಕೊಂಬೆಯನ್ನು ಹಿಡಿದು ನಿಂತಿದ್ದಳು. ಅವಳನ್ನು ಎಲ್ಲ ರಾಜರೂ ನೋಡಿ ಅಪ್ಸರೆಯೊ ದೇವಕನ್ಯೆಯೊ ದೇವ ಮಾಯೆಯೊ ಎನ್ನುತ್ತ ಕೈಮುಗಿದರು. ಮಹಾಪಾಪಿ, ಜಯದ್ರಥ ಮಾತ್ರ ಕಾಮಮೋಹಿತನಾಗಿ ಕೋಟಿಕಾಶ್ಯನನ್ನು ಕರೆದು, 'ಈಕೆ ಯಾರು? ಇವಳು ನನಗೆ ದೊರೆತರೆ ನಾನು ವಿವಾಹಕ್ಕಾಗಿ ಸಾಲ್ವದೇಶಕ್ಕೆ ಹೋಗಬೇಕಾದುದಿಲ್ಲ, ವಿಚಾರಿಸಿ ತಿಳಿದು ಬಾ'

ಎಂದ. ಅವನು ದ್ರೌಪದಿಯ ಬಳಿಗೆ ಹೋಗಿ 'ನೀನಾರು? ನಿಮ್ಮಾಶ್ರಮಕ್ಕೆ ಜಯದ್ರಥ ಇತರ ರಾಜರೊಡನೆ ಬಂದಿದ್ದಾನೆ' ಎಂದ. ದ್ರೌಪದಿ ತಾನು ಯಾರೆಂಬುದನ್ನು ಹೇಳಿ ಬಂದ ರಾಜರಿಗೆ ಅತಿಥಿ ಸತ್ಕಾರ ಮಾಡುವ ಉದ್ದೇಶದಿಂದ ಆಶ್ರಮದೊಳಗೆ ನಡೆದಳು. ಕೋಟಿಕಾಶ್ಯನಿಂದ ಎಲ್ಲವನ್ನೂ ತಿಳಿದ ಜಯದ್ರಥ ತಾನೆ ಬಂದು 'ದ್ರೌಪದಿ, ವನವಾಸ ಮಾಡುತ್ತಿರುವ ನಿರ್ಗತಿಕರಾದ ಪಾಂಡವರನ್ನು ತೊರೆದು ನನ್ನ ಬಳಿಗೆ ಬಾ. ನೀನು ತಾನಾಗಿ ನನ್ನ ರಥವೇರು. ಇಲ್ಲದಿದ್ದರೆ ಬಲಾತ್ಕಾರದಿಂದ ಒಯ್ಯಬೇಕಾಗುತ್ತದೆ' ಎನ್ನುತ್ತ ಕೈಹಿಡಿದೆಳೆದ.

ತಯಾ ಧೂತೋ ನಿಪಪಾತಾಶು ಭೂಮೌ
ಪುನಃ ಸಸಂಜ್ಞೋಽಭ್ಯಗಮದ್ ವಿಲಜ್ಜಃ।
ತತೋಽಸಹಾಯತ್ವತ ಏವ ಕೃಷ್ಣಾ
ಧೌಮ್ಯಾಯೋಕ್ತ್ವಾಸಾಗ್ನಿರನ್ವೇಹಿ ಮೇತಿ ॥೩೯॥
ಸಮಾರುಹತ್ ಸೈಂಧವಸ್ಯೈವ ಯಾನಂ
ಸುಖಿಂ ನ ಯಾಸೀತಿ ತಮೀರಯಿತ್ವಾ।
ತದಾ ನಿಮಿತ್ತಾನಿ ನಿಶಾಮ್ಯ ಪಾರ್ಥಾಃ
ಸಮಾಯಯುಸ್ತ್ವರಯೈವಾಶ್ರಮಾಯ ॥೪೦॥

ದ್ರೌಪದಿ ಕೈ ಕೊಡವಿಕೊಂಡಾಗ ಜಯದ್ರಥ ತಕ್ಷಣ ನೆಲದಲ್ಲಿ ಬಿದ್ದು ಮೂರ್ಛೆ ಹೋದ. ಪುನಃ ಎದ್ದು ಬಂದ, ನಾಚಿಕೆಯಿಲ್ಲದ ಆತ. ದ್ರೌಪದಿ ತಾನೀಗ ಅಸಹಾಯಕಳಾಗಿದ್ದೇನೆ ಎಂದು, ಧೌಮ್ಯರಿಗೆ ಅಗ್ನಿ ಸಹಿತರಾಗಿ ನನ್ನನ್ನು ಹಿಂಬಾಲಿಸಿ ಬನ್ನಿರೆಂದು ಹೇಳಿ, ಸೈಂಧವನಿಗೆ, 'ನೀನು ಸುಖವಾಗಿ ಹೋಗುವುದಿಲ್ಲ!' ಎನ್ನುತ್ತ ಅವನ ರಥವನ್ನೇರಿದಳು. ಆಗ ಉತ್ಪಾತಗಳನ್ನು ಕಂಡು ಪಾಂಡವರು ವೇಗದಿಂದ ಆಶ್ರಮಕ್ಕೆ ಬಂದರು.

[1]ಆಶ್ರಮದಲ್ಲಿ ಪತಿಪತ್ನಿಯರಿಬ್ಬರೂ ಇಲ್ಲದಿದ್ದರೆ ಅವರ ಔಪಾಸನಾಗ್ನಿ ನಾಶವಾಗುವುದು. ಅದರಿಂದ ದ್ರೌಪದಿ ತಾನು ಜಯದ್ರಥನ ರಥವೇರಿ ಹೊರಟಾಗ ಧೌಮ್ಯರು ಅಗ್ನಿಸಹಿತರಾಗಿ ತನ್ನನ್ನು ಹಿಂಬಾಲಿಸಿ ಬರಲಿ ಎನ್ನುತ್ತಾಳೆ.

ಶ್ರುತ್ವಾ ದಾಸೀವಚನಾತ್ ಸರ್ವಮೇವ
ಚಕ್ರುಃ ಕ್ಷಿಪ್ರಂ ಸೈಂಧವಸ್ಯಾನುಯಾನಂ।
ಆಕ್ರೋಶಮಾನಂ ಭೀಮಸೇನೇತಿ ಧೌಮ್ಯಂ
ದೃಷ್ಟ್ವಾ ತಸ್ಯಾಗ್ರೇ ಸೈಂಧವಂ ಚಾತಿಪಾಪಂ ॥೪೧॥

1. ದಂಪತ್ಯೋರ ಸನ್ನಿಧಾನೇಽಗ್ನಿನಾಶಶಂಕಯಾ ಸಾಗ್ನಿರಿತ್ಯುಕ್ತಂ। -ವರದರಾಜೀಯ

ಚಕ್ರುರ್ನಾದಾನ್ ಸಿಂಹವತ್ ಪಾಂಡುಪುತ್ರಾ
ದೃಷ್ಟ್ವಾ ಕೃಷ್ಣಾ ಚಾವತರದ್ ರಥಾತ್ ತದಾ ।
ಧೌಮ್ಯೇನ ಸಾರ್ಧಂ ಸಾ ಯಯೌ ಚಾಶ್ರಮಾಯ
ಸೈನ್ಯಂ ಪಾರ್ಥಾಸ್ತತ್ರ ನಿಜಘ್ನುರೋಜಸಾ ॥೩೯॥

ಪಾಂಡವರು ದಾಸಿಯ ಮಾತಿನಿಂದ ಎಲ್ಲವನ್ನೂ ಕೇಳಿ ತಿಳಿದು ಬೇಗನೆ ಸೈಂಧವನನ್ನು ಬೆನ್ನಟ್ಟಿ ಹೋದರು. 'ಭೀಮಸೇನ!' ಎಂದು ಧೌಮ್ಯರು ಕೂಗುತ್ತಿದ್ದುದನ್ನೂ ಅವರಿಗೆ ಮುಂಭಾಗದಲ್ಲಿ ಮಹಾಪಾಪಿ ಸೈಂಧವ ಹೋಗುತ್ತಿದ್ದುದನ್ನೂ ಕಂಡು ಸಿಂಹನಾದ ಮಾಡಿದರು. ದ್ರೌಪದಿ ಅವರನ್ನು ಕಂಡು ರಥದಿಂದಿಳಿದು ಧೌಮ್ಯರೊಂದಿಗೆ ಆಶ್ರಮದ ಕಡೆಗೆ ನಡೆದಳು. ಪಾಂಡವರು ಅಲ್ಲಿ ಸೈಂಧವನ ಸೈನ್ಯವನ್ನು ಪರಾಕ್ರಮದಿಂದ ಸಂಹರಿಸಿದರು.

ಅಗ್ರೇ ಕೃಷ್ಣಾಂ ಯೋಽವದತ್ ಸಿಂಧುರಾಜಂ
ಯಾಹೀತಿ ತಂ ಕೋಟಿಕಾಶ್ಯಂ ಸುಪಾಪಂ ।
ಛಿತ್ವಾ ಶಿರೋ ಮೃತ್ಯವೇ ಭೀಮಸೇನೋ
ನಿವೇದಯಾಮಾಸ ತಮಃ ಸ ಚಾಗಾತ್ ॥೪೦॥

ಮೊದಲಿಗೆ, ದ್ರೌಪದಿಯನ್ನು ಅಪಹರಿಸೆಂದು ಸೈಂಧವನಿಗೆ ಹೇಳಿದ ಮಹಾಪಾಪಿ ಕೋಟಿಕಾಶ್ಯನನ್ನು ಭೀಮಸೇನ ಶಿರಶ್ಛೇದ ಮಾಡಿ ಮೃತ್ಯುವಿಗೆ ನೀಡಿದ. ಆ ಕೋಟಿಕಾಶ್ಯ ತಮಸ್ಸಿಗೆ ನಡೆದ.

ಭೀಮ ಸೈಂಧವನೊಡನೆ ಯುದ್ಧ ಮಾಡುತ್ತಿದ್ದಾಗ ಸೈಂಧವನ ರಕ್ಷಣೆಗಾಗಿ ಕೋಟಿಕಾಶ್ಯ ಬಂದು ಭೀಮನನ್ನು ಇದಿರಿಸಿದ. ಭೀಮ ಅವನ ಸಾರಥಿಯನ್ನು ಕೊಂದು ರಥವನ್ನು ಪುಡಿಮಾಡಿ ಪ್ರಾಸಾಯುಧದಿಂದ ಶಿರಶ್ಛೇದ ಮಾಡಿದ. ಆತ ಸತ್ತು ತಮಸಿನಲ್ಲಿ ಬಿದ್ದ. ಏಕೆಂದರೆ ಸೈಂಧವನಿಗೆ ದ್ರೌಪದಿಯನ್ನು ಅಪಹರಿಸಲು ಪ್ರೋತ್ಸಾಹ ನೀಡಿದವನು ಅವನೆ.

ಹತ್ವಾ ಸೇನಾಮಖಿಲಾಂ ಸೈಂಧವಸ್ಯ
ಭೀಮಾರ್ಜುನೌ ಸಯಮಂ ಧರ್ಮರಾಜಂ ।
ವಿಸೃಜ್ಯ ಧಾವಂತಮಥಾನುಜಗ್ಮತು-
ರ್ಜಯದ್ರಥಂ ವಿರಥಂ ಫಲ್ಗುನೋಽಕಃ ॥೪೧॥

ಭೀಮಾರ್ಜುನರು ಸೈಂಧವನ ಎಲ್ಲ ಸೈನ್ಯವನ್ನೂ ಕೊಂದು ಧರ್ಮರಾಜ ನಕುಲ ಸಹದೇವರನ್ನು ಹಿಂದೆ ಕಳಿಸಿ ತಾವು ಮುಂದೆ ಧಾವಿಸುತ್ತಿದ್ದ ಜಯದ್ರಥನನ್ನು ಬೆನ್ನಟ್ಟಿದರು. ಅರ್ಜುನ ಅವನನ್ನು ವಿರಥನನ್ನಾಗಿ ಮಾಡಿದ.

ಜಯದ್ರಥ ತಮ್ಮ ತಂಗಿಯಾದ ದುಃಶಲೆಯ ಗಂಡ. ಧೃತರಾಷ್ಟ್ರನ

ಅಳಿಯ. ಆದರಿಂದ ಅವನನ್ನು ಕೊಲ್ಲಬೇಡಿರೆಂದ ಧರ್ಮರಾಜ. ಅವನನ್ನು ಬಿಡಬೇಡಿ, ಕೊಂದುಬಿಡಿ ಎಂದಳು ದ್ರೌಪದಿ. ಬಳಿಕ ಧರ್ಮರಾಜ ನಕುಲ ಸಹದೇವರು ದ್ರೌಪದಿಯನ್ನೂ ಧೌಮ್ಯರನ್ನೂ ಕರೆದುಕೊಂಡು ಆಶ್ರಮಕ್ಕೆ ತೆರಳಿದರು. ಭೀಮಾರ್ಜುನರು ಜಯದ್ರಥನ ಕಡೆಗೆ ಧಾವಿಸಿದರು. ಒಂದು ಕ್ರೋಶ ದೂರದಲ್ಲಿ ಓಡುತ್ತಿದ್ದ ಜಯದ್ರಥನ ಕುದುರೆಗಳನ್ನು ಅರ್ಜುನ ಬಾಣಗಳಿಂದ ಸಂಹರಿಸಿದ. ಜಯದ್ರಥ ಕಾಲ್ನಡೆಯಿಂದ ಓಡತೊಡಗಿದ.

ಪದ್ಭ್ಯಾಂ ಧಾವಂತಂ ಭೀಮಸೇನೋ ನಿಗೃಹ್ಯ
ದತ್ತ್ವಾ ಪ್ರಹಾರಾಂಶ್ಚ ಭೃಶಂ ತಮಾರ್ತಂ।
ಆದಾಯಾಧಾದ್ ದ್ರೌಪದೀಪಾದಯೋಶ್ಚ
ತಂ ಮೋಚಯಾಮಾಸ ಚ ಧರ್ಮಸೂನುಃ ॥೩೯॥

ಕಾಲ್ನಡೆಯಿಂದ ಧಾವಿಸುತ್ತಿದ್ದ ಜಯದ್ರಥನನ್ನು ಭೀಮಸೇನ ಹಿಡಿದು ಚೆನ್ನಾಗಿ ಒದೆಗಳನ್ನು ಕೊಟ್ಟು ಆರ್ತನಾದ ಆತನನ್ನು ದ್ರೌಪದಿಯ ಕಾಲುಗಳ ಮೇಲೆ ಚೆಲ್ಲಿದ. ಧರ್ಮರಾಜ ಬಿಡಿಸಿದ.

ದಾಸೋ ದ್ರೌಪದ್ಯಾ ಅಹಮಿತ್ಯೇವ ವಾಕ್ಯೇ
ತೇನೈವೋಕ್ತೇ ಭೀಮಸೇನೋಽಪ್ಯಮುಂಚತ್ ।
ಸ ವ್ರೀಡಿತೋಽವಾಗ್ವದನೋ ಯಯೌ ವನಂ
ಪಾರ್ಥಾಶ್ಚ ತತ್ರೋಷುರತಿಪ್ರಮೋದಿನಃ ॥೪೦॥

ನಾನು ದ್ರೌಪದಿಯ ದಾಸನೆಂದು ಜಯದ್ರಥ ಹೇಳಿದಾಗಲೆ ಭೀಮಸೇನ ಅವನನ್ನು ಬಿಟ್ಟ. ಅವನು ನಾಚಿ ಮುಖ ತಗ್ಗಿಸಿ ಕಾಡಿಗೆ ಹೊರಟು ಹೋದ. ಪಾಂಡವರು ಅಲ್ಲಿ ಸಂತುಷ್ಟರಾಗಿ ವಾಸಮಾಡಿದರು.

ಜಯದ್ರಥ ಕಾಡಿನ ಪೊದೆಗಳಲ್ಲಿ ತನ್ನ ರತ್ನಮಯವಾದ ಕಿರೀಟವನ್ನು ಎಸೆದು ಪ್ರಾಣರಕ್ಷಣೆಗಾಗಿ ಅಲ್ಲಲ್ಲಿ ಅಡಗಿ ಕುಳಿತುಕೊಳ್ಳಲು ಯತ್ನಿಸಿದಾಗ ಭೀಮ ರಥದಿಂದಿಳಿದು ಬಂದು ಅವನನ್ನು ಕೂದಲಲ್ಲಿ ಹಿಡಿದು ಎಳೆದು ನೆಲದಲ್ಲಿ ಕೆಡವಿ ಸ್ವಲ್ಪಮಾತ್ರ ಗಂಟಲು ಒತ್ತಿದ. ಅವನು ಎದ್ದು ಪುನಃ ಓಡಲು ತೊಡಗಿದಾಗ ಹಿಡಿದು ತಲೆಗೆ ಮಿದುವಾಗಿ ಒದ್ದ. ಕೈಯಿಂದ ಮಿದುವಾಗಿ ಥಳಿಸಿದ. ಆದರೂ ದುರ್ಬಲನಾದ ಆತ ಮೂರ್ಛೆಹೋದ. ದುಃಶಲೆಯ ಗಂಡನೆಂದು ಅವನನ್ನು ಉಳಿಸಲು ಧರ್ಮರಾಜ ಹೇಳಿದ್ದ. ಅರ್ಜುನನೂ ತಡೆಯುತ್ತಿದ್ದಾನೆ ಎಂದು ಭೀಮ ಅರ್ಧಚಂದ್ರ ಬಾಣದಿಂದ ಅವನ ಕೂದಲುಗಳನ್ನು ಕತ್ತರಿಸಿ ಐದು ಜುಟ್ಟುಗಳನ್ನಿಟ್ಟ, ದ್ರೌಪದಿ ಕೊಲ್ಲಲು

ಹೇಳಿದ್ದರಿಂದ ವಧೆಗೆ ಸಮಾನವಾದ, ಏಕೆ, ಅದಕ್ಕಿಂತಲೂ ಹೆಚ್ಚಾದ ಈ ರೀತಿಯ ಅಪಮಾನ ಮಾಡಿದ. ನಿನಗೆ ಬದುಕುವ ಆಸೆ ಇದ್ದರೆ ತುಂಬಿದ ಸಭೆಯಲ್ಲಿ 'ದ್ರೌಪದಿಗೆ ನಾನು ದಾಸ' ಎನ್ನಬೇಕು ಎಂದ. ಜಯದ್ರಥ ಒಪ್ಪಿದ. ಬಳಿಕ ಭೀಮ ಅವನನ್ನು ಕಟ್ಟಿ ರಥದಲ್ಲಿ ಆಶ್ರಮಕ್ಕೆ ಒಯ್ದು ಎಲ್ಲರ ಮುಂದೆ ದ್ರೌಪದಿಯ ಕಾಲುಗಳ ಮೇಲೆ ಕೆಡವಿದ. ಅವನು ತಾನು ದ್ರೌಪದಿಯ ದಾಸನೆಂದು ಹೇಳಿ ಬಿಡುಗಡೆ ಹೊಂದಿ ನಾಚಿ ತಲೆ ತಗ್ಗಿಸಿಕೊಂಡು ಹೊರಟುಹೋದ.

ಭಾಷಾತ್ರಯ ವಿಜ್ಞಾನ

ಮಾರ್ಕಂಡೇಯಸ್ತದಾಗತ್ಯ ತೇಷಾಮಕಥಯತ್ಕಥಾಃ।
ಬಹ್ವ್ಯಶ್ಚೈವ ವಿಚಿತ್ರಾಶ್ಚ ಭಾಷಾತ್ರಯಸಮನ್ವಿತಾಃ ॥೩೯೭॥

ಮಾರ್ಕಂಡೇಯ ಮುನಿ ಬಂದು ಪಾಂಡವರಿಗೆ ಮೂರು ಭಾಷೆಗಳಿಂದ ಕೂಡಿದ ವಿಚಿತ್ರವಾದ ಬಹಳ ಕಥೆಗಳನ್ನು ಹೇಳಿದ.

ಅರ್ಜುನ ಸ್ವರ್ಗದಿಂದ ಹಿಂತಿರುಗಿ ಬಂದ ಬಳಿಕ ಪಾಂಡವರು ಕಾಮ್ಯಕವನಕ್ಕೆ ಬಂದಾಗ ಶ್ರೀಕೃಷ್ಣ ಸತ್ಯಭಾಮಾ ಸಮೇತನಾಗಿ ಅವರನ್ನು ಕಾಣಲು ಬಂದ. ಆಗ ಮಾರ್ಕಂಡೇಯ ಮುನಿಯೂ ಬಂದ. ಸದಾ ಇಪ್ಪತ್ತೈದರ ಹರೆಯದ ಚಿರಂಜೀವಿ ಆತ. ಶ್ರೀಕೃಷ್ಣನ ಆದೇಶದಂತೆ ಆತ ಪಾಂಡವರಿಗೆ ಬ್ರಾಹ್ಮಣನ ತಪೋಬಲವನ್ನೂ ಹರಿಯ ಮತ್ಸ್ಯ ಕಲ್ಕಿ ಅವತಾರಗಳನ್ನೂ ಬಣ್ಣಿಸಿ, ಪ್ರಳಯಕಾಲದಲ್ಲಿ ಆಲದೆಲೆಯ ಮೇಲೆ ಮಲಗಿದ ಬಾಲಮುಕುಂದನನ್ನು ತಾನು ಕಂಡಂತೆ ವರ್ಣಿಸಿ ಆ ಮುಕುಂದನೆ ಈ ಕೃಷ್ಣನೆನ್ನುತ್ತ ಅವನನ್ನು ಶರಣು ಹೊಂದಿರೆಂದು ಉಪದೇಶಿಸಿದ. ಧರ್ಮವ್ಯಾಧನ ಕಥೆ, ಅಗ್ನಿಪುತ್ರರ ಉತ್ಪತ್ತಿ, ಷಣ್ಮುಖನ ಚರಿತ್ರೆ ಮುಂತಾದುವನ್ನೂ ವರ್ಣಿಸಿದ. ಇವೆಲ್ಲವೂ ಮಾರ್ಕಂಡೇಯ ಸಮಾಸ್ಯಾಪರ್ವದಲ್ಲಿ ವರ್ಣಿತವಾಗಿವೆ. 'ಸಮಾಸ್ಯಾ' ಎಂದರೆ ಸಹವಾಸ, ಜೊತೆಗೇ ಇದ್ದು ನಾನಾ ಕಥೆಗಳನ್ನು ಕೇಳುವುದು. ಮುಂದೆ ಮಾರ್ಕಂಡೇಯರು ರಾಮೋಪಾಖ್ಯಾನ ಪರ್ವದಲ್ಲಿ ಶ್ರೀರಾಮನ ಕಥೆಯನ್ನೂ ಪತಿವ್ರತಾಮಹಾತ್ಮ್ಯಪರ್ವದಲ್ಲಿ ಸಾವಿತ್ರೀ ಸತ್ಯವಾನರ ಕಥೆಯನ್ನೂ ವರ್ಣಿಸುತ್ತಾರೆ. ಈ ಕಥೆಗಳನ್ನು ಸರಿಯಾಗಿ ತಿಳಿಯಬೇಕಾದರೆ ಭಾಷಾತ್ರಯದ ಪರಿಜ್ಞಾನ ಬೇಕು.

ಲೋಕದರ್ಶನಮಾಶ್ರಿತ್ಯ ದೇವಾಶ್ಚ ಮುನಯಸ್ತಥಾ।
ಬ್ರೂಯುಃ ಕಥಾಸ್ತತ್ರ ಶಿಕ್ಷಾ ಗ್ರಾಹ್ಯಾ ನಾರ್ಥಃ ಕಥಂಚನ ॥೩೯೮॥

ಲೋಕರೀತಿಯನ್ನು ಅನುಸರಿಸಿ ದೇವತೆಗಳೂ ಮುನಿಗಳೂ ಕಥೆಗಳನ್ನು ಹೇಳಬಹುದು. ಆಗ ಅದರಲ್ಲಿ ನೀತಿಯನ್ನು ಮಾತ್ರ ಸ್ವೀಕರಿಸಬೇಕು. ಕಥಾ ವಸ್ತುವನ್ನಲ್ಲ.

[1]ವೇದ ಪುರಾಣ ಇತಿಹಾಸಗಳ ಭಾಷೆಗಳು ಮೂರು - ದರ್ಶನಭಾಷೆ, ಸಮಾಧಿಭಾಷೆ ಮತ್ತು ಗುಹ್ಯಭಾಷೆ ಎಂದು. ದರ್ಶನಭಾಷೆ ಎರಡು ಬಗೆಯಾಗಿದೆ. ಲೋಕದರ್ಶನ ಭಾಷೆ ಮತ್ತು ಪರದರ್ಶನ ಭಾಷೆ ಎಂದು. ಪರದರ್ಶನ ಭಾಷೆಯೂ ಎರಡು ಬಗೆ- ಲೌಕಿಕ ಪರದರ್ಶನ ಭಾಷೆ ಮತ್ತು ವೈದಿಕ ಪರದರ್ಶನ ಭಾಷೆ ಎಂದು. ಈ ಶ್ಲೋಕದಲ್ಲಿ ಈಗ ಲೋಕದರ್ಶನ ಭಾಷೆಯ ಬಗ್ಗೆ ಹೇಳಿದೆ. ಆದರ್ಶಮಾನವ ಹೀಗಿರಬೇಕೆಂದು ಲೋಕರೀತಿಯನ್ನು ತಿಳಿಸುವುದಕ್ಕಾಗಿ ಶ್ರುತಿ ಸ್ಮೃತ್ಯಾದಿ ಧರ್ಮಶಾಸ್ತ್ರರೂಪವಾದ ಲೋಕದರ್ಶನವನ್ನು ಅನುಸರಿಸಿ ಶ್ರೀರಾಮನ ಕಥೆಯನ್ನು ಮಾರ್ಕಂಡೇಯ ಮುನಿ ಹೇಳಿದ. ಹೀಗೆ ಮಾತಾಪಿತೃಗಳ ಶ್ರಾದ್ಧದಿನದಲ್ಲಿ ಶ್ರಾದ್ಧತಿಲತರ್ಪಣ ಮುಂತಾದುವನ್ನು ಮಾಡಬೇಕು. ತಂದೆ ತಾಯಿ ಗುರುಗಳಿಗೆ ನಮಿಸಬೇಕು ಎಂದು ಮುಂತಾಗಿ ಲೋಕೋಚಿತವಾದ ಧರ್ಮವನ್ನು ಹೇಳುವುದೇ ಲೋಕದರ್ಶನ ಭಾಷೆ. ರಾಮಕಥೆಯಲ್ಲಿ ತಂದೆ ಸತ್ತ ಬಳಿಕ ರಾಮ ಪಿತೃಶ್ರಾದ್ಧ ಮಾಡಿದ, ತಿಲಾಂಜಲಿ ನೀಡಿದ, ಅಗಸ್ತ್ಯಾದಿ ಮುನಿಗಳಿಗೆ ನಮಸ್ಕಾರ ಮಾಡಿದ, ರಾವಣ ಸೀತೆಯನ್ನು ಕದ್ದೊಯ್ದಾಗ ಸೀತಾನ್ವೇಷಣ ಮಾಡಿದ ಎಂದು ಮುಂತಾಗಿ ಹೇಳಿದೆ. ಇಲ್ಲಿ ಎಲ್ಲ ಕಡೆ ಲೋಕರೀತಿಯನ್ನು ಮಾತ್ರ ತೆಗೆದುಕೊಳ್ಳಬೇಕು. ಕಥಾವಸ್ತುವನ್ನಲ್ಲ. ಜನನ ಮರಣ ರಹಿತನಾದ ಸಾಕ್ಷಾತ್ ಹರಿಯ ಅವತಾರನಾದ ಶ್ರೀರಾಮನಿಗೆ ತಂದೆ

---

1. ದರ್ಶನ ಭಾಷಾ ದ್ವಿವಿಧಾ, ಲೋಕದರ್ಶನ ಭಾಷಾ ಪರದರ್ಶನ ಭಾಷಾ ಚೇತಿ। ಪರದರ್ಶನ ಭಾಷಾಪಿ ದ್ವಿವಿಧಾ ಲೌಕಿಕ ಪರದರ್ಶನ ಭಾಷಾ ವೈದಿಕ ಪರದರ್ಶನ ಭಾಷಾಚೇತಿ। ತತ್ರ ಲೋಕದರ್ಶನ ಭಾಷಾಂ ದರ್ಶಯತಿ ಲೋಕದರ್ಶನ ಮಾಶ್ರಿತ್ಯೇತಿ। ಲೋಕದರ್ಶನಂ ಸ್ಮೃತ್ಯಾದಿ ಧರ್ಮಶಾಸ್ತ್ರಂ, ಮಾತಾಪಿತ್ರೋರ್ಮೃತೇಽಹನಿ ಶ್ರಾದ್ಧತಿಲಾಂಜಲ್ಯಾದಿಕಂ ಕುರ್ಯಾತ್, ಪಿತ್ರೇ ಮಾತ್ರೇ ಗುರವೇ ಚ ನಮಸ್ಕುರ್ಯಾತ್ ಇತ್ಯಾದಿ ಲೋಕೋಚಿತ ಧರ್ಮ ಪ್ರತಿಪಾದಕಮಿತ್ಯರ್ಥಃ। ಈದೃಶಂ ಲೋಕದರ್ಶನ ಮಾಶ್ರಿತ್ಯ ದೇವಾಶ್ಚ ಮುನಯಶ್ಚ ಹರಾವಪಿ ಕಥಾಂ ಬ್ರೂಯುಃ। ತತ್ರ ಶಿಕ್ಷೈವ ಗ್ರಾಹ್ಯಾ, ಲೋಕಶಿಕ್ಷಾರ್ಥಮಿದಮುಕ್ತಮಿತ್ಯೇವೋಹ್ಯಂ। ಅರ್ಥಸ್ತು ಕಥಂಚನ ನ ಗ್ರಾಹ್ಯಃ। ಕೃತಕೃತ್ಯಸ್ಯ ಸರ್ವೋತ್ತಮಸ್ಯ ಹರೇಃ ಕರ್ತವ್ಯಾಭಾವಾತ್, ಪಿತೃಶ್ರಾದ್ಧ ಮುನಿವಂದನ ಸೀತಾನ್ವೇಷಣಾದಿಕಂ ಲೀಲೈವೇತ್ಯನಾದರಣೀಯಮಿತ್ಯರ್ಥಃ। ಅತ ಏವ ಮಾರ್ಕಂಡೇಯ ಮುನಿನಾ ಪಾಂಡವಾನ್ ಪ್ರತಿ ರಾಮಾಯಣ ಕಥಾ ಕಥನೇ ಪಿತರಿ ಮೃತೇ ಸತಿ ರಾಮೇಣ ಪಿತೃಶ್ರಾದ್ಧಂ ಕೃತಂ, ತಿಲಾಂಜಲಿರ್ದತ್ತಃ ಅಗಸ್ತ್ಯಾದಿ ಮುನಿವಂದನಂ ಕೃತಂ, ಸೀತಾನ್ವೇಷಣಂ ಕೃತಮಿತ್ಯಾದಿ ಯಾ ಕಥಾ ಕಥಿತಾ ತತ್ರಾಪಿ ಶಿಕ್ಷೈವ ಗ್ರಾಹ್ಯಾ, ನ ತ್ವರ್ಥಃ। ಹರ್ಯವತಾರಸ್ಯ ರಾಮಸ್ಯ ಪಿತ್ರಾದ್ಯಭಾವಾತ್ ಪಿತೃಶ್ರಾದ್ಧ ಮುನಿವಂದನ ಸೀತಾನ್ವೇಷಣಾದಿಕಂ ಲೀಲೈವೇತ್ಯನಾದರಣೀಯ ಮೇವೇತಿ ಭಾವಃ। -ವಾದಿರಾಜೀಯ

ತಾಯಿ ಮುಂತಾದವರಿಲ್ಲ. ಕೃತಕೃತ್ಯನಾದ ಆತನಿಗೆ ಕರ್ತವ್ಯ ಕರ್ಮವಿಲ್ಲ. ಆವನು ಮಾಡಿದ ಪಿತೃಶ್ರಾದ್ಧ ಮುನಿವಂದನ ಸೀತಾನ್ವೇಷಣ ಮೊದಲಾದುದು ಲೀಲೆ. ವಾಸ್ತವವೆಂದು ಸ್ವೀಕರಿಸಕೂಡದು.

[1]ಶ್ರೀಕೃಷ್ಣ ಭಕ್ತಿಯಿಂದ ಪೂಜ್ಯನಾದ ತಂದೆಯನ್ನು ನಮಸ್ಕರಿಸಿದ ನೆನ್ನುವಲ್ಲಿಯೂ ಮಗ ತಂದೆಗೆ ಭಕ್ತಿಯಿಂದ ನಮಸ್ಕರಿಸಬೇಕೆಂಬ ಲೋಕರೀತಿಯನ್ನು ಮಾತ್ರ ತೆಗೆದುಕೊಳ್ಳಬೇಕು ಹೊರತು ಶ್ರೀಕೃಷ್ಣನಿಗೂ ಪೂಜ್ಯನಾದ ಒಬ್ಬ ತಂದೆ ಇದ್ದಾನೆ ಎಂದು ಗ್ರಹಿಸಬಾರದು. ಶ್ರೀಕೃಷ್ಣನ ಮೃತಶರೀರಕ್ಕೆ ಅರ್ಜುನ ಅಗ್ನಿ ಸಂಸ್ಕಾರ ಮಾಡಿದನೆಂದಾಗಲೂ ಮೃತಶರೀರಕ್ಕೆ ಅಗ್ನಿಸಂಸ್ಕಾರ ಮಾಡಬೇಕೆಂಬ ಲೋಕರೀತಿಯನ್ನೇ ಗ್ರಹಿಸಬೇಕು. ಶ್ರೀಕೃಷ್ಣನಿಗೂ ದೇಹತ್ಯಾಗರೂಪವಾದ ಮರಣವಿದೆ ಎಂದು ತಿಳಿಯಬಾರದು.

ಅರ್ಥಃ ಸಮಾಧಿಭಾಷಾಸು ಗ್ರಾಹ್ಯಃ ಸರ್ವೋಽಪ್ಯಸಂಶಯಂ।
ಪರದರ್ಶನಭಾಷಾಸು ಜ್ಞೇಯಂ ತದ್ದರ್ಶನಂ ತಥಾ ॥೫೯॥
ಗ್ರಾಹ್ಯೋ ನಾರ್ಥೋ ವೈದಿಕಂ ತು ದರ್ಶನಂ ಗ್ರಾಹ್ಯಮೇವ ಹಿ।
ಅನ್ಯಾರ್ಥೋ ಗುಹ್ಯಭಾಷಾಸು ಗ್ರಾಹ್ಯ ಏವಂ ವಿನಿರ್ಣಯಃ ॥೬೦॥

ಸಮಾಧಿ ಭಾಷೆಗಳಲ್ಲಿ ಹೇಳಿದ ವಿಷಯವೆಲ್ಲವೂ ನಿಃಸಂಶಯವಾಗಿ ಗ್ರಾಹ್ಯ. ಪರದರ್ಶನ ಭಾಷೆಯಲ್ಲಿ ಹೇಳಿದಾಗ ಪರರ ದರ್ಶನ ಹಾಗೆ ಇದೆ ಎಂದು ಮಾತ್ರ ತಿಳಿಯಬೇಕು. ಹೇಳಿದ ವಿಷಯ ಗ್ರಾಹ್ಯವಲ್ಲ. ವೈದಿಕ ಪರದರ್ಶನವು ಮಾತ್ರ ಗ್ರಾಹ್ಯವೆ. ಗುಹ್ಯ ಭಾಷೆಗಳಲ್ಲಿ ಬೇರೆಯೆ ಅರ್ಥಗ್ರಾಹ್ಯ. ಹೀಗೆ ಶಾಸ್ತ್ರಗಳಲ್ಲಿ ಭಾಷಾನಿರ್ಣಯವಿದೆ.

[2]ಲೋಕದರ್ಶನ ಭಾಷೆ, ಲೌಕಿಕ ಪರದರ್ಶನ ಭಾಷೆ, ವೈದಿಕ ಪರದರ್ಶನ ಭಾಷೆ ಎಂಬ ಈ ಮೂರು ಬಗೆಯ ದರ್ಶನ ಭಾಷೆಗಳನ್ನೂ

---

1. 'ಕೃಷ್ಣೋ ವವಂದೇ ಪಿತರಂ ಭಕ್ತ್ಯಾ ಪೂಜ್ಯತಮಂ ಹ್ಯಜಃ' ಇತ್ಯತ್ರ ಪುತ್ರೇಣ ಭಕ್ತ್ಯಾ ಪಿತೃವಂದನಂ ಕರ್ತವ್ಯಮಿತ್ಯಾದಿರೂಪಾ ಶಿಕ್ಷಾಗ್ರಾಹ್ಯಾ, ಕೃಷ್ಣಸ್ಯ ಪೂಜ್ಯತಮಃ.ಕಶ್ಚನ ಪಿತಾ ವರ್ತತ ಇತ್ಯಾದಿ ರೂಪೋರ್ಥಸ್ತು ನ ಗ್ರಾಹ್ಯಃ।ಕೃಷ್ಣಸ್ಯ ದೇಹಂ ತ್ವದಹದರ್ಜುನಃ ಪತಿತಂ ಭುವೀತ್ಯತ್ರ ಮೃತದೇಹಸ್ಯಾಗ್ನಿ ಸಂಸ್ಕಾರಃ ಕರ್ತವ್ಯ ಇತ್ಯಾದಿರೂಪಾ ಶಿಕ್ಷಾಗ್ರಾಹ್ಯಾ, ಕೃಷ್ಣ ದೇಹ ಪತನಾದಿ ರೂಪೋಽರ್ಥಸ್ತು ನ ಗ್ರಾಹ್ಯಃ। -ಜನಾರ್ದನೀಯ

2. ಸಮಾಧಿ ಭಾಷಾಸ್ವಿತ್ಯತ್ರ ತ್ರಿವಿಧಾಂ ದರ್ಶನ ಭಾಷಾಮನವಲಂಬ್ಯ ಕೇವಲ ಸ್ವಸಿದ್ಧಾಂತ ಪ್ರತಿಪಾದಕ ಸ್ಪಷ್ಟ ವಚನಂ ಯಥಾ 'ವಿಷ್ಣೋರ್ನುಕಂ' 'ನತೇ ವಿಷ್ಣೋ ಜಾಯಮಾನಃ' 'ಪರೋ ಮಾತ್ರಯಾ ತನ್ವಾ ವೃಧಾನ' 'ನಾಸ್ತಿ ನಾರಾಯಣ ಸಮಂ ನಭೂತಂ ನಭವಿಷ್ಯತಿ' ಇತ್ಯಾದಿಕಂ। ನ ಚೇದಮಪಿ ವೈಷ್ಣವ ದರ್ಶನಭಾಷಾ ರೂಪಮಿತಿ ವಾಚ್ಯಂ। ಕಸ್ಯಚಿತ್ ಸ್ವಸಿದ್ಧಾಂತಸ್ಯಾಭಾವೇ ಮೂಕತಾಪ್ರಸಂಗಾತ್ ಪರಿಶೇಷಾದ್ ವೈಷ್ಣವ ಸಿದ್ಧಾಂತಸ್ಯ ಸ್ವಸಿದ್ಧಾಂತತ್ವೇನ ಆಪಾತತಃ ಸ್ವಾನಭಿಮತಾರ್ಥ ಪ್ರತಿಪಾದಕ ದರ್ಶನ

ಆಶ್ರಯಿಸದೆ ತಾನು ಒಪ್ಪಿರುವ ಸಿದ್ಧಾಂತವನ್ನೇ ಸ್ಪಷ್ಟವಾಗಿ ನಿರೂಪಿಸುವ ಭಾಷೆ ಸಮಾಧಿಭಾಷೆ ಉದಾ. 'ಹರಿಯ ಅದ್ಭುತ ವ್ಯಾಪಾರಗಳನ್ನು ಯಾರು ಎಣಿಸಬಲ್ಲ?' 'ಹರಿ, ನಿನಗೆ ಸಮಾನನೆಂದೂ ಹುಟ್ಟಿಲ್ಲ, ಹುಟ್ಟುವುದೂ ಇಲ್ಲ' 'ನಿನ್ನ ಮಹಿಮೆಗಳಿಗೆ ಪಾರವಿಲ್ಲ' 'ನಾರಾಯಣನಿಗೆ ಸಮನು ಹಿಂದೆ ಇರಲಿಲ್ಲ, ಮುಂದೆ ಬರುವುದಿಲ್ಲ' ಇತ್ಯಾದಿ ಶ್ರುತಿಸ್ಮೃತಿಗಳು.

'ಇದು ವೈಷ್ಣವದರ್ಶನ ಭಾಷೆಯೆ ಆಗಿರುವುದರಿಂದ ಪರದರ್ಶನ

ಭಾಷಾತ್ವಸ್ಯ ಈದೃಶ ವಾಕ್ಯೇಷ್ವಸಂಭವಾತ್।

ಪರದರ್ಶನ ಭಾಷಾಸು – ಪರೇಷಾಂ ವೈದಿಕೇಭ್ಯೋಽನ್ಯೇಷಾಂ ಪಾಶುಪತಾದೀನಾಂ ಯಾನಿ ದರ್ಶನಾನಿ ತಾನ್ಯಾಶ್ರಿತ್ಯ ಯಾ ಭಾಷಾ ಭಾರತಾದಿಷು ತತ್ರ ತತ್ರ ಭಾಷಣಾನಿ, 'ಶಿವಃ ಸರ್ವೋತ್ತಮಃ, ಕೃಷ್ಣೇನ ಶಿವಂ ಪ್ರತಿ ತಪಃ ಕೃತಂ, ಕೈಲಾಸಯಾತ್ರಾ ಕೃತೇತ್ಯಾದಿ ರೂಪಾಣಿ ತದ್ದರ್ಶನಂ ತೇಷಾಂ ಸಿದ್ಧಾಂತಸ್ತಥಾ ತೇನ ಪ್ರಕಾರೇಣೇತಿ ಜ್ಞಾಪಯಿತುಮೇವ ವ್ಯಾಸಾದಯೋ ವದಂತೀತಿ ಜ್ಞೇಯಂ। ಅರ್ಥಃ ತತ್ರೋಕ್ತಃ ಶಿವ ಸರ್ವೋತ್ತಮತ್ವಾದಿ ರೂಪೋ ನ ಗ್ರಾಹ್ಯಃ। ಸ್ವೇನಾಪಿ ನಗ್ರಾಹ್ಯೋ, ನಾಪಿ ವಿವೇಕಿ ಲೌಕಿಕೈರಪಿ ಗ್ರಾಹ್ಯ ಇತಿ ಭಾವಃ।

ವೈದಿಕಂ ತು ದರ್ಶನಂ ಆಪಾತತಃ ಶಿವಾದೀನಾಮವಿದ್ಯಮಾನಮುತ್ತಮತ್ವಂ ದರ್ಶಯದ್ ರುದ್ರಸೂಕ್ತಾದಿಕಂ। ಅಸ್ಯ ಪರದರ್ಶನತ್ವೇಽಪ್ಯಪೌರುಷೇಯತ್ವೇನ ಸರ್ವಥಾಽಪ್ರಾಮಾಣ್ಯಾಯೋಗಾತ್ 'ರುಜಂ ದ್ರಾವಯತೇಯಸ್ಮಾತ್ ಇತ್ಯಾದಿ ಸ್ಮೃತ್ಯುಕ್ತ ವ್ಯುತ್ಪತ್ತಿಮಾಶ್ರಿತ್ಯ ತದಪಿ ಸೂಕ್ತಂ ವಿಷ್ಣುಸೂಕ್ತಮಿತಿ ಗ್ರಾಹ್ಯಮೇವ। ನತು ಪರದರ್ಶನವತ್ ತ್ಯಾಜ್ಯಮಿತಿ ಭಾವಃ। ಇಯಂ ಭಾಷಾ ಪರದರ್ಶನ ರೀತ್ಯಾ ಪ್ರವೃತ್ತತ್ವಾತ್ ದರ್ಶನ ಭಾಷೈವ। ನತು ಗುಹ್ಯಭಾಷಾ। -ವಾದಿರಾಜೀಯ

ನನು ಪರದರ್ಶನ ಸಿದ್ಧಸ್ಯಾರ್ಥಸ್ಯ ವಿಪ್ರಲಂಭಾದಿ ಮೂಲತ್ವೇನಾಗ್ರಾಹ್ಯತ್ವೇ ತತ್ಸೈವೋಕ್ತಸ್ಯ ವಿಷ್ಣು ಮಹಿಮಾದೇರಪ್ಯಗ್ರಾಹ್ಯತ್ವಂ ಪ್ರಾಪ್ತಮಿತ್ಯತ ಆಹ ವೈದಿಕಂತ್ವಿತಿ। ವೈದಿಕಂ ವೇದಮೂಲಂ ಚೇತ್ತರ್ಹಿ ದರ್ಶನ ಭಾಷಯೋಕ್ತಮಪಿ ಗ್ರಾಹ್ಯಮೇವ। ಪ್ರಮಾಣಮೂಲತ್ವೇನ ತದಂಶೇ ವಿಪ್ರಲಂಭಾದಿ ಮೂಲತ್ವಾಕಲ್ಪನಾದಿತಿ ಭಾವಃ। -ವರದರಾಜೀಯ

ದರ್ಶನಾಂತರ ಪ್ರಮೇಯಮನವಲಂಬ್ಯ ಯಾ ಲೌಕಿಕೇಽರ್ಥೇ ನಿಗೂಢಭಾಷಾ ಸಾ ಗುಹ್ಯ ಭಾಷಾ। ಈದೃಶ ಗುಹ್ಯಭಾಷಾಸು ಅನ್ಯಾರ್ಥೋ ಗ್ರಾಹ್ಯಃ। ಯಥಾ-

ಉಚ್ಛಿಷ್ಟಂ ಶಿವ ನಿರ್ಮಾಲ್ಯಂ ವಾಂತಂ ಚ ಮೃತ ಕರ್ಪಟಂ।
ಕಾಕವಿಷ್ಠಾ ಸಮಾಯುಕ್ತಂ ಪಂಚ ಪೂತಾನಿ ಭಾರತ ॥ ಇತ್ಯಾದಿ।

ಅತ್ರ ಯಥಾವಸ್ಥಿತಾರ್ಥಸ್ಯ ಬಾಧಿತತ್ವಾತ್ ಉಚ್ಛಿಷ್ಟಪದೇನೋಚ್ಛಿಷ್ಟಮಿವ ಪ್ರತೀಯಮಾನಂ ವತ್ತೋಚ್ಛಿಷ್ಟಮುಚ್ಯತೇ। ಶಿವನಿರ್ಮಾಲ್ಯ ಪದೇನ ಚ ಶಿವೇನ ಶಿರಸಿ ಧೃತತ್ವ ಮಾತ್ರತಃ ಶಿವನಿರ್ಮಾಲ್ಯಮಿವ ಪ್ರತೀಯಮಾನಂ ಗಂಗಾಜಲಮುಚ್ಯತೇ। ವಾಂತಪದೇನ ಮಧುಮಕ್ಷಿಕೋದರವಿನಿಃ ಸೃತತ್ವಮಾತ್ರೇಣ ವಾಂತೋಪಮಂ ಮಧೂಚ್ಯತೇ। ಅತ್ರಾಪಿ ಪುಷ್ಪರಸಾದಿಕಂ ಸ್ವಯಮನಾಸ್ವಾದ್ಯ ಚರ್ಮಪಾತ್ರ ಇವ ಸ್ವೋದರೇ ಸಂಗೃಹ್ಯ ಬಹಿರ್ನಿಃಸಾರಯಂತಿ। ಮಧುಭಾವಾನಂತರಮೇವ ಸ್ವೀಕುರ್ವಂತಿ। ಅತೋಽಗ್ನಿನಾ ಸ್ವಯಮನಾಸ್ವಾದ್ಯ ಸ್ವಜಿಹ್ವಯಾ ದೀಯಮಾನ ದೇವತಾಹುತಿವದಿದಮಪಿ ಶುದ್ಧಮಿತಿ ಭಾವಃ। ಮೃತ ಕರ್ಪಟಪದೇನ ಮೃತಕೃಮಿ ಕೋಶೋತ್ಥಂ ವಸ್ತ್ರಮುಚ್ಯತೇ। ಕಾಕವಿಷ್ಠಾ ಸಮಾಯುಕ್ತ ಪದೇನ ಕಾಕೈರಶ್ವತ್ಥಪಕ್ವ ಫಲಭಕ್ಷಣೇ ಕೃತೇ ಸತಿ ತದ್ವಿಷ್ಠಾಯಾಂ ಯದ್ ಬೀಜಂ ತದುತ್ಥೋಽಶ್ವತ್ಥ ಉಚ್ಯತೇ।

-ವಾದಿರಾಜೀಯ

ಭಾಷೆಯೆ ಹೊರತು, ತನ್ನ ಸಿದ್ಧಾಂತವಲ್ಲ' ಎನ್ನಕೂಡದು. ಎಲ್ಲ ದರ್ಶನವೂ ಪರದರ್ಶನವೇ ಎನ್ನುವುದಾದರೆ ತನ್ನದಾದ ಒಂದು ಸಿದ್ಧಾಂತವೆ ಇಲ್ಲವೆಂದರೆ ಮೂಕತ್ವವನ್ನೆ ವಹಿಸಬೇಕಾದೀತು. ಹೀಗಾಗಿ ವೈಷ್ಣವದರ್ಶನವನ್ನು ತನ್ನ ಸಿದ್ಧಾಂತವೆಂದು ವೇದವ್ಯಾಸರು ಒಪ್ಪಿರುವುದರಿಂದ ಅದು ಪರದರ್ಶನವೆನಿಸುವುದಿಲ್ಲ. ಸ್ವಸಿದ್ಧಾಂತವನ್ನೆ ಹೇಳುವುದರಿಂದ ಅದು ಸಮಾಧಿ ಭಾಷೆಯೇ ಆಗುತ್ತದೆ. ಈ ಭಾಷೆಯಲ್ಲಿ ಹೇಳಿದ ವಿಷಯವೆಲ್ಲವೂ ನಿಃಸಂಶಯವಾಗಿ ಮುಮುಕ್ಷುಗಳಾದ ಜಿಜ್ಞಾಸುಗಳೆಲ್ಲರಿಗೂ ಗ್ರಾಹ್ಯ.

ಪರದರ್ಶನ ಭಾಷೆ ಎರಡು ಬಗೆ- ಲೌಕಿಕ ಪರದರ್ಶನ ಭಾಷೆ ಮತ್ತು ವೈದಿಕ ಪರದರ್ಶನ ಭಾಷೆ ಎಂದು. ಲೌಕಿಕ ಪರದರ್ಶನವೆಂದರೆ ಅವೈದಿಕವಾದ, ವೇದ ಮೂಲಕವಲ್ಲದ ಪಾಶುಪತಾದಿ ಪರಸಿದ್ಧಾಂತಗಳು. ಅವು ಲೋಕದಲ್ಲಿ ಹೀಗೆ ಇವೆ, ಹೊರತು ನನ್ನ ಸಿದ್ಧಾಂತವಲ್ಲ ಎಂಬ ಅಭಿಪ್ರಾಯದಿಂದ ವೇದವ್ಯಾಸರು ಭಾರತಾದಿಗಳಲ್ಲಿ ಅಲ್ಲಲ್ಲಿ ಶಿವನೆ ಸರ್ವೋತ್ತಮ, ಶ್ರೀಕೃಷ್ಣ ಶಿವನ ಕುರಿತು ತಪಸ್ಸು ಮಾಡಿದ, ಕೈಲಾಸ ಯಾತ್ರೆ ಮಾಡಿದ, ಎಂದು ಮುಂತಾಗಿ ಪಾಶುಪತಾದಿ ಸಿದ್ಧಾಂತ ಪ್ರಮೇಯಗಳನ್ನು ತೋರಿಸುತ್ತಾರೆ. ಇದು ಲೌಕಿಕ ಪರದರ್ಶನ ಭಾಷೆ. ಇದರಲ್ಲಿ ಹೇಳಿದ ಶಿವ ಸರ್ವೋತ್ತಮತ್ವಾದಿಗಳು ತನಗೂ ಗ್ರಾಹ್ಯವಲ್ಲ ಜಿಜ್ಞಾಸುಗಳಿಗೂ ಗ್ರಾಹ್ಯವಲ್ಲ.

'ವೈದಿಕ ಪರದರ್ಶನ ಗ್ರಾಹ್ಯ' ಎಂದರೆ ವೇದದಲ್ಲಿಯೆ ರುದ್ರ ಸೂಕ್ತ ಮುಂತಾದವುಗಳಲ್ಲಿ ಮೇಲುನೋಟಕ್ಕೆ ಶಿವಸರ್ವೋತ್ತಮತ್ವಾದಿಗಳನ್ನು ಹೇಳುತ್ತಿರುವುದರಿಂದ ಪಾಶುಪತಾದಿ ಪರದರ್ಶನಗಳನ್ನು ಹೇಳಿದಂತೆ ಕಾಣುತ್ತದೆ. ಇದು ವೈದಿಕ ಪರದರ್ಶನ. ಇದು ವೇದ ತಾನು ಒಪ್ಪಿರುವ ಸಿದ್ಧಾಂತವಲ್ಲ, ಪರದರ್ಶನವೆ. ಹಾಗಿದ್ದರೂ ವೇದ ಅಪೌರುಷೇಯವಾಗಿರುವುದರಿಂದ ಅಪ್ರಮಾಣವಾಗಲಾರದು, ಸರ್ವಥಾ ಅಗ್ರಾಹ್ಯವಾಗಲಾರದು ಎಂದು 'ರೋಗಪರಿಹಾರಕನಾದ್ದರಿಂದ ಹರಿಯೆ ರುದ್ರನೆನಿಸುತ್ತಾನೆ' ಎಂಬಂತೆ 'ರುದ್ರ'ನೆಂದರೆ ವಿಷ್ಣುವೆ ಎಂದು ಗ್ರಹಿಸಿ ರುದ್ರಸೂಕ್ತ ವಿಷ್ಣು ಸರ್ವೋತ್ತಮತ್ವವನ್ನೇ ಹೇಳುತ್ತದೆ, ಅದು ಗ್ರಾಹ್ಯ ಎನ್ನಬೇಕು.

ಅನ್ಯಾರ್ಥವನ್ನು ಸ್ವೀಕರಿಸಿದ ಮಾತ್ರಕ್ಕೆ ಇದನ್ನು ಗುಹ್ಯಭಾಷೆ ಎನ್ನಕೂಡದು. ಪರದರ್ಶನ ರೀತಿಯಿಂದ ಪ್ರವೃತ್ತವಾಗಿರುವುದರಿಂದ ಇದು ಪರದರ್ಶನ ಭಾಷೆಯೆ ಎಂದು ವಾದಿರಾಜೀಯದಲ್ಲಿ ಹೇಳಿದೆ.

ಲೌಕಿಕ ಪರದರ್ಶನ ಭಾಷೆಯಲ್ಲಿ ಹೇಳಿದ ಶೈವಸ್ಕಾಂದಾದಿ ಪುರಾಣ ವಚನಗಳಲ್ಲಿಯೂ ಅಲ್ಲಲ್ಲಿ ಬರುವ ವಿಷ್ಣು ಮಹಿಮೆಯೂ ವೈದಿಕ, ಅಂದರೆ ವೇದಸಮ್ಮತವೆಂದು ಅದು ಗ್ರಾಹ್ಯವೆ ಎನ್ನುತ್ತದೆ ವರದರಾಜೀಯ. ಇವರ ಅಭಿಪ್ರಾಯದಂತೆ ಪರದರ್ಶನಗಳಲ್ಲಿ ಅಂತರ್ಗತವಾದ ಕೆಲವು ವೇದ ಸಮ್ಮತವಾದ ಅಂಶಗಳನ್ನು ನಿರ್ಣಯ ವೈದಿಕ ಪರದರ್ಶನವೆಂದು ಕರೆದಿದೆ.

ಯಾವ ದರ್ಶನ ಪ್ರಮೇಯಗಳನ್ನೂ ಆಶ್ರಯಿಸದೆ ಲೌಕಿಕ ವಿಷಯವನ್ನೇ ನಿಗೂಢವಾಗಿ ಹೇಳುವುದು ಗುಹ್ಯಭಾಷೆ. ಉದಾ. ಎಂಜಲು, ಶಿವನಿರ್ಮಾಲ್ಯ, ವಾಂತಿ ಮಾಡಿದ್ದು, ಹೆಣದ ಬಟ್ಟೆ, ಕಾಗೆಯ ವಿಷ್ಠೆಯಲ್ಲಿ ಹುಟ್ಟಿದ್ದು - ಈ ಐದು ಪವಿತ್ರ ಎಂದು ಮಹಾಭಾರತ ಹೇಳಿದೆ. ಇಲ್ಲಿ ಮೇಲುನೋಟಕ್ಕೆ ಕಾಣುವ ಅರ್ಥಬಾಧಿತ. ಆದರೆ ನಿಗೂಢವಾಗಿ ಹೀಗೆ ಹೇಳಿದೆ - ಕರು ಎಂಜಲು ಮಾಡಿರುವ ಆಕಳ ಹಾಲು ಪವಿತ್ರ. ಶಿವ ತಲೆಯ ಮೇಲೆ ಧರಿಸಿರುವ ಗಂಗಾಜಲ ಪವಿತ್ರ. ಜೇನುನೊಣ ಹೂವಿನ ರಸವನ್ನು ಹೊಟ್ಟೆಯಲ್ಲಿಟ್ಟುಕೊಂಡು ಹೊರಗೆ ಹಾಕುವುದರಿಂದ ವಾಂತಿಯಂತೆ ಕಂಡರೂ ಜೇನುತುಪ್ಪ ಪವಿತ್ರ. ಏಕೆಂದರೆ ಜೇನುನೊಣ ಹೂವಿನ ರಸವನ್ನು ಉಣ್ಣುವುದಿಲ್ಲ. ಪಾತ್ರೆಯಲ್ಲಿ ಸಂಗ್ರಹಿಸಿಡುವಂತೆ ಹೊಟ್ಟೆಯಲ್ಲಿ ಸಂಗ್ರಹಿಸಿ ಹೊರಗೆ ಹಾಕುತ್ತದೆ. ಆ ಹೂವಿನ ರಸಗಳು ಮುಂದೆ ಜೇನಾಗಿ ಪರಿವರ್ತನೆಗೊಂಡಾಗ ಉಣ್ಣುತ್ತದೆ. ಅದರಿಂದ ಅಗ್ನಿ ಆಹುತಿಯನ್ನು ತಾನು ಉಣದೆ ದೇವತೆಗಳಿಗೆ ತಂದುಕೊಡುವಂತೆಯೇ ಇದು. ಹೆಣದ ಬಟ್ಟೆ ಎಂದರೆ ರೇಶಿಮೆ ಪಟ್ಟೆಮಡಿ. ರೇಶಿಮೆಗೂಡನ್ನು ನೀರಲ್ಲಿ ಬೇಯಿಸಿದಾಗ ಅದರ ಒಳಗಿರುವ ಹುಳು ಮೃತವಾಗುತ್ತದೆ. ಅಂಥ ಗೂಡಿನಿಂದ ಹೊರಗೆ ಬಂದ ಎಳೆಗಳಿಂದ ಪಟ್ಟೆಮಡಿ ನಿರ್ಮಾಣವಾಗುತ್ತದೆ. ಕಾಗೆಯ ವಿಷ್ಠೆಯಲ್ಲಿ ಜನಿಸಿದ್ದು ಅಶ್ವತ್ಥವೃಕ್ಷ. ಕಾಗೆ ಅಶ್ವತ್ಥದ ಹಣ್ಣನ್ನು ತಿಂದರೆ ಅದರ ಬೀಜ ವಿಷ್ಠೆಯಲ್ಲಿ ಇರುತ್ತದೆ. ಅದರಿಂದ ಹುಟ್ಟಿದರೂ ಅಶ್ವತ್ಥ ಪವಿತ್ರವೆ.

ಸಮಾಧಿ ಭಾಷೆಗಳು, ದರ್ಶನಭಾಷೆಗಳು, ಗುಹ್ಯ ಭಾಷೆಗಳು ಎಂದು ಬಹುವಚನವೇಕೆ ಎಂದರೆ, ಸಮಾಧಿ ದರ್ಶನ ಗುಹ್ಯ ಭಾಷೆಗಳು ಮೂರೂ ಮೂರು ವಿಧವಾಗಿರುತ್ತವೆ.

1. ಸಮಾಧಿ ಸಮಾಧಿ ಭಾಷೆ, ಸಮಾಧಿ ದರ್ಶನಭಾಷೆ, ಸಮಾಧಿ ಗುಹ್ಯ ಭಾಷೆ
2. ದರ್ಶನ ಸಮಾಧಿ ಭಾಷೆ, ದರ್ಶನ ದರ್ಶನ ಭಾಷೆ, ದರ್ಶನ ಗುಹ್ಯ ಭಾಷೆ
3. ಗುಹ್ಯ ಸಮಾಧಿ ಭಾಷೆ, ಗುಹ್ಯ ದರ್ಶನ ಭಾಷೆ, ಗುಹ್ಯ ಗುಹ್ಯ ಭಾಷೆ.

ಜಯದ್ರಥಸ್ತು ಭೀಮೇನ ಯದಾ ಪಂಚಶಿಖೀಕೃತಃ।
ತಪಸಾ ಶಿವಮಾರಾಧ್ಯ ವವ್ರೇ ಪಾಂಡವರೋಧನಂ।
ಋತೇಽರ್ಜುನಾದರ್ಜುನಸ್ಯ ತುಷ್ಟೋ ಹಿ ತಪಸಾ ಶಿವಃ ॥೪೦೧॥

ಜಯದ್ರಥ ಭೀಮನಿಂದ ತಲೆಯಲ್ಲಿ ಐದು ಜುಟ್ಟು ಇಡಿಸಿಕೊಂಡಾಗ ಅವನು ತಪಸ್ಸಿನಿಂದ ಶಿವನನ್ನು ಆರಾಧಿಸಿ ಅರ್ಜುನನನ್ನು ಹೊರತು ಎಲ್ಲ ಪಾಂಡವರನ್ನು ಇದಿರಿಸಿ ತಡೆಯುವ ಶಕ್ತಿಯನ್ನು ಪಡೆದುಕೊಂಡ. ಏಕೆಂದರೆ ಅರ್ಜುನನಿಗೆ ತಪಸ್ಸಿನಿಂದ ಶಿವ ಮೊದಲೇ ಒಲಿದಿದ್ದ.

ಐದು ಮಂದಿ ಪಾಂಡವರನ್ನೂ ತಾನು ಯುದ್ಧದಲ್ಲಿ ಗೆಲ್ಲಬೇಕೆಂದೇ ಜಯದ್ರಥ ಶಿವನಲ್ಲಿ ವರವನ್ನು ಬೇಡಿದ. ಆದರೆ ಶಿವನೆಂದ, 'ಅರ್ಜುನನನ್ನು ಹೊರತು ಉಳಿದ ಎಲ್ಲ ಪಾಂಡವರನ್ನು ಗೆಲ್ಲುವೆ. ಅರ್ಜುನ ನರನ ಅವತಾರ. ಬದರಿಕಾಶ್ರಮದಲ್ಲಿ ಬಹಳ ತಪಸ್ಸು ಮಾಡಿದ್ದಾನೆ. ಅರ್ಜುನನಾಗಿಯೂ ತಪಸ್ಸು ಮಾಡಿ ನನ್ನಿಂದ ಪಾಶುಪತಾಸ್ತ್ರವನ್ನೂ ಇಂದ್ರಾದಿ ಲೋಕಪಾಲಕರಿಂದ ವಜ್ರಾಸ್ತ್ರಾದಿ ಮಹಾ ಅಸ್ತ್ರಗಳನ್ನೂ ಪಡೆದಿದ್ದಾನೆ. ಸರ್ವಶಕ್ತನಾದ ಶ್ರೀಕೃಷ್ಣ ಸದಾ ಅವನಿಗೆ ರಕ್ಷಕನಾಗಿದ್ದಾನೆ. ಅವನನ್ನು ದೇವತೆಗಳೂ ಗೆಲ್ಲಲಾರರು, ನರರ ಪಾಡೇನು? ಉಳಿದ ನಾಲ್ವರು ಪಾಂಡವರನ್ನು ಒಂದು ದಿನದ ಮಟ್ಟಿಗೆ ಮಾತ್ರ ನೀನು ಗೆಲ್ಲುವೆ'.

ದುರ್ಯೋಧನನ ಪೌಂಡರೀಕ ಯಾಗ

ವನೇ ವಸತ್ಸ್ವೇವ ಚ ಪಾಂಡವೇಷು
ಚಕ್ರೇ ಯಜ್ಞಂ ಪೌಂಡರೀಕಾಖ್ಯಮೇವ।
ಸಂಸ್ಪರ್ಧಯಾ ರಾಜಸೂಯಸ್ಯ ರಾಜಾ
ದುರ್ಯೋಧನೋ ನಾಪ್ಯಸೌ ತತ್ಕಲಾರ್ಹಃ ॥೪೦೨॥

ಪಾಂಡವರು ವನವಾಸ ಮಾಡುತ್ತಿದ್ದಾಗಲೆ ಅವರ ರಾಜಸೂಯಕ್ಕೆ ಪ್ರತಿಯಾಗಿ ಸ್ಪರ್ಧೆಯಿಂದ ಪೌಂಡರೀಕವೆಂಬ ಯಾಗವನ್ನು ರಾಜಾ ದುರ್ಯೋಧನ ಮಾಡಿದ. ಆದರೆ ಆ ಯಾಗ ಪಾಂಡವರ ರಾಜಸೂಯಯಾಗಕ್ಕೆ ಹದಿನಾರನೆ ಒಂದಂಶದಷ್ಟೂ ಸಮವಾಗಲಿಲ್ಲ.

ಭೀಷ್ಮ ಯಾವಾಗಲೂ ಪಾಂಡವರ ವೀರ್ಯ ಪರಾಕ್ರಮಗಳನ್ನೇ ಹೊಗಳಿ ಕರ್ಣನನ್ನು ಜರಿಯುತ್ತಿದ್ದುದರಿಂದ ಕರ್ಣ ದುರ್ಯೋಧನನಿಗಾಗಿ ದಿಗ್ವಿಜಯ ಮಾಡಿ ಅಪಾರ ಧನಸಂಪತ್ತನ್ನು ತಂದ.

ದುರ್ಯೋಧನ ಆ ಧನದಿಂದ ತಾನೂ ಪಾಂಡವರಂತೆ ರಾಜಸೂಯ ಮಾಡಲು ಬಯಸಿದ. ಆಗ ಪುರೋಹಿತನೆಂದ 'ಒಂದೇ ಕುಲದಲ್ಲಿ ಎರಡು

ರಾಜಸೂಯ ಮಾಡುವಂತಿಲ್ಲ. ಮತ್ತು ರಾಜಸೂಯ ಮಾಡಿರುವ ಧರ್ಮರಾಜನನ್ನು ಗೆಲ್ಲದೆ ನೀನು ಬೇರೆ ರಾಜಸೂಯ ಮಾಡಲು ಅವಕಾಶವಿಲ್ಲ. ಆದರಿಂದ, ರಾಜಸೂಯಕ್ಕೆ ಸಮಾನವಾದ ಪೌಂಡರೀಕ ಯಾಗವನ್ನು ಮಾಡು'. ಅಂತೆಯೇ ದುರ್ಯೋಧನ ಯಾಗಮಾಡಿದ. ಆದರೆ ಅದು ಭಕ್ತಿಯಿಂದ ಮಾಡಿದ್ದಲ್ಲ. ಪಾಂಡವರ ಮೇಲಿನ ಮತ್ಸರದಿಂದ ಅವಮಾನ ಮಾಡುವುದಕ್ಕಾಗಿ. ಆದರಿಂದ ರಾಜಸೂಯಕ್ಕೆ ಎಳ್ಳಷ್ಟೂ ಸಮವಾಗಲಿಲ್ಲ.

ದುರ್ಯೋಧನಸ್ಯಾಜ್ಞಯಾ ಪಾಂಡವಾನಾಂ
ದುಃಶಾಸನಃ ಪ್ರೇಷಯಾಮಾಸ ದೂತಂ ।
ಆಗಚ್ಛತೇತ್ಯವಮಾನಾಯ ತಂ ತು
ಭೀಮೋಽವಾದೀದ್ರಣಯಜ್ಞಂ ಸ್ವಗಮ್ಯಂ ॥೪೦೩॥

ದುರ್ಯೋಧನನ ಆಜ್ಞೆಯಂತೆ ದುಃಶಾಸನ ಪಾಂಡವರನ್ನು ಅವಮಾನಿಸುವುದಕ್ಕಾಗಿ 'ನಾವು ಯಾಗಮಾಡುತ್ತೇವೆ, ಬನ್ನಿರೆಂ' ದು ದೂತನನ್ನು ಅವರ ಬಳಿಗೆ ಅಟ್ಟಿದ. ಭೀಮನೆಂದ 'ನಾವು ಯುದ್ಧ ಯಜ್ಞಕ್ಕೇ ಬರುವೆವು' ಎಂದು.

ದುಃಶಾಸನ ಒಬ್ಬ ದೂತನನ್ನು ಕರೆದು, 'ಪಾಪ ಪುರುಷರಾದ ಆ ಪಾಂಡವರನ್ನೂ ಜೊತೆಗೆ ಇರುವ ಬ್ರಾಹ್ಮಣರನ್ನೂ ಯಾಗಕ್ಕೆ ಬರಹೇಳು' ಎಂದ. ದೂತ ಬಂದು ಹಾಗೇ ಹೇಳಿದಾಗ ಧರ್ಮರಾಜನೆಂದ, 'ಕೌರವರು ಯಾಗ ಮಾಡುತ್ತಾರೆ ಎಂದರೆ ವಂಶದ ಘನತೆ ಹೆಚ್ಚುವುದರಿಂದ ಅದು ಸ್ವಾಗತಾರ್ಹವೆ. ಆದರೆ ನಾವು ವನವಾಸ ಪ್ರತಿಜ್ಞೆಯನ್ನು ಮುರಿದು ಬರುವಂತಿಲ್ಲ'. ಭೀಮನೆಂದ 'ವನವಾಸಾನಂತರ ಒಂದು ರಣಯಜ್ಞ ನಡೆಯಲಿದೆ. ಧರ್ಮರಾಜನ ಕೋಪವೆಂಬ ತುಪ್ಪದಾಹುತಿಯಿಂದ ಶಸ್ತ್ರಾಸ್ತ್ರಗಳೆಂಬ ಸಮಿತ್ತುಗಳಿಂಜ ಜ್ವಲಿಸುವ ಅಗ್ನಿಯಲ್ಲಿ ನಿಮ್ಮನ್ನು ಆಹುತಿ ಮಾಡಲು ಬರುತ್ತೇವೆ' ಎಂದು. ಉಳಿದ ಪಾಂಡವರು ಏನೂ ಹೇಳದೆ ಮೌನವಾಗಿದ್ದರು. ಯಾಗ ನಡೆಯಿತು. ವಾದಿಕರು ಅಂದರೆ ಯಥಾರ್ಥ ವಾದಿಗಳಾದ ಜನರು ಹೇಳಿದರು-

ಯೌಧಿಷ್ಠಿರಸ್ಯ ಯಜ್ಞಸ್ಯ ನ ಸಮೋ ಹ್ಯೇಷ ತೇ ಕ್ರತುಃ
ನೈವ ತಸ್ಯ ಕ್ರತೋರೇಷ ಕಲಾಮರ್ಹತಿ ಷೋಡಶೀಂ(ವನ. 258.4)

'ಯುಧಿಷ್ಠರನ ರಾಜಸೂಯಕ್ಕೆ ಸಮಾನವಲ್ಲ ನಿನ್ನ ಈ ಯಾಗ. ಅದರ ಹದಿನಾರನೆ ಒಂದಂಶಕ್ಕೂ ಸಮಾನವಲ್ಲ'.

ನೀಲಕಂಠೀಯದಲ್ಲಿ ವಾತರೋಗದಿಂದ ಬುದ್ಧಿಶಕ್ತಿ ಕಳೆದುಕೊಂಡವರು ವಾತಿಕರು ಅಂದರೆ, ಉಚಿತವಾದ ಮಾತನ್ನಾಡಲು ಯೋಗ್ಯತೆ ಇಲ್ಲದವರು ದುರ್ಯೋಧನನ ಯಾಗವನ್ನು ಮೇಲಿ ಹೇಳಿದಂತೆ ನಿಂದಿಸಿದರು ಎಂದಿದೆ. ಆದರ ಪ್ರಕಾರ ಭಾರತದಲ್ಲಿ 'ವಾದಿಕಾಃ' ಎಂಬಲ್ಲಿ 'ವಾತಿಕಾಃ' ಎಂದು ಪಾಠ. ಲಕ್ಷಾಲಂಕಾರದಲ್ಲಿ 'ವಾದಿಕಾಃ' ಎಂದು ಪಾಠವಿಟ್ಟುಕೊಂಡು ಯಥಾರ್ಥ ವಾದಿಗಳೆಂದು ವ್ಯಾಖ್ಯಾನಿಸಲಾಗಿದೆ.

ಕೌರವರ ಘೋಷಯಾತ್ರೆ

ತತೋ ದಿನೈಃ ಕೈಶ್ಚನ ಧಾರ್ತರಾಷ್ಟ್ರಾಃ
ಸಕರ್ಣಗಾಂಧಾರನೃಪಾಃ ಕುಮಂತ್ರತಃ ।
ಸಭಾರ್ಯಕಾಃ ಪಾಂಡವಾನ್ದ್ರೌಪದೀಂ ಚ
ಮಹೈಶ್ವರ್ಯಂ ದರ್ಶಯಿತ್ವಾವಮಂತುಂ ॥೪೦೪॥
ತೇ ಸ್ಯಂದನೈಃ ಕಾಂಚನರತ್ನಚಿತ್ರೈ
ರ್ಮಹಾಗಜೈಸ್ತುರಗೈಃ ಪತ್ತಿಭಿಶ್ಚ ।
ಸ್ವಲಂಕೃತಾಶ್ಚಿತ್ರಮಾಲ್ಯಾಂಬರಾಶ್ಚ
ವಿನಿರ್ಯಯುರ್ದ್ವೈತವನಾಯ ಶೀಘ್ರಂ ॥೪೦೫॥

। ಬಳಿಕ ಕೆಲವು ದಿನಗಳು ಕಳೆದಾಗ ಕೌರವರು ಕರ್ಣಶಕುನಿಗಳೊಂದಿಗೆ ಕೆಟ್ಟ ಮಂತ್ರಾಲೋಚನೆ ಮಾಡಿ, ತಮ್ಮ ಮಹಾ ಐಶ್ವರ್ಯವನ್ನು ತೋರಿಸುವ ಮೂಲಕ ಪಾಂಡವರನ್ನೂ ದ್ರೌಪದಿಯನ್ನೂ ಅವಮಾನಿಸುವ ಉದ್ದೇಶದಿಂದ ಒಳ್ಳೆಯ ಅಲಂಕಾರ ಮಾಡಿಕೊಂಡು ಸುಂದರ ಅಮೂಲ್ಯ ವಸ್ತ್ರಗಳನ್ನು ಧರಿಸಿ ಬಂಗಾರರತ್ನಮಯ ಸುಂದರ ರಥಗಳು ಮಹಾಗಜಗಳು ಕುದುರೆಗಳು ಕಾಲಾಳುಗಳೊಂದಿಗೆ ಪತ್ನೀ ಸಮೇತರಾಗಿ ವೇಗವಾಗಿ ದ್ವೈತವನಕ್ಕೆ ಹೊರಟರು.

ಗವಾಂ ದೃಷ್ಟಿಚ್ಛದ್ಮನಾ ನಿರ್ಗತಾಂಸ್ತಾನ್
ಜ್ಞಾತ್ವಾ ಶಕ್ರಸ್ತೇಜಸೋ ಭಂಗಕಾಮಃ ।
ತತ್ಸಾಮರ್ಥ್ಯಂ ವರಮಸ್ಮೈ ಪ್ರದಾಯ
ತದ್ಬಂಧನಾಯಾದಿಶಚ್ಚಿತ್ರಸೇನಂ ॥೪೦೬॥

ಗೋವುಗಳನ್ನು ನೋಡುವ ನೆಪದಿಂದ ಹೊರಟಿದ್ದ ಕೌರವರ ದುರುದ್ದೇಶವನ್ನು ತಿಳಿದು ದೇವೇಂದ್ರ ಅವರ ತೇಜೋಭಂಗ ಮಾಡಲು ಬಯಸಿದ. ಚಿತ್ರಸೇನ ಗಂಧರ್ವನಿಗೆ ಈ ಕಾರ್ಯದಲ್ಲಿ ಸಾಮರ್ಥ್ಯ ಬರಲಿ ಎಂದು ವರ ನೀಡಿ ಕೌರವರನ್ನು ಸೆರೆ ಹಿಡಿಯಲು ಆದೇಶಿಸಿದ.

ದ್ವೈತವನದಲ್ಲಿ ಹುಲ್ಲು ನೀರು ಸಮೃದ್ಧವಾಗಿ ಸಿಗುತ್ತಿದ್ದುದರಿಂದ ಅಲ್ಲಿ

ಗೋಪಾಲನೆ ಮಾಡುತ್ತಿದ್ದ ದುರ್ಯೋಧನ. ಗೋವುಗಳ ಯೋಗಕ್ಷೇಮ ವಿಚಾರಿಸಲು ಆಗಾಗ ಅಲ್ಲಿಗೆ ಬೆಟ್ಟಿ ನೀಡುತ್ತಿದ್ದ. ಹೊಸ ಕರುಗಳ ಬಣ್ಣ ವಯಸ್ಸು ಜಾತಿ ಸಂಖ್ಯೆ ಮುಂತಾದುವನ್ನು ಪರೀಕ್ಷಿಸಿ ಚಿಹ್ನೆಗಳನ್ನೂ ಹಾಕಿ ಎಲ್ಲ ವಿವರಗಳನ್ನೂ ವ್ಯವಸ್ಥಿತವಾಗಿ ಪುಸ್ತಕಗಳಲ್ಲಿ ದಾಖಲು ಮಾಡಿ ಇರಿಸುತ್ತಿದ್ದ. ಅದೇ ದ್ವೈತವನದಲ್ಲಿ ಪಾಂಡವರು ವಾಸಮಾಡುತ್ತಿದ್ದುದರಿಂದ ಅವರ ಮುಂದೆ ತಮ್ಮ ವೈಭವವನ್ನು ಪ್ರದರ್ಶಿಸಿ ವ್ಯಥೆಪಡಿಸಬೇಕೆಂದು ಶಕುನಿ ಕರ್ಣರು ಸಲಹೆ ನೀಡಿದರು. ನಾರುಡೆ ಉಟ್ಟ ದ್ರೌಪದಿಯ ಮುಂದೆ ಅಲಂಕೃತರಾದ ತಮ್ಮ ಹೆಂಡದಿರನ್ನು ಮೆರೆಸಬೇಕು. ಇದಕ್ಕಿಂತ ಹೆಚ್ಚಿನ ಸುಖವಿಲ್ಲವೆಂದುಕೊಂಡ ದುರ್ಯೋಧನ. ಇದಕ್ಕೆ ಧೃತರಾಷ್ಟ್ರ ಒಪ್ಪಲಾರನೆಂದು ಗೋವುಗಳನ್ನು ನೋಡುವ ನೆಪ ಒಡ್ಡಿದ. ಮೃಗ ಬೇಟೆಯಾಡುತ್ತೇವೆ ಎಂದ. ಅದಕ್ಕೂ ಧೃತರಾಷ್ಟ್ರ ಒಪ್ಪದಿದ್ದಾಗ ನಾವು ಪಾಂಡವರ ತಂಟೆಗೆ ಹೋಗುವುದಿಲ್ಲ, ನಮ್ಮಷ್ಟಕ್ಕೇ ನಾವು ಗೋವುಗಳನ್ನು ನೋಡಿಕೊಂಡು ಬರುವೆವೆಂದ. ಧೃತರಾಷ್ಟ್ರ ಹೇಗೋ ಒಪ್ಪಿಗೆ ನೀಡಿದ. ಒಡನೆ ಎಂಟು ಸಾವಿರ ರಥಗಳು ಮೂವತ್ತು ಸಾವಿರ ಆನೆಗಳು ಒಂಬತ್ತು ಸಾವಿರ ಕುದುರೆಗಳು ಅಸಂಖ್ಯ ಕಾಲಾಳುಗಳು, ಜೊತೆಗೆ ಬೇಟೆಯಾಡುವ ಹವ್ಯಾಸದ ನಾಗರಿಕರು ಎಲ್ಲರೂ ಹೊರಟರು. ವನವಿಹಾರಕ್ಕಾಗಿ ಎಲ್ಲ ನಾಗರಿಕರೂ ಹೊರಟರು. ಪಾಂಡವರ ಆಶ್ರಮದ ಬಳಿಯಲ್ಲಿಯೆ ಶಿಬಿರಗಳನ್ನು ಹಾಕಿಕೊಂಡರು. ಆಗ ಗಂಧರ್ವರು ಬಂದರು.

ಸ ಷಷ್ಟಿಸಾಹಸ್ರಕಕೋಟಿಯೂಥಪೈ
ರ್ಗಂಧರ್ವಮುಖ್ಯೈಃ ಸಂವೃತೋಽಗಾತ್ಸರಸ್ತತ್ ।
ಯಸ್ಮಿನ್ ಸ್ನಾತುಂ ವಾಂಛತಿ ಧಾರ್ತರಾಷ್ಟ್ರ
ಸ್ತದಾಜ್ಞಯಾ ಪುರುಷಾಸ್ತಾನಥೋಚುಃ ॥೪೦೭॥

ಅರವತ್ತು ಸಾವಿರ ಕೋಟಿ ಸೇನಾಧಿಪತಿಗಳಿಂದ ಕೂಡಿದ ಗಂಧರ್ವಶ್ರೇಷ್ಠರಿಂದ ಪರಿವೃತನಾಗಿ ಚಿತ್ರಸೇನ ಗಂಧರ್ವ ದ್ವೈತವನದ ಸರೋವರದ ಬಳಿಗೆ ಹೋದ. ಆಗ ಅದೇ ಸರೋವರದಲ್ಲಿ ಸ್ನಾನ ಮಾಡಲು ದುರ್ಯೋಧನ ಬಯಸಿದ್ದ. ಅವನಾಜ್ಞೆಯಿಂದ ಭಟರು ಗಂಧರ್ವರಿಗೆ ಹೇಳಿದರು.

ಸ್ನಾತುಂ ಸಮಾಯಾಸ್ಯತಿ ಧಾರ್ತರಾಷ್ಟ್ರೋ
ರಾಜೇಶ್ವರೋ ನಿಸ್ಸರಧ್ವಂ ತದಸ್ಮಾತ್ ।
ತೀರ್ಥಾದಾಜ್ಞಾಂ ಧಾರಯಂತಶ್ಚ ತಸ್ಯೇ-
ತ್ಯುಕ್ತಾ ಗಂಧರ್ವಾ ಜಹಸುಸ್ತಾನಥೋಚ್ಚೈಃ ॥೪೦೮॥

'ರಾಜಾಧಿರಾಜ ದುರ್ಯೋಧನ ಇಲ್ಲಿ ಸ್ನಾನ ಮಾಡಲು ಬರುತ್ತಿದ್ದಾನೆ. ಈ ತೀರ್ಥದಿಂದ ಆಚೆಗೆ ತೊಲಗಿರಿ. ಅವನ ಆಜ್ಞೆಯನ್ನು ಶಿರಸಾವಹಿಸಿರಿ'. ಹೀಗೆ ಹೇಳಿದಾಗ ಗಂಧರ್ವರು ಅವರನ್ನು ಗಟ್ಟಿಯಾಗಿ ಅಪಹಾಸ ಮಾಡಿ ನಕ್ಕರು.

ಊಚುರ್ವಯಂ ಮಾನಯಾಮಸ್ತದಾಜ್ಞಾಂ
ತ್ರಿಲೋಕಾನಾಂ ಯಃ ಪತಿಃ ಶಕ್ರದೇವಃ।
ನ ಮಾನುಷಾಣಾಮಪಿ ಚಕ್ರವರ್ತಿನಾಂ
ಕಿಂ ತ್ವಲ್ಪಸಾರಸ್ಯ ಸುಯೋಧನಸ್ಯ ॥೪೦೯॥

'ನಾವು ಮೂಲೋಕದೊಡೆಯನಾದ ದೇವೇಂದ್ರನ ಆಜ್ಞೆಯನ್ನು ಮನ್ನಿಸುವೆವು. ಮನುಷ್ಯಚಕ್ರವರ್ತಿಗಳ ಆಜ್ಞೆಯನ್ನೂ ಕೂಡ ಮನ್ನಿಸಲಾರೆವು ಎಂದ ಮೇಲೆ ಈ ಅಲ್ಪಶಕ್ತಿಉಳ್ಳ ದುರ್ಯೋಧನನ ಬಗ್ಗೆ ಏನು ಹೇಳಬೇಕು?'

ಇತೀರಿತೇ ಕುಪಿತೋ ಧಾರ್ತರಾಷ್ಟ್ರೋ
ಜಘಾನ ಗಂಧರ್ವವರಾನ್ ಶರೌಘೈಃ।
ಜಘ್ನುಃ ಸಕರ್ಣಾ ಅಪಿ ತಸ್ಯ ಸೋದರಾ
ಜಘ್ನುಶ್ಚ ತೇ ಧಾರ್ತರಾಷ್ಟ್ರಸ್ಯ ಸೇನಾಂ ॥೪೧೦॥

ಹೀಗೆ ಹೇಳಿದಾಗ ಕುಪಿತನಾದ ದುರ್ಯೋಧನ ಗಂಧರ್ವ ಪ್ರಮುಖರನ್ನು ಬಾಣ ಸಮೂಹಗಳಿಂದ ಹೊಡೆದ. ಅವನ ಸೋದರರೂ ಕರ್ಣನೂ ಅವರನ್ನು ಹೊಡೆದರು. ಅವರೂ ದುರ್ಯೋಧನನ ಸೈನ್ಯವನ್ನು ಹೊಡೆದರು.

ಮುಹೂರ್ತಮಾಸೀತ್ಸಮಮೇವ ಯುದ್ಧಂ
ತೇಷಾಂ ತದಾ ಧಾರ್ತರಾಷ್ಟ್ರಸ್ಯ ಚೈವ।
ಪುರಾಂಭಿಂದೋರ್ವರತೋ ಮಾಯಯಾ ಚ
ಗಂಧರ್ವವೀರಾ ವವೃಧುಸ್ತತಃ ಸ್ಮ ॥೪೧೧॥

ಒಂದು ಮುಹೂರ್ತ ಪರ್ಯಂತ ಗಂಧರ್ವರಿಗೂ ದುರ್ಯೋಧನನಿಗೂ ಯುದ್ಧ ಸಮವೇ ಆಯಿತು. ಬಳಿಕ ದೇವೇಂದ್ರನ ವರದಿಂದಲೂ ಮಾಯೆಯಿಂದಲೂ ಗಂಧರ್ವ ವೀರರ ಕೈ ಮೇಲಾಯಿತು.

ದುರ್ಯೋಧನನ ಭಟರು ದ್ವೈತವನದ ಸರೋವರದ ಬಾಗಿಲಿಗೆ ಬರುವುದರೊಳಗಾಗಿಯೆ ಸರೋವರದಲ್ಲಿ ಗಂಧರ್ವರು ಅಪ್ಸರೆಯರು ತುಂಬಿದ್ದರು. ಭಟರು ದುರ್ಯೋಧನನ ಆಜ್ಞೆಯನ್ನು ತಿಳಿಸಿದರೆ ಅವರು ಅಪಹಾಸ ಮಾಡಿ ನಕ್ಕರು. ದುರ್ಯೋಧನ ಕೋಪದಿಂದ 'ಎಲ್ಲ ದೇವತೆಗಳೊಂದಿಗೆ ದೇವೇಂದ್ರನೇ ಸ್ವತಃ ಬಂದರೂ ಸರಿಯೆ. ನಾವು

ಕೊಳದಲ್ಲಿ ವಿಹಾರ ಮಾಡುವುದು ನಿಶ್ಚಿತ' ಎನ್ನುತ್ತ ಯುದ್ಧವನ್ನು ಪ್ರಾರಂಭಿಸಿದ. ಕೌರವಸೇನೆಯ ಒಬ್ಬ ಯೋಧನಿಗೆ ಪ್ರತಿಯಾಗಿ ಹತ್ತು ಗಂಧರ್ವ ಸೈನಕರಿದ್ದುದರಿಂದ ಯುದ್ಧ ಬಿರುಸಾಗಿ ನಡೆಯಿತು. ಗಂಧರ್ವರು ಮಾಯಾಯುದ್ಧವನ್ನೂ ಮಾಡಿದರು. ಅವರ ಕೈಮೇಲಾಯಿತು.

[1]ಈ ಶ್ಲೋಕದಲ್ಲಿ 'ಪುರಾಂಭಿಂದು' ಎಂದು ದೇವೇಂದ್ರನ ಹೆಸರು. ವೇದದಲ್ಲಿ ಇದು ಕಂಡಿದೆ. ವೈರಿಗಳ ಪಟ್ಟಣಗಳನ್ನು ನಾಶಮಾಡುವವ ನೆಂದರ್ಥ. 'ಪುರಂದರ' ಎಂದರೂ ಇದೇ ಅರ್ಥ ಎಂದು ಫಲಾರೀಯದಲ್ಲಿ ಹೇಳಿದೆ.

ತೇಜೋಭಂಗಂ ತತ್ರ ಸುಯೋಧನಸ್ಯ
ಪಾರ್ಥಾರ್ಥಮತ್ರ ಪ್ರವಿಧಾತುಮೇವ ಚ।
ಬಲಂ ದದಾವಬ್ಜಜಃ ಕೇಶವಶ್ಚ
ಗಂಧರ್ವಾಣಾಂ ತೇಽಭ್ಯಯುರ್ಧಾರ್ತರಾಷ್ಟ್ರಾನ್ ॥೪೧೨॥

ಪಾಂಡವರಿಗಾಗಿ ದುರ್ಯೋಧನನ ತೇಜೋವಧೆ ಮಾಡುವುದಕ್ಕಾಗಿಯೇ ಶ್ರೀಹರಿಯೂ ಬ್ರಹ್ಮನೂ ಗಂಧರ್ವರಿಗೆ ಈ ಯುದ್ಧದಲ್ಲಿ ವಿಶೇಷ ಶಕ್ತಿ ನೀಡಿದ್ದರು. ಅದರಿಂದಲೂ ಗಂಧರ್ವರು ಕೌರವರನ್ನು ಆಕ್ರಮಿಸಿದ್ದರು.

ಸ ಚಿತ್ರಸೇನಃ ಪ್ರಥಮಂ ಕರ್ಣಮೇವ
ಯುಯೋಧ ಪಾರ್ಥಸ್ಪರ್ಧಯಾ ತೇನ ಯುಧ್ಯನ್।
ಕರ್ಣೋ ನಾಶಕ್ನೋದ್ ವಚನಾದ್ ಭಾರ್ಗವಸ್ಯ
ರಾಮಸ್ಯ ನಿತ್ಯಾಮಿತಷಡ್ಗುಣಸ್ಯ ॥೪೧೩॥

ಚಿತ್ರಸೇನ ಮೊದಲಿಗೆ ಕರ್ಣನೊಡನೆ ಹೋರಾಡಿದ. ಆಗ ಕರ್ಣ ಅರ್ಜುನನೊಡನೆ ಸ್ಪರ್ಧೆಯಿಂದಲೆ ಯುದ್ಧ ಮಾಡುತ್ತಿದ್ದುದರಿಂದ ನಿತ್ಯ ಅಪರಿಮಿತ ಷಡ್ಗುಣಶಾಲಿಯಾದ ಪರಶುರಾಮರ ಶಾಪದಿಂದ ಅವನು ಗೆಲ್ಲಲು ಶಕ್ತನಾಗಲಿಲ್ಲ.

ಸ ಭಗ್ನಯಾನಶ್ಚ ವಿಕರ್ಣಯಾನ-
ಮಾಸ್ಥಾಯ ತಸ್ಯೈವ ನಿಯಮ್ಯ ವಾಜಿನಃ।
ಪರಾದ್ರವತ್ತೇನ ಸಹೈವ ಶೀಘ್ರಂ
ದುರ್ಯೋಧನಶ್ಚಿತ್ರಸೇನಂ ಯುಯೋಧ ॥೪೧೪॥

---

1. ಪುರಾಂ ಶತ್ರುಪುರಾಣಾಂ ಭಿಂದೋಃ ಭೇದನ ಶೀಲಸ್ಯ ಪುರಂದರಸ್ಯೇತ್ಯರ್ಥಃ।
ಪುರಾಂ ಭಿಂದುರ್ಯುವಾ ಕವಿರಮಿತೌಜಾ ಅಜಾಯತ।
ಇಂದ್ರೋ ವಿಶ್ವಸ್ಯ ಕರ್ಮಣೋ ಧರ್ತಾವಜ್ರೀ ಪುರುಷ್ಟುತ ಇತಿ ಶ್ರುತೇಃ। -ಫಲಾರೀಯ

ಕರ್ಣ ತನ್ನ ರಥ ನಾಶವಾದಾಗ ವಿಕರ್ಣನ ರಥವೇರಿ ಅವನ ಕುದುರೆಗಳನ್ನು ನಡೆಸಿ ಅವನೊಂದಿಗೆ ಬೇಗನೆ ಪಲಾಯನ ಮಾಡಿದ. ದುರ್ಯೋಧನ ಚಿತ್ರಸೇನನೊಂದಿಗೆ ಯುದ್ಧಮಾಡಿದ.

ಕರ್ಣರಥದ ಸಾರಥಿ ಕುದುರೆ ಧ್ವಜ ಚಕ್ರ ಮುಂತಾದುವನ್ನು ಒಬ್ಬೊಬ್ಬ ಗಂಧರ್ವ ಒಂದೊಂದರಂತೆ ಅಸಂಖ್ಯ ಗಂಧರ್ವರು ಸೇರಿ ನಾಶ ಮಾಡಿದರು. ರಥ ಚೂರು ಚೂರಾಯಿತು. ಕರ್ಣ ಬೇಗನೆ ವಿಕರ್ಣನ ರಥವೇರಿ ಆ ರಥದ ಕುದುರೆಗಳನ್ನು ತಾನೆ ನಡೆಸುತ್ತ ಪಲಾಯನ ಮಾಡಿದ.

ಮುಹೂರ್ತಮೇತೇನ ಸಮಂ ಸ ಯುಧ್ಯ-
ನ್ನನ್ಯೈರ್ಗಂಧರ್ವೈರ್ಬಹುಭಿರ್ಮಾಯಯೈವ।
ಭಗ್ನೇ ರಥೇ ಭೂಮಿತಲೇ ಸ್ಥಿತಃ ಸನ್
ಗೃಹೀತ ಆಸೀಚ್ಚಿತ್ರಸೇನೇನ ಸಂಖ್ಯೇ ॥೪೧೫॥

ಮುಹೂರ್ತ ಪರ್ಯಂತ ದುರ್ಯೋಧನ ಚಿತ್ರಸೇನನೊಡನೆ ಸಮನಾಗಿಯೆ ಯುದ್ಧ ಮಾಡಿದ. ಆದರೆ ಬಹುಸಂಖ್ಯೆಯಲ್ಲಿದ್ದ ಬೇರೆ ಗಂಧರ್ವರಿಂದ ಮಾಯೆಯಿಂದಲೆ ಅವನ ರಥ ಮುರಿಯಲ್ಪಟ್ಟಿತು. ಆಗ ಅವನು ನೆಲದಲ್ಲಿ ನಿಂತು ಚಿತ್ರಸೇನನಿಂದ ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ.

ಮಹಾಬಲೋ ಧಾರ್ತರಾಷ್ಟ್ರೋಽಪಿ ಶಕ್ರ-
ವರಾದ್ ವಿಷ್ಣೋರಾಜ್ಞಯಾ ಚಾಭಿವೃದ್ಧೇ।
ಸ ಚಿತ್ರಸೇನೇನ ಧೃತಸ್ತದಾಸೀದ್
ಬದ್ಧಃ ಪಾಶೈರ್ವೈದ್ಯುತೈರಿಂದ್ರದತ್ತೈಃ ॥೪೧೬॥

ಇಂದ್ರನ ವರದಿಂದಲೂ ಹರೀಚ್ಛೆಯಿಂದರೂ ಬಲಪೂರ್ಣನಾಗಿದ್ದ ಚಿತ್ರಸೇನನಿಂದ ಮಹಾಬಲನಾದ ದುರ್ಯೋಧನನೂ ಇಂದ್ರದತ್ತವಾದ ವಿದ್ಯುತ್ ಪಾಶಗಳಲ್ಲಿ ಸೇರೆ ಹಿಡಿಯಲ್ಪಟ್ಟ.

ವಿದ್ಯುತ್ ಪಾಶವೆಂದರೆ ಮಿಂಚಿನಂತೆ ಹೊಳೆವ ಪಾಶ. ಅಥವಾ ವಿದ್ಯುದಭಿಮಾನಿ ದೇವತಾಕವಾದ ಪಾಶ.

ತಸ್ಯಾನುಜಾಃ ಶಕುನೀ ರಾಜಭಾರ್ಯಾಃ
ಸರ್ವೇ ಬದ್ಧಾಃ ಶಕ್ರದೂತೈಃ ಪ್ರಣೀತಾಃ।
ಆದಾಯ ತಾನಂಬರೇ ಸಂಪ್ರಯಾತೇ-
ಷ್ವರೂರುವನ್ ಪಾಂಡವಾನ್ ಮಂತ್ರಿಣೋಽಸ್ಯ ॥೪೧೭॥
ಸಮೀಪಮಾಗತ್ಯ ಪೃಥಾಸುತಾನಾಂ

ಪರಾಭೂತಂ ವಃ ಕುಲಂ ಶಕ್ರಭೃತ್ಯೈಃ।
ಧೃತಃ ಸಭಾರ್ಯಃ ಸಾನುಜೋ ಧಾರ್ತರಾಷ್ಟ್ರ
ಸ್ತಂ ಮೋಚಯಧ್ವಂ ಭ್ರಾತರಂ ಭಾರತಾಗ್ರ್ಯಾಃ ॥೪೧೮॥

ದುರ್ಯೋಧನನ ತಮ್ಮಂದಿರನ್ನೂ ಶಕುನಿಯನ್ನೂ ರಾಣಿಯರನ್ನೂ ಎಲ್ಲರನ್ನೂ ಇಂದ್ರನ ಭೃತ್ಯರು ಕಟ್ಟಿ ಸೆಳೆದೊಯ್ದರು. ಅವರು ಎಲ್ಲರನ್ನೂ ಹಿಡಿದುಕೊಂಡು ಆಕಾಶದಲ್ಲಿ ಹೋಗುತ್ತಿದ್ದಾಗ ದುರ್ಯೋಧನನ ಮಂತ್ರಿಗಳು ಪಾಂಡವರ ಬಳಿಗೆ ಬಂದು 'ಇಂದ್ರನ ಭೃತ್ಯರು ನಿಮ್ಮ ಕುಲವನ್ನು ಪರಾಭವಗೊಳಿಸಿರುವರು. ದುರ್ಯೋಧನ ಸಪತ್ನೀಕನಾಗಿ ತಮ್ಮಂದಿರೊಡನೆ ಶತ್ರುಗಳಿಗೆ ಸೆರೆ ಸಿಕ್ಕಿದ್ದಾನೆ. ಭರತವಂಶದ ಶ್ರೇಷ್ಠಪುರುಷರಾದ ನೀವು ನಿಮ್ಮ ತಮ್ಮನನ್ನು ಬಿಡಿಸಿಕೊಳ್ಳಿರಿ' ಎಂದು ಕೂಗಿದರು.

ಇತ್ಯುಕ್ತ ಊಚೇ ಭೀಮಸೇನೋಽಗ್ರಜಂ ಸ್ವಂ।
ಜಾನೇ ರಾಜನ್ಯಾದೃಶೋಽಯಂ ವಿಮರ್ದಃ।
ಐಶ್ವರ್ಯಂ ಸ್ವಂ ದರ್ಶಯನ್ನಃ ಸಮಾಗಾತ್
ದುರ್ಯೋಧನಸ್ತೇಜಸೋ ಭಂಗಮಿಚ್ಛನ್ ॥೪೧೯॥
ವಿಜ್ಞಾಯ ತೇಷಾಂ ಮಂತ್ರಿತಂ ವಜ್ರಬಾಹು-
ರೇತಚ್ಚಕ್ರೇ ನಾತ್ರ ನಃ ಕಾರ್ಯಹಾನಿಃ।
ದಿವ್ಯಜ್ಞಾನಂ ಸ್ವಾತ್ಮನೋ ದರ್ಶಯನ್ಸ
ಏತಾವದುಕ್ತ್ವಾ ವಿರರಾಮ ಭೀಮಃ ॥೪೨೦॥

ಮಂತ್ರಿಗಳು ಹೀಗೆ ಹೇಳಿದಾಗ ಭೀಮಸೇನ ತಮ್ಮ ಅಣ್ಣನಿಗೆ ಹೇಳಿದ, ಈ ಯುದ್ಧ ಏತರಿಂದಾಯಿತು ನನಗೆ ಗೊತ್ತು. ನಮ್ಮ ಮುಂದೆ ತನ್ನ ಐಶ್ವರ್ಯವನ್ನು ಪ್ರದರ್ಶಿಸಲು ದುರ್ಯೋಧನ ಬಂದಿದ್ದ. ಅವನ ದುರಾಲೋಚನೆಯನ್ನು ತಿಳಿದು ಅವನ ತೇಜೋವಧೆ ಮಾಡಲು ಬಯಸಿದ ಇಂದ್ರ ಈ ಯುದ್ಧವನ್ನು ಉಂಟುಮಾಡಿದ. ನಮಗೆ ಇದರಿಂದ ಏನೂ ಕಾರ್ಯಹಾನಿ ಇಲ್ಲ'. ಹೀಗೆ ಭೀಮ ತನ್ನ ದಿವ್ಯಜ್ಞಾನವನ್ನು ತೋರುತ್ತ ಇಷ್ಟು ಹೇಳಿ ಸುಮ್ಮನಾದ.

ಏಕಾಹಯಜ್ಞೇ ದೀಕ್ಷಿತೇನೈವ ರಾಜ್ಞಾ
ಸಂಪ್ರೇಷಿತೋ ಭೀಮಸೇನೋಽರ್ಜುನಶ್ಚ।
ಸಮಾದ್ರೇಯೌ ಚಿತ್ರಸೇನಂ ರಣೇ ತೌ
ವಿಜಿತ್ಯ ದುರ್ಯೋಧನಮಾಶ್ವಮುಂಚತಾಂ ॥೪೨೧॥

ಏಕಾಹಯಜ್ಞದಲ್ಲಿ ದೀಕ್ಷಿತನಾಗಿದ್ದ ಧರ್ಮರಾಜ ಭೀಮಾರ್ಜುನರನ್ನು ನಕುಲ ಸಹದೇವರೊಂದಿಗೆ ಕಳಿಸಿದ. ಅವರು ಚಿತ್ರಸೇನನನ್ನು ಯುದ್ಧದಲ್ಲಿ ಬೇಗನೆ ಗೆದ್ದು ದುರ್ಯೋಧನನನ್ನು ಬಿಡಿಸಿಕೊಂಡರು.

'ಸಾದ್ಯಸ್ಕ' ಎಂಬುದೊಂದು ಒಂದು ದಿನದಲ್ಲಿ ಮಾಡಿ ಮುಗಿಸಬಹುದಾದ ಯಜ್ಞ. ಆದರಲ್ಲಿ ಧರ್ಮರಾಜ ದೀಕ್ಷಿತನಾಗಿದ್ದ. ಅದರಿಂದ ಅವನು ಹೋಗದೆ ತಮ್ಮಂದಿರನ್ನು ಯುದ್ಧಕ್ಕೆ ಕಳಿಸಿದ.

ಪರೈಃ ಪರಿಭವೇ ಪ್ರಾಪ್ತೇ ವಯಂ ಪಂಚೋತ್ತರಂ ಶತಂ।
ಪರಸ್ಪರವಿರೋಧೇ ತು ವಯಂ ಪಂಚೈವತೇ ಶತಂ॥(ವನ 244.11)

'ಹೊರಗಿನವರ ಆಕ್ರಮಣ ಬಂದಾಗ ನಾವು ನೂರೈದು ಮಂದಿ. ನಮ್ಮಲ್ಲಿ ವಿರೋಧ ಬಂದಾಗ ಮಾತ್ರ ನಾವು ಐವರು, ಅವರು ನೂರು' ಎಂದು ಹೇಳುತ್ತ ಧರ್ಮರಾಜ ಕುಲದ ಕೀರ್ತಿ ಘನತೆಗಳನ್ನು ಕಾಪಾಡುವುದಕ್ಕಾಗಿ ದುರ್ಯೋಧನನನ್ನೂ ಅವನ ರಾಣಿಯರನ್ನೂ ಬಿಡಿಸಿಕೊಳ್ಳಲು ತಮ್ಮಂದಿರಿಗೆ ಆಜ್ಞೆ ಮಾಡಿದ. ಆದರೆ ಭೀಮನಿನ್ನೂ ಹೇಳುತ್ತಾನೆ, 'ದುರ್ಯೋಧನ ತನ್ನ ಪಾಪದ ಫಲ ಉಣ್ಣುತ್ತಿದ್ದಾನೆ, ಉಣಲಿ' ಎಂದು. ಅಷ್ಟರಲ್ಲಿ ದುರ್ಯೋಧನ ಆಕಾಶದಲ್ಲಿ ಕೂಗಿ ಹೇಳಿದ, 'ಧರ್ಮರಾಜ, ಕಾಪಾಡು. ಕುರುಕುಲದ ಕೀರ್ತಿಗಾಗಿ ನಿನ್ನ ತಮ್ಮಂದಿರನ್ನು ಕಾಪಾಡು' ಎಂದು. ಧರ್ಮರಾಜ ಅನುಕಂಪೆಯಿಂದ ಹೇಳಿದ, 'ಭೀಮ, ಶರಣಾಗತನಾದ ಶತ್ರುವನ್ನು ಕಾಪಾಡಬೇಕು. ನಿನ್ನ ಬಾಹುಬಲದ ಆಶ್ರಯದಲ್ಲಿ ಬದುಕುತ್ತೇನೆ ಎನ್ನುತ್ತಿದ್ದಾನೆ ಆತ. ಇನ್ನೇನು ಹೆಚ್ಚಿನದು ನಮಗೆ ಬೇಕು? ನೀನು ಹೋಗಲು ಒಪ್ಪದಿದ್ದರೆ ಯಾಗವನ್ನಾದರೂ ಬಿಟ್ಟು ನಾನೇ ಹೋಗುವೆನು' ಎಂದ. ಒಡನೆ ಭೀಮ ಅರ್ಜುನರೂ ನಕುಲ ಸಹದೇವರೂ ಗಂಧರ್ವರನ್ನು ತಡೆದರು. ಅವರು ಆಕಾಶದಲ್ಲಿ ಹಾರಿ ಹೋಗದಂತೆ ಅರ್ಜುನ ಬಾಣಗಳ ಬಲೆಯಲ್ಲಿ ಅವರನ್ನು ಬಂಧಿಸಿದ. ಅವರು ಪಂಜರದೊಳಗೆ ಸಿಲುಕಿದ ಹಕ್ಕಿಗಳಂತಾದರು. ಚಿತ್ರಸೇನ ಅದೃಶ್ಯನಾಗಿ ನಿಂತು ಯುದ್ಧಮಾಡುತ್ತಿದ್ದ. ಅರ್ಜುನ ಶಬ್ದಭೇದಿ ವಿದ್ಯೆಯಿಂದ ಮಹಾಅಸ್ತ್ರಗಳನ್ನು ಪ್ರಯೋಗಿಸಿದ. ಆಗ ಚಿತ್ರಸೇನ ಸೋತು ಮೈದೋರಿದ. ಅವನು ಅರ್ಜುನನಿಗೆ ಸ್ವರ್ಗದಲ್ಲಿ ಮಿತ್ರನೂ ಸಂಗೀತ ನಾಟ್ಯ ವಿದ್ಯಾ ಗುರುವೂ ಆಗಿದ್ದವ. 'ಈ ಪಾಪಿಯನ್ನು ಒಯ್ಯುತ್ತೇನೆ, ಬಿಡು ' ಎನ್ನುತ್ತಿದ್ದಾನೆ. ಅರ್ಜುನ ನಗುತ್ತ 'ಅಣ್ಣನಾಜ್ಞೆ' ಎಂದು ಅವನನ್ನು ಬಿಡಿಸಿಕೊಂಡ.

ಸ ಚಿತ್ರಸೇನೋ ವಾಸವೋಕ್ತಂ ಚ ಸರ್ವಂ
ಕುಮಂತ್ರಿತಂ ಧಾರ್ತರಾಷ್ಟ್ರಸ್ಯ ಚಾಹ।
ಪಾರ್ಥಸ್ಯ ಭೀಮಸ್ಯ ಚ ತನ್ನಿಶಮ್ಯ
ಸುವ್ರೀಡಿತೋ ಧೃತರಾಷ್ಟ್ರಾತ್ಮಜೋಽಭೂತ್ ॥೪೨॥

ಚಿತ್ರಸೇನ ಅರ್ಜುನನಿಗೂ ಭೀಮನಿಗೂ ದುರ್ಯೋಧನನ ದುರಾಲೋಚನೆಯನ್ನೂ ಇಂದ್ರನ ಆಜ್ಞೆಯನ್ನೂ ಪೂರ್ತಿಯಾಗಿ ತಿಳಿಸಿದ. ಅದನ್ನು ಕೇಳಿ ದುರ್ಯೋಧನ ಬಹಳ ಲಜ್ಜಿತನಾದ.

ಮುಂದೆ ದುರ್ಯೋಧನ ಕರ್ಣನಿಗೆ ಹೇಳುತ್ತಾನೆ, 'ನನಗೆ ಆಗ ಭೂಮಿಯೊಳಗೆ ಸೇರಿ ಸಮಾಧಿಯಾಗಬೇಕೆನಿಸಿತು!' ಎಂದು.

ಸಮಾಪ್ಯ ಯಜ್ಞಂ ಚ ತತೋಽಭಿಯಾತಂ
ಸರ್ವೇ ಪ್ರಾಪುರ್ಧರ್ಮರಾಜಂ ಸ ಚಾಶು ।
ಸಂಪೂಜ್ಯ ತೂತ್ಸೃಜ್ಯ ಚ ಚಿತ್ರಸೇನ-
ಮೂಚೇ ಗಾಂಧಾರೇ ನ ಪುನಃ ಕಾರ್ಯಮೀದೃಕ್ ॥೪೨೩॥

ಅಷ್ಟರಲ್ಲಿ ಯಜ್ಞವನ್ನು ಮುಗಿಸಿ ಎದುರಿಗೆ ಬಂದ ಧರ್ಮರಾಜನ ಬಳಿಯಲ್ಲಿ ಎಲ್ಲರೂ ಬೇಗನೆ ಬಂದು ಸೇರಿದರು. ಧರ್ಮರಾಜ ಚಿತ್ರಸೇನನನ್ನು ಪ್ರಶಂಸೆ ಮಾಡಿ ಕಳಿಸಿಕೊಟ್ಟ. ದುರ್ಯೋಧನನಿಗೆ, 'ನೀನಿನ್ನು ಇಂಥ ಸಾಹಸಕ್ಕೆ ತೊಡಗಬೇಡ' ಎಂದ.

'ಚಿತ್ರಸೇನ, ನೀನು ಈ ಪಾಪಿಯನ್ನು ಕೊಲ್ಲದೆ ಬಿಟ್ಟು ನಮ್ಮ ಕುಲದ ಘನತೆಯನ್ನು ಉಳಿಸಿದಿ, ಪರಮೋಪಕಾರ ಮಾಡಿದಿ' ಎಂದು ಪ್ರಶಂಸೆ ಮಾಡಿ ಕಳಿಸಿಕೊಟ್ಟ. ದೇವೇಂದ್ರ ಸಂತುಷ್ಟನಾಗಿ ಯುದ್ಧದಲ್ಲಿ ಮಡಿದ ಗಂಧರ್ವ ಸೈನ್ಯದ ಮೇಲೆ ಅಮೃತದ ಮಳೆಗರೆದು ಬದುಕಿಸಿದ.

ಸ ಪಾಂಡವೈರ್ಮೋಚಿತಃ ಸಾನುಗಶ್ಚ
ಸಭಾರ್ಯಕಃ ಕಿಂಚಿದತೋಽಪಗಮ್ಯ ।
ಸಮ್ಮೇಲನಾಯೋಪವಿಷ್ಟಶ್ಚ ತತ್ರ
ಸುವ್ರೀಡಿತಃ ಸೂತಪುತ್ರಂ ದದರ್ಶ ॥೪೨೪॥

ದುರ್ಯೋಧನ ಪಾಂಡವರ ಸಹಾಯದಿಂದ ಬಿಡುಗಡೆ ಹೊಂದಿ ಬಹಳ ಲಜ್ಜಿತನಾಗಿ ಸೋದರರೊಂದಿಗೆ ಮತ್ತು ಹೆಂಡಂದಿರೊಂದಿಗೆ ಅಲ್ಲಿಂದ ಸ್ವಲ್ಪ ದೂರದವರೆಗೆ ಹೋಗಿ ಅಲ್ಲಿಯೆ ತನ್ನ ಸೈನ್ಯವನ್ನು ಒಟ್ಟುಗೂಡಿಸುವುದಕ್ಕಾಗಿ ಕುಳಿತ. ಅಲ್ಲಿಯೆ ಕರ್ಣನನ್ನು ಕಂಡ.

ದುರ್ಯೋಧನನ ಪ್ರಾಯೋಪವೇಶ

ಸ ಚಾಹ ದಿಷ್ಟ್ಯಾ ಜಯಸಿ ರಾಜನ್ನಿತಿ ಸುಯೋಧನಂ ।
ವ್ರೀಡಿತೋ ನೇತಿ ತಂ ಚೋಕ್ತ್ವಾ ಯಥಾವೃತ್ತಂ ಸುಯೋಧನಃ ।
ಉಕ್ತ್ವಾ ಪ್ರಾಯೋಪವೇಶಂ ಚ ಚಕ್ರೇ ತತ್ರ ಸುದುಃಖಿತಃ ॥೪೨೫॥

ಕರ್ಣ ದುರ್ಯೋಧನನಿಗೆ ಹೇಳಿದ, 'ರಾಜನೆ, ಸುದೈವದಿಂದ ನೀನು ಜಯಗಳಿಸಿದೆ'

ಎಂದು. ದುರ್ಯೋಧನ ಲಜ್ಜಿತನಾಗಿ 'ಇಲ್ಲ' ಎಂದು ಹೇಳಿ ಯಥಾವತ್ತಾಗಿ ನಡೆದುದನ್ನೆಲ್ಲ ಹೇಳಿ ಬಲು ದುಃಖಿತನಾಗಿ ಅಲ್ಲಿಯೆ ಆಮರಣಾಂತ ಉಪವಾಸ ವ್ರತಕ್ಕೆ ಕುಳಿತ.

ಕರ್ಣದುಶ್ಶಾಸನಾಭ್ಯಾಂ ಚ ಸೌಬಲೇನ ಚ ದೇವಿನಾ ।
ಅನ್ಯೈಶ್ಚ ಯಾಚ್ಯಮಾನೋಽಪಿ ನೈವೋತ್ತಸ್ಥೌ ಸುಯೋಧನಃ ॥೪೨೬॥

ಕರ್ಣ ದುಃಶಾಸನ, ಜೂಜುಕೋರನಾದ ಶಕುನಿ ಮತ್ತು ಇನ್ನಿತರರು ಎಲ್ಲರೂ ಬೇಡಿಕೊಂಡರು. ಆದರೂ ದುರ್ಯೋಧನ ಮೇಲೇಳಲಿಲ್ಲ.

ದುಃಶಾಸನನನ್ನು ರಾಜ್ಯವಾಳಲು ಹೇಳಿದ. ಅವನು ಕಾಲಿಗೆ ಬಿದ್ದು ಬೇಡಿದ. ಕರ್ಣನೂ 'ರಾಜ ಶತ್ರುಗಳಿಗೆ ವಶನಾದಾಗ ಸೈನಿಕರೋ ಇನ್ನಾರೋ ಆಶ್ರಿತರು, ದಾಸರು ಅವನನ್ನು ಬಿಡಿಸಬೇಕು. ಅದು ಅವರ ಕರ್ತವ್ಯ. ಅದನ್ನು ಪಾಂಡವರು ಮಾಡಿದ್ದಾರೆ. ಇದರಲ್ಲಿ ನಾಚಿಕೆ ಪಡುವುದೇಕೆ? ಎದ್ದೇಳು. ಇಲ್ಲದಿದ್ದರೆ ನಿನ್ನ ಪಾದಸೇವೆ ಮಾಡುತ್ತಾ ನಾನೂ ಇಲ್ಲಿ ಇದ್ದು ಬಿಡುತ್ತೇನೆ' ಎಂದ. ಶಕುನಿಯೂ 'ನಾನು ನಿನಗೆ ತಂದುಕೊಟ್ಟ ರಾಜ್ಯ ಸಂಪತ್ತನ್ನು ಈಗ ಒಲ್ಲೆ ಎನ್ನುತ್ತೀಯ? ಕರ್ಣ ಹೇಳಿದ್ದು ಯುಕ್ತವಾಗಿದೆ. ನೀನು ವಿನಾಕಾರಣ ದುಃಖಿಸುತ್ತಿರುವೆ. ಹೀಗೆ ಅತಿ ಭೀತನಾಗಿ ಅತಿ ಮೃದುವಾಗಿರುವವನಲ್ಲಿ ಸಂಪತ್ತು ಉಳಿಯುವುದಿಲ್ಲ. ಅದರಿಂದ ಅದು ನಿನಗೆ ಬೇಡ, ಪಾಂಡವರಿಗೇ ಕೊಟ್ಟುಬಿಡು, ನಿನಗೆ ಕೀರ್ತಿಯಾದರೂ ಬರಲಿ. ನಿರಶನ ವ್ರತವನ್ನು ಮಾತ್ರ ಬಿಟ್ಟುಬಿಡು' ಎಂದು ಹೇಳಿದ. ಆದರೂ ದುರ್ಯೋಧನ ಯಾರ ಮಾತನ್ನೂ ಕೇಳದೆ ನೆಲದ ಮೇಲೆ ದರ್ಭೆ ಹಾಸಿ ದರ್ಭೆಯ ಬಟ್ಟೆಯನ್ನು ಉಟ್ಟು ಆಚಮನ ಮಾಡಿ ಮೌನದಿಂದ ಕುಳಿತುಬಿಟ್ಟ.

ತತೋ ನಿಶಾಯಾಂ ಪ್ರಾಪ್ತಾಯಾಂ ಸ್ವಪಕ್ಷೇ ಪ್ರವಿಷೀದತಿ ।
ಮಂತ್ರಯಿತ್ವಾಸುರೈಃ ಕೃತ್ಯಾ ನಿರ್ಮಿತಾ ಹೋಮಕರ್ಮಣಿ ॥೪೨೭॥

ಅಸುರರು ತಮ್ಮ ಪಕ್ಷ ಹೀಗೆ ಬಲಗುಂದಿದಾಗ ರಾತ್ರಿಕಾಲದಲ್ಲಿ ಮಂತ್ರಾಲೋಚನ ಮಾಡಿ ಹೋಮಕರ್ಮದಿಂದ ಒಂದು ಕೃತ್ರಿಮ ದೇವತೆಯನ್ನು ನಿರ್ಮಿಸಿದರು.

ಪಾತಾಳ ವಾಸಿಗಳಾದ ಅಸುರರು ಹಿಂದೆ ದೇವತೆಗಳಿಂದ ಪರಾಜಿತರಾಗಿದ್ದರು. ಈಗ ದುರ್ಯೋಧನ ಪರಾಭವ ಹೊಂದಿ ಪ್ರಾಯೋಪವೇಶ ವ್ರತಕ್ಕೆ ಕುಳಿತುದುದು ತಮ್ಮ ಪಕ್ಷಕ್ಕೆ ಆದ ಇನ್ನೊಂದು ದೊಡ್ಡ ಪರಾಭವವೆಂದು ತಿಳಿದು ಆಥರ್ವಣ ಮಂತ್ರ ಪೂರ್ವಕವಾದ ಅಭಿಚಾರ ಹೋಮದಿಂದ ಕ್ಷುದ್ರ ದೇವತೆಯನ್ನು ನಿರ್ಮಿಸಿ ದುರ್ಯೋಧನನನ್ನು ರಸಾತಳಕ್ಕೆ ತಂದುಕೊಡಲು ಹೇಳಿದರು.

ಶುಕ್ರೇಣೋತ್ಪಾದಿತಾ ಕೃತ್ಯಾ ಸಾ ಪ್ರಸುಪ್ತೇಷು ಮಂತ್ರಿಷು ।
ಧಾರ್ತರಾಷ್ಟ್ರಂ ಸಮಾದಾಯ ಯಯೌ ಪಾತಾಲಮಾಶು ಚ ।
ಅಥ ಸಂಬೋಧಯಾಮಾಸುರ್ದೈತ್ಯಾ ದುರ್ಯೋಧನಂ ನೃಪಂ॥೪೨೮॥

ದುರ್ಯೋಧನನ ಮಂತ್ರಿಗಳು ನಿದ್ರಿಸುತ್ತಿದ್ದಾಗ ಶುಕ್ರಾಚಾರ್ಯರಿಂದ ನಿರ್ಮಿತವಾದ ಆ ಕ್ಷುದ್ರದೇವತೆ ದುರ್ಯೋಧನನನ್ನು ಎತ್ತಿಕೊಂಡು ಬೇಗನೆ ಪಾತಾಳವನ್ನು ಸೇರಿದ. ಬಳಿಕ ಅಸುರರು ದುರ್ಯೋಧನನಿಗೆ ಬೋಧಿಸಿದರು.

ಅಸುರರ ಉಪದೇಶ

ತ್ವಂ ದಿವ್ಯಃ ಪುರುಷೋ ವೀರಃ ಸೃಷ್ಟೋಽಸ್ಮಾಭಿಃ ಪ್ರತೋಷಿತಾತ್ ।
ತಪಸಾ ಶಂಕರಾದ್ವಜ್ರಕಾಯೋಽವಧ್ಯಶ್ಚ ಸರ್ವದಾ ॥೪೨೯॥
ಅಸ್ಮಾಕಂ ಪಕ್ಷಭೂತಸ್ತ್ವಂ ದೇವಾನಾಂ ಚೈವ ಪಾಂಡವಾಃ ॥೪೩೦॥

ನೀನು ದಿವ್ಯ ಪುರುಷ, ವೀರ. ನಾವು ತಪಸಿನಿಂದ ಒಲಿಸಿಕೊಂಡು ಶಿವನ ಮೂಲಕ ನಿನ್ನನ್ನು ವಜ್ರಕಾಯನನ್ನಾಗಿ ಅವಧ್ಯನನ್ನಾಗಿ ಮಾಡಿದ್ದೇವೆ. ನಮ್ಮ ಪಕ್ಷದವನು ನೀನು. ದೇವತೆಗಳ ಪಕ್ಷದವರು ಪಾಂಡವರು.

ನೀನು ದಿವ್ಯಪುರುಷ, ವೀರ. ಸಾಧಾರಣ ಮನುಷ್ಯನಲ್ಲ. ನಿನ್ನ ಶರೀರ ನಾಭಿಯಿಂದ ಮೇಲೆ ಅಸ್ತ್ರಶಸ್ತ್ರಗಳಿಂದ ಅಭೇದ್ಯವಾಗಿ ವಜ್ರಮಯವಾಗಿ ಮಹೇಶ್ವರನಿಂದ ನಿರ್ಮಿತವಾಗಿದೆ. ಕೆಳಗೆ ಪುಷ್ಪಮಯವಾಗಿ ಆಕಾರದಲ್ಲಿ ಸ್ತ್ರೀಯರ ಮನಸೆಳೆವಂತೆ ಪಾರ್ವತಿಯಿಂದ ನಿರ್ಮಿತವಾಗಿದೆ. ನಮ್ಮ ಪಕ್ಷದ ಧುರೀಣನಾದ ನೀನು ನಿನ್ನ ಈ ಶರೀರವನ್ನು ತೊರೆಯಲು ಬಯಸಬೇಡ. ನಮಗೆ ನೀನೇ ಗತಿ. ದೇವತೆಗಳಿಗೆ ಪಾಂಡವರು ಗತಿ, ಎಂದರು ದೈತ್ಯರು.

ಇದಾನೀಂ ಸರ್ವದೇವಾನಾಂ ವರಾತ್ತ್ವಂ ವಿಜಿತೋ ರಣೇ ।
ವಯಂ ತಥಾ ಕರಿಷ್ಯಾಮೋ ಯಥಾ ಜೇಷ್ಯಸಿ ಪಾಂಡವಾನ್ ॥೪೩೧॥

ಈಗ ನೀನು ಎಲ್ಲ ದೇವತೆಗಳ ವರದಿಂದ ಪರಾಭವಗೊಂಡಿರುವಿ. ಇನ್ನು ನೀನು ಪಾಂಡವರನ್ನು ಗೆಲ್ಲುವಂತೆ ನಾವು ಮಾಡುವೆವು.

ಕೃಷ್ಣೇನ ನಿಹತಶ್ಚೈವ ನರಕಃ ಕರ್ಣಮಾಶ್ರಿತಃ ।
ಸ ಚ ಕೃಷ್ಣಾರ್ಜುನಾಭಾವಂ ಕರಿಷ್ಯತಿ ನ ಸಂಶಯಃ ॥೪೩೨॥

ಕೃಷ್ಣನಿಂದ ಹತನಾದ ನರಕಾಸುರ ಈಗ ಕರ್ಣನಲ್ಲಿ ಆವೇಶಗೊಂಡಿದ್ದಾನೆ. ಅವನು ಕೃಷ್ಣಾರ್ಜುನರನ್ನು ನಾಶಮಾಡುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಭೀಷ್ಮಾದೀಂಶ್ಚ ವಯಂ ಸರ್ವಾನಾವಿಶಾಮೋ ಜಯಾಯ ತೇ ।
ತಪಸಾ ವರ್ಧಯಿಷ್ಯಾಮಸ್ತ್ವಾಂ ಕರ್ಣಾದೀಂಶ್ಚ ಸರ್ವಶಃ ॥೪೩೩॥

ನಿನ್ನ ವಿಜಯಕ್ಕಾಗಿ ನಾವೆಲ್ಲರೂ ಭೀಷ್ಮಾದಿಗಳಲ್ಲಿ ಆವೇಶಗೊಳ್ಳುತ್ತೇವೆ. ತಪಸ್ಸಿನಿಂದ ನಿನ್ನನ್ನೂ ಕರ್ಣಾದಿಗಳನ್ನೂ ಎಲ್ಲರನ್ನೂ ಬಲಪಡಿಸುತ್ತೇವೆ.

ತಸ್ಮಾದ್ ಗತ್ವಾ ಪಾಲಯಸ್ವ ರಾಜ್ಯಂ ರಾಜನ್ನಪೇತಭೀಃ।
ಇದಂ ಕಸ್ಯಾಪಿ ನಾಖ್ಯೇಯಂ ಸುಗುಪ್ತಂ ಭೂತಿವರ್ಧನಂ ॥೪೩೪॥

ಅದರಿಂದ ರಾಜನೆ, ನೀನು ನಿರ್ಭಯನಾಗಿ ರಾಜ್ಯವಾಳು. ಈ ವಿಷಯವನ್ನು ಯಾರಿಗೂ ಹೇಳಬೇಡ. ಇದು ರಹಸ್ಯ ಐಶ್ವರ್ಯ ವರ್ಧಕ.

ಇತ್ಯುಕ್ತ್ವಾವ ಕೃತ್ಯಯಾ ಭೂಯಃ ಸ್ವಸ್ಥಾನೇ ಸ್ಥಾಪಿತೋ ನೃಪಃ।
ಉಮಯಾ ನಿರ್ಮಿತಾತ್ಮಾರ್ಧಮುತ್ತರಂ ಹರನಿರ್ಮಿತಂ ॥೪೩೫॥
ಜ್ಞಾತ್ವೈವಾವಧ್ಯತಾಂ ಚೈವ ರಾಜ್ಯೇ ಬುದ್ಧಿಂ ಚಕಾರ ಸಃ।
ನೋವಾಚ ಕಸ್ಯಚಿತ್ತೇಷು ಸ್ವಾನುಭೂತಂ ಸುಯೋಧನಃ ॥೪೩೬॥

ಹೀಗೆ ಹೇಳಿ ಅಸುರರು ಕ್ಷುದ್ರದೇವತೆಯ ಮೂಲಕ ದುರ್ಯೋಧನನನ್ನು ಅಫನ ಸ್ವಸ್ಥಾನದಲ್ಲಿ ಇರಿಸಿದರು. ತನ್ನ ಶರೀರದ ಕೆಳಗಿನ ಅರ್ಧ ಉಮೆಯಿಂದ ನಿರ್ಮಿತವಾದುದೆಂದೂ ಮೇಲಿನ ಅರ್ಧ ಶಿವನಿಂದ ನಿರ್ಮಿತವಾದುದೆಂದೂ ತಾನು ಅವಧ್ಯನೆಂದೂ ತಿಳಿದು ದುರ್ಯೋಧನ ರಾಜ್ಯವಾಳಲು ಮನಸು ಮಾಡಿದ. ತಾನು ಅನುಭವದಿಂದ ಕಂಡುದನ್ನು ತನ್ನವರಲ್ಲಿಯೂ ಯಾರಿಗೂ ಹೇಳಲಿಲ್ಲ.

ಪ್ರಭಾತಾಯಾಂ ತು ಶರ್ವರ್ಯಾಂ ಪುನಃ ಕರ್ಣೋ ವಚೋಽಬ್ರವೀತ್।
ಭೃತ್ಯೈಸ್ತವೈವ ಪಾರ್ಥೈರ್ಯನ್ಮೋಚಿತೋಽಸಿ ಪರಂತಪ ॥೪೩೭॥
ತೇನ ಮಾನ್ಯೋಽಧಿಕಂ ಲೋಕೇ ಯದ್ ಭೃತ್ಯಾ ಏವ ತಾದೃಶಾಃ।
ಕಿಮು ತ್ವಂ ರಾಜಶಾರ್ದೂಲ ತದುತ್ತಿಷ್ಠ ಸ್ಥಿರೋ ಭವ ॥೪೩೮॥

ರಾತ್ರಿ ಬೆಳಗಾದಾಗ ಪುನಃ ಕರ್ಣ ಈ ಮಾತನ್ನು ಹೇಳಿದ. 'ಮಹಾರಾಜ, ಶತ್ರು ನಾಶಕ, ನಿನ್ನ ದಾಸರಾದ ಪಾಂಡವರಿಂದಲೆ ಬಿಡುಗಡೆ ಹೊಂದಿರುವುದರಿಂದ ನೀನು ಲೋಕದಲ್ಲಿ ಇನ್ನೂ ಹೆಚ್ಚು ಮಾನ್ಯನೆನಿಸಿರುವೆ. ನಿನ್ನ ದಾಸರೆ ಅಂಥ ವೀರರೆಂದರೆ ನೀನು ಎಂಥವನು ಎಂದು. ಅದರಿಂದ ಎದ್ದೇಳು. ಸ್ಥಿರಬುದ್ಧಿಯವನಾಗು' ಎಂದು.

ಕರ್ಣನ ಪ್ರತಿಜ್ಞೆ

ಯಾ ಚ ತೇಽರ್ಜುನಮಾಹಾತ್ಮ್ಯೇ
ಶಂಕಾ ಸಾ ವ್ಯೇತು ಮೇ ಶೃಣು।
ಯಾವನ್ನೈವಾರ್ಜುನಂ ಹನ್ಯಾಂ
ಪಾದೌ ಪ್ರಾಕ್ಷಾಲಯೇ ಸ್ವಯಂ ॥೪೩೯॥

ಇತ್ಯುಕ್ತೋಽವರಜೈಶ್ಚೈವ ಸರ್ವೈಃ ಶಕುನಿನಾ ತಥಾ ।
ಯಾಚಿತೋ ರಥಮಾರುಹ್ಯ ಯಯೌ ನಾಗಪುರಂ ದ್ರುತಂ ॥೪೪೦॥

ಅರ್ಜುನನ ಬಲದ ವಿಷಯದಲ್ಲಿ ಇರುವ ನಿನ್ನ ಭಯ ದೂರವಾಗಲಿ. ನಾನು ಹೇಳುವುದನ್ನು ಕೇಳು, 'ಅರ್ಜುನನನ್ನು ಕೊಲ್ಲದ ತನಕ ನಾನು ನನ್ನ ಪಾದಗಳನ್ನು ನಾನೇ ತೊಳೆದುಕೊಳ್ಳುತ್ತೇನೆ' ಕರ್ಣ ಹೀಗೆ ಹೇಳಿ ರಾಜಧಾನಿಗೆ ಹಿಂತಿರುಗಲು ಬೇಡಿದ. ಎಲ್ಲ ಸೋದರರೂ ಶಕುನಿಯೂ ಬೇಡಿದರು. ಆಗ ದುರ್ಯೋಧನ ರಥವನ್ನೇರಿ ಬೇಗನೆ ಹಸ್ತಿನಾವತಿಗೆ ತೆರಳಿದ.

ಮಹಾಭಾರತದಲ್ಲಿ ದುರ್ಯೋಧನ ಪೌಂಡರೀಕ ಯಾಗವನ್ನು ಮಾಡಿದಾಗ ಕರ್ಣ ಹೇಳುತ್ತಾನೆ, 'ನನಗೆ ಈ ಯಾಗದಿಂದ ತೃಪ್ತಿಯಿಲ್ಲ, ನೀನು ಪಾಂಡವರನ್ನು ಕೊಂದು ರಾಜಸೂಯಯಾಗವನ್ನೇ ಮಾಡಬೇಕು'. ಆಗ ದುರ್ಯೋಧನ 'ನನಗೆ ಆ ಸುಯೋಗ ಎಂದು ಬಂದೀತೆಂ' ದು ಚಿಂತೆಗೊಳಗಾದಾಗ ಕರ್ಣ ಪ್ರತಿಜ್ಞೆ ಮಾಡುತ್ತಾನೆ, 'ನಾನು ಅರ್ಜುನನನ್ನು ಕೊಲ್ಲದ ತನಕ ದಾಸ ದಾಸಿಯರು ಮುಂತಾದವರಿಂದ ನನ್ನ ಕಾಲು ತೊಳೆಸಿಕೊಳ್ಳುವುದಿಲ್ಲ, ಮದ್ಯ ಮಾಂಸ ಸೇವಿಸುವುದಿಲ್ಲ, ಯಾಚಕರು ಬಂದು ಬೇಡಿದಾಗ ಇಲ್ಲವೆನ್ನುವುದಿಲ್ಲ' ಎಂದು.

ಕವಚ ಕುಂಡಲ ದಾನ

ಸಕುಂಡಲಂ ಸಕವಚಮವಧ್ಯಂ ಸೂರ್ಯನಂದನಂ ।
ಜ್ಞಾತ್ವೇಂದ್ರ ಉಭಯಂ ತಸ್ಮಾದೈಚ್ಛದಾದಾತುಮುತ್ತಮಂ ॥೪೪೧॥

ಕರ್ಣ ಕುಂಡಲಯುಕ್ತನಾಗಿಯೂ ಕವಚಯುಕ್ತನಾಗಿಯೂ ಇರುವಷ್ಟು ಕಾಲ ಅವಧ್ಯನಾಗಿರುತ್ತಾನೆ ಎಂದು ತಿಳಿದು ಇಂದ್ರ ಉತ್ತಮವಾದ ಆ ಎರಡನ್ನೂ ಅವನಿಂದ ತೆಗೆದುಕೊಳ್ಳಲು ಬಯಸಿದ.

ಯಾಚಕರು ಏನೇ ಕೇಳಲಿ ಇಲ್ಲವೆನ್ನಲಾರೆನೆಂದು ಕರ್ಣ ಪ್ರತಿಜ್ಞೆ ಮಾಡಿದರಿಂದ ತಾನು ಬೇಡಿದರೆ ಅವನು ಕೊಡಲೇಬೇಕಾಗುತ್ತದೆ ಎಂದು ಇಂದ್ರ ಕರ್ಣನ ಪ್ರತಿಜ್ಞೆಯ ಲಾಭ ಪಡೆಯಬಯಸುತ್ತಾನೆ. ಕರ್ಣನ ದಾನಶೂರತೆ ಅವನಿಗೇ ಮುಳುವಾಗುತ್ತದೆ. ಏಕೆಂದರೆ ಅದು ಸಾತ್ವಿಕ ಗುಣವಾಗಿರಲಿಲ್ಲ. ಪಾಂಡವರಂಥ ಸಜ್ಜನರ ಮೇಲಿನ ದ್ವೇಷದಿಂದ ಪ್ರೇರಿತವಾಗಿತ್ತು.

ತದ್ ವಿಜ್ಞಾಯ ರವಿಃ ಕರ್ಣಂ ಸ್ವಪ್ನ ಉಕ್ತ್ವಾನ್ಯವಾರಯತ್ ।
ಸರ್ವಥಾ ದಾಸ್ಯ ಇತ್ಯುಕ್ತೇ ಪ್ರಾಹಾದೇಯಂ ವರಾಯುಧಂ ॥೪೪೨॥

ಇಂದ್ರನ ಸಂಕಲ್ಪವನ್ನು ತಿಳಿದ ಸೂರ್ಯ ಕರ್ಣನಿಗೆ ಸ್ವಪ್ನದಲ್ಲಿ ಇಂದ್ರನ ಬಯಕೆಯನ್ನು ತಿಳಿಸಿ 'ಅವನು ಕೇಳುವುದನ್ನು ಕೊಡಬೇಡ' ಎಂದು ತಡೆದ. 'ಸರ್ವಥಾ ಕೊಡುವೆನೆ'ಂದು ಕರ್ಣ ಹೇಳಿದಾಗ 'ಹಾಗಾದರೆ ಶ್ರೇಷ್ಠವಾದ ಆಯುಧವನ್ನು ಇಂದ್ರನಿಂದ ಪಡೆ' ಎಂದ.

ಸೂರ್ಯ ಕರ್ಣನಿಗೆ ಸ್ವಪ್ನದಲ್ಲಿ ಬ್ರಾಹ್ಮಣರೂಪದಿಂದ ಬಂದು 'ಇಂದ್ರನಿಗೆ ನಿನ್ನ ಕವಚ ಕುಂಡಲಗಳನ್ನು ಕೊಡಬೇಡ. ಅವು ಅಮೃತದಿಂದ ಉತ್ಪನ್ನವಾದವುಗಳು. ಅವು ಇದ್ದರೆ ಮಾತ್ರ ನೀನು ಅವಧ್ಯನಾಗಿರುತ್ತಿ' ಎಂದ. ಆದರೂ ಕರ್ಣ 'ನಾನು ಪ್ರತಿಜ್ಞೆಯನ್ನು ಬಿಡಲಾರೆ. ಕೀರ್ತಿಯನ್ನು ಹಾಳು ಮಾಡಿಕೊಳ್ಳಲಾರೆ' ಎಂದ. ಹಾಗಾದರೆ ಅಮೋಘವಾದ ಶಕ್ತ್ಯಾಯುಧವನ್ನು ಕೇಳು' ಎಂದ ಸೂರ್ಯ.

ದದೌ ಚೋತ್ಕೃತ್ಯ ಕವಚಂ ಕುಂಡಲೇ ಚ ಶಚೀಪತೇಃ ।
ಅಮೋಘಾಂ ಶಕ್ತಿಮಾದಾಯ ಜ್ಞಾತ್ವೇಂದ್ರಂ ದ್ವಿಜರೂಪಿಣಂ ॥೪೪೩॥

ಕರ್ಣ ಬ್ರಾಹ್ಮಣ ರೂಪಿಯಾಗಿ ಬಂದವನನ್ನು ಇಂದ್ರನೆಂದು ತಿಳಿದು ಅವನಿಂದ ಅಮೋಘವಾದ ಶಕ್ತ್ಯಾಯುಧವನ್ನು ಪಡೆದು ಕವಚವನ್ನೂ ಕುಂಡಲವನ್ನೂ ಶರೀರದಿಂದ ಕತ್ತರಿಸಿ ಅವನಿಗೆ ಕೊಟ್ಟ.

ಮಧ್ಯಾಹ್ನ ಕಾಲದಲ್ಲಿ ಸೂರ್ಯೋಪಸ್ಥಾನ ಮಾಡುವಾಗ ಬ್ರಾಹ್ಮಣರು ಬಂದು ಬೇಡಿದರೆ ಇಲ್ಲವೆನ್ನುವುದಿಲ್ಲ (ವನ 310.25) ಎಂದು ಕರ್ಣನ ಪ್ರತಿಜ್ಞೆ ಇದ್ದುದರಿಂದ ಇಂದ್ರ ಮಧ್ಯಾಹ್ನ ಸೂರ್ಯೋಪಸ್ಥಾನ ಕಾಲದಲ್ಲಿಯೆ ಬ್ರಾಹ್ಮಣರೂಪದಿಂದ ಬಂದು ಕವಚ ಕುಂಡಲಗಳನ್ನು ಕೇಳಿದ. ಕರ್ಣ ಈತ ಇಂದ್ರನೆಂದು ತಿಳಿದು ಶಕ್ತ್ಯಾಯುಧವನ್ನು ಕೇಳಿ ಪಡೆದು ಕವಚ ಕುಂಡಲಗಳನ್ನು ಕೊಟ್ಟ.

ಋತೇಽರ್ಜುನಾದೇಕಮೇವ ವಧಿಷ್ಯಸ್ಯನಯೇತಿ ಸಃ ।
ದತ್ತ್ವಾ ಶಕ್ತಿಂ ಯಯೌ ಶಕ್ರಃ ಸಾರ್ಧಂ ಕವಚಕುಂಡಲೈಃ ॥೪೪೪॥

ಅರ್ಜುನನನ್ನು ಹೊರತು ಒಬ್ಬನನ್ನು ಮಾತ್ರ ಈ ಶಕ್ತ್ಯಾಯುಧದಿಂದ ನೀನು ಕೊಲ್ಲುವಿ ಎನ್ನುತ್ತ ಇಂದ್ರ ಶಕ್ತ್ಯಾಯುಧವನ್ನಿತ್ತು ಕವಚ ಕುಂಡಲಗಳೊಂದಿಗೆ ಹೊರಟು ಹೋದ.

'ಯಾರಾದರೂ ಒಬ್ಬ ಯೋಧನನ್ನು ಕೊಂದ ಬಳಿಕ ಶಕ್ತ್ಯಾಯುಧ ನನ್ನ ಬಳಿಗೇ ಹಿಂತಿರುಗಿ ಬರುತ್ತದೆ. ಆದರೆ ಅರ್ಜುನನನ್ನು ಮಾತ್ರ ಅದರಿಂದ ಕೊಲ್ಲಲಾರೆ. ಅವನಿಗೆ ಶ್ರೀಕೃಷ್ಣನ ರಕ್ಷಣೆ ಇದೆ' ಎಂದ ಇಂದ್ರ. ಕರ್ಣ ಒಪ್ಪಿ ತನ್ನ ಮೈಯಿಂದ ಕವಚ ಕುಂಡಲಗಳನ್ನು ಕತ್ತರಿಸಿ ಕೊಡಲು ಸಿದ್ಧನಾದ. 'ನನ್ನ

ಮೈಯಲ್ಲಿ ವ್ರಣವಾಗಲಿ ವಿರೂಪತೆಯಾಗಲಿ ಬರಕೂಡದು' ಎಂದ. 'ಮೈಯಲ್ಲಿ ಯಾವುದೇ ವ್ರಣ ದುರ್ಗಂಧಾದಿಗಳಿಲ್ಲದೆ ನಿನ್ನ ತಂದೆಯಾದ ಸೂರ್ಯನಂತೆಯೆ ಮೈಕಾಂತಿ ತುಂಬಿಕೊಂಡಿರುತ್ತಿ' ಎಂದು ಇಂದ್ರ ವರವಿತ್ತ. ಬೇರೆ ಅಸ್ತ್ರಗಳಿರುವಾಗ ಪ್ರಮಾದವಶಾತ್ ಈ ಶಕ್ತ್ಯಾಯುಧವನ್ನು ಶತ್ರುಗಳ ಮೇಲೆ ಎಸೆದರೆ ಅದು ನಿನ್ನ ಮೇಲೆಯೇ ತಿರುಗಿ ಬೀಳುವುದು ಎಂದೂ ಎಚ್ಚರಿಸಿ ಹೊರಟು ಹೋದ.

[1]'ಅರ್ಜುನನ ಮೇಲೆ ಶಕ್ತ್ಯಾಯುಧ ಎಸೆಯಬೇಡ. ಈ ಶರತ್ತಿನ ಮೇಲೆ ನಿನಗೆ ಆ ಆಯುಧವನ್ನು ನೀಡುವೆ' ಎಂದು ಇಂದ್ರ ಹೇಳಲಿಲ್ಲ. ಅಥವಾ ಎಸೆದರೆ ಅದು ಅರ್ಜುನನನ್ನು ಕೊಲ್ಲುವುದಿಲ್ಲವೆಂದೂ ಹೇಳಲಿಲ್ಲ. ಶ್ರೀಕೃಷ್ಣ ರಕ್ಷಿಸುತ್ತಾನೆ ಎಂದಷ್ಟೇ ಹೇಳಿದ. ಅದರಿಂದ ಕರ್ಣ ಘಟೋತ್ಕಚನ ಮೇಲೆ ಶಕ್ತ್ಯಾಯುಧವನ್ನು ಪ್ರಯೋಗಿಸಿ ಅವನನ್ನು ಕೊಂದಾಗ ಶ್ರೀಕೃಷ್ಣ ಕುಣಿದನಂತೆ! ಅರ್ಜುನನಿಗೆ ಇನ್ನು ಅದರಿಂದ ಅಪಾಯವಿಲ್ಲ ಎಂದು. ಅರ್ಜುನನಲ್ಲಿ ಕಾರ್ಯಕಾರಿಯಾಗುವುದಿಲ್ಲವೆಂದೇ ಇಂದ್ರ ಹೇಳಿದ್ದರೆ ಕರ್ಣ ಅದನ್ನು ಸ್ವೀಕರಿಸುತ್ತಿರಲಿಲ್ಲ. ಶ್ರೀಕೃಷ್ಣ ಅರ್ಜುನನಿಗೆ ಅದರಿಂದ ಅಪಾಯವಿತ್ತೆನ್ನುವುದೂ ಅಸಂಗತವಾಗುತ್ತಿತ್ತು.

ಯಕ್ಷ ಪ್ರಶ್ನೆ

ಪಾರ್ಥಾ ವಿಮುಚ್ಯೈವ ಸುಯೋಧನಂ ತಂ
ವನೇ ವಸಂತೋ ಮುದಿತಾಃ ಸದೈವ ।
ಸಹಾರಣೇಭಾಂಡಮಥೋ ಮೃಗೇಣ
ಹೃತಂ ದ್ವಿಜಸ್ಯಾಶು ನಿಶಮ್ಯ ಚಾನ್ವಯುಃ ॥೪೪॥

ಪಾಂಡವರು ದುರ್ಯೋಧನನನ್ನು ಬಿಡುಗಡೆ ಮಾಡಿ ವನದಲ್ಲಿ ಸದಾ ಸುಖಿಗಳಾಗಿ ವಾಸ ಮಾಡಿದರು. ಒಬ್ಬ ಬ್ರಾಹ್ಮಣನ ಅರಣಿ ಮತ್ತು ಪಾತ್ರೆಯನ್ನು ಜಿಂಕೆ ಅಪಹರಿಸಿದ್ದನ್ನು ಕೇಳಿ ಅದನ್ನು ಬೆನ್ನಟ್ಟಿದರು.

ಒಬ್ಬ ಬ್ರಾಹ್ಮಣ ತನ್ನ ಅರಣಿಕಾಷ್ಠಗಳನ್ನೂ ಯಜ್ಞಪಾತ್ರೆಯನ್ನೂ ಗಂಟು ಕಟ್ಟಿ ಮರದ ಕೊಂಬೆಯಲ್ಲಿ ಸಿಕ್ಕಿಸಿದ್ದ. ಜಿಂಕೆ ಬಂದು ತನ್ನ

1. ಏಕಮನಯಾ ವಧಿಷ್ಯಸೀತೀಂದ್ರೇಣೋಕ್ತಂ। ಅರ್ಜುನ ಏವ ಪರ್ಯವಸಾನಂ ಕರೋಮೀತ್ಯಾಶಯೇನ ಕರ್ಣೇನ ಶಕ್ತಿಃ ಸ್ವೀಕೃತಾ। ಅರ್ಜುನಮೃತ ಇತಿ ತು ಪರ್ಯವಸಾನೋಕ್ತಿಃ। ಅತೋಽತ್ರೇಂದ್ರೇಣಾರ್ಜುನೇ ಶಕ್ತೇರ್ಮೋಘತ್ವೋಕ್ತೇಃ ಯಯಾರ್ಜುನೋ ನಿಹಂತವ್ಯಸ್ತಯಾಸೌ ರಾಕ್ಷಸೋ ಹತ ಇತಿ ವಕ್ಷ್ಯಮಾಣ ವಿರೋಧ ಇತಿ ನಿರಸ್ತಂ। –ತಾಮ್ರಪರ್ಣೀಯ

ಕೊಂಬುಗಳಿಂದ ಮರದ ಕೊಂಬೆಗೆ ತಿಕ್ಕಿದಾಗ ಅರಣಿ ಪಾತ್ರೆಗಳ ಗಂಟು ಕೊಂಬಿನಲ್ಲಿ ಸಿಕ್ಕಿಕೊಂಡಿತು. ಜಿಂಕೆ ಓಡಿತು. 'ಯಜ್ಞದ ಉಪಕರಣಗಳನ್ನು ಜಿಂಕೆ ಒಯ್ಯುತ್ತಿದೆ. ಅವಿಲ್ಲದೆ ನನ್ನ ಯಜ್ಞಕಾರ್ಯ ನಡೆಯದು' ಎಂದು ಬ್ರಾಹ್ಮಣ ಕೂಗಿಕೊಂಡಾಗ ಪಾಂಡವರು ಐವರೂ ಜಿಂಕೆಯನ್ನು ಬೆನ್ನಟ್ಟಿದರು. ಯಮನೇ ಜಿಂಕೆಯ ರೂಪದಿಂದ ಬಂದಿದ್ದ.

ತಸ್ಮಿನ್ನದೃಶ್ಯೇ ತೃಷಿತಾ ಏಕೈಕಮುದಕಾರ್ಥಿನಃ।
ಯಯುರ್ಯುಧಿಷ್ಠಿರಮೃತೇ ಸುಪ್ತಾಸ್ತೇ ಧರ್ಮಮಾಯಯಾ ॥೪೪॥
ಅದೃಶ್ಯೇನೈವ ಧರ್ಮೇಣ ವಾರಿತಾ ವಾರಿಪಾಯಿನಃ।
ಕ್ಷತ್ರಧರ್ಮಸ್ಯ ರಕ್ಷಾರ್ಥಂ ನ ತತ್ಪ್ರಶ್ನಾನ್ ವಿದಾಂ ವರಾಃ ॥೪೫॥
ವ್ಯಾಚುಕ್ರುಃ ಶಕ್ತಿಮಂತೋಽಪಿ ಪಾನೀಯಾರ್ಥಮರಿಂದಮಾಃ ॥೪೬॥

ಜಿಂಕೆ ಅದೃಶ್ಯವಾದಾಗ ಪಾಂಡವರು ಬಾಯಾರಿದ್ದರು. ಯುಧಿಷ್ಠಿರ ಹೊರತು ಎಲ್ಲರೂ ಒಬ್ಬೊಬ್ಬರಾಗಿ ಜಲಾರ್ಥಿಗಳಾಗಿ ಹೋದರು. ಯಮನ ಮಾಯೆಯಿಂದ ಸುಪ್ತರಾದರು. ಏಕೆಂದರೆ ಯಮ ಅದೃಶ್ಯನಾಗಿ ನಿಂತು ತಡೆದರೂ ಅವರು ನೀರು ಕುಡಿದರು. ಜ್ಞಾನಿಶ್ರೇಷ್ಠರೂ ಶತ್ರು ನಾಶಕರೂ ಆದ ಅವರು ಯಮನ ಪ್ರಶ್ನೆಗಳನ್ನು ಉತ್ತರಿಸಲು ಶಕ್ತಿಉಳ್ಳವರಾಗಿದ್ದರೂ ನೀರಿಗಾಗಿ ಆ ಪ್ರಶ್ನೆಗಳನ್ನು ಉತ್ತರಿಸಲಿಲ್ಲ. ಇದು ತಮ್ಮ ಕ್ಷಾತ್ರಧರ್ಮರಕ್ಷಣೆಗಾಗಿ.

ಜಿಂಕೆ ಅದೃಶ್ಯವಾಯಿತು. ಎಲ್ಲರೂ ಹುಡುಕುತ್ತ ಹೋಗಿ ಆಯಾಸಗೊಂಡು ಒಂದು ಆಲದ ಮರದ ಬುಡದಲ್ಲಿ ಕುಳಿತರು. ಧರ್ಮರಾಜನ ಮಾತಿನಂತೆ ನಕುಲ ಮರವನ್ನೇರಿ ದೂರದಲ್ಲಿ ಒಂದು ಕೊಳವಿರುವುದನ್ನು ಕಂಡು ನೀರು ತರಲು ಹೊರಟ. ಮೊದಲಿಗೆ ನೀರು ಕುಡಿಯಲೆಂದು ಕೊಳದಲ್ಲಿ ಇಳಿದ. ಆಗ ಆಕಾಶದಲ್ಲಿ ಒಂದು ಮಾತು ಕೇಳಿಸಿತು. 'ಇದು ನನ್ನ ಕೊಳ ನನ್ನ ಪ್ರಶ್ನೆಗಳಿಗೆ ಉತ್ತರಿಸದೆ ನೀರು ಕುಡಿಯುವ ಅಥವಾ ಒಯ್ಯುವ ಸಾಹಸ ಮಾಡಬೇಡ' ಎಂದು. ಇದು ಯಮನ ಮಾತು. ಆತ ಅದೃಶ್ಯನಾಗಿ ಅಂದರೆ ನಿಜರೂಪದಲ್ಲಿ ಕಾಣಿಸಿಕೊಳ್ಳದೆ ಬಕಪಕ್ಷಿಯ ರೂಪದಲ್ಲಿ ನಿಂತಿದ್ದ. ನಕುಲ ಪ್ರಶ್ನೆಗಳಿಗೆ ಉತ್ತರಿಸದೆ, ನೀರನ್ನು ಕುಡಿದು ನಿದ್ರಾಪರವಶನಾಗಿ ಬಿದ್ದ. ಬಳಿಕ ಸಹದೇವನೂ ಹಾಗೇ ಮಾಡಿ ನೆಲದಲ್ಲಿ ಒರಗಿದ. ಅರ್ಜುನ ಬಂದು ಸುತ್ತಲೂ ಬಾಣಗಳನ್ನು ಎಸೆದು ಅವೆಲ್ಲ ವ್ಯರ್ಥವಾಗಲು ಬಾಯಾರಿಕೆ ಸಹಿಸಲಾಗದೆ ನೀರು ಕುಡಿದು ಅವನೂ ನಿದ್ರಿತನಾದ. ಬಳಿಕ ಭೀಮನೂ ಪ್ರಶ್ನೆಗಳಿಗೆ ಉತ್ತರಿಸಲಿಲ್ಲ, ನೀರು ಕುಡಿದು ನೆಲಕ್ಕೆ ಒರಗಿದ.

ನ ವಿಪ್ರಾಣಾಂ ಚ ಧರ್ಮೋಽಯಂ ವಿದ್ಯಾಯಾ ಉಪಜೀವನಂ ।
ಕ್ಷತ್ರಿಯಾಣಾಂ ಚ ಕಿಮುತ ಪ್ರಸಭಂ ತೇನ ತೇ ಪಪುಃ ॥೪೪೯॥

ಜೀವನಕ್ಕೆ ವಿದ್ಯೆಯನ್ನು ಆವಲಂಬಿಸುವುದು ಬ್ರಾಹ್ಮಣರಿಗೂ ಧರ್ಮವಲ್ಲದಿರುವಾಗ ಕ್ಷತ್ರಿಯರಿಗೆ ಇನ್ನೇನು ಹೇಳಬೇಕು? ಆದರಿಂದ ಪಾಂಡವರು ಬಲಾತ್ಕಾರದಿಂದ ನೀರನ್ನು ಕುಡಿದರು.

ದೇವಾ ಅಪಿ ಮನುಷ್ಯೇಷು ಜಾತಾಃ ಸುಬಲಿನೋಽಪಿ ಹಿ ।
ಮಾನುಷೇಣೈವ ಭಾವೇನ ಯುಕ್ತಾಃ ಸ್ಯುಃ ಕೇಶವಾದೃತೇ ॥೪೫೦॥

ದೇವತೆಗಳೂ ಕೂಡ ಮನುಷ್ಯರಲ್ಲಿ ಹುಟ್ಟಿದಾಗ ಹೆಚ್ಚು ಬಲಉಳ್ಳವರಾದರೂ ಮನುಷ್ಯ ಸ್ವಭಾವವನ್ನೇ ತೋರಬೇಕು. ಈ ನಿಯಮಕ್ಕೆ ಶ್ರೀಹರಿಯೊಬ್ಬನೇ ಹೊರತಾಗಿದ್ದಾನೆ.

ಕಾರ್ಯೇಷ್ವೇಷಾಂ ಕ್ರಮೇಣೈವ ವ್ಯಕ್ತಿಮಾಯಾಂತಿ ಸದ್ಗುಣಾಃ ।
ಅತೋಽ ಭೀಮಾರ್ಜುನೌ ಧರ್ಮಾದತ್ಯುತ್ತಮಬಲಾವಪಿ ।
ದೇವಮಾಯಾಂ ಸಮಾಶ್ರಿತ್ಯ ಧರ್ಮೇಣ ಸ್ವಾಪಿತೌ ಕ್ಷಣಾತ್ ॥೪೫೧॥

ಪ್ರಸಂಗ ಬಂದಾಗ ಮಾತ್ರ ದೇವತೆಗಳ ಸದ್ಗುಣಗಳು ಕ್ರಮದಿಂದ ಅಭಿವ್ಯಕ್ತಿ ಹೊಂದುತ್ತವೆ. ಆದರಿಂದ ಭೀಮಾರ್ಜುನರು ಯಮನಿಗಿಂತ ಅತ್ಯುತ್ತಮ ಬಲ ಉಳ್ಳವರಾಗಿದ್ದರೂ ದೇವಮಾಯೆಯ ಬಲವನ್ನಾಶ್ರಯಿಸಿ ಯಮನಿಂದ ಕ್ಷಣದಲ್ಲಿ ನಿದ್ರೆಗೊಳಿಸಲ್ಪಟ್ಟರು.

ಮುಹೂರ್ತಮೇವ ಸಾ ಮಾಯಾ ತಯೋರಾಚ್ಛಾದನೇ ಕ್ಷಮಾ ।
ತತಃ ಪ್ರಬುದ್ಧಯೋರ್ಧರ್ಮೋ ನೈವ ಶಕ್ತಿಶತಾಂಶಭಾಕ್ ॥೪೫೨॥

ಆ ದೇವಮಾಯೆ ಒಂದು ಮುಹೂರ್ತಕಾಲ ಮಾತ್ರ ಭೀಮಾರ್ಜುನರನ್ನು ಆವರಿಸಲು ಶಕ್ತವಾಗಿರುತ್ತದೆ. ಅನಂತರ ಅವರು ಎಚ್ಚೆತ್ತರೆ ಅವರ ಶಕ್ತಿಯಲ್ಲಿ ನೂರನೆ ಒಂದಂಶದಷ್ಟೂ ಉಳ್ಳವನಲ್ಲ, ಯಮ.

ಉಕ್ತಂ ಪಾದ್ಮಪುರಾಣೇ ಚ ತದೇತತ್ಸರ್ವಮಂಜಸಾ ।
ತಸ್ಮಾನ್ನಾಶಕ್ತಿರನಯೋಃ ಸಂಭಾವ್ಯಾ ಭೀಮಪಾರ್ಥಯೋಃ ॥೪೫೩॥

ಇದೆಲ್ಲವೂ ಪಾದ್ಮಪುರಾಣದಲ್ಲಿ ಚೆನ್ನಾಗಿ ಉಕ್ತವಾಗಿದೆ. ಆದರಿಂದ ಭೀಮಾರ್ಜುನರಿಗೆ ಅಶಕ್ತಿಯನ್ನು ಶಂಕಿಸಬಾರದು.

ಧರ್ಮಾತ್ಮಜೋಽಥಾಜಗಾಮೋದಕಾಂತಂ
ದೃಷ್ಟ್ವಾ ಭ್ರಾತೄಂಸ್ತತ್ರ ದುಃಖಾಭಿತಪ್ತಃ ।

ಇಚ್ಛನ್ಪಾತುಂ ವಾರಿ ಸಂವಾರಿತಶ್ಚ
ಪಿತ್ರಾ ಬಕಾಕಾರಮಿತೇನ ನಾಪಾತ್ ॥೪೫॥

ಬಳಿಕ ಧರ್ಮರಾಜ ನೀರಿನ ಬಳಿಗೆ ಬಂದ. ಸೋದರರು ಮಲಗಿರುವುದನ್ನು ಕಂಡು ದುಃಖದಿಂದ ಸಂತಪ್ತನಾದ. ನೀರು ಕುಡಿಯಲು ಬಯಸಿದ. ಬಕದ ಆಕಾರವನ್ನು ಧರಿಸಿದ್ದ ತಂದೆ ಯಮ ತಡೆದುದರಿಂದ ಕುಡಿಯಲಿಲ್ಲ.

'ಮೈಯಲ್ಲಿ ಒಂದಿಷ್ಟೂ ಗಾಯ ಉಂಟುಮಾಡದೆ ಇವರನ್ನು ಮಲಗಿಸಬೇಕಾದರೆ ಇದೇನೋ ದೊಡ್ಡ ಭೂತವೆ ಇರಬೇಕು. ನೀರು ಕುಡಿದು ವಿಚಾರಿಸುತ್ತೇನೆ. ಅಥವಾ ನೀರಲ್ಲಿಯೆ ಕೌರವರು ವಿಷವಿಕ್ಕಿರಬಹುದೆ, ನೋಡುವೆ. ಆದರೆ ನೀರಲ್ಲಿ ವಿಷವಿರಲಾರದು. ವಿಷಜಲಪಾನ ಪ್ರಯುಕ್ತವಾದ ಮುಖ ವಿಕಾರಾದಿಗಳೊಂದೂ ಇವರಲ್ಲಿ ಇಲ್ಲ. ಪ್ರಸನ್ನ ಮುಖದಿಂದ ಮಲಗಿದ್ದಾರೆ' ಎಂದು ಧರ್ಮರಾಜ ಆಲೋಚಿಸುತ್ತಿದ್ದಾಗ 'ನಾನು ಬಕಪಕ್ಷಿ, ನಿನ್ನ ತಮ್ಮಂದಿರನ್ನೆಲ್ಲ ಮಲಗಿಸಿದವನು. ನನ್ನ ಪ್ರಶ್ನೆಗಳಿಗೆ ಉತ್ತರಿಸದೆ ನೀರು ಕುಡಿದರೆ ನೀನೂ ಮಲಗುವೆ' ಎಂದಿತು ಬಕಪಕ್ಷಿ.

ಅರ್ಹೋ ಭ್ರಾತೄಣಾಮೈಚ್ಛದಸೌ ತದೀಯ
ಪ್ರಶ್ನಪ್ರತಿವ್ಯಾಹರಣಂ ದಯಾಲುಃ ।
ತತೋ ಧರ್ಮೋ ಯಕ್ಷತನುಃ ಸ ಭೂತ್ವಾ
ಪ್ರಶ್ನಾಂಶ್ಚಕ್ರೇ ವ್ಯಾಕರೋತ್ತಾನ್ಸ ಪಾರ್ಥಃ ॥೪೬॥

ದಯಾಳುವಾದ ಧರ್ಮರಾಜ ಸೋದರರ ಸಲುವಾಗಿ ಯಮನ ಪ್ರಶ್ನೆಗಳಿಗೆ ಉತ್ತರಿಸಲು ಬಯಸಿದ. ಆಗ ಯಮ ಯಕ್ಷಶರೀರಿಯಾಗಿ ಪ್ರಶ್ನೆಗಳನ್ನು ಕೇಳಿದ. ಧರ್ಮರಾಜ ಅವುಗಳನ್ನು ಉತ್ತರಿಸಿದ.

'ನೀನು ಬಕಪಕ್ಷಿಯಲ್ಲ. ದೇವ ಅಸುರ ಗಂಧರ್ವಾದಿಗಳಿಗೆ ಯಾರಿಗೂ ಇವರನ್ನು ಇದಿರಿಸುವ ಶಕ್ತಿ ಇಲ್ಲ. ನೀನು ಯಾರು ಹೇಳು. ನನಗೆ ಕುತೂಹಲವೂ ಭಯವೂ ಉಂಟಾಗಿದೆ. ಪೂಜ್ಯನೆ, ನೀನಾರು ಹೇಳು' ಎಂದು ಧರ್ಮರಾಜ ಕೇಳಿದಾಗ ಯಮ ವಿಕೃತಾಕಾರದ ಭಯಂಕರ ಯಕ್ಷರೂಪದಿಂದ ಮೈದೋರಿದ. ನಾನು ಯಕ್ಷ. ಬಕಪಕ್ಷಿಯಲ್ಲ ಎಂದ. ಅದರಿಂದ ಯಮ ಕೇಳುವ ಪ್ರಶ್ನೆಗಳು ಯಕ್ಷಪ್ರಶ್ನೆ ಎಂದು ಪ್ರಸಿದ್ಧವಾಗಿದೆ.

ಧರ್ಮರಾಜ ವಿದ್ಯಾಬಲದಿಂದ ತಾನು ಬದುಕಲು ಬಯಸಲಿಲ್ಲ. ಕೇವಲ ಸೋದರ ವಾತ್ಸಲ್ಯದಿಂದ ಅವರಿಗಾಗಿ ಪ್ರಶ್ನೆಗಳಿಗೆ ಉತ್ತರಿಸಿದ.

ತತಸ್ತುಷ್ಟೋ ವರಮಸ್ಮೈ ದದೌ ಸ
ಏಕೋತ್ಥಾನಂ ಭ್ರಾತೃಮಧ್ಯೇ ಸ ವವ್ರೇ ।
ಯದ್ಯೇಕಃ ಸ್ಯಾನ್ನಕುಲೋಽಸ್ತ್ವಥಾಹ
ತುಷ್ಟೋ ಧರ್ಮಃ ಕಥಮೇತತ್ಕೃತಂ ತೇ ॥೪೫॥
ಅತಿಪ್ರೀತಿರ್ಭೀಮಸೇನೇ ತವಾಸ್ತಿ
ಬಲೀ ಚಾಸೌ ರಾಜ್ಯಹೇತುಸ್ತವ ಸ್ಯಾತ್ ।
ಇತ್ಯುಕ್ತ ಊಚೇ ಮಾದ್ರಿಪುತ್ರಂ ವಿಹಾಯ
ಕುಂತೀಪುತ್ರೋ ನ ಮಯೋತ್ಥಾಪನೀಯಃ ॥೪೬॥

ಆಗ ಯಮ ಸಂತುಷ್ಟನಾಗಿ ಧರ್ಮರಾಜನಿಗೆ ನಿನ್ನ ತಮ್ಮಂದಿರಲ್ಲಿ ಯಾರಾದರೂ ಒಬ್ಬ ಮಾತ್ರ ಎದ್ದು ಬರುವನೆಂದು ವರ ನೀಡಿದ. ಒಬ್ಬ ಏಳುವುದಾದರೆ ನಕುಲ ಏಳಲಿ ಎಂದ ಧರ್ಮರಾಜ. ಯಮ ಸಂತುಷ್ಟನಾಗಿ ಕೇಳಿದ. 'ನೀನೇಕೆ ಹೀಗೆ ಮಾಡಿದೆ? ನಿನಗೆ ಅತ್ಯಂತ ಪ್ರೀತಿ ಭೀಮನಲ್ಲಿ ಇದೆ. ಬಲಿಷ್ಠನಾದ ಅವನೇ ನಿನಗೆ ರಾಜ್ಯ ಲಾಭಕ್ಕೆ ಕಾರಣನಾಗುವನು'. ಹೀಗೆ ಯಮ ಹೇಳಿದಾಗ ಧರ್ಮರಾಜನೆಂದ, 'ಮಾದ್ರೀಪುತ್ರನನ್ನು ಬಿಟ್ಟು ಕುಂತೀ ಪುತ್ರನನ್ನು ನಾನು ಎಬ್ಬಿಸುವುದು ಉಚಿತವಲ್ಲ'.

ಧರ್ಮರಾಜನಿಗೆ ತನ್ನ ತಮ್ಮಂದಿರಲ್ಲಿ ಸೋದರರು ಮಲತಾಯಿ ಮಕ್ಕಳೆಂಬ ಭೇದಭಾವನೆ ಇದೆಯೆ ಎಂದು ಪರೀಕ್ಷಿಸಲು 'ಒಬ್ಬ ತಮ್ಮ ಏಳುತ್ತಾನೆ. ಯಾರು ಏಳಬೇಕು, ಹೇಳಿಂ'ದ. ಧರ್ಮರಾಜ ನಕುಲ ಏಳಲಿ ಎಂದ. ನಿನಗೆ ಭೀಮನಲ್ಲಿಯೆ ಹೆಚ್ಚು ಪ್ರೀತಿ. ನಿನಗೆ ಮುಂದೆ ಶತ್ರುನಿಗ್ರಹ ಮಾಡಿ ರಾಜ್ಯ ಸಂಪಾದಿಸಿಕೊಡುವವನೂ ಮುಖ್ಯವಾಗಿ ಅವನೇ. ಅವನನ್ನೆ ಎಬ್ಬಿಸಬೇಕಾಗಿತ್ತು ಎಂದ ಯಮ. ಅದಕ್ಕೆ ಧರ್ಮರಾಜನೆಂದ 'ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ (ವನ 314.131). 'ನಾವು ಧರ್ಮವನ್ನು ಕಾಪಾಡಿದರೆ ಧರ್ಮ ನಮ್ಮನ್ನು ಕಾಪಾಡುತ್ತದೆ'. ದಯೆಯೆ ಮುಖ್ಯವಾದ ಧರ್ಮ. ಕುಂತೀಪುತ್ರ ನಾನೊಬ್ಬನಿರುವಾಗ ಮಾದ್ರಿಪುತ್ರರಿಲ್ಲವೆಂದಾಗಕೂಡದು. ಅದಕ್ಕೆ ನಕುಲ ಬದುಕಲಿ ಎಂದೆ. ನನಗೆ ಹೆತ್ತತಾಯಿ ಮಲತಾಯಿಯರೆಂಬ ಭೇದವಿಲ್ಲ. ಸಮಾನವಾದ ದಯಾಭಾವವೆ ಇದೆ' ಎಂದು.

ಸ ಏವಮುಕ್ತೋ ನಿತರಾಂ ಪ್ರೀಯಮಾಣ
ಉತ್ಥಾಪಯಾಮಾಸ ಚ ತಾನ್ಸಮಸ್ತಾನ್ ।
ಯಥೇಷ್ಟರೂಪಪ್ರಾಪ್ತಿಮೇಷಾಂ ಪುನಶ್ಚ
ಸ್ವಕಾಮತೋ ನಿಜರೂಪಾಪ್ತಿಮಾದಾತ್ ॥೪೭॥

ಧರ್ಮರಾಜ ಹೀಗೆ ಹೇಳಿದಾಗ ಯಮ ಬಹಳ ಸಂತುಷ್ಟನಾಗಿ ಎಲ್ಲ ಪಾಂಡವರನ್ನೂ ಎಬ್ಬಿಸಿದ. ಅವರಿಗೆ ತಾವು ಬಯಸಿದ ರೂಪ ಪ್ರಾಪ್ತಿ ವರವನ್ನೂ ನೀಡಿದ. ಸ್ವೇಚ್ಛೆಯಿಂದ ನಿಜರೂಪ ಪ್ರಾಪ್ತಿಯ ವರವನ್ನೂ ನೀಡಿದ.

ಎಲ್ಲ ಪಾಂಡವರೂ ಎಚ್ಚೆತ್ತುಕೊಂಡಾಗ ಧರ್ಮರಾಜ ಯಕ್ಷನನ್ನು ಕೇಳಿದ, 'ನೀನಾರು? ವಸುವೊ, ರುದ್ರನೊ, ಮರುತನೊ, ಇಂದ್ರನೊ?

ಸುಖಪ್ರತಿಮ ಬುದ್ಧಾನಾಮಿಂದ್ರಿಯಾಣ್ಯುಪಲಕ್ಷಯೇ।
ಸ ಭವಾನ್ ಸುಹೃದೋಽಸ್ಮಾಕಮಥವಾ ನಃ ಪಿತಾ ಭವಾನ್?

'ಇದು ದುಃಖಕರವಾದ ಮೂರ್ಛೆಯಲ್ಲ. ಸುಖಾನುಭವರೂಪವಾದ ಸುಪ್ತಿಯಿಂದ ಎಚ್ಚರಗೊಂಡಂತೆ ಪ್ರಸನ್ನ ಇಂದ್ರಿಯಗಳನ್ನು ಇವರಲ್ಲಿ ಕಾಣುತ್ತಿದ್ದೇನೆ. ನೀನು ನಮ್ಮ ಮಿತ್ರನೊ ಅಥವಾ ಪಿತನೊ?' ಎಂದು. ಯಮ ಹೇಳಿದ, 'ನಾನು ನಿನ್ನ ಪಿತನೆ. ಯಮಧರ್ಮರಾಜ. ನಾನೆ ಜಿಂಕೆಯ ರೂಪದಿಂದ ಅರಣಿ ಪಾತ್ರೆಗಳನ್ನು ಅಪಹರಿಸಿ ಒಯ್ದೆ. ಪ್ರಸನ್ನನಾಗಿ ನಿಮಗೆ ವರ ನೀಡುತ್ತೇನೆ, ಅಜ್ಞಾತವಾಸದಲ್ಲಿ ನಿಮಗೆ ಬೇಕಾದ ರೂಪ ಪ್ರಾಪ್ತವಾಗಲಿ ಎಂದು.

ಅಜ್ಞಾತವಾಸೇಽಜ್ಞಾತತಾಂ ಸರ್ವದೈವ
ದದೌ ತೇಷಾಂ ಪ್ರೀತ ಏವಾನೃಶಂಸ್ಯಾತ್ ।
ಏವಂ ಕ್ರೀಡನ್ ಪುತ್ರ ಇತ್ಯಾತ್ಮನೈವ
ಯಶೋಧರ್ಮಾವಾತ್ಮನೋ ವರ್ಧಯನ್ ಸಃ ॥೪೫॥

ಯುಧಿಷ್ಠಿರನ ದಯಾಧರ್ಮದಿಂದ ಸಂತುಷ್ಟನಾದ ಯಮ ಹೀಗೆ ಮಗನೆಂದು ತನ್ನೊಡನೆಯೆ ತಾನು ಕ್ರೀಡಿಸುತ್ತಾ, ಪಾಂಡವರಿಗೆ ಅಜ್ಞಾತವಾಸಕಾಲದಲ್ಲಿ ಸದಾ ಅಜ್ಞಾತರಾಗಿರುವಂತೆ ವರನೀಡಿದ.

ಮುಂದೆ ಅಜ್ಞಾತವಾಸಕಾಲದಲ್ಲಿ ನೀವು ನಿಮ್ಮ ನಿಜರೂಪದಲ್ಲಿ ಓಡಾಡಿದರೂ ಯಾರೂ ನಿಮ್ಮನ್ನು ಗುರುತಿಸದಿರಲಿ ಎಂದು ಯಮ ವರವಿತ.

ಯುಧಿಷ್ಠಿರಾತ್ಮನಃ ಸ್ವಸ್ಯ ಯಶೋಧರ್ಮಾಭಿವೃದ್ಧಯೇ ।
ಕೃತ್ವಾರಣ್ಯಪಹಾರಾದಿ ಪುನರ್ದತ್ವಾ ಚ ತತ್ ಸ್ವಯಂ ।
ದಾತುಂ ವಿಪ್ರಾಯ ತದ್ಧಸ್ತೇ ಯಯೌ ಧರ್ಮೋ ದಿವಂ ಪುನಃ ॥೪೬॥

ಯುಧಿಷ್ಠಿರರೂಪದಲ್ಲಿದ್ದ ತನ್ನ ಯಶಸ್ಸು ಪುಣ್ಯಗಳ ವೃದ್ಧಿಗಾಗಿ ಅರಣಿಯ ಅಪಹಾರಾದಿಗಳನ್ನು ತಾನೇ ಮಾಡಿ, ಪುನಃ ತಾನೇ ಅದನ್ನು ಬ್ರಾಹ್ಮಣನಿಗೆ ಕೊಡುವುದಕ್ಕಾಗಿ

ಯುಧಿಷ್ಠಿರನ ಕೈಯಲ್ಲಿ ಕೊಟ್ಟು, ಪುನಃ ಯಮ ಸ್ವರ್ಗಕ್ಕೆ ತೆರಳಿದ.

ತತೋ ರಾಜಾ ಭೀಮಸೇನಾರ್ಜುನೌ ಚ
ಸಾರ್ಧಂ ಯಮಾಭ್ಯಾಮರಣೇಂ ಪ್ರದಾಯ ।
ಮುದಾ ಯುತಾಃ ಕೃಷ್ಣಯಾ ಸಾರ್ಧಮೇವ
ಸಂತುಷ್ಟುವುಃ ಕೃಷ್ಣಮನಂತಮಚ್ಯುತಂ ॥೪೦॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಅರಣೇಪ್ರಾಪ್ತಿರ್ನಾಮ
ದ್ವಾವಿಂಶೋಽಧ್ಯಾಯಃ ॥

ಬಳಿಕ ರಾಜಾ ಯುಧಿಷ್ಠಿರ ಮತ್ತು ಭೀಮಾರ್ಜುನರು ನಕುಲ ಸಹದೇವರೊಂದಿಗೆ ಬ್ರಾಹ್ಮಣನಿಗೆ ಅರಣಿಯನ್ನು ಕೊಟ್ಟು ಆನಂದಯುಕ್ತರಾಗಿ ದ್ರೌಪದಿಯೊಂದಿಗೆ ಅನಂತ ಅಚ್ಯುತನೆನಿಸಿದ ಶ್ರೀಕೃಷ್ಣನನ್ನು ಚೆನ್ನಾಗಿ ಸ್ತುತಿಸಿದರು.

ಶ್ರೀಮದಾನಂದತೀರ್ಥ ಭಗವತ್ಪಾದರು ರಚಿಸಿದ
ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಅರಣೇಪ್ರಾಪ್ತಿಯೆಂಬ
ಇಪ್ಪತ್ತೆರಡನೆ ಅಧ್ಯಾಯ ಮುಗಿಯಿತು.

ಶ್ರೀ ಮದಾನಂದತೀರ್ಥಭಗವತ್ಪಾದರು ರಚಿಸಿದ

ಸರ್ವಮೂಲ ಗ್ರಂಥಗಳು

(ಕನ್ನಡ ಅನುವಾದ ವಿವರಣೆ ಸಹಿತ)

ಸಂಪುಟ - ೯

ಮಹಾಭಾರತತಾತ್ಪರ್ಯನಿರ್ಣಯ

ಭಾಗ- ೩

ಪರಮಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಕನ್ನಡ ಸಾರ ಸಹಿತ

ಅನುವಾದಕರು :

ವಿದ್ವಾನ್ ಕೆ.ಹಯವದನಪುರಾಣಿಕ, ಎಮ್.ಎ

ಪ್ರಕಾಶಕರು

ಅಖಿಲ ಭಾರತ ಮಾಧ್ವ ಮಹಾಮಂಡಲ

ಪೂರ್ಣಪ್ರಜ್ಞ ವಿದ್ಯಾಪೀಠ

ಬೆಂಗಳೂರು- 560 028

ಕನ್ನಡ ಸರ್ವಮೂಲ - ಮಹಾಭಾರತತಾತ್ಪರ್ಯನಿರ್ಣಯ - ಭಾಗ - ೩
೯ನೆಯ ಈ ಸಂಪುಟವನ್ನು ಶ್ರೀವಿಶ್ವೇಶತೀರ್ಥಶ್ರೀಪಾದರು ತಮ್ಮ ಪೀಠಾರೋಹಣದ
೬೦ನೇ ವರ್ಷದ ರಾಷ್ಟ್ರೀಯ ಅಭಿವಂದನ ಸಮಾರಂಭದಲ್ಲಿ ಬೆಂಗಳೂರಿನಲ್ಲಿ
ದಿ. ೨೬-೧೧-೧೯೯೯ರಂದು ಬಿಡುಗಡೆಗೊಳಿಸಿದರು.

ಪುಟಗಳು : 598

ಬೆಲೆ : **120/-**

ಪ್ರಕಾಶಕರು : **ಅಖಿಲ ಭಾರತ ಮಾಧ್ವಮಹಾಮಂಡಲ,** ಬೆಂಗಳೂರು- 560 028

ಸಂಪಾದಕ ಮಂಡಳಿ

ಅಧ್ಯಕ್ಷರು

ಪರಮಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರು

ಕಾರ್ಯಾಧ್ಯಕ್ಷರು

ಪ್ರೊ. ಕೆ.ಟಿ. ಪಾಂಡುರಂಗಿ, ವೇದಾಂತ ವಿದ್ವಾನ್, ಮೀಮಾಂಸಾ ಶಿರೋಮಣಿ

ಕಾರ್ಯದರ್ಶಿಗಳು

ಪ್ರೊ. ಡಿ. ಪ್ರಹ್ಲಾದಾಚಾರ್ಯ, ನ್ಯಾಯ ವೇದಾಂತ ವಿದ್ವಾನ್

ಸದಸ್ಯರು

ವಿದ್ವಾನ್ ಕೆ. ಹಯವದನ ಪುರಾಣಿಕ
ವಿದ್ವಾನ್ ಪಿ. ಕೇಶವ ಬಾಯರಿ
ವಿದ್ವಾನ್ ರಾಮಾಚಾರ್ಯ ಜಿ. ಮಾಳಗಿ
ವಿದ್ವಾನ್ ಜಿ. ಗುರುವೆಂಕಟಾಚಾರ್ಯ
ವಿದ್ವಾನ್ ಎ. ಹರಿದಾಸಭಟ್ಟ

ಅಕ್ಷರ ಜೋಡಣೆ: **ಪೂರ್ಣಪ್ರಜ್ಞ ಸಂಶೋಧನ ಮಂದಿರ**
ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ತರಿಗುಪ್ಪ ಮುಖ್ಯರಸ್ತೆ.

ಗ್ರಂಥಗಳು ದೊರೆಯುವ ಸ್ಥಳ: **ಅಖಿಲ ಭಾರತ ಮಾಧ್ವಮಹಾಮಂಡಲ**
ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ತರಿಗುಪ್ಪ ಮುಖ್ಯರಸ್ತೆ,
ಬೆಂಗಳೂರು-೫೬೦ ೦೨೮ ದೂರವಾಣಿ : 6690068.

ಮುದ್ರಣ : **ಬೃಂದಾವನ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ.ಲಿ.** ಬೆಂಗಳೂರು

ಶ್ರೀ 108 ಶ್ರೀಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಸಂದೇಶ

ಶ್ರೀ ಮಧ್ವಾಚಾರ್ಯರ 750ನೇ ವರ್ಷದ ಜಯಂತಿಯ ಸಂದರ್ಭದಲ್ಲಿ ಕೈಗೊಂಡಿರುವ ಜ್ಞಾನಪ್ರಸಾರ ಯೋಜನೆಯ ಅಂಗವಾಗಿ ಶ್ರೀಮದಾಚಾರ್ಯರ ಎಲ್ಲಾ ಗ್ರಂಥಗಳ ಕನ್ನಡ ಅನುವಾದವನ್ನು ಪ್ರಕಾಶಿಸುವ ಬೃಹತ್ ಯೋಜನೆಯನ್ನು ಆನಂದತೀರ್ಥ ಪ್ರತಿಷ್ಠಾನದ ಸಹಕಾರದಿಂದ ಅಖಿಲ ಭಾರತ ಮಾಧ್ವ ಮಹಾ ಮಂಡಲವು ಕೈಗೊಂಡಿದೆ. ತೆಲುಗು, ತಮಿಳು ಮುಂತಾದ ಪ್ರಾದೇಶಿಕ ಭಾಷೆಗಳಲ್ಲಿಯೂ, ಹಿಂದಿ, ಇಂಗ್ಲೀಷ್ ಭಾಷೆಗಳಲ್ಲಿಯೂ ಅನುವಾದವನ್ನು ಪ್ರಕಟಿಸುವ ಬಯಕೆ ನಮ್ಮದಾಗಿದೆ. ಜಗತ್ತಿನ ಸತ್ಯತತ್ವಗಳನ್ನು ಅನುಭವದ ನೆಲೆಯಲ್ಲಿ ಪರೀಕ್ಷಿಸಿ ಸರಿಯಾದ ಪ್ರಮಾಣಗಳ ಆಧಾರದಲ್ಲಿ ವೈಜ್ಞಾನಿಕವಾಗಿ ವಿವೇಚಿಸುವ ವಿಶಿಷ್ಟತೆಯನ್ನು ಶ್ರೀಮದಾಚಾರ್ಯರ ಸಿದ್ಧಾಂತದಲ್ಲಿ ನಾವು ಕಾಣಬಹುದು. ಎಲ್ಲಾ ಪ್ರಮಾಣ, ತರ್ಕ, ಊಹಾಪೋಹಗಳಿಗಿಂತಲೂ ಅನುಭವಕ್ಕೆ ಹೆಚ್ಚಿನ ಸ್ಥಾನವನ್ನು ಶ್ರೀಮದಾಚಾರ್ಯರು ನೀಡಿದ್ದಾರೆ. ಎಲ್ಲ ಭಾಷೆಗಳಲ್ಲಿ ಆಚಾರ್ಯರ ಗ್ರಂಥಗಳ ಅನುವಾದದ ಪ್ರಕಟಣೆಯು ಜಗತ್ತಿನ ಜಿಜ್ಞಾಸುಗಳಿಗೆ ಈ ಸತ್ಯದ ಅರಿವುಂಟಾಗಲು ಅನುಕೂಲವಾಗುವುದು. ಶ್ರೀಮದಾಚಾರ್ಯರ ಸಂದೇಶವು ವಿಶ್ವದಲ್ಲಿ ಪ್ರತಿಧ್ವನಿತವಾಗಲಿ, ಈ ಗ್ರಂಥ ಪ್ರಕಾಶನದಿಂದಾಗಿ ಜ್ಞಾನ, ಭಕ್ತಿ, ಕರ್ತವ್ಯ, ಚಾರಿತ್ರ್ಯಗಳ ಬಗ್ಗೆ ಜನಜಾಗೃತಿಯುಂಟಾಗಲಿ ಎಂದು ಹಾರೈಸುತ್ತೇವೆ. ಭಕ್ತರೂ, ಅಭಿಮಾನಿಗಳೂ, ಜಿಜ್ಞಾಸುಗಳೂ ಆದ ಎಲ್ಲಾ ಮಹಾಜನರ ಸಹಕಾರದಿಂದ, ಹರಿವಾಯುಗಳ ಅನುಗ್ರಹದಿಂದ ಈ ಪವಿತ್ರವಾದ ಮಹತ್ತರವಾದ ಜ್ಞಾನಕಾರ್ಯವು ಯಶಸ್ವಿಯಾಗಲಿ ಎಂದ ಆಶಿಸುತ್ತೇವೆ.

ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು
ಶ್ರೀ ಪೇಜಾವರ ಮಠ, ಉಡುಪಿ.

ಪ್ರಕಾಶಕರ ನುಡಿ

ಅಖಿಲ ಭಾರತ ಮಾಧ್ವ ಮಹಾಮಂಡಲವು ಕ್ರಿ.ಶ. 1986ನೇ ವರ್ಷದಲ್ಲಿ ಸರ್ವಮೂಲದ ಕನ್ನಡ ಅನುವಾದದ ಆವೃತ್ತಿಗಳನ್ನು ಹೊರತರುವ ನಿರ್ಧಾರವನ್ನು ಕೈಗೊಂಡಿತು. ಸುಮಾರು ಹನ್ನೆರಡು ವರ್ಷಗಳಲ್ಲಿ ಆರು ಸಂಪುಟಗಳನ್ನು ಹೊರತರಲಾಗಿದೆ. ಗೀತಾಪ್ರಸ್ಥಾನ, ಉಪನಿಷತ್ ಪ್ರಸ್ಥಾನ ಮತ್ತು ದಶಪ್ರಕರಣಗಳು ಅನುವಾದ ಸಹಿತ ಪೂರ್ಣವಾಗಿ ಪ್ರಕಟಗೊಂಡಿವೆ. ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ರಾಮಾಯಣ ಪರ್ಯಂತದ ಒಂಭತ್ತು ಅಧ್ಯಾಯಗಳು ಮತ್ತು ಮುಂದಿನ ಹದಿನೆಂಟು ಅಧ್ಯಾಯದವರೆಗಿನ ಎರಡನೆಯ ಭಾಗ ಪ್ರಕಟವಾಗಿವೆ. ನಡುವೆ ಜಿಜ್ಞಾಸುಗಳ ಅಪೇಕ್ಷೆಯಂತೆ ಗೀತಾಪ್ರಸ್ಥಾನ ಮತ್ತು ದಶೋಪನಿಷತ್ತುಗಳ ದ್ವಿತೀಯ ಮುದ್ರಣವನ್ನು ಕೈಗೆತ್ತಿಕೊಳ್ಳಲಾಯಿತು. ಹೀಗೆ ಆದಷ್ಟು ಶೀಘ್ರವಾಗಿ ಕನ್ನಡ ಸರ್ವಮೂಲವನ್ನು ವಾಚಕರಿಗೆ ಒದಗಿಸುವ ನಮ್ಮ ಸಂಕಲ್ಪ ವಿಳಂಬವಾದರೂ ನಿರಾಶಾದಾಯಕವಾಗಿಲ್ಲ. ಇದೀಗ ಶ್ರೀ ವಿಶ್ವೇಶತೀರ್ಥರ ಪೀಠಾರೋಹಣದ 60ನೇ ವರ್ಷದ ಈ ಸುಸಂದರ್ಭದಲ್ಲಿ ಮಹಾಭಾರತ ತಾತ್ಪರ್ಯನಿರ್ಣಯದ ಮೂರನೆಯಭಾಗ ಪ್ರಕಟವಾಗುತ್ತಿದೆ.

ಮಹಾಭಾರತ ತಾತ್ಪರ್ಯನಿರ್ಣಯದ ಈ ಮೂರನೆಯ ಭಾಗದಲ್ಲಿ ಹತ್ತೊಂಬತ್ತರಿಂದ ಇಪ್ಪತ್ತೆರಡು ಅಧ್ಯಾಯದ ವರೆಗಿನ ಒಟ್ಟು ನಾಲ್ಕು ಅಧ್ಯಾಯಗಳು ಸೇರಿವೆ. ಇದರ ಅನುವಾದವನ್ನು ನಡೆಸಿಕೊಟ್ಟ ವಿದ್ವಾನ್ ಕೆ. ಹಯವದನ ಪುರಾಣಿಕರಿಗೆ ಕೃತಜ್ಞತೆಗಳು.

ತಮ್ಮ ನಿರಂತರ ಕೆಲಸಗಳ ಮಧ್ಯದಲ್ಲೂ ಬಿಡುವು ಮಾಡಿಕೊಂಡು ಸರಳ ಸುಂದರ ಭಾಷೆಯಲ್ಲಿ ಗ್ರಂಥದ ಸಾರವನ್ನು ಬರೆದು ಅನುಗ್ರಹಿಸಿದ ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಗೆ ಅನಂತ ಪ್ರಣಾಮಗಳು. ಕನ್ನಡ ಅರಿಯದ ಜಿಜ್ಞಾಸುಗಳಿಗೂ ತಿಳಿಯಲು ಅನುಕೂಲವಾಗುವಂತೆ ಆಂಗ್ಲ ಭಾಷೆಯಲ್ಲಿ ಸಾರವನ್ನು ಬರೆದುಕೊಟ್ಟ ಪ್ರೊ। ಕೆ.ಟಿ. ಪಾಂಡುರಂಗಿಯವರಿಗೂ ಕೃತಜ್ಞತೆಗಳು.

ಈ ಸಂಪುಟದ ಅಕ್ಷರ ಜೋಡಣೆಯ ಕಾರ್ಯವನ್ನು 'ಪೂರ್ಣಪ್ರಜ್ಞ ಸಂಶೋಧನ ಮಂದಿರ' ವು ವಹಿಸಿಕೊಂಡು, ಅಂದವಾಗಿ ಮಾಡಿಕೊಟ್ಟಿದೆ. ಮಂದಿರದ ಅಧಿಕಾರಿ ವರ್ಗಕ್ಕೆ ಕೃತಜ್ಞತೆಗಳು. ಈ ಸಂಪುಟವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಬೃಂದಾವನ ಪ್ರಿಂಟರ್ಸ್‌ನ ಮಾಲಿಕರಾದ ಶ್ರೀ ಎಂ.ಹೆಚ್. ಕೌಜಲಗಿ ಇವರಿಗೂ ಕೃತಜ್ಞತೆಗಳು.

ಸಹೃದಯ ವಾಚಕರು ವಿಳಂಬಕ್ಕೆ ಬೇಸರಿಸದೆ ಅತ್ಮೀಯತೆಯಿಂದ ಈ ಸಂಪುಟವನ್ನು ಬರಮಾಡಿಸಿಕೊಳ್ಳುವರೆಂದು ನಂಬಿದ್ದೇವೆ.

೨೦.೧೧.೧೯೯೯

ಕೆ. ವಿಷ್ಣುಮೂರ್ತಿ ಎರ್ಕಾಡಿತ್ತಾಯ ಅಧ್ಯಕ್ಷರು
ಅ. ಭಾ. ಮಾ. ಮ. ಮಂಡಲ, ಬೆಂಗಳೂರು

ಸಂಪಾದಕ ಮಂಡಳಿಯ ನಿವೇದನೆ

ಕ್ರಿ.ಶ. 1986ರಲ್ಲಿ ಶ್ರೀ ಮಧ್ವಾಚಾರ್ಯರ ೭೫೦ನೆಯ ಜಯಂತಿಯ ಅಂಗವಾಗಿ ಆಚಾರ್ಯರು ಅನುಗ್ರಹಿಸಿದ ಸಮಗ್ರ ಸರ್ವಮೂಲಗ್ರಂಥಗಳ ಭಾಷಾಂತರ ಕಾರ್ಯವನ್ನು ಶ್ರೀ ವಿಶ್ವೇಶತೀರ್ಥರು ಸಂಕಲ್ಪಿಸಿದರು. ಅಂದಿನಿಂದ ಇದುವರೆಗೆ ಒಟ್ಟು ಎಂಟು ಸಂಪುಟಗಳು ಹೊರಬಂದಿವೆ. ಅಲ್ಲದೆ ಎರಡು ಬೃಹತ್ ಸಂಪುಟಗಳ ಪುನರ್ಮುದ್ರಣ ಕಾರ್ಯವೂ ನಡೆದಿದೆ. ಇದೀಗ ಶ್ರೀ ವಿಶ್ವೇಶತೀರ್ಥರ ಪೀಠಾರೋಹಣದ ವಜ್ರ ಮಹೋತ್ಸವ ಸಂದರ್ಭದಲ್ಲಿ ಮತ್ತೊಂದು ಸಂಪುಟ ಪ್ರಕಾಶಗೊಳ್ಳುತ್ತಿದೆ.

ಕ್ರಿ.ಶ. 1887 ರಲ್ಲಿ ಗೀತಾಪ್ರಸ್ಥಾನ ಪ್ರಕಟವಾಯಿತು. ಆಮೇಲಿನ ಎರಡು ವರ್ಷಗಳಲ್ಲಿ ದಶೋಪನಿಷತ್ತುಗಳು, ಬೃಹದಾರಣ್ಯಕ ಮತ್ತು ಛಾಂದೋಗ್ಯೋಪನಿಷತ್ತುಗಳ ಮೂರು ಸಂಪುಟಗಳು ಹೊರಬಂದವು. 1993ರಲ್ಲಿ ಮಹಾಭಾರತ ತಾತ್ಪರ್ಯ ನಿರ್ಣಯದ ಮೊದಲ ಭಾಗವು ಪ್ರಕಟವಾಯಿತು. ಮರುವರ್ಷ ದಶಪ್ರಕರಣಗಳನ್ನು ಪ್ರಕಾಶಪಡಿಸಲಾಯಿತು.

ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ರಾಮಾಯಣ ಮತ್ತು ಮಹಾಭಾರತದ ಕಥೆಗಳು ಅಡಕವಾಗಿವೆ. ಮೊದಲ ಒಂಭತ್ತು ಅಧ್ಯಾಯದವರೆಗೆ ರಾಮಾಯಣದ ಕಥಾಭಾಗವು ಮುಕ್ತಾಯವಾಗಿದೆ. ಹತ್ತನೆಯ ಅಧ್ಯಾಯದಲ್ಲಿ ಶ್ರೀ ವೇದವ್ಯಾಸರ ಅವತಾರ ಮತ್ತು ಅವರು ನಡೆಸಿದ ಜ್ಞಾನಕಾರ್ಯಗಳ ವಿವರಣೆ ಇದೆ. ಹನ್ನೊಂದನೆಯ ಅಧ್ಯಾಯದಿಂದ ಮಹಾಭಾರತದ ಕಥೆಯು ಆರಂಭವಾಗುತ್ತದೆ. ಈ ಸಂಪುಟದಲ್ಲಿ ಹತ್ತೊಂಬತ್ತನೆಯ ಅಧ್ಯಾಯದಿಂದ ಇಪ್ಪತ್ತೆರಡನೆಯ ಅಧ್ಯಾಯಗಳವರೆಗಿನ ಭಾಗವನ್ನು ಭಾಷಾಂತರ ಮಾಡಿ ಕೊಡಲಾಗಿದೆ.

ಈ ಗ್ರಂಥದ ಅನುವಾದವನ್ನು ವಿದ್ವಾನ್ ಕೆ. ಹಯವದನ ಪುರಾಣಿಕರು ಮಾಡಿದ್ದಾರೆ. ಇಲ್ಲಿ ಗ್ರಂಥದ ಶ್ಲೋಕಗಳಿಗೆ ಸರಿಹೊಂದುವ ಅನುವಾದದ ಜೊತೆಗೆ ಉಪಯುಕ್ತ ಮಾಹಿತಿಗಳನ್ನು ಆಧಾರಸಹಿತ ನಿರೂಪಿಸಲಾಗಿದೆ. ಮಹಾಭಾರತದ ಕಥೆಗೂ ಆಚಾರ್ಯರು ನೀಡಿದ ನಿರ್ಣಯಕ್ಕೂ ಇರುವ ಸಂಬಂಧವನ್ನೂ ಔಚಿತ್ಯವನ್ನೂ ವಿದ್ವತ್‌ಪೂರ್ಣವಾಗಿ ನೀಡಲಾಗಿದೆ. ನಿರ್ಣಯದ ಅನೇಕ ವ್ಯಾಖ್ಯಾನಗಳ ಮುಖ್ಯಾಂಶಗಳ ಉಲ್ಲೇಖವನ್ನು ಮಾಡಲಾಗಿದೆ. ಈ ಗ್ರಂಥವನ್ನು ಅನುವಾದಿಸಿದ ಶ್ರೀ ಕೆ. ಹಯವದನ ಪುರಾಣಿಕರಿಗೆ ಕೃತಜ್ಞತೆಗಳು.

ಬಿಡುವಿಲ್ಲದ ಕಾರ್ಯದ ಮಧ್ಯೆಯೂ ಇವುಗಳ ಸಾರ ಸಂಗ್ರಹಿಸಿ ಕೊಟ್ಟ ಶ್ರೀವಿಶ್ವೇಶತೀರ್ಥ ಶ್ರೀಪಾದರಿಗೆ ಸಾಷ್ಟಾಂಗ ಪ್ರಣಾಮಗಳು.

ಈ ಸಂಪುಟದ ಅಕ್ಷರ ಜೋಡಣೆ, ಮುದ್ರಣ ಕಾರ್ಯದಲ್ಲಿ ಸಹಕರಿಸಿದ ಸಂಸ್ಥೆಗಳಿಗೂ ಕೃತಜ್ಞತೆಗಳು.

೨೦.೧೧.೧೯೯೯

ಕೆ. ಟಿ. ಪಾಂಡುರಂಗಿ
ಕಾರ್ಯಾಧ್ಯಕ್ಷರು
ಸಂಪಾದಕ ಮಂಡಳಿ

ಮಹಾಭಾರತ ತಾತ್ಪರ್ಯನಿರ್ಣಯ ಸಾರ

ಇದೀಗ ಮಹಾಭಾರತತಾತ್ಪರ್ಯನಿರ್ಣಯದ ಕನ್ನಡ ಅನುವಾದದ ಮೂರನೇ ಸಂಪುಟವು ಪ್ರಕಟಗೊಳ್ಳುತ್ತಿರುವುದು ಸಂತೋಷದ ಸಂಗತಿಯಾಗಿದೆ. ೧೯,೨೦,೨೧,೨೨ ಈ ಅಧ್ಯಾಯಗಳ ಅನುವಾದವನ್ನು ಈ ಸಂಪುಟದಲ್ಲಿ ಕಾಣಬಹುದು. ಮಹಾಭಾರತದ ಆದಿಪರ್ವದ ಪಾಂಡವರ ಅಸ್ತ್ರ ವಿದ್ಯಾಭ್ಯಾಸದ ಅನಂತರದ ಭಾಗ, ಸಭಾಪರ್ವ ಮತ್ತು ವನಪರ್ವಗಳ ಘಟನೆಗಳನ್ನು ಹರಿವಂಶದ ಮತ್ತು ಭಾಗವತದಲ್ಲಿಯ ಕೃಷ್ಣನ ಕಥೆಯ ಜೊತೆಗೆ ಹೆಣೆದು ಇಲ್ಲಿ ನಿರೂಪಿಸಲಾಗಿದೆ.

ದುರ್ಯೋಧನನ ದುಷ್ಟತನದ ಮೂಲ ಯಾವುದು? ಅವನ ದುಷ್ಟಪ್ರವೃತ್ತಿಯ ಹಿಂದಿರುವ ಸಿದ್ಧಾಂತವೇನು? ಎಂಬುದನ್ನು ಇಲ್ಲಿ ನಿರೂಪಿಸಲಾಗಿದೆ.

ಕಲಿಂಗನೆಂಬ, ಕುತಂತ್ರರಾಜನೀತಿಯಲ್ಲಿ ಪರಿಣತನಾದ ಅಸುರ ಪ್ರವೃತ್ತಿಯ ಬ್ರಾಹ್ಮಣನೊಬ್ಬನು ದುರ್ಯೋಧನನಿಗೆ ಗುರುವಾಗಿ ದೊರೆತನು. ಅವನು ಬಾಲ್ಯದಿಂದಲೇ ದುರ್ಯೋಧನನಿಗೆ ಸ್ವಾರ್ಥಪರವಾದ ಕುಟಿಲ, ಅಧಾರ್ಮಿಕ ರಾಜನೀತಿಯನ್ನು ಬೋಧಿಸುತ್ತಾನೆ. ಆ ನೀತಿಯಲ್ಲಿ ಧರ್ಮಕ್ಕೆ, ಭಗವದ್ಭಕ್ತಿಗೆ ಸ್ಥಾನವೇ ಇಲ್ಲ. ಧರ್ಮನಿಷ್ಠೆ, ದೈವಭೀತಿ ಮುಂತಾದ ಯಾವ ಬಂಧನಗಳಿಗೂ ಒಳಗಾಗದೇ ಸ್ವಾರ್ಥಸಾಧನೆಗಾಗಿ ಅನ್ಯಾಯ, ವಂಚನೆಗಳ ಮಾರ್ಗವನ್ನು ಅನುಸರಿಸಲು ಸ್ವಲ್ಪವೂ ಸಂಕೋಚಪಡಬಾರದು. ನಾಸ್ತಿಕ್ಯನೀತಿಯ ತಳಹದಿಯಲ್ಲಿ ಯಾವುದೇ ನಿಯಮ, ನಿರ್ಬಂಧವಿಲ್ಲದ ಕೇವಲ ಸ್ವಾರ್ಥಪರ ನೀತಿಯೇ ಕಲಿಂಗನ ಸಿದ್ಧಾಂತ. ದುರ್ಯೋಧನನು ಬಾಲ್ಯದಲ್ಲಿಯೇ ಇದನ್ನು ತನ್ನ ಜೀವನ ಸಿದ್ಧಾಂತವೆಂದು ಸ್ವೀಕರಿಸಿ ಜೀವನದುದ್ದಕ್ಕೂ ಪಾಲಿಸಿದ್ದಾನೆ. ಲೋಕದ ಹಿತಕ್ಕೆ ಪೂರಕವಾದ ಇಂತಹ ಸ್ವಾರ್ಥಪರ ಭಗವದ್ವಿರೋಧಿ ಕುಟಿಲ ರಾಜನೀತಿಯಿಂದ ಸಮಾಜಕ್ಕೆ ಆಗಬಹುದಾದ ಹಾನಿಯನ್ನು ಗಮನಿಸಿಯೇ ಶ್ರೀಕೃಷ್ಣನು ಕೌರವರ ವಿರುದ್ಧವಾಗಿ ಪಾಂಡವರ ಪಕ್ಷಪಾತಿಯಾಗಿ ವರ್ತಿಸಿದನು. ಶ್ರೀಕೃಷ್ಣನ ರಾಜಕಾರಣದಲ್ಲಿ ಸ್ವಾರ್ಥದ ಗುಂಪುಗಾರಿಕೆಯಿಲ್ಲ; ಕೇವಲ ತತ್ವನಿಷ್ಠೆ, ಧರ್ಮರಕ್ಷಣೆಯ ಉದ್ದೇಶವನ್ನು ಮಾತ್ರ ಅಲ್ಲಿ ಕಾಣಬಹುದು. ಬಾಲ್ಯದ ಕುಸಂಸ್ಕಾರವು ನಮ್ಮ ಜೀವನವನ್ನು ಹೇಗೆ ಕೆಟ್ಟದಾಗಿ ರೂಪಿಸಬಲ್ಲದೆನ್ನುವುದಕ್ಕೆ ದುರ್ಯೋಧನನೇ ಉದಾಹರಣೆಯಾಗಿದ್ದಾನೆ.

ದ್ರೌಪದೀ ಸ್ವಯಂವರದ ಸಂದರ್ಭದಲ್ಲಿ ದ್ರುಪದನ ಘೋಷಣೆಯಂತೆ ಕರ್ಣನು ಬಿಲ್ಲನ್ನು ಏರಿಸಿ ಪಂದ್ಯದಲ್ಲಿ ವಿಜಯಿಯಾಗಿದ್ದರೂ ದ್ರೌಪದಿಯು ಸೂತಪುತ್ರನನ್ನು ತಾನು ವರಿಸಲಾರೆನೆಂದು ಉದ್ಧಟತನದಿಂದ ಹೇಳಿ ಕರ್ಣನನ್ನು ಅವಮಾನಿಸಿ, ಅನುಚಿತವಾಗಿ ವರ್ತಿಸಿದ್ದಾಳೆಂದು ಸಾಮಾನ್ಯವಾದ ತಿಳುವಳಿಕೆಯಿದೆ. ಮಹಾಭಾರತದಲ್ಲಿ ಅಂತಹ ಪಾಠಗಳು

ಪ್ರಚಲಿತವಾಗಿವೆ. ಆದರೆ ಆಚಾರ್ಯರು ಅಧಿಕೃತ ಪಾಠವನ್ನು ಕಂಡುಹಿಡಿದು, ಅಲ್ಲಿಯ ವಾಸ್ತವ ಘಟನೆಯನ್ನು ವಿವರಿಸಿದ್ದಾರೆ. ಶಲ್ಯ, ಶಿಶುಪಾಲ, ಜರಾಸಂಧ, ಕರ್ಣ ಇವರೆಲ್ಲರೂ ಆ ಬಿಲ್ಲನ್ನು ಏರಿಸಲು ಪ್ರಯತ್ನಿಸಿ ವಿಫಲರಾಗಿದ್ದಾರೆ. ಕರ್ಣನಿಂದಲೂ ಬಿಲ್ಲನ್ನೇರಿಸಲು ಸಾಧ್ಯವಾಗಲಿಲ್ಲ. ಹಗ್ಗವನ್ನು ಬಿಲ್ಲಿನಲ್ಲಿ ಜೋಡಿಸುವಾಗ ಸಾಸಿವೆ ಕಾಳಿನಷ್ಟು ಅಂತರದಲ್ಲಿ ವ್ಯತ್ಯಾಸವಾಗಿ ಅವನು ಸೋಲನ್ನು ಅನುಭವಿಸಬೇಕಾಯಿತು. ಹೀಗಾಗಿ ದ್ರೌಪದಿಗೆ ಅವನನ್ನು ಅವಮಾನಿಸುವ ಸಂದರ್ಭವೇ ಬರಲಿಲ್ಲ. ಆಚಾರ್ಯರ ತಾತ್ಪರ್ಯನಿರ್ಣಯವನ್ನು ನೋಡಿದಾಗ ದ್ರೌಪದಿಯ ಬಗ್ಗೆ ಇರುವ ಪ್ರಚಲಿತ ಕಥೆಯು ನಿರಾಧಾರವೆಂದು ಸ್ಪಷ್ಟವಾಗುತ್ತದೆ.

ಜೂಜಿನ ಸಭೆಯಲ್ಲಿ ದ್ರೌಪದಿಯ ಮಾರ್ಮಿಕ ಪ್ರಶ್ನೆಗೆ ಭೀಷ್ಮ, ದ್ರೋಣ ಮುಂತಾದವರೂ ಏನನ್ನೂ ಉತ್ತರಿಸದೆ ಮೌನವಾಗಿದ್ದರು. ಆ ಪ್ರಶ್ನೆಯ ಹಿಂದಿರುವ ಮೌಲ್ಯಗಳೇನೆಂಬುದು ಆಚಾರ್ಯರ ತಾತ್ಪರ್ಯನಿರ್ಣಯವನ್ನು ಓದುವಾಗಲೇ ನಮಗೆ ಸ್ಪಷ್ಟವಾಗುತ್ತದೆ. ಜೂಜಿನಲ್ಲಿ ಧರ್ಮರಾಜನು ದ್ರೌಪದಿಯನ್ನು ಪಣವಿಟ್ಟು ಸೋತಿರುವುದರಿಂದ ಅವಳು ತನ್ನ ದಾಸಿ, ಅವಳ ಮೇಲೆ ಅಧಿಕಾರವನ್ನು ಚಲಾಯಿಸಬಹುದೆಂದು ದ್ರೌಪದಿಯನ್ನು ಅರಮನೆಗೆ ತರಲು ದುರ್ಯೋಧನನು ಪ್ರವೃತ್ತಿಸಿದಾಗ, ಧರ್ಮ ಹಾಗೂ ಕಾನೂನು ಈ ಎರಡೂ ದೃಷ್ಟಿಯಿಂದ ದ್ರೌಪದಿಯು ಇದನ್ನು ಎದುರಿಸುತ್ತಾಳೆ. ಅಕ್ರಮದಿಂದ ಪಡೆದ ಯಾವ ವಸ್ತುವೂ ಅವನ ಸೊತ್ತಾಗಲಾರದು. ಕಳ್ಳತನ ಮಾಡಿ ಅಪಹರಿಸಿದ ಪದಾರ್ಥಗಳು ಕಳ್ಳನ ಸೊತ್ತಾಗುತ್ತವೆಯೆ? ಅದರಂತೆ ಜೂಜು ಧರ್ಮವಿರುದ್ಧ ಹಾಗೂ ಕಾನೂನುಬಾಹಿರ. ಆದುದರಿಂದ ಜೂಜಿನಲ್ಲಿ ತಾನಾಗಲಿ ಧರ್ಮರಾಜನಾಗಲಿ ಸೋತಿದ್ದರೂ ಇಬ್ಬರೂ ವಾಸ್ತವವಾಗಿ ದಾಸರಾಗಲಾರರು. ಮಾತ್ರವಲ್ಲದೆ ಮಹಿಳೆಯು ಗುಲಾಮಳಾಗಿ ಇರುವಾಗಲೂ ಪತಿಯ ಜೊತೆಗೇ ದುಡಿಯಬೇಕಲ್ಲದೆ, ಪತಿಯನ್ನು ಬಿಟ್ಟು ಪ್ರತ್ಯೇಕವಾಗಿ ದಾಸಿಯಾಗಿರಲು ಸಾಧ್ಯವಿಲ್ಲ. ಆದುದರಿಂದ ಧರ್ಮರಾಜನಿಂದ ಬೇರ್ಪಡಿಸಿ ತನ್ನ ಮೇಲೆ ಗುಲಾಮಗಿರಿಯನ್ನು ಹೇರುವುದು ಸರ್ವಥಾ ತಪ್ಪು ಎನ್ನುವ ದ್ರೌಪದಿಯ ಪ್ರಶ್ನೆಯಲ್ಲಿ ಅಡಕವಾಗಿರುವ ಧರ್ಮ ಹಾಗೂ ಕಾನೂನಿನ ಅಂಶಗಳಿಗೆ ಉತ್ತರಿಸಲಾರದೆ ಎಲ್ಲರೂ ತಡವರಿಸುತ್ತಾರೆ.

ಭೀಮ ಮತ್ತು ದ್ರೌಪದಿಯರು ಭಗವಂತನ ನಿಷ್ಠಾವಂತ ಭಕ್ತರು. ಭಗವಂತನ ಹೊರತು ಬೇರೆ ಯಾರನ್ನೂ ಬೇಡಲಾರರು ಎಂದು ಅಂಗೀಕರಿಸಲಾಗಿದೆ. ಭಾಗವತ ಧರ್ಮದ ಆಚರಣೆಯ ವಿಷಯದಲ್ಲಿ ಸ್ತ್ರೀ-ಪುರುಷರಿಗೆ, ಭೀಮ-ದ್ರೌಪದಿಯರೇ ಆದರ್ಶರೆನಿಸಿದ್ದಾರೆ. ಆದರೆ ಜೂಜಿನ ಪ್ರಸಂಗದಲ್ಲಿ ದುರ್ಯೋಧನ, ದುಶ್ಶಾಸನರ ಅತಿರೇಕದ, ಅವ್ಯವಹಾರದ ನಂತರ ಎಚ್ಚರಗೊಂಡ ಧೃತರಾಷ್ಟ್ರನು, ದ್ರೌಪದಿಯನ್ನು ಸಾಂತ್ವನಗೊಳಿಸಿ ಅವಳು ತನ್ನಿಂದ ಬೇಕಾದ ವರವನ್ನು ಕೇಳಲು ಒತ್ತಾಯಿಸಿದಾಗ, ಜೂಜಿನಲ್ಲಿ ಕಳೆದುಕೊಂಡ ರಾಜ್ಯವನ್ನು

ತಿರುಗಿ ಕೊಡುವಂತೆ ಕೇಳಿ ಅದನ್ನು ಪಾಂಡವರಿಗಾಗಿ ಪಡೆಯುತ್ತಾಳೆ. ಭಗವಂತನ ಹೊರತು ಬೇರೆ ಯಾರನ್ನೂ ಬೇಡದ ದ್ರೌಪದಿಯು ಧೃತರಾಷ್ಟ್ರನಿಂದ ರಾಜ್ಯ-ಸಂಪತ್ತುಗಳನ್ನು ಬೇಡಿ ಪಡೆಯಬಹುದೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ತಾತ್ಪರ್ಯನಿರ್ಣಯದಲ್ಲಿ ಇದಕ್ಕೆ ಸೂಕ್ತ ಉತ್ತರ ನೀಡಿದ್ದಾರೆ. ಈಗ ತಾನೇ ತಿಳಿಸಿದಂತೆ ಜೂಜಿನಿಂದ ಯಾವುದೇ ಸೊತ್ತನ್ನು ಪಡೆಯುವುದು ಅಕ್ರಮವಾಗಿರುವಾಗ ದುರ್ಯೋಧನನು ಅನ್ಯಾಯಮಾರ್ಗದಿಂದ ಅಕ್ರಮವಾಗಿ ಅಪಹರಿಸಿದ ರಾಜ್ಯ-ಸಂಪತ್ತು ಅವನ ಸೊತ್ತಾಗಲು ಸಾಧ್ಯವೆ? ಕಳ್ಳನು ಅಪಹರಿಸಿದ ವಸ್ತುಗಳು ಅವನ ಸೊತ್ತಲ್ಲ. ಅದನ್ನು ನಾವು ತಿರುಗಿ ಪಡೆದರೆ ಅದು ಭಿಕ್ಷೆಯಾಗಲಾರದು. ಅದರಂತೆ ಅಕ್ರಮವಾಗಿ ಸ್ವಾಧೀನಗೊಳಿಸಿದ ರಾಜ್ಯದ ಮೇಲೆ ಪಾಂಡವರಿಗೆಯೇ ವಾಸ್ತವವಾದ ಹಕ್ಕು. ತಮ್ಮದೆ ಆದ ರಾಜ್ಯವನ್ನು ತಿರುಗಿ ಕೇಳಿದರೆ ಅದು ಬೇಡಿದಂತಾಗುವುದಿಲ್ಲ. ಅದು ತನ್ನ ಹಕ್ಕಿನ ಪ್ರತಿಪಾದನೆ ಎನಿಸುತ್ತದೆ. ಈ ದೃಷ್ಟಿಯನ್ನು ಇಟ್ಟುಕೊಂಡು ತನ್ನ ತತ್ವನಿಷ್ಠೆಯಿಂದ ವಿಚಲಿತಳಾಗದೆ ಧೃತರಾಷ್ಟ್ರನಿಂದ ತಮ್ಮದೆ ಆದ ರಾಜ್ಯವನ್ನು ಪಡೆಯುತ್ತಾಳೆಂದು ಆಚಾರ್ಯರು ವಿಶದೀಕರಿಸಿದ್ದಾರೆ.

ಪಾಂಡವರು ಅರಣ್ಯವಾಸದಲ್ಲಿದ್ದಾಗ ಧರ್ಮರಾಜ, ದ್ರೌಪದಿ, ಭೀಮಸೇನರ ಸಂವಾದವು ಮಹಾಭಾರತದಲ್ಲಿ ಅತ್ಯಂತ ಉದ್ಬೋಧಕವಾಗಿ ಚಿತ್ರಿತವಾಗಿದೆ. ಮಹಾಭಾರತದ ಸಂದೇಶದ ಸಾರವೇ ಇದರಲ್ಲಿ ಅಡಕವಾಗಿದೆ. ತಾತ್ಪರ್ಯನಿರ್ಣಯದಲ್ಲಿ ಸಂಕ್ಷಿಪ್ತವಾಗಿ ಸರಳ ಸುಂದರವಾಗಿ ಆಚಾರ್ಯರು ಇದನ್ನು ನಿರೂಪಿಸಿದ್ದಾರೆ.

''ದುರ್ಯೋಧನನು ಇಷ್ಟೆಲ್ಲ ಅನ್ಯಾಯ ಆಕ್ರಮಣಗಳನ್ನು ಮಾಡಿದ್ದರೂ ಪ್ರತಿಭಟಿಸುವುದು ಬೇಡ. ಎಲ್ಲವನ್ನೂ ಕ್ಷಮಿಸಿಬಿಡೋಣ. ಕ್ಷಮೆಯೇ ಪರಮ ಧರ್ಮ. ಎಲ್ಲವೂ ಭಗವಂತನ ಇಚ್ಛೆಯಂತೆ ನಡೆಯುತ್ತದೆ. ಎಲ್ಲ ಭಾರವನ್ನು ದೈವದ ಮೇಲೆ ಹಾಕಿ ನಾವು ನಿಶ್ಚಿಂತರಾಗಿ ಪಾಲಿಗೆ ಬಂದ ಕಷ್ಟ, ಸುಖಗಳನ್ನು ಅನುಭವಿಸೋಣ. ಪ್ರತಿಭಟನೆ, ಹೋರಾಟಗಳು ಅನಾವಶ್ಯಕ''. ಇದು ಧರ್ಮರಾಜನ ನಿಲುವು. ಇದಕ್ಕೆ ವಿರುದ್ಧವಾಗಿ ಭೀಮ ದ್ರೌಪದಿಯರ ಸಮರ್ಥನೆ ಹೀಗಿದೆ. ''ಕ್ಷಮೆಯು ಉತ್ತಮವಾದ ಧರ್ಮವೆಂಬುದು ನಿಜ. ಆದರೆ ಅದನ್ನು ಯೋಗ್ಯ ರೀತಿಯಿಂದ ಬಳಸಬೇಕು. ಕಳ್ಳರು, ಅತ್ಯಾಚಾರಿಗಳು ಮತ್ತು ಕೊಲೆಗಾರರನ್ನೂ ಕ್ಷಮಿಸುತ್ತ ಹೋದರೆ ರಾಷ್ಟ್ರದಲ್ಲಿ ಅರಾಜಕತೆ, ಅಶಾಂತಿಗಳು ಸಂಭವಿಸುವುದಿಲ್ಲವೆ? ಕ್ಷಮೆಯೇ ಧರ್ಮವಾದರೆ ಸರ್ಕಾರದ ಕೆಲಸವೇನು? ಲೂಟಿ, ಗೂಂಡಾಗಿರಿಗಳು ನಡೆದರೂ ನಾವು ತೆಪ್ಪಗಿರಬೇಕೆ? ಆದುದರಿಂದ ಕ್ಷಮೆಯ ಜೊತೆಗೆ ಅನ್ಯಾಯದ ವಿರುದ್ಧ ಆಕ್ರೋಶ, ಪ್ರತಿಭಟನೆಗಳೂ ಅಷ್ಟೇ ಆವಶ್ಯಕ''.

''ಭಗವಂತನು ಸರ್ವಕರ್ತ. ಪ್ರತಿಯೊಂದು ವಸ್ತುವಿನ ಚಲನ-ವಲನಗಳೂ ಅವನಿಂದಲೇ ಎಂಬುದು ನಿಜ. ಆದರೆ ನಮ್ಮ ಆಗು ಹೋಗುಗಳಿಗೆ ಭಗವಂತನು

ಕಾರಣನಾಗಿರುವಂತೆ ನಾವೂ ಕಾರಣರು. ನಾವೂ ಹೊಣೆಗಾರರು. ಭಗವಂತನ ಶಕ್ತಿ, ಜೀವನ ವ್ಯಕ್ತಿತ್ವ- ಯೋಗ್ಯತೆಗಳು, ಅವನ ಪ್ರಯತ್ನ ಸಾಧನೆ ಇವೆಲ್ಲವುಗಳ ಒಟ್ಟು ಫಲಿತಾಂಶವೇ ನಮ್ಮ ಜೀವನ. ಆದುದರಿಂದ ಏನೂ ಪ್ರಯತ್ನ, ಸಾಧನೆಗಳನ್ನು ಮಾಡದೆ ದೇವರ ಮೇಲೆ ಭಾರಹಾಕಿ ನಿಷ್ಕ್ರಿಯನಾಗುವುದೂ ಸರಿಯಲ್ಲ. ಅದರಂತೆ ದೇವರನ್ನು ಮರೆತು ಎಲ್ಲವೂ ತನ್ನಿಂದಲೇ ಆಗುವುದೆಂಬ ಅಹಂಕಾರವೂ ಸಲ್ಲದು. ದೈವ ಪೌರುಷಗಳ ಸಮನ್ವಯದಿಂದಲೇ ಜೀವನದಲ್ಲಿ ಯಶಸ್ಸು. ಇದೇ ಜೀವನದ ಮೂಲಸೂತ್ರ. ಪ್ರತಿಯೊಬ್ಬನೂ ಈ ಪ್ರಪಂಚದಲ್ಲಿ ತನ್ನ ಧರ್ಮ, ಕರ್ತವ್ಯಗಳನ್ನು ನೆರವೇರಿಸಬೇಕು. ಎಲ್ಲವೂ ದೇವರಿಂದಲೇ ನಡೆಯುತ್ತದೆಂದು ಹೇಳಿಕೊಂಡು ನಾವು ಕರ್ತವ್ಯದಿಂದ ವಿಮುಖರಾಗಬಾರದು. ದುಷ್ಟರ ಅತಿಕ್ರಮಣ, ಅನ್ಯಾಯದ ವಿರುದ್ಧ ಹೋರಾಡುವುದೇ ರಾಜರ ಕರ್ತವ್ಯ. ಒಬ್ಬ ಧೀರ ಪುರುಷನಾಗಿ ಹಾಗೂ ಕ್ಷತ್ರಿಯನಾಗಿ ಅನ್ಯಾಯದ ವಿರುದ್ಧ ಹೋರಾಡುವ ಬದಲು ತನ್ನ ಕರ್ತವ್ಯವನ್ನು ಬಲಿಕೊಟ್ಟು ದೇವರ ಮೇಲೆ ಭಾರ ಹಾಕಿ ನಿಷ್ಕ್ರಿಯರಾಗಿರುವುದು ಅಜ್ಞಾನ ಹಾಗೂ ತಮೋಗುಣದ ಪ್ರವೃತ್ತಿ''. ಈ ಭಾಗವು ಮಹಾಭಾರತದ ಹೃದಯ. ಮನುಕುಲಕ್ಕೆ ಮಹತ್ವದ ಸಂದೇಶವನ್ನು ಇದು ನೀಡುತ್ತದೆ.

ವನಪರ್ವದಲ್ಲಿ ಭೀಮನು ಹೆಬ್ಬಾವಿನ ಬಂಧನಕ್ಕೆ ಒಳಗಾಗುವ ಪ್ರಸಂಗದ ನಿರೂಪಣೆಯಿದೆ. ಒಂದು ವಿಶಿಷ್ಟ ಕಾರಣದಿಂದ ಇಂದ್ರದೇವರು ಸ್ವರ್ಗಲೋಕವನ್ನು ತಾತ್ಕಾಲಿಕವಾಗಿ ತ್ಯಜಿಸುವ ಸನ್ನಿವೇಶವುಂಟಾಗಿ ರಾಜಾ ನಹುಷನನ್ನು ದೇವತೆಗಳು ಇಂದ್ರಪಟ್ಟಕ್ಕೆ ನೇಮಿಸಿದರು. ತಮ್ಮೆಲ್ಲರ ತಪಸ್ಸು, ಶಕ್ತಿಗಳನ್ನು ಅವನಲ್ಲಿ ತುಂಬಿದರು. ಆದರೆ ದರ್ಪ, ಅಹಂಕಾರಗಳಿಂದ ನಹುಷನು ಅತಿರೇಕದ ಮಾರ್ಗಕ್ಕೆ ಇಳಿದು, ಋಷಿಗಳ ಶಾಪದಿಂದ ಹೆಬ್ಬಾವಾಗಿ ಭೂಮಿಗೆ ಇಳಿಯಬೇಕಾಯಿತು. ಆ ಹೆಬ್ಬಾವು ಕಾಡಿನಲ್ಲಿ ಏಕಾಕಿಯಾಗಿ ಅಲೆಯುತ್ತ ಭೀಮನ ಕಾಲುಗಳನ್ನು ಬಲವಾಗಿ ಬಂಧಿಸಿತು. ನನ್ನ ಪ್ರಶ್ನೆಗೆ ಉತ್ತರ ಕೊಟ್ಟಾಗ ಮಾತ್ರ ಬಿಡುಗಡೆಯೆಂದು ಸಾರಿತು. ಆದರೆ ಭೀಮನು ಉತ್ತರ ಕೊಡಲಿಲ್ಲ. ಕೊನೆಗೆ ಧರ್ಮರಾಜನೇ ಬಂದು ಪ್ರಶ್ನೆಗಳಿಗೆಲ್ಲ ಉತ್ತರಿಸಿ ಭೀಮನ ಬಿಡುಗಡೆ ಮಾಡಿದನೆಂದು ಭಾರತದಲ್ಲಿ ವರ್ಣಿಸಲಾಗಿದೆ. ಮಹಾಬಲಶಾಲಿಯಾದ ಭೀಮನು ಬಂಧನಕ್ಕೆ ಹೇಗೆ ಒಳಗಾದ? ಮಹಾಜ್ಞಾನಿಯಾದ ಆತನು ಹೆಬ್ಬಾವಿನ ಪ್ರಶ್ನೆಗೆ ಏಕೆ ಉತ್ತರಿಸಲಿಲ್ಲ? ಈ ಪ್ರಶ್ನೆಗಳಿಗೆ ಸರಿಯಾದ ಸಮಾಧಾನವನ್ನು ತಾತ್ಪರ್ಯನಿರ್ಣಯದಿಂದ ಮಾತ್ರ ಪಡೆಯಲು ಸಾಧ್ಯ.

ಭೀಮನು ಮಹಾಜ್ಞಾನಿಯೆಂಬುದು ನಿಜ. ಆದರೆ ತನ್ನ ಜ್ಞಾನವನ್ನು ತನ್ನ ಜೀವನಕ್ಕಾಗಿ ಉಪಯೋಗಿಸಲು ಅವನು ಸಿದ್ಧನಿಲ್ಲ. ಜ್ಞಾನವನ್ನು ಉಪದೇಶಕ್ಕೆ, ತತ್ವಪ್ರಸಾರಕ್ಕೆ ಹಾಗೂ ಆಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆ, ಭಗವದನುಗ್ರಹಕ್ಕೆ ಮಾತ್ರ ಬಳಸಬೇಕು. ಹೆಬ್ಬಾವಿನಿಂದ ಪಾರಾಗಿ ತಾನು ಬದುಕಬೇಕೆಂಬ ಸಂಕುಚಿತ ಸ್ವಾರ್ಥವನ್ನು ಜ್ಞಾನದಿಂದ ಪಡೆಯಲು

ಪ್ರವೃತ್ತಿಸಬಾರದು. ಇದು ಭೀಮನ ತತ್ವನಿಷ್ಠೆ. ಆದುದರಿಂದ ತನಗೆ ಗೊತ್ತಿದ್ದರೂ ಬದುಕಿಗಾಗಿ ವಿದ್ಯೆಯನ್ನು ವಿಕ್ರಯಿಸಲು ಭೀಮನು ಸಿದ್ಧನಾಗಲಿಲ್ಲ. ಶಕ್ತಿಯಿದ್ದರೂ ಅದರ ಬಂಧನಕ್ಕೆ ಒಳಗಾದುದರಲ್ಲಿಯೂ ಒಂದು ರಹಸ್ಯವಿದೆ. ಎಲ್ಲ ಋಷಿ, ದೇವತೆಗಳೂ ತಮ್ಮ ಶಕ್ತಿಯನ್ನು ಇಂದ್ರನಾಗಲಿರುವ ನಹುಷನಿಗೆ ಧಾರೆಯೆರೆದಿದ್ದರು. ಹೆಬ್ಬಾವಿನಲ್ಲಿ ಅಡಗಿದ ಈ ದಿವ್ಯ ಶಕ್ತಿ ಸಂಚಯವನ್ನು ಹೀರಲು ಭೀಮನು ಈ ನಟನೆಯನ್ನು ಮಾಡಿದನು. ತಾನು ಹೆಬ್ಬಾವಿನ ಬಂಧನಕ್ಕೆ ಒಳಗಾಗಿ ಅವನಲ್ಲಿರುವ ಎಲ್ಲ ಶಕ್ತಿಯನ್ನು ತನ್ನಲ್ಲಿ ಅಳವಡಿಸಿಕೊಂಡು ಹೆಬ್ಬಾವನ್ನು ನಿಃಸತ್ವಗೊಳಿಸಿದನು. ಇದು ಜನರ ಬಾಹ್ಯದೃಷ್ಟಿಯಲ್ಲಿ ಸೋಲೆನಿಸಿದರೂ ವಾಸ್ತವವಾಗಿ ಇದು ಭೀಮನ ವಿಜಯವೇ ಆಗಿದೆ.

ಹೀಗೆ ಮಹಾಭಾರತದಲ್ಲಿಲ್ಲದ ಅನೇಕ ಅಪೂರ್ವ, ರಹಸ್ಯ ವಿಷಯಗಳನ್ನು ತಾತ್ಪರ್ಯನಿರ್ಣಯದಿಂದ ಅರಿಯಬಹುದು. ಉತ್ತಮ ಸಂಶೋಧಕರೂ ಅಧ್ಯಯನ ಶೀಲರೂ, ಶ್ರೇಷ್ಠ ವಿದ್ವಾಂಸರೂ ಆದ ಹಯವದನ ಪುರಾಣಿಕರು ಅನೇಕ ವಿವರಣೆ ಗಳನ್ನೊಳಗೊಂಡ ಉತ್ತಮ ಅನುವಾದವನ್ನು ಮಾಡಿದ್ದಾರೆ. ಜಿಜ್ಞಾಸುಗಳು ಇದರ ಲಾಭವನ್ನು ಪಡೆಯಬೇಕಾಗಿ ಆಶಿಸುತ್ತೇವೆ.

-ಶ್ರೀ ಶ್ರೀವಿಶ್ವೇಶತೀರ್ಥಶ್ರೀಪಾದರು
ಶ್ರೀ ಪೇಜಾವರ ಮಠ, ಉಡುಪಿ.

Mahābhārata tātparyanirṇaya

Chapter XIX

The episodes of Lākṣāgriha, Bhīmasena's marriage with Hidimbā, killing Bakāsura, Draupadi svayamvara, Pāndavas settling down in Indraprastha are described in this chapter. The details of these episodes are wellknown. Therefore, the special points of religious and moral conduct highlighted in Tātparyanirṇaya and its commentaries will be briefly stated here.

Kaṇika's wrong advice to Duryodhana

This chapter starts with the instructions of Kaṇika an expert in the evil policies of politics to Duryodhana. This Kaṇika was also known as Kalinga. Probably he hailed from Kalinga region. He was a person of Bhāradvāja gotra and an adviser to Śatrunjaya the king of Sauvīra. He told Duryodhana that when the close relatives like brothers, parents, teachers, friends are our enemies, we should talk sweet outwordly and plan for destroying them. Heretics, robbers, theives and poor persons should be employed to kill them by poision. Outwordly we should pretend to be religious. Rituals, sacrifices etc should be performed. Taking people into confidence by these means we should hit our enemy when the time is ripe. In this way Kaṇika secretly advised Duryodhana to plan against Pāndavas.

Duryodhana approached his father Dhritarastra and appealed to him to send out Pāndavas to some other place. Initially Dhṛtarāṣtra said Pāndavas are also my sons, they are well behaved, brave, they will add to the wealth and the reputation of our kingdom, therefore, it is not proper to send them out. However, Duryodhana insisted that they should be sent out. He said he has mastered one hundred and thirty powerful hymns that will protect him from the enemies. Strong persons like Karṇa and Aśvathāma are on his side. He can take care of the kingdom without Pāndavas. If Pāndavas continue here they will create internal disension in the family. They will insult and neglect you as blind person. I have thought of a way out to send them. There is a temple of Viṣṇu with Śiva in the linga form at Vāraṇavata. He is called Jayanta. There is a festival at this temple. Pāndavas are the devotees of Viṣṇu. They may be sent to this place under the pretext of visiting this festival. Dhritarāṣtra asked Pāndavas to go to this place with their mother Kunti. Bhīmasena initially oppossed this suggestion as he suspected some foul play behind it. However, he had to obey his brother. When they were about to leave Vidura gave them a hint of some calamity through the fire in a secret language.

Lakṣagṛha

Duryodhana had arranged a house prepared by lac outwardly well decorated through Purochana. This Purochana was Prahasta in his earlier birth at the time of Rāmāyaṇa. When vidura came to know it, he had secretely arranged an underground channel for this house. Pāndavas lived there for sometime. Purochana's sister came with her five children in the pretext of serving Pāndavas. Her plan was to give poison to Pāndavas while serving the food. Realising this Bhīmasena used to take the food first and test it. No poison could affect him. One day she mixed the poison in food and gave it. Bhīmasena took the whole food mixed with poison and managed that others were not affected by it. Purochana's sister and her children slept. The house was put on fire. Bhimasena escaped through the underground channel with his mother and brothers.

Bhimasena took his mother and brothers on his shoulders and arms and went out of the burning house. He travelled throughout the night and reached the forest in which the demon Hidimba lived. Hidimba found out by the very smell that some human beings have come. He sent his sister to kill and bring them. However, Hidimbā was attracted by the personality of Bhimasena. She assumed a

beautiful form and approached him. In her earlier birth she was an apsara. She tried to become the spouse of Indra and compete with Śachi. Consequently she was cursed by Śachi to be born as a demon. Now, she desired to marry Bhima and get out of demon's life. Still earlier she had performed penance and had secured a boon from Bhārati that she would enjoy the benefit of contact with Vāyu and get out of her demon life. There was an āveśa of Bhārati in her to provide this privillage.

When she approached Bhima, he hesitated a little to agree to her request. He thought, it is not proper to marry before his elder brother's marriage. Hidimba was angree that his sister become friendly with Bhimāsena instead of killing him for his food. He pounced upon Bhīmasena. They bitterly fought and ultimately Hidimba was killed. After killing him Bhīma continued his journey. Hidimbā followed him and requested Kunti and Bhīma again and again to agree to her request. At this juncture Sri Vedavyāsa arrived. He advised Bhīma to marry Hidimba. He married and sported with her for about six months. They got a powerful son. He became known as Ghatotkacha as his head was without any hairs and like a pot when he was born. He got vertical hairs later. Bhīma asked Hidimbā to go. She left with the promise that she would come with her son whenever he remembered her.

Bakāsura vadha

Pāndavas went to the āśrama of Sālihotra. He taught them Veda, Vedānga and political science. They continued their journey and went through Matsya, Trigarta, Pānchala and Kichaka regions. They were dressed as Brahmaṇas. Sri Vedavyāsa met them again and asked them to go to Ekachakranagara and stay there for sometime. He took them to a Brāhmana's house in that city. Pāndavas had to live by bhikṣātana. Dharmarāja asked them to collect the food from Vaiṣya householders only. They used to carry a huge jar, place it in the foreyard of the house and stand in silence. They never expressly asked for bhikṣā. Dharmarāja had asked Bhīma not to go. Arjuna and other brothers only were going for bhikṣā. Dharmarāja thought if Bhīma goes he will be identified by his personality and 'hum'kāra as Bhīma and Kauravas may discover them. When Bhīma went earlier for a few days he used to get bhikṣā by hum'kāra only.

In the course of time, Pāndavas heard the crying of the Brāhmaṇa family in whose house they were staying. On enquiry they found that they were required to offer a huge quantity of food and a person to demon Bakāsura who had made it a condition for the people living in Ekachakranagara. On hearing the plight of that Brāhmaṇa, Kunti

deputed Bhīma to go with the food and take Bakāsura to task. She was confident that Bhīma would destroy him. According to his mother's instruction, Bhīmasena went with a cartful of food and challanged Bakāsura. In the fight with him he tore him in two pieces and hanged at the gate of the city. The citizen were happy and profusely honoured Bhīmasena.

Draupadi Svayamvara

Śrī Vedavyasa asked Pāndavas to move further from Ekachakranagara. He informed that Draupadi Svayamvara is announced and they may go there. Since, the Pāndavas were moving in the guise of Brāhmaṇas the other Brāhmaṇas also proposed to go to svayamvara to enjoy a big feast.

When Drupada had heard that the Pāndavas were burnt down at Vāraṇāvata, he was very unhappy. He had a son Dṛiṣtadyumna and a daughter Draupadi. He had obtained these two by performing Putrakāmeṣti ritual. He wanted to give his daughter Draupadi to Arjuna by marriage. Though he had heard that Pāndavas were burnt down, he was not fully convinced of it. He hoped that Arjuna is alive somewhere and will arrive if the svayamvara of Draupadi is announced.

Śrī Kṛṣna also knew that Pandavas were not burnt down. However, on hearing the news of the burning

of their house, he went to Hastināvati to offer his condolence to Dhṛtarāṣtra. He had to return to Dvāraka as the news of the death of Satrajita came to him. He returned to Dvāraka. Later on hearing the announcement of Draupadi svayamvara he went to the city of Drupada along with other Yādavas. However, he had told Yādavas that their visit was only to see the svayamvara, but not to participate in it. In view of this Kṛṣna himself and Balarāma did not participate in svayamvara.

On their way to the city of Drupada, Pāndavas reached the bank of river Gangā at midnight. This disturbed the Gandharva chitrarath who was sporting in the water. He attacked Pāndavas. Arjuna countered it forcefully. Chitraratha surrendered. Arjuna taught him āgñeyāstra. He accepted adriśyavidyā from him. This was not an exchange on equal basis. Agneyāstra is much superior to adṛsya vidyā. Therefore, Agneyāstra was given as a gift while adṛśyavidyā was received as an offering, Gandharva suggested to Arjuna that sage Dhaumya be taken as a family priest. Pāndavas agreed and took him as family priest.

At Drupada's city a grand svayamvara pendal was put up. Duryodhana, Karṇa, Śiṣupāla, Jarāsandha etc large number of kings desirous of seeking the hand of Draupadi were present. Pāndavas were sitting among the Brāhmaṇas. Driṣtadyumna announced the

terms to win the hand of Draupadi. A fish was tied to the branch of a tree. Its reflection was to be seen in the water kept bellow. The participants in svayamvara were required to hit the fish looking down its reflection in the water. He gave a bow and five arrows. First Śiṣupāla tried and failed. Then, Jarāsandha, śallya, tried and failed. In the case of Karṇa a ticklish point is raised. According to North Indian recension of Mahābhārata Draupadi remarked that 'नाहं वरयामि सूतम्' I do not like to marry a chariateer. Karṇa threw down the bow on hearing this remark. This remark is not found in south Indian recension. On the otherhand when Arjuna asks Dṛiṣtadyumna whether a Brāhmaṇa can participate in the svayamvara contest, Dṛiṣtadyumna replies that 'ब्राह्मणो वाथ राजन्यो वैश्यो वा शूद्र एव वा? Whether one is Brāhmaṇa, Kṣatriya, Vaiṣya or Śūdra if he can wield the bow and hit the mark, I shall give my sister. From this it is clear that Karṇa lost the chance by his in capacity but not on the ground of his caste. The North Indian reading seems to be an interpolation.

Finally Arjuna succeeds in hitting the mark and qualifies himself to seek the hand of Draupadi. After this event the usual fight among the claimants takes place and Arjuna defeats them all. When Pāndavas return home and inform Kunti about their gain, another ticklish situation arises. Without knowing the nature of the gain, Kunti tells her sons that 'You five

share it'. How could the five brothers share one wife? This problem was solved by Śrī Vedavyāsa who arrived at that time. He informed Drupada, that the Pāndavas are really Yama, Vāyu, Indra and Aśvini Kumaras born as men. The wives of these are present in the body of Draupadi. Therefore, the marriage with Draupadi is really the marriage with their respective wives. With the grace of Vedavyasa Drupada saw their wives in the person of Draupadi and prostrated at the feet of Śrī Vedavyāsa. The marriage was organised in a splendid way by Drupada.

Vidura informed Dhṛtarāṣtra about this marriage and advised him to bring the Pāndavas back to Hastināvati. Bhīṣma and Droṇa also advised him in the same way. He invited the Pāndavas to come. They stayed in Dhritarāṣtras palace for some days and then moved to kunti's residence.

Pancha Patitva of Draupadi

The way in which the Pāndavas dealt with Draupadi is quite interesting. In the person of Draupadi four women viz Śyāmala, Bhārati, Śachi, and Uṣa were present. These were the wives of Yama, Vāyu, Indra and Aśvini who were now born as Pāndavas. When Dhàrmarāja was in contact with Draupadi Śyamala used to be actively present and others used be in a dormant state. Similarly when Bhīmasena was in contact with Draupadi Bhārati

used to be actively present and others in a dormant state. This process continued in other cases also. This avoided the overlapping of the cantacts of these couples. The physical personality of the wives was one but their actual presence was relative to their husbands. However, in the case of Vāyu and Bhārati, these were exclusively present when Bhīma was in contact with Draupadi and were also present along with others when others were in contact. However, there was no overlapping of these two and the respective others so far as the contact is concerned. It only means that Vāyu and Bhārati were never dormant. The whole set up seems to be beyond human logic and human understanding. That is why it is called atimānuṣa.

Duryodhana had married Bhanumati, the daughter of the king of Káśi even before Draupadi Svayamvara. She was Alakṣmi jyeṣṭha born at the time of samudramathana before the birth of Lakṣmi. She was a representative of inauspeciousness.

The differences between Duryodhana and Pāndavas were growing. Therefore, Dhritarāṣtra thought of settling Pāndavas in a different place giving a portion of the kingdom to them. A new capital city Indraprastha was built. Dharmarāja was duly coronated. Bhīmasena was coronated as Yuvaraja.

Chapter XX

Benevolent administration of Pāndavas

This chapter begins with the discription of the benevolent administration of Pāndavas in Indraprastha. The portfolios allotted by Pāndavas among themselves are quite interesting. Yudhiṣthira took charge of performing sacrifices, bestowing gifts, hospitality to sages, etc. Bhimasena took charge of the defence, education in spiritual knowledge, maintainance of the Varṇāśrama duties etc. Draupadi looked after women's wellfare, wellfare of the servants, supervision of the treasury and helping women for developping devotion to the Supreme God Viṣṇu. Arjuna looked after foriegn relations. However, in the case of Jarāsandha etc strong enemies, Bhīma used to keep a watch. Nakula and Sahadeva looked after the welfare of the army and the political policy of sandhi, vigraha, etc.

During the administration of Pāndavas, particularly, that of Bhimasena, there was no poverty, no premeture death, no deceases, no body transgressed varṇāśrama duties, no body oppossed the Supremacy of God Viṣṇu. People had no need to meet the king for their needs, since, all their needs were fully satisfied. They met the king to have his darśana only.

After narrating the good administration of Pāndavas certain family details are given. Yudhistira

married Devaki the daughter of Śiṣupāla. She was Śyamalā the wife of Yama in her original form. He begot a son viz. Suhotra. Bhīma married Kāli the daughter of the king of Kāṣi. This Kāli was Bhārati herself. When Jarāsandha found that Kāli garlanded Bhīma he went on abusing Viṣṇu and praising Śiva, and attacked Bhīma. It was a double attack. An attack on the Supremacy of God Viṣṇu and an attack on Bhīma physically. Bhīmasena had to first defeat Jarāsandha in respect of the first attack.

The Vedas declare that Viṣṇu is supreme. Even in Śaivāgamas Viṣṇu is described as supreme. The Buddha is also an incarnation of Viṣṇu. The preceptor of Chārvakas viz. Brihaspati claims Viṣṇu as his preceptor. Viṣṇu bestows liberation to all. On the other hand, Śiva ran away when Bhasmāsura confronted him. The poison gulped by Śiva made his neck dark. From these facts it is clear that Śiva is not supreme.

Once, at Hastināvati when I was proceeding to worship Viṣṇu Gangā obstructed me. I pushed her with my left hand. Once Śiva came in the form of a tiger persuing Pārvati who had taken the form of a cow to test me. I hit him with my mace and he went into a linga which is now known as Vyāghralinga. Śiva appeared in the form of a Brāhmaṇa at Kedāra and debated with me about the supremacy of God. He was defeated and entered into a linga. That is

why the devotees of Viṣṇu are prohibitted from going to Kedāra. Bhimasena gives these details to impress upon Jarāsandha that even the devotees of Viṣṇu are so strong that there is no need to establish the supremacy any further. Silencing Jarāsandha in this way in respect of the Supremacy of Viṣṇu Bhīmasena won the first round of the battle. Then, he threw Jarāsandha in the water of Ganga. Jarāsandha ran away. Bhīma returned to Indraprastha with Kāli the daughter of the King of Kāṣi. Bhīma begot a son Śarvatrata through Kāli.

Duryodhana studies under Balarāma

At Dvāraka Śrī Kṛṣna killed Satadhanva to get Śyamantakamaṇi from him. However it was with Akrūra. Kṛṣṇa knew it, but still made it an excuse to kill him. Balarāma was upset by it and went to Videha region. He stayed there for five years. Duryodhana desired to take advantage of this seeming difference between Kṛṣna and Balarāma. He became the desciple of Balarāma and studied gadāyuddha under him. He asked Balarāma to give his sister Subhadra to him in marriage. He made him to take an oath to give Subhadra holding his hand marked by plough. Subhadra was Trijatā in the earlier birth. As a result of her service to Sītā she was now born as the sister of Kṛṣna.

Eight queens of Śrī Kṛṣṇa

Kṛṣṇa married Kālindi the sister of Yamunā. He married Nīla by controlling seven bulls simultaneously. Śrī Kṛṣṇa married Mitravrindā defeating her brothers Vinda and Anuvinda. He also married Bhadrā and Lakṣaṇā. The condition for seeking the hand of Lakṣaṇā was more difficult than that of Draupadi. The aim of the arrow was placed reverting it and the arrow had to move above and hit it moving back. Jarāsandha, Duryodhana etc failed. Arjuna tried but deliberately did not hit. He new that she was to be married by Śrī Kṛṣna. Bhīma did not even look at the bow out of high regard for Śrī Kṛṣṇa. These marriages resulted in Kṛṣṇa having eight queens viz Rukmini, Satyabhāmā, Jāmbavati, Kālindi, Nīlā, Mitravindā, Bhadrā and Lakṣaṇā. The first two were full incarnations of goddess Lakṣmi. The others had only the āveṣa of Lakṣmi.

Āscharya and Dhanya

Duryodhana performed a sacrifice. Many kings and dignitories participated in it. They desired to see the newly built Dvārakā. They were received at Raivata hill. Kṛṣṇa welcomed them. At this stage Nārada arrived. He greeted Kṛṣṇa as 'Āscharya' and 'Dhanya'. Kṛṣṇa enquired what he means by these expressions. Nārada explained that 'āscharya' means you alone are supreme and 'dhanya' means 'all others are under your control and you sustain them.

Nārada explained the way in which he discovered this fact. Nārada said : once I saw a deity in the Kūrma form in the river Gangā. I told him that there is no one who is superior to you. He said Gangā is superior to me. Gangā said Varuṇa is superior to her. Varuṇa said Pṛthivi i.e. Umā. Umā said Śiva, Śeṣa and Garuḍa. They said Brahmā is superior to them. He said Ramā is superior. Ramā is the abhimāni deity of Veda. She said my Yajnābhimānini form Yajnā is superior to me. She said my lord Śrī Kṛṣṇa is superior to me and to all. Nārada tells Kṛṣṇa, that I greeted you as 'āscharya' and 'dhanya' discovering this fact from these deities. Kṛṣṇa said there is one more form of Ramā viz Dakṣiṇā. She is a part of my very personality. That is why I am called Ardhanārāyaṇa. I am superior to her. This Dakṣiṇā devi is Rukmiṇi. The three forms of Lakṣmī viz. Vedābhimāni Ramā, Yajnābhimāni Yajnā, and Dakṣinābhimāni Dakṣiṇā are the forms of one and the same Lakṣmī. These are equal. The superiority of the second and the third forms is stated keeping in mind only their placement. Vedābhimāni form is outside, Yajnābhimānini is on the lap of the God and Dakṣiṇābhimānini is the very part of the body. Nārada told Kunti and others that Śrī Kṛṣṇa is all powerful. Kṛṣṇa demonstrated it by taking away the weapons of Bhīṣma, Drona, Karṇa, Kripa etc all within a moment. Bhīma did not take his weapon against Kṛṣṇa as he never oppossed God. He was

just thrown away from His chariot. This was all a play to realise the all powerfulness of God. Nārada praised Rukmiṇi and gave pārijāta flower to her. This upset Satyabhāmā. However, Kṛṣṇa assured her that he would get the very Pārijāta tree for her.

Narakāsura vadha

Indra and deities approached Kṛṣṇa with an appeal to kill Narakāsura. Kṛṣṇa left for Prāg-jyotiṣapura with Satyabhāmā. Narakāsura was born from Varāha form of God through Dharādevi. He was invincible as a result of a boon from Brahmā. His ministers were also similarly blessed. He had built three tiers forts viz Giridurga, Jaladurga and Pāśadurga. The last was prepared by Mura with six thousand ropes. Peetha, Mura, Nikumba, Hayagrīva and Panchajana were the ministers of Narakāsura. He had forcibly taken away the Śvetacchatra of Varuṇa, Manishikhara from Indra, and the ear-rings of Aditi.

Kṛṣṇa attacked Prāg-jyotiṣa city, destroyed the three forts. Killed the five ministers, and thirty-five sons of these ministers. Narakāsura came out of the city and attacked Śrī Kṛṣṇa with his mace Sataghni. Kṛṣṇa swallowed the mace and pretended as if he is exhausted. Satyabhāmā took the Śarṇga bow and destroyed the chariot and the weapons of Narakāsura. She also pretended to be exhausted. Kṛṣṇa killed Narakāsura with his chakra. He entered

into the palace. Narakāsura's mother Bhudevi returned the ear-rings of Aditi. Bhagadatta the son of Narakāsura was coronated as a successor of Narakāsura. Kṛṣṇa took six thousand elephants and other wealth and sent it to Dvārakā. The big elephant Supratika was left for Bhagadatta.

Kṛṣṇa found the sixteen thousand girls imprisionned in his palace by Narakāsura. These were Agniputras in their original form. They desired to marry Śrī Kṛṣṇa and were born as girls. Kṛṣṇa arranged to send them Dvārakā. These girls have the āveṣa of Lakṣmī and therefore, are eligible for the contact with Śrī Kṛṣṇa. Kṛṣṇa took back Manisikhara of Indra and Śvetachattra of Varuna and went to Indraloka. He gave the ear-rings to Aditi.

Kṛṣṇa sported with Satyabhāmā in Nandana garden. She saw Pārijāta tree at Nandana and desired to have it. Kṛṣṇa removed it and placed it on Garuda. Śachi was upset by it. Indra together with other deities attacked Kṛṣṇa and Satyabhāmā. Satyabhāmā herself took the sharṅga bow and cut the weapons of Kubera. Garuda threw Varuṇa in the sea. Śiva with Nandi was also thrown out. Indra threw his Vajrāyudha at Kṛṣṇa. It was prevented by his left hand by Śrī Kṛṣṇa Indra surrendered.

Kṛṣṇa returned to Dvārakā. Planted Pārijāta and Maṇiṣikhara in the foryard of Satyabhāma's house. He married the sixteen thousand girls brought from

Narakāsura's palace. He begot ten sons and one daughter from each of them. Among these sons, Satyabhāma begot a son viz. Bhānu. He was originally one of the twelve suns viz. Savitā, Rukmiṇi begot the sons Pradyumna and Charudeshna. Originally he was Ganeṣa.

Pradyumna and Samba undertook digvijayayatra and went to Pātāla, defeated Vāsuki. They defeated Maya also who came in their way. They defeated Jayanta and Vriṣabha in the Indraloka.

Sunda and Upasunda

Sunda and Upasunda the sons of Nikumbha a descendent of Hiraṇyakaśipu were considerably troubling the sages. These two had obtained a boon from Brahmā that they should not be killed by anybody excepting the very brother. They thought they will never have any enemity to kill each other. When these brothers started harassing the ascetics, Brahmā created a beautiful woman Tilottamā. She was so charming that even Śiva assumed four faces to look at her all around. She appeared before Sunda and Upasunda. Both were captivated by her charm and started fighting to get her. Ultimately they were killed by each other.

Arjuna's Tīrtha yātra

Nārada instructed the Pāndavas to be with Draupadī by the rotation of one year each instead of

a rotation by one day. Accordingly they lived with her by the rotation of an year. When a couple is in privacy no one is expected to disturb them. However, once Arjuna had to enter into the private chamber of Yudhiṣṭhira when he was engaged in a private conversation with Draupadi. This is because, a Brāhmaṇa's cow was to be protected and Arjuna had to take his bow that was kept in Yudhiṣthira's chamber. Consequently, he had to undertake Tirthayātra for an year.

In the course of his piligrimage he came across Ulūpi a widow girl of Nāga race. At his riquest he begot a son Irāvan through her. The Nāgas declared her and her son as outcaste. However, Indra took care of the both in the Indraloka. Then, Arjuna went to Pāndya country. He married Chitrāngada the daughter of Pāndya king. According to north Indian recusion of Mahābhāratha, Chitrāngadā is the daughter of Chitravāhana the king of Manipura. Arjuna begot a son Babruvāhana through Chitrāngadā. He was given in adoption to the Pāndya king by way of Putrikā putra dharma. The Pāndya king Vīrasena was an amṣa of Sūrya of Tvaṣta form. Chitrāngadā was originally Śachīdevi.

Arjuna proceeded to Prabhāsa. On the way, at Kanyātīrtha, he was caught by five crocodiles. He dragged the five out of water. These were originally five apsarās and were cursed to be born as

crocodiles by a Brāhmaṇa. These apsarās viz. Vargā, Saurabheyi, Samīchi, Budbudā and Latā were in crocodile form in five lakes viz. Agastya, Saubhadra, Pauloma, Kārandhama and Bhāradvāja. The Brāhmaṇa had told them that when some strong man drags them out, they will get their original form. Accordingly, when they were dragged out by Arjuna they were released from the crocodile form.

Subhadrā pariṇaya

From Prabhāsa Arjuna proceeded towards Dvārakā. He took the form of a Sanyāsin and sat under a tree on Raivata hill. Balarāma saw him and asked Kṛṣṇa to arrange accommodation for this sannyāsi near kanyāgāra during chāturmāsya and provide all facilities to him. Kṛṣṇa pretended to caution Balarāma by saying that it is not safe to provide accommodation for this young sannyāsi near Kanyāgāra. Balarāma said that the sannyāsins are above temptations and one should not question the bonafides of an ascetic. Subhadrā was asked to serve sannyāsin. One day Balarāma and all others went to Pindoddhāra Kshetra. There was a big festival. Sannyāsi did not go as he was not to leave the place until the chāturmāsya was over. Subhadrā also remained as she had to serve him.

Subhadra enquired sanyāsin whether he knew the where-abouts of Arjuna who is on a piligrimage. Sannyāsi revealed his identity as Arjuna. He

proposed that they should marry by Gāndharva way. She said that without Kṛṣṇa's consent and blessing she cannot proceed in the matter. At this juncture Kṛṣṇa arrived with his parents. Indra, Satyaki, Nārada etc also arrived. The marriage was celebrated. Kṛṣṇa left his chariot for Arjuna and returned to Pindoddhāra Kshetra. Arjuna left the place with Subhadra. The security gaurds of the city tried to prevent him. Viprithu who was in charge of the security was already secretly instructed by Kṛṣṇa not to prevent Arjuna. Subhadra herself was taking the chariot ahead. Balarāma came to know about it. Balarāma was enraged. However Kṛṣṇa pacified Balarāma and other Yādavas. Arjuna came to Indraprastha with Subhadrā. Draupadi and his brothers were very happy to receive them.

Pāndavas begot five sons viz. Prativindya, Śrutasoma, Śrutakīrti, Śrutānika, Śrutakriya. These were originally Viśvedevas. These had the āvesha of the five Gandharvas viz. Chitraratha, Abhitāmra, Kishora, Gopala and Bala. Abhimanyu was born after Prativindya and Śrutasoma. Originally he was Budha. He had also the āvesha of Chandra.

Khāndava dahana

One day Kṛṣṇa and Arjuna went to Khāndava forest with Satyabhāmā and Subhadrā. Agni appeared before them in the form of a Brāhmaṇa and appealed for food. He said he needs the whole of this

forest as his food. This forest belongs to Indra. He is obstructing me. Agni had tried to burn this forest seven times. However, Takshaka who was living in this forest prevented him with the support of Indra.

Agni brought chakra from Nārāyana at Badari and gave it to Śrī Kṛṣṇa. This was already once obtained by Śrī Kṛṣṇa at Gomantaka. Agni procured Gandīva bow from Varuṇa and gave it to Arjuna. He also gave white horses, chariot, and the flag with the emblem of Hanuman.

Arjuna encircled the entire Khāndava vana with his arrows and saw that no one went out of it. Kṛṣṇa and Arjuna destroyed the whole forest and offered it to Agni. Indra surrendered. Maya who was in that forest appealed to Arjuna to save him. Arjuna let off him.

Chapter XXI

Śrī Kṛṣṇa rescues a Brāhmaṇa's children

Maya built a beautiful hall for Yudhiṣtira. He had collected the valuable gems and other material from the hall of king Vrishaparva built on Mainaka near Bindu sarovara. He had also brought the orinigal gadā of Vāyu and gave it to Bhimasena.

On a day of sun eclips, Kṛṣṇa went to Samanta panchaka for a bath with his wives and children. The five ponds at Kurukshetra constructed by Paraṣurāma to offer Pitṛtarpaṇa after destroying

Kṣatrīyas are known as Samanta panchaka. Nandagopa, Yashoda and Pandavās also went there. Vasudeva performed a sacrifice on this occasion.

Kṛṣṇa performed Aśvamedhayāga at Dvaraka within one day only. Kṛṣṇa himself was Dikshita for this sacrifice. On this occasion a Brāhmaṇa arrived with tears in his eyes. He told that his children die the very moment they are born. Arjuna offered to rescue his children. Kṛṣṇa doubted his ability. Arjuna said if I am not able to rescue the children, I will jump into the fire. Arjuna encircled Brāhmana's house with his arrows at the time of her delivery. However, the child was taken away by some invisible spirit and only the cries of the child were heard. Arjuna went round the regions of Yama, Indra, Agni, Soma, Vāyu, Varuṇa etc and did not find the child. He returned and offered to jump into the fire in the presence of Śrī Kṛṣṇa.

Śrī Kṛṣṇa took the Brāhmaṇa and Arjuna with him and moved in a big chariot towards north crossing the seven seas. He cut the deep darkness with his chakra crossed ghanodaka and went to his original place anantāsana. He entered into his original form asking Brāhmaṇa and Arjuna to remain outside. He brought the children of Brāhmaṇa out. Nanda, Sunanda etc attenders of Viṣṇu used to be born as the children of that Brāhmaṇa. Kṛṣṇa returned to Dvārakā and gave the children to Brāhmaṇa.

Śrī Kṛṣṇa killed Dantavaktra and his brother Viduratha.

Arjuna asked Śrī Kṛṣṇa to describe the worlds through which they went while moving towards anantāsana. Śrī Kṛṣṇa explained the same as under : Jambūdvīpa, Lavaṇasamudra, Plakshadvīpa, Ikṣu-samudra, Shālmalīdvīpa, Surāsamudra, Kushadvīpa, Sarpisamudra, Kraunchadvīpa, Dadhisamudra, Shāka-dvīpa, Kshīrasamudra, Pushkaradvīpa, Suddhoda-samudra. He also gave the measurment of these. The total area is stated to be two crore fifty three and half lakh yojanas. The Lokāloka is situated between Vajralepa and andhatamas.

On another occasion Nārada described fourteen worlds to Yudhiṣthira as under : Bhu, Antarikṣa, Svarga, Maha, Jana, Tapah and Satya, seven above and Atala, Vitala, Sutala, Talātala, Mahātala, Rasātala, Pātāla seven below.

Yudhiṣthira asked Nārada why his father Pāndu has no place in Indraloka while Harischandra has it. Nārada replied that Harischandra performed Rājasūya yāga. Your father has already expressed his desire that his son should perform this yāga. Yudhiṣṭira thought of performing Rājasūya sacrifice. He consulted his brothers and also sent a messenger to Śrī Kṛṣṇa. At the same time the relatives of the sixteen thousand wives of Kṛṣṇa also sent a messenger informing the disturbing news that

Jarāsandha is planning to kill and offer to Śiva twenty two thousand and eight hundred kings. They appealed to Kṛṣṇa to rescue these kings. On hearing this Śrī Kṛṣṇa went to Indraprastha encouraged them to undertake Rājasūya yāga.

Rājasūya yāga duly performed will enable the Rijuyogins to attain the status of Brahmā. Those who are not eligible to this status will attain better position than his equals in the liberated state, that is to say, they will enjoy more ānanda. King Pāndu belongs to Mārut group. Among forty nine Maruts, seven are important. Pāndu will be one of these seven by the performance of Rājasūya by his son. By performing Rājasūya one will attain better position even before liberation. For instance, Harischandra attained Indraloka by this yāga. However, in the case of Pāndu though he belongs to Marut group and originally he is one of the seven important Maruts i.e. Paravaha, he is not able to attain the higher status than Harischandra as he showed dis-respect to Indra and was cursed by him to be born as a man. However, Indra told him that he will attain his due status by performing Rājasūya. That is why Pāndu desires that his son should perform Rājasūya.

Jarāsandha vadha

Śrī Kṛṣṇa told Yudhiṣthira that Bhīmasena is the most appropriate person to lead this Yāga. Jarāsandha will oppose this yāga. He has to be first

killed. Bhīma should be deputed to kill him. Bhīma readily agreed to proceed in the matter. Śrī Kṛṣṇa proposed that he himself accompanied by Bhīma and Arjuna will go to kill Jarāsandha. Jarāsandha will consider Arjuna as inferior to him, he is afraid of me, therefore, he will choose to fight with Bhīma only and will be killed by him. Kṛṣṇa further told Yudhiṣthira that he himself did not kill Jarāsandha when he attacked Mathura only to provide an opportunity to a Viṣṇubhakta to fight against a Śivabhakta and reveal the superiority of Viṣṇu-bhakta. This removed the fear in the mind of Yudhiṣthira. Kṛṣṇa, Bhīma and Arjuna left for Magadha country.

A group of five hills viz. Vaihara, Varāha, Vṛṣabha Ṛṣi and Chaityaka surounded Girivraja Jarasandha used to be worship one of these hills i.e. Chaityaka since it looked like Śivalinga. This was destroyed by Kṛṣṇa, Bhīma and Arjuna. Then, they entered into the city of Jarāsandha through the path made by breaking the prākāra wall. This new way was made since, one is not expected to enter into enemy's city through the main gate. They broke the drums the sound of which represented the glory of Jarāsandha. They snatched the flowers, sandal paste etc from the shops in the city and entered into Jarāsandha's palace by making a breakway for them. They had dressed like Brāhmaṇas. They refused the hospitality offered by Jarāsandha. He

asked them as to who they were? Why they broke Śivalinga, broke the drum and snatched the flower etc. These acts do not befit the Brāhmaṇas. On this Kṛṣṇa replied 'we are not Brāhmaṇas. We are your enemies. You have undertaken a Bhairavayāga and propose to kill innocent kings and animals. We have come to punish you, Jarāsandha said I cannot stop my Bhairavayāga. You have to fight with me. Jarasandha proposed that he would fight with Bhīmasena. A fight between the two with the mace started. It was conducted outside the city. Both displayed their skill in gadāyuddha. Their gadās were broken into pieces, then, they started fighting with fists. The fight continued for fifteen days. Bhīma firmly caught his head, placed the foot on his trunk and broke him in two pieces. Kṛṣṇa gave a hint as to how to break him by cutting a grass blade and throwing the two pieces in opposit direction. Bhīma knew this secret. However, Kṛṣṇa gave the hint to enthuse him. Jarāsandha's son Sahadeva made peace with them by offering his sister and the chariot to Bhīmasena. Bhīma received his sister for his brother Sahadeva. Nakula had already married the daughter of Madra King. These two wives of Nakula and Sahadeva were originally Ushas the wife of Aśvini. This Ushas is different from Ushā the wife of Aniruddha. With the death of Jarāsandha the main hurdle for the Rājasūya of Pāndavas was removed.

Rājasūya yāga

Śrī Vedavyāsa arrived and instructed Yudhiṣthira to make all preparations. He instructed Bhīmasena to undertake digvijaya yātra. The benefit of the sacrifice goes to that person who plays the principal role. Bhīma was eligible for the benefit of Rājasūya viz. the position of Brahmā. Therefore, Śrī Vedavyāsa asked Bhīma to play the principal role by undertaking digvijaya.

Arjuna pleaded that he has the chariot, bow etc necessary requirements for digvijaya and he is also interested in digvijaya. However, Śrī Vedavyāsa said Kīchaka, Karṇa etc will give tributes to Bhīma without much grambling, therefore, he should lead digvijaya. He directed Arjuna to go to Saptadvīpa, Pātāla etc regions and bring tributes.

Bhīma went to Virāta kingdom and collected tributes from Kīchaka. Then, he went to chedi kingdom collected tributes from Śishupāla. Kunti's sister Śrutasrāva was the mother of Śishupāla. She advised him to pay the tributes. Bhīma collected the tributes from Paundraka Vāsudeva and Karṇa. He went to the city of Bāṇāsura and collected the vast wealth from him.

Nakula and Sahadeva who were sent to different direction returned and reported the tributes won by them.

Arjuna defeated the tribal rulers like ābhira and niṣāda. He obtained tributes from Bhagadatta. He wandered over nine varṣas viz Kimpurusha, Harivarṣa, Ilavrita, Bhadrasva, Ketumāla, Hiranmaya, Ramyaka, Kuru and Bharata varṣa itself. He brought huge tributes from these areas. He also went into seven Pātālas won the demons and the deities and brought the tribute even from Bali Chakravarti.

The Rājasūya sacrifice was started. Yājnyavalkya, Paila and Dhaumya and Susāma played the role of Adhvaryu, Hotā, and Udgāta. Śrī Vedavyāsa himself became Brahmā. Dharmaraja was Yajamāna and Draupadi was Yajamana Patni. Brahma, Rudra, Indra etc deities, Bhīṣma, Droṇa etc elders. The entire family of Dhritarāstra, Balarāma and Yādavas were present. Rukmini and Satyabhāmā were also especially invited. At the sacrificial pendal, the debates on philosophical issues were arranged. Dharmarāja asked Bhīṣma as to whom the agrapūja be offered. Bhīṣma suggested that it should be offered to Śrī Kṛṣṇa. Dharmarāja duly offered agrapūja to Śrī Kṛṣṇa. This upset Śiṣupāla. He talked ill of Śrī Kṛṣṇa. Bhīmasena was enraged by this and proceded to kill Śiṣupāla. Bhīṣma restrained him. He was destined to be killed by Śrī Kṛṣṇa. Therefore, Bhīma did not proceed further. Śiṣupala declared to fight against Kṛṣṇa. He invited the other kings also to join him. Śrī Kṛṣṇa pushed the other kings behind and killed Śiṣupāla with his chakrāyudha.

After the sacrifice was over and all guests returned, Dharmarāja was chating with Śrī Kṛṣṇa at the beautiful hall built by Maya. Duryodhana arrived at that hall. The walls of this hall were so transperant that the persons sitting on the otherside were visible and presence of the wall itself was not felt. Consequently Duryodhana hit at the wall when he proceeded. The floor that was studed with blue gems was so soft and clean that Duryodhana felt there was water and he rolled his cloth to avoid the water. In another part of hall where there was actual water, he failed to notice it and fell. At this confusion of Duryodhana, Bhīma, Draupadi and all others laughed. Duryodhana felt deeply humiliated. Duryodhana and Śakuni returned to Hastināvati with a burning heart started and to take vengence against Pandavās, particularly against Bhīma and Draupadi.

The dice play

Śakuni suggested that they should invite Dharmarāja for a dice-play and rob all his wealth and kingdom. Dhritarāṣtra first hesitated to agree. However, when Duryodhana presserised him he sent Vidura to invite Dharmaraja for the dice-play.

When Vidura came to invite Dharmarāja for dice-play Śrī Kṛṣṇa was not at Indraprastha. He had left for Dvārakā on receiving the information that Salva proposes to attack Dvārakā.

Dharmaraja agreed to go to Hastināvati for playing dice in spite of the opposition by his brothers and Draupadi. Vidura also cautioned him against the dangers of dice-play.

Pāndavas went to dice-play hall with Bhīṣma etc elders. Dhritarāṣtra arrived with Vidura. Kauravas arrived with Shakuni and Karṇa. Bhīṣma etc elders did not like the idea of dice-play. However, they kept quite. Dharmaraja proposed his entire wealth as a bet for the play and lost it. Then, he went on proposing Nakula, Sahadeva, Arjuna and Bhīma as bet and lost all of them. Finally he proposed Draupadi and himself also as bet and lost. Duryodhana sent his charioteer Pratikāmin to bring Draupadi to the dice play hall. Draupadi told him that it is not proper for her to come to the hall where elders are present. Pratikāmin returned. Duryodhana sent Duśśāsana to bring Draupadi. He forcibly draged her to the hall. She asked the question whether Yudhiṣthira lost her before he himself became a slave. No body answered this question. Bhīṣma said, since Dharmarāja himself has accepted the fact that he lost Draupadi, we are helpless in the matter.

Draupadi told Bhīṣma and other elders that dice-play is a deceiptful programme. It is adharma. Therefore, victory in this is no victory. Consequently Dharmarāja himself is not defeated. Therefore, how can I be treated as a slave. You elders are not

condemning it as adharma. You are not giving your ruling on what is dharma and what is adharma. Therefore, this assembly is not an assembly of wisemen at all.

Bhīṣma etc elders kept quite even after this exhortation, since, Kali had entered into them. However, Vidura declared that Draupadi has not become a slave. The adharma has taken over the entire assembly.

Bhīma said the hands of Dharmarāja be burnt. Arjuna appealed to him not to do so. Duryodhana displayed his left thigh. Bhīma said I will crush it. Duryodhana asked Duśśāsana to take away the cloths of Pāndavas. They removed the same and were clad with deer skin. Duśśāsana started to drag the sāree of Draupadi. She appealed to Śrī Kṛṣṇa to save her honour. The sāree went on extending. A series of sārees appeared one after the other. Duṣśāsana was exhausted and collapsed. Bhīma looked at an iron rod to hit Duryodhana. There were cries of foxes. This was very inauspecious. Dhritarāṣtra asked Vidura as to how to ward it off. Vidura said, you first release Draupadi. Dhritarāstra offered three boons to Draupadi. She asked him to release Pāndavas and their property. She did not ask anything for herself. Strictly speaking she had not asked for any boons. The relatives of a dice-player have a right to ask for the return of the lost property.

She had excercised that right. Even if it is taken as boon she was within her limits. A Kṣatriya should not ask for more than three boons.

She had asked for only two boons. She did not ask anything for herself as she was strictly following Bhāgavata dharma. Dhritarāṣtra released Pāndavas and returned the kingdom. Duryodhana was very angry. Śakuni suggested that Pāndavas be invited for the dice-play again. Dhritarāṣtra invited again. This time the bet proposed by the Kauravas was different. If Pāndavas were defeated they were required to live in the forest for twelve years and live in-cognito for one year. During this last year, if one of them was found, then, they were required to live in the forest for twelve years again. Dharmaraja was defeated again and Pāndavas had to go to the forest. They went out of Hastināpur through the main gate Vardhamāna. Vidura asked Kunti to stay with him. The people of Hastināpur followed Pāndavas upto the banian tree on the bank of river Gangā. Then Pāndavas proceeded to Kāmyakavana.

Chapter XXII

Kirmīra vadha

Pāndavas arrived at Kāmyakavana. It was place of Kirmira. He was the younger brother of Bakāsura and a friend of Hidimba. When he came to know that Bhīma had arrived, he desired to take revenge on

him for killing Bakāsura and Hidimba. He attacked Bhīma. He was moving holding torches. Bhīma fought with him and killed him.

Ten thousand Yatis and eighty eight thousand Brāhmanas had accompanied Pāndavas. In order to provide food for them and maintain them Pāndavas had to make arrangements. They meditated upon Sūryanārayana and obtained Akṣayapātra. This used to yield plenty of food and other requirements like Kāmadhenu. Pāndavas provided food and other facilities to yatis and Brāhmaṇas through this akṣayapātra. Dharmarāja took his food after his brothers took food. After Dharmaraja Draupadi used to take her food.

Vidura, Śrī Vedavyāsa and Maitreya advised Dhritarāṣtra to treat the Pandavas properly and give them their kingdom. However, this did not yeild any result.

Śrī Kṛṣṇa arrives and narrates Sālva vadha

Pāndavas sent a message to Śrī Kṛṣṇa informing their plight in the forest. Kṛṣṇa, Satyabhāmā and Drupada arrived. Kṛṣṇa said if I were present at Indraprastha, I would not have allowed such a thing to happen. He had gone to Dvārakā to fight with Sālva. When Kṛṣṇa learnt that Sālva has attacked Dvārakā, he sent Pradyumna to counter him. Sālva prefered to fight with Pradyumna on the ground and

came down from his Vimāna. Pradyumna employed the special arrow to kill him. However, an airial voice informed him not to kill Sālvas as he is destined to be killed by Śrī Kṛṣṇa. On seeing this arrow salva ran away. Then, I went and followed him I saw him moving in the Saubha Vimāna. He used his māya. As a result I saw a mesenger coming to me. He told me that Sālva has allready killed Vasudeva. I saw Vasudeva being dropped from Saubha Vimāna. Suddenly the entire army became invisible. The Rākshasas declared their victory. I saw all this fun for sometime and killed Sālva by Chakrāyudha.

Narrating the episode of Sālva to explain his absence, Śrī Kṛṣṇa consoled Draupadi, stayed in the forest for sometime and left with Satyabhāma. Subhadra and Abhimanyu, Driṣtadhyumna also left taking the children of Draupadi with him. Dhriṣtaketu the son of Śiṣupāla took Devaki his sister and the wife of Dharmaraja to his Chedi country. The king of Kāshi took with him his daughter Kālidevi, the wife of Bhīmasena. The wives of Nakula and Sahadeva viz. Pārvati and Vijayā stayed with Kunti. Draupadi's sons stayed in Pānchāla for sometime and then moved to Dvārakā.

Draupadi and Bhīma advise Dharmarāja

Bhīma asked Draupadi to talk to Dharmarāja and keep his spirit to fight the Kauravas after thirteen years. If he is isolated for such a long time from the

thought of the harm done to us by Kauravas, he may become indiferent to the kingdom. Draupadi went to Dharmaraja and told him that tolerance is not a virtue in respect of evil persons. If the king is tolerant even with evil persons the good people will suffer. It is said that the dharma protects a person if he protects dharma. But in your case dharma did not protect you. Duryodhana does not care for dharma but he is prospering. This makes me to loose the faith in the very dharma. It is true that the God manages everything. However, man's effort is also necessary. If man has nothing to do with his undertakings, then, the vidhi and niṣedha i.e. 'do' and 'do not' prescribed in the Veda will loose their meaning. Dharmaraja listened to these arguments of Draupadi and said these are empty arguments. The man is not independent in his undertakings. He is regulated by God in all matters. God is the independent agent. Every one else is under his controle. Man should undertake his activities with this awareness. He should respond to vidhi and niṣedha as God's command. Then, Bhīma also joined this discussion. He agreed with Dharmarāja that God is all in all. One has to realise both the facts that Jīva has to do his duties but also be aware that he is not independent. Only such a person who knows both these aspects can function better and do his duty. One should not arrogate Svatantrakartritva for himself nor akartritva. Jīva functions on the basis of

his yogyatā, anādikarma and prayatna. These three are under the controle of God. He is independent, he is Supreme. He guides the Jīvas taking into account these factors. He has no partiality or cruelty. With this background Bhīmasena explains Varṇadharmas, particularly, Rājadharm. He concludes by saying that dice-play is not a dharma. Therefore, we can take back our kingdom. There is provision to consider thousand years as thousand months in Satrayāga. Applying this yard stick thirteen years may be considered as thirteen months. We have already spent twelve months. Spending another month in ajnātavāsa we may go back, fight, and take back our kingdom. Dharmaraja agrees with Bhīma but says we can take this action after thirteen years. However, I am worried as to how to face a such strong men Bhīṣma and Droṇa. They are our elders and respectable persons. At this juncture Śrī Vedavyāsa arrives.

Śrī Vedavyāsa instructed Pratismriti Mantra to Dharmarāja with the instruction that he should pass it on to Arjuna. When this Mantra is recited all the deities appear and teach the respective astra mantras. Dharmarāja received the mantra from Śrī Vedavyāsa and taught it to Arjuna.

The Pāśupatāsra

Arjuna went to Indrakila hill and started penance. He meditated upon Viṣṇu present in Śiva. At this

time a demon Mūkāsura who was planning to kill Arjuna in the form of a pig. Arjuna threw the arrows at it. At the same time Śiva also arrived with Pārvati. He also threw the arrows at the pig. He said it belongs to him. He has come for hunting. Arjuna is not a hunter. A fight ensued between the two. Arjuna collapsed. He prepared a Śivalinga, worshipped it with flowers. To his surprise the flowers were seen on the head of Śiva who had come in the form of a hunter. Arjuna realised that the hunter was Śiva himself. He prostrated at his feet. Śiva gave him Pāśupatāstra. This astra really speaking was of Viṣṇu only. It got the name Pāśupata, because, Śiva aquired it. Its original name is Brahmaśira. This is the name of Gayatri hymn. Nārāyaṇa present in Sūryamandala is the deity for Gayatry hymn. When Arjuna received this hymn, Nārāyana appeared before him. Śiva blessed him and asked him to go to Indraloka to get the astras from other deities.

Ūrvaśī curses Arjuna

Arjuna went to Svarga. He was duly received. Indra taught him Vajrāstra etc. He arranged to teach him music and dance by Gandharvas. While observing the dance by Ūrvaṣi. Arjuna looked at her intently. Ūrvaṣi thought he is interested in her. She approached him. He refused to oblige her. She cursed him to become a napunsaka. When Indra

came to know, he restricted it to one year only during ajnātavāsa.

The episodes of Kṛṣṇa worshipping Śiva, killing Paundraka Vasudeva, Maiṁda, Vivida etc.

Kṛṣṇa had told Śiva that he would worship him and undertake penance for him in order to mislead the ignorant. You should preach misleading śāstra declaring yourself as superior. Accordingly Kṛṣṇa goes to Himālaya and undertakes penance for Śiva. When he was at Badari two Piśāchas viz. Ghantākarṇa and Karṇa came. They were in search of Śrī Kṛṣṇa on the advice of Śiva to get liberated from Piṣācha form. They were moving shauting *'Om namo bhagavate vāsudevāya'* Kṛṣṇa touched them and they got back to their original Gandharva form. Śrī Kṛṣṇa went to Kailāsa. He pretended to perform the penance for Śiva to mislead the ignorant. Śiva told him that when kāma was burnt down Rati asked for restoring her husband. I told her that he will be born as your son. He may be taken as a son given to you by me.

When Kṛṣṇa went to Kailāsa, Paundraka Vāsudeva and Ekalavya attacked Dvārakā. Balarāma, Sātyaki and other Yādavas fought with them. Paundraka used to claim that he is real Vāsudeva, the chakra etc belong to him. He asked Kṛṣṇa to accept this position and give chakra etc. to him only. Śrī Kṛṣṇa killed him. Kṛṣṇa killed Kāṣirāja and Ekalavya also.

On killing Kāṣīrāja, his son Sudakṣiṇa was enraged. He performed penance for Śiva and requested to enable him to destroy Kṛṣṇa. Śiva asked him to perform abhichāra homa. He performed the same. The abhichārāgni produced by it rushed towards Dvārakā and started burning the city. Kṛṣṇa chakra prevented it. It went back and hit Sudakshiṇa himself. It is the nature of abhichāra that if it cannot hit the enemy it will hit the very person who has employed it. Kṛṣṇachakra burnt the city of Vārāṇasi.

Mainda and Vivida attacked Dvārakā. Balarāma killed both of them. Sāmba the son of Jāmbavati took away Lakṣaṇā the daughter of Duryodhana. Kauravas were enraged by it and arrested him. On hearing this Yādavas wanted to fight with them. However, Balarāma intervened and got him released. Balarāma threatenned that he will drag the whole city of Hastināvati into Gangā and drown it in water. Kauravas released Samba.

Uṣāharaṇa

Bāṇāsuras daughter Uṣa saw Aniruddha in her dream. She desired to marry him. Her friend Chitralekhā managed to bring him. Bāṇāsura came to know about it and arrested Aniruddha tying him with a Snake. Kṛṣṇa came to Shoṇitapura fought with Jvara and made Śiva himself motionless by Vijrimbhaṇāstra. This Jvara had three heads, three legs and nine eyes. He used to produce heat and

torture the enemies. This was known as Śaiva jvara. Kṛṣṇa produced Vaiṣṇava jvara that created cold and warded off the effect of Śaivajvara. Śrī Kṛṣṇa returned to Dvārakā with Aniruddha, Uṣā and Chitralekhā.

The Saugandhika flower

Lomaśamuni advised Pāndavas to undertake Teerthayātra. Pāndavas moved round all important piligrim centres and arrived at Badarīkāṣrama. They worshipped Nārāyaṇa offered pindas to their forefathers and moved further to inner Badari. When Bhīma and Draupadi were moving in Badarīkāṣrama a beautiful and fragrant flower was droped near Draupadi. She desired to have these flowers and asked Bhīma to bring them. Bhīma proceeded in the thick forest of Himālaya killing the wild animals. On the way Hanuman was sitting. He told Bhīma that ordinary men are not expected to move on this path. If you insist on going you have to lift my tail and make way for you as I am very old. Bhīma said you move your tail. Hanuman suggested you may move my tail. Bhīma was not able. He apolagised to Hanuman asked him to narrate Śrī Rāmā's glory. Though Bhīma himself was Hanuman originally, he pretended to be unable to move the tail and asked him to narrate Sri Rāmas glory for the benefit of all others. Hanuman made way. Bhīma proceeded towards Gandhamādana. He saw the pond in which

the saugandhika flowers were found. This place was protected by Maniman and other krodhavaśas. They had procured Śaivastras from Śiva. They attacked Bhīma and were destroyed. Bhīma collected the flowers from that pond.

Pāndavas lived in Arshtisheṇa āśrama at Gandhamādana. Indra asked for gurudakṣiṇā from Arjuna for teaching him the great astras. He told him you kill Nivātakavachas who are my enemies. This is gurudakṣiṇa, Arjuna employed Pāśupatāstra and killed them.

Nahuṣa episode

As a result of killing Vritrāsura Indra had to vacate his position. The sages put Nahuṣa in this position. When he took that position he desired to have Śachi. In order to bring him down Śachi told him that she would agree to his request if he makes the sages to carry his chariot. Bhrigu cursed him that he should be born as snake.

He further said : If a person meets you at the time of your ājagara vrita paraṇa you will catch him. If you are not able to kill and if he doesnot get freed from you all your strength will go to him. Ājagaravrita is a ritual in which the observer takes his food after two and half days viz. two days, two nights, and one day make a unit of five. The next night is ṣasthakāla or sixth unit. It is at this time that

the observer has to take his food. For this reason this vrita is also called as ṣasthakāla pāraṇavrita. He also told him that you will be free from the snake body when someone answers your questions. When Bhrigu cursed Nahusha he was not visible to him. He was in jatā of Agastya. There was āveśa of Brahmā in Bhṛgu. Stricktly speaking the above curse was given by Brahmā only. All this was in consequence of Nahuṣa putting his foot on Agastya's head and Sachi's trick to instigate him to yoke the sages to his chariot.

Bhīma was caught by this snake. Bhīma did not try to get freed from the snake, nor he replied to the questions of Nahuṣa. He wanted to draw out the strenght of the penance of Nahuṣa. He allowed the snake to get exhausted and become loose. Dharmaraja arrives and asks Nahuṣa to free Bhīma, Dharmarāja himself answers his questions. Nahuṣa asks i) who is Brāhmaṇa ii) what is the highest principle that should be known by a seeker iii) which are the means of liberation. Dharmarāja answered these questions. Nahuṣa was freed from the body of the snake.

Pāndavas moved to Dvaitavana. Kṛṣṇa and Satyabhāmā arrived. Satyabhāmā asked Draupadi to explain stridharmas. She explained.

Jayadratha episode

One day Pāndavas went for hunting. Draupadi alone was in āśrama. Jayadratha was going to a svayamvara by that way. He saw Draupadi sitting alone. He asked her to come with him. She refused. He forcibily took her in his chariot. Dhaumya followed. Pandavas arrived. Draupadi jumped out of chariot. Kotikāśya a companion of Jayadratha was killed. Dharmarāja asked Bhīma not to kill Jayadratha as he was the son-in-law of Dhritarāṣtra. He ran away.

Mārkandeya narrates a number of storis

Sage Mārkandeya arrived. He narrated a number of storis which can be understood if we know three layers of the language viz. Darśanabhāṣā, Guhyabhāṣā and Samādhibhāṣā. Darśanabhāṣā is again of two typs viz Lokadarśana and Paradarśana. Paradarśana is also of two types viz Laukika paradarśana and Vaidika paradarshana.

Ghoṣayātrā

Duryodhana undertook Paundarikayāga. This was a substitute for Rājasūyayāga. As one and the same family was not eligible to perform Rājasūyayāga twice he had to go by Paundarika yāga. In order to display his wealth and the poverty of Pāndavas Duryodhana organised ghoshayātra. He proceeded to

take bath in the lake at Kāmyakavana close to the āśrama of Pāndavas. However, the Gandharva Chitrasena had already taken position of the lake. When Duryodhana tried to enter forcebly he was arrested. Duryodhana's brothers, Shakuni etc were also dragged out. Duryodhana's servants appealed to Pāndavas to get him released. Dharmarāja was performing one day sacrifice. Therefore, he deputed Bhīma and Arjuna to get Duryodhana released. He said when a third party attacks us we hundred and five brothers are one.

Duryodhana felt deeply humiliated as he had to take the help of Pāndavas. He started a fast unto death i.e. prāyopaveśa. He asked Duśśāsana to take charge of the kingdom. Duśśāsana appealed to him to give up the fast. Karṇa also appealed. Karṇa said when the master is in difficulty it is the duty of the servants to help him. Pāndavas are your slaves. Therefore, you need not feel humiliated if they help..

The Asuras also thought if Duryodhana withdraws Pāndavas will become strong. They always support the God but not us. Therefore, we should put enthusiam at the heart of Duryodhana. They managed to get Duryodhana to Pātālaloka when he was asleep. They told him, he was a Vajrakāya and quite strong. Therefore, he should not feel depressed. Karṇa took an oath that he would not refuse to give a gift when some one asked him and would wash his feet himself until he killed Arjuna.

Karṇa gifts his kundala

Indra became alarmed. He desired to weaken Karṇa. He went to Karṇa in the form of a Brāhmaṇa and asked for the gift of his karṇakundalas. Karṇa gave even though he knew that it was a game of Indra. Karṇa never refused to give a gift when someone asked him. In return Indra gave him Śakti āyudha. He said it would kill only one person excepting Arjuna.

Yakṣa praśna

Sometime after the release of Duryodhana a Brahmaṇa came and told them that his araṇi sticks and yajnapātra are taken away by a deer. He had put them in a cloth on the branch of a tree and a deer's horn stuck to it and it was taken by the deer. Pāndavas ran after the deer. It became invisible. They sat under a banian tree. They felt thirsty. Nakula climbed the tree and saw a pond nearby. He went to drink water. He heard the arial voice that this pond belongs to me. You should not drink the water without answering my questions. Nakula sipped the water without answering the question. He fell on the ground. Sahadeva, Arjuna and Bhīma also sipped the water without answering the questions. They all fell down one after the other. Dharmarāja came. He answered the questions. Yama had appeared in the form of Yakṣa. He was pleased with the answers of Dharmaraja and asked him to ask for the revival of

the life of one of his brothers. Dharmarāja asked for the revival of Nakula. Yakṣa asked 'why he did not choose Bhīma or Arjuna, Dharmarāja said he wanted at least one son of Madri to be revived. Yama was pleased and revived the life of all brothers. He told Dharmaraja that he himself had taken away the araṇi pātra assuming the form of a deer. He returned the aranipātra to Dharmarāja. He gave the same to the Brāhmaṇa.

Prof. K.T. Pandurangi
Upakulapati
Poornaprajna Vidyapeetha

ಒಳಗೇನಿದೆ ?

ಅಧ್ಯಾಯ 19

ಪಾಂಡವ ರಾಜ್ಯಲಾಭ

ಕಲಿಂಗ ನೀತಿ ಪುಟ 1

ಕಲಿಂಗ ಒಬ್ಬ ಬ್ರಾಹ್ಮಣ. ದೈತ್ಯ ಗುರು ಶುಕ್ರಾಚಾರ್ಯರ ಶಿಷ್ಯ. ಶಕುನಿಗೆ ಗುರು. ಶಕುನಿಯ ಕೋರಿಕೆಯಂತೆ ಆತ ಕೌರವರಿಗೆ ರಹಸ್ಯವಾಗಿ ನಾಸ್ತಿಕ್ಯದ ಕುಟಿಲ ನೀತಿ ಹೇಳಿಕೊಟ್ಟ. ಅದು ಅವರಿಗೆ ಚೆನ್ನಾಗಿ ಹಿಡಿಸಿತು.

ಧೃತರಾಷ್ಟ್ರನ ಪುತ್ರಮೋಹ 7

ಕಲಿಂಗನೀತಿಗೆ ಅನುಗುಣವಾಗಿ ಕೌರವರು ಪಾಂಡವರನ್ನು ವಾರಣಾವತದಲ್ಲಿ ಅರಗಿನ ಮನೆಯಲ್ಲಿ ಇರಿಸಿ ಸಜೀವ ದಹನ ಮಾಡಲು ಸಂಕಲ್ಪಿಸಿ ಅವರನ್ನು ವಾರಣಾವತಕ್ಕೆ ಕಳಿಸಲು ಧೃತರಾಷ್ಟ್ರನನ್ನು ಒತ್ತಾಯಿಸಿದರು. ಪುತ್ರ ಮೋಹದಿಂದ ಧೃತರಾಷ್ಟ್ರ ಹಾಗೇ ಮಾಡಿದ.

ಭೀಮಸೇನನ ಧರ್ಮಪ್ರಜ್ಞೆ 12

ನಾವು ವಾರಣಾವತಕ್ಕೆ ಹೋದರೆ ಭಿಕ್ಷೆ ಬೇಡಬೇಕಾಗುವುದು. ಭಿಕ್ಷೆ ಬೇಡುವುದು ಕ್ಷತ್ರಿಯ ಧರ್ಮವಲ್ಲ. ಅದರಿಂದ ಕೌರವರನ್ನು ದಮನ ಮಾಡಿಯಾದರೂ ನಾವಿಲ್ಲೆ ಇರುವುದು ನ್ಯಾಯ ಎಂದ ಭೀಮಸೇನ. ಆದರೆ ಧರ್ಮರಾಜನ ಆಜ್ಞೆಗೆ ಮಣಿದು ವಾರಣಾವತಕ್ಕೆ ಹೊರಟ. ಪ್ರಸಂಗ ಬಂದಾಗ ಕಿರಿಯರು ಹಿರಿಯರ ಅಧರ್ಮವನ್ನು ಪ್ರತಿಭಟಿಸಬೇಕು. ಧರ್ಮವನ್ನು ಹೇಳಬೇಕು. ಕೊನೆಗೆ ವಿಧೇಯತನದಿಂದ ವರ್ತಿಸಲೂ ಬೇಕು ಎಂಬುದನ್ನು ಭೀಮ ಇಲ್ಲಿ ತೋರಿಸಿದ್ದಾನೆ. ವಸ್ತುತಃ ಈಗಲೇ ಕೌರವರನ್ನು ನಾಶ ಮಾಡಕೂಡದು. ಅವರ ದೌರ್ಜನ್ಯ ಪೂರ್ತಿವ್ಯಕ್ತವಾಗಲು ಬಿಡಬೇಕು ಎನ್ನುವುದು ಭೀಮನ ಆಶಯವಾಗಿತ್ತು.

ವಿದುರನ ಮಾತಿನ ಜಾಣ್ಮೆ 14

ಪಾಂಡವರು ಹಸ್ತಿನಾವತಿಯಿಂದ ಹೊರಡುವಾಗ ಅವರಿಗೆ ರಾಜನೀತಿಯನ್ನು ಉಪದೇಶಿಸುವ ನೆಪದಿಂದ ಗೋಪ್ಯವಾಗಿ ವಾರಣಾವತದಲ್ಲಿ ನಿಮಗೆ ವಿಷ ಅಗ್ನಿಗಳ ಭಯವಿದೆ ಎಂದು ಎಚ್ಚರಿಸಿದ. ಅವನು ಆಗ ಆಡಿದುದು ಮ್ಲೇಚ್ಛಭಾಷೆಯಲ್ಲಿ.

ಅರಗಿನ ಮನೆಯ ನಿರ್ಮಾಣ 16

ರಾವಣನ ಸೋದರ ಮಾವನೂ ಮಂತ್ರಿಯೂ ಆಗಿದ್ದ ಪ್ರಹಸ್ತನೆಂಬ ರಾಕ್ಷಸ ಪುರೋಚನನಾಗಿ ಜನಿಸಿ ದುರ್ಯೋಧನನ ಆಪ್ತ ಸಚಿವನಾಗಿದ್ದ. ಅವನು ಅರಗಿನ ಮನೆಯನ್ನು ಕಟ್ಟಿಸಿ ಪಾಂಡವರ ಬಳಿಗೆ ಬಂದ. ಅವರಿಗೆ ಆಪ್ತಸಚಿವನಂತೆ ತೋರಿಕೊಂಡು ಅರಗಿನ ಮನೆಯನ್ನು ವಾಸಕ್ಕೆ ಕೊಟ್ಟು ತಾನೂ ಅವರ ಜೊತೆಗೇ ವಾಸ ಮಾಡಿದ.

ಸುರಂಗಮಾರ್ಗ ನಿರ್ಮಾಣ **17**

ಒಬ್ಬ ನೆಲ ಅಗೆವ ಕೆಲಸದವನನ್ನು ವಿದುರ ಕಳಿಸಿದ. ಅವನು ಪ್ರಾಕಾರ ನಿರ್ಮಾಣದ ನೆಪದಿಂದ ಸುರಂಗಮಾರ್ಗ ನಿರ್ಮಾಣ ಮಾಡಿಕೊಟ್ಟ.

ಅರಗಿನ ಮನೆಗೆ ಬೆಂಕಿ **18**

ಪುರೋಚನನ ತಂಗಿಯೊಬ್ಬಳು ಬೇಡಿತಿ, ಐದು ಮಕ್ಕಳ ತಾಯಿ.. ಅವಳು ಶಿವನನ್ನು ತಪಸ್ಸಿನಿಂದ ಒಲಿಸಿಕೊಂಡು ತನ್ನ ಮಕ್ಕಳು ದೇವತೆಗಳಾಗಬೇಕು. ತಾನು ದೇವಮಾತೆ ಅದಿತಿಯಾಗಬೇಕೆಂದು ವರ ಪಡೆದಳು. ಆದರೆ ಮಕ್ಕಳೊಂದಿಗೆ ಸಾಯಕೂಡದು ಎಂದಿದ್ದ ಶಿವ. ಪುರೋಚನ ಅವಳನ್ನು ಪಾಂಡವರಿಗೆ ವಿಷವಿಕ್ಕುವ ಕಾರ್ಯದಲ್ಲಿ ನೇಮಿಸಿದ. ಅವಳು ಮಕ್ಕಳೊಂದಿಗೆ ಬಂದು ಕುಂತಿಯ ಜೊತೆಗೇ ಇದ್ದು ಅನ್ನದಲ್ಲಿ ವಿಷ ಬೆರೆಸಿದಳು. ಮುಂಜಾಗರೂಕತೆಯ ಕ್ರಮವಾಗಿ ಭೀಮ ಮೊದಲು ಉಣ್ಣುತ್ತಿದ್ದ. ಅಂದು ಎಲ್ಲ ಅನ್ನವನ್ನು ಅವನೆ ಉಂಡು ಅರಗಿಸಿಕೊಂಡ. ರಾತ್ರಿ ಎಲ್ಲರೂ ಮಲಗಿದ್ದಾಗ ಪಾಂಡವರು ವಿಷ ಉಂಡು ಮಲಗಿರುವರೆಂದು ಸಂತೋಷದಿಂದ ಪುರೋಚನ ಮತ್ತು ಅವನ ತಂಗಿ, ಮಕ್ಕಳು ಚೆನ್ನಾಗಿ ಮದ್ಯ ಕುಡಿದು ಮಲಗಿದರು. ಭೀಮ ಇದೇ ಸಮಯವೆಂದು ಸೋದರರನ್ನೂ ಕುಂತಿಯನ್ನೂ ಸುರಂಗ ಮಾರ್ಗದಲ್ಲಿರಿಸಿ ಮನೆಗೆ ಬೆಂಕಿ ಇಟ್ಟ.

ಸೋದರರನ್ನು ಹೊತ್ತು ನಡೆದ ಭೀಮ **20**

ಆಪ್ತಮಂತ್ರಿಯಾದ ಪುರೋಚನನನ್ನು ಜೀವಂತ ಸುಟ್ಟುಬಿಟ್ಟರು ಪಾಂಡವರೆಂದು ಹೇಳುತ್ತ ಕೌರವರು ಭೀಷ್ಮದ್ರೋಣಾದಿಗಳನ್ನು ಪಾಂಡವರ ವಿರುದ್ಧ ಎತ್ತಿ ಕಟ್ಟಿ ಯುದ್ಧಕ್ಕೆ ನಿಂತರೆ ಗುರುಹಿರಿಯರ ಮೇಲೆ ನಾವು ಕೈಮಾಡಬೇಕಾಗುವ ಪ್ರಸಂಗವೆಂದು ಭಯದಿಂದ ನಡುಗಿದರು, ಧರ್ಮರಾಜ ಮುಂತಾದವರು. ನಡುಗಿ ಬಲಗುಂದಿದರು. ಭೀಮ ಅವರನ್ನು ಹೊತ್ತು ನಡೆಯಬೇಕಾಯಿತು. ಸುರಂಗ ಮಾರ್ಗದಿಂದ ನಡೆದು ಗಂಗಾತೀರಕ್ಕೆ ಬಂದಾಗ ಆಗಲೆ ವಿದುರ ಒಬ್ಬ ವಿಶ್ವಾಸಾರ್ಹನಾದ ನಾವಿಕನನ್ನು ಅಲ್ಲಿ ಇರಿಸಿದ್ದ. ಅವನು ನದಿ ದಾಟಿಸಿದ. ಮುಂದೆ ಹಿಡಿಂಬರಾಕ್ಷಸನಿದ್ದ ಕಾಡು ಮರದ ಬುಡದಲ್ಲಿ ಎಲ್ಲರೂ ಮಲಗಿದರು. ಭೀಮ ಮಾತ್ರ ಎಚ್ಚರದಿಂದಿದ್ದು ಕಾಯುತ್ತಿದ್ದ. ಪ್ರಳಯ ಕಾಲದಲ್ಲಿಯೂ ನಿದ್ದೆ ಇಲ್ಲದವನು ಅವನು ತಾನೆ!

ಹಿಡಿಂಬೆ ಭೀಮನನ್ನು ಕಂಡಳು **24**

'ಯಾರೋ ಮಾನವರು ಬಂದಿದ್ದಾರೆ ಹಿಡಿದು ತಾ' ಎಂದು ಹಿಡಿಂಬ ತಂಗಿ ಹಿಡಿಂಬೆಯನ್ನು ಕಳಿಸಿದ. ಅವಳು ಭೀಮನ ಬಲಿಷ್ಠ ಸುಂದರ ಆಕಾರ ನೋಡಿ ಮರುಳಾದಳು. ಹಿಂದೆ ಅವಳು ದೇವಲೋಕದ ಅಭಿಮಾನಿನಿಯಾದ ಶ್ರೀ ಎಂಬ ಅಪ್ಸರೆ. ಇಂದ್ರನ ಪ್ರೇಯಸಿಯಾಗಿ ಶಚಿಯೊಡನೆ ಸ್ಪರ್ಧಿಸಿ ಅವಳ ಶಾಪದಿಂದ ರಾಕ್ಷಸಿಯಾಗಿ ಹುಟ್ಟಿದ್ದಳು. ಭಾರತೀದೇವಿಯ ಅನುಗ್ರಹದಿಂದ ಅವಳ ಆವೇಶವಿದ್ದಿತು. ವಾಯುದೇವನ ಅಂಗಸಂಗದಿಂದ ಶಾಪನಿವೃತ್ತಿಯಾಗಬೇಕಾಗಿತ್ತು. ಅದರಿಂದ ಅವಳು ಭೀಮನನ್ನು ಬಯಸಿದಳು.

ಹಿಡಿಂಬ ವಧ **26**

ಹಿಡಿಂಬಿ ಮಾನವನೊಡನೆ ಸರಸವಾಡುತ್ತ ವಿಲಂಬ ಮಾಡಿದಳೆಂದು ಕುಪಿತನಾದ ಹಿಡಿಂಬ ಭೀಮನ ಮೇಲೆ ಏರಿಬಂದ. ಭೀಕರವಾದ ಹೋರಾಟದಲ್ಲಿ ಹಿಡಿಂಬ ಹತನಾದ.

ಹಿಡಿಂಬಾ ಪರಿಣಯ **27**

ಭೀಮ ಹಿಡಿಂಬೆಯ ಪ್ರಾರ್ಥನೆಯನ್ನು ನಿರಾಕರಿಸಿದ; ಅಣ್ಣನಾದ ಧರ್ಮರಾಜ ಇನ್ನೂ ಮದುವೆಯಾಗಿಲ್ಲ ಎಂದು. ವೇದವ್ಯಾಸರೆ ಬಂದು ಆಜ್ಞೆ ಮಾಡಿದ ಬಳಿಕ ಮದುವೆಯಾದ. ಧರ್ಮರಾಜನ ಆದೇಶದಂತೆ ಅವಳು ಭೀಮನನ್ನು ಹೆಗಲಲ್ಲಿ ಹೊತ್ತು ಹಗಲಲ್ಲಿ ಪೂರ್ತಿ ಸ್ವರ್ಗಾದಿಲೋಕಗಳಲ್ಲಿ ವಿಹರಿಸಿ ಸಂಜೆ ಹಿಂತಿರುಗಿ ಬರುತ್ತಿದ್ದಳು.

ಘಟೋತ್ಕಚನ ಜನನ **29**

ಆರು ತಿಂಗಳ ಕಾಲ ವಿಹಾರ ನಡೆಯಿತು. ಏಳನೆ ತಿಂಗಳಲ್ಲಿ ಹಿಡಿಂಬಿ ಗರ್ಭಧರಿಸಿ ತಕ್ಷಣವೆ ಪ್ರಸವಿಸಿದಳು. ಕೂಸು ಹುಟ್ಟಿದೊಡನೆ ಕ್ಷಣದಲ್ಲಿ ಯುವಕನಾಗಿ ಬೆಳೆದು ನಿಂತ. ಹುಟ್ಟುವಾಗ ತಲೆಯಲ್ಲಿ ಕೂದಲು ಇರಲಿಲ್ಲ. 'ಘಟ'ದಂತೆ, ಮಡಿಕೆಯಂತೆ ತಲೆ ಇದ್ದಿತು. ಒಡನೆ ಮೇಲ್ಮುಖವಾಗಿ ಕೂದಲು ಬೆಳೆದು 'ಉತ್ಕಚ' ಎನಿಸಿತು. ಹೀಗೆ ತಾನು 'ಘಟೋತ್ಕಚ' ಎಂದು ತಾನೆ ಹೇಳಿಕೊಂಡ ಘಟೋತ್ಕಚ.

ಏಕಚಕ್ರ ನಗರಕ್ಕೆ ಪ್ರಯಾಣ **31**

ಏಕಚಕ್ರ ನಗರದಲ್ಲಿ ಬಕಾಸುರ ಸಂಹಾರಕ್ಕಾಗಿ ವೇದವ್ಯಾಸರು ಪಾಂಡವರನ್ನು ಇರಿಸಿದರು. ಬ್ರಾಹ್ಮಣ ವೇಷದಲ್ಲಿದ್ದ ಅವರನ್ನು 'ನನ್ನ ಶಿಷ್ಯರು' ಎನ್ನುತ್ತ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಬಿಟ್ಟುಹೋದರು.

ಭೀಮನ ಭಿಕ್ಷಾಟನ ವೈಖರಿ **32**

ಒಬ್ಬ ಕುಂಬಾರನ ಮನೆಯ ಸುತ್ತಲೂ ಕಾಳ್ಗಿಚ್ಚು ಹಬ್ಬಿತು. ಭೀಮ ಅದು ಇರುವ ಸ್ಥಳಸಹಿತವಾಗಿ ಎತ್ತಿ ಬೇರೆಡೆ ಸುರಕ್ಷಿತವಾಗಿ ಇರಿಸಿದ. ಅದಕ್ಕೆ ಕುಂಬಾರ ಒಂದು ಮನೆಯಷ್ಟು ಗಾತ್ರದ ಮಡಿಕೆ ಮಾಡಿಕೊಟ್ಟ. ಭೀಮ ಅದನ್ನು ಎತ್ತಿ ತಂದು ವೈಶ್ಯರ ಮನೆಯಂಗಳದಲ್ಲಿಟ್ಟು ಹುಂಕಾರ ಮಾಡಿದರೆ ಮನೆಮಂದಿಗೆ ಅದೊಂದು ಒಳ್ಳೆಯ ಮನರಂಜನೆ. ನಗುನಗುತ್ತ ಬಂದು ಅನ್ನ ಭಕ್ಷ್ಯಗಳನ್ನು ಸುರಿಯುತ್ತಿದ್ದರು, ಹೊರತು, ಭೀಮ ಭಿಕ್ಷೆ ಬೇಡಲಿಲ್ಲ, ಅದು ಕ್ಷಾತ್ರಧರ್ಮವಲ್ಲ ಎಂದು. ಆದರೆ ಕೌರವರಿಗೆ ಇದರಿಂದ ತಮ್ಮ ಸುಳಿವು ಸಿಕ್ಕೀತೆಂದು ಧರ್ಮರಾಜನಿಗೆ ಭಯ. ನಾವೇ ಭಿಕ್ಷೆ ತರುತ್ತೇವೆ, ನೀನು ತಾಯಿಯ ಬಳಿಯೆ ಇರು ಎಂದ.

ಬ್ರಾಹ್ಮಣ ಕುಟುಂಬದ ಗೋಳಾಟ **34**

ಮನೆಯ ಯಜಮಾನ ಬ್ರಾಹ್ಮಣ ಒಂದುದಿನ ಹೆಂಡತಿ ಮಕ್ಕಳೊಂದಿಗೆ ಗೋಳಿಟ್ಟ. ಅದೇನೆಂದು ತಿಳಿದು ಬರಲು ಭೀಮ ತಾಯಿಯನ್ನು ಕಳಿಸಿದ.

ಬಕಾಸುರನ ದಬ್ಬಾಳಿಕೆ **38**

ಬಕಾಸುರ ರಾವಣನ ಸೋದರಮಾವ. ಶ್ರೀರಾಮನಿಗೆ ಪೆದರಿ ಗುಹೆಯಲ್ಲಿ ಅಡಗಿದ್ದವನು ಈಗ ಹೊರಗೆ ಬಂದಿದ್ದ. ಏಕಚಕ್ರ ನಗರವನ್ನು ಪೀಡಿಸುತ್ತಿದ್ದ. ಅವನಿಗೆ ಪ್ರತಿ ಮನೆಯವರು ಸರದಿಯಂತೆ ಬಂಡಿ ಅನ್ನ, ಬಂಡಿ ಎಳೆಯುವ ಜೋಡಿ ಎತ್ತುಗಳು, ಬಂಡಿ ಹೊಡೆಯುವ ಆಳು ಇಷ್ಟನ್ನು ಆಹಾರವಾಗಿ ಕೊಡಬೇಕಾಗಿತ್ತು. ಇದೀಗ ಬ್ರಾಹ್ಮಣನ ಸರದಿ, ತಾನು ರಾಕ್ಷಸನ ಬಾಯಿಗೆ ತುತ್ತಾದರೆ ಹೆಂಡತಿ ಮಕ್ಕಳ ಗತಿ ಏನು?

ಕುಂತಿಗೆ ಆನಂದ **39**

ಭೀಮನ ಕೈಯಿಂದ ರಾಕ್ಷಸ ಸಂಹಾರ ಮಾಡಿಸಿ ಪುಣ್ಯ ಕಟ್ಟಿಕೊಳ್ಳಲು ಅವಕಾಶ ಸಿಕ್ಕಿದೆ ಎಂದು ಕುಂತಿಗೆ

ಆನಂದ. ಬ್ರಾಹ್ಮಣ ಇದಕ್ಕೆ ಹಿಂಜರಿದಾಗ ಭೀಮನಲ್ಲಿ ಅದ್ಭುತ ಮಂತ್ರಶಕ್ತಿ ಇರುವುದಾಗಿ ಹೇಳಿ ಒಪ್ಪಿಸಿದಳು. ಭೀಮನ ಕಣ್ಣುಗಳಲ್ಲಿ ಆನಂದ ಮತ್ತೇರಿದ್ದುದನ್ನು ಕಂಡು ಧರ್ಮರಾಜ ಕುಂತಿಯನ್ನು ಕೇಳಿದ. ವಿಷಯ ತಿಳಿದು ಗಾಬರಿಗೊಂಡ. ಕುಂತಿ ಹೇಳಿದಳು, 'ಏಕೆ ಭಯ? ಭೀಮ ಹುಟ್ಟಿದೊಡನೆಯೆ ನನ್ನ ಕೈತಪ್ಪಿ ಬೆಟ್ಟಕ್ಕೆ ಬಿದ್ದು ಬೆಟ್ಟವನ್ನೆ ಪುಡಿ ಮಾಡಿದವ!' ಬಳಿಕ ಅನ್ನದ ಬಂಡಿ ಹೊಡೆಯುತ್ತ ಬಕನ ಕಾಡಿಗೆ ಹೋದ ಭೀಮ.

ಬಂಡಿ ಅನ್ನ ಉಂಡ ಭೀಮಸೇನ **43**

ಭೀಮ ರಾಕ್ಷಸನ ಬಳಿಗೆ ಬಂದು ಅವನು ನೋಡುತ್ತಿದ್ದಂತೇ ಬೆನ್ನುಹಾಕಿ ಅನ್ನ ಉಣಲು ತೊಡಗಿದ. ರಾಕ್ಷಸ ಮರಗಳನ್ನು ಕಿತ್ತು ಕಿತ್ತು ಎಸೆದ. ಭೀಮ ಎಡಗೈಯಿಂದ ತಡೆಯುತ್ತಲೆ ಊಟ ಮುಗಿಸಿದ. ಕೈ ಬಾಯಿ ತೊಳೆದು ಆಚಮನಮಾಡಿ ರಾಕ್ಷಸನನ್ನು ಹಿಡಿದ.

ಬಕಾಸುರ ಸಂಹಾರ **43**

ಭೀಮ ಬಕಾಸುರನ ಒಂದು ಕಾಲನ್ನು ಕಾಲಿಂದೊತ್ತಿ ಹಿಡಿದು ಇನ್ನೊಂದು ಕಾಲನ್ನು ಎತ್ತಿ ಕುತ್ತಿಗೆ ಪರೆಗೆ ಸೀಳಿಕೊಂದ. ಶವವನ್ನು ಊರ ಹೆಬ್ಬಾಗಿಲಲ್ಲಿ ನಿಲ್ಲಿಸಿ ಬ್ರಾಹ್ಮಣನ ಮನೆಗೆ ಬಂದ. ಪಟ್ಟಣಿಗರು ಬೆಳಿಗ್ಗೆ ಎದ್ದು ನೋಡಿದರೆ ರಾಕ್ಷಸನೆ ನಿಂತಂತೆ ಇದ್ದಿತು. ಭಯಗೊಂಡರು. ಪರೀಕ್ಷಿಸಿ ತಿಳಿದು ಬಳಿಕ ಸಂತುಷ್ಟರಾಗಿ ರಾಕ್ಷಸನಿಗೆ ಕೊಡುತ್ತಿದ್ದ ಅನ್ನದ ಕರವನ್ನು ಭೀಮನಿಗೇ ಕೊಡಲು ಬಂದರು. ಭೀಮ ಅದನ್ನು ಊರಿನ ನರಸಿಂಹ ದೇವಾಲಯಕ್ಕೆ ಕೊಡಲು ಹೇಳಿದ.

ದ್ರೌಪದೀ ಸ್ವಯಂವರ ಘೋಷಣೆ **47**

ಪಾಂಡವರು ಅರಗಿನ ಮನೆಯಲ್ಲಿ ಸುಟ್ಟರೆಂಬ ವಾರ್ತೆ ಕೇಳಿದಾಗ ದ್ರುಪದನಿಗೆ ಒಮ್ಮೆ ಆಘಾತವಾಯಿತು. ಆದರೆ, ಅರ್ಜುನನಿಗೆಂದೇ ದ್ರೌಪದಿಯನ್ನು ಯಜ್ಞಕುಂಡದಿಂದ ತಂದುಕೊಟ್ಟ ಬ್ರಾಹ್ಮಣರ ಮಂತ್ರಶಕ್ತಿ ಅವಳನ್ನು ಅರ್ಜುನನಿಗೆ ಕೊಡಿಸದಿರುತ್ತದೆಯೆ? ಅರ್ಜುನ ಬದುಕಿದ್ದಾನೆ. ಅಜ್ಞಾತವಾಸ ಮಾಡಿದ್ದಾನೆ, ಅವನನ್ನು ಬೆಳಕಿಗೆ ತರಬೇಕು ಎಂದು ದ್ರೌಪದೀ ಸ್ವಯಂವರ ಏರ್ಪಡಿಸಿದ. ಅರ್ಜುನನಿಗೆ ಮಾತ್ರ ಗೆಲ್ಲಲು ಸಾಧ್ಯವಾಗುವಂಥ ಪಣವನ್ನಿಟ್ಟ.

ಸತ್ರಾಜಿತನ ಕೊಲೆ **50**

ಗತಿಸಿಹೋದ ಪಾಂಡವರಿಗಾಗಿ ಶೋಕಿಸುತ್ತಿದ್ದ ಭೀಷ್ಮ ಮುಂತಾದವರಿಗೆ ಸಮಾಧಾನ ಮಾಡಲು ಕೃಷ್ಣ ಹಸ್ತಿನಾವತಿಗೆ ಹೋಗಿದ್ದಾಗ ಇತ್ತ ಶತಧನ್ವ ರಾತ್ರಿ ಮಲಗಿದ್ದ ಸತ್ರಾಜಿತನನ್ನು ಕೊಂದು ಸ್ಯಮಂತಕ ಮಣಿಯನ್ನು ಅಪಹರಿಸಿದ. ಸತ್ಯಭಾಮೆ ಸತ್ರಾಜಿತನ ಶವವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿರಿಸಿ ಹಸ್ತಿನಾವತಿಗೆ ಧಾವಿಸಿದಳು. ಶ್ರೀಕೃಷ್ಣ ದ್ವಾರಕೆಗೆ ಹಿಂತಿರುಗಿದ. ಆದರೆ ಆಗಲೆ ದ್ರೌಪದೀ ಸ್ವಯಂವರದ ವಾರ್ತೆ ಕೇಳಿ ಪಾಂಚಲ ನಗರಕ್ಕೆ ಹೊರಟ.

ಪಾಂಚಾಲ ನಗರದ ಕಡೆಗೆ ಪಾಂಡವರು **51**

ವೇದವ್ಯಾಸರ ಆದೇಶದಂತೆ ಪಾಂಡವರು ಪಾಂಚಾಲನಗರಕ್ಕೆ ಹೊರಟರು. ಬ್ರಾಹ್ಮಣ ವೇಷದಲ್ಲಿ ಬ್ರಾಹ್ಮಣರೊಂದಿಗೆ ಪ್ರಯಾಣ ಮಾಡಿದರು.

ಚಿತ್ರರಥ ಅಂಗಾರವರ್ಣನಾದ **53**

ರಾತ್ರಿವೇಳೆ ಉರಿವ ಕೊಳ್ಳಿ ಹಿಡಿದು ಅರ್ಜುನ ಮುಂದೆ ನಡೆದ. ಹಿಂದೆ ಭೀಮ, ನಡುವೆ

ಧರ್ಮರಾಜ ನಕುಲ ಸಹದೇವರು ಮತ್ತು ಕುಂತಿ. ಗಂಗಾತೀರಕ್ಕೆ ಬಂದಾಗ ನಡುರಾತ್ರಿ. ಚಿತ್ರರಥ ಗಂಧರ್ವ ಅವರ ಮೇಲೆ ಆಕ್ರಮಣ ಮಾಡಿದ. 'ನಡುರಾತ್ರಿ ಗಂಧರ್ವ ಯಕ್ಷ ರಾಕ್ಷಸರ ಸಂಚಾರ ಕಾಲ. ನದೀ ಜಲ ಸ್ಪರ್ಶ ನಿಷಿದ್ಧ. ನೀವು ಗಂಗೆಯನ್ನು ದಾಟುತ್ತಿರುವಿರಿ' ಇದು ಅವನು ಕೊಟ್ಟ ಕಾರಣ. ವಸ್ತುತಃ ಗಂಧರ್ವ ಆಗ ಪ್ರೇಯಸಿಯರೊಂದಿಗೆ ಜಲ ಕೇಳಿಯಾಡುತ್ತಿದ್ದ. ಅದಕ್ಕೆ ವಿಘ್ನವೆನ್ನುವುದು ನಿಜವಾದ ಕಾರಣವಾಗಿತ್ತು. ಗಂಗಾನದೀ ಸ್ಪರ್ಶಕ್ಕೆ ಅಕಾಲವೆಂಬುದೆ ಇಲ್ಲ. ಅರ್ಜುನ ಉರಿವ ಕೊಳ್ಳಿಯನ್ನೆ ಮಂತ್ರಪೂರ್ವಕ ಎಸೆದ. ಅದು ಆಗ್ನೇಯಾಸ್ತ್ರವಾಗಿ ಗಂಧರ್ವನ ಚಿತ್ರವಾದ ರಥವನ್ನು ಸುಟ್ಟಿತು. ಮೈಯೂ ಸುಟ್ಟು ಅಂಗಾರ ವರ್ಣವಾಯಿತು. ಚಿತ್ರರಥ ಅಂಗಾರ ವರ್ಣನೆನಿಸಿದ.

ಗಂಧರ್ವನಿಗೆ ಆಗ್ನೇಯಾಸ್ತ್ರೋಪದೇಶ 58

ಅರ್ಜುನನ ಆಗ್ನೇಯಾಸ್ತ್ರ ಮಂತ್ರಸಿದ್ಧಿ ಅನುಪಮವೆಂದು ಗಂಧರ್ವ ಅವನಿಂದ ಉಪದೇಶ ಪಡೆದ. ಗಂಧರ್ವರ ಚಾಕ್ಷುಷೀ ವಿದ್ಯೆಯನ್ನು ಪ್ರತಿಯಾಗಿ ಕೊಡಲು ಬಂದ. ಈಗಲೆ ಬೇಡ, ವಿದ್ಯೆಗೆ ವಿದ್ಯೆ ಎನ್ನುವ ವ್ಯಾಪಾರ ಬೇಡವೆಂದ ಅರ್ಜುನ. ಕ್ಷತ್ರಿಯರೆಂದರೆ ಅವರಿಗೆ ಒಬ್ಬ ಬ್ರಾಹ್ಮಣ ಪುರೋಹಿತ ಬೇಕು ಎನ್ನಲು ಅನೇಕ ಕಥೆಗಳನ್ನು ಹೇಳಿ ಧೌಮ್ಯರನ್ನು ಪುರೋಹಿತರನ್ನಾಗಿ ಮಾಡಿಕೊಳ್ಳಿ ಎಂದ ಗಂಧರ್ವ.

ಧೌಮ್ಯರು ಪುರೋಹಿತರಾದರು 60

ಧೌಮ್ಯರನ್ನು ಪುರೋಹಿತರನ್ನಾಗಿ ಮಾಡಿಕೊಂಡು ಪಾಂಡವರು ಪಾಂಚಾಲನಗರಕ್ಕೆ ಬಂದರು. ಸ್ವಯಂವರ ಮಂಟಪವನ್ನು ಪ್ರವೇಶಿಸಿದರು.

ದ್ರೌಪದೀ ಸ್ವಯಂವರ ಮಂಟಪ 61

ಶಿವ ಅಂದು ಅಂಬೆಗೆ ಕೊಟ್ಟಿದ್ದ ಬಾಡದ ಹೊಸ ಕಮಲಗಳ ಮಾಲೆ ದ್ರೌಪದಿಯ ಕೈಗಳನ್ನು ಅಲಂಕರಿಸಿತು. ಸ್ವಯಂವರ ಮಾಲೆಯಾಗಿ ಅರ್ಜುನನ ಕೊರಳನ್ನು ಅಲಂಕರಿಸಲು ಕಾದಿತ್ತು. ಶಿವಧನುಸ್ಸಿಗೆ ಐದು ಬಾಣಗಳನ್ನು ಹೂಡಿ ಮತ್ಸ್ಯಯಂತ್ರವನ್ನು ಭೇದಿಸುವವನಿಗೆ ದ್ರೌಪದಿ ಮಾಲೆ ಹಾಕುತ್ತಾಳೆ ಎಂದು ಧೃಷ್ಟದ್ಯುಮ್ನ ಘೋಷಣೆ ಮಾಡಿದ.

ರಾಜರುಗಳ ಪರಾಭವ 62

ಯಾದವರು ಯಾರೂ ಸ್ಪರ್ಧೆಯ ಕಣಕ್ಕೆ ಇಳಿಯಲಿಲ್ಲ. ಹಾಗೆ ಶ್ರೀಕೃಷ್ಣನ ಆಜ್ಞೆಯಿತ್ತು. ಕೇವಲ ವೀಕ್ಷಕರಾಗಿ ಅವರು ಬಂದಿದ್ದರು. ಶಿಶುಪಾಲ, ಶಲ್ಯ, ಜರಾಸಂಧರು ಬಿಲ್ಲಿಗೆ ಹೆದೆಯೇರಿಸುವಲ್ಲಿಯೆ ಅಶಕ್ತರಾದರು. ಅದಕ್ಕೆ ಅರ್ಜುನನ ಹೊರತು ಇನ್ನಾರೂ ಹೆದೆಯೇರಿಸಲು ಶಕ್ತರಾಗಬಾರದೆಂದು ಶಿವನ ವರವಿದ್ದುದೇ ಕಾರಣ.

ಕರ್ಣನ ಪರಾಭವ 64

ಕರ್ಣನೂ ದುರ್ಯೋಧನನ ಪರವಾಗಿ ಬಂದು ಬಿಲ್ಲಿಗೆ ಹೆದೆಯೇರಿಸಲು ಯತ್ನಿಸಿ ಸೋತ. 'ಕರ್ಣ ಹೆದೆಯೇರಿಸುತ್ತಾನೆ. ಆದರೆ ಅಷ್ಟರಲ್ಲಿ ದ್ರೌಪದಿ ನಾನು ಸೂತನನ್ನು ವರಿಸಲಾರೆ ಎನ್ನುತ್ತಾಳೆ' ಎಂದು ಮಹಾಭಾರತದ ಔತ್ತರೇಯಪಾಠ ಹೇಳುವುದು ನಿರ್ಣಯಕ್ಕೆ ಸಂಮತವಿಲ್ಲ.

ಪಾಂಡವ ವಿಜಯ 66

ಬ್ರಾಹ್ಮಣ ವೇಷದ ಅರ್ಜುನ ಎದ್ದು ಬಿಲ್ಲಿಗೆ ಹೆದೆಯೇರಿಸಿದ. ಐದೂ ಬಾಣಗಳನ್ನು ಹೂಡಿ ಒಮ್ಮೆಲೆ

ಎಸೆದು ಮತ್ಸ್ಯಯಂತ್ರವನ್ನು ಭೇದಿಸಿದ. ಸ್ವಯಂವರ ಮಾಲೆಯನ್ನು ಗಿಟ್ಟಿಸಿಕೊಂಡ. ಬ್ರಾಹ್ಮಣನ ಈ ವಿಜಯ ಕ್ಷತ್ರಿಯರಿಗೆ ಅಪಮಾನಕರವೆಂದು ಎಲ್ಲರೂ ಮೇಲೇರಿ ಬಂದರು. ಭೀಮಾರ್ಜುನರು ನಿಂತು ಅವರನ್ನು ಹಿಮ್ಮೆಟ್ಟಿಸಿದರು. ಕರ್ಣನೂ ಸೋತ. 'ಬ್ರಾಹ್ಮಣನೊಡನೆ ನನಗೆ ಏನು ಯುದ್ಧ?' ಎಂದು ಹೇಳುತ್ತ ಹಿಂದಿರುಗಿದ. ಪಾಂಡವರು ದ್ರೌಪದಿಯೊಂದಿಗೆ ಕುಂತಿಯ ಬಳಿಗೆ ಬಂದರು. 'ಅಮ್ಮ, ಭಿಕ್ಷೆ ತಂದೆವು' ಎಂದರು. 'ಎಲ್ಲರೂ ಹಂಚಿಕೊಳ್ಳಿರಿ' ಎಂದಳು ಕುಂತಿ. 'ಭಿಕ್ಷೆ' ಎಂದರೆ ದ್ರೌಪದಿ ಎಂಬುದು ಅನಂತರ ತಿಳಿಯಿತು. ಈಗೇನು ಮಾಡಬೇಕು? ತಾಯಿಯ ಮಾತು ವೇದವಾಕ್ಯವೆಂದು ಮಕ್ಕಳು ಮನ್ನಿಸಿದರು.

ದ್ರುಪದನ ಜಿಜ್ಞಾಸೆ 70

ಈ ಬ್ರಾಹ್ಮಣ ವೇಷದವರು ಯಾರೆಂದು ದ್ರುಪದನಿಗೆ ಜಿಜ್ಞಾಸೆ. ಅದಕ್ಕೆ ಧೃಷ್ಟದ್ಯುಮ್ನನನ್ನು ಕಳಿಸಿದ. ಅವನು ರಾತ್ರಿಯಲ್ಲಿ ಮರೆಯಲ್ಲಿ ನಿಂತು ಅಪಲೋಕಿಸಿದ. ವೇಷದಿಂದ ಬ್ರಾಹ್ಮಣರಾದರೂ ನಡೆನುಡಿಗಳಿಂದ ಕ್ಷತ್ರಿಯರೆಂದು ತೀರ್ಮಾನಿಸಿದ. ದ್ರುಪದ ಅವರನ್ನು ಅರಮನೆಗೆ ಕರೆಸಿಕೊಂಡು ಪುನಃ ಪರೀಕ್ಷಿಸಿದ. ಅವರಿಗಾಗಿ ನಾಲ್ಕು ಮನೆಗಳನ್ನು ನಾಲ್ಕು ವರ್ಣದವರಿಗೆ ತಕ್ಕಂತೆ ಸಜ್ಜುಗೊಳಿಸಿದ. ಈ ಬ್ರಾಹ್ಮಣರು ಕ್ಷತ್ರಿಯರಿಗೆ ಯೋಗ್ಯವಾದ ಮನೆಯನ್ನೆ ಆರಿಸಿಕೊಂಡರು. ದ್ರುಪದನಿಗೆ ಸಮಾಧಾನವಾಯಿತು. ಬಳಿಕ ಅವರ ಬಾಯಿಯಿಂದಲೆ ತಾವು ಪಾಂಡವರೆಂಬುದನ್ನು ಕೇಳಿ ತಾನು ಧನ್ಯನಾದೆನು ಎಂದ.

ಒಬ್ಬಳು ಕನ್ಯೆ ಐವರಿಗೆ ಮನದನ್ನೆ 73

ಐವರಿಗೂ ದ್ರೌಪದಿಯಲ್ಲಿ ಮನಸಾಗಿತ್ತು. ದ್ರೌಪದಿಗೂ ಐವರಲ್ಲಿ ಮನಸಾಗಿತ್ತು. ಆದರೂ ಒಬ್ಬಳು ಕನ್ಯೆಯನ್ನು ಐವರು ಮದುವೆಯಾಗುವುದು ಹೇಗೆ? ದ್ರುಪದ ಒಪ್ಪಲು ಸಿದ್ಧನಿರಲಿಲ್ಲ. ವೇದವ್ಯಾಸರು ದಿವ್ಯದೃಷ್ಟಿ ನೀಡಿದರು. ಪಾಂಡವರ ದಿವ್ಯಸ್ವರೂಪ, ದ್ರೌಪದಿಯ ಶರೀರದಲ್ಲಿದ್ದ ಅವರ ಪತ್ನಿಯರ ದಿವ್ಯಸ್ವರೂಪ ಪ್ರತ್ಯಕ್ಷ ಕಂಡಾಗ ಒಪ್ಪಿ ಮದುವೆ ಮಾಡಿದ.

ಹತಾಶರಾದ ಕೌರವರ ಹಾರಾಟ 79

ಸೋತು ಹಿಂತಿರುಗಿದ್ದ ಕೌರವರು ತಿರುಗಿ ದ್ರುಪದನನ್ನು ಕೊಲ್ಲಲು ಬಂದರು. ಅವನ ಇಬ್ಬರು ಮಕ್ಕಳನ್ನು ಕೊಂದರು. ಭೀಮಾರ್ಜುನರು ಬಂದು ಅವರನ್ನು ಪುನಃ ಹೊಡೆದೋಡಿಸಿದರು.

ಭೀಮನಿಂದ ಕೌರವರಿಗೆ ಪಾಠ 80

ಕರ್ಣ ಭೂರಿಶ್ರವರು ಸೇರಿ ಅರ್ಜುನನನ್ನು ವಿರಥನನ್ನಾಗಿ ಮಾಡಿದಾಗ ಭೀಮ ದೊಡ್ಡ ಪುರವನ್ನು ಕಿತ್ತು ಅವರ ಕಡೆಗೆ ಬಂದ. ಆಗ ಎಲ್ಲರೂ ಪಲಾಯನ ಮಾಡಿದರು. ಬಳಿಕ ಒಂದು ವರ್ಷ ಕಾಲ ಪಾಂಡವರು ದ್ರುಪದನ ಬಳಿಯಲ್ಲಿ ಇದ್ದರು.

ಬೇಸ್ತು ಬಿದ್ದ ಧೃತರಾಷ್ಟ್ರ 80

ವಿದುರ ಧೃತರಾಷ್ಟ್ರನ ಮುಂದೆ ದ್ರೌಪದೀ ಸ್ವಯಂವರದ ಬಗ್ಗೆ ಹೇಳುತ್ತ 'ನಿನ್ನ ಮಕ್ಕಳಿಗೇ ಜಯವಾಯಿತು' ಎಂದ. ಧೃತರಾಷ್ಟ್ರನಿಗೆ ಪಾಂಡವರು ತಮ್ಮನ ಮಕ್ಕಳು, ಕೌರವರು ಸ್ವಂತ ಮಕ್ಕಳು. ಎಲ್ಲರೂ ಅವನಿಗೆ ಮಕ್ಕಳೆ ಎಂಬ ಅಭಿಪ್ರಾಯದಿಂದ ನಿನ್ನ ಮಕ್ಕಳು ಎಂದಿದ್ದ. ಆದರೆ ಧೃತರಾಷ್ಟ್ರನಿಗೆ 'ಮಕ್ಕಳೆ'ಂದರೆ ಕೌರವರೇ! ಸಂತೋಷದಿಂದ ವಿದುರನಿಗೆ ಬಹುಮಾನ ನೀಡಿದ. ಒಡನೆ 'ಪಾಂಡವರಿಗೆ ಜಯವಾಯಿತು'

ಎಂದು ವಿದುರ ಹೇಳಿದಾಗ ಧೃತರಾಷ್ಟ್ರನಿಗಾದ ನಿರಾಶೆ ಅಷ್ಟಿಷ್ಟಲ್ಲ. ಆದರೂ ಅದನ್ನು ತೋರಿಕೊಳ್ಳದೆ 'ಓಹೋ! ಹಾಗಾದರೆ ಇನ್ನೂ ಒಳ್ಳೆಯದಾಯಿತು, ಪಾಂಡವರು ಸತ್ತಿಲ್ಲ!' ಎಂದ.

ವಿದುರನ ಹಿತಬೋಧೆ **83**

ಪಾಂಡವರು ಇನ್ನೂ ದ್ರುಪದನ ಬಳಿಯೆ ಇದ್ದಾರೆ, ಅವರನ್ನು ಕರೆಸಿಕೊಂಡು ಅರ್ಧರಾಜ್ಯ ನೀಡು. ಇಲ್ಲದಿದ್ದರೆ ಕುಲನಾಶವಾದೀತು, ಅಪಕೀರ್ತಿ ಬಂದೀತೆಂದು ವಿದುರ ಎಚ್ಚರಿಸಿದ.

ಪಾಂಡವರು ತಿರುಗಿ ಹಸ್ತಿನಾವತಿಗೆ **85**

ಧೃತರಾಷ್ಟ್ರ ವಿದುರನ ಮೂಲಕ ಪಾಂಡವರನ್ನು ಕರೆಸಿಕೊಂಡ. ಜೊತೆಯಲ್ಲಿದ್ದರೆ ದ್ರೌಪದಿಯ ಸೌಂದರ್ಯಕ್ಕೆ ಮರುಳಾಗಿ ದುರ್ಯೋಧನ ಭೀಮನ ಕೈಯಲ್ಲಿ ಸಾಯಬಹುದೆಂಬ ಭೀತಿಯಿಂದ ಗಾಂಧಾರಿ ಪಾಂಡವರನ್ನು ಪಾಂಡುವಿನ ಮನೆಗೇ ಕಳಿಸಿದಳು. ಐದು ವರ್ಷಕಾಲ ಪಾಂಡವರು ಹಸ್ತಿನಾಪತಿಯಲ್ಲಿ ಇದ್ದರು.

ದ್ರೌಪದಿಯ ಪಂಚಪತಿತ್ವ ರಹಸ್ಯ **86**

ದ್ರೌಪದಿ ವಾಯುಪತ್ನಿ ಭಾರತೀದೇವಿಯ ಅವತಾರ. ಭೀಮನ ಭಾರ್ಯೆ. ಹಾಗಿದ್ದರೂ ಅವಳ ಶರೀರದಲ್ಲಿ ಶಚಿ ಶ್ಯಾಮಲೆ ಉಷೆಯರು ಇದ್ದರು. ಅದರಿಂದ ಅರ್ಜುನ ಧರ್ಮರಾಜ ನಕುಲ ಸಹದೇವರೂ ಪತಿಗಳಾದರು. ಅರ್ಜುನ ಉಳಿದ ದೇವಿಯರನ್ನು ಬಿಟ್ಟು ಕೇವಲ ಶಚಿಯನ್ನು ಮಾತ್ರ ಹೇಗೆ ರಮಿಸುತ್ತಾನೆ? ಈ ಪ್ರಶ್ನೆಗೆ ಮಹಾಭಾರತ ಹೇಳುತ್ತದೆ. ಅರ್ಜುನನ ಬಳಿಗೆ ದ್ರೌಪದಿ ಬರುವ ದಿನದಲ್ಲಿ ಶಚಿ ಮಾತ್ರ ಇದ್ದಾಳೆ, ಶ್ಯಾಮಲೆ ಉಷೆಯರಿಲ್ಲ, ಅಂದರೆ ಶರೀರದಲ್ಲಿ ಅವರಿಗೆ ಅಭಿಮಾನವಿಲ್ಲ, ಅದು ಮರಣದಂತೆಯೆ. ಮರಣವೆಂದರೆ ಶರೀರದಲ್ಲಿ ಅಭಿಮಾನ ತೊಲಗುವುದೆ ತಾನೆ? ಧರ್ಮರಾಜನ ದಿನದಲ್ಲಿ ಶ್ಯಾಮಲೆಗೆ ಮಾತ್ರ ಶರೀರದಲ್ಲಿ ಅಭಿಮಾನ ಬರುತ್ತದೆ. ಇದು ಹೊಸ ಜನ್ಮವೆ. ಏಕೆಂದರೆ ಹೊಸದಾಗಿ ಶರೀರಾಭಿಮಾನ ಬರುವುದೇ ಜನ್ಮ. ಹೀಗೇ ನಕುಲ ಸಹದೇವರ ದಿನಗಳಲ್ಲಿ ಉಷೆಗೆ ಮಾತ್ರ ಶರೀರಾಭಿಮಾನ. ಪ್ರತಿದಿನವೂ ಹೊಸಜನ್ಮ, ಹೊಸದಾಗಿ ಕನ್ಯೆಯಾಗಿ ಬರುತ್ತಾಳೆ. ಗಾಂಧರ್ವವಿಧಿಯಿಂದ ವಿವಾಹವಾಗಿ ರಮಿಸುತ್ತಾಳೆ. ಇದೆಲ್ಲವೂ ಅತಿಮಾನುಷ. ಲೋಕದಲ್ಲಿ ಕಂಡಿಲ್ಲ ಎಂದಮಾತ್ರಕ್ಕೆ ಇಲ್ಲವೆನ್ನುವಂತಿಲ್ಲ.

ಭಾನುಮತೀ ಸ್ವಯಂವರ **96**

ಪಾಂಡವರು ಹಿಡಿಂಬನ ಕಾಡಿನಲ್ಲಿದ್ದಾಗ ಅತ್ತ ದುರ್ಯೋಧನ ಕಾಶಿರಾಜನ ಮಗಳಾದ ಭಾನುಮತಿಯನ್ನು ಸ್ವಯಂವರ ಮಂಟಪದಿಂದ ಅಪಹರಿಸಿ ಮದುವೆಯಾದ. ಆಗ ಯುದ್ಧಕ್ಕೆ ಬಂದ ಜರಾಸಂಧಾದಿ ರಾಜರನ್ನು ಕರ್ಣನ ಮತ್ತು ತಮ್ಮಂದಿರ ಸಹಾಯದಿಂದ ಹಿಮ್ಮೆಟ್ಟಿಸಿದ.

ಕರ್ಣ ಗಿಟ್ಟಿಸಿದ ಭಾರೀ ಯಶಸ್ಸು **97**

ಕರ್ಣನ ಪರಾಕ್ರಮವನ್ನು ತಿಳಿಯದ ಜರಾಸಂಧ ರಾಜರುಗಳನ್ನು ಒಬ್ಬೊಬ್ಬರಾಗಿ ಅವನ ಬಳಿ ಯುದ್ಧಕ್ಕೆ ಕಳಿಸಿದ. ಅವರೆಲ್ಲರೂ ಸೋತರು. ಬಳಿಕ ಜರಾಸಂಧ ತಾನೆ ಬಂದ. ಮುಷ್ಟಿಯುದ್ಧದಲ್ಲಿ ಕರ್ಣ ಜರಾಸಂಧನಿಗೆ ಬೇರೆ ಎಲ್ಲಿಯೂ ಹೊಡೆಯದೆ ಮರ್ಮಸ್ಥಳಕ್ಕೆ ಹೊಡೆಯಲು ತೊಡಗಿದ. ಹುಟ್ಟಿದಾಗ ಜರೆ ಎಂಬ ರಾಕ್ಷಸಿ ಎರಡು ಹೋಳುಗಳನ್ನು ಜೊತೆ ಸೇರಿಸಿದ ಭಾಗ ಅವನಿಗೆ ಮರ್ಮಸ್ಥಾನವಾಗಿತ್ತು. ಅದನ್ನು ಕರ್ಣ ತಿಳಿದನೆಂದು ಮೆಚ್ಚಿ ಅವನೊಡನೆ ಮೈತ್ರಿ ಒಪ್ಪಂದ ಮಾಡಿಕೊಂಡು ತನ್ನ ಪಶದಲ್ಲಿದ್ದ ಅಂಗರಾಜ್ಯದ

ಒಂದು ಭಾಗವನ್ನು ಕೊಟ್ಟ. ಇನ್ನೊಂದು ಭಾಗವನ್ನು ಅಂದೇ ದುರ್ಯೋಧನ ಕರ್ಣನಿಗೆ ಕೊಟ್ಟು ಪಟ್ಟಾಭಿಷೇಕ ಮಾಡಿದ್ದ. ಜರಾಸಂಧನೊಡನೆ ಹದಿನೆಂಟು ಬಾರಿ ಯುದ್ಧ ಮಾಡಿಯೂ ಕೃಷ್ಣ ಅವನನ್ನು ಕೊಲ್ಲದೆ ತಾನೇ ಓಡಿರುವಾಗ, ಒಂದೇ ಬಾರಿ ಯುದ್ಧ ಮಾಡಿ, ಕರ್ಣ ಅವನನ್ನು ಪರಾಭವಗೊಳಿಸಿದ. ಕರ್ಣನಿಗೆ ಕೃಷ್ಣನೂ ಸಮನಲ್ಲ ಎಂಬ ಯಶಸ್ಸು ಕರ್ಣನದಾಯಿತು.

ಕೌರವನ ಸಂತತಿ **100**

ದುರ್ಯೋಧನ ಕಲಿ. ಅವನ ಹೆಂಡತಿ ಭಾನುಮತಿಯೂ ಕಲಿಯ ಮಡದಿಯಾದ ಅಲಕ್ಷ್ಮಿ. ಅವಳಲ್ಲಿ ರಾವಣನ ಮಗನಾದ ಅಕ್ಷಕುಮಾರ ಲಕ್ಷಣ ಎಂಬ ಹೆಸರಿನಿಂದ ಹುಟ್ಟಿದ. ಷಣ್ಮುಖನ ಪತ್ನಿ ಲಕ್ಷಣೆಯಾಗಿ ಹುಟ್ಟಿದಳು. ಅವಳನ್ನು ಮುಂದೆ ಷಣ್ಮುಖನ ಅವತಾರನಾದ ಕೃಷ್ಣಪುತ್ರ ಸಾಂಬ ಮದುವೆಯಾಗುತ್ತಾನೆ.

ಕೌರವನಿಗೆ ಭಾರೀ ಸೋಲು **102**

ಕಲಿಂಗ ರಾಜ ಸುವಜ್ರನ ಮಗಳನ್ನೂ ದುರ್ಯೋಧನ ಅಪಹರಿಸಲು ಹೋಗಿ ಅವನಿಗೆ ಸೆರೆಸಿಕ್ಕಿದ. ಭೀಷ್ಮ ಧೃತರಾಷ್ಟ್ರ ವಿದುರ ಧರ್ಮರಾಜ ಇವರೆಲ್ಲರ ಮಾತಿಗೆ ಕಟ್ಟುಬಿದ್ದು ಭೀಮ ಸುವಜ್ರನನ್ನು ಕೊಂದು ದುರ್ಯೋಧನನನ್ನು ಬಿಡಿಸಿ ತಂದ. ಕೌರವರೂ ಕರ್ಣನೂ ಅಪಮಾನದಿಂದ ಸತ್ತವರಂತೆ ಹಸ್ತಿನಾವತಿಗೆ ಹಿಂತಿರುಗಿದರು.

ಧರ್ಮರಾಜನಿಗೆ ಇಂದ್ರಪ್ರಸ್ಥ **102**

ಕೌರವ ಪಾಂಡವರೊಳಗಿನ ವಿರೋಧ ಹೆಚ್ಚಾಗುತ್ತಿರುವುದನ್ನು ಕಂಡು ಧೃತರಾಷ್ಟ್ರ ಧರ್ಮರಾಜನಿಗೆ ಅರ್ಧರಾಜ್ಯವಿತ್ತು ಇಂದ್ರಪ್ರಸ್ಥಕ್ಕೆ ಕಳಿಸಿದ. ಧರ್ಮರಾಜ ರಾಜನಾದ. ಭೀಮ ಯುವರಾಜನಾದ. ಇಬ್ಬರನ್ನೂ ವೇದವ್ಯಾಸರು ಅಭಿಷೇಕಮಾಡಿ ಆಶೀರ್ವದಿಸಿದರು. ಹಸ್ತಿನಾವತಿಯ ಪ್ರಜೆಗಳು ಪಾಂಡವರ ಅಗಲಿಕೆಯನ್ನು ಸಹಿಸಲಾರದೆ ಹಿಂಬಾಲಿಸಿದರು. ಧರ್ಮರಾಜನ ಮಾತನ್ನು ಮನ್ನಿಸಿ ಹಿಂತಿರುಗಿದರು. ಇತ್ತ ದುರ್ಯೋಧನನಿಗೆ ರಾಜಪದವಿಯಲ್ಲಿ, ದುಃಶಾಸನನಿಗೆ ಯುವರಾಜ ಪದವಿಯಲ್ಲಿ ಧೃತರಾಷ್ಟ್ರ ಅಭಿಷೇಕ ಮಾಡಿದ.

ಅಧ್ಯಾಯ 20

ಖಾಂಡವದಹನ

ಇಂದ್ರಪ್ರಸ್ಥದಲ್ಲಿ ಪಾಂಡವರು **111**

ರಾಜಾ ಯುಧಿಷ್ಠಿರ ಯಜ್ಞ, ದಾನ, ಋಷಿಮುನಿಗಳ ಸತ್ಕಾರ, ತತ್ವ ವಿಚಾರಾದಿ ಕಾರ್ಯಗಳನ್ನು ತಾನು ವಹಿಸಿಕೊಂಡು ರಾಷ್ಟ್ರ ರಕ್ಷಣೆ ಧರ್ಮರಕ್ಷಣೆ ಮುಂತಾದುವನ್ನು ಭೀಮನಿಗೆ ಬಿಟ್ಟುಕೊಟ್ಟ. ಪರ ರಾಷ್ಟ್ರಗಳನ್ನು ಅಂಕೆಯಲ್ಲಿ ಇಟ್ಟುಕೊಳ್ಳುವುದು ಅರ್ಜುನನ ಪಾಲಿಗೆ ಬಂದಿತ್ತು. ಅವನಿಗೆ ವಶವಾಗದ ಜರಾಸಂಧ ಕೀಚಕ ಮುಂತಾದವರನ್ನು ಭೀಮನೆ ನೋಡಿಕೊಳ್ಳುತ್ತಿದ್ದ. ಅವರು ಹಿಂದೆ ಎಲ್ಲೆಡೆ ಶೈವ ಮತಪ್ರಚಾರ ಮಾಡುತ್ತಿದ್ದರು. ಈಗ ಭೀಮನೆ ಎಲ್ಲ ಕಡೆ ವೈಷ್ಣವ ಧರ್ಮಪ್ರಸಾರ ಮಾಡಲು ತೊಡಗಿದ. ದ್ರೌಪದಿ ಸ್ತ್ರೀಧರ್ಮ ಶಿಕ್ಷಣ ಕೋಶರಕ್ಷಣೆ ಮುಂತಾದುವನ್ನು ನೋಡಿಕೊಂಡಳು. ನೌಕರರಿಗೆ ವೇತನ

ನೀಡುವುದು ನಕುಲನ ಕಾರ್ಯ. ಪರರಾಜರೊಡನೆ ಸಂಧಿ ಭೇದ ದಂಡ ಮುಂತಾದ ನೀತಿ ಪ್ರಯೋಗ ಮಾಡುವವ ಧರ್ಮರಾಜನ ಬಳಿ ಅಂಗರಕ್ಷಕ ಸಹದೇವ. ಪಾಂಡವರ ರಾಜ್ಯದಲ್ಲಿ ಧರ್ಮ ಕೃತಯುಗದಂತೆ ಸುಸ್ಥಿತಿಯಲ್ಲಿ ಇದ್ದಿತು. ಅದರಿಂದ ಸಂಪತ್ತೂ ಸಮೃದ್ಧಿಯಾಗಿತ್ತು. ಸಾಕ್ಷಾತ್ ಶ್ರೀಕೃಷ್ಣ ಪ್ರೀತಿಯಿಂದ ಸದಾ ಅಲ್ಲಿ ಪ್ರತ್ಯಕ್ಷವಾಗಿ ನೆಲೆಸಿದ್ದರಿಂದ ಎಲ್ಲ ದೇವತೆಗಳೂ ಮುನಿಗಳೂ ಅವನ ಆರಾಧನೆಗಾಗಿ ಅಲ್ಲಿಗೇ ಬರುತ್ತಿದ್ದರು.

ದೇವಕೀ ಧರ್ಮರಾಜರ ವಿವಾಹ **115**

ದ್ರೌಪದೀ ಶರೀರದಲ್ಲಿ ಒಂದು ಅಂಶದಿಂದ ಇದ್ದ ಶ್ಯಾಮಲೆಯೆ ಇನ್ನೊಂದು ಅಂಶದಿಂದ ಶಿಶುಪಾಲನ ಮಗಳು ದೇವಕಿಯಾಗಿಯೂ ಅವತರಿಸಿ ಧರ್ಮರಾಜನನ್ನು ಮದುವೆಯಾದಳು. ಇವಳ ಸೋದರ ಧೃಷ್ಟಕೇತು. ಇವನು ಹಿಂದೆ ಪ್ರಹ್ಲಾದನ ತಮ್ಮನಾದ ಅನುಹ್ಲಾದ. ಸವಿತನೆಂಬ ಸೂರ್ಯನ ಅಂಶದಿಂದ ಕೂಡಿದ್ದ.

ಕಾಲೀ ಸ್ವಯಂವರ **115**

ದ್ರೌಪದಿಯಾಗಿ ಅವತರಿಸಿದ ಭಾರತಿ ಇನ್ನೊಂದು ಅಂಶದಿಂದ ಕಾಶಿರಾಜಕುಮಾರಿ ಕಾಳೀದೇವಿಯಾಗಿ ಅವತರಿಸಿದಳು. ಅವಳ ಶರೀರದಲ್ಲಿ ಬೇರೆ ದೇವಿಯರಿರಲಿಲ್ಲ. ರಾಜ ಅವಳ ಸ್ವಯಂವರವನ್ನು ಏರ್ಪಡಿಸಿದ್ದ. ಅವಳು ಭೀಮನನ್ನು ವರಿಸಿ ವಿವಾಹವಾದಳು.

ಭೀಮಸೇನನ ತತ್ವವಾದ **117**

ಕನ್ಯಾರ್ಥಿಗಳಾಗಿ ಬಂದಿದ್ದ ರಾಜರು ಶೈವರು ವೈಷ್ಣವಾಗ್ರೇಸರನಾದ ಭೀಮನ ಮೇಲೆ ಆಕ್ರಮಣ ಮಾಡಲು ಬಂದರು. ಮೊದಲಿಗೆ ವಾಗ್ಯುದ್ಧ. ಭೀಮ ಅವರನ್ನು ವಾದದಲ್ಲಿ ಗೆದ್ದ. ಶೈವಶಾಸ್ತ್ರಗಳಲ್ಲಿಯೇ ವಿಷ್ಣು ಸರ್ವೋತ್ತಮತ್ವದ ಅಂಶ ಹೇಗೆ ನುಸುಳಿದೆ ಎಂಬುದನ್ನು ತೋರಿಸಿ ಅವರನ್ನು ನಿರುತ್ತರಗೊಳಿಸಿದ. ಬಳಿಕ ಶಸ್ತ್ರಯುದ್ಧ ನಡೆಯಿತು.

ಭೀಮಸೇನನಿಗೆ ಗೆಲುವು **126**

ಭೀಮ ಜರಾಸಂಧನನ್ನು ಕಟ್ಟಿ ಗಂಗಾನದಿಯಲ್ಲಿ ಹಾಕಿದ. ಗಂಗೆ ವಿಷ್ಣುಪಾದೋದಕವೆಂದು ಅದರಲ್ಲಿ ಸ್ನಾನ ಮಾಡುವದಿರಲಿ ಅದು ಹರಿವ ಧ್ವನಿಯನ್ನು ಕೇಳಬಾರದೆಂದು ಸದಾ ನಗಾರಿ ಬಾರಿಸುತ್ತಿದ್ದವ ಜರಾಸಂಧ. ಗಂಗೆಯಲ್ಲಿ ಬಿದ್ದಾಗ ಅವನಿಗೆ ಮೈಗೆ ಬೆಂಕಿ ಹಚ್ಚಿದಂತಾಯಿತು. ಭೀಮ ವಿಜಯಿಯಾಗಿ ಕಾಳೀದೇವಿಯಲ್ಲಿ ಶರ್ವತ್ರಾತನೆಂಬ ಮಗನನ್ನು ಪಡೆದ. ಈತ ಸಮಾನ ವಾಯುವಿನ ಅವತಾರ.

ಶತಧನ್ವ ಸಂಹಾರ **127**

ಶತಧನ್ವ ರಾತ್ರಿ ಮಲಗಿದ್ದ ಸತ್ರಾಜಿತನನ್ನು ಕೊಂದು ಸ್ಯಮಂತಕ ಮಣಿಯನ್ನು ಅಕ್ರೂರನ ಕೈಯಲ್ಲಿಟ್ಟು ಪಲಾಯನ ಮಾಡಿದ. ಕೃಷ್ಣ ರಾಮರು ಬೆನ್ನಟ್ಟಿದರು. ಮಿಥಿಲೆಯ ಬಳಿ ಅವನ ಕುದುರೆ ಬಿದ್ದು ಸತ್ತಿತು. ಕಾಲ್ನಡೆಯಿಂದ ಓಡಿದ. ಕೃಷ್ಣನೂ ರಥದಿಂದಿಳಿದು ಬೆನ್ನಟ್ಟಿ ಹೋಗಿ ಸಂಹರಿಸಿದ. ಅವನು ಉಟ್ಟ ಬಟ್ಟೆಯನ್ನು ಶೋಧಿಸಿ, 'ಅಣ್ಣ ಇವನಲ್ಲಿ ಮಣಿ ಇಲ್ಲ ಎಂದ. ಬಲರಾಮ ನಂಬಲಿಲ್ಲ. ಅಸಮಾಧಾನಪಟ್ಟು ಐದು ವರ್ಷ ಕಾಲ ವಿದೇಹ ನಗರದಲ್ಲಿಯೆ ವಾಸ ಮಾಡಿದ.

ಕೌರವನಿಗೆ ಸುಭದ್ರೆಯಲ್ಲಿ ಮೋಹ **129**

'ಕೃಷ್ಣ ರಾಮರೊಳಗೆ ಈಗ ಒಡಕು ಉಂಟಾಗಿದೆ. ಅದರ ಲಾಭ ಪಡೆಯಬೇಕು. ಕೃಷ್ಣನನ್ನು ತನ್ನ ಕಡೆಗೆ

ಸೆಳೆದುಕೊಳ್ಳುವುದು ಅಶಕ್ಯ. ಅದರಿಂದ ಬಲರಾಮನನ್ನು ವಶಮಾಡಿಕೊಳ್ಳಬೇಕು. ಕೃಷ್ಣನ ತಂಗಿ ಸುಭದ್ರೆ ನನಗೆ ಬೇಕು. ಬಲರಾಮ ಅವಳನ್ನು ನನಗೆ ಕೊಡುವೆನೆಂದರೆ ಕೃಷ್ಣ ಇಲ್ಲವೆನ್ನುವಂತಿಲ್ಲ' ಎಂದು ಬಗೆದು ಬಲರಾಮನ ಬಳಿ ವಿದ್ಯಾಭ್ಯಾಸದ ನೆಪದಿಂದ ಬಂದ. ಮನ ಒಲಿಸಿಕೊಂಡು ಸುಭದ್ರೆಯನ್ನು ಬೇಡಿದ. ಕೊಡುವೆನೆಂದು ಆಶ್ವಾಸನೆಯನ್ನೂ ಪಡೆದ. ಸುಭದ್ರೆ ಹಿಂದೆ ತ್ರಿಜಟೆ ಎಂಬ ರಾಕ್ಷಸಿ. ಸೀತಾದೇವಿಗೆ ಅಶೋಕವನದಲ್ಲಿಯೂ ಮುಂದೆ ಅಯೋಧ್ಯೆಯಲ್ಲಿಯೂ ಸದಾ ಸೇವೆ ಮಾಡಿದ್ದಳು. ಅದರ ಫಲವಾಗಿ ಪಾರ್ವತಿಯ ಆವೇಶಯುಕ್ತಳಾಗಿ ಬಲು ಸುಂದರವಾದ ರೂಪದಿಂದ ಜನಿಸಿದಳು. ಕೃಷ್ಣನ ಪ್ರೀತಿಯ ತಂಗಿ ಎನಿಸಿದಳು.

ಸ್ಯಮಂತಕ ಮಣಿ ಅಕ್ರೂರನಿಗೇ ಇರಲಿ 131

ಶ್ರೀಕೃಷ್ಣ ಬಲರಾಮನನ್ನೂ ಅಕ್ರೂರನನ್ನೂ ದ್ವಾರಕೆಗೆ ಕರೆಸಿಕೊಂಡ ಬಲರಾಮನ ಮುಂದೆ ಅಕ್ರೂರನಿಗೆ 'ನಿನ್ನಲ್ಲಿ ಇರುವ ಸ್ಯಮಂತಕಮಣಿಯನ್ನು ತೆಗೆದುತೋರಿಸು' ಎಂದ. ಅಕ್ರೂರ ಭಯದಿಂದ ತೆಗೆದು ತೋರಿಸಿದ. ಬಲರಾಮನ ಸಂಶಯ ದೂರವಾಯಿತು. ಮಣಿ ಬಲರಾಮ ಉಗ್ರಸೇನ ಜಾಂಬವತಿ ಇವರೆಲ್ಲರಿಗೂ ಬೇಕೆನಿಸಿತ್ತು. ಸತ್ಯಭಾಮೆ ಕೃಷ್ಣನಿಗೆ ಬೇಡವಾದುದನ್ನು ತನಗೆ ಬೇಕೆನ್ನುವವಳಲ್ಲ. ಆದರೂ ಕೃಷ್ಣನೆಂದ 'ತಂದೆಯ ಸೊತ್ತು ಮಗಳಿಗೇ ಸೇರುವುದು ನ್ಯಾಯ. ಆದರೂ ಮಣಿ ಅಕ್ರೂರನಿಗೆ ಇರಲಿ ಅವನು ಸದಾ ಯಜ್ಞ ಮಾಡುತ್ತಾನೆ. ಶುಚಿಯಾಗಿರುತ್ತಾನೆ'. ಭಾಗವತದಲ್ಲಿ ಸತ್ಯಭಾಮೆ ಮಣಿಯನ್ನು ಬಯಸಿದಂತೆ ಕಾಣುತ್ತದೆ. ವಸ್ತುತಃ ಅದು ಭಾಗವತದ ಅಭಿಪ್ರಾಯವಲ್ಲ.

ಕಾಳಿಂದೀ ವಿವಾಹ 135

ಯಮುನೆಯ ತಂಗಿ ಕಾಳಿಂದಿ. ಸೂರ್ಯನ ಮಗಳು. ಕೃಷ್ಣನನ್ನೆ ಪತಿಯನ್ನಾಗಿ ಪಡೆಯಲು ತಪಸ್ಸು ಮಾಡುತ್ತಿದ್ದವಳು. ಶ್ರೀಕೃಷ್ಣ ಅವಳನ್ನು ಮದುವೆಯಾದ.

ನೀಲಾ ಸ್ವಯಂವರ 135

ರಾಜಾ ನಗ್ನಜಿತನ ಕುಮಾರಿ ನೀಲಾದೇವಿ. ಅವಳ ಸ್ವಯಂವರದಲ್ಲಿ ಏಳು ಗೂಳಿಗಳನ್ನು ಒಬ್ಬನೆ ಏಕಕಾಲದಲ್ಲಿ ಹಿಡಿದು ಕಟ್ಟಿ ಹಾಕುವುದು ಪಣ. ಶ್ರೀಕೃಷ್ಣ ಹಾಗೇ ಮಾಡಿ ನೀಲೆಯನ್ನು ಮದುವೆಯಾದ. ಹಿಂದೆ ಯಶೋದೆಯ ಅಣ್ಣನಾದ ಕುಂಭಕನ ಮಗಳು ನೀಲೆಯನ್ನು ಹೀಗೇ ಏಳು ಗೂಳಿಗಳನ್ನು ಕಟ್ಟಿ ಮದುವೆಯಾಗಿದ್ದ. ಆ ನೀಲೆ ಈ ನೀಲೆ ಒಬ್ಬಳೆ ಎರಡು ರೂಪಗಳಿಂದ ಜನಿಸಿದವರು. ಇಬ್ಬರೂ ಸೇರಿ ಒಂದಾದರು. ಅದರಿಂದ ಅಷ್ಟಮಹಿಷಿಯರಲ್ಲಿ ನೀಲೆ ಒಬ್ಬಳೆ.

ಮಿತ್ರವಿಂದಾ ಭದ್ರಾವಿವಾಹ 137

ಕೃಷ್ಣನ ಸೋದರತ್ತೆ ರಾಜಾಧಿದೇವಿಯ ಮಗಳು ಮಿತ್ರವಿಂದೆ. ಇನ್ನೊಬ್ಬಳು ಸೋದರತ್ತೆ ಶ್ರುತಕೀರ್ತಿಯ ಮಗಳು ಭದ್ರೆ. ಮಿತ್ರವಿಂದೆಯ ಸೋದರರು ವಿಂದ ಅನುವಿಂದರು ಅವಳನ್ನು ದುರ್ಯೋಧನನಿಗೆ ಕೊಡಬೇಕೆಂದಿದ್ದರು. ಕೃಷ್ಣ ಅವರನ್ನು ಪರಾಭವಗೊಳಿಸಿ ಮಿತ್ರವಿಂದೆಯನ್ನು ಮದುವೆಯಾದ. ಭದ್ರೆಯ ಸೋದರರು ಐವರು ವಿಶ್ವೇದೇವತೆಗಳ ಅವತಾರ ಭೂತರು. ಅವರೇ ಭದ್ರೆಯನ್ನು ಕೃಷ್ಣನಿಗೆ ಕೊಟ್ಟು ಮದುವೆ ಮಾಡಿದರು.

ಲಕ್ಷಣಾ ಸ್ವಯಂವರ 138

ಮೇಲೆ ಮತ್ಸ್ಯಯಂತ್ರ, ಅದರ ದ್ವಾರ ಮೇಲ್ಭಾಗದಲ್ಲಿ. ಕೆಳಗೆ ನೀರಿನಲ್ಲಿ ಪ್ರತಿಬಿಂಬ ಕಂಡು ಒಂದು

ಮುರಿದ ಬಾಣ ಎಸೆಯಬೇಕು. ಬಾಣ ಮೇಲೆ ಹೋಗಿ ಕೆಳಗೆ ಬೀಳುವಾಗ ಮತ್ಸ್ಯವನ್ನು ಕೆಡಹಿ ಬೀಳಬೇಕು. ಇದು ಲಕ್ಷಣಾ ಸ್ವಯಂವರದಲ್ಲಿ ಪಣ. ದ್ರೌಪದೀ ಸ್ವಯಂವರದಲ್ಲಿ ಮತ್ಸ್ಯಯಂತ್ರಕ್ಕೆ ದ್ವಾರ ಕೆಳಭಾಗದಲ್ಲಿಯೆ ಇದ್ದಿತು. ಬಾಣಗಳೂ ಚೆನ್ನಾಗಿಯೆ ಇದ್ದುವು. ಅದಕ್ಕೆ ಹೋಲಿಸಿದರೆ ಇದು ಇನ್ನೂ ಹೆಚ್ಚು ಅಶಕ್ಯ. ದುರ್ಯೋಧನ ಜರಾಸಂಧ ಕರ್ಣರು ಬಿಲ್ಲಿಗೆ ಹೆದೆ ಏರಿಸಿದರು. ಲಕ್ಷ್ಯವನ್ನು ಕಾಣದಾದರು. ಅರ್ಜುನ ಲಕ್ಷ್ಯವನ್ನು ಕಂಡ. ಬಾಣವನ್ನೂ ಎಸೆದ. ಆದರೆ ಬಾಣ ಲಕ್ಷ್ಯವನ್ನು ಭೇದಿಸಲಿಲ್ಲ. ಭೇದಿಸದಂತೆ ಸ್ಪರ್ಶ ಮಾತ್ರ ಮಾಡುವಂತೆಯೆ ಜಾಗರೂಕತೆಯಿಂದ ಬಾಣಪ್ರಯೋಗ ಮಾಡಿ ತನ್ನ ಕೌಶಲವನ್ನು ಮೆರೆದ. ಲಕ್ಷಣೆ ಕೃಷ್ಣನಿಗೇ ಸೇರಬೇಕು. ತಾನು ಲಕ್ಷ್ಯವನ್ನು ಭೇದಿಸಕೂಡದು ಎಂದೇ ಹಾಗೆ ಮಾಡಿದ್ದ. ಮಹಾಭಾಗವತೋತ್ತಮನಾದ ಭೀಮ ಬಿಲ್ಲಿನ ಕಡೆಗೆ ದೃಷ್ಟಿಯನ್ನೇ ಹಾಕಲಿಲ್ಲ. ಬಳಿಕ ಕೃಷ್ಣನೆ ಲಕ್ಷ್ಯಭೇದ ಮಾಡಿ ಶತ್ರು ರಾಜರನ್ನು ಹೊಡೆದೋಡಿಸಿ ಕನ್ಯೆಯನ್ನು ಪರಿಗ್ರಹಿಸಿದ.

ಅಷ್ಟಮಹಿಷಿಯರು **142**

ರುಕ್ಮಿಣೀ ಸತ್ಯಭಾಮಾ ಜಾಂಬವತೀ ಕಾಳಿಂದೀ ನೀಲಾ ಭದ್ರಾ ಮಿತ್ರವಿಂದಾ ಲಕ್ಷಣಾ ಇವರು ಶ್ರೀಕೃಷ್ಣನ ಪತ್ನಿಯರಲ್ಲಿ ಪ್ರಧಾನರಾದ ಅಷ್ಟಮಹಿಷಿಯರು. ರುಕ್ಮಿಣೀ ಸತ್ಯಭಾಮೆಯರು ಮಹಾಲಕ್ಷ್ಮೀಸ್ವರೂಪರು. ಉಳಿದವರೂ ವಿಷ್ಣುಪತ್ನಿಯರೆ. ರಮಾವೇಶ ಪ್ರಯುಕ್ತ ಪತ್ನಿಯರಾದವರು. ರಮಾವೇಶ ಹೆಚ್ಚಿದಂತೆಲ್ಲ ಕೃಷ್ಣನಿಗೆ ಹೆಚ್ಚು ಪ್ರೀತಿಪಾತ್ರರಾಗುತ್ತಿದ್ದರು. ಜಾಂಬವತಿಯಲ್ಲಿ ರಮಾವೇಶ ಯಾವಾಗಲೂ ಹೆಚ್ಚಾಗಿದ್ದರಿಂದ ಬಲರಾಮನಷ್ಟು ಪ್ರೀತಿಪಾತ್ರಳಾಗಿದ್ದಳು. ಆರು ಮಂದಿಯಲ್ಲಿ ಪ್ರಧಾನಳೂ ಆಗಿದ್ದಳು. ರಮಾವೇಶ ಕಡಿಮೆಯಿರುವಾಗ ಎಲ್ಲರೂ ಬಲರಾಮನಿಗಿಂತ ಐದು ಗುಣ ಕಡಿಮೆ, ಪ್ರದ್ಯುಮ್ನನಿಗಿಂತ ಇಪ್ಪತ್ತು ಗುಣ ಹೆಚ್ಚು.

ಧನ್ಯಾಶ್ಚರ್ಯೋಪಾಖ್ಯಾನ **144**

ದ್ವಾರಕೆಯ ನವನಿರ್ಮಾಣವನ್ನು ಕಾಣುವ ಕುತೂಹಲದಿಂದ ಬಂದು ರೈವತಕ ಪರ್ವತದಲ್ಲಿ ಬೀಡುಬಿಟ್ಟಿದ್ದ ರಾಜರುಗಳ ಮಧ್ಯದಲ್ಲಿ ರುಕ್ಮಿಣೀಸಹಿತ ಶ್ರೀಕೃಷ್ಣ ಕುಳಿತಿದ್ದಾಗ ನಾರದರು ಬಂದು 'ಕೃಷ್ಣ ನೀನೆ ಧನ್ಯ, ಆಶ್ಚರ್ಯ!' ಎಂದರು. 'ನೀನೆ ಸರ್ವೋತ್ತಮ, ನಿನಗೆ ಸಮಾನರಿಲ್ಲ' ಎಂದರ್ಥ. 'ದಕ್ಷಿಣೆಯರೊಂದಿಗೆ' ಎಂದ ಶ್ರೀಕೃಷ್ಣ. 'ತಿಳಿಯಿತು!' ಎಂದರು ನಾರದರು. ರಾಜರಿಗೆ ಇವು ಒಗಟುಗಳಾದವು. ಏನೆಂದು ಕೇಳಿದರು. ನಾರದರು ಹೇಳಿದರು. 'ನಾನು ಕೂರ್ಮ ಗಂಗೆ ವರುಣ ಪಾರ್ವತಿ ಶಿವರನ್ನು ನೀವು ಸರ್ವೋತ್ತಮರೆ? ಎಂದು ವಿಚಾರಿಸಿದಾಗ ವೇದಾಭಿಮಾನಿನಿ ರಮೆಯನ್ನೆ ಶ್ರೇಷ್ಠಳು ಎಂದರು. ವೇದಾಭಿಮಾನಿನಿ ಯಜ್ಞಾಭಿಮಾನಿನಿಯನ್ನು ಉತ್ತಮಳು ಎಂದಳು. ಯಜ್ಞಾಭಿಮಾನಿನಿ ಹರಿಯನ್ನು ಉತ್ತಮಳೆಂದಳು'. ಈಗ ಕೃಷ್ಣ ಹೇಳಿದ, 'ದಕ್ಷಿಣಾಭಿಮಾನಿನಿಯೂ ಉತ್ತಮಳು. ಅವಳಿಗಿಂತ ನಾನು ಉತ್ತಮ' ಎಂದು. ಅದರಿಂದ ಅವನೆ ಸರ್ವೋತ್ತಮ. ಅವನಿಗಿಂತ ವೇದಯಜ್ಞದಕ್ಷಿಣಾಭಿಮಾನಿನಿ ರಮೆ ಕಡಿಮೆಯವಳು, ಅವಳಿಗಿಂತ ಬ್ರಹ್ಮಾದಿಗಳು ಕಡಿಮೆಯವರು' ನಾರದರು ಹೀಗೆ ಹೇಳಿದಾಗ ಕುಂತಿಯ ಪ್ರಾರ್ಥನೆಯಂತೆ ಕ್ರೀಡಾಯುದ್ಧದಲ್ಲಿ ಶ್ರೀಕೃಷ್ಣ ಕ್ಷಣಮಾತ್ರದಲ್ಲಿ ಎಲ್ಲ ರಾಜರುಗಳನ್ನೂ ಗೆದ್ದು ತಾನು ಸರ್ವಶಕ್ತ, ಸರ್ವೋತ್ತಮನೆಂಬುದನ್ನು ಸ್ಪಷ್ಟಗೊಳಿಸಿದ.

ಸತ್ಯಭಾಮೆಯ ಕೋಪ **158**

ನಾರದರು ದೇವಲೋಕದ ಪಾರಿಜಾತದ ಒಂದು ಹೂವನ್ನು ರುಕ್ಮಿಣಿಗೆ ಕೊಟ್ಟರು. ಸತ್ಯಭಾಮೆ ಸವತಿ ಮಾತ್ಸರ್ಯವನ್ನು ನಟಿಸುತ್ತ ಕುಪಿತಳಾದಂತೆ ತೋರಿಕೊಂಡಳು. ಕೃಷ್ಣ ಸಮಾಧಾನ ಮಾಡುತ್ತ, 'ನಾನು ನಿನಗೆ ಪಾರಿಜಾತದ ಗಿಡವನ್ನೇ ತಂದುಕೊಡುವೆ' ನೆನ್ನುತ್ತ ಸಮಾಧಾನ ಪಡಿಸಿದ.

ಪ್ರಾಗ್‌ಜ್ಯೋತಿಷಕ್ಕೆ ಪ್ರಯಾಣ **159**

ಅದೇ ಸಮಯದಲ್ಲಿ ದೇವೇಂದ್ರ ಬಂದು ಕೃಷ್ಣನನ್ನು ಪ್ರಾರ್ಥಿಸಿದ, 'ನರಕಾಸುರ ಬ್ರಹ್ಮನ ವರದಿಂದ ಅಜೇಯನಾಗಿ ದೇವಮಾತೆ ಅದಿತಿಯ ಕುಂಡಲಗಳನ್ನೂ ಅಪಹರಿಸಿದ್ದಾನೆ, ಅವನನ್ನು ಸಂಹರಿಸು' ಎಂದು. ಶ್ರೀಕೃಷ್ಣ ಗರುಡಾರೂಢನಾಗಿ ಹೊರಟ. ಸತ್ಯಭಾಮೆಯೂ ಆಗ ಭೀಮ ದ್ವಾದಶೀವ್ರತ ಕೋಟಿಧಾರಾಸ್ನಾನಗಳನ್ನು ಮಾಡಿ ಜೊತೆಗೆ ಹೊರಟಳು. ಇಬ್ಬರೂ ಪ್ರಾಗ್‌ಜ್ಯೋತಿಷಕ್ಕೆ ಹೋದರು.

ನರಕಾಸುರನ ಬಲ **161**

ಭೂದೇವಿಯಲ್ಲಿ ಶ್ರೀವರಾಹನಿಂದ ಜನಿಸಿದವ ನರಕಾಸುರ. ಅವನಲ್ಲಿ ವರಾಹನಿತ್ತ ವೈಷ್ಣವಾಸ್ತ್ರ, ಬ್ರಹ್ಮನಿತ್ತ ಶತಘ್ನಿಗಳಿದ್ದವು. ಗಿರಿದುರ್ಗ, ಜಲದುರ್ಗ, ಪಾಶದುರ್ಗಗಳು, ಮುರ, ಪೀಠ, ಹಯಗ್ರೀವ, ಪಂಚಜನ, ನಿಶುಂಭ ಎಂಬ ಐವರು ಅಜೇಯರಾದ ಮಂತ್ರಿಗಳು, ಆ ಮಂತ್ರಿಗಳ ಅಜೇಯರಾದ ಏಳೇಳು ಮಂದಿ ಮಕ್ಕಳು ಈ ಎಲ್ಲ ಕಾರಣಗಳಿಂದ ನರಕಾಸುರ ಅಜೇಯನಾಗಿದ್ದ.

ನರಕಾಸುರನೊಡನೆ ಯುದ್ಧ **163**

ಎಲ್ಲ ದುರ್ಗಗಳನ್ನೂ ಭೇದಿಸಿ, ಮಂತ್ರಿಪುತ್ರರನ್ನೂ ಮಂತ್ರಿಗಳನ್ನೂ ನಾಶಪಡಿಸಿದ ಶ್ರೀಕೃಷ್ಣ.

ಶ್ರಮಪ್ರದರ್ಶನ **164**

ಶ್ರೀಕೃಷ್ಣ ಬ್ರಹ್ಮನಿತ್ತ ಅಮೋಘವಾದ ಶತಘ್ನಿಯನ್ನು ನುಂಗಿದ. ಆದರೆ ಶ್ರಮವನ್ನೂ ನಟಿಸಿದ.

ಭಾಮೆ ಬಿಲ್ಲು ಹಿಡಿದಳು **166**

ಶತಘ್ನಿಯನ್ನು ನುಂಗಿ ಶ್ರಮವಾಯಿತೆಂದು ತೋರಿಕೊಳ್ಳುತ್ತ ಶಾರ್ಙ್ಗಧನುಸನ್ನು ಸತ್ಯಭಾಮೆಯ ಕೈಗಿತ್ತು ಯುದ್ಧವನ್ನು ಮುಂದುವರಿಸಲು ಹೇಳಿದ. ಭಾಮೆ ಹಾಗೇ ಮಾಡಿದಳು.

ನರಕಾಸುರ ವಧ **166**

ಆಯಾಸಗೊಂಡ ಭಾಮೆಯನ್ನು ಆಲಿಂಗಿಸಿ ಚಕ್ರದಿಂದ ನರಕಾಸುರನ ಶಿರಶ್ಛೇದಗೈದ ಕೃಷ್ಣ. ಕೃಷ್ಣ ದ್ವೇಷಿಯಾದ ಆತ ತಮಸ್ಸನ್ನು ಪಡೆದ. ಅವನಲ್ಲಿ ಆವಿಷ್ಟನಾದ ವಾಯು ಕೃಷ್ಣನ ಉದರವನ್ನು ಪ್ರವೇಶಿಸಿದ.

ಭಗದತ್ತನಿಗೆ ಪಟ್ಟಾಭಿಷೇಕ **168**

ಭೂದೇವಿಯ ಪ್ರಾರ್ಥನೆಯಂತೆ ಕೃಷ್ಣ ನರಕಾಸುರನ ಮಗನಾದ ಭಗದತ್ತನಿಗೆ ಕಿರಾತರಾಜ್ಯ ಸಿಂಹಾಸನದಲ್ಲಿ ಪಟ್ಟಾಭಿಷೇಕ ಮಾಡಿಸಿದ. ನರಕಾಸುರ ಕುಬೇರನಿಂದ ಅಪಹರಿಸಿದ್ದ ಸುಪ್ರತೀಕವೆಂಬ ಆನೆಯನ್ನು ಭಗದತ್ತನಲ್ಲಿಯೆ ಇರಿಸಿ ಸಮುದ್ರದಿಂದ ಉದ್ಭವಿಸಿದ ನಾಲ್ಕುದಾಡೆಗಳ ಆರು ಸಾವಿರ ಆನೆಗಳನ್ನೂ ಇನ್ನೂರು ಯೋಜನಗಳಷ್ಟು ಉದ್ದಗಲ ಎತ್ತರದ ಬಂಗಾರದ ರತ್ನರಾಶಿಗಳನ್ನೂ ರಾಕ್ಷಸರ ಮೂಲಕ ದ್ವಾರಕೆಗೆ ಕಳಿಸಿದ. ಈ ರಾಕ್ಷಸರು ನಿರ್ಋತಿ ಎಂಬ ದಿಕ್ಪಾಲಕನ ಅನುಚರರು. ನರಕಾಸುರ ಬಲಾತ್ಕಾರದಿಂದ ಅವರನ್ನು ತಂದಿದ್ದ.

ಹದಿನಾರು ಸಾವಿರದ ನೂರು ಕನ್ಯೆಯರು **170**

ನರಕಾಸುರ ಯುದ್ಧಗಳಲ್ಲಿ ಗೆದ್ದು ತಂದಿದ್ದ ಕನ್ಯೆಯರಲ್ಲಿ ಕೆಲವರು ದೇವಕನ್ಯೆಯರು. ಕೆಲವರು ಗಂಧರ್ವಕನ್ಯೆಯರು, ಕೆಲವರು ರಾಜಕುಮಾರಿಯರು. ಒಟ್ಟು ಹದಿನಾರು ಸಾವಿರದ ನೂರು ಮಂದಿ. ಎಲ್ಲರೂ ಮೈನರೆಯದಿದ್ದವರು. ನಾರದರ ಮೂಲಕ ಕೃಷ್ಣನ ಆಗಮನವನ್ನು ಮೊದಲೇ ತಿಳಿದಿದ್ದು ಅವನೆ

ಪತಿಯಾಗಬೇಕೆಂದು ಕಠಿಣ ವ್ರತೋಪವಾಸಗಳನ್ನು ಮಾಡುತ್ತಿದ್ದವರು, ಹಿಂದೆ ಇವರು ಅಗ್ನಿಪುತ್ರರು. ಸ್ತ್ರೀಯರಾಗಿ ಹುಟ್ಟಬೇಕು. ಕೃಷ್ಣನ ಪತ್ನಿಯರಾಗಿ ಅಂಗಸಂಗ ಪಡೆಯಬೇಕು ಎಂದು ತಪಸ್ಸು ಮಾಡಿದ್ದರು. ಅಜಾನಜ ದೇವತೆಗಳಿಗೆ ಸಮಾನರು. ಹೆಣ್ಣಾಗಿ ಹುಟ್ಟಿ ರಮಾವೇಶ ಹೊಂದಿ ಕೃಷ್ಣನ ಪತ್ನಿಯರಾಗಲು ಅರ್ಹತೆ ಸಂಪಾದಿಸಿದ್ದರು. ಅವರನ್ನು ದ್ವಾರಕೆಗೆ ಕಳಿಸಿದ ಶ್ರೀಕೃಷ್ಣ.

ಸ್ವರ್ಗಕ್ಕೆ ಪ್ರಯಾಣ 172

ಇಂದ್ರನ ಮಣಿ ಪರ್ವತವನ್ನೂ ವರುಣನ ಛತ್ರವನ್ನೂ ಎತ್ತಿ ಗರುಡನ ಮೇಲಿರಿಸಿ ಸತ್ಯಭಾಮಾ ಸಮೇತನಾಗಿ ಸ್ವರ್ಗಕ್ಕೆ ಹೋಗಿ ಅದಿತಿಗೆ ಕುಂಡಲವಿತ್ತ. ಅದಿತಿ ಅಸುರಾವೇಶದಿಂದ ಕೃಷ್ಣನನ್ನು ಭಗವಂತನೆಂದು ಅರಿಯದೆ ನೀನು ಮರ್ತ್ಯಲೋಕದಲ್ಲಿ ಅಜೇಯನಾಗಿರೆಂದು ಹರಸಿದಳು. ಸತ್ಯಭಾಮೆಗೂ ಚಿರಯೌವನ ಹಾಗೂ ಪತಿಪ್ರೇಮ ಲಭಿಸಲೆಂದು ಹರಸಿದಳು.

ಪಾರಿಜಾತಾಪಹರಣ 173

ಸ್ವರ್ಗದಿಂದ ಹಿಂತಿರುಗುವಾಗ ನಂದನವನದ ಪಾರಿಜಾತ ವೃಕ್ಷವನ್ನು ಕಿತ್ತು ಗರುಡನ ಮೇಲೇರಿಸಿಕೊಂಡು ಹೊರಟ ಕೃಷ್ಣ.

ದೇವತೆಗಳ ಪರಾಭವ 175

ದೇವತೆಗಳು ಅಸುರಾವೇಶದಿಂದ ವಿರೋಧಿಸಿದರು. ಸತ್ಯಭಾಮೆ ಶಾರ್ಙ್ಗಧನುಸ್ಸನ್ನೆತ್ತಿಕೊಂಡು ಎಲ್ಲರನ್ನೂ ಹಿಮ್ಮೆಟ್ಟಿಸಿದಳು. ಗರುಡ ವರುಣನನ್ನು ಸಮುದ್ರಕ್ಕೆ ಎಸೆದ. ಕೃಷ್ಣ ಅಗ್ನಿಯನ್ನೂ ಕೋಣವಾಯು ಮುಂತಾದವರನ್ನೂ ಶಾರ್ಙ್ಗದ ಧ್ವನಿಯಿಂದಲೆ ತಾನು ಭಗವಂತನೆಂಬುದರ ಅರಿವು ಉಂಟುಮಾಡಿ ಹಿಮ್ಮೆಟ್ಟಿಸಿದ. ಶಿವನನ್ನು ನಂದಿ ಸಮೇತವಾಗಿ ಬಲುದೂರಕ್ಕೆ ಎಸೆದ ಗರುಡ. ಇಂದ್ರನ ವಜ್ರಾಯುಧವನ್ನು ಕೃಷ್ಣ ಎಡಗೈಯಿಂದ ಹಿಡಿದ. ಸತ್ಯಭಾಮೆ ನಕ್ಕಳು. ಆಗ ಇಂದ್ರನ ಅಸುರಾವೇಶ ಹೊರಟು ಹೋಯಿತು. 'ಕ್ಷಮಿಸು' ಎಂದು ಬೇಡಿ ತನ್ನ ಮಗನಾದ ಅರ್ಜುನನನ್ನು ಕಾಪಾಡು, ಸದಾ ವಿಜಯಿಯಾಗುವಂತೆ ಮಾಡು ಎಂದೂ ಬೇಡಿ ವರ ಪಡೆದ. ಪಾರಿಜಾತದ ಜೊತೆಗೆ ಮಣಿಪರ್ವತಗಳನ್ನು ನೀಡಿದ.

ಅಮರಾವತಿಯಿಂದ ದ್ವಾರಾವತಿಗೆ 180

ಕೃಷ್ಣ ದ್ವಾರಕೆಗೆ ಬಂದು ಪಾರಿಜಾತ ಮಣಿಪರ್ವತಗಳನ್ನು ಸತ್ಯಭಾಮೆಯ ಮನೆಯಂಗಳದಲ್ಲಿ ಇರಿಸಿದ. ಹದಿನಾರು ಸಾವಿರದ ನೂರು ಮಂದಿ ಕನ್ಯೆಯರನ್ನೂ ಮದುವೆಯಾಗಿ ಬೇರೆ ಬೇರೆ ಮನೆಗಳಲ್ಲಿ ಇರಿಸಿ ಬೇರೆ ಬೇರೆ ರೂಪಗಳಿಂದ ರಮಿಸಿದ.

ಕೃಷ್ಣ ಪುತ್ರರು 181

ಹದಿನಾರು ಸಾವಿರದ ನೂರೆಂಟು ಮಂದಿ ಪತ್ನಿಯರಲ್ಲಿ ಪ್ರತಿಯೊಬ್ಬರಲ್ಲಿ ಹತ್ತು ಮಂದಿ ಗಂಡುಮಕ್ಕಳನ್ನೂ ಒಬ್ಬಳು ಕನ್ಯೆಯನ್ನೂ ಹುಟ್ಟಿಸಿದ. ಈ ಕೃಷ್ಣ ಪುತ್ರರಲ್ಲಿ ಪ್ರದ್ಯುಮ್ನ ಸಾಂಬ ಭಾನು ಚಾರುದೇಷ್ಣರು ಪ್ರಮುಖರು.

ಪ್ರದ್ಯುಮ್ನ ವಿಜಯ 182

ಪ್ರದ್ಯುಮ್ನ ಸಾಂಬರು ಪಾತಾಳಕ್ಕೆ ಹೋಗಿ ಎಲ್ಲ ಸರ್ಪಗಳನ್ನೂ ನಾಗರಾಜನಾದ ವಾಸುಕಿಯನ್ನೂ ಗೆದ್ದರು. ಮಾಯಾವಿಯಾದ ಮಾಯಾಸುರನನ್ನೂ ಗೆದ್ದು ಆಕಾಶಗಾಮಿಯಾದ ರಥದಿಂದ ಸ್ವರ್ಗಕ್ಕೆ

ಹೋದರು. ಅಲ್ಲಿ ಪಾರಿಜಾತಾಪಹರಣಕ್ಕೆ ಪ್ರತೀಕಾರವಾಗಿ ಇಂದ್ರಪುತ್ರರಾದ ಜಯಂತ ವೃಷಭರು ಯುದ್ಧಕ್ಕೆ ಬಂದರು. ಅವರನ್ನು ಹಿಮ್ಮೆಟ್ಟಿಸಿ ಇಂದ್ರನಿಂದ ಸತ್ಕೃತರಾಗಿ ದ್ವಾರಕೆಗೆ ಹಿಂತಿರುಗಿದರು.

ಪಾಂಡವರ ಸಂಸಾರ **184**

ಶ್ರೀಕೃಷ್ಣನೊಬ್ಬನೆ ಹದಿನಾರು ಸಾವಿರ ಮಂದಿ ಹೆಂಡಂದಿರನ್ನು ಆಳುವುದನ್ನು ಕಂಡು ನಾರದರು ವಿಸ್ಮಿತರಾಗಿ ಇಂದ್ರಪ್ರಸ್ಥಕ್ಕೆ ಬಂದರು. ಒಬ್ಬಳು ದ್ರೌಪದಿಯನ್ನು ಐವರು ಪಾಂಡವರು ದಿನಕ್ಕೊಬ್ಬರಂತೆ ರಮಿಸುವುದನ್ನು ಕಂಡರು. ಇದು ಸಾಲದು. ಒಂದು ವರ್ಷ ಕಾಲ ನಿರಂತರ ಭೀಮದ್ರೌಪದಿಯರು ಜೊತೆ ಇರುವಂತಾಗಬೇಕೆಂದು ಬಯಸಿದರು. ಸುಂದೋಪಸುಂದರ ಕಥೆ ಹೇಳಿ ವಾರ್ಷಿಕ ಪರ್ಯಾಯ ವ್ಯವಸ್ಥೆಯ ಸಲಹೆ ನೀಡಿದರು.

ಸುಂದೋಪಸುಂದರು **184**

ಸುಂದ ಮತ್ತು ಉಪಸುಂದರು ಅಣ್ಣತಮ್ಮಂದಿರು. ಯಾವಾಗಲೂ ಅನ್ಯೋನ್ಯವಾಗಿದ್ದು ಪರಸ್ಪರ ಜಗಳದಿಂದ ಹೊರತು ಅನ್ಯರಿಂದ ತಮಗೆ ಮರಣ ಬರಕೂಡದೆಂದು ಬ್ರಹ್ಮನಿಂದ ವರ ಪಡೆದರು. ಮದೋನ್ಮತ್ತರಾಗಿ ಋಷಿ ಮುನಿಗಳನ್ನು ಕೊಲ್ಲಲು ತೊಡಗಿದರು. ಆಗ ಬ್ರಹ್ಮ ವಿಶ್ವಕರ್ಮನಿಂದ ಲೋಕದ ಎಲ್ಲ ಉತ್ತಮ ಸುಂದರ ವಸ್ತುಗಳಿಂದ ತಿಲಾಂಶ ತೆಗೆದುಕೂಡಿಸಿ ತಿಲೋತ್ತಮೆಯನ್ನು ನಿರ್ಮಿಸಿ ಕಳಿಸಿದ. ಅವಳಿಗಾಗಿ ಅಸುರರು ಪರಸ್ಪರ ಜಗಳಾಡಿ ಸತ್ತರು. ಹೀಗೆ ಪಾಂಡವರಲ್ಲಿ ಪರಸ್ಪರ ವಿರೋಧಬಾರದಂತೆ ವಾರ್ಷಿಕ ಪರ್ಯಾಯ ವ್ಯವಸ್ಥೆ ಪಾಲಿಸಿರಿ ಎಂದರು, ನಾರದರು.

ವಾರ್ಷಿಕ ಪರ್ಯಾಯ ವ್ಯವಸ್ಥೆ **185**

ದ್ರೌಪದಿ ಕ್ರಮವಾಗಿ ಒಬ್ಬರ ಬಳಿ ಒಂದು ವರ್ಷವಿರಲಿ. ದಂಪತಿಗಳು ಜೊತೆಗೆ ಇರುವಾಗ ಇನ್ನೊಬ್ಬರು ನೋಡಿದರೆ ಒಂದು ವರ್ಷ ಬ್ರಹ್ಮಚರ್ಯಪೂರ್ವಕ ತೀರ್ಥಯಾತ್ರೆ ಮಾಡಬೇಕೆಂದು ನಿಯಮ ಮಾಡಿಕೊಂಡರು, ಪಾಂಡವರು.

ಅರ್ಜುನನ ತೀರ್ಥಯಾತ್ರೆ **186**

ಒಬ್ಬ ಬ್ರಾಹ್ಮಣನ ಗೋರಕ್ಷಣೆಗಾಗಿ ಅರ್ಜುನ ಶಸ್ತ್ರ ತೆಗೆಯಲು ಬಂದ. ಅಲ್ಲಿ ದ್ರೌಪದಿ ಧರ್ಮರಾಜನ ಜೊತೆಗೆ ಇದ್ದುದನ್ನು ಕಂಡು ನಿಯಮಾನುಸಾರ ತೀರ್ಥಯಾತ್ರೆಗೆ ಹೊರಟ. ಗಂಗಾತೀರದಲ್ಲಿ ಉಲೂಪಿ ಎಂಬ ನಾಗಕನ್ನಿಕೆ ಅವನನ್ನು ಕಂಡು ಮೋಹಿಸಿ ಪಾತಾಳಕ್ಕೆ ಒಯ್ದಳು.

ಉಲೂಪಿ ಸಮಾಗಮ **187**

ಉಲೂಪಿಯ ಪತಿಯನ್ನು ಗರುಡ ತಿಂದಿದ್ದ. ಅದರಿಂದ ಅವಳಿಗೆ ಮಕ್ಕಳಾಗಲಿಲ್ಲ. ಅವಳಿಗೆ ಪುತ್ರಭಿಕ್ಷೆ ನೀಡೆಂದು ಅವಳ ತಂದೆ ಧೃತರಾಷ್ಟ್ರನೆಂಬ ನಾಗ ಬೇಡಿಕೊಂಡ. ಆಗ ಹುಟ್ಟಿದವನು ಇರಾವಾನ್. ತಾಯಿಯ ಜಾತಿಯವನಾಗಿ ನಾಗನಾಗಿಯೆ ಹುಟ್ಟಿದ. ಅವನು ಕುಜನ ಅವತಾರ. ವರುಣನ ಆವೇಶವಿದ್ದಿತು. ಅಲ್ಲಿಂದ ಅರ್ಜುನ ಪಾಂಡ್ಯ ದೇಶಕ್ಕೆ ತೆರಳಿದ. ಇತ್ತ ನಾಗರು ಉಲೂಪಿ ಇರಾವಾನರನ್ನು ಬಹಿಷ್ಕರಿಸಿದರು. ವಿಧವೆಯಾದ ನಾಗಿಣಿಯಲ್ಲಿ ವಿಜಾತೀಯನಾದ ಮಾನವನಿಂದ ಸಂತತಿ ಪಡೆದುದು ಧರ್ಮಬಾಹಿರ ಎಂದು. ಆದರೆ ತಾಯಿ ಮಕ್ಕಳಿಗೆ ದೇವಲೋಕದಲ್ಲಿ ಸ್ವಾಗತ ದೊರೆಯಿತು. ಏಕೆಂದರೆ ದೇವೇಂದ್ರನ ಅವತಾರನಾದ ಅರ್ಜುನನ ಹೆಂಡತಿ ಮಕ್ಕಳು ಅವರು.

ಚಿತ್ರಾಂಗದಾ ಪರಿಣಯ **190**

ಈ ನನ್ನ ಮಗಳಲ್ಲಿ ಜನಿಸುವ ಮಗನನ್ನು ನನಗೆ ಕೊಡಬೇಕೆಂದು ಒಪ್ಪಂದ ಮಾಡಿಕೊಂಡು ಪಾಂಡ್ಯರಾಜ ವೀರಸೇನ ಚಿತ್ರಾಂಗದೆಯನ್ನು ಅರ್ಜುನನಿಗೆ ಮದುವೆ ಮಾಡಿಕೊಟ್ಟ. ಅವಳಲ್ಲಿ ಬಭ್ರುವಾಹನ ಹುಟ್ಟಿದ. ಈತ ಜಯಂತನ ಅವತಾರ. ಮನ್ಮಥನ ಆವೇಶವಿದ್ದಿತು. ಚಿತ್ರಾಂಗದೆ ಶಚಿಯ ಅವತಾರ. ಅವಳು ಹಿಂದೆ ತಾರೆಯಾಗಿ ಜನಿಸಿದಾಗ ಸುಗ್ರೀವನ ಸಂಗ ಮಾಡಿದ್ದಕ್ಕೆ ಅವಳಿಗೆ ಸ್ವರ್ಗದ ಬಾಗಿಲು ತೆರೆಯಲಿಲ್ಲ. ಅಂತರಿಕ್ಷದಲ್ಲಿಯೆ ಇದ್ದು ಭೂಮಿಯಲ್ಲಿ ಚಿತ್ರಾಂಗದೆಯಾಗಿ ಜನಿಸಿದ್ದಳು.

ಐವರು ಅಪ್ಸರೆಯರು **193**

ಅರ್ಜುನ ಅಲ್ಲಿಂದ ಪ್ರಭಾಸಕ್ಕೆ ಹೋಗುತ್ತ ದಾರಿಯಲ್ಲಿ ಐದು ಸರೋವರಗಳನ್ನು ಕಂಡ. ಅವುಗಳಲ್ಲಿ ಐದು ಮೊಸಳೆಗಳು. ಇವರು ಶಾಪಗ್ರಸ್ತರಾದ ಅಪ್ಸರೆಯರು. ಒಬ್ಬ ಬ್ರಾಹ್ಮಣನನ್ನು ಅಪಹಾಸ ಮಾಡಿ ಶಾಪ ಪಡೆದಿದ್ದರು. ಅರ್ಜುನ ಮೊಸಳೆಗಳನ್ನು ಎಳೆದು ತೀರಕ್ಕೆ ತಂದಾಗ ಅವರಿಗೆ ಶಾಪವಿಮುಕ್ತಿಯಾಯಿತು. ಹಾಗೇ ಬ್ರಾಹ್ಮಣ ನುಡಿದಿದ್ದ.

ಅರ್ಜುನ ಸನ್ಯಾಸಿ **194**

ಅರ್ಜುನ ಪ್ರಭಾಸಕ್ಕೆ ಬಂದ. ಬಲರಾಮ ಸುಭದ್ರೆಯನ್ನು ದುರ್ಯೋಧನನಿಗೆ ಕೊಡಲು ಉದ್ಯುಕ್ತನಾಗಿರುವನೆಂಬ ವಾರ್ತೆಯನ್ನು ಕೇಳಿದ. ಸನ್ಯಾಸಿ ವೇಷ ತೊಟ್ಟು ದ್ವಾರಕೆಗೆ ಬಂದ. ಶ್ರೀಕೃಷ್ಣ ಅವನನ್ನು ರಹಸ್ಯದಲ್ಲಿ ಕಂಡು ಸುಭದ್ರೆಯನ್ನು ಅವನಿಗೆ ಕೊಡುವುದಾಗಿ ಮಾತುಕೊಟ್ಟ. ಬಲರಾಮ ತಿಳಿಯದೆ ಈ ಸನ್ಯಾಸಿಯನ್ನು ಕನ್ಯಾಂತಃಪುರಸಮೀಪದಲ್ಲಿ ಚಾತುರ್ಮಾಸ್ಯಕ್ಕೆ ಕೂಡಿಸಿದ. ಅವನ ಸೇವೆಗೆ ಸುಭದ್ರೆಯನ್ನು ನೇಮಿಸಿದ. ಕುಂತಿ ದೂರ್ವಾಸರನ್ನು ಸೇವಿಸಿದಂತೆ ಸುಭದ್ರೆಯೂ ಯತಿಯ ಸೇವೆ ಮಾಡಿ ಅನುಗ್ರಹ ಪಡೆಯಲಿ ಎಂದು.

ಸುಭದ್ರಾ ಪ್ರಣಯ **199**

ಪಿಂಡೋದ್ಧಾರಕ್ಷೇತ್ರದ ಒಂದು ಉತ್ಸವಕ್ಕೆ ಯಾದವರೆಲ್ಲರೂ ಹೋಗಿದ್ದರು. ಚಾತುರ್ಮಾಸ್ಯ ಕಾಲ ಸೀಮೋಲ್ಲಂಘನೆ ಮಾಡದೆ ಅರ್ಜುನ ಸನ್ಯಾಸಿ ದ್ವಾರಕೆಯಲ್ಲಿಯೆ ಉಳಿದ. ಅವನ ಸೇವೆಗೆ ಸುಭದ್ರೆಯೂ ಉಳಿದಳು. ಏಕಾಂತದಲ್ಲಿ ಸುಭದ್ರೆ ಯತಿಯನ್ನು ಕೇಳುತ್ತಾಳೆ, 'ಅರ್ಜುನ ತೀರ್ಥಯಾತ್ರೆ ಮಾಡುತ್ತಿದ್ದಾನಂತೆ, ಅವನನ್ನು ನೀವೆಲ್ಲಾದರೂ ಕಂಡಿರುವಿರೇನು?' 'ಹೌದು' ಎಂದ ಸನ್ಯಾಸಿ. 'ಎಲ್ಲಿ?' 'ಇಲ್ಲಿಯೆ, ನಾನೇ ಆ ನಿನ್ನ ಪ್ರೀತಿಯ ಅರ್ಜುನ!' ಸುಭದ್ರೆಗೆ ಪರಮಾನಂದವಾಯಿತು. ಆದರೂ ಗಾಂಧರ್ವ ವಿವಾಹಕ್ಕೆ ಒಪ್ಪಲಿಲ್ಲ. ಶ್ರೀಕೃಷ್ಣ ಬರಬೇಕು. ಅವನ ಸಂಮುಖದಲ್ಲಿ ತಂದೆ ತಾಯಿಗಳು ನನ್ನನ್ನು ನಿನಗೆ ಮದುವೆ ಮಾಡಿಕೊಡಬೇಕು' ಎಂದಳು.

ಸುಭದ್ರಾ ಪರಿಣಯ **202**

ಅರ್ಜುನ ಕೃಷ್ಣನನ್ನು ಸ್ಮರಿಸಿದ. ಆತ ತಂದೆ ತಾಯಿ ಸಮೇತನಾಗಿ ಬಂದ. ಅರ್ಜುನ ತಂದೆಯಾದ ದೇವೇಂದ್ರನನ್ನೂ ಸ್ಮರಿಸಿದ. ಅವನೂ ಶಚೀ ಸಮೇತನಾಗಿ ಸಪರಿವಾರನಾಗಿ ವಸಿಷ್ಠ ನಾರದಾದಿ ಮುನಿಗಳೊಂದಿಗೆ ಬಂದ. ಬಲರಾಮ ಪ್ರದ್ಯುಮ್ನ ಸಾಂಬ ಮುಂತಾದವರು ಪಿಂಡೋದ್ಧಾರದಲ್ಲಿಯೆ ರಾತ್ರಿ ಮಲಗಿದ್ದರು. ಇತ್ತ ದ್ವಾರಕೆಯಲ್ಲಿ ವೈಭವದಿಂದ ವಿವಾಹ ನಡೆದುಹೋಯಿತು. ಕೃಷ್ಣ ತನ್ನ ರಥವನ್ನು ಅರ್ಜುನನಿಗಾಗಿ ಬಿಟ್ಟು ಅದೇ ರಾತ್ರಿ ಪಿಂಡೋದ್ಧಾರಕ್ಕೆ ಹೊರಟು ಹೋದ. ಇಂದ್ರನೂ ಪರಿವಾರ ಸಮೇತ ಸ್ವರ್ಗಕ್ಕೆ ತೆರಳಿದ.

ಅರ್ಜುನನ ನಿರ್ಗಮನ **203**

ಮರುದಿನ ಬೆಳಿಗ್ಗೆ ಅರ್ಜುನ ಸುಭದ್ರೆಯೊಂದಿಗೆ ರಥವೇರಿ ಹೊರಟು ನಿಂತ. ಇದಿರಾಗಿ ಬಂದ ಕಾವಲುಗಾರರನ್ನು ಹಿಮ್ಮೆಟ್ಟಿಸಿ ನಗರದ ಮಹಾದ್ವಾರಕ್ಕೆ ಬಂದ. ಅಲ್ಲಿ ವಿಪೃಥು ಎಂಬ ಯಾದವ ವೀರ ರಕ್ಷಕನಾಗಿದ್ದ. ಅವನಿಗೆ ರಹಸ್ಯವಾಗಿ ಕೃಷ್ಣ ಮೊದಲೇ ಹೇಳಿದ್ದ. ಸುಭದ್ರಾರ್ಜುನರ ರಥವನ್ನು ತಡೆಯಬೇಡ ಎಂದು. ಅದರಿಂದ ಬಲರಾಮನಿಗೆ ಅನುಮಾನ ಬಾರದಂತೆ ತೋರಿಕೆಗೆ ಯುದ್ಧಮಾಡಿ ಬಿಟ್ಟು ಬಿಟ್ಟ. ಅರ್ಜುನನೂ ವಿಪೃಥುವಿನ ಸೈನ್ಯವನ್ನು ನಾಶ ಮಾಡದೆ ಮೃದುವಾಗಿ ಯುದ್ಧ ಮಾಡಿದ. ಅಂದರೆ ಎಲ್ಲರ ಮೈಗೂ ತೀಕ್ಷ್ಣವಾದ ಬಾಣಗಳ ಸುರಿ ಮಳೆಯಾದರೂ ಯಾರಿಗೂ ಮೈಯಲ್ಲಿ ಒಂದಿಷ್ಟು ಗಾಯವಾಗಲಿಲ್ಲ. ಇದು ಅರ್ಜುನನ ಶರಸಂಧಾನ ಕೌಶಲ.

ಯಾದವರಿಗೆ ಸಾಂತ್ವನ **206**

ಈ ವಾರ್ತೆಯನ್ನು ಕೇಳಿ ಕುಪಿತರಾದ ಯಾದವರಿಗೆ ಕೃಷ್ಣ ನುಡಿದ. 'ಅರ್ಜುನ ಉತ್ತಮವಾದ ಕುರುವಂಶದಲ್ಲಿ ಜನಿಸಿದವ. ವೇದವ್ಯಾಸರ ಮೊಮ್ಮಗ. ನಮ್ಮ ಸೋದರತ್ತೆಯಾದ ಕುಂತಿಯ ಮಗ. ಮಹಾವೀರ, ಸದ್ಗುಣಶಾಲಿ. ಇಂಥ ವರ ಸುಭದ್ರೆಗೆ ಇನ್ನೊಬ್ಬ ಸಿಗಲಾರ. ನಾವೇ ಅವನಿಗೆ ಕನ್ಯೆಯನ್ನು ಕೊಡಬೇಕಾಗಿತ್ತು. ಅವನೆ ಒಯ್ದಿದ್ದಾನೆ. ನಮಗೇನು ನಷ್ಟ? ಒಂದುವೇಳೆ ನಾವು ಅವನನ್ನು ವಿರೋಧಿಸಿ ಸೋತರೆ ನಮಗೇ ಅಪಮಾನ. ಗೆದ್ದು ಕನ್ಯೆಯನ್ನು ಹಿಂತಿರುಗಿ ತಂದರೂ ಇನ್ನೊಬ್ಬರು ಸ್ಪರ್ಶಿಸಿದ ಕನ್ಯೆಯನ್ನು ಯಾರೂ ಮದುವೆಯಾಗಲಾರರು. ಅದರಿಂದ ನಾವೀಗ ಸುಮ್ಮನಿರುವುದೇ ಜಾಣತನ.' ಯಾದವರಿಗೆ ಇದು ಹೌದೆನಿಸಿತು.

ಇಂದ್ರಪ್ರಸ್ಥಕ್ಕೆ ಅರ್ಜುನ **209**

ಅರ್ಜುನ ಸುಭದ್ರಾ ಸಮೇತನಾಗಿ ಇಂದ್ರಪ್ರಸ್ಥಕ್ಕೆ ಬಂದು ಸೋದರರನ್ನು ಸಂತೋಷಗೊಳಿಸಿದ. ಕೃಷ್ಣನ ಮಾತಿನಿಂದ ಶಾಂತರಾದ ಬಲರಾಮ ಮುಂತಾದವರೆಲ್ಲರೂ ಇಂದ್ರಪ್ರಸ್ಥಕ್ಕೆ ಬಂದು ಪಾಂಡವರಿಗೂ ದ್ರೌಪದಿಗೂ ಸುಭದ್ರೆಗೂ ರತ್ನಗಳ ಉಡುಗೊರೆ ನೀಡಿ ಸತ್ಕರಿಸಿದರು.

ಪಾಂಡವರ ಮಕ್ಕಳು **211**

ದ್ರೌಪದಿಯಲ್ಲಿ ಐವರು ಪಾಂಡವರಿಗೆ ಕ್ರಮವಾಗಿ ಪ್ರತಿವಿಂಧ್ಯ, ಶ್ರುತಸೋಮ, ಶ್ರುತಕೀರ್ತಿ, ಶ್ರುತಾನೀಕ, ಶ್ರುತಕರ್ಮ ಎಂಬ ಹೆಸರಿನಿಂದ ವಿಶ್ವೇ ದೇವತೆಗಳು ಮಕ್ಕಳಾಗಿ ಜನಿಸಿದರು. ಅವರಲ್ಲಿ ಕ್ರಮವಾಗಿ ಚಿತ್ರರಥ, ಅಭಿತಾಮ್ರ, ಕಿಶೋರ, ಗೋಪಾಲ, ಬಲ ಎಂಬ ಐವರು ಗಂಧರ್ವರೂ ಆವಿಷ್ಟರಾಗಿದ್ದರು. ಅರ್ಜುನನಿಗೆ ಸುಭದ್ರೆಯಲ್ಲಿ ಅಭಿಮನ್ಯು ಜನಿಸಿದ. ಇವನು ಚಂದ್ರನ ಅಂಶಯುಕ್ತನಾದ ಬುಧ. ಯಮ ವಾಯು ಇಂದ್ರರ ಮತ್ತು ಕೃಷ್ಣನ ಸನ್ನಿಧಾನವೂ ಅವನಲ್ಲಿ ಇದ್ದಿತು. ಅದರಿಂದ ಆತ ಎಳವೆಯಲ್ಲಿಯೆ ಬಲು ಶೂರ. ಐವರು ಪಾಂಡವರಿಗೂ ಅತ್ಯಂತ ಪ್ರಿಯನಾಗಿದ್ದ.

ಖಾಂಡವವನಕ್ಕೆ ಪ್ರಯಾಣ **214**

ಕೃಷ್ಣಾರ್ಜುನರು ಸತ್ಯಭಾಮಾ ಸುಭದ್ರೆಯರೊಂದಿಗೆ ವಿಹಾರಕ್ಕೆ ಖಾಂಡವ ವನಕ್ಕೆ ಹೋದರು. ಅಲ್ಲಿ ಅಗ್ನಿ ಬ್ರಾಹ್ಮಣ ರೂಪದಿಂದ ಬಂದು ತನಗೆ ಖಾಂಡವ ವನವನ್ನು ಆಹಾರವಾಗಿ ಕೊಡಲು ಕೇಳಿಕೊಂಡ.

ಅಗ್ನಿಗೆ ಅಜೀರ್ಣರೋಗ **215**

ಶ್ವೇತಕನೆಂಬ ರಾಜ ಹನ್ನೆರಡು ವರ್ಷಕಾಲ ನಿರಂತರ ಆಜ್ಯಹೋಮ ಮಾಡಿದ. ದೂರ್ವಾಸರ

ಪೌರೋಹಿತ್ಯದಲ್ಲಿ ದೀರ್ಘವಾದ ಸತ್ರಯಾಗವನ್ನೂ ಮಾಡಿದ. ಈ ತುಪ್ಪ ಹವಿಸ್ಸುಗಳನ್ನು ಅತಿಯಾಗಿ ಉಂಡ ಅಗ್ನಿಗೆ ಅಜೀರ್ಣ ರೋಗ ಬಂದಿತು. ಇದು ನಿಮಿತ್ತ ಮಾತ್ರ. ವಸ್ತುತಃ ದೇವತೆಗಳಿಗೆ ಆಹುತಿಗಳನ್ನು ಒಯ್ದು ಕೊಡುವ ಕೆಲಸಕ್ಕೆ ಪ್ರತಿಯಾಗಿ ಪ್ರಯಾಜ ಅನುಯಾಜ ಆಹುತಿಗಳನ್ನು ತನಗೆ ಕೊಡಿಸಬೇಕೆಂದು ದೇವತೆಗಳಲ್ಲಿ ಆತ ಆಗ್ರಹಿಸಿದಾಗ ಅವರು ಆಗಲಿ ಎಂದರು. ಅಜೀರ್ಣರೋಗ ಬರಲಿ ಎಂದು ಶಾಪವನ್ನೂ ನೀಡಿದರು. ಅಜೀರ್ಣಪರಿಹಾರವನ್ನು ಬ್ರಹ್ಮನಲ್ಲಿ ಕೇಳಿದಾಗ ಖಾಂಡವವನವನ್ನು ಭಕ್ಷಿಸು ಎಂದ ಬ್ರಹ್ಮ. ಆದರೆ ಇಂದ್ರನ ಆಶ್ರಯದಲ್ಲಿರುವ ತಕ್ಷಕನ ವಾಸಸ್ಥಾನ ಖಾಂಡವವನ. ಅದರಿಂದ ಅದನ್ನು ಭಕ್ಷಿಸಲು ಇಂದ್ರ ಬಿಡಲಾರ. ಇಂದ್ರನ ಮಗನಾದ ಅರ್ಜುನನನ್ನೇ ಬೇಡುತ್ತಾನೆ ಅಗ್ನಿ.

ಅಗ್ನಿಗೆ ಅನ್ನದಾನ **216**

ಅರ್ಜುನ ಅಗ್ನಿಗೆ ಖಾಂಡವವನವನ್ನು ಕೊಡುವೆನೆಂದ. ಇಂದ್ರನೊಡನೆ ಯುದ್ಧಕ್ಕೆ ನಿಂತ. ಇಂದ್ರಾರ್ಜುನರು ಬೇರೆಯಲ್ಲ. ಆದರೂ ಬ್ರಾಹ್ಮಣನಿಗೆ ಅನ್ನದಾನ ಮಾಡಿದ ಫಲ ಸಿಗುವಂತಾಗಲು ಅರ್ಜುನ ರೂಪದ ತನ್ನನ್ನು ತಾನೇ ವಿರೋಧಿಸುತ್ತಾನೆ ಇಂದ್ರ. ಎಲ್ಲಕ್ಕೂ ಕೃಷ್ಣನ ಅನುಗ್ರಹ ಮುಖ್ಯವಾದ್ದರಿಂದ ಕೃಷ್ಣನನ್ನೂ ಬೇಡುತ್ತಾನೆ ಅಗ್ನಿ. ನನಗೆ ಬಿಲ್ಲು ಬಾಣಗಳನ್ನೂ ರಥವನ್ನೂ ಕೊಡು ನಾನು ಇಂದ್ರನನ್ನು ಇದಿರಿಸುವೆನು ಎಂದ ಅರ್ಜುನ.

ಕೃಷ್ಣಾರ್ಜುನರಿಗೆ ಆಯುಧ ಪ್ರಾಪ್ತಿ **219**

ಅಗ್ನಿ ಬದರಿಯ ನಾರಾಯಣನಿಂದ ಸುದರ್ಶನ ಚಕ್ರವನ್ನು ತಂದು ಕೃಷ್ಣನಿಗೆ ಒಪ್ಪಿಸಿದ. ವರುಣನಿಂದ ಗಾಂಡೀವಧನುಸ್ಸನ್ನೂ ಅಕ್ಷಯ ಬತ್ತಳಿಕೆಯನ್ನೂ ಬಿಳಿ ಕುದುರೆ ಕಟ್ಟಿದ ಕಪಿಧ್ವಜಯುಕ್ತ ದಿವ್ಯರಥವನ್ನೂ ತಂದು ಅರ್ಜುನನಿಗೆ ನೀಡಿದ.

ಖಾಂಡವ ದಹನ **222**

ಅರ್ಜುನ ಕಾಡಿನ ಸುತ್ತಲೂ ಮೇಲೆ ಕೆಳಗೆ ಹನ್ನೆರಡು ಯೋಜನ ವಿಸ್ತಾರದ ದೊಡ್ಡ ಶರಪಂಜರ ನಿರ್ಮಾಣ ಮಾಡಿ ಅಗ್ನಿಗೆ ನಿರಾತಂಕವಾಗಿ ಕಾಡನ್ನು ಸುಡಲು ಅವಕಾಶ ಮಾಡಿಕೊಟ್ಟ. ಇಂದ್ರ ಧಾರಾಕಾರವಾಗಿ ಮಳೆ ಸುರಿಸಿ ಅಗ್ನಿಜ್ವಾಲೆಯನ್ನು ಶಾಂತಗೊಳಿಸಲು ಯತ್ನಿಸಿದ. ಆದರೆ ಕೃಷ್ಣಾರ್ಜುನರು ವಾಯವ್ಯಾದಿ ಅಸ್ತ್ರಗಳಿಂದ ಮಳೆ ಮೋಡಗಳನ್ನು ಚದುರಿಸಿದರು. ಇಂದ್ರ ಪರಾಜಿತನಾದ. ಆದರೂ ತನ್ನ ಮಗನ ಪರಾಕ್ರಮವನ್ನೂ ಅವನ ಮೇಲೆ ಕೃಷ್ಣನಿಗೆ ಇರುವ ಪ್ರೀತಿಯನ್ನೂ ಕಂಡು ಬಲು ಸಂತೋಷಪಟ್ಟ. ವಸ್ತುತಃ ಮಗನಿಗೆ ಕೀರ್ತಿ ಬರಲೆಂದೇ ಇಂದ್ರ ಯುದ್ಧ ಮಾಡಿದ್ದ.

ಜರಿತಾರ್ಯಾದಿ ಪಕ್ಷಿಗಳು **224**

ಜರಿತಾರಿ ಸಾರಿಸೃಕ್ವ ಸ್ತಂಬಮಿತ್ರ ದ್ರೋಣ ಎಂಬ ವೇದದ್ರಷ್ಟಾರರಾದ ನಾಲ್ವರು ಪಕ್ಷಿರೂಪದ ಮುನಿಗಳು, ಅಶ್ವಸೇನನೆಂಬ ಸರ್ಪ, ಮಯನೆಂಬ ದಾನವ ಇಷ್ಟು ಮಂದಿ ಹೊರತು ಇನ್ನಾವ ಪ್ರಾಣಿಯಾಗಲಿ ಪಕ್ಷಿಯಾಗಲಿ ಉಳಿಯಲಿಲ್ಲ. ಎಲ್ಲವೂ ಅಗ್ನಿಗೆ ಆಹುತಿಯಾಯಿತು.

ಅಶ್ವಸೇನನೆಂಬ ಸರ್ಪ **225**

ತಕ್ಷಕನ ಮಡದಿ ಮಗು ಅಶ್ವಸೇನನನ್ನು ಕಾಪಾಡುವುದಕ್ಕಾಗಿ ತಲೆಯಿಂದ ತೊಡಗಿ ಬಾಲದವರೆಗೆ ಪೂರ್ತಿ ನುಂಗಿ ಹೊರಗೆ ಹಾರಿದಳು. ಅರ್ಜುನನ ಬಾಣ ಅವಳ ಹೆಡೆಯನ್ನು ಕತ್ತರಿಸಿತು. ಅಲ್ಲಿ ಅಶ್ವಸೇನನ ಬಾಲವಿದ್ದುದರಿಂದ ಅವನ ಬಾಲ ಮಾತ್ರ ಹೋಯಿತು, ಅವನು ಉಳಿದ. ತಾಯಿ ಸತ್ತಳು. ತಾಯಿ ಸತ್ತಿದ್ದಕ್ಕೆ

ತನ್ನ ಬಾಲ ತುಂಡಾದುದಕ್ಕೆ ಸೇಡು ತೀರಿಸಲು ಕರ್ಣನ ಬತ್ತಳಿಕೆಯನ್ನು ಸೇರಿಕೊಂಡು ಅರ್ಜುನನ ವಧೆಗೆ ಕಾದು ಕುಳಿತ. ಕೊನೆಗೆ ಅರ್ಜುನನಿಂದಲೆ ಅವನ ನಾಶವಾಯಿತು.

ಮಯನೆಂಬ ದಾನವ ಶಿಲ್ಪಿ **227**

ಮಯನೆಂಬ ದಾನವಶಿಲ್ಪಿ ಅಗ್ನಿಯಿಂದ ಪಾರಾಗಲು ಯತ್ನಿಸುತ್ತಿದ್ದಾಗ ಕೃಷ್ಣನನ್ನು ಕಂಡು ಭಯದಿಂದ ಅರ್ಜುನನ್ನು ಮೊರೆಹೊಕ್ಕ. ಅವನು ಕೃಷ್ಣಭಕ್ತನೆ. ಆದರೂ ಕೃಷ್ಣ ದೇವತೆಗಳ ಪಕ್ಷಪಾತಿ ಎಂದು ದೇವೇಂದ್ರನ ಅವತಾರನಾದ ಅರ್ಜುನನ್ನೆ ಮೊರೆಹೊಕ್ಕು ಜೀವ ಉಳಿಸಿಕೊಂಡ. ಈ ಉಪಕಾರಕ್ಕೆ ಪ್ರತಿಯಾಗಿ ಪಾಂಡವರಿಗೆ ಬಲುವಿಚಿತ್ರವಾದ ಸಭಾ ಭವನವನ್ನು ನಿರ್ಮಿಸಿಕೊಟ್ಟ.

ಅಧ್ಯಾಯ 21

ಪಾಂಡವ ವನಪ್ರವೇಶ

ಮಯನಿರ್ಮಿತ ಸಭಾಭವನ **233**

ಮಯಾಸುರ ಶ್ರೀಕೃಷ್ಣನ ಆಜ್ಞೆಯಂತೆ ಪಾಂಡವರಿಗೆ ಎಲ್ಲ ವಿಚಿತ್ರಗಳಿಂದ ತುಂಬಿದ, ಆತ್ಯಾಶ್ಚರ್ಯಕರವಾದ ಸಭಾಭವನವನ್ನು ನಿರ್ಮಿಸಿಕೊಟ್ಟ. ವಾಯುದೇವನ ಮೂಲಗದೆಯನ್ನು ತಂದು ಭೀಮನಿಗೆ ಕೊಟ್ಟ.

ಸಮಂತ ಪಂಚಕದಲ್ಲಿ ವಸುದೇವನ ಯಜ್ಞ **234**

ಒಮ್ಮೆ ಸೂರ್ಯಗ್ರಹಣ ಕಾಲದಲ್ಲಿ ಶ್ರೀಕೃಷ್ಣ ಬಂಧುಗಳ ಜೊತೆಗೆ ಸಮಂತ ಪಂಚಕಕ್ಕೆ ಹೋಗಿ ವಸುದೇವನಿಂದ ದೊಡ್ಡ ಯಾಗಗಳನ್ನು ಮಾಡಿಸಿದ. ವ್ಯಾಸ ಕೃಷ್ಣ ಪರಶುರಾಮ ಎಂಬ ಮೂರು ರೂಪಗಳಿಂದ ಭಕ್ತರಿಗೆ ಗ್ರಹಣ ಪುಣ್ಯಕಾಲದಲ್ಲಿ ದರ್ಶನ ನೀಡಿ ಅವರನ್ನು ಧನ್ಯರನ್ನಾಗಿ ಮಾಡಿದ.

ಶ್ರೀಕೃಷ್ಣನ ಏಕಾಹಯಾಗ **235**

ಶ್ರೀಕೃಣ್ಣ ಪಾಂಡವರೊಂದಿಗೆ ದ್ವಾರಕೆಗೆ ಹೋಗಿ ಅಶ್ವಮೇಧ ರೂಪವಾದ ಒಂದು ಏಕಾಹ. ಯಾಗವನ್ನು ಕೈಗೊಂಡ. ಭೀಮಾರ್ಜುನರೂ ಕೃಷ್ಣಪುತ್ರರೂ ಯಾಗದ ಕುದುರೆಯನ್ನು ಎಲ್ಲೆಡೆ ಸಂಚಾರ ಮಾಡಿಸಿದರು. ಕುದುರೆಯನ್ನು ಈ ಯಾಗಕ್ಕಾಗಿಯೆ ಕೃಷ್ಣ ನಿರ್ಮಾಣ ಮಾಡಿದ್ದು. ಒಂದು ದಿನದಲ್ಲಿ ಒಂದು ಲಕ್ಷ ಯೋಜನ ಸಂಚರಿಸಲು ಶಕ್ತವಾಗಿತ್ತು.

ಬ್ರಾಹ್ಮಣ ಪುತ್ರರ ಮರಣ **237**

ಶ್ರೀಕೃಷ್ಣ ಯಾಗದೀಕ್ಷಿತನಾಗಿ ಕುಳಿತಿದ್ದಾಗ, ಒಬ್ಬ ಬ್ರಾಹ್ಮಣ ಬಂದು ದೂರಿತ್ತ. 'ನನ್ನ ಮಕ್ಕಳು ಹುಟ್ಟಿದೊಡನೆ ಕಣ್ಮರೆಯಾಗುತ್ತಾರೆ' ಕೃಷ್ಣ ಸುಮ್ಮನಿದ್ದ. ಅರ್ಜುನ 'ನಾನು ಕಾಪಾಡುವೆನೆಂ'ದ. ಕೃಷ್ಣ ರಾಮ ಪ್ರದ್ಯುಮ್ನರು ಯಾರೂ ನನಗೆ ಇಂಥ ಆಶ್ವಾಸನೆ ನೀಡಲಿಲ್ಲ. ನೀನೇನು ಮಾಡಬಲ್ಲೆ?' ಎಂದ ಬ್ರಾಹ್ಮಣ.

ಅರ್ಜುನನ ದರ್ಪಶಾಂತಿ **237**

ಅರ್ಜುನ ಆಸುರಾವೇಶದಿಂದ ನುಡಿದ, 'ನಾನೇನು ಆ ಕೃಷ್ಣರಾಮರಂತೆ ಸಾಮಾನ್ಯನಲ್ಲ. ದೇವಾಸುರರನ್ನೂ ಗೆಲ್ಲುವ ವೀರ. ನಾನು ಮಗುವನ್ನು ರಕ್ಷಿಸದೆ ಹೋದರೆ ಅಗ್ನಿಪ್ರವೇಶ ಮಾಡುವೆ'. ಬಳಿಕ

ಬ್ರಾಹ್ಮಣಪತ್ನಿಯ ಪ್ರಸವ ಕಾಲದಲ್ಲಿ ಹೆರಿಗೆ ಮನೆಯ ಸುತ್ತಲೂ ಅಸ್ತ್ರಗಳಿಂದ ದಿಗ್ಬಂಧ ಮಾಡಿದ. ಆದರೂ ಹುಟ್ಟಿದ ಮಗು ಕ್ಷಣದಲ್ಲಿ ಕಣ್ಮರೆಯಾಯಿತು. ಬ್ರಾಹ್ಮಣ ದುಃಖದಿಂದ ಯದ್ವಾತದ್ವಾ ಅರ್ಜುನನನ್ನು ಬೈದ. ಅರ್ಜುನ ಅಗ್ನಿಪ್ರವೇಶಕ್ಕೆ ಸಿದ್ಧನಾದ.

ಅನಂತಾಸನಕ್ಕೆ ಪ್ರಯಾಣ **241**

ಕೃಷ್ಣ ಯಾಗದಲ್ಲಿ ದೀಕ್ಷಿತನಾಗಿದ್ದರೂ ಅರ್ಜುನನನ್ನೂ ಬ್ರಾಹ್ಮಣನನ್ನೂ ಕರೆದುಕೊಂಡು ರಥದಿಂದ ಏಳು ಸಮುದ್ರಗಳನ್ನೂ ಲೋಕಾಲೋಕ ಪರ್ವತ ಅಂಧಂತಮಸ್ಸುಗಳನ್ನೂ ದಾಟಿ ಅನಂತಾಸನದಲ್ಲಿ ಮುಹೂರ್ತಕಾಲ ಮುಕ್ತನಿಯಾಮಕ ಪರ ವಾಸುದೇವನೊಡನೆ ಐಕ್ಯಹೊಂದಿ ನಾಲ್ಕು ಮಕ್ಕಳನ್ನು ತಂದು ಬ್ರಾಹ್ಮಣನಿಗಿತ್ತ. ಆ ಮಕ್ಕಳು ಅನಂತಾಸನದ ದ್ವಾರಪಾಲಕರ ಅವತಾರಭೂತರು. ಅರ್ಜುನನ ಮೇಲಿನ ಪ್ರೀತಿಯಿಂದ ಅವನ ಗರ್ವಭಂಗಕ್ಕಾಗಿಯೆ ಕೃಷ್ಣ ಈ ಪ್ರಸಂಗವನ್ನು ನಿರ್ಮಿಸಿದ್ದ.

ದಂತವಕ್ರ ವಧ **246**

ಶ್ರೀಕೃಷ್ಣ ಯಜ್ಞದೀಕ್ಷಾ ಭಂಗಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡು ಯಜ್ಞ ಪೂರೈಸಿದ. ಬಳಿಕ ಯಮುನಾ ನದಿಗೆ ಹೋಗಿ ಅವಭೃಥ ಸ್ನಾನ ಮಾಡಿದ. ಹಿಂದೆ ಬರುವಾಗ ದಾರಿಯಲ್ಲಿ ದಂತವಕ್ರ ವಿಡೂರಥರು ಆಕ್ರಮಿಸಲು ಬಂದು ಗದೆಯಿಂದ ಹತರಾದರು. ವಿಡೂರಥ ತಮಸ್ಸಿನಲ್ಲಿ ಬಿದ್ದ. ದಂತವಕ್ರನಲ್ಲಿದ್ದ ಹಿರಣ್ಯಾಕ್ಷ ದೈತ್ಯನೂ ತಮಸ್ಸಿಗೆ ಬಿದ್ದ. ಅವನಲ್ಲಿದ್ದ ವಿಜಯನೆಂಬ ವೈಕುಂಠ ದ್ವಾರಪಾಲಕ. ಕೃಷ್ಣನ ಉದರವನ್ನು ಹೊಕ್ಕ.

ಭೂಗೋಳ ವರ್ಣನ **248**

ಅರ್ಜುನ ಅನಂತಾಸನ ಯಾತ್ರೆಯಲ್ಲಿ ದಾರಿಯಲ್ಲಿ ಕಂಡ ಪ್ರದೇಶಗಳ ಬಗ್ಗೆ ಕುತೂಹಲದಿಂದ ಕೇಳಿದಾಗ ಶ್ರೀಕೃಷ್ಣ ನುಡಿದ. ‘ಈ ಜಂಬುದ್ವೀಪವೂ ಇದನ್ನು ಸುತ್ತುವರಿದಿರುವ ಲವಣ ಸಮುದ್ರವೂ ಒಂದು ಲಕ್ಷ ಯೋಜನ ವಿಸ್ತಾರವಾಗಿದೆ. ಮುಂದೆ ಆರು ದ್ವೀಪಗಳೂ ಆರು ಸಮುದ್ರಗಳೂ ಒಂದಕ್ಕಿಂತ ಒಂದು ಎರಡು ಪಟ್ಟು ಅಧಿಕ ವಿಸ್ತಾರವಾಗಿವೆ. ಮೇರುವಿನ ಎರಡೂ ಪಾರ್ಶ್ವಗಳಲ್ಲಿ ಏಳನೇ ಸಮುದ್ರದ ವರೆಗಿನ ಒಟ್ಟು ವಿಸ್ತಾರ ಐದು ಕೋಟಿ ಏಳು ಲಕ್ಷ ಯೋಜನೆಗಳು. ಮುಂದೆ ವಜ್ರಲೇಪ ಸಹಿತ ಸ್ವರ್ಣಭೂಮಿ. ಇದು ಮೇರುವಿನ ಎರಡು ಪಾರ್ಶ್ವಗಳಲ್ಲಿ ಒಟ್ಟು ಒಂದು ಕೋಟಿ ಆರು ಲಕ್ಷ ಇಪ್ಪತ್ತೆಂಟು ಸಾವಿರ ಯೋಜನಗಳು. ಮೂರೂ ಸೇರಿದರೆ ಏಳು ಕೋಟಿ ಹದಿನಾಲ್ಕು ಲಕ್ಷ ಇಪ್ಪತ್ತೆಂಟು ಸಾವಿರ ಯೋಜನಗಳು. ಇದರ ಎರಡರಷ್ಟು ತಮಸ್ಸು. ಅದರ ಎರಡರಷ್ಟು ಘನೋದಕ ಸಮುದ್ರ. ಮೂರು ಸೇರಿದರೆ ಐವತ್ತು ಕೋಟಿ ಯೋಜನಗಳು. ಹೀಗೆ ಮೇರುಪರ್ವತದಿಂದ ಮೇಲೂ ಕೆಳಗೂ ನಾಲ್ಕು ದಿಕ್ಕುಗಳಲ್ಲಿ ಇಪ್ಪತ್ತೈದು ಕೋಟಿ ಯೋಜನ ವಿಸ್ತಾರವಿದೆ. ನಮ್ಮ ರಥ ಕೇವಲ ಒಂದು ಘಳಿಗೆಯಲ್ಲಿ ಅಂದರೆ ಇಪ್ಪತ್ತನಾಲ್ಕು ನಿಮಿಷಗಳಲ್ಲಿ ಇಪ್ಪತ್ತೈದು ಕೋಟಿ ಯೋಜನ ಉದ್ದದ ದಾರಿಯಲ್ಲಿ ಹೋಗಿ ಬಂದಿದೆ. ಮುಂದೆ ನೂರು ಕೋಟಿ ಯೋಜನ ದಪ್ಪದ ಬ್ರಹ್ಮಾಂಡಕಟಾಹವಿದೆ. ಇದೇ ಪೃಥಿವೀ ಆವರಣ. ಮುಂದೆ ಜಲತೇಜವಾಯು ಆಕಾಶ ಅಹಂಕಾರ ಮಹತ್ತತ್ವ ಗುಣತ್ರಯಾವರಣಗಳು ಒಂದಕ್ಕಿಂತ ಒಂದು ಹತ್ತು ಪಟ್ಟು ಹೆಚ್ಚು ದಪ್ಪವಾಗಿವೆ. ಇಂಥ ನವಾವರಣ ಸಹಿತವಾದ ಬ್ರಹ್ಮಾಂಡ ನನ್ನ ಅಧೀನ. ಅದರಿಂದ, ಅರ್ಜುನ, ನೀನು ಅಹಂಕಾರ ಪಡಬಾರದು’

ಚತುರ್ದಶ ಲೋಕಗಳು **255**

ಒಮ್ಮೆ ತ್ರಿಲೋಕ ಸಂಚಾರಿ ನಾರದರು ಬಂದು ಧರ್ಮರಾಜನಿಗೆ ಎಲ್ಲ ಲೋಕಗಳ ಎತ್ತರ ಹಾಗೂ ವಿಸ್ತಾರಗಳನ್ನು ಹೇಳಿದರು. ಭೂಮಿಯಿಂದ ಅಂತರಿಕ್ಷ ಒಂದುಲಕ್ಷ ಯೋಜನ ಎತ್ತರ. ಸ್ವರ್ಗ ಐವತ್ತು

ಲಕ್ಷ ಯೋಜನ ಎತ್ತರ. ಸ್ವರ್ಗ ಮಹ ಜನ ತಪ ಈ ನಾಲ್ಕು ಲೋಕಗಳ ಒಟ್ಟು ಎತ್ತರ ನಾಲ್ಕು ಕೋಟಿ ಆರು ಲಕ್ಷ ಇಪ್ಪತ್ತೈದು ಸಾವಿರ ಯೋಜನಗಳು. ತಪೋಲೋಕದಿಂದ ಸತ್ಯಲೋಕದ ಎತ್ತರವೂ ಅಷ್ಟೇ ಇದೆ. ಅದರ ಎರಡರಷ್ಟು, ಅಂದರೆ, ಎಂಟು ಕೋಟಿ ಹನ್ನೆರಡುವರೆ ಲಕ್ಷ ಯೋಜನ ಭೂಮಿಯಿಂದ ಸತ್ಯಲೋಕಕ್ಕೆ ಇರುವ ಎತ್ತರ. ಅದರ ಎರಡರಷ್ಟು ಅಂದರೆ ಹದಿನಾರು ಕೋಟಿ ಇಪ್ಪತ್ತೈದು ಲಕ್ಷ ಯೋಜನ ಭೂಮಿಯಿಂದ ವೈಕುಂಠ ಲೋಕಕ್ಕೆ ಇರುವ ಎತ್ತರ. ಮೇಲುಮೇಲಿನ ಲೋಕಗಳಲ್ಲಿ ಒಂದಕ್ಕಿಂತ ಒಂದು ನೂರುಪಾಲು ಅಧಿಕ ಸುಖವಿರುತ್ತದೆ.

ಯಮಸಭೆಯಲ್ಲಿ ಪಾಂಡುರಾಜ 259

ಸತ್ಯಲೋಕದಲ್ಲಿ ಬ್ರಹ್ಮನ ಪರಿವಾರವಾಗಿ ವೇದಾಭಿಮಾನಿ ದೇವತೆಗಳು ಇರುತ್ತಾರೆ. ದೇವತೆಗಳೂ ಋಷಿಗಳೂ ಹರಿಶ್ಚಂದ್ರ ಮಹಾರಾಜನೂ ದೇವೇಂದ್ರನ ಸಭೆಯಲ್ಲಿ ಇರುತ್ತಾರೆ. ಪಾಂಡುರಾಜನೊಂದಿಗೆ ಬೇರೆ ಎಲ್ಲ ರಾಜರೂ ಯಮನ ಸಭೆಯಲ್ಲಿ ಇರುತ್ತಾರೆ ಎಂದು ನಾರದರು ಹೇಳಿದಾಗ ಧರ್ಮರಾಜ ಗಾಬರಿಯಾಗಿ ಕೇಳಿದ, 'ನಮ್ಮ ತಂದೆಗೆ ಸ್ವರ್ಗ ಏಕೆ ಸಿಗಲಿಲ್ಲ?' ನಾರದರು ಹೇಳಿದರು, 'ಪಾಂಡುವೆ ನನ್ನ ಮೂಲಕ ನಿನಗೆ ಹೇಳಿ ಕಳಿಸಿದ್ದಾನೆ, ನೀನು ರಾಜಸೂಯಯಾಗ ಮಾಡು, ಆಗ ನನಗೆ ಸ್ವರ್ಗ ಲಭಿಸುತ್ತದೆ, ಎಂದು'.

ರಾಜಸೂಯಯಾಗಕ್ಕೆ ಕೃಷ್ಣನ ಸಂಮತಿ 261

ಧರ್ಮರಾಜ ರಾಜಸೂಯಯಾಗ ಮಾಡುವುದರ ಬಗ್ಗೆ ಕೃಷ್ಣನ ಅಭಿಪ್ರಾಯಕ್ಕಾಗಿ ಅವನನ್ನು ದ್ವಾರಕೆಯಿಂದ ಕರೆಸಿಕೊಂಡ. ಅದಕ್ಕೆ ಸ್ವಲ್ಪ ಮುಂಚೆಯೆ ಜರಾಸಂಧನಿಂದ ಬಂಧಿತರಾಗಿದ್ದ ರಾಜರುಗಳು ತಮ್ಮ ಬಿಡುಗಡೆಗಾಗಿ ಕೃಷ್ಣನನ್ನು ಮೊರೆಹೊಕ್ಕಿದ್ದರು. ಜರಾಸಂಧನ ವಧೆಯಿಂದ ರಾಜರ ಬಿಡುಗಡೆ ರಾಜಸೂಯಯಾಗ ಎರಡೂ ಸಾಧ್ಯವಾಗುವುದು ಎಂಬ ದೃಷ್ಟಿಯಿಂದ ಕೃಷ್ಣ ಧರ್ಮರಾಜನ ಮುಂದೆ ಜರಾಸಂಧ ವಧೆಯನ್ನೆ ಪ್ರಸ್ತಾಪಿಸಿದ. ರಾಜಸೂಯ ಯಾಗ ಮಾಡಲು ಮುಖ್ಯವಾಗಿ ಅರ್ಹತೆ ಇರುವುದು ಬ್ರಹ್ಮ ಪದವಿಗೆ ಯೋಗ್ಯನಾದವನಿಗೆ ಮಾತ್ರ. ಯೋಗ್ಯನಲ್ಲದವನು ಮಾಡಿದರೂ ಸಮಾನ ಯೋಗ್ಯತೆ ಉಳ್ಳವರ ನಡುವೆ ಸ್ವಲ್ಪ ಉತ್ತಮತೆ ಬರುತ್ತದೆ. ಅದರಿಂದಲೆ ರಾಜರುಗಳಲ್ಲೆಲ್ಲ ಹರಿಶ್ಚಂದ್ರ ಉತ್ತಮನೆನಿಸಿದ್ದಾನೆ. ವಸ್ತುತಃ ಪಾಂಡು ಒಬ್ಬ ದೇವತೆ. ಎಲ್ಲ ಚಕ್ರವರ್ತಿಗಳಿಗಿಂತ ಯೋಗ್ಯತೆಯಲ್ಲಿ ಉತ್ತಮನೆ. ಆದರೂ ಅವನು ತಪಸ್ಸು ಮಾಡುತ್ತಿದ್ದಾಗ ಬಳಿಗೆ ಬಂದ ದೇವೇಂದ್ರನಿಗೆ ಅವನು ಸತ್ಕಾರ ಮಾಡಲಿಲ್ಲ. ದೇವೇಂದ್ರ ಶಪಿಸಿದ 'ಮಾನವ ಜನ್ಮ ಹೊಂದಿ ಸತ್ತ ಬಳಿಕ ನಿನ್ನ ಮೂಲರೂಪವನ್ನು ಸೇರದೆ ಯಮಸಭೆಯಲ್ಲಿ ಕುಳಿತುಕೊಳ್ಳು. ರಾಜಸೂಯಯಾಗ ಮಾಡಿದರೆ ಸ್ವರ್ಗದಲ್ಲಿ ನಿನ್ನ ಮೂಲರೂಪವನ್ನು ಸೇರುವಿ' ಎಂದು. ಅದರಿಂದ 'ಧರ್ಮರಾಜ, ನೀನು ರಾಜಸೂಯವನ್ನು ಅವಶ್ಯ ಮಾಡು. ಆದರೆ ಜರಾಸಂಧ ಭೂಮಿಯ ಮೇಲೆ ಇರುವಷ್ಟು ಕಾಲ ರಾಜಸೂಯ ನಿನಗೆ ಕೇವಲ ಕನಸಾಗೇ ಉಳಿದೀತು.'

'ಹಾಗಾದರೆ ನನಗೆ ಅದು ಬೇಡ' ಎಂದ ಧರ್ಮರಾಜ.

ಭೀಮಸೇನನ ಉತ್ಸಾಹ 268

'ನಾವೇಕೆ ಭಯಪಡಬೇಕು? ನಮಗೆ ಹರಿಯ ಅನುಗ್ರಹವಿದೆ. ಮೈಯಲ್ಲಿ ಬಲವಿದೆ. ಯತ್ನ ಮಾಡಿ ಬ್ರಹ್ಮಪದವಿಯನ್ನೂ ಗಳಿಸಬಲ್ಲೆವು!' ಎಂದ ಭೀಮಸೇನ. ಕೃಷ್ಣನೆಂದ, 'ಜರಾಸಂಧ ಶೈವಮತದವರಲ್ಲಿ ಅಗ್ರಗಣ್ಯ. ಅವನನ್ನು ಅಣಗಿಸಬಲ್ಲವನೆ ವೈಷ್ಣವಾಗ್ರಣಿ. ಅವನೆ ಬ್ರಹ್ಮಪದವಿಯನ್ನು ಸಂಪಾದಿಸಬಲ್ಲ.' ಕೃಷ್ಣನಿಗೆ 'ಭೀಮನೆ ಅಂಥವನು, ಭಾವಿ ಬ್ರಹ್ಮ. ಅವನನ್ನು ಜರಾಸಂಧನ ವಧೆಗೆ ಕಳಿಸು' ಎನ್ನುವ

ಅಭಿಪ್ರಾಯವಿದ್ದಿತು. ಇದನ್ನು ಊಹಿಸಿ ತಿಳಿದ ಧರ್ಮರಾಜ ಭೀತನಾದ. 'ನನಗೆ ಈ ಯಾಗವೆ ಬೇಡ' ಎಂದ. ತಕ್ಷಣ ಭೀಮ ನುಡಿದ, 'ನಾನು ಜರಾಸಂಧನನ್ನು ಕೊಲ್ಲುತ್ತೇನೆ.' 'ಕೃಷ್ಣನೆ ಜರಾಸಂಧನಿಗೆ ಹೆದರಿ ಮಥುರೆಯನ್ನು ಬಿಟ್ಟು ಸಮುದ್ರ ಮಧ್ಯಕ್ಕೆ ಹೋಗಿ ದ್ವೀಪದಲ್ಲಿ ರಾಜ್ಯ ಕಟ್ಟಿಕೊಂಡಿರುವಾಗ ನಾವು ಎಷ್ಟರವರೆಂದು ಧರ್ಮರಾಜನಿಗೆ ಆತಂಕ. ಆದಕ್ಕೆ ಕೃಷ್ಣನೆಂದ, ಬಹಳ ಸೈನ್ಯ ಉಳ್ಳ ಬಲಿಷ್ಠನಾದ ಶತ್ರು ಬಂದಾಗ ಅಲ್ಪಸೈನ್ಯ ಉಳ್ಳ ರಾಜ ಇದೇ ನೀತಿಯನ್ನು ಅನುಸರಿಸಬೇಕೆಂದು ಮತ್ತು ನಾನು ಸ್ವತಃ ಕೊಲ್ಲದೆ ನನ್ನವರಿಂದ ಕೊಲ್ಲಿಸಿದರೆ ನನಗೆ ಹೆಚ್ಚು ಪ್ರತಿಷ್ಠೆ ಲಭಿಸುವುದೆಂದು ನಾನು ಹಾಗೆ ಮಾಡಿದೆ, ಅಶಕ್ತಿಯಿಂದಲ್ಲ, ನನ್ನಲ್ಲಿ ವಿಶ್ವಾಸವಿರುವುದಾದರೆ ಭೀಮಾರ್ಜುನರನ್ನು ನನ್ನ ಜೊತೆಗೆ ಕಳಿಸು. ಅವರನ್ನು ಕ್ಷೇಮವಾಗಿ ಹಿಂದೆ ತಂದು ನಿನಗೊಪ್ಪಿಸುವೆನು' ಎಂದು. ಆಗ ಧರ್ಮರಾಜ ಒಪ್ಪಿದ. ಕೃಷ್ಣ ಭೀಮ ಅರ್ಜುನರು ಮಗಧ ದೇಶಕ್ಕೆ ಹೊರಟರು.

ಮಗಧ ದೇಶದಲ್ಲಿ ಕೃಷ್ಣ ಭೀಮಾರ್ಜುನರು **273**

ಕೃಷ್ಣಭೀಮಾರ್ಜುನರು ಸ್ನಾತಕ ಬ್ರಾಹ್ಮಣ ವೇಷಧರಿಸಿ ಮಗಧ ದೇಶಕ್ಕೆ ಹೋದರು. ಅಲ್ಲಿ ಊರಹೊರಗಿರುವ ಶಿವಲಿಂಗಾಕಾರದ ಗುಡ್ಡವನ್ನು ಕೈಯಿಂದ ಗುದ್ದಿ ಕೆಡವಿದರು. ಅದನ್ನು ಜರಾಸಂಧ ಶಿವಲಿಂಗವೆಂದು ಪೂಜಿಸುತ್ತಿದ್ದ. ಬಳಿಕ ಮೂವರೂ ನಗರವನ್ನು ಮಹಾದ್ವಾರದಿಂದ ಪ್ರವೇಶಿಸದೆ ಕೋಟೆಯ ಹಿಂಭಾಗವನ್ನು ಒಡೆದು ಒಳಗೆ ಪ್ರವೇಶಿಸಿದರು. ಮೂರು ನಗಾರಿಗಳು ನಗರಕ್ಕೆ ಅತ್ಯಂತ ಮಂಗಳಕರವೆಂದು ಪೂಜೆಗೊಳ್ಳುತ್ತಿದ್ದುವು. ಅವುಗಳನ್ನೂ ಒಡೆದು ಹಾಕಿದರು. ದಾರಿಯ ಅಂಗಡಿಗಳಲ್ಲಿ ಗಂಧ ಹೂಮಾಲೆಗಳನ್ನು ಬಲಾತ್ಕಾರವಾಗಿ ಕಿತ್ತುಕೊಂಡು ಧರಿಸಿದರು. ಎಲೊ! ಜರಾಸಂಧ! ಎಂದು ಕೂಗುತ್ತ ಅರಮನೆಯ ಹಿಂಬಾಗಿಲಿನಿಂದ ನುಗ್ಗಿದರು. 'ಜರಾಸಂಧ, ನೀನು ಅವೈದಿಕವಾದ ನರಮೇಧಕ್ಕಾಗಿ ಇಪ್ಪತ್ತೆರಡು ಸಾವಿರದ ಎಂಟು ನೂರು ಮಂದಿ ರಾಜರುಗಳನ್ನು ಬಂಧಿಸಿರುವಿ. ಅವರನ್ನು ನಮಗೆ ಬಿಟ್ಟುಕೊಡು. ಇಲ್ಲವೆ ಸಾಯಲು ನಿಶ್ಚಯಿಸಿರುವಿಯಾದರೆ ನಮ್ಮೊಡನೆ ಯುದ್ಧಮಾಡು' ಎಂದು.

ಭೀಮನ ಯಶಸ್ಸು **278**

ಯುದ್ಧಕ್ಕೆ ನಮ್ಮಲ್ಲಿ ಯಾರಾದರೊಬ್ಬನನ್ನು ಆರಿಸಿಕೊಳ್ಳಬಹುದು ಎಂದ ಕೃಷ್ಣ. ಜರಾಸಂಧನಿಗೆ ಕೃಷ್ಣನೊಡನೆ ಯುದ್ಧಮಾಡಲು ಪ್ರಾಣಭಯ. ಅದನ್ನು ತೋರಿಕೊಳ್ಳದೆ ಗೋವಳ ಎನ್ನುತ್ತ ನಿರಾಕರಿಸಿದ. 'ಅರ್ಜುನ ಬಾಲಕನೆಂದ. ವಯಸ್ಸಿನಲ್ಲಿ ಐವತ್ತೈದರವನಾದರೂ ಶಕ್ತಿಯಲ್ಲಿ ಜರಾಸಂಧನ ದೃಷ್ಟಿಯಲ್ಲಿ ಸಣ್ಣ ಬಾಲಕ. ಅವನನ್ನು ಯುದ್ಧಕ್ಕೆ ಕರೆದರೆ ತನಗೆ ಅಪಮಾನ. ಒಮ್ಮೆ ನನ್ನ ಬಲವನ್ನು ಪರೀಕ್ಷಿಸಿ ನೋಡು ಎನ್ನಲು ಅರ್ಜುನನಿಗೂ ಭಯ. ಭೀಮನೆ ತನಗೆ ಸರಿ ಎನ್ನುತ್ತಾನೆ ಜರಾಸಂಧ. ಭೀಮನೊಡನೆ ಯುದ್ಧ ಮಾಡಿ ಸೋತರೂ ಕೀರ್ತಿ, ಗೆದ್ದರೂ ಕೀರ್ತಿ, ಗೆದ್ದರೆ ಪ್ರಾಣವೂ ಉಳಿದೀತು' ಎಂದು ಅವನ ಎಣಿಕೆ. ಹೀಗೆ ಭೀಮನ ಬಲ ಶತ್ರುಗಳೂ ಕೊಂಡಾಡುವಂಥಹುದೆಂದು ಅರ್ಜುನನಿಗೆ ಮನವರಿಕೆಯಾಯಿತು. ಅಹಂಕಾರ ಅಳಿಯಿತು. ಅದಕ್ಕಾಗಿಯೇ ಕೃಷ್ಣ ಅರ್ಜುನನನ್ನು ಜೊತೆಗೆ ಕರೆತಂದಿದ್ದ.

ಭೀಮ ಜರಾಸಂಧರ ಯುದ್ಧ **282**

ಭೀಮ ನನ್ನಿದಿರಿನಲ್ಲಿ ಒಂದು ಕ್ಷಣವೊ ಅರ್ಧಕ್ಷಣವೊ ನಿಲ್ಲಬಲ್ಲ ಎಂದು ಜರಾಸಂಧ ತನ್ನ ಪೌರುಷವನ್ನು ಹೇಳಿಕೊಂಡಿದ್ದಕ್ಕೆ ಭೀಮ ಹದಿನೈದು ದಿನಗಳ ಕಾಲ ಅವಿಶ್ರಾಂತವಾಗಿ ಅನ್ನನಿದ್ರೆ ತೊರೆದು ಯುದ್ಧ ಮಾಡಿದ. ಮತ್ತು ಕಾರ್ತಿಕ ಬಹುಳ ಪ್ರತಿಪದೆಯಿಂದ ತೊಡಗಿ ಹದಿನಾಲ್ಕುದಿನ ಯುದ್ಧಮಾಡಿ ಚತುರ್ದಶಿ ರಾತ್ರಿ ಜರಾಸಂಧ ಕುಸಿಯತೊಡಗಿದ. ಆದರೆ ಭೀಮ ತನ್ನ ಮೂಲರೂಪವನ್ನು ಸ್ಮರಿಸಿ ತನ್ನ ಬಲವನ್ನು ಇನ್ನೂ ಹೆಚ್ಚು ವ್ಯಕ್ತಮಾಡಿಕೊಂಡ. ಅಮಾವಾಸ್ಯೆ ದಿನ ಶತ್ರುವನ್ನು ಕೊಲ್ಲಲು ಸಂಕಲ್ಪಿಸಿದ.

ಜರಾಸಂಧ ವಧೆ 285

ಭೀಮ ಕೃಷ್ಣನನ್ನು ನಮಿಸಿ ಅರ್ಜುನನನ್ನು ಆಲಿಂಗಿಸಿ ಸಿಂಹ ಆನೆಯನ್ನು ಹಿಡಿಯುವಂತೆ ಜರಾಸಂಧನನ್ನು ಜುಟ್ಟಿನಲ್ಲಿ ಹಿಡಿದು ಬೆನ್ನಮೇಲೆ ಮೊಣಕಾಲೂರಿ ಸೊಂಟವನ್ನು ಮುರಿದ. ಬ್ರಹ್ಮಾಂಡ ಸ್ಫೋಟದಂಥ ಶಬ್ದವಾಯಿತು. ಬಳಿಕ ಶರೀರವನ್ನು ಎರಡು ಹೋಳಾಗಿ ಸೀಳಿದ. ಮೊದಲಿಗೇ ಮರ್ಮಸ್ಥಳಕ್ಕೆ ಹೊಡೆದು ಕೊಂದರೆ ಅದು ತನ್ನ ಬಲಕ್ಕೆ ಅನುರೂಪವಾಗದೆಂದು ಸೊಂಟವನ್ನೆ ಮುರಿದ. ಮರ್ಮಸ್ಥಳವೂ ಗೊತ್ತೆಂದು ತೋರಿಸಲು ಶರೀರವನ್ನೂ ಸೀಳಿದ. ಈ ರಣಯಜ್ಞವನ್ನು ಪ್ರತ್ಯಕ್ಷ ನೋಡುತ್ತಿದ್ದ ಶ್ರೀಕೃಷ್ಣನಿಗೆ ಸಮರ್ಪಿಸಿದ. ಜರಾಸಂಧನ ಮಗನಾದ ಸಹದೇವ ತನ್ನ ತಂಗಿಯನ್ನೂ ಒಂದು ದಿವ್ಯರಥವನ್ನೂ ಕೊಟ್ಟ. ಈ ರಥ ಹಿಂದೆ ಶ್ರೀಹರಿ ದೇವೇಂದ್ರನ ಮೂಲಕ ವಸುಚಕ್ರವರ್ತಿಗೆ ಕೊಟ್ಟಿದ್ದು, ಅವನ ವಂಶದವನಾದ್ದರಿಂದ ಜರಾಸಂಧನಿಗೆ ಅದು ಲಭಿಸಿತ್ತು.

ಸಹದೇವನಿಗೆ ಸಹದೇವನ ತಂಗಿ 289

ಸಹದೇವನ ತಂಗಿ ಅಶ್ವಿನಿದೇವತೆಗಳ ಪತ್ನಿ ಉಷೆಯ ಅವತಾರ. ಅದರಿಂದ ಭೀಮ ಅವಳನ್ನು ತಮ್ಮನಾದ ಸಹದೇವನಿಗೇ ಕೊಟ್ಟ. ನಕುಲ ಹಿರಿಯನಾದರೂ ಅವನು ಆಗಲೆ ಮದ್ರರಾಜ ಶಲ್ಯನ ಮಗಳನ್ನು ಮದುವೆಯಾಗಿದ್ದ. ಅವಳೂ ಉಷೆಯ ಅವತಾರ. ಹೀಗೆ ನಕುಲಸಹದೇವರು ಎರಡನೇ ಮದುವೆಯಾದ ಬಳಿಕ ದ್ರೌಪದಿಯ ಸಂಗವನ್ನೆ ಪರಿತ್ಯಜಿಸಿ ಅತ್ತಿಗೆ ಎಂದೇ ಕಂಡರು. ಕೃಷ್ಣ ಭೀಮಾರ್ಜುನರು ದಿಗ್ವಿಜಯದ ಶಂಖನಾದ ಮಾಡುತ್ತ ಇಂದ್ರಪ್ರಸ್ಥಕ್ಕೆ ಹಿಂದಿರುಗಿದರು. ಯಾಗ ಪ್ರಾರಂಭವಾಯಿತು.

ಭೀಮನ ದಿಗ್ವಿಜಯ 293

ವೇದವ್ಯಾಸರು ಯಾಗದ ಸಲುವಾಗಿ ದಿಗ್ವಿಜಯ ಮಾಡಲು ಮುಖ್ಯವಾಗಿ ಭೀಮನಿಗೇ ಆದೇಶ ನೀಡಿದರು. ಗಾಂಡೀವ ಧನುಸ್ಸು ದಿವ್ಯರಥ ಧ್ವಜಗಳೆಲ್ಲ ನನ್ನಲ್ಲಿ ಇವೆ. ನನಗೇ ದಿಗ್ವಿಜಯದ ಆದೇಶ ನೀಡಿರಿ ಎಂದ ಅರ್ಜುನ. ವೇದವ್ಯಾಸರು ಹೇಳಿದರು. 'ಅರ್ಜುನ! ಕೀಚಕ ಮುಂತಾದವರು ನಿನಗೆ ವಶರಾಗುವವರಲ್ಲ. ಕರ್ಣನೂ ಕವಚಕುಂಡಲಧಾರಿಯಾಗಿರುವಷ್ಟು ಕಾಲ ನಿನ್ನಿಂದ ಹತನಾಗುವುದೂ ಇಲ್ಲ, ಬದುಕಿದ್ದರೆ ನಿನ್ನಲ್ಲಿ ತೀವ್ರ ಸ್ಪರ್ಧೆ ಉಳ್ಳವನಾದ್ದರಿಂದ ಕಪ್ಪ ಕೊಡುವುದೂ ಇಲ್ಲ. ಜರಾಸಂಧನನ್ನು ಕೊಂದ ಭೀಮನಿಗೆ ಮಾತ್ರ ಎಲ್ಲರೂ ಭಯಪಡುತ್ತಾರೆ. ಅದರಿಂದ ಅವನು ಪೂರ್ವದಿಕ್ಕಿಗೆ ಹೋಗಲಿ. ನೀನು ಭರತಖಂಡದಲ್ಲಿ ಉತ್ತರದಿಕ್ಕಿಗೂ ಹೊರಗೆ ಎಲ್ಲ ದ್ವೀಪಗಳಿಗೂ ಪಾತಾಳ ಲೋಕಗಳಿಗೂ ಹೋಗು. ಪಶ್ಚಿಮ ದಕ್ಷಿಣ ದಿಕ್ಕುಗಳಿಗೆ ನಕುಲ ಸಹದೇವರು ಹೋಗಲಿ.' ಅದರಂತೆ ಭೀಮ ಪೂರ್ವ ದಿಕ್ಕಿನಲ್ಲಿ ಪೌಂಡ್ರಕ ವಾಸುದೇವ ಕರ್ಣರನ್ನೂ ಹಿಮಾಲಯದಲ್ಲಿ ಇಂದ್ರಾದಿ ದೇವತೆಗಳನ್ನೂ ಶೇಷ ಗರುಡರನ್ನೂ ಗೆದ್ದು ಸಮುದ್ರದಲ್ಲಿ ಈಜಾಡಿ ಬಾಣನ ನಗರಕ್ಕೂ ಹೋಗಿ ಅಲ್ಲಿ ಆನೆಯ ರೂಪದಿಂದ ಬಂದ ಶಿವನನ್ನೂ ಗೆದ್ದು ಸಂತೋಷಗೊಳಿಸಿದ. ಶಿವ ಬಾಣನಿಂದ ಹೇರಳ ಕಪ್ಪಕೊಡಿಸಿದ. ಎಲ್ಲವನ್ನೂ ಭೀಮ ವೇದವ್ಯಾಸ ಕೃಷ್ಣರ ಮುಂದೆ ತಂದೊಪ್ಪಿಸಿ ನಮಿಸಿದ. ವೇದವ್ಯಾಸರು ಹೇಳಿದರು, 'ಹಿಂದೆ ಬ್ರಹ್ಮನೊಬ್ಬ ಹೀಗೆ ಎಲ್ಲರನ್ನೂ ಗೆದ್ದಿದ್ದ. ಇದೀಗ ನೀನೆ ಎರಡನೆಯವನಾದೆ.'

ನಕುಲ ಸಹದೇವರ ದಿಗ್ವಿಜಯ 301

ದಕ್ಷಿಣದಲ್ಲಿ ರುಕ್ಮಿ ಸಹದೇವನೊಡನೆ ಯುದ್ಧ ಮಾಡಲಿಲ್ಲ. ಆತ ಶಿವನನ್ನು ಒಲಿಸಿಕೊಂಡು ಧನುಸ್ಸನ್ನು ಪಡೆದರೂ ಕೃಷ್ಣನೊಡನೆ ವಿರೋಧ ಮಾಡಿದರೆ ಧನುಸ್ಸು ತಿರುಗಿ ನನ್ನ ಬಳಿಗೇ ಬರುತ್ತದೆ ಎಂದಿದ್ದ, ಶಿವ. ಅದರಿಂದ ಈಗ ಕಪ್ಪ ಕೊಡದಿದ್ದರೆ ಕೃಷ್ಣನಿಗೆ ವಿರೋಧ ಮಾಡಿದಂತಾದೀತೆಂದು ಭಯದಿಂದ

ಕಪ್ಪಕೊಟ್ಟ. ಸಹದೇವ ಘಟೋತ್ಕಚನನ್ನು ಲಂಕೆಗೆ ಕಳಿಸಿದ. ಶ್ರೀರಾಮ ಅಂದೇ ವಿಭೀಷಣನಿಗೆ ಸಹದೇವ ಬಂದಾಗ ಪಾಂಡವರ ಯಜ್ಞಕ್ಕೆ ಕಪ್ಪಕೊಡು' ಎಂದಿದ್ದ. ಅದರಿಂದ ಯುದ್ಧವಿಲ್ಲದೆಯೆ ಅವನೂ ಕಪ್ಪ ಕೊಟ್ಟ. ನಕುಲನೂ ಪಶ್ಚಿಮದಿಕ್ಕಿನಲ್ಲಿ ಎಲ್ಲ ರಾಜರನ್ನೂ ಗೆದ್ದು ಕಪ್ಪಗಳನ್ನು ತಂದ. ಶಲ್ಯ ಸೋದರಮಾವನಾದ್ದರಿಂದ ಪ್ರೀತಿಯಿಂದಲೆ ಕಪ್ಪ ಕೊಟ್ಟಿದ್ದ.

ಅರ್ಜುನನ ದಿಗ್ವಿಜಯ **303**

ಅರ್ಜುನ ಉತ್ತರದಿಕ್ಕಿನಲ್ಲಿ ತ್ರಿಗರ್ತ ಹಾಗೂ ಗುಡ್ಡಗಾಡುಗಳ ರಾಜರುಗಳನ್ನು ಗೆದ್ದ. ಪ್ರಾಗ್‌ಜ್ಯೋತಿಷದಲ್ಲಿ ಭಗದತ್ತನನ್ನು ಪರಾಭವಗೊಳಿಸಿದ. ಸಪ್ತದ್ವೀಪಗಳನ್ನೂ ಪಾತಾಳಗಳನ್ನೂ ಗೆದ್ದ. ಬಲಿಚಕ್ರವರ್ತಿ ವಾಮನನ ಆಜ್ಞೆಯಂತೆ ಯುದ್ಧವಿಲ್ಲದೆಯೆ ಕಪ್ಪನೀಡಿದ. ಹೀಗೆ ಒಂದು ವರ್ಷದೊಳಗೆ ನಾಲ್ವರೂ ಸೋದರರು ದಿಗ್ವಿಜಯ ಮಾಡಿ ಹೇರಳ ದ್ರವ್ಯರಾಶಿಗಳನ್ನು ತಂದರು. ನಕುಲ ಸಂಪಾದಿಸಿದ ರತ್ನಗಳ ಪರ್ವತದಂಥ ರಾಶಿ ಹತ್ತು ಯೋಜನ ಉದ್ದಗಲ ಎತ್ತರವಾಗಿತ್ತು. ಸಹದೇವನದು ಮೂವತ್ತು ಯೋಜನ. ಭೀಮನದು ನೂರು ಯೋಜನ. ಅರ್ಜುನನದು ನಾನೂರು ಯೋಜನ. ಇಂದ್ರಾವತಾರನಾದ ಪ್ರಯುಕ್ತ ಅವನಿಗೆ ದೇವದೂತರು ಏಳೂ ದ್ವೀಪಗಳಲ್ಲಿರುವ ಎಲ್ಲ ರತ್ನಗಳನ್ನೂ ತಂದೊಪ್ಪಿಸಿದ್ದರು.

ರಾಜಸೂಯಯಾಗ **307**

ವೇದವ್ಯಾಸರ ನೇತೃತ್ವದಲ್ಲಿ ಯಾಗ ನಡೆಯಿತು. ಹಿರಿಯಣ್ಣನಾದ ಪ್ರಯುಕ್ತ ಧರ್ಮರಾಜ ದೀಕ್ಷಿತನಾದ. ದ್ರೌಪದಿ ಯಜ್ಞಪತ್ನಿಯಾಗಿ ಕುಳಿತಳು. ಹದಿನಾಲ್ಕು ಲೋಕವನ್ನೂ ಪಾಂಡವರು ದಿಗ್ವಿಜಯ ಕಾಲದಲ್ಲಿ ಯಾಗಕ್ಕೆ ಆಮಂತ್ರಿಸಿದ್ದರಿಂದ ಬ್ರಹ್ಮರುದ್ರಾದಿ ದೇವತೆಗಳೂ ಮಾನವರೂಪದಿಂದ ಬಂದಿದ್ದರು. ಭೀಷ್ಮದ್ರೋಣ ಮುಂತಾದವರೂ ಎಲ್ಲ ಯಾದವರೂ ಬಂದಿದ್ದರು. ಹೀಗೆ ಸಕಲ ಲೋಕ ಸಂಗಮ ಕ್ಷೇತ್ರವಾಗಿದ್ದ ಯಾಗಶಾಲೆಯಲ್ಲಿ ಯಾಗದ ಅಂಗವಾಗಿ ತತ್ವವಿಚಾರಗೋಷ್ಠಿ ನಡೆಯಿತು. ಅದಕ್ಕೆ ಭಗವಾನ್ ವ್ಯಾಸರು ಅಧ್ಯಕ್ಷರು. ಹರಿಸರ್ವೋತ್ತಮತ್ವ ನಿರ್ಣಯವಾಯಿತು.

ಅಗ್ರಪೂಜೆ **310**

ವೇದವ್ಯಾಸ ಪರಶುರಾಮ ಕೃಷ್ಣರ ಸಮಕ್ಷಮದಲ್ಲಿ ಧರ್ಮರಾಜ ಯಾಗದ ಅಗ್ರಪೂಜೆಯನ್ನು ಯಾರಿಗೆ ಕೊಡಬೇಕೆಂದು ಭೀಷ್ಮನನ್ನು ಕೇಳಿದ. ಏಕೆಂದರೆ ಬ್ರಹ್ಮಾದಿ ದೇವತೆಗಳು ಸಾಮಾನ್ಯ ಮನುಷ್ಯರ ರೂಪು ತಳೆದು ಬಂದಿದ್ದರಿಂದ, ಋಷಿ ಮುನಿಗಳು ಮಾನವರಿಗೆ ಹೆಚ್ಚು ಪರಿಚಿತರಲ್ಲದುದರಿಂದ, ಸರ್ವಶಾಸ್ತ್ರಾಭಿಜ್ಞನೆಂದು ಎಲ್ಲ ರಾಜರಿಗೂ ಸಂಮತನಾಗಿದ್ದ ಹಿರಿಯ ವ್ಯಕ್ತಿ ಭೀಷ್ಮಪಿತಾಮಹನನ್ನೇ ಕೇಳಿದ ಧರ್ಮರಾಜ. ಕೃಷ್ಣನಿಗೆ ಅಗ್ರಪೂಜೆ ನೀಡು ಎಂದ ಭೀಷ್ಮ. ವೇದವ್ಯಾಸ ಪರಶುರಾಮರೂ ಸಾಕ್ಷಾತ್ ಹರಿರೂಪಗಳೆ. ಆದರೂ ಬ್ರಾಹ್ಮಣರೆಂದು ಪೂಜೆಯಾದೀತು, ಹರಿಯ ಅವತಾರರೆಂದಲ್ಲ. ಕೃಷ್ಣನಿಗೆ ಪೂಜೆ ನೀಡಿದರೆ ರಾಜರು ವಿರೋಧಿಸುತ್ತಾರೆ. ಕೊನೆಯಲ್ಲಿ ಅವನು ಹರಿಯ ಅವತಾರವೆಂಬುದು ನಿರ್ಣಯವಾಗುತ್ತದೆ. ಈ ಅಭಿಪ್ರಾಯದಿಂದ ಭೀಷ್ಮ ಕೃಷ್ಣನಿಗೆ ಅಗ್ರಪೂಜೆ ಎಂದ. ಅದರಂತೆ ಕೃಷ್ಣನಿಗೆ ಪೂಜೆ ನೀಡಿದ ಬಳಿಕ ಅವನ ಇನ್ನೆರಡು ರೂಪಗಳಾದ ವ್ಯಾಸ ಪರಶುರಾಮರಿಗೂ ಪೂಜೆ ನೀಡಿದ ಧರ್ಮರಾಜ.

ಶಿಶುಪಾಲ ವಧ **313**

ಕೃಷ್ಣನಿಗೆ ಅಗ್ರಪೂಜೆ ನೀಡಿದ್ದನ್ನು ಶಿಶುಪಾಲ ಬಲವಾಗಿ ಆಕ್ಷೇಪಿಸಿದ. ಕೃಷ್ಣನನ್ನು ನಿಂದಿಸಿದ. ಭೀಮ ಎದ್ದು ಅವನನ್ನು ಕೊಲ್ಲಲು ಹೋದಾಗ ಭೀಷ್ಮ ತಡೆದ. ಅವನನ್ನು ಶ್ರೀಹರಿ ತಾನೆ ಕೊಲ್ಲುವೆನೆಂದು

ವರವಿತ್ತುದನ್ನು ನೆನಪಿಸಿದ. ಬಳಿಕ ಕೃಷ್ಣ ಶಿಶುಪಾಲರೊಳಗೆ ಭಯಂಕರ ಯುದ್ಧ ನಡೆಯಿತು. ಕೃಷ್ಣಚಕ್ರದಿಂದ ಶಿಶುಪಾಲನ ಶಿರಶ್ಛೇದವಾಯಿತು. ಅವನಲ್ಲಿದ್ದ ಹಿರಣ್ಯಕಶಿಪುದೈತ್ಯ ತಮಸ್ಸಿನಲ್ಲಿ ಬಿದ್ದ. ಜಯನೆಂಬ ವೈಕುಂಠ ದ್ವಾರಪಾಲಕ ಕೃಷ್ಣನ ಉದರವನ್ನು ಹೊಕ್ಕ. ಯಾಗ ಮುಂದುವರಿಯಿತು.

ರಾಜಸೂಯದ ವೈಭವ **317**

ಕಪ್ಪಕಾಣಿಕೆಯಾಗಿ ಸುವರ್ಣರತ್ನಗಳನ್ನು ರಾಜರು ರಾಶಿ ರಾಶಿಯಾಗಿ ತಂದಿದ್ದರು. ಅವುಗಳನ್ನು ತೆಗೆದಿಡುವ ಕಾರ್ಯವನ್ನು ಧರ್ಮರಾಜ ದುರ್ಯೋಧನನಿಗೆ ವಹಿಸಿದ್ದ. ಅನೇಕ ಲಕ್ಷ ಬ್ರಾಹ್ಮಣರಿಗೆ ಅನ್ನಸಂತರ್ಪಣೆ ನಡೆಯಿತು. ಒಂದು ಲಕ್ಷ ಬ್ರಾಹ್ಮಣ ಭೋಜನಾನಂತರ ಒಮ್ಮೆ ಶಂಖನಾದವಾಗುತ್ತಿತ್ತು. ಕೇಳುವವರಿಗೆ ಈ ಧ್ವನಿ ನಿರಂತರವಾಗಿ ಕೇಳಿಸುತ್ತಿತ್ತು. ಕೊನೆಯಲ್ಲಿ ವೈಭವದಿಂದ ಗಂಗಾಜಲದಲ್ಲಿ ಅವಭೃಥಸ್ನಾನ ನಡೆಯಿತು.

ದುರ್ಯೋಧನ ಅಪಹಾಸಕ್ಕೆ ಗುರಿಯಾದ **318**

ಎಲ್ಲ ರಾಜರೂ ತಮ್ಮ ಊರುಗಳಿಗೆ ತೆರಳಿದರು. ಮಯನಿರ್ಮಿತವಾದ ಸಭಾಂಗಣದ ವಿಚಿತ್ರ ಶಿಲ್ಪ ಕಾಣುವ ಕುತೂಹಲದಿಂದ ದುರ್ಯೋಧನ, ಅವನ ಸೋದರರು ಮತ್ತು ಶಕುನಿ ಮಾತ್ರ ಉಳಿದಿದ್ದರು. ಒಮ್ಮೆ ಸಭೆಯಲ್ಲಿ ಶ್ರೀಕೃಷ್ಣನೂ ಪಾಂಡವರೂ ಪತ್ನೀಸಮೇತರಾಗಿ ಕುಳಿತಿದ್ದರು. ಆಗ ದುರ್ಯೋಧನ ಖಡ್ಗಧಾರಿಯಾಗಿ ಶಕುನಿಯೊಂದಿಗೆ ಠೀವಿಯಿಂದ ಒಳಗೆ ಬಂದ. ಆದರೆ ದ್ವಾರ ಇಂದ್ರನೀಲಮಣಿ ಪ್ರಕಾಶದಿಂದ ಮುಚ್ಚಿತ್ತು. ತಿಳಿಯದೆ ಅದನ್ನು ಬಿಟ್ಟು ಒಳಗೆ ಕುಳಿತವರು ಹೊರಗೆ ಕಾಣುವಂತಿರುವ ಪಾರದರ್ಶಕ ಸ್ಫಟಿಕಗೋಡೆಯನ್ನು ಬಾಗಿಲೆಂದುಕೊಂಡು ಅದಕ್ಕೆ ಗಟ್ಟಿಯಾಗಿ ಮುಖವನ್ನು ಬಡಿದುಕೊಂಡ. 'ಇದು ಬಾಗಿಲು, ಇದು ಬಾಗಿಲು' ಎನ್ನುತ್ತ ನಕುಲ ಸಹದೇವರು ಅವನನ್ನು ಕೈಹಿಡಿದು ಒಳಗೆ ಕರೆತಂದರು. ಅಸಹನೆಯಿಂದ ಅಲ್ಲಿ ಆತ ಬಹುಹೊತ್ತು ಕುಳಿತಿರಲಿಲ್ಲ. ಎದ್ದು ನಡೆದ. ಇಂದ್ರನೀಲ ಮಣಿಯ ನೆಲದಲ್ಲಿ ರತ್ನಮಯ ಕಮಲಗಳನ್ನು ಕಂಡು ನೀರೆಂಬ ಭ್ರಾಂತಿಯಿಂದ ಉಟ್ಟ ಬಟ್ಟೆ ಮೇಲೆತ್ತಿಕೊಂಡು ನಡೆದ. ರತ್ನಪ್ರಕಾಶದಿಂದ ಆಚ್ಛಾದಿತವಾದ ನೀರನ್ನು ನೆಲವೆಂದು ಬಗೆದು ತಮ್ಮಂದಿರೊಡನೆ ಆಳವಾದ ನೀರಲ್ಲಿ ಬಿದ್ದ. ಭೂಭಾರನಾಶಕ್ಕಾಗಿ, ಶ್ರೀಕೃಷ್ಣ ಸನ್ನೆ ಮಾಡಿದೊಡನೆ ಭೀಮನೂ ದ್ರೌಪದಿಯೂ ಜೋರಾಗಿ ನಕ್ಕರು. ಎಲ್ಲ ಬಂಧು ಬಾಂಧವರೂ ಕೃಷ್ಣ ಪತ್ನಿಯರೂ ನಕ್ಕರು. ದುರ್ಯೋಧನ ಭೀಮ ದ್ರೌಪದಿಯರ ಬಗ್ಗೆ ಅಸಹನೀಯವಾದ ಕ್ರೋಧವನ್ನು ಎದೆಯಲ್ಲಿ ತುಂಬಿಕೊಂಡು ಹಸ್ತಿನಾವತಿಗೆ ತೆರಳಿದ.

ಜೂಜಿನ ಸಲಹೆ **321**

ದುರ್ಯೋಧನ ಪಾಂಡವರ ವೈಭವವನ್ನು ಕಂಡು ಸಹಿಸರಾದರೆ ತನಗಾದ ನೋವನ್ನು ದಾರಿಯಲ್ಲಿ ಶಕುನಿಯ ಮುಂದೆ ಹೇಳಿಕೊಂಡ. 'ನನಗೆ ಶಕ್ತಿ ಇರುತ್ತಿದ್ದರೆ ಭೀಮ ನಕ್ಕಾಗ ಆಗಲೆ ಅವನನ್ನು ಕೊಲ್ಲುತ್ತಿದ್ದೆ. ಕೃಷ್ಣನ ಅಗ್ರಪೂಜೆಯನ್ನೂ ಆಗಲೆ ನಿಲ್ಲಿಸಿ ಬಿಡುತ್ತಿದ್ದೆ. ಆದರೆ ಹಾಗೆ ಮಾಡಲು ಹೊರಟಿದ್ದರೆ ಶಿಶುಪಾಲನಿಗಾದ ಗತಿಯೆ ನನಗೂ ಆಗುತ್ತಿತ್ತು.' ಶಕುನಿ ಸಮಾಧಾನ ಮಾಡಿದ, 'ಏನೂ ಕ್ಲೇಶವಿಲ್ಲದೆ ಜೂಜಾಡುತ್ತಲೆ ಪಾಂಡವರ ಎಲ್ಲ ಸಂಪತ್ತನ್ನೂ ನಿನ್ನ ವಶಕ್ಕೆ ತರುತ್ತೇನೆ'.

ಧೃತರಾಷ್ಟ್ರನ ಸಂಮತಿ **323**

ಕುರುಡನಾದ ಧೃತರಾಷ್ಟ್ರನ ಮುಂದೆ ಶಕುನಿ ನೋವಿನ ಧ್ವನಿಯಲ್ಲಿ ದುರ್ಯೋಧನನ್ನು ಚಿಂತಾರೋಗದಿಂದ ಮೈ ಬಿಳಿಚಿಕೊಂಡು ಸೊರಗಿದಂತೆ ಬಣ್ಣಿಸಿದ. ಧೃತರಾಷ್ಟ್ರ ಗಾಬರಿಗೊಂಡು ಧರ್ಮರಾಜನನ್ನು ಜೂಜಿಗೆ ಕರೆಯಲು, ಜೂಜಿನ ಮೂಲಕ ಅವನ ಸಂಪತ್ತನ್ನು ಕಸಿಯಲು ಅನುಮತಿ

ಪಡೆದುಕೊಂಡ. ದುರ್ಯೋಧನ ಸಾಕ್ಷಾತ್ ಕಲಿ. ಅವನು ಹುಟ್ಟುವ ಮುನ್ನ ಧೃತರಾಷ್ಟ್ರನನ್ನು ಪ್ರವೇಶಿಸಿ ಗಾಂಧಾರಿಯ ಗರ್ಭಕ್ಕೆ ಬರುವಾಗ ಒಂದು ಅಂಶದಿಂದ ಧೃತರಾಷ್ಟ್ರನಲ್ಲಿ ಶಾಶ್ವತವಾಗಿ ನಿಂತಿದ್ದ. ಅದರಿಂದ ಧೃತರಾಷ್ಟ್ರ ಕಲ್ಯಾವೇಶದಿಂದ ಶಕುನಿಯ ಮಾತಿಗೆ ಸಂಮತಿಸಿದ.

ಧರ್ಮರಾಜನಿಗೆ ಕರೆ **326**

ಧೃತರಾಷ್ಟ್ರ ವಿದುರನ ಮೂಲಕ ಧರ್ಮರಾಜನನ್ನು ಜೂಜಿಗೆ ಬರಲು ಹೇಳಿಕಳಿಸಿದ.

ಶ್ರೀಕೃಷ್ಣನ ಅನುಪಸ್ಥಿತಿ **327**

ದುರ್ಯೋಧನ ಅತ್ತ ಹೋದ ಬಳಿಕ, ನಾರದರು ಬಂದು ಧರ್ಮರಾಜ ಕೃಷ್ಣರ ಮುಂದೆ ಸಾಲ್ವ ದ್ವಾರಕೆಯ ಮೇಲೆ ಆಕ್ರಮಣ ಮಾಡುತ್ತಿದ್ದಾನೆ ಎಂದರು. 'ಆಗಲಿ!' ಎಂದ ಕೃಷ್ಣ. ನಿರ್ವಿಕಾರವಾಗಿ ನಕ್ಕು ನುಡಿದ ಈ ಮಾತಿನಿಂದ ತಾನು ಸರ್ವಶಕ್ತನಾದ ಭಗವಂತನೆಂಬುದನ್ನು ತೋರಿದ. ಪ್ರದ್ಯುಮ್ನ ಮುಂತಾದ ಯಾದವ ವೀರರನ್ನು ನಗರ ರಕ್ಷಣೆಗಾಗಿ ಕಳಿಸಿ ಕೆಲದಿನಗಳ ಬಳಿಕ ತಾನೂ ಹೊರಟುಹೋದ.

ಜೂಜಿಗೆ ಧರ್ಮರಾಜ **329**

ಶ್ರೀಕೃಷ್ಣ ಅತ್ತ ಹೋದ ಬಳಿಕ ವಿದುರ ಧರ್ಮರಾಜನ ಬಳಿಗೆ ಬಂದು ಧೃತರಾಷ್ಟ್ರನ ಮಾತನ್ನು ತಿಳಿಸಿದ. ಜೂಜು ಅಧರ್ಮವೆಂದೂ ಹೇಳಿದ. ಆದರೆ ಜೂಜಿಗೆ ಯಾರೇ ಕರೆಯಲಿ ಇಲ್ಲವೆನ್ನಲಾರೆ ಎಂದು ಧರ್ಮರಾಜ ಕಲ್ಯಾವೇಶದಿಂದ ಪ್ರತಿಜ್ಞೆ ಗೈದಿದ್ದ. ಅದರಿಂದ ಸೋದರರು ದ್ರೌಪದಿ ಎಲ್ಲರೂ ತಡೆದರೂ ಜೂಜಿಗೆ ಬಂದ. ಸೋದರರು ದ್ರೌಪದಿ ಕುಂತಿ ವಿದುರ ಇವರನ್ನು ಹೊರತು ಭೀಷ್ಮಾದಿಗಳೆಲ್ಲರನ್ನೂ ಕಲಿ ಪ್ರವೇಶಿಸಿದ್ದ. ಅದರಿಂದ ಅವರು ಯಾರೂ ಜೂಜನ್ನು ತಡೆಯಲಿಲ್ಲ.

ಜೂಜಿನಲ್ಲಿ ಸೋಲು **331**

ಶಕುನಿಯ ಮೋಸದ ಜೂಜಿನಲ್ಲಿ ಧರ್ಮರಾಜ ಎಲ್ಲ ಸಂಪತ್ತನ್ನೂ ಪಣಕ್ಕಿಟ್ಟು ಸೋತ. ಬಳಿಕ ನಕುಲ ಸಹದೇವ ಅರ್ಜುನ ಭೀಮ ದ್ರೌಪದಿಯರನ್ನೂ ಕ್ರಮವಾಗಿ ಸೋತು ಕೊನೆಯಲ್ಲಿ ತನ್ನನ್ನೂ ಸೋತ. ದುರ್ಯೋಧನನ ಆಜ್ಞೆಯಂತೆ ದುಃಶಾಸನ ದ್ರೌಪದಿಯನ್ನು ಸಭೆಯ ಮಧ್ಯಕ್ಕೆ ಎಳೆದುತಂದ. ಅವಳು 'ಜೂಜಿನಲ್ಲಿ ಸೋತರೆ ನ್ಯಾಯವಾಗಿ ಸೋತಂತಾಯಿತೆ?' ಎಂದು ಕೇಳಿದರೆ 'ಧರ್ಮರಾಜನನ್ನೆ ಕೇಳು' ಎಂದ ಭೀಷ್ಮ. ವಿದುರನೊಬ್ಬನೆ ಎರಡು ಕೈಗಳನ್ನೆತ್ತಿ 'ಇದು ಅಧರ್ಮ' ಎಂದು ಸಾರಿದ.

ವಿಕರ್ಣನ ದಂಭಾಚಾರ **336**

ದುರ್ಯೋಧನನ ತಮ್ಮ ವಿಕರ್ಣ ಪಾಪಿ, ದಂಭಾಚಾರಕ್ಕಾಗಿ 'ಇದು ಅಧರ್ಮ' ಎಂದ. 'ಹಿರಿಯರಾದ ಭೀಷ್ಮ ಮುಂತಾದವರೆ ಧರ್ಮವೆಂದು ಸುಮ್ಮನಿರುವಾಗ ಸಣ್ಣವನಾದ ನೀನು ಮಾತನಾಡಬೇಡ' ವೆಂದು ಕರ್ಣ ಗದರಿದಾಗ ಸುಮ್ಮನಾದ.

ಧರ್ಮರಾಜನಿಗೆ ಭೀಮನ ಶಾಸನ **337**

ಭೀಮ ದ್ರೌಪದಿಯ ಬವಣೆಯನ್ನು ಕಂಡು ಕೆರಳಿದ. 'ರಾಜ ಅಧರ್ಮ ಮಾಡುವಾಗ ಯುವರಾಜ ಶಾಸನ ಮಾಡಬೇಕೆ'ಂದು 'ದ್ರೌಪದಿಯನ್ನು ಪಣಕ್ಕಿಟ್ಟ ನಿನ್ನ ಕೈಗಳನ್ನು ಸುಡಬೇಕು' ಎಂದ. 'ಬೇಡ ಬೇಡ' ಎಂದ ಅರ್ಜುನ. ಭೀಮಸೇನನೆಂದ, 'ಹಿರಿಯರು ಅಧರ್ಮ ಮಾಡುವಾಗ ಕಿರಿಯರು ಮಾತಿನಲ್ಲಿ ವಿರೋಧಿಸಬೇಕು ಹೊರತು ಕೃತಿಯಲ್ಲಿ ಅಲ್ಲ. ಅದರಿಂದ ನಾನು ಹಾಗೆ ಹೇಳುತ್ತೇನೆ ಹೊರತು ಮಾಡುವುದಿಲ್ಲ.'

ಭೀಮನ ಭ್ರಾತೃಭಕ್ತಿ **338**

'ದ್ರೌಪದಿ, ನಿನಗೆ ಇನ್ನು ಪತಿಗಳಿಲ್ಲ. ದುರ್ಯೋಧನನ ಮನೆಗೆ ಹೋಗು' ಎಂದ ಕರ್ಣ. ದುರ್ಯೋಧನ ಪಾಂಡವರೊಳಗೆ ಒಡಕು ಹುಟ್ಟಿಸುವುದಕ್ಕಾಗಿ 'ದ್ರೌಪದಿ, ನಿನ್ನ ಈ ದುಃಖಕ್ಕೆ ಕಾರಣ ಧರ್ಮರಾಜ. ಅವನು ನಮಗೆ ಪೂಜ್ಯನಲ್ಲವೆಂದು ಉಳಿದವರೆಲ್ಲರೂ ಹೇಳಲಿ, ಅಥವಾ ಭೀಮಾರ್ಜುನರಿಬ್ಬರಾಗಲಿ, ಕೊನೆಗೆ ಭೀಮನೊಬ್ಬನೆ ಆಗಲಿ ಹಾಗೆ ಹೇಳಲಿ ನಿನಗೆ ಬಿಡುಗಡೆ ಮಾಡುವೆನು' ಎಂದ. ಒಡನೆ ಭೀಮನೆಂದ, 'ನಮಗೆಲ್ಲರಿಗೂ ಧರ್ಮರಾಜ ಅಣ್ಣನೆ, ಪೂಜ್ಯನೆ, ಕ್ಷತ್ರಿಯರಲ್ಲಿ ಬಲವೆ ಪೂಜ್ಯತೆಗೆ ಮಾನದಂಡವಾದ್ದರಿಂದ ನಾನು ನಿಮಗೆಲ್ಲರಿಗೂ ಪೂಜ್ಯ. ನೋಡಿರಿ ನನ್ನ ಶಕ್ತಿಯನ್ನು!' ಹೀಗೆ ಹೇಳುತ್ತ ಭೀಮನೆದ್ದುನಿಂತಾಗ ಸಭೆ ನಡುಗಿತು. ಭೀಷ್ಮ ದ್ರೋಣ ಮುಂತಾದವರೆಲ್ಲರೂ ಸಮಾಧಾನ ಮಾಡಿ ಅವನನ್ನು ಕೂಡಿಸಬೇಕಾಯಿತು. ಹಿರಿಯರಿಗೆ ಗೌರವ ತೋರುವುದಕ್ಕಾಗಿ ಅವನು ಸುಮ್ಮನಾದ. ಕೌರವರ ಪಾಪದ ಕೊಡ ತುಂಬಲಿ ಎನ್ನುವುದೂ ಅವನ ಅಪೇಕ್ಷೆಯಾಗಿತ್ತು.

ಭೀಮನ ಪ್ರತಿಜ್ಞೆ **340**

ಭೀಮ ನೋಡುತ್ತಿದ್ದಂತೆಯೆ ದುರ್ಯೋಧನ ದ್ರೌಪದಿಗೆ ಎಡತೊಡೆಯನ್ನು ತೋರಿದ. 'ನಿನ್ನ ತೊಡೆಯನ್ನು ಗದೆಯಿಂದ ಕುಟ್ಟಿ ಪುಡಿ ಮಾಡುವೆನೆಂದು' ಭೀಮ ಪ್ರತಿಜ್ಞೆ ಗೈದ. 'ನಿಮಗೆ ಇನ್ನು ಜೂಜಿನಲ್ಲಿ ಪಣವಾಗಿಡಲು ಬೇರೆ ಏನೂ ಇಲ್ಲ. ಕೃಷ್ಣನನ್ನೆ ಇಡಿರಿ' ಎಂದ ದುರ್ಯೋಧನ. 'ಹರಿಗೆ ಅವಮಾನ ಮಾಡುವ ನಿನ್ನನ್ನು ರಣಭೂಮಿಯಲ್ಲಿ ಕೆಡವಿ ತಲೆಯನ್ನು ತುಳಿಯುವೆನು' ಎಂದ ಭೀಮ. ಆದರೂ ದುರ್ಯೋಧನ, ದುಃಶಾಸನನಿಗೆ ಹೇಳಿದ, 'ಪಾಂಡವರು ದಾಸರು. ಅವರಿಗೇಕೆ ಬೇಲೆ ಬಾಳುವ ಬಟ್ಟೆ? ಕಳಚು.' ಒಡನೆ ಪಾಂಡವರು ಉಟ್ಟ ಬಟ್ಟೆ ಕಳಚಿ ನಾರುಡೆ ಉಟ್ಟು ನೆಲದ ಮೇಲೆ ಕುಳಿತರು. ಈಗ ದುಃಶಾಸನ ದ್ರೌಪದಿಯ ಸೀರೆ ಸೆಳೆಯಲು ತೊಡಗಿದ. 'ನೀಚ ದುಃಶಾಸನನ ಎದೆ ಬಗಿದು ರಕ್ತಪಾನ ಮಾಡುವೆನೆಂದು' ಭೀಮ ಪಣತೊಟ್ಟ.

ಅಕ್ಷಯಾಂಬರ **342**

ದ್ರೌಪದಿ ಶ್ರೀಕೃಷ್ಣನನ್ನು ನೆನೆದಳು. ಅವಳು ಸದಾ ನೆನೆಯುವವಳೆ. ವಿಶೇಷವಾಗಿ ಈಗ ನೆನೆದಳು. ಒಡನೆ ಅವಳ ಮೈಮೇಲೆ ಸೆಳೆದಷ್ಟೂ ಸೀರೆಗಳು ಅಕ್ಷಯವಾಗಿ ಬರಲಾರಂಭಿಸಿದುವು. ದುಃಶಾಸನ ಸೆಳೆದು ಸೆಳೆದು ಸೋತು ನಿರ್ವಿಣ್ಣನಾಗಿ ನೆಲದ ಮೇಲೆ ಕುಸಿದು ಬಿದ್ದ! ದುರ್ಯೋಧನನೆಂದ, 'ಇವಳನ್ನು ನನ್ನ ಮನೆಯೊಳಗೆ ಕಳಿಸು!

ದ್ರೌಪದಿಯ ಪ್ರತಿಜ್ಞೆ **343**

ದ್ರೌಪದಿ ನುಡಿದಳು 'ಭೀಮ ದುರ್ಯೋಧನನನ್ನು ಕೊಲ್ಲುವ! ಅರ್ಜುನ ಕರ್ಣನನ್ನು ಕೊಲ್ಲುವ! ಶಕುನಿಯನ್ನು ಸಹದೇವ ಕೊಲ್ಲುವ!'

ಭೀಮನ ಕೋಪಾವೇಶ **345**

ದುಃಶಾಸನ ದ್ರೌಪದಿಯನ್ನು ದುರ್ಯೋಧನನ ಮನೆಗೆ ಒಯ್ಯಲು ತೊಡಗಿದಾಗ ಭೀಮ 'ಅರ್ಜುನ, ಅರ್ಜುನ, ನಾವು ಇನ್ನು ಸಹಿಸುವುದಾಗದು. ವಿದ್ಯೆ ಕರ್ಮ ಸಂತತಿ ಇವು ಮೂರು ಜೀವನದ ಗುರಿಗಳು. ಪತ್ನಿ ಕೆಟ್ಟಳೆಂದರೆ ಶುದ್ಧವಾದ ಸಂತತಿ ಲಭ್ಯವಾಗದು. ಇಹಪರಗಳಲ್ಲಿ ಸುಖವೂ ಲಭ್ಯವಾಗದು. ನಾನು ಕೌರವರನ್ನು ಈಗಲೆ ನಾಶ ಮಾಡುವೆ'. ಹೀಗೆ ಹೇಳಿ ಭೀಮ ಸಭಾಂಗಣದ ಕಂಬವನ್ನು ಕಿತ್ತು

ತೆಗೆಯಲು ದಿಟ್ಟಿಸಿ ನೋಡಿದ. ಆಗಲೆ ಎಲ್ಲೆಡೆ ಭಯಂಕರ ಉತ್ಪಾತಗಳು ಕಂಡುಬಂದುವು. ವಿದುರ ಧೃತರಾಷ್ಟ್ರನಿಗೆ ಬುದ್ಧಿ ಹೇಳಿದ. 'ದ್ರೌಪದಿಗೆ ವರ ನೀಡು. ಇಲ್ಲದಿದ್ದರೆ ಕುಲನಾಶ ನಿಶ್ಚಿತ!'

ಧೃತರಾಷ್ಟ್ರನ ವರದಾನ **348**

ದ್ರೌಪದಿ ವರ ಕೇಳಬೇಕೆಂದು ಧೃತರಾಷ್ಟ್ರ ಬಹಳ ಒತ್ತಾಯಿಸಿದಾಗ ಧರ್ಮರಾಜನ ಬಿಡುಗಡೆಯನ್ನು ಕೇಳಿದಳು. ಇನ್ನೂ ವರ ಕೇಳು ಎಂದಾಗ ಸೋದರರ ಬಿಡುಗಡೆ, ರಾಜ್ಯದ ಬಿಡುಗಡೆಗಳನ್ನು ಕೇಳಿದಳು. ಇನ್ನೂ ಕೇಳು ಎಂದರೆ, ದ್ರೌಪದಿ ಹೇಳುತ್ತಾಳೆ. 'ಕ್ಷತ್ರಿಯ ಸ್ತ್ರೀ ಮಾವನಿಂದ ಮೂರಕ್ಕಿಂತ ಹೆಚ್ಚು ವರ ಕೇಳ ಕೂಡದು.' ಬಳಿಕ ಬಿಡುಗಡೆ ಹೊಂದಿ ಪಾಂಡವರು ಇಂದ್ರಪ್ರಸ್ಥಕ್ಕೆ ಹೊರಟು ಹೋದರು.

ಎರಡನೆ ಜೂಜು **351**

'ಒಮ್ಮೆ ಕೈಗೆ ಬಂದ ರಾಜ್ಯವನ್ನು ಬಿಟ್ಟುಕೊಟ್ಟೆ, ಇನ್ನು ಭೀಮನ ಕೈಯಲ್ಲಿ ನಮಗೆ ಸಾವು ನಿಶ್ಚಿತ. ಅದರಿಂದ ನೀನು ಇನ್ನೊಮ್ಮೆ ಪಾಂಡವರನ್ನು ಜೂಜಿಗೆ ಕರೆಯಲೇಬೇಕು' ಎಂದು ದುರ್ಯೋಧನ ಧೃತರಾಷ್ಟ್ರನಿಗೆ ಆಗ್ರಹಪಡಿಸಿದ. ಧೃತರಾಷ್ಟ್ರ ತಿರುಗಿ ಪಾಂಡವರನ್ನು ಕರೆಸಿದ. ಈ ಬಾರಿ ಜೂಜಿನಲ್ಲಿ ಸೋತವರು ರಾಜ್ಯ ಕಳೆದುಕೊಂಡು ಹನ್ನೆರಡು ವರ್ಷ ವನವಾಸ ಒಂದು ವರ್ಷ ಅಜ್ಞಾತವಾಸ ಮಾಡಬೇಕು. ಅಜ್ಞಾತವಾಸಕಾಲದಲ್ಲಿ ಪಾಂಡವರಲ್ಲಿ ಒಬ್ಬನೆ ಕಂಡರೂ ಸರಿಯೆ, ಎಲ್ಲರೂ ತಿರುಗಿ ವನವಾಸ ಅಜ್ಞಾತವಾಸಗಳನ್ನು ಮಾಡಬೇಕು. ಇದು ಹೀಗೇ ಮುಂದುವರಿದರೆ ಪಾಂಡವರಿಗೆ ವನವಾಸ ಶಾಶ್ವತ!

ಪಾಂಡವರ ವನವಾಸ ಪ್ರಸ್ಥಾನ **352**

ಶಕುನಿಯ ಮೋಸದ ಜೂಜಿನಲ್ಲಿ ಈ ಬಾರಿಯೂ ಧರ್ಮರಾಜ ಸೋತು ದ್ರೌಪದಿ ಮತ್ತು ಸೋದರರೊಂದಿಗೆ ವನವಾಸಕ್ಕೆ ಹೊರಟ. ದುಃಶಾಸನ 'ಬಸವ ಬಸವ' ಎಂದು ಅಪಹಾಸ ಮಾಡಿ ಕುಣಿದ. ದ್ರೌಪದಿ ನಿನಗಿನ್ನು ಪತಿಗಳಿಲ್ಲ, ದುರ್ಯೋಧನನ ಮನೆಗೇ ಹೋಗಬೇಕು ಎಂದು ಭೀಮನ ನಡೆಯನ್ನು ಅಣಕಿಸುತ್ತ ನುಡಿದ. ಎಲ್ಲ ಕೌರವರೂ ನಕ್ಕರು. ಭೀಮ ಕೆರಳಿ 'ಎಲ್ಲ ಕೌರವರನ್ನೂ ನಾನು ಕೊಲ್ಲುವೆನು' ಎಂದು ಪ್ರತಿಜ್ಞೆ ಮಾಡಿದ. ದುರ್ಯೋಧನ ಕೂಡಲೆ ದ್ರೋಣರನ್ನು ಮೊರೆಹೊಕ್ಕ. ಏಕೆಂದರೆ ದ್ರೋಣ ತನ್ನ ಪಕ್ಷದಲ್ಲಿದ್ದರೆ ಅಲ್ಲಿ ಅವರ ಮಗ ಅಶ್ವತ್ಥಾಮ, ಭೀಷ್ಮ, ಕೃಪ ಎಲ್ಲ ಹಿರಿಯರೂ ನನ್ನ ಪಕ್ಷದವರಾಗುತ್ತಾರೆ. ಗುರುಹಿರಿಯರನ್ನು ಭೀಮನೆಂದೂ, ಅತಿಕ್ರಮಿಸುವುದಿಲ್ಲ ಎಂದು ದುರ್ಯೋಧನನಿಗೆ ಗೊತ್ತು. ದ್ರೋಣರು ಹೇಳಿದರು, 'ನಾನೇನೋ ನಿನ್ನ ರಕ್ಷಣೆಗೆ ಇರುತ್ತೇನೆ ಆದರೆ ಭೀಮನಿಂದ ಮಾತ್ರ ನಿನ್ನನ್ನು ರಕ್ಷಿಸುವುದಾಗದು'. ಬಳಿಕ ದುರ್ಯೋಧನನೂ ಭೀಮನ ನಡೆಯನ್ನು ಅಣಕಿಸಿದ. 'ನಿನ್ನ ಇನ್ನೊಂದು ತೊಡೆಯನ್ನೂ ಮುರಿಯುವೆನು' ಎಂದ ಭೀಮ. ಕಾಡಿಗೆ ಹೊರಟ ಪಾಂಡವರನ್ನು ಕುಂತಿ ಹಿಂಬಾಲಿಸುವುದನ್ನು ಕಂಡು ವಿದುರ ಅವಳನ್ನು ತಡೆದು ತನ್ನ ಮನೆಯಲ್ಲಿ ನಿಲ್ಲಿಸಿಕೊಂಡ.

ಪಾಂಡವರು ನಡೆದ ರೀತಿ **354**

ಕಾಡಿಗೆ ಹೋಗುವಾಗ ಧರ್ಮರಾಜ ಮುಖ ತಗ್ಗಿಸಿ ನಡೆದ. ತನ್ನ ಕೋಪದ ದೃಷ್ಟಿಗೆ ಕೌರವರು ಸುಟ್ಟುಹೋಗಬಾರದು ಎಂದು. ಭೀಮ ಎರಡು ತೋಳುಗಳನ್ನು ಮೇಲೆತ್ತಿ ನಡೆದ. ಈ ತೋಳುಗಳಿಂದಲೆ ನೂರು ಮಂದಿ ಕೌರವರನ್ನೂ ಕುಟ್ಟಿ ಪುಡಿ ಮಾಡುವೆನು ಎಂದು. ದ್ರೌಪದಿ ಬಿಚ್ಚಿದ ತಲೆ ಕೂದಲಿನ ವೇಷದಲ್ಲಿ ನಡೆದಳು. ಕೌರವರ ಹೆಂಡಿರೆಲ್ಲರೂ ವಿಧವೆಯರಾಗಿ ಹೀಗೇ ವೇಷ ಧರಿಸುವರು ಎಂದು. ಅರ್ಜುನ ಮೇಲೆ ಧೂಳಿರಚುತ್ತ ನಡೆದ. ಶತ್ರುಗಳ ಮೇಲೆ ಬಾಣಗಳನ್ನು ಹೀಗೆ ಎರಚುವೆನು ಎಂದು. ನಕುಲ ಸಹದೇವರೂ ತಮ್ಮ ಮುಖವನ್ನು ತಗ್ಗಿಸಿ ನಡೆದರು. ಈ ಅವಸ್ಥೆಯಲ್ಲಿ ಮುಂದೆ ಯಾರೂ ತಮ್ಮನ್ನು

ನೋಡಲಾರರು ಎಂದು. ಪುರೋಹಿತರಾದ ಧೌಮ್ಯರು ಶವಸಂಸ್ಕಾರ ಮಂತ್ರಗಳನ್ನು ಪಠಿಸಿದರು. 'ಮುಂದೆ ಕೌರವರಿಗೆ ಶವಸಂಸ್ಕಾರಗಳನ್ನು ನಾನೆ ಮಾಡಿಸುವೆನು' ಎಂದು. ಎಲ್ಲ ನಗರವಾಸಿಗಳೂ ಪಾಂಡವರನ್ನು ಹಿಂಬಾಲಿಸಿದರು. ಪಾಂಡವರು ಗಂಗಾತೀರದ ಒಂದು ಆಲದ ಮರದ ಬುಡದಲ್ಲಿ ತಂಗಿದರು. ಶ್ರೀಹರಿಯನ್ನು ಸ್ಮರಿಸಿದರು.

ಅಧ್ಯಾಯ 22

ಅರಣ್ಯೇ ಪ್ರಾಪ್ತಿ

ಕಿರ್ಮೀರ ವಧ 361

ಪಾಂಡವರು ತಮ್ಮನ್ನು ಹಿಂಬಾಲಿಸಿ ಬಂದ ಅಸಂಖ್ಯ ನಗರವಾಸಿಗಳನ್ನು ಕಷ್ಟದಿಂದ ತಡೆದು ಹತ್ತುಸಾವಿರ ಯತಿಗಳನ್ನು ಮತ್ತು ಎಂಬತ್ತೆಂಟು ಸಾವಿರ ಮುನಿಗಳನ್ನು ಮಾತ್ರ ಕರೆದುಕೊಂಡು ರಾತ್ರಿಯಲ್ಲಿ ದಟ್ಟವಾದ ಅರಣ್ಯವನ್ನು ಪ್ರವೇಶಿಸಿದರು. ಅದು ಕಿರ್ಮೀರನೆಂಬ ನರಭಕ್ಷಕ ರಾಕ್ಷಸನ ಕಾಡು. ಕಿರ್ಮೀರ ಬಕಾಸುರನ ತಮ್ಮ. ಬಕನನ್ನು ಕೊಂದವನೆಂದು ಭೀಮನ ಮೇಲೇರಿ ಬಂದ. ಭೀಮ ಅವನನ್ನು ಯಜ್ಞಪಶುವಿನಂತೆ ಕೊಂದ.

ಅಕ್ಷಯ ಪಾತ್ರೆ 362

ಧರ್ಮರಾಜನಿಗೆ ಜೊತೆಯಲ್ಲಿ ಬಂದ ಮುನಿಗಳಿಗೆ ಅನ್ನದಾನ ಮಾಡುವ ಚಿಂತೆ. ಅದಕ್ಕೆ ಧೌಮ್ಯರು ಸೌರ ಅಷ್ಟಾಕ್ಷರ ಮಂತ್ರವನ್ನು ಉಪದೇಶಿಸಿದರು. ಆ ಮಂತ್ರಕ್ಕೆ ಸೂರ್ಯಾಂತರ್ಗತ ನಾರಾಯಣನೊಲಿದು ಅಕ್ಷಯ ಪಾತ್ರೆ ನೀಡಿದ. ಅದರ ಬಲದಿಂದ ಧರ್ಮರಾಜ ನಿತ್ಯವೂ ಆ ಮುನಿಗಳಿಗೆ ಚಿನ್ನದ ಪಾತ್ರೆಗಳಲ್ಲಿ ಷಡ್ರಸಾನ್ನ ಉಣಿಸಿದ.

ಅರಣ್ಯದಲ್ಲಿ ಸ್ವರ್ಗಸುಖ 364

ಅಕ್ಷಯಪಾತ್ರೆ ಅನ್ನವನ್ನು ಮಾತ್ರವಲ್ಲದೆ ಬಯಸಿದ್ದನ್ನೆಲ್ಲ ಕೊಡುತ್ತಿತ್ತು. ಅದರಿಂದ ಧರ್ಮರಾಜ ಪ್ರತಿದಿನ ಲಕ್ಷ ಗೋದಾನ ಸುವರ್ಣದಾನ ಮಾಡುತ್ತ ಸ್ವರ್ಗದಲ್ಲಿ ಇಂದ್ರನಂತೆ ಕಾಡಿನಲ್ಲಿ ವಿಹರಿಸಿದ.

ಧೃತರಾಷ್ಟ್ರನ ಚಿಂತೆ 366

ಜೂಜಿನಲ್ಲಿ ಅಪಹರಿಸಿದ ಪಾಂಡವರ ರಾಜ್ಯವನ್ನು ಹೇಗೆ ದಕ್ಕಿಸಿಕೊಳ್ಳಬೇಕೆಂದು ಧೃತರಾಷ್ಟ್ರ ವಿದುರನನ್ನು ಕೇಳಿದರೆ ಆತ ರಾಜ್ಯವನ್ನು ಪಾಂಡವರಿಗೇ ಹಿಂತಿರುಗಿಸು ಎನ್ನುತ್ತಾನೆ. ನೀನು ಪಾಂಡವರ ಕಡೆಯವನು. ನನಗೆ ನಿನ್ನ ಸಲಹೆ ಏನೂ ಬೇಡ ಎಂದ ಧೃತರಾಷ್ಟ್ರ. ವಿದುರ ಪಾಂಡವರ ಬಳಿಗೆ ನಡೆದ. ವಿದುರನ ಬುದ್ಧಿಕೌಶಲದಿಂದ ಪಾಂಡವರು ಲಾಭ ಪಡೆಯಬಹುದೆಂಬ ಭೀತಿ ಧೃತರಾಷ್ಟ್ರನಿಗೆ. ತಮ್ಮನೆಂಬ ವಾತ್ಸಲ್ಯವೂ ಅವನನ್ನು ಚಿಂತೆಗೆ ಈಡುಮಾಡಿತು. ಬೇಗನೆ ಹಿಂದೆ ಕರೆಸಿಕೊಂಡ. ವಿದುರ ಹೊರಟು ಹೋದನೆಂದು ಒಮ್ಮೆ ಹರ್ಷಗೊಂಡಿದ್ದ ಕೌರವರಿಗೆ ಈಗ ನಿರಾಸೆಯಾಯಿತು. ಪಾಂಡವರನ್ನು ಹಿಂದೆ ಕರೆಸುವನೆಂಬ ಭೀತಿಯೂ ಮೂಡಿತು. ಅವನು ಕರೆಸುವಷ್ಟರಲ್ಲಿ ನಾವು ಅವರನ್ನು ಕೊಲ್ಲಬೇಕೆಂದು ಬಗೆದು ಅರಣ್ಯದರ್ಶನ ನೆಪದಿಂದ ಕಾಮ್ಯಕ ವನಕ್ಕೆ ಹೊರಟರು.

ಮೈತ್ರೇಯ ಶಾಪ **368**

ಕೌರವರ ದುರುದ್ದೇಶವನ್ನು ತಿಳಿದು ವೇದವ್ಯಾಸರು ಬಂದು ಅವರನ್ನು ತಡೆದು ಹಿಂದಿರುಗಿಸಿದರು. ಧೃತರಾಷ್ಟ್ರನ ಬಳಿಗೆ ಬಂದು ನಿನ್ನ ಮಕ್ಕಳ ದುರ್ವರ್ತನೆ ಮಿತಿ ಮೀರಿತು. ಅವರಿಗೆ ಬುದ್ಧಿ ಹೇಳು. ಮೈತ್ರೇಯ ಮುನಿ ಬರುತ್ತಾನೆ. ಅವನು ಹೇಳಿದಂತೆ ಮಾಡು ಎಂದು ಆದೇಶಿಸಿ ಹೋದರು. ಮೈತ್ರೇಯ ಮುನಿ ಬಂದ. ಭೀಮನ ಬಲವನ್ನು ಹೊಗಳಿದ. ದುರ್ಯೋಧನನಿಗೆ ಸಹನೆಯಾಗಲಿಲ್ಲ. ತೊಡೆ ತಟ್ಟಿಕೊಂಡ. ಮುನಿ ಕುಪಿತನಾಗಿ ಭೀಮ ನಿನ್ನ ತೊಡೆಯನ್ನು ಕುಟ್ಟಿಪುಡಿ ಮಾಡುವನು ಎಂದು ಶಪಿಸಿದ.

ಶ್ರೀಕೃಷ್ಣನ ಕೋಪ **372**

ಪಾಂಡವರ ವನವಾಸ ವೃತ್ತಾಂತವನ್ನು ಕೇಳಿ ಶ್ರೀಕೃಷ್ಣ ಸತ್ಯಭಾಮಾ ಸಮೇತನಾಗಿ ಬಂದ. ದ್ರುಪದ ಮುಂತಾದವರೂ ಬಂದರು. ದುರ್ಯೋಧನನ ಬಗ್ಗೆ ಶ್ರೀಕೃಷ್ಣ ಕುಪಿತನಾದ. ಪಾಂಡವರು ಅವನನ್ನು ಸಮಾಧಾನಪಡಿಸಿದರು. ದ್ರೌಪದಿ ಉಳುತ್ತ ಕಾಲು ಹಿಡಿದು ತನ್ನ ದುಃಖ ಹೇಳಿಕೊಂಡಳು. ಆಗ ಕೃಷ್ಣ ಪ್ರತಿಜ್ಞೆ ಮಾಡಿದ. 'ಕೌರವರ ಹೆಂಡಿರು ಭೀಮನಿಂದ ಹತರಾಗುವ ತಮ್ಮ ಪತಿಗಳ ಶವಗಳನ್ನು ಅಪ್ಪಿಕೊಂಡು ಗೋಳಿಡುವುದನ್ನು ನಾನು ನಿನಗೆ ತೋರುವೆನು' ಎಂದು.

ನಾನು ಇದ್ದಿದ್ದರೆ ಹೀಗಾಗುತ್ತಿರಲಿಲ್ಲ **373**

'ನಾನು ಸಾಲ್ವನನ್ನು ಕೊಲ್ಲಲು ದೂರ ಹೋಗಿದ್ದೆ. ಇಲ್ಲಿಯೆ ಇದ್ದಿದ್ದರೆ ಹೀಗಾಗುತ್ತಿದ್ದಿಲ್ಲ' ಎಂದ ಶ್ರೀಕೃಷ್ಣ. ಸರ್ವಶಕ್ತ ಸರ್ವವ್ಯಾಪ್ತನಾದ ಅವನಿಗೆ ದೂರ ಸಮೀಪ ಎಂದೆಲ್ಲ ಸುಳ್ಳು. ಎಲ್ಲ ವಿಡಂಬನೆ. ಪಾಪಿ ಕೌರವರ ಪಾಪ ಇನ್ನಷ್ಟು ಹೆಚ್ಚಲಿ. ಪಾಂಡವರ ಪುಣ್ಯ ಹೆಚ್ಚಲಿ. ಧರ್ಮರಾಜ ರಾಜಸೂಯದಿಂದ ಪಡೆದ ಪುಣ್ಯ ಅವನ ಯೋಗ್ಯತೆಗೆ ಮೀರಿದ್ದರಿಂದ ಆ ಅಧಿಕ ಪುಣ್ಯ ಜೂಜಿನಿಂದಾಗಿ ಸೋರಿಹೋಗಲಿ, ಅವನಿಗೆ ವಿಧೇಯರಾಗಿರುವ ಭೀಮಾದಿಗಳಲ್ಲಿ ಆ ಪುಣ್ಯ ಬಂದು ಸೇರಲಿ ಎಂಬುದು ಕೃಷ್ಣ ದೂರವಿದ್ದುದರ ಉದ್ದೇಶವಾಗಿತ್ತು. ಜೂಜಿನಲ್ಲಿ ಪಾಂಡವರಿಗೆ ದ್ರೌಪದಿಗೆ ಆಗುತ್ತಿದ್ದ ಅನ್ಯಾಯವನ್ನು ತಡೆಯದೇ ಇರುವ ಮೂಲಕ ಭೀಷ್ಮದ್ರೋಣಾದಿಗಳು ತಮ್ಮ ಅಧಿಕ ಪುಣ್ಯವನ್ನು ಕಳೆದುಕೊಳ್ಳಲಿ ಎಂಬುದೂ ಕೃಷ್ಣನ ಅಭಿಪ್ರಾಯವಾಗಿತ್ತು.

ಪುಣ್ಯಪಾಪ ಸಂಗ್ರಹ **378**

ವೇದವ್ಯಾಸರೂ ಧೃತರಾಷ್ಟ್ರನ ಬಳಿಗೆ ಬಂದು ಪಾಂಡವರು ನನಗೆ ಪ್ರಿಯರು. ಅವರನ್ನು ನೀವೆಲ್ಲರೂ ಸೇರಿ ಕಾಡಿಗೆ ಅಟ್ಟಿದುದು ನನಗೆ ಪ್ರಿಯವಾಗಲಿಲ್ಲ ಎನ್ನುತ್ತ ಪಾಂಡವರಲ್ಲಿ ಪುಣ್ಯವೃದ್ಧಿ ಉಂಟುಮಾಡಿದರು. ಕೌರವರಲ್ಲಿ ಪಾಪವೃದ್ಧಿ ಉಂಟುಮಾಡಿದರು. ಏಕೆಂದರೆ ಹರಿಗೆ ಪ್ರೀತಿಪಾತ್ರರೆನಿಸುವುದು ಮಹಾಪುಣ್ಯಕರ. ಅವನ ಆಗ್ರಹಕ್ಕೊಳಗಾಗುವುದು ಅಷ್ಟೇಪಾಪಕರ. ಧರ್ಮರಾಜನಲ್ಲಿದ್ದ ಅಧಿಕ ಪುಣ್ಯ ಹೆಚ್ಚಾಗಿ ಬಂದು ಸೇರಿದುದು ಭೀಮನಲ್ಲಿ. ಏಕೆಂದರೆ ಅವನು ಅಧರ್ಮದ ಜೂಜನ್ನು ಮೊದಲಿಗೆ ಪ್ರತಿಭಟಿಸಿದ. ಬಳಿಕ ಅಣ್ಣನಿಗೆ ವಿಧೇಯನಾಗಿ ಸಹಿಸಿಕೊಂಡ. ಅರ್ಜುನಾದಿಗಳು ಜೂಜನ್ನು ಪ್ರತಿಭಟಿಸದಿದ್ದುದರಿಂದ ಪುಣ್ಯ ಕಡಿಮೆ ಪ್ರಮಾಣದಲ್ಲಿಯೆ ಲಭಿಸಿತು. ಏಕೆಂದರೆ ಭೀಮ ಪ್ರತಿಭಟಿಸುವಾಗ ಇವರು ಸುಮ್ಮನಿದ್ದುದು ಗುರೂಲ್ಲಂಘನರೂಪವಾದ ದೋಷವೆನಿಸಿತು. ದ್ರೌಪದಿ ಧರ್ಮರಾಜನ ಆಜ್ಞೆಯಂತೆ ಎಲ್ಲ ಕ್ಲೇಶವನ್ನೂ ಸಹಿಸಿದಳು. ಮತ್ತು ಅವಳ ಈ ಸಹನೆ ಮುಂದೆ ಸಮಸ್ತ ಭೂಭಾರ ನಾಶಕ್ಕೆ ಕಾರಣವಾಗಿ ಶ್ರೀಕೃಷ್ಣ ಭೀಮರ ಸಂಕಲ್ಪಕ್ಕೆ ಅನುಗುಣವಾಗಿದ್ದರಿಂದ ಅರ್ಜುನಾದಿಗಳಿಗಿಂತ ಹೆಚ್ಚಿನ ಪುಣ್ಯ ಅವಳ ಪಾಲಿಗೆ ಬಂದಿತು.

ವನವಾಸದ ಒಂದು ವರ್ಷ **386**

ಕೃಷ್ಣ ಸತ್ಯಭಾಮೆಯರೂ ಧೃಷ್ಟದ್ಯುಮ್ನ ದ್ರುಪದ ಮುಂತಾದವರೂ ತಮ್ಮ ಊರುಗಳಿಗೆ ಹಿಂತಿರುಗಿದರು. ಹೋಗುವಾಗ ಸುಭದ್ರೆಯನ್ನೂ ಅಭಿಮನ್ಯುವನ್ನೂ ಶ್ರೀಕೃಷ್ಣ ಜೊತೆಗೆ ಕರೆದೊಯ್ದ. ದ್ರೌಪದಿಯ ಮಕ್ಕಳನ್ನು ಧೃಷ್ಟದ್ಯುಮ್ನ ಜೊತೆಗೊಯ್ದ. ಧರ್ಮರಾಜ ತಾನು ಜೂಜಾಡಿದುದು ತಪ್ಪೆಂದು ಪಶ್ಚಾತ್ತಾಪಪಟ್ಟು ವೈರಾಗ್ಯದಿಂದ ದ್ರೌಪದಿಯ ಸಂಗವನ್ನು ಬಿಟ್ಟು ಅವಳನ್ನು ಭೀಮನ ಬಳಿಯೆ ಇರಿಸಿದ. ಮುನಿಗಳಿಗೆ ಅನ್ನದಾನ ಮಾಡಿ ತಮ್ಮಂದಿರನ್ನು ಉಣಿಸಿ ಬಳಿಕ ತಾನುಣ್ಣುತ್ತಿದ್ದ. ಕೊನೆಯಲ್ಲಿ ದ್ರೌಪದಿ ಉಣ್ಣುತ್ತಿದ್ದಳು. ಹೀಗೆ ವಿಷ್ಣು ನೈವೇದ್ಯ ಉಣ್ಣುತ್ತ ಒಂದು ವರ್ಷ ಕಳೆದರು.

ದುರ್ಜನರಲ್ಲಿ ಕ್ಷಮೆ ಸಲ್ಲದು **388**

ಧರ್ಮರಾಜನ ಮನಸ್ಸು ಬಹಳ ಮೃದು. ರಾಜ್ಯದ ಸಲುವಾಗಿ ಬಂಧುಹತ್ಯೆ ಮಾಡಲು ಒಪ್ಪಲಾರ. ಶಾಶ್ವತವಾಗಿ ವನವಾಸವನ್ನೆ ಮಾಡೋಣ ಎನ್ನಬಹುದು. ಹದಿಮೂರು ವರ್ಷಗಳ ಅನಂತರವಾದರೂ ಕ್ಷಾತ್ರತೇಜಸ್ಸನ್ನು ಮೆರೆಸಲು ಅವನನ್ನು ಅಣಿಯಾಗಿಸಬೇಕು ಎನ್ನುವ ಅಭಿಪ್ರಾಯದಿಂದ ಭೀಮ ದ್ರೌಪದಿಯನ್ನು ಅವನ ಬಳಿಗೆ ಕಳಿಸಿದ. ಅವಳು ಹೇಳಿದಳು, 'ನಿನ್ನ ಈ ಸತ್ಯ ಧರ್ಮ ಕ್ಷಮೆ ಎಲ್ಲವೂ ನಿನಗೆ ದುಃಖವನ್ನೇ ತಂದುಕೊಟ್ಟಿದೆ. ಅಧರ್ಮಿಗಳಾದ ಕೌರವರೇ ಮೆರೆಯುತ್ತಿದ್ದಾರೆ. ಏಕೆ? ನಿನ್ನ ಈ ಧರ್ಮಾಚರಣೆಯಲ್ಲಿಯೆ ದೊಡ್ಡ ದೋಷವಿದೆ. ಪಾಪಿಗಳಾದ ಕೌರವರಲ್ಲಿ ಅನ್ಯಾಯವಾಗಿ ಕ್ಷಮೆ ದೋರುತ್ತಿರುವೆ!'

ಎಲ್ಲ ಮಾಡುವವನು ಹರಿಯೆ **389**

'ಎಲ್ಲ ಮಾಡುವವನು ಶ್ರೀಹರಿಯೆ. ನಮಗೆ ಎಲ್ಲಿಯ ಸ್ವಾತಂತ್ರ್ಯ? ನಮಗೆ ವನವಾಸ ಶಂದಿತ್ತವನೂ ಹರಿಯೆ. ಕೌರವರನ್ನು ದೂಷಿಸಿ ಫಲವಿಲ್ಲ. ಅವರಲ್ಲಿಯೂ ಹರಿ ಇದ್ದಾನೆ. ಅವರನ್ನು ಕ್ಷಮಿಸಬೇಕು. ಅದುವೆ ನ್ಯಾಯ.' ಎನ್ನುತ್ತಾನೆ ಧರ್ಮರಾಜ.

ಪುರುಷ ಪ್ರಯತ್ನ ಬೇಕು **390**

'ರಾಜ ಯಾರನ್ನೂ ದಂಡಿಸಬಾರದು, ಎಲ್ಲರನ್ನೂ ಕ್ಷಮಿಸಬೇಕೆನ್ನುವುದಾದರೆ ರಾಜನಿದ್ದೇನು ಪ್ರಯೋಜನ? ಎಲ್ಲವನ್ನೂ ಹರಿಯೆ ಮಾಡುತ್ತಾನೆ, ನಿಜ. ಆದರೆ ಜೀವನಿಗೂ ಕರ್ತೃತ್ವವಿದೆ. ಹರಿಯ ಅಧೀನನಾಗಿ ಅವನೂ ಕರ್ಮ ಮಾಡುತ್ತಾನೆ. ಇಲ್ಲದಿದ್ದರೆ ಕರ್ಮದ ಫಲವನ್ನೇಕೆ ಉಣ್ಣುತ್ತಾನೆ? ಶಾಸ್ತ್ರದ ವಿಧಿನಿಷೇಧಗಳು ಯಾರಿಗೆ? ಹರಿ ವಿಧಿನಿಷೇಧಗಳಿಂದ ಬದ್ಧನಲ್ಲ. ಹೀಗಾಗಿ ಶಾಸ್ತ್ರವೆ ವ್ಯರ್ಥವಾದೀತು' ಎನ್ನುತ್ತಾಳೆ ದ್ರೌಪದಿ.

ಹರಿಯೆ ಎಲ್ಲ ಮಾಡುತ್ತಾನೆ **394**

ಧರ್ಮರಾಜ ನಿರುತ್ತರನಾದ. ಈಗ ಏನಾದರೂ ಹೇಳಿ ದ್ರೌಪದಿಯನ್ನು ಸುಮ್ಮನಾಗಿಸಬೇಕೆಂದುಕೊಂಡ. 'ದ್ರೌಪದಿ! ಜೀವ ಕರ್ತನೆಂದರೆ ಹರಿ ಕರ್ತನಲ್ಲ, ಸ್ವತಂತ್ರನಲ್ಲ ಎಂದಂತಾಗುವುದು. ಏಕೆಂದರೆ ಕರ್ತೃತ್ವವೆಂದರೂ ಸ್ವಾತಂತ್ರ್ಯವೆಂದರೂ ಒಂದೇ. ಜೀವರಿಗೆ ಕರ್ತೃತ್ವವನ್ನು ನಿರಾಕರಿಸಿದಾಗ ಶಾಸ್ತ್ರದ ವಿಧಿನಿಷೇಧಗಳು ವ್ಯರ್ಥವಾಗುವುವು ಎನ್ನುವಿಯಾದರೆ ಜೀವನಿಗೆ ಕರ್ತೃತ್ವವನ್ನು ಒಪ್ಪಿದಾಗ ಹರಿಗೆ ಅದು ಇಲ್ಲ ಎಂದಂತಾಗಿ ಹರಿಗೆ ಸ್ವಾತಂತ್ರ್ಯವನ್ನು ಹೇಳುವ ಶಾಸ್ತ್ರವಚನಗಳು ವ್ಯರ್ಥವಾಗುವುವು ಎಂದು ನಾನು ಹೇಳುವೆ' ಎಂದ. ಸತಿಯಾದವಳು ಪತಿಯ ಮುಂದೆ ಹೆಚ್ಚು ಮಾತನಾಡುವುದು ಶೋಭಿಸುವುದಿಲ್ಲ ಎಂದು ದ್ರೌಪದಿ ಸುಮ್ಮನಾದಳು.

ಜೀವನಿಗೆ ಕರ್ತೃತ್ವವಿದೆ **397**

ಈಗ ಭೀಮ ಧರ್ಮರಾಜನಿಗೆ ಸರಿಯಾಗಿ ತಿಳಿಯ ಹೇಳಿದ- 'ನಾವು ಕರ್ಮ ಮಾಡುತ್ತೇವೆ ಎಂದು ನಮಗೆ ಪ್ರತ್ಯಕ್ಷಾನುಭವವಿದೆ. ನಮ್ಮ ಪ್ರಯತ್ನ ಕೆಲವೊಮ್ಮೆ ಕುಂಠಿತವಾಗುವುದರಿಂದ ನಾವು ಅಸ್ವತಂತ್ರರು, ಹರಿಯ ಅಧೀನರು ಎಂದೂ ಸಿದ್ಧವಾಗುವುದು. ನಮ್ಮ ಭೋಜನಾದಿ ಕರ್ಮಗಳಿಗೆ ನಾವೇ ಸ್ವತಂತ್ರಕರ್ತರು, ಬ್ರಹ್ಮಾಂಡಸೃಷ್ಟಿ ಮುಂತಾದ ಹರಿಯ ವ್ಯಾಪಾರಗಳಿಗೆ ಹರಿಯೆ ಸ್ವತಂತ್ರಕರ್ತ ಎಂದು ವ್ಯವಸ್ಥೆ ಒಪ್ಪಿದರೆ ನಮ್ಮ ಪ್ರಯತ್ನ ಕೆಲವೊಮ್ಮೆ ಏಕೆ ವ್ಯರ್ಥವಾಗುವುದು? ಹರಿ ಎಲ್ಲಕ್ಕೂ ಕರ್ತನೆನ್ನುವ ಶ್ರುತಿವಾಕ್ಯಗಳನ್ನು ಹೇಗೆ ಕೂಡಿಸಬೇಕು? ಅದರಿಂದ ಕರ್ತೃತ್ವವೆಂದರೆ ಸ್ವಾತಂತ್ರ್ಯವಲ್ಲ. ನಾವು ಮಾಡುವ ಪ್ರವೃತ್ತಿ, ಪ್ರಯತ್ನವೇ ಕರ್ತೃತ್ವ. ಅದು ಹರಿಯ ಅಧೀನವಾಗಿ ನಮ್ಮಲ್ಲಿ ಇದೆ. ಸ್ವತಂತ್ರವಾಗಿ ಹರಿಯಲ್ಲಿ ಇದೆ ಎನ್ನುವುದೆ ಸೂಕ್ತ. ಹೀಗೆ ತಿಳಿಯದೆ ನಮಗೆ ಕರ್ತೃತ್ವವಿಲ್ಲ ಎನ್ನುತ್ತ ಕರ್ತವ್ಯ ಚ್ಯುತರಾದರೆ ತಾಮಸಗತಿ ಲಭಿಸುವುದು ನಿಶ್ಚಿತ.

ಜೀವಕರ್ತೃತ್ವ ಹರಿಯ ಅಧೀನ **400**

'ಜೀವರಲ್ಲಿ ಅವರವರ ಸ್ವಭಾವಭೂತವಾದ ಅನಾದಿಯಾದ ಯೋಗ್ಯತೆ ಎಂಬುದಿದೆ. ಅದಕ್ಕೆ ಅನುಸಾರವಾಗಿ ಅನಾದಿ ಕರ್ಮಪ್ರವಾಹವೂ ಇದೆ. ಅದಕ್ಕನುಸಾರವಾಗಿ ನಮ್ಮ ಈಗಿನ ಪ್ರಯತ್ನ. ಈ ಮೂರೂ ಹರಿಯ ಅಧೀನ. ಆದರೂ ಅವನ್ನು ಅನುಸರಿಸಿಯೆ ಫಲ ಕೊಡುವುದರಿಂದ ಅವನಲ್ಲಿ ವೈಷಮ್ಯ ನೈರ್ಘೃಣ್ಯ ದೋಷಗಳಿಗೆ ಅವಕಾಶವಿಲ್ಲ.

ಕರ್ಮಕಾರಣಗಳು **404**

'ನಮಗೆ ಸುಖದುಃಖಗಳನ್ನು ಹರಿಯೆ ಕೊಡುತ್ತಿದ್ದರೂ ನಮ್ಮ ಪ್ರಯತ್ನಕ್ಕೆ ಅನುಗುಣವಾಗಿಯೆ ಕೊಡುತ್ತಾನೆ. ಪ್ರಯತ್ನವನ್ನೂ ಅವನೇ ಮಾಡಿಸುತ್ತಿದ್ದರೂ ಅನಾದಿಕರ್ಮಕ್ಕೆ ಅನುಗುಣವಾಗಿಯೆ ಮಾಡಿಸುತ್ತಾನೆ. ಅನಾದಿ ಕರ್ಮಪ್ರವಾಹದಲ್ಲಿ ಪ್ರತಿಯೊಂದು ಕರ್ಮವನ್ನು ಅವನೆ ಮಾಡಿಸುತ್ತಿದ್ದರೂ ಅನಾದಿಯೋಗ್ಯತಾನುಗುಣವಾಗಿಯೆ ಅದನ್ನು ಮಾಡಿಸುತ್ತಾನೆ. ಅನಾದಿ ಯೋಗ್ಯತೆಯೂ ಅವನ ಅಧೀನ. ಅದನ್ನು ವ್ಯತ್ಯಾಸ ಮಾಡಲು ಅವನು ಶಕ್ತನೆ. ಆದರೆ ಮಾಡುವುದಿಲ್ಲ. ಏಕೆ ಎಂದು ಕೇಳಲಾಗದು. ಅವನು ಸ್ವತಂತ್ರ. ಆದರೂ ಅವನ ಗುಣವಂತಿಕೆಗೆ ಚ್ಯುತಿ ಇಲ್ಲ. ಯೋಗ್ಯತೆಯನ್ನು ಮೀರಿ ಕರ್ಮಮಾಡಿಸಿ ದುಃಖ ನೀಡಿದರೆ ಮಾತ್ರ ದೋಷವಾಗುವುದು ತಾನೆ?

ಜೀವ ಯೋಗ್ಯತೆ **407**

'ಜೀವಯೋಗ್ಯತೆ ಬ್ರಹ್ಮನಿಂದ ತೊಡಗಿ ಕಲಿ ಪರ್ಯಂತವೂ ತಾರತಮ್ಯದಿಂದ ಇದೆ. ಯೋಗ್ಯತಾತಾರತಮ್ಯದಿಂದಲೆ ಅನಾದಿ ಕರ್ಮದಲ್ಲಿ ತಾರತಮ್ಯ. ಅನಾದಿ ಕರ್ಮತಾರತಮ್ಯದಿಂದ ಈಗಿನ ಪ್ರಯತ್ನದಲ್ಲಿ ತಾರತಮ್ಯ. ಯೋಗ್ಯತೆ ಮತ್ತು ಅನಾದಿ ಕರ್ಮಗಳು ಫಲ ಕೊಡಲು ಪ್ರಯತ್ನ ಅವಶ್ಯಕ. ಪ್ರಯತ್ನ ಒಬ್ಬನ ಯೋಗ್ಯತೆ ಹೀಗೆ, ಪೂರ್ವಕರ್ಮ ಹೀಗೆ ಎಂಬುದನ್ನೂ ತೋರಿಸಬಲ್ಲದು.

ಪ್ರಯತ್ನ - ದೈವ **409**

'ಯೋಗ್ಯತೆ ಇದ್ದರೆ ಹರಿಯ ಅನುಗ್ರಹದಿಂದ ಈಗಲೆ ಸಂಸಾರ ನಿವೃತ್ತಿ ಏಕೆ ಆಗುತ್ತಿಲ್ಲ? ಎಂದರೆ, ಯೋಗ್ಯತೆ ಇರುವಲ್ಲಿ ಹರಿಯ ಅನುಗ್ರಹವಿದ್ದೇ ಇದೆ. ಆದರೂ ಪ್ರಯತ್ನ ಬೇಕು. ಜೀವನಲ್ಲಿರುವ ಅನಾದಿಯಾದ, ಸ್ವರೂಪಭೂತ ಶುದ್ಧ ತತ್ವಜ್ಞಾನದ ಜೊತೆಗೆ ಪ್ರಯತ್ನ ಜನ್ಯವಾದ ತತ್ವಜ್ಞಾನವೂ ಸೇರಬೇಕು. ಆಗಲೆ ಪ್ರಬಲವಾದ ಅನಾದಿ ಅವಿದ್ಯಾರೂಪವಾದ ಸಂಸಾರ ನಿವೃತ್ತಿ ಹೊಂದುತ್ತದೆ.

ಹರಿ ಸ್ವತಂತ್ರ **410**

'ಯೋಗ್ಯತಾ ಅನಾದಿಕರ್ಮ ಪ್ರಯತ್ನ ಈ ಮೂರನ್ನು ಅನುಸರಿಸಿಯೆ ಹರಿ ಫಲ ನೀಡುವನೆಂದ ಮಾತ್ರಕ್ಕೆ ಹರಿ ಅವುಗಳಿಗೆ ಅಧೀನ ಎಂದು ತಿಳಿಯಬಾರದು. ಅವುಗಳನ್ನು ಅನುಸರಿಸಿ ಫಲ ನೀಡುವೆನೆಂದು ಅವನೇ ಮಾಡಿದ ಸಂಕಲ್ಪ. ಅವನ ಸಂಕಲ್ಪಾನುಸಾರ ಅವನು ನಡೆಯುವುದರಿಂದ ಅವನು ಸ್ವತಂತ್ರ. ಏಕೆ ಅವುಗಳನ್ನು ಅನುಸರಿಸುವನೆಂದರೆ ರಾಜ ತನ್ನ ಅರಮನೆಯಲ್ಲಿ ಆಳುಗಳನ್ನು ವೈಭವಕ್ಕಾಗಿ ಇಟ್ಟುಕೊಳ್ಳುವಂತೆಯೆ ಇದು.

ಚಾತುರ್ವರ್ಣ್ಯ ಧರ್ಮ **411**

'ಜಪ ಉಪದೇಶಗಳು ಬ್ರಾಹ್ಮಣನಿಗೆ ಧರ್ಮ. ದುಷ್ಟನಿಗ್ರಹ ಕ್ಷತ್ರಿಯನ ಧರ್ಮ. ಸಂತಾನವೃದ್ಧಿ ವೈಶ್ಯಧರ್ಮ. ತ್ರೈವರ್ಣಿಕ ಪರಿಚರ್ಯೆ ಶೂದ್ರಧರ್ಮ. ಏಕೆಂದರೆ ಈ ನಾಲ್ಕೂ ವರ್ಣಗಳೂ ಕ್ರಮವಾಗಿ ಹರಿಯ ಮುಖ ಬಾಹು ತೊಡೆ ಕಾಲುಗಳಿಂದ ಹುಟ್ಟಿವೆ. ಮುಖಬಾಹುಗಳಿಗೆ ಸಾಮೀಪ್ಯವಿರುವುದರಿಂದ ಕ್ಷತ್ರಿಯನಿಗೆ ಜಪ ಉಪದೇಶಗಳೂ ಬ್ರಾಹ್ಮಣನಿಗೆ ಯಜ್ಞಕರ್ಮವೂ ಧರ್ಮವಾಗುತ್ತವೆ. ಬಾಹು ತೊಡೆಗಳಿಗೆ ಸಾಮೀಪ್ಯವಿರುವುದರಿಂದ ಕೃಷಿ ಗೋರಕ್ಷಣೆ ಬಡ್ಡಿವ್ಯವಹಾರಗಳೂ ವೈಶ್ಯನಿಗೆ ವಿಹಿತವಾಗಿವೆ. ಕೈ ಕಾಲುಗಳಿಗೆ ಸಾದೃಶ್ಯವಿರುವುದರಿಂದ ಯುದ್ಧ ಕೃಷಿ ವಾಣಿಜ್ಯಾದಿಗಳೂ ಶೂದ್ರನಿಗೆ ಧರ್ಮವೆನಿಸುತ್ತವೆ. ತೊಡೆ ಕಾಲುಗಳಿಗೆ ಸಾಮೀಪ್ಯವಿರುವುದರಿಂದ ಸಂತಾನವೃದ್ಧಿಯೂ ಶೂದ್ರನಿಗೆ ವಿಹಿತ. ಬಾಹು ಎದೆ ಇವು ಬಲಸ್ಥಾನಗಳು. ಹೃದಯ ಜ್ಞಾನಸ್ಥಾನ. ಅದರಿಂದ ರಾಜರಿಗೆ ಬಲಕಾರ್ಯ ಜ್ಞಾನಕಾರ್ಯಗಳೆರಡೂ ಕರ್ತವ್ಯವೆನಿಸುತ್ತವೆ. ಕೈ ಕೇವಲ ಕರ್ಮಕೌಶಲ್ಯಕ್ಕೆ ಸ್ಥಾನ. ಬಾಹುವಿನಂತೆ ಬಲಸ್ಥಾನವಲ್ಲ. ಅದರಿಂದ ಕೈತೊಡೆ ಕಾಲುಗಳಿಗೆ ಸಾಮೀಪ್ಯವಿರುವುದರಿಂದ ವೈಶ್ಯರೂ ಶೂದ್ರರೂ ಕರ್ಮಕೌಶಲಯುಕ್ತರಾಗಬೇಕು.

ದೇವತೆಗಳ ವರ್ಣಧರ್ಮ **414**

'ವೇದದಲ್ಲಿ ದೇವತೆಗಳಿಗೆ ಎಲ್ಲ ಕರ್ಮವೂ ಧರ್ಮ ಎಂದಿದೆ. ಇದು ಅವರಿಗೆ ದೇವಲೋಕದಲ್ಲಿ ಮಾತ್ರ. ಭೂಮಿಯಲ್ಲಿ ಅವತರಿಸಿದಾಗ ಮಾನವರಂತೆ ಆಯಾ ವರ್ಣಧರ್ಮವೆ ವಿಹಿತ. ಅದರಿಂದ, ಭೀಮ ಹೇಳುತ್ತಾನೆ, 'ನಾವು ಕ್ಷತ್ರಿಯರಾಗಿ ಹುಟ್ಟಿದವರು ಬಾಹುಬಲದಿಂದ ದುಷ್ಟರನ್ನು ನಿಗ್ರಹಿಸಲೆಬೇಕು. ಆ ಮೂಲಕ ವಿಷ್ಣುವಿನ ಆರಾಧನೆ ಮಾಡುತ್ತ ಜ್ಞಾನಸಂಪಾದಿಸಬೇಕು. ಅದು ಹರಿಗೆ ಅತ್ಯಂತ ಪ್ರಿಯ. ಅದಕ್ಕೆ ಒಲಿದು ಮುಕ್ತಿ ನೀಡುತ್ತಾನೆ. ಅವನೇ ಸ್ವತಂತ್ರ. ಸ್ವತಂತ್ರನಾದ್ದರಿಂದಲೆ ಗುಣಪೂರ್ಣ ಮತ್ತು ದೋಷರಹಿತ. ಅದರಿಂದ ನಾವು ದುಷ್ಟರಲ್ಲಿ ಕ್ಷಮೆ ತೋರಬಾರದು. ಶತ್ರುಗಳ ಪಾಪ ಅಧಿಕವಾದಷ್ಟು ಅವರ ನಿಗ್ರಹದಿಂದ ಮೋಕ್ಷದಲ್ಲಿ ಸಿಗುವ ಆನಂದ ಅಧಿಕ.

ರಾಜಧರ್ಮ **418**

'ಮಹಾಪಾಪಿಗಳೂ ಬಲಿಷ್ಠರೂ ಆದ ದುರ್ಯೋಧನನಂಥ ರಾಜರನ್ನು ರಾಜಕುಮಾರರನ್ನೂ ದುಃಶಾಸನನಂಥ ರಾಜ ಸೋದರರನ್ನು ರಾಜ ಸ್ವತಃ ಕೊಲ್ಲಬೇಕು. ಅದು ಹರಿಗೆ ಬಲು ಪ್ರೀತಿಕರ. ಕಪಟದ ಜೂಜಾಡುವ ಪಾಪಿ ಶಕುನಿಯಂಥವರನ್ನು ಕೈಗೆ ಸೆರೆಸಿಕ್ಕ ಬೇರೆ ಪಾಪಿಗಳನ್ನೂ ಬೇರೆಯವರ ಕೈಯಿಂದ ಕೊಲ್ಲಿಸಬೇಕು. ಇವೆಲ್ಲವೂ ವೇದ ಪಂಚರಾತ್ರಗಳಲ್ಲಿ ವಿಷ್ಣುವೆ ವಿಧಿಸಿದ ಧರ್ಮಗಳು. ಜೂಜಿನಿಂದ ಪರರ ಸೊತ್ತನ್ನು ಅಪಹರಿಸುವುದು ಎಲ್ಲಿಯು ವಿಹಿತವಾಗಿಲ್ಲ. ಜೂಜಿನಲ್ಲಿ ಸೋತು ಕೊಟ್ಟದ್ದು ಕೊಟ್ಟದ್ದೆಂದಾಗುವುದಿಲ್ಲ. ಕೊಟ್ಟ ಆಸ್ತಿಗೆ ಬಂಧುಗಳು ವಾರಸುದಾರರಿದ್ದು ಅವರು ಅಶಕ್ತಿಯಿಂದ ತಡೆಯದೆ ಬಿಟ್ಟಿದ್ದರೆ ಆ ಆಸ್ತಿ ಅಲ್ಪವಾಗಿದ್ದರೂ ಬಂಧುಗಳು ಅದನ್ನು ಹಿಂದೆ ಪಡೆಯಬಹುದು. ಇನ್ನು ನಮ್ಮ

ಇಂದ್ರಪ್ರಸ್ಥದಂಥ ದೊಡ್ಡ ರಾಜ್ಯದ ಬಗ್ಗೆ ಏನು ಹೇಳಬೇಕು. ಏಕೆಂದರೆ ನೀನು ಹಿರಿಯಣ್ಣ, ನಿನ್ನನ್ನು ತಡೆಯಲು ನಾವು ಅಶಕ್ತರಾಗಿ ಬಿಟ್ಟಿದ್ದೆವು. ಅದರಿಂದ ನೀನು ಜೂಜಿನಲ್ಲಿ ಕೊಟ್ಟಿರುವ ರಾಜ್ಯವನ್ನು ನಾವು ಹಿಂದೆ ಪಡೆಯಬಹುದು. ಅಥವಾ ಈಗಲಾದರೂ ನೀನು ಸಂಮತಿಸಿದರೆ ನಾನು ಕೌರವರನ್ನು ನಿಗ್ರಹಿಸಿ ರಾಜ್ಯವನ್ನು ತಂದುಕೊಡಬಲ್ಲೆ. ಆ ದುಷ್ಟರಿಗೆ ನೀನು ಕೊಟ್ಟ ಮಾತನ್ನು ನಡೆಸಬೇಕೆಂದೆ ಆಗ್ರಹಿಸುವಿಯಾದರೆ ಅದೂ ಸುಲಭವೆ. ವೇದದಲ್ಲಿ ವರ್ಷಕ್ಕೆ ಮಾಸವು ಪ್ರತಿನಿಧಿ ಎಂದಿದೆ. ಹನ್ನೆರಡು ವರ್ಷಕ್ಕೆ ಪ್ರತಿನಿಧಿಯಾಗಿ ಹನ್ನೆರಡು ತಿಂಗಳುಗಳು ಕಳೆದಿವೆ. ವನವಾಸ ಪೂರ್ತಿಯಾಗಿದೆ. ಅಂತೂ ನೀನು ಶತ್ರುಗಳಿಗೆ ಆನಂದ ತರಬೇಡ, ಮಿತ್ರರಿಗೆ ಶೋಕ ಉಂಟುಮಾಡಬೇಡ. ಶತ್ರುನಿಗ್ರಹಕ್ಕೆ ಹೊರಡು, ಎದ್ದೇಳು, ಅದರಿಂದ ನಿನಗೆ ಹಿರಿಯ ಅನುಗ್ರಹವಾಗುವುದು, ಕೀರ್ತಿ ಹೆಚ್ಚುವುದು ಪುಣ್ಯವೃದ್ಧಿಯೂ ಆಗುವುದು.'

ಧರ್ಮರಾಜನ ಪ್ರತಿಜ್ಞೆ 423

ಭೀಮ ಹೀಗೆ ಹೇಳಿದಾಗ ಧರ್ಮರಾಜನೆಂದ 'ನೀನು ಹೇಳಿದಂತೆಯೆ ಮಾಡುವೆನು. ಆದರೆ ಈಗಲೆ ಅಲ್ಲ. ಹದಿಮೂರು ವರ್ಷಗಳು ಕಳೆದ ಬಳಿಕ. ಏಕೆಂದರೆ ಭೀಷ್ಮ ದ್ರೋಣ ಮುಂತಾದವರು ಪೂಜ್ಯರು. ಅವರೊಡನೆ ಬಾಹು ಯುದ್ಧ ಸಲ್ಲದು. ಅಸ್ತ್ರ ಯುದ್ಧವನ್ನೆ ಮಾಡಬೇಕು. ನೀನು ಅಸ್ತ್ರಗಳನ್ನು ತಿಳಿದಿದ್ದರೂ ಪ್ರಯೋಗಿಸುವುದಿಲ್ಲ. ಅರ್ಜುನನಿಗೆ ಅಸ್ತ್ರ ಜ್ಞಾನ ಸಾಲದು. ಅವನು ಎಲ್ಲ ಅಸ್ತ್ರಗಳನ್ನು ತಿಳಿದಾಗಲೆ, ಅಂದರೆ ಹದಿಮೂರು ವರ್ಷಗಳು ಕಳೆದಾಗಲೆ ಯುದ್ಧ ಸಾರಲು ತಕ್ಕ ಸಮಯ.' ಭೀಮ ಸುಮ್ಮನಾದ, ಈಗಲೆ ಯುದ್ಧಕ್ಕೆ ಆಗ್ರಹಿಸಿದರೆ ಆತ ಬೇಸರ ತಾಳಬಹುದು ಎಂದು. ಮತ್ತು ಹದಿಮೂರು ವರ್ಷಗಳ ಬಳಿಕವಾದರೂ ಶತ್ರುನಿಗ್ರಹ ಮಾಡಬೇಕೆನ್ನುವುದೇ ಭೀಮನ ಅಪೇಕ್ಷೆಯಾಗಿತ್ತು. ಅಂತೂ ಭೀಮ ಮಾಡಿದ ಈ ಯುದ್ಧ ಪ್ರಸ್ತಾಪ ಧರ್ಮರಾಜನನ್ನು ಚಿಂತೆಗೆ ಈಡು ಮಾಡಿತು. ಅರ್ಜುನನಿಗೆ ದಿವ್ಯಾಸ್ತ್ರ ಲಾಭವಾಗಬೇಕು, ಹೇಗೆ?

ವೇದವ್ಯಾಸರಿಂದ ಮಂತ್ರೋಪದೇಶ 425

ಧರ್ಮರಾಜನ ಬಳಿಗೆ ವೇದವ್ಯಾಸರು ಬಂದು ಮಂತ್ರೋಪದೇಶ ನೀಡಿದರು. 'ಇದನ್ನು ಅರ್ಜುನನಿಗೆ ಉಪದೇಶಿಸು. ಅದರಿಂದ ಅವನಿಗೆ ರುದ್ರ ಇಂದ್ರಾದಿ ದೇವತೆಗಳು ಒಲಿದು ಪ್ರತ್ಯಕ್ಷರಾಗಿ ಅಸ್ತ್ರಗಳನ್ನು ಉಪದೇಶಿಸುವರು' ಎಂದರು. ತಾವೇ ಅರ್ಜುನನಿಗೆ ಉಪದೇಶಿಸಿದರೆ ಅದರ ಶಕ್ತಿ ಹೆಚ್ಚಾಗುವುದು. ಭೀಷ್ಮ ಮುಂತಾದವರ ವಧೆಗೆ ಅಷ್ಟೇ ಸಾಕು ಎಂದು. ವ್ಯಾಸರು ಹೋದ ಬಳಿಕ ಧರ್ಮರಾಜ ಅರ್ಜುನನಿಗೆ ಉಪದೇಶಿಸಿದ.

ಕಿರಾತಾರ್ಜುನ ಯುದ್ಧ 426

ಅರ್ಜುನ ಇಂದ್ರಕೀಲ ಪರ್ವತಕ್ಕೆ ಹೋಗಿ ಶಿವನನ್ನು ಕುರಿತು ತಪಸ್ಸು ಮಾಡಿದ. ಆಗ ಮೂಕನೆಂಬ ದಾನವ ಹಂದಿಯ ರೂಪದಿಂದ ಬಂದು ಅವನನ್ನು ಕೊಲ್ಲಲು ಉದ್ಯುಕ್ತನಾದ. ಅಷ್ಟರಲ್ಲಿ ಶಿವ ಪಾರ್ವತೀ ಸಮೇತನಾಗಿ ಗಣಗಳೊಂದಿಗೆ ಕಿರಾತವೇಷ ಧರಿಸಿ ಬಂದ. ಅರ್ಜುನ ಹಂದಿಯ ಮೇಲೆ ಬಾಣವನ್ನು ಗುರಿ ಇಟ್ಟಾಗ ಕಿರಾತ ಬಂದು ಇದು ನನ್ನ ಬೇಟೆ, ನೀನು ಬಾಣ ಎಸೆಯಬೇಡ ಎಂದ. ಅರ್ಜುನ ಎಸೆದ. ಹಂದಿ ಸತ್ತಿತು. ಕಿರಾತ 'ಇದು ಭೇಟೆಯ ನಿಯಮಕ್ಕೆ ವಿರುದ್ಧ' ಎನ್ನುತ್ತ ಯುದ್ಧಕ್ಕೆ ನಿಂತ. ಅರ್ಜುನನ ಎಲ್ಲ ಬಾಣಗಳನ್ನೂ ನುಂಗಿದ. ಅರ್ಜುನ ಗಾಂಡೀವದಿಂದಲೆ ಹೊಡೆದ. ಕಿರಾತ ಗಾಂಡೀವವನ್ನೂ ನುಂಗಿದ. ಬಳಿಕ ಬಾಹುಯುದ್ಧ ನಡೆಯಿತು. ಅರ್ಜುನ ಸೋತು ಜರ್ಜರಿತನಾಗಿ ಮೂರ್ಛೆ ಹೋದ.

ಪಾಶುಪತಾಸ್ತ್ರ ಲಾಭ **430**

ಅರ್ಜುನ ಮೂರ್ಛೆ ತಿಳಿದೆದ್ದು ಯುದ್ಧದಲ್ಲಿ ಜಯವಾಗಬೇಕೆಂದು ಮಣ್ಣಿನಿಂದ ಶಿವಲಿಂಗ ಮಾಡಿ ಹೂವೇರಿಸಿದ. ಆ ಹೂಗಳು ಕಿರಾತನ ತಲೆಯ ಮೇಲೂ ಕಂಡು ಬಂದುವು. ಈತ ಶಿವನೆ ಎಂದು ತಿಳಿದು ಅರ್ಜುನ ನಮಿಸಿದ. ಆಗ ಶಿವ ಪಾಶುಪತಾಸ್ತ್ರ ಮಂತ್ರವನ್ನು ಉಪದೇಶಿಸಿದ. ಅದಕ್ಕೆ ನಾರಾಯಣನೆ ದೇವತೆ. ಪಶುಪತಿ ಶಿವ ಸಾಧಿಸಿಕೊಂಡ ಮಂತ್ರವಾದ್ದರಿಂದ ಪಾಶುಪತ ಎಂದು ಹೆಸರು. ಬಳಿಕ ವರುಣ ಕುಬೇರ ಯಮ ಮುಂತಾದವರೂ ಅರ್ಜುನನಿಗೆ ತಮ್ಮ ಅಸ್ತ್ರಗಳನ್ನು ಉಪದೇಶಿಸಿದರು.

ಸ್ವರ್ಗಲೋಕಕ್ಕೆ ಅರ್ಜುನ **431**

ಇಂದ್ರ ನುಡಿದ. 'ನೀನು ಸ್ವರ್ಗಕ್ಕೆ ಬಾ. ರಥವನ್ನು ಕಳಿಸುತ್ತೇನೆ. ಸ್ವರ್ಗದಲ್ಲಿ ವಜ್ರಾಸ್ತ್ರ ಮುಂತಾದ ಅಸ್ತ್ರಮಂತ್ರಗಳನ್ನು ನಿನಗೆ ಉಪದೇಶಿಸುತ್ತೇನೆ.' ಹೀಗೆ ಹೇಳಿ ಇಂದ್ರ ಹೊರಟುಹೋದ. ಬಳಿಕ ರಥ ಬಂದಿತು. ಅರ್ಜುನ ಸ್ವರ್ಗಕ್ಕೆ ಪ್ರಯಾಣ ಮಾಡಿದ. ಅಲ್ಲಿ ಇಂದ್ರ ಅವನನ್ನು ಪ್ರೀತಿಯಿಂದ ಐದು ವರ್ಷಗಳ ಕಾಲ ಜೊತೆಗೆ ಇರಿಸಿಕೊಂಡ.

ಊರ್ವಶಿಯ ಶಾಪ **432**

ದೇವೇಂದ್ರ ಅರ್ಜುನನಿಗೆ ದಿವ್ಯಾಸ್ತ್ರಗಳನ್ನು ಉಪದೇಶಿಸಿದ. ಚಿತ್ರಸೇನಗಂಧರ್ವನ ಬಳಿ ಗಾಂಧರ್ವ ನೃತ್ಯ ಗೀತವಾದ್ಯಗಳ ಶಿಕ್ಷಣಕ್ಕೂ ಏರ್ಪಾಡು ಮಾಡಿದ. ಒಮ್ಮೆ ಊರ್ವಶಿ ನೃತ್ಯಮಾಡುವಾಗ ಅರ್ಜುನ ತದೇಕ ದೃಷ್ಟಿಯಿಂದ ನೋಡಿದ. ಅವನಿಗೆ ಅವಳ ಮೇಲೆ ಅನುರಾಗವುಂಟಾಗಿದೆ ಎಂದು ಬಗೆದು ಇಂದ್ರ ಅವಳನ್ನು ಅರ್ಜುನನ ಬಳಿಗೆ ಕಳಿಸಿದ. ಅರ್ಜುನನಿಗೆ ಅವಳು ಸಾಮಾನ್ಯ ಅಪ್ಸರೆಯಲ್ಲ. ತಂದೆಯಾದ ದೇವೇಂದ್ರನ ಪ್ರೇಯಸಿ. ತನ್ನ ವಂಶದ ಪೂರ್ವಜನಾದ ಪುರೂರವನ ಮಡದಿ. ಕುಂತಿ ಮಾತೆಯಂತೆ ಅವಳು. ಹೀಗಾಗಿ ಭಕ್ತಿಭಾವದಿಂದ ಅವಳ ಸಂಗವನ್ನು ನಿರಾಕರಿಸಿದ. ಅವಳು ಕುಪಿತಳಾಗಿ ನಪುಂಸಕನಾಗೆಂದು ಶಪಿಸಿದಳು. ಇಂದ್ರ ಅವನ ಶೀಲದಾರ್ಢ್ಯಕ್ಕೆ ಮೆಚ್ಚಿ 'ಮುಂದೆ ಅಜ್ಞಾತವಾಸಕಾಲದಲ್ಲಿ ಒಂದು ವರ್ಷ ಕಾಲ ನಪುಂಸಕವೇಷ ಮಾತ್ರ ನಿನಗೆ ಇರಲಿ. ಅದು ನಿನಗೆ ಅನುಕೂಲವಾಗುವುದು' ಎಂದ.

ಕೃಷ್ಣನ ಕೈಲಾಸಯಾತ್ರೆ **434**

ಶ್ರೀಹರಿ ಹಿಂದೆ ಶಿವನಿಗೆ 'ನಾನು ಅವತಾರಗಳಲ್ಲಿ ನಿನ್ನನ್ನು ಆರಾಧಿಸಿ ವರಪಡೆಯುವೆನು. ನೀನೂ ಸ್ವಕಪೋಲ ಕಲ್ಪಿತವಾದ ಆಗಮಗಳಿಂದ ನನ್ನ ಮಹಿಮೆಯನ್ನು ಮರೆಮಾಡಿ ಅಯೋಗ್ಯರಿಗೆ ನನ್ನಲ್ಲಿ ಭಕ್ತಿ ಹುಟ್ಟದಂತೆ ಮಾಡು. ಅದರಿಂದ ಅವರು ಊರ್ಧ್ವಲೋಕಗಳಿಗೆ ಹೋಗದಂತಾಗುವುದು' ಎಂದಿದ್ದ. ಆ ಮಾತನ್ನು ಸತ್ಯವಾಗಿಸಬೇಕೆಂದು ಕೃಷ್ಣ ಸಂಕಲ್ಪಿಸಿದ. ರುಕ್ಮಿಣಿಯೂ ಅದಕ್ಕೆ ಅನುಗುಣವಾಗಿ ನನಗೊಬ್ಬ ಉತ್ತಮ ಪುತ್ರಬೇಕೆಂದು ಬೇಡಿಕೊಂಡಳು. ಒಡನೆ ಅಯೋಗ್ಯರಿಗೆ ಮೋಹ ಉಂಟು ಮಾಡುತ್ತ ಕೃಷ್ಣ ಗರುಡಾರೂಢನಾಗಿ ಬದರಿಕಾಶ್ರಮಕ್ಕೆ ತೆರಳಿದ.

ಘಂಟಾಕರ್ಣ ಪಿಶಾಚ **437**

ರಾತ್ರಿಯಲ್ಲಿ ಘಂಟಾಕರ್ಣ ಮತ್ತು ಕರ್ಣ ಎಂಬ ಇಬ್ಬರು ಪಿಶಾಚರು ಅಲ್ಲಿಗೆ ಬಂದರು. ಶಿವನಾಜ್ಞೆಯಂತೆ ಕೃಷ್ಣನಿಂದ ಮೋಕ್ಷ ಪಡೆಯಲು ದ್ವಾರಕೆಗೆ ಹೊರಟವರು ಆ ದಾರಿಯಾಗಿ ಬಂದಿದ್ದರು. ಅಲ್ಲಿ ಕೃಷ್ಣನನ್ನು ಪ್ರತ್ಯಕ್ಷ ಕಂಡರೂ ತಿಳಿಯದೆ, ಧ್ಯಾನಮಾಡಿ ಹೃದಯದಲ್ಲಿ ಅವನನ್ನು ಕಂಡಾಗ ಭಕ್ತಿಯಿಂದ ಸ್ತುತಿಸಿದರು, ನಮಿಸಿದರು. ಕೃಷ್ಣ ಅವರನ್ನು ಪ್ರೀತಿಯಿಂದ ಸ್ಪರ್ಶಿಸಿ ಪಿಶಾಚ ಜನ್ಮ ಕಳೆದು ಗಂಧರ್ವರನ್ನಾಗಿ

ಮಾಡಿದ. ಬಳಿಕ ಕೃಷ್ಣ ಕೈಲಾಸಕ್ಕೆ ಹೋಗಿ ಶಿವನನ್ನು ಕುರಿತು ಧ್ಯಾನಿಸುವಂತೆ ತೋರಿಕೊಳ್ಳುತ್ತ ತನ್ನ ಗುಣಗಳನ್ನೆ ಧ್ಯಾನಿಸಿದ.

ಒಂದೇ ದಿನದಲ್ಲಿ ಹನ್ನೆರಡು ವರ್ಷ ಕಳೆಯಿತು **439**

ಹನ್ನೆರಡು ವರ್ಷ ಕಾಲ ನಿನ್ನ ಕುರಿತು ತಪಸ್ಸು ಮಾಡುವೆನೆಂದು ಶ್ರೀಹರಿ ಶಿವನ ಮುಂದೆ ಹೇಳಿದ್ದ. ಅದಕ್ಕೆ ಅನುಗುಣವಾಗಿ ಶ್ರೀಕೃಷ್ಣ ಒಂದೇ ದಿನದಲ್ಲಿ ಬೃಹಸ್ಪತಿಯನ್ನು ಹನ್ನೆರಡು ರಾಶಿಗಳಲ್ಲಿ ಸಂಚರಿಸುವಂತೆ ಮಾಡಿದ. ಅದರಿಂದ ಬಾರ್ಹಸ್ಪತ್ಯಮಾನದಿಂದ ಹನ್ನೆರಡು ವರ್ಷಗಳೆ ಕಳೆದುವು. ಒಂದು ದಿನದಲ್ಲಿ ಹನ್ನೆರಡು ವರ್ಷಗಳ ತಪಸ್ಸೂ ನಡೆಯಿತು.

ಕೃಷ್ಣನ ಪೂಜೆಗೆ ಶಿವ ಬಂದ **441**

ಕೃಷ್ಣ ತನ್ನ ಮನೆಗೆ ಬಂದನೆಂದು ಸಂಭ್ರಮದಿಂದ ಶಿವ ಪತ್ನೀ ಪರಿವಾರ ಸಮೇತನಾಗಿ ಬಂದ. ಕೃಷ್ಣನ ಕಾಲು ಹಿಡಿದು ನಮಿಸಿ ಸ್ತುತಿಸಿದ. ಒಡನೆ ಕೃಷ್ಣ ಅಸುರ ಮೋಹಕ್ಕಾಗಿ ಶಿವನೊಳಗಿರುವ ತನ್ನ ರೂಪವನ್ನೆ ಕೊಂಡಾಡಿದ. ಶಿವ ಎಲ್ಲ ದೇವತೆಗಳಿಗೆ ನಿಜ ಸಂಗತಿಯನ್ನು ತಿಳಿಸಿದ.

ಹರಿ ಸರ್ವೋತ್ತಮ **442**

'ಎಲ್ಲರೂ ಹರಿಯನ್ನೆ ಸರ್ವೋತ್ತಮನೆಂದು ಆರಾಧಿಸಬೇಕು. ನಾನಾಗಲಿ ವಾಯುದೇವರಮಾದೇವಿಯರಾಗಲಿ ಅವನ ಪ್ರಾಪ್ತಿಗೆ ದ್ವಾರಭೂತರು ಮಾತ್ರ. ಇದೇ ಸಕಲ ಶಾಸ್ತ್ರಗಳ ನಿರ್ಣಯ ಎಂದ ಶಿವ. ಇದು ದೇವತೆಗಳಿಗೆ ಮೊದಲೇ ತಿಳಿದಿತ್ತು. ಆದರೆ ಕೃಷ್ಣನ ಕೈಲಾಸಯಾತ್ರೆಯಿಂದ ಸಂಶಯ ಬರಲು ಅವಕಾಶವಿದ್ದಿತು. ಅದು ಈಗ ಪರಿಹಾರವಾಯಿತು.

ಶಿವನಿಂದ ಪುತ್ರವರ. **444**

ಬಳಿಕ ಶಿವನಲ್ಲಿ ಪುತ್ರವರವನ್ನು ಕೇಳಿದ, ಶ್ರೀಕೃಷ್ಣ. ಶಿವನೆಂದ, 'ನಿನ್ನಿಂದ ಈಗಾಗಲೆ ಒಬ್ಬ ಮಗ ಹುಟ್ಟಿದ್ದಾನೆ. ಅವನನ್ನೆ ನಾನು ನಿನಗೆ ವರವಾಗಿ ಕೊಟ್ಟ ಪುತ್ರನೆಂದು ಹೇಳಿಕೊಳ್ಳು, ಏಕೆಂದರೆ ಹಿಂದೆ ನಾನು ಮನ್ಮಥನನ್ನು ಸುಟ್ಟಾಗ ರತಿ ಗೋಳಿಟ್ಟು ಪತಿಭಿಕ್ಷೆ ಬೇಡಿದಳು. ಆಗ ನಾನು ಹೇಳಿದೆ 'ಅವನು ಇನ್ನೊಮ್ಮೆ ಕೃಷ್ಣನಿಂದ ಹುಟ್ಟುತ್ತಾನೆ. ನಿನಗೆ ಪತಿಯಾಗುತ್ತಾನೆ.' ಅದರಿಂದ ನೀನು ಹಿಂದೆ ನನಗೆ ಆಜ್ಞೆ ಮಾಡಿದಂತೆ ನಾನು ನಿನಗೆ ವರ ಕೊಟ್ಟಂತಾಯಿತು!', ಬಳಿಕ ಶಿವ ದೇವತೆಗಳಿಗೆ ಹೇಳಿದ. 'ಕೃಷ್ಣ ಇಲ್ಲಿಗೆ ಬಂದುದು ವಸ್ತುತಃ ಬ್ರಹ್ಮವರದಿಂದ ದರ್ಪಿತನಾದ ವಕ್ರಾಸುರನನ್ನು ನಾಶಪಡಿಸುವುದಕ್ಕಾಗಿ. ತತ್ಕಾಲದಲ್ಲಿ ಹುಟ್ಟುವ ಕೃಷ್ಣಪುತ್ರನಾದ ಮನ್ಮಥನಿಂದ ಹೊರತು ಅನ್ಯರಿಂದ ನನಗೆ ಸಾವು ಬರಕೂಡದೆಂದು ಅವನು ಬ್ರಹ್ಮನಿಂದ ವರಪಡೆದಿದ್ದ. ಅದಕ್ಕೆ ಕೃಷ್ಣ ತತ್ಕಾಲದಲ್ಲಿ ತನ್ನ ಉದರದಿಂದ ಪ್ರದ್ಯುಮ್ನನನ್ನು ಹುಟ್ಟಿಸಿ ಅವನ ಮೂಲಕ ಅಸುರನನ್ನು ಕೊಲ್ಲಿಸಿದ್ದಾನೆ. ಅವನಿದ್ದ ಕಾಡಿನ ಸಮೇತ ಸುಡಿಸಿದ್ದಾನೆ. ಅದಕ್ಕೆ ಸುಟ್ಟು ಹೋಗಿರುವ ಈ ಕಾಡೇ ಸಾಕ್ಷಿ. ಬಳಿಕ ಪ್ರದ್ಯುಮ್ನನನ್ನು ತನ್ನ ಉದರದೊಳಗೇ ಸೇರಿಸಿಕೊಂಡಿದ್ದಾನೆ. ಮುಂದೆ ನನ್ನ ವರ ಎಂದು ಹೇಳಿಕೊಳ್ಳುತ್ತ ಪುನಃ ಆ ಪ್ರದ್ಯುಮ್ನನನ್ನು ರುಕ್ಮಿಣೀದೇವಿಯ ಉದರದಲ್ಲಿ ಹುಟ್ಟಿಸುತ್ತಾನೆ. ಇದೆಲ್ಲ ಕೃಷ್ಣನ ಲೀಲೆ.' ಬಳಿಕ ಶ್ರೀಕೃಷ್ಣ ಬ್ರಹ್ಮಾದಿಗಳಿಂದ ಸ್ತುತಿಸಲ್ಪಡುತ್ತ ದ್ವಾರಕೆಗೆ ಹೊರಟು ಹೋದ.

ಏಕಲವ್ಯ ಬಲರಾಮ ಯುದ್ಧ **446**

ಶ್ರೀಕೃಷ್ಣ ಕೈಲಾಸಕ್ಕೆ ಹೋಗಿದ್ದಾಗ ಇತ್ತ ರಾತ್ರಿಯಲ್ಲಿ ಪೌಂಡ್ರಕ ವಾಸುದೇವ ಏಕಲವ್ಯ ಸಮೇತನಾಗಿ ತನ್ನ ತಾಯಿಯ ತಂದೆಯೊಂದಿಗೆ ಮೂರು ಅಕ್ಷೌಹಿಣೀ ಸೈನ್ಯ ಸಮೇತನಾಗಿ ಬಂದು ದ್ವಾರಕೆಯನ್ನು

ಆಕ್ರಮಿಸಿದ. ಆಗ ಬಲರಾಮ ಏಕಲವ್ಯನನ್ನು ಇದಿರಿಸಿದ. ಸಾತ್ಯಕಿ ಪೌಂಡ್ರಕನನ್ನು ಇದಿರಿಸಿದ. ಅಷ್ಟರಲ್ಲಿ ಕೃಷ್ಣನೂ ಕೈಲಾಸದಿಂದ ಹಿಂತಿರುಗಿ ಬಂದ. ಬಲರಾಮನಿಗೆ ಉತ್ಸಾಹ ಇಮ್ಮಡಿಸಿತು. ಏಕಲವ್ಯನನ್ನು ಕೊಲ್ಲುವೆನೆಂದು ಗದೆ ಎತ್ತಿದ. ಏಕಲವ್ಯ ಬೆದರಿ ಪಲಾಯನ ಮಾಡುತ್ತ ಸಮುದ್ರದಲ್ಲಿ ಬಿದ್ದ. ಬಲರಾಮ ಸಮುದ್ರದವರೆಗೂ ಅಟ್ಟಿಸಿಕೊಂಡು ಹೋಗಿ ಗದಾಪಾಣಿಯಾಗಿ ನಿಂತ. ಏಕಲವ್ಯ ಬಲರಾಮನಿನ್ನೂ ಸಮುದ್ರದಲ್ಲಿ ಬೆನ್ನಟ್ಟಿ ಬರುತ್ತಾನೆ ಎಂದು ಬಗೆದು ಸಮುದ್ರದಲ್ಲಿ ಎಂಬತ್ತು ಯೋಜನ ಈಸಿದಾಟಿ ಒಂದು ದ್ವೀಪವನ್ನೇರಿ ಹಿಂತಿರುಗಿ ನೋಡುತ್ತಾನೆ, ಬಲರಾಮ ಬರುತ್ತಿರುವನೆ? ಎಂದು. ಇತ್ತ ಪೌಂಡ್ರಕ ಕೃಷ್ಣನನ್ನು ಕಂಡೊಡನೆ ಸಾತ್ಯಕಿಯ ಕಡೆಗೆ ಅಲಕ್ಷ್ಯದಿಂದ ಬೆನ್ನುಹಾಕಿ ಕೃಷ್ಣನೆಡೆಗೆ ತಿರುಗಿದ.

ಪೌಂಡ್ರಕ ವಧ **450**

ಕೃಷ್ಣ ಪೌಂಡ್ರಕನನ್ನು ಕ್ಷಣದಲ್ಲಿ ವಿರಥನನ್ನಾಗಿ ನಿರಾಯುಧನನ್ನಾಗಿ ಮಾಡಿದ. ಆತ ತನ್ನ ಪಟ್ಟಣಕ್ಕೆ ಹೋಗಿ 'ವೇದ ಪುರಾಣಾದಿಗಳಲ್ಲಿ ಪರವಾಸುದೇವನೆಂದು ಪ್ರಸಿದ್ಧನಾದ ಭಗವಂತ ನಾನೆ. ನೀನು ಧರಿಸಿರುವ ಚಕ್ರ ಶಂಖಾದಿಗಳು ವಸ್ತುತಃ ನನ್ನ ಚಿಹ್ನೆಗಳು. ಒಳ್ಳೆಯ ಮಾತಿನಿಂದ ಅವುಗಳನ್ನು ನನಗೆ ಬಿಟ್ಟುಕೊಡು. ನನಗೆ ಶರಣಾಗು' ಎಂದು ಕೃಷ್ಣನಿಗೆ ಹೇಳಿಕಳಿಸಿದ. ಅದನ್ನು ಕೇಳಿ ಕೃಷ್ಣ ನಕ್ಕ. 'ಆಗಲಿ, ಯುದ್ಧದಲ್ಲಿ ಚಕ್ರ ಶಂಖಾದಿಗಳೆಲ್ಲವನ್ನೂ ನಿನ್ನ ಮೇಲೇ ಎಸೆದು ಬಿಡುತ್ತೇನೆ' ಎಂದು ಉತ್ತರವಿತ್ತ. ಬಳಿಕ ಯುದ್ಧ ಪ್ರಾರಂಭವಾಯಿತು. ಶ್ರೀವತ್ಸಕ್ಕಾಗಿ ಎದೆಯನ್ನು ಸುಟ್ಟುಕೊಂಡಿದ್ದ ಪೌಂಡ್ರಕ ರಥದಲ್ಲಿ ಚಿನ್ನದ ಗರುಡನ ಮೇಲೆ ಕುಳಿತು ಹಾಸ್ಯಾಸ್ಪದನಾಗಿ ಕಂಡ. ಕೃಷ್ಣ ನಕ್ಕು ಕುತ್ತಿಗೆಯನ್ನು ಬಾಣದಿಂದ ತರಿದು ಅದೇ ಬಾಣದಿಂದ ತಲೆಯನ್ನು ಕಾಶೀನಗರದ ಒಳಗೆ ಬೀಳಿಸಿದ. ನಾನೇ ಭಗವಂತನೆಂದು ಹೇಳಿಕೊಂಡ ಆ ಪೌಂಡ್ರಕ ತಮಸ್ಸಿನಲ್ಲಿ ಬಿದ್ದ. ಪರಮ ಪಾಪಿಯಾದ ಕಾಶಿರಾಜನೂ ತಮಸಿನಲ್ಲಿ ಬಿದ್ದ.

ಏಕಲವ್ಯ ವಧ **452**

ಏಕಲವ್ಯ ಶಿವನನ್ನು ಕುರಿತು ತಪಸ್ಸು ಮಾಡಿ ಅಜೇಯತ್ವ ವರ ಪಡೆದು ತಿರುಗಿ ಕೃಷ್ಣನ ಬಳಿ ಯುದ್ಧಕ್ಕೆ ಬಂದ. ಕೃಷ್ಣ ಚಕ್ರದಿಂದ ಅವನ ಶಿರಶ್ಛೇದ ಮಾಡಿದ. ಕೃಷ್ಣದ್ವೇಷದಿಂದ ಆ ಪಾಪಿ ತಮಸಿನಲ್ಲಿ ಬಿದ್ದ. ಕಾಶಿರಾಜನ ಮಗ ಸುದಕ್ಷಿಣ ತಪಸ್ಸಿನಿಂದ ಶಿವನನ್ನು ಕಂಡು ಕೃಷ್ಣನನ್ನು ನಾಶ ಮಾಡುವ ಉಪಾಯ ಹೇಳೆಂದು ಬೇಡಿದ.

ಸುದಕ್ಷಿಣ ಸಂಹಾರ **453**

ಶಿವನೆಂದ, 'ದಕ್ಷಿಣಾಗ್ನಿ ಕುಂಡದಲ್ಲಿ ಅಭಿಚಾರ ಹೋಮ ಮಾಡು. ಅದರಿಂದ ಮೇಲೆದ್ದು ಬರುವ ದಕ್ಷಿಣಾಗ್ನಿ ನನ್ನ ಪ್ರಮಥ ಗಣಗಳೊಂದಿಗೆ ಹೋಗಿ ದ್ವಾರಕೆಯನ್ನು ಸುಡುತ್ತಾನೆ.' ಸುದಕ್ಷಿಣ ಹಾಗೇ ಮಾಡಿ ದಕ್ಷಿಣಾಗ್ನಿಯನ್ನು ಪ್ರಾದುರ್ಭಾವಗೊಳಿಸಿದ. ಆ ಅಗ್ನಿ ಅಸುರಾವೇಶದಿಂದ ದ್ವಾರಕೆಗೆ ಬಂದೊಡನೆ ಕೃಷ್ಣ ಚಕ್ರವನ್ನು ಕಳಿಸಿದ. ಚಕ್ರ ಅಗ್ನಿಯನ್ನು ಬೆನ್ನಟ್ಟಿತು. ಆಗ ಅಗ್ನಿ ಹಿಂದೆ ಬಂದು ಸುದಕ್ಷಿಣನನ್ನು ಪರಿವಾರ ಸಮೇತ ಸುಟ್ಟ.

ವಾರಾಣಸೀ ದಹನ **454**

ಸುದರ್ಶನಚಕ್ರ ವಾರಾಣಸೀ ನಗರವನ್ನು ಸುಟ್ಟು ಕೃಷ್ಣನ ಬಳಿಗೆ ಹಿಂತಿರುಗಿತು. ಮಹಾಪಾಪಿ ಸುದಕ್ಷಿಣ ತಮಸಿನಲ್ಲಿ ಬಿದ್ದ.

ರುಕ್ಮಿಣೀ ಕೃಷ್ಣ ಪ್ರಣಯ ಕಲಹ **455**

ಶ್ರೀಕೃಷ್ಣನೊಮ್ಮೆ 'ರುಕ್ಮಿಣಿ, ನನಗೆ ನಿನ್ನ ಅಪೇಕ್ಷೆ ಇಲ್ಲ. ರಾಜರುಗಳ ದರ್ಪ ಮುರಿಯುವ

ಉದ್ದೇಶದಿಂದ ಅವರ ಕಣ್ಣೆದುರಿಗೆ ನಿನ್ನನ್ನು ಅಪಹರಿಸಿಕೊಂಡು ಬಂದೆನಷ್ಟೆ. ಅದರಿಂದ ದರಿದ್ರನಾದ ನನ್ನನ್ನು ಬಿಟ್ಟು ಶ್ರೀಮಂತನಾದ ಬೇರೆ ರಾಜರನ್ನು ಹೋಗಿ ಸೇರಬಹುದು' ಎಂದ. ನಿತ್ಯಾವಿಯೋಗಿನಿಯಾದ ದೇವಿ ಕೃಷ್ಣ ವಿಯೋಗದ ಭಯವನ್ನು ನಟಿಸಿ ಕಣ್ಣೀರು ಸುರಿಸಿದಳು. ಪತಿ ಪರಿತ್ಯಜಿಸಬಹುದೆಂಬ ಭೀತಿ ಸತಿಗೆ ಬೇಕೆಂದು ತೋರುವ ಉದ್ದೇಶದಿಂದ ರುಕ್ಮಿಣಿ ಹಾಗೆ ಮಾಡಿದಳು. ಸಂಸಾರದಲ್ಲಿ ಗಂಡಹೆಂಡಿರ ನಡುವೆ ಸರಸ ವಿರಸಗಳು ಸಾಮಾನ್ಯವಾಗಿರುತ್ತವೆ ಎಂದು ತೋರುವುದೂ ಇದರ ಉದ್ದೇಶವಾಗಿತ್ತು.

ಬಲರಾಮನ ಜಲಕ್ರೀಡೆ 456

ಬಲರಾಮ ಗೋಕುಲಕ್ಕೆ ಹೋಗಿ ಎರಡು ತಿಂಗಳ ಕಾಲ ಅಲ್ಲಿ ಇದ್ದ. ಅಲ್ಲಿ ಒಮ್ಮೆ ಆತ ಮದ್ಯಪಾನ ಮಾಡಿ ಜಲಕೇಳಿಗೆ ಯಮುನೆಯನ್ನು ಕರೆದ. ಕುಡಿದು ಮತ್ತನಾಗಿ ಏನೋ ಹೇಳುತ್ತಿದ್ದಾನೆ ಎಂದು ಅವಳು ಸುಮ್ಮನಿದ್ದಳು. ಬಲರಾಮ ಕುಪಿತನಾಗಿ ನೇಗಿಲಿನಿಂದ ನದಿಯನ್ನೆಳೆಯತೊಡಗಿದ. ಯಮುನೆ ಭೀತಳಾಗಿ ಮೂರ್ತಿಮತ್ತಾಗಿ ಬಂದು ಸ್ತೋತ್ರ ಮಾಡಿದಾಗ ಬಿಟ್ಟ.

ಮೈಂದ ವಿವಿದ ವಧ 458

ಮೈಂದವಿವಿದರು ಕಪಿಗಳು. ಅಶ್ವಿನೀ ದೇವತೆಗಳ ಅವತಾರರು. ಬಹಳ ರಾಮಸೇವೆ ಮಾಡಿದವರು. ಅಧಿಕ ಪುಣ್ಯ ಸಂಪಾದಿಸಿದ್ದರಿಂದ ಅಸುರಾವೇಶ ಬಂದಿತು. ಅವರಿಗೆ ಬ್ರಹ್ಮನ ಅವಧ್ಯತ್ವ ವರವಿತ್ತು. ಅಮೃತಪಾನವನ್ನೂ ಮಾಡಿದ್ದರು. ಅಸುರಾವೇಶದಿಂದ ನರಕಾಸುರನಿಗೆ ಮಿತ್ರರಾದರು. ಶ್ರೀಕೃಷ್ಣ ನರಕಾಸುರನನ್ನು ಕೊಂದಾಗ ಅವರು ದ್ವಾರಕೆಯನ್ನು ನಾಶ ಮಾಡಲು ತೊಡಗಿದರು. ಶ್ರೀಕೃಷ್ಣ ಬಲರಾಮನಿಗೆ 'ನೀನು ಮೈಂದವಿವಿದರ ವಧ ಮಾಡು' ಎಂದು ವರವಿತ್ತು ಕಳಿಸಿದ. ಬಲರಾಮ ಅವರನ್ನು ರೈವತ ಪರ್ವತದಲ್ಲಿ ಕೊಂದ. ಅಶ್ವಿನಿ ದೇವತೆಗಳು ತಮ್ಮ ಲೋಕವನ್ನು ಸೇರಿದರು. ಅವರಲ್ಲಿ ಆವಿಷ್ಟರಾದ ಅಸುರರು ತಮಸ್ಸಿಗೆ ಹೋದರು.

ನಗರವನ್ನು ಸೆಳೆದ ನೇಗಿಲು 460

ದುರ್ಯೋಧನನ ಮಗಳಾದ ಲಕ್ಷಣೆಯನ್ನು ಸಾಂಬ ಅಪಹರಿಸಿದ. ಒಡನೆ ಕರ್ಣ ದುರ್ಯೋಧನ ಮುಂತಾದವರು ಅವನನ್ನು ಸೆರೆ ಹಿಡಿದು ಬಂಧಿಸಿದರು. ಬಲರಾಮ ಬಂದು ಕೇಳಿದರೂ ಬಿಟ್ಟುಕೊಡಲಿಲ್ಲ. ಕುಪಿತನಾದ ಬಲರಾಮ ಹಸ್ತಿನಾವತಿ ನಗರವನ್ನೇ ನೇಗಿಲಿನಿಂದ ಸೆಳೆದು ಗಂಗೆಯಲ್ಲಿ ಹಾಕಲು ಹೊರಟ. ಒಡನೆ ಕೌರವರು ಭಯಗೊಂಡು ಬಂದು ಕ್ಷಮೆ ಬೇಡಿ ಸಾಂಬನನ್ನು ಲಕ್ಷಣಾಸಹಿತ ಬಿಟ್ಟುಕೊಟ್ಟರು.

ಬಲರಾಮನಲ್ಲಿ ಹರಿಯ ಆವೇಶ 463

ಭೀಮ ಬಲರಾಮನಲ್ಲಿ ಗದಾಯುದ್ಧವನ್ನು ಕಲಿಯುತ್ತಿದ್ದಾಗ ಅವನಲ್ಲಿ ಹರಿಯ ಆವೇಶ ಕಾಲವನ್ನು ತಿಳಿದು ಆ ಕಾಲದಲ್ಲಿ ಗದೆ ಎತ್ತುತ್ತಿರಲಿಲ್ಲ. ಅದರಿಂದ ಬಲರಾಮ ವಿಜಯಿಯಾಗುತ್ತಿದ್ದ. ಆವೇಶವಿಲ್ಲದಿದ್ದಾಗ ಭೀಮನೆ ವಿಜಯಿಯಾಗುತ್ತಿದ್ದ.

ಉಷಾ ಪರಿಣಯ 464

ಬಾಣಾಸುರನ ಮಗಳು ಉಷೆ. ಸ್ವಪ್ನದಲ್ಲಿ ಅನಿರುದ್ಧನನ್ನು ಗಾಂಧರ್ವವಿಧಿಯಿಂದ ವಿವಾಹವಾಗಿ ಮಾಯೆಯಿಂದ ತನ್ನ ಅಂತಃಪುರಕ್ಕೆ ತರಿಸಿಕೊಂಡು ರಮಿಸಿದಳು. ಇದನ್ನು ತಿಳಿದ ಬಾಣಾಸುರ ಅನಿರುದ್ಧನನ್ನು ಹಿಡಿದು ಬಂಧಿಸಿದ.

ಶೋಣಿತಪುರಕ್ಕೆ ಶ್ರೀಕೃಷ್ಣ **466**

ಶ್ರೀಕೃಷ್ಣ ಗರುಡಾರೂಢನಾಗಿ ಬಲರಾಮ ಪ್ರದ್ಯುಮ್ನರೊಂದಿಗೆ ಬಾಣಾಸುರನ ಶೋಣಿತಪುರಕ್ಕೆ ಬಂದ. ಅಲ್ಲಿ ಬಾಣಾಸುರನ ಪಕ್ಷದಲ್ಲಿ ನಿಂತು ಹೋರಾಡಿದ ಅಗ್ನಿಪುತ್ರರನ್ನೂ ಶಿವಗಣಗಳನ್ನೂ ಪರಾಭವಗೊಳಿಸಿದ.

ಶೈವ ವೈಷ್ಣವ ಜ್ವರ **467**

ಶೈವ ಜ್ವರದೇವ ಕೃಷ್ಣನನ್ನು ಆಕ್ರಮಿಸಿದ. ಕೃಷ್ಣ ವೈಷ್ಣವ ಜ್ವರದೇವನನ್ನು ನಿರ್ಮಿಸಿ ಕಳುಹಿಸಿದ. ಆತ ಶೈವ ಜ್ವರನನ್ನು ಗೆದ್ದ. ಇದು ಶ್ರೀಕೃಷ್ಣನ ಒಂದು ಲೀಲೆ.

ಶಿವ ಸ್ತಂಭನ **468**

ಬಾಣಾಸುರನ ಪಕ್ಷ ವಹಿಸಿ ಶಿವ ಯುದ್ಧಕ್ಕೆ ಬಂದ. ಅವನನ್ನು ಕೃಷ್ಣ ವಿಜೃಂಭಣಾಸ್ತ್ರದಿಂದ ಸ್ತಂಭನಗೊಳಿಸಿದ. ಆಗ ಬ್ರಹ್ಮ ಶಿವನನ್ನು ಕೃಷ್ಣನ ಉದರದೊಳಗೆ ಒಯ್ದು ಅಲ್ಲಿ ರುದ್ರ ಪದವಿಯ ಸ್ಥೈರ್ಯಕ್ಕಾಗಿ ಇನ್ನೂ ತಪಸ್ಸು ಮಾಡುತ್ತಿದ್ದ ಶಿವನ ಇನ್ನೊಂದು ರೂಪವೂ ಸ್ತಂಭಿತವಾಗಿರುವುದನ್ನು ತೋರಿಸಿದ. ಆಗ ಶಿವ ಅಸುರಾವೇಶದಿಂದ ಮುಕ್ತನಾಗಿ ಕೃಷ್ಣನಲ್ಲಿ ಕ್ಷಮೆ ಬೇಡಿದ. ಬಳಿಕ ಕೃಷ್ಣ ಬಾಣನ ಸಾವಿರ ತೋಳುಗಳನ್ನು ಕಡಿದು ದ್ವಿಬಾಹುವನ್ನಾಗಿ ಮಾಡಿ ತನ್ನ ಭಕ್ತನನ್ನಾಗಿ ಮಾಡಿಕೊಂಡ.

ಷಣ್ಮುಖ ಪರಾಜಯ **471**

ಷಣ್ಮುಖನೂ ಬಾಣನ ಪಕ್ಷ ವಹಿಸಿ ಕೃಷ್ಣನೊಡನೆ ಹೋರಾಡಿದ. ಆದರೆ ಕೃಷ್ಣ ಚಕ್ರ ಹಿಡಿದೊಡನೆ ಷಣ್ಮುಖನ ರಕ್ಷಣೆಗಾಗಿ ಅವನ ತಾಯಿ ಕೋಟವಿ ಬಂದು ಕೃಷ್ಣನ ಮುಂದೆ ನಗ್ನಳಾಗಿ ನಿಂತಳು. ಒಡನೆ ಕೃಷ್ಣ ಚಕ್ರವನ್ನು ಉಪಸಂಹರಿಸಿದ. ವಿಜಯಶಾಲಿಯಾಗಿ ಅನಿರುದ್ಧ ಉಷಾ ದಂಪತಿಗಳೊಂದಿಗೆ ದ್ವಾರಕೆಗೆ ಹಿಂತಿರುಗಿದ.

ಪಾಂಡವರ ತೀರ್ಥಯಾತ್ರೆ **473**

ಪಾಂಡವರು ಧೌಮ್ಯ ಮುನಿಯ ಸಹಾಯದಿಂದ ಎಲ್ಲೆಡೆ ತೀರ್ಥಯಾತ್ರೆ ಮಾಡಿದರು. ಅದನ್ನು ಶ್ರೀಕೃಷ್ಣನಿಗೆ ಸಮರ್ಪಿಸುವುದಕ್ಕಾಗಿ ಪ್ರಭಾಸಕ್ಷೇತ್ರಕ್ಕೆ ಬಂದರು. ಅಲ್ಲಿಗೆ ಬಲರಾಮ ಮತ್ತು ಯಾದವರೊಂದಗೆ ಶ್ರೀಕೃಷ್ಣ ಬಂದ. ಸಾತ್ಯಕಿಯು ಪಾಂಡವರ ಕಷ್ಟವನ್ನು ನೋಡಿ ಸಹಿಸಲಾರದೆ 'ನಾವು ಈಗಲೆ ಕೌರವರನ್ನು ಕೊಂದು ಅಭಿಮನ್ಯುವನ್ನು ಪಟ್ಟದಲ್ಲಿ ಕುಳ್ಳಿರಿಸೋಣ. ಹದಿಮೂರು ವರ್ಷ ಕಳೆದ ಬಳಿಕ ಧರ್ಮರಾಜನೆ ರಾಜ್ಯವಾಳಲಿ' ಎಂದ. ಆಗ ಪಾಂಡವರು ತಮ್ಮ ಬಾಹುಬಲದಿಂದ ತಾವೇ ಶತ್ರುನಿಗ್ರಹ ಮಾಡಿ ರಾಜ್ಯ ಸಂಪಾದಿಸುವೆವೆಂದರು. ಮುಂದೆ ಅವರು ಹಿಮಾಲಯ ಪರ್ವತದ ಗುಡ್ಡಗಾಡುಗಳಲ್ಲಿ ಪ್ರಯಾಣ ಕಷ್ಟಕರವಾದಾಗ ಘಟೋತ್ಕಚನನ್ನು ನೆನೆದರು. ಅವನು ಬಂದು ದ್ರೌಪದಿಯನ್ನು ಹೆಗಲಲ್ಲಿ ಹೊತ್ತ. ಅವನ ಭೃತ್ಯರು ಪಾಂಡವರನ್ನು ಹೊತ್ತರು. ಎಲ್ಲರೂ ಬದರಿಕಾಶ್ರಮಕ್ಕೆ ಹೋದರು. ಇನ್ನೂ ಮುಂದೆ ಉತ್ತರಕ್ಕೆ ಹೋಗಿ ಮೇರುವಿನ ಪೂರ್ವದ ಗಂಧ ಮಾದನದಲ್ಲಿರುವ ದೊಡ್ಡ ಬದರಿಯನ್ನು ಸೇರಿದರು. ಅಲ್ಲಿ ನಾರಾಯಣನನ್ನು ಸೇವಿಸುತ್ತ ಜ್ಞಾನ, ಧ್ಯಾನ ಪ್ರವಚನ ಮುಂತಾದ ತಪಸ್ಸನ್ನು ಆಚರಿಸಿದರು.

ಸೌಗಂಧಿಕಾ ಹರಣ **475**

ಒಮ್ಮೆ ಗರುಡನ ರೆಕ್ಕೆಯ ಗಾಳಿಯಲ್ಲಿ ಬಂಗಾರದ ಬಣ್ಣದ ಒಂದು ಕಮಲದ ಹೂ ಬಂದು ಬಿದ್ದಿತು.

ಆ ಹೂಗಳನ್ನು ತರಲು ದ್ರೌಪದಿ ಭೀಮನನ್ನು ಕೇಳಿಕೊಂಡಳು. ಭೀಮ ಹೊರಟು ದಾರಿಯಲ್ಲಿ ಹನುಮಂತನನ್ನು ಕಂಡ.

ಹನುಮ ಭೀಮರ ಲೀಲೆ **477**

ಹನುಮ ಭೀಮರು ಬೇರೆಯಲ್ಲ; ಅಸುರ ಮೋಹನಕ್ಕಾಗಿ ಬೇರೆಯವರಂತೆ ತೋರಿಕೊಂಡರು. ಭೀಮ ಹನುಮನ ಬೃಹದ್ರೂಪ ಕಂಡು ಭೀತಿಪಟ್ಟಂತೆ ತೋರಿಕೊಂಡ. ದೇವತೆಗಳು ಭೂಮಿಯಲ್ಲಿ ಅವತರಿಸಿದಾಗ ಶಕ್ತರಾಗಿದ್ದೂ ಅಶಕ್ತರಂತೆ ತೋರಿಕೊಳ್ಳುವುದು ವಿಷ್ಣುಪ್ರೀತಿಕರ. ಬಳಿಕ ಹನುಮ ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನ ಕಪಿಧ್ವಜದಲ್ಲಿದ್ದು ಸಿಂಹನಾದದಿಂದ ಶತ್ರುಗಳನ್ನು ನಿಗ್ರಹಿಸುವುದಾಗಿ ವರನೀಡಿದ.

ಕ್ರೋಧವಶ ಸಂಹಾರ **482**

ಭೀಮ ಮನುಷ್ಯರಿಗೆ ಅಗಮ್ಯವಾದ ಕಮಲದ ಮಡುವಿಗೆ ಹೋಗಿ ದಿವ್ಯ ಸುಗಂಧಭರಿತ ಬಂಗಾರದ ಕಮಲಗಳನ್ನು ಕಿತ್ತುಕೊಂಡ. ಆ ಮಡು ಕುಬೇರನದು. ಅವನ ಭೃತ್ಯರಾದ ನೂರು ಕೋಟಿ ಕ್ರೋಧವಶರೆಂಬ ರಾಕ್ಷಸರು ಮಡುವನ್ನು ಕಾಯುತ್ತಿದ್ದರು. ಅವರು ಭೀಮನನ್ನು ತಡೆಯಲು ಬಂದರು. ಮೊದಲಿಗೆ ಶಾಸ್ತ್ರಯುದ್ಧದಲ್ಲಿ ಪರಾಜಿತರಾದರು. ಬಳಿಕ ಶಸ್ತ್ರಯುದ್ಧದಲ್ಲಿಯೂ ಭೀಮನ ಗದೆಯಿಂದ ಹೆಚ್ಚಿನವರು ಮಡಿದರು. ಕೆಲವರು ಓಡಿದರು. ಅಷ್ಟರಲ್ಲಿ ಯುದ್ಧ ಸೂಚಕ ಉತ್ಪಾತಗಳನ್ನು ಕಂಡ ಧರ್ಮರಾಜ ತಮ್ಮಂದಿರ ಹಾಗೂ ದ್ರೌಪದಿಯೊಂದಿಗೆ ರಾಕ್ಷಸರ ಹೆಗಲನ್ನೇರಿ ಭೀಮನಿದ್ದಲ್ಲಿಗೆ ಬಂದ. ಅಲ್ಲಿಗೇ ಕುಬೇರನೂ ಬಂದ. ಭೀಮನ ವ್ಯಕ್ತಿತ್ವವನ್ನು ಚೆನ್ನಾಗಿ ತಿಳಿದವನಾದ್ದರಿಂದ ಅವನು ಕೋಪಿಸಿಕೊಳ್ಳಲಿಲ್ಲ.

ಮಣಿಮಂತನ ಸಂಹಾರ **485**

ಇನ್ನೊಮ್ಮೆ ಕುಬೇರನ ಮಡುವಿನಿಂದ ಕಮಲಗಳು ಗಾಳಿಯಲ್ಲಿ ಬಂದು ಬಿದ್ದುವು. ಈ ಬಾರಿ ಪಂಚವರ್ಣದ ಕಮಲಗಳು. ಮಡುವನ್ನು ಕಾಯುತ್ತಿದ್ದ ಕ್ರೋಧವಶರಾಕ್ಷಸರೂ ಮೂರು ಪದ್ಮ ಸಂಖ್ಯೆಯಲ್ಲಿ ಇದ್ದರು. ಅವರಿಗೆ ನಾಯಕ ಮಹಾಪಾಪಿಯಾದ ಮಣಿಮಂತ. ಭೀಮ ಕ್ಷಣದಲ್ಲಿ ಮಣಿಮಂತನನ್ನೂ ಎಲ್ಲ ರಾಕ್ಷಸರನ್ನೂ ಸಂಹರಿಸಿದ. ರಾಕ್ಷಸರೆಲ್ಲರೂ ತಮಸ್ಸಿನಲ್ಲಿ ಬಿದ್ದರು. ಮಣಿಮಂತ ಕಲಿಯುಗದಲ್ಲಿ ಹುಟ್ಟಿ ಮಾಯಾವಾದವನ್ನು ಪ್ರಸಾರ ಮಾಡಿ ಮಹಾತಮಸ್ಸಿನಲ್ಲಿ ಬಿದ್ದ. ಭೀಮ ಅವನನ್ನು ಕೊಂದಿದ್ದು ಅಸುರಾವೇಶಗೊಂಡಿದ್ದ ಕುಬೇರನಿಗೆ ಕೋಪಬರಿಸಿತು. ಭೀಮನೊಡನೆ ಯುದ್ಧ ಮಾಡಲೆಂದೇ ಬಂದ. ಆಗಲೇ ಧರ್ಮರಾಜನೂ ಬಂದ. ಭೀಮನನ್ನೂ ಧರ್ಮರಾಜನನ್ನೂ ಕಂಡಬಳಿಕ ಕುಬೇರನ ಅಸುರಾವೇಶ ಸ್ವಲ್ಪ ಕಡಿಮೆಯಾಯಿತು. ಅಗಸ್ತ್ಯಮುನಿ ಮಣಿಮಂತನಿಗೆ ಮಾನವನಿಂದ ವಧವೆಂದು ಶಾಪಕೊಟ್ಟಿದ್ದರಿಂದ ಭೀಮ ಅವನನ್ನು ಕೊಂದನೆಂದು ಹೇಳುತ್ತ ಭೀಮನ ಬಲಕ್ಕೆ ಕುಬೇರ ಮಹತ್ವ ಕೊಡಲಿಲ್ಲ. ಆದರೂ ಕೊನೆಗೆ ಅಸುರಾವೇಶ ಪೂರ್ತಿ ಹೊರಟುಹೋದಾಗ ಪಾಂಡವರನ್ನು ತನ್ನ ಅರಮನೆಯಲ್ಲಿ ಇರಿಸಿಕೊಂಡ.

ನಿವಾತಕವಚ ವಧ **490**

ಸ್ವರ್ಗದಿಂದ ಅರ್ಜುನ ಹೊರಡುತ್ತ ತನಗೆ ದಿವ್ಯಾಸ್ತ್ರಗಳನ್ನು ಉಪದೇಶಿಸಿದ ಇಂದ್ರನಿಗೆ ಗುರುದಕ್ಷಿಣೆಯಾಗಿ ನಿವಾತಕವಚರೆಂಬ ಮೂರು ಕೋಟಿ ರಾಕ್ಷಸರನ್ನು ವಧಿಸಿದ. ಅರವತ್ತು ಸಾವಿರ ಕಾಲಕೇಯ ದಾನವರನ್ನು ಕೊಂದ. ಬಳಿಕ ಮೇರು ಪರ್ವತದಲ್ಲಿ ಇಳಿದು ಸೋದರರೊಡನೆ ಸೇರಿದ.

ನಹುಷ ಪ್ರಶ್ನೆ **494**

ಘಟೋತ್ಕಚ ಮುಂತಾದ ರಾಕ್ಷಸರ ಹೆಗಲನ್ನೇರಿ ಪಾಂಡವರು ಮೇರುಪರ್ವತದಿಂದ ಹಿಮಾಲಯಕ್ಕೆ

ಬಂದರು. ಅಲ್ಲಿ ಹೆಬ್ಬಾವಾಗಿ ಸಂಚರಿಸುತ್ತಿದ್ದ ನಹುಷ ಭೀಮನನ್ನು ಹಿಡಿದ. ಹಿಂದೆ ವೃತ್ರವಧೆಯ ಪಾಪದಿಂದ ದೇವೇಂದ್ರ ಸ್ವರ್ಗವನ್ನು ತೊರೆದಾಗ ದೇವತೆಗಳೂ ಮುನಿಗಳೂ ನಹುಷ ಚಕ್ರವರ್ತಿಯನ್ನು ತಂದು ಇಂದ್ರನ ಸಿಂಹಾಸನದಲ್ಲಿ ಕೂಡಿಸಿದರು. ಎಲ್ಲ ದೇವ ಮುನಿಗಳ ತಪಃಶಕ್ತಿಯನ್ನು ಅವನಿಗೆ ನೀಡಿದರು. 'ನಾನು ಇಂದ್ರನೆಂದ ಮೇಲೆ ಶಚಿ ನನ್ನ ಮಡದಿ' ಎನ್ನುತ್ತ ಶಚಿಯನ್ನು ಬರ ಹೇಳಿದ ಆತ. ಮಹರ್ಷಿಗಳು ಹೊರುವ ಮೇನೆಯಲ್ಲಿ ಬಂದರೆ ನಾನು ನಿನ್ನವಳಾಗುತ್ತೇನೆ ಎಂದಳು ಶಚಿ. ಅದರಂತೆ ನಹುಷ ತನ್ನ ಮೇನೆಯನ್ನು ಮಹರ್ಷಿಗಳಿಂದ ಹೊರಿಸಿಕೊಂಡ. ಆಗ ಮೇನೆ ಹೊರುತ್ತಿದ್ದ ಅಗಸ್ತ್ಯರು ಕೇಳಿದರು, 'ರಾಜನೆ, ವೇದ ಪ್ರಮಾಣವೆ ಅಲ್ಲವೆ, ಹೇಳು' ಅಪ್ರಮಾಣ ಎಂದ ನಹುಷ. ಪ್ರಮಾಣ ಎಂದರು ಅಗಸ್ತ್ಯರು. ನಹುಷ ಕೋಪದಿಂದ, 'ಮಾತು ಸಾಕು, ಮುಂದೆ ನಡೆ, ನಡೆ, ಸರ್ಪಸರ್ಪ' ಎಂದು ಅವರ ತಲೆಯನ್ನು ಒದ್ದ. ಆಗ ಅಗಸ್ತ್ಯರ ಜಟೆಯೊಳಗೆ ಸೂಕ್ಷ್ಮರೂಪದಿಂದ ಕುಳಿತಿದ್ದ ಭೃಗುಮುನಿಯಲ್ಲಿ ಬ್ರಹ್ಮ ಆವಿಷ್ಟನಾಗಿ ನಹುಷನಿಗೆ 'ನೀನು ಸರ್ಪವಾಗು, ಹೆಬ್ಬಾವಾಗು' ಎಂದು ಶಪಿಸಿದ. 'ಮುಂದೆ ನೀನು ಒಬ್ಬ ಬಲಿಷ್ಠನಾದ ಮಾನವನನ್ನು ಹಿಡಿಯುವಿ. ಅವನನ್ನು ನೀನೇನೂ ಮಾಡಲಾರೆ. ಆದರೆ ಅವನು ನಿನ್ನಿಂದ ಬಿಡಿಸಿಕೊಳ್ಳಲು ಯತ್ನಿಸುವುದಿಲ್ಲ. ಆಗ ನಿನ್ನಲ್ಲಿರುವ ಸಕಲ ದೇವಮುನಿಗಳ ತಪಃಶಕ್ತಿ ಅವನಲ್ಲಿ ಹೋಗಿ ಸೇರುವುದು. ನಿನ್ನ ಪ್ರಶ್ನೆಗಳಿಗೆ ಒಬ್ಬ ಮಾನವ ಉತ್ತರಿಸುತ್ತಾನೆ. ಆಗ ನಿನಗೆ ಶಾಪವಿಮುಕ್ತಿ' ಎಂದ. ಸರ್ವಜ್ಞನಾದ ಭೀಮನಿಗೆ ಈ ಎಲ್ಲ ಸಂಗತಿಗೊತ್ತು. ಬೇಕೆಂದೇ ಹೆಬ್ಬಾವಿನ ತೆಕ್ಕೆಯಲ್ಲಿ ಸೇರಿಕೊಂಡ. ಬಿಡಿಸಿಕೊಳ್ಳಲು ಯತ್ನಿಸಲೂ ಇಲ್ಲ. ಅವನ ಪ್ರಶ್ನೆಗಳಿಗೆ ಉತ್ತರಿಸಲೂ ಇಲ್ಲ. ವಿದ್ಯೆಯಿಂದ ಜೀವನ ಮಾಡಬಾರದು ಎಂದು. ಆಗ ಧರ್ಮರಾಜ ಬಂದು ನಹುಷನ ಪ್ರಶ್ನೆಗಳಿಗೆ ಉತ್ತರಿಸಿದ. ನಹುಷ ಶಾಪಮುಕ್ತನಾಗಿ ಸ್ವರ್ಗಕ್ಕೆ ತೆರಳಿದ. ಅವನ ತಪಃಶಕ್ತಿ ಎಲ್ಲವೂ ಭೀಮನಲ್ಲಿ ಬಂದು ಸೇರಿತು.

ದ್ರೌಪದಿಯಿಂದ ಸ್ತ್ರೀಧರ್ಮೋಪದೇಶ 509

ಶ್ರೀಕೃಷ್ಣ ಸತ್ಯಭಾಮೆಯೊಂದಿಗೆ ಪಾಂಡವರನ್ನು ಕಾಣಲು ಬಂದ. ಆಗ ಸತ್ಯಭಾಮೆ ವಿನೋದಕ್ಕಾಗಿ ಕೇಳಿದಳು 'ದ್ರೌಪದಿ, ನೀನು ಐವರು ಗಂಡಂದಿರನ್ನು ಹೇಗೆ ವಶದಲ್ಲಿ ಇಟ್ಟುಕೊಂಡೆ? ಮದ್ದು ಮಂತ್ರ ಮಾಟ ಏನಾದರೂ ನಿನಗೆ ಗೊತ್ತೆ?' 'ಮದ್ದು ಮಾಟಗಳಿಂದ ಪತಿಪ್ರೇಮ ದೊರಕಲಾರದು. ಪತಿ ನಾನಾ ಬಗೆಯ ರೋಗಗಳಿಗೆ ತುತ್ತಾಗುತ್ತಾನೆ. ದುರ್ಬಲನಾಗುತ್ತಾನೆ, ನಪುಂಸಕನಾಗುತ್ತಾನೆ, ಸತಿಗೆ ಹೆದರುತ್ತಾನೆ, ಹಾವನ್ನು ಕಂಡಂತೆ ಮೆಟ್ಟಿ ಬೀಳುತ್ತಾನೆ. ಅದರಿಂದ ಪ್ರೀತಿಯಿಂದಲೆ ಪತಿಯನ್ನು ವಶೀಕರಿಸಿಕೊಳ್ಳಬೇಕು.' ಎಂದಳು ದ್ರೌಪದಿ. ಬಳಿಕ ಕೆಲವುದಿನ ಇದ್ದು ಶ್ರೀಕೃಷ್ಣ ಭಾಮೆಯೊಂದಿಗೆ ಹೊರಟು ಹೋಗುತ್ತಾನೆ.

ಜಯದ್ರಥನ ಕಾಮಾಂಧತೆ 510

ಒಮ್ಮೆ ಜಯದ್ರಥ ಪಾಂಡವರ ಆಶ್ರಮದ ಬಳಿಗೆ ಬಂದಾಗ ಪಾಂಡವರು ಬೇಟೆಗೆ ಹೋಗಿದ್ದರು. ಆಶ್ರಮದಲ್ಲಿ ದ್ರೌಪದಿ ಒಬ್ಬಳೆ ಇದ್ದಳು. ಜಯದ್ರಥ ದ್ರೌಪದಿಯನ್ನು ಕಂಡು ಮೋಹಿಸಿ ಮಿತ್ರನಾದ ಕೋಟಿಕಾಶ್ಯನ ಮೂಲಕ ಅವಳನ್ನು ಬರಲು ಹೇಳಿ ಕಳಿಸಿದ. ಅವಳು ನಿರಾಕರಿಸಿದಾಗ ತಾನೆ ಬಂದು ಬಲಾತ್ಕಾರವಾಗಿ ರಥದ ಮೇಲೆ ಹತ್ತಿಸಿ ಪಲಾಯನ ಮಾಡತೊಡಗಿದ. ಪಾಂಡವರು ಇದನ್ನು ತಿಳಿದು ಬೆನ್ನಟ್ಟಿ ಬಂದರು. ಹಿಡಿದು ಚೆನ್ನಾಗಿ ಥಳಿಸಿದರು. ತಲೆಬೋಳಿಸಿ ಐದು ಜುಟ್ಟು ಇಟ್ಟರು. ಎಲ್ಲರ ಮುಂದೆ 'ನಾನು ದ್ರೌಪದಿಯ ಚರಣದಾಸ' ಎಂದು ಹೇಳಿಕೊಳ್ಳುವ ಶರತ್ತಿನ ಮೇಲೆ ಕೊಲ್ಲದೆ ಬಿಟ್ಟರು. ದ್ರೌಪದಿಯ ಕಾಲುಗಳ ಮೇಲೆ ಕೆಡವಿದರು. ಅಪಮಾನದಿಂದ ತಲೆತಗ್ಗಿಸಿ ಹೊರಟು ಹೋದ ಆತ.

ಭಾಷಾತ್ರಯ ವಿಜ್ಞಾನ 515

ಮಾರ್ಕಂಡೇಯ ಮುನಿ ಬಂದು ಪಾಂಡವರಿಗೆ ಭಾಷಾತ್ರಯದಿಂದ ಕೂಡಿದ ನಾನಾ ವಿಚಿತ್ರ ಕಥೆಗಳನ್ನು ಹೇಳಿದ. ದರ್ಶನ ಭಾಷೆ ಸಮಾಧಿ ಭಾಷೆ ಗುಹ್ಯ ಭಾಷೆ ಎಂದು ವೇದ ಪುರಾಣಾದಿಗಳ ಭಾಷೆ ಮೂರು ಬಗೆಯಾಗಿದೆ. ದರ್ಶನ ಭಾಷೆಯೂ ಲೋಕದರ್ಶನ ಭಾಷೆ ಪರದರ್ಶನ ಭಾಷೆ ಎಂದು ಎರಡು ಬಗೆ. ಪರದರ್ಶನ ಭಾಷೆಯೂ ಲೌಕಿಕ ಪರದರ್ಶನ ಭಾಷೆ ವೈದಿಕ ಪರದರ್ಶನ ಭಾಷೆ ಎಂದು ಎರಡು ಬಗೆ. ಲೋಕದಲ್ಲಿ ಆದರ್ಶ ಮಾನವ ಹೀಗಿರಬೇಕೆಂದು ತಿಳಿಸಲು ಶ್ರೀರಾಮ ಹೀಗೆ ನಡೆದುಕೊಂಡ ಶ್ರೀಕೃಷ್ಣ ಹೀಗೆ ಮಾಡಿದ ಎಂದು ಹೇಳುವುದು ಲೋಕದರ್ಶನ ಭಾಷೆ. ಇಲ್ಲಿ ರಾಮಕೃಷ್ಣರು ಮಾನವರೆಂದು ಅಭಿಪ್ರಾಯವಲ್ಲ. ಶೈವ ಶಾಕ್ತ ಮುಂತಾದ ಪರದರ್ಶನಗಳು ಲೋಕದಲ್ಲಿ ಇವೆ. ಅವುಗಳ ಪ್ರಮೇಯಗಳನ್ನು ಹೇಳುವುದು ಲೌಕಿಕ ಪರದರ್ಶನ ಭಾಷೆ, ಇಲ್ಲಿ ಆ ಪ್ರಮೇಯಗಳನ್ನು ಸ್ವೀಕರಿಸಬೇಕೆನ್ನುವ ಅಭಿಪ್ರಾಯವಿಲ್ಲ. ವೇದದಲ್ಲಿಯೂ ಮೇಲುನೋಟಕ್ಕೆ ಪರದರ್ಶನ ಪ್ರಮೇಯಗಳನ್ನು ಹೇಳಿದಂತೆ ಕಾಣುತ್ತದೆ. ಆದರೆ ಸಮರ್ಪಕವಾಗಿ ವ್ಯಾಖ್ಯಾನಿಸಿದಾಗ ಅಲ್ಲಿ ಸತ್ಸಿದ್ಧಾಂತ ಪ್ರಮೇಯವೆ ಕಾಣುತ್ತದೆ. ದರ್ಶನ ಭಾಷೆಯನ್ನು ಅವಲಂಬಿಸದೆ ತಾನು ಒಪ್ಪಿರುವ ಸಿದ್ಧಾಂತವನ್ನು ಸ್ಪಷ್ಟವಾಗಿ ಹೇಳುವುದು ಸಮಾಧಿ ಭಾಷೆ. ಯಾವ ದರ್ಶನ ಪ್ರಮೇಯವನ್ನೂ ಹೇಳದೆ ಕೇವಲ ಲೌಕಿಕ ವಿಷಯವನ್ನೆ ನಿಗೂಢವಾಗಿ ಮೇಲುನೋಟಕ್ಕೆ ಏನೂ ಅರ್ಥವಾಗದಂತೆ ಹೇಳುವುದು ಗುಹ್ಯ ಭಾಷೆ.

ದುರ್ಯೋಧನನ ಪೌಂಡರೀಕಯಾಗ 521

ಪಾಂಡವರ ರಾಜಸೂಯ ಯಾಗಕ್ಕೆ ಪ್ರತಿಸ್ಪರ್ಧಿಯಾಗಿ ದುರ್ಯೋಧನ ಮತ್ಸರದಿಂದ ಪೌಂಡರೀಕ ಯಾಗ ಮಾಡಲು ಸಂಕಲ್ಪಿಸಿ 'ಪಾಪಪುರುಷರಾದ ಪಾಂಡವರನ್ನೂ ಅವರ ಜೊತೆಗಿರುವ ಬ್ರಾಹ್ಮಣರನ್ನೂ ಯಾಗಕ್ಕೆ ಬರಹೇಳಿ' ಎಂದು ದೂತನನ್ನು ಅಟ್ಟಿದ. ಅದಕ್ಕೆ ಧರ್ಮರಾಜ ನಾವು ನಮ್ಮ ವನವಾಸ ಪ್ರತಿಜ್ಞೆಯನ್ನು ಮುರಿದು ಬರುವುದಿಲ್ಲ ಎಂದ. ಭೀಮ ರಣಯಜ್ಞದಲ್ಲಿ ನಿಮ್ಮನ್ನು ಆಹುತಿ ಮಾಡಲು ಬರುತ್ತೇವೆ ಎಂದ. ಉಳಿದ ಪಾಂಡವರು ಸುಮ್ಮನಿದ್ದರು. ಯಾಗ ನಡೆಯಿತು. ಯಥಾರ್ಥವಾದಿಗಳಾದ ಜನರು ಹೇಳಿದರು. 'ಈ ಯಾಗ ಪಾಂಡವರ ಯಾಗದ ಹದಿನಾರನೆ ಒಂದಂಶಕ್ಕೂ ಸಮವಾಗಲಿಲ್ಲ.'

ಕೌರವರ ಘೋಷಯಾತ್ರೆ 523

ತಮ್ಮ ರಾಜ್ಯವೈಭವವನ್ನು ಪಾಂಡವರ ಮುಂದೆ ಪ್ರದರ್ಶಿಸಿ ಅವರ ಹೊಟ್ಟೆ ಉರಿಸಬೇಕೆಂದು ಕೌರವರು ದ್ವೈತವನಕ್ಕೆ ಹೊರಟರು. ದ್ವೈತವನದಲ್ಲಿ ಅವರ ಗೋಕೇಂದ್ರವಿದ್ದಿತು. ಅಲ್ಲಿಯೆ ಪಾಂಡವರು ವಾಸವಾಗಿದ್ದರು. ಗೋಕೇಂದ್ರಕ್ಕೆ ಭೆಟ್ಟಿನೀಡುವ ನೆಪದಿಂದ ಸಪರಿವಾರರಾಗಿ ಅಲ್ಲಿಗೆ ಹೋದರು, ಕೌರವರು. ಇದನ್ನು ತಿಳಿದ ದೇವೇಂದ್ರ ಚಿತ್ರಸೇನ ಗಂಧರ್ವನ ನಾಯಕತ್ವದಲ್ಲಿ ಅಪಾರವಾದ ಗಂಧರ್ವ ಸೇನೆಯನ್ನು ಕಳಿಸಿದ. ಪಾಂಡವರ ಕಣ್ಣಮುಂದೆ ಕೌರವರ ತೇಜೋಭಂಗ ಮಾಡಿರಿ ಎಂದ. ಮೊದಲಿಗೆ ಕರ್ಣ ಚಿತ್ರಸೇನರಿಗೆ ಯುದ್ಧ ನಡೆಯಿತು. ಕರ್ಣ ಅರ್ಜುನನೊಡನೆ ಸ್ಪರ್ಧೆಯಿಂದಲೆ ಯುದ್ಧ ಮಾಡಿದ್ದರಿಂದ ಪರಶುರಾಮರ ಶಾಪದಂತೆ ಸೋತು ಪಲಾಯನ ಮಾಡಬೇಕಾಯಿತು. ಬಳಿಕ ದುರ್ಯೋಧನ ಸೆರೆಸಿಕ್ಕ. ಅವನ ತಮ್ಮಂದಿರೂ ರಾಣಿಯರೂ ಎಲ್ಲರೂ ಕೈಸೆರೆಯಾದರು. ದುರ್ಯೋಧನ 'ಕಾಪಾಡಿ ಕಾಪಾಡಿ' ಎಂದು ಪಾಂಡವರಿಗೆ ಮೊರೆ ಇಡುತ್ತಿದ್ದಂತೆಯೆ ಚಿತ್ರಸೇನ ಅವನನ್ನು ಅಂತರಿಕ್ಷದಲ್ಲಿ ಒಯ್ಯುತ್ತಿದ್ದ. ಆಗ ಧರ್ಮರಾಜನ ಆಜ್ಞೆಯಂತೆ ಅರ್ಜುನ ಬಂದು ಚಿತ್ರಸೇನನನ್ನು ಪರಾಭವಗೊಳಿಸಿದ. ಚಿತ್ರಸೇನ ಅರ್ಜುನನಿಗೆ ಸ್ವರ್ಗದಲ್ಲಿ ಸಂಗೀತ ನಾಟ್ಯವಿದ್ಯಾ ಗುರುವಾಗಿದ್ದವನು. ಅವನು ಅರ್ಜುನನಿಗೆ ಕೌರವರ ಈ

ಘೋಷಯಾತ್ರೆಯ ದುರುದ್ದೇಶವನ್ನು ಹೇಳಿದ. ಆದರೂ ಅರ್ಜುನ ಧರ್ಮರಾಜನ ಆಜ್ಞೆಯಂತೆ ದುರ್ಯೋಧನನ್ನು ಬಿಡಿಸಿದ. ಇನ್ನುಮುಂದೆ ಹೀಗೆ ಮಾಡಬೇಡವೆಂದು ದುರ್ಯೋಧನನಿಗೆ ಬುದ್ಧಿ ಹೇಳಿದ, ಧರ್ಮರಾಜ.

ದುರ್ಯೋಧನನ ಪ್ರಾಯೋಪವೇಶ 530

ದುರ್ಯೋಧನ ಅಪಮಾನಿತನಾಗಿ ಹಸ್ತಿನಾವತಿಗೆ ಹೊರಟು ದಾರಿಯಲ್ಲಿ ಕರ್ಣನನ್ನು ಸಂಧಿಸಿದ. ಕರ್ಣ ಏನೂ ತಿಳಿಯದೆ, 'ಸುದೈವದಿಂದ ನೀನು ವಿಜಯಶಾಲಿಯಾಗಿ ಬಂದೆ!' ಎಂದ. ದುರ್ಯೋಧನ ನಾಚಿಕೆಯಿಂದ ಎಲ್ಲ ಸಂಗತಿ ಹೇಳಿ ಹತಾಶನಾಗಿ ಆಮರಣಾಂತ ಉಪವಾಸಕ್ಕೆ ಕುಳಿತ. ರಾತ್ರಿಯಲ್ಲಿ ಪಾತಾಳವಾಸಿಗಳಾದ ಅಸುರರು ದೈತ್ಯ ಚಕ್ರವರ್ತಿಯಾದ ದುರ್ಯೋಧನನ ದುರವಸ್ಥೆ ಕಂಡು ದುಃಖದಿಂದ ಅವನನ್ನು ಪಾತಾಳಕ್ಕೆ ತಂದು ಉಪದೇಶಗೈದರು.

ಅಸುರರ ಉಪದೇಶ 532

'ದುರ್ಯೋಧನ, ನೀನು ನಿರಾಶನಾಗಬೇಡ. ನಾವು ನಿನ್ನ ಹಿತೈಷಿಗಳು. ಭೀಷ್ಮ ದ್ರೋಣಾದಿಗಳಲ್ಲಿ ಆವೇಶಗೊಂಡು ನಿನಗೆ ಯುದ್ಧದಲ್ಲಿ ಜಯ ತಂದುಕೊಡುತ್ತೇವೆ. ಕೃಷ್ಣನಿಂದ ಹತನಾದ ನರಕಾಸುರ ಈಗಾಗಲೆ ಕರ್ಣನಲ್ಲಿ ಆವೇಶಗೊಂಡಿದ್ದಾನೆ. ಅವನು ಕೃಷ್ಣನನ್ನು ಅರ್ಜುನನ್ನೂ ನಿಶ್ಚಿತವಾಗಿ ಕೊಲ್ಲುತ್ತಾನೆ. ನೀನೂ ಸಾಕ್ಷಾತ್ ಶಿವನಿಂದ ಸೃಷ್ಟನಾದ ವಜ್ರಕಾಯದ ದಿವ್ಯಪುರುಷ. ಪ್ರಾಯೋಪವೇಶವನ್ನು ಕೊನೆಗೊಳಿಸಿ ರಾಜಧಾನಿಗೆ ತೆರಳು' ಎಂದು ಹುರಿದುಂಬಿಸಿ ಅವನನ್ನು ಅವನಿದ್ದಲ್ಲಿಗೇ ತಂದುಬಿಟ್ಟರು.

ಕರ್ಣನ ಪ್ರತಿಜ್ಞೆ 533

ಕರ್ಣ ಪ್ರತಿಜ್ಞೆ ಮಾಡಿದ. 'ನಾನು ಅರ್ಜುನನನ್ನು ಕೊಲ್ಲದತನಕ ಯಾಚಕರು ಏನು ಬೇಡಿದರೂ ಇಲ್ಲವೆನ್ನಲಾರೆ. ಮದ್ಯಮಾಂಸ ಸೇವಿಸಲಾರೆ, ನನ್ನ ಕಾಲುಗಳನ್ನು ನಾನೇ ತೊಳೆದುಕೊಳ್ಳುವೆ, ದಾಸದಾಸಿಯರಿಂದ ತೊಳೆಸಿಕೊಳ್ಳಲಾರೆ'. ಇದರಿಂದ ದುರ್ಯೋಧನನಿಗೆ ಸಂತೋಷವಾಯಿತು.

ಕವಚ ಕುಂಡಲ ದಾನ 534

ಕರ್ಣ ತನ್ನ ಸಹಜವಾದ ಕುಂಡಲ ಕವಚಗಳಿಂದ ಯುಕ್ತನಾಗಿರುವಷ್ಟು ಕಾಲ ಅವಧ್ಯನಾಗಿರುತ್ತಾನೆ, ಎಂದು ತಿಳಿದ ಇಂದ್ರ ಅವುಗಳನ್ನು ಅವನಿಂದ ದಾನ ಪಡೆಯಲು ಸಂಕಲ್ಪಿಸಿದ. ಇದನ್ನು ಸೂರ್ಯ ತಿಳಿದು ಕರ್ಣನಿಗೆ ಕನಸಿನಲ್ಲಿ ಬಂದು ಹೇಳಿದ. 'ಇಂದ್ರ ಕೇಳಿದ್ದನ್ನು ಕೊಡಬೇಡ' ಎಂದ. ಕರ್ಣ ಒಪ್ಪಲಿಲ್ಲ. 'ಹಾಗಾದರೆ ಒಂದು ಅಮೋಘವಾದ ಆಯುಧವನ್ನಾದರೂ ಕೇಳಿ ಪಡೆ' ಎಂದ. ಅದರಂತೆ ಇಂದ್ರ ಕರ್ಣನಿಂದ ಕವಚಕುಂಡಲಗಳನ್ನು ದಾನವಾಗಿ ಪಡೆದು ಅಮೋಘವಾದ ಶಕ್ತ್ಯಾಯುಧವನ್ನಿತ್ತ. 'ಇದರಿಂದ ನೀನು ಅರ್ಜುನನನ್ನು ಹೊರತು ಯಾರಾದರೊಬ್ಬನನ್ನು ಮಾತ್ರ ಕೊಲ್ಲಬಲ್ಲೆ. ಏಕೆಂದರೆ ಅರ್ಜುನನಿಗೆ ಶ್ರೀಕೃಷ್ಣನ ರಕ್ಷಣೆ ಇದೆ!' ಎಂದ.

ಯಕ್ಷಪ್ರಶ್ನೆ 536

ಒಮ್ಮೆ ಪಾಂಡವರ ಆಶ್ರಮದಿಂದ ಅರಣಿಕಾಷ್ಠಗಳನ್ನು ಜಿಂಕೆಯ ವೇಷದ ಯಮ ಅಪಹರಿಸಿ ಬಲು ದೂರ ಓಡಿ ಅದೃಶ್ಯನಾದ. ಪಾಂಡವರು ಜಿಂಕೆಯನ್ನು ಬೆನ್ನಟ್ಟಿ ಹೋಗಿ ಸೋತು ಒಂದು ಆಲದ ಮರದ ಬುಡದಲ್ಲಿ ಕುಳಿತರು. ಒಬ್ಬೊಬ್ಬರಾಗಿ ಒಂದು ಸರೋವರದ ನೀರು ತರಲು ಹೋದರು. ಯಮ ಬಕಪಕ್ಷಿಯ

ರೂಪದಲ್ಲಿ ನಿಂತು ನನ್ನ ಪ್ರಶ್ನೆಗಳಿಗೆ ಉತ್ತರಿಸದೆ ನೀರು ಮುಟ್ಟುವ ಸಾಹಸ ಮಾಡಬೇಡಿರಿ ಎಂದ. ವಿದ್ಯೋಪಜೀವನವನ್ನು ಒಲ್ಲದೆ ಪಾಂಡವರು ಉತ್ತರ ಕೊಡದೇ ನೀರನ್ನು ಕುಡಿದು ನಿದ್ರಾಪರವಶರಾಗಿ ಅಲ್ಲಿಯೆ ನೆಲಕ್ಕೊರಗಿದರು. ಧರ್ಮರಾಜ ಸೋದರವಾತ್ಸಲ್ಯದಿಂದ ಅವರಿಗಾಗಿ ಪ್ರಶ್ನೆಗಳಿಗೆ ಉತ್ತರಿಸಿದ. ಆಗ ಯಮ ಯಕ್ಷರೂಪದಲ್ಲಿ ಕಾಣಿಸಿಕೊಂಡ. ಬಳಿಕ ಯಕ್ಷ ನುಡಿದ, 'ನಾನು ನಿನ್ನ ಬಗ್ಗೆ ಸಂತುಷ್ಟನಾಗಿದ್ದೇನೆ. ನಿನ್ನ ತಮ್ಮಂದಿರಲ್ಲಿ ಯಾರಾದರೊಬ್ಬನನ್ನು ಎಬ್ಬಿಸುತ್ತೇನೆ. ಈಗ ಹೇಳು, ಯಾರನ್ನು ಎಬ್ಬಿಸಲಿ?' ಎಂದು. 'ನಕುಲ ಏಳಲಿ' ಎಂದು ಧರ್ಮರಾಜ. 'ಏಕೆ? ಭೀಮ ನಿನಗೆ ಹೆಚ್ಚು ಪ್ರಿಯನಲ್ಲವೆ? ಅವನಿಂದಲೆ ನಿನಗೆ ಶತ್ರುಜಯ, ರಾಜ್ಯ ಲಾಭ ತಾನೆ?' ಧರ್ಮರಾಜನೆಂದ, 'ನಾನೊಬ್ಬ ಕುಂತೀಪುತ್ರ ಬದುಕಿದ್ದೇನೆ. ಮಾದ್ರೀಪುತ್ರನಿಲ್ಲ ಎಂದಾಗಬಾರದು.' ಯಕ್ಷ ಸಂತುಷ್ಟನಾಗಿ ಎಲ್ಲ ಸೋದರರನ್ನೂ ಎಬ್ಬಿಸಿದ. ಬಳಿಕ ನಿಜರೂಪದಲ್ಲಿ ಯಮ ಕಾಣಿಸಿಕೊಂಡು, 'ನಾನು ನಿನ್ನ ಧರ್ಮನಿಷ್ಠೆಗೆ ಮೆಚ್ಚಿದ್ದೇನೆ. ಅಜ್ಞಾತವಾಸ ಕಾಲದಲ್ಲಿ ನೀವು ಬಯಸುವ ರೂಪ ನಿಮಗೆ ಬರಲಿ. ಯಾರೂ ನಿಮ್ಮನ್ನು ಗುರುತಿಸದಿರಲಿ' ಎಂದು ವರವಿತ್ತ.

❑❑❑❑❑